ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪಬ್ಲಿಷ್ ಆದ್ದು. [ನಂ. 36

ಬೆಂಗಳೂರು, ಗುರುವಾರ, ಸೆಪಟಂಬರ ತಾ॥ 5, ಸನ್ 1907.

II ನೆ ಭಾಗ

ಇಂಡ್ಯಾ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೆಯಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಫಾರೆಸ್ಟ್ ಇಲಾಖಾ.

ಸಂದಲ್ ಹರಾಜ್ ನೋಟಿಫಿಕೇಷನ್.

ತಾರೀಖು 24ನೆ ಆಗಸ್ಟ್, 1907ನೆ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಸರಕಾರದ ಶ್ರೀಗಂಧದ ಸಾಲಿಯಾನಾ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರದರ ಎದುರಿನಲ್ಲಿ ನಮೂದಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರವರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫೀಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರುಗಳಿಂದ ನಡೆಸಲ್ಪಡುವದು:—

ಡಿಸ್ಟ್ರಿಕ್ಟ್.	ಕೋಠಿ.	ಹರಾಜು ತಾರೀಖು.	ಸುಮಾರು ಮೊತ್ತ.
			ಟನ್ನುಗಳು.
ಶಿವಮೊಗ್ಗ	ತೀರ್ಥಹಳ್ಳಿ	18ನೆ ನವಂಬರ 1907	200
ಡಿಟೋ	ಸಾಗರ	21ನೆ ಡಿಟೋ	150
ಡಿಟೋ	ಶಿವಮೊಗ್ಗ	25ನೆ ಡಿಟೋ	500
ಕಡೂರು	ತರೀಕೆರೆ	28ನೆ ಡಿಟೋ	250
ಡಿಟೋ	ಚಿಕ್ಕಮಗಳೂರು	2ನೆ ಡಿಸೆಂಬರ 1907	350
ಹಾಸನ	ಹಾಸನ	5ನೆ ಡಿಟೋ	150
ಬೆಂಗಳೂರು	ಬೆಂಗಳೂರು	9ನೆ ಡಿಟೋ	100
ಮೈಸೂರು	ಶ್ರೀರಂಗಪಟ್ಟಣ	12ನೆ ಡಿಟೋ	250
ಡಿಟೋ	ಹುಣಸೂರು	16ನೆ ಡಿಟೋ	500
		ಜುಮ್ಲಾ	2,450

2. ಪ್ರತಿ ಕೋಠಿಯಲ್ಲಿಯೂ ಹರಾಜಾಗುವ ಕ್ಲಾಸುವಾರು ಲಾಟು, ಮೊತ್ತ ಮತ್ತು ಇತರ ತಪಶೀಲುಗಳು ಬರುವ ಅಕ್ಟೋಬರ್ ಮಾಹೆಯ ಆಖೈರಿನಲ್ಲಿ ತಿಳಿಯಪಡಿಸುತ್ತೆ.

ಎಂ. ಮುತ್ತಣ್ಣ,
ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ತಾರೀಖು 30ನೆ ಆಗಸ್ಟು 1907.
ಹರ್ಮಗಟ್ಟ, ಶಿವಮೊಗ್ಗ.

ಸ್ 1900ನೆ ಇಸವಿಯ XIನೆ ನಂಬರ ಫಾರೆಸ್ಟು ರಗ್ಯುಲೇಷನ 5ನೆ ಸೆಕ್ಷನ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,—4ನೆ ಸೆಕ್ಷನ ಪ್ರಕಾರ ಇದರಡಿ ಕಂಡ ಷೆಡ್ಯೂಲಿನಲ್ಲಿ ಗವರ್ನ್ಮೆಂಟಿನಿಂದ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ನಂಬರು R. 999 – Ft. 35-06-5, 7—8—07, 22—8—07ನೆ ಇಸವಿಯ ಗೆಜೆಟಿನಲ್ಲಿ ಕಾಯಿಷ್ಮಾಡಲ್ಪಟ್ಟಿರುತ್ತೆ :—

ಷೆಡ್ಯೂಲ.

ಜಿಲ್ಲೆ.	ತಾಲ್ಲೋಕು.	ಅಂದಾಜು ವಿಸ್ತೀರ್ಣ.	ಕಾಡಿನ ಹೆಸರು.	ಸ್ಥಳ ಚಕ್ಕುಬಂದಿ.
ಶಿವಮೊಗ್ಗ.	ಶಿವಮೊಗ್ಗ-ಹೊನ್ನಾಳಿ.	4,520 ಎಕರೆ, 26 ಗುಂಟೆ ಅಥವಾ 7 ಚದರ ಮೈಲಿ, 40 ಎಕರೆ 26 ಗುಂಟೆ.	ಹರ್ಮಗಟ್ಟ.	ಸ್ಥಳ. ಶಿವಮೊಗ್ಗ-ಹೊನ್ನಾಳಿ ರಸ್ತೆಯ 12ನೆ ಮೈಲಿನ ಪಶ್ಚಿಮ ಭಾಗದ ಡಿಸ್ಟ್ರಿಕ್ಟ ಜಂಗ್ಲಿ.

ಉತ್ತರಕ್ಕೆ.—ಚಟ್ನಹಳ್ಳಿ-ಮಸೀನಾಳ ಗಾಡಿ ದಾರಿಗೆ ವಾಯವ್ಯಕ್ಕೆ ಸುಮಾರು 1 ಫರಲಾಂಗು ದೂರದಲ್ಲಿರುವ ಪಲವನಹಳ್ಳಿ-ಚಟ್ನಹಳ್ಳಿ ಗ್ರಾಮಗಳ ಗಡಿ ಕೂಣದಿಂದ ಲೈನ್ ಹೊರಟು ಆಗ್ನೇಯವಾಗಿ 46 ಸರಪಣಿಗಳು ಪಲವನಹಳ್ಳಿ ಸರ್ವೆ ನಂಬರು 6ರ ದಕ್ಷಿಣ ಗಡಿಯನ್ನನುಸರಿಸಿ ಸದರಿ ಗ್ರಾಮದ ಸರ್ವೆ ನಂಬರು 7ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 10ರ ನೈರುತ್ಯ ಮೂಲೆಗೆ ಸೇರುತ್ತದೆ. ಅನಂತರ ಆಗ್ನೇಯವಾಗಿ 88 ಸರಪಣಿಗಳು ಪಲವನಹಳ್ಳಿ ಸರ್ವೆ ನಂಬರು 8, ದಾಸರಹಳ್ಳಿ ಸರ್ವೆ ನಂಬರು 41ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 40ರ ನೈರುತ್ಯ ಮೂಲೆಗೆ ಸೇರುತ್ತದೆ. ಅನಂತರ ಅದೇ ದಿಕ್ಕಾಗಿ 82 ಸರಪಣಿಗಳು ದಾಸರಹಟ್ಟಿ ಸರ್ವೆ ನಂಬರು 41, ಕಲ್ಲುಕಟ್ಟೆ ಸರ್ವೆ ನಂಬರು 8ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 7ರ ಆಗ್ನೇಯ ಮೂಲೆಗೆ ಸೇರುತ್ತದೆ. ಅನಂತರ ಅದೇ ದಿಕ್ಕಾಗಿ 30 ಸರಪಣಿಗಳು ತುಂತುವದ ಸರ್ವೆ ನಂಬರು 89ರ ದಕ್ಷಿಣ ಗಡಿಯನ್ನನುಸರಿಸಿ ಸದರಿ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ಅನಂತರ ಈಶಾನ್ಯವಾಗಿ 63 ಸರಪಣಿಗಳು ತುಂತುವದ ಸರ್ವೆ ನಂಬರುಗಳು 89–88ರ ಪೂರ್ವ ಗಡಿಯನ್ನನುಸರಿಸಿ ಸದರಿ ಗ್ರಾಮದ ಸರ್ವೆ ನಂಬರು 80ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 79ರ ನೈರುತ್ಯ ಮೂಲೆಗೆ ಸೇರುತ್ತದೆ. ಅನಂತರ ಆಗ್ನೇಯವಾಗಿ 75 ಸರಪಣಿಗಳು ತುಂತುವದ ಸರ್ವೆ ನಂಬರು 80 ಕೂಗನಹಳ್ಳಿ ಸರ್ವೆ ನಂಬರು 7ರಲ್ಲಿ ಹಾದು ಗಡೀಕಟ್ಟೆ ಸರ್ವೆ ನಂಬರು 51ರ ದಕ್ಷಿಣ ಮೂಲೆಗೆ ಸೇರುತ್ತದೆ. ಅನಂತರ ಅದೇ ದಿಕ್ಕಾಗಿ 115 ಸರಪಣಿಗಳು ಗಡಿಕಟ್ಟೆ ಸರ್ವೆ ನಂಬರು 50 ದೊಡ್ಡೇರಿ ಸರ್ವೆ ನಂಬರು 62ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 58ರ ನೈರುತ್ಯ ಮೂಲೆಗೆ ಸೇರುತ್ತದೆ. ಅನಂತರ ಆಗ್ನೇಯ ದಿಕ್ಕಾಗಿ 81 ಸರಪಣಿಗಳು ದೊಡ್ಡೇರಿ ಸರ್ವೆ ನಂಬರು 62ರಲ್ಲಿ ಹಾದು ಅಕ್ಕತಂಗೀರ ಕಟ್ಟೆ ಸರ್ವೆ ನಂಬರು 1ರಲ್ಲಿ ಹಾದು ಸದರಿ ಗ್ರಾಮದ ಇನಾಂ ಗೋಪಗೊಂಡಹಳ್ಳಿ ಮತ್ತು ಹೊಳಲೂರು ಗ್ರಾಮಗಳ ಮುಕ್ಕುಪ್ಪೆ ಬಾಂದಿಗೆ ಸೇರುತ್ತದೆ. ಅನಂತರ ಈಶಾನ್ಯ ದಿಕ್ಕಾಗಿ 17 ಸರಪಣಿಗಳು ಹೊಳಲೂರು-ಗೋಪಗೊಂಡನಹಳ್ಳಿ ಗಡಿಯನ್ನನುಸರಿಸಿ ಗೋಪಗೊಂಡನಹಳ್ಳಿ, ಹೊಳಲೂರು-ಮಡಿಕಚೀಲೂರ ಗ್ರಾಮಗಳ ಮುಕ್ಕುಪ್ಪೆ ಬಾಂದಿಗೆ ಸೇರುತ್ತದೆ. ಅನಂತರ ಆಗ್ನೇಯವಾಗಿ 80 ಸರಪಣಿಗಳು ಮಡಿಕಚೀಲೂರ ಸರ್ವೆ ನಂಬರು 75ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 79ರ ನೈರುತ್ಯ ಮೂಲೆಗೆ ಸೇರುತ್ತದೆ. ಅನಂತರ ಪೂರ್ವ ದಿಕ್ಕಾಗಿ 8 ಸರಪಣಿಗಳು ಮಡಿಕಚೀಲೂರ ಸರ್ವೆ ನಂಬರು 79ರ ದಕ್ಷಿಣ ಗಡಿಯನ್ನನುಸರಿಸಿ ಶಿವಮೊಗ್ಗ-ಹೊನ್ನಾಳಿ ರಸ್ತೆಯಲ್ಲಿ ಸದರಿ ಗ್ರಾಮದ ಸದರಿ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ.

ಪೂರ್ವಕ್ಕೆ—ಅಲ್ಲಿಂದ ಲೈನ್ ಹೊರಟು ದಕ್ಷಿಣದಿಕ್ಕಾಗಿ 32 ಸರಪಣಿಗಳು ಶಿವಮೊಗ್ಗ-ಹೊನ್ನಾಳಿ ರಸ್ತೆಯನ್ನನುಸರಿಸಿ ಹೊಳಲೂರ ಸರ್ವೆ ನಂಬರು 102ರ ಆಗ್ನೇಯ ಮೂಲೆಗೆ ಸೇರುತ್ತದೆ.

ದಕ್ಷಿಣಕ್ಕೆ—ಅಲ್ಲಿಂದ ಲೈನ್ ಹೊರಟು ವಾಯವ್ಯವಾಗಿ 12 ಸರಪಣಿಗಳು ಹೋಗಿ ಹೊಳಲೂರ ಸರ್ವೆ ನಂಬರು 102ರ ಈಶಾನ್ಯ ಮೂಲೆಗೆ ಸೇರುತ್ತದೆ. ಅನಂತರ ವಾಯವ್ಯದಿಕ್ಕಾಗಿ 48 ಸರಪಣಿಗಳು ಹೊಳಲೂರ ಸರ್ವೆ ನಂ. 47ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 53ರ ವಾಯವ್ಯ ಮೂಲೆಗೆ ಸೇರುತ್ತದೆ. ಅನಂತರ ವಾಯವ್ಯವಾಗಿ 45 ಸರಪಣಿಗಳು ಹೊಳಲೂರ ಸರ್ವೆ ನಂಬರು 52ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 48ರ ಈಶಾನ್ಯ ಮೂಲೆಗೆ ಸೇರುತ್ತದೆ. ಅನಂತರ ಪಶ್ಚಿಮದಿಕ್ಕಾಗಿ 155 ಸರಪಣಿಗಳು ಹೊಳಲೂರ ಸರ್ವೆ ನಂಬರು 46 ಹರ್ಮಗಟ್ಟದ ಸರ್ವೆ ನಂಬರು 41 ಸದರಿ ಗ್ರಾಮದ ಸರ್ವೆ ನಂಬರುಗಳು 39, 38, 35ರ ಉತ್ತರಗಡಿಯನ್ನನುಸರಿಸಿ ಪುನಃ ಸದರಿ ಗ್ರಾಮದ ಸರ್ವೆ ನಂಬರು 34ರಲ್ಲಿ ಹಾದು ಹರ್ಮಗಟ್ಟ ಸರ್ವೆ ನಂಬರು 33ರ ಉತ್ತರ ಮೂಲೆಗೆ ಸೇರುತ್ತದೆ. ಅನಂತರ ಅದೇ ದಿಕ್ಕಾಗಿ 110 ಸರಪಣಿಗಳು ಹರ್ಮಗಟ್ಟ ಸರ್ವೆ ನಂಬರು 16 ಸುತ್ತುಕುಂಟೆ ಸರ್ವೆ ನಂ. 43, 42ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 41ರ ಈಶಾನ್ಯ ಮೂಲೆಗೆ ಸೇರುತ್ತದೆ. ಅನಂತರ ವಾಯವ್ಯ ದಿಕ್ಕಾಗಿ 102 ಸರಪಣಿಗಳು ಸುತ್ತುಕೋಟೆ ಸರ್ವೆ ನಂಬರು 42 ಮಸೀನಾಳ ಸರ್ವೆ ನಂಬರು 41ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 1ರ ಈಶಾನ್ಯ ಮೂಲೆಗೆ ಸೇರುತ್ತದೆ. ಅನಂತರ ವಾಯವ್ಯವಾಗಿ 96 ಸರಪಣಿಗಳು ಮಸೀನಾಳ ಸರ್ವೆ ನಂಬರು 41ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 22ರ ವಾಯವ್ಯ ಮೂಲೆಗೆ ಸೇರುತ್ತದೆ.

ದಕ್ಷಿಣಕ್ಕೆ.—ಅಲ್ಲಿಂದ ಲೈನ್ ಹೊರಟು, ಉತ್ತರದಿಕ್ಕಾಗಿ 79 ಸರಪಣಿಗಳು ಮುಸಿನಾಳ್ ಸರ್ವೆ ನಂಬರು 41, ಚಟ್ನಹಳ್ಳಿ ಸರ್ವೆ ನಂಬರು 33ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 52ರ ಈಶಾನ್ಯ ಮೂಲೆಗೆ ಸೇರುತ್ತದೆ. ಅನಂತರ ಅದೇ ದಿಕ್ಕಾಗಿ 49 ಸರಪಣಿಗಳು ಚಟ್ನಹಳ್ಳಿ ಸರ್ವೆ ನಂಬರು 33ರಲ್ಲಿ ಹಾದು ಪಲವನಹಳ್ಳಿ ಚಟ್ನಹಳ್ಳಿ ಗಡಿಯುನ್ನನುಸರಿಸಿ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

2. ಸದರಿ ಜಂಗಲಿಯನ್ನು ಸ್ಟೇಟ ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮೆ ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಘಾಯಿಷ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮೆಯಲ್ಲಿ ನಮೂದಿಸಿರುವ ಜಮೀನುಗಳ ಮೇಲೆ ಅಥವಾ ಜಮೀನಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಘಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳೀಗೋಸ್ಕರವಾಗಲೀ, ಇನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವದನ್ನೂ ಕಡಿಯಕೂಡದು, ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡೆಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟು ಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. I ಸದರೀ ಜಮೀನು ಸ್ಟೇಟ ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ,

(*a*) ಅತಿಕ್ರಮ ಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಟೇಟ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(*b*) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಪ್ರದೇಶದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(*c*) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟ ಫಾರೆಸ್ಟಿನಲ್ಲಿ ಇದರಡಿ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

3. II (*a*) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣೆ.

(*b*) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(*c*) ಈ ಬಗ್ಗೆಗೆ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫೀಸರು ಆಗಿಂದಾಗ್ಯೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗದುಕೊಂಡು ಹೋಗುವದು.

(*d*) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಘಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೊತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(*e*) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು, ಅಥವಾ ಸಾಗಿಸುವದು.

(*f*) ಸಾಗುವಳೀಗಾಗಲೀ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಘಾಯಿಷಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತಿಗಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಒಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರ ಮಟ್ಟಿಗೆ ಇದೆ ಯನ್ನತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹ ಮೂಲಕವಾಗಲೀ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕುದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ತಾರೀಖು 30ನೆ ಆಗಸ್ಟು 1907.
ದೇವದಾನ, ಕಡೂರು.

ಸನ್ 1900ನೆ ಇಸವಿಯ XIನೆ ನಂಬರ್ ಫಾರೆಸ್ಟು ರೆಗ್ಯುಲೇಷನ್ ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನೆಂದರೆ,— 4ನೆ ಸೆಕ್ಷನ್ ಪ್ರಕಾರ ಇದರಡೀ ಕಂಡ ಷೆಡ್ಯೂಲಿನಲ್ಲಿ ಗವರ್ನಮೆಂಟಿನಿಂದ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ನಂಬರು R. 1005—Ft. 225-06-3, 7—8—07; 22—8—07ನೆ ಇಸವಿಯ ಗೆಜೆಟಿನಲ್ಲಿ ಫಾಯಿಷ್ಮಾಡಲ್ಪಟ್ಟಿರುತ್ತೆ:—

ಷೆಡ್ಯೂಲ್.

ಡಿಸ್ಟ್ರಿಕ್ಟು	ತಾಲ್ಲೂಕು	ವಿಸ್ತೀರ್ಣ	ಕಾಡಿನ ಹೆಸರು	ಚತುರ್ಸೀಮೆಗಳು.
ಕಡೂರು.	ಎಡಹಳ್ಳಿ ಸಬ್ ತಾಲ್ಲೂಕು, ಚಿಕ್ಕಮಗಳೂರು ತಾಲ್ಲೂಕು.	1,591 ಎಕರೆಗಳು, 18 ಗುಂಟೆಗಳು ಅಥವಾ 2 ಚದರ ಮೈಲಿಗಳು, 79 ಎಕರೆಗಳು ಮತ್ತು 18 ಗುಂಟೆಗಳು.	ದೇವದಾನ.	ಈ ಬೆಟ್ಟದ ಪ್ರದೇಶವು ಎಡಹಳ್ಳಿ ಸಬ್ ತಾಲ್ಲೂಕು, ಚಿಕ್ಕಮಗಳೂರು ತಾಲ್ಲೂಕುಗಳಲ್ಲಿ ಸಂಗಮೇಶ್ವರಪೇಟೆ ಮತ್ತು ಭದ್ರಾನದಿಯ ಮಧ್ಯೆ ಕಾರೆಹಡ್ಲು ಕಾಫಿ ಎಸ್ಟೇಟಿನ ಉತ್ತರಕ್ಕೂ ಪೂರ್ವಕ್ಕೂ ಇರುತ್ತದೆ. ಉತ್ತರಕ್ಕೆ.—ಎಲ್ಲೆಯ ರೇಖೆಯು ಭದ್ರಾನದಿಯ ಎಡಭಾಗದಲ್ಲಿ ಮುದಗಣಿ ಗ್ರಾಮದ ಸರ್ವೆ 21ನೆ ನಂಬರಿನ ದಕ್ಷಿಣ ಮೂಲೆಯಿಂದ ಸುಮಾರು ಅರ್ಧ ಫರ್ಲಾಂಗ್ ದೂರದಲ್ಲಿ ಭದ್ರಾ ನದಿಯ ಬಲ ದಡದಲ್ಲಿ ಒಂದು ಗುರ್ತಿನಿಂದ ಹೊರಟು, ಸದರಿ ನದಿಯ ದಡದಲ್ಲಿರುವ ದೇವದಾನ ಗ್ರಾಮದ ಸರ್ವೆ 48ನೆ ನಂಬರಿನ ವಾಯುವ್ಯ ಮೂಲೆಯಿಂದ ಸುಮಾರು 2¾ ಫರ್ಲಾಂಗುಗಳ ದೂರದಲ್ಲಿ ಒಂದು ಗುರ್ತಿಗೆ ಸದರಿ ನದಿಯ ಬಲದಡದಲ್ಲಿ ಉತ್ತರಕ್ಕೂ ಪೂರ್ವಕ್ಕೂ ಹೋಗುತ್ತದೆ.

ಪೂರ್ವಕ್ಕೆ.—ಎಲ್ಲೆಯ ರೇಖೆಯು ಈ ಕೊನೆಯಲ್ಲಿ ಹೇಳಿದ ಗುರ್ತಿನಿಂದ ದಕ್ಷಿಣಕ್ಕೆ ತಿರುಗಿ, ದೇವದಾನ ಗ್ರಾಮದ ಸರ್ವೆ 31ನೆ ನಂಬರಿನ ನೈರುತ್ಯ ಮೂಲೆಯಲ್ಲಿ ಚಿಕ್ಕಮಗಳೂರು-ಬಾಳೆಹೊನ್ನೂರು ರಸ್ತೆಯನ್ನು ಸೇರುವವರೆಗೆ ಸರ್ವೆ 49ನೆ ನಂಬರಿನಲ್ಲಿ ಹೋಗುತ್ತದೆ, ಮತ್ತು ದಕ್ಷಿಣಕ್ಕೆ ಹೋಗುತ್ತದೆ.

ದಕ್ಷಿಣಕ್ಕೆ.—ಅಲ್ಲಿಂದ ಈ ಕೊನೆಯಲ್ಲಿ ಹೇಳಿದ ಗುರ್ತಿನಿಂದ, ಎಲ್ಲೆಯ ರೇಖೆಯು ದಕ್ಷಿಣಕ್ಕೂ ಮತ್ತು ಕಾರೆಹಡ್ಲು ಕಾಫಿ ಎಸ್ಟೇಟಿನ ಸರ್ವೆ 11ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುವವರೆಗೆ ಮೇಲೆ ಹೇಳಿದ ರಸ್ತೆಯೊಂದಿಗೆ ಪಶ್ಚಿಮಕ್ಕೂ ಹೋಗುತ್ತದೆ; ಅಲ್ಲಿಂದ ಸದರಿ ಎಸ್ಟೇಟಿನ ಸರ್ವೆ 4ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುವವರೆಗೆ ಹಿಂದೆ ಹೇಳಿದ 11ನೆ ಸರ್ವೆ ನಂಬರಿನ ಉತ್ತರ ಮೇರೆಯಲ್ಲಿ ಪಶ್ಚಿಮಕ್ಕೆ ಹೋಗುತ್ತದೆ.

ಪಶ್ಚಿಮಕ್ಕೆ.—ಅಲ್ಲಿಂದ ಸರ್ವೆ 4ನೆ ನಂಬರಿನ ಪೂರ್ವ ಮೇರೆಯಲ್ಲಿ ಉತ್ತರಕ್ಕೆ ಹೋಗಿ ಅಲ್ಲಿಂದ ಪಶ್ಚಿಮಕ್ಕೆ ಸರ್ವೆ 5ನೆ ನಂಬರಿನ ದಕ್ಷಿಣ ಮೇರೆಯಲ್ಲಿ ಹೋಗಿ ಅಲ್ಲಿಂದ ಈಶಾನ್ಯಕ್ಕೆ ದೇವದಾನ ಗ್ರಾಮದ ಅದೇ ಸರ್ವೆ ನಂಬರಿನ ಮತ್ತು ಮುದಗುಣಿ ಗ್ರಾಮದ ಸರ್ವೆ 81ನೆ ನಂಬರಿನ ಜೊತೆಗೆ ಹೋಗಿ, ಅಲ್ಲಿಂದ ಮುದಗುಣಿ ಗ್ರಾಮದ ಸರ್ವೆ 81, 86 ಮತ್ತು 89ನೆ ನಂಬರುಗಳ ಉತ್ತರ ಮೇರೆಗಳಲ್ಲಿ ಹೋಗಿ ಅಲ್ಲಿಂದ ನೈರುತ್ಯಕ್ಕೆ ಕಾರೆಹಡ್ಲು ಕಾಫಿ ಎಸ್ಟೇಟಿನ ಸರ್ವೆ 2ನೆ ನಂಬರಿನ ಉತ್ತರ ಮೇರೆಯಲ್ಲಿ ಹೋಗಿ, ಅಲ್ಲಿಂದ ವಾಯುವ್ಯಕ್ಕೆ ಭದ್ರಾನದಿಯ ಬಲದಡವನ್ನು ಮುಟ್ಟುವವರೆಗೂ ಅದೇ ಎಸ್ಟೇಟಿನ 3ನೆ ನಂಬರಿನ ಈಶಾನ್ಯ ಭಾಗದಲ್ಲಿ ಹೋಗಿ, ಅಲ್ಲಿಂದ ಪೂರ್ವಕ್ಕೂ ಉತ್ತರಕ್ಕೂ ಸದರಿ ನದಿಯ ಉತ್ತರ ದಡದಲ್ಲಿ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

2. ಸದರಿ ಜಂಗಲಿಯನ್ನು ಸ್ಟೇಟ್ ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮೆ ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಫಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮೆಯಲ್ಲಿ ನಮೂದಿಸಿರುವ ಜಮೀನುಗಳ ಮೇಲೆ, ಅಥವಾ ಜಮೀನಿನಲ್ಲಿ ಪಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಫಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವುದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳೀಗೋಸ್ಕರವಾಗಲಿ, ಇನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವದನ್ನೂ ಕಡಿಯಕೂಡದು, ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡೆಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟುಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. I ಸದರೀ ಜಮೀನು ಸ್ಟೇಟ್ ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ,

(a) ಅತಿಕ್ರಮ ಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಟೇಟ್ ಫಾರೆಸ್ಟಿನಲ್ಲಿ ಹೋಗಲು ಅಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಮೋದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(c) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟ ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

3. II (a) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣಿ.

(b) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(c) ಈ ಬಗ್ಯಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಯೆ ಪ್ರಕಟಿಸುವ ನಿಬಂಧಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಿಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗೆದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಘಾಯ ಮಾಡುವದು, ಗುತುರ್ ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು, ಅಥವಾ ಸಾಗಿಸುವದು.

(f) ಸಾಗುವಳೀಗಾಗಲೀ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪಸಿದ್ಧಪತ್ರಿಕೆ ಫಾಯಿಷಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತೀಗಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಒಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರ ಮಟ್ಟಿಗೆ ಇದೆ ಯನ್ನತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬಗಹ ಮೂಲಕವಾಗಲೀ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕುದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ಎಂ. ಶಾಮರಾವ್,
ಮೈಸೂರು ಸೀಮೆಯ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರ್.

ಕೋಲಾರ್, ತಾರೀಖು 12ನೆ ಆಗಸ್ಟು 1907.

ಬೌರಿಂಗ್‌ಪೇಟೆ ತಾಲ್ಲೂಕ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು 1908ನೆ ಜೂನ್ 30ರ ವರೆವಿಗೆ ರೂಢಿಸಿಕೊಳ್ಳುವ ಹಕ್ಕು ಪಡಿಯತಕ್ಕ ವಿಷಯದಲ್ಲಿ 1907ನೆ ಇಸವಿ ಆಗಸ್ಟು 22ನೆ ಮರ್ಕೂಂ 34ನೆ ನಂಬರ ಮೈಸೂರು ಗೆಜೆಟ್ಟಿನ 2ನೆ ಭಾಗದ 404ನೆ ನಂಬರ ಪೇಜಿನಲ್ಲಿ ಫಾಯಿಷ್ ಆಗಿರುವ ನೋಟಿಫಿಕೇಷನ್‌ಗೆ ನಿಗಾ ಕೊಡಬೇಕು.

ಎಸ್. ಎ. ಬಾಪೂರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ತಂಗಡಿ ಮತ್ತು ಕಕ್ಕೆ ಚಕ್ಕೆ—ಇಸ್ತಿಹಾರು, ತಾರೀಖು 26ನೆ ಆಗಸ್ಟು 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಈ ಕೆಳಗೆ ವಿವರಿಸಿರುವ ತಾಲ್ಲೂಕುಗಳಲ್ಲಿನ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು ಈ ಕೆಳಗೆ ತಪಶೀಲು ನಮೂದು ಮಾಡಿರುವ ಕಾಲಗಳಲ್ಲಿ ರೂಢಿಸಿ ಜಮಾಯಿಸತಕ್ಕ ಹಕ್ಕನ್ನು ಪಡಿಯಲು 1907ನೆ ಇಸವಿ ಸೆಪಟಂಬರ್ ತಾರೀಖು 13ರ ವರಿಗೆ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ದರಖಾಸ್ತುಗಳು ತೆಗದುಕೊಳ್ಳಲ್ಪಡುವದು :—

ನಂಬರು.	ತಾಲ್ಲೂಕು ಅಥವಾ ಸ್ಟೇಟ ಫಾರೆಸ್ಟು.	ಜಮಾಯಿಸತಕ್ಕ ಕಾಲ.	ಷರಾ.
1	ಹೆಗ್ಗಡದೇವನಕೋಟೆ. ..	1907ನೆ ಸೆಪ್ಟಂಬರ 15ನೆ ತಾರೀಖು ಲಾಗಾಯಿತು 1908ನೆ ಜೂನ್ ಆಖೈರು ವರಿಗೆ.	ಇನಾಂ, ಜೋಡಿ, ಕಾಯಂಗುತ್ತಾ, ಸರ್ವಮಾನ್ಯ, ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿನ ಫಸಲು ಈ ಹರಾಜಿಗೆ ಸೇರುವದಿಲ್ಲ. ಆದರೆ ಅಮೃತಮಹಲ್ ಕಾವಲು ಮತ್ತು ಆಕಾರಕಂಡ ಸರ್ಕಾರಿ ಬಂಜರು ಆಕಾರ ಕಾಣದ ಸರ್ಕಾರಿ ಬಂಜರು ಗೋಮಾಳ ಸ್ಟೇಟ್ ಫಾರೆಸ್ಟು ಈ ಜಮೀನುಗಳಲ್ಲಿರುವ ಚಕ್ಕೆಯು ಕಂಟ್ರಾಕ್ಟಿಗೆ ವಳಪಟ್ಟು ಇರುತ್ತೆ.

(2) ತಾಲ್ಲೂಕು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹಾ ದರಖಾಸ್ತುಗಳಲ್ಲಿ ನಮೂದಿಸಬೇಕು.

(3) ಪ್ರತಿ ಒಂದು ದರಖಾಸ್ತಿನೊಡನೆ (100) ರೂಪಾಯಿನ ಕರೆನ್ಸಿ ನೋಟಿ ಠೇವಣಿ ಬಗ್ಯೆ ಕಳುಹಿಸಬೇಕು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರ ಮತ್ತು ಇನ್ಶೂರ ಮಾಡಿ ಲಿಫಾಫೇ ಮೇಲೆ "ತಂಗಡಿ ಮತ್ತು ಕಕ್ಕೆ ಚಕ್ಕೆಯ ದರಖಾಸ್ತು" ಎಂದು ಬರದು ಮೈಸೂರು ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರ ವಿಳಾಸಕ್ಕೆ ರವಾನಿಸಬೇಕು.

(4) ದರಖಾಸ್ತುಗಳ ಮಂಜೂರಾತಿಯು ಡೆಪ್ಯುಟಿ ಕಮಿಷನರ ಸಾಹೇಬರವರಿಗೆ ಕೂಡಿರುತ್ತೆ. ಜಾಸ್ತಿ ದರದ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮಿಷನರ ಸಾಹೇಬರವರು ಬದ್ಧರಾಗಿರುವದಿಲ್ಲಾ. ಮತ್ತು ಯಾವ ಕಾರಣವನ್ನು ನಮೂದಿಸದೇನೆ ಯಾವ ದರಖಾಸ್ತನ್ನೂ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

(5) ಮೈಸೂರು ಡಿಸ್ಟ್ರಿಕ್ಟ ಆಫೀಸಿನಲ್ಲಿ 1907ನೆ ಸೆಪಟಂಬರ 14ನೆ ತಾರೀಖು ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರು ಹಾಜರಿರುವ ದರಖಾಸ್ತುದಾರರ ರೂಬರೂಬ ದರಖಾಸ್ತುಗಳನ್ನು ಒಡೆಯುವರು.

(6) ದರಖಾಸ್ತು ಮಂಜೂರಾತಿ ಸಂಗತಿಯನ್ನ ಸದರೀ ದರಖಾಸ್ತುದಾರನಿಗೆ ಕೂಡಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ಮೊಬಲಗನ್ನು ಕೂಡಲೆ ವಾಪಸ ಮಾಡಲ್ಪಡುವದು.

(6A) ಪ್ರತಿ ದರಖಾಸ್ತುದಾರನು ದರಖಾಸ್ತಿನಲ್ಲಿ ತನ್ನ ಸರಿಯಾದ ಮೇಲು ವಿಳಾಸವನ್ನು ಬರೆಯಬೇಕು.

(7) ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರನಿಗೆ ತಿಳಿಸಿದ 3 ದಿನಗಳ ಒಳಗಾಗಿ ದರಖಾಸ್ತು ಮೊಬಲಗು ಪೈಕಿ ಮೊದಲು ಠೇವಣಿ ಮೊಬಲಗು ಸೇರಿ ಅರ್ಧ ಭಾಗವನ್ನು ಆಯಾಯ ತಾಲ್ಲೂಕು ಖಜಾನೆಗೆ ಪಾರಖಾವಣೀ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನ ರದ್ದುಮಾಡಿ ಠೇವಣಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬನ್ನ ದುಸರಾ ಹರಾಜು ಮಾಡಿಸಲ್ಪಡುವದು.

(8) ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ಉಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲಾ. ಆದರೆ ಇದರಿಂದ ಉಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

(9) ದರಖಾಸ್ತುದಾರರು ಮಂಜೂರಾದ ಇಜಾರೆ ಹಕ್ಕನ್ನು ತಾವೇ ಖುದ್ದಾಗಿ ರೂಢಿಸಬೇಕು. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿ ಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ ಸಾಹೇಬರವರ ಮಂಜೂರಾತಿಯನ್ನ ಪಡೆಯಬೇಕು. ವರ್ಗ ರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೇವು ತೀರ್ವೆಯನ್ನ ವಸೂಲ್ಮಾಡಲು ಡೆಪ್ಯುಟಿ ಕಮಿಷನರ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

(10) ಇಜಾರೆ ಮಂಜೂರಾದ 3 ದಿವಸಗಳಲ್ಲಿ ಇಜಾರದಾರನು ಇದರಲ್ಲಿ ನಮೂದಿರುವ ಷರತ್ತುಗಳಂತೆ ನಡೆಯಲು ಬದ್ಧನಾಗಿರುತ್ತೇನೆಂತ ಒಂದು ಮುಚ್ಚಳಿಕೆ ಬರದುಕೊಡಬೇಕು. ತಪ್ಪಿದಲ್ಲಿ ಮೊದಲೇ ಕೊಟ್ಟ ಹಣವನ್ನು ದಂಡವಾಗಿ ಸರ್ಕಾರಕ್ಕೆ ಸೇರಿಸಿಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಲಾಗುತ್ತೆ.

(11) ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಈ ಕೆಳಗೆ ಕಂಡ ತಾರೀಖಿನಲ್ಲಿ ಪಾವತಿ ಮಾಡತಕ್ಕದ್ದು ಮತ್ತು ಮೇಲ್ಕಂಡ ಹಣವನ್ನು ಕ್ರಮವಾಗಿ ಪಾವತಿ ಮಾಡತಕ್ಕ ಬಗ್ಯೆ ಸರಿಯಾದ ಖಾತರಿಯು ಕೊಡಬೇಕು. ಮೇಲ್ಕಂಡಂತೆ ಪಾವತಿ ಮಾಡಲು ತಪ್ಪಿದರೆ ಚಕ್ಕೆಗಳ ಜಮಾವಣೆ ಮತ್ತು ರವಾನೆ ತಡೆಯಲ್ಪಡುತ್ತಲ್ಲದೆ ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಮತ್ತು ಇಜಾರೆಯನ್ನ ರದ್ದು ಮಾಡಲಾದೀತು.

31ನೆ ಡಿಸಂಬರ 1907.

ಇತರ ಷರತ್ತುಗಳು.

(I) ಇಜಾರೆದಾರನು ಮತ್ತು ಆತನ ನೌಕರನೇ ಆಗಲಿ ಅಥವಾ ಷಿಕ್ಮಿ ಕಂಟ್ರಾಕ್ಟರೇ ಆಗಲಿ ಒಂದು ವರುಷದೊಳಗಿನ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(II) ಚಕ್ಕೆ ಜಮಾವಣೆ ನಡೆಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದಿಸಿಂದ ಒಂದು ತಖ್ತೆಯನ್ನು ಕೊಡಬೇಕು.

(III) ಇಜಾರೆ ಕೆಲಸವನ್ನು ಕಂಟ್ರಾಕ್ಟರೇ ಮಾಡಬೇಕು. ಮತ್ತು ಡೆಪ್ಯುಟಿ ಕಮಿಷನರ ಸಾಹೇಬರವರ ಅಪ್ಪಣೆ ಇಲ್ಲದೆ ಇತರರಿಗೆ ಇಜಾರೆಯನ್ನು ವರ್ಗಮಾಡಿ ಕೊಡಕೂಡದು.

(IV) ತೊಗಟೆ ತೆಗೆದ ನಂತರ ಉಳಿಯುವ ಆ ಸಂಬಂಧವಾದ ವಿಶಿಷ್ಟ ಸಾಧೆಯೂ ಇಜಾರೆದಾರನಿಗೆ ಸೇರಿದ್ದಾಗಿರುತ್ತೆ.

(V) ಇಜಾರೆ ಮೇರೆಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗ್ಯೆರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನು ಡೆಪ್ಯುಟಿ ಕಮಿಷನರ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರಾಗಲಿ ಅವರಿಂದ ನೇಮಕವಾದ ಇತರ ಆಫಿಸರೇ ಆಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

(VI) ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ದೋಣಿ ಚಕ್ಕೆಗೂ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರಿಂದ ನಿಯಾಮಕ ಮಾಡಲ್ಪಡುವ ರೀತಿಯಲ್ಲಿ ಇಜಾರೆದಾರನು ಪ್ಯಾಸ ಕೊಡತಕ್ಕದ್ದು.

(VII) ಕಂಟ್ರಾಕ್ಟರಿಂದಲೇ ಆಗಲಿ ಅಥವಾ ಆತನ ಜನಗಳಿಂದಲೇ ಆಗಲಿ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್‌ಗಳಲ್ಲಿ ಬೆಂಕಿ ಬಾಧೆಯುಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕಲ್ಲದೆ ; ಬೆಂಕೀ ಬೀಳುವದರಿಂದ ಬೆಲೇ ಬಾಳುವ ಫಾರೆಸ್ಟಿಗೇ ಆಗಲಿ ಅಥವಾ ಬೆಳೆಗಳಿಗೇ ಆಗಲಿ ಉಂಟಾಗುವ ನಷ್ಟವನ್ನು ಕಟ್ಟಿಕೊಡಬೇಕು.

(VIII) 1908ನೆ ಜುಲೈ ಮಾಹೆ 15ನೆ ತಾರೀಖಿನೊಳಗಾಗಿ ಇಜಾರೆ ಫಾಯಿದೆಯಲ್ಲಿ ಕಡಿದು ಜಮಾವಣೀ ಮಾಡಿ ದಾಸ್ತಾನ್ ಮಾಡಿರುವ ಎಲ್ಲಾ ಚಕ್ಕೆಯನ್ನು ಮೈಸೂರು ಡಿಸ್ಟ್ರಿಕ್ಟು ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(IX) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡಬಹುದಲ್ಲದೆ ಅದುವರೆಗೂ ಜಮಾಯಿಸಿರುವ ವಿಶಿಷ್ಟ ಚೆಕ್ಕೆಯನ್ನೂ ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡಬಹುದು. ಅಲ್ಲದೆ ಡೆಪ್ಯುಟಿ ಕಮಿಷನರ್ ಸಾಹೇಬರು (100) ರೂಪಾಯಿ ವರೆಗೂ ಜುರ್ಮಾನೆಯನ್ನು ಸಹಾ ಇಜಾರೆದಾರನಿಗೆ ವಿಧಿಸಬಹುದು.

ಎಂ. ಜಿ. ರಾಮರಾವ್,
ಫಾರ್ ಡೆಪ್ಯುಟಿ ಕಮಿಷನರ್, ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 24ನೆ ಆಗಸ್ಟು 1907.

ಸ್ವ 1907-08ನೆ ಸಾಲಿನಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟಿನ ಸ್ಟೇಟ್ ಮತ್ತು ಮನ್ನಾ ಫಾರೆಸ್ಟುಗಳಲ್ಲಿ ದೊರೆಯಬಹುದಾದ ಚಿಲ್ಲರೆ ಪಸಾರೆ ಜಿನಸು ಜಮಾವಣೆ ಹಕ್ಕನ್ನು ಹರಾಜು ಮಾಡುತ್ತೇವೆಂತ 1907ನೆ ಇಸವಿ ಆಗಸ್ಟು 29ನೆ ತಾರೀಖು ಮೈಸೂರು ಗೆಜೆಟ್ಟಿನ 2ನೆ ಭಾಗದ 419, 420ನೆ ಪುಟದಲ್ಲಿ ಪ್ರಕಟಿಸಲ್ಪಟ್ಟಿರುವ 24—8—07ನೆ ಇಸ್ತಿಹಾರಿಗೆ ಗಮನಕೊಡಬೇಕು.

ವೈ. ಶೀತಾರಾಮಯ್ಯ,
ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರ್, ಚಿತ್ರದುರ್ಗ ಡಿಸ್ಟ್ರಿಕ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು ನೆ ಜುಲೈ 1907.

ದೇವನಹಳ್ಳಿ ತಾಲ್ಲೂಕು ಕಸಬಾ ಹೋಬಳಿ ಜೋಡಿ ಮಲ್ಲೇನಹಳ್ಳಿ ಗ್ರಾಮವು ಸರಕಾರಕ್ಕೆ ಬರಬೇಕಾದ ಬಾಕೀಗೋಸ್ಕರ ಸದರಿ ಜೋಡಿ ಮಲ್ಲೇನಹಳ್ಳಿ ಗ್ರಾಮವನ್ನ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಸೆಪ್ಟಂಬರ 18ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿರುತ್ತೆ.

ಹೆಚ್ಚು ತಪಶೀಲ್ ಬಗ್ಯೆ 1907ನೆ ಇಸವಿ ಆಗಸ್ಟು 22ನೆ ಮರ್ಕುಂ 34ನೆ ನಂಬರು ಮೈಸೂರು ಗೆಜೆಟ್ಟಿನ IIನೆ ಭಾಗದ 407, 408ನೆ ನಂಬರು ಪೇಜನ್ನ ನೋಡತಕ್ಕದ್ದು.

ತಾರೀಖು ನೆ ಜುಲೈ 1907.

ದೇವನಹಳ್ಳಿ ತಾಲ್ಲೂಕು ಜಾಲದ ಹೋಬಳಿ ಜೋಡಿ ಮರಳಕುಂಟೆ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರ ಸದರಿ ಮರಳಕುಂಟೆ ಗ್ರಾಮವನ್ನ ದೇವನಹಳ್ಳಿ ಕಛೇರಿಯಲ್ಲಿ 1907ನೆ ಇಸವಿ ಸೆಪ್ಟಂಬರು 25ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿರುತ್ತೆ.

ಹೆಚ್ಚು ತಪಶೀಲ್ ಬಗ್ಯೆ 1907ನೆ ಇಸವಿ ಆಗಸ್ಟು 22ನೆ ಮರ್ಕುಂ 34ನೆ ನಂಬರು ಮೈಸೂರು ಗೆಜೆಟ್ಟಿನ IIನೆ ಭಾಗದ 409ನೆ ನಂಬರು ಪೇಜನ್ನ ನೋಡತಕ್ಕದ್ದು.

ತಾರೀಖು ಜುಲೈ 1907.

ದೇವನಹಳ್ಳಿ ತಾಲ್ಲೂಕು ಜಾಲದ ಹೋಬಳಿ ಜೋಡಿ ನೆಲ್ಲಕುಂಟೆ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಸದರಿ ಗ್ರಾಮವನ್ನ 1907ನೆ ಇಸವಿ ಅಕ್ಟೋಬರು 5ನೆ ತಾರೀಖಿನ ದಿವಸ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿರುತ್ತೆ.

ಹೆಚ್ಚು ತಪಶೀಲ್ ಬಗ್ಯೆ 1907ನೆ ಇಸವಿ ಆಗಸ್ಟು 22ನೆ ಮರ್ಕುಂ 34ನೆ ನಂಬರ್, ಮೈಸೂರು ಗೆಜೆಟ್ಟಿನ IIನೆ ಭಾಗದ 410ನೆ ನಂಬರು ಪೇಜನ್ನ ನೋಡತಕ್ಕದ್ದು.

ತಾರೀಖು ನೆ ಜುಲೈ 1907.

ದೇವನಹಳ್ಳಿ ತಾಲ್ಲೂಕು ಕಸಬಾ ಹೋಬಳಿ ಜೋಡಿ ಬೂದಿಹಾಳ್ ಗ್ರಾಮವು ಸರಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಸದರಿ ಜೋಡಿ ಬೂದಿಹಾಳ್ ಗ್ರಾಮವನ್ನ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಅಕ್ಟೋಬರ್ 26ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿರುತ್ತೆ.

ಹೆಚ್ಚು ತಪಶೀಲು ಬಗ್ಯೆ 1907ನೆ ಇಸವಿ ಆಗಸ್ಟು 22ನೆ ಮರ್ಕುಂ 34ನೆ ನಂಬರು ಮೈಸೂರು ಗೆಜೆಟ್ಟಿನ IIನೆ ಭಾಗದ 411ನೆ ನಂಬರು ಪೇಜನ್ನ ನೋಡತಕ್ಕದ್ದು.

ಡಿ. ದೇವರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ತುಮಕೂರು ಡಿಸ್ಟ್ರಿಕ್ಟು.

ತುಮಕೂರು ಡಿಸ್ಟ್ರಿಕ್ಟ ಡಿಸ್ಟ್ರಿಕ್ಟು ಬೋರ್ಡು ಮೆಂಬರುಗಳು ಸರ್ 1907ನೆ ಇಸವಿ ಆಗಸ್ಟು 2ನೆ ತಾರೀಖಿನಲ್ಲಿ ನಡಿಸಿದ ಮೀಟಿಂಗ ಪ್ರೊಸೀಡಿಂಗ್ಸ್.

ಹಾಜರ.

ಕೆ. ಧೊರೆಸ್ವಾಮಿ ಅಯ್ಯರ, ಎಸ್ಕ್ವಯರ, ಡೆಪ್ಯುಟಿ ಕಮಿಷನರವರು ಮತ್ತು ಪ್ರೆಸಿಡೆಂಟರವರು.

ಎಕ್ಸ ಅಫಿಷಿಯೋ ಮೆಂಬರುಗಳು.

(1) ಮೆ॥ ಸಿ. ನಾರಾಯಣರಾಯರು, ಗುಬ್ಬಿ ಸಬ ಡಿವಿಜನ ಅಸಿಸ್ಟೆಂಟ ಕಮಿಷನರವರು ಮತ್ತು ವೈಸ ಪ್ರೆಸಿಡೆಂಟರು.
(2) ,, ಆನಂದರಾವ ಸಿರಸಿ ಯವರು, ಮದ್ದಗಿರಿ ಸಬ ಡಿವಿಜನ ಅಸಿಸ್ಟೆಂಟ ಕಮಿಷನರವರು.
(3) ,, ಸಿ. ವೆಂಕಟರಾಯರು, ಟ್ರೆಜರಿ ಅಸಿಸ್ಟೆಂಟ ಕಮಿಷನರವರು.
(4) ,, ಸಿ. ಎ. ಮಹದೇವ ಶಾಸ್ತ್ರಿಗಳವರು, ತುಮಕೂರು ಡಿವಿಜನ ಎಗ್ಜಿಕ್ಯೂಟಿವ ಇಂಜನಿಯರ.
(5) ,, ವಿ. ಮುತ್ತುಸ್ವಾಮಿದಾಸ ಯವರು, ತುಮಕೂರು ಡಿಸ್ಟ್ರಿಕ್ಟು ಡಿಸ್ಟ್ರಿಕ್ಟ ಮೆಡಿಕಲ ಮತ್ತು ಸ್ಯಾನಿಟೆರಿ ಆಫಿಸರವರು.
(6) ,, ಎಸ. ರಂಗಾಚಾರ್ಯರವರು, ತುಮಕೂರು ಡಿಸ್ಟ್ರಿಕ್ಟು ಸ್ಕೂಲಗಳ ಡೆಪ್ಯುಟಿ ಇನಸ್ಪೆಕ್ಟರು.

ನಾನ್ ಅಫಿಷಿಯಲ ಮೆಂಬರುಗಳು.

(1) ಮೆ॥ ಕೆ. ನಲ್ಲಪ್ಪನವರು, ತುಮಕೂರು.
(2) ,, ಯಲ್ಲಯ್ಯ ಬಿನ್ ದೊಡ್ಡ ಪುಟ್ಟಯ್ಯನವರು, ತುಮಕೂರು.
(3) ,, ಶಿದ್ದಲಿಂಗಶೆಟ್ಟಿ ಬಿನ್ ಶಿದ್ದೇಗೌಡರು, ತುಮಕೂರು.
(4) ,, ಕೆ. ಬಿ. ಶ್ರೀನಿವಾಸರಾಯರು, ಮದ್ದಗಿರಿ.
(5) ,, ಜೆ. ಶಿವರಾಮಯ್ಯನವರು, ಮದ್ದಗಿರಿ.
(6) ,, ಗಂಗೇಗೌಡರು, ಚಿಕ್ಕನಾಯಿಕನಹಳ್ಳಿ.
(7) ,, ಸಿ. ಶ್ರೀನಿವಾಸರಾಯರು, ಪಾವುಗಡ.
(8) ,, ವೆಂಬಾರ ವೆಂಕಟನರಸಿಹ್ಮಾಚಾರ್ಯರು, ಪಾವುಗಡ.
(9) ,, ಪುಟ್ಟಸ್ವಾಮಯ್ಯ, ತಿಪಟೂರು.
(10) ,, ಶಿಂಗ್ರಿ ನಂಜಪ್ಪನವರು, ತಿಪಟೂರು.
(11) ,, ದೊಡ್ಡ ಮಲ್ಲಯ್ಯನವರು, ಶಿರಾ.
(12) ,, ಕೆ. ರಾಮಾನುಜೈಯ್ಯಂಗಾರ್ರು, ಗುಬ್ಬಿ.
(13) ,, ಹೊನ್ನಲಿಗೆಗೌಡರು, ಗುಬ್ಬಿ.
(14) ,, ಕೃಷ್ಣಸ್ವಾಮಿಶೆಟ್ಟರು, ಗುಬ್ಬಿ.
(15) ,, ಅಬಿದಲ್ಲಿ ಸಾಹೇಬರು, ಕೊರಟಗೆರೆ.
(16) ,, ವಿ. ನಾರಣಪ್ಪನವರು, ತುರ್ವೇಕೆರೆ.
(17) ,, ಶಿಂಗ್ರಾಚಾರ್ಯರು, ಕುಣಿಗಲ.

ಗೈರ ಹಾಜರ.

ನಾನ್ ಅಫಿಷಿಯಲ ಮೆಂಬರು.

(1) ಮೆ॥ ಜೆ. ರಾಮಸ್ವಾಮಯ್ಯನವರು, ಕುಣಿಗಲ.

I. ಸರ್ 1907ನೆ ಇಸವಿ ಜನವರಿ, ಫೆಬ್ರುವರಿ, ಮಾರ್ಚಿ ಮಾಹೆಗಳ ಡಿಸ್ಟ್ರಿಕ್ಟ ಫಂಡು ಆಡಿಟ್ಟಾದ ಜಮಾ ಖರ್ಚು ಲೆಕ್ಕಗಳನ್ನು ಓದಲಾಯಿತು.

ಪ್ಯಾಸ್ಮಾಡಲಾಯಿತು.

II. ಬೋರ್ಡಿನವರು ಬ್ರಾಂಚ ಡಿಸ್ಪೆನ್ಸರಿಗಳನ್ನು ಯಾವ ಯಾವ ಗ್ರಾಮಗಳಲ್ಲಿ ಇಡಬಹುದೆಂದು ಅಭಿಪ್ರಾಯಪಡುತ್ತಾರೋ ಅಂಥಾ ಗ್ರಾಮಗಳ ಲೀಸ್ಟು ಕಳುಹಿಸಿಕೊಡಬೇಕೆಂತ ನಮೂದಿರುವ ಜನರಲ ಮತ್ತು ರೆವಿನ್ಯೂ ಸೆಕ್ರೆಟೇರಿಯವರ 3—1—07ನೆ ಮರ್ಕ್ಯಂ 6002—Med. 97-06—9ನೆ ನಂಬರು ಡಾಕೇಟು ಮತ್ತು ಈ ವಿಷಯದಲ್ಲಿ ತಲ್ಪಿದ *ಈರೇಖಿನಲ್ಲಿ ಕಂಡ ತಾಲ್ಲೂಕು ಬೋರ್ಡಿನವರ ತೀರ್ಮಾನಗಳನ್ನು ಸಹಾ ಓದಲಾಯಿತು.

*(1) ತುಮಕೂರು.
(2) ಮದ್ದಗಿರಿ.
(3) ಶಿರಾ.
(4) ತಿಪಟೂರು.
(5) ಚಿಕ್ಕನಾಯುಕನಹಳ್ಳಿ.

ತೀರ್ಮಾನ—

ತುಮಕೂರು ತಾಲ್ಲೂಕು (1) ಊರ್ಡಗೆರೆ. ಮದ್ದಗಿರಿ ತಾಲ್ಲೂಕು (2) ಮಿಡಗೇಶಿ. ಶಿರಾ ತಾಲ್ಲೂಕು (3) ಬುಕ್ಕಾಪಟ್ಟಣ. ಚಿಕ್ಕನಾಯಕನಹಳ್ಳಿ ತಾಲ್ಲೂಕು (4) ಕಂದಿಕೆರೆ. ತಿಪಟೂರು ತಾಲ್ಲೂಕು (5) ಹೊನ್ನವಳ್ಳಿ. ಈ ಗ್ರಾಮಗಳಲ್ಲಿ ಬ್ರಾಂಚ ಡಿಸ್ಪೆನ್ಸರಿಗಳು ಆಗಬೇಕಾಗಿರುತ್ತೆ. ಮರಹಮ್ಮತ್ತು ಕಾಂಗಾರಿಗಳ ಖರ್ಚಿಗಾಗಿ ಬೇಕಾಗುವ ಕೆಲವು ಹಣ ಒದಗಲು ಮತ್ತ್ಯಾವದಾ

ದಲ್ಲಿ ಒಂದು ಬಾಬು ಏರ್ಪಡು ಆಗುವ ಪರ್ಯಂತ ಈ ಡಿಸ್ಪೆನ್ಸರಿಗಳಿಗಾಗಿ ತಗಲುವ ಲಾಗೋಡನ್ನು ವಹಿಸಲು ಬೋರ್ಡಿನವರಿಗೆ ಅಸಾಧ್ಯವಾಗಿರುತ್ತೆ. ಔಷಧದ ಖರ್ಚು ಮತ್ತು ಹಾಸ್ಪಿಟಲ್ ಅಸಿಸ್ಟೆಂಟರ ಟ್ರಾವಲಿಂಗ್ ಅಲೋವನ್ಸ್ ಸಹಾ ಮೆಡಿಕಲ್ ಬಡ್ಜಟ್ಟಿನಿಂದ ಕೊಡಬೇಕೆಂತ ಬೋರ್ಡಿನವರು ಕೇಳಿಕೊಳ್ಳುತಾರೆ.

III. ಸನ 1907ನೆ ಸಾಲಿನ ದಸರಾ ಕ್ಯಾಲೆಂಡರ್ ಕಳುಹಿಸಿರುವದಾಗಿ ವಗೈರೆ ನಮೂದಾದ 22—5—07ನೆ ಮುರ್ಸಲೆ 7209-49—G. R. 17-06 –1ನೆ ನಂಬರು ಗವರ್ನಮೆಂಟ್ ಪ್ರೊಸೀಡಿಂಗ್ಸನ್ನು ಓದಲಾಯಿತು.

ಬರುವ ದಸರಾ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮಧ್ಯಗಿರಿ ಮ॥ ಜೆ. ಶಿವರಾಮಯ್ಯನವರು ಮತ್ತು ಪಾವುಗಡ ಮ॥ ವೆಂಕಟನರಸಿಂಹಾಚಾರ್ಯರು ಸಹಾ ಬೋರ್ಡಿನವರ ಪ್ರತಿನಿಧಿ ಮೆಂಬರುಗಳಾಗಿರಬೇಕೆಂತ ತೀರ್ಮಾನಿಸಲಾಯಿತು.

IV. ಡಿಸ್ಟ್ರಿಕ್ಟು ಮುಚಲಕೆಯಲ್ಲಿ ಜಾರೀಲಿರುವ ರೇಟುಗಳ ಷೆಡ್ಯೂಲನ್ನು ಮತ್ತು ಸದರಿ ದರಗಳು ಬೋರ್ಡಿನವರು ಒಪ್ಪಿರುತ್ತಾರೆಯೇ ಎಂಬಗ್ಗೆ ಬರೆಯಬೇಕಾಗಿ ನಮೂದಿರುವ 1—8—07ನೆ ಮುರ್ಸಲೆ 947—L. B. 423-06—5ನೆ ನಂಬರು ಜನರಲ್ ಮತ್ತು ರವಿನ್ಯೂ ಸೆಕ್ರೆಟರಿಯವರ ಡಾಕೇಟನ್ನು ಸಹಾ ಓದಲಾಯಿತು.

ಷೆಡ್ಯೂಲಿನಲ್ಲಿ ದಾಖಲಾಗಿರುವ ದರಗಳನ್ನು ಒಪ್ಪಲಾಯಿತೆಂತ ತೀರ್ಮಾನಿಸಲಾಯಿತು.

V. ಭಾವಿಯ ನೀರನ್ನು ಶುದ್ಧಿಪಡಿಸತಕ್ಕ ವಿಚಾರದಲ್ಲಿ ಸೀನಿಯರ್ ಸರ್ಜನ್‌ಯವರಿಂದ ತಲ್ಪಿದ 7—6—07ನೆ ಮುರ್ಸಲೆ 7205—7344ನೆ ನಂಬರು ಮೆಡಿಕಲ್ ಸರ್ಕ್ಯುಲರನ್ನು ಓದಲಾಯಿತು.

ಜನಗಳಿಗೆ ಸರ್ಕ್ಯುಲರಿನ ಅಭಿಪ್ರಾಯವನ್ನು ತಿಳುವಳಿಕೆ ಹೇಳಲು ಸರ್ಕ್ಯುಲರಿನ ಕನ್ನಡ ತರ್ಜುಮೆ ಮಾಡಿಸಿ ಪ್ರತಿ ಮೆಂಬರಿಗೂ ಒಂದು ನಕಲನ್ನು ಕೊಡಬೇಕೆಂದು ತೀರ್ಮಾನಿಸಲಾಯಿತು.

VI. ಕೆಲವು ರಸ್ತೆಗಳ ಮೇಲೆ ಆಮದ್ ರಪ್ತು ಬಹಳವಾಗಿರುತ್ತೆಂತಲೂ ಅವುಗಳ ಮೈಲೇಜ್ ಗ್ರಾಂಟನ್ನು 200 ರೂಪಾಯಿಗಳಿಗೆ ಹೆಚ್ಚಿಸಲೇಬೇಕೆಂತಲೂ ಹಾಗೆ ಹೆಚ್ಚಿಸದಿದ್ದರೆ ಆ ರಸ್ತೆಗಳು ಅಯೋಗ್ಯವಾಗಿ ಅವುಗಳನ್ನು ದುರಸ್ತುಪಡಿಸಲು ಭಾರಿ ಲಾಗೋಡು ಆಗುತ್ತೆಂತಲೂ—ಈ ಬಗ್ಗೆ ಬೇಕಾಗಿರುವ ಹೆಚ್ಚಿಗೆ ಹಣವನ್ನು ಟೋಲ್ ಗೇಟುಗಳನ್ನು ಇಡುವದರ ಮೂಲಕ ಉತ್ಪತ್ತಿ ಮಾಡಬಹುದೆಂತಲೂ ಸಹಾ ನಮೂದಿರುವ ಎಗ್ಜಿಕ್ಯೂಟಿವ್ ಇಂಜಿನಿಯರ್ ಯವರ 10—1—07ನೆ ಮುರ್ಸಲೆ 12ನೆ ನಂಬರು ಡಾಕೇಟು ಮತ್ತು ತಿಪಟೂರು ತಾಲ್ಲೂಕಿನ ಡಿಸ್ಟ್ರಿಕ್ಟು ಫಂಡು ರಸ್ತೆಗಳಿಗೆ ಹಾಲಿ ಇರುವ ಮೈಲೇಜ್ ಗ್ರಾಂಟನ್ನು ಹೆಚ್ಚಿಸಬೇಕೆಂತ ತಿಪಟೂರು ತಾಲ್ಲೂಕು ಬೋರ್ಡಿನವರ ತೀರ್ಮಾನದ ಸಿಸ್ತೆ ತಿಪಟೂರು ತಾಲ್ಲೂಕು ಅಮಲ್ದಾರ್ರಿಂದ ತಲ್ಪಿದ ರಿಪೋರ್ಟನ್ನು ಕಳುಹಿಸಿರುವದಾಗಿ ನಮೂದಾದ ಗುಬ್ಬಿ ಸಬ್ ಡಿವಿಜನ್ ಅಸಿಸ್ಟೆಂಟ್ ಕಮೀಷನರವರ 3—5—07ನೆ ಮುರ್ಸಲೆ 753ನೆ ನಂಬರು ಯಾದಿಯನ್ನು ಸಹಾ ಓದಲಾಯಿತು.

ಆಮದ್ ರಪ್ತು ಜಾಸ್ತಿಯಾಗಿರುವ ಡಿಸ್ಟ್ರಿಕ್ಟು ಫಂಡ್ ರಸ್ತೆಗಳಿಗೆ ಹಾಲಿ ಇರುವ ಮೈಲೇಜ್ ಗ್ರಾಂಟನ್ನು ಹೆಚ್ಚಿಸುವದಕ್ಕೆ ಹಣ ಒದಗಲು ತಾತ್ಕಾಲಕ್ಕೆ ಬಾಣಸಂದ್ರದ ರೈಲ್ವೆ ಸ್ಟೇಷನ್‌ಗೆ ಹೋಗುವ ರಸ್ತೆಗಳಲ್ಲಿ ಟೋಲ್ ಗೇಟುಗಳನ್ನು ಇಡಬಹುದೆಂದು ತೀರ್ಮಾನಿಸಲಾಯಿತು.

VII. ಗುಬ್ಬಿ ಸಮೀಪ ಇರುವ ಚರ್ಚ್ ಹಿಂಭಾಗದ ಬೇಲಿ ಹತ್ತರ ಒಂದು ಭಾವಿಯನ್ನು 350 ರೂಪಾಯಿ ಅಂದಾಜಿನೊಳಗೆ ತೆಗೆಯಲು ಉದ್ದೇಶಿಸಿರುವಂತೆಯೂ, ಅಲ್ಲಿ ಹಾಲಿ ವಾಸವಾಗಿರುವ ಕ್ರಿಶ್ಚಿಯನ್ ಮತದ ಜನಗಳ ಮತ್ತು ಮುಂದೆ ಅಲ್ಲಿ ವಾಸಕ್ಕೆ ಬರುವವರ ಉಪಯೋಗಕ್ಕಾಗಿ ಸದರಿ ಭಾವಿ ಆಗಬೇಕೆಂತಲೂ ನಮೂದಾಗುವ ರೆವರೆಂಡ್ ಮ॥ ಡಬ್ಲ್ಯು. ಬಿ. ಟ್ರಿವೆಲ್ಲಾ ಯವರ 27—5—07ನೆ ಮುರ್ಸಲೆ ಲೆಟರು ಓದಲಾಯಿತು.

ರೆವರೆಂಡ್ ಮ॥ ಡಬ್ಲ್ಯು. ಬಿ. ಟ್ರಿವೆಲ್ಲಾ ಯವರು 150 ರೂಪಾಯಿಗಳನ್ನು ಕಂಟ್ರಿಬ್ಯೂಷನ್ ತರೀಕ ಕೇಳುತ್ತಾರೆ. ಖಾನೇಷುಮಾರಿ ಪ್ರಕಾರ ಮಿಷನ್ ಬಂಗ್ಲಾ ಕಾಂಪೌಂಡಿನಲ್ಲಿಯೂ ಚರ್ಚ್ ಬಳಿಯೂ ಸಹಾ 49 ಪ್ರಜಾ ಸಂಖ್ಯೆ ಆಗುತ್ತೆ. ಆದರೆ ಅಲ್ಲಿರುವವರ ಹೇಳಿಕೆ ಮೇರೆ 105 ಪ್ರಜಾ ಸಂಖ್ಯೆ ಎಂತ ತಿಳಿಯಬರುತ್ತೆ. ಆ ಪ್ರಾಂತ್ಯ ಇರುವ ಭಾವಿಗಳನ್ನೇ ಮಿಷನವರಾಗಲೀ ಆ ಜನಗಳಾಗಲಿ ಉಪಯೋಗಿಸಬಹುದಾಗಿರುತ್ತೆ. ಭಾವಿಗಳು ಆಗಬೇಕಾಗಿರುವ ಅನೇಕ ಭಾರಿ ಗ್ರಾಮಗಳು ಇರುವದರಿಂದಲೂ ಬೋರ್ಡಿಗೆ ಇರುವ ಆದಾಯಕ್ಕೇನೇ ಹಾಲಿ ಇರುವ ಖರ್ಚು ಜಾಸ್ತಿಯಾಗಿರುವದರಿಂದಲೂ, ಮ॥ ಟ್ರಿವೆಲ್ಲಾ ಯವರ ಅಭಿಪ್ರಾಯಾನುಸಾರ ತಾತ್ಕಾಲಕ್ಕೆ ನಡಿಸಲು ಅವಕಾಶವಿಲ್ಲದ್ದಕ್ಕಾಗಿ ವಿಷಾಧಿಸಲ್ಪಟ್ಟಿದೆ ಎಂತ ತೀರ್ಮಾನಿಸಲಾಯಿತು.

VIII. ಹೊಳವನಹಳ್ಳಿ ಯೂನಿಯನ್ನಲ್ಲಿ ಚರಂಡೀಗೆ ಅಡ್ಡವಾಗಿರುವ ಬಹಳ ಶಿಥಿಲವಾಗಿರುವ ಚಾವಡಿಯನ್ನು ಹರಾಜು ಮಾಡಿಸಿ ಬೇರೆ ಸ್ಥಳದಲ್ಲಿ ಹೊಸದಾಗಿ ಒಂದು ಚಾವಡಿಯನ್ನು ಕಟ್ಟಿಸಬೇಕೆಂದು ವಗೈರೆ ನಮೂದಾದ ಕೊರಟಗೆರೆ ಸಬ್ ತಾಲ್ಲೂಕು ಡಪ್ಯುಟಿ ಅಮಲ್ದಾರ್ರ ರಿಪೋರ್ಟನ್ನು ಆರ್ಡರ್ ಬಗ್ಗೆ ಕಳುಹಿಸಿರುವದಾಗಿ ನಮೂದಾದ ಮಧ್ಯಗಿರಿ ಸಬ್ ಡಿವಿಜನ್ ಅಸಿಸ್ಟೆಂಟ್ ಕಮೀಷನರವರ 12—5—07ನೆ ಮುರ್ಸಲೆ 1607ನೆ ನಂಬರ್ ಯಾದಿಯನ್ನು ಓದಲಾಯಿತು.

ಆಗಬಹುದೆಂದು ತೀರ್ಮಾನಿಸಲಾಯಿತು.

IX. ತುಮಕೂರು ತಾಲ್ಲೂಕು ಊರ್ಡಿಗೆರೆ ಹೋಬಳಿ ಶಿಂಗ್ರಿಹಳ್ಳಿ ಗ್ರಾಮದಲ್ಲಿರುವ ದೊಡ್ಡಿಯಲ್ಲಿ ಏನೂ ಹುಟ್ಟುವಳಿ ಆಗುವದಿಲ್ಲವಾದ್ದರಿಂದ ಅಲ್ಲಿ ದೊಡ್ಡಿ ವಜಾಮಾಡಿ ಹೊನಸಿಗೆರೆ ಗ್ರಾಮಕ್ಕೆ ಸದರಿ ದೊಡ್ಡಿಯನ್ನು ವರ್ಗಾಯಿಸಬೇಕೆಂತಲೂ, ಆ ಗ್ರಾಮದ ಶ್ಯಾನುಭೋಗ, ಪಟೇಲ ಸಹಾ ಅಲ್ಲಿ ಹೊಸದಾಗಿ ಒಂದು ದೊಡ್ಡಿ ಮನೆಯನ್ನು ಕಟ್ಟಿಸಿಕೊಡಲು ಒಪ್ಪಿ ಮುಚ್ಚಳಿಕೆ ಬರೆಸಿಕೊಟ್ಟಿರುವಂತೆಯೂ ಸಹಾ ನಮೂದಿರುವ ತುಮಕೂರು ತಾಲ್ಲೂಕು ಅಮಲ್ದಾರ್ರ 24—6—07ನೆ ಮುರ್ಸಲೆ 448ನೆ ನಂಬರು ರಿಪೋರ್ಟನ್ನು ಓದಲಾಯಿತು.

ಆಗಬಹುದೆಂದು ತೀರ್ಮಾನಿಸಲಾಯಿತು.

X. 1907ನೆ ಇಸವಿ ಮೇ, ಜೂನ್ ಮಾಹೆಗಳಲ್ಲಿ ಮಂಜೂರಾದ ಡಿಸ್ಟ್ರಿಕ್ಟ್ ಫಂಡು ಕಾಂಗಾರಿಗಳ ಲಿಸ್ಟುಗಳನ್ನು ಓದಿ ಮಂಜೂರ್ ಮಾಡಲಾಯಿತು.

XI. ಎಗ್ಜಿಕ್ಯೂಟಿವ್ ಇಂಜನಿಯರ್ಯವರಿಂದ ತಲ್ಪಿದ ಪ್ರಸಿಡೆಂಟರವರ ಕೌಂಟರ್ ಸೈನ್ ಆದ ಅಂದಾಜುಗಳ ಲಿಸ್ಟು ಓದಿ ಮಂಜೂರ್ಮಾಡಲಾಯಿತು.

XII. ಸನ್ 1907ನೆ ಇಸವಿ ಜೂನ್ 30ನೆ ತಾರೀಖಿನಲ್ಲಿ ನಿಂಕಲಾ ನಿಂತ ಡಿಸ್ಟ್ರಿಕ್ಟ್ ಫಂಡು ಕಾಮಗಾರಿಗಳ ಲಿಸ್ಟನ್ನ ಓದಲಾಯಿತು.

ಗವರ್ನಮೆಂಟ್ ಮಂಜೂರಾತಿಗಾಗಿ ಸದರಿ ಲಿಸ್ಟನ್ನು ಜನರಲ್ ಮತ್ತು ರವಿನ್ಯೂ ಸೆಕ್ರೆಟೇರಿಯವರಲ್ಲಿಗೆ ಕಳುಹಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

XIII. ಗ್ರಾಮ ಬಡಾವಣೆ ಬೇರೆ ಸ್ಥಳದಲ್ಲಿ ಗ್ರಾಮ ಕಟ್ಟೋಣ ಮತ್ತು ಹೊಸದಾಗಿ ಗ್ರಾಮಗಳನ್ನು ಕಟ್ಟೋಣ ಈ ಸಂಬಂಧವಾದ ನಡವಳಿಕೆಗಳ್ಯಾವತ್ತೂ ಡಿಸ್ಟ್ರಿಕ್ಟ್ ಬೋರ್ಡಿನವರ ಪ್ರವೇಶವಿಲ್ಲದೇ ರವಿನ್ಯೂ ಏರ್ಜಾಸಿ ಮೂಲಕವೇ ಸೀದಾ ನಡವಳಿಕೆ ನಡಿಸತಕ್ಕದ್ದೆಂದು ವಗೈರೆ ನಮೂದಾದ 15—7—07ನೆ ಮರ್ಕುಂ 478-87—L. B. 127-06—7ನೆ ನಂಬರು ಗವರ್ನಮೆಂಟ್ ಪ್ರೊಸೀಡಿಂಗ್ಸನ್ನು ಓದಿ ರಿಕಾರ್ಡ್ ಮಾಡಲಾಯಿತು.

XIV. ಮುಂದಿನ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗ್ ಸನ್ 1907ನೆ ಇಸವಿ ಸೆಪ್ಟಂಬರು ತಾರೀಖು 27ರಲ್ಲು ಮಧ್ಯಾಹ್ನ 3 ಘಂಟೆಗೆ ನಡಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

ಕೆ. ಧೊರೆಸ್ವಾಮಿ ಅಯ್ಯರ್,
ಪ್ರೆಸಿಡೆಂಟ್.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ಸನ್ 1908ನೆ ಇಸವಿ ಫೆಬ್ರವರಿ ಮಾಹೆ 19ನೆ ತಾರೀಖಿನಲ್ಲಿ ಪ್ರಾರಂಭವಾಗಿ ಹತ್ತು ದಿನಗಳ ವರೆಗೂ, ಹೊನ್ನಾಳಿ ತಾಲ್ಲೂಕು ರಾಂಪುರದಲ್ಲಿ ನಡೆಯುವ ಜಾತ್ರೆ ಕಾಲದಲ್ಲಿ ಗವರ್ನಮೆಂಟಿನಿಂದ ತಲ್ಪಿರುವ 22—12—06ನೆ ಮರ್ಕುಂ 5540-1—L. F. 495-05—4ನೆ ನಂಬರ್ ಪ್ರೊಸೀಡಿಂಗ್ಸ್ ಪ್ರಕಾರ ದನಗಳ ಪ್ರದರ್ಶನವು ನಡೆಯುತ್ತದೆ.

2. ಜಾತ್ರೆ ನಡೆಯುವ ರಾಮಪುರ ಗ್ರಾಮದ ಸಮೀಪದಲ್ಲಿ ಸಾಸವೆಹಳ್ಳಿಗೆ ಹೋಗುವ ಕಾಲುದಾರಿ ಪಕ್ಕದ, ಮೈದಾನಿನಲ್ಲಿ ಪ್ರದರ್ಶನವು ನಡೆಯಲು ಏರ್ಪಡಿಸಿರುತ್ತೆ.

3. ಗಾಡಿ ಎತ್ತು ಜೊತೆ 1ಕ್ಕೆ ಮೊದಲನೆ ಬಹುಮಾನ 20 ರೂಪಾಯಿ, ಎರಡನೆ ಬಹುಮಾನ 10 ರೂಪಾಯಿ, ಉಳುವ ಎತ್ತು ಜೊತೆ ಒಂದಕ್ಕೆ ಮೊದಲನೆ ಬಹುಮಾನ 20 ರೂಪಾಯಿ, ಎರಡನೆ ಬಹುಮಾನ 10 ರೂಪಾಯಿ, ಅತ್ಯುತ್ತಮವಾದ ಬೀಜದ ಹೋರಿ ಒಂದಕ್ಕೆ ಒಂದನೆ ಬಹುಮಾನ 15 ರೂಪಾಯಿ, ಅತ್ಯುತ್ತಮವಾದ ಹಸು ಒಂದಕ್ಕೆ ಒಂದನೆ ಬಹುಮಾನ 15 ರೂಪಾಯಿ, ಅತ್ಯುತ್ತಮವಾದ ಎಮ್ಮೆ 1ಕ್ಕೆ ಒಂದನೆ ಬಹುಮಾನ 10 ರೂಪಾಯಿ, ಈ ರೀತಿ 7 ಬಹುಮಾನಗಳು ಕೊಡಲ್ಪಡುತ್ತವೆ.

4. ಬಹುಮಾನಗಳನ್ನು ಕೊಡಲು ಉತ್ತಮ ಜಾನುವಾರುಗಳನ್ನು ಚುನಾಯಿಸಲು ಒಂದು ಕಮಿಟಿ ಏರ್ಪಡಿಸುತ್ತೆ. ಪ್ರದರ್ಶನವು ಮುಗಿದ ಕೂಡಲೆ ಇನಾಂ ಹಂಚಲ್ಪಡುತ್ತದೆ.

5. ಮೇಲ್ಕಂಡ ದ್ರವ್ಯ ರೂಪದ ಇನಾಂ ಅಲ್ಲದೆ ಒಂದು ಯೋಗ್ಯತಾ ಪತ್ರವು (Certificate) ದೊರಿಯುತ್ತದೆ.

6. ಇನಾಂ ಪಡೆಯಲು ಲಾಯಖಾದ ಜಾನುವಾರು ಪ್ರದರ್ಶನಕ್ಕೆ ಬಾರದೆ ಇದ್ದಲ್ಲಿ ಸದರಿ ಇನಾಂ ಅನಾಮತ್ತಿನಲ್ಲಿಡುವದಕಾಗಲಿ, ಅಥವಾ ಇನಾಮಿಗೆ ಅರ್ಹವಾದ ಇತರ ತರಗತಿ ಜಾನುವಾರುಗಳಿಗೆ ಕೊಡುವದಕ್ಕಾಗಲಿ ಕಮಿಟಿ ಮೆಂಬರುಗಳು ಅಧಿಕಾರವುಳ್ಳವರಾಗಿರುತ್ತಾರೆ.

7. ಜಾನುವಾರುಗಳನ್ನು ಪ್ರದರ್ಶನ ಮಾಡಲು ಇಷ್ಟವುಳ್ಳವರು, ಹೊನ್ನಾಳಿ ತಾಲ್ಲೂಕು ಅಮಲ್ದಾರ್ರವರಿಗೆ ಆಗಲಿ, ಅಥವಾ ಅವರಿಂದ ನೇಮಕ ಮಾಡಲ್ಪಟ್ಟ ಇತರ ನೌಕರರಿಗೆ ಆಗಲಿ, ಪ್ರದರ್ಶನ ಷುರುವಾಗುವದಕ್ಕೆ ಮುಂಚಿತವಾಗಿ ಒಂದು ದಿವಸಕ್ಕೆ ಕಮ್ಮಿ ಇಲ್ಲದೆ ಅವಕಾಶವಿರುವಂತೆ, ಬರೆದು ತಮ್ಮ ಹೆಸರು ಜಾನುವಾರು ತಪಶೀಲು ದಾಖಲ್ಮಾಡಿಸಬೇಕು.

8. ಪ್ರದರ್ಶನಕ್ಕೆ ಸೇರುವ ಜಾನುವಾರುಗಳಿಗಾಗಲಿ, ಅಥವಾ ಅವುಗಳಿಂದ ಜನಗಳಿಗೆ ಆಗಲಿ, ಯಾವ ಅಪಾಯವೂ ಸಂಭವಿಸದಂತೆ ಅವುಗಳ ಮಾಲೀಕರು ನೋಡಿಕೊಳ್ಳಬೇಕು.

9. ಸ್ಥಳದಲ್ಲಿ ಜಮಾಯಿಸಲಹುದಾದ ರಾತೀಬು ಜಾನುವಾರುಗಳಿಗೆ ಸಾಲದೆ ಹೋಗಬಹುದಾದ್ದರಿಂದ ಪ್ರದರ್ಶನದಲ್ಲಿ ಸೇರಬಹುದಾದ ಜಾನವಾರುಗಳಿಗೆ ರಾತೀಬಿನ ಏರ್ಪಾಡು ಅವುಗಳ ಮಾಲೀಕರೆ ನೋಡಿಕೊಳ್ಳುವದು ಒಳ್ಳೇದು.

10. ಈ ಜಾತ್ರೆಗೆ ಬಹಳ ಜನಗಳು ಮತ್ತು ಜಾನುವಾರು ಸೇರುವದರಿಂದ ವ್ಯಾಪಾರ ಬಹಳ ಚನ್ನಾಗಿ ನಡಿಯುತ್ತೆ.

11. 1907ನೆ ಇಸವಿ ಮಾರ್ಚಿ ತಿಂಗಳಲ್ಲಿ ಕೂಡ್ಲಿ ಜಾತ್ರೆ ಕಾಲದಲ್ಲಿ ನಡದ ಪ್ರದರ್ಶನ ಕಾಲದಲ್ಲಿ ಬಹುಮಾನ ಕೊಡಲ್ಪಟ್ಟವರ ತಪಶೀಲ್ ಈ ಕೆಳಗೆ ನಮೂದಿಸಿರುತ್ತೆ.

ನಂಬರು.	ಪ್ರದರ್ಶನ ಮಾಡಿದ ಮಾಲೀಕನ ಹೆಸರು.			ಬಹುಮಾನದ ತಪಶೀಲ್.		
	ಹೆಸರು.	ವಾಸವಾಗಿರುವ ಗ್ರಾಮ.	ತಾಲ್ಲೂಕು.	ಯಾತಕ್ಕೋಸ್ಕರ ಬಹುಮಾನ ಕೊಟ್ಟದ್ದು.	ಮೊಬಲಗು.	ಬಹುಮಾನದ ತರಗತಿ.
					ರೂ.	
1	ರುದ್ರಪ್ಪ ಬಿನ್ ಶಿವಪ್ಪ ...	ನ್ಯಾಮತಿ ...	ಹೊನ್ನಾಳಿ ...	ಉಳುವ ಎತ್ತುಗಳ ಜೊತೆಗೆ.	20	1ನೆ ಬಹುಮಾನ
2	ರಾಮರಾವ್ ಬಿನ್ ಹನುಮಂತರಾವ್.	ಶಿದ್ಲಿಪುರ ...	ಶಿವಮೊಗ್ಗ ...	ಡಿಟೋ ...	10	2ನೆ ಡಿಟೋ
3	ಹಾಲಪ್ಪ ಬಿನ್ ಹರಗಪ್ಪ...	ಸುಂಕದಕಟ್ಟೆ...	ಹೊನ್ನಾಳಿ ...	ಬೀಜದ ಹೋರಿ ಒಂದಕ್ಕೆ.	15	1ನೆ ಡಿಟೋ
4	ಮಹದೇವಪ್ಪ ಬಿನ್ ಮಲ್ಲಪ್ಪ	ತ್ಯಾವಣಗಿ ...	ಚನ್ನಗಿರಿ ...	ಗಾಡಿ ಎತ್ತಿನ ಜೊತೆ 1ಕೆ.	10	2ನೆ ಡಿಟೋ

ಎ. ವೇದಾಂತದೇಸಿಗಂ ಐಯ್ಯಂಗಾರ್,
ಫಾರ್ ಪ್ರೆಸಿಡೆಂಟ್.

ಬೆಂಗಳೂರು ಸಬಾರ್ಡಿನೇಟ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1907—08ನೆ ಇಸವಿ ಮಿ|| ಅರ್ಜೀ ನಂಬರ್ 64.

ಬೆಂಗಳೂರಲ್ಲಿದ್ದು ಮೃತಪಟ್ಟ ಸುಬ್ಬಮ್ಮ ಮತ್ತು ದಾಸಪ್ಪ ಇವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಪೆದ್ದಕ್ಕ, ಮೃತಪಟ್ಟ ಸದರೀ ಸುಬ್ಬಮ್ಮ ದಾಸಪ್ಪನವರಿಗೆ ಖಾಸ ಅವ್ವ ಆಗಬೇಕೆಂಬ ಹಕ್ಕುದಾರಿ ಮೇಲೆ ಸ್ಥಳದ ವಾಸಸ್ಥರಾಗಿ ಮೃತಪಟ್ಟ ಸುಬ್ಬಮ್ಮ ದಾಸಪ್ಪನವರ ಜೆಂದಗಿ ಬಗ್ಯಾಗಿ ಬರತಕ್ಕ 1,740 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಪೆದ್ದಕ್ಕನ ಅರ್ಜಿಯನ್ನು ಸರ್ 1907ನೆ ಇಸವಿ ಸೆಪ್ಟಂಬರು ತಿಂಗಳು 6ನೆ ತಾರೀಖು ಶುಕ್ರವಾರದಲ್ಲೂ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಮ್ಮ ವಗ್ಯೆರೇರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1907ನೆ ಇಸವಿ ಆಗಸ್ಟು ತಿಂಗಳು 21ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸರ್ 1907—08ನೆ ಇಸವಿ ಮಿ|| ಅರ್ಜೀ ನಂಬರ್ 103.

ಬೆಂಗಳೂರು ಸುಲ್ತಾನ್‌ಪೇಟೆಲಿರುವ ನಾಗಪ್ಪಾಚಾರಿ ಮಗ ವೆಂಕಟರಮಣೈಯ್ಯ—
ಮೃತಪಟ್ಟ ಬಾಲಾಚಾರ್ರು ಆಸ್ತೀ ವಿಷಯದಲ್ಲಿ—

ಅರ್ಜೀದಾರರು ವೆಂಕಟರಮಣಯ್ಯ, ಮೃತಪಟ್ಟ ಸದರೀ ಬಾಲಾಚಾರಿಗೆ ಖಾಸ ತಂದೆಯಾಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಬಾಲಾಚಾರ್ರು ಜೆಂದಗಿ ಬಗ್ಯಾಗಿ ಬರತಕ್ಕ 227—8—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟರಮಣೈಯ್ಯನ ಅರ್ಜಿಯನ್ನು ಸರ್ 1907ನೆ ಇಸವಿ ಸೆಪಟಂಬರ್ ತಿಂಗಳು 6ನೆ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ಬಾಲಾಚಾರ್ರು ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1907ನೆ ಇಸವಿ ಆಗಸ್ಟು ತಿಂಗಳು 17ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸರ್ 1907—08ನೆ ಇಸವಿ ಮಿ|| ಅರ್ಜೀ ನಂಬರ್ 120.

ಬೆಂಗಳೂರಲ್ಲಿ ಡಿಸ್ಟ್ರಿಕ್ಟು ಟ್ರೆಜರೀಲಿ ಅಕೌಂಟೆಂಟ್ ಆಗಿದ್ದು ಮೃತಪಟ್ಟ ವಾಸುದೇವರಾವ್ ಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1. ಯಮುನಾಬಾಯಿ, 2. ಗೋಪಿಬಾಯಿ, ಮೃತಪಟ್ಟ ಸದರೀ ವಾಸುದೇವರಾಯರಿಗ್ಗೆ ಖಾಸಾ ಮಕ್ಕಳಾಗಬೇಕೆಂಬ ಹಕ್ಕುದಾರಿ ಮೇಲೆ ಯಮುನಾಬಾಯಿ, ಗೋಪಿಬಾಯಿ ಸ್ಥಳದ ವಾಸಸ್ಥರಾಗಿ ಮೃತಪಟ್ಟ ವಾಸುದೇವ

ರಾಯರ ಜಿಂದಗಿ ಬಗ್ಯಾಗಿ ಬರತಕ್ಕ 5,350 ರೂಪಾಯಿ ಸಾಲವನ್ನು ವಸೂಲ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ರ ಪ್ರಕಾರ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಯಮುನಾಬಾಯಿ, ಗೋಪಿಬಾಯಿಯವರ ಅರ್ಜಿಯನ್ನು ಸನ 1907ನೆ ಇಸವಿ ಸೆಪಟಂಬರ ತಿಂಗಳು 6ನೆ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವಾಸುದೇವರಾವ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ 1907ನೆ ಇಸವಿ ಆಗಸ್ಟು ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸನ 1907—08ನೆ ಇಸವಿ ಮಿ|| ಅರ್ಜೀ ನಂಬರು 123.

ಬೆಂಗಳೂರಲ್ಲಿ ವಾಸವಾಗಿದ್ದ ಮೃತಪಟ್ಟ ನಾಗೇಶರಾವು ಆಸ್ತಿ ವಿಷಯದಲ್ಲಿ—

ಅರ್ಜೀದಾರರು ನಾಗಮ್ಮ, ಮೃತಪಟ್ಟ ಸದರೀ ನಾಗೇಶರಾವುಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದ್ವಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ನಾಗೇಶರಾವು ಜಿಂದಗಿ ಬಗ್ಯಾಗಿ ಬರತಕ್ಕ 571 ರೂಪಾಯಿ ಸಾಲವನ್ನು ವಸೂಲ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ರ ಪ್ರಕಾರ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ನಾಗಮ್ಮನ ಅರ್ಜಿಯನ್ನು ಸನ 1907ನೆ ಇಸವಿ ಸೆಪ್ಟಂಬರು ತಿಂಗಳು 6ನೆ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಗೇಶರಾವು ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ. ಪಾಲಿಸಿ ನಂಬರು 3752.

ಸನ 1907ನೆ ಇಸವಿ ಆಗಸ್ಟು ತಿಂಗಳು 21ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸನ 1907—08ನೆ ಇಸವಿ ಮಿ|| ಅರ್ಜೀ ನಂಬರು 136.

ಅರ್ಜಿದಾರರು 1ನೆ ಬಿ. ವಿ. ವರದೈಯ್ಯಂಗಾರ್ರು, 2ನೆ ತಿರುಮಲಾಚಾರ, 3ನೆ ಕೃಷ್ಣಯ್ಯಂಗಾರ್ರು—

ಮೃತಪಟ್ಟ ಭಾಷ್ಯಮೈಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ವರದೈಯ್ಯಂಗಾರ್ರು, ಮೃತಪಟ್ಟ ಸದರೀ ಭಾಷ್ಯಮೈಯ್ಯಂಗಾರ್ರಿಗೆ ಖಾಸ ಸಹೋದರರಾಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಭಾಷ್ಯಮೈಯ್ಯಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 1,200 ರೂಪಾಯಿ ಸಾಲವನ್ನು ವಸೂಲ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ರ ಪ್ರಕಾರ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ವರದೈಯ್ಯಂಗಾರ ವಗೈರೆರ ಅರ್ಜಿಯನ್ನು ಸನ 1907ನೆ ಇಸವಿ ಸೆಪಟಂಬರ 6ನೆ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಭಾಷ್ಯಮೈಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ 1907ನೆ ಇಸವಿ ಆಗಸ್ಟು ತಿಂಗಳು 20ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸನ 1907–08ನೆ ಇಸವಿ ಮಿ|| ಅರ್ಜೀ ನಂಬರು 150.

ಬೆಂಗಳೂರಲ್ಲಿದ್ದ ಮೃತಪಟ್ಟ ಶಿವಣ್ಣನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ನಂಜಪ್ಪ ಮೈನರ, ಗಾರ್ಡಿಯನ ಅಕ್ಕೈಯಮ್ಮ, ಮೃತಪಟ್ಟ ಸದರೀ ಶಿವಣ್ಣನಿಗೆ ಖಾಸ ಮಗ ಮತ್ತು ನಾದನಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಶಿವಣ್ಣನ ಜಿಂದಗಿ ಬಗ್ಯಾಗಿ ಬರತಕ್ಕ 430 ರೂಪಾಯಿ ಸಾಲವನ್ನು ವಸೂಲ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ರ ಪ್ರಕಾರ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ನಂಜಪ್ಪ ಗಾರ್ಡಿಯನ ಅಕ್ಕೈಯ್ಯಮ್ಮನ ಅರ್ಜಿಯನ್ನು ಸನ 1907ನೆ ಇಸವಿ ಸೆಪ್ಟಂಬರು ತಿಂಗಳು 13ನೆ ತಾರೀಖು ಶುಕ್ರವಾರದಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿವಣ್ಣನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ 1907ನೆ ಇಸವಿ ಆಗಸ್ಟು ತಿಂಗಳು 24ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸನ್ 1907—08ನೆ ಮಿ|| ಅರ್ಜೀ ನಂಬರ 152.

ಬೇಲೂರಲ್ಲಿ ಮೊಜನೀದಾರ್‍ರಾಗಿದ್ದು ಮೃತಪಟ್ಟ ರಘುನಾಥ ನಾರಾಯಣ ಉರಫ್ ರಘುನಾಥರಾವ್ ಅಸ್ತೀ ವಿಷಯದಲ್ಲಿ—

ಅರ್ಜೀದಾರರು ಯಶೋದಾಬಾಯಿ, ಮೃತಪಟ್ಟ ಸದರೀ ರಘುನಾಥ ನಾರಾಯಣ ಉರಫ್ ರಘುನಾಥರಾವ್ ಯವರಿಗೆ ಖಾಸ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಸದರಿ ಸ್ಥಳದ ವಾಸಸ್ಥರಾಗಿ ಮೃತಪಟ್ಟ ರಘುನಾಥ ನಾರಾಯಣರ ಜಿಂದಗಿ ಬಗ್ಯಾಗಿ ಬರತಕ್ಕ 1,205—10—5 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರಿ ದರಖಾಸ್ತುದಾರರಾದ ಯಶೋದಾಬಾಯಿಯವರ ಅರ್ಜಿಯನ್ನು ಸನ್ 1907ನೆ ಇಸವಿ ಸೆಪಟಂಬರ ತಿಂಗಳು 6ನೆ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಘುನಾಥ ನಾರಾಯಣರ ಅಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1907ನೆ ಇಸವಿ ಆಗಸ್ಟ್ಟ ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1907—08ನೆ ಇಸವಿ ಮಿ|| ಅರ್ಜೀ ನಂಬರ 158.

ಬೆಂಗಳೂರು ಕಬ್ಬನಸಾಬರ ಪೇಟೆಲಿದ್ದು ಮೃತಪಟ್ಟ ಕಂಟ್ರಾಕ್ಟರ ಸುಬ್ಬಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಶ್ಯಾಮಣ್ಣ, ಮೃತಪಟ್ಟ ಸದರೀ ಸುಬ್ಬಣನಿಗೆ ಖಾಸ ಮಗನಾಗಬೇಕೆಂಬ ಹಕ್ಕುದಾರಿಮೇಲೆ ಸ್ಥಳದ ಶ್ಯಾಮಣನವರು ಸದರಿ ವಾಸಸ್ಥರಾಗಿ ಮೃತಪಟ್ಟ ಸುಬ್ಬಣನವರ ಜಿಂದಗಿ ಬಗ್ಯಾಗಿ ಬರತಕ್ಕ 2,489—2—4 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಶ್ಯಾಮಣನವರ ಅರ್ಜಿಯನ್ನು ಸನ್ 1907ನೆ ಇಸವಿ ಸೆಪಟಂಬರ ತಿಂಗಳು ತಾರೀಖು 6ನೆ ಶುಕ್ರವಾರ ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1907ನೆ ಇಸವಿ ಆಗಸ್ಟ್ಟ ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1907—08ನೆ ಇಸವಿ ಮಿ|| ಅರ್ಜೀ ನಂಬರು 166.

ಬೆಂಗಳೂರು ಚಾಮರಾಜಪೇಟೇಲಿದ್ದು ಮೃತಪಟ್ಟ ಸಾವಿತ್ರಮ್ಮನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ನಂಜುಂಡೈಯ್ಯ, ಮೃತಪಟ್ಟ ಸದರೀ ಸಾವಿತ್ರಮ್ಮನಿಗೆ ಖಾಸ ಮೈದನ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಸಾವಿತ್ರಮ್ಮನ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 340—4—0 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ನಂಜುಂಡೈಯ್ಯನ ಅರ್ಜಿಯನ್ನು ಸನ್ 190 ನೆ ಇಸವಿ ಸೆಪ್ಟಂಬರು ತಿಂಗಳು 13ನೆ ತಾರೀಖು ಶುಕ್ರವಾರದಲ್ಲೂ ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಾವಿತ್ರಮ್ಮನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1907ನೆ ಇಸವಿ ಆಗಸ್ಟ್ಟ ತಿಂಗಳು 24ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಿಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1907—08ನೆ ಇಸವಿ ಮಿ|| ಅರ್ಜೀ ನಂಬರು 177.

ಬೆಂಗಳೂರು ತಾಲ್ಲೂಕು ಜರಗನಹಳ್ಳೀಲಿ ವಾಸವಾಗಿದ್ದು ಮೃತಪಟ್ಟ ದೊಡ್ಡ ನಾರಣಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ವೆಂಕಟರಮಣಾಚಾರಿ, 2ನೆ ಚಿಕ್ಕನಾರಣಾಚಾರಿ ಮೈನರ್, ಗಾರ್ಡಿಯನ್ 1ನೆ ಅರ್ಜಿದಾರ, ಮೃತಪಟ್ಟ ಸದರೀ ದೊಡ್ಡ ನಾರಣಪ್ಪನಿಗೆ ಖಾಸ ತಮ್ಮ ಮತ್ತು ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ತಾಲ್ಲೂಕು ಜರಗನಹಳ್ಳೀಲಿ ವಾಸಸ್ಥರಾಗಿ ಮೃತಪಟ್ಟ ದೊಡ್ಡನಾರಣಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟರಮಣಾಚಾರಿ ಚಿಕ್ಕನಾರಣಾಚಾರಿಯವರ ಅರ್ಜಿಯನ್ನು ಸನ್ 1907ನೆ ಇಸವಿ ಸೆಪ್ಟಂಬರು ತಿಂಗಳು 13ನೆ ತಾರೀಖು ಶುಕ್ರವಾರದಲ್ಲೂ ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೊಡ್ಡನಾರಣಪ್ಪನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1907ನೆ ಇಸವಿ ಆಗಸ್ಟ್ಟ ತಿಂಗಳು 24ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1907—08ನೇ ಇಸವಿ ಮಿ॥ ಅರ್ಜೀ ನಂಬರು 183.

ಬೆಂಗಳೂರು ಗವರ್ನಮೆಂಟು ಪ್ರೆಸಿನಲ್ಲಿ ಕಂಪಾಜಿಟರು ಆಗಿ ಇದ್ದು ಮೃತಪಟ್ಟ ಎಲ್ಲಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ವೆಂಕಟಮ್ಮ, ಮೃತಪಟ್ಟ ಸದರೀ ಎಲ್ಲಪ್ಪನಿಗೆ ಖಾಸ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಎಲ್ಲಪ್ಪನ ಜೆಂದಗಿ ಬಗ್ಗ್ಯಾಗಿ ಬರತಕ್ಕ 100 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಮ್ಮನ ಅರ್ಜಿಯನ್ನು ಸನ್ 1907ನೇ ಇಸವಿ ಸೆಪ್ಟಂಬರು ತಿಂಗಳು 13ನೇ ತಾರೀಖು ಶುಕ್ರವಾರದಲ್ಲೂ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಎಲ್ಲಪ್ಪನ ಆಸ್ತಿಗೆ ಹಕ್ಕು ದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1907ನೇ ಇಸವಿ ಆಗಸ್ಟ್ ತಿಂಗಳು 26ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1906—07ನೇ ಇಸವಿ ಮಿ॥ ಅರ್ಜೀ ನಂಬರ್ 734.

ಪಾವಗಡ ತಾಲ್ಲೂಕು ಇರುಪಸಂದ್ರದಲ್ಲಿದ್ದು ಮೃತಪಟ್ಟ ಚಿತಂಬರಪ್ಪನ ಮಕ್ಕಳು

1ನೇ ಸಂಜೀವಯ್ಯ, 2ನೇ ವೆಂಕಟಪ್ಪ ಇವರುಗಳ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಪಾವಗಡ ತಾಲ್ಲೂಕು ಇರುಪಸಂದ್ರದಲ್ಲಿರುವ ವೈಶ್ಯರ ಕಾರುಬಾರಲು ವೆಂಕಟರಾಗಪ್ಪನ ಮಗ ನಾರಣ್ಯಯ್ಯ, ಮೃತಪಟ್ಟ ಸದರೀ 1ನೇ ಸಂಜೀವಯ್ಯ, 2ನೇ ವೆಂಕಟಪ್ಪ ಇವರ್ಗೆ ದೊಡ್ಡ ತಂದೆಯ ಮಕ್ಕಳಾಗಬೇಕೆಂಬ ಹಕ್ಕುದಾರಿ ಮೇಲೆ ಇರುಪಸಂದ್ರ ಸ್ಥಳದ ನಾರಣ್ಯಯ್ಯ ಎಂಬುವರು ಡಿಟೋ ವಾಸಸ್ಥರಾಗಿ ಮೃತಪಟ್ಟ 1ನೇ ಸಂಜೀವಯ್ಯ 2ನೇ ವೆಂಕಟಪ್ಪ ಇವರುಗಳ ಜೆಂದಗಿ ಬಗ್ಗ್ಯಾಗಿ ಬರತಕ್ಕ 675 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ನಾರಣ್ಯಯ್ಯನವರ ಅರ್ಜಿಯನ್ನು ಸನ್ 1907ನೇ ಇಸವಿ ಸೆಪ್ಟಂಬರು ತಿಂಗಳು 6ನೇ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ 1ನೇ ಸಂಜೀವಯ್ಯ 2ನೇ ವೆಂಕಟಪ್ಪ ಇವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1907ನೇ ಇಸವಿ ಆಗಸ್ಟ್ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1906—07ನೇ ಇಸವಿ ಮಿ॥ ಅರ್ಜೀ ನಂಬರ್ 735.

ಶಿವಮೊಗ್ಗಾ ನಾರಮಲ್ ಸ್ಕೂಲ್ ಮ್ಯಾಸ್ಟರ್ ಆಗಿದ್ದು ಮೃತಪಟ್ಟ ಮೌಲ್ವಿ ಮಿರ್ಜಾಹರ್ಸೆಬೇಗ್ ಸಾಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೇ ಕುಲುಸುಂಬಿ, 2ನೇ ಅಹಮದ್‌ಬೇಗ್‌ಸಾಬ್ ಮೃತಪಟ್ಟ ಸದರೀ ಮೌಲ್ವಿ ಮಿರ್ಜಾಹರ್ಸೆಬೇಗ್ ಸಾಬರಿಗೆ ಕುಲುಸುಂಬಿ ಹೆಂಡತಿಯಾಗಬೇಕೆಂದೂ, ಅಹಮದ್‌ಬೇಗ್ ಸಾಬರು ಮಲತಾಯಿ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ನಾಲಬಂದುಪೇಟೆ ಸ್ಥಳದ 1ನೇ ಕುಲುಸುಂಬಿ, 2ನೇ ಅಹಮದ್‌ಬೇಗ್ ಸಾಬರು ಡಿಟೋ ವಾಸಸ್ಥರಾಗಿ ಮೃತಪಟ್ಟ ಮೌಲ್ವಿ ಮಿರ್ಜಾಹರ್ಸೆಬೇಗ್ ಸಾಬರ ಜೆಂದಗಿ ಬಗ್ಗ್ಯಾಗಿ ಬರತಕ್ಕ 697 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರಿ ದರಖಾಸ್ತುದಾರರಾದ 1ನೇ ಕುಲುಸುಂಬಿ, 2ನೇ ಅಹಮದ್‌ಬೇಗ್ ಸಾಬರ ಅರ್ಜಿಯನ್ನು ಸನ್ 1907ನೇ ಇಸವಿ ಸೆಪ್ಟಂಬರ್ ತಿಂಗಳು 6ನೇ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮೌಲ್ವಿ ಮಿರ್ಜಾಹರ್ಸೆಬೇಗ್ ಸಾಬರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1907ನೇ ಇಸವಿ ಆಗಸ್ಟ್ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಜೆ. ಹೆಚ್. ಭಾಭಾ,
ಸಬಾರ್ಡಿನೇಟ್ ಜಡ್ಜಿ.

ಬೆಂಗಳೂರು ಅಡಿಷನಲ್ ಮುನ್ಸೀಫ್ ಕೋರ್ಟಿನಲ್ಲಿ.

ತಾರೀಖು 19ನೇ ಆಗಸ್ಟು 1907.

Original Suit No. 788 of 1906-07.

ವಾದಿ.	ಪ್ರತಿವಾದಿಗಳು.
ಕನಕಾನಹಳ್ಳಿ ತಾಲ್ಲೂಕು ಮರಳೆ ಮಠದ ಚರಮೂರ್ತಿಗಳಾದ ಸೋಮಪ್ಪದೇವರು.	ಕೋಲಾರ ಜಿಲ್ಲೆ ತಾಲ್ಲೂಕು ಬಿಡದೀಲಿರುವರು— 1ನೆ ಶಿವಾಚಾರದ ಹುಚ್ಚಪ್ಪ ದೇವರು, 2ನೆ ಅಪ್ಪಾಜಣ್ಣನವರ ಮಕ್ಕಳು ರುದ್ರಪ್ಪಾಜಿ ಅರಸರು, 3ನೆ ಕಾಳಪ್ಪನವರ ಮಕ್ಕಳು ಶಿವರುದ್ರಪ್ಪಾಜಿ ಅರಸರು, 4ನೆ ಶಿದ್ದಯ್ಯನವರ ಮಕ್ಕಳು ಶಿವಯ್ಯ.

ಮೇಲ್ಕಂಡ ಮೊಕದ್ದಮೆಯಲ್ಲಿ ಪ್ರತಿವಾದಿಗಳ ಮೇಲೆ ಈ ನಂಬರು ವಾದಿಯು ಇದರಡಿ ಷೆಡ್ಯೂಲಿನಲ್ಲಿ ಕಂಡ ಚವುಕಿ ಮಠ ಮತ್ತು ಅದಕ್ಕೆ ಸಂಬಂಧಪಟ್ಟ ಜಮೀನಿನ ವಿಷಯದಲ್ಲಿ ಮರಳೆ ಮಠದ ಉಪಂತಿ ಸ್ವಾಮಿಯಾಗಿ ತಾನು ಸ್ವಾಧೀನಾನುಭವದಲ್ಲಿರಲು

ಹಕ್ಕುದಾರನೆಂದೂ ಸದರಿ ಸ್ವತ್ತುಗಳನ್ನು ಪ್ರತಿವಾದಿಗಳಿಂದ ತನ್ನ ಸ್ವಾಧೀನಕ್ಕೆ ಕೊಡಿಸಬೇಕೆಂದೂ ಈ ಕೋರ್ಟಿನಲ್ಲಿ ದಾವಾ ತಂದಿರುವದರಿಂದ ಚವುಕಿ ಮಠದ ಶಿಷ್ಯರುಗಳ ಪೈಕಿ ಈ ದಾವಾದಲ್ಲಿ ಪಕ್ಷಗಾರರಾಗಿ ಸೇರಬೇಕೆಂಬ ಇಷ್ಟವುಳ್ಳವರು 1907ನೆ ಇಸವಿ ಸೆಪ್ಟಂಬರ 5ನೆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂಬು ಹಾಜರಾಗಲು ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸಲ್ಪಟ್ಟಿದೆ.

ಡಿ. ಕೆ. ರಾಮರಾವ್,
ಅಡೀಷನಲ್ ಮುನ್ಸೀಫ್.

ಷೆಡ್ಯೂಲ್.

ಹೊಸಪೇಟೆ ತಾಲ್ಲೂಕು ಬಿಡದೀಲಿರುವ ಸರ್ವೆ 43ನೆ ಸಬ್ 2ನೆ ನಂಬರು ಜಮೀನಿಗೆ ಚೆಕ್ಕು ಬಂದಿ. ಪೂರ್ವಕ್ಕೆ-ಅಂಜಿ ಆ ಮಯ್ಯನ ಹೊಲ. ಪಶ್ಚಿಮಕ್ಕೆ-ಖಾಸಂಸಾಬರ ಹೊಲ. ಉತ್ತರಕ್ಕೆ-ವನ್ನಕೆಟ್ಟರ ಇನಾಂತಿ ಹೊಲ. ದಕ್ಷಿಣಕ್ಕೆ-ಮಲ್ಲೇಶಪ್ಪನವರ ತೆಂಗಿನ ತೋಟ ಮತ್ತು ರಸೂಲ್ ಮಿಯಾಸಾಬ್ರ ತೋಟ. ಈ ಮಧ್ಯೆ ಇರುವ ಹೊಲ, ತೋಟ ಮತ್ತು ಮಠ ಸಹಾ-ಬೀಜವರಿ 6 ಎಕರೆ 5 ಗುಂಟೆ. ಆಕಾರ 8—8—0.

ಡಿ. ಕೆ. ರಾಮರಾವ್,
ಅಡಿಷನಲ್ ಮುನ್ಸೀಫ್.

ಮೈಸೂರ ಗೆಜೆಟ ಚಂದಾದಾರು ವಗ್ಯೆರೆ.

ಮೈಸೂರ ಗೆಜೆಟ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲಿಷ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲಿಷ ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಚಹ ಮಾಹೇ ಯಾ ಕ್ವಾರ್ಟರಿಂಗೆ		ದಾಮಾಷಾಯಿ ಪ್ರಕಾರ ದರಗಳು
		ರೂ. ಆ.
ಚಾಲ್ತಿ ವರುಷದ ಗೆಜೆಟ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.		0 8

ಹಿಂದಿನ ವರುಷದ ಗೆಜೆಟ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮುರ್ಕ್ಕಂ 155ನೆ ನಂಬರ ಉಳ್ಳ ಗವರ್ನಮೆಂಟ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ಒಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನ ಇಸವಿ ಜೂನ್ 21ನೆ ಮುರ್ಕ್ಕಂ 24205—6—ಜಿ. 6200ನ ನಂಬರ ಗವರ್ನಮೆಂಟ ಆರಡರ ಅನುಸರಿಸಿ ಮೇಲಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

		ರೂ. ಆ.
ಸಿವಿಲ ಕೋರ್ಟನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇಷನ್ ಅನುಸರಿಸಿ ಸರ್ಟಿಫಿಕೇಟ ಬಗ್ಯೆ ನೋಟಿಸಗಳು :—		
ಮೊದಲನೇ ದಫಾ ಛಾಯಿಷ್ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ		2 8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ		1 4
ಸಿವಿಲ ಪ್ರೊಸಿಡ್ಯೂರ ಕೋಡಿನ 347ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಯೆ ನೋಟಿಸಗಳಿಗೆ :—		
ಮೊದಲನೇ ಸಲಕ್ಕೆ		5 0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ		2 8
ಸಿವಿಲ ಪ್ರೊಸಿಡ್ಯೂರ ಕೋಡಿನ 354ನ ಸೆಕ್ಷನ್ ಅನುಸರಿಸಿ ಸಿವಿಲ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ್ ಚಾರ್ಜ ಪ್ರಕಟಿಸಲ್ಪಡುತ್ತವೆ.		
ಡ್ಯೂಪ್ಲಿಕೇಟ ಕಾಪೀ ಪಟ್ಟೆ ವಗ್ಯೆರ ಕೊಡುವ ಬಗ್ಯೆ ರೆವಿನ್ಯೂ ಆಫಿಸರಗಳು ಕೊಡುವ ನೋಟಿಸಗಳಿಗೆ :—		
ಮೊದಲನೇ ಸಲಕ್ಕೆ	ಪುಟ 1ಕ್ಕೆ	10 0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ	,,	5 0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ ಮಾಡಲ್ಪಡುತ್ತೆ :—		
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ಕ್ತಿ 1ಕ್ಕೆ	0 8
ಎರಡನೇ ದಫಾ ಡಿಟೋ	ಡಿಟೋ	0 6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ		0 4

ಪರಾ.—ಗೆಜೆಟ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟನೆಗಳ ಛಾರ್ಜ ಬಾಬತ್ತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಗೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ ಮಜಕೂರಿಗೆ ದಾಖಲೆ ಬಗ್ಗೆ ರವಾನಿಸತಕ್ಕದ್ದು. ಮನಿ ಆರ್ಡರ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ ಪಡೆಯುವ ಬಗ್ಗಾದ ದರಖಾಸ್ತುಗಳು ಮೈಸೂರ ಗವರ್ನಮೆಂಟ ಜನರಲ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರನಾಮೆಗಳೂ ಆ ಗೆಜೆಟ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ವಳಗಾಗಿ ಕಂಪೈಲರ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ ಇಲ್ಲ.

ಸಿ. ಹೆಚ್. ಪಿಟ್ಸ್,
ಕಂಪೈಲರ, ಮೈಸೂರ ಗೆಜೆಟ.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪಬ್ಲಿಷ್ ಆದ್ದು. [ನಂ. 37.

ಬೆಂಗಳೂರು, ಗುರುವಾರ, ಸೆಪಟಂಬರ್ ತಾ॥ 12, ಸನ್ 1907.

II ನೆ ಭಾಗ.

ಇಂಡ್ಯ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೆಯರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಫಾರೆಸ್ಟ್ ಇಲಾಖಾ.

ಸಂದಲ್ ಹರಾಜ್ ನೋಟಿಫಿಕೇಷನ್.

ತಾರೀಖು 24ನೆ ಆಗಸ್ಟ್ 1907ನೆ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಸರಕಾರದ ಶ್ರೀಗಂಧದ-ಸಾಲಿಯಾನಾ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರದರ ಜಾಬಾದಲ್ಲಿ ನಮೂದಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡೆಸಲ್ಪಡುವದು:—

ಡಿಸ್ಟ್ರಿಕ್ಟು.	ಕೋಠಿ.	ಹರಾಜು ತಾರೀಖು.	ಸುಮಾರು ಮೊತ್ತ.
			ಟನ್‌ಗಳು.
ಶಿವಮೊಗ್ಗ ...	ತೀರ್ಥಹಳ್ಳಿ ...	18ನೆ ನವಂಬರ 1907 ...	200
ಡಿಟೋ ...	ಸಾಗರ ...	21ನೆ ಡಿಟೋ ...	150
ಡಿಟೋ	ಶಿವಮೊಗ್ಗ ...	25ನೆ ಡಿಟೋ ...	500
ಕಡೂರು ..	ತರೀಕೆರೆ	28ನೆ ಡಿಟೋ ...	250
ಡಿಟೋ ..	ಚಿಕ್ಕಮಗಳೂರು	2ನೆ ಡಿಸೆಂಬರ್ 1907 ..	350
ಹಾಸನ ..	ಹಾಸನ ...	5ನೆ ಡಿಟೋ	150
ಬೆಂಗಳೂರು	ಬೆಂಗಳೂರು	9ನೆ ಡಿಟೋ ..	100
ಮೈಸೂರು ...	ಶ್ರೀರಂಗಪಟ್ಟಣ ...	12ನೆ ಡಿಟೋ	250
ಡಿಟೋ ...	ಹುಣಸೂರು	16ನೆ ಡಿಟೋ	500
		ಜುಮ್ಲ	2,450

2. ಪ್ರತಿ ಕೋಠಿಯಲ್ಲಿಯೂ ಹರಾಜಾಗುವ ಕ್ಲಾಸುವಾರು ಲಾಟು, ಮೊತ್ತ ಮತ್ತು ಇತರ ತಪಶೀಲುಗಳು ಬರುವ ಅಕ್ಟೋಬರ್ ಮಾಹೆಯ ಆಖೈರಿನಲ್ಲಿ ತಿಳಿಯಪಡಿಸುತ್ತೆ.

ಎಂ. ಮುತ್ತಣ್ಣ,
ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ಪ್ರಕಟನೆ.

ಶಿವಮೊಗ್ಗ ಡಿಸ್ಟ್ರಿಕ್ಟು, ಶಿವಮೊಗ್ಗ-ಹೊನ್ನಾಳಿ ತಾಲ್ಲೂಕು ಹರ್ಮಗಟ್ಟ ಫಾರೆಸ್ಟನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ 1907ನೆ ಇಸವಿ ಸೆಪ್ಟಂಬರು 5ನೆ ತಾರೀಖಿನ ಗೆಜೆಟ್ಟಿನ ಕನ್ನಡ 2ನೆ ಭಾಗದ 426-427ನೆ ಪೇಜುಗಳಲ್ಲಿ ವಿವರಿಸಿರುತ್ತೆ.

ಕಡೂರು ಡಿಸ್ಟ್ರಿಕ್ಟು ಎಡೆಹಳ್ಳಿ ಸಬ್ ತಾಲ್ಲೂಕು ಮತ್ತು ಚಿಕ್ಕಮಗಳೂರು ತಾಲ್ಲೂಕಿನಲ್ಲಿರುವ ದೇವದಾನ ಫಾರೆಸ್ಟನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ 1907ನೆ ಇಸವಿ ಸೆಪ್ಟಂಬರು 5ನೆ ತಾರೀಖಿನ ಗೆಜೆಟ್ಟಿನ ಕನ್ನಡ 2ನೆ ಭಾಗದ 428-429ನೆ ಪೇಜುಗಳಲ್ಲಿ ವಿವರಿಸಿರುತ್ತೆ.

ಎಂ. ಶಾಮರಾವ್,

ಮೈಸೂರು ಸೀಮೆಯ ಫಾರೆಸ್ಟು ಸೆಟಲ್‌ಮೆಂಟ್ ಆಫಿಸರ್.

ತಂಗಡಿ ಮತ್ತು ಕಕ್ಕೆ ಚಕ್ಕೆ—ಇಸ್ತಿಹಾರು, ತಾರೀಖು 26ನೆ ಆಗಸ್ಟು 1907.—

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಈ ಕೆಳಗೆ ವಿವರಿಸಿರುವ ತಾಲ್ಲೂಕುಗಳಲ್ಲಿನ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು ಈ ಕೆಳಗೆ ತಪಶೀಲು ನಮೂದು ಮಾಡಿರುವ ಕಾಲಗಳಲ್ಲಿ ರೂಢಿಸಿ ಜಮಾಯಿಸತಕ್ಕ ಹಕ್ಕನ್ನು ಪಡಿಯಲು 1907ನೆ ಇಸವಿ ಸೆಪಟಂಬರ್ ತಾರೀಖು 13ರ ವರಿಗೆ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ದರಖಾಸ್ತುಗಳು ತೆಗದುಕೊಳ್ಳಲ್ಪಡುವದು :—

ನಂಬರು	ತಾಲ್ಲೂಕು ಅಥವಾ ಸ್ಟೇಟ ಫಾರೆಸ್ಟು.	ಜಮಾಯಿಸತಕ್ಕ ಕಾಲ [illegible]	[illegible] ಷರಾ.
1	ಹೆಗ್ಗಡದೇವನಕೋಟೆ	1907ನೆ ಸೆಪ್ಟಂಬರ್ 15ನೆ ತಾರೀಖು ಮೊದಲುಗೊಂಡು 1908ನೆ ಜೂನ್ ಆಖೈರು ವರಿಗೆ [illegible]	ಇನಾಂ, ಜೋಡಿ, ಕಾಯಂಗುತ್ತಾ, ಸರ್ವಮಾನ್ಯ, ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿನ ಫಸಲು ಈ ಹರಾಜಿಗೆ ಸೇರುವದಿಲ್ಲ. ಆದರೆ ಅಮೃತಮಹಲ್ ಕಾವಲು ಮತ್ತು ಆಕಾರಕಂಡೆ ಸರ್ಕಾರಿ ಬಂಜರು ಆಕಾರ ಕಾಣದ ಸರ್ಕಾರಿ ಬಂಜರು ಗೋಮಾಳ ಸ್ಟೇಟ ಫಾರೆಸ್ಟು ಈ ಜಮೀನುಗಳಲ್ಲಿರುವ ಚಕ್ಕೆಯು ಕಂಟ್ರಾಕ್ಟಿಗೆ ಒಳಪಟ್ಟು ಇರುತ್ತೆ.

(2) ತಾಲ್ಲೂಕು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹಾ ದರಖಾಸ್ತುಗಳಲ್ಲಿ ನಮೂದಿಸಬೇಕು.

(3) ಪ್ರತಿ ಒಂದು ದರಖಾಸ್ತಿನೊಡನೆ (100) ರೂಪಾಯಿನ ಕರೆನ್ಸಿ ನೋಟಿ ಠೇವಣಿ ಬಗ್ಗೆ ಕಳುಹಿಸಬೇಕು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜೆಸ್ಟರ್ ಮತ್ತು ಇನ್ಷೂರ್ ಮಾಡಿ ಲಿಫಾಪೇ ಮೇಲೆ "ತಂಗಡಿ ಮತ್ತು ಕಕ್ಕೆ ಚಕ್ಕೆಯ ದರಖಾಸ್ತು" ಎಂದು ಬರದು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ವಿಳಾಸಕ್ಕೆ ರವಾನಿಸಬೇಕು.

(4) ದರಖಾಸ್ತುಗಳ ಮಂಜೂರಾತಿಯು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಕೂಡಿರುತ್ತೆ. ಜಾಸ್ತಿ ದರದ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮಿಷನರ್ ಸಾಹೇಬರವರು ಬದ್ಧರಾಗಿರುವದಿಲ್ಲಾ. ಮತ್ತು ಯಾವ ಕಾರಣವನ್ನು ನಮೂದಿಸದೇನೆ ಯಾವ ದರಖಾಸ್ತನ್ನಾ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

(5) ಮೈಸೂರು ಡಿಸ್ಟ್ರಿಕ್ಟ್ ಆಫೀಸಿನಲ್ಲಿ 1907ನೆ ಸೆಪಟಂಬರ್ 14ನೆ ತಾರೀಖು ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರವರು ಹಾಜರಿರುವ ದರಖಾಸ್ತುದಾರರ ರೂಬರೂಬ್ ದರಖಾಸ್ತುಗಳನ್ನು ಒಡಿಯುವರು.

(6) ದರಖಾಸ್ತು ಮಂಜೂರಾತಿ ಸಂಗತಿಯನ್ನ ಸದರೀ ದರಖಾಸ್ತುದಾರನಿಗೆ ಕೂಡ್ಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ಮೊಬಲಗನ್ನು ಕೂಡ್ಲೆ ವಾಪಸ್ ಮಾಡಲ್ಪಡುವದು.

(6A) ಪ್ರತಿ ದರಖಾಸ್ತುದಾರನು ದರಖಾಸ್ತಿನಲ್ಲಿ ತನ್ನ ಸರಿಯಾದ ಮೇಲು ವಿಳಾಸವನ್ನು ಬರೆಯಬೇಕು.

(7) ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರನಿಗೆ ತಿಳಿಸಿದ 3 ದಿನಗಳ ಒಳಗಾಗಿ ದರಖಾಸ್ತು ಮೊಬಲಗು ಪೈಕಿ ಮೊದಲು ಠೇವಣಿ ಮೊಬಲಗು ಸೇರಿ ಅರ್ಧ ಭಾಗವನ್ನು ಆಯಾಯ ತಾಲ್ಲೂಕು ಖಜಾನೆಗೆ ಪಾರಖಾವಣೀ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನ ರದ್ದುಮಾಡಿ ಠೇವಣಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬನ್ನ ದುಸರಾ ಹರಾಜು ಮಾಡಿಸಲ್ಪಡುವದು.

(8) ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ವುಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲಾ. ಆದರೆ ಇದರಿಂದ ಉಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

(9) ದರಖಾಸ್ತುದಾರರು ಮಂಜೂರಾದ ಇಜಾರೆ ಹಕ್ಕನ್ನು ತಾವೇ ಖುದ್ದಾಗಿ ರೂಢಿಸಬೇಕು. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿ ಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಯನ್ನ ಪಡೆಯಬೇಕು. ವರ್ಗ ರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನ ವಸೂಲ್ಮಾಡಲು ಡೆಪ್ಯುಟಿ ಕಮಿಷನರ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

(10) ಇಜಾರೆ ಮಂಜೂರಾದ 3 ದಿವಸಗಳಲ್ಲಿ ಇಜಾರೆದಾರನು ಇದರಲ್ಲಿ ನಮೂದಿರುವ ಷರತ್ತುಗಳಂತೆ ನಡೆಯಲು ಬದ್ಧನಾಗಿರುತ್ತೇನೆಂತ ಒಂದು ಮುಚ್ಚಳಿಕೆ ಬರದುಕೊಡಬೇಕು. ತಪ್ಪಿದಲ್ಲಿ ಮೊದಲೇ ಕೊಟ್ಟ ಹಣವನ್ನು ದಂಡವಾಗಿ ಸರ್ಕಾರಕ್ಕೆ ಸೇರಿಸಿಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಲಾಗುತ್ತೆ.

(11) ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಈ ಕೆಳಗೆ ಕಂಡ ತಾರೀಖಿನಲ್ಲಿ ಪಾವತಿ ಮಾಡತಕ್ಕದ್ದು ಮತ್ತು ಮೇಲ್ಕಂಡ ಹಣವನ್ನು ಕ್ರಮವಾಗಿ ಪಾವತಿ ಮಾಡತಕ್ಕ ಬಗ್ಗೆ ಸರಿಯಾದ ಖಾತರಿಯು ಕೊಡಬೇಕು. ಮೇಲ್ಕಂಡಂತೆ ಪಾವತಿ ಮಾಡಲು ತಪ್ಪಿದರೆ ಚಕ್ಕೆಗಳ ಜವಾವಣಿ ಮತ್ತು ರವಾನೆ ತಡೆಯಲ್ಪಡುತ್ತಲ್ಲದೆ ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನು ರವಿನ್ಯೂ ಕರದಾಯದಂತೆ ವಸೂಲ್ಮಾಡಲಾಗುತ್ತೆ. ಮತ್ತು ಇಜಾರೆಯನ್ನ ರದ್ದು ಮಾಡಲಾದೀತು.

31ನೆ ಡಿಸೆಂಬರ 1907.

ಇತರ ಷರತ್ತುಗಳು.

(I) ಇಜಾರೆದಾರನು ಮತ್ತು ಆತನ ನೌಕರನೇ ಆಗಲಿ ಅಥವಾ ಷಿಕ್ಮಿ ಕಂಟ್ರಾಕ್ಟರೇ ಆಗಲಿ ಒಂದು ವರುಷದೊಳಗಿನ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಬೇಕು.

(II) ಚಕ್ಕೆ ಜವಾವಣಿ ನಡೆಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಒಂದು ತಖ್ತೆಯನ್ನು ಕೊಡಬೇಕು.

(III) ಇಜಾರೆ ಕೆಲಸವನ್ನು ಕಂಟ್ರಾಕ್ಟರೇ ಮಾಡಬೇಕು. ಮತ್ತು ಡೆಪ್ಯುಟಿ ಕಮಿಷನರ ಸಾಹೇಬರವರ ಅಪ್ಪಣೆ ಇಲ್ಲದೆ ಇತರರಿಗೆ ಇಜಾರೆಯನ್ನು ವರ್ಗ ಮಾಡಿ ಕೊಡಕೂಡದು.

(IV) ತೊಗಟೆ ತೆಗೆದ ನಂತರ ಉಳಿಯುವ ಆ ಸಂಬಂಧವಾದ ವಿಶಿಷ್ಟ ಸಾದಿಯೂ ಇಜಾರೆದಾರನಿಗೆ ಸೇರಿದ್ದಾಗಿರುತ್ತೆ.

(V) ಇಜಾರೆ ಮೇರೆಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನು ಡೆಪ್ಯುಟಿ ಕಮಿಷನರ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಾಗಲಿ ಅವರಿಂದ ನೇಮಕವಾದ ಇತರ ಆಫೀಸರೇ ಆಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

(VI) ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ಹೋರೆ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ನಿಯಾಮಕ ಮಾಡಲ್ಪಡುವ ರೀತಿಯಲ್ಲಿ ಇಜಾರೆದಾರನು ಪಾಸ್ ಕೊಡತಕ್ಕದ್ದು.

(VII) ಕಂಟ್ರಾಕ್ಟರಿಂದಲೇ ಆಗಲಿ ಅಥವಾ ಆತನ ಜನಗಳಿಂದಲೇ ಆಗಲಿ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್ಗಳಲ್ಲಿ ಬೆಂಕಿ ಬಾಧೆಯುಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕಲ್ಲದೆ; ಬೆಂಕಿ ಬೀಳುವದರಿಂದ ಬೆಲೇಬಾಳುವ ಫಾರೆಸ್ಟಿಗೇ ಆಗಲಿ ಅಥವಾ ಬೆಳೆಗಳಿಗೇ ಆಗಲಿ ಉಂಟಾಗುವ ನಷ್ಟವನ್ನು ಕಟ್ಟಿಕೊಡಬೇಕು.

(VIII) 1908ನೆ ಜುಲೈ ಮಾಹೆ 15ನೆ ತಾರೀಖಿನೊಳಗಾಗಿ ಇಜಾರೆ ವಾಯಿದೆಯಲ್ಲಿ ಕಡದು ಜವಾವಣೀ ಮಾಡಿ ದಾಸ್ತಾನ್ ಮಾಡಿರುವ ಎಲ್ಲಾ ಚಕ್ಕೆಯನ್ನು ಮೈಸೂರು ಡಿಸ್ಟ್ರಿಕ್ಟ್ ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(IX) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡಬಹುದಲ್ಲದೆ ಆದುವರೆಗೂ ಜಮಾಯಿಸಿರುವ ವಿಶಿಷ್ಟ ಚಕ್ಕೆಯನ್ನೂ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡಬಹುದು. ಅಲ್ಲದೆ ಡೆಪ್ಯುಟಿ ಕಮಿಷನರ ಸಾಹೇಬರು (100) ರೂಪಾಯಿ ವರಿಗೂ ಜುಲ್ಮಾನೆಯನ್ನು ಸಹಾ ಇಜಾರೆದಾರನಿಗೆ ವಿಧಿಸಬಹುದು.

ಎಂ. ಬಿ. ರಾಮರಾವ್,
ಫಾರ್ ಡೆಪ್ಯುಟಿ ಕಮಿಷನರ್, ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 24ನೆ ಆಗಸ್ಟ್ 1907.

ಸ್ 1907-08ನೆ ಸಾಲಿನಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟಿನ ಸ್ಟೇಟ್ ಮತ್ತು ಮಾನ್ಯ ಫಾರೆಸ್ಟ್ಗಳಲ್ಲಿ ದೊರೆಯಬಹುದಾದ ಚಿಲ್ಲರೆ ಪಸಾರೆ ಜಿನಸಿ ಜವಾವಣಿ ಹಕ್ಕನ್ನು ಹರಾಜು ಮಾಡುತ್ತೇವೆಂತ 1907ನೆ ಇಸವಿ ಆಗಸ್ಟ್ 29ನೆ ತಾರೀಖು ಮೈಸೂರು ಗೆಜೆಟ್ಟಿನ 2ನೆ ಭಾಗದ 419, 420ನೆ ಪುಟದಲ್ಲಿ ಘಾಯಿಷ ಆಗಿರುವ 24—8—07ನೆ ಇಸ್ತಿಹಾರಿಗೆ ಗಮನಕೊಡಬೇಕು.

ವೈ. ಶೀತಾರಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಚಿತ್ರದುರ್ಗ ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 27ನೆ ಆಗಸ್ಟು 1907.

1907ನೆ ಇಸವಿ ಆಗಸ್ಟು ತಾರೀಖು 17ನೆ ಶನಿವಾರ ಮಧ್ಯಾಹ್ನ 12 ಘಂಟೆಯಲ್ಲಿ ಮೈಸೂರು ಡಿಸ್ಟ್ರಿಕ್ಟ ಬೋರ್ಡು ಮೆಂಬರುಗಳು ಸೇರಿ ನಡೆಸಿದ ಪ್ರೊಸೀಡಿಂಗ್ಸು.

ಎಕ್ಸ ಅಫಿಷಿಯೊ ಮೆಂಬರುಗಳು.

ಹಾಜರು.

ಮೆ॥ ಎಂ. ಕಾಂತರಾಜೆ ಅರಸಿನವರು, ಬಿ. ಎ., ಪ್ರೆಸಿಡೆಂಟರು.

,, ಎಸ್. ವೈದ್ಯನಾಥೈಯ್ಯರವರು, ನಂಜನಗೂಡು ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರು.

,, ಎ. ಸುಬ್ರಹ್ಮಣ್ಯ ಐಯ್ಯರವರು, ಬಿ. ಎ., ಮೈಸೂರು ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರು.

,, ಬಿ. ಕೃಷ್ಣರಾಯರವರು, ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರು.

,, ಟಿ. ಕೆ. ಸುಂದರರಾಜೈಯ್ಯಂಗಾರ್ರವರು, ಟ್ರೆಜರಿ ಅಸಿಸ್ಟೆಂಟ್ ಕಮಿಷನರವರು ಮತ್ತು ವೈಸ್ ಪ್ರೆಸಿಡೆಂಟರು.

,, ಇ. ಎಸ್. ಕೃಷ್ಣಸ್ವಾಮಿ ಐಯ್ಯರವರು, ಬಿ. ಎ., ಎಂ. ಬಿ. ಸಿ. ಎಂ., ಮೈಸೂರು ಡಿಸ್ಟ್ರಿಕ್ಟ ಡಿಸ್ಟ್ರಿಕ್ಟ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರವರು.

,, ಬಿ. ಸುಬ್ಬರಾಯರವರು, ಎಲ್. ಸಿ. ಇ., ಮೈಸೂರು ಡಿವಿಜನ್ ಎಕ್ಸಿಕ್ಯುಟಿವ್ ಇಂಜನಿಯರವರು.

,, ಎಂ. ರಾಮಸ್ವಾಮಯ್ಯನವರು, ಬಿ. ಎ., ಮೈಸೂರು ಡಿಸ್ಟ್ರಿಕ್ಟ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರವರು.

ಲೋಕಲ್ ಬೋರ್ಡು ರೂಲ್ಸ್ 8ನೆ ಪ್ಯಾರಾ ಡಿ ಕ್ಲಾಸಿನಲ್ಲಿ ನಮೂದಾಗುವಂತೆ ಇತರ ಮೆಂಬರುಗಳು.

ಮೆ॥ ಲಿಂಗೇಗೌಡರು, ಮೈಸೂರು ತಾಲ್ಲೂಕು	ಹಾಜರು.
,, ಷಡಗೋಪಾಲಾಚಾರ್ಯರು, ಎಡತೊರೆ ತಾಲ್ಲೂಕು	ಡಿಟೋ
,, ಉಂಡವಾಡಿ ನರಸಿಂಗರಾಯರು, ಹುಣಸೂರು ತಾಲ್ಲೂಕು ...	ಡಿಟೋ
,, ಪಡುವಕೋಟೆ ಸುಬ್ಬರಾಯರು, ಹೆಗ್ಗಡದೇವನಕೋಟೆ ತಾಲ್ಲೂಕು ...	ಡಿಟೋ
,, ಗುರುಕಾರ್ ನಂಜಪ್ಪನವರು, ಗುಂಡ್ಲುಪೇಟೆ ತಾಲ್ಲೂಕು ...	ಗೈರ್‌ಹಾಜರು.
,, ಶಾಮೈಯ್ಯಂಗಾರ್ಯರು, ಚಾಮರಾಜನಗರ ತಾಲ್ಲೂಕು	ಹಾಜರು.
,, ಟಿ. ಎಸ್. ಕೃಷ್ಣರಾಯರು, ನಂಜನಗೂಡು ತಾಲ್ಲೂಕು ...	ಡಿಟೋ
,, ವೆಂಕಟರಮಣಶೆಟ್ಟರು, ತಿ. ನರಸೀಪುರ ತಾಲ್ಲೂಕು	ಡಿಟೋ
,, ನರಸಿಂಗರಾಯರು, ಶ್ರೀರಂಗಪಟ್ಣ ತಾಲ್ಲೂಕು	ಡಿಟೋ
,, ಕೃಷ್ಣಶಾಸ್ತ್ರಿಗಳು, ಕೃಷ್ಣರಾಜಪೇಟೆ ತಾಲ್ಲೂಕು ...	ಡಿಟೋ
,, ಚಂದ್ರಶೇಖರೈಯ್ಯನವರು, ನಾಗಮಂಗಲ ತಾಲ್ಲೂಕು	ಡಿಟೋ
,, ಲಿಂಗಣ್ಣೈಯ್ಯನವರು, ಮಂಡ್ಯ ತಾಲ್ಲೂಕು	ಗೈರ್‌ಹಾಜರು.
,, ಶಂಕರಯ್ಯನವರು, ಮಳವಳ್ಳಿ ತಾಲ್ಲೂಕು ...	ಹಾಜರು.
,, ಎಂ. ಜಿ. ಶಾಮೈಯ್ಯಂಗಾರ್ಯರವರು, ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ...	ಡಿಟೋ

8ನೆ ಪ್ಯಾರಾ (ಇ) ಕ್ಲಾಸಿನಂತೆ ಮೆಂಬರುಗಳು.

ಮೆ॥ ಬಳೆಬಸವಣ್ಣನವರು, ಎಡತೊರೆ ತಾಲ್ಲೂಕು	ಹಾಜರು.
,, ಕೃಷ್ಣಮಾಚಾರ್ಯರು, ಅಹೋಬಲ ಮಠದ ಏಜಂಟರು, ತಿ. ನರಸೀಪುರ ತಾ॥	ಗೈರ್‌ಹಾಜರು.
,, ಹಾರನಹಳ್ಳಿ ಚಿಕ್ಕಸುಬ್ಬರಾಯರು, ಹುಣಸೂರು ತಾಲ್ಲೂಕು ...	ಹಾಜರು.
,, ಎ. ಅಣ್ಣೈಯ್ಯಪಂಡಿತರು ...	ಡಿಟೋ
,, ಅಡ್ವೋಕೇಟ್ ವಿ. ರಾಘವಾಚಾರ್ಯರವರು ...	ಡಿಟೋ
,, ರೆವರೆಂಡ್ ಡಿ. ಎಫ್. ಲ್ಯಾರೆಟ್ ಸಾಹೇಬರವರು, ಗಂಜಾಂ ಟರ್ವ ...	ಡಿಟೋ
,, ಟಿ. ಎ. ಮಿರ್‌ಕಮಾಲುದ್ದೀನ್ ಅಲ್ಲೀಖಾನ್ ಸಾಹೇಬರವರು	ಡಿಟೋ
,, ವೆಂಕಟಸಾಮೈಯ್ಯನವರು, ಚಾಮರಾಜನಗರ ತಾಲ್ಲೂಕು ...	ಡಿಟೋ

ಮೈಸೂರು-ಎಡತೊರೆ-ಹೆಗ್ಗಡದೇವನಕೋಟೆ ತಾಲ್ಲೂಕುಗಳ ಅಮಲ್ದಾರುಗಳು ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ರವರು ವಿನಹ ಬಾಕೀ ತಾಲ್ಲೂಕು ಅಮಲ್ದಾರುಗಳೆಲ್ಲರೂ ಹಾಜರಿದ್ದರು.

I. ಈ ಕೆಳಗಣ ಗವರ್ನಮೆಂಟಿನಿಂದ ಸಾದರಾದ ಹುಕುಂಗಳನ್ನು ಓದಿ ರಿಕಾರ್ಡು ಮಾಡಲಾಯಿತು.

(1) ಮೈಸೂರು ಸೀಮೆಯಲ್ಲಿ ಕಿಂಡರ್‌ಗಾರ್ಟನ್ ಮತ್ತು ಕೈಗಾರಿಕೆ ಕೆಲಸಗಳ ಅಭಿವೃದ್ಧಿ ವಿಚಾರದಲ್ಲಿ ಗವರ್ನಮೆಂಟಿನಿಂದ ಸಾದರಾಗಿರುವ 1—6—1907ನೆ ಮರ್ಕುಂ 11386-90—Ed. 390-06 2ನೆ ನಂಬರು ಹುಕುಂ.

(2) ಗ್ರಾಮಾಂತರದ ರಸ್ತೆಗಳ ತಯಾರಿ ವಿಚಾರದಲ್ಲಿ ರೆವಿನ್ಯು ಕಮಿಷನರ ಸಾಹೇಬರವರು ಸಾದರ್ಮಾಡಲು ಉದ್ದೇಶಮಾಡಿದ ಸರ್ಕ್ಯುಲರನ್ನು ಅನುಮೋದಿಸಿರತಕ್ಕ ವಿಚಾರದಲ್ಲಿ ಗವರ್ನಮೆಂಟಿನಿಂದ ಸಾದರಾಗಿರುವ 3—7—1907ನೆ ಮರ್ಕುಂ 64-72—L. B. 180-06-5ನೆ ನಂಬರು ಆರ್ಡರು.

(3) ಗ್ರಾಮಾಂತರದ ಬಡಾವಣೆಗಳು—ಗ್ರಾಮಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗ ಮಾಡಿ ಅಂಥಾ ಸ್ಥಳದಲ್ಲಿ ಹೊಸದಾಗಿ ಕಟ್ಟಲ್ಪಡುವ ಕಟ್ಟಡಗಳು ಇವುಗಳ ವಿಚಾರದಲ್ಲಿ ರೆವಿನ್ಯು ಇಲಾಖೆಯವರು ಡಿಸ್ಟ್ರಿಕ್ಟ್ ಬೋರ್ಡಿನ ಸಂಬಂಧವಿಲ್ಲದೆ ಸಾಕ್ಷಾತ್ತಾಗಿ ಪ್ರವೇಶ ಮಾಡಬಹುದೆಂಬ ವಿಚಾರದಲ್ಲಿ ಗವರ್ನಮೆಂಟಿನಿಂದ ಸಾದರಾಗಿರುವ 15-7-07ನೆ ಮರ್ಸ್ಕಂ 478-87—L. B. 127-06-7ನೆ ನಂಬರು ಆರ್ಡರು.

(4) ಗ್ರಾಮಗಳ ಪಾಕೀಜಾ ಜವಾಬ್ದಾರಿಯು ಡಿಸ್ಟ್ರಿಕ್ಟ್ ಬೋರ್ಡಿಗೇನೆ ಸೇರಿದ್ದೆಂಬ ವಿಚಾರದಲ್ಲಿ ಗವರ್ನಮೆಂಟಿನಿಂದ ಸಾದರಾಗಿರುವ 15—7—07ನೆ ಮರ್ಸ್ಕಂ 455-64—L. B. 185-06-11ನೆ ನಂಬರು ಆರ್ಡರು.

(5) ದನಗಳ ಪ್ರದರ್ಶನ ವಿಚಾರದಲ್ಲಿ ಬಹುಮಾನಕ್ಕೆ ಅರ್ಹರಾದವರಿಗೆ ಕೊಡಲ್ಪಡಬೇಕಾದ ಬಹುಮಾನ ಪತ್ರಿಕೆಯ ಮಾದರಿಯನ್ನು ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನವರು ಮಾಡಿರುವದನ್ನು ಅನುಮೋದಿಸಿ ಗವರ್ನಮೆಂಟಿನಿಂದ ಸಾದರಾಗಿರುವ 19-7-07ನೆ ಮರ್ಸ್ಕಂ 607-14—L. B. 463-06-2ನೆ ನಂಬರು ಆರ್ಡರು.

(6) ಶಿವಮೊಗ್ಗ ಡಿಸ್ಟ್ರಿಕ್ಟ್ ಸಂಗಮೇಶ್ವರಸ್ವಾಮಿ ಜಾತ್ರೆಯಲ್ಲಿ ನಡೆದ ದನಗಳ ಪ್ರದರ್ಶನ ವಿಚಾರದಲ್ಲಿ ತಲಪಿದ ರಿಪೋರ್ಟನ್ನು ರಿಕಾರ್ಡು ಮಾಡಿರತಕ್ಕ ವಿಚಾರದಲ್ಲಿ ಗವರ್ನಮೆಂಟಿನಿಂದ ಸಾದರಾಗಿರುವ 6-8-1907ನೆ ಮರ್ಸ್ಕಂ 1098-1106—L. B. 320-06—9ನೆ ನಂಬರು ಆರ್ಡರು.

(7) ತಾಲ್ಲೂಕು ಬೋರ್ಡು ಮೆಂಬರುಗಳ ಚುನಾವಣೆ ಮತ್ತು ನಾಮಿನೇಷನ್ ವಿಚಾರದಲ್ಲಿ ಕಾಲಕ್ಕೆ ಪ್ರಮಾಣಿಸಿ ಗವರ್ನಮೆಂಟಿನಿಂದ ಸಾದರಾಗಿರುವ 8—8—1907ನೆ ಮರ್ಸ್ಕಂ 1253-63—L. B. 90-06—10ನೆ ನಂಬರು ಆರ್ಡರು.

II. ಶ್ರೀರಂಗಪಟ್ಟಣದ ಟವನ್ನಲ್ಲಿ ನಡೆಸಬೇಕಾದ ಆರೋಗ್ಯ ಸಮ್ಮಂಧವಾದ ಕಾಮಗಾರಿಗಳಿಗಾಗಿ ಡಿಸ್ಟ್ರಿಕ್ಟ್ ಬೋರ್ಡಿನವರು ಎಷ್ಟರ ಮಟ್ಟಿಗೆ ಸಹಾಯ ಮಾಡುತ್ತಾರೋ ಆ ವಿಚಾರದಲ್ಲಿ ರಿಪೋರ್ಟು ಮಾಡಬೇಕೆಂದು ಗವರ್ನಮೆಂಟಿನಿಂದ ಸಾದರಾಗಿರುವ 17—7—07ನೆ ಮರ್ಸ್ಕಂ 571—L. B. 379—06-6ನೆ ನಂಬರು ಡಾಕೆಟನ್ನು ಓದಲಾಯಿತು.

ಕಾರಂಜಿ ಮತ್ತು ನಾಲಾಗಳಲ್ಲಿರುವ ಕೆಸರನ್ನು ತೆಗೆಸಿ ಪಾಕುಮಾಡಿಸತಕ್ಕ ವಿಚಾರದಲ್ಲಿ ಬೇಕಾಗುವ ಒಟ್ಟು ಅಂದಾಜಾ ಮೊಬಲಗಿನ ಪೈಕಿ ಮೂರನೇ ಒಂದು ಭಾಗ ಮೊಬಲಗನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಕೊಡಬಹುದೆಂದು ತೀರ್ಮಾನಿಸಲಾಯಿತು.

III. ಶ್ರೀರಂಗಪಟ್ಟಣ-ಚನ್ನರಾಯಪಟ್ಟಣದ ರಸ್ತೆ ಫ್ರೆಂಚ್‌ರಾಕ್ಸ್ ಸ್ಟೇಷನ್ ನೆಲ್ಲೀಗೆರೆ ರಸ್ತೆ ಇವುಗಳನ್ನು ಡಿಸ್ಟ್ರಿಕ್ಟ್ ಫಂಡಿನಿಂದಲೇ ಕಾಪಾಡಬೇಕೆಂತಲೂ ತೊಂದರೆ ಇಲ್ಲದೆ ಸಾಕಾದಷ್ಟು ದ್ರವ್ಯ ಸಹಾಯಕ್ಕಾಗಿ ಡಿಸ್ಟ್ರಿಕ್ಟಿನ ಎಲ್ಲಾ ರೋಡುಗಳಲ್ಲಿಯೂ ಟೋಲು ವಸೂಲ್ಮಾಡಿಸುವ ಏರ್ಪಾಡು ಮಾಡಬೇಕೆಂದು ಚೀಫ್ ಇಂಜನೀರವರ ಅಭಿಪ್ರಾಯವನ್ನು ಸೂಚಿಸಿ ಗವರ್ನಮೆಂಟಿನಿಂದ ಸಾದರಾಗಿರುವ 5—8—1907ನೆ ಮರ್ಸ್ಕಂ 1046-47—L. B. 370-06—2ನೆ ನಂಬರು ಆರ್ಡರನ್ನು ಓದಲಾಯಿತು.

ತಾತ್ಕಾಲಕ್ಕೆ ಗವರ್ನಮೆಂಟ್ ಆರ್ಡರನ್ನು ರಿಕಾರ್ಡು ಮಾಡುವಂತೆ ತೀರ್ಮಾನವಾಯಿತು.

IV. ಮೈಸೂರು ಸಿಟಿ ಕೃಷ್ಣರಾಜ ಮೊಹಲ್ಲಾದಲ್ಲಿ ವೈದ್ಯಶಾಲೆ ಇಟ್ಟಿರುವ ಲಕ್ಷ್ಮಣರಾಜು ಎಂಬುವರಿಗೆ ಸಹಾಯ ರೂಪಕವಾಗಿ ಕೊಡಬೇಕಾಗುವ 15 ರೂಪಾಯಿಗಳ ವಿಚಾರದಲ್ಲಿ ಗವರ್ನಮೆಂಟಿನಿಂದ ಸಾದರಾಗಿರುವ 8—8—1907ನೆ ಮರ್ಸ್ಕಂ 1236—Ml. 88-07—2ನೆ ನಂಬರು ಡಾಕೆಟನ್ನು ಓದಲಾಯಿತು.

ಈ ವಿಚಾರದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರು ಏನೂ ಸಹಾಯ ಮಾಡಲು ಆಗಲಾರದೆಂತ ತೀರ್ಮಾನಿಸಲಾಯಿತು.

V. ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿಯ ಸ್ಮಶಾನ ಭೂಮಿಯ ಉಪಯೋಗಕ್ಕಾಗಿ ತೆಗೆದುಕೊಳ್ಳಬೇಕೆಂದು ಉದ್ದೇಶ ಮಾಡಿರುವ ಜಮೀನಿನ ಪರಿಹಾರ ದ್ರವ್ಯ ವಿಚಾರದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಬೋರ್ಡು ಪ್ರಸಿಡೆಂಟ್ ಸಾಹೇಬರವರ 10-8-07ನೆ ಮರ್ಸ್ಕಂ 84ನೆ ನಂಬರು ಲೆಟರನ್ನು ಓದಲಾಯಿತು.

ಈ ಕೆಲಸಕ್ಕಾಗಿ ಬೇಕಾಗುವ ಮೊಬಲಗನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಕೊಡಿಸಬಹುದೆಂದು ತೀರ್ಮಾನಿಸಲಾಯಿತು.

VI. ತಿರಮುಕೂಡ್ಲು ನರಸೀಪುರದಲ್ಲಿರುವ ಆನಂದೇಶ್ವರಸ್ವಾಮಿ ದೇವಸ್ಥಾನದ ಬಳಿ ಕಾವೇರಿ ನದಿಯ ಎಡಭಾಗದ ದಡಕ್ಕೆ ಕಲ್ಲುಸೋಪಾನ ಕಟ್ಟಿಸತಕ್ಕ ವಿಚಾರದಲ್ಲಿ ಡಿಟೋ ದೇವಸ್ಥಾನದ ಫಂಡಿನಿಂದ 700 ರೂಪಾಯಿಗಳನ್ನು ಸಹಾಯ ದ್ರವ್ಯವಾಗಿ ಕೊಡಿಸುತ್ತೇವೆಂದು ಮುಜರಾಯಿ ಸೆಕ್ರೆಟರಿ ಸಾಹೇಬರವರಿಂದ ತಲಪಿದ 15—5—1907ನೆ ಮರ್ಸ್ಕಂ 5347ನೆ ನಂಬರು ಲೆಟರನ್ನು ಓದಲಾಯಿತು.

ಈ ಕೆಲಸಕ್ಕಾಗಿ ಡಿಸ್ಟ್ರಿಕ್ಟ್ ಫಂಡಿನಿಂದ 500 ರೂಪಾಯಿಗಳಿಗಿಂತಲೂ ಜಾಸ್ತಿಯಾಗಿ ಕೊಡಿಸಲು ಆಗಲಾರದೆಂತಲೂ, ಅಂದಾಜಾ ಒಟ್ಟು ಮೊಬಲಗಿನಲ್ಲಿ ಈ ಮೊಬಲಗು (500) ರೂಪಾಯಿ ಜಾತಾ ಬಾಕಿ ಮೊಬಲಗನ್ನೆಲ್ಲಾ ಸ್ಟೇಟ್ ಮುಜರಾಯಿ ಫಂಡಿನಿಂದ ಕೊಡಿಸಲು ಏರ್ಪಾಡು ಮಾಡುವಂತೆಯೂ ತೀರ್ಮಾನಿಸಲಾಯಿತು.

VII. ಫ್ರೆಂಚ್‌ರಾಕ್ಸ್ ಸ್ಟೇಷನ್ ನೆಲ್ಲೀಗೆರೆ ರಸ್ತೆಯಲ್ಲಿ ಖಾಮೋಜಾಗಿರುವ 3 ಕಮಾನುಗಳುಳ್ಳ ಸೇತುವೆಗಳ ರಿಪೇರಿ ವಿಚಾರದಲ್ಲಿ ತಯಾರಾದ 3 ಅಂದಾಜಾಗಳನ್ನಿ ತಲಪಿದ ಮೈಸೂರು ಡಿವಿಜನ್ ಎಕ್ಸಿಕ್ಯೂಟಿವ್ ಇಂಜನೀರವರ 15—7—07ನೆ ಮರ್ಸ್ಕಂ 657ನೆ ನಂಬರು ಡಾಕೆಟನ್ನು ಓದಲಾಯಿತು.

2,009 ರೂಪಾಯಿಗಳಿಗೆ ತಯಾರಾಗಿರುವ ಅಂದಾಜಾವನ್ನು ಅನುಮೋದಿಸುವಂತೆಯೂ, ಈ ಮೊಬಲಗನ್ನು ಚಾಲ್ತಿ ಸಾಲಿಗೆ ಮಂಜೂರಾಗಿರುವ ಬಜೆಟ್ ಮೊಬಲಗಿನಲ್ಲಿ ಬಾಬುಗಳ ವರ್ಗಾವರ್ಗಿಯಿಂದ ಉಪಯೋಗಿಸಿಕೊಳ್ಳಬಹುದೆಂತಲೂ ತೀರ್ಮಾನಿಸಲಾಯಿತು.

VIII. ಗುಂಡ್ಲುಪೇಟೆ-ಚಾಮರಾಜನಗರದ ರಸ್ತೆಯ ಕೆಲವು ಭಾಗಕ್ಕೆ ಜಲ್ಲಿ ಬಿಚಾವಣೆ ಮಾಡಿಸತಕ್ಕ ವಿಚಾರದಲ್ಲಿ ತಯಾರಾದ 11,983 ರೂಪಾಯಿಗಳ ಅಂದಾಜಾ ನಿಶಿ ಮೈಸೂರು ಡಿವಿಜನ್ ಎಕ್ಸಿಕ್ಯೂಟಿವ್ ಇಂಜನೀರವರಿಂದ ತಲಪಿದ 19—7—07ನೆ ಮರ್ಕ್ಯಂ 660ನೆ ನಂಬರು ಡಾಕೆಟನ್ನು ಓದಲಾಯಿತು.

ಈ ಅಂದಾಜಾವನ್ನು ಮಂಜೂರು ಮಾಡಿರುವಂತೆಯೂ, ಒಟ್ಟು ಮೊಬಲಗನ್ನು 1908—09ನೆ ಸಾಲ್ ಲಾಗಾಯಿತು 3 ವರುಷಗಳಲ್ಲಿ ಕೆಲಸ ಮಾಡಿಸಿ ಪೂರೈಸಬೇಕೆಂತಲೂ ತೀರ್ಮಾನಿಸಲಾಯಿತು.

IX. ಎಡತೊರೆ ತಾಲ್ಲೂಕಿನ ಉಪಯೋಗಕ್ಕಾಗಿ 8 ಅಮೃತ ಮಹಲ್ ಗೂಳಿಗಳನ್ನು ಕೊಡಿಸಿಕೊಡಬೇಕೆಂದು ಆ ತಾಲ್ಲೂಕು ಅಮಲ್ದಾರ್ರಿಂದ ತಲಪಿದ 17—7—07ನೆ ಮರ್ಕ್ಯಂ 15ನೆ ನಂಬರು ರಿಪೋರ್ಟು ಬಂದು; ಚಾಮರಾಜನಗರದ ತಾಲ್ಲೂಕಿನ ಉಪಯೋಗಕಾಗಿ ಒಂದು ಅಮೃತ ಮಹಲ್ ಗೂಳಿಯನ್ನು ಕೊಡಿಸಿಕೊಡಬೇಕೆಂದು ಆ ತಾಲ್ಲೂಕು ಅಮಲ್ದಾರ್ರಿಂದ ತಲಪಿದ ರಿಪೋರ್ಟು ಬಂದು, ಇವೆರಡನ್ನೂ ಓದಲಾಯಿತು.

ಈ ವಿಚಾರದಲ್ಲಿ ಆಯಾಯ ತಾಲ್ಲೂಕು ಬೋರ್ಡು ಮೀಟಿಂಗಿನಲ್ಲಿ ಚರ್ಚಿಸಿ ಮೀಟಿಂಗಿನ ತೀರ್ಮಾನದ ನಕಲನ್ನು ತರಿಸಿಕೊಳ್ಳುವಂತೆ ತೀರ್ಮಾನಿಸಲಾಯಿತು.

X. ಗಂಜಾಂನಲ್ಲಿರುವ ರೆವರೆಂಡ್ ಡಿ. ಎಫ್. ಲಾರೆಟ್ ಸಾಹೇಬರವರು ಒಂದು ಅಮೃತಮಹಲ್ ಗೂಳಿಯನ್ನು ಕೊಡಿಸಬೇಕೆಂದು ಕೇಳಿಕೊಂಡದ್ದರ ಮೇಲೆ ಇದರ ಅರ್ಧ ಖರೀದಿ ಮೊಬಲಗಿನ ವಿಚಾರದಲ್ಲಿ ಪ್ರೆಸಿಡೆಂಟರವರ ಮೆಮೋವನ್ನು ಓದಲಾಯಿತು.

ಗೂಳಿಯ ಖರೀದಿ ಮೊಬಲಗಿನ ವಿಚಾರದಲ್ಲಿ ಮೈಸೂರು ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರವರು ಗವರ್ನಮೆಂಟಿಗೆ ಬರೆಸಿರುವ ಲೆಟರಿಗೆ ಬರುವ ಹುಕುಮನ್ನು ನಿರೀಕ್ಷಿಸುವಂತೆ ತೀರ್ಮಾನಿಸಲಾಯಿತು.

XI. ಹುಣಸೂರು ತಾಲ್ಲೂಕು ಚಿಕ್ಕನೇರಳೆ ಗ್ರಾಮದ ಸಮೀಪ ತೂಬಿನಕೆರೆಯ ಬಳಿ ಒಂದು ಸಂತೆ ಕಟ್ಟಲು ಏರ್ಪಾಡು ಮಾಡತಕ್ಕ ವಿಚಾರದಲ್ಲಿ ಲೇಟ್ ಹುಣಸೂರು ಡಿವಿಜನ್ ಅಸಿಸ್ಟೆಂಟ್ ಕಮಿಷನರವರಿಂದ ತಲಪಿದ 15—6—07ನೆ ಮರ್ಕ್ಯಂ 245ನೆ ನಂಬರು ಯಾದಾಸ್ತು ಓದಲಾಯಿತು.

ಈ ಏರ್ಪಾಡನ್ನು ಅನುಮೋದಿಸಿರುವಂತೆಯೂ, ಇದಕ್ಕೆ ಗವರ್ನಮೆಂಟ್ ಮಂಜೂರಾತಿಯನ್ನು ಪಡೆಯಬೇಕೆಂತಲೂ ತೀರ್ಮಾನಿಸಲಾಯಿತು.

XII. ಎಡತೊರೆ ತಾಲ್ಲೂಕು ಸಾಲಿಗ್ರಾಮದ ಹೊಲಗೇರಿ ಮನೆಗಳನ್ನು ಹಾಲಿ ಇರತಕ್ಕ ಸ್ಥಳದಿಂದ ವರ್ಗಾಯಿಸಿ ಬ್ಯಾರೆ ಕಡೆ ಕಟ್ಟಬೇಕಾದ ಜಮೀನಿಗೆ ಕೊಡಲ್ಪಡಬೇಕಾಗುವ ಪರಿಹಾರ ದ್ರವ್ಯದ ಮೊಬಲಗು 510 ರೂಪಾಯಿಗಳನ್ನು ಡಿಸ್ಟ್ರಿಕ್ಟು ಫಂಡಿನಿಂದ ಕೊಡಿಸಬೇಕೆಂದು ವಗ್ಯೆರೆ ಎಡತೊರೆ ತಾಲ್ಲೂಕು ಆಮಿಲರಿಂದ ತಲಪಿದ 9—5—07ನೆ ಮರ್ಕ್ಯಂ 446ನೆ ನಂಬರು ರಿಪೋರ್ಟನ್ನು ಓದಲಾಯಿತು.

ಹಾಲಿ ಕೇಳಿರುವ ಮೊಬಲಗನ್ನು ಸಾಲಿಗ್ರಾಮದ ಮ್ಯುನಿಸಿಪಾಲಿಟಿಗೆ ಸಾಲದ ತರೀಕು ಮುಂಗಡವಾಗಿ ಕೊಡಿಸುವಂತೆಯೂ, ಈ ಮ್ಯುನಿಸಿಪಾಲಿಟಿಯು ಅದರ ಕೈಲಾದಷ್ಟು ಸಹಾಯ ದ್ರವ್ಯವನ್ನು ಈ ಭಾಗದಲ್ಲಿ ಕೊಡತಕ್ಕ ವಿಚಾರದಲ್ಲಿ ಕೇಳುವಂತೆಯೂ, ಹಳ್ಳೇ ಹೊಲಗೇರಿ ಜಾಗಾವನ್ನು ಹರಾಜು ಮಾಡಿಸಿ ಅದರಲ್ಲಿ ಉತ್ಪತ್ತಿಯಾಗುವ ಮೊಬಲಗನ್ನು ಹಾಲಿ ಕೊಡುವ ಸಾಲದ ಭರ್ತಿಗಾಗಿ ಜಮಾ ಮಾಡಿಕೊಳ್ಳುವಂತೆಯೂ, ಇಷ್ಟೆಲ್ಲಾ ಆದಮೇಲೆಯೂ ಸಾಲದ ಪೂರಾ ಮೊಬಲಗು ಭರ್ತಿಯಾಗದೆ ಹೋದರೆ ಬಾಕಿ ಉಳಿಯುವ ಸಾಲದ ಮೊಬಲಗನ್ನು ಡಿಸ್ಟ್ರಿಕ್ಟು ಬೋರ್ಡಿನಿಂದ ಕೊಡಲ್ಪಟ್ಟ ಸಹಾಯದ್ರವ್ಯವೆಂದು ಭಾವಿಸತಕ್ಕದ್ದೆಂತಲೂ ಸಹಾ ತೀರ್ಮಾನಿಸಲಾಯಿತು.

XIII. ಶ್ರೀರಂಗಪಟ್ಟಣ-ಚನ್ನರಾಯಪಟ್ಟಣದ ರಸ್ತೆಗೆ ನಡೆಯಬೇಕಾದ ಕೆಲವು ಸ್ಪೆಷಲ್ ಕಾಮಗಾರಿಗಾಗಿ ತಯಾರಾದ 3,253 ರೂಪಾಯಿಗಳ ಅಂದಾಜಾ ನಿಶಿ ತಲಪಿದ್ದ ಮೈಸೂರು ಡಿವಿಜನ್ ಎಕ್ಸಿಕ್ಯೂಟಿವ್ ಇಂಜನೀರವರ 16—8—07ನೆ ಮರ್ಕ್ಯಂ 3233ನೆ ನಂಬರು ಡಾಕೆಟ್ಟನ್ನು ಓದಲಾಯಿತು.

ಈ ವಿಚಾರವನ್ನು ಮುಂದಣ ಮೀಟಿಂಗಿಗೆ ಅಡ್ಜರ್ನ್ ಮಾಡುವಂತೆ ತೀರ್ಮಾನಿಸಲಾಯಿತು.

XIV. ಕಳೆದ ಜೂನ್ ಮಾಹೆಗೆ ಆಖೈರಾದ ಕ್ವಾರ್ಟರಿನಲ್ಲಿ 500 ರೂಪಾಯಿಗಳಿಗಿಂತಲೂ ಕಮ್ಮಿಯಾದ ಅಂದಾಜವುಳ್ಳ ಮತ್ತು ಪ್ರೆಸಿಡೆಂಟರವರಿಂದ ಮಂಜೂರು ಮಾಡಲ್ಪಟ್ಟ ಕಾಮಗಾರಿಗಳ ತಃಖ್ತೆಯನ್ನು ಓದಲಾಯಿತು.

ಇದನ್ನು ಅನುಮೋದಿಸಿರುವದಾಗಿ ತೀರ್ಮಾನಿಸಲಾಯಿತು.

XV. ಕಳೆದ 1906—07ನೆ ಸಾಲಿನಲ್ಲಿ ಅಪೂರ್ತಿಯಾಗಿ ಉಳಿದು ಚಾಲ್ತಿ ಸಾಲಿನಲ್ಲಿ ರೆವಿನ್ಯೂ ಇಲಾಖಾ ಮೂಲಕ ಮುಗಿಸಲ್ಪಡಬೇಕಾದ ಕಾಮಗಾರಿಗಳ ಪಟ್ಟಿಯನ್ನು ಓದಲಾಯಿತು.

ಇದನ್ನು ಅನುಮೋದಿಸಿರುವಂತೆಯೂ, ಗವರ್ನಮೆಂಟಿಗೆ ಕಳುಹಿಸಿ ಚಾಲ್ತಿ ಸಾಲಿನ ಬಡ್ಜೆಟ್ಟಿನಲ್ಲಿ ಮಂಜೂರಾಗಿರುವ ಮೊಬಲಗಿಗಿಂತಲೂ ಈ ಕೆಲಸಕ್ಕಾಗಿ ಜಾಸ್ತಿ ಬೇಕಾಗುವ ಮೊಬಲಗನ್ನು ಅಡೀಷನಲ್ ಮಂಜೂರಾತಿಯಂತೆ ಭಾವಿಸಿ ಮಂಜೂರು ಮಾಡತಕ್ಕ ಬಗ್ಗೆ ಗವರ್ನಮೆಂಟನ್ನು ಪ್ರಾರ್ಥಿಸುವಂತೆಯೂ ಸಹಾ ತೀರ್ಮಾನಿಸಲಾಯಿತು.

XVI. ಡಿಸ್ಟ್ರಿಕ್ಟು ಬೋರ್ಡಿನ ಫೈನಾನ್ಸ್ ಕಮಿಟಿ ಮೆಂಬರುಗಳ ಚುನಾವಣೆ ವಿಚಾರ.

ಈ ಕೆಳಗೆ ಕಾಣುವ ಮೆಂಬರುಗಳನ್ನು ಒಳಗೊಂಡಿರುವ ಒಂದು ಫೈನಾನ್ಸ್ ಕಮಿಟಿಯನ್ನು ಏರ್ಪಾಡು ಮಾಡಬೇಕೆಂದು ತೀರ್ಮಾನಿಸಲಾಯಿತು.

1. ಡಿಸ್ಟ್ರಿಕ್ಟು ಬೋರ್ಡಿನ ವೈಸ್ ಪ್ರೆಸಿಡೆಂಟರವರು.
2. ಎಗ್ಜಿಕ್ಯೂಟಿವ್ ಇಂಜನೀರವರು.

3. ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟೇರಿ ಆಫಿಸರವರು.
4. ಮೆ|| ವಿ. ರಾಘವಾಚಾರ್ಯರವರು.
5. ,, ಎ. ಅಂಣೈಯ್ಯಪಂಡಿತರವರು.
6. ,, ಟಿ. ಎಕ್. ಮಿಾರ್ ಕವಾಮಲುದ್ದೀನ್ ಅಲ್ಲೀಖಾನ್ ಸಾಹೇಬರು.
7. ,, ಬಿ. ನರಸಿಂಗರಾಜುರವರು.

XVII. ಬೋರ್ಡಿನ ಮಿಾಟಂಗಿನಲ್ಲಿ ಹಾಜರಾಗಿದ್ದ ಸರ್ಕಾರಿ ಉದ್ಯೋಗೆರಹಿತರಾದ ಮೆಂಬರುಗಳು ಮೆ|| ಟಿ. ಎಸ್. ಕೃಷ್ಣರಾಯುರವರನ್ನು, ಪ್ಲೀಡರ್ ಮಿ|| ಬಿ. ನರಸಿಂಗರಾಯರವರನ್ನೂ ಸಹ 1907ನೆ ಸಾಲಿನಲ್ಲಿ ನಡೆಯುವ ದಸರಾ ಪ್ರಜಾಪ್ರತಿನಿಧಿ ಸಭೆಯಲ್ಲಿ ಡಿಸ್ಟ್ರಿಕ್ಟು ಬೋರ್ಡಿನ ವಿಚಾರಗಳನ್ನು ಚರ್ಚಿಸುವದಕ್ಕಾಗಿ ಚುನಾಯಿಸಿದರು.

XVIII. ಮುಂದೆ ನಡೆಯಬೇಕಾದ ಡಿಸ್ಟ್ರಿಕ್ಟು ಬೋರ್ಡು ಮಿಾಟಂಗು 1907ನೆ ಇಸವಿ ನವಂಬರು 2ನೆ ತಾರೀಖು ಶನಿವಾರ ಮಧ್ಯಾಹ್ನ 2 ಘಂಟೆಗೆ ನಡೆಸುವಂತೆ ತೀರ್ಮಾನವಾಯಿತು.

ಎಂ. ಕಾಂತರಾಜೆ ಅರಸ್,
ಪ್ರೆಸಿಡೆಂಟ್, ಡಿಸ್ಟ್ರಿಕ್ಟು ಫಂಡ್ ಬೋರ್ಡ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

1. ಸ್ರ 1908ನೆ ಇಸವಿ ಫೆಬ್ರುವರಿ ಮಾಹೆ 19ನೆ ತಾರೀಖಿನಲ್ಲಿ ಪ್ರಾರಂಭವಾಗಿ ಹತ್ತು ದಿನಗಳ ವರೆಗೂ, ಹೊನ್ನಾಳಿ ತಾಲ್ಲೂಕು ರಾಂಪುರದಲ್ಲಿ ನಡೆಯುವ ಜಾತ್ರೆ ಕಾಲದಲ್ಲಿ ಗವರ್ನಮೆಂಟಿನಿಂದ ತಲ್ಪಿರುವ 22—12—06ನೆ ಮುರ್ಕ್ಕಂ 5540-1—L. F. 495-05—4ನೆ ನಂಬರ್ ಪ್ರೊಸೀಡಿಂಗ್ಸ್ ಪ್ರಕಾರ ದನಗಳ ಪ್ರದರ್ಶನವು ನಡೆಯುತ್ತದೆ.

2. ಜಾತ್ರೆ ನಡೆಯುವ ರಾಮಪುರ ಗ್ರಾಮದ ಸಮಿಾಪದಲ್ಲಿ ಸಾಸವೆಹಳ್ಳಿಗೆ ಹೋಗುವ ಕಾಲುದಾರಿ ಪಕ್ಕದ, ಮೈದಾನಿನಲ್ಲಿ ಪ್ರದರ್ಶನವು ನಡೆಯಲು ಏರ್ಪಡಿಸಿರುತ್ತೆ.

3. ಗಾಡಿ ಎತ್ತು ಜೊತೆ 1ಕ್ಕೆ ಮೊದಲನೆ ಬಹುಮಾನ 20 ರೂಪಾಯಿ, ಎರಡನೆ ಬಹುಮಾನ 10 ರೂಪಾಯಿ, ಉಳುವ ಎತ್ತು ಜೊತೆ ಒಂದಕ್ಕೆ ಮೊದಲನೆ ಬಹುಮಾನ 20 ರೂಪಾಯಿ, ಎರಡನೆ ಬಹುಮಾನ 10 ರೂಪಾಯಿ, ಅತ್ಯುತ್ತಮವಾದ ಬೀಜದ ಹೋರಿ ಒಂದಕ್ಕೆ ಒಂದನೆ ಬಹುಮಾನ 15 ರೂಪಾಯಿ, ಅತ್ಯುತ್ತಮವಾದ ಹಸು ಒಂದಕ್ಕೆ ಒಂದನೆ ಬಹುಮಾನ 15 ರೂಪಾಯಿ, ಅತ್ಯುತ್ತಮವಾದ ಎಮ್ಮೆ 1ಕ್ಕೆ ಒಂದನೆ ಬಹುಮಾನ 10 ರೂಪಾಯಿ, ಈ ರೀತಿ 7 ಬಹುಮಾನಗಳು ಕೊಡಲ್ಪಡುತ್ತವೆ.

4. ಬಹುಮಾನಗಳನ್ನು ಕೊಡಲು ಉತ್ತಮ ಜಾನುವಾರುಗಳನ್ನು ಚುನಾಯಿಸಲು ಒಂದು ಕಮಿಟಿ ಏರ್ಪಡಿಸುತ್ತೆ. ಪ್ರದರ್ಶನವು ಮುಗಿದ ಕೂಡಲೆ ಇನಾಂ ಹಂಚಲ್ಪಡುತ್ತದೆ.

5. ಮೇಲ್ಕಂಡ ದ್ರವ್ಯ ರೂಪದ ಇನಾಂ ಅಲ್ಲದೆ ಒಂದು ಯೋಗ್ಯತಾ ಪತ್ರವು (Certificate) ದೊರೆಯುತ್ತದೆ.

6. ಇನಾಂ ಪಡೆಯಲು ಲಾಯಖಾದ ಜಾನುವಾರು ಪ್ರದರ್ಶನಕ್ಕೆ ಬಾರದೆ ಇದ್ದಲ್ಲಿ ಸದರಿ ಇನಾಂ ಅನಾಮತ್ತಿನಲ್ಲಿಡುವದಕ್ಕಾಗಲಿ, ಅಥವಾ ಇನಾಮಿಗೆ ಅರ್ಹವಾದ ಇತರ ತರಗತಿ ಜಾನುವಾರುಗಳಿಗೆ ಕೊಡುವದಕ್ಕಾಗಲಿ ಕಮಿಟಿ ಮೆಂಬರುಗಳು ಅಧಿಕಾರವುಳ್ಳವರಾಗಿರುತ್ತಾರೆ.

7. ಜಾನುವಾರುಗಳನ್ನು ಪ್ರದರ್ಶನ ಮಾಡಲು ಇಷ್ಟವುಳ್ಳವರು, ಹೊನ್ನಾಳಿ ತಾಲ್ಲೂಕು ಅಮಲ್ದಾರ್ರವರಿಗೆ ಆಗಲಿ, ಅಥವಾ ಅವರಿಂದ ನೇಮಕ ಮಾಡಲ್ಪಟ್ಟ ಇತರ ನೌಕರರಿಗೆ ಆಗಲಿ ಪ್ರದರ್ಶನ ಷುರುವಾಗುವದಕ್ಕೆ ಮುಂಚಿತವಾಗಿ ಒಂದು ದಿವಸಕ್ಕೆ ಕಮ್ಮಿ ಇಲ್ಲದೆ ಅವಕಾಶವಿರುವಂತೆ, ಬರೆದು ತಮ್ಮ ಹೆಸರು ಜಾನುವಾರು ತಪಶೀಲು ದಾಖಲ್ಮಾಡಿಸಬೇಕು.

8. ಪ್ರದರ್ಶನಕ್ಕೆ ಸೇರುವ ಜಾನುವಾರುಗಳಿಗಾಗಲಿ, ಅಥವಾ ಅವುಗಳಿಂದ ಜನಗಳಿಗೆ ಆಗಲಿ, ಯಾವ ಅಪಾಯವೂ ಸಂಭವಿಸದಂತೆ ಅವುಗಳ ಮಾಲೀಕರು ನೋಡಿಕೊಳ್ಳಬೇಕು.

9. ಸ್ಥಳದಲ್ಲಿ ಜಮಾಯಿಸಲಾಗುದಾದ ರಾತೀಬು ಜಾನುವಾರುಗಳಿಗೆ ಸಾಲದೆ ಹೋಗಬಹುದಾದ್ದರಿಂದ ಪ್ರದರ್ಶನದಲ್ಲಿ ಸೇರಬಹುದಾದ ಜಾನವಾರುಗಳಿಗೆ ರಾತೀಬಿನ ಏರ್ಪಾಡು ಅವುಗಳ ಮಾಲೀಕರೆ ನೋಡಿಕೊಳ್ಳುವದು ಒಳ್ಳೇದು.

10. ಈ ಜಾತ್ರೆಗೆ ಬಹಳ ಜನಗಳು ಮತ್ತು ಜಾನುವಾರು ಸೇರುವದರಿಂದ ವ್ಯಾಪಾರ ಬಹಳ ಚನ್ನಾಗಿ ನಡೆಯುತ್ತೆ.

11. 1907ನೆ ಇಸವಿ ಮಾರ್ಚಿ ತಿಂಗಳಲ್ಲಿ ಕೂಡ್ಲಿ ಜಾತ್ರೆ ಕಾಲದಲ್ಲಿ ನಡದ ಪ್ರದರ್ಶನ ಕಾಲದಲ್ಲಿ ಬಹುಮಾನ ಕೊಡಲ್ಪಟ್ಟವರ ತಪಶೀಲ್ ಈ ಕೆಳಗೆ ನಮೂದಿಸಿರುತ್ತೆ.

ನಂಬರು	ಪ್ರದರ್ಶನ ಮಾಡಿದ ಮಾಲೀಕನ ಹೆಸರು.			ಬಹುಮಾನದ ತಪಶೀಲ್.		
	ಹೆಸರು.	ವಾಸವಾಗಿರುವ ಗ್ರಾಮ.	ತಾಲ್ಲೂಕು.	ಯಾತಕ್ಕೋಸ್ಕರ ಬಹುಮಾನ ಕೊಟ್ಟದ್ದು.	ಮೊಬಲಗು.	ಬಹುಮಾನದ ತರಗತಿ.
					ರೂ.	
1	ರುದ್ರಪ್ಪ ಬಿನ್ ಶಿವಪ್ಪ	ನ್ಯಾಮತಿ	ಹೊನ್ನಾಳಿ	ಉಳುವ ಎತ್ತುಗಳ ಜೊತೆಗೆ.	20	1ನೆ ಬಹುಮಾನ
2	ರಾಮರಾವ್ ಬಿನ್ ಹನಮಂತರಾವ್.	ಶಿಡ್ಲಿಪುರ ...	ಶಿವಮೊಗ್ಗ ...	ಡಿಟೋ ...	10	2ನೆ ಡಿಟೋ
3	ಹಾಲಪ್ಪ ಬಿನ್ ಹರಗಪ್ಪ...	ಸುಂಕದಕಟ್ಟೆ..	ಹೊನ್ನಾಳಿ ...	ಬೀಜದ ಹೋರಿ ಒಂದಕ್ಕೆ.	15	1ನೆ ಡಿಟೋ
4	ಮಹದೇವಪ್ಪ ಬಿನ್ ಮಲ್ಲಪ್ಪ	ತ್ಯಾವಣಗಿ ...	ಚನ್ನಗಿರಿ	ಗಾಡಿ ಎತ್ತಿನ ಜೊತೆ 1ಕೆ.	10	2ನೆ ಡಿಟೋ

ಎ. ವೇದಾಂತದೇಸಿಗಂ ಐಯ್ಯಂಗಾರ್,
ಫಾರ್ ಪ್ರೆಸಿಡೆಂಟ್.

ಅಮೃತಮಹಲ್ ಇಲಾಖಾ.

ಪ್ರಸಿದ್ಧ ಪತ್ರಿಕೆ.

ತಾರೀಖು 6—7ನೆ ಸೆಪ್ಟಂಬರ 1907, ಬೆಂಗಳೂರು.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ ಮೈಸೂರು ಸೀಮೆಯ ಅಮೃತಮಹಲ ಇಲಾಖಾ ಕೆಲವು ಗಂಡು ರಾಸುಗಳು ಮೈಸೂರಿನಲ್ಲಿ ನಾಳೆ ದಸರಾ ಸಂಬಂಧವಾಗಿ ನಡಿಯುವ ವಸ್ತು ಪ್ರದರ್ಶನ ಶಾಲೆಯ ಕಟ್ಟಡದ ಬಳಿ ಬರುವ 1907ನೆ ಅಕ್ಟೋಬರ ಮಾಹೆ 14ನೆ ತಾರೀಖಿನಲ್ಲಿ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಹರಾಜಿನಲ್ಲಿ ಪಡಿಯಬಹುದು.

ಷರತ್ತುಗಳು :—

(i) ಹರಾಜು ಖೈದಾದ ಕೂಡಲೆ ಪೂರಾ ಮೊಬಲಗು ಪಾವತಿ ಮಾಡಬೇಕು.

(ii) ಹರಾಜಿನಲ್ಲಿ ಪಡೆದ ಎತ್ತನ್ನು ವಸ್ತು ಪ್ರದರ್ಶನ ಆಫೀಸರು ಅದನಂತರ ಹರಾಜುದಾರನ ಸುಫರ್ದು ಮಾಡಲ್ಪಡುತ್ತೆ.

ಹೆಚ್. ನಂಜುಂಡರಾಜೇ ಅರಸ್,

ಸೂಪರಿಂಟೆಂಡೆಂಟ.

467

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಛಾಪಿಸಿ ಆದ್ದು. [ನಂ. 38

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ॥ 19, ಸನ್ 1907.

II ನೆ ಭಾಗ.

ಇಂಡಿಯಾ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

ಮೈಸೂರು ಶೀಮೆಯ ರೆವಿನ್ಯು ಕಮ್ಮಿಷನರವರ ಆಫೀಸು.

ಬೆಂಗಳೂರು, ತಾರೀಖು 12ನೆ ಸೆಪ್ಟಂಬರ್ 1907.

ಸರ್ಕ್ಯುಲರ್ ಮೆಮೋರಾಂಡಂ.

ಸನ್ 1907ನೆ ಮೇ 3ನೆ ತಾರೀಖಿನ ಗೌರ್ನಮೆಂಟು ನಂಬರು F. L. 8288-97—L. R. 21-06—5ನೆ ಪ್ರೊಸೀಡಿಂಗ್ಸ್ 2ನೆ ಪ್ಯಾರಾದಲ್ಲಿ ಒಳಗೊಂಡಿರುವ ನಡವಳಿಕೆಗಳನ್ನು ಅನುಸರಿಸಿ ರೆವಿನ್ಯು ಕಮಿಷನರವರು ಅಪ್ಪಣೆ ಮಾಡುವದೇನಂದರೆ :-

1. ಎಲ್ಲಾ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಕಚೇರಿಗಳಲ್ಲಿನ ರಿಕಾರ್ಡುಗಳನ್ನು ವಿಂಗಡಿಸುವದರಲ್ಲಿಯೂ ಮತ್ತು ಕ್ರಮಪಡಿಸುವದರಲ್ಲಿಯೂ ಸಹಾ ಒಂದೇ ವಿಧವಾದ ಆಚರಣೆಯನ್ನು ಜಾರೀಗೆ ತರುವದಕ್ಕೋಸ್ಕರ ರಿಕಾರ್ಡು ಸಾರ್ಟಿಂಗ್ ಇನ್ಸ್‌ಪೆಕ್ಟರವರು ಎಲ್ಲಾ ತಾಲ್ಲೂಕು ರಿಕಾರ್ಡು ಕೀಪರುಗಳನ್ನೂ ಅಥವಾ ರಿಕಾರ್ಡು ವಿಂಗಡದ ಕೆಲಸಕ್ಕೋಸ್ಕರ ಮೊಕರರೂರ್ ಪಟ್ಟಿರುವ ಇತರ ನವುಕರರನ್ನೂ, ಸಾಧ್ಯವಾದ ಮಟ್ಟಿಗೂ ತಾಲ್ಲೂಕು ಶಿರಸ್ತೆದಾರರನ್ನೂ ಆಯಾಯ ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರ್ ಜಾಗಾಕ್ಕೆ ಕರೆಸಿಕೊಂಡು ರಿಕಾರ್ಡು ವಿಂಗಡಿಸುವ ವಿಷಯದಲ್ಲಿ ಹುಟ್ಟಿರುವ ನಿಬಂಧನೆಗಳನ್ನು, ಮತ್ತು ರಿಕಾರ್ಡುಗಳನ್ನು ವಿಂಗಡಿಸತಕ್ಕ ಕ್ರಮವನ್ನು ಅವರಿಗೆ ತಿಳಿಯಪಡಿಸತಕ್ಕ ಬಗ್ಯೆ ಆಯಾಯ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು ಅವಕಾಶ ಕೊಡಬೇಕು.

ಈರೀತಿ ತಾಲ್ಲೂಕುಗಳಿಂದ ಬಂದ ನವುಕರರುಗಳಿಗೆ ಸರಿಯಾಗಿ ಸದರಿ ರಿಕಾರ್ಡು ನಿಬಂಧನೆಗಳ ಸಾರಾಂಶವು ತಿಳದಿದೆಯೋ ಇಲ್ಲವೇ ಎಂಬ ಅಂಶವನ್ನು ಪರೀಕ್ಷೆ ಮಾಡುವದಕ್ಕೋಸ್ಕರ ಪ್ರತಿ ತಾಲ್ಲೂಕ ಹೆಡ್‌ಕ್ವಾರ್ಟರಿನಲ್ಲಿ ಇನ್ಸ್‌ಪೆಕ್ಟರವರು ತಮ್ಮ ಖುದ್ದು ಮೇಲ್ ನಿಗಾದಿಂದ ಸದರಿ ಪ್ರತಿ ಒಬ್ಬ ರಿಕಾರ್ಡು ಕೀಪರಿನಿಂದಲೂ ಒಂದು ಯಾ ಎರಡು ಕಟ್ಟುಗಳ ರಿಕಾರ್ಡುಗಳನ್ನು ವಿಂಗಡಿಸಿಸಿ ನೋಡಬೇಕು. ಈ ನವುಕರರು ತಮ್ಮ ತಾಲ್ಲೂಕು ಬಿಟ್ಟು ಒಂದು ವಾರಕ್ಕಿಂತ ಹೆಚ್ಚಾಗಿ ನಿಲ್ಲುವ ಅವಶ್ಯಕವಿರುವದಿಲ್ಲ.

2. ರಿಕಾರ್ಡುಗಳನ್ನು ವಿಂಗಡಿಸುವದು ಮತ್ತು ಕ್ರಮಪಡಿಸುವದು, ಈ ಕೆಲಸವು ಮುಖ್ಯವಾದ ಕೆಲಸವಾಗಿಯೂ ಮತ್ತು ಸ್ವಲ್ಪ ಮಟ್ಟಿಗೆ ಕಠಿಣವಾಗಿಯೂ, ಈಗ ಹಾಲಿ ಇರುವ ಹಳೇ ರಿಕಾರ್ಡುಗಳು ಎಲ್ಲಾ ವಿಂಗಡಿಸಲ್ಪಟ್ಟು ನಾಶಪಡಿಸತಕ್ಕವುಗಳನ್ನ ನಾಶಪಡಿಸುವ ವರಿಗೆ, ಎಲ್ಲಾ ಡಿಸ್ಟ್ರಿಕ್ಟು ಮತ್ತು ತಾಲ್ಲೂಕುಗಳಲ್ಲಿಯು ಕೆಲಸ ಸ್ವಲ್ಪ ಹೆಚ್ಚಾಗಿ ಇರಬಹುದಾದ್ದರಿಂದಲೂ, ಈಗ ರಿಕಾರ್ಡಿನಲ್ಲಿ ಕೆಲಸ ಮಾಡತಕ್ಕ ನವುಕರರು ಸಮರ್ಥರಾಗಿಯೂ ಬುದ್ಧಿಶಾಲಿಗಳಾಗಿಯೂ ಇರತಕ್ಕದ್ದು ಅವಶ್ಯಕವಾಗಿ ಇದೆ. ಆದ್ದರಿಂದ ಇಂಥಾ ನವುಕರರುಗಳ ಅರ್ಹತೆಯನ್ನು ಪರೀಕ್ಷಿಸಿ ಕೆಲಸಕ್ಕೆ ಅನರ್ಹರಾಗಿಯೂ ಮತ್ತು ಅಸಮರ್ಥರಾಗಿಯೂ ಇರುವವರ ಹೆಸರುಗಳನ್ನು ಡೆಪ್ಯುಟಿ ಕಮ್ಮಿಷನರವರಿಗೆ ತಿಳಿಸಿ ಅಂಥಾವರುಗಳನ್ನು ವ್ಯವಧಾನವಿಲ್ಲದೆ ಬದಲಾಯಿಸತಕ್ಕದ್ದು ರಿಕಾರ್ಡು ಸಾರ್ಟಿಂಗ್ ಇನ್ಸ್‌ಪೆಕ್ಟರವರ ಕರ್ತವ್ಯವಾಗಿ ಇದೆ.

3. ರಿಕಾರ್ಡು ಸಾರ್ಟಿಂಗ್ ಇನ್ಸ್‌ಪೆಕ್ಟರು ಒಂದು ಡಿಸ್ಟ್ರಿಕ್ಟನ್ನು ಬಿಟ್ಟು ಇನ್ನೊಂದು ಡಿಸ್ಟ್ರಿಕ್ಟಿಗೆ ಹೋಗುವದಕ್ಕೆ ಪೂರ್ವವೇ ತಾವು ಆ ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರಿನಲ್ಲಿ ಮಾಡಿದ ಕೆಲಸವನ್ನು ಕುರಿತು ಆ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಮುಖಾಂತರ ರೆವಿನ್ಯು ಕಮ್ಮಿಷನರ್ ಸಾಹೇಬರವರಿಗೆ ಒಂದು ರಿಪೋರ್ಟನ್ನು ಕಳುಹಿಸಬೇಕು.

ಈ ರಿಪೋರ್ಟಿನಲ್ಲಿ ಸದರಿ ರಿಕಾರ್ಡು ವಿಂಗಡದ ವಿಷಯದಲ್ಲಿ ತಿಳುವಳಿಕೆಗಳನ್ನು ಹೊಂದಲು ಬಂದ ತಾಲ್ಲೂಕ ಶಿರಸ್ತೆದಾರ್ರು ಮತ್ತು ರಿಕಾರ್ಡು ಕೀಪರುಗಳ ಹೆಸರುಗಳು ಆ ಕೆಲಸ ಮಾಡಲು ಅವರಿಗೆ ಇರತಕ್ಕ ಯೋಗ್ಯತೆ ಈ ವಿಷಯಗಳನ್ನು ನಮೂದು ಮಾಡಬೇಕಲ್ಲದೆ, ಇನ್ಸ್ಪೆಕ್ಟರು ರೆವಿನ್ಯು ಕಮ್ಮಿಷನರವರ ಆಲೋಚನೆ ಬಗ್ಯೆ ಏನಾದರೂ ತಮ್ಮ ಅಭಿಪ್ರಾಯವನ್ನು ತಿಳಿಸತಕ್ಕದ್ದೇ ಆಗಲಿ ಅಥವಾ ಸೂಚಿಸತಕ್ಕ ವಿಷಯಗಳು ಏನಾದರೂ ಇದ್ದಲ್ಲಿಯೇ ಆಗಲಿ, ಇವುಗಳನ್ನು ಸಹಾ ನಮೂದು ಮಾಡಬೇಕು.

4. ಇನ್ಸ್ಪೆಕ್ಟರು ತಾವು ಮೇಲ್ಕಂಡ ಬಗ್ಯೆ ಡಿಸ್ಟ್ರಿಕ್ಟುಗಳನ್ನು ಸಂಚರಿಸಲು ಹೊರಡುವದಕ್ಕೆ ಮುಂಚೆ ಯಾವ ಯಾವ ತಾರೀಖಿನಲ್ಲಿ ಯಾವಯಾವ ಡಿಸ್ಟ್ರಿಕ್ಟಿಗೆ ಹೋಗಬೇಕೆಂದು ಮಾಡಿಕೊಂಡಿರುವರೋ ಅದನ್ನು ತಿಳಿಸತಕ್ಕ ಒಂದು ಸೂಚನೆ ಪತ್ರವನ್ನು (Programme) ತಯಾರ್ಮಾಡಿಸಿ ಇದನ್ನು ರೆವಿನ್ಯು ಕಮ್ಮಿಷನರವರಿಗೆ ರವಾನಿಸಿ ಅಲ್ಲಿಂದ ಮುಂಜೂರಾಗಿ ಬಂದ ನಂತರ, ತಾಲ್ಲೂಕಗಳಿಂದ ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರುಗಳಿಗೆ ಅವಶ್ಯಕವಿರುವ ನವುಕರರನ್ನು ಕರಸಿಕೊಳ್ಳತಕ್ಕ ಬಗ್ಯೆ ಬೇಕಾಗುವಷ್ಟು ಕಾಲ ಮುಂಚಿತವಾಗಿ ಇನ್ಸ್ಪೆಕ್ಟರು ತಮ್ಮ ಸಂಚರಣೆ ಕುರಿತು ಡೆಪ್ಯುಟಿ ಕಮ್ಮಿಷನರುಗಳಿಗೆ ಸೂಚನೆ ಪತ್ರ (Programme) ಕಳುಹಿಸಬೇಕು. ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ ರಿಕಾರ್ಡು ಕೀಪರುಗಳಿಗೆ ರಿಕಾರ್ಡು ವಿಂಗಡದ ವಿಷಯದಲ್ಲಿ ಪ್ರಥಮದಲ್ಲಿ ಇನ್ಸ್ಪೆಕ್ಟರು ಕೊಡಬೇಕಾದ ತಿಳುವಳಿಕೆ ಕೆಲಸವೂ, ಅವರುಗಳನ್ನು ತರಬೇತು ಮಾಡತಕ್ಕ ಕೆಲಸವೂ ಸಹಾ 2 ತಿಂಗಳು ಒಳಗಾಗಿ ಪೂರೈಸಬಹುದಾಗಿ ನಿರೀಕ್ಷಿಸಲ್ಪಟ್ಟಿದೆ.

5. ರಿಕಾರ್ಡು ಕೀಪರುಗಳು ಮತ್ತು ಅವರ ಕೈಕೆಳಗೆ ಕೆಲಸ ಮಾಡತಕ್ಕವರೂ ಸಹಾ ಪ್ರತಿ ಒಬ್ಬರು ಲಗತ್ತು ಇರುವ ನಮೂನೆ ಅನುಸರಿಸಿ ಒಂದು ಡೈರಿಯನ್ನಿಡಬೇಕು. ಇಂಥಾ ಡೈರಿಯನ್ನು ಸರಿಯಾಗಿ ಇಟ್ಟಿದ್ದಾರೆಯೋ ಇಲ್ಲವೇ ಎಂಬ ಅಂಶವನ್ನು ಡಿಸ್ಟ್ರಿಕ್ಟು ಶಿರಸ್ತೆದಾರ್ರು, ಅಮಲ್ದಾರ್ರು ಮತ್ತು ತಾಲ್ಲೂಕು ಶಿರಸ್ತೆದಾರ್ರು ಸಹಾ ನೋಡಿಕೊಳ್ಳಬೇಕಲ್ಲದೆ, ಈ ಡೈರಿಗಳ ಮಾಹೇವಾರಿ ಸಾರಾಂಶವನ್ನು ಸೀದಾ ಇನ್ಸ್ಪೆಕ್ಟರಿಗೆ ಪ್ರತಿ ತಿಂಗಳಲ್ಲಿಯೂ ಕಳುಹಿಸುತ್ತಾ ಬರಬೇಕು. ಈ ಡೈರಿ ಸಾರಾಂಶವನ್ನು ಇನ್ಸ್ಪೆಕ್ಟರವರು ತಮ್ಮ ಷರಾನಿಶಿ ಡೆಪ್ಯುಟಿ ಕಮ್ಮಿಷನರ್ ಅಥವಾ ಸಬ್ ಡಿವಿಜನ್ ಆಫೀಸರವರ ಮುಖಾಂತರ ವಾಪಸು ಮಾಡಬೇಕು.

6. ತಾಲ್ಲೂಕಿನಲ್ಲಿ ನಡಿಯತಕ್ಕ ರಿಕಾರ್ಡು ವಿಂಗಡದ ಕೆಲಸವನ್ನು ಸರಿಯಾಗಿ ಮೇಲ್‌ನಿಗಾ ನೋಡತಕ್ಕ ವಿಷಯದಲ್ಲಿ ತಾಲ್ಲೂಕ ಶಿರಸ್ತೆದಾರ್ರು, ಡಿಸ್ಟ್ರಿಕ್ಟಿನಲ್ಲಿ ನಡೆಯತಕ್ಕ ಕೆಲಸದ ಮೇಲ್‌ನಿಗಾ ನೋಡತಕ್ಕ ವಿಷಯದಲ್ಲಿ ಡಿಸ್ಟ್ರಿಕ್ಟು ಶಿರಸ್ತೆದಾರ್ರು, ಮುಖ್ಯ ಜವಾಬ್ದಾರ್ರಾಗಿರುತ್ತಾರೆಂಬ ಅಂಶವನ್ನು ಚನ್ನಾಗಿ ತಿಳಿದುಕೊಳ್ಳತಕ್ಕದ್ದು. ರಿಕಾರ್ಡನ್ನು ವಿಂಗಡಿಸತಕ್ಕ ಕಾಲದಲ್ಲಿ ರಿಕಾರ್ಡು ಕೀಪರುಗಳಿಗೆ ಏನಾದರೂ ಸಂದೇಹವೇ ಆಗಲೀ ಅಥವಾ ಕಷ್ಟವಾದ ಅಂಶಗಳೇ ಆಗಲೀ ಬಂದಲ್ಲಿ ಈ ಬಗ್ಯೆ ಒಂದು ಮೆಮೋ ತಯಾರ್ಮಾಡಿ, ಶಿರಸ್ತೆದಾರರುಗಳಿಗೆ ಕೊಡಬೇಕು. ಈ ಮೆಮೋದಲ್ಲಿ ಶಿರಸ್ತೆದಾರರು ತಮ್ಮ ಸಲಹೆಗಳನ್ನು (Instructions) ನಮೂದು ಮಾಡಬೇಕು. ಅಥವಾ ಸಲಹೆ ಕೊಡತಕ್ಕ ಬಗ್ಯೆ ಈ ಮೆಮೋಗಳನ್ನು ಇನ್ಸ್ಪೆಕ್ಟರವರಲ್ಲಿಗೆ ರವಾನಿಸಬೇಕು. ಇಂಥಾ ಮೆಮೋಗಳನ್ನು ಇನ್ನೊಂದು ಸಾರಿ ಇನ್ಸ್ಪೆಕ್ಟರು ಮೇಲ್ ತನಿಖೆಗೆ ಬಂದವೇಳೆ ದಾಖ್ಲೆ ಬಗ್ಯೆ ಅವರಲ್ಲಿ ಹಾಜರ್ಪಡಿಸಬೇಕು.

7. ರಿಕಾರ್ಡು ಕೀಪರುಗಳಿಗೆ ರಿಕಾರ್ಡು ವಿಂಗಡದ ವಿಷಯದಲ್ಲಿ ಪ್ರಥಮದಲ್ಲಿ ಕೊಡಬೇಕಾದ ತಿಳುವಳಿಕೆಗಳು ಮುಗಿದ ಕೂಡ್ಲೇ, ಇನ್ಸ್ಪೆಕ್ಟರು ಪ್ರತಿ ಡಿಸ್ಟ್ರಿಕ್ಟು ಸಬ್ ಡಿವಿಜನ್ ಮತ್ತು ತಾಲ್ಲೂಕು ಕಚೇರಿಗಳ ರಿಕಾರ್ಡುಗಳನ್ನು ಕ್ರಮಪ್ರಕಾರ ಇನ್ಸ್ಪೆಕ್ಟ್ ಮಾಡುವದಕ್ಕೆ ಪ್ರಾರಂಭಿಸಿ, ಸದರಿ ರಿಕಾರ್ಡು ವಿಂಗಡದ ಕೆಲಸವು ಈ ಭಾಗದಲ್ಲಿ ಹುಟ್ಟಿರುವ ನಿಬಂಧನೆಗಳಿಗೂ ಮತ್ತು ಆಗಾಗ್ಯೆ ಕೊಟ್ಟಿರುವ ಸಲಹೆಗಳಿಗೂ ಅನುಸಾರವಾಗಿ ನಡದಿದೆಯೇ ಮತ್ತು ನ್ಯಾಯವಾಗಿ ನಡೆಯತಕ್ಕಷ್ಟು ಕೆಲಸ ನಡದಿದೆಯೇ ಎಂಬ ಅಂಶಗಳನ್ನು ನೋಡಿ ತಮ್ಮ ಮೇಲ್‌ತನಿಖೆಗಳ ಫಲಿತಾಂಶವನ್ನು ಕುರಿತು ಡೆಪ್ಯುಟಿ ಕಮ್ಮಿಷನರವರ ಮುಖಾಂತರ ರೆವಿನ್ಯೂ ಕಮ್ಮಿಷನರವರಿಗೆ ರಿಪೋರ್ಟ್ಮಾಡಬೇಕು.

.........ಡಿಸ್ಟ್ರಿಕ್ಟು ಹೆಡ್ ರಿಕಾರ್ಡು ಕೀಪರ, ಅಸಿಸ್ಟೆಂಟ್ ರಿಕಾರ್ಡು ಕೀಪರ ದಫ್ತರಬಂದಿಯ ಅಥವಾ.........ತಾಲ್ಲೂಕಿನ ರಿಕಾರ್ಡು ಕೀಪರ ದಫ್ತರ ಬಂದಿಯ.........ಮಾಹೇ ಬಾಬತು ಡೈರಿ.

ತಾರೀಖು	ಕೆಲಸಕ್ಕೆ ಪ್ರಾರಂಭ ಮಾಡಿದ ಘಂಟೆ.	ಕೆಲಸ ಪೂರೈಸಿದ ಘಂಟೆ.	ದಾಖ್ಲೆಗಳನ್ನು ತೆಗದು ಕೊಟ್ಟದ್ದರ ಸಂಖ್ಯೆ.	ವಿಂಗಡ ಮಾಡಿದ ರಿಜಿಸ್ಟ್ರು ಮಾಡಿದ ಮತ್ತು ವಿಷಯಾನುಕ್ರಮ ಮಾಡಿದ (Files) ಕಟ್ಟುಗಳ ಸಂಖ್ಯೆ ಮತ್ತು ಸ್ವಭಾವ.	ಇತರ ಕೆಲಸವೇನಾದರೂ ಮಾಡಿದ್ದಲ್ಲಿ ಅಂಥಾ ಕೆಲಸದ ಸ್ವಭಾವ	ಷರಾ.
1	2	3	4	5	6	7
						(ಈ ಮೇಸ್ತಕಿನಲ್ಲಿ ವಿಲೆ ಬಗ್ಯೆ ರಿಕಾರ್ಡಿಗೆ ತಲ್ಪಿದ ದಫ್ತರಗಳು ಅಥವಾ ಕಟ್ಟುಗಳ ಸಂಖ್ಯೆಯನ್ನು ನಮೂದು ಮಾಡಬೇಕು.)

ಡೈರಿಯನ್ನು ಬರಿಯತಕ್ಕ ಕಾಲದಲ್ಲಿ ಗಮನಿಕೆ ಕೊಡತಕ್ಕ ವಿಷಯಗಳು.

1. ಪ್ರತಿ ರಿಕಾರ್ಡ್ ಕೀಪರು, ಅಸಿಸ್ಟೆಂಟ್ ರಿಕಾರ್ಡ್ ಕೀಪರು ಮತ್ತು ದಫ್ತರಬಂದಿಯು ಸಹಾ ಮೇಲ್ಕಂಡ ನಮೂನೆ ಅನುಸರಿಸಿ ಒಂದು ಪುಸ್ತಕವನ್ನಿಟ್ಟುಕೊಂಡು ತಿಂಗಳು ಆಖೈರುವರಿಗೆ ತಾನು ಪ್ರತಿದಿವಸವೂ ಮಾಡುವ ಕೆಲಸವನ್ನು ಆಯಾಯ ದಿವಸವೇ ಅದರಲ್ಲಿ ದಾಖಲ್ಮಾಡಿಕೊಂಡು ನಂತರ ಒಂದು ಗೋಷ್ವಾರೆ ತಯಾರು ಮಾಡಿ ಅದನ್ನು ಮಾರನೇ ತಿಂಗಳು 5ನೆ ತಾರೀಖು ಒಳಗಾಗಿ ತಾಲ್ಲೂಕು ಅಮಲ್ದಾರ್ರು ಅಥವಾ ಶಿರಸ್ತೆದಾರ್ರು ಮುಖಾಂತರವಾಗಿ ರಿಕಾರ್ಡ್ ಸಾರ್ಟಿಂಗ್ ಇನ್ಸ್‌ಪೆಕ್ಟರವರಿಗೆ ಕಳುಹಿಸಿಕೊಡಬೇಕು. ಡೈರಿಯ ಅಸಲು ಪ್ರತಿಯನ್ನು ಮೇಲು ತನಿಖೆಗೋಸ್ಕರ ಬಂದಾಗ್ಯೆ ಹಾಜರ್ಮಾಡಲು ಏಲೆ ಇಟ್ಟಿರತಕ್ಕದ್ದು.

2. ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಶಿರಸ್ತೆದಾರ್ರು ಡೈರಿಯಲ್ಲಿ ದಾಖಲಾಗಿರುವ ಮೇರೆಗೆ ಕೆಲಸ ನಡದು ಇದೆಯೇ ಎಂಬುವದನ್ನು ಧೃಢಪಡಿಸಿಕೊಂಡು ಅರೀತಿ ಸರಿಯಾಗಿ ಕೆಲಸ ನಡದು ಇರುವದನ್ನು ತಾವು ತನಿಖೆ ಮಾಡಿರುವ ಬಗ್ಯೆ ಪ್ರತಿ ವಾರದಲ್ಲೂ ಡೈರಿಯಲ್ಲಿ ಸರಟಿಫೈ ಮಾಡಬೇಕು.

3. ಅಮಲ್ದಾರ್ರು ಮತ್ತು ಟ್ರೆಜರ ಅಸಿಸ್ಟೆಂಟ್ ಕಮ್ಮಿಷನರವರೂ ಸಹಾ ನಡದಿರುವ ಕೆಲಸವನ್ನು ತನಿಖೆ ಮಾಡಿ ತಮ್ಮ ಷರಾನಿಶಿ ಡೈರಿಯಲ್ಲಿ ರುಜು ಮಾಡಬೇಕು. ಈ ಷರಾಗಳ ಗೋಷ್ವಾರೆ ಒಂದನ್ನು ತಯಾರ್ಮಾಡಿಸಿ ಇನ್ಸ್‌ಪೆಕ್ಟರವರಿಗೆ ಕಳುಹಿಸತಕ್ಕ ಮಾಹೇವಾರೀ ಗೋಷ್ವಾರೆಗಳ ಸಂಗಡ ರವಾನಿಸುತ್ತಾ ಬರಬೇಕು.

4. ಸದರಿ ಡೈರಿಯ 1, 2, 3, ಮತ್ತು 4ನೆ ಮೇಸ್ತಕುಗಳಲ್ಲಿ ಸಂಖ್ಯೆಗಳನ್ನು ಮಾತ್ರ ನಮೂದಿಸಬೇಕು. 5 ಮತ್ತು 6ನೆ ಮೇಸ್ತಕುಗಳಲ್ಲಿ, ಮಾಡಿರುವ ಕೆಲಸದ ಸ್ವಭಾವವನ್ನ ತಿಳಿಸಬೇಕಾದರೆ ಅತಿ ಹೆಚ್ಚು ತಪಶೀಲು ಕೊಡುವ ಪ್ರಕೃತವಿಲ್ಲ. "ಏ" ಅಥವಾ "ಬಿ" ಸಮುದಾಯದ ಇಂಥಾ ಉಪಭಾಗಕ್ಕೆ ಸಂಬಂಧಪಟ್ಟ ಇಷ್ಟು ಕಟ್ಟುಗಳು (Files) ಅಥವಾ ಗ್ರಾಮ ಅಥವಾ ಸರ್ವೆ ಲೆಕ್ಕಗಳೂ ಇಂಥಾ ಸಾಲ್‌ಬಾಬತಿನದು ಎಂಬ ತಪಸೀಲು ಮಾತ್ರ ನಮೂದು ಮಾಡಿದರೆ ಸಾಕಾಗಿ ಇದೆ. ಡೈರಿಯನ್ನು ಬರಿಯುವದಕ್ಕೆ ಹತ್ತು ನಿಮಿಷಗಳ ಕಾಲಕ್ಕಿಂತಲೂ ಹೆಚ್ಚಾಗಿ ತೆಗದುಕೊಳ್ಳಕೂಡದು.

5. ಈ ಮೇಲ್ಕಂಡ ನಮೂನೆ ಅನುಸರಿಸಿ ಡೈರಿ ಇಡತಕ್ಕದ್ದನ್ನು 1907ನೆ ಅಕ್ಟೋಬರ್ ಮಾಹೆ ಲಾಗಾಯಿತು ಜಾರಿಯಲ್ಲಿ ತರಬೇಕು.

ಎ. ರಂಗಸ್ವಾಮ್ಯೆಯ್ಯಂಗಾರ್,
ರೆವಿನ್ಯೂ ಕಮಿಷನರ್.

ಫಾರೆಸ್ಟ್ ಇಲಾಖಾ.

ಸಂಡಲ್ ಹರಾಜ್ ನೋಟಿಫಿಕೇಷನ್.

ತಾರೀಖು 24ನೆ ಆಗಸ್ಟ್ 1907ನೆ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಸರಕಾರದ ಶ್ರೀಗಂಧದ ಸಾಲಿಯಾನಾ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರದರ ಬಾಜಾದಲ್ಲಿ ನಮೂದಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡೆಸಲ್ಪಡುವದು:—

ಡಿಸ್ಟ್ರಿಕ್ಟು.	ಕೋಠಿ.	ಹರಾಜು ತಾರೀಖು.	ಸುಮಾರು ಮೊತ್ತ.
			ಟನ್‌ಗಳು.
ಶಿವಮೊಗ್ಗ ...	ತೀರ್ಥಹಳ್ಳಿ ..	18ನೆ ನವಂಬರ 1907 ...	200
ಡಿಟೋ ...	ಸಾಗರ ...	21ನೆ ಡಿಟೋ ..	150
ಡಿಟೋ ..	ಶಿವಮೊಗ್ಗ ...	25ನೆ ಡಿಟೋ ...	500
ಕಡೂರು	ತರೀಕೆರೆ ...	28ನೆ ಡಿಟೋ ...	250
ಡಿಟೋ ..	ಚಿಕ್ಕಮಗಳೂರು ..	2ನೆ ಡಿಸೆಂಬರ 1907 ...	350
ಹಾಸನ ..	ಹಾಸನ ...	5ನೆ ಡಿಟೋ ...	150
ಬೆಂಗಳೂರು ..	ಬೆಂಗಳೂರು ...	9ನೆ ಡಿಟೋ ..	100
ಮೈಸೂರು ...	ಶ್ರೀರಂಗಪಟ್ಟಣ ...	12ನೆ ಡಿಟೋ ...	250
ಡಿಟೋ ..	ಹುಣಸೂರು ...	16ನೆ ಡಿಟೋ ...	500
		ಜಮ್ಲಾ ..	2,450

2. ಪ್ರತಿ ಕೋಠಿಯಲ್ಲಿಯೂ ಹರಾಜಾಗುವ ಸ್ಥಳ ಸುಮಾರು ಲಾಟು, ಮೊತ್ತ ಮತ್ತು ಇತರ ತಪಶೀಲುಗಳು ಬರುವ ಅಕ್ಟೋಬರ್ ಮಾಹೆಯ ಆಖೈರುನಲ್ಲಿ ತಿಳಿಯಪಡಿಸುತ್ತೆ.

ಎಂ. ಮುತ್ತಣ್ಣ,
ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ಪ್ರಕಟನೆ.

ಶಿವಮೊಗ್ಗ ಡಿಸ್ಟ್ರಿಕ್ಟು, ಶಿವಮೊಗ್ಗ-ಹೊನ್ನಾಳಿ ತಾಲ್ಲೂಕು ಹರ್ಮಗಟ್ಟ ಫಾರೆಸ್ಟನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ 1907ನೆ ಇಸವಿ ಸೆಪ್ಟಂಬರು 5ನೆ ತಾರೀಖಿನ ಗೆಜೆಟ್ಟಿನ ಕನ್ನಡ 2ನೆ ಭಾಗದ 426-427ನೆ ಪೇಜುಗಳಲ್ಲಿ ವಿವರಿಸಿರುತ್ತೆ.

ಕಡೂರು ಡಿಸ್ಟ್ರಿಕ್ಟು ಎಡೆಹಳ್ಳಿ ಸಬ್ ತಾಲ್ಲೂಕು ಮತ್ತು ಚಿಕ್ಕಮಗಳೂರು ತಾಲ್ಲೂಕಿನಲ್ಲಿರುವ ದೇವದಾನ ಫಾರೆಸ್ಟನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ 1907ನೆ ಇಸವಿ ಸೆಪ್ಟಂಬರು 5ನೆ ತಾರೀಖಿನ ಗೆಜೆಟ್ಟಿನ ಕನ್ನಡ 2ನೆ ಭಾಗದ 428-429ನೆ ಪೇಜುಗಳಲ್ಲಿ ವಿವರಿಸಿರುತ್ತೆ.

ಎಂ. ಶಾಮರಾವ್,
ಮೈಸೂರು ಸೀಮೆಯ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರ.

ವಿದ್ಯಾಭ್ಯಾಸದ ಇಲಾಖಾ.

ಮೈಸೂರು ದೇಶೀಯ ಪರೀಕ್ಷೆಗಳು.

ಡಿ. ನಂಬರು 8ನೆಯ ಪ್ರಕಟನ ಪತ್ರಿಕೆ, ಸ್ 1907ನೆಯ ಇಸವಿ ಸೆಪ್ಟಂಬರು ತಾರೀಖು 6.

1. ಲೋವರ ಸೆಕಂಡರೀ ಪರೀಕ್ಷೆಯು ಸ್ 1907ನೆಯ ಇಸವಿ ನವೆಂಬರ ತಿಂಗಳು ಸೋಮವಾರ 18ನೆಯ ತಾರೀಖಿನಿಂದ ಆರಂಭವಾಗಿ, ಪ್ರತಿ ಡಿಸ್ಟ್ರಿಕ್ಟಿನ ಮುಖ್ಯಸ್ಥಳ (Head-quarters) ದಲ್ಲಿಯೂ, ಮತ್ತು ಚಿಕ್ಕಬಳ್ಳಾಪುರದಲ್ಲಿಯೂ, ಚನ್ನಪಟ್ಣದಲ್ಲಿಯೂ ನಡೆಯಿಸಲ್ಪಡುವುದು.

2. ದೇಶಭಾಷೆಯ ಅಪ್ಪರ್ ಸೆಕಂಡರೀ ಪರೀಕ್ಷೆಯು ಸ್ 1907ನೆಯ ಇಸವಿ ನವೆಂಬರ ತಿಂಗಳು ಬುಧವಾರ 20ನೆಯ ತಾರೀಖಿನಿಂದ ಆರಂಭವಾಗಿ ಮೇಲೆ ನಮೂದಿಸಲ್ಪಟ್ಟಿರುವ ಎಲ್ಲಾ ಸ್ಥಳಗಳಲ್ಲಿಯೂ ನಡೆಯಿಸಲ್ಪಡುವುದು.

3. ಕರ್ಣಾಟಕ ಪಂಡಿತಪರೀಕ್ಷೆಯು ಸ್ 1907ನೆಯ ಇಸವಿ ನವೆಂಬರ ತಿಂಗಳು ಸೋಮವಾರ 18ನೆಯ ತಾರೀಖಿನಿಂದ ಆರಂಭವಾಗಿ ಮೈಸೂರಲ್ಲಿ ನಡೆಯಿಸಲ್ಪಡುವುದು.

4. ಉಪಾಧ್ಯಾಯ ನಿರ್ಣಯ ಪತ್ರಿಕೆಗಳ ಅಪ್ಪರ ಸೆಕಂಡರಿ ಮತ್ತು ಲೋವರ ಸೆಕಂಡರಿ ಅಂತಸ್ತುಗಳ ಬರಹ ಪರೀಕ್ಷೆಯು (Written Examination) ಸ್ 1907ನೆಯ ಇಸವಿ ನವೆಂಬರ ತಿಂಗಳು ಶುಕ್ರವಾರ 1ನೆಯ ತಾರೀಖಿನಿಂದ ಆರಂಭವಾಗಿ ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ನಡೆಯಿಸಲ್ಪಡುವುದು; ಮತ್ತು ಪ್ರೈಮರಿ ಅಂತಸ್ತಿನ ಬರಹ ಪರೀಕ್ಷೆಯು ಸ್ 1907ನೆಯ ಇಸವಿ ನವೆಂಬರ ತಿಂಗಳ ತಾರೀಖು 23ನೆಯ ಶನಿವಾರದ ದಿವಸದಲ್ಲಿ, ಪ್ರತಿ ಡಿಸ್ಟ್ರಿಕ್ಟಿನ ಮುಖ್ಯ ಸ್ಥಳದಲ್ಲಿಯೂ, ಮತ್ತು ಚಿಕ್ಕಬಳ್ಳಾಪುರದಲ್ಲಿಯೂ, ಚನ್ನಪಟ್ಣದಲ್ಲಿಯೂ ನಡೆಯಿಸಲ್ಪಡುವುದು.

5. ಪರೀಕ್ಷೆಯು ಇದರಡೀ ಕಂಡ ಕಾಲ ಮತ್ತು ವಿಷಯಗಳ ಕ್ರಮಗಳನ್ನನುಸರಿಸಿ ನಡೆಯಿಸಲ್ಪಡುವವು:—

ಮೈಸೂರು ಲೋವರ ಸೆಕಂಡರಿ ಪರೀಕ್ಷೆ.

ದಿವಸ	ಕಾಲ.	ವಿಷಯಗಳು.	ಅಂಕಗಳು.
ನವೆಂಬರು 18ನೆ ತಾ॥ ಸೋಮವಾರ.	10ರಿಂದ 12—30 ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಇಂಗ್ಲಿಷ್ ವ್ಯಾಕರಣ ಮತ್ತು ಭಾಷಾಗ್ರಂಥ.	60
		ಸಂಸ್ಕೃತದ ಮತ್ತು ಫಾರಸಿಯ ವ್ಯಾಕರಣ ಮತ್ತು ಭಾಷಾ ಗ್ರಂಥಗಳು	65
	1—30ರಿಂದ 2—30ರ ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಭಾಷಾಂತರೀಕರಣ—ಇಂಗ್ಲಿಷ್, ಸಂಸ್ಕೃತ, ಫಾರಸಿ	
		ಇಂಗ್ಲಿಷ್ ಪ್ರಬಂಧರಚನೆ, ಇಂಗ್ಲೀಷನ್ನು ದೇಶಭಾಷೆಯಾಗಿ ಉಳ್ಳಂಥವರಿಗೆ	35
	2—35ರಿಂದ 3—5 ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಉಕ್ತಲೇಖನ—ಇಂಗ್ಲೀಷ್ ...	15
		ಸಂಸ್ಕೃತ; ಫಾರಸಿ ...	10
	3—10ರಿಂದ 3—40 ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಕೈಬರವಣಿಗೆ. ಇಂಗ್ಲೀಷ್; ಸಂಸ್ಕೃತ; ಫಾರಸಿ	10
	3—45ರಿಂದ 4—15 ವರೆಗೆ	ಉರ್ದು ಉಕ್ತಲೇಖನ	10
	4—20ರಿಂದ 4—50 ವರೆಗೆ	ಉರ್ದು ಕೈಬರವಣಿಗೆ	10
ನವೆಂಬರು 19ನೆ ತಾ॥ ಮಂಗಳವಾರ.	10ರಿಂದ 1ರ ವರೆಗೆ	ಕನ್ನಡ ಪ್ರಥಮ ಅಥವಾ ದ್ವಿತೀಯ ಭಾಷೆ—	
		ಕನ್ನಡ ವ್ಯಾಕರಣ, ಭಾಷಾಗ್ರಂಥ ಮತ್ತು ಪ್ರಬಂಧರಚನೆ ...	100
		ಫಾರಸಿ ದ್ವಿತೀಯ ಭಾಷೆ—	
		ಫಾರಸಿ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ...	100
	2ರಿಂದ 5ರ ವರೆಗೆ	ಸಂಸ್ಕೃತ ದ್ವಿತೀಯ ಭಾಷೆ—	
		ಸಂಸ್ಕೃತ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ...	100
		ಲಾರ್ಟಿ ದ್ವಿತೀಯ ಭಾಷೆ—	
		ಲಾರ್ಟಿ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ...	120
		ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ—	
		ತೆಲುಗು ಮತ್ತು ಉರ್ದು, ವ್ಯಾಕರಣ, ಭಾಷಾಗ್ರಂಥಗಳು ಮತ್ತು ಪ್ರಬಂಧರಚನೆ ...	100

ದಿವಸ.	ಕಾಲ.	ವಿಷಯಗಳು.	ಅಂಕಗಳು.
ನವೆಂಬರು 20ನೆ ತಾ|| ಬುಧವಾರ.	10ರಿಂದ 12 ವರೆಗೆ	ಅಂಕಗಣಿತ	100
	12–5ರಿಂದ 12–35 ವರೆಗೆ	ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ— ಕನ್ನಡ ಮತ್ತು ತೆಲುಗು ಅಕ್ಷರ ಸಂಯೋಜನ	10
	12–40ರಿಂದ 1–10 ವರೆಗೆ	ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ— ಕನ್ನಡ ಮತ್ತು ತೆಲುಗು ಕೈ ಬರವಣಿಗೆ ...	10
	2ರಿಂದ 3–30ವರೆಗೆ	ಆರೋಗ್ಯ ಶಾಸ್ತ್ರ	100
	3–45ರಿಂದ 4–15 ವರೆಗೆ	ಐಚ್ಛಿಕ ದ್ವಿತೀಯ ಭಾಷೆ— ಸಂಸ್ಕೃತ ಮತ್ತು ಫಾರಸಿ ಅಕ್ಷರ ಸಂಯೋಜನ ...	10
	4–20ರಿಂದ 4–50 ವರೆಗೆ	ಐಚ್ಛಿಕ ದ್ವಿತೀಯ ಭಾಷೆ— ಸಂಸ್ಕೃತ ಮತ್ತು ಫಾರಸಿ ಕೈ ಬರವಣಿಗೆ	10
ನವೆಂಬರ್ 21ನೆ ತಾ|| ಗುರುವಾರ	10ರಿಂದ 1ರ ವರೆಗೆ	ಚರಿತ್ರೆ, ಭೂಗೋಳಶಾಸ್ತ್ರ ಮತ್ತು ಭೂಪಟ ಬರೆಯುವುದು ...	120
	2ರಿಂದ 3–30 ವರೆಗೆ	ವ್ಯವಸಾಯ ಶಾಸ್ತ್ರ	100
ನವೆಂಬರ್ 22ನೆ ತಾ|| ಶುಕ್ರವಾರ	10ರಿಂದ 11–30 ವರೆಗೆ	ಕ್ಷೇತ್ರಗಣಿತ	100
	11–35ರಿಂದ 1-5 ವರೆಗೆ	ಪ್ರಾಕೃತಿಕ ಭೂಗೋಳ ಶಾಸ್ತ್ರ	100
	2 ರಿಂದ 3—30 ವರೆಗೆ	ಹೊಲಿಗೆ	50
		ಆಂಗ್ಲೇಯರ ಚರಿತ್ರೆ	100
	3—35ರಿಂದ 5–5ವರೆಗೆ	ಪಾಕಶಾಸ್ತ್ರ	50
		ಗೃಹಕೃತ್ಯ ನಡೆಯಿಸುವ ಕ್ರಮ	100

ಮೈಸೂರು ದೇಶಭಾಷೆಯ ಅಪ್ಪರ್ ಸೆಕೆಂಡರಿ ಪರೀಕ್ಷೆ.

ದಿನ.	ಘಂಟೆ.	ವಿಷಯಗಳು.	ಅಂಕಗಳು.	
ನವೆಂಬರ್ 20ನೆ ತಾ|| ಬುಧವಾರ	10—1	ಪ್ರಥಮಭಾಷೆ—ಕನ್ನಡ ಅಥವಾ ಉರ್ದು ಗ್ರಂಥಗಳು ...	60	130
	2—4	ಅದೇ ಡಿಟೋ ಪ್ರಾಥವ್ಯಾಕರಣ ...	40	
	4·5—5·5	ಅದೇ ಡಿಟೋ ಪ್ರಬಂಧರಚನೆ ..	30	
ನವೆಂಬರ್ 21ನೆ ತಾ|| ಗುರುವಾರ	10—1	ಸಂಸ್ಕೃತ ಗ್ರಂಥಗಳು	60	120
		ಫಾರಸಿ ಗ್ರಂಥಗಳು ಮತ್ತು ವ್ಯಾಕರಣ ..	60	
	2—5	ಸಂಸ್ಕೃತ ವ್ಯಾಕರಣ	60	
		ಅರಾಬಿಕ್ ಗ್ರಂಥಗಳು ಮತ್ತು ವ್ಯಾಕರಣ ..	60	
ನವೆಂಬರ್ 22ನೆ ತಾ|| ಶುಕ್ರವಾರ	10—1	ಭಾಷಾಂತರೀಕರಣ-ಸಂಸ್ಕೃತದಿಂದ ಕನ್ನಡಕ್ಕೆ, ಕನ್ನಡದಿಂದ ಸಂಸ್ಕೃತಕ್ಕೆ.	60	60
	10—11·30	ಭಾಷಾಂತರೀಕರಣ ಉರ್ದುಯಿಂದ ಫಾರ್ಸಿಗೆ	25	
	11·35—1·5	ಅದೇ ಉರ್ದುಯಿಂದ ಅರಾಬಿಕ್‌ಗೆ ..	35	
ನವೆಂಬರ್ 23ನೆ ತಾ|| ಶನಿವಾರ	10—12·30	ಅಂಕಗಣಿತ	50	120
	1·30—3·30	ರೇಖಾಗಣಿತ, ಕ್ಷೇತ್ರಗಣಿತ ..	40	
	3·35—5·5	ಬೀಜಗಣಿತ ..	30	
	2—5	ಸರಳಹಸ್ತ ನಕ್ಷೆಯ ಬರವಣಿಗೆ (Free hand drawing)	70	
ನವೆಂಬರ್ 25ನೆ ತಾ|| ಸೋಮವಾರ	10—12	ಪ್ರಾಕೃತಿಕ ಶಾಸ್ತ್ರ (Physical science)	40	120
	1—3	ಆರೋಗ್ಯಶಾಸ್ತ್ರ ...	40	
	3·5—5·5	ಕೃಷಿಶಾಸ್ತ್ರ	40	
ನವೆಂಬರ್ 26ನೆ ತಾ|| ಮಂಗಳವಾರ	10—1	ಚರಿತ್ರೆ ..	50	100
	2—5	ಭೂಗೋಳ ಶಾಸ್ತ್ರ	50	
			ಜುಮ್ಲಾ	650

ಪರೀಕ್ಷ್ಯೆಯರಿಗೆ ಹೊಲಿಗೆಯಲ್ಲಿಯೂ ಸಂಗೀತದಲ್ಲಿಯೂ ಪರೀಕ್ಷೆಯು ಏಳನೇ ದಿನ ತತ್ಪೂರ್ವ ಪ್ರಕಟಿಸಲ್ಪಡುವ ಸ್ಥಳ, ಕಾಲಗಳಲ್ಲಿ ನಡೆಯುವುದು.

ಕರ್ಣಾಟಕ ಪಂಡಿತ ಪರೀಕ್ಷೆ.

ದಿನ.	ಘಂಟೆ.	ವಿಷಯಗಳು.	ಅಂಕಗಳು.	
ನವೆಂಬರ್ 18ನೆ ತಾ॥ ಸೋಮವಾರ	10—1 2—5	ಕನ್ನಡ ವ್ಯಾಕರಣ ... ಕನ್ನಡ ಛಂದಸ್ಸು ಮತ್ತು ಅಲಂಕಾರ ...	120 80	200
ನವೆಂಬರ್ 19ನೆ ತಾ॥ ಮಂಗಳವಾರ	10—1 2—5	ಕನ್ನಡ ಗ್ರಂಥಗಳು ಮೊದಲನೇ ಪತ್ರಿಕೆ ... ಅದೇ ಎರಡನೇ ಪತ್ರಿಕೆ ...	100 100	400
ನವೆಂಬರ್ 20ನೆ ತಾ॥ ಬುಧವಾರ	10—1 2—5	ಅದೇ ಮೂರನೇ ಪತ್ರಿಕೆ ... ಅದೇ ನಾಲ್ಕನೇ ಪತ್ರಿಕೆ ...	100 100	
ನವೆಂಬರ್ 21ನೆ ತಾ॥ ಗುರುವಾರ	10—1 2—5	ಕನ್ನಡ ಪ್ರಬಂಧರಚನೆ ... ಭಾಷಾಂತರೀಕರಣ	100 100	
ನವೆಂಬರ್ 22ನೆ ತಾ॥ ಶುಕ್ರವಾರ	10—1 2—5	ಸಂಸ್ಕೃತ ವ್ಯಾಕರಣ ... ಸಂಸ್ಕೃತ ಛಂದಸ್ಸು ಮತ್ತು ಅಲಂಕಾರ ...	80 120	200
ನವೆಂಬರ್ 23ನೆ ತಾ॥ ಶನಿವಾರ	10—1 2—5	ಸಂಸ್ಕೃತ ಗ್ರಂಥಗಳು ಮೊದಲನೇ ಪತ್ರಿಕೆ ... ಅದೇ ಎರಡನೇ ಪತ್ರಿಕೆ ...	100 100	200

ಉಪಾಧ್ಯಾಯ ನಿರ್ಣಯ ಪತ್ರಿಕಾ ಪರೀಕ್ಷೆಗಳು.

ದಿವಸ.	ಕಾಲ.	ಅಪ್ಪರ್ ಸೆಕಂಡರಿ ಅಂತಸ್ತಿನ ವಿಷಯಗಳು.	ಕಾಲ.	ಲೋವರ್ ಸೆಕಂಡರಿ ಅಂತಸ್ತಿನ ವಿಷಯಗಳು.	ಕಾಲ.	ಪ್ರೈಮರಿ ಅಂತಸ್ತಿನ ವಿಷಯಗಳು.
ಮೊದಲನೆಯ ದಿವಸ.	10ರಿಂದ 1ರ ವರೆಗೆ	(1) ಲೋವರ್ ಸೆಕಂಡರಿ ಮತ್ತು ಪ್ರೈಮರಿ ಸ್ಕೂಲುಗಳಲ್ಲಿ ಓದಬೇಕಾದ ವಿಷಯಗಳನ್ನು ಕಲಿಸುವ ಶಾಸ್ತ್ರ ಮತ್ತು ಅನುಭವ (The theory and practice of teaching) ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ (The art of oral teaching) ಕಿಂಡರ್ ಗಾರ್ಟನ್ ವಿಧಿಗಳು ಮತ್ತು ಶಿಕ್ಷಾ ಕ್ರಮ (Kindergarten Principles and methods), ಮತ್ತು ಕೊಟ್ಟ ಮೂರು ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಪಾಠ ಹೇಳುವ ಟಿಪ್ಪಣಿ (Notes of a lesson on one of three given subjects.)	10ರಿಂದ 1ರ ವರೆಗೆ	(1) ಅಪ್ಪರ್ ಪ್ರೈಮರಿ ಸ್ಕೂಲುಗಳಲ್ಲಿ ಓದಬೇಕಾದ ವಿಷಯಗಳನ್ನು ಕಲಿಸುವ ಕ್ರಮಗಳು, ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ, ಕಿಂಡರ್‌ಗಾರ್ಟನ್ ವಿಧಿಗಳು ಮತ್ತು ಶಿಕ್ಷಾ ಕ್ರಮ, ಮತ್ತು ಕೊಟ್ಟ ಮೂರು ವಿಷಯಗಳಲ್ಲಿ ಯಾವದಾದರೂ ಒಂದು ವಿಷಯವನ್ನು ಪಾಠ ಹೇಳುವ ಟಿಪ್ಪಣಿ.	10ರಿಂದ 12ರ ವರೆಗೆ	(1) ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ, ಕಿಂಡರ್ ಗಾರ್ಟನ್ ವಿಧಿಗಳು ಮತ್ತು ಶಿಕ್ಷಾ ಕ್ರಮ, ಮತ್ತು ಕೊಟ್ಟ ಮೂರು ವಿಷಯಗಳಲ್ಲಿ ಯಾವದಾದರೂ ಒಂದು ವಿಷಯವನ್ನು ಪಾಠ ಹೇಳುವ ಟಿಪ್ಪಣಿ.
	2ರಿಂದ 5ರ ವರೆಗೆ	(2)(a) ಲೋವರ್ ಸೆಕಂಡರಿ ಮತ್ತು ಪ್ರೈಮರಿ ಸ್ಕೂಲುಗಳ ಸಂವಿಧಾನ (Organization) ಸ್ಕೂಲ್ ರಿಜಸ್ಟರುಗಳ ಮಾದಿರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಖ್ಖಗಳನ್ನು ತಯಾರ್ಮಾಡುವ ರೀತಿ ಮತ್ತು ಸರ್ಕಾರೀ ಕಾಗದಗಳನ್ನು ಬರಿಯುವ ಸರಿಯಾದ ಕ್ರಮ.	2ರಿಂದ 5ರ ವರೆಗೆ	(2) ಯಾವದಾದರೂ ಒಂದು ಪ್ರೈಮರಿ ಸ್ಕೂಲಿನ ಸಂವಿಧಾನ (Organization) ಮತ್ತು ವ್ಯವಸ್ಥೆ (Discipline) ಸ್ಕೂಲ್ ರಿಜಸ್ಟರುಗಳ ಮಾದಿರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಖ್ಖಗಳನ್ನು ತಯಾರ್ಮಾಡುವ ರೀತಿ.	2ರಿಂದ 4ರ ವರೆಗೆ	(2) ಯಾವದಾದರೂ ಒಂದು ಲೋವರ್ ಪ್ರೈಮರಿ ಸ್ಕೂಲಿನ ಸಂವಿಧಾನ (Organization) ಮತ್ತು ವ್ಯವಸ್ಥೆ (Discipline) ಸ್ಕೂಲ್ ರಿಜಸ್ಟರುಗಳ ಮಾದಿರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಖ್ಖಗಳನ್ನು ತಯಾರ್ಮಾಡುವರೀತಿ.

ದಿವಸ.	ಕಾಲ.	ಅಪ್ಪರ್ ಸೆಕಂಡರಿ ಅಂತಸ್ತಿನ ವಿಷಯಗಳು.	ಕಾಲ.	ಲೋವರ್ ಸೆಕಂಡರಿ ಅಂತಸ್ತಿನ ವಿಷಯಗಳು.	ಕಾಲ.	ಪ್ರೈಮರಿ ಅಂತಸ್ತಿನ ವಿಷಯಗಳು.
2ನೆಯ ದಿವಸ	10 ರಿಂದ 12ರ ವರೆಗೆ	(2) (b) ನೀತ್ಯನುಶಾಸನ ವಿಧಾನ (Principles of moral discipline) ಶೀಲಸ್ವಭಾವೋತ್ಪಾದನ (Formation of habits and character)				

ಇದರಡಿ ಕಂಡ ನಿಬಂಧನೆಗಳಿಗೆ ವಿದ್ಯಾರ್ಥಿಗಳು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು:—

(1) ಪರೀಕ್ಷೆಯು ಆರಂಭಿಸುವದಕ್ಕೆ ಕ್ಲಿಪ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವ ವರೆಗೂ ಪರೀಕ್ಷಾ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ವಿದ್ಯಾರ್ಥಿಗೂ ಅಪ್ಪಣೆ ಕೊಡುವದಿಲ್ಲವು. ಮತ್ತು ಅಂಥಾ ಅರ್ಧ ಘಂಟೆ ಕಳೆದಮೇಲೆ ಬರುವ ಯಾವ ವಿದ್ಯಾರ್ಥಿಗಳಿಗೂ ಪ್ರವೇಶಕ್ಕೆ ಅವಕಾಶ ಕೊಡಲ್ಪಡಲಾರದು.

(2) ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷಾ ಕೊಠಡಿಯನ್ನು ಒಂದಾವರ್ತಿ ಬಿಟ್ಟು ಬಂದನಂತರ ಪುನಹ ಪ್ರವೇಶಿಸಲು ಯಾವ ವಿದ್ಯಾರ್ಥಿಗೂ ಅವಕಾಶ ಉಂಟಾಗಲಾರದು. ಅಲ್ಲದೆ ತನ್ನ ಉತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟ ವಿನಹ ಪರೀಕ್ಷಾ ಸ್ಥಳವನ್ನು ಬಿಟ್ಟು ಬರುವದಕ್ಕೆ ಸಹ ಅವಕಾಶ ಕೊಡುವದಿಲ್ಲವು.

(3) ಯಾವ ವಿದ್ಯಾರ್ಥಿಯೇ ಆಗಲಿ ಮತ್ತೊಬ್ಬ ವಿದ್ಯಾರ್ಥಿಯೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ಯಾವ ವಿಧದಿಂದಲಾದರೂ ಬಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೂಡಲೆ ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವದಲ್ಲದೆ ಸದರೀ ಸಂಗತಿಯು ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವದು.

(4) ಪರೀಕ್ಷಾ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ, ರೂಲರುಗಳನ್ನಾಗಲಿ, ಪುಸ್ತಕಗಳನ್ನಾಗಲಿ, ಬರದ ಕಾಗದಗಳನ್ನಾಗಲಿ, ಅಥವಾ ಇನ್ಯಾವ ವಿಧವಾದ ಕಾಗದ ಪತ್ರಗಳನ್ನಾಗಲಿ, ತೆಗದುಕೊಂಡು ಹೋಗಲು ಯಾವ ವಿದ್ಯಾರ್ಥಿಗಳಿಗೂ ಯಾವ ಸಂದರ್ಭದಲ್ಲಿಯೂ ಅವಕಾಶ ಕೊಡಲ್ಪಡುವದಿಲ್ಲವು. ಯಾವ ವಿದ್ಯಾರ್ಥಿಯಾಗಲಿ, ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವದಾಗಿಯಾಗಲಿ ಅಥವಾ ಇನ್ಯಾವ ಅಕೃತ್ಯಗಳನ್ನು ನಡೆಸುತ್ತಿರುವದಾಗಿಯಾಗಲಿ, ಕಂಡುಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವದಲ್ಲದೆ ಸದರಿ ನಡವಳಿಕೆಯು ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವದು.

(5) ವಿದ್ಯಾರ್ಥಿಯು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಎದ್ದು ನಿಂತು ಸೂಪರಿಂಟೆಂಡೆಂಟರು ಕಾಗದಗಳನ್ನು ತೆಗದುಕೊಳ್ಳುವ ವರೆಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ವಿದ್ಯಾರ್ಥಿಯೇ ಆಗಲಿ ಮೇಲೆ ಹೇಳಿದ ರೀತಿ ನಡೆಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

(6) ವಿದ್ಯಾರ್ಥಿಯ ಹೆಸರು, ರಿಜಿಸ್ಟರ್ ನಂಬರ್ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

(7) ಪ್ರಶ್ನೆ ಪತ್ರಗಳು ವಿನಹ ಯಾವ ಕಾಗದಗಳನ್ನಾಗಲಿ ಪರೀಕ್ಷಾ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ಕೊಡುವದಿಲ್ಲವು.

(8) ವಿದ್ಯಾರ್ಥಿಗಳು ಕಾಗದಗಳನ್ನ ಹರಿಯದಂತೆಯೂ ಮತ್ತು ನೆಲದಮೇಲೆ ಕಾಗದಗಳನ್ನ ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. ಕಟ್ಟುಹೋದ ವಿಶಿಷ್ಟ ಕಾಗದಗಳೂ ವಿದ್ಯಾರ್ಥಿಯು ಬರೆಯುತ್ತಲಿದ್ದ ಮೇಜಿನ ಮೇಲೆಯೇ ಬಿಡಲ್ಪಡಬೇಕು.

H. J. BHABHA.
ಇನ್‌ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಶಿವಮೊಗ್ಗ ಡಿಸ್ಟ್ರಿಕ್ಟು.

1907ನೆ ಇಸವಿ ಆಗಸ್ಟು ತಾರೀಖು 5ನೆ ಸೋಮವಾರ ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ನಡೆದ ಡಿಸ್ಟ್ರಿಕ್ಟು ಬೋರ್ಡು ಪ್ರೊಸೀಡಿಂಗ್ಸ್‌ಯಾನೆ ನಡವಳಿಕೆಗಳು.

ಹಾಜರು.

ಉದ್ಯೋಗದ ಮೆಂಬರುಗಳು.

1. ಮೆ|| ಎಂ. ನಾರಾಯಣರಾವ್, ಡೆಪ್ಯುಟಿ ಕಮಿಷನರ್, ಮತ್ತು ಪ್ರೆಸಿಡೆಂಟ್.
2. ,, ಮಹಮ್ಮದ್ ರಾಜಾ, ಶಿವಮೊಗ್ಗ ಡಿ|| ಅಸಿಸ್ಟೆಂಟ್ ಕಮಿಷನರ್.
3. ,, ಎಸ್. ಸುಬ್ಬರಾವ್, ಸಾಗರ ಡಿವಿಜನ್, ಅಸಿಸ್ಟೆಂಟ್ ಕಮಿಷನರ್.
4. ,, ಎ. ವೇದಾಂತದೇಶಿಗಂ ಅಯ್ಯಂಗಾರ್, ವೈಸ್ ಪ್ರೆಸಿಡೆಂಟ್ ಮತ್ತು ಟ್ರೆಜರಿ ಅಸಿಸ್ಟೆಂಟ್ ಕಮಿಷನರ್.

5. ಮೆ|| ಆರ್. ವಿ. ಸುಂದರಂ ಐಯ್ಯರ್, ಎಗ್ಸಿಕ್ಯೂಟಿವ್ ಇಂಜನಿಯರ್.
6. ,, ಬಿ. ಮಹಮದ್ ಉಸ್ಮಾನ್, ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟೆರಿ ಆಫಿಸರ್.
7. ,, ಬಿ. ರಾಮಯ್ಯ, ಆಕ್ಟಿಂಗ್ ಸ್ಕೂಲ್‌ಗಳ ಡೆಪ್ಯುಟಿ ಇನ್ಸ್ಪೆಕ್ಟರ್.

ಉದ್ಯೋಗಸ್ಥರಲ್ಲದ ತಾಲ್ಲೂಕು ಮೆಂಬರುಗಳು.

8. ,, ಲಾಡಿ ಅಬ್ದುಲ್ ಕರೀಂ ಸಾಹೆಬರು, ಕುಂಸಿ ಸಬ್ ತಾಲ್ಲೂಕು.
9. ,, ಹೆಚ್. ಅಡವಪ್ಪನವರು, ಚನ್ನಗಿರಿ ತಾಲ್ಲೂಕು.
10. ,, ಎನ್. ಗೋಪಾಲಪ್ಪನವರು, ಹೊನ್ನಾಳಿ ತಾಲ್ಲೂಕು.
11. ,, ಹೆಚ್. ತಿಮ್ಮಪ್ಪನವರು, ಸೊರಬ ತಾಲ್ಲೂಕು.
12. ,, ಎ. ನರಸಿಂಹಯ್ಯಂಗಾರು, ಸಾಗರ ತಾಲ್ಲೂಕು.

ಇತರ ಮೆಂಬರುಗಳು.

13. ,, ಟಿ. ಭೀಮರಾವ್, ಶಿವಮೊಗ್ಗ.
14. ,, ಖಾಜಿ ಸೈಯದ್ ಮಹಮದ್, ಶಿವಮೊಗ್ಗ.
15. ,, ದಿ ರವರೆಂಡ್ ಫಾದರ್ ಎಫ್. ವಾಲ್ಶೆ ಯವರು.
16. ,, ಎಂ. ಗುರುಶಿದ್ದಪ್ಪ, ಹೊನ್ನಾಳಿ ತಾಲ್ಲೂಕ್.
17. ,, ಹೆಚ್. ವೀರಬಸಪ್ಪನವರು, ಶಿಕಾರಿಪುರ ತಾಲ್ಲೂಕ್.
18. ,, ಕೆ. ಹಿರಿಯಣ್ಣಪ್ಪನವರು, ಸಾಗರ ತಾಲ್ಲೂಕು.

ಗ್ಯೆರ್ ಹಾಜರು.

ಉದ್ಯೋಗದ ಮೆಂಬರುಗಳು.

1. ಹೊನ್ನಾಳಿ ಡಿವಿಜನ್ ಅಸಿಸ್ಟೆಂಟ್ ಕಮಿಷನರವರು (1907ನೆ ಇಸವಿ ಜುಲೈ 1ರ ಲಾಗಾಯಿತು ಆಫೀಸ್ ವಜಾ ಆಗಿರುತ್ತದೆ).

ಉದ್ಯೋಗಸ್ಥರಲ್ಲದ ಮೆಂಬರುಗಳು.

2. ಮೆ|| ಎನ್. ಶೀತಾರಾಮಪ್ಪನವರು, (ಮೃತಪಟ್ಟಿರುತ್ತಾರೆ) ಶಿವಮೊಗ್ಗಾ.
3. ,, ಟಿ. ದ್ಯಾಮಪ್ಪನವರು, ಶಿಕಾರಿಪುರ.
4. ,, ಸಿ. ನಾಗಪ್ಪನವರು, ನಗರ.
5. ,, ಎ. ಲಕ್ಷ್ಮೀನಾರಣಪ್ಪನವರು, ತೀರ್ಥಹಳ್ಳಿ.

ಇತರ ಮೆಂಬರುಗಳು.

6. ,, ದಿ ರವರೆಂಡ್ ಮೆ|| ಎ. ಇ. ಸ್ಲೈಟಂಗೇಲ್, ಶಿವಮೊಗ್ಗ.
7. ,, ಆರ್. ಪುಟ್ಟಪ್ಪನವರು, ಸಾಗರ.

1. ಕಂಟ್ರೋಲರವರಿಂದ ಆಡಿಟಾಗಿ ಬಂದ 1906ನೆ ಡಿಸೆಂಬರ್, 1907ನೆ ಜನವರಿ, ಫೆಬ್ರವರಿ, ಮಾರ್ಚಿ ಮಾಹೆಗಳ ಡಿಸ್ಟ್ರಿಕ್ಟ್ ಫಂಡು ಮಾಹೆವಾರಿ ಲೆಖ್ಖಗಳನ್ನು ಓದಿ ಇವುಗಳನ್ನು ವಿಲೇ ಇಡಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

ಈ ಲೆಖ್ಖಗಳಲ್ಲಿನ ಒಟ್ಟು ಜಮಾ ಖರ್ಚು ಈ ಕೆಳಗೆ ತೋರಿಸಿ ಇರುತ್ತೆ.

	ಜಮಾ. ರೂ.	ಆ.	ಪೈ.	ಖರ್ಚು. ರೂ.	ಆ.	ಪೈ.
ತಾರೀಖು 1—12—06 ರಲ್ಲಿ ಶಿಲ್ಕು	1,046	9	4		...	
ಡಿಸೆಂಬರ್ 1906	1,989	4	0	5,158	3	7
ಜನವರಿ 1907	26,004	15	7	3,371	13	3
ಫೆಬ್ರವರಿ ,, ...	21,466	6	2	3,226	0	3
ಮಾರ್ಚಿ ,, ...	13,840	7	0	4,518	9	2
ಜುಮ್ಲಾ	64,347	10	1	64,347	10	1

2. 1906—07ನೆ ಸಾಲ್ ಆಖೈರಿಗೆ ಕಾಮಗಾರಿಗಳು ನಡೆದು ಬಾಕಿಯಿದ್ದು ಚಾಲ್ತಿಸಾಲಿಗೆ ಹಣ ವದಗಿಸಬೇಕಾದ್ದರ ಬಗ್ಗೆ ತಯಾರಾದ ಲೀಸ್ಟ್ ಓದಿ, ಈ ಲೀಸ್ಟನ್ನು ಗೌವರ್ನಮೆಂಟ್ ಮಂಜೂರಿ ಬಗ್ಗೆ ಕಳುಹಿಸತಕ್ಕದ್ದೆಂತಲೂ, ಈ ಬಗ್ಗೆ ಬೇಕಾದ ಒಟ್ಟು ಮೊಬಲಗು 6,730—12—0 ರೂಪಾಯಿಗೋಸ್ಕರ ಶಿವಮೊಗ್ಗ ತಾಲ್ಲೂಕು ವಿನಹ ಇತರ ತಾಲ್ಲೂಕುಗಳಲ್ಲಿ ಭಾವಿ ಕಾಮಗಾರಿಗೋಸ್ಕರವಾಗಿ ಬಡಜಟ್ಟಿನಲ್ಲಿ ದಾಖಲ್ ಮಾಡಿರುವ ಎಲ್ಲಾ ಹಣವನ್ನೂ ಹೊಸ ಕಾಮಗಾರಿ ಮತ್ತು ರಿಪೇರಿಗಳ ಬಾಬಿನಲ್ಲಿ ಇನ್‌ಕಂಪ್ಲೀಟ್ ಕಾಮಗಾರಿಗೆಂತ ಇಟ್ಟಿದ್ದ ಪೂರಾ ಮೊಬಲಗನ್ನೂ ಈ ಬಗ್ಗೆ ಉಪಯೋಗಿಸತಕ್ಕದ್ದೆಂತಲೂ ವುಳಿಯುವ ರೂಪಾಯಿ 1,340 ನ್ನು ಮುಸಾಫರಖಾನೆ ಮತ್ತು ದೊಡ್ಡ ರಿಪೇರಿ ಬಗ್ಗೆ ಬಡಜಟ್ಟಿನಲ್ಲಿ ದಾಖಲ್ ಮಾಡಿರುವದರ ಪೈಕಿ ಭರ್ತಿ ಮಾಡತಕ್ಕದ್ದೆಂತಲೂ ತೀರ್ಮಾನಿಸಲಾಯಿತು.

3. ಶಿವಮೊಗ್ಗಾ ತಾಲ್ಲೂಕ, ವಸ್ಸರಹಟ್ಟಿ ಗ್ರಾಮದಲ್ಲಿರುವ ಹೊಂಡವನ್ನು ಆಳಪಡಿಸಿ ಇದನ್ನು ಶೀದೋಭಾವಿಯನ್ನಾಗಿ ಮಾಡಲು 520 ರೂಪಾಯಿಗಳ ರಿವೈಜ್ ಅಂದಾಜಾ ಕಳುಹಿಸಿ ಇರುವದಾಗಿ ಬರೆಸಿದ ಶಿವಮೊಗ್ಗಾ ಸಬ ಡಿವಿಜನ ಅಸಿಸ್ಟೆಂಟ ಕಮಿಷನರವರ ನಂಬರು 1069—3-3-07ನೆ ಯಾದಿ ಓದಿ, ರಿವೈಜ್ ಅಂದಾಜಾ ಮಂಜೂರಿ ಬಗ್ಗೆ ಗವರ್ನಮೆಂಟಿಗೆ ಕಳುಹಿಸತಕ್ಕದ್ದೆಂತಲೂ, ಈ ಅಂದಾಜಾ ಪ್ರಕಾರ ಜಾಸ್ತಿಯಾಗಿ ಬೇಕಾಗುವ 150 ರೂಪಾಯಿಗಳನ್ನು ಭಾವಿ ರಿಪೇರಿ ಬಗ್ಗೆ ಬಡ್ಜಟನಲ್ಲಿ ದಾಖಲ ಮಾಡಿರುವ 500 ರೂಪಾಯಿಗಳ ಪೈಕಿ ಕೊಡಬಹುದೆಂತಲೂ ತೀರ್ಮಾನಿಸಲಾಯಿತು.

4. ನಗರದ ಯೂನಿಯನ್ನಲ್ಲಿ ಸ್ಪೆಷಿಯಲ ಕೇಸಾಗಿ ಬಟ್ಟೆಯಮೇಲೆ ಆಕ್ಟ್ರಾಯಿ ಸುಂಕವನ್ನು ಹಾಕಲು ಅಪ್ಪಣೆ ಕೊಡಬೇಕೆಂತ ಮಾಡಿರುವ ನಗರ ತಾಲ್ಲೂಕು ಬೋರ್ಡ ತೀರ್ಮಾನದ ನಕಲು ಕಳುಹಿಸಿರುವದಾಗಿ ಬರೆಸಿದ ಸಾಗರ ಸಬ ಡಿವಿಜನ ಅಸಿಸ್ಟೆಂಟ ಕಮಿಷನರವರ ನಂಬರ 1438ನೆ ಯಾದಿ ಓದಿ ಯೂನಿಯನ್ಗಳಲ್ಲಿ ಬಟ್ಟೆಯಮೇಲೆ ಆಕ್ಟ್ರಾಯಿ ವಸೂಲು ಮಾಡತಕ್ಕ ಗವರ್ನಮೆಂಟನಿಂದ ಸಾದರಾಗಿರತಕ್ಕ 1903ನೆ ಇಸವಿ ಅಕ್ಟೋಬರ ಮಾಹೆ ತಾರೀಖು 7ರ ಕ್ಯಾಂಪ ನಂ. 11—24—ಎಲ್. ಬಿ. 66-03ನೆ ಪ್ರೊಸೀಡಿಂಗ್ಸಿನಲ್ಲಿ ನಮೂದಿರುವದರಿಂದ ಇದನ್ನು ಮಂಜೂರು ಮಾಡಲು ಆಗುವದಿಲ್ಲವಾಗಿ ತೀರ್ಮಾನಿಸಲಾಯಿತು.

5. ಶಿರಾಳಕೊಪ್ಪದ ಯೂನಿಯನ ಆಗಿರುವದನ್ನು ಹೊಸ ಮ್ಯುನಿಸಿಪಲ ರೆಗ್ಯುಲೇಷನ ಅನುಸರಿಸಿ, ಮುನಿಸಿಪಾಲಿಟಿಯಾಗಿ ಮಾಡಬೇಕಾಗಿ ಶಿಕಾರಿಪುರ ತಾಲ್ಲೂಕು ಬೋರ್ಡಿನವರು ಅಭಿಪ್ರಾಯಪಟ್ಟಿರುವದಾಗಿ ಬರೆಸಿದ ಶಿಕಾರಿಪುರ ತಾಲ್ಲೂಕು ಬೋರ್ಡು ಪ್ರೆಸಿಡೆಂಟರವರ ನಂ. 1503—27-6-07ನೆ ಯಾದಿ ಓದಿ, ಈ ಸಲಹೆಯನ್ನು ಬೋರ್ಡಿನವರೆಲ್ಲಾ ಏಕೀಭವಿಸಿ ಒಪ್ಪಿರುತ್ತಾರೆಂತಲೂ ಅದೇ ರೀತಿಯಾಗಿ ಗವರ್ನಮೆಂಟಗೆ ಶಿಫಾರಸ ಮಾಡತಕ್ಕದ್ದೆಂತಲೂ ತೀರ್ಮಾನಿಸಲಾಯಿತು.

6. ಹಾಲಿ ಬೆಂಕೀಪುರದ ಯೂನಿಯನ್ನಲ್ಲಿರತಕ್ಕ ಸ್ವೀಪರಗಳ ಪೈಕಿ 2 ಜನರನ್ನು ವಜಾ ಮಾಡಿ ಕಚರಾ ಸಾಗಿಸತಕ್ಕ ಬಗ್ಗೆ ಮಾಹೇಯಾನಾ 12 ರೂಪಾಯಿನ ಮೇಲೆ ಒಂದು ಬಾಡಿಗೆ ಗಾಡಿ ಗೊತ್ತು ಮಾಡುವ ವಿಷಯದಲ್ಲಿ ಶಿವಮೊಗ್ಗಾ ತಾಲ್ಲೂಕು ಬೋರ್ಡು ಪ್ರೆಸಿಡೆಂಟರವರು ಬರೆಸಿದ ನಂ. 23—9-7-07ನೆ ಯಾದಿ ಓದಿ, ಇದನ್ನು ಮಂಜೂರಿ ಮಾಡತಕ್ಕದ್ದೆಂತಲೂ, ಈರೀತಿ ಮಾಡುವದರಿಂದ ಸ್ವೀಪರಗಳ ತಲಬು ಮಾಹೇಯಾನಾ 10 ರೂಪಾಯಿ ಉಳಿಯುವದರಿಂದ ಬಾಕಿ 2 ರೂಪಾಯಿಗಳನ್ನು ರೋಡ ರಿಪೇರಿ ಬಗ್ಗೆ ದಾಖಲಾಗಿರುವ ಹಣದ ಪೈಕಿ ಕೊಡತಕ್ಕದ್ದೆಂತ ತೀರ್ಮಾನಿಸಲಾಯಿತು.

7. 1907ನೆ ಸಾಲಿನ ದಸರಾ ಪ್ರಜಾಪ್ರತಿನಿಧಿ ಸಭೆಗೆ ಹೋಗತಕ್ಕ 2 ಜನ ಮೆಂಬರನ್ನು ಚುನಾಯಿಸಬೇಕಾಗಿ ಡೆಪ್ಯುಟಿ ಕಮಿಷನರವರಿಂದ ಬಂದ ನಂ. 24-6—2-7-07ನೆ ಡಾಕೆಟ ಓದಲಾಯಿತು. ಹಾಜರು ಇದ್ದ ಉದ್ಯೋಗಸ್ಥರಲ್ಲದ 11 ಜನ ಮೆಂಬರು ಮೆ|| ನರಶಿಂಹೈಯ್ಯಂಗಾರ ಮತ್ತು ಗುರುಶಿದ್ದಯ್ಯನವರು ಡಿಸ್ಟ್ರಿಕ್ಟ ಬೋರ್ಡಿನವರ ಕಡೆಯಿಂದ ಪ್ರಜಾಪ್ರತಿನಿಧಿ ಸಭೆಗೆ ಹೋಗತಕ್ಕದ್ದೆಂತ ತೀರ್ಮಾನಿಸಲಾಯಿತು.

ಮೆ|| ಅಪ್ಪಯ್ಯಪ್ಪನವರಿಗೆ ಹೆಚ್ಚು ಓಟುಗಳು ಬಂದಾಗ್ಯೂ ಇವರು ಮೈಸೂರಿಗೆ ಹೋಗಲು ಅನಾನುಕೂಲತೆ ಇರುವ ವಿಷಯವನ್ನು ಹೇಳಿಕೊಂಡರು.

8. ಸುರಹೊನ್ನೆ ಗ್ರಾಮದಲ್ಲಿನ ಹೊಂಡದಲ್ಲಿರತಕ್ಕ ಹೂಳು ಮಣ್ಣು ತೆಗೆಸತಕ್ಕ ಬಗ್ಗೆ ರೂ. 565—8—0ರ ಅಂದಾಜಾ ಕಳುಹಿಸಿ ಇರುವದಾಗಿ ಹೊನ್ನಾಳಿ ತಾಲ್ಲೂಕು ಬೋರ್ಡ ಪ್ರೆಸಿಡೆಂಟರವರು ಬರೆಸಿದ ನಂಬರ 51—10—7 0 ನೆ ಯಾದಿ ಓದಿ, ಇದನ್ನು ಹಣ ಇಲ್ಲದಿರುವದರಿಂದ ಅಮಾನತ್ತು ಇಡಿಸಬಹುದೆಂತ ತೀರ್ಮಾನಿಸಲಾಯಿತು.

9. ಕೆರೆಹಳ್ಳಿ ದೊಡ್ಡಿ ರಿಪೇರಿ ಬಗ್ಗೆ 30 ರೂಪಾಯಿನ ಅಂದಾಜಾ ಕಳುಹಿಸಿ ಇರುವದಾಗಿ ಸೊರಬ ತಾಲ್ಲೂಕು ಬೋರ್ಡು ಪ್ರೆಸಿಡೆಂಟರವರ ನಂಬರ 1499ನೆ ಯಾದಿ ಓದಲಾಗಿ ಇದನ್ನು ಮಂಜೂರ್ಮಾಡಿರುವದಾಗಿ ತೀರ್ಮಾನಿಸಲಾಯಿತು.

10. ಚಂಗಾರು ಗ್ರಾಮದಲ್ಲಿರುವ ಹಾಳು ಭಾವಿಗಳನ್ನು ಮುಚ್ಚತಕ್ಕದ್ದು ಅಗತ್ಯವಿಲ್ಲವೆಂತ ತೀರ್ಥಹಳ್ಳಿ ತಾಲ್ಲೂಕು ಬೋರ್ಡ ಪ್ರೆಸಿಡೆಂಟರವರು ಬರೆಸಿದ ನಂಬರ 1238—2—5—07ನೆ ಯಾದಿ ಓದಲಾಗಿ ಈ ಭಾವಿಗಳು ಹಾಳು ಗ್ರಾಮದಲ್ಲಿರುವದರಿಂದ ಈ ಕಾಮಗಾರಿ ನಡೆಯುವದು ಅನಾವಶ್ಯಕವೆಂತ ತೀರ್ಮಾನಿಸಲಾಯಿತು.

11. ಕೆಳೂರು ಕಟ್ಟೆ ಆಸ್ಪತ್ರೆ ಅಸಿಸ್ಟೆಂಟರು ಲಕ್ಷ್ಮೀಪುರಕ್ಕೆ ವಾರಕ್ಕೆ ಒಂದಾವರ್ತಿ ಹೋಗಿಬರುವ ಏರ್ಪಾಡು ಇಡಿಸಬೇಕಾದ ವಿಷಯ (ಕಳೆದ ಮೀಟಿಂಗಿನಲ್ಲಿ ಅಮಾನತ್ತು ಇಟ್ಟಿದ್ದ ಸಂಗತಿ) ಈ ಸಂದರ್ಭದಲ್ಲಿ ಗವರ್ನಮೆಂಟನವರು ಮಂಜೂರ್ಮಾಡುವ ಭಾಗದಲ್ಲಿ ಅಭಿಪ್ರಾಯವುಳ್ಳವರಾಗಿರುವದಿಲ್ಲವೆಂತ 1907ನೆ ಇಸವಿ ಜೂನ ತಾರೀಖು 6ರ ನಂಬರ 12047-8—Med. 190-06 9ನೆ ಪ್ರೊಸೀಡಿಂಗ್ಸಿನಲ್ಲಿ ತಿಳಿಸಿ ಇರುವದರಿಂದ ಈ ವಿಷಯವನ್ನು ನಿಲ್ಲಿಸಿಬಿಡತಕ್ಕದ್ದೆಂತ ತೀರ್ಮಾನಿಸಲಾಯಿತು.

12. ನಗರದ ಆಸ್ಪತ್ರೆ ಅಸಿಸ್ಟೆಂಟರವರು ವಾರಕ್ಕೊಂದಾವರ್ತಿ ಯಡೂರಿಗೆ ಹೋಗಿ ಬರುವ ಏರ್ಪಾಡು ಆಗಬೇಕಾದ ವಿಷಯ (ಕಳೆದ ಮೀಟಿಂಗಿನಲ್ಲಿ ಅಮಾನತ್ತು ಆದ ವಿಷಯ), ಈ ಭಾಗದಲ್ಲಿ ಮೇಲ್ಕಂಡಂತೆ ತೀರ್ಮಾನಿಸಲಾಯಿತು.

13. ದೋಣಿಗಳು ಮತ್ತು ಜಂಗಾಲುಗಳು ಹೊಸದಾಗಿ ತಯಾರ್ಮಾಡುವ ಮತ್ತು ರಿಪೇರಿ ಮಾಡುವ ಹಣ ಡಿಸ್ಟ್ರಿಕ್ಟ ಫಂಡಿನಿಂದ ಕೊಡುವ ವಿಷಯದಲ್ಲಿ ಚೀಫ ಇಂಜನೀಯರ ಸಾಹೇಬರವರ ನಂ. 5010—15—7—07ನೆ ಡಾಕೆಟ ಓದಲಾಗಿ ನ್ಯಾಯವಾಗಿ ಟೋಲ್ಕ ಗುತ್ತೆ ಬಾಬಿನಿಂದ ಬರುವ ಹಣ ಡಿಸ್ಟ್ರಿಕ್ಟ ಫಂಡಿಗೆ ಜಮಾ ಆಗುವ ಸಂದರ್ಭದಲ್ಲಿ ಈ ಬಗ್ಗೆ ತಗಲುವ ಖರ್ಚು

ಡಿಸ್ಟ್ರಿಕ್ಟು ಫಂಡಿನಿಂದ ಕೊಡತಕ್ಕದ್ದೆಂತಲೂ ಆದರೆ ಆ ಬಗ್ಯೆ ಆಗುವ ಆರ್ಡರ ಈ ಹಿಂದೆ ತಗಲಿದ ಖರ್ಚಿಗೆ ಲಗಾವಾಗದಂತೆ ಶಿಫಾರಸು ಮಾಡತಕ್ಕದ್ದೆಂತಲೂ ತೀರ್ಮಾನಿಸಲಾಯಿತು.

14. ಚನ್ನಗಿರಿ-ತಾವರಕೆರೆ ರಸ್ತೆ ರಿಪೇರಿ ಬಗ್ಯೆ 290 ರೂಪಾಯಿನ ಅಂದಾಜಾ ಕಳುಹಿಸಿ ಇರುವದಾಗಿ ಹೊನ್ನಾಳಿ ಸಬ್ ಡಿವಿಜರ್ ಅಸಿಸ್ಟೆಂಟ ಕಮಿಷನರವರಿಂದ ಬಂದ ನಂ. 1123ನೆ ಯಾದಿ ಓದಿ, ಇದನ್ನು ಮಂಜೂರು ಮಾಡಿ ಇರುವದಾಗಿ ತೀರ್ಮಾನಿಸಲಾಯಿತು.

15. ಯೂನಿಯರ್ನಗಳಲ್ಲಿನ ಮನೆ ಕಂದಾಯದ ಬಾಕಿಗಾಗಿ ಹುಟ್ಟುವ ನೋಟೀಸುಗಳಿಗೆ ನೋಟೀಸ್ ಫೀ ವಸೂಲ್ಮಾಡುವ ವಿಷಯದಲ್ಲಿ ಗೌರ್ನಮೆಂಟಿನಿಂದ ಸಾದರಾದ 1906ನೆ ನವಂಬರ ತಾರೀಖು 16ರ ನಂ. 3984-91—L. B. 294-05-15ನೆ ಪ್ರೊಸೀಡಿಂಗ್ಸು ಓದಿ, ಈ ಬಗ್ಯೆ ಬಂದಾಣೆ ಫೀ ವಸೂಲಾಗಬಹುದಾಗಿ ತಾಲ್ಲೂಕು ಬೋರ್ಡಿನವರು ಅಭಿಪ್ರಾಯ ಪಡುವದನ್ನು ಡಿಸ್ಟ್ರಿಕ್ಟು ಬೋರ್ಡಿನವರು ಒಪ್ಪಿರುವದಾಗಿ ತೀರ್ಮಾನಿಸಲಾಯಿತು.

16. ಸೊರಬ ತಾಲ್ಲೂಕು ಗುಡವಿ ಗ್ರಾಮದಲ್ಲಿ ಭಾವಿ ತೆಗಿಸತಕ್ಕ ಬಗ್ಯೆ 430 ರೂಪಾಯಿನ ಅಂದಾಜಾ ಕಳುಹಿಸಿ ಇರುವದಾಗಿ ಸಾಗರದ ಸಬ್ ಡಿವಿಜರ್ ಅಸಿಸ್ಟೆಂಟ ಕಮಿಷನರವರ ನಂ. 90ನೆ ಯಾದಿ ಓದಲಾಗಿ, ಈಗ ಹಣ ಇಲ್ಲದ್ದರಿಂದ ಇದನ್ನು ಅಮಾನತ್ತು ಇಡಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

17. ಶಿವಮೊಗ್ಗಾ ಚಾಮರಾಜ ಮೆಮೋರಿಯಲ್ ಹಾಲಿಗೆ ಪುನಹಾ 2,640 ರೂಪಾಯಿ ಕಂಟ್ರಿಬ್ಯೂಷನ ಕೊಡತಕ್ಕ ಭಾಗದಲ್ಲಿ ಗೌರ್ನಮೆಂಟಿನಿಂದ ಸಾದರಾದ ಜೂನ ಮಾಹೆ ತಾರೀಖು 1ರ ನಂ. 11335-7—L. B. 434-06—2ನೆ ಪ್ರೊಸೀಡಿಂಗ್ಸ ಓದಲಾಗಿ, ಕಾಮಗಾರಿಯನ್ನು ನಡೆಸಿ ಇರುವ ಕಂಟ್ರಾಕ್ಟುದಾರನಿಗೆ ಪಾವತಿ ಮಾಡತಕ್ಕ ಬಗ್ಯೆ ಹಣ ಒದಗಿಸಲು ಬೇರೆ ಯಾವ ಮಾರ್ಗವೂ ಇಲ್ಲದ್ದರಿಂದ ಮೊದಲು ಶಿಫಾರಸ ಮಾಡಿದಂತೆ ಇನ್ನೂ ಕೆಲವು ಮೊಬಲಗು ಡಿಸ್ಟ್ರಿಕ್ಟು ಫಂಡಿನಿಂದ ಕೊಡತಕ್ಕದ್ದು ಅತ್ಯವಶ್ಯಕವೆಂತ ಬೋರ್ಡಿನವರು ಅಭಿಪ್ರಾಯ ಪಡುವದಾಗಿ ತೀರ್ಮಾನಿಸಲಾಯಿತು.

18. ಬಸವಾಪಟ್ಟಣದಲ್ಲಿ ವೈದ್ಯಶಾಲೆ ಇಟ್ಟುಕೊಳ್ಳಲು ಮಾಹೆಯಾನಾ ಮನೆ ಬಾಡಿಗೆ 1 ರೂಪಾಯಿ ಮಂಜೂರ್ಮಾಡಿಸಿಕೊಡಬೇಕಾಗಿ ಬರಕೊಂಡ ಪಂಡಿತರ ತಾರೀಖು 26—6—07ರ ಅರ್ಜಿ ಓದಲಾಗಿ, ಈ ಬಸವಾಪಟ್ಟಣದಲ್ಲಿ ಸರಕಾರಿ ಕಟ್ಟಡ ಯಾವದೂ ಇಲ್ಲದ್ದರಿಂದ ಈ ಬಗ್ಯೆ ಮಾಹೆಯಾನಾ 1 ರೂಪಾಯಿ ಮಂಜೂರ್ಮಾಡಬಹುದೆಂತ ತೀರ್ಮಾನಿಸಲಾಯಿತು.

19. ಗವರ್ನಮೆಂಟಿನಿಂದ ಸಾದರಾಗಿರುವ ತಾರೀಖು 16—3—07ನೆ ನಂ. 8308-15—L. B. 298-06-2ನೆ ಪ್ರೊಸೀಡಿಂಗ್ಸಿನ ಅನುಸಾರವಾಗಿ ಯೂನಿಯನ್ ಆಗತಕ್ಕ ಗ್ರಾಮಗಳ ಲಿಸ್ಟು ಕಳುಹಿಸಿ ಇರುವದಾಗಿ ಬರೆಸಿದ ಸಾಗರ ಸಬ್ ಡಿವಿಜನ್ ಅಸಿಸ್ಟೆಂಟ ಕಮಿಷನರವರ ನಂಬರ 40—19-7-07ನೆ ಡಾಕೆಟ ಓದಲಾಯಿತು.

ಯೂನಿಯನ್ ಆಗತಕ್ಕ ಗ್ರಾಮಗಳ ತಪಶೀಲ್.

ತಾಲ್ಲೂಕು.	ಗ್ರಾಮದ ಹೆಸರು.
ಸೊರಬ	ಉದ್ರಿ.
	ಆನವಟ್ಟಿ.
	ಕುಬಟೂರು
	ಮೂಡಿ-ದೊಡ್ಡಿನಕೊಪ್ಪ.
	ತತ್ತೂರು.
	ಹೆಚ್ಚೆ.
	ಜಡೆ.

ಈ ಲಿಸ್ಟು ಮಂಜೂರ್ಮಾಡಿರುವದಾಗಿಯೂ ಇದನ್ನು ಗವರ್ನಮೆಂಟಗೆ ಕಳುಹಿಸತಕ್ಕದ್ದೆಂತಲೂ ತೀರ್ಮಾನಿಸಲಾಯಿತು.

20. ಶಿವಮೊಗ್ಗಾ ತಾಲ್ಲೂಕು ಬಿದರೆ ಗ್ರಾಮದಲ್ಲಿ ಒಂದು ದೊಡ್ಡಿ ಮನೆ ಕಟ್ಟತಕ್ಕ ವಿಷಯದಲ್ಲಿ ಶಿವಮೊಗ್ಗಾ ಸಬ್ ಡಿವಿಜನ್ ಅಸಿಸ್ಟೆಂಟ ಕಮಿಷನರವರಿಂದ ಬಂದ ನಂ. 21—9-7-07ನೆ ಯಾದಿ ಓದಲಾಗಿ, ಈ ಗ್ರಾಮಕ್ಕೆ ಸಮೀಪದೊಡ್ಡಿಗಳು ಇರುವದರಿಂದ ಇಲ್ಲಿ ದೊಡ್ಡಿ ಇಡತಕ್ಕ ಪ್ರಕೃತವೇನೂ ತೋರುವದಿಲ್ಲವೆಂತ ತೀರ್ಮಾನಿಸಲಾಯಿತು.

21. ತಾರೀಖು 2—2—07ರಲ್ಲಿ ನಡೆದ ಡಿಸ್ಟ್ರಿಕ್ಟು ಬೋರ್ಡಿನಲ್ಲಿ ಕೆಲವು ರಸ್ತೆಗಳಲ್ಲಿ ಟೋಲ್‌ಗೇಟ ಇಡತಕ್ಕ ವಿಷಯದಲ್ಲಿ ನಂಬರ 3 (1)ನೆಯಲ್ಲಿ ಆದ ತೀರ್ಮಾನವನ್ನು ಶಿವಮೊಗ್ಗಾ ಮ್ಯುನಿಸಿಪಾಲಿಟಿಯವರು ಡಿಸ್ಟ್ರಿಕ್ಟು ಫಂಡ ರಸ್ತೆ ಬಗ್ಯೆ ಏನೂ ಹಣ ಕೊಡಲು ಕಾರಣವಿಲ್ಲವೆಂತ ಮಾಡಿದ ತೀರ್ಮಾನವನ್ನು ಓದಲಾಗಿ ಸೊರಬ-ಸಿದ್ದಾಪುರ ರಸ್ತೆಯಲ್ಲಿರುವ ಸೊರಬ ತಾಲ್ಲೂಕು ಬಾಡ ಬೆಬ್ಬೈಲ ಬಳಿ ಒಂದು ಟೋಲ್‌ಗೇಟ ಇಡತಕ್ಕದ್ದೆಂತ ಬೋರ್ಡಿನವರು ಅಭಿಪ್ರಾಯಪಡುವದರಿಂದ ಈ ವಿಷಯದಲ್ಲಿ ಗವರ್ನಮೆಂಟಿಗೆ ಶಿಫಾರಸ ಮಾಡತಕ್ಕದ್ದೆಂತಲೂ ವ್ಯಾಂಗನೀಸ್ ಗಾಡಿಗಳು ಹೆಚ್ಚಾಗಿ ತಿರುಗಾಡುವದರಿಂದ ರಸ್ತೆ ರಿಪೇರಿ ಬಗ್ಯೆ ಹೆಚ್ಚು ಆಗವಡು ತಗಲುವದರ ಬಗ್ಯೆ, ನಾಳಿಂಗ್ಯ, ಬೆಂಕೀಪುರ, ರಿಪ್ಪನ್‌ಪೇಟೆ, ತೀರ್ಥಹಳ್ಳಿ ಈ ಸ್ಥಳಗಳಲ್ಲಿ ಟೋಲ್ ಗೇಟುಗಳನ್ನು ಇಟ್ಟು ಇರುವದರಿಂದ ಬರುವ ಉತ್ಪತ್ತಿಯನ್ನು ಸದರಿ ರಸ್ತೆಗಳನ್ನು ದುರಸ್ತುಪಡಿಸಿ ಇಡತಕ್ಕದ್ದೆಂತ ತೀರ್ಮಾನಿಸಲಾಯಿತು.

22. ಹೋದ ಸಾಲಿನಲ್ಲಿ ಮಂಜೂರಾಗಿದ್ದ ಸೊರಬ ತಾಲ್ಲೂಕು ಅಂಡಿಗೆ ಗ್ರಾಮದಲ್ಲಿ ದೊಡ್ಡಿ ಕಾಮಗಾರಿ ಬಾಬತ್ತು 217 ರೂಪಾಯಿನ ಅಂದಾಜಾ ಚಾಲ್ತಿ ಸಾಲಿನಲ್ಲಿ ಕೆಲಸ ನಡೆಸತಕ್ಕ ಬಗ್ಗೆ ಮಂಜೂರ್ಮಾಡಿಸಬೇಕಾಗಿ ಸಾಗರ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರು ಬರೆಸಿದ ನಂ. 13—1-7-07ನೆ ಯಾದಿ ಓದಿ, ಆ ರೀತಿ ಮಂಜೂರ್ಮಾಡಿರುವದಾಗಿ ತೀರ್ಮಾನಿಸಲಾಯಿತು.

23. ಚನ್ನಗಿರಿ ತಾಲ್ಲೂಕು ಹೋದಿಗ್ಗೆರೆ ಗ್ರಾಮವನ್ನು ಯೂನಿಯನ್ ಆಗಿ ಮಾಡತಕ್ಕದ್ದೆಂತ ಶಿವಮೊಗ್ಗಾ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರು ಬರೆಸಿದ ನಂ. 214ನೆ ಯಾದಿ ಓದಲಾಗಿ, ಆರೀತಿ ಮಂಜೂರ್ಮಾಡಬಹುದೆಂತಲೂ, ಗವರ್ನ್ಮೆಂಟಿಗೆ ಈ ಭಾಗದಲ್ಲಿ ಶಿಫಾರಸ್ ಮಾಡತಕ್ಕದ್ದೆಂತಲೂ ತೀರ್ಮಾನಿಸಲಾಯಿತು.

24. ಬೋರ್ಡಿನವರ ಮಂಜೂರಾತಿಗೆ ಒಳಪಟ್ಟು ಪ್ರೆಸಿಡೆಂಟರವರು ಕೆಳಗೆ ಕಂಡ ಅಂದಾಜಾ ಮಂಜೂರ್ಮಾಡಿರುವದರ ಲಿಸ್ಟು ಓದಲಾಯಿತು.

ಕಾಮಗಾರಿ ತಪಶೀಲು.	ಅಂದಾಜಾ ಮೊಬಲಗು.		
	ರೂ.	ಅ.	ಪೈ.
ಜೋರಡಿ ದೊಡ್ಡಿ ರಿಪೇರಿ ಸೆಟ್ಲ್ಮೆಂಟ್ ಅಂದಾಜಾ	24	8	0
ಹೊಳೆಹೊನ್ನೂರ ಅಂತರಗಂಗಮ್ಮನ ಕೇರಿಯಲ್ಲಿ ರಸ್ತೆ ಮೇಲಿನ ಕಲ್ಲು ತೆಗೆಸಿದ ಬಗ್ಗೆ ...	42	0	0
ಆಯನೂರು ಭಾವಿ ರಿಪೇರಿ	45	0	0
ಆಗುಂಬೆ ಮುಸಾಫರಖಾನೆಗೆ ಇರಸಲ ತಟ್ಟಿ ಕಟ್ಟತಕ್ಕ ಬಗ್ಗೆ	22	11	0
ಹನುಮಂಚದಕಟ್ಟೆಯಿಂದ ಹುಮಚಕ್ಕೆ ಹೋಗುವ ರಸ್ತೆ ರಿಪೇರಿ ...	60	0	0

ಇದನ್ನು ಮಂಜೂರ್ಮಾಡಿರುವದಾಗಿ ತೀರ್ಮಾನಿಸಲಾಯಿತು.

25. ಬೋರ್ಡಿನವರ ಮಂಜೂರಿಗೆ ಒಳಪಟ್ಟು ಎಗ್ಸಿಕ್ಯೂಟಿವ್ ಇಂಜಿನಿಯರರವರಿಂದ ಬಂದ ಅಂದಾಜಾ ಕೌಂಟರಸೈನ್ ಮಾಡಿ ಕಳುಹಿಸಿಕೊಟ್ಟದ್ದರ ಪಟ್ಟಿ.

ಕಾಮಗಾರಿ ತಪಶೀಲು.	ಅಂದಾಜಾ ಮೊಬಲಗು.		
	ರೂ.	ಅ.	ಪೈ.
ಮಾಳೂರು-ಮಹಿಷಿರಸ್ತೆ ಬಗ್ಗೆ ತೆಗದುಕೊಂಡ ಜಮೀನ್ ಬಾಬತು ಕಂಪೆನ್ಸೇಷನ್ ಬಗ್ಗೆ ಅಂದಾಜಾ.	24	0	0

ಇದನ್ನು ಮಂಜೂರ್ಮಾಡಿರುವದಾಗಿ ತೀರ್ಮಾನಿಸಲಾಯಿತು.

26. ಶಿವಮೊಗ್ಗಾ ತಾಲ್ಲೂಕಿನ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರು ಮ|| ನಾಡಿಗ ಸೀತಾರಾಮಪ್ಪನವರು ಮೃತಪಟ್ಟಿರುವದಾಗಿ ಶಿವಮೊಗ್ಗಾ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರು ಬರೆಸಿದ ನಂ. 1649—24—6—07ನೆ ಯಾದಿ ಓದಲಾಗಿ ಈ ವಿಷಾದಕರವಾದ ವಿಷಯವನ್ನು ರಿಕಾರ್ಡು ಮಾಡತಕ್ಕದ್ದೆಂತ ತೀರ್ಮಾನಿಸಲಾಯಿತು.

27. ಕೆಲವು ಡಿಸ್ಪೆನ್ಸರಿಗಳ ನೆಲಕ್ಕೆ ಕಡಪಾ ಕಲ್ಲು ಅಥವಾ ಮಂಗಳೂರು ಹಂಚು ಹಾಕತಕ್ಕ ವಿಷಯದಲ್ಲಿ ತಾರೀಖು 6—5—07ರಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಆದ ನಂ. 27ನೆ ತೀರ್ಮಾನವನ್ನು ಓದಿ ಶಿಕಾರಿ ಪುರದ ಡಿಸ್ಪೆನ್ಸರಿ ನೆಲದ ರಿಪೇರಿ ಬಗ್ಗೆ ತಗಲುವ ಡಿಸ್ಟ್ರಿಕ್ಟು ಫಂಡು ಬಾಬತು ಮೊಬಲಗನ್ನು ಡಿಸ್ಪೆನ್ಸರಿ ರಿಪೇರಿ ಬಗ್ಗೆ ಚಾಲ್ತಿ ಸಾಲು ಬಜಟ್ಟಿನಲ್ಲಿರುವ ಹಣದ ಪೈಕಿ ಕೊಡತಕ್ಕದ್ದೆಂತ ತೀರ್ಮಾನಿಸಲಾಯಿತು.

28. ಈ ಕೆಳಗೆ ನಮೂದಾಗುವ ಗವರ್ನ್ಮೆಂಟು ಆರಡರ್ ಮುಂತಾದ ದಾಖಲೆಗಳನ್ನು ಓದಿ ರಿಕಾರ್ಡು ಮಾಡತಕ್ಕದ್ದೆಂತ ತೀರ್ಮಾನಿಸಲಾಯಿತು.

(1) ಓದು ಬರಹ ಬರದೇ ಇರತಕ್ಕವರನ್ನು ಮಿಡ್‌ವೈಫ್ ಕೆಲಸಕ್ಕೆ ತಯಾರ್ಮಾಡುವದರಿಂದ ಪ್ರಯೋಜನವಿಲ್ಲ. ನಗರಕ್ಕೆ ಒಬ್ಬ ಮಿಡ್‌ವೈಫ್‌ಗೆ ಮೊಕರೂರ್ ಮಾಡಿ ಇರುತ್ತೆ. ಹಾಲಿ ತಯಾರಾಗುತ್ತಿರುವ ಒಬ್ಬ ವಿದ್ಯಾರ್ಥಿನಿಯು ಪ್ಯಾಸಾದರೆ ಕರೂರಿಗೆ ಮೊಕರೂರು ಮಾಡುತ್ತೆಂತ ಬರೆಸಿದ ಸೀನಿಯರ್ ಸರ್ಜನ್ ಸಾಹೇಬರವರ ನಂ. 6694 ಮತ್ತು 588ನೆ ಡಾಕೆಟ್ಟುಗಳು.

(2) 50 ಮನೆಗಳಿಗಿಂತ ಹೆಚ್ಚಾಗಿರತಕ್ಕ ಗ್ರಾಮಗಳ ಪಾಕೀಜಿ ವಿಷಯ ಡಿಸ್ಟ್ರಿಕ್ಟ ಬೋರ್ಡಿನವರಿಗೆ ಸಂಬಂಧಪಟ್ಟಿರುತ್ತೆಂತ ಆದ ತಾರೀಖು 11-7-07ರ ನಂ. 455-6-L. B. 185-06-11ನೆ ಗಾರ್‍ನಮೆಂಟು ಆರಡರ.

(3) ನಗರದ ಯೂನಿರ್ಯ ಸ್ವೀಪರುಗಳ ಪೈಕಿ 2 ಜನರನ್ನು ತೆಗದು ಹಾಕಿ ಸ್ವೀಪರುಗಳ ಕೆಲಸದ ಮೇಲ್, ತನಖೆ ಬಗ್ಗೆ ಪಟೇಲನಿಗೆ ಮಾಹೆಯಾನಾ 1 ರೂಪಾಯಿ ಅಲೋವೆನ್ಸ ಕೊಡುವದನ್ನು ಮಂಜೂರ್‍ಮಾಡಿರುವದಾಗಿ ಆದ ತಾರೀಖು 4-7-07ರ ನಂ. 128-9-L. B. 481-06-2 ಗಾರ್‍ನಮೆಂಟು ಆರಡರ.

(4) ಹುಮಚದ ಕಟ್ಟೆಗೆ ತೀರ್ಥಹಳ್ಳಿ ಆಸ್ಪತ್ರೆ ಅಸಿಸ್ಟೆಂಟರು ವಾರಕ್ಕೊಂದಾವರ್ತಿ ಹೋಗಿ ಬರಬೇಕೆಂಬದನ್ನು ಮಂಜೂರ್‍ಮಾಡಲು ಆಗುವದಿಲ್ಲವಾಗಿ ಸಾದರಾದ ತಾರೀಖು 21-6-07ರ ನಂ. 12047-8 Med. 190-06-9ನೆ ಗಾರ್‍ನಮೆಂಟು ಆರಡರ.

(5) ಹಾಲಿ, ಆಸ್ಪತ್ರೆ ಅಸಿಸ್ಟೆಂಟರು ವಾರಕ್ಕೆ ಒಂದಾವರ್ತಿ ಹೋಗಿ ಬರುವ ಸ್ಥಳಗಳಲ್ಲಿ ಒಂದೊಂದು ನೇಟಿವ ವೈದ್ಯಶಾಲೆ ಇಡತಕ್ಕ ವಿಷಯದಲ್ಲಿ ತಾರೀಖು 13-5-07ರಲ್ಲಿ ಸಾದರಾದ ನಂ. 10590-602-Med. 297-06-1ನೆ ಆರಡರ.

(6) ಹೊಳೆ ಹೊನ್ನೂರಿನಲ್ಲಿ ಒಂದು ನೇಟಿವ ವೈದ್ಯಶಾಲೆ ಇಡುವದನ್ನು ಮಂಜೂರ್‍ಮಾಡಿರುವದಾಗಿ ಆದ ತಾರೀಖು 30-5-07ರ ನಂ. 11292-4. L. B. 406-06-2ನೆ ಗಾರ್‍ನಮೆಂಟು ಆರಡರ.

(7) ಗೇರಸೊಪ್ಪೆ ಫಾಲ್ಸ ಡಿಸ್ಟ್ರಿಕ್ಟ ಫಂಡು ರಸ್ತೆಯ 5-2ನೆ ಮೈಲಿಯಲ್ಲಿ ಒಂದು ಕಟ್ಟೆ ಕಟ್ಟಿಸತಕ್ಕ ಬಗ್ಗೆ ಪ್ರೊವಿನ್ಷಿಯಲ ಫಂಡಿನಿಂದ ಮಂಜೂರಾಗಬೇಕೆಂತ ಬರೆಸಿದ ವಿಷಯದಲ್ಲಿ ತಾರೀಖು 29-5-07ರಲ್ಲಿ ಆದ ಗಾರ್‍ನಮೆಂಟು ಆರಡರ ನಂ 11168-9-L. B 437-06-2.

(8) ದೊಡ್ಡಬಳ್ಳಾಪುರ ವಗೈರೆ ಸ್ಥಳಗಳಲ್ಲಿನ ಇಂಡಸ್ಟ್ರಿಯಲ ಸ್ಕೂಲುಗಳ ಬಾಬತು ರಿಕಾರ್ಡುಗಳನ್ನು ನೋಡಿ ಆಗಿರುವ ನಂ. 10169-77- Ed. 268-06-3ನೆ ಗಾರ್‍ನಮೆಂಟು ಆರಡರ.

(9) ಗ್ರಾಮಾಂತರಗಳ ರಸ್ತೆ ವಿಷಯದಲ್ಲಿ ರವಿನ್ಯೂ ಕವಿಾಷನರವರು ಜಾರಿ ಮಾಡಿಸಬೇಕೆಂದಿರುವ ಸರ್ಕ್ಯುಲರ ಮಂಜೂರ್‍ಮಾಡಿರುವದಾಗಿ ಆಗಿರುವ ತಾರೀಖು 3-7-07ರ ನಂ 64-72-L. B. 180-06-5ನೆ ಗಾರ್‍ನಮೆಂಟು ಆರಡರ.

(10) ಗ್ರಾಮ ಬದಾವಣೆ ಅಥವಾ ಗಾವಠಾಣಾ ಬದಲಾವಣೆ ಮಾಡತಕ್ಕ ಸಂದರ್ಭದಲ್ಲೆಲ್ಲಾ ರವಿನ್ಯೂ ಇಲಾಖೆ ಮೂಲಕವೇ ಕೆಲಸ ನಡೆಸತಕ್ಕದ್ದೆಂತಲೂ ಈ ಭಾಗದಲ್ಲಿ ಡಿಸ್ಟ್ರಿಕ್ಟು ಬೋರ್ಡಿನವರಿಗೆ ಯಾವ ವಿಧವಾದ ತೊಂದರೆಯೂ ಕೊಡಕೂಡದೆಂತಲೂ ಆದ ತಾರೀಖು 15-7-07ರ ನಂ. 478-87-L. B. 127-06-7ನೆ ಗಾರ್‍ನಮೆಂಟು ಆರಡರ.

(11) ಚಿತ್ರದುರ್ಗ-ಬೆಂಕೀಪುರ ರಸ್ತೆ 4-36ನೆ ಮೈಲಿಯಲ್ಲಿ ನಾ ದುರಸ್ತಾಗಿದ್ದ ಮೋರಿಯನ್ನು ದುರಸ್ತು ಮಾಡತಕ್ಕ ಬಗ್ಗೆ 675 ರೂಪಾಯಿಗಳನ್ನು ಡಿಸ್ಟ್ರಿಕ್ಟು ಫಂಡು ಸಾಲಾಖೈರು ಶಿಲಕು ಮೊಬಲಗು ಪಾವತಿ ಮಾಡಬಹುದೆಂತ ಆದ ತಾರೀಖು 25 6-07ರ ನಂ. 984-L. B. 256-06 10ನೆ ಗಾರ್‍ನಮೆಂಟು ಆರಡರ.

(12) ಡಿಸ್ಟ್ರಿಕ್ಟ ಬೋರ್ಡಿನವರು ತೀರ್ಮಾನಿಸಿ ಇರುವಂತೆ ಚನ್ನಗಿರಿ-ಬುಕ್ಕಾಂಬೂದಿ ರಸ್ತೆ ಕಾಮಗಾರಿ ಪೂರೈಸಿದ ನಂತರ ಜಿಮ್ಮಾಪುರದಲ್ಲಿ ಮುಸಾಫರಖಾನೆ ಕಟ್ಟಿಸತಕ್ಕದ್ದು ಮತ್ತು ತಾವರೆಕೆರೆಯಲ್ಲಿ ವೈದ್ಯಶಾಲೆ ಇಡತಕ್ಕದ್ದು ಸಹಾ ಯೋಚಿಸತಕ್ಕದ್ದೆಂತ ಆಗಿರುವ ತಾರೀಖು 2-8-07ರ ನಂ. 584-L. B. 256-06-10ನೆ ಗಾರ್‍ನಮೆಂಟು ಆರಡರ.

29. ಬರುವ ಮೀಟಿಂಗು 1907ನೆ ಇಸವಿ ಸೆಪಟಂಬರ ತಾರೀಖು 28ರಲ್ಲಿ ನಡೆಯತಕ್ಕದ್ದೆಂತ ತೀರ್ಮಾನಿಸಲಾಯಿತು.

ಎಂ. ನಾರಾಯಣರಾವ್,
ಪ್ರೆಸಿಡೆಂಟ.

ಇಸ್ತಿಹಾರ್ನಾಮೆ.

ತಾರೀಖು 29ನೆ ಆಗಸ್ಟು 1907ನೆ ಇಸವಿ.

ಶಿವಮೊಗ್ಗ ಡಿಸ್ಟ್ರಿಕ್ಟ್ ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ಈ ಕೆಳಗೆ ಕಾಣಿಸಿರುವ ದಸ್ತಾವೇಜುಗಳು ಎರಡು ವರುಷಗಳಿಗೆ ಮೇಲ್ಪಟ್ಟು ಬೇವಾರಸಾಗಿ ನಿಂತಿವೆ. ಈ ನೋಟಿಫಿಕೇಷನ್ ಫಾಯಿಷ್ ಆದ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಅವುಗಳನ್ನು ಸಮ್ಮಂಧಪಟ್ಟವರು ಆಯಾಯ ಸಬ್ ರಿಜಿಸ್ಟ್ರಾರುಗಳಿಂದ ವಾಪಸು ಪಡಿಯಬಹುದು. ತಪ್ಪಿದರೆ ರಿಜಿಸ್ಟ್ರೇಷನ್ ರೆಗ್ಯುಲೇಷನ್ 85ನೆ ಸೆಕ್ಷನ್ ಅನುಸರಿಸಿ ದಸ್ತಾವೇಜುಗಳನ್ನು ನಾಶಪಡಿಸುತ್ತೆಯಾಗಿ ಇದರಿಂದ ತಿಳಿಯಪಡಿಸಿದೆ.

ಜಂಜಿಕ ನಂಬರು.	ಸಬ್ ರಿಜಿಸ್ಟ್ರಿ ಆಫೀಸಿನ ಹೆಸರು.	ರಿಜಿಸ್ಟರ್ ಬುಕ್ಕಿನ ನಂಬರು.	ದಸ್ತಾವೇಜಿನ ನಂಬರು.	ದಸ್ತಾವೇಜು ಬರೆಯಲ್ಪಟ್ಟ ತಾರೀಖು.	ರಿಜಿಸ್ಟರ್ ಆದ ಅಥವಾ ರಿಜಿಸ್ಟ್ರೇಷನ್ ನಿರಾಕರಿಸಿದ ತಾರೀಖು.	ಬರೆದುಕೊಟ್ಟವರ ಹೆಸರು ಮತ್ತು ವಿಳಾಸ.	ಬರಸಿಕೊಂಡವರ ಹೆಸರು ಮತ್ತು ವಿಳಾಸ.	ದಸ್ತಾವೇಜಿನ ಕಿಮ್ಮತ್ತು ಮತ್ತು ಸ್ವಭಾವ.
1	ಶಿವಮೊಗ್ಗ	I	62 1904—05	3—6—1903	3—8—1904	ಶಿವಮೊಗ್ಗ ತಾಲ್ಲೂಕು ಮತ್ತೂರಲ್ಲಿರುವ ಕೇಶವ ಶಾಸ್ತ್ರಿಗಳ ಮಗ ನಾರಾಯಣ ಶಾಸ್ತ್ರಿ.	ಶಿವಮೊಗ್ಗ ತಾಲ್ಲೂಕು ಸಂತೆ ಕಡೂರಲ್ಲಿರುವ ಕರಿಯಪ್ಪನ ಮಗ ಸಿದ್ಧಲಿಂಗಪ್ಪ.	150 ರೂಪಾಯಿ ಕ್ರಯಪತ್ರ.
2	ಡಿಟೋ	I	102 1904—05	26—8—1904	26—8—1904	ಶಿವಮೊಗ್ಗ ತಾಲ್ಲೂಕು ಮತ್ತೂರಲ್ಲಿರುವ ಚಿಂತಾಮಣಿ ಅವಧಾನಿ ಮಗ ಅನಂತಾವಧಾನಿ.	ಶಿವಮೊಗ್ಗ ತಾಲ್ಲೂಕು ಹೊಸಹಳ್ಳಿಯಲ್ಲಿರುವ ಸುಬ್ಬಾವಧಾನಿಗಳ ಮಗ ವೆಂಕಟೇಶಾವಧಾನಿ.	200 ಡಿಟೋ
3	ಡಿಟೋ	I	264 1904—05	27—7—1904	21—3—1905	ಶಿವಮೊಗ್ಗ ತಾಲ್ಲೂಕು ಕಾಗೆತೊಡ ಮಗೆ ಗ್ರಾಮದಲ್ಲಿರುವ ನಾಡಿಗ ಖಂಡೇರಾಯರ ಮಗ ಮಲ್ಲಾರಪ್ಪ ಮತ್ತು ಬಸಪ್ಪ.	ಶಿವಮೊಗ್ಗ ತಾಲ್ಲೂಕು ಅತ್ತಿಗುಂದ ಗ್ರಾಮದಲ್ಲಿರುವ ವಂಟಿ ಲಿಂಗನ ಹನುಮಂತನ ಮಗ ರಂಗ.	ಮೂಲಗೇಣಿ ಕರಾರು ಸಾಲಿಯಾನ 2 ರೂಪಾಯಿ, ಕಂದಾಯ 8 ರೂಪಾಯಿ ಅಡಿಕೆ ಸಹ ಕೊಡಬೇಕಾಗಿ.
4	ಡಿಟೋ	II	2 1904—05	8—2—1901	9—2—1905	ಬೆಂಕಿಪುರದಲ್ಲಿರುವ ಮರಾಟೆ ಭೋಜರಾಯರ ಹನುಮಂತರಾವ್.	ಬೆಂಕಿಪುರದಲ್ಲಿರುವ ಮಜ್ಜಿಗೇನಹಳ್ಳಿ ಕೃಷ್ಣಾಚಾರ್ರ ಮಗ ನರಶಿಂಹಾಚಾರ್.	140 ರೂಪಾಯಿ ಆಧಾರ ಮತ್ತು ಸಾಗುವಳಿ ಕರಾರು
5	ಚೆನ್ನಗಿರಿ	I	5 1904—05	7—7—1904	7—7—1904	ವಡ್ಡನಹಾಳ್ ಗ್ರಾಮದ ಮೇಲಗಿರಿಯಪ್ಪನ ಮಗ ಹನುಮಂತ.	ಮೈಸೂರ್ ಗವರ್ನಮೆಂಟು ತರಫ್ ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರು.	108 ರೂಪಾಯಿಗಳಿಗೆ ಜಾಮೀನು ಪತ್ರ.

ಕ್ರಮ ಸಂಖ್ಯೆ	ಸಬ್ ರಿಜಿಸ್ಟ್ರಾರ್ ಆಫೀಸಿನ ಹೆಸರು.	ರಿಜಿಸ್ಟರು ಪುಸ್ತಕ	ದಸ್ತಾವೇಜಿನ ನಂಬರು.	ದಸ್ತಾವೇಜು ಬರೆಯಲ್ಪಟ್ಟ ತಾರೀಖು.	ರಿಜಿಸ್ಟರ್ ಆದ ಅಥವಾ ರಿಜಿಸ್ಟ್ರೇಷನ್ ನಿರಾಕರಿಸಿದ ತಾರೀಖು.	ಬರೆದುಕೊಟ್ಟವರ ಹೆಸರು ಮತ್ತು ವಿಳಾಸ.	ಬರೆಸಿಕೊಂಡವರ ಹೆಸರು ಮತ್ತು ವಿಳಾಸ.	ದಸ್ತಾವೇಜಿನ ಕಿಮ್ಮತ್ತು ಮತ್ತು ಸ್ವಭಾವ.
6	ಹೊನ್ನಾಳಿ	II	3 / 1904—05	14-11-1903	3-5-1905	ನ್ಯಾಮತಿ ಸುಚ್ಚಿನ ವೀರಬಸಪ್ಪನ ಮಗ ನಾಗಪ್ಪ.	ಸುರಹೊನ್ನೆವಾಸಿ ಗೋಣಪ್ಪನ ಮಗ 1ನೆ ಕುಂದೂರಪ್ಪ, 2ನೆ ಯಲ್ಲಣ್ಣ, 3ನೆ ಹನುಮಂತಣ್ಣ, 4ನೆ ಗೋಣಪ್ಪ.	83 ರೂಪಾಯಿ ಆಧಾರ ಪತ್ರ
7	ಶಿಕಾರಿಪುರ	I	300 / 1904—05	27—5 1905	27—5 1905	ಆನಂದರಾವ್ ಬಿನ್ ಸ್ವಾಮಿರಾವ್, ಕುಸ್ಕೂರ್ ವುಡಗಣಿವಾಸಿ.	ಮುಳುಗುಂದದ ರುದ್ರಪ್ಪ, ಶಿರಾಳಕೊಪ್ಪದವಾಸಿ.	375 ರೂಪಾಯಿನ ಸಂದಾಯದ ರಶೀದಿ.
8	ಸಾಗರ ...	I	115 / 1904—05	29—10—1904	31—10—19-4	ಮುಂಗ್ರವಳ್ಳಿ ಕ್ರಿಷ್ಣಭಟ್ಟ	ಮತ್ತಿಗದ್ದೆ ಮಂಜಯ್ಯ, ತಿಂಮ್ಮೈಯ್ಯ, ವೆಯ್ಯಂಗಾಂ ಇಲ್ಸಿ ಮಂಜಯ್ಯ.	200 ರೂಪಾಯಿ ಕ್ರಯಪತ್ರ
9	ಡಿಟೋ ...	IV	11 / 1905—06	6—8—19 5	10 8—1905	ಬೇದೂರು ಬಡಗಿ ತಿಮ್ಮಾಚಾರಿ ಮತ್ತು ಬನಕ್ಕ.	ಕಲ್ಲುಮನೆ ಗೋಪಾಲಯ್ಯ ವಿಟ್ಟನ ಮಂಜಯ್ಯ.	46 ರೂಪಾಯಿನ ಸಾಲದಪತ್ರ
10	ಡಿಟೋ ...	ಡಿಟೋ	12 / 1905—06	ಡಿಟೋ	ಡಿಟೋ	ಡಿಟೋ	ಡಿಟೋ	167—8—0 ರೂಪಾಯಿಗೆ ಜಾನುವಾರ್ ಕ್ರಯ.
11	ತೀರ್ಥಹಳ್ಳಿ	IV	1 / 1904—05	21—7—1904	21—7—1904	ಮುರುಡಣ್ಣ	ಹಿರಿಯಣ್ಣಪ್ಪ	50 ರೂಪಾಯಿಗೆ ಫಸಲು ಕ್ರಯ
12	ಡಿಟೋ	II	2 / 1904—05	17—1—1904	19—9—1904	(1) ತಿಮ್ಮ, (2) ಸುಬ್ಬಗೌಡ, (3) ಬೊಮ್ಮ.	ಸೀತಾರಾಮಭಟ್ಟ	270 ರೂಪಾಯಿ ದೀಡುಪತ್ರ

13	ತೀರ್ಥಹಳ್ಳಿ ...	I	78 / 1904—05	30—10—1904	31—10—1904	ನಾಗಂಣ ..	ರಾಮಂಣ ಗೌಡ	200 ರೂಪಾಯಿ ಕ್ರಯಪತ್ರ
14	ಡಿಟೋ ..	II	4 / 1904—05	20—3—1904	16—12—1904	ನಾಗಾ ..	ಮಂಜಂಣಗೌಡ	100 ಡಿಟೋ
15	ಡಿಟೋ ...	IV	27 / 1904—05	27—11—1902	31—1—1905	ರುಕ್ಕಶೆಟ್ಟಿ, (2) ಚಂದಯ್ಯಶೆಟ್ಟಿ	ಶೇಷಜೋಯಿಸ ...	112 ರೂಪಾಯಿ ಕಂತು ಪತ್ರ
16	ಡಿಟೋ ...	ಡಿಟೋ	28 / 1904—05	16—12—1904	2—2—19..5	ಮುರುಡಯಾನೆ ತಮ್ಮೈಯ್ಯ ...	ವೆಂಕಂಣಾಚಾರ್ ...	51 ರೂಪಾಯಿ ಫಸಲು ಕ್ರಯ
17	ಡಿಟೋ ...	I	197 / 1904—05	16—2—1905	16—2—1905	ಸುಬ್ಬರಾಯ ಕೊಲ್ಲಪ್ಪೈಯ್ಯ ...	ಶ್ಯಾಮಜೋಯಿಸ ...	ಮೂಲಗೇಣಿ ಹಕ್ಕಿನ ರಾಜಿನಾಮೆ
18	ಡಿಟೋ ..	IV	38 / 1904—05	6—3—1905	7—3—1905	ಅಂಣಪ್ಪನಾಯಿಕ ...	ಅಂಣಪ್ಪೈಯ್ಯ ...	80 ರೂಪಾಯಿ ಚರಸೊತ್ತು ದೀಡು ಪತ್ರ.
19	ಡಿಟೋ ...	II	7 / 1904—05	25—7—1904	1—4—1905	ಯಲ್ಲ (2) ತಿಮ್ಮ ..	ಬಡಿಯಂಣ ...	141—9—0 ಆಧಾರ ಪತ್ರ
20	ಕುಂಸಿ ...	IV	2 / 1904—05	4—11—1904	4—11—1904	ಕುಂಸಿವಾಸಿ ತಳವಾರ ರಂಗಂಣನ ಮಗ ದುರುಗಂಣ.	ವೈಸವಳ್ಳಿವಾಸಿ ತಳವಾರ ಮಲ್ಲಂಣನ ಮಗ ನಿಂಗ.	1,000 ರೂಪಾಯಿ ಹಣ ಸಂದರ ಶೀದಿ.

ಎಂ. ನಾರಾಯಣರಾವ್,
ಡಿಸ್ಟ್ರಿಕ್ಟು ರಿಜಿಸ್ಟ್ರಾರ್.

38 474

ಬೆಂಗಳೂರು ಸಬಾರ್ಡಿನೇಟ್ ಜಡ್ಜಿರವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಹೊಸಕೋಟೆ ತಾಲ್ಲೂಕು ಬಿಡಗನಹಳ್ಳಿ ಹೋಬಳಿ ದೇವಶೆಟ್ಟಿಹಳ್ಳಿಲಿರುವ ಮರಿನಂಜುಂಡಪ್ಪನವರ ವಿಷಯದಲ್ಲಿ

ಸ್ 1906—07ನೆ ಇಸವಿ ದಿವಾಳಿ ಕೇಸ್ ಮಿಸ್. ನಂಬ್ರು 621 ಮತ್ತು ಮಿಸ್. 387—05-06.

ಹುಕುಂ.

ಮೇಲ್ಕಂಡ ಮರಿನಂಜುಂಡಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು-ಜೆ. ಹೆಚ್. ಭಾಭಾ, ಎಸ್ಕ್ವಯರ್, ಬಿ. ಎ., ಬ್ಯಾರಿಸ್ಟರ್ ಅಟ್ ಲಾ ಯವರ ರೂಬರೂಬ್ ಅರ್ಜಿದಾರರಾದ ಮರಿನಂಜುಂಡಪ್ಪನವರ ಪರವಾಗಿ ಪ್ಲೀಡರ ವೆಂ|| ಬಿ. ರಾಘವಾಚಾರ್ರು ಹಾಜರ್ರು ಮತ್ತು ಸದರೀಯವರ ಲೇಣೇದಾರರಾದ 1ನೆ ದೊಡ್ಡೇಗೌಡನನ್ನು ದರ್ಯಾಫ್ತು ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತು ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲೀ ಅಥವಾ ಲಾಯರಿ ಮೂಲಕವಾಗಿಯಾಗಲೀ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ,—1. ಈರಾರಡ್ಡಿ, 2. ಸರಾಫ್ ಪುಟ್ಟಣ್ಣ, 3. ರುದ್ರಪ್ಪ, 4. ಮುತ್ತಪ್ಪ, 5. ನಾಗಪ್ಪ. ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಮರಿನಂಜುಂಡಪ್ಪನು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರ್ರುತ್ತಿಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟು ಇರುತ್ತೆ.

ಸ್ 1907ನೆ ಇಸವಿ ಆಗಸ್ಟು 9ನೆ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ಮತ್ತು ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು	ಲೇಣೇದಾರ್ರು ಅಥವಾ ಹಕ್ಕುದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು	ಯಾವಾಗ ಕೊಡಬೇಕಾದ್ದು	ದೇಣೆಯ್ದು ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಷರಾ.
		ರೂ. ಆ. ಪೈ.			
1	ಹೊಸೂರು ತಾಲ್ಲೂಕು ಸತ್ಯಮಂಗಲದಲ್ಲಿರುವ ದೊಡ್ಡೆಗೌಡ.	271 13 0	...	ಡಿಕ್ರಿ ಬಾಬತು ...	ಕೃಷ್ಣಗಿರಿ ಮುನಸೀಫ್ ಕೋರ್ಟು ಅಸಲ್ 188—1903.
2	ದೊಡ್ಡಬಳ್ಳಾಪುರದಲ್ಲಿರುವ ಸರಾಫ್ ಪುಟ್ಟಣ್ಣ.	490 0 0	...	ಡಿಟೋ ...	ದೊಡ್ಡಬಳ್ಳಾಪುರದ ಮುನಸೀಫ್ ಕೋರ್ಟು ಅಸಲ್ 280-1903—04.
3	ಹೊಸಕೋಟೆ ತಾಲ್ಲೂಕು ಬಿಡಿಗನಹಳ್ಳಿಲಿರುವ ಯಜಮಾನ್ ರುದ್ರಪ್ಪ.	447 2 3	...	ಕೈಸಾಲದ ಬಾಬತು ...	...
4	ಡಿಟೋ ತಾಲ್ಲೂಕು ದೊಡ್ಡದುನ್ನಸಂದ್ರದಲ್ಲಿರುವ ಕೊರಮರ ಮುತ್ತಪ್ಪ.	12 0 0	...	ಡಿಕ್ರಿ ಬಾಬತು ...	ಬೆಂಗಳೂರು ಸಬ್ ಜಡ್ಜಿ ಕೋರ್ಟು—ಕೋರ್ಟು ಖರ್ಚು ಬಾಬತು.
5	ಡಿಟೋ ಸ್ಥಳದಲ್ಲಿರುವ ಕೊರಮರ ಮುನಿವೆಂಕಟಪ್ಪ ಈತನಿಂದ ಡಿಕ್ರಿ ಮೇಜೋರ್ ಹೊಂದಿರುವ ನೀಲಿ ನಾಗಪ್ಪ.	11 0 0	...	ಡಿಟೋ	ಡಿಟೋ
6	ಬೆಂಗಳೂರು ತಾಲ್ಲೂಕು ಹೂಡಿಯಲ್ಲಿರುವ ಹನುಮರಡ್ಡಿ ಮಗ ಈರಾರಡ್ಡಿ.	220 0 0	...	ಡಿಟೋ ...	ಬೆಂಗಳೂರು ಅಡೀಷನಲ್ ಮುನಸೀಫ್ ಕೋರ್ಟು ಅಸಲ್ 306–1899-00
	ಜುಮ್ಲಾ ...	1,451 15 3			

ಜೆ. ಹೆಚ್. ಭಾಭಾ,
ಸಬಾರ್ಡಿನೇಟ್ ಜಡ್ಜ್.

ಅಮೃತಮಹಲ್ ಇಲಾಖಾ.

ಪ್ರಸಿದ್ಧ ಪತ್ರಿಕೆ.

ತಾರೀಖು 6—7ನೆ ಸೆಪ್ಟಂಬರ್ 1907, ಬೆಂಗಳೂರು.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ — ಮೈಸೂರು ಸೀಮೆಯ ಅಮೃತಮಹಲ್ ಇಲಾಖಾ ಕೆಲವು ಗಂಡು ದಾಸುಗಳು ಮೈಸೂರಿನಲ್ಲಿ ನಾಳೆ ದಸರಾ ಸಂಬಂಧವಾಗಿ ನಡಿಯುವ ವಸ್ತು ಪ್ರದರ್ಶನ ಶಾಲೆಯ ಕಟ್ಟಡದ ಬಳಿ ಬರುವ 1907ನೆ ಅಕ್ಟೋಬರ್ ಮಾಹೆ 14ನೆ ತಾರೀಖಿನಲ್ಲಿ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಹರಾಜಿನಲ್ಲಿ ಪಡಿಯಬಹುದು.

ಷರತ್ತುಗಳು :—

(i) ಹರಾಜು ಖೈದಾದ ಕೂಡ್ಲೆ ಪೂರಾ ಮೊಬಲಗು ಪಾವತಿ ಮಾಡಬೇಕು.

(ii) ಹರಾಜಿನಲ್ಲಿ ಪಡೆದ ಎತ್ತನ್ನ ವಸ್ತುಪ್ರದರ್ಶನ ಆಖೈರು ಆದನಂತರ ಹರಾಜುದಾರನ ಸುಫರ್ದು ಮಾಡಲ್ಪಡುತ್ತೆ.

ಹೆಚ್. ನಂಜುಂಡರಾಜೇ ಅರಸ್,
ಸೂಪರಿಂಟೆಂಡೆಂಟ್.

ಮೈಸೂರ ಗೆಜೆಟ್ ಚಂದಾದಾರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ. ರೂ.	ಅ.	ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ. ರೂ.	ಅ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಚಷ್ ಮಾಹೇ ಯಾ ಕ್ವಾರ್ಟರಿಂಗೆ			ದಾಮಾಷಾಯಿ ಪ್ರಕಾರ ದರಗಳು.	

	ರೂ.	ಅ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟ್‌ಗಳು ಯಾವದೂ ಇಲ್ಲದಿದ್ದರೆ.	0	8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮಾರ್ಚ್ಕಂ 155ನೆ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭೋವಿಕೆ ಕೆಲಸ ನೋಡುತಲಿದ್ದಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ಒಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ್ 21ನೆ ಮಾರ್ಚ್ಕಂ 24205—6—ಜಿ, 6200ನೆ ನಂಬರ್ ಗವರ್ನಮೆಂಟ್ ಆರ್ಡರ್ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ್ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

			ರೂ.	ಅ.
ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇಷನ್ ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ನೋಟಿಸ್‌ಗಳು :—				
ಮೊದಲನೇ ದಫಾ ಛಾಯಿಷ್ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ		..	2	8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ		..	1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 317ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಗೆ ನೋಟಿಸ್‌ಗಳಿಗೆ :—				
ಮೊದಲನೇ ಸಲಕ್ಕೆ	..	..	5	0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ	..	..	2	8
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.				
ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಗೆ ರೆವಿನ್ಯೂ ಆಫೀಸರ್‌ಗಳು ಕೊಡುವ ನೋಟಿಸ್‌ಗಳಿಗೆ :—				
ಮೊದಲನೇ ಸಲಕ್ಕೆ	ಪುಟ 1ಕ್ಕೆ	..	10	0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ	,,	..	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ :—				
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ ..		0	8
ಎರಡನೇ ದಫಾ ಡಿಟೋ	ಡಿಟೋ		0	6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ	..	..	0	4

ಷರಾ.—ಗೆಜೆಟ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜ ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಗೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಅಫೀಸ ಮಜಕೂರಿಗೆ ದಾಖಲೆ ಬಗ್ಗೆ ರವಾನಿಸತಕ್ಕದ್ದು. ಮನಿ ಆರ್ಡರ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ ಪಡೆಯುವ ಬಗ್ಗ್ಯಾದ ದರಖಾಸ್ತುಗಳು ಮೈಸೂರ ಗವರ್ನಮೆಂಟ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟೀಸ ವ ಇಸ್ತಿಹಾರನಾಮೆಗಳೂ ಆ ಗೆಜೆಟ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ವಳಗಾಗಿ ಕಂಪೈಲರ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ ಇಲ್ಲ.

ಸಿ. ಹೆಚ್. ಪಿಟ್ಸ್,
ಕಂಪೈಲರ, ಮೈಸೂರ ಗೆಜೆಟ.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪ್ರಸಿದ್ಧಪಡಿಸಲ್ಪಟ್ಟದ್ದು. [ನಂ. 39

ಬೆಂಗಳೂರು, ಗುರುವಾರ, ಸೆಪಟಂಬರ್ ತಾ॥ 26, ಸನ್ 1907.

II ನೆ ಭಾಗ

ಇಂಡ್ಯ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಮೈಸೂರು ಶೀಮೆಯ ರೆವಿನ್ಯೂ ಕಮಿಷನರವರ ಆಫೀಸ್.

ತಾರೀಖು 21ನೆ ಸಪಟಂಬರ್ 1907.

ನಂ. 3748, ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ರಿಕಾರ್ಡುಗಳನ್ನು ಕಾಪಾಡತಕ್ಕ ವಿಷಯದಲ್ಲಿಯೂ ಮತ್ತು ದಾಖಲ್ಮಾಡಿಕೊಳ್ಳತಕ್ಕ ವಿಷಯದಲ್ಲಿಯೂ ಗವರ್ನಮೆಂಟಿನಿಂದ ಸಾದರಾಗಿರುವ 1903ನೆ ಇಸವಿ ನವೆಂಬರ್ 19ನೆ ಮುರ್ಸಂ R. 1356—65ನೆ ನಂಬರಿನ ನಿಬಂಧನೆಗಳ ಭಾಷಾಂತರವನ್ನು ಸಂಬಂಧಪಟ್ಟವರ ತಿಳವಳಿಕೆ ಬಗ್ಗೆ ಈ ಕೆಳಗೆ ಪ್ರಚುರ ಪಡಿಸಿದೆ.

ರಿಕಾರ್ಡುಗಳನ್ನು ಕಾಪಾಡತಕ್ಕ ವಿಷಯದಲ್ಲಿಯೂ ಮತ್ತು ದಾಖಲ್ಮಾಡಿಕೊಳ್ಳುವ ವಿಷಯದಲ್ಲಿಯೂ ರಿಕಾರ್ಡು ಕೀಪರುಗಳು ಆಚರಿಸಬೇಕಾದ ಆಚರಣೆಗಳ ಬಗ್ಯೆ ಡಿಸ್ಟ್ರಿಕ್ಟು ಆಫಿಸರುಗಳು ರಿಕಾರ್ಡು ಮೇಲೆ ತನಿಖೆ ಮಾಡುವ ವೇಳೆ ನಡಿಸಬೇಕಾದ ನಡವಳಿಕೆಗಳ ಬಗ್ಯೆ ಸಹಾ ಗವರ್ನಮೆಂಟಿನಿಂದ ಸಾದರಾಗಿರುವ 1903ನೆ ಇಸವಿ ನವಂಬರ 19ನೆ ಮುರ್ಸಂ R. 1356—65ನೆ ನಂಬರಿನ ನಿಬಂಧನೆಗಳ ವಿವರ :—

1. ಪ್ರತಿ ಒಂದು ಬಾಬಿನ ರಿಕಾರ್ಡಿಗೂ ಬೇರೆ ಗಡಗಂಚಿಯನ್ನಾಗಲಿ ಅಥವಾ ಸ್ಥಳವನ್ನಾಗಲಿ ಏರ್ಪಡಿಸಬೇಕು.

2. ಗಡಗಂಚಿಯಲ್ಲಿ ಯಾವ ಇಲಾಖೆಯ ಕಾಗದ ಪತ್ರಗಳನ್ನು ಇಟ್ಟಿವೆ ಎಂಬುವದನ್ನು ತೋರಿಸತಕ್ಕ ಬಗ್ಯೆ ಸದರಿ ಗಡಗಂಚಿಯ ಮುಂಭಾಗದಲ್ಲಿ ಆ ಇಲಾಖೆಯ ಹೆಸರನ್ನು ಸ್ಪಷ್ಟವಾಗಿ ಬಾಳಿಕೆ ಇರುವಂತೆ ಬರಿಯಬೇಕು. ದೊಡ್ಡದೊಡ್ಡ ಅಕ್ಷರದಲ್ಲಿ ಅಚ್ಚು ಹಾಕಿರತಕ್ಕ ಚೀಟಿಯನ್ನು ಅಂಟಿಸುವದು ಉತ್ತಮ.

3. ಕಾಯಂ ಆಗಿ ಇಡತಕ್ಕ ಕಾಗದ ಪತ್ರಗಳು ಅಂದರೆ ಹಿಂದಿನ ಸರ್ವೆ ರಿಕಾರ್ಡುಗಳು ವಗೈರೆ ಇಡತಕ್ಕ ಗಡಗಂಚಿನಲ್ಲಿ ಯಾವಾಗಲೂ ಧಾರಾಳವಾಗಿ ಗಾಳಿ ಆಡುವದಕ್ಕೆ ಅವಕಾಶವಿರುವಂತೆ ಅದರ ಮುಂಭಾಗ ಮತ್ತು ಪಕ್ಕಗಳು ಸಹಾ ತಂತಿಯಿಂದ ಹೆಣಿಯಲ್ಪಟ್ಟಿರಬೇಕು.

4. ಕಾಗದಗಳು ಕಟ್ಟುಗಳಿಂದ ಜರಗಿ ಹೋಗದಂತೆ ಕಟ್ಟಲು ಹೆಚ್ಚು ನಿಗಾ ಕೊಡತಕ್ಕದ್ದು.

5. ಕಾಯಂ ಆಗಿ ಇಡತಕ್ಕ ಬಗ್ಯೆ ಚುನಾಯಿಸಲ್ಪಟ್ಟ ರಿಕಾರ್ಡುಗಳನ್ನು ವಿಷಯಾನುಸಾರವಾಗಿಯೂ ಮತ್ತು ಕಾಲಕ್ರಮವಾಗಿಯೂ ವಿಂಗಡಿಸಿ ದಫ್ತರಗಳಲ್ಲಿ ಕಟ್ಟಿಡಬೇಕು. ಆಲ್ಮೈರಾಗಳಿದ್ದರೆ ಉತ್ತಮ. ಇಂಥಾ ದಫ್ತರ ಅಥವಾ ಆಲ್ಮೈರಾಗಳಲ್ಲಿ ಯಾವ ತಾರೀಖು ಲಾಗಾಯಿತು ಯಾವ ತಾರೀಖು ವರಿಗಿನ ಯಾವ ವಿಷಯದ ರಿಕಾರ್ಡುಗಳು ಅಡಗಿವೆ ಎಂಬುವದನ್ನು ಸದರಿ ದಫ್ತರ ಅಥವಾ ಆಲ್ಮೈರಾದ ಹೊರಭಾಗದಲ್ಲಿ ಬರದಿರಬೇಕು.

5. (b) ಪ್ರತಿ ಒಂದು ಫೈಲಿನಲ್ಲಿಯೂ ಅಥವಾ ಕಟ್ಟಿನಲ್ಲಿಯೂ ಒಂದು ವಿಷಯಕ್ಕೆ ಸಂಬಂಧಪಟ್ಟ ಎಲ್ಲಾ ಕಾಗದಗಳು ಅಡಗಿದ್ದು ಸಂಪೂರ್ತಿಯಾಗಿರಬೇಕಲ್ಲದೆ ಅದರಲ್ಲಿನ ಕಾಗದಗಳನ್ನೆಲ್ಲಾ ಸರಿಯಾಗಿ ವಿಂಗಡಿಸಿ ಫೇರೀಸ್ತು ತಯಾರ್ಮಾಡಿ ಧಪ್ಪವಾದ ಕಾಗದದ ಮುಖಪರ್ದು ಹಾಕಿ ಪುಸ್ತಕ ರೂಪದಲ್ಲಿ ಹೊಲದಿಡಬೇಕು.

6. ಇಂಥಾ ರಿಕಾರ್ಡುಗಳ ವಿಷಯ ಭಾಗಗಳನ್ನು ತಿಳಿಸತಕ್ಕ ಅನುಕ್ರಮಣಿಕೆಯನ್ನು (Index) ಅಕ್ಷರಮಾಲೆ ಅನುಸರಿಸಿ ತಯಾರ್ಮಾಡಿ ಇಡಬೇಕು. ಅನುಕ್ರಮಣಿಕೆಯಲ್ಲಿ ಇದರಡಿ ನಮೂದು ಮಾಡುವ ತಪಶೀಲು ಇರಬೇಕು.

(1) ವಿಷಯದ ಜಂಜರಾ ನಂಬರು.
(2) ವಿಷಯದ ಮೇಸ್ತಕು.
(3) ರಿಕಾರ್ಡಿನ ವಿಷಯ ಜಾಗ್ರತೆ ಕಂಡು ಹಿಡಿಯಲು ತೋರಿಸುವ ಬಗ್ಯೆ ಅವಶ್ಯಕವಾದ ಸಂಜ್ಞಾ ಶಬ್ದಗಳು.
(4) ಆಖೈರ್ ಫೈಸಲ್ ತಾರೀಖು.
(5) ದಫ್ತರ ಸಂಖ್ಯೆ.
(6) ದಫ್ತರದಲ್ಲಿ ಇರತಕ್ಕ ಕಾಗದಗಳ ಪೈಕಿ ಎಷ್ಟನೇ ಸಂಖ್ಯೆಯ ಕಾಗದ.
(7) ಗಡಗಂಚಿಯ ನಂಬರು.

7. ಸೆಟಲ್‌ಮೆಂಟು ರಿಜಿಸ್ಟರುಗಳು, ನಕಾಶೆಗಳು, ಪುಸ್ತಕಗಳು ಮತ್ತು ಗ್ರಾಮ ಲೆಕ್ಕಗಳು ಇವುಗಳು ಎಷ್ಟನೇ ನಂಬರಿನ ಗ್ರಾಮಕ್ಕೆ ಸಮ್ಬಂಧಪಟ್ಟವುಗಳೋ ಆ ನಂಬರು ಅನುಸರಿಸಿ ವಿಂಗಡಿಸಲ್ಪಡಬೇಕು. ಅಂದರೆ ಗ್ರಾಮಗಳಿಗೆ ಯಾವದಾದರೂ ಒಂದು ಕ್ರಮವನ್ನು ಅನುಸರಿಸಿ ನಂಬರು ಕೊಡಬೇಕು.

8. ಕ್ಲಿಪ್ತ ಕಾಲದ ವರಿಗೆ ಮಾತ್ರ ಇಡಲ್ಪಡತಕ್ಕ ಬಗ್ಯೆ ಚುನಾಯಿಸಲ್ಪಟ್ಟ ರಿಕಾರ್ಡುಗಳನ್ನು ಕಾಲಕ್ರಮವಾಗಿ ವಿಂಗಡಿಸಿ ದಫ್ತರಗಳಲ್ಲಿ ಇಡಬೇಕು. [ಆದರೆ ಈ ಮೊದಲೆ ಗ್ರಾಮವಾರಾಗಿಯೂ ಕಾಲಕ್ರಮವಾಗಿಯೂ ವಿಂಗಡಿಸಲ್ಪಟ್ಟ ರಿಕಾರ್ಡುಗಳನ್ನು ಪುನಃ ಎಷ್ಟು ಕಾಲದವರಿಗೆ ಅವುಗಳನ್ನು ಇಟ್ಟಿರಬೇಕೋ ಆ ಕಾಲಕ್ರಮವನ್ನು ಅನುಸರಿಸಿ ವಿಂಗಡಿಸತಕ್ಕ ಅವಶ್ಯಕವಿಲ್ಲ. ತಾ॥ 20-2-1907ನೆ ಮರ್ಕ್ಯಂ ನಂಬರು R. 7617-25—L. R. 21-06—37ನೆ ಪ್ರೊಸೀಡಿಂಗ್ಸ್.]

9. ಈ ದಫ್ತರುಗಳಿಗೆ ಒಳಗಿರುವ ಕಾಗದಗಳ ಕಾಲಕ್ರಮವನ್ನು ಅನುಸರಿಸಿ ಮೇಲೆ ಚೀಟಿ ಹಚ್ಚತಕ್ಕದ್ದು. ಇದೇ ಕ್ರಮವನ್ನನುಸರಿಸಿ ದಫ್ತರುಗಳನ್ನು ಗಡಗಂಚಿಯಲ್ಲಿಡತಕ್ಕದ್ದು.

10. ಲೆಕ್ಕಗಳು, ರಿಜಿಸ್ಟರುಗಳು, ತೀರ್ಪುಗಳು, ಗೆಜೆಟ್ಟುಗಳು, ಈ ತರಹದ ಕಾಗದ ಪತ್ರಗಳನ್ನು ಸಾಧ್ಯವಾದಮಟ್ಟಿಗೂ ಪ್ರತ್ಯೇಕ ಪ್ರತ್ಯೇಕ ದಫ್ತರುಗಳಲ್ಲಿಯೇ ಇಡಬೇಕು.

10. (a) ಗ್ರಾಮ ಲೆಕ್ಕದ ಮ್ಯಾನ್ಯುಯಲ್‌ನಲ್ಲಿ ವಿಧಾಯಕವಾಗಿರುವ ಎಲ್ಲಾ ಲೆಕ್ಕಗಳನ್ನೂ ರಿಕಾರ್ಡು ಕೊಠಡಿಯಲ್ಲಿರುವ ಇತರ ರಿಕಾರ್ಡುಗಳೊಡನೆ ಸೇರಿಸದೆ ಪ್ರತ್ಯೇಕಿಸಿ ರಿಕಾರ್ಡು ವಿಂಗಡದ ರೂಲ್ಸಿಗೆ ಅನುಸರಿಸಿ ವಿಲೇವಾರಿಮಾಡತಕ್ಕದ್ದು. (ತಾರೀಖು 3-4-07ನೆ ಮರ್ಕ್ಯಂ ನಂಬರು R. 8966-7—L. R. 302-06—4ನೆ ಪ್ರೊಸೀಡಿಂಗ್ಸ್.)

11. ರಿಕಾರ್ಡಿನ ಎಲ್ಲಾ ಗಡಗಂಚುಗಳಿಗೂ ನಂಬರು ಹಾಕಿ ಅಂತಸ್ತುಗಳಾಗಿ (Compartments) ವಿಭಾಗಿಸಬೇಕು. ಗಡಗಂಚಿನ ನಂಬರನ್ನು ಅಂತಸ್ತಿನ ನಂಬರನ್ನು ಸಹಾ ಸ್ಪಷ್ಟವಾಗಿ ಅಚ್ಚಿನ ಅಕ್ಷರದಲ್ಲಿ ಬರೆಯಬೇಕು.

12. ಪ್ರತಿ ಅಂತಸ್ತಿನಲ್ಲಿರತಕ್ಕ ಪ್ರತಿ ದಫ್ತರದ ಕಾಗದ ಪತ್ರಗಳನ್ನು ತೋರಿಸತಕ್ಕ ಪಟ್ಟಿ ಒಂದನ್ನು ಪುಸ್ತಕದ ನಮೂನೆಯಲ್ಲಿ ತಯಾರ್ಮಾಡಿ ಇಡಬೇಕು.

ಉದಾಹರಣೆ.

ಗಡಗಂಚಿ ನಂಬರು.	ಅಂತಸ್ತು ನಂಬರು.
ದಫ್ತರ ನಂಬರು 1.	
2.	
3.	

13. ದಾಖಲೆ ಬಗ್ಯೆ ಕಾಗದ ಪತ್ರಗಳನ್ನು ರಿಕಾರ್ಡು ಕೊಠಡಿಯಿಂದ ಹೊರಕ್ಕೆ ಕೊಟ್ಟಾಗ, ಈ ಸಂಗತಿ ಕುರಿತು ರಿಕಾರ್ಡು ಇಷ್ಯೂ ರಿಜಿಸ್ಟರಿನಲ್ಲಿ ಬರೆದುಕೊಂಡು, ದಾಖಲೆ ಬಗ್ಯೆ ಜೊತೆಗೆ ಕೊಟ್ಟ ರಿಕಾರ್ಡು ಇದ್ದ ಜಾಗದಲ್ಲಿ, ಈ ಕೆಳಗೆ ನಮೂದು ಮಾಡುವ ತಪಶೀಲು ತೋರಿಸತಕ್ಕ ಒಂದು ಚೀಟಿಯನ್ನಿಡತಕ್ಕದ್ದು.

1. ಇಷ್ಯೂ ರಿಜಿಸ್ಟರಿನಲ್ಲಿನ ಜಂಜರ ನಂಬರು.
2. ಕೊಟ್ಟ ಕಾಗದದ ತಾರೀಖು ಮತ್ತು ನಂಬರು.
3. ಯಾವ ಆಫೀಸರಿಗೋಸ್ಕರ ಕೊಟ್ಟದ್ದು.
4. ಯಾವ ತಾರೀಖಿನಲ್ಲಿ ಕೊಟ್ಟದ್ದು.
5. ಯಾವ ದಾಖಲೆ ಬಗ್ಯೆ ಕೊಟ್ಟದ್ದು.
6. ತೆಗೆದುಕೊಂಡು ಹೋದ ನವುಕರನ ರುಜು.
7. ರಿಕಾರ್ಡು ಕೀಪರನ ಸಣ್ಣ ರುಜು.

ರಿಕಾರ್ಡಿನಿಂದ ಕಾಗದ ಪತ್ರಗಳನ್ನು ದಾಖಲೆ ಬಗ್ಯೆ ಹೊರಗೆ ತೆಗೆದುಕೊಂಡು ಹೋಗುವ ನವುಕರನು ಅದನ್ನು ಸಾಧ್ಯವಾದಷ್ಟು ಜಾಗ್ರತೆ ವಾಪಸು ಮಾಡುವ ವಿಷಯದಲ್ಲಿ ಜವಾಬ್ದಾರನಾಗಿ ಇರುತ್ತಾನೆ.

14. ರಿಕಾರ್ಡಿನಿಂದ ಹೊರಗೆ ಕೊಡತಕ್ಕ ಕಾಗದ ಪತ್ರಗಳನ್ನು ತೋರಿಸುವ ಇಷ್ಯೂ ರಿಜಿಸ್ಟರು ಈ ಕೆಳಗೆ ನಮೂದಾಗುವ ನಮೂನೆಯಲ್ಲಿರಬೇಕು.

(1) ಜಂಜರಾ ನಂಬರು.
(2) ರಿಕಾರ್ಡಿಗೆ ಬಂದ ತಾರೀಖು.
(3) ರಿಕಾರ್ಡಿನಿಂದ ಕೊಟ್ಟ ತಾರೀಖು.
(4) ತೆಗೆದುಕೊಂಡ ಉದ್ದೇಶ.
(5) ತೆಗೆದುಕೊಳ್ಳುವ ನವುಕರನ ಪೂರಾ ರುಜು.
(6) ದಾಖಲೆ ಕೊಟ್ಟ ರಿಕಾರ್ಡು ಕೀಪರ ಅಥವಾ ಅವನ ಅಸಿಸ್ಟೆಂಟಿನ ಚಿಕ ಸಹಿ.
(7) ರಿಕಾರ್ಡಿಗೆ ವಾಪಸು ಬಂದ ತಾರೀಖು.
(8) ವಾಪಸು ಕೊಟ್ಟ ನವುಕರನ ರುಜು.
(9) ವಾಪಸು ತೆಗೆದುಕೊಂಡ ರಿಕಾರ್ಡು ಕೀಪರು ಅಥವಾ ಅವನ ಕೈ ಕೆಳಗಿನ ನವುಕರನ ರುಜು.
(10) ಷರಾ.

15. ನಾಶಪಡಿಸತಕ್ಕ ಬಗ್ಯೆ ಚುನಾಯಿಸಲ್ಪಟ್ಟ ರಿಕಾರ್ಡುಗಳನ್ನು, ಪುಸ್ತಕಗಳನ್ನು, ಮತ್ತು ಕಾಗದಗಳನ್ನು ಶಿರಸ್ತೆದಾರ ಸಮಕ್ಷಮ ನಾಶಪಡಿಸಬೇಕು. ಹೀಗೆ ನಾಶಪಡಿಸಲ್ಪಟ್ಟ ಎಲ್ಲಾ ರಿಕಾರ್ಡುಗಳನ್ನು ತೋರಿಸುವ ಒಂದು ರಿಜಿಸ್ಟರು ಇಡಬೇಕು. ಈ ರಿಜಿಸ್ಟರಿನಲ್ಲಿ ನಾಶಪಡಿಸಿದ ಕಾಗದಗಳ ಸಾರಾಂಶವನ್ನು ಸಂಕ್ಷೇಪವಾಗಿ ನಮೂದಿಸತಕ್ಕದ್ದು. [ಪರಂತು ಇದುವರಿಗೆ "ಇಂದಾ" "ಗೆ" ನಂಬರು ದಾಖಲ್ಮಾಡಿ ನಾಶಪಡಿಸಿರತಕ್ಕ ರಿಕಾರ್ಡುಗಳಿಗೆ ಮೇಲ್ಕಂಡ ರೀತಿ ಮಾಡಬೇಕಾದ ಅವಶ್ಯಕವಿಲ್ಲ. ನಾಶಪಡಿಸತಕ್ಕ ಎಲ್ಲಾ ರಿಕಾರ್ಡುಗಳಿಗೂ ನಾಶಪಡಿಸಲ್ಪಟ್ಟಿದೆ ಎಂಬ ಷರಾವನ್ನು ಅವಕ್ಕೆ ಸಂಬಂಧಪಟ್ಟ "ಇಂದಾ" "ಗೆ" ನಂಬರುಗಳ ಪಕ್ಕದಲ್ಲಿ ನಮೂದು ಮಾಡತಕ್ಕದ್ದು. ತಾರೀಖು 8-10-06ನೆ ಮರ್ಕ್ಯಂ ನಂಬರು R. 3700-8—L. R. 127-06—ನೆ ಗವರ್ನಮೆಂಟು ಪ್ರೊಸೀಡಿಂಗ್ಸ್.]

16. ಪ್ರತಿ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರು ಇಸವಿ ಸಾಲಿಗೆ (ಕ್ಯಾಲೆಂಡರ್ ವರುಷ) ಜಮಾಬಂದಿ ಪೂರೈಸಿದ ಕೂಡ್ಲೆ, ತಮ್ಮ ಡಿಸ್ಟ್ರಿಕ್ಟಿನಲ್ಲಿರತಕ್ಕ ರಿಕಾರ್ಡುಗಳ ಸ್ಥಿತಿ ಕುರಿತು ರೆವಿನ್ಯೂ ಕಮಿಷನರವರಿಗೆ ಒಂದು ರಿಪೋರ್ಟನ್ನು ಕಳುಹಿಸಬೇಕು. ಈ ರಿಪೋರ್ಟಿನಲ್ಲಿ ಈ ಕೆಳಗೆ ನಮೂದು ಮಾಡುವ ತಪಶೀಲುಗಳು ಅಡಗಿರಬೇಕು.

(1) ಪುಸ್ತಕ ಭಂಡಾರದ ಸ್ಥಿತಿ; ರೆಗ್ಯುಲೇಷನ್ಗಳು ರೂಲ್ಸು ನಿಬಂಧನೆಗಳು ವಗೈರೆ ತಹಲ್‌ವರಿಗೆ ತಿದ್ದುಪಾಟಾಗಿದೆಯೆ ಹ್ಯಾಗೆ?

(2) ರಿಕಾರ್ಡು ಕೊಠಡಿ ದುರಸ್ತು ಸ್ಥಿತಿಯಲ್ಲಿ ಗೆದ್ದಲು ಹಿಡಿಯದಂತೆ ಮೆಲ್ಛಾವಣಿ ಸೋರದ ರೀತಿ ಭದ್ರವಾಗಿದೆಯೋ? ರಿಕಾರ್ಡು ಕೊಠಡಿಯನ್ನು ಶುಚಿಯಾಗಿ ಇಟ್ಟುಕೊಂಡು ಇದ್ದಾರೆಯೋ? ಹೊರಗಡೆಯಿಂದ ಯಾರೂ ಒಳಕ್ಕೆ ಬಾರದಂತೆ ಭದ್ರವಾಗಿ ಇದೆಯೋ? ಮತ್ತು ರಿಕಾರ್ಡು ಕೊಠಡಿ ಒಳಗಡೆ ಸಾಕಾದಷ್ಟು ಬೆಳಕು ಉಂಟೆ?

(3) ರಿಕಾರ್ಡುಗಳಿಗೆಲ್ಲಾ ಸರಿಯಾಗಿ ಅನುಕ್ರಮಣಿಕೆಯನ್ನು (Index) ತಯಾರ್ಮಾಡಿ ಅವುಗಳನ್ನು ಸರಿಯಾದ ಸ್ಥಿತಿಯಲ್ಲಿ ಇಟ್ಟುಕೊಂಡಿದ್ದಾರೆಯೆ?

(4) ಅನುಪಯೋಗವಾದ ರಿಕಾರ್ಡುಗಳನ್ನೆಲ್ಲಾ ಆ ಸಾಲಿನಲ್ಲಿ ನಾಶಪಡಿಸಿದ್ದಾರೆಯೆ?

(5) ಗ್ರಾಮ ಲೆಕ್ಕಗಳೆಲ್ಲಾ ಕ್ರಮವಾಗಿ ವಿಂಗಡಿಸಲ್ಪಟ್ಟವೆಯೆ?

A. ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಕಚೇರಿಗಳಲ್ಲಿ ಕಾಯಂ ಆಗಿ ಇಡತಕ್ಕ ಕಾಗದಗಳ ಲಿಸ್ಟು ಯಾನೆ ಪಟ್ಟಿ.

ನೆಂಬರು.	ಕಾಗದದ ಸ್ವಭಾವ.	ಎಷ್ಟು ಕಾಲದ ವರಿವಿಗೆ ಇಡತಕ್ಕದ್ದು.
1	ವಂಶಪಾರಂಪರ್ಯವಾದ ಗ್ರಾಮ ಅಥವಾ ಇತರ ನವುಕರಿಗಳ ಸಂಬಂಧಪಟ್ಟ ಫೈಸಲಾತಿ ರಿಕಾರ್ಡುಗಳು, ಪ್ರೊಸೀಡಿಂಗ್ಸಗಳು, ರಿಜಿಸ್ಟರುಗಳು ಮತ್ತು ಮೊಕದ್ದಮೆ ಕಾಗದಗಳು.	
2	ಇನಾಂದಾರ್ರುಗಳು, ವಂಶಪಾರಂಪರ್ಯವಾದ ಆಫೀಸರುಗಳು ಮತ್ತು ಇತರರ ಮರಣಕ್ಕೆ ಸಂಬಂಧಪಟ್ಟ, ಅಲ್ಲದೆ ಇವರ ನಂತರ ವಾರಸಿಮೇಲೆ ಇವರ ಐವಜಿಗೆ ದಾಖಲಾದವರಿಗೆ ಸಂಬಂಧಿಸುವ ಕಾಗದ ಪತ್ರಗಳು.	
3	ವಜಾ ಆದ ಕಂದಾಯ, ಸುಂಕ, ಹಕ್ಕು, ಮತ್ತು ಪ್ರತ್ಯಕ್ಷವಾದ ತೆರಿಗೆಗಳಿಗೆ ಸಂಬಂಧಪಟ್ಟ ತಖ್ತೆಗಳು ಈ ಸಂಬಂಧ ಪರಿಹಾರದ್ರವ್ಯದ ವಿಷಯದಲ್ಲಿನ ರಿಕಾರ್ಡುಗಳು ಮತ್ತು ಮುಖ್ಯ ಕಾಗದಗಳು.	
4	ಧರ್ಮಾದಾಯ ಮತ್ತು ಇತರ ನಗದು ವೇತನಕ್ಕೆ ಸಂಬಂಧಪಟ್ಟ ಎಲ್ಲಾ ತಃಖ್ತೆಗಳು ಮತ್ತು ರಿಕಾರ್ಡುಗಳು, ಧರ್ಮಸ್ಥಾಪನೆ ವಿಷಯದಲ್ಲಿ ಕೊಟ್ಟ ಮೂಲದ್ರವ್ಯದ ಸಂಬಂಧದ ತಃಖ್ತೆಗಳು, ರಿಕಾರ್ಡುಗಳು ಮತ್ತು ಈ ಸಂಬಂಧವಾದ ವಂಶವೃಕ್ಷಗಳು, ಸನ್ನದುಗಳು.	
5	ಎಲ್ಲಾ ತರಹೆ ಇನಾಂ ಗ್ರಾಮಗಳ ಬೇರೀಜು (Revenue) ವಿಚಾರದಲ್ಲಿ ತಯಾರಾದ ತಃಖ್ತೆಗಳು ಮತ್ತು ಇದೇ ವಿಷಯಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು.	
6	ಜಮೀನು ಹಿಡುವಳಿ, ಶಿಸ್ತು ಮತ್ತು ಕಂದಾಯದ ದರದ ಬಾಬುಗಳಿಗೆ, ಮತ್ತು ಆ ಡಿಸ್ಟ್ರಿಕ್ಟಿನ ಸ್ಥಳ ಹಿಡುವಳಿ ಪದ್ಧತಿಗೆ (Local Peculiarities) ಸಂಬಂಧಪಟ್ಟ ತಿಳುವಳಿಕೆಗಳನ್ನು ಅಡಗಿಸಿಕೊಂಡಿರುವ ಕಾಗದಗಳು.	
7	ಗ್ರಾಮಗಳಲ್ಲಿನ ಸನ್ನದು ರಿಜಿಸ್ಟರುಗಳು ಮತ್ತು ಹಂಗಾಮಿಯಾಗಿಯಾ ಗೇಣಿಗೆ ಕೊಡಲ್ಪಟ್ಟ ಜಮೀನುಗಳ ರಿಜಿಸ್ಟರುಗಳು.	
8	ಸರ್ವೆ ಆದ ಗ್ರಾಮಗಳ ನಕಾಶೆಗಳು, ಪ್ಲಾನುಗಳು ವಗೈರೆ ಮತ್ತು ಆಕಾರ ಪುನರ್ವಿಮರ್ಶೆ (Revision) ಆದ ನಂತರ ಸರ್ವೆ ಇಲಾಖೆಯಿಂದ ಪಿಲೆ ಬಗ್ಯೆ ಕೊಡಲ್ಪಟ್ಟ ಎಲ್ಲಾ ಕಾಗದಗಳು.	
9	ಸರ್ವೆ ಇಲಾಖೆಯವರಿಂದ ಪೂರ್ತಿಯಾಗಿ ಫೈಸಲಾಗದೇ ಇರತಕ್ಕ ಡಿಸ್ಟ್ರಿಕ್ಟಿನಲ್ಲಿನ ಎಲ್ಲಿ ವ್ಯಾಜ್ಯಗಳಿಗೆ ಸಂಬಂಧಪಟ್ಟ ಕಾಗದಗಳು.	
10	ಇನಾಂ ಹಕೀಖತ ನಾಮಾ (Return) ಮತ್ತು ಕ್ವಿಟರೆಂಟ್ ರಿಜಿಸ್ಟರುಗಳು.	
11	ಹಳೇ ಸರ್ವೆ ಕಾಗದಗಳು (ಇನಾಂ ಜಮೀನುಗಳಿಗೆ ಸಂಬಂಧಪಟ್ಟಷ್ಟುಮಟ್ಟಿಗೆ).	
12	ಪ್ರಾಯ ಅಥವಾ ಮುಫತ್ತು ಸಾಗುವಳಿಗೆ ಕೊಟ್ಟ ಜಮೀನುಗಳ ಸಂಬಂಧ ಕಾಗದಗಳು.	
13	ಸರ್ಕಾರಿ ಜಂಗಲಿ ಅಥವಾ ಇತರ ಜಮೀನುಗಳಲ್ಲಿನ ಹುಲ್ಲುಬನ್ನಿ ಹಕ್ಕು ಫೈಸಲ್ ಸಂಬಂಧದ ರಿಕಾರ್ಡುಗಳು.	ಕಾಯಂ ಆಗಿ.
14	ರೇಲ್ವೆ ಅಥವಾ ಇತರ ಸ್ಪೆಷಲ್ ಯಾ ಪಬ್ಲಿಕ್ ಉಪಯೋಗಕ್ಕೋಸ್ಕರ ಸರ್ಕಾರಕ್ಕೆ ತೆಗದುಕೊಂಡಿರುವ ಜಮೀನುಗಳಿಗೆ ಸಂಬಂಧಪಟ್ಟ ತಃಖ್ತೆಗಳು ಮತ್ತು ಕಾಗದಗಳು (ಲ್ಯಾಂಡ್ ಅಕ್ವಿಜಿಷನ್ ಆಕ್ಟು ಮೇರಿಗೆ ಆಗಲೀ ಅಥವಾ ಇತರ ವಿಧವಾಗಿ ಆಗಲಿ).	
15	ಸರ್ಕಾರಿ ಮತ್ತು ಖಾಸಿಗೆ ಗಿಡ ಮರಗಳನ್ನು ತೋರಿಸುವ ತಃಖ್ತೆ.	
16	ಜಮೀನು ಕಂದಾಯದ ಹಕ್ಕನ್ನು ಪುನಹಾ ಸರ್ಕಾರಕ್ಕೆ ವಹಿಸಿಕೊಂಡ (Redemption) ಸಂಬಂಧ ಕಾಗದ ಪತ್ರಗಳು.	
17	ಸಾಗುವಳಿಗಲ್ಲದೆ ಇತರ ಕೆಲಸಕ್ಕೋಸ್ಕರ ಉಪಯೋಗಿಸಲ್ಪಟ್ಟ ಜಮೀನುಗಳಿಗೆ ಸಂಬಂಧಿಸಿದ ಕಾಗದಗಳು ಮತ್ತು ರಿಜಿಸ್ಟರುಗಳು (ಗೇಣಿ ಷರತ್ತಿಗೆ ಅನುಸರಿಸಿ ಆಗಲಿ ಅಥವಾ ಇತರ ವಿಧವಾಗಿಯಾಗಲಿ).	
18	ಗ್ರಾಮ ನವುಕರರುಗಳಿಗೂ ಮತ್ತು ಧರ್ಮಾದಾಯ ಸಂಬಂಧವಾಗಿಯೂ ಕೊಡಲ್ಪಟ್ಟ ಚಿಲ್ರೆ ಇನಾಂ ಜಮೀನುಗಳಿಗೆ ಸಂಬಂಧಪಟ್ಟ ರಿಕಾರ್ಡುಗಳು.	
19	ಸರ್ಕಾರಿ ಮತ್ತು ಇನಾಂ ಗ್ರಾಮನವುಕರರ ಕ್ರಾನು ಮತ್ತು ಚಿಲ್ರೆ ದಾವಾಗಳು ಮತ್ತು ಗ್ರಾಮನವುಕರರುಗಳ ವಿಷಯದಲ್ಲಿ ಆಗಿಂದಾಗ್ಯೇ ತಯಾರುಮಾಡಿದ ರಿಜಿಸ್ಟರುಗಳು ಸಹಾ.	
20	ನೀರು ಕಾಲಿವೆಗಳು, ಜಲಾಶ್ರಯಗಳು, ತಲಪರಿಗೆಗಳು, ಭಾವಿಗಳು ಮತ್ತು ಇತರ ಕಾಯಂ ಆದ ಹಕ್ಕಿಗೆ ಸಂಬಂಧಪಟ್ಟ ಕಕ್ಷಿಗಾರರ ಮಧ್ಯೇ ವ್ಯಾಜ್ಯದ ವಿಷಯದಲ್ಲಿನ ಫೈಸಲಾತಿಗಳು.	
21	ಭಂಗಾರ ಮತ್ತು ಅಮೂಲ್ಯವಾದ ಖನಿಜ ವಸ್ತುಗಳನ್ನು ಅಜಮಾಯಿಷಿ (Prospect) ಮಾಡತಕ್ಕ ಬಗ್ಯೇ ಕೊಟ್ಟ ಲೈಸೆನ್ಸುಗಳಿಗೆ ಸಂಬಂಧಪಟ್ಟ ಕಾಗದಗಳು ಮತ್ತು ಇವರ ವಿಷಯದಲ್ಲಿ ಕೊಡಲ್ಪಟ್ಟ ಜಮೀನುಗಳ ಸಂಬಂಧ ರಿಕಾರ್ಡುಗಳು.	
22	ಸ್ವಂತ ಲಾಗವಡು ಕೆರೆ ಮತ್ತು ಕಟ್ಟೆಗಳ ಸಂಬಂಧ ರಿಕಾರ್ಡುಗಳು.	
23	ಕಾಯಂ ಆಗಿಯೇ ಆಗಲಿ ಅಥವಾ ಹಂಗಾಮಿಯಾಗಿಯೆ ಆಗಲಿ ಸರ್ಕಾರದ ಆಡಳಿತಕ್ಕೆ (Government Management) ವಹಿಸಿಕೊಂಡಿರತಕ್ಕ ಎಲ್ಲಾ ತರಹೆ ಇನಾಂ ಸಂಸಂಬಂಧ ರಿಕಾರ್ಡುಗಳು.	
24	ಮೈಸೂರು ಸರ್ಕಾರಕ್ಕೂ ಮತ್ತು ಬ್ರಿಟಿಷ ಸರ್ಕಾರಕ್ಕೂ ಗ್ರಾಮದ ಎಲ್ಲೆಗಳು, ಕಾಲಿವೆಗಳು, ಕೆರೆಗಳು ಮತ್ತು ತಲಪರಿಗೆಗಳು ಈ ವಿಷಯದಲ್ಲಿನ ವಿವಾದದ ಫೈಸಲಾತಿಗೆ ಸಂಬಂಧಪಟ್ಟ ರಿಕಾರ್ಡುಗಳು.	
25	ಸರ್ಕಾರದ ಜಮೀನುಗಳಲ್ಲಿರತಕ್ಕ ನೀರು, ಕಾಲುಹಾದಿ, ಕಟ್ಟೆಗೆ ವಗೈರೆಗಳಿಗೆ ಇನಾಂದಾರ್ರಿಗೆ ಇರತಕ್ಕ ಮಾಮೂಲು ಹಕ್ಕಿನ ಫೈಸಲಾತಿಗೆ ಸಂಬಂಧಪಟ್ಟ ರಿಕಾರ್ಡುಗಳು.	

ನಂಬರು.	ಕಾಗದದ ಸ್ವಭಾವ.	ಎಷ್ಟು ಕಾಲದ ವರಿ ವಿಗೆ ಇಡತಕ್ಕದ್ದು.
26	ಗ್ರಾಂಪಠಾಣೆ ಮತ್ತು ಮನೆ ದಳ ಇವುಗಳ ವಿಂಗಡ ಮತ್ತು ಅನುಭವಕ್ಕೆ ಸಂಬಂಧಪಟ್ಟ ರಿಕಾರ್ಡುಗಳು.	
27	ದೇವಸ್ಥಾನ ಮತ್ತು ತತ್ಸದೃಶವಾದ ಸ್ಥಳಗಳಲ್ಲಿ ನಡೆಯುಬೇಕಾದ ವಿಧಾನಗಳು ಮತ್ತು ಪದ್ಧತಿಗಳು ಈ ವಿಷಯಕ್ಕೆ ಸಂಬಂಧಪಟ್ಟ ತಕರಾರು ಫೈಸಲಾತಿ ವಿಷಯದ ರಿಕಾರ್ಡುಗಳು ಮತ್ತು ಇಂಥಾ ಸ್ಥಳಗಳಲ್ಲಿ ಇಸಂಗಳಿಗೆ ನಡೆಯತಕ್ಕ ಹೆಚ್ಚು ಕಟ್ಲೆ ಮರ್ಯಾದಗಳ ವಿಷಯಕ್ಕೆ ಸಂಬಂಧಪಟ್ಟ ರಿಕಾರ್ಡುಗಳು.	
28	ಪುರಾತನವಾದ ವಿಶೇಷವಾದ (Interest) ಮತ್ತು ಮುಖ್ಯವಾದ ಸ್ಥಳಗಳ ವಿಷಯದಲ್ಲಿನ ಚರಿತ್ರ ಸಂಬಂಧವಾದ ವಿದ್ಯಮಾನಗಳ ರಿಕಾರ್ಡುಗಳು.	
29	ಯಾವ ಜಾತಿಯಲ್ಲೇ ಆಗಲಿ, ಪಂಗಡದಲ್ಲಿಯೆ ಆಗಲಿ ನಡೆಯುವ ಉತ್ಸವ ವಗೈರೆಕ್ಕೆ ಸಂಬಂಧಪಟ್ಟ ಸಂಪ್ರದಾಯ, ಪದ್ಧತಿ, ಸೇವುಗಳು, ಹಕ್ಕುಗಳು ಇವುಗಳ ವಿಷಯುಕವಾದ ರಿಕಾರ್ಡುಗಳು.	
30	ಪ್ರವಾಹ, ನೀರುಮಳೆಗಳು ಮತ್ತು ಇತರ ಅದ್ಭುತ ಕಾರಣದಿಂದ ಭೂಪ್ರದೇಶದಲ್ಲಿ ಉಂಟಾದ ಬದಲಾವಣೆಗಳ ಸಂಬಂಧದ ರಿಕಾರ್ಡುಗಳು ಮತ್ತು ಪ್ರವಾಹದಿಂದ ಕುಳಗಳ ಜಮೀನುಗಳಲ್ಲಿ ಹೆಚ್ಚು ಕಡಿಮೆಯಾದ ಸಂಬಂಧದ ರಿಕಾರ್ಡುಗಳು.	
31	ಕಾಯಂ ಉಪ್ಪಿನ ಮೋಳಿಗಳ ರಿಕಾರ್ಡುಗಳು.	
32	ಜಪ್ತಾದ ಸರ್ಕಾರಿ ಅಥವಾ ಇನಾಂ ಗ್ರಾಮಗಳ ಜಮಾಬಂದಿ ಮತ್ತು ಗ್ರಾಮ ಖರ್ಚಿನ ಲೆಕ್ಕಗಳು.	
33	ಇನಾಂ ಮತ್ತು ಸ್ಪೆಷಲ್ ಡಿಮ್ಯಾಂಡ್ ನೋಟೀಸು ರಿಜಿಸ್ಟರುಗಳು.	
34	ಮಳೆ ರಿಜಿಸ್ಟರುಗಳು.	
35	ಪಂಚಸಾಲ ಜಾನುವಾರ ಖಾನೇಷುಮಾರಿ.	
36	ಜಲಾಶ್ರಯವನ್ನು ತೋರಿಸತಕ್ಕ ತಃಖ್ತೆಗಳು.	
37	ಎಲ್ಲಾ "ಇಂ" ಮತ್ತು "ಗ" ರಿಜಿಸ್ಟರುಗಳು.	
38	ಕಾಯಂ ಆಗಿ ಇಡಲ್ಪಟ್ಟ ಮತ್ತು ಆಗಾಗ್ಯೆ ನಾಶಪಡಿಸಲ್ಪಟ್ಟ ರಿಕಾರ್ಡುಗಳ ತಪಶೀಲು ತೋರಿಸುವ ರಿಜಿಸ್ಟರುಗಳು ಮತ್ತು ಪಟ್ಟಿಗಳು.	
39	ಮುಖ್ಯವಾದ ಚಿಲ್ರೆ ಕಾಗದಗಳಿಗೆ ಸಂಬಂಧಪಟ್ಟ ಹುಕುಂಗಳು, ರಿಪೋರ್ಟುಗಳು, ಅರ್ಜಿಗಳು, ಪುಸ್ತಕಗಳು ಮತ್ತು ಕಟ್ಟುಗಳು.	
40	ತಾಲ್ಲೂಕುಗಳಿಂದ ಬಂದ ಸ್ಟ್ಯಾಟಿಸ್ಟಿಕಲ್ ಲೆಕ್ಕಗಳ ಮೇಲೆ ತಯಾರಾದ ಆವರ್ಜಿಗಳು.	
41	ಜಾರಿಯಲ್ಲಿರುವ ಸರ್ಕ್ಯುಲಾರಗಳು, ರೂಲಸುಗಳು, ಪುಸ್ತಕಗಳು ಮತ್ತು ಅಚ್ಚು ಹಾಕಲ್ಪಟ್ಟ ಮುಖ್ಯವಾದ ಕಾಗದಗಳು.	ಖಾಯಂ
42	ಹತ್ತಿ ಮತ್ತು ಇತರ ಮುಖ್ಯವಾದ ಆಹಾರ ಪದಾರ್ಥಗಳು, ಕೈಗಾರಿಕೆ ಕೆಲಸ, ಸರಕು ಮತ್ತು ವ್ಯಾಪಾರ ವಗೈರೆ ವಿಷಯದಲ್ಲಿ ಕಾಯಂ ಪ್ರಯೋಜನವುಳ್ಳ ವಿದ್ಯಮಾನಗಳನ್ನು ಅಡಗಿಸಿಕೊಂಡಿರುವ ತಃಖ್ತೆಗಳು ಮತ್ತು ಚಿಲ್ರೆ ಕಾಗದಗಳು.	
43	ಡೆಪ್ಯುಟಿ ಕಮಿಷ್ನರರು, ಅಸಿಸ್ಟೆಂಟ ಕಮಿಷ್ನರರು, ಸರ್ವೇ ಇಲಾಖೆಯವರು ಮತ್ತು ಅಮಲ್ದಾರರುಗಳು ತಮ್ಮ ತಾಬೇದಾರ ನವುಕರರುಗಳಿಗೆ ಕೊಟ್ಟರತಕ್ಕ ಇಂಥಾ ಕಾಯಂ ಪ್ರಯೋಜನವುಳ್ಳ ಸರ್ಕ್ಯುಲಾರ ಹುಕುಂಗಳು.	
44	ಪ್ರಸಿದ್ಧ ವಿಷಯ ಸೂಚಕವಾದ ಇಸ್ತಿಹಾರ್ನಾಮೆಗಳು.	
45	ಕ್ಷಾಮ ಸಂಬಂಧವಾದ ಕಾನೂನು (Famine Code) ಸಾಂಕ್ರಾಮಿಕ ವ್ಯಾಧಿಗಳ ಕಾನೂನುಗಳನ್ನು ಅನುಸರಿಸಿ ನಡಸಿದ ಆಡಳತಗಳ ವಿಚಾರದ ರಿಕಾರ್ಡು ಮತ್ತು ದೊಡ್ಡ ದೊಡ್ಡ ಟ್ರಿಗ್ನಾಮಿಟ್ರಿಕಲ್ ಸ್ಟೇಷನ್‌ಗೆ ಸಂಬಂಧಪಟ್ಟ ಕಾಗದ ಪತ್ರಗಳು.	
46	ಬೇತವಾರ, ಖಾನೆ, ತಕರಾರು ತಃಖ್ತೆ ಮತ್ತು ಜಮಾಬಂದಿ ಗೋಷ್ವಾರೆ ಈ ಗ್ರಾಮ ಲೆಕ್ಕಗಳು.	
47	ಜಮೀನು ಅಥವಾ ಮನೆ ಗಳಗಳ ಸಾಗುವಳಿ ಮತ್ತು ಅನುಭವದ ವಿಷಯದಲ್ಲಿ ಆಸಾಮಿಗಳಿಂದ ಪಡೆದ ಎಲ್ಲಾ ಮುಚ್ಚಳಿಕೆಗಳು.	
48	ಮಂಜೂರಾದ ಕಾಮಗಾರಿಗಳ ರಿಜಿಸ್ಟರುಗಳು ಅಂದಾಜು ಪ್ಲಾನು ಮತ್ತು ಕಂಪ್ಲೀಷನ ರಿಪೋರ್ಟುಗಳ ಸಮೇತ.	
49	ಗುಪ್ತ ನಿಕ್ಷೇಪಗಳು ದೊರತ ಮತ್ತು ವಿಲೇವಾರಿ ಆದ ರಿಕಾರ್ಡುಗಳು.	
50	ಸಾಗುವಳಿ ಬಗ್ಯೆ ಬಿಡಲ್ಪಟ್ಟ ಅವ್ಯತಮಹಲ ಕಾವಲ ಗಳ ರಿಕಾರ್ಡುಗಳು.	
51	ಮುಜರಾಯಿ ಸ್ಥಾಪನೆಗಳಿಗೆ (Institutions) ಸಂಬಂಧಪಟ್ಟ ಕಾಗದಗಳು.	
52	ಪೂರ್ತಿ ಅಥವಾ ಕೆಲವು ಭಾಗ ಕಂದಾಯ ಮಾಫಿ ಆಗಿರತಕ್ಕ ಎಲ್ಲಾತರಹ ಹಿಡುವಳಿ ಜಮೀನುಗಳ ಬಾಬತು ಎಲ್ಲಾ ಪ್ರೋಸೀಡಿಂಗ್ಸ ಮತ್ತು ಇತರ ಕಾಗದಗಳು.	
53	ತಾಲ್ಲೂಕು ತಾಬೇದಾರ ನವುಕರರುಗಳಿಗೆ (Subordinate officials) ಕೊಡಲ್ಪಟ್ಟ ಹುಕುಂಗಳ ಮತ್ತು ಸದರಿಯುವರಿಂದ ತಲ್ಪಿದ ರಿಪೋರ್ಟುಗಳ ರಿಜಿಸ್ಟರುಗಳು.	
54	ತಕರಾರು ತಃಖ್ತೆಗೆ ದಾಖಲಾಗಿ ವಿವಾದ ಜರಿಗಿ ಫೈಸಲಾದ ಮೊಕದ್ದಮೆಗಳಿಗೆ ಸಂಬಂಧಪಟ್ಟ ರಿಕಾರ್ಡುಗಳು.	
55	ಸರ್ಕಾರಕ್ಕೆ ಸೇರಿದ ಪಬ್ಲಿಕ ರಸ್ತೆಗಳು, ನದಿಗಳು ವಗೈರೆ ಮತ್ತು ವರಿ ಸಂಬಂಧ ರಿಕಾರ್ಡುಗಳು.	
56	ಪಬ್ಲಿಕ ಕೆಲಸದ ಉದ್ದೇಶ್ಯ ಪಡೆದ ಜಮೀನುಗಳ ರಿಕಾರ್ಡುಗಳು.	
57	ಸಂತೆಗಳು ಮತ್ತು ಜಾತ್ರೆಗಳು ಏರ್ಪಾಡಾದ ಬಗ್ಯೆ ಸಂಬಂಧಪಟ್ಟ ಕಾಗದಗಳು.	

B. ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಕಚೇರಿಗಳಲ್ಲಿ ಕ್ಲಿಪ್ತ ಕಾಲದ ವರಿಗೆ ಇಟ್ಟು ಅವಧಿ ಪೂರೈಸಿದ ನಂತರ ನಾಶಪಡಿಸಬಹುದಾದ ಕಾಗದಗಳ ಲೀಸ್ಟು ಯಾನೆ ಪಟ್ಟಿ.

ನಂಬರು.	ಕಾಗದದ ಸ್ವಭಾವ.	ಎಷ್ಟು ಕಾಲದ ವರಿಗೆ ಇಡತಕ್ಕದ್ದು.
1	ಸಾಲ್ ಜಮಾಬಂದಿ ರಿಪೋರ್ಟು ತಯಾರಿ ಬಗ್ಗೆ ಸಂಬಂಧಪಟ್ಟ ಎಲ್ಲಾ ದೇಶಭಾಷೆ ಕಾಗದಗಳು.	2 ವರುಷ
2	ರೆವಿನ್ಯೂ ಇಜಾರೆದಾರ್ರು ಮತ್ತು ಇತರರಿಂದ ಪಡದ ದಸ್ತೈವಜುಗಳು, ಕರಾರುಗಳು, ಜಾಮೀನು ಖತ್ತುಗಳು ವಗೈರ	ಷರತ್ತು ಪೂರೈಸಿದ ನಂತರ ನಾಶಪಡಿಸತಕ್ಕದ್ದು.
3	ಸರ್ಕಾರಿ ಜಮೀನು ಹಿಡುವಳಿ ಹಕ್ಕಿನ ಹರಾಜು, ಮತ್ತು ಷಹರಗಳಲ್ಲಿಯೂ (Towns) ಗ್ರಾಮಗಳಲ್ಲಿಯೂ ಇರತಕ್ಕ ಮನೆ ದಳಗಳ ಹರಾಜು ಇವುಗಳಿಗೆ ಸಂಬಂಧಪಟ್ಟ ತಃಖ್ತೆಗಳು, ಕಾಗದಪತ್ರಗಳು ಮತ್ತು ಪ್ರೊಸೀಡಿಂಗ್ಸುಗಳು.	30 ವರುಷ ಇಡತಕ್ಕದ್ದು.
4	ಜಮೀನು ಹಿಡುವಳಿಗಳ ವರ್ಗಾವರ್ಗಿ, ಬಾಬತು ಮತ್ತು ಶಿವಿಲ್ ಕೋರ್ಟು ಡಿಕ್ರಿ ಅನುಸರಿಸಿ ನಡದ ಹಿಡುವಳಿ ಬದಲಾವಣೆಗಳ ಬಾಬತು ಲೆಕ್ಕಗಳು.	ಡಿಟೋ
5	ಹುಲ್ಲುಬನ್ನಿ, ತೋಪು, ಕರಿಗೋಲು ಫಲವೃಕ್ಷಗಳು ವಗೈರೆ ಹರಾಜಿಗೆ ಸಂಬಂಧಪಟ್ಟ ತಃಖ್ತೆಗಳು ಮತ್ತು ಕಾಗದಗಳು.	5 ವರುಷ
6	ಕಂದಾಯ ಬಾಕಿಗೋಸ್ಕರ ನಡದ ಚರ ಜಫ್ತಿ ಮತ್ತು ಚರ ಸ್ಥಿರ ಸೊತ್ತುಗಳ ಹರಾಜು ಸಂಬಂಧ ಹಕೀಕತ ನಾಮಾಗಳು (Returns) ಮತ್ತು ಕಾಗದ ಪತ್ರಗಳು.	12 ವರುಷ
7	ರಿಮಿಷನ್ ಸಂಬಂಧದ ಕಾಗದಗಳು ಮತ್ತು ಜಮಾಬಂದಿವೇಳೆ ದಾಖಲಾದ ಅರ್ಜಿಗಳು, ಈ ಸಂಬಂಧ ಟಿಪ್ಪಣಿಗಳು ಅಥವಾ ಇತರ ಕಾಗದಗಳು.	5 ವರುಷ
8	ರೆವಿನ್ಯೂ ವಸೂಲು ಬಾಕಿ ಗೋಷ್ವಾರೆಗಳು …	2 ವರುಷ
9	ಹಿಂದಿನ ಸಾಲುಗಳ ಬಾಕಿ ತನಿಖೆಗೆ ಸಂಬಂಧಪಟ್ಟ ಕಾಗದಪತ್ರಗಳು …	ಡಿಟೋ
10	ತಾಲ್ಲೂಕುಗಳಿಂದ ಬಂದ ಕಾಲಸ್ಥಿತಿ ರಿಪೋರ್ಟುಗಳು	ಡಿಟೋ
11	ಸರ್ಕಾರಿ ಮತ್ತು ಇನಾಂ ಗ್ರಾಮಗಳ ಎಲ್ಲೆ ತಕರಾರಿಗೆ ಸಂಬಂಧಪಟ್ಟ ಕಾಗದಗಳು …	ಸರ್ವೆ ಇಲಾಖೆಯಿಂದ ಹದ್ದುಬಸ್ತು ನಿರ್ಣಯವಾಗುವ ವರಿಗೆ ಅಥವಾ ಚಾಲ್ತಿ ಸೆಟಲ್ಮೆಂಟು ಜಾರಿ ಇರುವವರಿಗೆ
12	ಮುಫತ್ತು ನಾಟಾ ಕೊಟ್ಟ ಸಂಬಂಧ ತಃಖ್ತೆಗಳು …	12 ವರುಷ
13	ಕಂದಾಯ ಬಾಕೀದಾರರಿಗೆ ಕೊಟ್ಟ ನೋಟೀಸುಗಳು ಮತ್ತು ನೋಟೀಸು ಫೀ ಬಡ್ಡಿ ವಸೂಲಿ ವಿಷಯಕ್ಕೆ ಸಂಬಂಧಪಟ್ಟ ಇತರ ಕಾಗದಗಳು.	2 ವರುಷ ಅಥವಾ ಮೊಬಲಗು ವಸೂಲಾದ ನಂತರ
14	ಜಮಾಬಂದಿ ನಂತರ ಉಂಟಾಗುವ ಕಮ್ಮಿ ಜಾಸ್ತಿ ತಃಖ್ತೆ …	2 ವರುಷ
15	ಏಕಸಾಲ್ ಪ್ರತಾರ್ ಯಾ ಇತರ ಕಮ್ಮಿ ಪಾಯಿದೆಯಿಂದ ಸಾಗುವಳಿಗೆ ಕೊಟ್ಟ ಜಮೀನುಗಳ ಸ್ಟೇಟಮೆಂಟ್ ಯಾನೆ ತಃಖ್ತೆ.	ಗೇಣಿ ಅವಧಿ ಪೂರೈಸುವ ವರಿಗೆ
16	ತಗಾವಿ ಅರ್ಜಿಗಳು ಮತ್ತು ಈ ವಿಷಯಕ್ಕೆ ಸಂಬಂಧಪಟ್ಟ ಇತರ ಕಾಗದಗಳು-ಅಡ್ವಾನ್ಸು ಮಂಜೂರಾಗದೆ ಇದ್ದ ಪಕ್ಷದಲ್ಲಿ.	2 ವರುಷ
17	ಕೆರೆ ನೀರು ಹಾಯತಕ್ಕ ಜಮೀನುಗಳ ತಃಖ್ತೆ …	ಚಾಲ್ತಿ ಸೆಟಲ್ಮೆಂಟು ಜಾರೀಲಿ ಇರುವ ವರಿಗೆ
18	ಹಿಡುವಳಿದಾರರ ನಾಮ ತಪ್ಪಿನಲ್ಲಿಗೆ ಸಂಬಂಧಪಟ್ಟ ಕಾಗದ ಪತ್ರಗಳು …	12 ವರುಷ
19	ಸ್ಕೇಲ್ ಅನುಸರಿಸಿ ಗ್ರಾಮ ನವುಕರರುಗಳಿಗೆ ಪೋಟ್ಗ ಠರಾವ ಮಾಡಿದ ವಿಷಯಕ್ಕೆ ಸಂಬಂಧಪಟ್ಟ ತಃಖ್ತೆಗಳು ಮತ್ತು ಕಾಗದಗಳು.	ದಸ್ಕಾಲಾ ಪುನರ್ವಿಮರ್ಶೆ ಪೋಟ್ಗ ತಃಖ್ತೆ ತಯಾರಾದ ನಂತರ
20	ತಾಲ್ಲೂಕಿಗೆ ಕಳುಹಿಸಲ್ಪಟ್ಟ ಗ್ರಾಮ ಲೆಕ್ಕಗಳ ನಕಲುಗಳು …	2 ವರುಷ
21	ಮುಖ್ಯವಾದ ಲೆಕ್ಕಗಳ ಸ್ಥಳ ಪ್ರತಿಗಳು, ಯಾವವೆಂದರೆ—ಜಮೀನು, ಕಂದಾಯ, ಮೊಹತರ್ಫಾ, ಲೋಕಲ್ ಶೆಸ್ಸು, ಸಾಯರು, ಉಪ್ಪಿನಮೋಳಿಗಳು ವಗೈರೆ ಆಹಾರ ಧಾನ್ಯಗಳ ಧಾರಣೆ ತೋರಿಸತಕ್ಕವುಗಳು.	12 ವರುಷ
22	ಕ್ಲಿಪ್ತ ಕಾಲಗಳಲ್ಲಿ ಕಳುಹಿಸುವ ಮುಖ್ಯವಲ್ಲದ ಇತರ ಲೆಕ್ಕಗಳ ಸ್ಥಳಪ್ರತಿಗಳು	2 ವರುಷ
23	ಗ್ರಾಮ ನವುಕರುಗಳಿಂದ ಅಮಲ್ದಾರಿಗೆ ಕಳುಹಿಸಿಕೊಡಲ್ಪಟ್ಟ ಮುಖ್ಯವಾದ ರಿಕಾರ್ಡಿಗೆ ಸಂಬಂಧಪಡದೇ ಇರತಕ್ಕಂಥಾ ರಿಪೋರ್ಟುಗಳು ಮತ್ತು ಯಾದಿಗಳು.	ಡಿಟೋ
24	ಕಾರಣ ಸಹಿತವಾದ ರಿಮಿಷನ್ ಸ್ಟೇಟಮೆಂಟುಗಳು	10 ವರುಷ
25	ಜಮೀನು ಕಂದಾಯ ಬಾಕಿ ಲೆಕ್ಕಗಳು …	5 ವರುಷ ಅಥವಾ ಬಾಕಿ ವಸೂಲಾಗುವ ವರಿಗೆ
26	ಬದಲಾವಣೆ ಆಗತಕ್ಕ ಚಿಲ್ರೆ ಬಾಬು ಜಮೀನು ಕಂದಾಯಕ್ಕೆ ಸಮ್ಮಂಧಪಟ್ಟ ಕಾಗದಗಳು.	5 ವರುಷ

ನಂಬರು.	ಕಾಗದದ ಸ್ವಭಾವ.	ಎಷ್ಟು ಕಾಲದ ವರಿಗೆ ಇಡತಕ್ಕದ್ದು.
27	ಜಮೀನು ಕಂದಾಯ ವಸೂಲಿಬಗ್ಗೆ ನಡೆಸಿದ ಬಲಾತ್ಕಾರವಾದ ಕ್ರಮ ಜರಿಗಿಸೋಣ ಮತ್ತು ಇದರ ಫಲಿತಾಂಶವನ್ನು ತೋರಿಸತಕ್ಕ ತಃಖ್ತೆಗಳು.	12 ವರುಷ
28	ಜಾಲ್ತಿ ಗುರ್ದೇ ತಾರೀಖಿನಲ್ಲಿ ಬಾಕಿ ಇದ್ದ ತಗಾವಿ ಅಡ್ವಾನ್ಸು ತೋರಿಸತಕ್ಕ ತಃಖ್ತೆಗಳು	ಡಿಟ್ಟೋ
29	ಡಿಸ್ಟ್ರಿಕ್ಟಿನಲ್ಲಿ ಆಯಾಯ ಸಾಲಿನಲ್ಲಿ ಕೊಟ್ಟಿರತಕ್ಕ ತಗಾವಿ ಅಡ್ವಾನ್ಸು ಮತ್ತು ಯಾವ ಉದ್ದೇಶ್ಯಕ್ಕೋಸ್ಕರ ಕೊಡಲ್ಪಟ್ಟಿತು ಎಂಬುವದನ್ನು ಮತ್ತು ಅಡ್ವಾನ್ಸು ಬಾಕಿ ವಸೂಲಿ ಸ್ಥಿತಿಯನ್ನು ತೋರಿಸತಕ್ಕ ತಃಖ್ತೆಗಳು.	20 ವರುಷಗಳು ಅಥವಾ ಅಡ್ವಾನ್ಸು ಬೇಬಾಕ ಆಗುವ ವರಿಗೆ
30	ಕೆರೆಗಳು, ಭಾವಿಗಳು ವಗೈರೆ ದುರಸ್ತು ಮಾಡುವದಕ್ಕೂ ಮತ್ತು ಕಟ್ಟಿಸುವದಕ್ಕೂ ರೆವಿನ್ಯೂ ಇಲಾಖೆಯಿಂದ ಖರ್ಚಾದ ಹಾಗವನ್ನು ತೋರಿಸುವ ತಃಖ್ತೆಗಳು.	5 ವರುಷ
31	ನಿರಾಕ್ಷೇಪವಾಗಿ ಕಾಯಂ ಪ್ರಯೋಜನ ಅಥವಾ ಉಪಯೋಗವಿಲ್ಲದ ಹುಕುಂಗಳು ರಿಪೋರ್ಟುಗಳು, ಅರ್ಜಿಗಳು ಮತ್ತು ತಃಖ್ತೆಗಳು.	2 ವರುಷ
32	ಮಾಹೇವಾರಿ ಲೆಕ್ಕಗಳ ತಯಾರಿ ಬಗ್ಗೆ ಬೇಕಾದ ಚಿಲ್ಲರೆ ಕಾಗದಗಳು	1 ವರುಷ
33	ಕಾಡು ಮೃಗಗಳನ್ನು ನಾಶಮಾಡಿದ ಬಗ್ಗೆ ಕೊಡಲ್ಪಡುವ ಇನಾಮ ಸಂಬಂಧ ಕಾಗದಗಳು	2 ವರುಷ
34	ತಗಾವಿ ಅಡ್ವಾನ್ಸು ತೆಗೆದುಕೊಳ್ಳುವ ರೈತರುಗಳಿಂದ ಪಡದ ಕರಾರುಗಳು	ತಗಾವಿ ಮೊಬಲಗು ಪೂರ್ಣಯಾಗಿ ಪಾವತಿ ಆಗುವವರಿಗೆ
35	ದೊಡ್ಡ ವಸೂಲಿ ಮತ್ತು ದೊಡ್ಡದಾರರುಗಳ ವೇತನಕ್ಕೆ ಸಂಬಂಧಪಟ್ಟ ಕಾಗದಗಳು	5 ವರುಷ
36	ಸಾದಿಲವಾರು ಖರ್ಚಿಗೆ ಸಂಬಂಧಪಟ್ಟ ಕಾಗದಗಳು	ಡಿಟ್ಟೋ
37	ನವುಕರರುಗಳಿಗೆ ಕೊಟ್ಟ ರಜ, ಅಥವಾ ಇವರ ನೊಕರೂರಾತಿ, ಬಡ್ತಿ, ಶಿಕ್ಷೆ ಮತ್ತು ಬರತರಫ ಇವಕ್ಕೆ ಸಂಬಂಧಪಟ್ಟ ಕಾಗದಗಳು.	30 ವರುಷ ಅಥವಾ ನವುಕರರ ಮರಣ ಪರಿಯಂತರ ಅಥವಾ ರಿಟೈರ್ ಆಗಿ ಪೆನ್ಷನ್ ಹಕ್ಕು ಫೈಸಲಾಗುವ ವರಿಗೆ
38	ತಾಲ್ಲೂಕು ತಾಬೇದಾರ್ ನವುಕರರು ಅಂದರೆ ಶೇಕದಾರ್ ವಗೈರೇರ ಡೈರಿಗಳು	2 ವರುಷ
39	ಅಮಲ್ದಾರು ಮತ್ತು ಮೇಲ್ಪಟ್ಟ ಅಧಿಕಾರಿಗಳಿಂದ ತಪ್ಪಿದ ಸಂಚರಣೆ ಸ್ಟೇಟಮೆಂಟು ಯಾನೆ ತಃಖ್ತೆ.	5 ವರುಷ
40	ಕ್ಲಿಪ್ತ ಕಾಲಕ್ಕೆ ಕಳುಹಿಸುವ ಲೆಕ್ಕಗಳು ಮತ್ತು ಹುಕುಂ ಬಾಕಿ ಲೆಕ್ಕಗಳು	2 ವರುಷ
41	ಟಪ್ಪೆ ಲೆಕ್ಕದ ಪುಸ್ತಕಗಳು ಮತ್ತು ರಹದಾರಿಗಳು	1 ವರುಷ
42	ಛಾಪಾಖಾನೆಗಳ ಲೆಕ್ಕಗಳು ಮತ್ತು ಸ್ಟೇಷನರಿ ಲೆಕ್ಕಗಳು	2 ವರುಷ
42	ಮೇಲ್ಪಟ್ಟ ಆಫೀಸಿಗೆ ಕಳುಹಿಸತಕ್ಕ ಒಟ್ಟು ಲೆಕ್ಕ ತಯಾರಿ ಬಗ್ಗೆ ತಾಬೇದಾರ ನವುಕರುಗಳಿಂದ ತರಿಸಿಕೊಂಡ ಕ್ಲಿಪ್ತ ಕಾಲದ ಲೆಕ್ಕಗಳು.	ಡಿಟ್ಟೋ
44	ದೊಡ್ಡಿಗೆ ದಾಖಲಾದ ಬೇವಾರಸು ಜಾನುವಾರ್ ಹರಾಜು ಸಂಬಂಧ ಕಾಗದಗಳು	ಡಿಟ್ಟೋ
45	ಜಮೀನು ಕಂದಾಯ ವಸೂಲಿ ಬಗ್ಗೆ ಸಹಾಯವನ್ನು ಅಪೇಕ್ಷಿಸಿ ಬರಕೊಂಡ ಅರ್ಜಿಗಳು ಮತ್ತು ಇದೇ ವಿಷಯದಲ್ಲಿ ನಡದ ತನಿಖೆ ರಿಕಾರ್ಡುಗಳು.	ಡಿಟ್ಟೋ
46	ಸರ್ಕಾರಿ ನವುಕರರ ದುರ್ನಡತೆ ವಿಚಾರದ ಕಾಗದ ಪತ್ರಗಳು ...	ಸಂಬಂಧಪಟ್ಟ ನವುಕರರು ರಿಟೈರ್ ಆಗುವ ವರಿಗೆ ಅಥವಾ ಅವರ ಮರಣಾವಧಿ ವರಿಗೆ ಇಡತಕ್ಕದ್ದು
47	ಮುಖ್ಯವಲ್ಲದ ಚಿಲ್ಲರೆ ಸಂಗತಿಗಳಲ್ಲಿ ಡಿಸ್ಟ್ರಿಕ್ಟ ಆಫೀಸರುಗಳಿಗೆ ಅಮಲ್ದಾರರಿಂದ ಕಳುಹಿಸಲ್ಪಟ್ಟ ಕಾಲಾವಧಿ ರಿಪೋರ್ಟುಗಳು ಮತ್ತು ಲೆಖ್ಖಗಳು ಮತ್ತು ಇವುಗಳ ಸ್ಥಳ ಪ್ರತಿಗಳು.	2 ವರುಷ
48	ಪ್ರದರ್ಶನ ಸಂಬಂಧ ಕಾಗದಗಳು, ನೋಟಕರಿಗೆ ತೋರಿಸಿದ ರಿಯಾಯಿತಿ ವಿಷಯದ ಕಾಗದಗಳು ಮತ್ತು ಸ್ಥಳೀಯ ಕಲಾಕೌಶಲ್ಯವನ್ನು ಕುರಿತು ತಿಳಿಸಿದ ಕಾಗದಗಳು.	10 ವರುಷ
49	ಸ್ಟಾಂಪು ಆಕ್ಟು 17ನೆ ಸೆಕ್ಷನ್ ಅನುಸರಿಸಿ ಮೈಸೂರು ದೇಶದ ಹೊರಗೆ ಹುಟ್ಟಿದ ದಸ್ತೈವಜುಗಳಿಗೆ ಸ್ಟಾಂಪು ಮಂಜೂರಿ ಬಗ್ಗೆ ಬರತಕ್ಕ ಅರ್ಜಿಗಳು.	2 ವರುಷ
50	ಗೆಜೆಟ್ಟಿನಲ್ಲಿ ಛಾಯಿಷ ಬಗ್ಗೆ ಕಳುಹಿಸಿದ ಸಮಾಚಾರಕೆ ಸಂಬಂಧಪಟ್ಟ ಕಾಗದಗಳು	ಡಿಟ್ಟೋ
51	ಡೆಪ್ಯುಟಿ ಕಮಿಷನರುಗಳು, ಅಸಿಸ್ಟೆಂಟ ಕಮಿಷನರುಗಳು, ಅಮಲ್ದಾರುಗಳು ಮತ್ತು ಸರ್ವೆ ಇಲಾಖೆಯವರಿಂದ ತಮ್ಮ ತಾಬೇದಾರ ನವುಕರರಿಗೆ ಕೊಟ್ಟ ಸರ್ಕ್ಯುಲಾರ್ ಹುಕುಂಗಳು (ಕಾಯಂ ಉಪಯೋಗ ಅಥವಾ ಪ್ರಯೋಜನವಿಲ್ಲದ್ದು).	ಡಿಟ್ಟೋ
52	ಡೆಪ್ಯುಟಿ ಕಮಿಷನರುಗಳು ಮತ್ತು ಅಸಿಸ್ಟೆಂಟ ಕಮಿಷನರುಗಳಿಂದ ಕಳುಹಿಸಲ್ಪಡುವ ಅಡಮಿನಿಸ್ಟ್ರೇಷನ್ ರಿಪೋರ್ಟುಗಳ ತಯಾರಿ ಬಗ್ಗೆ ಸಂಬಂಧಪಟ್ಟ ಕಾಗದಗಳು.	ಡಿಟ್ಟೋ
53	ಸ್ಯಾನಿಟರಿ ಕಮಿಷನರು ಮತ್ತು ಇತರ ಆಫೀಸರುಗಳಿಗೆ ಕಳುಹಿಸಲ್ಪಟ್ಟ ಕಾಲಾವಧಿ ಲೆಕ್ಕಗಳ ಸ್ಥಳ ಪ್ರತಿಗಳು.	ಡಿಟ್ಟೋ

ನಂಬರು.	ಕಾಗದದ ಸ್ವಭಾವ.	ಎಷ್ಟು ಕಾಲದ ವರೆಗೆ ಇಡತಕ್ಕದ್ದು.
54	ಬಾಂದು ಕಲ್ಲುಗಳ ದುರಸ್ತು ಬಗ್ಯೆ ತಗಲಿದ ಲಾಗವಡು ತೋರಿಸತಕ್ಕ ಲೆಖ್ಖಗಳು ..	ರೈತರಿಂದ ಬರಬೇಕಾದ ವೊಬಲಗು ವಸೂಲು ಆದನಂತರ ನಾಶಪಡಿಸತಕ್ಕದ್ದು
55	ಫಸಲ್ ಜಪ್ತಿಗೆ ಸಂಬಂಧಪಟ್ಟ ಕಾಗದಗಳು ...	2 ವರುಷ
56	ಸಾಗುವಳಿದಾರರ ಹಿಡುವಳಿ ಬದ್ಲಾವಣೆಯನ್ನು ತೋರಿಸುವ ವಿವರಣೆ ಲೆಕ್ಕ ...	ಡಿಟೋ
57	ತಾಲ್ಲೂಕು ಚಿಲ್ಲರೆ ಹುಕುಂಗಳು ...	ಡಿಟೋ
58	ಸರ್ವೆ ನಂಬರುಗಳನ್ನು ಪೈಕಿ ನಂಬರುಗಳಾಗಿ ವಿಂಗಡಿಸಿರುವದರ ಸಂಬಂಧ ರಿಕಾರ್ಡುಗಳು.	ಪುನಹ ಸರ್ವೆ ಆಗುವ ವರಿಗೆ
59	ಕೆರೆ ವಗ್ಯೆರೇಗಳ ಪಾಶೀವಾರದ ಹರಾಜಿಗೆ ಸಂಬಂಧಪಟ್ಟ ಕಾಗದಗಳು ...	2 ವರುಷ
60	ಖುಷ್ಕಿ ಜಮೀನುಗಳಿಗೆ ನೀರು ಕೊಡತಕ್ಕ ಬಗ್ಯೆ ನಡದ ದರಖಾಸ್ತು ನಡವಳಿಕೆಗಳು ..	ಪುನಹ ಸರ್ವೆ ಆಗುವ ವರಿಗ
61	ಶಿವಿಲ್ ಕೋರ್ಟು ಡಿಕ್ರಿ ಅನುಸರಿಸಿ ಅಥವಾ ಡೆಪ್ಯುಟಿ ಕಮಿಷನರು ಯಾ ಜಮಾಬಂದಿ ಆಫೀಸರ ಹುಕುಂ ಮೇರಿಗೆ ನಡದ ಪಟ್ಟೆ ಬದಲಾವಣೆಗಳು.	1 ವರುಷ
62	ಖೇತ ವಾರ, ಖಾತೆ, ತಕರಾರು ತಃಖ್ತೆ ಮತ್ತು ಜಮಾಬಂದಿ ಗೋಷ್ವಾರೆ ಇವುಗಳ ಶಿವಾಯಿ ಬಾಕಿ ಗ್ರಾಮ ಲೆಖ್ಖದ ನಮೂನೆಗಳು ಮತ್ತು ಇವುಗಳ ಮಲಪ್ರಾಫಿಗಳು.	ಡಿಟೋ
	ಖಿರದಿ (ತಾರೀಖು 3-4-907ನೆ ಮರ್ರ್ಹಂ ನಂಬರು R. 8936-7—L. R. 302-06-4ನೆ ಗವರ್ನಮೆಂಟ ಪ್ರೊಸೀಡಿಂಗ್ಸು ನೋಡಿ).	20 ವರುಷ
63	ರೈತರಿಂದ ಬಂದ ಮೊಹತರ್ಫಾ ಸಂಬಂಧ ಅರ್ಜಿಗಳು	2 ವರುಷ
64	ಜಮಾಬಂದಿ ಕಾಲದಲ್ಲಿ ಫೈಸಲಾದ ರೈತರ ಚಿಲ್ಲರೆ ಅರ್ಜಿಗಳು ...	ಡಿಟೋ
65	ಸುಣ್ಣ, ಕಂಕರು, ಕುರಂಗದ ಕಲ್ಲು ಮತ್ತು ಈಚಲು ಗರಿಗಳು ಇವುಗಳನ್ನು ಸಾಗಿಸುವದ ಕ್ಕೋಸ್ಕರ ಲೈಸೆನ್ಸುಗಳ ಬಗ್ಯೆ ಬರುವ ದರಖಾಸ್ತುಗಳು.	5 ವರುಷ
66	ಸಾಹುರು ವಗೈರೆ ಎಣಿಕೆ ಪಟ್ಟಿಗಳು ಅಡಿಕೆ ರೇಖೆ ಬಗ್ಯೆ ಕೊಟ್ಟ ಲೈಸೆನ್ಸುಗಳು ವಗೈರೆ ...	ಡಿಟೋ
67	ಸ್ವಾಯರು ರಹದಾರಿಗಳು	2 ವರುಷ
68	ಬಗೆರ್ ರಹದಾರಿ ಸಬಬು ಮಾಲುಗಳು ಹರಾಜಾದ್ದರ ಸಂಬಂಧದ ಕಾಗದಗಳು	5 ವರುಷ
69	ಸಾಹುರು ದಾಸ್ತಾನು ಲೆಖ್ಖಗಳು ...	ಡಿಟೋ
70	ಸರ್ಕಾರದಿಂದ ಜಲಾಶ್ರಯಗಳನ್ನು ಅಬಾದು ಮಾಡಿದ್ದಕ್ಕೋಸ್ಕರ ಜಮೀನುಗಳ ಮೇಲೆ ಜಾಸ್ತಿ ಕಂದಾಯ ದಾಖಲ್ಮಾಡಿರುವದಕ್ಕೆ ಸಂಬಂಧಪಟ್ಟ ರಿಕಾರ್ಡುಗಳು.	ಪುನಹ ಸರ್ವೆ ಆಗುವ ವರಿವಿಗೆ.
71	ಎಲ್ಲಾ ಜಿನಸಿಗಳ ಆಕಾರಿಯ ಮತ್ತು ಹಾಸಲ ಪಟ್ಟಿಗಳು ...	5 ವರುಷ
72	ಸುದಾರಿಸಿದ ನೇಗಿಲಗಳು ಮತ್ತು ಗೊಬ್ಬರ ವಗ್ಯೆರೆ ವಿಷಯಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು ಮತ್ತು ರಿಪೋರ್ಟುಗಳು.	ಡಿಟೋ
73	ಜಾನುವಾರ್ ಸಾಕಣೀ (Cattle breeding) ವಗ್ಯೆರೆಕ್ಕೆ ಸಂಬಂಧಪಟ್ಟ ಕಾಗದಗಳು.	3 ವರುಷ
74	ಸೆನ್ಸಸ್ ತೆಗವಕೊಳ್ಳತಕ್ಕ ವಿಷಯದ ಕಾಗದ ಪತ್ರಗಳು ಮತ್ತು ಹುಕ್ಕುಂಗಳು ...	12 ವರುಷ
75	ಗ್ರಾಮ ನವುಕರರುಗಳ ಸರ್ವಿಸ್ ವಿಷಯದ ಕಾಗದಗಳು ...	ಸರ್ವೀಸ್ ವಾಯಿದೆ ಕಳದ ಹತ್ತು ವರ್ಷಗಳ ವರಿಗೆ.
76	ಗ್ರಾಮ ನವುಕರರ ರಜಾ ಸಂಬಂಧ ಕಾಗದ ಪತ್ರಗಳು	3 ವರುಷ
77	ಜನನ ಮರಣ ರಿಜಿಸ್ಟರುಗಳು (ತಾರೀಖು 3-12-04ನೆ ಮರ್ರ್ಹಂ ನಂಬರು 4881-920-Mis. 441-04—2ನೆ ಗವರ್ನಮೆಂಟು ಪ್ರೊಸೀಡಿಂಗ್ಸು ನೋಡಿ).	16 ವರುಷ
	ಜಾನುವಾರ ಸಂಖ್ಯೆ ಲೆಖ್ಖಗಳು ...	1 ವರುಷ
78	ಜಮೀನು ರಾಜೀನಾಮಾಗಳು ...	ಡಿಟೋ
79	ಗ್ರಾಮ ಹುಟ್ಟುವಳಿ ಗೋಷ್ವಾರೆ ತೋರಿಸುವ ಸಾಲ್ಯಾಖಾಡೆ ಲೆಖ್ಖಗಳು ...	30 ವರುಷ
80	ಜನ ಜಾನುವಾರುಗಳ ಬಾಬ್ತು ಗೋಷ್ವಾರೆ ...	10 ವರುಷ
81	ಫಸಲು ಗೋಷ್ವಾರೆ ...	ಡಿಟೋ
82	ನೀರು ಹಾಯುವಳಿ ವಿಸ್ತೀರ್ಣ ಮತ್ತು ನೀರು ಹಾಯುಲ್ಪಟ್ಟ ಪ್ರದೇಶದಲ್ಲಿ ಬೆಳದ ಫಸಲು ತಪಶೀಲು ತೋರಿಸುವ ತಃಖ್ತೆ.	30 ವರುಷ
83	ಸಾಲ್ ಜಮಾಬಂದಿ ವಸೂಲ್ ಬಾಕಿ ಲೆಖ್ಖಗಳು ...	ಡಿಟೋ
84	ಜಮಾಬಂದಿ ಅಂದಾಜಾ ಲೆಖ್ಖಗಳು ...	10 ವರುಷ
85	ಮುಜಕೂರು ಮತ್ತು ಗುದಸ್ತಾ ಸಾಲುಗಳಲ್ಲಿ ಆಕಾರ ಕಂಡ ಮತ್ತು ಆಕಾರ ಕಾಣದ ಜಮೀನುಗಳನ್ನು ಮತ್ತು ಹಿಡುವಳಿಯಲ್ಲಿರುವ, ಇಲ್ಲದೆ ಇರುವ ಜಮೀನುಗಳನ್ನು ತೋರಿಸುವ ಮೊಕಾಬಿಲಾ ತಃಖ್ತೆಗಳು.	ಡಿಟೋ
86	ಹಿಡುವಳಿ ಜಮೀನುಗಳ ಸಂಖ್ಯೆ ಮತ್ತು ವಿಸ್ತೀರ್ಣವನ್ನು ತೋರಿಸುವ ತಃಖ್ತೆ	ಡಿಟೋ
87	ಯಾವ ಗ್ರಾಮಗಳಿಗೆ ಅಗ್ರಿಕಲ್ಚರಲ್ ಸ್ಟ್ಯಾಟಿಸ್ಟಿಕ್ಸ್ ದೊರಿಯುತ್ತವೋ ಅಂಥಾ ಗ್ರಾಮದಲ್ಲಿನ ಸಾಗುವಳಿ ಮತ್ತು ಬಂಜರು ವಿಸ್ತೀರ್ಣವನ್ನು ತೋರಿಸತಕ್ಕ ಮತ್ತು ಸದರಿ ವಿಸ್ತೀರ್ಣವು ಡಿಸ್ಟ್ರಿಕ್ಟಿನ ಸಾಗು ಬಂಜರು ವಿಸ್ತೀರ್ಣಕ್ಕೆ ಯಾವ ಭಾಗವೆಂದು ತೋರಿಸುವ ಲೆಖ್ಖಗಳು.	ಡಿಟೋ

ನಂಬರು.	ಕಾಗದದ ಸ್ವಭಾವ.	ಎಷ್ಟು ಕಾಲದ ವರೆಗೆ ಇಡತಕ್ಕದ್ದು.
88.	ಯಾವ ಗ್ರಾಮಗಳಿಗೆ ಅಗ್ರಿಕಲ್ಚರಲ್ ಸ್ಟ್ಯಾಟಿಸ್ಟಿಕ್ಸ್ ದೊರಿಯುತ್ತವೋ ಅಂಥಾ ಗ್ರಾಮಗಳ ಸಾಗುವಳಿ ಮತ್ತು ಬಂಜರು ವಿಸ್ತೀರ್ಣದ ತಪಶೀಲು ತೋರಿಸುವ ಲೆಖ್ಖಗಳು.	10 ವರುಷ
89	ಪ್ರಜಾ ಸಂಖ್ಯೆ ಮತ್ತು ವ್ಯವಸಾಯ ಸಾಧನೆಗಳನ್ನು (Resources) ತೋರಿಸುವ ತಃಖ್ತೆಗಳು.	ಡಿಟೋ
90	ತಾಲ್ಲೂಕುಗಳಿಂದ ಡಿಸ್ಟ್ರಿಕ್ಟಿಗೆ ಕಳುಹಿಸಿದ ಜನರಲ್ ಸ್ಟ್ಯಾಟಿಸ್ಟಿಕಲ್ ಲೆಖ್ಖಗಳು ...	30 ವರುಷ
91	ಫಸಲ್ ಅಜಮಾಯಿಷಿ ಸಂಬಂಧ ಕಾಗದಗಳು ...	10 ವರುಷ
92	ಸ್ಕಾಯರ್ ಸಾಲ್ಯುಷಾಡಾ ಲೆಖ್ಖಗಳು	ಡಿಟೋ
93	ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಲವಾಜಮೆಗೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ನವುಕರರ ಬಹಲ್, ಬಡ್ತಿ, ಶಿಕ್ಷೆ ಮತ್ತು ಬರತರಫ್ ಸಂಬಂಧದ ರಿಕಾರ್ಡುಗಳು.	30 ವರುಷ ಅಥವಾ ನವುಕರನ ಮರಣ ಅಥವ ರಿಟೈರ್‌ಮೆಂಟ ಇವೆರಡರ ಪೈಕಿ ಯಾವದು ದೀರ್ಘಕಾಲವೋ ಆ ಕಾಲದ ವರೆವಿಗೆ
94	ಭಾವಿ ತೆಗಿಯೋಣ ಜಮೀನು ಆಬಾದು ಮಾಡೋಣ ಈ ಬಗ್ಯೆ ಪಡದ ಸಾಲದ ಸಂಬಂಧ ರಿಕಾರ್ಡುಗಳು.	ಸಾಲ ಫೈಸಲಾದ್ದ 10 ವರುಷಗಳ ವರೆಗೆ
95	ತಗಾವಿ ಅಡ್ವಾನ್ಸು ಸಂಬಂಧ ರಿಕಾರ್ಡುಗಳು ...	ಡಿಟೋ
96	ಹಂಗಾಮಿ ಕಂದಾಯ ಅಥವಾ ಇತರ ತೆರಿಗೆ ವಸೂಲಿ ಸಂಬಂಧದ ರಿಕಾರ್ಡುಗಳು ...	10 ವರುಷದ ನಂತರ ನಾಶ ಪಡಿಸಬಹುದು ಅಥವಾ ಚಾಲ್ತಿ ಸೆಟಲ್‌ಮೆಂಟು ಜಾರಿಯಲ್ಲಿ ಇರುವ ವರೆಗೆ ಇಡಬಹುದು
97	ರೆವಿನ್ಯು ಆಫೀಸರುಗಳ ಮೇಲಿನ ದಾವಾಕ್ಕೆ ಸಂಬಂಧಪಟ್ಟ ಕರೆಸ್ಪಾಂಡೆನ್ಸ್ (ಪತ್ರವ್ಯವಹಾರಗಳು)	30 ವರುಷ
98	ಮಿಲಿಟರಿ ಮೆನೂವರ್ಸ್ ಬಗ್ಯಾಗಿ ಪರಿಹಾರ ದ್ರವ್ಯವನ್ನು ಸಾವತಿ ಮಾಡಿದ ಸಂಬಂಧ ಕಾಗದ ಪತ್ರಗಳು.	12 ವರುಷ
99	ಬಾಂದು ಕಲ್ಲುಗಳನ್ನು ನಾಶಪಡಿಸ್ಲೋಣ ಅಥವಾ ಬದಲಾಯಿಸೋಣ, ಈ ವಿಷಯದ ಕಾಗದಗಳು.	30 ವರುಷ ಅಥವಾ ಚಾಲ್ತಿ ಸೆಟಲ್‌ಮೆಂಟು ಜಾರೀಲಿರುವ ವರಿಗೆ
100	ದಸರಾ ಪ್ರಜಾ ಪ್ರತಿನಿಧಿ ಸಂಘದ ವಿಷಯಕವಾದ ಕಾಗದಗಳು ...	12 ವರುಷ
101	ಗ್ರಾಮ ನವುಕರರುಗಳ ವೇತನದ ರಿಜಿಸ್ಟರುಗಳು ...	30 ವರುಷ

ಎ. ರಂಗಸಾಮೈಯ್ಯಂಗಾರ್, ರೆವಿನ್ಯೂ ಕಮಿಷನರ್.

ಫಾರೆಸ್ಟ್ ಇಲಾಖಾ.

ಸಂಡಲ್ ಹರಾಜ್ ನೋಟಿಫಿಕೇಷನ್.

ತಾರೀಖು 24ನೆ ಆಗಸ್ಟ್ 1907ನೆ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಸರಕಾರದ ಶ್ರೀಗಂಧದ ಸಾಲಿಯಾನಾ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಆದರದರ ಬಾಜೂದಲ್ಲಿ ನಮೂದಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫೀಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರುಗಳಿಂದ ನಡೆಸಲ್ಪಡುವದು:—

ಡಿಸ್ಟ್ರಿಕ್ಟು.	ಕೋಠಿ.	ಹರಾಜು ತಾರೀಖು.	ಸುಮಾರು ಮೊತ್ತ.
			ಟನ್‌ಗಳು.
ಶಿವಮೊಗ್ಗ ...	ತೀರ್ಥಹಳ್ಳಿ ...	18ನೆ ನವೆಂಬರ 1907 ...	200
ಡಿಟೋ ...	ಸಾಗರ ...	21ನೆ ಡಿಟೋ ...	150
ಡಿಟೋ	ಶಿವಮೊಗ್ಗ ...	25ನೆ ಡಿಟೋ ...	500
ಕಡೂರು	ತರೀಕೆರೆ ...	28ನೆ ಡಿಟೋ ...	250
ಡಿಟೋ ...	ಚಿಕ್ಕಮಗಳೂರು ...	2ನೆ ಡಿಸೆಂಬರ 1907	350
ಹಾಸನ ...	ಹಾಸನ ...	5ನೆ ಡಿಟೋ	150
ಬೆಂಗಳೂರು ...	ಬೆಂಗಳೂರು ...	9ನೆ ಡಿಟೋ	100
ಮೈಸೂರು ...	ಶ್ರೀರಂಗಪಟ್ಟಣ ...	12ನೆ ಡಿಟೋ	250
ಡಿಟೋ	ಹುಣಸೂರು ...	16ನೆ ಡಿಟೋ	500
		ಜುಮ್ಲಾ ...	2,450

2. ಪ್ರತಿ ಕೋಠಿಯಲ್ಲಿಯೂ ಹರಾಜಾಗುವ ಶ್ರೀಗಂಧ ಸುಮಾರು ಲಾಟು, ಮೊತ್ತ ಮತ್ತು ಇತರ ತಪಶೀಲುಗಳು ಬರುವ ಅಕ್ಟೋಬರ ಮಾಹೆ ಆಖೈರಿನಲ್ಲಿ ತಿಳಿಯಪಡಿಸುತ್ತೆ.

ಎಂ. ಮುತ್ತಣ್ಣ, ಕನ್ಸರ್ವೇಟರ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ವಿದ್ಯಾಭ್ಯಾಸದ ಇಲಾಖಾ.

ಮೈಸೂರು ದೇಶೀಯ ಪರೀಕ್ಷೆಗಳು.

ಡಿ. ನಂಬರು 8ನೆಯ ಪ್ರಕಟನ ಪತ್ರಿಕೆ, ಸ್ 1907ನೆಯ ಇಸವಿ ಸೆಪ್ಟಂಬರು ತಾರೀಖು 6.

1. ಲೋವರ ಸೆಕಂಡರೀ ಪರೀಕ್ಷೆಯು ಸ್ 1907ನೆಯ ಇಸವಿ ನವೆಂಬರ್ ತಿಂಗಳು ಸೋಮವಾರ 18ನೆಯ ತಾರೀಖಿನಿಂದ ಆರಂಭವಾಗಿ, ಪ್ರತಿ ಡಿಸ್ಟ್ರಿಕ್ಟಿನ ಮುಖ್ಯಸ್ಥಳ (Head-quarters) ದಲ್ಲಿಯೂ, ಮತ್ತು ಚಿಕ್ಕಬಳ್ಳಾಪುರದಲ್ಲಿಯೂ, ಚನ್ನಪಟ್ಣದಲ್ಲಿಯೂ ನಡೆಯಿಸಲ್ಪಡುವುದು.

2. ದೇಶಭಾಷೆಯ ಅಪ್ಪರ್ ಸೆಕಂಡರೀ ಪರೀಕ್ಷೆಯು ಸ್ 1907ನೆಯ ಇಸವಿ ನವೆಂಬರ ತಿಂಗಳು ಬುಧವಾರ 20ನೆಯ ತಾರೀಖಿನಿಂದ ಆರಂಭವಾಗಿ ಮೇಲೆ ನಮೂದಿಸಲ್ಪಟ್ಟಿರುವ ಎಲ್ಲಾ ಸ್ಥಳಗಳಲ್ಲಿಯೂ ನಡೆಯಿಸಲ್ಪಡುವುದು.

3. ಕರ್ಣಾಟಕ ಪಂಡಿತಪರೀಕ್ಷೆಯು ಸ್ 1907ನೆಯ ಇಸವಿ ನವೆಂಬರ್ ತಿಂಗಳು ಸೋಮವಾರ 18ನೆಯ ತಾರೀಖಿನಿಂದ ಆರಂಭವಾಗಿ ಮೈಸೂರಲ್ಲಿ ನಡೆಯಿಸಲ್ಪಡುವುದು.

4. ಉಪಾಧ್ಯಾಯ ನಿರ್ಣಯ ಪತ್ರಿಕೆಗಳ ಅಪ್ಪರ್ ಸೆಕಂಡರಿ ಮತ್ತು ಲೋವರ್ ಸೆಕಂಡರಿ ಅಂತಸ್ತುಗಳ ಬರಹ ಪರೀಕ್ಷೆಯು (Written Examination) ಸ್ 1907ನೆಯ ಇಸವಿ ನವಂಬರ್ ತಿಂಗಳು ಶುಕ್ರವಾರ 1ನೆಯ ತಾರೀಖಿನಿಂದ ಆರಂಭವಾಗಿ ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ನಡೆಯಿಸಲ್ಪಡುವುದು; ಮತ್ತು ಪ್ರೈಮರಿ ಅಂತಸ್ತಿನ ಬರಹ ಪರೀಕ್ಷೆಯು ಸ್ 1907ನೆಯ ಇಸವಿ ನವೆಂಬರ್ ತಿಂಗಳ ತಾರೀಖು 23ನೆಯ ಶನಿವಾರದ ದಿನದಲ್ಲಿ ಪ್ರತಿ ಡಿಸ್ಟ್ರಿಕ್ಟಿನ ಮುಖ್ಯಸ್ಥಳದಲ್ಲಿಯೂ, ಮತ್ತು ಚಿಕ್ಕಬಳ್ಳಾಪುರದಲ್ಲಿಯೂ, ಚನ್ನಪಟ್ಣದಲ್ಲಿಯೂ ನಡೆಯಿಸಲ್ಪಡುವುದು.

5. ಪರೀಕ್ಷೆಯು ಇದರಡೀ ಕಂಡ ಕಾಲ ಮತ್ತು ವಿಷಯಗಳ ಕ್ರಮಗಳನ್ನನುಸರಿಸಿ ನಡೆಯಿಸಲ್ಪಡುವವು:—

ಮೈಸೂರು ಲೋವರ್ ಸೆಕಂಡರಿ ಪರೀಕ್ಷೆ.

ದಿವಸ	ಕಾಲ.	ವಿಷಯಗಳು.	ಅಂಕಗಳು.
ನವೆಂಬರು 18ನೆ ತಾ॥ ಸೋಮವಾರ.	10ರಿಂದ 12—30 ವರಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಇಂಗ್ಲಿಷ್ ವ್ಯಾಕರಣ ಮತ್ತು ಭಾಷಾಗ್ರಂಥ.	60
		ಸಂಸ್ಕೃತದ ಮತ್ತು ಫಾರಸಿಯ ವ್ಯಾಕರಣ ಮತ್ತು ಭಾಷಾ ಗ್ರಂಥಗಳು	65
	1—30ರಿಂದ 2—30ರ ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಭಾಷಾಂತರೀಕರಣ—ಇಂಗ್ಲಿಷ್, ಸಂಸ್ಕೃತ, ಫಾರಸಿ	
		ಇಂಗ್ಲಿಷ್ ಪ್ರಬಂಧರಚನೆ, ಇಂಗ್ಲೀಷನ್ನು ದೇಶಭಾಷೆಯಾಗಿ ಉಳ್ಳಂಥಾವರಿಗೆ	35
	2—35ರಿಂದ 3–5 ವರಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಉಕ್ತಲೇಖನ—ಇಂಗ್ಲೀಷ್ ...	15
		ಸಂಸ್ಕೃತ; ಫಾರಸಿ ...	10
	3–10ರಿಂದ 3—40 ವರಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಕೈಬರವಣಿಗೆ—ಇಂಗ್ಲೀಷ್; ಸಂಸ್ಕೃತ; ಫಾರಸಿ	10
	3—45ರಿಂದ 4—15 ವರಗೆ	ಉರ್ದು ಉಕ್ತಲೇಖನ ...	10
	4—20ರಿಂದ 4—50 ವರಗೆ	ಉರ್ದು ಕೈಬರವಣಿಗೆ	10
ನವೆಂಬರು 19ನೆ ತಾ॥ ಮಂಗಳವಾರ.	10ರಿಂದ 1ರ ವರಗೆ	ಕನ್ನಡ ಪ್ರಥಮ ಅಥವಾ ದ್ವಿತೀಯ ಭಾಷೆ—	
		ಕನ್ನಡ ವ್ಯಾಕರಣ, ಭಾಷಾಗ್ರಂಥ ಮತ್ತು ಪ್ರಬಂಧರಚನೆ ...	100
		ಫಾರಸಿ ದ್ವಿತೀಯ ಭಾಷೆ—	
		ಫಾರಸಿ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ...	100
	2ರಿಂದ 5ರ ವರಗೆ	ಸಂಸ್ಕೃತ ದ್ವಿತೀಯ ಭಾಷೆ—	
		ಸಂಸ್ಕೃತ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ...	100
		ಲಾಟಿನ್ ದ್ವಿತೀಯ ಭಾಷೆ—	
		ಲಾಟಿನ್ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ	120
		ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ—	
		ತೆಲುಗು, ಮತ್ತು ಉರ್ದು, ವ್ಯಾಕರಣ, ಭಾಷಾಗ್ರಂಥಗಳು ಮತ್ತು ಪ್ರಬಂಧರಚನೆ ...	100

ದಿವಸ.	ಕಾಲ.	ವಿಷಯುಗಳು.	ಅಂಕಗಳು.
ನವಂಬರು 20ನೆ ತಾ॥ ಬುಧವಾರ.	10ರಿಂದ 12 ವರೆಗೆ	ಅಂಕಗಣಿತ ...	100
	12-5ರಿಂದ 12-35 ವರೆಗೆ	ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ— ಕನ್ನಡ ಮತ್ತು ತಲುಗು ಅಕ್ಷರ ಸಂಯೋಜನ ...	10
	12-40ರಿಂದ 1-10 ವರೆಗೆ	ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ — ಕನ್ನಡ ಮತ್ತು ತಲುಗು ಕೈ ಬರವಣಿಗೆ ...	10
	2ರಿಂದ 3-30 ವರೆಗೆ	ಆರೋಗ್ಯ ಶಾಸ್ತ್ರ	100
	3-45ರಿಂದ 4-15 ವರೆಗೆ	ಐಚ್ಛಿಕ ದ್ವಿತೀಯ ಭಾಷೆ— ಸಂಸ್ಕೃತ ಮತ್ತು ಫಾರಸಿ ಅಕ್ಷರ ಸಂಯೋಜನ ...	10
	4-20ರಿಂದ 4-50 ವರೆಗೆ	ಐಚ್ಛಿಕ ದ್ವಿತೀಯ ಭಾಷೆ— ಸಂಸ್ಕೃತ ಮತ್ತು ಫಾರಸಿ ಕೈ ಬರವಣಿಗೆ ...	10
ನಂವಬರ 21ನೆ ತಾ॥ ಗುರುವಾರ	10ರಿಂದ 1ರ ವರೆಗೆ	ಚರಿತ್ರೆ, ಭೂಗೋಳಶಾಸ್ತ್ರ ಮತ್ತು ಭೂಪಟ ಬರೆಯುವುದು ...	120
	2ರಿಂದ 3-30 ವರೆಗೆ	ವ್ಯವಸಾಯ ಶಾಸ್ತ್ರ ...	100
ನವೆಂಬರ 22ನೆ ತಾ॥ ಶುಕ್ರವಾರ	10ರಿಂದ 11-30 ವರೆಗೆ	ಕ್ಷೇತ್ರಗಣಿತ ...	100
	11-35ರಿಂದ 1-5 ವರೆಗೆ	ಪ್ರಾಕೃತಿಕ ಭೂಗೋಳ ಶಾಸ್ತ್ರ	100
	2 ರಿಂದ 3—30 ವರೆಗೆ	ಹೊಲಿಗೆ	50
		ಆಂಗ್ಲೇಯರ ಚರಿತ್ರೆ	100
	3 35ರಿಂದ 5-5 ವರೆಗೆ	ಪಾಕಶಾಸ್ತ್ರ ...	50
		ಗೃಹಕೃತ್ಯ ನಡೆಯಿಸುವ ಕ್ರಮ ...	100

ಮೈಸೂರು ದೇಶಭಾಷೆಯ ಅಪ್ಪರ್ ಸೆಕಂಡರಿ ಪರೀಕ್ಷೆ.

ದಿನ.	ಘಂಟೆ.	ವಿಷಯ.	ಅಂಕಗಳು.	
ನವೆಂಬರ 20ನೆ ತಾ॥ ಬುಧವಾರ	10—1	ಪ್ರಥಮಭಾಷೆ—ಕನ್ನಡ ಅಥವಾ ಉರ್ದು ಗ್ರಂಥಗಳು ...	60	130
	2—4	ಅದೇ ಡಿಟೋ ಪ್ರೌಢವ್ಯಾಕರಣ ...	40	
	4·5—5·5	ಅದೇ ಡಿಟೋ ಪ್ರಬಂಧರಚನೆ ..	30	
ನವೆಂಬರ 21ನೆ ತಾ॥ ಗುರುವಾರ	10—1	ಸಂಸ್ಕೃತ ಗ್ರಂಥಗಳು ...	60	120
		ಫಾರಸಿ ಗ್ರಂಥಗಳು ಮತ್ತು ವ್ಯಾಕರಣ ..	60	
	2—5	ಸಂಸ್ಕೃತ ವ್ಯಾಕರಣ ...	60	
		ಅರಾಬಿಕ ಗ್ರಂಥಗಳು ಮತ್ತು ವ್ಯಾಕರಣ ..	60	
ನವೆಂಬರ 22ನೆ ತಾ॥ ಶುಕ್ರವಾರ	10—1	ಭಾಷಾಂತರೀಕರಣ-ಸಂಸ್ಕೃತದಿಂದ ಕನ್ನಡಕ್ಕೆ, ಕನ್ನಡದಿಂದ-ಸಂಸ್ಕೃತಕ್ಕೆ	60	60
	10—11·30	ಭಾಷಾಂತರೀಕರಣ ಉರ್ದುಯಿಂದ ಫಾರ್ಷಿಗೆ ..	25	
	11·35—1·5	ಅದೇ ಉರ್ದುಯಿಂದ ಅರಾಬಿಕ್‌ಗೆ ..	35	
ನವೆಂಬರ 23ನೆ ತಾ॥ ಶನಿವಾರ	10—12·30	ಅಂಕಗಣಿತ ...	50	120
	1·30—3·30	ರೇಖಾಗಣಿತ, ಕ್ಷೇತ್ರಗಣಿತ ..	40	
	3·35—5·5	ಬೀಜಗಣಿತ ..	30	
	2—5	ಸರಳಹಸ್ತ ನಕ್ಷೆಯ ಬರವಣಿಗೆ (Free hand drawing)	70	
ನವೆಂಬರ 25ನೆ ತಾ॥ ಸೋಮವಾರ	10—12	ಪ್ರಾಕೃತಿಕ ಶಾಸ್ತ್ರ (Physical science)	40	120
	1—3	ಆರೋಗ್ಯಶಾಸ್ತ್ರ	40	
	3·5—5·5	ಕೃಷಿಶಾಸ್ತ್ರ	40	
ನವೆಂಬರ 26ನೆ ತಾ॥ ಮಂಗಳವಾರ	10—1	ಚರಿತ್ರೆ	50	100
	2—5	ಭೂಗೋಳ ಶಾಸ್ತ್ರ ...	50	
			ಜುಮ್ಲಾ	650

ಪರೀಕ್ಷ್ಯೆಯರಿಗೆ ಹೊಲಿಗೆಯಲ್ಲಿಯೂ ಸಂಗೀತದಲ್ಲಿಯೂ ಪರೀಕ್ಷೆಯು ಏಳನೇ ದಿನ ತತ್ಪೂರ್ವ ಪ್ರಕಟಿಸಲ್ಪಡುವ ಸ್ಥಳ, ಕಾಲಗಳಲ್ಲಿ ನಡೆಯುವುದು.

ಕರ್ಣಾಟಕ ಪಂಡಿತ ಪರೀಕ್ಷೆ.

ದಿನ.	ಘಂಟೆ.	ವಿಷಯುಗಳು.	ಅಂಕಗಳು.	
ನವೆಂಬರ್ 18ನೆ ತಾ॥ ಸೋಮವಾರ	10—1	ಕನ್ನಡ ವ್ಯಾಕರಣ ...	120	200
	2—5	ಕನ್ನಡ ಛಂದಸ್ಸು ಮತ್ತು ಅಲಂಕಾರ ...	80	
ನವೆಂಬರ್ 19ನೆ ತಾ॥ ಮಂಗಳವಾರ	10—1	ಕನ್ನಡ ಗ್ರಂಥಗಳು ಮೊದಲನೇ ಪತ್ರಿಕೆ ...	100	400
	2—5	ಅದೇ ಎರಡನೇ ಪತ್ರಿಕೆ ...	100	
ನವೆಂಬರ್ 20ನೆ ತಾ॥ ಬುಧವಾರ	10—1	ಅದೇ ಮೂರನೇ ಪತ್ರಿಕೆ ...	100	
	2—5	ಅದೇ ನಾಲ್ಕನೇ ಪತ್ರಿಕೆ ...	100	
ನವೆಂಬರ್ 21ನೆ ತಾ॥ ಗುರುವಾರ	10—1	ಕನ್ನಡ ಪ್ರಬಂಧರಚನೆ ...	100	
	2—5	ಭಾಷಾಂತರೀಕರಣ ...	100	
ನವೆಂಬರ್ 22ನೆ ತಾ॥ ಶುಕ್ರವಾರ	10—1	ಸಂಸ್ಕೃತ ವ್ಯಾಕರಣ ...	80	200
	2—5	ಸಂಸ್ಕೃತ ಛಂದಸ್ಸು ಮತ್ತು ಅಲಂಕಾರ ...	120	
ನವೆಂಬರ್ 23ನೆ ತಾ॥ ಶನಿವಾರ	10—1	ಸಂಸ್ಕೃತ ಗ್ರಂಥಗಳು ಮೊದಲನೇ ಪತ್ರಿಕೆ ...	100	200
	2—5	ಅದೇ ಎರಡನೇ ಪತ್ರಿಕೆ ...	100	

ಉಪಾಧ್ಯಾಯರ ನಿರ್ಣಯ ಪತ್ರಿಕಾ ಪರೀಕ್ಷೆಗಳು.

ದಿವಸ.	ಕಾಲ.	ಅಪ್ಪರ್ ಸೆಕಂಡರಿ ಅಂತಸ್ತಿನ ವಿಷಯುಗಳ.	ಕಾಲ.	ಲೋವರ್ ಸೆಕಂಡರಿ ಅಂತಸ್ತಿನ ವಿಷಯುಗಳು.	ಕಾಲ.	ಪ್ರೈಮರಿ ಅಂತಸ್ತಿನ ವಿಷಯುಗಳು.
ಮೊದಲನೆಯ ದಿವಸ	10ರಿಂದ 1ರ ವರೆಗೆ	(1) ಲೋವರ್ ಸೆಕಂಡರಿ ಮತ್ತು ಪ್ರೈಮರಿ ಸ್ಕೂಲಿಗಳಲ್ಲಿ ಓದಬೇಕಾದ ವಿಷಯುಗಳನ್ನು ಕಲಿಸುವ ಶಾಸ್ತ್ರ ಮತ್ತು ಅನುಭವ (The theory and practice of teaching) ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ (The art of oral teaching) ಕಿಂಡರ್ ಗಾರ್ಟನ್ ವಿಧಿಗಳು ಮತ್ತು ಶಿಕ್ಷಾ ಕ್ರಮ (Kindergarten Principles and methods, ಮತ್ತು ಕೊಟ್ಟ ಮೂರು ವಿಷಯುಗಳಲ್ಲಿ ಯಾವುದಾದರೂ ಒಂದು ವಿಷಯುವನ್ನು ಪಾಠ ಹೇಳುವ ಟಿಪ್ಪಣಿ (Notes of a lesson on one of three given subjects.)	10ರಿಂದ 1ರ ವರೆಗೆ	(1) ಅಪ್ಪರ್ ಪ್ರೈಮರಿ ಸ್ಕೂಲಿಗಳಲ್ಲಿ ಓದಬೇಕಾದ ವಿಷಯಗಳನ್ನು ಕಲಿಸುವ ಕ್ರಮಗಳು, ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ, ಕಿಂಡರ್‌ಗಾರ್ಟನ್ ವಿಧಿಗಳು ಮತ್ತು ಶಿಕ್ಷಾ ಕ್ರಮ, ಮತ್ತು ಕೊಟ್ಟ ಮೂರು ವಿಷಯುಗಳಲ್ಲಿ ಯಾವದಾದರೂ ಒಂದು ವಿಷಯುವನ್ನು ಪಾಠ ಹೇಳುವ ಟಿಪ್ಪಣಿ.	10ರಿಂದ 12ರ ವರೆಗೆ	(1) ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ, ಕಿಂಡರ್ ಗಾರ್ಟನ್ ವಿಧಿಗಳು ಮತ್ತು ಶಿಕ್ಷಾ ಕ್ರಮ, ಮತ್ತು ಕೊಟ್ಟ ಮೂರು ವಿಷಯುಗಳಲ್ಲಿ ಯಾವದಾದರೂ ಒಂದು ವಿಷಯುವನ್ನು ಪಾಠ ಹೇಳುವ ಟಿಪ್ಪಣಿ.
	2ರಿಂದ 5ರ ವರೆಗೆ	(2)(a) ಲೋವರ್ ಸೆಕಂಡರಿ ಮತ್ತು ಪ್ರೈಮರಿ ಸ್ಕೂಲಿಗಳ ಸಂವಿಧಾನ (Organization) ಸ್ಕೂಲ್ ರಿಜಿಸ್ಟರ್‌ಗಳ ಮಾದಿರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಖ್ಖಗಳನ್ನು ತಯಾರ್ಮಾಡುವ ರೀತಿ ಮತ್ತು ಸರ್ಕಾರೀ ಕಾಗದಗಳನ್ನು ಬರಿಯುವ ಸರಿಯಾದ ಕ್ರಮ.	2ರಿಂದ 5ರ ವರೆಗೆ	(2) ಯಾವದಾದರೂ ಒಂದು ಪ್ರೈಮರಿ ಸ್ಕೂಲಿನ ಸಂವಿಧಾನ (Organization) ಮತ್ತು ವ್ಯವಸ್ಥೆ (Discipline) ಸ್ಕೂಲ್ ರಿಜಿಸ್ಟರುಗಳ ಮಾದರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಖ್ಖಗಳನ್ನು ತಯಾರ್ಮಾಡುವ ರೀತಿ.	2ರಿಂದ 4ರ ವರೆಗೆ	(2) ಯಾವದಾದರೂ ಒಂದು ಲೋವರ್ ಪ್ರೈಮರಿ ಸ್ಕೂಲಿನ ಸಂವಿಧಾನ (Organization) ಮತ್ತು ವ್ಯವಸ್ಥೆ (Discipline) ಸ್ಕೂಲ್ ರಿಜಿಸ್ಟರುಗಳ ಮಾದಿರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಖ್ಖಗಳನ್ನು ತಯಾರ್ಮಾಡುವರೀತಿ.

ದಿವಸ.	ಕಾಲ.	ಅಪ್ಪರ್ ಸೆಕಂಡರಿ ಅಂತಸ್ತಿನ ವಿಷಯಗಳು.	ಕಾಲ	ಲೋವರ್ ಸೆಕೆಂಡರಿ ಅಂತಸ್ತಿನ ವಿಷಯಗಳು.	ಕಾಲ.	ಪ್ರೈಮರಿ ಅಂತಸ್ತಿನ ವಿಷಯಗಳು.
25ನೇ ದಿವಸ	10 ರಿಂದ 12ರ ವರೆಗೆ	(2) (b) ನೀತ್ಯನುಶಾಸನ ವಿಧಾನ (Principles of moral discipline) ಶೀಲಸ್ವಭಾವೋತ್ಪಾದನ (Formation of habits and character)				

ಇದರಡಿ ಕಂಡ ನಿಬಂಧನೆಗಳಿಗೆ ವಿದ್ಯಾರ್ಥಿಗಳು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು:—

(1) ಪರೀಕ್ಷೆಯು ಆರಂಭಿಸುವದಕ್ಕೆ ಕ್ಲಿಪ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವ ವರೆಗೂ ಪರೀಕ್ಷಾ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ವಿದ್ಯಾರ್ಥಿಗೂ ಅಪ್ಪಣೆ ಕೊಡಲ್ಪಡುವದಿಲ್ಲವು. ಮತ್ತು ಅಂಥಾ ಅರ್ಧ ಘಂಟೆ ಕಳದ ಮೇಲೆ ಬರುವ ಯಾವ ವಿದ್ಯಾರ್ಥಿಗಳಿಗೂ ಪ್ರವೇಶಕ್ಕೆ ಅವಕಾಶ ಕೊಡಲ್ಪಡಲಾರದು.

(2) ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷಾ ಕೊಠಡಿಯನ್ನು ಒಂದಾವರ್ತಿ ಬಿಟ್ಟು ಬಂದನಂತರ ಪುನಹ ಪ್ರವೇಶಿಸಲು ಯಾವ ವಿದ್ಯಾರ್ಥಿಗೂ ಅವಕಾಶ ಉಂಟಾಗಲಾರದು. ಅಲ್ಲದೆ ತನ್ನ ಉತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟ ವಿನಹ ಪರೀಕ್ಷಾ ಸ್ಥಳವನ್ನು ಬಿಟ್ಟು ಬರುವದಕ್ಕೆ ಸಹ ಅವಕಾಶ ಕೊಡುವದಿಲ್ಲವು.

(3) ಯಾವ ವಿದ್ಯಾರ್ಥಿಯೇ ಆಗಲಿ ಮತ್ತೊಬ್ಬ ವಿದ್ಯಾರ್ಥಿಯೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ನಾವ ವಿಧದಿಂದಲಾದರೂ ಬಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೂಡಲೆ ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವದಲ್ಲದೆ ಸದರೀ ಸಂಗತಿಯು ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವದು.

(4) ಪರೀಕ್ಷಾ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ, ರೂಲರುಗಳನ್ನಾಗಲಿ, ಪುಸ್ತಕಗಳನ್ನಾಗಲಿ, ಬರದ ಕಾಗದಗಳನ್ನಾಗಲಿ, ಅಥವಾ ಇನ್ನಾವ ವಿಧವಾದ ಕಾಗದ ಪತ್ರಗಳನ್ನಾಗಲಿ, ತೆಗದುಕೊಂಡು ಹೋಗಲು ಯಾವ ವಿದ್ಯಾರ್ಥಿಗಳಿಗೂ ಯಾವ ಸಂದರ್ಭದಲ್ಲಿಯೂ ಅವಕಾಶ ಕೊಡಲ್ಪಡುವದಿಲ್ಲವು: ಯಾವ ವಿದ್ಯಾರ್ಥಿಯಾಗಲಿ, ಈ ನಿಬಂಧನೆಗೆ ವಿರುದ್ಧವಾಗಿ ನಡೆಸುತ್ತಿರುವದಾಗಿಯಾಗಲಿ ಅಥವಾ ಇನ್ನಾವ ದುಷ್ಕೃತ್ಯಗಳನ್ನು ನಡೆಸುತ್ತಿರುವದಾಗಿಯಾಗಲಿ, ಕಂಡುಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವದಲ್ಲದೆ ಸದರಿ ನಡವಳಿಕೆಯು ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವುದು.

(5) ವಿದ್ಯಾರ್ಥಿಯು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಎದ್ದು ನಿಂತು ಸೂಪರಿಂಟೆಂಡೆಂಟರು ಕಾಗದಗಳನ್ನು ತೆಗದುಕೊಳ್ಳುವ ವರೆಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ವಿದ್ಯಾರ್ಥಿಯೇ ಆಗಲಿ ಮೇಲೆ ಹೇಳಿದ ರೀತಿ ನಡೆಸತಕ್ಕದ್ದೇ ಹೊರತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

(6) ವಿದ್ಯಾರ್ಥಿಯ ಹೆಸರು, ರಿಜಿಸ್ಟರ್ ನಂಬರ್ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

(7) ಪ್ರಶ್ನೆ ಪತ್ರಗಳು ವಿನಹ ಯಾವ ಕಾಗದಗಳನ್ನಾಗಲಿ ಪರೀಕ್ಷಾ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ಕೊಡುವದಿಲ್ಲವು.

(8) ವಿದ್ಯಾರ್ಥಿಗಳು ಕಾಗದಗಳನ್ನ ಹರಿಯದಂತೆಯೂ ಮತ್ತು ನೆಲದಮೇಲೆ ಕಾಗದಗಳನ್ನ ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. ಕಟ್ಟುಹೋದ ಶಿಷ್ಟ ಕಾಗದಗಳೂ ವಿದ್ಯಾರ್ಥಿಯು ಬರಯುತ್ತಲಿದ್ದ ಮೇಜಿನ ಮೇಲೆಯೇ ಬಿಡಲ್ಪಡತಕ್ಕದ್ದು.

H. J. BHABHA.

ಇನ್ಸ್‌ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಹಾಸನ ಡಿಸ್ಟ್ರಿಕ್ಟು.

ಸನ್ 1907ನೆ ಇಸವಿ ಆಗಸ್ಟು 24ನೆ ಶನಿವಾರ ದಿವಸ ಹಾಸನ ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳು ಸೇರಿ ನಡಿಸಿದ ಮೀಟಿಂಗಿನ ಪ್ರೊಸೀಡಿಂಗ್ಸ್‌ಯಾನೆ ತೀರ್ಮಾನಗಳು.

ಹಾಜರು.

ಕೆ. ಆರ್. ಶ್ರೀನಿವಾಸೈಯ್ಯಂಗಾರ್, ಎಸ್ಕ್ವೈರ್, ಎಂ. ಎ., ಪ್ರೆಸಿಡೆಂಟರವರು.

ಎಕ್ಸ್ ಅಫಿಷಿಯೋ ಮೆಂಬರುಗಳು.

ಮೆ॥ ಎ. ಕೃಷ್ಣಸ್ವಾಮೈಯ್ಯಂಗಾರ್, ಬಿ. ಎ., ಟ್ರೆಜರಿ ಅಸಿಸ್ಟೆಂಟ್ ಕಮಿಷನರವರು ಡಿಸ್ಟ್ರಿಕ್ಟ್ ಬೋರ್ಡ್ ವೈಸ್ ಪ್ರೆಸಿಡೆಂಟರು.

,, ಎಂ. ಎ. ನಾರಾಯಣೈಯ್ಯಂಗಾರ್, ಬಿ. ಎ., ಬಿ. ಎಲ್., ಸೀನಿಯರ್ ಅಸಿಸ್ಟೆಂಟ್ ಕಮಿಷನರವರು.

,, ಎಂ. ಲಕ್ಷ್ಮಣಶಾಸ್ತ್ರಿಗಳವರು, ಬಿ. ಎ., ಜನರಲ್ ಅಸಿಸ್ಟೆಂಟ್ ಕಮಿಷನರವರು.

,, ಪ್ರಹ್ಲಾದರಾವ್, ಎಗ್ಸಿಕ್ಯೂಟಿವ್ ಇಂಜನೀಯರ್‌ವರು.

,, ಸಿ. ರಾಜಾರಾಮರಾವ್, ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರವರು.

,, ಎಂ. ಕೆ. ತಿರುಮಲಾಚಾರ್ಯರವರು, ಬಿ. ಎ., ಸ್ಕೂಲ್ ಡೆಪ್ಯುಟಿ ಇನ್ಸ್‌ಪೆಕ್ಟರವರು.

ನಾರ್ ಅಫಿಷಿಯಲ್ ಮೆಂಬರುಗಳು.

ಮೆ|| ಲಕ್ಷ್ಮೀನರಸಿಹ್ಮಾಚಾರ್ಯರವರು, ಹಾಸನ.
,, ಕೇಣಿ ಮಹದೇವಪ್ಪನವರು, ಹಾಸನ.
,, ಡಬ್ಲಿಯು. ಎಲ್. ಕ್ರಾಫರ್ಡ್ ಸಾಹೇಬರವರು, ಮಂಜರಾಬಾದು.
,, ಪುಟ್ಟೇಗೌಡರು, ಮಂಜರಾಬಾದು.
,, ದಾಸಪ್ಪನವರು, ಅರಸೀಕೆರೆ.
,, ಕೆಂಚರಾಯ ಶೆಟ್ಟರು, ಅರಸೀಕೆರೆ.
,, ತಿರುನಾರಣೈಯ್ಯಂಗಾರ್ಯರವರು, ಚನ್ನರಾಯಪಟ್ಣ.
,, ನಂಜಂಣನವರು, ಚನ್ನರಾಯಪಟ್ಣ.
,, ವೆಂಕಟರಾಮೈಯ್ಯನವರು, ಹೊಳೇನರಸೀಪುರ.
,, ಕೋನೇರಿ ರಾಮಶೆಟ್ಟರು, ಹೊಳೇನರಶೀಪುರ.
,, ಸೂರ್ಯನಾರಾಯಣಶೆಟ್ಟರು, ಅರಕಲಗೂಡು.
,, ಮಹಲಿಂಗೆ ಗೌಡರು, ಡಿಟೋ.
,, ಅಬ್ದುಲ್ಲಾಸಾಭರು, ಅರಕಲಗೂಡು.
,, ಗುರುಲಿಂಗೆಗೌಡರು, ಆಲೂರು.

ಗೈರ್ ಹಾಜರು.

ಮೆ|| ಐಗೂರು ಮಲ್ಲೀಗೌಡರು, ಮಂಜರಾಬಾದು.
,, ಕೆ. ತಮ್ಮೈಯ್ಯನವರು, ಬೇಲೂರು.
,, ಹಬಿಬುಲ್ಲಾಸಾಭರು, ಬೇಲೂರು.
,, ಗೌಡಧರಣೈಯ್ಯಶೆಟ್ಟರು, ಚನ್ನರಾಯಪಟ್ಣ.

I. ಬರುವ ಮೈಸೂರು ದಸರಾ ಪ್ರಜಾ ಪ್ರತಿನಿಧಿ ಸಭೆಗೆ ಹಾಸನ ಡಿಸ್ಟ್ರಿಕ್ಟ್ ಬೋರ್ಡ್‌ನಿಂದ ಹೋಗಬೇಕಾಗಿರುವ 2 ಜನ ನಾರ್ ಅಫಿಷಿಯಲ್ ಮೆಂಬರುಗಳನ್ನು ಚುನಾಯಿಸುವದಕ್ಕೋಸ್ಕರ ದಸರಾ ಕ್ಯಾಲೆಂಡರ್ ಓದಲಾಯಿತು.

ತೀರ್ಮಾನ :—ಪ್ರಸಕ್ತವಾದ ಚುನಾವಣೆಯಲ್ಲಿ ಮೆಸರ್ಸ್. ವೆಂಕಟರಾಮೈಯ್ಯನವರಿಗೂ ಮತ್ತು ಮಹಲಿಂಗೇಗೌಡರಿಗೂ ಸಹಾ ಹೆಚ್ಚಾದ ಓಟ್ಸ್ ಬಂದದ್ದರ ಮೇಲೆ ಇವರುಗಳನ್ನು ಚುನಾಯಿಸಲ್ಪಟ್ಟವರೆಂತ ತೀರ್ಮಾನಿಸಲಾಯಿತು.

II. 1906—07ನೆ ಸಾಲಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರ ಆದಾಯ ಮತ್ತು ಖರ್ಚುಗಳನ್ನು ಓದಲಾಯಿತು.

ತೀರ್ಮಾನ :—ಅನುಮೋದಿಸಲಾಯಿತು.

III. 1907ನೆ ಜೂನ್ ಆಖ್ಯೆರಿಗೆ ನಿಂತಿರುವ ನೀಂಕಲಾ ಕಾಂಗಾರಿಗಳ ಬಾಬತು ಪಟ್ಟಿಗಳನ್ನು ಓದಲಾಯಿತು.

(1) ಪಬ್ಲಿಕ ಇಲಾಖಾ ಮೂಲಕ ನಡಿಯುವ A. ಪಬ್ಲಿಕ ವರ್ಕ್ಸ್ ಬಾಬತು ನೀಂಕಲಾ ಕಾಂಗಾರಿಗಳು.

(2) ರೆವಿನ್ಯು ಇಲಾಖಾ ಮೂಲಕ ನಡಿಯುವ ಬಿ. ಪಬ್ಲಿಕ ವರ್ಕ್ಸ್‌ಗಳ ಬಾಬತು ನೀಂಕಲಾ ಕಾಂಗಾರಿಗಳು.

ತೀರ್ಮಾನ :—ಕೇಳಿ ವಿಲೆ ಇಡಿಸಲಾಯಿತು.

IV. ಕೆಳಗೆ ನಮೂದಿಸುವ ಗೌರ್ನಮೆಂಟ ಆರ್ಡರ್‌ಗಳನ್ನು ಬೋರ್ಡಿನವರ ತಿಳುವಳಿಕೆ ಬಗ್ಯೆ ಓದಲಾಯಿತು.

(1) ಗ್ರಾಮ ಮತ್ತು ಹಾರನಹಳ್ಳಿ ವೈದ್ಯಶಾಲೆಗಳನ್ನು ಖಾಯಂ ಇಡಿಸಿಕೊಡಬೇಕೆಂಬದಾಗಿ ಡಿಸ್ಟ್ರಿಕ್ಟ ಬೋರ್ಡಿನವರು ಮಾಡಿದ ಶಿಫಾರಸನ್ನು ಮಂಜೂರ್ಮಾಡಿರುತ್ತೆಂಬ ಬಗ್ಯೇ ಗೌರ್ನಮೆಂಟನವರ 13-6-07ರ ಮುರ್ಕಂ 11782-4—ಎಲ್ ಬಿ. 444-06—2ನೆ ನಂಬರ್ ಪ್ರೊಸೀಡಿಂಗ್ಸ್.

(2) ಸಂತೆಗಳಲ್ಲಿನ ಅಂಗಡಿಗಳ ಮೇಲೆ ವಸೂಲ್ಮಾಡಬೇಕೆಂದಿದ್ದ ಸುಂಕದ ವಿಚಾರವನ್ನು ಸದ್ಯಕೆ ನಿಲ್ಲಿಸಬೇಕೆಂಬ ಡಿಸ್ಟ್ರಿಕ್ಟ ಬೋರ್ಡಿನವರ ತೀರ್ಮಾನವನ್ನು ರಿಕಾರ್ಡ ಮಾಡಿರುತ್ತೆಂಬ 14-6-07ರ ಮುರ್ಕಂ 11813-5—ಎಲ್. ಬಿ. 402-05—10ನೆ ನಂಬರ್ ಪ್ರೊಸೀಡಿಂಗ್ಸ್.

(3) ಹೊಸದಾಗಿ ಸಂತೆ ಸ್ಥಾಪಿಸಬೇಕೆಂಬ ಸ್ಥಳಕ್ಕೆ ಹತ್ತರದಲ್ಲಿರುವ ಮ್ಯುನಿಸಿಪಲ್ ಕೌನ್ಸಿಲ್‌ಗಳ ಅನುಮತಿಯನ್ನು ಪಡೆದ ನಂತರ ಸಂತೆ ವಿಚಾರ ಪೈಸಲ್ಮಾಡುವದು ಒಳ್ಳೇದೆಂಬ ಬಗ್ಯೆ ತಲಪಿದ 18-6-07ರ ಮುರ್ಕಂ 11966-74—ಎಲ್. ಬಿ. 472-06—2ನೆ ನಂಬರ್ ಪ್ರೊಸೀಡಿಂಗ್ಸ್.

(4) ಹೊಸದುರ್ಗದಿಂದ ಹೊನ್ನವಳ್ಳಿಗೆ ರಸ್ತೆ ಹಾಕಬೇಕೆಂಬ ಅಂಶವನ್ನು ತುಮಕೂರು, ಹಾಸನ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ ಬೋರ್ಡಿನವರಿಗೆ ಅನುಕೂಲವಾದಾಗ್ಯೆ ಆಲೋಚಿಸಬಹುದೆಂಬ ಬಗ್ಯೆ ಗವರ್ನಮೆಂಟಿನಿಂದ ತಲಪಿದ 4—7—07ನೆ ಮುರ್ಕಂ 114-7— ಎಲ್. ಬಿ. 224—06—6ನೆ ನಂಬರ್ ಪ್ರೊಸೀಡಿಂಗ್ಸ್.

(5) 1907-08ನೆ ಸಾಲಿಗೋಸ್ಕರ ದುದ್ದದ ಟೋಲ್ ಗೇಟನಲ್ಲಿ ಸುಂಕ ವಸೂಲ್ಮಾಡುವ ಹಕ್ಕು ಹರಾಜಿನ ಫಲಿತಾಂಶವನ್ನು ನೋಡಿ ತೃಪ್ತಿಪಟ್ಟು ರಿಕಾರ್ಡು ಮಾಡಿರುತ್ತೆಂತ ತಲಪಿದ 22-7-07ರ ಮುರ್ಕಂ 636-7—ಎಲ್. ಬಿ. 368-06-4ನೆ ನಂಬರ ಪ್ರೊಸೀಡಿಂಗ್ಸ್.

(6) 1907-08ನೆ ಸಾಲಿನಲ್ಲಿ ಹೊಳೆನರಸೀಪುರದ ಸೇತುವೆ ಬಳಿ ಟೋಲ್ ಗೇಟನಲ್ಲಿ ಸುಂಕ ವಸೂಲ್ಮಾಡುವ ಹಕ್ಕನ್ನು ಹರಾಜ್ ಮಾಡಿದ್ದರ ಫಲಿತಾಂಶವನ್ನು ನೋಡಿ ಅನುಮೋದಿಸಿರುತ್ತೆಂಬ 1—8—07ರ ಮುರ್ಕಂ 950-1—ಎಲ್. ಬಿ. 7-07-2ನೆ ನಂಬರ್ ಪ್ರೊಸೀಡಿಂಗ್ಸ್.

(7) ಪ್ರತಿ ಡಿಸ್ಪೆನ್ಸರಿಯಲ್ಲೂ ಪ್ರತಿ ಮಾಹೆಯಗೋಸ್ಕರ ನಾಡು ಔಷಧಿಗೆ 5 ರೂಪಾಯಿನಿಂದ 6 ರೂಪಾಯಿ ಹೆಚ್ಚಿಸಲು ಆಗುವದಿಲ್ಲವೆಂತಲೂ, ಈ ಡಿಸ್ಪೆನ್ಸರಿಗಳಿಗಾಗಿ ಖರ್ಚಾಗುವ ಮೊಬಲಗನ್ನು ಡಿಸ್ಟ್ರಿಕ್ಟ್ ಮತ್ತು ಮ್ಯುನಿಸಿಪಲ್ ಫಂಡ್ಸ್‌ಗಳಿಗೆ ಕಂಟ್ರೋಲರ್ ಸಾಹೇಬರವರು ಸೇರಿಸಬೇಕೆಂಬದಾಗಿ ವಗ್ಯೆರೆ ತಲಿಪಿದ 2—8—07ರ ಮರ್ಕುಂ 987-96—ಎಲ್. ಬಿ. 307-06-6ನೆ ನಂಬರ್ ಪ್ರೊಸೀಡಿಂಗ್ಸ್.

(8) ಮೈಸೂರು ಶೀಮೆಯ ಪಬ್ಲಿಕ್ ಹೆಲ್ತ್ ಡಿಪಾರ್ಟ್‌ಮೆಂಟ್ ಎಂಬದಾಗಿ ಸ್ಥಾಪಿಸಿರುವ ವಿಚಾರದಲ್ಲಿ ತಲಪಿದ 10-8-07ರ ಮರ್ಕುಂ 1378-92—ಸ್ಯಾನಿಟರಿ 93-06-8ನೆ ನಂಬರ್ ಪ್ರೊಸೀಡಿಂಗ್ಸ್.

V. 300 ಮನೆಗಳಿಗಿಂತಲೂ ಅಥವಾ 1,000 ಪ್ರಜಾ ಸಂಖ್ಯೆಗಿಂತಲೂ ಜಾಸ್ತಿ ಇರುವ ಗ್ರಾಮಗಳನ್ನು ಯೂನಿಯನ್ನಾಗಿ ಮಾಡಬೇಕೆಂಬ ವಿಚಾರದಲ್ಲಿ ತಲಪಿದ 16—3—07ರ ಮರ್ಕುಂ 8308-15—ಎಲ್. ಬಿ. 298-06-22ನೆ ನಂಬರ್ ಪ್ರೊಸೀಡಿಂಗ್ಸ್ ಓದಲಾಯಿತು.

(b) ಮೇಲ್ಕಂಡ ಆರ್ಡರ್ ಅನುಸರಿಸಿ ಈ ಡಿಸ್ಟ್ರಿಕ್ಟಿನಲ್ಲಿ 12 ಹೊಸ ಯೂನಿಯನ್‌ಗಳಲ್ಲಿ 1907-08ನೆ ಸಾಲಿನಲ್ಲಿ ಆಗುವ ಉತ್ಪತ್ತಿ ಮತ್ತು ಖರ್ಚಿನ ಬಾಬತು ಅಂದಾಜದ ಬಜ್ಜೆಟ್ ಮತ್ತು ಹಾಸನ ಡಿಸ್ಟ್ರಿಕ್ಟ್ ಬೋರ್ಡು ಬಾಬತು ರಿವೈಸ್ಡ್ ಬಜ್ಜೆಟ್ ಸಹಾ ಓದಲಾಯಿತು.

ತೀರ್ಮಾನ:—ಪ್ರಸಕ್ತವಾದ ಅಂದಾಜಾಗಳನ್ನು ಅನುಮೋದಿಸಿರುತ್ತೆಂತಲೂ ಇದನ್ನು ಡಿಸ್ಟ್ರಿಕ್ಟ್ ಫಂಡ್ ಬಜ್ಜೆಟ್ಟಿಗೆ ಸೇರಿಸಬಹುದೆಂಬದಾಗಿಯೂ ತೀರ್ಮಾನಿಸಲಾಯಿತು.

VI. (a) ತಾಲ್ಲೂಕ್ ಹೆಡ್‌ಕ್ವಾರ್ಟರ್ಸ್‌ಗಳಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರುಗಳು ಆಗಿಂದಾಗ್ಯೆ ಗ್ರಾಮಾಂತರಗಳಿಗೆ ಹೋಗಿ ಔಷಧಿ ಕೊಡುತ್ತಿರುವ ಪದ್ಧತಿಯನ್ನು ನಿಲ್ಲಿಸಿ ಇದಕ್ಕೆ ಬದಲಾಗಿ ಸದರಿ ಸ್ಥಳಗಳಲ್ಲಿ ಕ್ರಮವಾಗಿ ಸರ್ಟಿಫಿಕೇಟ್ ಹೊಂದಿರುವ ಪಂಡಿತರನ್ನಾಗಲಿ, ಹಕೀಮರನ್ನಾಗಲಿ ಮಾಹೆಯಾನ 10 ರೂಪಾಯಿ ತಲಬು ಮತ್ತು ಔಷದಿ ಖರ್ಚಿಗೋಸ್ಕರ ಮಾಹೆಯಾನಾ 2 ರೂಪಾಯಿನಂತೆ ಕೊಟ್ಟು ಇಡುವದು ಅನುಕೂಲವೆಂಬ ಬಗ್ಯೆ ಗವರ್ನಮೆಂಟಿನಿಂದ ತಲಪಿದ 13—5—07ರ ಮರ್ಕುಂ 10590-602—ಮೆಡಿಕಲ್ 297-06-1ನೆ ನಂಬರ್ ಪ್ರೊಸಿಡಿಂಗ್ಸ್ ಓದಲಾಯಿತು.

(b) ಮೇಲ್ಕಂಡಂತೆ ಈ ಡಿಸ್ಟ್ರಿಕ್ಟಿನಲ್ಲಿನ ಹಾಸ್ಪಿಟಲ್ ಅಸಿಸ್ಟೆಂಟರುಗಳು ಆಗಾಗ್ಯೆ ಗ್ರಾಮಗಳಿಗೆ ಹೋಗುತ್ತಿರುವ ಪದ್ಧತಿಯನ್ನು ನಿಲ್ಲಿಸತಕ್ಕ ಬಗ್ಯೆ ಅಪ್ಪಣೆ ಮಾಡಿರುತ್ತೆಂಬ ಬಗ್ಯೆ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರವರಿಂದ ತಲಪಿರುವ 17—8—07ರ ಮರ್ಕುಂ 1032-39ನೆ ನಂಬರ್ ಮೆಮೋ ಓದಲಾಯಿತು.

ತೀರ್ಮಾನ:—ಕೇಳಿ ವಿಲೆ ಇಡಿಸಲಾಯಿತು.

VII. ಹಾಸನದಲ್ಲಿರುವ ವೆಸ್ಲಿಯನ್ ಮಿಷನರವರ ಹೆಂಗಸರು ಮತ್ತು ಮಕ್ಕಳ ಆಸ್ಪತ್ರೆ ಖರ್ಚಿಗೋಸ್ಕರ ಸಾಲಿಯಾನಾ 200 ರೂಪಾಯಿ ಡಿಸ್ಟ್ರಿಕ್ಟ್ ಫಂಡ್ಸಿನಿಂದಲೂ ಮತ್ತು ಸದರಿ ಮೊತ್ತವನ್ನು ಹಾಸನ ಟೌನ್ ಮ್ಯುನಿಸಿಪಲ್ ಫಂಡ್ಸಿನಿಂದಲೂ ಕೊಡತಕ್ಕ ಬಗ್ಯೂ ಮತ್ತು ಮೇಲ್ಕಂಡ ಫಂಡ್ಸ್‌ಗಳ ಬಾಬತು ಹಾಲಸಾಲ್ ಬಜ್ಜೆಟ್ಟಿನಲ್ಲಿ ದಾಖಲ್ಮಾಡಿರುವ ಮೊಬಲಗನ್ನು ಕೊಡಬಹುದೆಂಬ ಬಗ್ಯೂ ಗವರ್ನಮೆಂಟಿನಿಂದ ತಲಪಿದ 16—8—07ರ ಮರ್ಕುಂ 1558-61—ಮೆಡಿಕಲ್ 86-06-6ನೆ ನಂಬರ್ ಪ್ರೊಸೀಡಿಂಗ್ಸ್ ಓದಲಾಯಿತು.

ತೀರ್ಮಾನ:—ಕೇಳಿ ವಿಲೆ ಇಡಿಸಲಾಯಿತು.

VIII. ಈ ಕೆಳಗೆ ನಮೂದಿಸಿರುವ ಬಜ್ಜೆಟ್ಟಿನಲ್ಲಿ ದಾಖಲಾದ ಕೆಲಸಗಳ ಬಾಬತು ಅಂದಾಜಾ ಓದಲಾಯಿತು:—

ನಂಬರ್.	ತಾಲ್ಲೂಕು ಮತ್ತು ಕಾಮಗಾರಿಯ ಹೆಸರು.	ಅಂದಾಜಾ ಮೊಬಲಗು.
	ಅರಸೀಕೆರೆ ತಾಲ್ಲೂಕು.	ರೂ.
1	ಮಹಮ್ಮದ್‌ಪುರದಲ್ಲಿ ಭಾವಿಗೆ ಫತ್ತರ್ ಕಾಂಗಾರಿಗೆ ...	300
2	ಹೊಳಲಕೆರೆ ಭಾವಿಗೆ ಡಿಟೋ ...	298
3	ಹರಳಕಟ್ಟೆಯಲ್ಲಿ ಭಾವಿ ಆಳಪಡಿಸುವದಕ್ಕೋಸ್ಕರ ...	298
	ಚನ್ನರಾಯಪಟ್ಟಣ ತಾಲ್ಲೂಕು.	
4	ಹಿರಿಸಾವೆಯಲ್ಲಿ ಚಿರಂಡಿ ಕಟ್ಟಿ ಗ್ರಾಮ ಪಾಕೀಜಾ ಅಭಿವೃದ್ಧಿಗೋಸ್ಕರ ...	206
5	ಶ್ರವಣ ಬೆಳಗುಳದಲ್ಲಿ ಚಿರಂಡಿಗಳನ್ನು ಕಟ್ಟತಕ್ಕ ಕಾಂಗಾರಿಗೋಸ್ಕರ ...	202
6	ಚನ್ನರಾಯಪಟ್ಟಣದ ಮುಸಾಫರ್‌ಖಾನೆ ರಿಪೇರಿಗೆ ...	100
7	ಹಿರಿಸಾವೆ ಡಿಟೋ ...	150
8	ರಾಚೇನಹಳ್ಳಿಯಲ್ಲಿ ಇಳಿಯುವ ಭಾವಿಗೆ ಕಲ್ಲುಕಟ್ಟುವದಕ್ಕೋಸ್ಕರ ...	374
9	ಹೊಸೂರು ಗ್ರಾಮದಲ್ಲಿ ಡಿಟೋ ...	160
	ಹೊಳೆನರಸೀಪುರ ತಾಲ್ಲೂಕು.	
10	ಮಾವಿನಕೆರೆ ಮುಸಾಫರ್‌ಖಾನಾ ರಿಪೇರಿಗೆ ...	50
11	ಮಾವಿನಕೆರೆಯಿಂದ ಇಲವಾಲ್ ಹಾಸನಕ್ಕೆ ಹೋಗತಕ್ಕ ಗಾಡಿಜಾಡು ರಿಪೇರಿ	25
12	ಗಂಗೂರು ಗ್ರಾಮದಲ್ಲಿ ಭಾವಿ ಇಳಿಸಿ ಫತ್ತರ್ ಕಾಂಗಾರಿಗೆ	299
	ಅರಕಲಗೂಡು ತಾಲ್ಲೂಕು.	
13	ಕೊಣನೂರು ಗ್ರಾಮದಲ್ಲಿ ಚಿರಂಡಿ ಕಟ್ಟತಕ್ಕ ಬಗ್ಯೆ ...	131

ತೀರ್ಮಾನ :—ಮೇಲ್ಕಂಡ ಅಂದಾಜಾಗಳನ್ನು ಮಂಜೂರ್ಮಾಡಬಹುದೆಂತ ತೀರ್ಮಾನಿಸಲಾಯಿತು.

IX. ಕಳೆದ ಜೂನ್ ಮಾಹೆಯಲ್ಲಿ ಪ್ರೆಸಿಡೆಂಟರಿಂದ ಮಂಜೂರ್ಮಾಡಲ್ಪಟ್ಟಿರುವ ಪಾಳ್ಯದ ಕೊಳದ ರಿಪೇರಿ ಬಾಬತು 149 ರೂಪಾಯಿನ ಅಂದಾಜಾವನ್ನು ಓದಲಾಯಿತು.

ತೀರ್ಮಾನ :—ಅನುಮೋದಿಸಿರುತ್ತೆಂತ ತೀರ್ಮಾನಿಸಲಾಯಿತು.

X. ಮಲ್ಲಿಪಟ್ಟಣದಲ್ಲಿ ಕಟ್ಟುತ್ತಿರುವ ಮುಸಾಫರ ಖಾನೆಯು ಪೂರೈಸುತ್ತಾ ಬಂದಿರುವದರಿಂದ ಇದರ ಮೇಸ್ತುವಾರಿಗೋಸ್ಕರ ಒಬ್ಬ ಇಸಂ ಇಡುವದು ಅವಶ್ಯಕವೆಂಬ ಬಗ್ಗೆ ಅರಕಲಗೂಡು ತಾಲ್ಲೂಕು ಬೋರ್ಡಿನವರ ತೀರ್ಮಾನ ನಿಶಿ ತಲಪಿರುವ ಅಮಲ್ದಾರ್ರ ರಿಪೋರ್ಟು ಓದಲಾಯಿತು.

ತೀರ್ಮಾನ :—ಪ್ರಸಕ್ತವಾದ ಕಾಂಗಾರಿ ಪೂರೈಸಿ ಜನಗಳು ಇಳಿದುಕೊಳ್ಳುವದಕ್ಕೆ ಅವಕಾಶ ಕೊಡಬಹುದಾದ ತಾರೀಖಿ ಲಾಗಾಯಿತು ಮಾಹೆಯಾನ 5 ರೂಪಾಯಿ ತಲಬಿನ ಮೇಲೆ ಒಬ್ಬ ಕೇರ್‌ಟೇಕರ್ ನೇಮಕ ಮಾಡಿಕೊಳ್ಳತಕ್ಕ ಬಗ್ಗೆ ಗೌರ್ನಮೆಂಟ್ ಮಂಜೂರಾತಿ ಪಡೆಯಲು ಬರೆಸಬೇಕೆಂತ ತೀರ್ಮಾನಿಸಲಾಯಿತು.

XI. ಮೀಟಿಂಗಿಗೆ ಹಾಜರಾಗಲು ಅನಾನುಕೂಲತೆ ಕುರಿತು ಬರೆಸಿರುವ ಇದರಡಿ ಕಾಣಿಸಿರುವ ಮೆಂಬರುಗಳ ಲೇಖನಗಳನ್ನು ಓದಲಾಯಿತು.

1. ಕೆ. ತಮ್ಮಯ್ಯಯ್ಯನವರು.
2. ಮಲ್ಲಿಗೌಡರು.
3. ಧರಣ್ಣಯ್ಯ ಶೆಟ್ಟರು.

ತೀರ್ಮಾನ :—ಕೇಳಿ ವಿಲೆ ಇಡಿಸಲಾಯಿತು.

XII. ಬರುವ ಮೀಟಿಂಗನ್ನು 1907ನೆ ನವಂಬರ 11ನೆ ತಾರೀಖಿಗೆ ಗೊತ್ತು ಮಾಡಿರುತ್ತೆಂತ ತೀರ್ಮಾನಿಸಲಾಯಿತು.

ಕೆ. ಆರ್. ಶ್ರೀನಿವಾಸೈಯ್ಯಂಗಾರ್,
ಪ್ರೆಸಿಡೆಂಟ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ನೋಟಿಸ್.

ತಾರೀಖು 29ನೆ ಆಗಸ್ಟ್ 1907ನೆ ಇಸವಿ.

1907ನೆ ಇಸವಿ ಸೆಪಟಂಬರ್ ತಿಂಗಳು ತಾರೀಖು 19ನೆ ಮರ್ಕಂ 38ನೆ ನಂಬರ್ ಮೈಸೂರು ಗೆಜೆಟ್ 2ನೆ ಭಾಗದ 461—462—463ನೆ ನಂಬರ ಪುಟಗಳಲ್ಲಿ ಛಾಯಿಷ್ ಆಗಿರುವ ಇಸ್ತಿಹಾರ್‌ನಾಮೆಯಲ್ಲಿ ನಮೂದಿರುವ ಶಿವಮೊಗ್ಗ ಡಿಸ್ಟ್ರಿಕ್ಟ್ ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ಬೇವಾರಸಾಗಿ ನಿಂತಿರುವ ದಸ್ತಾವೇಜುಗಳನ್ನು ಇಸ್ತಿಹಾರ್ನಾಮೆಯು ಗೆಜೆಟಿನಲ್ಲಿ ಛಾಯಿಷ್ ಆದಲಾಗಾಯಿತು ಒಂದು ತಿಂಗಳು ಅವಧಿಯೊಳಗೆ ವಾಪಸು ಪಡೆಯದಿದ್ದಲ್ಲಿ ನಾಶಪಡಿಸಿಬಿಡುತ್ತಾದ ಸಂಗತಿ ಈ ಮೂಲಕ ತಿಳಿಸಿರುತ್ತೆ.

ಎಂ. ನಾರಾಯಣರಾವ್,
ಡಿಸ್ಟ್ರಿಕ್ಟು ರಿಜಿಸ್ಟ್ರಾರ್.

ಅಮೃತಮಹಲ್ ಇಲಾಖಾ.

ಪ್ರಸಿದ್ಧ ಪತ್ರಿಕೆ.

ತಾರೀಖು 6—7ನೆ ಸೆಪ್ಟಂಬರ 1907, ಬೆಂಗಳೂರು.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನೆಂದರೆ— ಮೈಸೂರು ಸೀಮೆಯು ಅಮೃತಮಹಲ್ ಇಲಾಖಾ ಕೆಲವು ಗಂಡು ರಾಸುಗಳು ಮೈಸೂರಿನಲ್ಲಿ ನಾಳೆ ದಸರಾ ಸಂಬಂಧವಾಗಿ ನಡೆಯುವ ವಸ್ತುಪ್ರದರ್ಶನ ಶಾಲೆಯು ಕಟ್ಟಡದ ಬಳಿ ಬರುವ 1907ನೆ ಅಕ್ಟೋಬರ ಮಾಹೆ 14ನೆ ತಾರೀಖಿನಲ್ಲಿ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಹರಾಜಿನಲ್ಲಿ ಪಡೆಯಬಹುದು.

ಷರತ್ತುಗಳು :—

(i) ಹರಾಜು ಖೈದಾದ ಕೂಡಲೇ ಪೂರಾ ಮೊಬಲಗು ಪಾವತಿ ಮಾಡಬೇಕು.

(ii) ಹರಾಜಿನಲ್ಲಿ ಪಡೆದ ಎತ್ತನ್ನು ವಸ್ತುಪ್ರದರ್ಶನ ಆಖೈರು ಆದನಂತರ ಹರಾಜುದಾರರ ಸುಪರ್ದು ಮಾಡಲ್ಪಡುತ್ತೆ.

ಹೆಚ್. ನಂಜುಂಡರಾಜೇ ಅರಸ್,
ಸೂಪರಿಂಟೆಂಡೆಂಟ್.

ಸರ್ 1907ನೆ ಇಸವಿಯ ಮೈಸೂರು ದಸರಾ ಪ್ರಯುಕ್ತವಾದ ಕೈಗಾರಿಕೆ ಮತ್ತು ವ್ಯವಸಾಯದ ಪ್ರದರ್ಶನ.

ಪ್ರದರ್ಶನದ ಪ್ರಾರಂಭ ಮತ್ತು ಪ್ರವೇಶದ ರುಸುಂ ಮೊದಲಾದವುಗಳ ಕುರಿತು ಇದರಡೀ ಕಂಡ ಏರ್ಪಾಡುಗಳು ಜನಗಳ ಜಾಹಿರ ಬಗ್ಯೆ ಮಾಡಲ್ಪಟ್ಟಿವೆ:—

1. ಸರ್ 1907ನೆ ಇಸವಿ ಅಕ್ಟೋಬರ 5ನೆ ತಾರೀಖು ಶನಿವಾರ ಪ್ರಾತಃಕಾಲ 8 ಘಂಟೆಗೆ ಪ್ರದರ್ಶನವನ್ನು ಪ್ರಾರಂಭಿಸಲು ಶ್ರೀಮನ್ಮಹಾರಾಜರವರು ಅಪ್ಪಣೆ ದಯಪಾಲಿಸಿರುತ್ತಾರೆ.

2. ಪ್ರದರ್ಶನ ಪ್ರಾರಂಭದ ಉತ್ಸವಕ್ಕೋಸ್ಕರ ಆಹ್ವಾನ ಪತ್ರಿಕೆಗಳು ಕಳುಹಿಸಲ್ಪಡುವವು.

3. 5ನೆ ತಾರೀಖಿನ ಪ್ರಾತಃಕಾಲದಲ್ಲಿ ಕರಿಯಲ್ಪಟ್ಟವರ ವಿನಹಾ ಇತರರಿಗೆ ಪ್ರದರ್ಶನಕ್ಕೆ ಬಿಡಲ್ಪಡುವದಿಲ್ಲ.

4. ಪ್ರದರ್ಶನ ಶಾಲೆಯು ಇದರ ಕೆಳಗೆ ನಮೂದಿಸುವ ಪ್ರಕಾರ ಜನಗಳಿಗೋಸ್ಕರ ತೆಗಿಯಲ್ಪಡುವುದು:—

ದಿನಗಳು.	ಕಾಲ. ಇಂದ.		ಗೆ.
ದೊಡ್ಡ ಮನುಷ್ಯರಿಗೂ ಮತ್ತು ಸ್ತ್ರೀಯರಿಗೂ—			
ಅಕ್ಟೋಬರ 5ನೆ ತಾರೀಖು	ಸಾಯಂಕಾಲ	5	8
ಡಿಟೋ 6ರಿಂದ 16ರ ವರಿಗೆ (ಉಭಯ ದಿನಗಳು ಸೇರಿ)	ಪ್ರಾತಃ	$7\frac{1}{2}$	$11\frac{1}{2}$
ಡಿಟೋ 17 ವ 18 / ಡಿಟೋ 21 ರಿಂದ 31ರ ವರಿಗೆ (ಉಭಯ ದಿನಗಳು ಸೇರಿ)	ಪ್ರಾತಃ	11	ಸಾಯಂಕಾಲ 8
ಸ್ತ್ರೀಯರಿಗೆ ಮಾತ್ರ—			
ಅಕ್ಟೋಬರ 7, 11 ಮತ್ತು 19	ಸಾಯಂಕಾಲ	4	8
ಡಿಟೋ 27	ಪ್ರಾತಃ	7	10
ಪ್ರಜಾ ಪ್ರತಿನಿಧಿ ಸಭೆಯ ಮೆಂಬರುಗಳಿಗೆ ಮಾತ್ರ (ರುಸುಂ ಇಲ್ಲದೆ)—			
ಅಕ್ಟೋಬರ 20	ಸಾಯಂಕಾಲ	2	8

5. ಅಕ್ಟೋಬರ 17ರಿಂದ 20ರ ವರಿಗೆ (ಉಭಯ ದಿನಗಳಲ್ಲಿ) ಪ್ರದರ್ಶನಶಾಲೆಯಲ್ಲಿ ಪ್ರಾತಃಕಾಲ 8 ರಿಂದ $9\frac{1}{2}$ ಘಂಟೆ ವರಿವಿಗೆ ಉಪನ್ಯಾಸಗಳಿಗೋಸ್ಕರ ಏರ್ಪಾಡುಗಳು ಮಾಡಲ್ಪಡುವವು. ಉಪನ್ಯಾಸಗಳ ವಿಷಯಗಳು ಮುಂದೆ ಪ್ರಸಿದ್ಧ ಪತ್ರಿಕೆಗಳಿಂದ ತಿಳಿಸಲ್ಪಡುವವು. ಉಪನ್ಯಾಸಗಳಿಗೋಸ್ಕರ ರುಸುಂ ಮನ್ನಾ ಮಾಡಲ್ಪಡುವುದು. ಉಪನ್ಯಾಸಗಳು ನಡೆಯುವ ಕಾಲದಲ್ಲಿ ಪ್ರದರ್ಶನ ಶಾಲೆಯು ಮುಚ್ಚಲ್ಪಡುವುದು.

6. ದರ್ಶನಕ್ಕೆ ಬರುವ ವಿಶೇಷತರವಾದವರಿಗೋಸ್ಕರ ಮೇಲೆ ನಮೂದಿಸಲ್ಪಡದ ಘಂಟೆಗಳಲ್ಲಿ ಪ್ರದರ್ಶನಶಾಲೆಯು ತೆಗೆಯಲು ಏರ್ಪಾಡುಗಳು ಮಾಡಲ್ಪಡುವವು.

7. ಪ್ರದರ್ಶನಶಾಲೆಗೆ ಬರಲು ಇದರಡಿ ಕಂಡ ರುಸುಂಗಳು ವಸೂಲು ಮಾಡಲ್ಪಡುವವು:—

ವಿವರ.	ರುಸುಂಗಳು. ರೂ.	ಆ.	ಪೈ.	
(a) ಪ್ರತಿ ಒಬ್ಬರಿಗೂ	0	4	0	ಪ್ರತಿ ಸಲಕ್ಕೂ.
(b) 5 ಜನಗಳು ಮೀರದ ಕುಟುಂಬಕ್ಕೆ ಕೊಡುವ ಟಿಕೆಟ್ಟುಗಳು	0	12	0	
(c) 5 ಜನಗಳಿಗಿಂತ ಹೆಚ್ಚಾದ ಕುಟುಂಬಕ್ಕೆ	0	2	0	ಜಾಸ್ತಿ ಪ್ರತಿ ಒಬ್ಬರಿಗೂ.
(d) ಪಾಠಶಾಲೆಯ ವಿದ್ಯಾರ್ಥಿಗಳಿಗೆ	0	2	0	ಅಥವಾ ಅರ್ಧ ಚಾರ್ಜ.
(e) ಪ್ರದರ್ಶನ ನಡೆಯುವ ಪೂರ್ತಿ ಕಾಲದಲ್ಲಿ ಪ್ರತಿ ಒಬ್ಬರಿಗೂ ತತ್ಕಾಲದ ಟಿಕೆಟ್ಟು	3	0	0	

☞ ಒಳಕ್ಕೆ—ಬರುವಾಗ ಗೇಟಿನಲ್ಲಿ ಟಿಕೆಟ್ಟುಗಳು ತೆಗೆದುಕೊಳ್ಳಲ್ಪಡುವವು.

ಟಿಕೆಟ್ಟುಗಳು ಕೊಡಲು ಮತ್ತು ರುಸುಂಗಳನ್ನು ವಸೂಲು ಮಾಡಲು ಮೈಸೂರಲ್ಲಿರುವ ಕಾಲೇಜುಗಳ ಪ್ರಿನ್ಸಿಪಲ್‌ಗಳಿಗೂ ಮತ್ತು ಪಾಠಶಾಲೆಗಳ ಹೆಡ ಮ್ಯಾಸ್ಟರುಗಳಿಗೂ ಕಳುಹಿಸಲ್ಪಡುವವು. ಪ್ರದರ್ಶನಕಾಲದಲ್ಲಿ ಮೈಸೂರಿಗೆ ಇತರ ಸ್ಥಳಗಳಿಂದ ಬಂದಿರುವ ವಿದ್ಯಾರ್ಥಿಗಳು ಮೈಸೂರಲ್ಲಿರುವ ಹೆಡ್ ಮ್ಯಾಸ್ಟರುಗಳಿಂದ ಮೇಲ್ಕಂಡ ದರಗಳಂತೆ ಟಿಕೆಟ್ಟುಗಳನ್ನು ಹೊಂದಬಹುದು.

8. ಪ್ರದರ್ಶನಕ್ಕೆ ವಸ್ತುಗಳನ್ನು ತರುವ ಪ್ರತಿ ಒಬ್ಬರಿಗೂ ಅಥವಾ ಅವರ ಮುತಾಲೀಕ ಯಾ ಆಳಿಗೂ ಮತ್ತು ಕೆಲಸದ ಮೇಲಿರುವ ಜನಗಳಿಗೂ ಮುಫತ್ತು ರಹದಾರಿಯು ಕೊಡಲ್ಪಡುವುದು.

9. ತಮ್ಮನ್ನು ಕಳುಹಿಸಿದ ಡೆಪ್ಯುಟಿ ಕಮಿಷನರ ಸರ್ಟಿಫಿಕೇಟಿನ ಮೇಲೆ ರುಸುಂ ಕೊಡಲು ಶಕ್ತಿಯಿಲ್ಲದ ರೈತರಿಗೂ ಮತ್ತು ಕೈಗಾರಿಕೆ ಕೆಲಸದವರಿಗೂ ಮುಫತ್ತು ರಹದಾರಿಗಳು ಕೊಡಲ್ಪಡುವವು.

10. ಹೋಗಿ ಬರಲು ರೈಲ್ವೆ ಚಾರ್ಜು ಕೊಡಲಿಕ್ಕೆ ಬಹಳ ಬಡವರಾದ ಆದರೆ ಪ್ರದರ್ಶನಕ್ಕೆ ಬರೋಣದರಿಂದ ಫಲಿತಾಂಶ ಹೊಂದುವ ವಿವೇಕಶಾಲಿಗಳಾದ ರೈತರು ಮತ್ತು ಕೈಗಾರಿಕೆ ಕೆಲಸದವರ ವಿಷಯದಲ್ಲಿ ಡೆಪ್ಯುಟಿ ಕಮಿಷನರವರು ಅಂಥಾ ಚಾರ್ಜ ಕೊಡಲು ಶಿಫಾರಸು ಸಹಾ ಮಾಡಬಹುದು. ಕಮಿಟಿಯವರು ಅಂಥಾ ಚಾರ್ಜನ್ನು ವಹಿಸುವರು. ಸಂದರ್ಭಾನುಸಾರ ಈ ರಿಯಾಯಿತಿಯನ್ನು ತೋರಿಸತಕ್ಕದ್ದು. ಸದರೀ ರೈತರು ಮತ್ತು ಕೈಗಾರಿಕೆಯವರು ತಮ್ಮ ಭೋಜನಕ್ಕೂ ಮತ್ತು ವಾಸಸತಕ್ಕ ಏರ್ಪಾಡುಗಳನ್ನು ಅವರೆ ಮಾಡಿಕೊಳ್ಳತಕ್ಕದ್ದು.

11. ಸರ್ 1907ನೆ ಇಸವಿ ಅಕ್ಟೋಬರ 1ರ ಲಾಗಾಯಿತು ಪ್ರದರ್ಶನ ಪ್ರದೇಶದ ಸಮೀಪದಲ್ಲಿ ವಸ್ತು ಪ್ರದರ್ಶಕರ ಉಪಯೋಗಕ್ಕೋಸ್ಕರ ಒಂದು ಹೋಟಲನ್ನು ಸರ್ಕಾರಿ ಅಲ್ಲದ ಇತರರಿಂದ ಇಡಿಸಲು ಕಮಿಟಿಯವರು ಏರ್ಪಡಿಸುವರು.

12. ಮೇಲ್ಕಂಡ ಅಂಶಗಳಲ್ಲಿ ಬದಲಾವಣೆಗಳನ್ನು ಹೆಚ್ಚು ಅಂಶಗಳನ್ನು ಅಥವಾ ವಿಶೇಷ ಏರ್ಪಾಡುಗಳನ್ನು ಮಾಡತಕ್ಕ ವಿಷಯದಲ್ಲಿ ನೋಟಿಸು ಮತ್ತು ಪ್ರಸಿದ್ಧ ಪತ್ರಿಕೆಯ ಮುಖಾಂತರ ತಿಳಿಸಲ್ಪಡುವವು.

ಕೆ. ಸುಬ್ಬರಾವ್, ಸೆಕ್ರಟೆರಿ.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಛಾಯಿಪ್ ಆದ್ದು. [ನಂ. 40

ಬೆಂಗಳೂರು, ಗುರುವಾರ, ಅಕ್ಟೋಬರ ತಾ॥ 3, ಸ್ 1907.

II ನೆ ಭಾಗ.

ಇಂಡ್ಯ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜಿ ರು ವಗೈರೆಯರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಫಾರೆಸ್ಟ್ ಇಲಾಖಾ.

ಸೆಂಡಲ್ ಹರಾಜ್ ನೋಟಿಫಿಕೇಷನ್.

ತಾರೀಖು 24ನೆ ಆಗಸ್ಟ್ 1907ನೆ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಸರಕಾರದ ಶ್ರೀಗಂಧದ ಸಾಲಿಯಾನಾ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರದರ ಬಾಜೂದಲ್ಲಿ ನಮೂದಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡೆಸಲ್ಪಡುವದು :—

ಡಿಸ್ಟ್ರಿಕ್ಟು.	ಕೋಠಿ.	ಹರಾಜು ತಾರೀಖು.	ಸುಮಾರು ಮೊತ್ತ.
			ಟನ್ನುಗಳು.
ಶಿವಮೊಗ್ಗ ...	ತೀರ್ಥಹಳ್ಳಿ ..	18ನೆ ನವಂಬರ 1907 ...	200
ಡಿಟೋ ...	ಸಾಗರ ...	21ನೆ ಡಿಟೋ ..	150
ಡಿಟೋ ...	ಶಿವಮೊಗ್ಗ ...	25ನೆ ಡಿಟೋ ...	500
ಕಡೂರು ..	ತರೀಕೆರೆ ...	28ನೆ ಡಿಟೋ ...	250
ಡಿಟೋ ..	ಚಿಕ್ಕಮಗಳೂರು ..	2ನೆ ಡಿಸೆಂಬರ 1907 ...	350
ಹಾಸನ ..	ಹಾಸನ ...	5ನೆ ಡಿಟೋ ..	150
ಬೆಂಗಳೂರು ..	ಬೆಂಗಳೂರು ...	9ನೆ ಡಿಟೋ ..	100
ಮೈಸೂರು ..	ಶ್ರೀರಂಗಪಟ್ಟಣ ...	12ನೆ ಡಿಟೋ ..	250
ಡಿಟೋ ...	ಹುಣಸೂರು ..	16ನೆ ಡಿಟೋ ..	500
		ಜುಮ್ಲಾ ..	2,450

2. ಪ್ರತಿ ಕೋಠಿಯಲ್ಲಿಯೂ ಹರಾಜಾಗುವ ಕ್ಲಾಸುವಾರು ಲಾಟು, ಮೊತ್ತ ಮತ್ತು ಇತರ ತಪಶೀಲುಗಳು ಬರುವ ಅಕ್ಟೋಬರ ಮಾಹೆಯ ಆಖೈರಿನಲ್ಲಿ ತಿಳಿಯಪಡಿಸುತ್ತೆ.

ಎಂ. ಮುತ್ತಣ್ಣಾ,
ಕನ್ಸರ್ವೇಟರ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ಫಾರೆಸ್ಟ್ ಇಲಾಖಾ.

ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರ ಆಫೀಸ್.

ಇಸ್ತಿಹಾರ್.

ತಾರೀಖು 23ನೆ ಸೆಪ್ಟಂಬರ 1907.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಕೆಳಗೆ ಕಂಡ ತಾಲ್ಲೂಕುಗಳ ಡಿಸ್ಟ್ರಿಕ್ಟ್ ಮತ್ತು ಸ್ಟೇಟ್ ಫಾರೆಸ್ಟು ಗಳಲ್ಲಿಯೂ, ಆಕಾರ ಕಂಡ ಖಂಜರು ಜಮೀನುಗಳಲ್ಲಿಯೂ, ಗ್ರಾಮ ಬೇಲಿಗಳ ಅಮರಾಯಿ ಮತ್ತು ಅಮರಾಯಿ ಬೇಲಿಗಳಲ್ಲಿ ಯೂ, ಅಮೃತಮಹಲ್ ಕಾವಲ್‌ಗಳಲ್ಲಿಯೂ, ದೊರಿಯುವ ಕೆಳಗೆ ವಿವರಿಸಿರುವ ಫಸಾರೆ ಜಿನಸುಗಳನ್ನ 1907—08ನೆ ಸಾಲಿಗೆ ಜಮಾಯಿಸುವ ಹಕ್ಕನ್ನ ಬಹಿರಂಗವಾಗಿ ಈ ಕೆಳಗಿನ ತಪಶೀಲ್ ಪಟ್ಟಿಯಲ್ಲಿ ಕಾಣುವ ಆಫಿಸರರಿಂದ ತಾಲ್ಲೂಕವಾರ್ ಯಾ ಹೋ ಬಳಿವಾರ್ ಹರಾಜು ಹಾಕಿಸಲ್ಪಡುತ್ತೆ.

ನಂಬರ್.	ತಾಲ್ಲೂಕುಗಳ ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಹರಾಜು ಮಾಡಲ್ಪಡುವ ಆಫಿಸರರ ಹೆಸರು.
1	ಮೂಡಿಗೆರೆ ..	11—11—07	ಆಯಾಯ ತಾಲ್ಲೂಕು ಕಛೇರಿಯಲ್ಲಿ	ಆಯಾಯ ತಾಲ್ಲೂಕು ಅಮಲ್ದಾರರು, ಮತ್ತು ರೇಂಜ್ ಆಫೀಸರುಗಳಿಂದ
2	ಚಿಕ್ಕಮಗಳೂರು ...	13—10—07		
3	ಕಡೂರು ...	15—11—07		
4	ತರೀಕೆರೆ ...	17—11—07		
5	ಯಡೇಹಳ್ಳಿ ಸಬ್ ತಾಲ್ಲೂಕು ...	18—11—07		
	ಕೊಪ್ಪ ..	20—11—07		

ಫಸಾರೆ ಜಿನಸಿಗಳ ತಪಶೀಲ್.

1. ತಾರೇಕಾಯಿ, 2. ಶೀಗೇಕಾಯಿ, 3. ಅಂಟವಾಳದಕಾಯಿ, 4. ದಂಡಿಗದ ಗೋಂದು, 5. ಕಾಡು ಅರಿಶಿನ, 6. ಜೇನು ಮೇಣ, 7. ಜೇನುತುಪ್ಪ, 8. ಕಪಿಲಾರಂಗು, 9. ಪತಂಗ, 10. ಮಡ್ಡಿ, 11. ಚಿಲ್ಲದಬೀಜ, 12. ಜಗಜಿ ಬೀಜ, 13. ಹೊಂಗೇಬೀಜ 14. ಗೇರುಬೀಜ, 15. ಹಾಲುಮಡ್ಡಿ, 16. ಸಾರಗದಕೊಂಬು, 17. ಗುಗ್ಗಳ, 18. ಬ್ಯಾಲದ ಹಣ್ಣು, 19. ಸೀತಾಫಲದಹಣ್ಣು, 20. ಅಳಲೇಕಾಯಿ, 21. ಹುಣಸೇಹಣ್ಣು, 22. ಕಿರಿ ಈಚಲು, 23. ಗೇರು, 24. ಕಲ್ಲುಹುವ್ವು 25. ಕಲನಾರು, 26. ಕಾಡು ಯಾಲಕ್ಕಿ.

2. ಜಿಡ ದರಖಾಸ್ತು ದಾರನು ಹರಾಜು ಮಂಜೂರಾದ ಕೂಡಲೇ ಶೀಕಡಾ 25 ರಂತೆ ಆಗುವ ಮೊಬಲಗನ್ನ ತೇವಣಿ ಕಟ್ಟತಕ್ಕದ್ದು. ಅಲ್ಲದೇ ಕಂಟ್ರಾಕ್ಟ್ ಷರತ್ತು ಮೇರೆ ನಡಿಯಲು ತಕ್ಕ ಖಾತರ ಜಾಮೀನ್ ಸಹಾ ಕೊಡಬೇಕು. ಹಾಗೆ ಮಾಡದೇ ತಪ್ಪಿದಲ್ಲಿ ಕೂಡಲೇ ಬಾಬು 2ನೆ ದಫಾ ಹರಾಜು ಮಾಡಲ್ಪಟ್ಟು ಉಂಟಾಗುವ ನಷ್ಟಕ್ಕೆ ಅವನನ್ನ ಗುರಿಪಡಿಸುತ್ತೆ. ಮತ್ತು ಸದರೀ ಲುಕ್ಸಾನ್ ರೆವಿನ್ಯೂ ಡಿಮ್ಯಾಂಡಿನಂತೆ ವಸೂಲ್ ಮಾಡಲ್ಪಡುತ್ತೆ.

3. ದರಖಾಸ್ತು ದಾರನಿಗೆ ಹರಾಜು ಮಂಜೂರಾದ ಸಂಗತಿಯನ್ನ ತಿಳಿಸಿದ ಒಂದು ತಿಂಗಳ ವಳಗಾಗಿ ಬಾಕಿ ಮೊಬಲಗನ್ನೆಲ್ಲಾ ಪಾವತೀ ಮಾಡಬೇಕು. ತಪ್ಪಿದರೆ ಮೊದಲು ಕೊಟ್ಟದ್ದ $\frac{1}{4}$ ಹಿಸ್ಸೆ ಹಣವನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳುವದಲ್ಲದೆ ಬಾಕೀ ಆಗುವ ಹಣವನ್ನ ರೆವಿನ್ಯೂ ಕಂದಾಯದ ಬಾಕೀಯಂತೆ ವಸೂಲ್ ಮಾಡಲ್ಪಡುತ್ತೆ.

4. ಹರಾಜು ಮೊಬಲಗ್ಗೆ ರೂಪಾಯಿ 1ಕ್ಕೆ ಒಂದಾಣೆ ಲೋಕಲ್ ಸೆಸ್ಸು ಕೊಡಬೇಕು.

5. ಹಿಡುವಳೀ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರಿಯುವ ಫಸಲನ್ನ ರೂಢಿಸಲು ಹಕ್ಕು ಇರುವದಿಲ್ಲ.

6. ಇನಾಂದಾರ್ರು ಸ್ಥಿರಪಟ್ಟ ಹಕ್ಕುದಾರಿ ವಿಷಯದಲ್ಲಿ ಇಜಾರೆದಾರ್ರು ಪ್ರವೇಶಿಸತಕ್ಕದ್ದಲ್ಲ.

7. ಗ್ರಾಮ ಅಮರಾಯಿ ಫಲದ ಉತ್ಪತ್ತಿ ಮೇಲ್ಕಂಡ ಹರಾಜಿಗೆ ಸೇರುವದಿಲ್ಲ.

8. ಹರಾಜು ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

ಬಿ. ಹೀರಾಸಿಂಗ್,

ಫಾರ್ ಡೆಪ್ಯುಟಿ ಕಮಿಷನರ್, ಕಡೂರು ಡಿಸ್ಟ್ರಿಕ್ಟು.

ಶಿವಮೊಗ್ಗಾ ಡಿಸ್ಟ್ರಿಕ್ಟ.

ನೋಟಿಸ್.

ತಾರೀಖು 29ನೆ ಆಗಸ್ಟ್ 1907ನೆ ಇಸವಿ.

1907ನೆ ಇಸವಿ ಸೆಪಟಂಬರ್ ತಿಂಗಳು ತಾರೀಖು 19ನೆ ನುರ್ಕಂ 38ನೆ ನಂಬರ್ ಮೈಸೂರು ಗೆಜೆಟ 2ನೆ ಭಾಗದ 461—462—463ನೆ ನಂಬರ ಪುಟಗಳಲ್ಲಿ ಛಾಯಿಷ್ ಆಗಿರುವ ಇಸ್ತಿಹಾರ್‌ನಾಮೆಯಲ್ಲಿ ನಮೂದಿರುವ ಶಿವಮೊಗ್ಗ ಡಿಸ್ಟ್ರಿಕ್ಟ ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ಬೇವಾರಸಾಗಿ ನಿಂತಿರುವ ದಸ್ತಾವೇಜುಗಳನ್ನು ಇಸ್ತಿಹಾರ್ನಾಮೆಯು ಗೆಜೆಟನಲ್ಲಿ ಛಾಯಿಷ್ ಆದಲಾಗಾಯಿತ್ತು ಒಂದು ತಿಂಗಳು ಅವಧಿಯೊಳಗೆ ವಾಪಸು ಪಡಿಯದಿದ್ದಲ್ಲಿ ನಾಶಪಡಿಸಿಬಿಡುತ್ತಾದ ಸಂಗತಿ ಈ ಮೂಲಕ ತಿಳಿಸಿರುತ್ತೆ.

ಎಂ. ನಾರಾಯಣರಾವ್,
ಡಿಸ್ಟ್ರಿಕ್ಟ ರಿಜಿಸ್ಟ್ರಾರ್.

ಬೆಂಗಳೂರು ಸಬಾರ್ಡಿನೇಟ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1907—08ನೆ ಇಸವಿ ಮಿ|| ಅರ್ಜೀ ನಂಬರು 203.

ಬೆಂಗಳೂರಲ್ಲಿದ್ದು ಮೃತಪಟ್ಟ ಜೇವಿಕೋಟಿ ಸುಬ್ಬಣ್ಣ ಮತ್ತು ಕಾವೇರಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಚಾಮರಾಜಪೇಟೆಲಿರುವ ಜೇವಿಕೋಟಿ ನಂಜುಂಡಪ್ಪನ ಮಗ ಅಚ್ಯುತರಾವ್, ಮೃತಪಟ್ಟ ಸದರೀ ಸುಬ್ಬಣ್ಣ ವಗೈರೇರಿಗೆ ಖಾಸಾ ತಮ್ಮನ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಸುಬ್ಬಣ್ಣ, ಕಾವೇರಮ್ಮನವರ ಜಿಂದಗಿ ಬಗ್ಗ್ಯಾಗಿ ಬರತಕ್ಕ ರೂಪಾಯಿ 180—10—9 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷರ್ ಪ್ರಕಾರ ಸರ್ಟಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಅಚ್ಯುತರಾಯರ ಅರ್ಜಿಯನ್ನು ಸರ್ 1907ನೆ ಇಸವಿ ಅಕ್ಟೋಬರು ತಿಂಗಳು ತಾರೀಖು 4ರಲ್ಲು ಕೇಳಿ ಸರ್ಟಫಿಕೇಟ ಪಡಿಯುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಣ್ಣ, ಕಾವೇರಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ. ಕಾವೇರಮ್ಮನೆಂಬುವರು ಸುಬ್ಬಣ್ಣನವರಿಗೆ ಖಾಸಾ ಹೆಂಡತಿ ಆಗಬೇಕು.

ಸರ್ 1907ನೆ ಇಸವಿ ಸೆಪಟಂಬರು ತಿಂಗಳು 6ನೆ ತಾರೀಖಿನಲ್ಲಿ ಕೋರ್ಟಿನ ಮೊಹರನಿಸಿ ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1907—08ನೆ ಇಸವಿ ಮಿ|| ಅರ್ಜೀ ನಂಬರ್ 212.

ಮಾಗಡೀಲಿ ಇದ್ದು ಮೃತಪಟ್ಟ ವೆಂಕಟಮ್ಮನೆಂಬುವಳ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ನಾರಾಯಣಶೆಟ್ಟಿ ಮೈನರ್, ಗಾರಡಿಯನ್ ಸುಂದರಮ್ಮ, ಮೃತಪಟ್ಟ ಸದರೀ ವೆಂಕಟಮ್ಮನಿಗೆ ಖಾಸಾ ತಾಯಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮಾಗಡಿ ಸ್ಥಳದಲ್ಲಿ ವಾಸಸ್ಥರಾಗಿ ಮೃತಪಟ್ಟ ವೆಂಕಟಮ್ಮನ ಜಿಂದಗಿ ಬಗ್ಗ್ಯಾಗಿ ಬರತಕ್ಕ 2,400 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ನಾರಾಯಣಶೆಟ್ಟರ ಅರ್ಜಿಯನ್ನು ಸರ್ 1907ನೆ ಇಸವಿ ಅಕ್ಟೋಬರ್ ತಿಂಗಳು ತಾರೀಖು 4ರಲ್ಲು ಕೇಳಿ ಸರ್ಟಫಿಕೇಟ ಪಡಿಯುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಮ್ಮನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1907ನೆ ಇಸವಿ ಸೆಪ್ಟಂಬರ್ ತಿಂಗಳು 14ನೆ ತಾರೀಖಿನಲ್ಲಿ ಕೋರ್ಟಿನ ಮೊಹರನಿಸಿ ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1907—08ನೆ ಇಸವಿ ಮಿ|| ಅರ್ಜಿ ನಂಬರ್ 213.

ಮಾಗಡೀಲಿ ಇದ್ದು ಮೃತಪಟ್ಟ ಭಾಸ್ಕರಚಂದ್ರಶೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮಾಗಡಿಲಿರುವ ನಾರಾಯಣಶೆಟ್ಟಿ ಮೈನರ್, ಗಾರ್ಡಿಯನ್ ಸುಂದರಮ್ಮ, ಮೃತಪಟ್ಟ ಸದರೀ ಚಂದ್ರಶೆಟ್ಟರಿಗೆ ಖಾಸ ಗಂಡು ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮಾಗಡಿ ಸ್ಥಳದ ವಾಸಸ್ಥರಾಗಿ ಮೃತಪಟ್ಟ ಭಾಸ್ಕರಚಂದ್ರಶೆಟ್ಟರ ಜಿಂದಗಿ ಬಗ್ಗ್ಯಾಗಿ ಬರತಕ್ಕ 9,300 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ನಾರಾಯಣಶೆಟ್ಟರ ಅರ್ಜಿಯನ್ನು ಸರ್ 1907ನೆ ಇಸವಿ ಅಕ್ಟೋಬರ್ ತಿಂಗಳು ತಾರೀಖು 4ರಲ್ಲು ಕೇಳಿ ಸರ್ಟಫಿಕೇಟ ಪಡಿಯುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಂದ್ರಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1907ನೆ ಇಸವಿ ಸೆಪ್ಟಂಬರ್ ತಿಂಗಳು 14ನೆ ತಾರೀಖಿನಲ್ಲಿ ಕೋರ್ಟಿನ ಮೊಹರನಿಸಿ ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ 1907—08ನೆ ಇಸ್ವಿ ಮಿ॥ ಅರ್ಜೀ ನಂಬರು 228.

ಬೆಂಗಳೂರಲ್ಲಿದ್ದು ಮೃತಪಟ್ಟ ಅಕ್ಕಿಗೆಟ್ಟಪ್ಪನವರ ನಂಜುಂಡಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ನಗರ್ತರ ಪ್ಯಾಟೇಲಿರುವ ನಂಜುಂಡಪ್ಪನ ಹೆಂಡತಿ ಶಿದ್ದಲಿಂಗಮ್ಮ, ಮೃತಪಟ್ಟ ಸದರೀ ನಂಜುಂಡಪ್ಪನವರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ನಂಜುಂಡಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 2,981—10—0 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷರ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಶಿದ್ದಲಿಂಗಮ್ಮನ ಅರ್ಜಿಯನ್ನು ಸನ 1907ನೆ ಇಸವಿ ಅಕ್ಟೋಬರು ತಿಂಗಳು ತಾರೀಖು 4ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜುಂಡಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ 1907ನೆ ಇಸವಿ ಸೆಪ್ಟಂಬರ ತಿಂಗಳು 14ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ 1907—08ನೆ ಇಸವಿ ಮಿ॥ ಅರ್ಜೀ ನಂಬರ 231.

ಬೆಂಗಳೂರು ಜೋರಿಪೇಟೆಲಿದ್ದು ಮೃತಪಟ್ಟ ತರಗಿನ ಮಂಡಿ ಚಿ॥ ಮುನಿಶಾಮಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರಲ್ಲಿರುವ ವೆಂಕಟಶಾಮಪ್ಪ, 2ನೆ ಬೈಯಣ್ಣ, ಗ್ರಾರ್ಡಿಯರ್ಗ ತಾಯಿ ಲಕ್ಷ್ಮಮ್ಮ, ಮೃತಪಟ್ಟ ಸದರೀ ಚಿ॥ ಮುನಿಶಾಮಪ್ಪನವರಿಗೆ ಖಾಸಾ ಮಕ್ಕಳಾಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಚಿ॥ ಮುನಿಶಾಮಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 7,900 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಶಾಮಪ್ಪ ವಗೈರೇರ ಅರ್ಜಿಯನ್ನು ಸನ 1907ನೆ ಇಸವಿ ಅಕ್ಟೋಬರ ತಿಂಗಳು ತಾರೀಖು 4ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿ॥ ಮುನಿಶಾಮಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ 1907ನೆ ಇಸವಿ ಸೆಪ್ಟಂಬರ್ ತಿಂಗಳು 14ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ 1907—08ನೆ ಇಸವಿ ಮಿ॥ ಅರ್ಜೀ ನಂಬರ 232.

ಬೆಂಗಳೂರು ಅಕ್ಕಿಪ್ಯಾಟೇಲಿದ್ದು ಮೃತಪಟ್ಟ ಮಧ್ವ ನಾರಣಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರಲ್ಲಿರುವ ನರಸಮ್ಮ, ಮೃತಪಟ್ಟ ಸದರೀ ನಾರಣಪ್ಪನವರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ಅಕ್ಕಿಪೇಟೇಲಿ ವಾಸಸ್ಥರಾಗಿ ಮೃತಪಟ್ಟ ನಾರಣಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 655—3—7 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ನರಸಮ್ಮನ ಅರ್ಜಿಯನ್ನು ಸನ 1907ನೆ ಇಸವಿ ಅಕ್ಟೋಬರ ತಿಂಗಳು ತಾರೀಖು 4 ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾರಣಪ್ಪನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ 1907ನೆ ಇಸವಿ ಸೆಪಟಂಬರ ತಿಂಗಳು 14ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ 1907—08ನೆ ಇಸವಿ ಮಿಸ್ ಅರ್ಜೀ ನಂಬರು 259.

ಅರ್ಜೀದಾರರು ಬೆಂಗಳೂರು ಸಿಟಿಗೆ ಸೇರಿದ ಚಿಕ್ಕಮಾವಳ್ಳಿಲಿ ಇರುವ ಚೆವುಡಪ್ಪನ ಮಗ ನಂಜುಂಡೈಯ್ಯ, ಮೈನರಾದ ನಾಗಣ್ಣ, ಸುಬ್ಬರಾಯ ಎಂಬುವರು, ಬೆಂಗಳೂರು ಸ್ಥಳದ ಸದರಿ ಮೈನರಾದ ನಾಗಣ್ಣ, ಸುಬ್ಬರಾಯುನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ನಂಜುಂಡೈಯ್ಯನಿಗೆ ಸಮೀಪ ವಾರಸ್‌ದಾರರಾಗಬೇಕೆಂಬ ಹಕ್ಕಿನಮೇಲೆ ಬೆಂಗಳೂರು ನಂಜುಂಡೈಯ್ಯನು ಸದರೀ ಮೈನರುಗಳ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸನ 1907ನೆ ಇಸವಿ ಅಕ್ಟೋಬರ್ ತಾರೀಖು 4ರಲ್ಲು ಮುಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸನ 1907ನೆ ಇಸವಿ ಸೆಪಟಂಬರ ತಿಂಗಳು 23ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ 1907—08ನೆ ಮಿ॥ ಅರ್ಜೀ ನಂಬರ 2 0.

ಮೈಸೂರಲ್ಲಿ ಅಸಿಸ್ಟೆಂಟ್ ಪ್ರಫೆಸರ್ ಆಗಿದ್ದು ಮೃತಪಟ್ಟ ಕಸ್ತೂರಿ ಐಯ್ಯಂಗಾರ್ರು ಆಸ್ತೀ ವಿಷಯದಲ್ಲಿ—

ಅರ್ಜೀದಾರರು ತಿರಚನಾಪಲ್ಲಿ ತಾಲ್ಲೂಕು ಅನಾಲೆಲಿರುವ ಅಲಮೇಲಮ್ಮ, ಮೃತಪಟ್ಟ ಸದರೀ ಕಸ್ತೂರಿ ಐಯ್ಯಂಗಾರ್ರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಕಸ್ತೂರಿ ಐಯ್ಯಂಗಾರ್ರು ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 8,208 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರಿ ದರಖಾಸ್ತುದಾರರಾದ ಅಲಮೇಲಮ್ಮನ ಅರ್ಜಿಯನ್ನು ಸನ 1907ನೆ ಇಸವಿ ಅಕ್ಟೋಬರ ತಿಂಗಳು ತಾರೀಖು 4ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಸ್ತೂರಿ ಐಯ್ಯಂಗಾರ್ರು ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ 1907ನೆ ಇಸವಿ ಸೆಪ್ಟಂಬರ ತಿಂಗಳು 14ನೆ ತಾರೀಖಿನಲ್ಲಿ ಕೋರ್ಟು ಮೊಹರ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1907—08ನೆ ಇಸವಿ ಮಿ|| ಅರ್ಜೀ ನಂಬರು 273.

ಕೋಲಾರದಲ್ಲಿ ಇದ್ದ ನರಸಪ್ಪನವರ ಹೆಂಡತಿ ಮೃತಪಟ್ಟ ತಿಪ್ಪಮ್ಮನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರರು ಕೋಲಾರದಲ್ಲಿ ಅಸಿಸ್ಟೆಂಟ್ ಇಂಜನೀಯರ್ ಆಗಿರುವ N. ರಾಮರಾವ್, ಮೃತಪಟ್ಟ ಸದರೀ ತಿಪ್ಪಮ್ಮನವರಿಗೆ ಖಾಸಾ ಮಗ ಆಗಬೇಕೆಂಬ ಹಕ್ಕು ದಾರಿ ಮೇಲೆ ಕೋಲಾರದ ಸ್ಥಳದ ರಾಮರಾಯರೆಂಬುವರು ಕೋಲಾರದಲ್ಲಿ ವಾಸಸ್ಥರಾಗಿ ಮೃತಪಟ್ಟ ತಿಪ್ಪಮ್ಮನವರ ಜೆಂದಗಿ ಬಗ್ಯಾಗಿ ಬರತಕ್ಕ 4,500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ರಾಮರಾಯರ ಅರ್ಜಿಯನ್ನು ಸನ್ 1907ನೆ ಇಸವಿ ಅಕ್ಟೋಬರ್ ತಿಂಗಳು ತಾರೀಖು 11ರಲ್ಲೂ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಪ್ಪಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1907ನೆ ಇಸವಿ ಸೆಪ್ಟಂಬರ್ ತಿಂಗಳು 23ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸನ್ 1907—08ನೆ ಇಸವಿ ಮಿ|| ಅರ್ಜೀ ನಂಬರ 312.

ಬೆಂಗಳೂರು ಪೋಲೀಸ್ ಇನ್ಸ್ಪೆಕ್ಟರಾಗಿದ್ದ ಮೃತಪಟ್ಟ ರಾಮಚಂದ್ರರಾವ್ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಎನ್. ಶ್ರೀನಿವಾಸೈಯ್ಯ, ಮೃತಪಟ್ಟ ಸದರೀ ರಾಮಚಂದ್ರರಾಯರಿಗೆ ಖಾಸಾ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ರಾಮಚಂದ್ರರಾಯರ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಶ್ರೀನಿವಾಸೈಯ್ಯನವರ ಅರ್ಜಿಯನ್ನು ಸನ್ 1907ನೆ ಇಸವಿ ಅಕ್ಟೋಬರ್ ತಾರೀಖು 11ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಚಂದ್ರರಾವ್ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1907ನೆ ಇಸವಿ ಸೆಪಟಂಬರ್ ತಿಂಗಳು 16ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸನ್ 1906—07ನೆ ಇಸವಿ ಮಿ|| ಅರ್ಜೀ ನಂಬರ 722.

ಅರ್ಜಿದಾರರು ಬೆಂಗಳೂರು ಗೊಲ್ಲರಪ್ಯಾಟೇಲಿರುವ ಕಡಾಕಲು ಮುನಿಸಾಮಪ್ಪನ ಹೆಂಡತಿ ದೊಡ್ಡಪಿಳ್ಳಮ್ಮ, ಮೈನರಾದ ಬೆಂಗಳೂರು ಸ್ಥಳದ 1ನೆ ದಾಸಪ್ಪ, 2ನೆ ಸಂಜೀವಪ್ಪ, ಇವರುಗಳ ಆಸ್ತೀ ವಿಷಯದಲ್ಲಿ—

ಸದರಿ ಮೈನರಾದ ದಾಸಪ್ಪ ಮತ್ತು ಸಂಜೀವಪ್ಪ ಇವರಿಗೆ ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ಬೆಂಗಳೂರು ಗೊಲ್ಲರಪೇಟೆ ಸ್ಥಳದ ದೊಡ್ಡಪಿಳ್ಳಮ್ಮನು ಸದರೀ ಮೈನರುಗಳ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾಳೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸನ್1907ನೆ ಇಸವಿ ಅಕ್ಟೋಬರ್ ತಿಂಗಳು 11ನೆ ಶುಕ್ರವಾರ ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

1907ನೆ ಇಸವಿ ಸೆಪ್ಟಂಬರ್ ತಿಂಗಳು 16ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಜೆ. ಎಚ್. ಭಾಭಾ,
ಸಬ್ ಜಡ್ಜ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡು ಆಫೀಸಿನಿಂದ.

ಇಸ್ತಿಹಾರ್.

ತಾರೀಖು 30ನೆ ಸಪ್ಟಂಬರ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಗೌರ್ನಮೆಂಟಿನ ಸಾಮಾನ್ಯ 21—6—1901ನೆ ಮಕರ್ಣ 17691— L. B. (P) 633ನೆ ನಂಬರ್ ಪ್ರೊಸೀಡಿಂಗ್ಸ್ ಅನುಸರಿಸಿ ಇದರ ಮಾಪ್ಲಾನ್ನಲ್ಲಿ ತೋರಿಸಿರುವ ಬೆಂಗಳೂರು ಸಿಟಿ ಬಸವನಗುಡಿ ಮತ್ತು ಮಲ್ಲೇಶ್ವರ ಎಕ್ಸ್ಟೆನ್ಷನ್ಗೆ ಸೇರಿದ ಕಟ್ಟಡ ಕಟ್ಟತಕ್ಕ ಸೈಟುಗಳನ್ನ 1907ನೆ ಇಸವಿ ಅಕ್ಟೋಬರ್ ತಾರೀಖು 10-11ರಲ್ಲು ಹರಾಜ್ ಮೂಲಕ ವಿಕ್ರಯಿಸತಕ್ಕದ್ದೆಂತ ನಿಶ್ಚಯಿಸಿ ಇರುತ್ತಾಗಿ ಹರಾಜಿನಲ್ಲಿ ಛಡಿಸವಾಲ

ಬಸವನಗುಡಿ ಎಕ್ಸ್ಟೆನ್ಷನ್.

ಬ್ಲಾಕ್ ನಂಬರ	I	101 & 102	110 × 30
,,	VII	202-203-204-206-& 207	120 × 30

ಮಲ್ಲೇಶ್ವರ ಎಕ್ಸ್ಟೆನ್ಷನ್.

ಬಿಗ್ ಹೌಸ್ ಸೈಟುಗಳು	33—34	153 × 235
	27	157 × 235
	46 & 47	205 × 235

ಈ ಸೈಟನಲ್ಲಿ ಹಳೇ ತುಮಕೂರು ರಸ್ತೆ ಪೂರ್ತಿ ಮಾಡತಕ್ಕ 1ಭಾಗ ಕೇರಿದೆ.

ಹಿಂದೂ ಬ್ಲಾಕ್	358-359-360-373-374-375-377-378	100 × 30

ಮೂಲಕ ಪಡದುಕೊಳ್ಳಲು ಇಷ್ಟವುಳ್ಳವರು ಅವೇ ತಾರೀಖು ಪ್ರಾತಃಕಾಲ 8 ಘಂಟೆ ಲಗಾಯಿತು ಆಯಾಯ ಸೈಟುಗಳ ಬಳಿ ಹಾಜರಿದ್ದು ಛಡಿಸವಾಲ ಮೂಲಕ ಈ ಕೆಳಗೆ ಕಂಡ ಷರತ್ತುಗಳಿಗೆ ಒಳಪಟ್ಟು ಛಡಿ ಸವಾಲ್ನಲ್ಲಿ ಪಡಮುಕೊಳ್ಳಬಹುದಾಗಿರುತ್ತೆ. ಆ ದಿವಸ ಹರಾಜು ಪೂರೈಸದೆ ನಿಲ್ಲುವ ಸೈಟುಗಳನ್ನು ಮರು ದಿವಸಗಳಲ್ಲಿ ಅವೇ ಟೈಂನಲ್ಲಿ ಹರಾಜು ಮಾಡಿಸಲ್ಪಡುತ್ತೆ.

1. ಹರಾಜು ಖೈದಾದ ಕೂಡ್ಲೆ ಖಡಿಸವಾಲ ಮೊಬಲಗಿನಲ್ಲಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಠೇವಣಿ ಇಡಬೇಕು. ಹಾಗಿಡದೆ ತಪ್ಪಿದರೆ ಕೂಡ್ಲೆ ದುಸರಾ ಹರಾಜು ಮಾಡಿಸಿ ಬರುವ ಲುಕ್ಸಾನಿಗೆ ಮೊದಲು ಖಡಿಸವಾಲದಾರನ್ನ ಗುರಿಮಾಡಲ್ಪಡುತ್ತೆ.

2. ಹರಾಜು ತಾರೀಖು ಲಾಗಾಯಿತು 15 ದಿವಸದೊಳಗಾಗಿ ಬಾಕಿ ನಿಲ್ಲುವ ಮೊಬಲಗಂದರೆ ಖಡಿಸವಾಲ ಮೊಬಲಗ್ಗೆ ಭರ್ತಿಯಾಗಿ ಕೊಡತಕ್ಕ ಶೇಕಡಾ 75 ರೂಪಾಯಿನಂತೆ ಆಗುವ ಮೊಬಲಗನ್ನ ಖಡಿಸವಾಲದಾರ ಹಾಜರಪಡಿಸಿ ರಸೀತಿ ಪಡಿಯಬೇಕು. ಇದಕ್ಕೆ ತಪ್ಪಿದರೆ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಪುನಹ ಅಂಥಾ ಸೈಟನ್ನ ದುಸರಾ ಹರಾಜಿಗೆ ಈಡುಮಾಡಿ ಬರುವ ನಷ್ಟಕ್ಕೆ ಮೊದಲು ಖಡಿಸವಾಲದಾರನ್ನ ಗುರಿಮಾಡಲ್ಪಡುತ್ತೆ.

3. ಹರಾಜು ಮಂಜೂರಾದ ಕೂಡ್ಲೆ ಸೈಟನ್ನ ಖಡಿಸವಾಲದಾರನು ಸ್ವಾಧೀನಪಡಿಸಿಕೊಳ್ಳಬೇಕು.

4. ಕೊಟ್ಟ ತಾರೀಖಿನಾರಭ್ಯ 30 ದಿವಸದೊಳಗಾಗಿ ಕಟ್ಟಡದ ಕೆಲಸವನ್ನ ಶುರೂ ಮಾಡತಕ್ಕದ್ದು; ಮತ್ತು 6 ತಿಂಗಳೊಳಗಾಗಿ ಕಟ್ಟಡವನ್ನು ಪೂರೈಸತಕ್ಕದ್ದು.

5. 50 ಅಡಿ ಲಾಂಬಿಗೆ ಕಡಿಮೆ ಇಲ್ಲದಷ್ಟು ಜಾಗವನ್ನು ಮೇಲ ಛಾವಣಿ ಇಲ್ಲದೆ ಅಂಗಳಕ್ಕಾಗಿ ಅಥವಾ ಗಾಳಿ ಬರತಕ್ಕದ್ದಕ್ಕಾಗಿ ಯಾವಾಗಲೂ ಬಿಟ್ಟಿರಬೇಕು. ಸದರೀ ಸ್ಥಳದಲ್ಲಿ ಹಂಗಾಮಿ, ಯಾ ಖಾಯಂ ಕಟ್ಟಡ ಯಾವದನ್ನೂ ಕಟ್ಟಕೂಡದು.

6. ಕಟ್ಟಡದ ಪ್ಲಾನ್ ವಗೈರೆ ಸ್ಯಾನಿಟರಿ ಇಂಜನಿಯರವರಿಂದ ಮಂಜೂರಾಗುವ ವರಿಗೂ ಯಾವ ಕಟ್ಟಡವನ್ನೂ ಪ್ರಾರಂಭಿಸಕೂಡದು. ಮಾಳಿಗೆ ಮನೆಯನ್ನ ಕಟ್ಟಲೇಕೂಡದು. ಕಟ್ಟಡಗಳೆಲ್ಲಾ ಹೆಂಚಿನದಾಗಿಯಾಗಲಿ ಅಥವಾ ತಾರಸೀದಾಗಲಿ ಇರತಕ್ಕದ್ದು.

7. ನೆಲ ಮತ್ತು ಹಿತ್ತಲು ಮಟ್ಟವು ರೋಜೇನಾ ಪಾಕೀಜಾ ಬಗ್ಯೆ ಕಕ್ಕಸ ಕಟ್ಟತಕ್ಕ ಸ್ಥಳವು ಮತ್ತು ಮನೆ ಬಚ್ಚಲು ನೀರು ಹೋಗುವದಕ್ಕೆ ಕಟ್ಟತಕ್ಕ ಮೊಹರಿ ತರಹೆ ಮತ್ತು ಜಾಗೆ ಸಹ ಸ್ಯಾನಿಟರಿ ಇಂಜನಿಯರವರು ಅಪ್ಪಣೆ ಮಾಡಲು ರೀತಿಯಲ್ಲಿರತಕ್ಕದ್ದು.

8. ಒಂದು ಮತ, ಪಣ ಅಥವಾ ಜಾತಿಯವರಿಗೆ ಏರ್ಪಡಿಸಿರುವ ಬೀದಿಯಲ್ಲಿನ ಮನೆಯಲ್ಲಿ ಸದರೀ ಬೀದಿಯ ಸಮಸ್ತ ಜನಗಳ ಬರಹ ಮೂಲಕವಾದ ಒಪ್ಪಿತದ ಮೇಲೆ ಡೆಪ್ಯುಟಿ ಕಮೀಷನರವರು ಮಂಜೂರ್ಮಾಡಿದ ಹೊರ್ತು ಇತರ ಮತ, ಪಣ ಯಾ ಜಾತಿಯವರು ವಾಸಾ ಮಾಡಕೂಡದು.

9. ಕಟ್ಟಡಕ್ಕಾಗಿ ಕೊಟ್ಟಿರುವ ನಿವೇಶನಗಳಲ್ಲಿ ಹಳ್ಳ ತೆಗಿಯಕೂಡದು. ಕಟ್ಟಡಕ್ಕೋಸ್ಕರವಾಗಿ ಯಾ ನೆಲ ಮಟ್ಟವನ್ನು ಎತ್ತರಿಸುವದಕ್ಕಾಗಲಿ ಬೇಕಾಗುವ ಮಣ್ಣನ್ನ ಸ್ಯಾನಿಟರಿ ಇಂಜನಿಯರವರ ಅಪ್ಪಣೆ ಪ್ರಕಾರ ತೋರಿಸಲ್ಪಡುವ ಜಾಗಾದಲ್ಲಿ ತೆಗದುಕೊಳ್ಳತಕ್ಕದ್ದು.

10. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರು ತಪ್ಪಿ ನಡದಲ್ಲಿ ಕೊಡಲ್ಪಟ್ಟಿರುವ ನಿವೇಶನವನ್ನ ಹಿಡುವಳೀದಾರನು ಮತ್ಯಾವ ವಿಚಾರಣೆಯೂ ಇಲ್ಲದೆ ಹೋಗಲಾಡಿಸಿಕೊಳ್ಳುವದಕ್ಕೆ ಗುರಿಯಾಗುವನು.

11. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ತಪ್ಪಿ ನಡೆದದ್ದಕ್ಕೋಸ್ಕರ ನಿವೇಶನವನ್ನ ಸರ್ಕಾರಕ್ಕೆ ಸೇರಿಸಿಕೊಂಡ ಬಳಿಕ ಹಿಡುವಳೀದಾರನಾಗಲಿ ಅಥವಾ ಅವನಿಂದ ಪಡದುಕೊಂಡವರಾಗಲಿ ಯಾವ ವಿಧವಾದ ಪರಿಹರ ದ್ರವ್ಯಕ್ಕು ಯಾ ಸದರೀ ನಿವೇಶನದ ಮೇಲೆ ಖರ್ಚು ಮಾಡಿರುವ ಲಾಗವಡಿಗೂ ಹಕ್ಕುದಾರ್ರಾಗುವದಿಲ್ಲ.

ಎಂ. ಜಿ. ಕೃಷ್ಣಸಾಮಿರಾವ್,
ವೈಸ್ ಪ್ರೆಸಿಡೆಂಟ್.

ನೋಟಿಸ.

ಶಿವಿಲ್ ಪ್ರೊಸಿಡ್ಯುರ್ ಕೋಡು 30ನೆ ಸೆಕ್ಷನ ಮೇರೆ ಮೈಸೂರು ಅಡಿಷನಲ ಮುನಸೀಫ ಕೋರ್ಟಿನಲ್ಲಿ.

1904—1905ನೆ ಇಸವಿ ಸಿವಿಲ್ ನಂಬರು 92.

1906—1907ನೆ ಇಸವಿ ಅಮಲ್‌ಜಾರಿ ನಂಬರು 513.

ವಾದಿ.

ನರಸಿಂಹರಂಗಾಚಾರ್.

ಪ್ರತಿವಾದಿಗಳು.

ಅಯ್ಯನಯ್ಯಂಗಾರ ವಗೈರೇರು.

ಇದರಿಂದ ಸಮಸ್ತ ವೃತ್ತಿವಂತರಿಗೂ ಮತ್ತು ಜನಗಳಿಗೂ ತಿಳಿಯಪಡಿಸುವದೇನೆಂದರೆ:—ಮೇಲ್ಕಂಡ ಸಿವಿಲ್ ನಂಬರಿನಲ್ಲಿ ಹೊಸೂರು ಹಳಿಯೂರು ಗ್ರಾಮಗಳ ವಸೂಲಾತಿಗೋಸ್ಕರ, ಕೋರ್ಟಿನಿಂದ ಮೈಸೂರಲ್ಲಿರುವ ಅಡ್ವೋಕೇಟ್ ಮ॥ ಎಸ್. ರಂಗಸ್ವಾಮೈಯ್ಯಂಗಾರನ್ನು ರಿಸೀವರನ್ನಾಗಿ ಮೊಕರೂರು ಮಾಡಿ ಇರುವದು ಸರಿಯಷ್ಟೆ. ಸದರೀಯವರ ಬಾಬತು ಲೆಖ್ಖಗಳನ್ನು ತನಿಖೆ ಮಾಡುವದಕ್ಕೂ ಮೇಲ್ಕಂಡ ಗ್ರಾಮಗಳಲ್ಲಿ ವಸೂಲಾದ ಮೊಬಲಗಿನಲ್ಲಿ ಜಮಾಖರ್ಚು ಲೆಕ್ಕಾಚಾರ ಪ್ರಕಾರ ಜಾತಾ ಉಳಿದ ಮೊಬಲಗನ್ನು ವೃತ್ತಿವಂತರಿಗೆ ದಾಮಾಷಾ ಮೇರೆ ಹಂಚಲು 1907ನೆ ಇಸವಿ ನವಂಬರು 3ನೆ ಭಾನುವಾರ ಹಿಯರಿಂಗ್ ಇಡಲ್ಪಟ್ಟಿರುತ್ತೆ. ಸದರೀ ಹಿಯರಿಂಗಿನ ದಿವಸ್ಸ ದಿವಿ 12 ಘಂಟೆಗೆ ಸರಿಯಾಗಿ ಹಕ್ಕು ಬಾಧ್ಯತೆ ಇರತಕ್ಕ ಮೇಲ್ಕಂಡ ಗ್ರಾಮಗಳ ಎಲ್ಲಾ ವೃತ್ತಿವಂತರು ಆಗಲಿ ಯಾ ಅವರ ಕಡೆ ಲಾಯರೇ ಆಗಲಿ ಕೋರ್ಟು ರೂಬರೂಬು ಹಾಜರಾಗಿ ತಿಳಿಯಪಡಿಸತಕ್ಕದ್ದು.

(By order)
N. D. SESHANNA,
Head Munshi.

ನೋಟಿಸ.

ನೆಲ್ಲ್ಯಾಳದ ಅರಸಿನ.

ತಾರೀಖು 1ನೆ ಸಪ್ಟಂಬರ 1907.

ನೀಲಗಿರಿ ಜಿಲ್ಲಾ ಗೂಡಲೂರ ತಾಲ್ಲೂಕು ನೆಲ್ಲ್ಯಾಳಂ ಎಸ್ಟೇಟ ಅರಸಿನವರ ಬಾಬತು ಮೈಸೂರ ಡಿಸ್ಟ್ರಿಕ್ಟು ಗುಂಡ್ಲುಪೇಟೆ ತಾಲ್ಲೂಕು ಹಂಗಳದ ಕಸಬಾದಲ್ಲಿ ಪೂರ್ವಕ್ಕೆ ದಾರಿ, ದಕ್ಷಿಣಕ್ಕೆ ವರದರಾಜಸ್ವಾಮಿ ದೇವಸ್ಥಾನದ ಬೃಂದಾವನ, ಪಶ್ಚಿಮಕ್ಕೆ ಅಕ್ಕಸಾಲೆ ಗುರುಬಸವೈಯ್ಯನ ಮನೆ ಮತ್ತೂ ಖಾಲೀಜಾಗಾ, ಉತ್ತರಕ್ಕೆ ಗುರುಬಸವೈಯ್ಯನ ಮನೆಗೆ ಹೋಗುವ ದಾರಿ, ಈ ಮಧ್ಯೆ ಇರುವ 67ನೆ ನಂಬರು ಹೆಂಚಿನ ಮನೆಯನ್ನು ಸದರಿ ಅರಸಿನವರ ಏಜಂಟರಾಗಿದ್ದ ಮೈಸೂರ ಜಪದಕಟ್ಟೆ ಮಠದ ಲೇಟ ಗುರುಪಾದ ಸ್ವಾಮಿಗಳ ಮೂಲಕ ವಾಸಮಾಡಲು ಲೇಟ ಹುಚ್ಚವೀರಶೆಟ್ಟಿಯು ಪಡೆದು, ವಾಸಮಾಡುತ್ತಿದ್ದು ಮೃತನಾದುದರಿಂದ, ಈಚೆಗೆ ಈತನ ತಮ್ಮ ನಾಗಶೆಟ್ಟಿ ಮತ್ತು ಮಕ್ಕಳಾದ ವೀರಭದ್ರಶೆಟ್ಟಿ ಮತ್ತು ಚನ್ನಬಸವಶೆಟ್ಟಿ ಸಹ ಇತರರ ದುರ್ಬೋಧನೆಯಿಂದ ಸದರಿ ಮನೆಯನ್ನು ಕ್ರಯ ವಗೈರೆ ಮಾಡಲು ಉದ್ಯುಕ್ತಪಟ್ಟಿರುವುದಾಗಿ ತಿಳಿಯುಬರುವುದರಿಂದ, ಯಾವ ಹಕ್ಕೂ ಬಾಧ್ಯತೆಯೂ ಇಲ್ಲದ ಹುಚ್ಚವೀರಶೆಟ್ಟಿಯ ವಾರಸುದಾರರಿಂದ ಯಾರೂ ತೆಗೆದುಕೊಳ್ಳಕೂಡದೆಂತಲೂ, ಹಾಗೂ ಪಡೆದವರಿಗೆ ಈ ಮನೆಯು ಸಿದ್ಧಿಸಲಾರದೆಂತಲೂ ಈ ಮೂಲಕ ಎಲ್ಲರಿಗೂ ಎಚ್ಚರಿಸಿದೆ.

(By order)
SUBBA RAO,
Agent.

ಮೈಸೂರ ಗೆಜೆಟ ಚಂದಾದಾರು ವಗೈರೆ.

ಮೈಸೂರ ಗೆಜೆಟ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪಾಲ ಹಾಸಲ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಅ.	ರೂ.	ಅ.
ಇಂಗ್ಲಿಷ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	೦	1	12
ಇಂಗ್ಲಿಷ ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಚಷ ಮಾಹೇ ಯಾ ಕ್ವಾರ್ಟರಿಗೆ			ದಾಮೂಪಾಯಿ ಪ್ರಕಾರ ದರಗಳು	
			ರೂ.	ಅ.
ಚಾಲ್ತಿ ವರುಷದ ಗೆಜೆಟ ಕಾಪಿ 1ಕ್ಕೆ, ರೆಗ್ಯುಲೇಷನ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.			0	8

ಹಿಂದಿನ ವರುಷದ ಗೆಜೆಟ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮುರ್ಕುಂ 155ನೆ ನಂಬರ ಉಳ್ಳ ಗವರ್ನಮೆಂಟ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ ಮೈಸೂರು ಸೀಮೆಯಲ್ಲಿನ ಪಟೇಲ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭೋಗಿಕೆ ಕೆಲಸ ನೋಡುತಲಿದ್ದಾರೆಂಬದಾಗಿ ಆಯಾ ತಾಲ್ಲೂಕು ಅಮಲದಾರರಿಂದ ಒಂದು ಸರಟಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನ ಇಸವಿ ಜೂನ 21ನೆ ಮುರ್ಕುಂ 24205—6—ಜಿ. 6200ನೆ ನಂಬರ ಗವರ್ನಮೆಂಟ ಆರಡರ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ ಮಾಡಲ್ಪಟ್ಟಿರುತ್ತೆ.

		ರೂ.	ಅ.
ಸಿವಿಲ ಕೋರ್ಟನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇಷನ ಅನುಸರಿಸಿ ಸರ್ಟಫಿಕೇಟ ಬಗ್ಯೆ ನೋಟಿಸಗಳು:—			
ಮೊದಲನೇ ದಫಾ ಘಾಯಿಷ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ	..	2	8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ	..	1	4
ಸಿವಿಲ ಪ್ರೊಸಿಡ್ಯೂರ ಕೋಡಿನ 347ನೆ ಸೆಕ್ಷನ ಅನುಸರಿಸಿ ದಿವಾಳಿ ಅಪ್ಲಿಕೇಷನಗಳ ಬಗ್ಯೆ ನೋಟಿಸಗಳಿಗೆ:—			
ಮೊದಲನೇ ಸಲಕ್ಕೆ	..	5	0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ	..	2	8

ಸಿವಿಲ ಪ್ರೊಸಿಡ್ಯೂರ ಕೋಡಿನ 354ನೆ ಸೆಕ್ಷನ ಅನುಸರಿಸಿ ಸಿವಿಲ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ ಚಾರ್ಜ ಪ್ರಕಟಿಸಲ್ಪಡುತ್ತವೆ.

			ರೂ.	ಅ.
ಡ್ಯೂಪ್ಲಿಕೇಟ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಯೆ ರೆವಿನ್ಯೂ ಆಫಿಸರುಗಳು ಕೊಡುವ ನೋಟಿಸಗಳಿಗೆ:—				
ಮೊದಲನೇ ಸಲಕ್ಕೆ	ಪುಟ 1ಕ್ಕೆ	..	10	0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ	,,	..	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ ಮಾಡಲ್ಪಡುತ್ತೆ:—				
ಮೊದಲನೇ ದಫಾ ಇಂಗ್ಲೀಷ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ	..	0	8
ಎರಡನೇ ದಫಾ ಡಿಟೋ	ಡಿಟೋ		0	6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ		..	0	4

ಷರಾ.—ಗೆಜೆಟ್ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜ್ ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಗೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ್ ಮಾಜಕೂರಿಗೆ ದಾಖಲೆ ಬಗ್ಗೆ ರವಾನಿಸತಕ್ಕದ್ದು. ಮನಿ ಆರ್ಡರ್ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ, ವಾಪಸ್ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಗಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟೀಸ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ಒಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಇಲ್ಲ.

ಸಿ. ಹೆಚ್. ಏಟ್ಸ್,
ಕಂಪೈಲರ್, ಮೈಸೂರ ಗೆಜೆಟ್.

ಮೈಸೂರು ಗೆಜೆಟ್.

ಸಂ. 42.] ಸರ್ಕಾರದಿಂದ ಫ್ರಾಂಚಿಸ್ ಆದ್ದು. [ನಂ. 4].

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ|| 10, ಸನ್ 1907.

IIನೆ ಭಾಗ.

ಇಂಡ್ಯಾ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜಿಯರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಫಾರೆಸ್ಟ್ ಇಲಾಖಾ.

ಸೆಂಬಲ್ ಹರಾಜ್ ನೋಟಿಫಿಕೇಷನ್.

ತಾರೀಖು 24ನೆ ಆಗಸ್ಟ್ 1907ನೆ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಸರಕಾರದ ಶ್ರೀಗಂಧದ ಸಾಲಿಯಾನಾ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರದರ ಬಾಜೂದಲ್ಲಿ ನಮೂದಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫೀಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರುಗಳಿಂದ ನಡಿಸಲ್ಪಡುವದು:—

ಡಿಸ್ಟ್ರಿಕ್ಟು.	ಕೋಠಿ.	ಹರಾಜು ತಾರೀಖು.	ಸುಮಾರು ಮೊತ್ತ.
			ಟನ್ನುಗಳು.
ಶಿವಮೊಗ್ಗ	ತೀರ್ಥಹಳ್ಳಿ	18ನೆ ನವಂಬರ್ 1907	200
ಡಿಟೋ	ಸಾಗರ	21ನೆ ಡಿಟೋ	150
ಡಿಟೋ	ಶಿವಮೊಗ್ಗ	25ನೆ ಡಿಟೋ	500
ಕಡೂರು	ತರೀಕೆರೆ	28ನೆ ಡಿಟೋ	250
ಡಿಟೋ	ಚಿಕ್ಕಮಗಳೂರು	2ನೆ ಡಿಸೆಂಬರ್ 1907	350
ಹಾಸನ	ಹಾಸನ	5ನೆ ಡಿಟೋ	150
ಬೆಂಗಳೂರು	ಬೆಂಗಳೂರು	9ನೆ ಡಿಟೋ	100
ಮೈಸೂರು	ಶ್ರೀರಂಗಪಟ್ಟಣ	12ನೆ ಡಿಟೋ	250
ಡಿಟೋ	ಹುಣಸೂರು	16ನೆ ಡಿಟೋ	500
		ಜುಮ್ಲಾ	2,450

2. ಪ್ರತಿ ಕೋಠಿಯಲ್ಲಿಯೂ ಹರಾಜಾಗುವ ಸುಮಾರು ಲಾಟು, ಮೊತ್ತ ಮತ್ತು ಇತರ ತಪಶೀಲುಗಳು ಬರುವ ಅಕ್ಟೋಬರ್ ಮಾಹೆಯ ಆಖೈರುನಲ್ಲಿ ತಿಳಿಯಪಡಿಸುತ್ತೆ.

ಎಂ. ಮುತ್ತಣ್ಣ,
ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ತಾರೀಖು 30ನೆ ಸೆಪ್ಟಂಬರ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ಸರ್ಕಾರದ ಆಡಳಿತದಲ್ಲಿರುವ ಸ್ಟೇಟ್ ಫಾರೆಸ್ಟ್ ರಿಜರ್ವಡ್ ಜಮೀನು ಮತ್ತು ಪ್ಲಾಂಟೇಷನ್‌ಗಳ ದೇಖೀಲು ಎಲ್ಲಾ ಜಮೀನುಗಳಲ್ಲಿಯೂ 1906—07ನೆ ಸಾಲಿನಲ್ಲಿ ದೊರಿಯುವ ಈ ಕೆಳಗೆ ಕಂಡ ಪಸಾರೆ ಜಿನಸುಗಳನ್ನು ತಾಲ್ಲೂಕವಾರ್, ಹೋಬಳಿವಾರ್, ಜಂಗಲವಾರ್, ಅಥವಾ ಮತ್ಯಾವರೀತಿಯಲ್ಲಾದರೂ ರೇಂಜು ಫಾರೆಸ್ಟಾಫಿಸರವರು ಈ ಕೆಳಗೆ ಪಟ್ಟಿಯಲ್ಲಿ ನಮೂದಿರುವ ಸ್ಥಳಗಳಲ್ಲಿ ಆಯಾಯ ತಾರೀಖಿನಲ್ಲಿ ತಾಲ್ಲೂಕು ಅಮಲ್ದಾರ್ರವರು ಜೊತೆಯಲ್ಲಿ ಹರಾಜು ಮಾಡಿಸುತ್ತಾರೆ. ನಿಯಾಮಕವಾದ ದಿನವು ಹರಾಜು ಮಧ್ಯಾಹ್ನ 12 ಘಂಟೆಗೆ ಷುರು ಮಾಡಲ್ಪಡುವುದು :—

ನಂಬರು.	ತಾಲ್ಲೂಕು ಹೆಸರು.	ಹರಾಜು ತಾರೀಖು.	ಹರಾಜು ಮಾಡುವ ಸ್ಥಳ.
1	ಮಾಲೂರ ...	18ನೆ ಅಕ್ಟೋಬರ 1907.	ತಾಲ್ಲೂಕು ಕಚೇರಿ.
2	ಕೋಲಾರ್ ...	19 ಡಿಟೋ	
3	ಮುಳಬಾಗಲು ...	21 ಡಿಟೋ	
4	ಬವರಿಂಗಪ್ಯಾಟೆ ...	22 ಡಿಟೋ	
5	ಶ್ರೀನಿವಾಸಪುರ ...	23 ಡಿಟೋ	
6	ಚಿಂತಾಮಣಿ ...	24 ಡಿಟೋ	
7	ಶಿಡ್ಲಘಟ್ಟ ...	25 ಡಿಟೋ	
8	ಚಿಕ್ಕಬಳ್ಳಾಪುರ ...	26 ಡಿಟೋ	
9	ಗೋರಿಬಿದನೂರ್ರು ...	28 ಡಿಟೋ	
10	ಗುಡಿಬಂಡೆ ಸಬ್ ತಾಲ್ಲೂಕು	29 ಡಿಟೋ	
11	ಬಾಗೇಪಲ್ಲಿ ...	30 ಡಿಟೋ	

ಪಸಾರೆ ದಿನಸುಗಳ ತಪಸೀಲು.

1. ಹುಣಸೇಹಣ್ಣು	6. ಜೇನುಮೇಣ	11. ಮರಡೀ ಬೀಜ ಅಥವಾ ಚಾರುಪಪ್ಪು
2. ಹೊಂಗೇಕಾಯಿ	7. ಕಪಿಲ್ಲಾದಂಗುರ	12. ತಾರೇಕಾಯಿ
3. ಶೀಗೇಕಾಯಿ	8. ಗೇರುಪಪ್ಪು	13. ಪೊಪ್ಲೀಚಕ್ಕೆ
4. ಗೋಂದು	9. ಬ್ಯಾಲದಹಣ್ಣು	14. ಅಳಲೇಕಾಯಿ
5. ಜೇನುತುಪ್ಪ	10. ಕಲ್ಲುಹುವ್ವು	

ಪಕರಾದಲ್ಲಿಲ್ಲದ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿ ದೊರಿಯಬಹುದಾದ 1—2—3ನೆ ನಂಬರು ದಿನಸುಗಳು ಅವಶ್ಯಕವಿದ್ದಲ್ಲಿ ಅಲಾಹಿದಾ ಹರಾಜು ಮಾಡಿಸಲ್ಪಡುವವು.

2. ಛಡ ಸವಾಲದಾರನು ಹರಾಜು ಖೈದಾದ ಕೂಡಲೆ ಹರಾಜಿ ಮೊಬಲಗು ಪೈಕಿ ಕಾಲು ಹಿಸ್ಸೆಯನ್ನು ಪಾವತಿ ಮಾಡಬೇಕು. ತಪ್ಪಿದರೆ ಛಡ ಸವಾಲ್ದಾರನನ್ನು ನಷ್ಟಕ್ಕೆ ಗುರಿಮಾಡಿ ಬಾಬು ದುಸರಾ ಹರಾಜು ಮಾಡಿಸಲ್ಪಡುವದು. ದುಸರಾ ಹರಾಜಿನಲ್ಲಿ ಛಡ ಸವಾಲ್ ಮೊಬಲಗು ಕಮ್ಮಿಯಾಗಿದ್ದಲ್ಲಿ ಕಮ್ಮಿಯಾಗುವ ಮೊಬಲಗನ್ನು ಅವನಿಂದ ರೆವಿನ್ಯೂ ಬಾಕಿಯಂತೆ ಭಾವಿಸಿ ವಸೂಲ್ಮಾಡಲ್ಪಡುವದು. ಆದರೆ ದುಸರಾ ಹರಾಜಿನಲ್ಲಿ ಫಾಯಿದೆ ಉಂಟಾದ್ದಲ್ಲಿ ಅದಕ್ಕೆ ಅವನಿಗೆ ಯಾವ ಹಕ್ಕೂ ಇರುವದಿಲ್ಲ. ಹರಾಜು ಮಂಜೂರಾದ ಸಂಗತಿಯನ್ನು ಛಡ ಸವಾಲ್ದಾರನಿಗೆ ತಿಳಿಯಪಡಿಸಿದ ಒಂದು ವಾರದೊಳಗಾಗಿ ಬಾಕಿ ಮುಕ್ಕಾಲು ಹಿಸ್ಸೆ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದರೆ ಮೊದಲು ಠೇವಣಿ ಕಟ್ಟಿದ ಕಾಲು ಹಿಸ್ಸೆಯನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡು ಬಾಬು ದುಸರಾ ಹರಾಜು ಮಾಡಲ್ಪಡುವದಲ್ಲದೆ ಛಡ ಸವಾಲ್ದಾರನಿಗೆ ಬಾಬಿನಲ್ಲಿ ಯಾವ ಹಕ್ಕೂ ಇರುವದಿಲ್ಲ. ಪೂರಾ ಹಣ ಪಾವತಿ ಮಾಡಿದ ನಂತರ ಹರಾಜು ವೇಳೆಯಲ್ಲಿ ತಿಳಿಸಲ್ಪಡುವ ಕೆಲವು ಷರತ್ತುಗಳನ್ನು ನಮೂದಿಸಿ ಛಡ ಸವಾಲ್ದಾರನು ಮುಚ್ಚಳಿಕೆ ಬರೆದುಕೊಟ್ಟು ಹೊರ್ತು ಬಾಬನ್ನು ರೂಢಿಸಲು ಅವನಿಗೆ ಅಪ್ಪಣೆ ದೊರಿಯಲಾರದು. ಹರಾಜು ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ ಪಾವತಿ ಮಾಡಬೇಕು.

3. ಈ ಹರಾಜು ಫಾರೆಸ್ಟು ಇಲಾಖೆಯಲ್ಲಿ ಡೆಪ್ಯುಟಿ ಕಮಿಷನರ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

4. ಹಿಡುವಳಿ ಜಮೀನಿನಲ್ಲಿ ಸ್ವಂತ ತೋಪುಗಳಲ್ಲಿಯೂ ಇರುವ ಫಸಲ ಕಂಟ್ರಾಕ್ಟರಿಗೆ ಸೇರಿದ್ದಲ್ಲ.

5. ಇನಾಂದಾರ್ರ ಹಕ್ಕಿನಲ್ಲಿ ಕಂಟ್ರಾಕ್ಟರು ಪ್ರವೇಶ ಮಾಡಕೂಡದು.

6. ಗ್ರಾಮ ಠಾಣಾಗಳಲ್ಲೂ, ಗ್ರಾಮ ತೋಪುಗಳಲ್ಲೂ, ಸ್ಮಶಾನ ಜಾಗಾಗಳಲ್ಲಿಯೂ ಮತ್ತು ರಸ್ತೆ ಸಾಲು ಮರಗಳಲ್ಲಿಯೂ ಇರುವ ಫಸಲು ಈ ಹರಾಜಿಗೆ ಸೇರಿದ್ದಲ್ಲಿ ಅವು ಅಮಲ್ದಾರ್ರುಗಳಿಂದ ರೆವಿನ್ಯೂ ಇಲಾಖೆ ಬಗ್ಗ್ಯಾಗಿ ಅಲಾಹಿದಾ ಹರಾಜು ಮಾಡಲ್ಪಡುವವು.

7. ಫಸಲನ್ನು ರೂಢಿಸುವ ನೆಪದಮೇಲೆ ಇಜಾರೆದಾರನು ಮರಗಳನ್ನು ನಾಶಪಡಿಸಕೂಡದು.

8. ಹರಾಜು ಮಾಡಲ್ಪಟ್ಟ ದಿನಸುಗಳ ವಿನಹಾ ಮತ್ಯಾವ ದಿನಸುಗಳನ್ನೂ ಇಜಾರೆದಾರನು ರೂಢಿಸಕೂಡದು.

9. 1908ನೆ ಜನವರಿ ಆಖೈರೊಳಗಾಗಿ ಹದ್ದುಬಸ್ತು ಗೊತ್ತಾಗಿರುವ ಫಾರೆಸ್ಟುಗಳಲ್ಲಿನ ಮತ್ತು ಪ್ಲಾಂಟೇಷನ್‌ಗಳಲ್ಲಿನ ಫಸಲನ್ನು ಸಾಗಿಸಿಕೊಂಡು ಹೋಗಬೇಕು. ಅವುಗಳು ಬೆಂಕಿ ತಡೆ ಬಗ್ಗ್ಯಾಗಿ ಆ ತಾರೀಖು ಲಾಗಾಯಿತು ಬಂದ್ ಮಾಡಲ್ಪಡುವವು. ಇತರಕಡೆಯಲ್ಲಿನ ಫಸಲುಗಳನ್ನು 1908ನೆ ಜೂನ್ ಆಖೈರ್ ವರಿವಿಗೂ ಕಂಟ್ರಾಕ್ಟರು ರೂಢಿಸಿಕೊಳ್ಳಬಹುದು.

10. ಜಿನಸಿಗಳನ್ನು ರೂಢಿಸುವದಕ್ಕೆ ಆಗಲೀ ಅಥವಾ ಮತ್ಯಾವ ಸಬಬಿನಿಂದಲೇ ಆಗಲೀ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳಿಗೆ ಬೆಂಕಿ ಇಡಕೂಡದು.

11. ಹರಾಜಿನಲ್ಲಿ ಸರಿಯಾದ ಸವಾಲ್ ಬಾರದಿದ್ದರೆ ಹರಾಜು ಮಾಡುವ ಆಫಿಸರು ಹರಾಜನ್ನು ಖೈದು ಮಾಡುವದಕ್ಕಾಗಲಿ ಮುಂದೆ ಹರಾಜು ಮಾಡುವದಕ್ಕಾಗಲೀ ಸ್ವತಂತ್ರರಾಗಿರುತ್ತಾರೆ.

ಎಸ್. ಎ. ಬಾಪೂರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟು.

ನೋಟಿಫಿಕೇಷನ್.

ತಾರೀಖು 3ನೆ ಅಕ್ಟೋಬರ್ 1907.

1900ನೆ ಇಸವಿಯ XIನೆ ನಂಬರ ವೈಸೂರು ಶೀಮೆಯು ಫಾರೆಸ್ಟ ರೆಗ್ಯುಲೇಷನ 17ನೆ ಸೆಕ್ಷನಿನ ವಿಧಿಗಳನುಸರಿಸಿ ಇಸ್ತಿಹಾರ್ನಾವೆಗೆ ಜಂಟಿಸಿರುವ ಷೆಡ್ಯೂಲಿನಲ್ಲಿ ನಮೂದಿಸಿರುವ ಚಕ್ಕು ಬಂದಿವುಳ್ಳ ಪ್ರದೇಶವು 1907ನೆ ಇಸವಿ ನವೆಂಬರು 1ನೆ ತಾರೀಖು ಲಾಗಾಯಿತು ಸದರಿ ಇಸ್ತಿಹಾರಿನ ಅಡೀಲಿ ವಿವರಿಸಿರುವ ಹಕ್ಕುಗಳ ಚಲಾವಣೆಗೆ ಒಳಪಟ್ಟು ಸ್ಟೇಟ ಫಾರೆಸ್ಟಾಗಿರತಕ್ಕದ್ದೆಂದು ವಿಧಿಸಲ್ಪಟ್ಟಿರುತ್ತೆ.

ಷೆಡ್ಯೂಲ್.

ಡಿಸ್ಟ್ರಿಕ್ಟು	ತಾಲ್ಲೂಕು ಅಥವಾ ಸಬ್ ತಾಲ್ಲೂಕು	ಅಜಮಾಸು ವಿಸ್ತೀರ್ಣ	ಬ್ಲಾಕಿನ ಹೆಸರು	ಚತುರ್ಗಡಿ.
ಕೋಲಾರ.	ಬಾಗೇಪಲ್ಲಿ.	92 ಚದರ ಮೈಲುಗಳು.	ಕಾನಿಗಂಡ್ರ ಬ್ಲಾಕು 6.	ಉತ್ತರಕ್ಕೆ.—ಫಾರೆಸ್ಟು ಸರಹದ್ದು ಲೈನ್ ಮಿಟ್ಟಪಲ್ಲಿ ಗ್ರಾಮದ ಸರ್ವೆ 5ನೆ ನಂಬರಿನ ವಾಯುವ್ಯ ಮೂಲೆಗೆ ಈಶಾನ್ಯ ದಿಕ್ಕಿನಲ್ಲಿ ಸುಮಾರು 1¼ ಫರ್ಲಾಂಗು ದೂರದಲ್ಲಿ ಸರ್ವೆ 6ನೆ ನಂಬರು ವಾಯುವ್ಯ ಎಲ್ಲೆಯಿಂದ ಹೊರಟು ಈಶಾನ್ಯ ದಿಕ್ಕಿಗೆ ಬೊಂಪಲ್ಲಿ ಮತ್ತು ಮಿಟ್ಟಪಲ್ಲಿ ಗ್ರಾಮಗಳ ಮಧ್ಯದ ಸರಹದ್ದಿನ ಮೇಲೆ ಹರಿದು ಈ ಎರಡು ಗ್ರಾಮಗಳು ಮತ್ತು ನಡಿಂಪಲ್ಲಿ ಗ್ರಾಮದ ಕೋಡು ಬಾಂದಿಗೆ ಸೇರುತ್ತದೆ. ಅಲ್ಲಿಂದ ಆಗ್ನೇಯ ದಿಕ್ಕಿಗೆ ನಡಿಂಪಲ್ಲಿಯ 30ನೆ ನಂಬರಿನ ಮಧ್ಯೆ ಹರಿದು ಸದರಿ ನಂಬರಿನ ಪೂರ್ವ ಎಲ್ಲೆಯಲ್ಲಿ ಸರ್ವೆ 29ನೆ ನಂಬರಿನ ಈಶಾನ್ಯ ಮೂಲೆಯಿಂದ ಸುಮಾರು ಒಂದು ಫರ್ಲಾಂಗು ದಕ್ಷಿಣಕ್ಕೆ ಹೋಗುತ್ತದೆ. ಅಲ್ಲಿಂದ ನಡಿಂಪಲ್ಲಿ ಮತ್ತು ಇನಾಂ ಬೋಡೇನಹಳ್ಳಿ ಗ್ರಾಮಗಳ ಮಧ್ಯದ ಸರಹದ್ದಿನ ಮೇಲೆ ಹರಿದು ಸದರಿ ಎರಡು ಗ್ರಾಮಗಳ ಮತ್ತು ಬುವನಹಳ್ಳಿ ಕೋಡು ಬಾಂದಿಗೆ ಸೇರಿ ಅಲ್ಲಿಂದ ಪೂರ್ವ ದಿಕ್ಕಿಗೆ ಬುವನಹಳ್ಳಿ, ಇನಾಂ ಬೋಡೇನಹಳ್ಳಿ ಮತ್ತು ವರದಾಪುರ ಗ್ರಾಮಗಳ ಮಧ್ಯದ ಸರಹದ್ದಿನ ಮೇಲೆ ಹೊರಟು ಸದರಿ ವರದಾಪುರ, ಬುವನಹಳ್ಳಿ ಮತ್ತು ಬತ್ತಲಹಳ್ಳಿ ಗ್ರಾಮಗಳ ಕೋಡು ಬಾಂದಿಗೆ ಸೇರುತ್ತದೆ.

ಪೂರ್ವಕ್ಕೆ.—ಅಲ್ಲಿಂದ ನೈರುತ್ಯ ದಿಕ್ಕಿಗೆ ಬುವನಹಳ್ಳಿ ಮತ್ತು ಬತ್ತಲಹಳ್ಳಿ ಗ್ರಾಮಗಳ ಮಧ್ಯದ ಸರಹದ್ದಿನ ಮೇಲೆ ಹೊರಟು ಸದರಿ ಎರಡು ಗ್ರಾಮಗಳ ಮತ್ತು ಗುಂಡಾರ್ಲಹಳ್ಳಿಯ ಕೋಡು ಬಾಂದು ಸೇರುತ್ತದೆ.

ದಕ್ಷಿಣಕ್ಕೆ.—ಅಲ್ಲಿಂದ ಪಶ್ಚಿಮ ದಿಕ್ಕಿಗೆ ಬುವನಹಳ್ಳಿಯ ಸರ್ವೆ 64ನೆ ನಂಬರಿನ ಮಧ್ಯೆ ಸುಮಾರು 5 ಫರ್ಲಾಂಗು ದೂರ ಹರಿದು ಚಿನ್ನಕಾಮನಹಳ್ಳಿ ಸರ್ವೆ 24 ಮತ್ತು ಬುವನಹಳ್ಳಿ ಸರ್ವೆ 64ನೆ ನಂಬರುಗಳ ಸರಹದ್ದು ಬಾಂದುಗಳು ಸೇರಿ ಅಲ್ಲಿಂದ ನೈರುತ್ಯ ದಿಕ್ಕಿಗೆ ಚಿನ್ನಕಾಮನಹಳ್ಳಿ ಪೂರ್ವ ಎಲ್ಲೆಯ ಮೇಲೆ ಹರಿದು ಸದರಿ ಗ್ರಾಮದ ಆಗ್ನೇಯ ಮೂಲೆಯಿಂದ ಸುಮಾರು 2 ಫರ್ಲಾಂಗು ದೂರದಲ್ಲಿ ಉತ್ತರಕ್ಕೆ ಹರಿದು ವಾಯುವ್ಯ ದಿಕ್ಕಿಗೆ ತಿರಿಗಿ ಚಿನ್ನಕಾಮನಹಳ್ಳಿಯ 24ನೆ ನಂಬರು ಮಧ್ಯೆ ಸುಮಾರು 2½ ಫರ್ಲಾಂಗು ಹರಿದು ಸದರಿ ಗ್ರಾಮದ ಸರ್ವೆ 28ನೆ ನಂಬರಿನ (ಕೆರೆಯ) ಈಶಾನ್ಯ ಮೂಲೆ ಬಾಂದಿಗೆ ಸೇರುತ್ತದೆ.

ಪಶ್ಚಿಮಕ್ಕೆ.—ಅಲ್ಲಿಂದ ಉತ್ತರಕ್ಕೆ ಚಿನ್ನಕಾಮನಹಳ್ಳಿ ಸರ್ವೆ 24ನೆ ನಂಬರಿನ ಮಧ್ಯದಲ್ಲಿ ಸುಮಾರು 5 ಫರ್ಲಾಂಗು ದೂರ ಹರಿದು ಸರ್ವೆ 19ನೆ ನಂಬರಿನ (ಕೆರೆ) ಪೂರ್ವ ಮೂಲೆ ಸೇರಿ ಅದೇ ನಂಬರಿನ ಈಶಾನ್ಯ ಎಲ್ಲೆಯ ಮೇಲೆ ವಾಯುವ್ಯ ದಿಕ್ಕಿನಲ್ಲಿ ಹೊರಟು ಚಿನ್ನಕಾಮನಹಳ್ಳಿ—ನಡಿಂಪಲ್ಲಿ ಮತ್ತು ಮಿಟ್ಟಪಲ್ಲಿ ಗ್ರಾಮಗಳ ಕೋಡು ಬಾಂದಿಗೆ ಸೇರಿ ಅಲ್ಲಿಂದ ಮಿಟ್ಟಪಲ್ಲಿ ಗ್ರಾಮದ ಸರ್ವೆ 6ನೆ ನಂಬರ್ ಮಧ್ಯದಲ್ಲಿ ವಾಯುವ್ಯ ದಿಕ್ಕಿಗೆ ಸುಮಾರು 4½ ಫರ್ಲಾಂಗು ದೂರ ಹರಿದು ಷುರುವಾದ ಸ್ಥಳವನ್ನು ಸೇರುತ್ತದೆ.

ಷರಾ—(A).

ಇದರಡಿ ನಮೂದಿಸಿರುವ ದಾರಿಯ ಹಕ್ಕುಗಳನ್ನು ಸದಾ ಕಾಲವು ಅನುಭವಿಸಬಹುದು:—

(1) 10 ಗಜ ಅಗಲದ ಮತ್ತು 1½ ಮೈಲಿ ಫಾಸಲೆ ಉಳ್ಳ ಒಂದು ಭಂಡಿ ಜಾಡು ನಡಿಂಪಲ್ಲಿಯಿಂದ ಬುವನಹಳ್ಳಿಗೆ ಹೋಗತಕ್ಕದ್ದು. ಈ ಜಾಡು ನಡಿಂಪಲ್ಲಿ—ಮಿಟ್ಟಪಲ್ಲಿ ಮತ್ತು ಬೊಂಪಲ್ಲಿ ಈ ಗ್ರಾಮಗಳ ಕೋಡು ಬಾಂದಿನ ಆಗ್ನೇಯ ದಿಕ್ಕಿನಲ್ಲಿ ಸುಮಾರು 30 ಸರಪಣಿ ದೂರದಲ್ಲಿ ಉತ್ತರ ಗಡಿಯಲ್ಲಿ ಫಾರೆಸ್ಟನ್ನು ಪ್ರವೇಶಿಸಿ ದಕ್ಷಿಣ ದಿಕ್ಕಿಗೆ ಸುಮಾರು 88 ಸರಪಣಿ ದೂರ ಹರಿದು ಚಿನ್ನಕಾಮನಹಳ್ಳಿಯ ಸರ್ವೆ 24ನೆ ನಂಬರಿನ ಪೂರ್ವ ಎಲ್ಲೆಯಲ್ಲಿ ಸದರಿ ನಂಬರಿನ ಆಗ್ನೇಯ ಮೂಲೆಯಿಂದ ಸುಮಾರು 33 ಸರಪಣಿ ದೂರದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(2) ಬುವನಹಳ್ಳಿಯಿಂದ ರಾಮನಿಚೆರುವು ಮಾರ್ಗವಾಗಿ ಇನಾಂ ಬೋಡೇನಹಳ್ಳಿಗೆ ಹೋಗತಕ್ಕ ಜನಗಳು ಮತ್ತು ದನಗಳು ತಿರಗತಕ್ಕ ದಾರಿ. ಈ ದಾರಿಯು ಬುವನಹಳ್ಳಿ—ಗುಂಡಾರ್ಲಹಳ್ಳಿ ಮತ್ತು ಬತ್ತಲಹಳ್ಳಿಗಳ ಕೋಡು ಬಾಂದಿನಿಂದ ಪಶ್ಚಿಮಕ್ಕೆ ಸುಮಾರು 20 ಸರಪಣಿಯಲ್ಲಿ ಫಾರೆಸ್ಟನ್ನು ಪ್ರವೇಶಿಸಿ ಉತ್ತರ ದಿಕ್ಕಿಗೆ ರಾಮನಚೆರುವು ವರಿವಿಗೆ ಹರಿದು ಅಲ್ಲಿಂದ ಈಶಾನ್ಯ ದಿಕ್ಕಿಗೆ ತಿರಿಗಿ ಬೋಡೇನಹಳ್ಳಿ—ವರದಾಪುರ ಮತ್ತು ಬುವ

ನಹಳ್ಳಿ ಗ್ರಾಮಗಳ ಕೋಡು ಬಾಂದುಗಳ ಸಮೀಪದಲ್ಲಿ ಫಾರೆಸ್ಟಿನಿಂದ ಪಾರಾಗುತ್ತದೆ. ಈ ದಾರಿಯು ಸ್ಟೇಟ ಫಾರೆಸ್ಟಿನಲ್ಲಿ 10 ಗಜ ಅಗಲವಾಗಿಯೂ 4½ ಫರ್ಲಾಂಗು ದೂರಕ್ಕೂ ಹೋಗುತ್ತದೆ.

(B)

(3). ಮೇಲ್ಕಂಡ ಗ್ರಾಮದ ಚರುವಿನ ನೀರನ್ನು ಈ ಕೆಳಗೆ ವಿವರಿಸಿರುವ ಗ್ರಾಮಸ್ಥರು ಮತ್ತು ದನಗಳು ಸದಾ ಕಾಲವು ನಿಯಾಮಕವಾದ ದಾರಿ ಮುಖಾಂತ್ರ ಉಪಯೋಗಿಸಿಕೊಳ್ಳಬಹುದು.

ಬುವನಹಳ್ಳಿ:— ಈ ಗ್ರಾಮದ ಜನಗಳು ಮತ್ತು ದನಗಳು 2ನೆ ನಂಬರಿನ ಕಾಲುದಾರಿ ಮಾರ್ಗವಾಗಿ ಹೋಗಿ ಬರಬಹುದು.

ನಡಿಂಪಲ್ಲಿ— ಈ ಗ್ರಾಮದ ಜನಗಳು ಮತ್ತು ದನಗಳು ಫಾರೆಸ್ಟ ಉತ್ತರ ಸರಹದ್ದಿನ ಲೈನು ಇನಾಂ ಜೋಡೀನಹಳ್ಳಿ ಎಲ್ಲೆ ಮೇಲೆ ಹೋಗಿ ಬರತಕ್ಕದ್ದು.

ಬಿ. ವೆಂಕೋಬರಾವ್,
ಫಾರ್ ಡೆಪ್ಯುಟಿ ಕಮೀಷನರ್, ಕೋಲಾರ ಡಿಸ್ಟ್ರಿಕ್ಟು.

ವಿದ್ಯಾಭ್ಯಾಸದ ಇಲಾಖೆ.

ನೋಟಿಫಿಕೇಷನ್ ಡಿ. ನಂಬರು 15.

ತಾರೀಖು 7ನೆ ಅಕ್ಟೋಬರು ಸರ್ 1907ನೆ ಇಸವಿ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದ ಸರ್ 1907ನೆ ಇಸವಿ ಅಕ್ಟೋಬರು 4ನೆ ತಾರೀಖು 3116-32—Edn. 231-06—4ನೆ ನಂಬರು ಹುಕುಮಿನನ್ನನುಸರಿಸಿ ಇದರಿಂದ ತಿಳಿಯಪಡಿಸುವುದೇನೆಂದರೆ:—ಹಾಲ್ತಿ ಇಸವಿ ಅಕ್ಟೋಬರು 1ನೆ ತಾರೀಖು ಮೊದಲ್ಗೊಂಡು ತಾಲ್ಲೂಕು ಬ್ರಾಂಚು ಮತ್ತು ಹೋಬಳಿ ಸ್ಕೂಲ್‌ಗಳೆಂದು ಕರೆಯಲ್ಪಡುವ ಸರ್ಕಾರದ ಪಾಠಶಾಲೆಗಳ 2ನೆಯ ಮತ್ತು 3ನೆಯ ಕ್ಲಾಸುಗಳಲ್ಲಿ ಫೀಯನ್ನು ಮೋಕೂಫು ಮಾಡಿರುತ್ತೆ. ಈ ನೋಟಿಫಿಕೇಷನ್ ತಲಪುವುದಕ್ಕೆ ಮುಂಚೆ ಈ ಕ್ಲಾಸುಗಳಲ್ಲಿ ಫೀಯನ್ನು ವಸೂಲ್ಮಾಡಿದ್ದ ಪಕ್ಷದಲ್ಲಿ ಸದರಿ ಫೀಯನ್ನು ಹೆಡ್ಮಾಸ್ಟರು ಆಯಾ ವಿದ್ಯಾರ್ಥಿಗಳಿಗೆ ವಾಪಸು ಮಾಡತಕ್ಕದ್ದು.

ಹೆಚ್. ಜೆ. ಭಾಭಾ,
ಇನ್ಸ್‌ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್ ಇನ್ ಮೈಸೂರು.

ಬೆಂಗಳೂರು ಡಿಸ್ಟ್ರಿಕ್ಟು.

1907ನೆ ಇಸವಿ ಆಗಸ್ಟ್ 15ನೆ ತಾರೀಖಿನಲ್ಲಿ ನಡದ ಡಿಸ್ಟ್ರಿಕ್ಟು ಫಂಡು ಬೋರ್ಡಿನ ಮೀಟಿಂಗು ಪ್ರೊಸೀಡಿಂಗ್ಸ್.

ಎಕ್ಸ್ ಅಫಿಷಿಯೋ ಮೆಂಬರುಗಳು.

ಹಾಜರು.

ಟ್ರಜರಿ ಆಫೀಸರು ಮತ್ತು ವೈಸು ಪ್ರೆಸಿಡೆಂಟರು, ಮೆ॥ ಟಿ. ರಾಯಲು ಚೆಟ್ಟರವರು, ಪ್ರೆಸಿಡೆಂಟರವರ ಸ್ಥಾನವನ್ನು ವಹಿಸಿದ್ದರು.

ಬೆಂಗಳೂರು ಡಿವಿಜನ್ ಅಸಿಸ್ಟೆಂಟ್ ಕಮಿಷನರು, ಮೆ॥ ಸಿ. ರಾಮರಾಯರವರು.

ದೊಡ್ಡಬಳ್ಳಾಪುರ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರು, ಮೆ॥ ಟಿ. ಚೊಕ್ಕಣ್ಣನವರು.

ಸ್ಕೂಲ್‌ಗಳ ಡೆಪ್ಯುಟಿ ಇನ್ಸ್‌ಪೆಕ್ಟರು, ಮೆ॥ ಕೆ. ಎಸ್. ವೀರಭದ್ರಯ್ಯನವರು.

ಗೈರ್ ಹಾಜರು.

ಪ್ರೆಸಿಡೆಂಟರು ಮೆ॥ ಡಿ. ದೇವರಾಜೆ ಅರಸಿನವರು, ಕಾರ್ಕಹಳ್ಳಿಗೆ ಇತರ ಕೆಲಸದ ಮೇಲೆ ಹೋಗಿದ್ದ ಸಬಬು.

ಕ್ಲೋಸ್‌ಪೇಟೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರು, ಮೆ॥ ಸಿ. ದೇವರಾಜೆ ಅರಸಿನವರು, ಕಾರ್ಕಹಳ್ಳಿಗೆ ಇತರ ಕೆಲಸದ ಮೇಲೆ ಹೋಗಿದ್ದ ಸಬಬು.

ಎಗ್ಸಿಕ್ಯೂಟಿವ್ ಇಂಜನೀಯರು, ಮೆ॥ ಬಿ. ಎಸ್. ವೆಂಕಟಾಚಾರ್ಯರವರು, ಕಾರ್ಕಹಳ್ಳಿಗೆ ಇತರ ಕೆಲಸದ ಮೇಲೆ ಹೋಗಿದ್ದ ಸಬಬು.

ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರವರು, ಮೆ॥ ಜೆ. ಡೇವಿಡ್ಸನವರು.

ನಾನ್ ಅಫಿಷಿಯಲ್ ಮೆಂಬರುಗಳು.

ಹಾಜರು.

ದೊಡ್ಡಬಳ್ಳಾಪುರ ತಾಲ್ಲೂಕು ಮೆ॥ ಶ್ಯಾನುಭೋಗ ಕರಿಗಿರಿಯಪ್ಪನವರು.

ನೆಲಮಂಗಲ ತಾಲ್ಲೂಕು ಮೆ॥ ಡಿ. ದಾಸಪ್ಪನವರು.

ಮಾಗಡಿ ತಾಲ್ಲೂಕು ಮೆ॥ ಕೆ. ಕೃಷ್ಣಮೂರ್ತಿರಾಯರು.

ಕ್ಲೋಸ್‌ಪೇಟೆ ಸಬ್ ತಾಲ್ಲೂಕು ಮೆ॥ ಕರೇಭಾವಾ ನರಸಿಹ್ಮಯ್ಯಶೆಟ್ಟರು.

ಆನೆಕಲ್ ತಾಲ್ಲೂಕು ಮೆ|| ಕೆ. ಪುಟ್ಟಪ್ಪನವರು.
ದೇವನಹಳ್ಳಿ ತಾಲ್ಲೂಕು ಮೆ|| ಡಿ. ಶ್ರೀಕಂಠರಾಯರು.
ಬೆಂಗಳೂರು ಮತ್ತು ನೆಲಮಂಗಲ ತಾಲ್ಲೂಕು ಮೆ|| ಕಾಚರ್ಕನಹಳ್ಳಿ ಸುಬ್ಬಣ್ಣನವರು.
ಹೊಸಕೋಟೆ, ಆನೆಕಲ್ ತಾಲ್ಲೂಕು ಮೆ|| ಶ್ಯಾ|| ಶೀನಪ್ಪನವರು.
ದೇವನಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು ಮೆ|| ಜೋಡಿದಾರ್ ರಾಮಚಂದ್ರಪ್ಪನವರು.

ಗೈರ್ ಹಾಜರು.

ಬೆಂಗಳೂರು ತಾಲ್ಲೂಕು ಮೆ|| ವೇಲುಮೊದಲಿಯಾರು.
ಕಾರ್ಕಾಹಳ್ಳಿ ತಾಲ್ಲೂಕು ಮೆ|| ಯಾಲಕ್ಕಿ ಗೌಡರು.
ಚೆನ್ನಪಟ್ಣ ತಾಲ್ಲೂಕು ಮೆ|| ಸಾಹುಕಾರ್ ಮಸ್ತಾನ್ ಸಾಹೇಬರವರು. (ಖಾಯಿಲೆ ಸಬಬು).
ಚೆನ್ನಪಟ್ಣ, ಕಾರ್ಕಾಹಳ್ಳಿ ತಾಲ್ಲೂಕು ಮೆ|| ಪುಟ್ಟಮಾಸ್ತಿ ಗೌಡರು.
ಮಾಗಡಿ ಮತ್ತು ಕ್ಲೋಸಪೇಟೆ ಸಬ್ ತಾಲ್ಲೂಕು ಮೆ|| ಬಾಲಾಜಿರಾಯರು (ಖಾಯಿಲೆ ಸಬಬು).

(1) ದೊಡ್ಡಬಳ್ಳಾಪುರ ತಾಲ್ಲೂಕು ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ದನಗಳ ಪ್ರದರ್ಶನ ವಿಚಾರದಲ್ಲಿ ಡಿಟ್ಟೋ ಪ್ರದರ್ಶನದ ಆಡಳಿತವನ್ನು ನಡಿಸಲು ಒಂದು ಸ್ಥಳಿ ಕಮಿಟಿ ಏರ್ಪಾಡು ಮಾಡುವ ವಿಷಯದಲ್ಲಿ ಬೋರ್ಡಿನವರ ತೀರ್ಮಾನವನ್ನು ಕಳುಹಿಸಬೇಕೆಂತ ತಲ್ಪಿದ 1907ನೆ ಇಸವಿ ಮಾರ್ಚಿ 12ನೆ ಮರ್ಸ್ಕಂ 8064—L. B. 280-06—4ನೆ ನಂಬರ ಗೌರ್ನಮೆಂಟು ಆರ್ಡರು ಓದಲಾಯಿತು.

ದೊಡ್ಡಬಳ್ಳಾಪುರ ಸಬ್ ಡಿವಿಜನ್ ಅಸಿಸ್ಟೆಂಟ ಕಮಿಷನರವರು ಘಾಟಿ ಸುಬ್ರಹ್ಮಣ್ಯ ಸ್ವಾಮಿ ಜಾತ್ರೆಯ ದನಗಳ ಪ್ರದರ್ಶನದ ಆಡಳಿತ ನಡಿಸಲು ಏರ್ಪಾಡು ಮಾಡಿರುವ ಕಮ್ಮಿಟಿ ವಿಚಾರದಲ್ಲಿ ಬರಸಿದ 13—5—07ನೆ ಮರ್ಸ್ಕಂ 172ನೆ ನಂಬರು ಯಾದಿ ಓದಿ ಅಂಗೀಕರಿಸಲ್ಪಟ್ಟಿತು. ಬೋರ್ಡಿನವರು ಡಿಸ್ಟ್ರಿಕ್ಟ ಬೋರ್ಡು ಮೆಂಬರು ಆದ ಮೆ|| ಕರಿಗಿರಿಯಪ್ಪನವರನ್ನು ಈ ಕಮಿಟಿ ಮೆಂಬರಾಗಿ ಸೇರಿಸಿಕೊಳ್ಳಬೇಕೆಂತಲೂ ಅಭಿಪ್ರಾಯಪಟ್ಟರು. ಅಲ್ಲಿಗೆ ಹೋಗುವ ರಸ್ತೆ ಸರಿಮಾಡತಕ್ಕ ವಿಚಾರದಲ್ಲಿ ಅಂದಾಜು ಕಳುಹಿಸಲು ಎಗ್ಸಿಕ್ಯೂಟಿವ ಇಂಜನೀಯರಿಗೆ ಬರೆಕಿರುವದಾಗಿಯೂ ಸಹಾ ತೀರ್ಮಾನವಾಯಿತು.

(2) ಕ್ಲೋಸಪೇಟೆ ಸಬ್ ತಾಲ್ಲೂಕು ವಡವಟ್ಟದಲ್ಲಿ ಸಂತೆ ನಡಿಯತಕ್ಕ ವಿಚಾರದಲ್ಲಿ ಗೌರ್ನಮೆಂಟನಿಂದ ತಲ್ಪಿದ 1907ನೆ ಇಸವಿ ಜೂನ 18ನೆ ಮರ್ಸ್ಕಂ 11966-71—L. B. 472-06—2ನೆ ನಂಬರ ಗೌರ್ನಮೆಂಟು ಆರ್ಡರು ಓದಲಾಯಿತು.

ಅಲ್ಲಿ ಸಂತೆಯು ಪ್ರತಿ ಗುರುವಾರವೂ ನಡಿಸಬಹುದೆಂತ ತೀರ್ಮಾನವಾಯಿತು.

(3) ಬೆಂಗಳೂರು ಸಿಟಿ ಶ್ರೀವಾಣಿ ಬುಕ್ಕು ಡಿಪೋ ಏಜಂಟು ಗುರುಪಾದಪ್ಪನು ತಾನು ಇಟ್ಟಿರುವ ಧರ್ಮಾರ್ಥ ವೈದ್ಯಶಾಲೆಗೆ ಗೌರ್ನಮೆಂಟನಿಂದ ಗ್ರಾಂಟುಯಾನೆ ಸಹಾಯ ಮಾಡಿಸಬೇಕೆಂತ ಬರದುಕೊಂಡ ರಿಮೈಂಡರು ಅರ್ಜಿಯನ್ನು ಫೈಸಲಾತಿ ಬಗ್ಗೆ ಜನರಲ್ ಮತ್ತು ರೆವಿನ್ಯೂ ಸೆಕ್ರೇಟರಿ ಸಾಹೇಬರವರಿಂದ 1—6—07ನೆ ಮರ್ಸ್ಕಂ 11373—Ml. 69-06—9ನೆ ನಂಬರಿನೊಡನೆ ಬಂದದ್ದು ಓದಲಾಯಿತು.

ಈ ಧರ್ಮಾರ್ಥವಾಗಿ ಇಟ್ಟಿರುವ ವೈದ್ಯಶಾಲೆಗೆ ಬೋರ್ಡಿನವರು ಏನೂ ಸಹಾಯಮಾಡುವರಾಗಿಲ್ಲವೆಂತ ತೀರ್ಮಾನವಾಯಿತು.

(4) ಚೆನ್ನಪಟ್ಟಣದ ಆಸ್ಪತ್ರೆಗೆ ಸೇರಿದ ಪ್ರತಿ ಒಂದು ರೋಗಿಗಳ ಕೊಠಡಿಗೂ ಬಚ್ಚಲು ಮನೆಯನ್ನು ಮಾಡಿಸತಕ್ಕ ವಿಚಾರದಲ್ಲಿ ಸೀನಿಯರ್ ಸರ್ಜನ ಸಾಹೇಬರವರಿಂದ ತಲ್ಪಿದ 30—5—07ನೆ ಮರ್ಸ್ಕಂ ಜೆ. 1008ನೆ ನಂಬರು ಲೆಟರು ಕಾಪಿಯನ್ನು ಮತ್ತು ಅದರ ಮೇಲಪೂಫಿ ಕಾಪಿಗಳನ್ನು ಬೋರ್ಡಿನವರ ಆಲೋಚನೆ ಬಗ್ಗೆ ಸೆಕ್ರೆಟರಿ ಸಾಹೇಬರವರ 17—6—07ನೆ ಮರ್ಸ್ಕಂ 11921—Med. 158-06—4ನೆ ನಂಬರ ಡಾಕೇಟ್ಟಿನೊಡನೆ ಬಂದದ್ದು ಓದಲಾಯಿತು.

ಈ ಬಚ್ಚಲು ಮನೆಗಳು ಅವಶ್ಯಕವೇ ಇಲ್ಲವೇ ಎಂಬುವದನ್ನು ಬೋರ್ಡಿನವರು ಯೋಚಿಸತಕ್ಕ ಬಗ್ಗೆ ಡಿಟ್ಟೋ ಆಸ್ಪತ್ರೆ ಕೊಠಡಿಗಳಲ್ಲಿ ಕಳೆದ 3 ಸಾಲಿನಲ್ಲಿ ಎಷ್ಟು ಖಾಯಿಲೆ ಜನಗಳು ಬಂದಿದ್ದರು ಎಂಬುವ ಅಂಶ ತರಿಸಿಕೊಳ್ಳಬೇಕೆಂತ ತೀರ್ಮಾನವಾಯಿತು.

(5) ವರ್ತೂರು ಆಸ್ಪತ್ರೆಯನ್ನು ರಾಮಗೊಂಡಹಳ್ಳಿಯಲ್ಲಿ ಇಡತಕ್ಕ ವಿಚಾರದಲ್ಲಿ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿ ಸಾಹೇಬರವರಿಂದ ತಲ್ಪಿದ 24—6—07ನೆ ಮರ್ಸ್ಕಂ 12079—L. B. 165-06—10ನೆ ನಂಬರ ಡಾಕೆಟ್ಟು ಓದಲಾಯಿತು.

ರಾಮಗೊಂಡಹಳ್ಳಿಲಿ ಆಸ್ಪತ್ರೆ ಇಡಿಸತಕ್ಕ ಬಗ್ಗೆ ಯಾವ ಕಟ್ಟಡ ಅನುಕೂಲವಾಗಿದೆ ಎಂಬುವ ವಿಚಾರದಲ್ಲಿ ಅಸಿಸ್ಟೆಂಟು ಕಮಿಷನರವರಿಂದ ರಿಪೋರ್ಟು ತರಿಸಬೇಕೆಂತ ತೀರ್ಮಾನವಾಯಿತು.

(6) ಐವರಖಂಡಪುರದಿಂದ ಬೆಂಗಳೂರು-ತುಮಕೂರು ರೋಡು 8ನೆ ಮೈಲಿಗೆ ಸೇರತಕ್ಕ ರಸ್ತೆಗೆ ಸಾಲಾಹಾದು ಛಾರ್ಜ ಗೋಸ್ಕರ ಡಿಸ್ಟ್ರಿಕ್ಟು ಫಂಡಿನಿಂದ 250 ರೂಪಾಯಿಗಳು ಸ್ಯಾಂಕ್ಷನ ಮಾಡಿರುವ 27—6—07ನೆ ಮರ್ಸ್ಕಂ 12305-8—L. B. (60-06)—6ನೆ ನಂಬರು ಗೌರ್ನಮೆಂಟು ಪ್ರೊಸೀಡಿಂಗ್ಸ ಓದಲಾಯಿತು.

ಓದಿ ರಿಕಾರ್ಡು ಮಾಡಲಾಯಿತು.

(7) 50 ಮನೆಗಳಿಗೆ ಮೇಲ್ಪಟ್ಟ ಗ್ರಾಮಗಳ ಪಾಕೀಜಾಗೋಸ್ಕರ ಲೋಕಲ ಫಂಡಿನಿಂದ ಕೊಂಚ ಹಣವನ್ನು ಇಡಿಸತಕ್ಕ ವಿಚಾರದಲ್ಲಿ ನಿರ್ಧರವಾದ ರೂಲ್ಸು ಮಾಡಲು ಆಗಲಾರದೆಂದುನ್ನು ಈ ಸಮ್ಮಂಧವಾದ ಕೆಲಸಗಳ್ಯಾವತ್ತು ಡಿಸ್ಟ್ರಿಕ್ಟು ಬೋ-

ರ್ಡಿನವರಿಗೇನೆ ಸೇರಿ ಇರುತ್ತೆಯಾಗಿ ಗ್ರಾಮಸ್ಥರು ತಮಗೆ ಬೇಕಾಗುವ ಸಹಾಯಕ್ಕೆ ಡಿಪ್ಪೋ ಬೋರ್ಡಿನವರಿಗೆ ತಿಳಿಸಿಕೊಳ್ಳಬೇಕೆಂತಲೂ ಬರಸಿದ 15—7—07ನೆ ಮುರ್ಕ್ಕಂ 455-64—L. B. 185-06—11ನೆ ನಂಬರು ಗೌರ್ನಮೆಂಟು ಆರ್ಡರು ಓದಲಾಯಿತು.

ಓದಿ ರಿಕಾರ್ಡು ಮಾಡಲಾಯಿತು.

(8) ವರ್ತೂರು ಆಸ್ಪತ್ರೆಯನ್ನು ಅಲ್ಲಿ ಪ್ಲೇಗ್ ಪ್ರಾಪ್ತವಾಗಿದ್ದ ಕಾಲದಲ್ಲಿ ಹೊರಗೆ ಇಡಲು ಕಟ್ಟಿಸಿದ್ದ ಷೆಡ್ಡಿಗೆ ತಗಲಿದ ಖರ್ಚು 86—10—3 ಯನ್ನು ಡಿಸ್ಟ್ರಿಕ್ಟು ಫಂಡಿನಿಂದ ಕೊಡಿಸಲು ಗೌರ್ನಮೆಂಟ್ ಸ್ಯಾಂಕ್ಷನ್ ಪಡಿಯಬೇಕೆಂತ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟೆರಿ ಕಮಿಷ್ನರವರು ಬರಸಿದ 27-28—5—07ನೆ ಮುರ್ಕ್ಕಂ 7961ನೆ ನಂಬರ್ ಡಾಕೆಟ್ ಓದಲಾಯಿತು.

ಈ ವಿಚಾರವನ್ನು ಗೌರ್ನಮೆಂಟನವರ ಆರ್ಡರಿಗೆ ಕಳುಹಿಸಬೇಕೆಂತಲೂ ಅಲ್ಲದೆ ಈ ಬಾಬತು ಮೊಬಲಗು ಪ್ಲೇಗ್ ಫಂಡಿನಿಂದಲೆ ಕೊಡಿಸತಕ್ಕದ್ದೆಂತ ಬೋರ್ಡಿನವರಿಗೆ ಈಗಲೂ ಅಭಿಪ್ರಾಯವಿದೆಯೆಂತ ತೀರ್ಮಾನವಾಯಿತು.

(9) ಕಾರ್ಕಾರಹಳ್ಳಿ ಆಸ್ಪತ್ರೆಗೆ ಸೇರಿದ ಸೇವಕಾವೃತ್ತಿ ಜನಗಳಿಗೆ (Minials) ಒಂದೊಂದು ರೂಪಾಯಿ ಸಂಬಳ ಬಡ್ತಿ ಆಗಲು ಗೌರ್ನಮೆಂಟು ಸ್ಯಾಂಕ್ಷನ್ ಪಡಿಯಬೇಕೆಂತ ಸೀನಿಯರ್ ಸರ್ಜನ್ ಸಾಹೇಬರವರು ಬರಸಿದ 1907ನೆ ಇಸವಿ ಜೂನ್ 8-10ನೆ ಮುರ್ಕ್ಕಂ 7408ನೆ ನಂಬರು ಡಾಕೆಟ್ಟು ಓದಲಾಯಿತು.

ಈ ಆಸ್ಪತ್ರೆಗೆ ಸೇರಿದ ತೋಟಿಗೆ ಮಾತ್ರ ಒಂದು ರೂಪಾಯಿ ಬಡ್ತಿ ಆಗಲು ಸ್ಯಾಂಕ್ಷನ್ ಬಗ್ಯೆ ಗೌರ್ನಮೆಂಟಿಗೆ ಬರಿಸಬೇಕೆಂತ ತೀರ್ಮಾನವಾಯಿತು.

(10) ಡೆಪ್ಯುಟಿ ಕಮಿಷನರ್ ಸಾಹೇಬರವರ ಆಡಳಿತದಲ್ಲಿ ಇರತಕ್ಕ ಫಂಡಿನಿಂದ ಷಹತೂತು ವಿಚಾರವನ್ನು ಬೋಧನೆ ಮಾಡುವ ಬಗ್ಯೆ ತಗಲುವ ಚಿಲ್ಲರೆ ಖರ್ಚುಗಳಿಗೋಸ್ಕರ ಮಾಹೆಯಾನಾ 10 ರೂಪಾಯಿಗೆ ಮೀರದೆ ಕೊಡಲು ಸಾಧ್ಯವೆ ಎಂಬ ಅಂಶ ತಿಳಿಸಬೇಕೆಂತ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ಬರಸಿದ 1—6—07ನೆ ಮುರ್ಕ್ಕಂ 9154—6—J. 85ನೆ ನಂಬರು ಲೆಟರು ಓದಲಾಯಿತು.

ಡಿಸ್ಟ್ರಿಕ್ಟು ಫಂಡಿನಿಂದ ಈ ಚಾರ್ಜು ಕೊಡಲು ಆಗುವದಿಲ್ಲವೆಂತ ತೀರ್ಮಾನವಾಯಿತು.

(11) ಆನೆಕಲ್ ತಾಲ್ಲೂಕು ಹುಸ್ಕೂರಿನಲ್ಲಿ ಸಂತೆಯನ್ನು ಶುಕ್ರವಾರ ನಡಿಸುವದು ತಪ್ಪಿಸಿ ಬುಧವಾರ ನಡಿಸಲು ಅಪ್ಪಣೆ ಕೊಡಿಸಬೇಕೆಂತ ಆ ಗ್ರಾಮದ ರೈತರು ಮತ್ತು ಶೆಟ್ಟರುಗಳು ಬರದುಕೊಂಡ ಅರ್ಜಿ ಓದಲಾಯಿತು.

ಡಿವಿಜನ್ ಆಫಿಸರವರ ಅಭಿಪ್ರಾಯ ತಿಳಿದುಕೊಳ್ಳಬೇಕೆಂತ ತೀರ್ಮಾನವಾಯಿತು.

(12) ಸೋಲದೇವನಹಳ್ಳಿ ಆಸ್ಪಟಲ್ ಅಸಿಸ್ಟೆಂಟರನ್ನು ವಾರಕ್ಕೆ ಒಂದಾವರ್ತಿ ಹೆಸರುಘಟ್ಟಕ್ಕೆ ಜನಗಳಿಗೆ ಅವುಷಧಿ ಕೊಡಿಸಲು ಹೋಗಲು ತಜವೀಜು ನಡಿಸುವದಕ್ಕೆ ಶಿಫಾರಸು ಮಾಡಿಸಬೇಕೆಂತ ಬೆಂಗಳೂರು ಸಬ್ ಡಿವಿಜನ್ ಆಫಿಸರವರಿಂದ ತಲಪಿದ್ದ 24—6—07ನೆ ಮುರ್ಕ್ಕಂ 1164ನೆ ನಂಬರು ಕನ್ನಡಾ ಯಾದಿ ಓದಲಾಯಿತು.

ಈ ವಿಚಾರದಲ್ಲಿ ಸೀನಿಯರ್ ಸರ್ಜನ್ ಸಾಹೇಬರವರಿಗೆ ಬರಿಸಬೇಕೆಂತ ತೀರ್ಮಾನವಾಯಿತು.

(13) ಚನ್ನಪಟ್ಟಣ ತಾಲ್ಲೂಕು ಮಳೂರಲ್ಲಿ ಇರುವ ಕಣ್ವ ನದಿಗೆ ಕಲ್ಲು ಸೋಪಾನ ಕಟ್ಟಿಸಲು 30 ರೂಪಾಯಿ ಮಂಜೂರಾ ಡಿಸಬೇಕೆಂತ ಕ್ಲೋಸ್‌ಪೇಟೆ ಸಬ್ ಡಿವಿಜನ್ ಆಫಿಸರವರು ಬರಸಿದ 8—2—07ನೆ ಮುರ್ಕ್ಕಂ 1248ನೆ ಕನ್ನಡಾ ಯಾದಿ ಓದಲಾಯಿತು.

ಈ ಮೊಬಲಗು ಸ್ಯಾಂಕ್ಷನ್ ಮಾಡಬಹುದೆಂತ ತೀರ್ಮಾನವಾಯಿತು.

(14) 1907—08ನೆ ಸಾಲಿನಲ್ಲಿ ನಡಿಯತಕ್ಕ 14,284—13—3ನೆ ನೀಂಕಲಾ ಕಾಂಗಾರಿಗಳ ಲಿಸ್ಟು ಓದಲಾಯಿತು.

ಓದಿ ಪ್ಯಾಸ್ಮಾಡಲಾಯಿತು.

(15) ಈ ವರುಷದ ದಸರಾ ರಿಪ್ರಜೆಂಟೇಟಿವ್ ಸಭೆಗೆ ಹೋಗಲು ಡಿಸ್ಟ್ರಿಕ್ಟು ಬೋರ್ಡಿನಿಂದ ಮೆಂಬರುಗಳನ್ನು ಚುನಾಯಿಸತಕ್ಕ ವಿಚಾರದಲ್ಲಿ.

ನಾನ್ ಅಫಿಷಿಯಲ್ ಮೆಂಬರುಗಳ ಓಟುಗಳ ಪ್ರಕಾರ ಮೆ|| ಕೆ. ಸುಬ್ಬಣ್ಣನವರನ್ನೂ ಮತ್ತು ದಾಸಪ್ಪನವರನ್ನೂ ಚುನಾಯಿಸಲಾಯಿತು.

(16) ಕುನ್ನೂರಿನಲ್ಲಿ ನಾಯಿ ವಗ್ಯೆರೆ ಮೃಗ ಕಡದವರಿಗೆ ಚಿಕಿತ್ಸೆ ಮಾಡಲು ಸ್ಥಾಪಿಸಿ ಇರುವ ಆಸ್ಪತ್ರೆ (Institute) ಖರ್ಚಿಗಾಗಿ ಗೌರ್ನಮೆಂಟನವರು ಲೋಕಲ್ ಫಂಡು ಜನರಲ್‌ನಿಂದ 5 ವರುಷಗಳ ವರಿವಿಗೂ ಸಾಲಿಯಾನಾ 500 ರೂಪಾಯಿಗಳು ಸ್ಯಾಂಕ್ಷನ್ ಮಾಡಿರುವದ್ದರಿಂದ ಇತರ ಬೋರ್ಡಿನವರು ಏನೂ ಕಂಟ್ರಿಬ್ಯೂಷನ್ ಕೊಡಲು ಅವಶ್ಯಕವಿಲ್ಲವೆಂತ ಬರಸಿದ 10-8-07ನೆ ಮುರ್ಕ್ಕಂ 1352-9—L. B. 458-06—2ನೆ ನಂಬರ್ ಗೌರ್ನಮೆಂಟ್ ಆರ್ಡರು ಓದಲಾಯಿತು.

ಓದಿ ರಿಕಾರ್ಡು ಮಾಡಲಾಯಿತು.

ಮುಂದಿನ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗು ನವೆಂಬರು 9ನೆ ಶನಿವಾರ ನಡಿಯಬೇಕೆಂತ ತೀರ್ಮಾನವಾಯಿತು.

ಟಿ. ರಾಯಲುಚೆಟ್ಟಿ,
ಫಾರ ಪ್ರೆಸಿಡೆಂಟ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 27ನೆ ಮಾಹೆ ಸಪ್ಟಂಬರ್ 1907.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಕಾಯಂ ಗುತ್ತಾದಾರರಿಂದ ಸರ್ಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಕಾಯಂಗುತ್ತಾ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಾಸ್ತಿ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲ್ಲಿ ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ಬೇಖಿಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 170ನೆ ಸೆಕ್ಷನ್ ಅನುಸಾರವಾಗಿ ಜಾಮೀನ್ ಕೊಟ್ಟಾಗ್ಯೂ ಹರಾಜು ಮುವಕೂಫ್ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜು ಖಾಯಂ ಮಾಡಲ್ಪಟ್ಟ ಕೂಡಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರು ಮಾಡೋಣಾದ ಒಂದು ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲಿನಲ್ಲಾಗಲೀ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 90 ದಿನಗಳೊಳಗಾಗಿ ಗವರ್ನ್ಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ; ಅಂತಾ ಅಪ್ಪೀಲಿನಲ್ಲಿ ಆಗುವ ಆಖೈರು ಹುಕುಮಿಗೆ ಸದರೀ ಕ್ರಯವು ವಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀ ಕಾಯಂ ಗುತ್ತಾದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಹುಟ್ಟುವಳಿ ಯಾ ಬೇರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟ್ ರೆಂಟ್.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂತಾ ಸರ್ಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
					ಎ. ಗು.	ರೂ. ಆ.	ರೂ. ಆ. ಪೈ.	ರೂ. ಆ. ಪೈ.	
ಕೋಲಾರ.	ಚಿಕ್ಕಬಳ್ಳಾಪುರ.	ಮಂಡಿಕಲ್.	ಕಾಯಂಗುತ್ತಾ ಚೀಗಾನಹಳ್ಳಿ.	1. ಆಳ್ವಂದಾರ್ ವರದಾಚಾರ್. 2. ಶ್ರೀರಂಗಾಚಾರ್. 3. ಶೇಷಾಚಾರ್.	ಪರಂಪೋಕು. 490 3 ಖುಷ್ಕಿ ... 495 9 ತರಿ ... 115 1 ಬಾಗಾಯಿತು. 27 35 1,128 8	696 4	582 0-0	752 9 0	ತಾರೀಖು 7ನೆ ನವಂಬರ್ 1907, ಚಿಕ್ಕಬಳ್ಳಾಪುರ ತಾಲ್ಲೂಕು ಕಚೇರಿ.
					ಗ್ರಾಮಕ್ಕೆ ಚೆಕ್ಕುಬಂದಿ. ಪೂರ್ವಕ್ಕೆ—ಜೋಡಿ ಕಮ್ಮಗಾನಹಳ್ಳಿ. ಪಶ್ಚಿಮಕ್ಕೆ—ಬತ್ತಲ ಬೈರಪ್ಪನ ದಿನ್ನೆ. ಉತ್ತರಕ್ಕೆ—ಎಲಕರಾಳಹಳ್ಳಿ, ಚೊಕ್ಕಹಳ್ಳಿ ಮತ್ತು ನಾರೇನಹಳ್ಳಿ ಜೋಡಿ. ದಕ್ಷಿಣಕ್ಕೆ—ಮಂಡಿಕಲ್ ಮತ್ತು ನಾಲಾ.				

ಷರಾ—ಕಾಯಂಗುತ್ತಾದಾರರುಗಳಿಂದ ಆಗಲಿ ಬಾಧ್ಯತೆ ಮೂಲಕ ಇವರುಗಳಿಗೆ ಹಿಂದೆ ಯಿದ್ದವರಿಂದಾಗಲಿ ಉಂಟುಮಾಡಲ್ಪಟ್ಟ ತವಾಂ ಹಿಡುವಳಿಗಾಗಲಿ ದೇಣಿಗಳಿಗಾಗಲಿ ಮತ್ತು ಹಕ್ಕುಗಳಿಗಾಗಲಿ ಅಥವಾ ಮತ್ಯಾವ ಸಂಬಂಧಗಳಿಗಾಗಲಿ ಸದರಿ ಹರಾಜು ವಳಪಟ್ಟಿರುವದಿಲ್ಲ.

ಬಿ. ವೆಂಕೋಬರಾವ್,
ಫಾರ್ ಡೆಪ್ಯುಟಿ ಕಮಿಷನರ್.

ಸನ್ 1907ನೆ ಇಸವಿ ಆಗಸ್ಟ್ ತಾರೀಖು 24ರಲ್ಲು ನಡದ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿನಲ್ಲಿ ಆದ ತೀರ್ಮಾನಗಳು.

ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ಮೆ॥ ಸಿ. ಶ್ರೀಕಂಠೇಶ್ವರ ಐಯ್ಯರ್, ಬಿ.ಎ., ಬಿ.ಎಲ್., ಪ್ರೆಸಿಡೆಂಟರು.
2. ,, ಬಿ. ವೆಂಕೋಬರಾವ್, ಬಿ.ಎ., ವೈಸ್ ಪ್ರೆಸಿಡೆಂಟರು.
3. ,, ಕೆ. ಶ್ರೀನಿವಾಸರಾವ್, ಮಾಲೂರು ಡಿವಿಜನ್ ಅಸಿಸ್ಟೆಂಟ್ ಕಮಿಷನರು.
4. ,, ಜಿ. ಆರಾವಮುದೈಯ್ಯಂಗಾರ್, ಬಿ.ಎ., ಬಿ.ಎಲ್., ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರು.
5. ,, ಅಪ್ಪಾಥೊರೆ ಮೊದಲಿಯಾರ್ರು, ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು.
6. ,, ಕೆ. ಕ್ರಿಷ್ಣಯ್ಯಂಗಾರ್ರವರು, ಎಗ್ಸಿಕ್ಯೂಟಿವ್ ಇಂಜನಿಯರ್.

ನಾನ್ ಅಫಿಷಿಯಲ್ ಮೆಂಬರುಗಳು.

1. ಮೆ॥ ಮುನಿಸಾರಣಯ್ಯ ಶೆಟ್ಟರವರು, ಕೋಲಾರ.
2. ,, ರಾಮರಾಯರವರು, ಮಾಲೂರು.
3. ,, ದ್ಯೊಂತಿ ಚಿಕ್ಕ ಸುಬ್ಬಾಯಪ್ಪನವರು, ಶಿಡ್ಲಘಟ್ಟ.
4. ,, ಎಂ. ಚೌಡರೆಡ್ಡಿಯವರು, ಚಿಂತಾಮಣಿ.
5. ,, ಉಮ್ಮಂಡೈಯ್ಯನವರು, ಬವರಿಂಗಪೇಟೆ.
6. ,, ಮಹಮದ್‌ಹಸೇನ್‌ಸಾಹೇಬರವರು, ಶ್ರೀನಿವಾಸಪುರ.
7. ,, ಲಕ್ಷ್ಮಣರಾವ್, ಗುಡಿಬಂಡೆ.
8. ,, ರಾಮಣ್ಣನವರು, ಗೋರಿಬಿದನೂರು.
9. ,, ಪಿ. ಶೀನಪ್ಪ, ಬಾಗೇಪಲ್ಲಿ.

ಕ್ಲಾಸ್ (ಇ)

10. ಮೆ॥ ಬಸವೇಗೌಡರವರು, ಬವರಿಂಗಪೇಟೆ.
11. ,, ವೆಂಕಟಸಾಮಿರೆಡ್ಡಿಯವರು, ಶ್ರೀನಿವಾಸಪುರ.

ಗೈರ್ ಹಾಜರು.

ಮೆ॥ ಗೋಪಾಲರಾಯರವರು, ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರವರು.

ನಾನ್ ಅಫಿಷಿಯಲ್ ಮೆಂಬರುಗಳು.

ಮೆ॥ ಕಾಸ್ಟಿ ಹೈದರಸಾಬರು, ಮುಳಬಾಗಲು.
,, ನಾರಾಯಣಸ್ವಾಮಿಶೆಟ್ಟಿ, ಚಿಕ್ಕಬಳ್ಳಾಪುರ.

ಕೆಳಗೆ ನಮೂದಿಸಿರುವ ಅಮುಲ್ದಾರ್ರುಗಳು ಹಾಜರಾದ್ದರು.

1. ಮಿ॥ ಎಂ. ಎಸ್. ಪುಟ್ಟಣ್ಣನವರು, ಮುಳಬಾಗಲ್.
2. ,, ವೈ. ನರಸಿಂಗರಾಯರು, ಶ್ರೀನಿವಾಸಪುರ.
3. ,, ಕೆ. ವೆಂಕಟಸಾಮಿ ಐಯ್ಯರ್, ಮಾಲೂರು.

(1) ಮೈಸೂರು ಸೀಮೆಯ ಶ್ರೀಮನ್ಮಹಾರಾಜರವರು ಕೋಲಾರ ಡಿಸ್ಟ್ರಿಕ್ಟಿಗೆ ಕ್ಷಿಪ್ರದಲ್ಲಿಯೆ ದಯಮಾಡಿಸುವರೆಂಬ ಶುಭ ವರ್ತಮಾನವನ್ನು ಕೇಳಿ ಬೋರ್ಡಿನವರೆಲ್ಲರೂ ತುಂಬಾ ಸಂತೋಷಚಿತ್ತರಾಗಿರುತ್ತಾರೆ. ಅಲ್ಲದೆ ಮಹಾಸ್ವಾಮಿಯವರಿಗೆ ಉಚಿತ ಮರ್ಯಾದೆಯೊಡನೆ ಬರಮಾಡಿಕೊಂಡು ತಮ್ಮ ರಾಜಭಕ್ತಿ ವಿಶ್ವಾಸವನ್ನು ತೋರ್ಪಡಿಸಲ್ಲು, ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಬೇಕೆಂದು ನಿರ್ಣಯಿಸಲ್ಪಟ್ಟಿತು. ಅಲ್ಲದೆ ಇದಕ್ಕಾಗಿ ಬೋರ್ಡಿನವರು 250 ರೂಪಾಯಿಗಳನ್ನು ಈ ಸಾಲ್ ಡಿಸ್ಟ್ರಿಕ್ಟ್ ಬೋರ್ಡ್ ಬಡ್ಜೆಟ್ಟಿನಿಂದ ಉಪಯೋಗಿಸಬಹುದೆಂದು ತೀರ್ಮಾನಿಸಲ್ಪಟ್ಟಿತು.

(2) ಕಳೆದ ಮೀಟಿಂಗ್ ಪ್ರೊಸೀಡಿಂಗ್ಸನ್ನು ಓದಿ ನಿರ್ಧರಿಸಲ್ಪಟ್ಟಿತು.

(3) ಕಂಟ್ರೋಲರ್ ಸಾಹೇಬರವರಿಂದ ಆಡಿಟ್ಟಾಗಿ ಬಂದ 1907ನೆ ಫೆಬ್ರವರಿ, ಮಾರ್ಚಿ ಮತ್ತು ಏಪ್ರಿಲ್ ಮಾಹೆಗಳ ಜಮಾಖರ್ಚು ಲೆಖ್ಖಗಳು ಓದಿ ರಿಕಾರ್ಡು ಮಾಡಲ್ಪಟ್ಟಿತು.

(4) ದನಗಳ ಪ್ರದರ್ಶನೆಯಲ್ಲಿ ಬಹುಮಾನ ಹೊಂದಿದವರಿಗೆ ಕೊಡತಕ್ಕ ಸರ್ಟಿಫಿಕೇಟು ಮೇಲೆ ಬತ್ತುವ ಮುದ್ರೆಯ ವಿಷಯವಾಗಿ ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನವರ ತೀರ್ಮಾನವನ್ನು ಗೌರ್ನಮೆಂಟಿನವರು ಒಪ್ಪಿರುವದಾಗಿ ತಿಳುಪಿರುವ ಜುಲೈ 19ನೆ ತಾರೀಖಿನ 607–14—463–06ನ್ನು ಓದಿ ರಿಕಾರ್ಡು ಮಾಡಲಾಯಿತು. ಈ ಡಿಸ್ಟ್ರಿಕ್ಟಿನಲ್ಲಿ ಉಪಯೋಗಿಸುವ ಶೀಲಿನ ಮುದ್ರೆಯನ್ನು ಗೌರ್ನಮೆಂಟಿಗೆ ಕಳುಹಿಸಬೇಕೆಂದು ನಿಶ್ಚಯಿಸಲ್ಪಟ್ಟಿತು.

(5) ಗ್ರಾಮಗಳ ರಸ್ತೆಗಳ ವಿಷಯವಾಗಿ ಮೈಸೂರು ಸೀಮೆಯ ರೆವಿನ್ಯೂ ಕಮಿಷನರ್ ಸಾಹೇಬರವರಿಂದ ಕೊಡಲ್ಪಟ್ಟ ಸರ್ಕ್ಯುಲರ್ ಆರ್ಡರನ್ನು ಮಂಜೂರ್ಮಾಡಿದೆ ಎಂದು ಗೌರ್ನಮೆಂಟಿನಿಂದ ತಲುಪಿದ 64–72—180–6—5ನೆ ನಂಬರ್ ಪ್ರೊಸೀಡಿಂಗ್ ಓದಿ ರಿಕಾರ್ಡು ಮಾಡಲಾಯಿತು.

(6) ಗ್ರಾಮಗಳ ಬಡಾವಣೆ, ಸ್ಥಳ ಬದಲಾಯಿಸುವಿಕೆ ಮತ್ತು ಹೊಸ ನಿವೇಶನ ಚುನಾಯಿಸುವಿಕೆ ಮೊದಲಾದ ಸಂಬಂಧಪಟ್ಟ ಏರ್ಪಾಡುಗಳು, ಡಿಸ್ಟ್ರಿಕ್ಟ್ ಬೋರ್ಡಿನವರ ಸಂಬಂಧವಿಲ್ಲದೆ ರವಿನ್ಯೂ ಇಲಾಖೆಯಿಂದಲೆ ನಡಿಸಬಹುದೆಂದು ತಿಳಿಸಿರುವ 478-87—127-06—07ನೆ ಜುಲೈ 15ನೆ ತಾರೀಖಿನ ಗೌರ್ನ್ಮೆಂಟು ಪ್ರೊಸೀಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

(7) ಸ್ಯಾನಿಟರಿ ಇನ್ಸ್ಪೆಕ್ಟರುಗಳಾದ ವೆಂಕಟನಾರಣಪ್ಪ, ಕೆ. ಆರ್. ಸುಬ್ರಹ್ಮಣ್ಯ ಐಯ್ಯರ್ ಮತ್ತು ನಾರಾಯಣಸಾಮಿ ನಾಯಿಡು ಎಂಬುವರಿಗೆ, ಅವರು ಬೆಂಗಳೂರಲ್ಲಿ ಟ್ರೈನಿಂಗಿಗೆ ಹೋಗಿದ್ದ ಕಾಲಕ್ಕೆ ಪೂರಾ ಸಂಬಳವನ್ನು ಕೊಡಲು ಮುನಿಸಿಪಲ್ ಮತ್ತು ಡಿಸ್ಟ್ರಿಕ್ಟ್ ಫಂಡಿನಿಂದ ಕೊಡಲು ಅಲಾಟ್ ಮಾಡಬೇಕಾಗಿ ತಿಳಿಸಿದ ಆಗಸ್ಟು 3ನೆ ಮುಕ್ಕಾಂ ಗೌರ್ನ್ಮೆಂಟ್ ಪ್ರೊಸೀಡಿಂಗ್ಸ್ 1010-3—394-06—2ನೆ ನಂಬರ್ ಡಾಕೆಟ್ಟು ಓದಿ ಈ ಸಾಲಿನ ಬಡ್ಜೆಟ್ಟಿನಲ್ಲಿ ಹಣ ಸಾಲದ್ದರಿಂದ, ಗತ ಸಾಲಿನ ಬಡ್ಜೆಟ್ಟಿನಿಂದಲೆ ಮೊಬಲಗು ಕೊಡಬೇಕೆಂದು ಗೌರ್ನ್ಮೆಂಟಿಗೆ ಬರೆಯಬೇಕೆಂದು ನಿರ್ಧರಿಸಲ್ಪಟ್ಟಿತು.

(8) ಕುನ್ನೂರಿನಲ್ಲಿರುವ ಪ್ಯಾಶ್ಚರ್ ಇನ್ಸ್ಟಿಟ್ಯೂಟಿಗಾಗಿ 300 ರೂಪಾಯಿ ಕೊಡಲು, ಮೈಸೂರು ಡಿಸ್ಟ್ರಿಕ್ಟ್ ಬೋರ್ಡು ರೆಸಿಲ್ಯೂಷನ್ ಮೇಲೆ ಗೌರ್ನ್ಮೆಂಟಿನವರು ಲೋಕಲ್ ಫಂಡ್ ಜನರಲ್ರವರಿಂದ 5 ವರ್ಷಗಳ ಪರಿಯಂತರವೂ ಸದರಿ ಧರ್ಮಶಾಲೆಗೆ ಸಾಲಿಯಾನ 500 ರೂಪಾಯಿಗಳನ್ನು ಕೊಡಲು ಮೊದಲೇ ಮಂಜೂರ್ಮಾಡಿರುವದರಿಂದ ಪ್ರತ್ಯೇಕ ಪ್ರತ್ಯೇಕವಾಗಿ ಡಿಸ್ಟ್ರಿಕ್ಟ್ ಬೋರ್ಡಿನವರು ಕೊಡಲು ಅವಶ್ಯಕತೆ ಇರುವುದಿಲ್ಲವೆಂದು ತಿಳಿಸಿದ ಆಗಸ್ಟ 10ನೆ ಮುಕ್ಕಾಂ 1352-9—658-06—2ನೆ ಗೌರ್ನ್ಮೆಂಟ್ ಪ್ರೊಸೀಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

(9) ಮೈಸೂರು ಸೀಮೆಯಲ್ಲಿ ಪಬ್ಲಿಕ್ ಹೆಲ್ತ್ ಡಿಪಾರ್ಟಿನ ಸ್ಥಾಪನೆಯನ್ನು ಮಂಜೂರ್ಮಾಡಿದ ಆಗಸ್ಟು 10ನೆ ಮುಕ್ಕಾಂ 1378-92—93-06—2ನೆ ನಂಬರ್ ಗೌರ್ನ್ಮೆಂಟ್ ಪ್ರೊಸೀಡಿಂಗ್ಸನ್ನು ಓದಲಾಯಿತು. ಇದನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ಎಲ್ಲರಿಗೂ ತಿಳಿಸಲ್ಪಡುವರೆಂದು ಹೇಳಲಾಯಿತು.

(10) ದೊಡ್ಡದೊಡ್ಡ ಎಸ್ಟೇಟುಗಳಿಗೆ ಹೋಗತಕ್ಕ ರಸ್ತೆಗಳನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಕಾಮಗಾರಿ ಮುಂತಾದ್ದನ್ನು ಮಾಡಿಸುವುದನ್ನು ನಿಲ್ಲಿಸಿಬಿಡತಕ್ಕ ವಿಷಯದಲ್ಲಿ ಅಭಿಪ್ರಾಯವನ್ನು ಕೇಳಿರುವ ಸೆಕ್ರೆಟರಿ ಸಾಹೇಬರವರ ಜನವರಿ 4ನೆ ತಾರೀಖು 6021-8—200-06—1ನೆ ನಂಬರ್ ಡಾಕೆಟ್ಟು ಓದಲಾಯಿತು. ಇಂಥಾ ಎಸ್ಟೇಟುಗಳು ಈ ಡಿಸ್ಟ್ರಿಕ್ಟಿನಲ್ಲಿ ಇಲ್ಲವಾದ್ದರಿಂದ ಗವರ್ನ್ಮೆಂಟಿನವರಿಗೆ ಇದೇ ರೀತಿ ತಿಳಿಸಬಹುದೆಂದು ನಿರ್ಧರಿಸಲ್ಪಟ್ಟಿತು.

(11) ಬೇತಮಂಗಲದ ಆಸ್ಪತ್ರೆಯಲ್ಲಿರುವ ಶಿಬ್ಬಂದಿಗಾಗಿಯೂ ಮತ್ತು ಇತರ ಕೆಲಸಗಳಿಗೂ ತಗಲುವ ಲಾಗುವಡೆಯನ್ನು, ಮತ್ತು ಸೀಮೆಯಿಂದ ತರಿಸುವ ಔಷಧಗಳಿಗೆ ತಗಲುವ 200 ರೂಪಾಯಿ ಡಿಸ್ಟ್ರಿಕ್ಟ್ ಬೋರ್ಡಿನವರೆ ಕೊಡತಕ್ಕ ವಿಷಯದಲ್ಲಿಯೂ, ತಮ್ಮ ಅಭಿಪ್ರಾಯವನ್ನು ಮತ್ತು ಈ ಸಾಲ್ ಬಡ್ಜೆಟ್ಟಿನಲ್ಲಿ ಯಾವ ಬಾಬಿನಿಂದ ಮೊಬಲಗನ್ನು ಕೊಡಬೇಕೋ ತಿಳಿಸಬೇಕೆಂದು ತಿಳಿಸಿರುವ ಸೆಕ್ರೆಟರಿ ಸಾಹೇಬರವರ ಜುಲೈ 22ನೆ ತಾರೀಖು 633—96-06—6ನೆ ನಂಬರ ಡಾಕೆಟ್ಟು ಓದಿ ಈ ಸಾಲಿನ ಬಡ್ಜೆಟ್ಟಿನಲ್ಲಿ ನಮೂದಿಸಿರುವಂತೆ ಇಂಗ್ಲೀಷ್ ಔಷಧಿಗಾಗಿ 200 ರೂಪಾಯಿ ಕೊಡಬಹುದೆಂತಲೂ ಜಾಸ್ತಿ ಕೊಡಲು ಬೋರ್ಡಿನಲ್ಲಿ ಹಣವಿಲ್ಲವೆಂತಲೂ ಗವರ್ನ್ಮೆಂಟಿಗೆ ಬರೆಯಬೇಕೆಂದು ನಿರ್ಧರಿಸಲ್ಪಟ್ಟಿತು.

(12) ಎಲ್ಲಂಪಲ್ಲಿ—ಹೇಳೂರು ರೋಡಿನ 15ನೆ ಮೈಲ್ 5–6ನೆ ಫರ್ಲಾಂಗುಗಳಲ್ಲಿ ನಡಿಯಬೇಕಾದ ಕಾಂಗಾರಿಗೆ ತಯಾರಾದ 2,851 ರೂಪಾಯಿಗಳ ಅಂದಾಜನ್ನು ಕೌಂಟರ್ ಸೈನ್ ಬಗ್ಗೆ ಕಳುಹಿಸಿದ ಕೋಲಾರ ಡಿ|| ಎ|| ಇಂಜನೀಯರುರವರ ಜುಲೈ 30ನೆ ಮುಕ್ಕಾಂ 285ನೆ ನಂಬರ್ ಡಾಕೆಟ್ಟನ್ನು ಓದಿ ಸೈನಿಸಿ ವಾಪಸು ಮಾಡಬಹುದೆಂದು ತೀರ್ಮಾನಿಸಲ್ಪಟ್ಟಿತು.

(13) ರಾಯಲ್ಪಾಡಿನಲ್ಲಿರುವ ನೇಟೀವ್ ವೈದ್ಯಶಾಲೆಯನ್ನು ಗವನಪಲ್ಲಿಗೆ ವರ್ಗಾಯಿಸಬೇಕೆಂದು ತಾಲ್ಲೂಕು ಬೋರ್ಡಿನವರ ತೀರ್ಮಾನವನ್ನು ಓದಿ ಅದರಂತೆ ಸದರಿ ವೈದ್ಯಶಾಲೆಯನ್ನು ಗವನಪಲ್ಲಿಗೆ ವರ್ಗಾಯಿಸಲು ಒಪ್ಪಲಾಯಿತು.

(14) ಚಿಕ್ಕಬಳ್ಳಾಪುರದ ತಾಲ್ಲೂಕು ಕಂದವಾರದಲ್ಲಿ ಒಂದು ಭಾವಿಗಾಗಿ 40 ರೂಪಾಯಿನ ಸಪ್ಲಿಮೆಂಟ್ ಅಂದಾಜು ಓದಿ ಮಂಜೂರ್ಮಾಡಲಾಯಿತು.

(15) 1906—07ನೆ ಸಾಲು ಆಖೈರಿನಲ್ಲಿ ಪೂರೈಸಲ್ಪಡದೆ ನಿಂತ ಮತ್ತು 1907—08ನೆ ಸಾಲಿನಲ್ಲಿ ಅಪ್ರೋಪ್ರಿಯೇಷನ್ ಮಾಡಬೇಕಾಗಿರುವ ರೆವಿನ್ಯೂ ಡಿಪಾರ್ಟ್ಮೆಂಟಿನ ಕಾಂಗಾರಿ ತಖ್ತೆಯೂ ಓದಿ ಗವರ್ನ್ಮೆಂಟಿಗೆ ಸ್ಯಾಂಕ್ಷನ್ ಬಗ್ಗೆ ಕಳುಹಿಸಬೇಕೆಂದು ನಿರ್ಣಯಿಸಲ್ಪಟ್ಟಿತು.

(16) ಕೆಳಗೆ ನಮೂದಿಸಿರುವ ತಾಲ್ಲೂಕು ಬೋರ್ಡು ರೆಜುಲ್ಯೂಷನ್ಗಳನ್ನು ಓದಿ ನಿರ್ಣಯಿಸಲ್ಪಟ್ಟಿತು.

ತಾಲ್ಲೂಕು.	ತಾರೀಖು.
ಬೌರಿಂಗಪೇಟೆ	20—7—07
ಚಿಂತಾಮಣಿ	18—6—07
ಶ್ರೀನಿವಾಸಪುರ	24—6—07
ಬಾಗೇಪಲ್ಲಿ	27—6—07
ಗೌರಿಬಿದನೂರು	3—6—07
ಮಾಲೂರು	30—7—07
ಚಿಕ್ಕಬಳ್ಳಾಪುರ	29—6—07

(17) ಮುಂದಿನ ಮೀಟಿಂಗನ್ನು ಸ್ರ 1907ನೆ ಇಸವಿ ಸೆಪ್ಟಂಬರ್ 23ನೆ ತಾರೀಖಿನಲ್ಲಿ ನಡಿಸಬಹುದೆಂದು ನಿಶ್ಚಯಿಸಲ್ಪಟ್ಟಿತು.

ಬಿ. ವೆಂಕೋಬರಾವ್,
ಫಾರ್ ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟ.

ಇಸ್ತಿಹಾರ್ನಾಮೆ.

ತಾರೀಖು 3—5ನೆ ಅಕ್ಟೋಬರ್ 1907.

1906ನೆ ಇಸವಿ ನವಂಬರ 8ನೆ ಮರ್ಕುಂ F. L. 3304-6—S. R. 146-05-7ನೆ ಗೌರ್ನಮೆಂಟ ಆರ್ಡರು ಅನುಸರಿಸಿ ಈ ಮೂಲಕ ತಿಳಿಯಪಡಿಸುವದೇನಂದರೆ,—

ಡಿಸ್ಟ್ರಿಕ್ಟ ಮಜಕೂರು ಇನಾಂ ಗ್ರಾಮಗಳ ಶೇಂದಿ ಹುಟ್ಟುವಳಿ ಹಕ್ಕು ತಹಲ ವರಿಗೂ ಗೌರ್ನಮೆಂಟಿನಿಂದ ಸ್ಥಿರಪಡಿಸಲ್ಪಡದೆ ಇರುವ ಶ್ರೀ ಪರಕಾಲಿಸ್ವಾಮಿಗಳವರ ಮಠ ಮತ್ತು ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠಗಳಿಗೆ ಶೇರಿದ ಇನಾಂ ಗ್ರಾಮಗಳ ಶೇಂದಿ ಹುಟ್ಟುವಳಿಗೆ ಮಠದ ಹಕ್ಕನ್ನು ಸ್ಥಿರಪಡಿಸುವ ವಿಚಾರದಲ್ಲಿ ಮೈಸೂರು ಡಿಸ್ಟ್ರಿಕ್ಟ ಎಕ್ಸೈಜ ಆಫಿಸರವರು 1—11—1907ನೆ ತಾರೀಖಿನ ದಿವಸ ಅವರ ಆಫೀಸಿನಲ್ಲಿ ಅವಶ್ಯವಿರುವ ವಿಚಾರಣೆಯನ್ನು ನಡಿಸುತ್ತಾರೆ.

ಸದರಿ ಮಠಗಳ ಏಜಂಟರುಗಳು ಮೇಲ್ಕಂಡ ಆಫೀಸರ ಬಳಿ ಸದರಿ ತಾರೀಖಿನಲ್ಲಿ ತಮ್ಮಲ್ಲಿ ಇರತಕ್ಕ ಸನ್ನದು, ಇನಾಂ ಟೈಟಲ್ ಡೀಡು, ಮುಚ್ಚಳಿಕೆ ವಗೈರೆ ಸಕಲ ದಾಖಲಾತಿಗಳನ್ನು ಹಾಜರ್ಪಡಿಸತಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ರೂಲ್ಸು ಮೇರೆ ಕ್ರಮ ಜರುಗಿಸುತ್ತೆ. ನಂತರ ಬರುವ ಯಾವ ತಕರಾರನ್ನೂ ಅಂಗೀಕರಿಸಲಾಗಲಾರದೆಂದು ಪ್ರಸಿದ್ಧಪಡಿಸಿದೆ.

ಟಿ. ಕೆ. ಸುಂದರರಾಜೈಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟ.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ ವ ಪ್ರಸಿದ್ಧ ಪತ್ರಿಕೆ.

ತಾರೀಖು 26—30ನೆ ಸೆಪ್ಟಂಬರ್ 1907.

1. ಕಂದಾಯದ ಬಾಕೀದಾರರಾದ ಇನಾಂ ಕಣ್ಣೂರು ಗ್ರಾಮದ ಚಿದಂಬರಭಟ್ಟ ವಗೈರೇರಿಂದ ಬರಬೇಕಾದ ಜಮೀ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗಾ ಡಿಸ್ಟ್ರಿಕ್ಟ ಶಿಕಾರಿಪುರ ತಾಲ್ಲೂಕು ಕಛೇರಿಯಲ್ಲಿ ಶಿವಮೊಗ್ಗಾ ಡಿವಿಜನ ಅಸಿಸ್ಟೆಂಟ ಕಮಿಷನರ ಸಾಹೇಬರವರ ರೂಬರೂ 1907ನೆ ಇಸವಿ ನವಂಬರ 11ನೆ ತಾರೀಖಿನಲ್ಲಿ (ಸೋಮವಾರ) ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಹಗಲು 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡವರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1906—07ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ ಮೇರಿಗೆ ರೂಪಾಯಿ 392—6—3 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮ್ಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಬಂದು ಹರಾ

ಜು ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಅಂದಾಜಾ ಕಿಮ್ಮತು.	ಸ್ವತ್ತಿನ ತಪ್ಸೀಲ್. ಜಮೀನು. ನಂಬರ್ ಅಥವಾ ಜಮೀನಿನ ಹೆಸರು	ಸ್ವತ್ತಿನ ತಪ್ಸೀಲ್. ಜಮೀನು. ಖುಷ್ಕೀ, ತರಿ ಅಥವಾ ಬಾಗಾಯತು.	ಸ್ವತ್ತಿನ ತಪ್ಸೀಲ್. ಜಮೀನು. ವಿಸ್ತೀರ್ಣ.	ಸ್ವತ್ತಿನ ತಪ್ಸೀಲ್. ಜಮೀನು. ಆಕಾರ.	ಅಂದಾಜಾ ಕಿಮ್ಮತು.	ಸರ್ಕಾರಕ್ಕೆ ಸಾಲೀಯಾನಾ ಕೊಡಬೇಕಾದ ಜೋಡಿ ಯಾ ಕಾಯಂ ಗುತ್ತಾ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.
					ರೂ.			ಎ. ಗು.	ರೂ. ಆ. ಪೈ.			ರೂ. ಆ. ಪೈ.
ಶಿಕಾರಿಪುರ	ಬೆಳಂದೂರು	ಕಂಣೂರು ಇನಾಂ	ಚಿದಂಬರಭಟ್ಟಾ ವಗೈರೇರು	...	...	...	ಖುಷ್ಕೀ ...	436 5	171 11 2	ರೂ. 1,000	ರೂ. ಆ. ಪೈ. 562 2 9	392 6 3
							ತರಿ ...	338 30	1,057 11 2			
							ಪರಂಪೋಕು.	87 11	5 8 0			
								862 6	1,234 14 4			

ಚತುರ್ಗಡಿ.

ಪೂರ್ವಕ್ಕೆ—ಸಾಗರ ತಾಲ್ಲೂಕು ಅಳ್ಳಹಳ್ಳಿ, ಉದ್ದನೂರು ಗಡಿ.
ಪಶ್ಚಿಮಕ್ಕೆ—ಗೌಜ ಮತ್ತು ಮಲಂದೂರು ಹಳ್ಳದ ಗಡಿ.
ದಕ್ಷಿಣಕ್ಕೆ—ಸಾಗರ ತಾಲ್ಲೂಕು ಗಿಳಲಗುಂಡಿ, ತಂಗಳವಾಡಿ, ಬೈರದ ಗಡಿ.
ಉತ್ತರಕ್ಕೆ—ದಣಂದೂರು, ಅಳ್ಳಹಳ್ಳಿ, ಗಡಿ,
ಈ ಮಧ್ಯೆ ಇರುವ ಸರ್ಕಾರಿ ಗ್ರಾಮ ಜಾತಾ ದೇವಾದಾಯ ಬಾಕಿ ಇನಾಂಪೂರಾ.

ಮುಹಮ್ಮದ್ ರಜಾ,
ಫಾರ್ ಡೆಪ್ಯುಟಿ ಕಮಿಷನರ್.

ಬೆಂಗಳೂರು ಸಬಾರ್ಡಿನೇಟ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1907—08ನೆ ಇಸವಿ ಮಿ|| ಅರ್ಜೀ ನಂಬರು 208.

ದೇವನಹಳ್ಳೀಲಿ ವಾಸವಾಗಿದ್ದ ಅಂಣೈಯಪ್ಪನ ಮಗ ಮೃತಪಟ್ಟ ನಂಜುಂಡಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ದೇವನಹಳ್ಳೀಲಿರುವ ಚನ್ನಬಸಪ್ಪ ಉರಫ್ ಪಿಳ್ಳಪ್ಪ, ಅಂಣೈಯಪ್ಪ ಮೈನರ್, ಗಾರ್ಡಿಯನ್ ತಾಯಿ ಚಿಕ್ಕವೀರಮ್ಮ, ಮೃತಪಟ್ಟ ಸದರೀ ನಂಜುಂಡಪ್ಪನವರಿಗೆ ಖಾಸಾ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ದೇವನಹಳ್ಳಿ ಸ್ಥಳದ ವಾಸಸ್ಥರಾಗಿ ಮೃತಪಟ್ಟ ನಂಜುಂಡಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 21,770—1—2 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಚನ್ನಬಸಪ್ಪ ಉರಫ್ ಪಿಳ್ಳಪ್ಪ, 2ನೆ ಅಂಣೈಯ್ಯಪ್ಪ ಮೈನರ್, ಗಾರ್ಡಿಯನ್ ಚಿಕ್ಕವೀರಮ್ಮನ ಅರ್ಜಿಯನ್ನು ಸನ್ 1907ನೆ ಇಸವಿ ಅಕ್ಟೋಬರು ತಿಂಗಳು ತಾರೀಖು 11ರಲ್ಲೂ ಕೇಳಿ ಸರ್ಟಿಫಿಕೇಟ್ ಪಡೆಯುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜುಂಡಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1907ನೆ ಇಸವಿ ಸೆಪ್ಟಂಬರು ತಿಂಗಳು 30ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತಿನೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಮ ಐಯ್ಯರ್,
ಅಫಿಷಿಯೇಟಿಂಗ್ ಸಬಾರ್ಡಿನೇಟ್ ಜಡ್ಜ್.

ಕೋ ಆಪರೆಟಿವ ಸೊಸೈಟಿಗಳ ರಿಜಿಸ್ಟ್ರಾರವರ ಆಫೀಸ್.

ನೋಟಿಫಿಕೇಷನ, ನಂ. 183, ಬೆಂಗಳೂರು, ತಾರೀಖು 5ನೆ ಅಕ್ಟೋಬರು 1907.

ಈ ಕೆಳಗೆ ನಮೂದಿಸಿರುವ ಕೋ ಆಪರೇಟಿವ ಸೊಸೈಟಿಗಳು 1905ನೆ ಇಸವಿಯ ಮೈಸೂರು ಕೋ ಆಪರೇಟಿವ ಸೊಸೈಟಿಗಳ ರೆಗ್ಯುಲೇಷನ 6ನೆ ಸೆಕ್ಷನ (2) ನೆ ಒಳ ಪ್ರಕರಣಕ್ಕನುಸಾರವಾಗಿ ರಿಜಿಸ್ಟರು ಮಾಡಲ್ಪಟ್ಟಿರುತ್ತೆ :—

ಹೆಸರು.	ಸ್ಥಳ.	ರಿಜಿಸ್ಟರು ಆದ ತಾರೀಖು.
ಮೊಳಕಾಲ್ಮುರು ಜಹೀರುಲ್ ಇಸ್ಲಾಂ ಕೋ ಆಪರೇಟಿವ ಸೊಸೈಟಿ, ಲಿಮಿಟೆಡ.	ಮೊಳಕಾಲ್ಮುರು ...	ಅಕ್ಟೋಬರು 1, 1907.
ಚಾಮರಾಜನಗರದ ಶ್ರೀ ನಾರಾಯಣ ಅನ್ಯೋನ್ಯ ಸಹಾಯ ಸಂಘ, ಲಿಮಿಟೆಡ.	ಚಾಮರಾಜನಗರ ...	ಅಕ್ಟೋಬರು 2, 1907.
ಹರಮಗಟ್ಟದ ಧರ್ಮಗೋಳ, ಲಿಮಿಟೆಡ ..	ಹರಮಗಟ್ಟ, ಹೊಳಲೂರು ಹೋಬಳಿ, ಶಿವಮೊಗ್ಗ ತಾಲ್ಲೂಕು.	ಡಿಟೋ.

ಎಂ. ಶಾಮರಾವ್,
ಕೋ ಆಪರೇಟಿವ ಸೊಸೈಟಿಗಳ ರಿಜಿಸ್ಟ್ರಾರ.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಛಾಪಿಸ್ ಆದ್ದು. [ಸಂ. 42.

ಬೆಂಗಳೂರು, ಗುರುವಾರ, ಅಕ್ಟೋಬರ ತಾ॥ 24, ಸನ್ 1907.

II ನೆ ಭಾಗ.

ಇಂಡ್ಯ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜಿಯರು ವಗೈರೆಯರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಫಾರೆಸ್ಟ್ ಇಲಾಖಾ.

ಸಂಟಲ್ ಹರಾಜ್ ನೋಟಿಫಿಕೇಷನ್.

ತಾರೀಖು 24ನೆ ಆಗಸ್ಟ್ 1907ನೆ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಸರಕಾರದ ಶ್ರೀಗಂಧದ ಸಾಲಿಯಾನಾ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರದರ ಬಾಜೂದಲ್ಲಿ ನಮೂದಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫೀಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರುಗಳಿಂದ ನಡೆಸಲ್ಪಡುವವು :—

ಡಿಸ್ಟ್ರಿಕ್ಟು.	ಕೋಠಿ.	ಹರಾಜು ತಾರೀಖು.	ಸುಮಾರು ಮೊತ್ತ.
			ಟನ್‌ಗಳು.
ಶಿವಮೊಗ್ಗ ...	ತೀರ್ಥಹಳ್ಳಿ ...	18ನೆ ನವೆಂಬರ 1907 ...	200
ಡಿಟೋ ...	ಸಾಗರ ...	21ನೆ ಡಿಟೋ ...	150
ಡಿಟೋ ...	ಶಿವಮೊಗ್ಗ ...	25ನೆ ಡಿಟೋ ...	500
ಕಡೂರು ...	ತರೀಕೆರೆ ...	28ನೆ ಡಿಟೋ ...	250
ಡಿಟೋ ...	ಚಿಕ್ಕಮಗಳೂರು ...	2ನೆ ಡಿಸೆಂಬರ 1907 ...	350
ಹಾಸನ ...	ಹಾಸನ ...	5ನೆ ಡಿಟೋ ...	150
ಬೆಂಗಳೂರು ...	ಬೆಂಗಳೂರು ...	9ನೆ ಡಿಟೋ ...	100
ಮೈಸೂರು ...	ಶ್ರೀರಂಗಪಟ್ಟಣ ...	12ನೆ ಡಿಟೋ ...	250
ಡಿಟೋ ...	ಹುಣಸೂರು ...	16ನೆ ಡಿಟೋ ...	500
		ಜಮಾ	2,450

2. ಪ್ರತಿ ಕೋಠಿಯಲ್ಲಿಯೂ ಹರಾಜಾಗುವ [illegible] ಸುಮಾರು ಲಾಟು, ಮೊತ್ತ ಮತ್ತು ಇತರ ತಪಶೀಲುಗಳು ಬರುವ ಅಕ್ಟೋಬರ್ ಮಾಹೆಯ ಆಖೈರಿನಲ್ಲಿ ತಿಳಿಯಪಡಿಸುತ್ತೆ.

ಎಂ. ಮುತ್ತಣ್ಣ,
ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ನೋಟಿಸ್.

ಕೋಲಾರ ಡಿಸ್ಟ್ರಿಕ್ಟಿನಲ್ಲಿ 1907—08ನೆ ಸಾಲಿನಲ್ಲಿ ದೊರಿಯಬಹುದಾದ ಪಸಾರೆ ಜಿನಸಿಗಳು ಕೊಂಡುಕೊಳ್ಳುವ ವಿಷಯದಲ್ಲಿ ಅಕ್ಟೋಬರ್ ತಾರೀಖು 10ನೆ ಮರ್ಕ್ಯಂನ ಮೈಸೂರ್ರು ಗೆಜೆಟ II ನೆ ಭಾಗದ 492ನೆ ಪೇಜಿನಲ್ಲಿ ಫಾಯಿಷ್ ಆಗಿರುವ 1907ನೆ ಸೆಪಟಂಬರ್ ತಾರೀಖು 30ನೆ ಮರ್ಕ್ಯಂನ ನೋಟಿಫಿಕೇಷನ್‌ಗೆ ಸಮಸ್ತ ಜನಗಳು ಗಮನ ಕೊಡಬೇಕು.

ಎಸ್. ಎ. ಬಾಪೂರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ, ಕೋಲಾರ ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮೆ.

ಮೊಕ್ಕಾಂ ಮುತ್ತೋಡಿ, ತಾರೀಖು 13ನೆ ಅಕ್ಟೋಬರ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಕಡೂರು ಡಿಸ್ಟ್ರಿಕ್ಟ್ ಡಿಪೋಗಳಲ್ಲಿ ಆಯಾಯ ಡಿಪೋಗಳ ಕೆಳಭಾಗದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಚೌಬೀನಾವನ್ನು ಬಹಿರಂಗವಾಗಿ ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ವಿಕ್ರಯ ಮಾಡಲ್ಪಡುತ್ತೆ:—

ನಂಬರು	ನಾಟಾಗಳ ಜಾತಿ	ದಾನಿವಾಸ ಡಿಪೋ 22—11—1907		ಟಂಕೀಪುರ ಡಿಪೋ 25—11—1907		ತರೀಕೆರೆ ಡಿಪೋ 27—11—1907		ಷರಾ
		ಅದದು	ಅಡಿ	ಅದದು	ಅಡಿ	ಅದದು	ಅಡಿ	
1	ಸಾಗುವಾನಿ ನಾಟಾಗಳು ..	...		5	160	70	1,500	
2	ಡಿಟೋ ಬೆಲಗುಗಳು ..	4	22	...	...	30	300	
3	ಡಿಟೋ ತೀರುಗಳು	...	...	...	...	...	3,000	
4	ಹೊನ್ನೆ ನಾಟಾ ...	124	3,130	100	3,000	20	500	[illegible]
5	ಮತ್ತಿ ನಾಟಾ ..	134	4,600	60	1,900	40	1,000	
6	ಹುನ್ನಾಲು ನಾಟಾ ...	15	340	10	300	40	1,000	
7	ನಂದಿ ನಾಟಾ	12	240	...	...	40	1,000	
8	ಯತ್ತ್ಯಾಗದ ನಾಟಾ ...	20	500	30	900	20	500	
9	ಬೀಟೆ ನಾಟಾ	10	300	25	860	20	500	
10	ಮಶಿ ನಾಟಾ ..	10	300	...	...	4	100	
11	ನೇರಲು ನಾಟಾ ...	2	54	...	...	...	...	

ಷರತ್ತುಗಳು:—ಖಡ ದರಖಾಸ್ತುದಾರನು ಹರಾಜು ಆದ ಮೂರು ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಶೇಕಡ 25ರಂತೆ ಆಗುವ ಮೊಬಲಗನ್ನು ಹತ್ತಿರ ಇರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಗುರುಪಡಿಸುತ್ತೆ.

2. ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 (ಮೂವತ್ತು) ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟಿರುವ ಡಿಪಾಜಿಟ ಮೊಬಲಗು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ ಮರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.

3. ತಾನು ಹರಾಜಿನಲ್ಲಿ ಪಡದಿರುವ ಚೌಬೀನಾ ಕಿಮ್ಮತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಪ್ತು ಮಾಡಕೂಡದು.

4. ಹರಾಜು ತಾರೀಖು ಲಾಗಾಯಿತು 90 (ತೊಂಭತ್ತು) ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಗಳಿಂದ ಸಾಗಿಸದೇ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಒಂದಕ್ಕೆ ಶೇಕಡ ಒಂದಕ್ಕೆ 12 ರೂಪಾಯಿನ ಮೇರೆ ಡಿಪೋ ಭಾಡಾ ವಸೂಲ್ ಮಾಡಲಾಗುತ್ತೆ.

ಬಿ. ಹೀರಾಸಿಂಗ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕಡೂರು ಡಿಸ್ಟ್ರಿಕ್ಟ್.

...ಡಿಸ್ಟ್ರಿಕ್ಟ್.

ಸರ್ಕಾರಕ್ಕೆ ... ತಾಲ್ಲೂಕು ಮಂಡಿಕಲ್ ಹೋಬಳಿ ಕಾಯಂಗುತ್ತ ಚೀಗಾನಹಳ್ಳಿ ಗ್ರಾಮವು 190... ಳ್ಳಾಪುರ ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

ಷರಾ.— ...ರ್ ತಾರೀಖು 10ನೆ ಮರ್ಕ್ಯಂನ ಮೈಸೂರು ಗೆಜೆಟ್ IIನೆ ಭಾಗದ 497ನೆ ಪುಟ... ನೋಡಬಹುದು.

ಬಿ. ವೆಂಕೋಬರಾವ್,
ಫಾರ್ ಡೆಪ್ಯುಟಿ ಕಮಿಷನರಿ.

ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮೆ.

ತಾರೀಖು 3—5ನ ಅಕ್ಟೋಬರ್ 1907.

190... ಇಸವಿ ನವಂಬರ್ 8ನೆ ಮರ್ಕ್ಯಂ F. L. 3304-6—S. R. 146-05-7ನೆ ಗೌರ್ನಮೆಂಟ್ ಆರ್ಡರು ಅನುಸರಿಸಿ ಈ ವ...ಲಕ ತಿಳಿಯಪಡಿಸುವದೇನಂದರೆ,—

ಡಿಸ್ಟ್ರಿ...ಮಜಕೂರು ಇನಾಂ ಗ್ರಾಮಗಳ ಶೇಂದಿ ಹುಟ್ಟುವಳಿ ಹಕ್ಕು ತಹಲ್ ವರಿಗೂ ಗೌರ್ನಮೆಂಟನಿಂದ ಸ್ಥಿರಪಡಿಸಲ್ಪಡದೆ ಇರುವ ...ೀ ಪರಕಾಳಿಸ್ವಾಮಿಗಳವರ ಮಠ ಮತ್ತು ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠಗಳಿಗೆ ಶೇರಿದ ಇನಾಂ ಗ್ರಾಮಗಳ ಶೇಂದಿ ...ಟ್ಟುವಳಿಗೆ ಮಠದ ಹಕ್ಕನ್ನು ಸ್ಥಿರಪಡಿಸುವ ವಿಚಾರದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಎಕ್ಸೈಜು ಆಫಿಸರವರು 1—11—190...ನೆ ತಾರೀಖಿನ ದಿವಸ ಅವರ ಆಫೀಸಿನಲ್ಲಿ ಅವಶ್ಯವಿರುವ ವಿಚಾರಣೆಯನ್ನು ನಡಿಸುತ್ತಾರೆ.

ಸದ...ಮಠಗಳ ಏಜಂಟರುಗಳು ಮೇಲ್ಕಂಡ ಆಫಿಸರ ಬಳಿ ಸದರಿ ತಾರೀಖಿನಲ್ಲಿ ತಮ್ಮಲ್ಲಿ ಇರತಕ್ಕ ಸನ್ನದು, ಇನಾಂ ಟೈಟಲ್ ...ಡು, ಮುಚ್ಚಳಿಕೆ ವಗೈರೆ ಸಕಲ ದಾಖಲಾತಿಗಳನ್ನು ಹಾಜರ್ಪಡಿಸತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ರೂಲ್ಸು ಮೇರೆ...ು ಜರಗಿಸುತ್ತೆ. ನಂತರ ಬರುವ ಯಾವ ತಕರಾರನ್ನೂ ಅಂಗೀಕರಿಸಲಾಗಲಾರದೆಂದು ಪ್ರಸಿದ್ಧಪಡಿಸಿದೆ.

ಟಿ. ಕೆ. ಸುಂದರರಾಜೈಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ಅಬ್ಸ್ಟ್ರಾಕ್ಟ್ ನೋಟಿಫಿಕೇಷನ್.

ಶಿಕಾರಿಪುರ ತಾಲ್ಲೂಕು ಕಣ್ಣೂರು ಇನಾಂ ಗ್ರಾಮದ ವೃತ್ತಿವಂತರಿಂದ ಸರಕಾರಕ್ಕೆ ಬರಬೇಕಾದ ಜೋಡೀ ಮೊಬಲಗು ಬಾರದೇ ಇರುವದರಿಂದ ತಾರೀಖು 10ನೆ ಅಕ್ಟೋಬರ್ IIನೆ ಭಾಗದ ಮೈಸೂರು ಗೆಜೆಟ್ಟಿನ 500ನೆ ಸಂಪುಟದಲ್ಲಿ ಪ್ರಾಯಿಷು ಆಗಿರುವ ಡಿಟೇಲ್ಡ್ ನೋಟಿಫಿಕೇಷನ್ನಲ್ಲಿ ನಮೂದಿಸಿ ಇರುವ ಈ ಗ್ರಾಮವು ತಾರೀಖು 11—11—1907ನೆ ಸೋಮವಾರ ದಿವಿ 11 ಘಂಟೆಗೆ ಶಿಕಾರಿಪುರ ಮೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಮಹಮ್ಮದ್ ರಜಾ,
ಫಾರ್ ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಸೀ 1907ನೆ ಇಸವಿ ಜುಲೈ ತಾರೀಖು 30ನ ಮಂಗಳವಾರ ಚಿಕ್ಕಮಗಳೂರಿನಲ್ಲಿ ನಡೆದ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗ್ ಪ್ರೊಸೀಡಿಂಗ್ಸ್.

ಪ್ರೆಸಿಡೆಂಟ್.

ಬಿ. ಜೆ. ಕೊಮಾರಸ್ವಾಮಿನಾಯಕ, ಎಸ್ಕ್ವೈಯರ್, ಬಿ. ಎ.

ಉದ್ಯೋಗ ಪ್ರಯುಕ್ತ ಮೆಂಬರುಗಳು.

ಹಾಜರು.

2. ಮೆ|| ಆರ್. ಶ್ರೀಕಂಠಯ್ಯನವರು, ಟ್ರೆಜರಿ ಅಸಿಸ್ಟೆಂಟ್ ಕಮಿಷನರು ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ವೈಸ್ ಪ್ರೆಸಿಡೆಂಟರು.
3. „ ಹೆಚ್. ಜೆ. ಮೊಲ್ಲಾಯಿ ಸಾಹೇಬರು, ಎಗ್ಜಿಕ್ಯೂಟಿವ ಇಂಜಿನಿಯರು.
4. „ ಕೆ. ಎಂ. ಅಪ್ಪಯ್ಯನವರು, ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು.
5. „ ಹೆಚ್. ಎನ್. ವೆಂಕಟರಮಣಯ್ಯನವರು, ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರು.
6. ಕಡೂರು ತಾಲ್ಲೂಕು ಅಮಲ್ದಾರು ವಿನಹ ಬಾಕಿ ಎಲ್ಲಾ ತಾಲ್ಲೂಕುಗಳ ಅಮಲ್ದಾರು ಮತ್ತು ಡೆಪ್ಯುಟಿ ಅಮಲ್ದಾರು ಸಹಾ ಹಾಜರಿರುತ್ತಾರೆ.

ಗೈರ [illegible]

ಮೆ॥ ಡಿ. ಎಂ. ನರಸಿಂಗರಾಯರು, ಡಿವಿಜನಲ್ ಅ[illegible]
ಕಡೂರು ತಾಲ್ಲೂಕು ಅಮಲ್ದಾರ್.

ಉದ್ಯೋಗ ಪ್ರಯುಕ್ತ[illegible]

7. ಮೆ॥ ಬಿ. ರಂಗಣ್ಣನವರು.
8. ,, ದಾವುದ್ ಸಾಹೇಬರು.
9. ,, ಪಿ. ರಂಗಂಣನವರು.
10. ,, ಸಿ. ಶ್ರೀನಿವಾಸರಾಯರು.
11. ,, ಟಿ. ನರಸಿಂಹೈಯ್ಯಂಗಾರ್ರು.
12. ,, ಎಸ್. ಪರ್ವತಪ್ಪನವರು.
13. ,, ಎಚ್. ಪಿಲ್ಕಿಂಗ್ಟನ್ ಸಾಹೇಬರು.
14. ,, ಟಿ. ಶ್ರೀನಿವಾಸರಾಯರು.
15. ,, ವೈ. ಶಾಂತಪ್ಪ ಶೆಟ್ಟರು.
16. ,, ಚನ್ನಕೇಶವರಾಯರು.
17. ,, ಎ. ಶಾಮಂಣನವರು.
18. ,, ಎ. ಚಂದ್ರೇಗೌಡರು.
19. ,, ಜೆ. ಗಣೇಶರಾಯರು.
20. ,, ಎಂ. ರಾಮಚಂದ್ರರಾಯರು.
21. ,, ಕೆ. ಗೋವಿಂದಪ್ಪನವರು
22. ,, ಹಾಲಗಾರ್ ವೆಂಕಟಸುಬ್ಬಯ್ಯನವರು.
23. }
24. } ಸ್ಥಳ ಖಾಲೀ.
25. }

1. ಕಂಟ್ರೋಲರವರಿಂದ ತನಿಖೆಯಾಗಿ ಬಂದ ಡಿಸ್ಟ್ರಿಕ್ಟ್ ಫಂಡು 1907ನೆ ಮಾರ್ಚಿ ಆಖೈರು ವರಿಗ [illegible] ಲೆಖ್ಖಗಳು ಬೋರ್ಡಿನಲ್ಲಿ ಓದಿ ರಿಕಾರ್ಡು ಮಾಡಲಾಯಿತು.

		ರೂ. ಆ. ಪೈ.
1906ನೆ ಜುಲೈ 1ರಲ್ಲು ಶಿಲ್ಕು	..	2,458—10— 6
1906ನೆ ಜುಲೈ 1ರ ಲಾಗಾಯಿತು 1907ನೆ ಇಸವಿ ಮಾರ್ಚಿ 31ರ ವರಿಗೆ ಜಮಾ		38,205— 1—11
ಜುಮ್ಲಾ	...	40,663—12— 5
1907ನೆ ಮಾರ್ಚಿ 31ರ ವರಿಗೆ ಖರ್ಚು ...	... ..	37,407— 3— 1
ಬಾಕಿ	.. ...	3,256— 9— 4

2. ಚಿಕ್ಕಮಗಳೂರು, ತರೀಕೆರೆ ಮತ್ತು ಬೀರೂರು ಹಿಂದೂ ವೈದ್ಯಶಾಲೆಗಳಲ್ಲಿ 1906ನೆ ಜುಲೈ 1ರ ಲಾಗಾಯಿತು 1907ನೆ ಜೂನ್ ಆಖೈರು ವರಿಗೆ ಚಿಕಿತ್ಸೆ ಹೊಂದಿದ ರೋಗಿಗಳ ಸಂಖ್ಯೆಗಳನ್ನು ತೋರಿಸತಕ್ಕ ಲೆಖ್ಖಗಳನ್ನು ಓದಿ ರಿಕಾರ್ಡು ಮಾಡಲಾಯಿತು. ಸದರಿ ಸಂಖ್ಯೆಗಳು ಈ ಕೆಳಗೆ ನಮೂದಿಸಿರುವ ಮೇರೆ ಇರುತ್ತವೆ.

			1906—07	1905—06.
ಚಿಕ್ಕಮಗಳೂರು	...	...	15,910.	16,383.
ತರೀಕೆರೆ	..	...	15,147.	11,281.
ಬೀರೂರು	...	...	11,924.	7,120.

3. ದೊಡ್ಡಿಗಳಲ್ಲಿ ಸೇರಿಸಲ್ಪಟ್ಟ ಆಡುಗಳಿಗೆ ಜುರ್ಮಾನೆಯನ್ನು ಹೆಚ್ಚಿಸಬೇಕೆಂಬ ಸರ್ 1906ನೆ ಇಸವಿಯ ದಸರಾ ಪ್ರಜಾಪ್ರತಿನಿಧಿ ಸಭೆಯ 230ನೆ ನಂಬರು ಪ್ರಸ್ತಾಪವನ್ನು ಲೋಕಲ್ ಬೋರ್ಡುಗಳ ಆಲೋಚನೆ ಬಗ್ಗೆ ಮುಲಫೂಫಿಸಿ ಕಳುಹಿಸಿದ 11—1—07ನೆ ಮುರ್ಸ್ಸಂ ಸಕ್ರಿಟರಿಯವರ 6217-24—L. F. 196-06—1ನೆ ನಂಬರು ಡಾಕೆಟ್ ಓದಲಾಗಿ ಮಲ್ನಾಡಿನಲ್ಲಿ ಆಡುಗಳಿಗೆ ಜುರ್ಮಾನೆಯನ್ನು 2 ಆಣೆಗಳಿಂದ 3 ಆಣೆಗಳಿಗೆ ಹೆಚ್ಚಿಸಬೇಕೆಂತಲೂ, ಮೈದಾನಿನಲ್ಲಿ ಒಂದು ಆಣೆಯಿಂದ 2 ಆಣೆಗಳಿಗೆ ಹೆಚ್ಚಿಸಬೇಕೆಂತಲೂ ತೀರ್ಮಾನಿಸಲಾಯಿತು.

4. ಕೂಡ್ಲೂರಿಗೆ ಕುಡಿಯುವ ನೀರಿನ ಆಸರೆಯಾಗಿರುವ ಕೆರೆಯನ್ನು ಡಿಸ್ಟ್ರಿಕ್ಟ್ ಫಂಡಿನಿಂದ ರಿಪೇರಿ ಮಾಡಿಸಬೇಕಂತ ಶಿಫಾರ್ಸು ಮಾಡಿರುವ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ 22—3—07ನೆ ಮುರ್ಸ್ಸಂ 837ನೆ ಯಾದಿ ಓದಲಾಗಿ ಈ ಕಾಮಗಾರಿ ಬಗ್ಗೆ ಒಂದು ಅಂದಾಜು ತಯಾರ್ಮಾಡಿಸಲು ಎಗ್ಸಿಕ್ಯೂಟಿವ್ ಇಂಜನಿಯರವರಿಗೆ ಬರೆಯಬೇಕಾಗಿ ತೀರ್ಮಾನಿಸಲಾಯಿತು.

5. ನಾರ್ವೆ ಜಂಗಾಲಿಗೆ ಒಂದು ದೋಣಿ ಸರಬರಾಯಿ ಆಗತಕ್ಕ ಬಗ್ಯೆ 120 ರೂಪಾಯಿನ ಒಂದು ಅಂದಾಜಾ ಮುಲಪ್ರಾಫಿಸಿ ಹಣ ಒದಗಿಸಿಕೊಡುವ ವರಿಗೂ ಸದರಿ ಕಾಮಗಾರಿಯನ್ನು ಷುರೂ ಮಾಡುವದಕ್ಕೆ ಆಗುವದಿಲ್ಲವೆಂತ ಸಹಾ ತಲ್ಪಿದ 23—4—07ನೆ ಮುರ್ಸ್ಕಂ 110ನೆ ನಂಬರು ಕಡೂರು ಡಿವಿಜನ್ ಎಕ್ಸಿಕ್ಯೂಟಿವ ಇಂಜನಿಯರ ಡಾಕೆಟ ಒದಲಾಗಿ ನಾರ್ವೆ ಕಡವಿಗೆ ಒಂದು ದೋಣಿಯನ್ನು ಸರಬರಾಯಿ ಮಾಡಿಸಬೇಕಾಗಿ ತೀರ್ಮಾನಿಸಲಾಯಿತು.

6. ಅಣಬೂರು ಕಡವಿನ ಉಭಯ ಪಾರ್ಶ್ವದಲ್ಲಿಯೂ ಇರತಕ್ಕ ರಸ್ತೆಯನ್ನು ಮ|| ಪ್ಲೇಫೇರು ಸಾಹೇಬರು ಕೇಳಿಕೊಳ್ಳುವ ಮೇರೆ ರಿಪೇರಿ ಮಾಡಬೇಕೆಂಬ ಮೂಡಿಗೆರೆ ತಾಲ್ಲೂಕು ಬೋರ್ಡಿನ ರೆಜಲ್ಯೂಷನ್ ಮುಲಪ್ರಾಫಿಸಿ ಬಂದ ಮೂಡಿಗೆರೆ ತಾಲ್ಲೂಕು ಅಮಲ್ದಾರ್ರವರ 317ನೆ ನಂಬರ ರಿಪೋರ್ಟು ಒದಲಾಗಿ ಸದ್ಯಕ್ಕೆ ಈ ರಸ್ತೆಯನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಸಾಲಾಬಾದು ರಿಪೇರಿ ಮಾಡಿಸಬೇಕೆಂತ ತೀರ್ಮಾನಿಸಲಾಯಿತು.

7. ಸರ್ 1907ನೆ ಇಸವಿ ಫೆಬ್ರವರಿ 28ನೆ ತಾರೀಖಿನಲ್ಲಿ ನಡದ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿನಲ್ಲಿ ಚಿಕ್ಕಮಗಳೂರು ಹಿಂದೂ ವೈದ್ಯಶಾಲೆಗೆ 7 ರೂಪಾಯಿ ತಲಬುಳ್ಳ ಒಬ್ಬ ಕಾಂಪೌಂಡರನ್ನು, ಹಾಲಿ ಅವುಷಧದ ಖರ್ಚಿಗೆ ಕೊಡುತ್ತಲಿರುವದಕ್ಕಿಂತಲೂ ಇನ್ನು 10 ರೂಪಾಯಿಗಳನ್ನು ಜಾಸ್ತಿ ಕೊಡಬೇಕೆಂತಲೂ ಸಹಾ ಬಂದಿದ್ದ 19ನೆ ನಂಬರು ಪ್ರಸ್ತಾಪವನ್ನು ಮತ್ತು ಅದೇ ವಿಚಾರದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರ ತೀರ್ಮಾನವನ್ನು ಒದಲಾಗಿ ಅದನ್ನು ಮಂಜೂರು ಮಾಡಬಹುದಾಗಿ ತೀರ್ಮಾನಿಸಲಾಯಿತು.

8. ಬೋರ್ಡ್ ಪ್ರೊಸೀಡಿಂಗ್ಸ್ನ ಜೊತೆಯಲ್ಲಿ ಮೆಂಬರುಗಳ ಲೀಸ್ಟನ್ನು 23—4—07ನೆ ಮುರ್ಸ್ಕಂನಲ್ಲಿ ಮಾಡಿರುವ ಗೌರ್ನಮೆಂಟ ಆರ್ಡರು ಅನುಸರಿಸಿ ಟೈಪಿನಲ್ಲಿ ಬರದಿಟ್ಟುಕೊಳ್ಳಬೇಕೆಂತಲೂ ಹಾಜರಿರುವ ಮೆಂಬರುಗಳ ಹೆಸರನ್ನು ತೋರಿಸುವದಕ್ಕೆ P ಮತ್ತು ಗೈರ್ ಹಾಜರಾದವರನ್ನು ತೋರಿಸುವದಕ್ಕೆ A ಎಂಬ ಅಕ್ಷರವನ್ನು ಉಪಯೋಗಿಸಬೇಕೆಂತಲೂ, ಸಹಾ ಹೇಳುವ 11732-9—Ml. (51-06)— 28ನೆ ನಂಬರು 12—6—07ನೆ ಮುರ್ಸ್ಕಂ ಗೌರ್ನಮೆಂಟ ಆರ್ಡರು ಸಹಾ ಒದಲಾಗಿ ಅವಶ್ಯಕವಿರುವಷ್ಟು ಮೆಂಬರುಗಳ ಲೀಸ್ಟನ್ನು ಒಂದೇ ಆವರ್ತಿ ಟೈಪಿನಿಂದ ಪ್ರಿಂಟ ಮಾಡಿಸಿ ಇಟ್ಟುಕೊಳ್ಳಬೇಕಾಗಿ ತೀರ್ಮಾನಿಸಲಾಯಿತು.

9. ಹರಿಹರಪುರ ಆಸ್ಪತ್ರೆಯನ್ನು ಬಾಳೂರಿಗೆ ವರ್ಗಾಯಿಸತಕ್ಕ ವಿಚಾರದಲ್ಲಿ ಬೋರ್ಡಿನವರ ಅಭಿಪ್ರಾಯ ತಿಳಿಸಬೇಕಾಗಿ ತಲ್ಪಿದ 21—6—07ನೆ ಮುರ್ಸ್ಕಂ 12035—L. B. 408ನೆ ನಂಬರು ಗೌರ್ನಮೆಂಟ ಆರ್ಡರು ಒದಲಾಗಿ ಬೋರ್ಡಿನಲ್ಲಿ ಹಾಜರಿದ್ದವರ ಪೈಕಿ ಹೆಚ್ಚು ಮೆಂಬರುಗಳು ಹರಿಹರಪುರದಿಂದ ಬಾಳೂರಿಗೆ ವರ್ಗಾಯಿಸಲು ಇಷ್ಟಪಡುತ್ತಾರೆ.

10. ಅಂಬಿನಕೊಡಗಿಯಲ್ಲಿ ಒಂದು ದೋಣಿಯನ್ನು ಇಡಿಸಬೇಕೆಂಬ ಮೂಡಿಗೆರೆ ತಾಲ್ಲೂಕು ಬೋರ್ಡಿನವರ 25—6—07ನೆ ಮುರ್ಸ್ಕಂ 312ನೆ ಮೂಡಿಗೆರೆ ತಾಲ್ಲೂಕು ಅಮಲ್ದಾರ್ರವರ ರಿಪೋರ್ಟು ಒದಲಾಗಿ ಡಿಸ್ಟ್ರಿಕ್ಟ್ ಫಂಡು ಖರ್ಚಿನಿಂದ ಒಂದು ದೋಣಿ ಇಡಿಸಬೇಕಾಗಿ ತೀರ್ಮಾನಿಸಲಾಯಿತು.

11. ಆಯುರ್ವೇದ ವಿದ್ಯೆಯಲ್ಲಿ ತಯಾರಾದ ಜನಗಳನ್ನು ಮಾಹೆಯಾನಾ 10 ರೂಪಾಯಿಗಳ ತಲಬಿನಿಂದಲೂ ಮತ್ತು ಅವುಷಧಿಗಳ ಬಗ್ಯೆ 5 ರೂಪಾಯಿ ಖರ್ಚಿನಿಂದಲೂ ಸಹಾ ಗ್ರಾಮಾಂತರಗಳಲ್ಲಿ ಅವುಷಧ ಕೊಡತಕ್ಕ ಬಗ್ಯೆ ನೇಮಿಸುವದು ಅನುಕೂಲವೆಂತ ತಲ್ಪಿದ 3—5—07ನೆ ಮುರ್ಸ್ಕಂ 10590-602—ಮೆಡಿಕಲ 297—06—1ನೆ ನಂಬರು ಗೌರ್ನಮೆಂಟ ಆರ್ಡರ್ ಒದಲಾಗಿ ಈ ವಿಷಯವನ್ನು ಕುರಿತು ತಾಲ್ಲೂಕು ಬೋರ್ಡಿನವರು ಆಲೋಚಿಸಬೇಕಾದ್ದೆಂತ ತೀರ್ಮಾನಿಸಲಾಯಿತು.

12. 50 ಮನೆಗಳಿಗಿಂತ ಜಾಸ್ತಿ ಮನೆಗಳಿರುವ ಗ್ರಾಮಗಳಿಗೆ ಸ್ಯಾನಿಟೇಷನ್ ರೂಲ್ಸು ಜಾರಿಗೆ ತರತಕ್ಕ ವಿಚಾರದಲ್ಲಿ ಬೋರ್ಡಿನವರ ಅಭಿಪ್ರಾಯ ಅವಶ್ಯಕವಿರುತ್ತೆಂತ ತಲ್ಪಿದ 11—1—07ನೆ ಮುರ್ಸ್ಕಂ 6233-40—L. F. 190—06—1ನೆ ನಂಬರು ಗೌರ್ನಮೆಂಟ ಆರ್ಡರು ಒದಲಾಗಿ ಮಲನಾಡಿನಲ್ಲಿ 25 ಮನೆಗಳಿಗೆ ಜಾಸ್ತಿ ಇರತಕ್ಕ ಗ್ರಾಮಗಳಿಗೂ ಮತ್ತು ಮೈದಾನಿನಲ್ಲಿ 50 ಮನೆಗಳಿಗಿಂತ ಹೆಚ್ಚು ಮನೆಗಳಿರತಕ್ಕ ಗ್ರಾಮಗಳಲ್ಲಿಯೂ ಸಹಾ ಜಾರಿಗೆ ತರಬೇಕೆಂತ ತೀರ್ಮಾನಿಸಲಾಯಿತು.

13. ಚಾಲ್ತಿ ಸಾಲಿನಲ್ಲಿ ನಡಿಯಬೇಕಾಗಿರುವ ಈ ಕೆಳಗೆ ನಮೂದಿಸಿರುವ ಬಾಬತು ಕಾಮಗಾರಿಗಳ ಬಗ್ಯೆ ಅಂದಾಜಾಗಳನ್ನು ಒದಲಾಯಿತು:—

		ರೂ.
1.	ಅಜ್ಜಂಪುರದ ಮುಸಾಫರಖಾನೆ ರಿಪೇರಿ ಅಂದಾಜಾ	655
	ಈ ಕಾಮಗಾರಿ ಮಂಜೂರು ಮಾಡತಕ್ಕ ಬಗ್ಯೆ ಗೌರ್ನಮೆಂಟಿಗೆ ಬರಿಸಬೇಕಾಗಿ ತೀರ್ಮಾನಿಸಲಾಯಿತು.	
2.	ಸಂತವೇರಿಯಲ್ಲಿ ಒಂದು ಭಾವಿಗೆ ಕಲ್ಲು ಕಾಂಗಾರಿ ಮಾಡಿಸತಕ್ಕ ಬಗ್ಯೆ ಮಂಜೂರು ಮಾಡಿದೆ. ...	207
3.	ದೇವನೂರಿನಲ್ಲಿರತಕ್ಕ ಭಾವಿ ರಿಪೇರಿ ಬಗ್ಯೆ ಮಂಜೂರು ಮಾಡಿದೆ. ...	33
4.	ಗೋಣೀಬೀಡು ಮುಸಾಫರಖಾನೆ ರಿಪೇರಿ ಬಗ್ಯೆ ಮಂಜೂರು ಮಾಡಿದೆ. ...	89
5.	ಕೊಪ್ಪ ಮುಸಾಫರಖಾನೆ ರಿಪೇರಿ ಬಗ್ಯೆ ಮಂಜೂರು ಮಾಡಿದೆ. ...	50
6.	ವಸ್ತಾರೆಯಲ್ಲಿ ಕುಡಿಯುವ ನೀರಿನ ಹೊಂಡವನ್ನು ರಿಪೇರಿ ಮಾಡತಕ್ಕ ಬಗ್ಯೆ ಮಂಜೂರು ಮಾಡಿದೆ. ...	499
7.	ಅಂಬಳೆ ಹೊಂಡದ ತೂಬನ್ನು ಅಜಮಾಯಿಷಿ ಮಾಡಿ ಮುಚ್ಚತಕ್ಕ ಬಗ್ಯೆ ಮಂಜೂರು ಮಾಡಿದೆ. ...	490
8.	ಇಂದ್ರಾವಾರದ ಹೊಂಡದ ರಿಪೇರಿ ಬಗ್ಯೆ ಮಂಜೂರು ಮಾಡಿದೆ. ...	440
9.	ತಂಗಲಿಯಲ್ಲಿ ದೊಡ್ಡಿ ರಿಪೇರಿ ಬಗ್ಯೆ ಮಂಜೂರು ಮಾಡಿರುತ್ತೆ. ...	164

14. ಚಿಕ್ಕಮಗಳೂರಿನಿಂದ ಮಹರ್ನವಮಿ ಮಂಟಪಕ್ಕೆ ಬಂದು ರಸ್ತೆ ಹಾಕತಕ್ಕ ಬಗ್ಗೆ ತಯಾರಾಗಿ ಬಂದಿದ್ದ 331 ರೂಪಾಯಿಗಳ ಅಂದಾಜಾ ಬಂದನ್ನು ಓದಲಾಗಿ ಈ ರಸ್ತೆಯು ಗ್ರಾಮಾಂತರಗಳಲ್ಲಿರತಕ್ಕ ಜನಗಳಿಗೆ ಉಪಯೋಗವಿಲ್ಲದೆ ಇರೋಣದ ರಿಂದಲೂ, ಚಿಕ್ಕಮಗಳೂರು ಟವರ್ನನಲ್ಲಿರತಕ್ಕ ಜನಗಳ ಪೈಕಿ ಮಹರ್ನವಮಿ ಮಂಟಪದ ಹತ್ತರ ಟವರ್ನನಲ್ಲಿ ಪ್ಲೇಗು ಉಂಟಾದಾಗ್ಯೆ ಷೆಡ್ಡುಗಳನ್ನ ಹಾಕಿದವರಿಗೆ ಮಾತ್ರ ಉಪಯೋಗವಾಗಿರುವದರಿಂದ ಈ ರಸ್ತೆಗೆ ತಗಲುವ ಖರ್ಚಿನ ಪೈಕಿ ಯಾವ ಭಾಗವನ್ನೂ ಡಿಸ್ಟ್ರಿಕ್ಟ ಬೋರ್ಡಿನವರು ಕೊಡಲು ಸಿದ್ಧನಾಗಿಲ್ಲವೆಂತ ತೀರ್ಮಾನಿಸಲಾಯಿತು.

15. ಮೆ|| ಬರ್ವರ ಸಾಹೇಬರಿಗೆ ಸೇರಿದ ಹುಲುಗೆರೆಯ ಸ್ಟೇಟಿನಲ್ಲಿ ಬಂದು ದೊಡ್ಡಿ ಏರ್ಪಡಿಸುವದರಿಂದ ಪಬ್ಲಿಕ್ಕಿಗೆ ಉಪಯೋಗವಿಲ್ಲವೆಂಬ ಚಿಕ್ಕಮಗಳೂರು ತಾಲ್ಲೂಕು ಬೋರ್ಡಿನವರ ತೀರ್ಮಾನವನ್ನು ಮಲಪೂಫಿಸಿ ಬಂದ 25—7—07ನೆ ಮರ್ಸ್ಸುಂ 15ನೆ ನಂಬರು ರಿಪೋರ್ಟ ಓದಲಾಗಿ ಸದರಿ ಎಸ್ಟೇಟಿನಲ್ಲಿ ಬಂದು ದೊಡ್ಡಿ ಏರ್ಪಡಿಸಬೇಕಾದ್ದು ಅನಾವಶ್ಯಕವೆಂತ ತೀರ್ಮಾನಿಸಲಾಯಿತು.

16. ಕಳೆದ ಜೂನ್ ಆಖ್ಯೈರಿಗೆ ಪೂರೈಸದೆ ಬಾಕಿ ಇರತಕ್ಕ ಮತ್ತು ಚಾಲ್ತಿ ಸಾಲಿನಲ್ಲಿ ಅವುಗಳನ್ನ ಪೂರೈಸತಕ್ಕ ಬಗ್ಗೆ 793 ರೂಪಾಯಿಗಳು ಬೇಕಾಗುವ ಕಾಮಗಾರಿಗಳ ಲೀಸ್ಟು ಬಂದು ಓದಲಾಗಿ ಸದರಿ ಲೀಸ್ಟನ್ನು ಬೋರ್ಡಿನವರು ಒಪ್ಪಿರುತ್ತಾರೆಂತಲೂ ಮತ್ತು ಈ ಕಾಮಗಾರಿಗಳು ಪೂರೈಸತಕ್ಕ ಬಗ್ಗೆ ಚಾಲ್ತಿ ಸಾಲಿನಲ್ಲಿ ಅವಶ್ಯಕವಿರುವ 793 ರೂಪಾಯಿಗಳನ್ನು ಮಂಜೂರು ಮಾಡುವಂತೆ ಗೌರ್ನಮೆಂಟಿಗೆ ಬರಿಸಬೇಕಾಗಿ ತೀರ್ಮಾನಿಸಲಾಯಿತು.

17. ಮೆ|| ಕೆ. ವೈಲಾರಿರಾಯರಿಗೆ ವರ್ಗವಾಗಿರೋಣದರಿಂದಲೂ ಮತ್ತು ಮೆ|| ವಾಟರ್ಸಯವರು ರಾಜೀನಾಮೆ ಕೊಟ್ಟಿದ್ದರಿಂದಲೂ ಅವರುಗಳ ಸ್ಥಾನದಲ್ಲಿ ಇಬ್ಬರು ಮೆಂಬರುಗಳನ್ನು ಫೈನಾನ್ಸ ಕಮಿಟಿ ಮೆಂಬರುಗಳನ್ನಾಗಿ ಚುನಾಯಿಸಬೇಕೆಂತ ಪ್ರಸ್ತಾಪ ಬಂದಿದ್ದರ ಮೇಲೆ ಮೆ|| ಡಿ. ಎಂ. ನರಸಿಂಗರಾಯರನ್ನೂ ಮತ್ತು ಮೆ|| ಬಿ. ರಂಗಣ್ಣನವರನ್ನೂ ಚುನಾಯಿಸಿರುತ್ತೆಂತ ತೀರ್ಮಾನಿಸಲಾಯಿತು.

18. ಮುಂದೆ ನಡೆಯತಕ್ಕ ದಸರಾ ಪ್ರಜಾಪ್ರತಿನಿಧಿ ಸಭೆಗೆ ಡಿಸ್ಟ್ರಿಕ್ಟ ಬೋರ್ಡಿನಿಂದ 2 ಜನ ಉದ್ಯೋಗ ಪ್ರಯುಕ್ತವಲ್ಲದ ಮೆಂಬರುಗಳನ್ನು ಚುನಾಯಿಸಬೇಕೆಂತ ಪ್ರಸ್ತಾಪ ಬಂದಿದ್ದರ ಮೇಲೆ ಮೆ|| ಬಿ. ರಂಗಣ್ಣನವರನ್ನು ಮತ್ತು ತರೀಕೆರೆ ಮೆ|| ಶ್ರೀನಿವಾಸರಾಯರನ್ನು ಚುನಾಯಿಸಿರುತ್ತೆಂತ ತೀರ್ಮಾನಿಸಲಾಯಿತು.

19. ಲಕ್ಕವಳ್ಳಿಯಿಂದ ಕತ್ತಲೇಕಾನ್ ಎಸ್ಟೇಟಿಗೂ ಅಲ್ಲಿಂದ ಮುಂದೆ ಲಿಂಗದಹಳ್ಳಿಗೂ ಬಂದು ರಸ್ತೆಯನ್ನು ಹಾಕಿಸಿಕೊಡಬೇಕೆಂತ ಕತ್ತಲೇಕಾನ್ ಎಸ್ಟೇಟ ಮಾಲೀಕರಾದ ಮೆ|| ಸಿಡ್ನಿ ಸ್ಮಿತ ಸಾಹೇಬರ ಏಜಂಟರು ಮೆ|| ಕುರ್ರಾಯವರಿಂದ ತಲಪಿದ ಲೆಟರ ಓದಲಾಗಿ ಹಣ ಒದಗಿದಾಗ್ಯೆ ಈ ವಿಚಾರವನ್ನು ಆಲೋಚಿಸಬೇಕಾಗಿ ತೀರ್ಮಾನಿಸಲಾಯಿತು.

20. ಫಾರೆಸ್ಟು ಬೆಳೆಯನ್ನು ಸಾಗಿಸುವದಕ್ಕೆ ಮಾತ್ರವೂ ಸ್ವಂತ ಕಾಫಿ ತೋಟಗಳ ಉಪಯೋಗಕ್ಕೋಸ್ಕರವೂ ಇದ್ದು ಡಿಸ್ಟ್ರಿಕ್ಟ ಫಂಡಿನಿಂದ ವಿಶೇಷ ಹಣ ಖರ್ಚು ಮಾಡಿ ಸಾಲಾಬಾದು ರಿಪೇರಿ ಮಾಡುತ್ತಲಿರುವ ಕೆಲವು ರಸ್ತೆಗಳನ್ನು ಸಾಲಾಬಾದು ರಿಪೇರಿ ಬಗ್ಗೆ ಪ್ರಾವಿನ್ಷಿಯಲ್ ಫಂಡಿಗೆ ಆಗಲಿ ಸದರಿ ರಸ್ತೆ ಚೆನ್ನಾಗಿರತಕ್ಕದ್ದರಲ್ಲಿ ಆಸಕ್ತಿಯುಳ್ಳ ಇತರರಿಗೇ ಆಗಲಿ ವಹಿಸುವದು ಉತ್ತಮವೆಂತಲೂ ಮೆ|| ಫಿಲಕಿಂಗ್ಟನ್ ಮತ್ತು ಇತರ ಮೆಂಬರುಗಳೂ ಸಹಾ ಪ್ರಸ್ತಾಪ ಮಾಡಿದ್ದರ ಮೇಲೆ ಮೆ|| ಫಿಲಕಿಂಗ್ಟನ್ ಸಾಹೇಬರವರು, ಮೆ|| ಶ್ರೀನಿವಾಸರಾಯರು, ಮೆ|| ಬಿ. ರಂಗಣ್ಣನವರು, ಮೆ|| ಡಿ. ಎಂ. ನರಸಿಂಗರಾಯರು ಮತ್ತು ಎಗ್ಜಿಕ್ಯೂಟಿವ ಇಂಜನಿಯರು ಇವರುಗಳಿಂದ ಸೇರಿದ ಬಂದು ಸಬ್ ಕಮಿಟಿ ಏರ್ಪಾಡು ಮಾಡಬೇಕೆಂತಲೂ ಅವರು ಅದನ್ನು ಪೂರ್ತಿಯಾಗಿ ವಿಚಾರ ಜರಿಗಿಸಬೇಕೆಂತಲೂ ತೀರ್ಮಾನಿಸಲಾಯಿತು.

21. ಕೊಪ್ಪದ ಆಸ್ಪತ್ರೆ ಅಸಿಸ್ಟೆಂಟರಿಗೆ ಬಂದು ವಾಸಕ್ಕೆ ಮನೆ ಮತ್ತು ವಾರ್ಡಗಳ ಸಮ್ಮೇತ ಕಟ್ಟಿಸಿ ಕೊಡಬೇಕಾಗಿ ಕಡೂರು ಡಿಸ್ಟ್ರಿಕ್ಟ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು ಪ್ರಸ್ತಾಪ ಮಾಡಿದ್ದರ ಮೇಲೆ ಮೇಲ್ಕಂಡಂತೆ ಆಸ್ಪಿಟಲ್ ಅಸಿಸ್ಟೆಂಟ ಇರತಕ್ಕ ಬಗ್ಗೆ ಬಂದು ಕ್ವಾರ್ಟರ ಮತ್ತು ವಾರ್ಡ ಸಹಾ ಅವಶ್ಯಕವಿರುವದ್ದರಿಂದ ಈ ಬಗ್ಗೆ ಅಂದಾಜಾಗಳನ್ನು ತಯಾರುಮಾಡಿಸತಕ್ಕ ಬಗ್ಗೆ ಎಗ್ಜಿಕ್ಯೂಟಿವ್ ಇಂಜನಿಯರಿಗೆ ಬರೆಸೋಣವಾಗಬೇಕೆಂತ ತೀರ್ಮಾನಿಸಲಾಯಿತು.

22. ಈ ಕೆಳಗೆ ನಮೂದಾಗುವ ಗೌರ್ನಮೆಂಟ ಆರ್ಡರು ಮತ್ತು ಇತರ ಕಾಗದಗಳು ಸಹಾ ಓದಿ ಬೋರ್ಡಿನಲ್ಲಿ ರಿಕಾರ್ಡ ಮಾಡಲಾಯಿತು.

(1) ಡಿಸ್ಟ್ರಿಕ್ಟ ಬೋರ್ಡ ಮೀಟಿಂಗುಗಳಿಗೆ ಅಮಲ್ದಾರರು ಮತ್ತು ಡೆಪ್ಯುಟಿ ಅಮಲ್ದಾರರುಗಳನ್ನು ಹಾಜರುಪಡಿಸಿಕ್ಕೊಳ್ಳಬಹುದೆಂತ 6—3—07ನೆ ಮರ್ಸ್ಸುಂ 7791-800—L. B. (170—06)-1ನೆ ಗೌರ್ನಮೆಂಟ ಆರ್ಡರು.

(2) ಸನ್ 1905—06ನೆ ಸಾಲಿಗೆ ಡಿಸ್ಟ್ರಿಕ್ಟ ಫಂಡಿನ ಮತ್ತು ಲೋಕಲ್ ಫಂಡ್ಸ ಜನರಲ್ ಲೆಖ್ಖಗಳನ್ನು ತಿಳಿವಳಿಕೆ ಬಗ್ಗೆ ಕಳುಹಿಸಿರುತ್ತೆಂತ ತಲಪಿದ 18—3—07ನೆ ಮರ್ಸ್ಸುಂ 8433-45—L. B. (18-06)—39ನೆ ನಂಬರು ಗೌರ್ನಮೆಂಟ ಆರ್ಡರು.

(3) ಸಂಸ್ಥಾನದಲ್ಲಿರತಕ್ಕ ಕಡವುಗಳ ಹತ್ತರ ಷಡ್ಡುಗಳನ್ನು ಕಟ್ಟತಕ್ಕ ವಿಚಾರದಲ್ಲಿ ಸುಂಕಗಳನ್ನು ಹಾಕತಕ್ಕ ವಿಚಾರವಲ್ಲಿ ಸಹಾ ಆರ್ಡರು ಮಾಡಿರತಕ್ಕ 15—4—07ನೆ ಮರ್ಸ್ಸುಂ 9483-90—L. B. (440-05)—10ನೆ ನಂಬರು ಗೌರ್ನಮೆಂಟ ಆರ್ಡರು.

(4) ಸನ್ 1907—08ನೆ ಸಾಲಿನ ಡಿಸ್ಟ್ರಿಕ್ಟ ಫಂಡು ಬಜೆಟ ಅಂದಾಜಾಗಳನ್ನು ಮಂಜೂರು ಮಾಡಿರುತ್ತೆಂತ ತಲ್ಪಿದ 27—4—07ನೆ ಮರ್ಸ್ಸುಂ 9920-30—L. B. (352-06)—2ನೆ ನಂಬರು ಗೌರ್ನಮೆಂಟ ಆರ್ಡರು.

(5) ತೃಪ್ತಿಕರವಾಗಿ ತಮ್ಮ ಗ್ರಾಮಗಳನ್ನು ಶುಚಿಯಾಗಿಟ್ಟುಕೊಂಡಿರುವ ಪಟೇಲರುಗಳಿಗೆ ಬಹುಮಾನ ಕೊಡತಕ್ಕ ಬಗ್ಗೆ 1908—09ನೆ ಸಾಲಿನಲ್ಲಿ ಬಡ್ಜಟ್ಟಿನಲ್ಲಿ ಹಣ ಒದಗಿಸಬೇಕಾಗಿ ತಲ್ಪಿದ 7—5—07ನೆ ಮರ್ಸ್ಸುಂ 10397-484—L. B. (363-06)—5ನೆ ನಂಬರು ಗೌರ್ನಮೆಂಟ ಆರ್ಡರು.

(6) ಕಡವುಗಳನ್ನು ಗುತ್ತಿಗೆಗೆ ಕೊಡತಕ್ಕ ಕಾಲಗಳನ್ನು ಕಮ್ಮಿ ಮಾಡಲು ಸಾಧ್ಯವಿಲ್ಲವೆಂದು ತಲಪಿದ 17-5-07ನೆ ಮರ್ಸ್ಕಂ 10774-5—L. B. (400-06)—2ನೆ ನಂಬರು ಗೌರ್ನಮೆಂಟ್ ಆರ್ಡರು.

(7) ಡಿಸ್ಟ್ರಿಕ್ಟು ಬೋರ್ಡು ಮೆಂಬರುಗಳಿಗೂ ತಾಲ್ಲೂಕು ಬೋರ್ಡು ಮೆಂಬರುಗಳಿಗೂ ಟ್ರಾವಲಿಂಗ್ ಅಲೋಯನ್ಸ್ ವಿಚಾರದಲ್ಲಿ ಏನೂ ವ್ಯತ್ಯಾಸವಿರಕೂಡದೆಂತ ಬೆಂಗಳೂರು ಮತ್ತು ಮೈಸೂರು ಡಿಸ್ಟ್ರಿಕ್ಟ್ ಬೋರ್ಡುಗಳ ಅಭಿಪ್ರಾಯಗಳನ್ನು ರಿಕಾರ್ಡು ಮಾಡಿಕೊಂಡಿರುತ್ತೆಂತ ತಲ್ಪಿದ 15-6-07ನೆ ಮರ್ಸ್ಕಂ 11894-904—L. B. (173-06)—6ನೆ ನಂಬರ್ ಗೌರ್ನಮೆಂಟ್ ಆರ್ಡರು.

(8) ಕೊಪ್ಪ-ಬಾಗಿ ರಸ್ತೆಯ ಪೈಕಿ 2¼ ಮೈಲಿಗಳನ್ನು ಸಾಲಾಬಾದು ರಿಪೇರಿ ಬಗ್ಯೆ ಪ್ರವಿನ್ಷಿಯಲ್ ಫಂಡ್ಸಿನಿಂದ ವಹಿಸಿರುವ ಸಬಬು ಉಳಿಯುವ 67½ ರೂಪಾಯಿಗಳನ್ನು ಇದೇ ರಸ್ತೆಯ ಪೈಕಿ ಡಿಸ್ಟ್ರಿಕ್ಟ್ ಫಂಡಿನಿಂದ ಸಾಲಾಬಾದು ರಿಪೇರಿಯಾಗುತ್ತಲಿರುವ 3¾ ಮೈಲಿಗಳಿಗೆ ಹಾಲಿ ಕೊಡುತ್ತಲಿರುವ ಮೈಲಿ ಒಂದರ 30 ರೂಪಾಯಿಗಳ ಗ್ರಾಂಟನ್ನು 48 ರೂಪಾಯಿಗಳಿಗೆ ಹೆಚ್ಚಿಸಲು ಉಪಯೋಗಿಸಬಹುದೆಂತ ತಲ್ಪಿದ 18-6-07ನೆ ಮರ್ಸ್ಕಂ 11976-8—L. B. (352-06)—6ನೆ ನಂಬರು ಗೌರ್ನಮೆಂಟ್ ಆರ್ಡರು.

(9) ಸಣ 1907—08ನೆ ಸಾಲು ಬಜೆಟ್ಟನ್ನು ಹಾಸನದ ಡಿಸ್ಟ್ರಿಕ್ಟ್ ಬೋರ್ಡಿನವರು ತಯಾರುಮಾಡಿ ಕಳುಹಿಸಿರುವದನ್ನು ಅನುಸರಿಸಿ ಇತರೇ ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿಯೂ ತಯಾರುಮಾಡಿ ಕಳುಹಿಸಬೇಕೆಂತ ತಲ್ಪಿದ 24-6-07ನೆ ಮರ್ಸ್ಕಂ 12082-9—L. B. (489-06)—1ನೆ ನಂಬರ್ ಗೌರ್ನಮೆಂಟ್ ಆರ್ಡರು.

(10) ಗ್ರಾಮಗಳ ಅಭಿವೃದ್ಧಿ ಬಗ್ಯೆ ಹಣ ಒದಗಿಸುತ್ತಲಿಧಾರೆಂತಲೂ ಪ್ರತಿ ಒಂದು ಗ್ರಾಮಗಳ ಅವಶ್ಯಕತೆಯನ್ನು ನೋಡಿ ಈರೀತಿ ಮಾಡಬೇಕಾದ್ದು ಡಿಸ್ಟ್ರಿಕ್ಟ್ ಬೋರ್ಡಿನವರ ಕರ್ತವ್ಯವಾಗಿರುತ್ತೆಂತಲೂ ಈ ಬಗ್ಯೆ ಯಾವ ಕಟ್ಟಾದ ರೂಲ್ಸು ಮಾಡುವದಕ್ಕೂ ಸಾಧ್ಯವಿಲ್ಲವೆಂತಲೂ ಅವಶ್ಯಕತೆ ಬಿದ್ದಾಗ್ಯೆ ಗ್ರಾಮಗಳ ರೈತರು ಡಿಸ್ಟ್ರಿಕ್ಟ್ ಬೋರ್ಡಿನವರನ್ನು ಕೇಳಿಕೊಳ್ಳಬೇಕೆಂತಲೂ ಸಹ ತಲಪಿದ 15-7-07ನೆ ಮರ್ಸ್ಕಂ 455-63—L. B. (185-06)—11ನೆ ನಂಬರ್ ಗೌರ್ನಮೆಂಟ್ ಆರ್ಡರು.

(11) ಪಟೇಲರುಗಳಿಗೆ ಬಹುಮಾನಗಳನ್ನು ಕೊಡತಕ್ಕ ಬಗ್ಯೆ ಕೊಟ್ಟ ಸರ್ಟಿಫಿಕೇಟುಗಳ ಮೇಲೆ ಬೆಂಗಳೂರು ಡಿಸ್ಟ್ರಿಕ್ಟ್ ಫಂಡು ಎಂಬದನ್ನು ಮುದ್ರಿಸಬೇಕೆಂದು ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನವರ ಅಭಿಪ್ರಾಯವನ್ನು ಅನುಮೋದಿಶಿರುತ್ತೆಂತ ತಲ್ಪಿದ 19-7-07ನೆ ಮರ್ಸ್ಕಂ 607-14—L. B. (463-06)—2ನೆ ನಂಬರು ಗೌರ್ನಮೆಂಟ್ ಆರ್ಡರು.

23. ಮುಂದಿನ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗ್ ಸೆಪಟಂಬರ್ 25ನೆ ಬುಧವಾರ ನಡೆಯಬೇಕಾಗಿ ತೀರ್ಮಾನಿಸಲಾಯಿತು.

ಬಿ. ಜೆ. ಕೊಮಾರಸ್ವಾಮಿ ನಾಯಕ್,
ಪ್ರೆಸಿಡೆಂಟ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸಣ 1907—08ನೆ ಇಸವಿ ಮಿ|| ಅರ್ಜೀ ನಂಬರು 311.

ನೆಲಮಂಗಲದ ತಾಲ್ಲೂಕು ಬೇಗೂರಿನಲ್ಲಿದ್ದು ಮೃತಪಟ್ಟ ಚನ್ನನಂಜುಂಡೈಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರಲ್ಲಿರುವ ಚನ್ನಕ್ರಿಷ್ಣೈಯ್ಯ, ಮೃತಪಟ್ಟ ಸದರೀ ನಂಜುಂಡೈಯ್ಯನವರಿಗೆ ಖಾಸಾ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಬೇಗೂರಲ್ಲಿ ವಾಸಸ್ಥರಾಗಿ ಮೃತಪಟ್ಟ ನಂಜುಂಡೈಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 48,378—1—4 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಚನ್ನಕ್ರಿಷ್ಣೈಯ್ಯನವರ ಅರ್ಜಿಯನ್ನು ಸಣ 1907ನೆ ಇಸವಿ ನವಂಬರು ತಿಂಗಳು 1ನೆ ತಾರೀಖು ಶುಕ್ರವಾರದಲ್ಲು ಕೇಳಿ ಸರ್ಟಿಫಿಕೇಟು ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ನಂಜುಂಡೈಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸಣ 1907ನೆ ಇಸವಿ ಅಕ್ಟೋಬರು ತಿಂಗಳು 4ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸಣ 1907—08ನೆ ಇಸವಿ ಮಿ|| ಅರ್ಜೀ ನಂಬರು 341.

ಆನೇಕಲ ತಾಲ್ಲೂಕು ಹೆನ್ನಾಗರದಲ್ಲಿದ್ದು ಮೃತಪಟ್ಟ ರಡ್ಡಿ ಆವಲಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ತಾಲ್ಲೂಕು ಕಿಟ್ಟಪಾಳ್ಯದಲ್ಲಿರುವ, ಆವಲಪ್ಪನ ಮಗ 1ನೆ ಚನ್ನಪ್ಪ, 2ನೆ ಮುನಿವೆಂಕಟಪ್ಪ ಮೃತಪಟ್ಟ ಸದರೀ ಆವಲಪ್ಪನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಹೆನ್ನಾಗರದಲ್ಲಿದ್ದು ವಾಸಸ್ಥರಾಗಿ ಮೃತಪಟ್ಟ ಆವಲಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 386—8—0 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಚನ್ನಪ್ಪ, 2ನೆ ಮುನಿವೆಂಕಟಪ್ಪನವರ ಅರ್ಜಿಯನ್ನು ಸಣ 1907ನೆ ಇಸವಿ ನವಂಬರು ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಆವಲಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸಣ 1907ನೆ ಇಸವಿ ಅಕ್ಟೋಬರು ತಿಂಗಳು 4ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸ್ನ 1907—08ನೆ ಇಸವಿ ಮಿ॥ ಅರ್ಜೀ ನಂಬರ್ 356.

ಬೆಂಗಳೂರು ಸಿವಿಲು ಅಂಡ್ ಮಿಲಿಟರಿ ಸ್ಟೇಷನ್ ಬ್ರಾಡವೆ ರೋಡಿನಲ್ಲಿದ್ದು ಮೃತಪಟ್ಟ ಮೇಸ್ತ್ರಿ ಅಪ್ಪಣ್ಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ತಾಲ್ಲೂಕು ಉತ್ರಹಳ್ಳಿ ಹೋಬಳಿ ಜರಗನಹಳ್ಳಿಲಿರುವ 1ನೆ ನಾರಾಯಣಸಾಮಿ, 2ನೆ ವೆಂಕಟಸಾಮಿ, ಮೃತಪಟ್ಟ ಸದರೀ ಮೇಸ್ತ್ರಿ ಅಪ್ಪಣ್ಣನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್ ಬ್ರಾಡವೆ ರೋಡಿನಲ್ಲಿ ವಾಸಸ್ತರಾಗಿ ಮೃತಪಟ್ಟ ಅಪ್ಪಣ್ಣನವರ ಜೆಂದಗಿ ಬಗ್ಗಾಗಿ ಬರತಕ್ಕ 1,250 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ನಾರಾಯಣಸಾಮಿ, 2ನೆ ವೆಂಕಟಸಾಮಿಯವರ ಅರ್ಜಿಯನ್ನು ಸ್ನ 1907ನೆ ಇಸವಿ ನವೆಂಬರು ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಪ್ಪಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ನ 1907ನೆ ಇಸವಿ ಅಕ್ಟೋಬರ್ ತಿಂಗಳು 4ನೆ ತಾರೀಖಿನಲ್ಲಿ ಕೋರ್ಟಿನ ಮೊಹರಿನಿಂ ನನ್ನ ದಸ್ತುಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಮ ಐದ್ಯರ್,
ಅಫಿಷಿಯೇಟಿಂಗ್ ಸಬಾರ್ಡಿನೇಟ್ ಜಡ್ಜ್.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಆಫೀಸ್.

ಇಸ್ತಿಹಾರ್ನಾಮೆ

ತಾರೀಖು 14ನೆ ಅಕ್ಟೋಬರ್ 1907ನೆ ಇಸವಿ.

1906ನೆ ಇಸವಿ ನವೆಂಬರ್ 7ನೆ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ 8ನೆ ಸೆಕ್ಷನ್ ಪ್ರಕಾರ ಮೈಸೂರು ಷಹರಿನ ಮ್ಯುನಿಸಿಪಲ್ ಸರಹದ್ದನ್ನು ಈ ಕೆಳಗೆ ನಮೂದಿಸುವಂತೆ ಬದಲಾಯಿಸಬೇಕೆಂದು ಉದ್ದೇಶಿಸಿ ಇರುತ್ತೆ. ಈ ಬದಲಾವಣೆ ವಿಷಯದಲ್ಲಿ ಆಕ್ಷೇಪಣೆ ಇರತಕ್ಕ ಜನಗಳು ಈ ಇಸ್ತಿಹಾರ್ ತಾರೀಖು ಲಾಗಾಯಿತು ಎರಡು ತಿಂಗಳ ವಳಗಾಗಿ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ತಮ್ಮ ಆಕ್ಷೇಪಣೆಯನ್ನು ಅದಕ್ಕೆ ಇರತಕ್ಕ ಕಾರಣಗಳೊಡನೆ ಬರಹಮೂಲಕವಾಗಿ ಬರದುಕೊಳ್ಳತಕ್ಕದ್ದೆಂದು ಇದರಿಂದ ತಿಳಿಯಪಡಿಸಿದೆ.

ಮೈಸೂರು ಷಹರ್ ಸರಹದ್ದು ಮೈಸೂರು-ಇಲವಾಲ್ಲದ ರಸ್ತೆ 1ನೆ ಫರ್ಲಾಂಗಿನಿಂದ 270 ಅಡಿ ದೂರದಲ್ಲಿ ನೆಟ್ಟು ಇರುವ ಎಲ್ಲೆ ಕಲ್ಲಿನಿಂದ ಮೊದಲು ಮಾಡಿ ಸರ್ವೆ 75ನೆ ನಂಬರ್ ಜಮೀನ್ ಪೂರ್ವಪಾರ್ಶ್ವದ ಅಂಚಿನಲ್ಲಿ ಹೊರಟು ಉತ್ತರ ದಿಕ್ಕಿಗೆ ತಿರುಗಿ ಪಡುವಾರಹಳ್ಳಿ ಗ್ರಾಮದ ಸರ್ವೆ 77, 93, 94 ಮತ್ತು 95ನೆ ನಂಬರ್ ಜಮೀನ್ ಪೂರ್ವಭಾಗದ ಸರಹದ್ದಿನ ಮಾರ್ಗವಾಗಿ ಹೊರಟು ಪಡುವಾರಹಳ್ಳಿ ಗ್ರಾಮದ ಈಶಾನ್ಯ ಭಾಗದಲ್ಲಿ ಇರುವ ಕಾಲುದಾರಿಯನ್ನು ಸಂಧಿಸಿ ಅದೇ ಗ್ರಾಮದ ಸರ್ವೆ 123ನೆ ನಂಬರ್ ಜಮೀನ್ ಪಶ್ಚಿಮ ಭಾಗದ ಅಂಚಿನಲ್ಲಿ ಹೊರಟು ಅದೇ ಗ್ರಾಮದ ಸರ್ವೆ 122ನೆ ನಂಬರ್ ಜಮೀನ್ ಆಗ್ನೇಯಭಾಗದ ವರಿಗೂ ಜೇವರಾಯನಕಟ್ಟೆ ಹಳೇ ನಾಲಾ ಅನುಸರಿಸಿ ಬಂದು ಅಲ್ಲಿಂದ ಉತ್ತರಕ್ಕೆ ತಿರುಗಿ ಸರ್ವೆ 11ನೆ ನಂಬರ್ ಜಮೀನಿನ ಪಶ್ಚಿಮ ಭಾಗದಲ್ಲಿ ಬಂದು ಸರ್ವೆ 14ನೆ ನಂಬರ್ ಜಮೀನ್ ಸುತ್ತಿಕೊಂಡು ಮಾರಗೌಡನಹಳ್ಳಿ ಗ್ರಾಮದ ಕಾಲುದಾರಿಯ ಮಾರ್ಗವಾಗಿ ಉತ್ತರಕ್ಕೆ ತಿರುಗಿ ಪಡುವಾರಹಳ್ಳಿ ಗ್ರಾಮದ ಸರ್ವೆ 15, 16, 17ನೆ ನಂಬರ್ ಜಮೀನ್ ಉತ್ತರಭಾಗದ ಎಲ್ಲೆಯನ್ನನುಸರಿಸಿ ಹೊಸ ಬಳಗುಳದ ರಸ್ತೆ ದಾಟುತ್ತದೆ. ಇಲ್ಲಿಂದ ಮುಂದೆ ಕಾಲುದಾರಿ ಮಾರ್ಗವಾಗಿ ಉತ್ತರಕ್ಕೆ ತಿರುಗಿ ಮಾರಗೌಡನಹಳ್ಳಿ ಗ್ರಾಮ ಸರ್ವೆ 29ನೆ ನಂಬರ್ ಜಮೀನ್ ಪೂರ್ವಭಾಗದ ಎಲ್ಲೆಯನ್ನನುಸರಿಸಿ ಡಿಟ್ಟೋ ಸರ್ವೆ 29ನೆ ನಂಬರ್ ಜಮೀನ್ ಈಶಾನ್ಯ ಮೂಲೆಯಲ್ಲಿ ಪೂರ್ವಕ್ಕೆ ತಿರುಗಿ ಕಾಲುದಾರಿ ಮೂಲಕ ಬಂದು ಮಾರಗೌಡನಹಳ್ಳಿ ಗ್ರಾಮದ ಸರ್ವೆ 28, 27, 17 ಮತ್ತು 16ನೆ ನಂಬರ್ ಜಮೀನುಗಳ ಉತ್ತರ ದಿಕ್ಕಿನ ಎಲ್ಲೆ ಇಟ್ಟುಕೊಂಡು ಸದರಿ ಗ್ರಾಮದ ಸರ್ವೆ 15ನೆ ನಂಬರ್ ಜಮೀನ್ ಈಶಾನ್ಯ ಮೂಲೆಯಲ್ಲಿ ಮೈಸೂರು-ಬೆಂಗಳೂರು ರೈಲು ರಸ್ತೆಯನ್ನು ದಾಟುತ್ತದೆ. ಅಲ್ಲಿಂದ ಪುನಃ ಪೂರ್ವಭಾಗಕ್ಕೆ ಹೊರಟು ಅದೇ ಗ್ರಾಮದ ಸರ್ವೆ 205ನೆ ನಂಬರ್ ಜಮೀನ್ ಉತ್ತರಭಾಗದ ಎಲ್ಲೆಯನ್ನನುಸರಿಸಿಕೊಂಡು ಹಳೆ ಬಳಗುಳದ ರಸ್ತೆಯಲ್ಲಿರುವ 2ನೆ ನಂಬರ್ ಮ್ಯುನಿಸಿಪಲ್ ಎಲ್ಲೆ ಕಲ್ಲನ್ನು ಸೇರುತ್ತದೆ.

2. ಮುಂದಕ್ಕೆ ಮಾರಗೌಡನಹಳ್ಳಿ ಗ್ರಾಮದ ಸರ್ವೆ 192ನೆ ನಂಬರ್ ಜಮೀನ್ ದಕ್ಷಿಣ ಎಲ್ಲೆಯನ್ನನುಸರಿಸಿ ಹೋಗಿ ಸದರಿ 192ನೆ ನಂಬರ್ ಜಮೀನ್ ಆಗ್ನೇಯ ಮೂಲೆಯನ್ನು ಸೇರಿ ಬಂದು ಅಲ್ಲಿಂದ ದಕ್ಷಿಣಕ್ಕೆ ತಿರುಗಿ ಸದರಿ ಗ್ರಾಮದ ಸರ್ವೆ 182ನೆ ನಂಬರ್ ಜಮೀನ್ ಪಶ್ಚಿಮ ಎಲ್ಲೆ ಇಟ್ಟುಕೊಂಡು ಸದರಿ 182ನೆ ನಂಬರ್ ಜಮೀನಿನ ನೈರುತ್ಯ ಮೂಲೆಯನ್ನು ಸೇರುತ್ತದೆ. ಆಮೇಲೆ ಪೂರ್ವಕ್ಕೆ ತಿರುಗಿ ಅದೇ ಗ್ರಾಮದ ಸರ್ವೆ 180, 181, 182ನೆ ಜಮೀನ್ ದಕ್ಷಿಣ ಎಲ್ಲೆಯನ್ನನುಸರಿಸಿ ಹೋಗಿ ಪುನಃ ಸರ್ವೆ 180ನೆ ನಂಬರ್ ಜಮೀನ್ ಆಗ್ನೇಯದಲ್ಲಿ ತಿರುಗಿ ಸದರಿ 180ನೆ ನಂಬರ್ ಜಮೀನ್ ಪೂರ್ವ ಸರಹದ್ದನುಸರಿಸಿ ಉತ್ತರಕ್ಕೆ ಹೋಗಿ ವೀರನಗೆರೆ ಗ್ರಾಮದ ಸರ್ವೆ 145, 144 ಮತ್ತು 142ನೆ ನಂಬರ್ ಜಮೀನ್ ಉತ್ತರ ಎಲ್ಲೆಯಾಗಿ ಹೋಗಿ ಕೋಲ್ ಸಾಹೇಬರವರ ತೋಟದ ರಸ್ತೆಯನ್ನು ದಾಟುತ್ತದೆ. ಆ ಮೇಲೆ ರಸ್ತೆ ಪೂರ್ವಭಾಗದ ಅಂಚನ್ನು ಅನುಸರಿಸಿ ದಕ್ಷಿಣಭಾಗಕ್ಕೆ ಹೊರಟು 1ನೆ ಮೈಲಿ 2ನೆ ಫರ್ಲಾಂಗ್ 3ನೆ ನಂಬರ್ ಮುನಿಸಿಪಲ್ ಎಲ್ಲೆ ಕಲ್ಲನ್ನು ಸೇರುತ್ತದೆ.

2. ಇಲ್ಲಿಂದ ಹೊರಟು ಬೆಲವತ್ತ ಗ್ರಾಮ ಸರ್ವೆ 24ನೆ ನಂಬರ ಜಮೀನ ಉತ್ತರ ಎಲ್ಲೆ ಇಟ್ಟುಕೊಂಡು ಪೂರ್ವಾಭಿಮುಖವಾಗಿ ಹೊರಟು ಬೆಂಗಳೂರು-ನೀಲಗಿರಿ ರೋಡು 86ನೆ ಮೈಲಿ 4 ಮತ್ತು 5ನೆ ಫರ್ಲಾಂಗ ಮಧ್ಯದಲ್ಲಿ ಇರುವ 4ನೆ ನಂಬರ ಮ್ಯುನಿಸಿಪಲ್ ಎಲ್ಲೆ ಕಲ್ಲನ್ನು ಸಂಧಿಸುತ್ತೆ.

4. ಇಲ್ಲಿಂದ ಮುಂದೆ ಈರಣಗೆರೆ ಗ್ರಾಮದ ಸರ್ವೆ 135, 134, 130, 129, 128 ಮತ್ತು 12 ನೆ ನಂಬರ ಜಮೀನುಗಳ ಉತ್ತರಭಾಗದ ಸರಹದ್ದನುಸರಿಸಿ ಪೂರ್ವಕ್ಕೆ ಹೊರಟು ಹಳೆ ಶ್ರೀರಂಗಪಟ್ಟಣದ ರಸ್ತೆಯಲ್ಲಿರುವ 5ನೆ ನಂಬರ ಮ್ಯುನಿಸಿಪಲ್ ಎಲ್ಲೆ ಕಲ್ಲನ್ನು ಸಂಧಿಸುತ್ತೆ.

5. ಇಲ್ಲಿಂದ ಸರ್ವೆ 113ನೆ ನಂಬರ ಜಮೀನು ಉತ್ತರ ಎಲ್ಲೆ ಇಟ್ಟುಕೊಂಡು, ಪೂರ್ವಕ್ಕೆ ಹೊರಟು 113ನೆ ನಂಬರ ಜಮೀನು ಈಶಾನ್ಯ ಮೂಲೆಯಲ್ಲಿ ದಕ್ಷಿಣಕ್ಕೆ ತಿರುಗಿ 113, 1, 4ನೆ ನಂಬರ ಜಮೀನುಗಳ ಪೂರ್ವ ಸರಹದ್ದು ಅನುಸರಿಸಿ ಹೊರಟು ಈರಣಗೆರೆ ಗ್ರಾಮದ ಪೂರ್ವಕ್ಕೆ ಇರುವ ಸರ್ವೆ 10ನೆ ನಂಬರ ಜಮೀನು ಸುತ್ತಿಕೊಂಡು ಕೆಸರೆ ಗ್ರಾಮದ ರಸ್ತೆ ದಾಟಿ ಈರಣಗೆರೆ ಗ್ರಾಮದ ಸರ್ವೆ 85, 80, 58, 57ನೆ ನಂಬರ ಜಮೀನುಗಳ ಉತ್ತರ ಎಲ್ಲೆಯನ್ನನುಸರಿಸಿ, ದೇವನೂರು ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಪೂರ್ವದಿಕ್ಕಿಗೆ ಹೋಗುತ್ತದೆ. ಅಲ್ಲಿಂದ ಮುಂದೆ ಈರಣಗೆರೆ ಗ್ರಾಮದ ಸರ್ವೆ 58ನೆ ನಂಬರ ಜಮೀನು ಈಶಾನ್ಯ ಮೂಲೆಯ ಹತ್ತರ ಸೀದಾ ಬಂಡಿದಾರಿಯನ್ನು ದಾಟಿ ಸದರಿ ಗ್ರಾಮದ ಸರ್ವೆ 57ನೆ ನಂಬರ ಜಮೀನು ಈಶಾನ್ಯ ಮೂಲೆಯಲ್ಲಿರುವ ನಾಲಾ ಅಥವಾ ಅಡ್ಡ ಹಳ್ಳವನ್ನು ಸಂಧಿಸಿ ದಕ್ಷಿಣಭಾಗಕ್ಕೆ ತಿರುಗಿ ಮೇಲ್ಕಂಡ ನಾಲೆಯಲ್ಲೇ ಹೋಗುತ್ತಾ ಸದರಿ ಗ್ರಾಮದ ಸರ್ವೆ 30, 32, 33, 60, 61 ಮತ್ತು 57ನೆ ನಂಬರ ಜಮೀನುಗಳ ಪೂರ್ವಭಾಗದ ಎಲ್ಲೆಯನ್ನನುಸರಿಸಿಕೊಂಡು ಮೈಸೂರು-ಮಹದೇವಪುರದ ರಸ್ತೆ 1ನೆ ಮೈಲಿ 4ನೆ ಫರ್ಲಾಂಗಿನಲ್ಲಿ ಇರುವ 6ನೆ ನಂಬರ ಮ್ಯುನಿಸಿಪಲ್ ಎಲೆ ಕಲ್ಲನ್ನು ಸಂಧಿಸುತ್ತದೆ.

6. ಇಲ್ಲಿಂದ ಮುಂದೆ ಸದರಿ ನಾಲಾ ವಾ ಅಡ್ಡ ಹಳ್ಳವನ್ನು ಅನುಸರಿಸಿ ದಕ್ಷಿಣಕ್ಕೆ ಹೋಗಿ ಕ್ಯಾತಮಾದನಹಳ್ಳಿ ಗ್ರಾಮದ ಸರ್ವೆ 21ನೆ ನಂಬರ ಜಮೀನು ದಾಟಿ ಸದರಿ ಗ್ರಾಮದ ಸರ್ವೆ 22, 23 ಮತ್ತು 26 ಮತ್ತು 30ನೆ ನಂಬರ ಜಮೀನುಗಳ ಪೂರ್ವ ಎಲ್ಲೆ ಅನುಸರಿಸಿ ಬಂದು ಕಾರಂಜಿಕೆರೆ ಫೀಡರನಾಲಾ ಸಂಧಿಸಿ ಪೂರ್ವಕ್ಕೆ ಫೀಡರನಾಲಾದಲ್ಲೆ ಹೊರಟು ಕ್ಯಾತಮಾದನಹಳ್ಳಿ ಗ್ರಾಮದ ಸರ್ವೆ 38, 39, 40 ಮತ್ತು 36ನೆ ನಂಬರ ಜಮೀನುಗಳ ಅರಗಿನಲ್ಲಿ ಹಾಸಿ ದಕ್ಷಿಣಭಾಗಕ್ಕೆ ತಿರುಗಿ ಸರ್ವೆ 56ನೆ ನಂಬರ ಜಮೀನು ವಾಯವ್ಯ ಮೂಲೆಯನ್ನು ಸಂಧಿಸಿ 56, 59ನೆ ನಂಬರ ಜಮೀನು ಪಶ್ಚಿಮ ಸರಹದ್ದು ಅನುಸರಿಸಿ ಹೋಗಿ 57ನೆ ನಂಬರ ಜಮೀನು ದಾಟಿ ಕ್ಯಾತಮಾದನಹಳ್ಳಿ ಗ್ರಾಮದ ಸರ್ವೆ 69ನೆ ನಂಬರ ಜಮೀನು ಪಶ್ಚಿಮಭಾಗದ ಸರಹದ್ದು ಅನುಸರಿಸಿ ಹೋಗಿ ಮೈಸೂರು-ಬೆಂಗಳೂರು ರಸ್ತೆ 92ನೆ ಮೈಲಿ 3 ಮತ್ತು 4ನೆ ಫರ್ಲಾಂಗ ಮಧ್ಯದಲ್ಲಿ ಇರುವ 7ನೆ ನಂಬರ ಮ್ಯುನಿಸಿಪಲ್ ಎಲ್ಲೆ ಕಲ್ಲನ್ನು ಸಂಧಿಸುತ್ತೆ.

7. ಇಲ್ಲಿಂದ ಮುಂದೆ ಕ್ಯಾತಮಾದನಹಳ್ಳಿ ಗ್ರಾಮದ ಸರ್ವೆ 67ನೆ ನಂಬರ ಜಮೀನು ಮಧ್ಯೆ ಹೊರಟು ಕುರುಬಾರಹಳ್ಳಿ ಗ್ರಾಮದ ಸರ್ವೆ 62, 63, 84, 70, 69ನೆ ನಂಬರ ಜಮೀನುಗಳ ಪಶ್ಚಿಮ ಎಲ್ಲೆ ಅನುಸರಿಸಿ ಕುರುಬಾರಹಳ್ಳಿ ಗ್ರಾಮದ ದಕ್ಷಿಣ ಸರಹದ್ದಿನಲ್ಲಿ ಹೋಗಿ ಸದರಿ ಗ್ರಾಮದ ಸರ್ವೆ 1ನೆ ನಂಬರ ಜಮೀನು ಅಂಚಿಗಾಗಿ ಚಾಮುಂಡಿ ಬೆಟ್ಟದ ರಸ್ತೆ ದಾಟಿ ಸದರಿ ರಸ್ತೆ 1ನೆ ಮೈಲಿ 5ನೆ ಫರ್ಲಾಂಗಿನಲ್ಲಿ ಇರುವ 8ನೆ ನಂಬರ ಮ್ಯುನಿಸಿಪಲ್ ಎಲ್ಲೆ ಕಲ್ಲನ್ನು ಸಂಧಿಸುತ್ತದೆ.

8. ಇಲ್ಲಿಂದ ಹೊರಟು ಕುರುಬಾರಹಳ್ಳಿ ಗ್ರಾಮದ ಸರ್ವೆ 4, 5, 42, 44, 40, 39, 53, 54ನೆ ನಂಬರ ಜಮೀನುಗಳ ಪಶ್ಚಿಮ ಎಲ್ಲೆ ಉದ್ದಕ್ಕೂ ಹೊರಟು ಸರ್ವೆ 135ನೆ ನಂಬರು ಜಮೀನು ಸುತ್ತಿಕೊಂಡು ಸರ್ವೆ 137ನೆ ನಂಬರು ಜಮೀನು ಪಶ್ಚಿಮ ಸರಹದ್ದು ಉದ್ದಕ್ಕೂ ಹೋಗಿ ಇಲ್ಲಿ ಪುನಃ ಪಶ್ಚಿಮಕ್ಕೆ ತಿರುಗಿ ಕುರುಬಾರಹಳ್ಳಿ ಗ್ರಾಮದ ಸರ್ವೆ 18, 17, 16, 15, 145, 146 ಮತ್ತು 151ನೆ ನಂಬರು ಜಮೀನುಗಳ ಉತ್ತರ ಸರಹದ್ದನುಸರಿಸಿ ಸರ್ವೆ 128ನೆ ನಂಬರ ಜಮೀನು ಅಥವಾ ಗೊಬ್ಬಳಿಕಟ್ಟೆ ಅರಗಿನಲ್ಲಿ ಸ್ವಲ್ಪಭಾಗ ಹೋಗಿ ಆಮೇಲೆ ದಾಟಿ ಮೈಸೂರು ಕಸಬಾ ಗ್ರಾಮದ ಸರ್ವೆ 142, 141 ಮತ್ತು 148ನೆ ನಂಬರ ಜಮೀನುಗಳ ಪಶ್ಚಿಮ ಎಲ್ಲೆ ಉದ್ದಕ್ಕೂ ಹೊರಟು ಕಾರಂಜಿಕೆರೆ ಫೀಡರ ಸಮೀಪದಲ್ಲಿ ಇರುವ ಗೊಬ್ಬಳಿಕಟ್ಟೆ ಮಾರ್ಗವಾಗಿ ಹೋಗುವ ಚಾಮುಂಡಿ ಬೆಟ್ಟದ ರಸ್ತೆಯಲ್ಲಿರುವ 9ನೆ ನಂಬರ ಮ್ಯುನಿಸಿಪಲ್ ಎಲ್ಲೆ ಕಲ್ಲನ್ನು ಸಂಧಿಸುತ್ತದೆ.

9. ಇಲ್ಲಿಂದ ಮುಂದೆ ಮೈಸೂರು ಕಸಬಾ ಗ್ರಾಮದ ಸರ್ವೆ 140 ಮತ್ತು 150ನೆ ನಂಬರ ಜಮೀನು ಪೂರ್ವಭಾಗದ ಸರಹದ್ದನುಸರಿಸಿ 157ನೆ ನಂಬರ ಜಮೀನು ಸುತ್ತಿಕೊಂಡು ದಕ್ಷಿಣಕ್ಕೆ ತಿರುಗಿ ಸರ್ವೆ 159ನೆ ನಂಬರ ಜಮೀನು ಪೂರ್ವಭಾಗದ ಎಲ್ಲೆಯನ್ನನುಸರಿಸಿ ಪುನಃ ಪಶ್ಚಿಮಭಾಗಕ್ಕೆ ತಿರುಗಿ ಕಸಬಾ ಗ್ರಾಮದ ಸರ್ವೆ 159, 160ನೆ ನಂಬರ ಜಮೀನಿನ ದಕ್ಷಿಣ ಸರಹದ್ದನ್ನು ಅನುಸರಿಸಿ ಪುನಹ ದಕ್ಷಿಣಕ್ಕೆ ತಿರಗಿ ಕಸಬಾ ಗ್ರಾಮದ 162, 163, 164ನೆ ನಂಬರ ಜಮೀನುಗಳ ಪೂರ್ವಭಾಗದ ಎಲ್ಲೆ ಉದ್ದಕ್ಕೂ ಹೋಗಿ ಪುನಹ ಪಶ್ಚಿಮಕ್ಕೆ ತಿರುಗಿ ಸದರಿ ಗ್ರಾಮದ 164ನೆ ನಂಬರ ಜಮೀನು ದಕ್ಷಿಣ ಎಲ್ಲೆ ಇಟ್ಟುಕೊಂಡು ಬೆಂಗಳೂರು-ನೀಲಗಿರಿ ರಸ್ತೆ 90ನೆ ಮೈಲಿ 5ನೆ ಫರ್ಲಾಂಗಿನಲ್ಲಿ ಇರುವ 10ನೆ ನಂಬರ ಮ್ಯುನಿಸಿಪಲ್ ಎಲ್ಲೇ ಕಲ್ಲನ್ನು ಸೇರುತ್ತದೆ.

10. ಇಲ್ಲಿಂದ ಹೊರಟು ಕಸಬಾ ಗ್ರಾಮದ 215ನೆ ನಂಬರ ಜಮೀನಿನ ದಕ್ಷಿಣ ಎಲ್ಲೆ ಇಟ್ಟುಕೊಂಡು ಬೆಂಗಳೂರು-ನೀಲಗಿರಿ ರಸ್ತೆಯನ್ನು ದಾಟಿ ನಂಜನಗೂಡಿಗೆ ಹೋಗುವ ಹಳೆ ಅಗ್ರಹಾರದ ರಸ್ತೆ 90ನೆ ಮೈಲಿ 5ನೆ ಫರ್ಲಾಂಗಿನಲ್ಲಿರುವ 11ನೆ ನಂಬರ ಮ್ಯುನಿಸಿಪಲ್ ಎಲ್ಲೆ ಕಲ್ಲನ್ನು ಸೇರುತ್ತದೆ.

11. ಇಲ್ಲಿಂದಾ ಹೊರಟು ಕಸಬಾ ಗ್ರಾಮದ 237, 238, 244 ಮತ್ತು 247ನೆ ನಂಬರ ಜಮೀನು ದಕ್ಷಿಣ ಸರಹದ್ದನ್ನು ಅನುಸರಿಸಿ ಹೊರಟು ಉತ್ತರಕ್ಕೆ ತಿರುಗಿ ಸದರಿ ಗ್ರಾಮದ 290ನೆ ನಂಬರ ಜಮೀನು ಪೂರ್ವ ಸರಹದ್ದು ಮಾರ್ಗವಾಗಿ ಹೊರಟು 289ನೆ ನಂಬರ ಜಮೀನನ್ನು ಸುತ್ತಿ ಹೋಗಿ ಸದರಿ ಕಸಬಾ ಗ್ರಾಮದ ಸರ್ವೆ 322, 284, 286, 287ನೆ ನಂಬರ ಜಮೀನುಗಳ ದಕ್ಷಿಣ ಎಲ್ಲೆಯನ್ನು ಇಟ್ಟುಕೊಂಡು ಮೈಸೂರು-ಮಾನಂದವಾಡಿ ರಸ್ತೆ 90ನೆ ಮೈಲಿಯಲ್ಲಿ ಇರುವ 12ನೆ ನಂಬರ ಮ್ಯುನಿಸಿಪಲ್ ಎಲ್ಲೆ ಕಲ್ಲನ್ನು ಸಂಧಿಸುತ್ತದೆ.

12. ಇಲ್ಲಿಂದ ಮುಂದೆ ಕಸಬಾ ಗ್ರಾಮದ ಸರ್ವೆ 320ನೆ ನಂಬರ್ ಜಮೀನಿನ ಪಶ್ಚಿಮ ಸರಹದ್ದನ್ನು ಅನುಸರಿಸಿ ಪಶ್ಚಿಮವಾಗಿ ಹೊರಟು ಸರ್ವೆ 330ನೆ ನಂಬರ್ ಜಮೀನ ಅರಗಿನಿಂದ ಹಾಸಿ ಮಳಲವಾಡಿ ಅಥವಾ ಕನ್ನೆಗೌಡ್ನಕೊಪ್ಪಲ್ ಬಂಡಿ ಜಾಡಿನಲ್ಲಿ ಉತ್ತರಕ್ಕೆ ಹೋಗಿ ಸರ್ವೆ 360, 365 ಮತ್ತು 364ನೆ ನಂಬರ್ ಜಮೀನುಗಳ ಪಶ್ಚಿಮ ಹದ್ದಿನಲ್ಲಿ ಹೋಗಿ ನಂಜನಗೂಡು ರೈಲ್ವೆ ಲೈನ್ ದಾಟಿ ಮತ್ತು ಸರ್ವೆ 381, 369, 368 ಮತ್ತು 537ನೆ ನಂಬರ್ ಜಮೀನುಗಳ ಪಶ್ಚಿಮ ಸರಹದ್ದನ್ನು ಇಟ್ಟುಕೊಂಡು 383ನೆ ನಂಬರ್ ಜಮೀನ ಅಂಚಿನಲ್ಲಿ ಹೊರಟು ಕಸಬಾ ಗ್ರಾಮದ 384ನೆ ನಂಬರ್ ಜಮೀನ ಪಶ್ಚಿಮ ಎಲ್ಲೆ ಉದ್ದಕ್ಕೂ ಹೋಗುತ್ತದೆ. ಇಲ್ಲಿಂದ ಮುಂದೆ ಕನ್ನೆಗೌಡ್ನಕೊಪ್ಪಲ್ ಗ್ರಾಮದ ಗ್ರಾಮಠಾಣ ದಕ್ಷಿಣ ಮತ್ತು ಪಶ್ಚಿಮ ಎಲ್ಲೆ ಉದ್ದಕ್ಕೂ ಹೊರಟು ಸದರಿ ಗ್ರಾಮದ ಈಶಾನ್ಯ ಭಾಗ ಮೂಲೇಲಿ ಪಶ್ಚಿಮಕ್ಕೆ ತಿರುಗಿ ಮಳಲವಾಡಿ ಗ್ರಾಮದ ಸರ್ವೆ 193ನೆ ನಂಬರ್ ಜಮೀನ ಉತ್ತರ ಸರಹದ್ದನ್ನು ಅನುಸರಿಸಿ ಹೊರಡುತ್ತದೆ. ಮತ್ತು ಸರ್ವೆ 6ನೆ ನಂಬರ್ ಜಮೀನಿನ ಪೂರ್ವಭಾಗದ ಅರಗಿನಲ್ಲಿ ಹೊರಟು ಮಳಲವಾಡಿ ಗ್ರಾಮದ ಸರ್ವೆ 8 ಮತ್ತು 12ನೆ ನಂಬರ್ ಜಮೀನುಗಳ ಉತ್ತರ ಸರಹದ್ದನ್ನು ಇಟ್ಟುಕೊಂಡು ಕುಕ್ಕರಹಳ್ಳಿ ಗ್ರಾಮದ ಬಂಡಿ ಜಾಡಿನ ಉದ್ದಕ್ಕೂ ಹೋಗುತ್ತದೆ. ಮಳಲವಾಡಿ ಗ್ರಾಮದ ಸರ್ವೆ 12ನೆ ನಂಬರ್ ಜಮೀನ ಈಶಾನ್ಯ ಮೂಲೆಯಲ್ಲಿ ಪಶ್ಚಿಮಕ್ಕೆ ತಿರುಗಿ ಕುಕ್ಕರಹಳ್ಳಿ ಗ್ರಾಮದ ಸರ್ವೆ 26, 2[illegible] ಮತ್ತು 2ನೆ ನಂಬರ್ ಜಮೀನಿನ ಪೂರ್ವ ಸರಹದ್ದು ಇಟ್ಟುಕೊಂಡು ಬಂಡಿ ದಾರಿಯಲ್ಲಿ ಹೋಗಿ ಅದೇ ಗ್ರಾಮದ ಗ್ರಾಮಠಾಣಾ ನೈರುತ್ಯದ ಅಂಚನ್ನು ಅನುಸರಿಸಿ ಕುಕ್ಕರಹಳ್ಳಿ ಕೆರೆ ಫೀಡರ್ ನಾಲಾವನ್ನು ಕೋಡೀ ಸಮೀಪದಲ್ಲಿ ದಾಟಿ ಹೋಗಾದಿ ರೋಡು [illegible]ನೆ ಮೈಲಿ 1ನೆ ಫರ್ಲಾಂಗಿನಿಂದ 275 ಅಡಿ ದೂರದಲ್ಲಿ ಜಯಲಕ್ಷ್ಮಿ ವಿಳಾಸ ರೋಡು ಬಜೆಯುವ ಜಾಗದಲ್ಲಿ ಇರುವ 15ನೆ ನಂಬರ್ ಮ್ಯುನಿಸಿಪಲ್ ಎಲ್ಲೆ ಕಲ್ಲನ್ನು ಸಂಧಿಸುತ್ತದೆ.

13. ಇಲ್ಲಿಂದ ಉತ್ತರಕ್ಕೆ ಹೊರಟು ಜಯಲಕ್ಷ್ಮೀ ವಿಳಾಸ ರೋಡ್ ಪಶ್ಚಿಮ ಭಾಗವನ್ನು ಅನುಸರಿಸಿ ಬಂದು ಇಲವಾಲದ ರಸ್ತೆಯಲ್ಲಿ 3ನೆ ಮೈಲಿ 2ನೆ ಫರ್ಲಾಂಗಿನಿಂದ 270 ಅಡಿಯಲ್ಲಿರುವ 1ನೆ ನಂಬರ್ ಮ್ಯುನಿಸಿಪಲ್ ಎಲ್ಲೆ ಕಲ್ಲನ್ನು ಸಂಧಿಸುತ್ತೆ. ಈ ಮೇಲ್ಕಂಡ ತಪಶೀಲನಿಂದ ಮೈಸೂರು ಷಹರ್ ಸರಹದ್ದಿನೊಳಗೆ ಪಡುವಾರಹಳ್ಳಿ, ಮೂರಗೌಡ್ನಹಳ್ಳಿ, ಬಿಲವತ್ತ, ಈರನಗೆರೆ, ಕ್ಯಾತಮಾರನಹಳ್ಳಿ, ಕುರುಬಾರಹಳ್ಳಿ, ಕಸಬಾ ಕನ್ನೇಗೌಡ್ನಕೊಪ್ಪಲ್ ವ ಮಳಲವಾಡಿ ಮತ್ತು ಕುಕ್ಕರಹಳ್ಳಿ ಗ್ರಾಮಗಳಲ್ಲಿ ಕೆಲವು ಭಾಗಗಳು ಮಿಳಿತವಾಗಿ ಇರುತ್ತದೆಂದು ತಿಳಿಯತಕ್ಕದ್ದು.

ಜೆ. ಹನುಮಂತರಾವ್,
ಫಾರ್ ಪ್ರೆಸಿಡೆಂಟ್.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. [ನಂ. 43.

ಬೆಂಗಳೂರು, ಗುರುವಾರ, ಅಕ್ಟೋಬರ ತಾ॥ 31, ಸನ 1907.

II ನೆ ಭಾಗ.

ಇಂಡ್ಯಾ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೆಯವರಿಂದ ಹೊರಡಿಸಲ್ಪಟ್ಟ ಇಸ್ತಿಹಾರನಾಮೆಗಳು.

ಫಾರೆಸ್ಟ್ ಇಲಾಖಾ.

ಸಂಡಲ್ ಹರಾಜ್ ನೋಟಿಫಿಕೇಷನ್.

ತಾರೀಖು 24ನೆ ಆಗಸ್ಟ್ 1907ನೆ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಸರಕಾರದ ಶ್ರೀಗಂಧದ ಸಾಲಿಯಾನಾ ನಡಿಯುತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರದರ ಬಾಜೂದಲ್ಲಿ ನಮೂದಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರವರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರುಗಳಿಂದ ನಡೆಸಲ್ಪಡುವದು:—

ಡಿಸ್ಟ್ರಿಕ್ಟು.	ಕೋಠಿ.	ಹರಾಜು ತಾರೀಖು.	ಸುಮಾರು ಮೊತ್ತ.
			ಟನ್ನುಗಳು.
ಶಿವಮೊಗ್ಗ ...	ತೀರ್ಥಹಳ್ಳಿ ...	18ನೆ ನವೆಂಬರ 1907 ...	200
ಡಿಟೋ ...	ಸಾಗರ ...	21ನೆ ಡಿಟೋ ...	150
ಡಿಟೋ ..	ಶಿವಮೊಗ್ಗ ...	25ನೆ ಡಿಟೋ ..	500
ಕಡೂರು ..	ತರೀಕೆರೆ ...	28ನೆ ಡಿಟೋ ...	250
ಡಿಟೋ ..	ಚಿಕ್ಕಮಗಳೂರು ..	2ನೆ ಡಿಸೆಂಬರ 1907 ...	350
ಹಾಸನ ..	ಹಾಸನ ...	5ನೆ ಡಿಟೋ ..	150
ಬೆಂಗಳೂರು ..	ಬೆಂಗಳೂರು ...	9ನೆ ಡಿಟೋ ..	100
ಮೈಸೂರು ..	ಶ್ರೀರಂಗಪಟ್ಟಣ ...	12ನೆ ಡಿಟೋ ..	250
ಡಿಟೋ ...	ಹುಣಸೂರು ..	16ನೆ ಡಿಟೋ ..	500
		ಜುಮ್ಲಾ ..	2,450

2. ಪ್ರತಿ ಕೋಠಿಯಲ್ಲಿಯೂ ಹರಾಜಾಗುವ ಕ್ಲಾಸುವಾರು ಲಾಟು, ಮೊತ್ತ ಮತ್ತು ಇತರ ತಪಶೀಲುಗಳು ಬರುವ ಅಕ್ಟೋಬರ್ ಮಾಹೆಯ ಆಖೈರಿನಲ್ಲಿ ತಿಳಿಯಪಡಿಸುತ್ತೆ.

ಎಂ. ಮುತ್ತಣ್ಣ,
ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ನೋಟಿಸ್.

ಕೋಲಾರ ಡಿಸ್ಟ್ರಿಕ್ಟಿನಲ್ಲಿ 1907—08ನೆ ಸಾಲಿನಲ್ಲಿ ದೊರೆಯಬಹುದಾದ ಪಸಾರ ಜಿನಸಿಗಳು ಕೊಂಡುಕೊಳ್ಳುವ ವಿಷಯದಲ್ಲಿ ಅಕ್ಟೋಬರ್ ತಾರೀಖು 10ನೆ ವರ್ಕ್ಕಂನ ಮೈಸೂರು ಗೆಜೆಟ್ IIನೆ ಭಾಗದ 492ನೆ ಪೇಜಿನಲ್ಲಿ ಪ್ರಾಯಿಷು ಆಗಿರುವ 1907ನೆ ಸೆಪಟಂಬರ್ ತಾರೀಖು 30ನೆ ವರ್ಕ್ಕಂನ ನೋಟಿಫಿಕೇಷನ್‌ಗೆ ಸಮಸ್ತ ಜನಗಳು ಗಮನ ಕೊಡಬೇಕು.

ಎಸ್ ಎ. ಬಾಪೂರಾವ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಕೋಲಾರ ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ಸರ್ಕಾರಕ್ಕೆ ಬರಬೇಕಾದ ಬಾಕೀಗಾಗಿ, ಚಿಕ್ಕಬಳ್ಳಾಪುರ ತಾಲ್ಲೂಕು ಮಂಡಿಕಲ್ ಹೋಬಳಿ ಕಾಯಂಗುತ್ತ ಚೀಗಾನಹಳ್ಳಿ ಗ್ರಾಮವು 1907ನೆ ಇಸವಿ ನವಂಬರ 7ನೆ ತಾರೀಖಿನಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

ಷರಾ.—ಹೆಚ್ಚು ತಪ್ಸೀಲಿಗೆ 1907ನೆ ಇಸವಿ ಅಕ್ಟೋಬರ್ ತಾರೀಖು 10ನೆ ವರ್ಕ್ಕಂನ ಮೈಸೂರು ಗೆಜೆಟ್ IIನೆ ಭಾಗದ 497ನೆ ಪುಟದಲ್ಲಿ ಪ್ರಾಯಿಷಾಗಿರುವ ಇಸ್ತಿಹಾರ್ನಾಮೆಯನ್ನು ನೋಡಬಹುದು.

ಬಿ. ವೆಂಕೋಬರಾವ್,
ಫಾರ್ ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 3—5ನೆ ಅಕ್ಟೋಬರ್ 1907.

1906ನೆ ಇಸವಿ ನವಂಬರ 8ನೆ ವರ್ಕ್ಕಂ F. L. 3304-6—S. R. 146-05-7ನೆ ಗೌರ್ನಮೆಂಟ್ ಆರ್ಡರು ಅನುಸರಿಸಿ ಈ ಮೂಲಕ ತಿಳಿಯಪಡಿಸುವದೇನಂದರೆ,—

ಡಿಸ್ಟ್ರಿಕ್ಟು ಮಜಕೂರು ಇನಾಂ ಗ್ರಾಮಗಳ ಕೇಂದಿ ಹುಟ್ಟುವಳಿ ಹಕ್ಕು ತಹಲ್ ವರೆಗೂ ಗೌರ್ನಮೆಂಟನಿಂದ ಸ್ಥಿರಪಡಿಸಲ್ಪಡದೆ ಇರುವ ಶ್ರೀ ಪರಕಾಳಿಸ್ವಾಮಿಗಳವರ ಮಠ ಮತ್ತು ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠಗಳಿಗೆ ಸೇರಿದ ಇನಾಂ ಗ್ರಾಮಗಳ ಕೇಂದಿ ಹುಟ್ಟುವಳಿಗೆ ಮಠದ ಹಕ್ಕನ್ನು ಸ್ಥಿರಪಡಿಸುವ ವಿಚಾರದಲ್ಲಿ ಮೈಸೂರು ಡಿಸ್ಟ್ರಿಕ್ಟು ಎಕ್ಸೈಜು ಆಫಿಸರವರು 1—11—1907ನೆ ತಾರೀಖಿನ ದಿವಸ ಅವರ ಆಫೀಸಿನಲ್ಲಿ ಅವಶ್ಯವಿರುವ ವಿಚಾರಣೆಯನ್ನು ನಡಿಸುತ್ತಾರೆ.

ಸದರಿ ಮಠಗಳ ಏಜಂಟರುಗಳು ಮೇಲ್ಕಂಡ ಆಫಿಸರ ಬಳಿ ಸದರಿ ತಾರೀಖಿನಲ್ಲಿ ತಮ್ಮಲ್ಲಿ ಇರತಕ್ಕ ಸನ್ನದು, ಇನಾಂ ಟೈಟಲ್ ಡೀಡು, ಮುಚ್ಚಳಿಕೆ ವಗೈರೆ ಸಕಲ ದಾಖಲಾತಿಗಳನ್ನು ಹಾಜರ್ಪಡಿಸತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ರೂಲ್ಸು ಮೇರೆ ಕ್ರಮ ಜರಗಿಸುತ್ತೆ. ನಂತರ ಬರುವ ಯಾವ ತಕರಾರನ್ನೂ ಅಂಗೀಕರಿಸಲಾಗಲಾರದೆಂದು ಪ್ರಸಿದ್ಧಪಡಿಸಿದೆ.

ಟಿ. ಕೆ. ಸುಂದರರಾಜೈಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಹಿಟ್ನಿ ಹೆಬ್ಬಾಗಿಲು ಗ್ರಾಮ ದಿಡ್ಡಿ ನರಸಿಂಹ ಉಪಾಧ್ಯರು ವಗೈರೇರಿಂದ ಬರಬೇಕಾದ ಜಿರಾಯ್ತಿ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ಹುಣಸೂರು ತಾಲ್ಲೂಕು ಕಚೇರಿಯಲ್ಲಿ 1907ನೆ ಡಿಸೆಂಬರ್ 5ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಹಗಲು ಬಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಭಾಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1906-07ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪಸೀಲ್ ಮೇರಿಗೆ ರೂಪಾಯಿ 435—1—4 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್‌ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್‌ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್‌ಮಾಡಲ್ಪಟ್ಟ ಕೂಡಲೆ ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜಾ ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕೀ, ತರೀ ಯಾ ಬಾಗಾಯತು.	ಜಮೀನು. ವಿಸ್ತೀರ್ಣ.	ಜಮೀನು. ಆಕಾರ.	ಅಂದಾಜಾ ಕಿಮ್ಮತ್ತು.	ಸರ್ಕಾರಕ್ಕೆ ಸಾಲಿಯಾನಾ ಕೊಡಬೇಕಾದ ಜೋಡಿ ಯಾ ಕಾಯಂ ಗುತ್ತಾ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ನೋಟಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.
ಹುಣಸೂರು	ಪಿರ್ಯಾಪಟ್ಟಣ	ಜೋಡಿ ಹಿಟ್ಟನಹೆಬ್ಬಾಗಿಲು	ದಿಡ್ಡೆ-ನರಸಿಂಹ ಉಪಾಧ್ಯರು ವಗೈರೇರಿಂದ	ಪೂರ್ವಕ್ಕೆ—ಸನ್ಯಾಸಪುರ. ಪಶ್ಚಿಮಕ್ಕೆ—ಅವರಕಾಯಿಗುಡ್ಡದ ಕಾವಲ್. ದಕ್ಷಿಣಕ್ಕೆ—ಕಗ್ಗುಂದಿ ಗ್ರಾಮ. ಉತ್ತರಕ್ಕೆ—ಹಿಟ್ನಹಳ್ಳಿ ಗ್ರಾಮ. ಈ ಮಧ್ಯೆ ಇರುವ ಎ. ಗು. ರೂ. ಆ. ಖುಷ್ಕಿ ... 552 32 ... 375 8 ತರಿ ... 35 3 ... 125 0 ಬಾಗಾಯಿತು ... 69 5 ... 280 0 ಬಂಜರು ... 437 39 ... 7 8 ಜುಮ್ಲಾ ... 1,144 39 788 0 ಸಾಲೀಯಾನಾ ಗ್ರಾಮದಿಂದ ಸರ್ಕಾರಕ್ಕೆ ಬರಬೇಕಾದ್ದು. ಜೋಡಿ. ರೂ. ಆ. 222 0 — ಕ್ವಿಟರೆಂಟ್. ರೂ. ಆ. 71 4 — ಲೋಕಲ್. ರೂ. ಆ. 49 4 — ಜುಮ್ಲಾ. ರೂ. ಆ. 342 4								ಶೋಭಕೃತು ... 96 15 7 ಕ್ರೋಧಿ ... 91 4 3 ವಿಶ್ವಾವಸು ... 91 4 3 ಪರಾಭವ ... 154 9 3 434 1 4 ಪಾವತಿ ತಾರೀಖು ವರಿಗಿನ ಬಡ್ಡಿ ಸಹ.

ಷರಾ —ಯಾವ್ಯಾವ ವೃತ್ತಿಯಿಂದ ಬಾಕಿ ಬರಬೇಕೋ ಆ ವೃತ್ತಿಗಳನ್ನ ಮೊದಲು ಹರಾಜ್ ಮಾಡಲ್ಪಡುತ್ತೆ. ಅದರಲ್ಲಿ ಹಣ ಹೊರಡದೆ ಇದ್ದರೆ ಪೂರಾ ಗ್ರಾಮವನ್ನ ಹರಾಜ್‌ಮಾಡಲ್ಪಡುತ್ತೆ.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 20ನೆ ಸೆಪಟಂಬರ್ 1907.

1. ಕಂದಾಯದ ಬಾಕೀದಾರರಾದ ಮೇಗಹಳ್ಳಿ ಗ್ರಾಮದ ಗುತ್ತಾದಾರ್ ಮೆ॥ ನರಸಿಂಹಾಚಾರ್ರಿಂದ ಬರಬೇಕಾದ ಜಮ್ಮಿ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ಟಿ. ನರಸೀಪುರ ತಾಲ್ಲೂಕು ಕಛೇರಿಯಲ್ಲಿ 1908ನೆ ಇಸವಿ ಜನವರಿ ಮಾಹೆ 8ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಸದರಿ ತಾರೀಖು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಬಾಸ್ತುದಾರನ ಹೆಸರಿಗೆ ನಿಲ್ಲಿ

2. ಸದರೀ ಸ್ವತ್ತಿಗಾಗಿ ಹರಾಜುದಾರನು 1906—07ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದ್ದರದ್ದಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪಶೀಲ್ ಮೇರಿಗೆ ರೂಪಾಯಿ 64—4—9 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜ್ ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದ್ದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಅತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರ್ತಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೇ ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರು ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಅತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಡದ ಹೆಸರು	ಅಂದಾಜಾ ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಆಕಾರ.	ಅಂದಾಜಾ ಕಿಮ್ಮತ್ತು.	ಸರ್ಕಾರಕ್ಕೆ ಸಾಲಿಯಾನಾ ಕೊಡಬೇಕಾದ ಜೋಡಿ ಯಾ ಕಾಯಂಗುತ್ತಾ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗ್ಯೆರೆ ಸಹಿತವಾದ ಬಾಕಿ ಮೊಬಲಗು.
								ಎ. ಗು.	ರೂ. ಆ. ಪೈ.	ರೂ.	ರೂ. ಆ. ಪೈ.	ರೂ. ಆ. ಪೈ.
ಟಿ. ನರಶೀಪುರ	ತಲಕಾಡು	ಬಾ॥ ವೇಗಡಹಳ್ಳಿ	ಗುತ್ತಾದಾರ್ ಮೆ॥ ನರಸಿಂಹಾಚಾರ್	...	...	ಗ್ರಾಮ ಪೂರ್ತಾ.	ಖುಷ್ಕಿ ...	1160 1	251 12 2	1,000	233 14 9	62 12 9 ಜ್
							ಬಾಗಾಯಿತು	1 13				1 8 0 ನೋಟಿಸ್ ವಗ್ಯೆರೆ
							ಪರಂಪೋಕು.	92 36				64 4 9 ಮೊಬಲಗು ಪಾವತಿ ತಾರೀಖು ವರಿಗೆ ಬಡ್ಡಿ ಸಹ.
								1,254 10				

ಎ. ಸುಬ್ರಮಣ್ಯಯ್ಯ,
ಫಾರ್ ಡೆಪ್ಯುಟಿ ಕಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಅಪ್ಸ್‌ಟ್ರಾಕ್ಟು ನೋಟಿಫಿಕೇಷನ್.

ಶಿಕಾರಿಪುರ ತಾಲ್ಲೂಕು ಕಣ್ಣೂರು ಇನಾಂ ಗ್ರಾಮದ ವೃತ್ತಿವಂತರಿಂದ ಸರಕಾರಕ್ಕೆ ಬರಬೇಕಾದ ಜೋಡೀ ಮೊಬಲಗು ಬಾರದೇ ಇರುವದರಿಂದ ತಾರೀಖು 10ನೇ ಆಕ್ಟೋಬರ್ IIನೇ ಭಾಗದ ಮೈಸೂರು ಗೆಜೆಟ್ಟಿನ 500ನೇ ಸಂಪುಟದಲ್ಲಿ ಫಾಯಿಸು ಆಗಿರುವ ಡಿಟೇಲ್ಡ್ ನೋಟಿಫಿಕೇಷನ್ನಲ್ಲಿ ನಮೂದಿಸಿ ಇರುವ ಈ ಗ್ರಾಮವು ತಾರೀಖು 11—11—1907ನೇ ಸೋಮವಾರ ದಿ॥ 11 ಘಂಟೆಗೆ ಶಿಕಾರಿಪುರ ಮೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಮಹಮ್ಮದ್ ರಜಾ,
ಫಾರ್ ಡೆಪ್ಯುಟಿ ಕಮಿಷನರ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫೀಸಿನಿಂದ.

ಇಸ್ತಿಹಾರ್.

ತಾರೀಖು 28ನೆ ಅಕ್ಟೋಬರ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಗೌರ್ನಮೆಂಟಿನಿಂದ ಸಾದರಾದ 29—6—1901ನ ಮು ಕ್ರಂ 17691— L. B. (P) 633ನೆ ನಂಬರ್ ಪ್ರೊಸೀಡಿಂಗ್ಸ್ ಅನುಸರಿಸಿ ಇದರ ಮೂ ಡ್ಡನ್ನಲ್ಲಿ ತೋರಿಸಿರುವ ಬೆಂಗಳೂರು ಸಿಟಿ ಮ ಲ್ಲೇಶ್ವರ ಎಕ್ಸ್ಟೆನ್ಷನಿಗೆ ಸೇರಿದ ಕಟ್ಟಡ ಕಟ್ಟತಕ್ಕ ಸೈಟುಗಳನ್ನು 1907ನೆ ಇಸವಿ

	ಮಲ್ಲೇಶ್ವರ ಎಕ್ಸ್ಟೆನ್ಷನ್.			
ಸಂಪಿಗೆ ರೋಡ	527—528—529	126 × 30	9—11—07	
	530	126 × 21		
ಬಿಗ್ ಹೌಸ್ ಸೈಟುಗಳು	75—76—77—78	211 × 235		
ಡಿಟೋ	48	205 × 235		ಈ ಸೈಟಿನಲ್ಲಿ ಹಳೇ ತುಮಕೂರು ರೋಡು ಪೂರ್ತಿ ಮಾಡ ತಕ್ಕ ಭಾಗ ಸೇರು ತ್ತದೆ.

ನವೆಂಬರ ತಾರೀಖು 9ರಲ್ಲು ಹರಾಜು ಮೂಲಕ ವಿಕ್ರಯಿಸತಕ್ಕದ್ದೆಂತ ನಿಶ್ಚಯಿಸಿ ಇರುತ್ತಾಗಿ, ಹರಾಜಿನಲ್ಲಿ ಛಡ್‌ಸವಾಲ್ ಮೂಲಕ ಪಡದುಕೊಳ್ಳಲು ಇಷ್ಟವುಳ್ಳವರು ಅದೇ ತಾರೀಖು ಪ್ರಾತಃಕಾಲ 8 ಘಂಟೆ ಲಾಗಾಯಿತು ಆಯಾಯ ಸೈಟುಗಳ ಬಳಿ ಹಾಜರಿದ್ದು ಛಡ್ ಸವಾಲ್ ಮೂಲಕ ಈ ಕೆಳಗೆ.ಕಂಡ ಷರತ್ತುಗಳಿಗೆ ಒಳಪಟ್ಟು ಛಡ್ ಸವಾಲಿನಲ್ಲಿ ಪಡದುಕೊಳ್ಳಬಹುದಾಗಿರುತ್ತೆ. ಆ ದಿವಸ ಹರಾಜು ಪೂರೈಸದೆ ನಿಲ್ಲುವ ಸೈಟುಗಳನ್ನು ಮರು ದಿವಸಗಳಲ್ಲಿ ಅದೇ ಟೈಂನಲ್ಲಿ ಹರಾಜು ಮಾಡಿಸಲ್ಪಡುತ್ತೆ.

1. ಹರಾಜು ಖೈದಾದ ಕೂಡ್ಲೆ ಛಡ್ ಸವಾಲ್ ಮೊಬಲಿಗಿನಲ್ಲಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಠೇವಣಿ ಇಡಬೇಕು. ಹಾಗಿಡದೆ ತಪ್ಪಿದರೆ ಕೂಡ್ಲೆ ದುಸರಾ ಹರಾಜು ಮಾಡಿಸಿ ಬರುವ ಲುಕ್ಸಾನಿಗೆ ಮೊದಲು ಛಡ್‌ಸವಾಲ್‌ದಾರನ್ನ ಗುರಿಮಾಡಲ್ಪಡುತ್ತೆ.

2. ಹರಾಜು ತಾರೀಖು ಲಾಗಾಯ್ತು 15 ದಿವಸದೊಳಗಾಗಿ ಬಾಕಿ ನಿಲ್ಲುವ.ಮೊಬಲಗೆಂದರೆ ಛಡ್‌ಸವಾಲ್ ಮೊಬಲಿಗೆ ಭರ್ತಿಯಾಗಿ ಕೊಡತಕ್ಕ ಶೇಕಡಾ 75 ರೂಪಾಯಿನಂತೆ ಆಗುವ ಮೊಬಲಗನ್ನ ಛಡ್‌ಸವಾಲ್‌ದಾರ ಹಾಜರಿಪಡಿಸಿ ರಸೀತಿ ಪಡಿಯಬೇಕು. ಇದಕ್ಕೆ ತಪ್ಪಿದರೆ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡನಾಗಿ ತೆಗದುಕೊಳ್ಳುವದಲ್ಲದೆ ಪುನಹ ಅಂಥಾ ಸೈಟನ್ನ ದುಸರಾ ಹರಾಜಿಗೆ ಈಡುಮಾಡಿ ಬರುವ ನಷ್ಟಕ್ಕೆ ಮೊದಲು ಛಡ್‌ಸವಾಲ್‌ದಾರನ್ನ ಗುರಿಮಾಡಲ್ಪಡುತ್ತೆ.

3. ಹರಾಜು ಮಂಜೂರಾದ ಕೂಡ್ಲೆ ಸೈಟನ್ನ ಛಡ್‌ಸವಾಲ್‌ದಾರನು ಸ್ವಾಧೀನಪಡಿಸಿಕೊಳ್ಳಬೇಕು.

4. ಕೊಟ್ಟ ತಾರೀಖಿನಾರಭ್ಯ 30 ದಿವಸದೊಳಗಾಗಿ ಕಟ್ಟಡದ ಕೆಲಸವನ್ನ ಶುರೂ ಮಾಡತಕ್ಕದ್ದು; ಮತ್ತು 6 ತಿಂಗಳೊಳಗಾಗಿ ಕಟ್ಟಡವನ್ನು ಪೂರೈಸತಕ್ಕದ್ದು.

5. 50 ಅಡಿ ಲಾಂಬಿಗೆ ಕಡಿಮೆ ಇಲ್ಲದಷ್ಟು ಜಾಗವನ್ನು ಮೇಲ್ ಚಾವಣಿ ಇಲ್ಲದೆ ಅಂಗಳಕ್ಕಾಗಿ ಅಥವಾ ಗಾಳಿ ಬರತಕ್ಕದ್ದಕ್ಕಾಗಿ ಯಾವಾಗಲೂ ಬಿಟ್ಟಿರಬೇಕು. ಸದರೀ ಸ್ಥಳದಲ್ಲಿ ಹಂಗಾಮಿ, ಯಾ ಖಾಯಂ ಕಟ್ಟಡ ಯಾವದನ್ನೂ ಕಟ್ಟಕೂಡದು.

6. ಕಟ್ಟಡದ ಪ್ಲಾನ್ ವಗೈರೆ ಸ್ಯಾನಿಟರಿ ಇಂಜನಿಯರವರಿಂದ ಮಂಜೂರಾಗುವ ವರಿಗೂ ಯಾವ ಕಟ್ಟಡವನ್ನೂ ಪ್ರಾರಂಭಿಸಕೂಡದು. ಹುಲ್ಲಿನ ಮನೆಯನ್ನ ಕಟ್ಟಲೇಕೂಡದು. ಕಟ್ಟಡಗಳೆಲ್ಲಾ ಹಂಚಿನದಾಗ್ಲಿಯಾಗಲಿ ಅಥವಾ ತಾರಸೀದಾಗಲಿ ಇರತಕ್ಕದ್ದು.

7. ನೆಲ ಮತ್ತು ಹಿತ್ತಲು ಮಟ್ಟವು ರೋಜೀನಾ ಪಾಕೀಜಾ ಬಗ್ಗೆ ಕಕ್ಕಸ ಕಟ್ಟತಕ್ಕ ಸ್ಥಳವು ಮತ್ತು ಮನೆ ಬಚ್ಚಲು ನೀರು ಹೋಗುವದಕ್ಕೆ ಕಟ್ಟತಕ್ಕ ಮೋರಿ ತರಹ ಮತ್ತು ಜಾಗ ಸಹ ಸ್ಯಾನಿಟರಿ ಇಂಜನಿಯರವರು ಅಪ್ಪಣೆ ಮಾಡಲು ರೀತಿಯಲ್ಲಿರತಕ್ಕದ್ದು.

8. ಒಂದು ಮತ, ವರ್ಣ ಅಥವಾ ಜಾತಿಯವರಿಗೆ ನಿರ್ಮಿಸಿರುವ ಬೀದಿಯಲ್ಲಿನ ಮನೆಯಲ್ಲಿ ಸದರೀ ಬೀದಿಯ ಸಮಸ್ತ ಜನಗಳ ಬರಹ ಮೂಲಕವಾದ ಒಪ್ಪಿತದ ಮೇಲೆ ಡೆಪ್ಯುಟಿ ಕಮಿಷನರವರು ಮಂಜೂರ್ಮಾಡಿದ ಹೊರ್ತು ಇತರ ಮತ, ವರ್ಣ ಯಾ ಜಾತಿಯವರು ವಾಸ ಮಾಡಕೂಡದು.

9. ಕಟ್ಟಡಕ್ಕಾಗಿ ಕೊಟ್ಟಿರುವ ನಿವೇಶನಗಳಲ್ಲಿ ಹಳ್ಳ ತೆಗಿಯಕೂಡದು. ಕಟ್ಟಡಕ್ಕೋಸ್ಕರವಾಗಿ ಯಾ ನೆಲ ಮಟ್ಟವನ್ನು ಯಾತ್ರಿಸುವದಕ್ಕಾಗಲಿ ಬೇಕಾಗುವ ಮಣ್ಣನ್ನ ಸ್ಯಾನಿಟರಿ ಇಂಜನಿಯರವರ ಅಪ್ಪಣೆ ಪ್ರಕಾರ ತೋರಿಸಲ್ಪಡುವ ಜಾಗಾದಲ್ಲಿ ತೆಗದುಕೊಳ್ಳತಕ್ಕದ್ದು.

10. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರು ತಪ್ಪಿ ನಡವಲ್ಲಿ ಕೊಡಲ್ಪಟ್ಟಿರುವ ನಿವೇಶನವನ್ನ ಹಿಡುವಳೀದಾರನು ಮುಕ್ಯಾನ ವಿಚಾರಣೆಯೂ ಇಲ್ಲದೆ ಹೋಗಲಾಡಿಸಿಕೊಳ್ಳುವದಕ್ಕೆ ಗುರಿಯಾಗುವನು.

11. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ತಪ್ಪಿ ನಡೆದದ್ದಕ್ಕೋಸ್ಕರ ನಿವೇಶನವನ್ನ ಸರ್ಕಾರಕ್ಕೆ ಸೇರಿಸಿಕೊಂಡ ಬಳಿಕ ಹಿಡುವಳೀದಾರನಾಗಲಿ ಅಥವಾ ಅವನಿಂದ ಪಡದುಕೊಂಡವರಾಗಲಿ, ಯಾವ ವಿಧವಾದ ಪರಿಹರ ದ್ರವ್ಯಕ್ಕೆ ಯಾ ಸದರೀ ನಿವೇಶನದ ಮೇಲೆ ಖರ್ಚು ಮಾಡಿರುವ ಲಾಗವಡಿಗೂ ಹಕ್ಕುದಾರರಾಗುವದಿಲ್ಲ.

ಎಂ. ಜಿ. ಕೃಷ್ಣಸ್ವಾಮಿರಾವ್,
ವೈಸ್ ಪ್ರೆಸಿಡೆಂಟ್.

ಮೈಸೂರ ಗೆಜೆಟ ಚಂದಾದಾರು ವಗೈರೆ.

ಮೈಸೂರ ಗೆಜೆಟ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ನನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ ಕಂಪೈಲರವರ ಹೆಸರಿಗೆ. ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ ಹಾಸಲ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲಿಷ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲಿಷ ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಚಹ ಮಾಹೇ ಯಾ ಕ್ವಾರಟರಿಗೆ			ದಾಮಾಷಾಯಿ ಪ್ರಕಾರ ದರಗಳು.	
			ರೂ.	ಆ.
ಚಾಲ್ತಿ ವರುಷದ ಗೆಜೆಟಿ ಕಾಪಿ 1ಕ್ಕೆ ರೆಗ್ಯುಲೇಷನ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ			0	8

ಹಿಂದಿನ ವರುಷದ ಗೆಜೆಟಿ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮುಕ್ಕಾಂ 155ನೆ ನಂಬರ ಉಳ್ಳ ಗೆವರ್ನಮೆಂಟ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟಿ ಮೈಸೂರು ಸೀಮೆಯಲ್ಲಿನ ಪಟೇಲ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿರ್ಧಾರೆಂಬದಾಗಿ ಆಯಾ ತಾಲ್ಲೂಕು ಅಮಲದಾರರಿಂದ ಒಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ 21ನೆ ಮುಕ್ಕಾಂ 24205—6—ಜಿ. 6200ನೆ ನಂಬರ ಗವರ್ನಮೆಂಟ ಆರಡರ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ ಮಾಡಲ್ಪಟ್ಟಿರುತ್ತೆ.

ಸಿವಿಲ ಕೋರ್ಟಿನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇಷನ ಅನುಸರಿಸಿ ಸರ್ಟಿಫಿಕೇಟ ಬಗ್ಗೆ ನೋಟಿಸಗಳು :—		ರೂ.	ಆ.
ಮೊದಲನೇ ದಫೆ ಛಾಯಿಷ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ		2	8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ		1	4
ಸಿವಿಲ ಪ್ರೊಸಿಡ್ಯೂರ ಕೋಡಿನ 317ನೆ ಸೆಕ್ಷನ ಅನುಸರಿಸಿ ದಿವಾಳಿ ಅಪ್ಲಿಕೇಷನಗಳ ಬಗ್ಗೆ ನೋಟಿಸಗಳಿಗೆ:—			
ಮೊದಲನೇ ಸಲಕ್ಕೆ		5	0
ಎರಡನೇ ವ ಆತರುವಾಯ ಪ್ರತಿ ದಫೆಕ್ಕೆ		2	8
ಸಿವಿಲ ಪ್ರೊಸಿಡ್ಯೂರ ಕೋಡಿನ 354ನೆ ಸೆಕ್ಷನ ಅನುಸರಿಸಿ ಸಿವಿಲ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗೆರ ಚಾರ್ಜ ಪ್ರಕಟಿಸಲ್ಪಡುತ್ತವೆ.			
ಡ್ಯೂಪ್ಲಿಕೇಟ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಗೆ ರೆವಿನ್ಯೂ ಆಫಿಸರಗಳು ಕೊಡುವ ನೋಟಸಗಳಿಗೆ:—			
ಮೊದಲನೇ ಸಲಕ್ಕೆ	ಪುಟ 1ಕ್ಕೆ	10	0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ	,,	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ ಮಾಡಲ್ಪಡುತ್ತೆ:—			
ಮೊದಲನೇ ದಫೆ ಇಂಗ್ಲೀಷ ಅಥವಾ ಕನ್ನಡಕ್ಕೆ	ಪಂಕ್ತಿ 1ಕ್ಕೆ	0	8
ಎರಡನೇ ದಫೆ ಡಿಟೋ	ಡಿಟೋ	0	6
ಮೂರನೇ ವ. ಆತರುವಾಯ ಪ್ರತಿ ಸಲಕ್ಕೆ		0	4

ಷರಾ.—ಗೆಜೆಟಿ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜು ಬಾಬತು ಮೊಬಲಗುಗಳನ್ನು ಸರ್ಕಾರಿ ಬಜಾನೆಗಳು ಜಮೆ ಹಿಡಿಯತಕ್ಕ ಬಗ್ಗೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಬಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ ಮಜಕೂರಿಗೆ ದಾಖಲ ಬಗ್ಗೆ ರವಾನಿಸತಕ್ಕದ್ದು. ಮನಿ ಆರ್ಡರ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟಿ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ ಗವರ್ನಮೆಂಟ ಜನರಲ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟಿ ತಲಪಲಿಲ್ಲವೆಂಬ ಫಿರ್ಯಾದಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಸ ವ ಇಸ್ತಿಹಾರನಾಮೆಗಳೂ ಆ ಗೆಜೆಟಿ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ಒಳಗಾಗಿ ಕಂಪೈಲರ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ನನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ ಇಲ್ಲ.

ಸಿ. ಹೆಚ. ಪಿಟ್ಸ,
ಕಂಪೈಲರ, ಮೈಸೂರ ಗೆಜೆಟಿ.

ಮೈಸೂರ ಗೆಜೆಟ್.

ನಂ. 42.] ಸರ್ಕಾರದಿಂದ ಪ್ರಾಯಿಷ್ ಆದು. [ನಂ. 44.

ಬೆಂಗಳೂರು, ಗುರುವಾರ, ನವೆಂಬರ್ ತಾ॥ 7, ಸನ್ 1907.

IIನೆ ಭಾಗ.

ಇಂಡ್ಯಾ ಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜಿಯರು ವಗೈರೆಯರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರು ಡಿಸ್ಟ್ರಿಕ್ಟು ಎಕ್ಸೈಜು ಆಫೀಸು.

ಇಸ್ತಿಹಾರ್‌ನಾಮೆ

ಮೈಸೂರು, ತಾರೀಖು 2ನೆ ಅಕ್ಟೋಬರ್ 1907.

ಈ ಕೆಳಗೆ ಕಾಣಿಸಿರುವ ಗ್ರಾಮಗಳ ಇನಾಂದಾರರುಗಳಿಗೆ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಾಣಿಸಿರುವ ಇನಾಂ ಗ್ರಾಮಗಳ ಬಾಬತು ಮಾನ್ಯದಾರರಿಗೆ ಆಯಾ ಗ್ರಾಮದ ಶೇಂದಿ ಹುಟ್ಟುವಳಿ ಹಕ್ಕು ಇರುವ ವಿಚಾರದಲ್ಲಿ ಕೆಳಗೆ ನಮೂದಿಸಿರುವ ತಾರೀಖುಗಳಲ್ಲಿ ಅವಶ್ಯವಿರುವ ವಿಚಾರಣೆ ನಡಿಸಲ್ಪಡುತ್ತೆ ಆಯಾ ಗ್ರಾಮಗಳಿಗೆ ಸಂಬಂಧಪಟ್ಟ ಇನಾಂದಾರರುಗಳು ಖುದ್ದಾಗಿಯಾಗಲೀ ಅಥವಾ ಅವರಿಂದ ಮೊಕ್ತ್ಯಾರುನಾಮೆ ಪಡದವರಾಗಲೀ ಅವಶ್ಯವಿರುವ ಸನ್ನದು ಆಯಾ ಗ್ರಾಮದ ಇನಾಂ ಸೆಟ್ಲುಮೆಂಟು ರಿಜಿಸ್ಟರು ಎಕ್‌ಸ್ಟ್ರ್ಯಾಕ್ಟು ಮುಂತಾದ ದಾಖಲೆಗಳ ಸಹ ಮೈಸೂರಲ್ಲಿ ನಮ್ಮ ಆಫೀಸು ಬಳಿ ನಿಯಾಮಕ ಮಾಡಲ್ಪಟ್ಟ ತಾರೀಖಿನ ಹಗಲು 11 ಘಂಟೆಗೆ ಸರಿಯಾಗಿ ಹಾಜರಾಗತಕ್ಕದ್ದು. ಹಾಗೆ ಹಾಜರಾಗದೆ ತಪ್ಪಿದಲ್ಲಿ ರೂಲ್ಸು ಮೇರೆ ಕ್ರಮ ಜರಿಗಿಸಲ್ಪಡುತ್ತೆ. ನಂತರ ಬರುವ ಯಾವ ತಕರಾರನ್ನೂ ಅಂಗೀಕರಿಸಲು ಆಗಲಾರದಾಗಿ ತಿಳಿಯಪಡಿಸಿದೆ.

ತಾಲ್ಲೂಕು.	ಗ್ರಾಮ.	ಹೀರಿಂಗು ತಾರೀಖು.
ಮೈಸೂರು ...	ಮದ್ದೂರು ...	1907ನೆ ನವಂಬರು 26
ಡಿಟ್ಟೋ ...	ಕಲ್ಲಹಳ್ಳಿ ...	ಡಿಟ್ಟೋ 26
ನಂಜನಗೂಡು ...	ಹಟ್ವಾಳು ...	ಡಿಟ್ಟೋ 27
ಡಿಟ್ಟೋ ...	ಕಣಿಯನೂರು ...	ಡಿಟ್ಟೋ 27
ಮೈಸೂರು ...	ಕಡಕೊಳ, ಸಿಂದುವಳ್ಳಿ ...	ಡಿಟ್ಟೋ 27
ಡಿಟ್ಟೋ ...	ದುದ್ದಗೆರೆ ...	ಡಿಟ್ಟೋ 28
ಡಿಟ್ಟೋ ...	ಗೋಪಾಲಪುರ ...	ಡಿಟ್ಟೋ 28
ಡಿಟ್ಟೋ ...	ಯಂಡೆಹಳ್ಳಿ ...	ಡಿಟ್ಟೋ 29

ಎ. ಕೆ. ಸೈಯದ್ ತಾಜ್‌ಪೀರ್,
ಡಿಸ್ಟ್ರಿಕ್ಟು ಎಕ್ಸೈಜ್ ಆಫಿಸರ್, ಮೈಸೂರು.

ಫಾರೆಸ್ಟ್ ಇಲಾಖಾ.

ಸಂಡಲ್ ಹರಾಜ್ ನೋಟಿಫಿಕೇಷನ್.

ತಾರೀಖು 24ನೆ ಆಗಸ್ಟ್ 1907ನೆ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಸರಕಾರದ ಶ್ರೀಗಂಧದ ಸಾಲಿಯಾನಾ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರದರ ಬಾಜೂದಲ್ಲಿ ನಮೂದಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡೆಸಲ್ಪಡುವದು:—

ಡಿಸ್ಟ್ರಿಕ್ಟು.	ಕೋಠಿ.	ಹರಾಜು ತಾರೀಖು.	ಸುಮಾರು ಮೊತ್ತ.
			ಟನ್‌ಗಳು.
ಶಿವಮೊಗ್ಗ ...	ತೀರ್ಥಹಳ್ಳಿ ...	18ನೆ ನವೆಂಬರ್ 1907 ...	200
ಡಿಟೋ ...	ಸಾಗರ ...	21ನೆ ಡಿಟೋ ...	150
ಡಿಟೋ ...	ಶಿವಮೊಗ್ಗ ...	25ನೆ ಡಿಟೋ ...	500
ಕಡೂರು ...	ತರೀಕೆರೆ ...	28ನೆ ಡಿಟೋ ...	250
ಡಿಟೋ ...	ಚಿಕ್ಕಮಗಳೂರು ...	2ನೆ ಡಿಸೆಂಬರ್ 1907 ...	350
ಹಾಸನ ...	ಹಾಸನ ...	5ನೆ ಡಿಟೋ ...	150
ಬೆಂಗಳೂರು ...	ಬೆಂಗಳೂರು ...	9ನೆ ಡಿಟೋ ...	100
ಮೈಸೂರು ...	ಶ್ರೀರಂಗಪಟ್ಟಣ ...	12ನೆ ಡಿಟೋ ...	250
ಡಿಟೋ ...	ಹುಣಸೂರು ...	16ನೆ ಡಿಟೋ ...	500
		ಜುಮ್ಲಾ	2,450

2. ಪ್ರತಿ ಕೋಠಿಯಲ್ಲಿಯೂ ಹರಾಜಾಗುವ ಕ್ಲಾಸುವಾರು ಲಾಟು, ಮೊತ್ತ ಮತ್ತು ಇತರ ತಪಶೀಲುಗಳು ಬರುವ ಅಕ್ಟೋಬರ್ ಮಾಹೆಯ ಆಖೈರಿನಲ್ಲಿ ತಿಳಿಯಪಡಿಸುತ್ತೆ.

ಎಂ. ಮುತ್ತಣ್ಣ,
ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ಇಸ್ತಿಹಾರ್ನಾಮಾ, ತಾರೀಖು 28ನೆ ಅಕ್ಟೋಬರ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಈ ಕೆಳಗೆ ಕಂಡ ಡಿಪೋಗಳಲ್ಲಿ ಟಿಂಬೀನಾವನ್ನು ಸದರಿ ಡಿಪೋಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ದಿವಿ 12 ಘಂಟೆಗೆ ಹರಾಜು ಪ್ರಾರಂಭಿಸಲ್ಪಡುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟಾಗಳ ವಿವರ.	ಸಲಿ ಅಡಿ [illegible] ನಂಬರ್.	ಅಡಿ.	ಷರಾ.
1	ಮೈಸೂರು ಉಡಿ-ಯಾರ್ಡ್	27-11—07	ಸಾಗ್ವಾನಿ ...	1,200	30,000	
			ಹೊನ್ನೆ ...	100	20,000	
			ಮತ್ತಿ ...	150	3,000	
			ಸಾಗ್ವಾನಿ ಸರ ...	2,000	2,000	
			ಬೀಡೆ ...	160	2,000	
2	ನಂಜನಗೂಡು ಡಿಪೋ.	28-11—07	ಸಾಗ್ವಾನಿ ...	200	5,000	
			ಹೊನ್ನೆ ...	200	5,000	
			ಮತ್ತಿ ...	180	2,000	
			ಬೀಡೆ ...	100	2,000	

ಹರಾಜು ಷರತ್ತುಗಳು.

1. ಬಿಡ ದರಖಾಸ್ತುದಾರನು ಹರಾಜು ಆದ 3 (ಮೂರು) ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಶೇಕಡ 25 ರಂತೆ ಆಗುವ ಮೊಬಲಗನ್ನು ಹತ್ತರವಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜು ಮಾಡಿ ಅದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.

2. ಖರೀದಿ ದಾಖಲಗು ವ್ಯಕ್ತಿ ವುಳಿದ ವೊಬಲಗನ್ನು ಹರಾಜಿನ ತಾರೀಖು ಲಾಗಾಯಿತು 30 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ನೋಡಲೇ ಕಟ್ಟಿರುವ ಡಿಪಾಜಿಟ್ ವೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.

3. ತಾವು ಹರಾಜಿನಲ್ಲಿ ಪಡದಿರುವ ಚವುಬೀನಾ ಕಿಮ್ಮತ್ತಿ ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚವುಬೀನಾವನ್ನು ಸಾಗಿಸುವುದಕ್ಕೆ ರಹದಾರಿ ಪಡೆಯದೆಯೂ ಮೊನ್ನು ರಫ್ತು ಮಾಡಕೂಡದು.

4. ಹರಾಜು ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ವೊಬಲಗಿನ ಮೇಲೆ ವರ್ಷ ಒಂದಕ್ಕೆ ಶೇಕಡ ಒಂದಕ್ಕೆ 12 ರೂಪಾಯಿನ ಮೇರೆ ಡಿಪೋ ಭಾಡಾ ವಸೂಲು ಮಾಡಲಾಗುತ್ತೆ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ, ಮೈಸೂರು ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ಸ್ನ 1907ನೆ ಇಸವಿ ಸೆಪಟಂಬರ್ ತಾರೀಖು 23ರಲ್ಲು ನಡದ ಡಿಸ್ಟ್ರಿಕ್ಟು ಬೋರ್ಡ್ ಮೀಟಿಂಗಿನಲ್ಲಿ ಆದ ತೀರ್ಮಾನಗಳು.

ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ಮೆ॥ ಸಿ. ಶ್ರೀಕಂಠೇಶ್ವರ ಐಯ್ಯರ್, ಬಿ.ಎ., ಬಿ.ಎಲ್., ಪ್ರೆಸಿಡೆಂಟರು.
2. ,, ಬಿ. ವೆಂಕೋಬರಾವ್, ಬಿ.ಎ. ವೈಸ್ ಪ್ರೆಸಿಡೆಂಟರು.
3. ,, ಕೆ. ಶ್ರೀನಿವಾಸರಾಯರು, ಮಾಲೂರು ಡಿವಿಜನ್ ಅಸಿಸ್ಟೆಂಟ್ ಕಮಿಷನರು.
4. ,, ಜಿ. ಅರಾವಮುದ್ದೈಯ್ಯಂಗಾರ್, ಬಿ.ಎ., ಬಿ.ಎಲ್., ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರು.
5. ,, ಕೆ. ಕೃಷ್ಣಯ್ಯಂಗಾರ್ರವರು, ಎಗ್ಸಿಕ್ಯೂಟಿವ್ ಇಂಜನಿಯರ್.
6. ,, ಎಸ್. ಗೋಪಾಲರಾವ್, ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರರವರು.

ನಾನ್ ಅಫಿಷಿಯಲ್ ಮೆಂಬರುಗಳು.

ಕ್ಲಾಜು (ಡಿ)

1. ಮೆ॥ ಮುನಿನಾರಣಯ್ಯಶೆಟ್ಟರವರು.
2. ,, ರಾಮರಾಯರವರು, ಮಾಲೂರು.
3. ,, ದೊಂತಿ ಚಿಕ್ಕಸುಬ್ಬರಾಯಪ್ಪನವರು, ಶಿಡ್ಲಘಟ್ಟ.
4. ,, ಎಂ. ಚೌಡರಡ್ಡಿಯವರು, ಚಿಂತಾಮಣಿ.
5. ,, ಉಮ್ಮಂಣ್ಣೈಯ್ಯನವರು, ಬವರಿಂಗ್‌ಪೇಟೆ.
6. ,, ಕಾಸ್ಟಿ ಹೈದರಸಾಹೇಬರವರು, ಮುಳಬಾಗಲು.
7. ,, ಲಕ್ಷ್ಮಣರಾಯರವರು, ಗುಡಿಬಂಡೆ.
8. ,, ರಾಮಣ್ಣನವರು, ಗೋರಿಬಿದನೂರು.
9. ,, ನಾರಾಯಣಸಾಮಿಶೆಟ್ಟರು, ಚಿಕ್ಕಬಳ್ಳಾಪುರ.
10. ,, ಪಿ. ಶೀನಪ್ಪನವರು, ಬಾಗೇಪಲ್ಲಿ.

ಕ್ಲಾಸ್ (ಇ)

11. ಮೆ॥ ಬಸವೆಗೌಡರವರು, ಬವರಿಂಗಪೇಟೆ.
12. ,, ವೆಂಕಟಸಾಮಿರಡ್ಡಿಯವರು, ಶ್ರೀನಿವಾಸಪುರ.
13. ,, ಅಪ್ಪಾಜಿರಡ್ಡಿಯವರು, ಚಿಂತಾಮಣಿ.
14. ,, ಗೌಡಗೆರೆ ಕೃಷ್ಣಾಚಾರ್ರು, ಗೋರೀಬಿದನೂರು.

ಗೈರ ಹಾಜರು.

ಎಕ್ಸ್ ಅಫಿಷಿಯೊ ಮೆಂಬರು.

ಮೆ॥ ಹನುಮಾನ್ ಸಿಂಗ್, ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು.

ನಾನ್ ಅಫಿಷಿಯಲ್ ಮೆಂಬರುಗಳು.

ಕ್ಲಾಸ್ (ಡಿ)

1. ಮೆ॥ ಮಹಮದ್‌ಹರ್ನೆಸಾಹೇಬರವರು, ಶ್ರೀನಿವಾಸಪುರ.
2. ,, ಕೆ. ಶ್ರೀನಿವಾಸಾಚಾರ್ರವರು, ಶಿಡ್ಲಘಟ್ಟ.

ಕ್ಲಾಜು (ಇ)

3. ,, ಬಾಗೇಪಲ್ಲಿ ವೆಂಕಟರಡ್ಡಿಯವರು.

ಈ ಕೆಳಗೆ ನವುೂದಿಸಿರುವ ಅಮಲ್ದಾರ್ರುಗಳೂ ಮತ್ತು ಡೆಪ್ಯುಟಿ ಅಮಲ್ದಾರ್ರು ಸಹ ಹಾಜರಿದ್ದರು.

1. ಮಿ॥ ಸಿ. ವಿ. ನಾರಾಯಣರಾಯರವರು, ಕೋಲಾರ ತಾಲ್ಲೂಕು ಅಮಲ್ದಾರ್ರು.
2. ,, ಎಂ. ಉಬೇದುಲ್ಲ, ಬೌರಿಂಗಪೇಟೆ ತಾಲ್ಲೂಕು ಅಮಲ್ದಾರ್ರು.
3. ,, ವೈ. ನರಸಿಂಗರಾಯರು, ಶ್ರೀನಿವಾಸಪುರ ತಾಲ್ಲೂಕು ಅಮಲ್ದಾರ್ರು.
4. ,, ಎಂ. ಎಸ್. ಪುಟ್ಟಣ್ಣನವರು, ಮುಳಬಾಗಲ್ ತಾಲ್ಲೂಕು ಅಮಲ್ದಾರ್ರು.
5. ,, ಜಿ. ನಾರಾಯಣರಾಯರು, ಶಿಡ್ಲಘಟ್ಟ ತಾಲ್ಲೂಕು ಅಮಲ್ದಾರ್ರು.
6. ,, ಆರ್. ಶ್ಯಾಮರಾಯರು, ಚಿಕ್ಕಬಳ್ಳಾಪುರ ತಾಲ್ಲೂಕು ಅಮಲ್ದಾರ್ರು.
7. ,, ಕೆ. ಹನುಮಂತರಾವ್, ಗೋರಿಬಿದನೂರು ತಾಲ್ಲೂಕು ಅಮಲ್ದಾರ್ರು.
8. ,, ವಿ. ಗೋಪಾಲರಾವ್, ಬಾಗೇಪಲ್ಲಿ ತಾಲ್ಲೂಕು ಅಮಲ್ದಾರ್ರು.
9. ,, ಕೆ. ವೆಂಕಟಸಾಮಿ ಐಯ್ಯರ್, ಮಾಲೂರು ತಾಲ್ಲೂಕು ಅಮಲ್ದಾರ್ರು.
10. ,, ಅನಂತರಾಮೈಯ್ಯಂಗಾರ್, ಗುಡಿಬಂಡೆ ಡೆಪ್ಯುಟಿ ಅಮಲ್ದಾರ್ರು.

(1) ಕಳೆದ ಮೀಟಿಂಗ್ ಪ್ರೊಸೀಡಿಂಗ್ಸನ್ನು ಓದಿ ನಿರ್ಧರಿಸಲ್ಪಟ್ಟಿತು.

(2) ಕಂಟ್ರೋಲರ್ ಸಾಹೇಬರವರಿಂದ ಆಡಿಟ್ಗಾಗಿ ಬಂದ 1907ನೆ ಮೇ, ಮತ್ತು ಜೂನ್ ಮಾಹೆಗಳ ಲೆಖ್ಖಗಳು ಓದಿ ರಿಕಾರ್ಡು ಮಾಡಲ್ಪಟ್ಟಿತು.

(3) ದಸರಾ ಪ್ರಜಾಪ್ರತಿನಿಧಿ ಸಭೆಯ ಮೆಂಬರಾದ ಗೌಡಗೆರೆ ಕೃಷ್ಣಾಚಾರ್ರಿಂದ ತರಲ್ಪಟ್ಟ ಗೋರೀಬಿದನೂರು ತಾಲ್ಲೂಕು ಮಂಚೇನಹಳ್ಳಿಯಿಂದ ತೊಂಡೇಭಾವಿ ವರಿಗೆ ಒಂದು ರಸ್ತೆಯು ಅವಶ್ಯಕರವೆಂಬುವ ವಿಷಯುವು ಚರ್ಚಿಸಲ್ಪಟ್ಟಿತು.

ಈ ರಸ್ತೆಯನ್ನು ಹಾಕುವದು ಸಾಧ್ಯವೇ ಮತ್ತು ಈ ಸಾಲಿನ ಬಡ್ಜೆಟ್ಟಿನಲ್ಲಿ ಸೇರಿಸಿರುವ 1,000 ರೂಪಾಯಿಗಳನ್ನು ಯಾವ ವಿಧವಾಗಿ ಸರಿಯಾಗಿ ಉಪಯೋಗಿಸಬಹುದೊ ಎಂಬುವದಕ್ಕೂ ಅಜಮಾಯಿಷಿಯಿಂದ ರಿಪೋರ್ಟು ಮಾಡಬೇಕೆಂದು ಕೋಲಾರ ಡಿವೀಜನ್ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರಿಗೆ ಬರಿಸಬಹುದೆಂದು ತೀರ್ಮಾನಿಸಲ್ಪಟ್ಟಿತು.

(4) ಸದರಿ ಮೇಲ್ಕಂಡ ಕೃಷ್ಣಾಚಾರ್ರವರಿಂದ ತರಲ್ಪಟ್ಟ ಹತ್ತು ವರ್ಷಗಳ ಕೆಳಗೆ 1,000 ರೂಪಾಯಿ ಲಾಗುವಡು ಖರ್ಚು ಮಾಡಿ ದುರಸ್ತು ಮಾಡಿರುವ ವಾಟದ ಹೊಸಳ್ಳಿಯ ಮಾರ್ಗವಾಗಿ ಬಾಗೇಪಲ್ಲಿಯಿಂದ ಗೋರಿಬಿದನೂರಿಗೆ ಹೋಗುವ ರಸ್ತೆಯನ್ನು ಪಬ್ಲಿಕ್ ಇಲಾಖೆಯಿಂದ ದುರಸ್ತು ಮಾಡಿಸಬೇಕೆಂಬುವ ವಿಷಯುವನ್ನು ಚರ್ಚಿಸಲ್ಪಟ್ಟಿತು.

ಇದನ್ನು ಅಜಮಾಯಿಷಿಯಿಂದ ಇದು ಆಗಬಹುದೆ ಇಲ್ಲವೆ ಎಂಬುವದಕ್ಕೆ ತಮ್ಮ ಅಭಿಪ್ರಾಯುವನ್ನು ತಿಳಿಸಬೇಕೆಂದು ಕೋಲಾರ ಡಿವೀಜನ್ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರಿಗೆ ಬರಿಸಬಹುದೆಂದು ನಿರ್ಧರಿಸಲ್ಪಟ್ಟಿತು.

(5) ಸ್ 1906—07ನೆ ಸಾಲಿನ ಡಿಸ್ಟ್ರಿಕ್ಟು ಫಂಡು ಆಡಳಿತದ ರಿಪೋರ್ಟನ್ನು ಓದಿ ಒಪ್ಪಲಾಯಿತು.

(6) ಈ ಕೆಳಗೆ ನಮೂದಿಸಿರುವ ತಾಲ್ಲೂಕು ಬೋರ್ಡು ಮೀಟಿಂಗುಗಳ ತೀರ್ಮಾನಗಳನ್ನು ನಿರ್ಧರಿಸಲ್ಪಟ್ಟಿತು.

ತಾಲ್ಲೂಕು.	ತಾರೀಖು.
ಶ್ರೀನಿವಾಸಪುರ	14—8—1907
ಮುಳಬಾಗಲ್	15—8—1907
ಶಿಡ್ಲಘಟ್ಟ	15—8—1907
ಗೋರೀಬಿದನೂರು	21—8—1907
ಬಾಗೇಪಲ್ಲಿ	27—8—1907

(7) ಮುಂದಿನ ಮೀಟಿಂಗ್ ಸ್ 1907ನೆ ಇಸವಿ ಡಿಸೆಂಬರ ಮಾಹೆ 7ನೆ ತಾರೀಖಿನಲ್ಲಿ ನಡಿಸಬಹುದೆಂದು ನಿಶ್ಚಯಿಸಲ್ಪಟ್ಟಿತು.

ಬಿ. ವೆಂಕೋಬರಾವ್,
ಛಾರ್ ಪ್ರೆಸಿಡೆಂಟ್.

ತುಮಕೂರು ಡಿಸ್ಟ್ರಿಕ್ಟು.

ತುಮಕೂರು ಡಿಸ್ಟ್ರಿಕ್ಟ ಡಿಸ್ಟ್ರಿಕ್ಟು ಬೋರ್ಡು ಮೆಂಬರುಗಳು ಸನ 1907ನೆ ಇಸವಿ ಸೆಪಟಂಬರ 27ನೆ ತಾರೀಖಿನಲ್ಲಿ ನಡೆಸಿದ ಮೀಟಂಗ ಪ್ರೊಸೀಡಿಂಗ್ಸ.

ನಂಬರು.	ಹೆಸರು.	ಹಾಜರು.	ಗೈರ ಹಾಜರು.
	ಕೆ. ಥೊರೆಸ್ವಾಮಿ ಅಯ್ಯರ್, ಎಸ್ಕ್ವಯರ್, ಡೆಪ್ಯುಟಿ ಕಮಿಷನರವರು ಮತ್ತು ಪ್ರಸಿಡೆಂಟರವರು.	ಹಾಜರು.	
	ಎಕ್ಸ ಅಫಿಷಿಯಲ್ ಮೆಂಬರುಗಳು.		
1	ಮೆ|| ಸಿ. ನಾರಾಯಣರಾಯರು, ಗುಬ್ಬಿ ಡಿವೀಜನ ಅಸಿಸ್ಟೆಂಟ ಕಮಿಷನರವರು ಮತ್ತು ವೈಸ ಪ್ರಸಿಡೆಂಟರು.	ಡಿಟೋ.	
2	,, ಸಿ. ವೆಂಕಟರಾಯರು, ಮದ್ದಗಿರಿ ಸಬ ಡಿವೀಜನ ಅಸಿಸ್ಟೆಂಟ ಕಮಿಷನರವರು.	ಡಿಟೋ.	
3	,, ಎಂ. ಶ್ರೀನಿವಾಸಮೂರ್ತಿಗಳು, ತುಮಕೂರು ಸಬ ಡಿವೀಜನ ಆಫಿಸರವರು.	ಡಿಟೋ.	
4	,, ಸಿ. ಎ. ಮಹದೇವ ಶಾಸ್ತ್ರಿಗಳು, ತುಮಕೂರು ಡಿವಿಜನ ಎಗ್ಸಿಕ್ಯೂಟಿವ ಇಂಜನಿಯರ ಯವರು.		ಗೈರ ಹಾಜರು.
5	,, ಸಿ. ಅಪ್ಪಾದೊರೆ ಮೊದಲಿಯಾರ, ಡಿಸ್ಟ್ರಿಕ್ಟ ಮೆಡಿಕಲ ಮತ್ತು ಸ್ಯಾನಿಟೆರಿ ಆಫಿಸರವರು.		ಡಿಟೋ.
6	,, ಎಸ್. ರಂಗಾಚಾರ್, ತುಮಕೂರು ಡಿಸ್ಟ್ರಿಕ್ಟು ಸ್ಕೂಲಗಳ ಡೆಪ್ಯುಟಿ ಇನಸ್ಪೆಕ್ಟರು.	ಡಿಟೋ.	
	ನಾನ ಅಫಿಷಿಯಲ್ ಮೆಂಬರುಗಳು.		
1	ಮೆ|| ಕೆ. ನಲ್ಲಪ್ಪನವರು, ತುಮಕೂರು ...	ಡಿಟೋ.	
2	,, ಯಲ್ಲಯ್ಯ ಬಿನ ದೊಡ್ಡ ಪುಟ್ಟಯ್ಯನವರು, ತುಮಕೂರು ...		ಕಾಯಿಲೆ ಸಬಬು ಗೈರ ಹಾಜರು.
3	,, ಶಿದ್ದಲಿಂಗಶೆಟ್ಟಿ ಬಿನ ಶಿದ್ದೇಗೌಡರು, ತುಮಕೂರು ...		ಡಿಟೋ.
4	,, ಕೆ. ಬಿ. ಶ್ರೀನಿವಾಸರಾಯರು, ಮದ್ದಗಿರಿ ...	ಡಿಟೋ.	
5	,, ಜ. ಶಿವರಾಮಯ್ಯನವರು, ಮದ್ದಗಿರಿ ...		ಗೈರ ಹಾಜರು
6	,, ಗಂಗೇಗೌಡರು, ಚಿಕ್ಕನಾಯಿಕನಹಳ್ಳಿ ...		ಜರೂರು ಸ್ವಂತ ಕೆಲಸದ ನಿಮಿತ್ಯವಾಗಿ ಮೀಟಂಗಿಗೆ ಬರಲು ಅನಾನುಕೂಲವೆಂತ ಬರೆಸಿರುತ್ತಾರೆ.
7	,, ಸಿ. ಶ್ರೀನಿವಾಸರಾಯರು, ಪಾವುಗಡ ...	ಡಿಟೋ.	
8	,, ವೆಂಬಾರ ವೆಂಕಟನರಸಿಹ್ಮಾಚಾರ್ಯರು, ಪಾವುಗಡ ...	ಡಿಟೋ.	
9	,, ಪುಟ್ಟಶಾಮೈಯ್ಯ, ತಿಪಟೂರು ...		ಗೈರ ಹಾಜರು
10	,, ಶಿಂಗ್ರಿ ನಂಜಪ್ಪನವರು, ತಿಪಟೂರು ...		ಕಾಯಿಲೆ ಸಬಬು ಗೈರ ಹಾಜರು.
11	,, ದೊಡ್ಡ ಮಲ್ಲಯ್ಯನವರು, ಶಿರಾ ...		ಡಿಟೋ.
12	,, ಕೆ. ರಾಮಾನುಜೈಯ್ಯಂಗಾರ್ರು, ಗುಬ್ಬಿ ...	ಡಿಟೋ.	
13	,, ಹೊನ್ನಲಿಗೆಗೌಡರು, ಗುಬ್ಬಿ ...		ಗೈರ ಹಾಜರು
14	,, ಕೃಷ್ಣಸ್ವಾಮಿಶೆಟ್ಟರು, ಗುಬ್ಬಿ ...	ಡಿಟೋ.	
15	,, ಆಬಿದಲ್ಲಿ ಸಾಹೇಬರು, ಕೊರಟಗೆರೆ ...	ಡಿಟೋ.	
16	,, ವಿ. ನಾರಣಪ್ಪನವರು, ತುರ್ವೇಕೆರೆ ...		ಡಿಟೋ.
17	,, ಶಿಂಗ್ರಾಚಾರ್ಯರು, ಕುಣಿಗಲ ...	ಡಿಟೋ.	
18	,, ಜಿ. ರಾಮಸ್ವಾಮಯ್ಯನವರು, ಕುಣಿಗಲ ...		ಡಿಟೋ.
19	,, ಚಿಕ್ಕಣ್ಣಶೆಟ್ಟರು, ತಿಪಟೂರು ...		ಘೌತಿಯಿಂದ ಇವರ ಬಿವಜಿಗೆ ಬೇರೆ ಮೆಂಬರು ಚುನಾಯಿಸತಕ್ಕ ವಿಚಾರದಲ್ಲಿ ನಡವಳಿಕೆಲಿರುತ್ತೆ.

I. ಸನ 1907ನೆ ಇಸವಿ ಏಪ್ರೆಲ ಮತ್ತು ಮೇ ಮಾಹೆಗಳ ಆಡಿಟ್ಟಾದ ಲೆಖ್ಖಗಳನ್ನು ಓದಿ ಪ್ಯಾಸ್ಮಾಡಲಾಯಿತು.

II. ಸನ 1906—07ನೆ ಸಾಲ ಡಿಸ್ಟ್ರಿಕ್ಟ ಫಂಡು ಅಡ್ಮಿನಿಸ್ಟ್ರೇಷನ ರಿಪೋರ್ಟು ಅದರ ಮಲಸ್ತೂಪಿಗಳು ಓದಿ ಪ್ಯಾಸ್ಮಾಡಲಾಯಿತು.

III. ಸನ 1907ನೆ ಇಸವಿಯ ದಸರಾ ಪ್ರಜಾ ಪ್ರತಿನಿಧಿ ಸಭೆಯ ಮೆಂಬರುಗಳು 27—8—1907ನೆ ಮಧ್ಯಾಹ್ನದಲ್ಲಿ ತುಮಕೂರಿನಲ್ಲಿ ನಡೆಸಿದ ಪ್ರಿಲಿಮಿನೆರಿ ಮೀಟಂಗನಲ್ಲಿ ಈ ಕೆಳಗೆ ಕಂಡ ವಿಷಯಗಳು ಚರ್ಚಿತವಾಗಿ ಆಯಾ ವಿಷಯಗಳ ಫೈಲ ಬೋರ್ಡುನವರ ತೀರ್ಮಾನ ಈ ಕೆಳಗೆ ನಮೂದಿಸಿರುತ್ತೆ.

ದಸರಾ ಪ್ರಜಾಪ್ರತಿನಿಧಿ ಸಭೆಯ ಮೆಂಬರ ಹೆಸರು.	ವಿಷಯಗಳು.
ಮಿ|| ಶೀನಪ್ಪನವರು, ತುಮಕೂರು.	ತಾಲ್ಲೂಕು ಅವಲ್ದಾರ್ರ ಸಹಾಯದಂತೆ ತುಮಕೂರಿಂದ ಊರ್ಡಿಗೆರೆಗೆ ಇರುವ ರಸ್ತೆಯನ್ನು ಕೋಳಾಲಕ್ಕೆ ಅಂದರೆ 6 ಮೈಲಿ ವರಿಗೂ ಬಡಾಯಿಸಿ ಇರುತ್ತೆ. ಈ ರಸ್ತೆಗೆ ಅಲ್ಲಲ್ಲಿ ಆಗಬೇಕಾಗಿರುವ ಸೇತುವೆಗಳನ್ನು ಸರ್ಕಾರದಿಂದ ಕಟ್ಟಿಸಿಕೊಡಬೇಕೆಂತಲೂ ಪ್ರತಿ ವಾರದಲ್ಲಿಯೂ ಸಂತೆ ನಡೆಯುವ ಹೂಲಿಕುಂಟೆ ಗ್ರಾಮದವರಿಗೆ ಸದರಿ ರಸ್ತೆಯನ್ನು ಬಡಾಯಿಸಿಕೊಡಬೇಕೆಂತಲೂ ಸಹಾ ಪ್ರಾರ್ಥನೆ. ಈ ವಿಷಯವನ್ನು ತಾಲ್ಲೂಕು ಬೋರ್ಡಿನವರಿಗೆ ಅಭಿಪ್ರಾಯಕ್ಕಾಗಿ ಕಳುಹಿಸಬೇಕೆಂತಲೂ, ಇಲ್ಲಿನ ಪ್ರದೇಶವು ಕಲ್ಲು ಪ್ರದೇಶವಾಗಿರುತ್ತೆಂತಲೂ, ಅಂಥಾ ಮುಖ್ಯವಾದ ಚಿಕ್ಕ ನದಿಗಳು ಈ ಪ್ರಾಂತ್ಯ ಬಹಳ ಅಪರೂಪವಾಗಿರುತ್ತೆಂತಲೂ ಸಹಾ ತೀರ್ಮಾನಿಸಲಾಯಿತು. (2) ಕೋಳಾಲ ಗ್ರಾಮದಲ್ಲಿ 310 ಸಂಖ್ಯೆಗೆ ಜಾಸ್ತಿಯಾಗಿ ಮನೆಗಳು ಇರುತ್ತಾಗಿ ಇದನ್ನು ಯೂನಿಯನ್ ಆಗಿ ಏರ್ಪಾಟು ಮಾಡಬೇಕೆಂತ ಪ್ರಾರ್ಥನೆ. ಯೂನಿಯನ್‌ಗಳಾಗಿ ಏರ್ಪಡಾಗಬೇಕೆಂತ ನಮ್ಮೂದಿನಿಂದ ತುಮಕೂರು ತಾಲ್ಲೂಕು ಅಮಲ್ದಾರ್ರಿಂದ ತಲಪಿರುವ ಲೀಸ್ಟಿನಲ್ಲಿ ಈ ಗ್ರಾಮದ ಏಕೆ ದಾಖಲಾಗಲಿಲ್ಲವೆಂಬ ಅಂಶ ವಿಚಾರಿಸಬೇಕೆಂತ ತೀರ್ಮಾನಿಸಲಾಯಿತು.
ಮಿ|| ಕಡಬದ ಹುಚ್ಚವೀರೆಗೌಡರು, ಗುಬ್ಬಿ ತಾಲ್ಲೂಕು. ಮಿ|| ಕಗ್ಗೆರಪ್ಪನವರು, ,, ಮದಾರಸಾಬರು.	(3) (a) ಕೊಡಿಯಾಲದಿಂದ ಗುಬ್ಬಿ ವರಗಿನ ಶಿರಾ–ಗುಬ್ಬಿ ರಸ್ತೆ ರಿಪೇರಿ ಆಗತಕ್ಕ ಬಾಬ. (b) ಶಿರಾ-ನಲ್ಲಿಗೆರೆ ರಸ್ತೆಯಲ್ಲಿರುವ ಕೊಡಿಯಾಲದ ಗ್ರಾಮದ ಸರಹದ್ದಿನಿಂದ ಗುಬ್ಬಿ ರೈಲ್ವೆ ಸ್ಟೇಷನ್‌ಗೆ ರಸ್ತೆ ಆಗಬೇಕು. ಈ ರಸ್ತೆ ಅನಾವಶ್ಯಕವೆಂತಲೂ ಈ ರಸ್ತೆ ಮಾಡಿಸುವದು ವ್ಯರ್ಥಾ ಖರ್ಚೆಂತಲೂ, ನಿಟ್ಟೂರು ಮಾರ್ಗವಾಗಿ ಕ್ರಮವಾದ ರಸ್ತೇಲಿ ಹೋಗದೆ ಸುಮಾರು $2\frac{1}{2}$ ಮೈಲಿ ಫಾಸಲೆ ಕಮ್ಮಿ ಮಾಡಿಕೊಳ್ಳಲು ಹೋಗಬೇಕೆಂತ ಅಪೇಕ್ಷಿಸುವವರು ಹಾಲಿ ಇರುವ ಭಂಡಿ ಜಾಡೇ ಸಾಕಾದ್ದಾಗಿರುತ್ತೆಂತಲೂ ಮತ್ತು ನಿಟ್ಟೂರು ರೈಲ್ವೆ ಸ್ಟೇಷನ್ ಗುಬ್ಬಿಗಿಂತಲೂ ಕೊಡಿಯಾಲಕ್ಕೆ ಸಮೀಪವಾಗಿರುತ್ತೆಂತಲೂ ಸಹಾ ತೀರ್ಮಾನಿಸಲಾಯಿತು.
ಕಡಬದ ಮಿ|| ಹುಚ್ಚವೀರೆಗೌಡರು, ಗುಬ್ಬಿ ತಾಲ್ಲೂಕು.	(4) ಯೂನಿಯನ್‌ಗಳಲ್ಲಿ ರಸ್ತೆಗಳು ಆಗತಕ್ಕ ಬಾಬ— ಈ ಬಾಬೆ ಹಣ ವದಗಿದ ಹಾಗೆಲ್ಲಾ ಸಾಲಿಯಾನಾ ಡಿಸ್ಟ್ರಿಕ್ಟು ಫಂಡು ಬಡಜಟ್ಟುಗಳಲ್ಲಿ ಹಣ ದಾಖಲಾಗುತ್ತಲಿರುತ್ತೆಂತಲೂ ಆಯಾ ಯೂನಿಯನ್‌ಗಳ ಪ್ರಾಮುಖ್ಯತೆ ಅನುಸರಿಸಿ ಈ ಬಾಬತು ಕಾಂಗಾರಿಗಳಿಗೆ ನಿಗೆ ಕೊಡಲ್ಪಡತಕ್ಕದ್ದೆಂತಲೂ ಸಹಾ ತೀರ್ಮಾನಿಸಲಾಯಿತು.
ಕಡಬದ ಮಿ|| ಹುಚ್ಚವೀರೆಗೌಡರು, ಗುಬ್ಬಿ ತಾಲ್ಲೂಕು.	(5) ಪ್ರತಿ ವಾರದಲ್ಲೂ ಸಂತೆ ಆಗುವ ಕಲ್ಲೂರು ಮಾರ್ಗವಾಗಿ ಕಡಬದಿಂದ ಚಿಟ್ನಹಳ್ಳಿಗೆ ಒಂದು ರಸ್ತೆ ಆಗತಕ್ಕ ಬಾಬ. ಈ ಸಲಹೆ ಬೋರ್ಡಿನವರಿಗೆ ಸೂಕ್ತ ತೋರುವದಿಲ್ಲವೆಂತಲೂ ಭಾಟಾ ರಸ್ತೆಯಿಂದ ಕಲ್ಲೂರಿಗೆ ಹಾಲಿ ಇರುವ ಭಂಡಿ ಜಾಡು ಸಾಕಾಗಿ ಇರುತ್ತೆಂತಲೂ ಕಲ್ಲೂರಿಂದ ಚಿಟ್ನಹಳ್ಳಿಗೆ ಫಾಸಲೆ ಸುಮಾರು 3 ಮೈಲಿಗಳು ಆಗುತ್ತೆಂತಲೂ ಚಿಟ್ನಹಳ್ಳಿ ಕಲ್ಲೂರುನಂತೆ ರಸ್ತೆ ಆಗಬೇಕಾದ ಅವಶ್ಯಕತೆವುಳ್ಳ ಗ್ರಾಮಗಳು ಪ್ರತಿ ತಾಲ್ಲೂಕಿನಲ್ಲಿಯೂ ಅನೇಕವಿರುತ್ತೆಂತಲೂ ಹಾಗಿದ್ದಾಗ್ಯೂ ಈ ವಿಚಾರದಲ್ಲಿ ಪುನರಾಲೋಚನೆ ಬಗ್ಗೆ ಇತರ ಅರ್ಹವಾದ ಕಾರಣಗಳು ಈ ಮೇರೆ ಎಂಬುವದನ್ನು ಕುರಿತು ತಿಳಿಸತಕ್ಕ ಬಗ್ಗೆ ತಾಲ್ಲೂಕು ಬೋರ್ಡಿನವರನ್ನು ಕೇಳತಕ್ಕದ್ದೆಂದು ಸಹಾ ತೀರ್ಮಾನಿಸಲಾಯಿತು.
ಡಿಟೋ	(6) ಚೇಳೂರು–ಹಾಗಲ್ವಾಡಿ ರಸ್ತೇಲಿರುವ ಹೊಸಕೆರೆ ಗ್ರಾಮದಿಂದ ನಿಟ್ಟೂರು ರೈಲ್ವೆ ಸ್ಟೇಷನ್‌ಗೆ ಅಳಲಗಟ್ಟ–ಮೂಗನಾಯಕನಹಳ್ಳಿ ಗ್ರಾಮಗಳ ಮಾರ್ಗವಾಗಿ ಒಂದು ರಸ್ತೆ ಆಗತಕ್ಕ ಬಾಬ. ಹಾಲಿ ಇರುವ ಕ್ರಮವಾದ ರಸ್ತೆ ಸುಮಾರು 15 ಮೈಲಿಗಳು ಆಗಬೇಕೆಂತ ಅಪೇಕ್ಷಿಸುವ ಮಾರ್ಗದಿಂದ ಸುಮಾರು 4 ಮೈಲಿಗಳು ಉಳಿತಾಯವಾಗಬಹುದೆಂತಲೂ, ಬೋರ್ಡಿನವರು ಇಂಥಾ ಸಲಹೆಗಳನ್ನು ಅವರ ಸಮುಖಾವಲೋಕನೆಗೆ ತೆಗದುಕೊಳ್ಳಲು ಆಗಲಾರದೆಂತ ತೀರ್ಮಾನಿಸಲಾಯಿತು.
ಮಿ|| ಕಗ್ಗೆರಪ್ಪನವರು, ,, ಮದಾರಸಾಬರು.	(7) ಗುಬ್ಬಿ–ಹೆಬ್ಬೂರು ರಸ್ತೆಯ 2ನೆ ಮೈಲಿಯಿಂದ ಚಿಟ್ನಹಳ್ಳಿಗೆ ಒಂದು ರಸ್ತೆ ಆಗತಕ್ಕ ಬಾಬ. ಈ ರಸ್ತೆಯ ಉಪಯೋಗವು ಬಹಳ ಮಟ್ಟಿಗೆ ಅನುಮಾನಾಸ್ಪದವಾದ್ದೆಂತಲೂ ಈ ವಿಷಯವನ್ನು ತಾಲ್ಲೂಕು ಬೋರ್ಡಿನವರ ಅಭಿಪ್ರಾಯಕ್ಕಾಗಿ ಅವರಲ್ಲಿಗೆ ಕಳುಹಿಸತಕ್ಕದ್ದೆಂತಲೂ ಸಹ ತೀರ್ಮಾನಿಸಲಾಯಿತು.

ಜನರಲ್ ರೆಜ್ಯುಲ್ಯೂಷನ್.

ಬೋರ್ಡಿನವರಿಗೆ ಇತರೇ ಅನೇಕ ಬಾಬುಗಳಿಗಾಗಿ ಹಣ ವೆಚ್ಚಗಿಸಬೇಕಾದ ಅವಶ್ಯಕತೆ ಇದ್ದೇ ಇರುತ್ತೆ. ಆದ್ದರಿಂದ, ಹಾಲಿ ಇರುವ ರಸ್ತೆಗಳನ್ನು ಕ್ರಮವಾಗಿ ಇಟ್ಟುಕೊಳ್ಳಲಿಕ್ಕೇನೆ ಬಹಳ ಕಷ್ಟದಿಂದ ಹಣ ವದಗಿಸುತ್ತಲಿರುತ್ತೆ. ಅಲ್ಲಲ್ಲಿ ಕೆಲವು ಮೈಲಿಗಳ ಫಾಸಲ ಕಡಮೆ ಮಾಡಿಕೊಳ್ಳತಕ್ಕ ಉದ್ದೇಶದಿಂದ ಅಮುಖ್ಯವಾದ ಸಣ್ಣ ಸಣ್ಣ ಭಂಡಿಜಾಡುಗಳನ್ನು ರಸ್ತೆಗಳನ್ನಾಗಿ ಮಾಡಿದ್ದೆ ಆದರೆ ಅವುಗಳಿಗಿಂತಲೂ ಜನಗಳಿಗೆ ಅತ್ಯಂತ ಉಪಯುಕ್ತವಾದ ಇತರೇ ಕಾಂಗಾರಿಗಳನ್ನು ಬೋರ್ಡಿನವರು ನಿಲ್ಲಿಸಬೇಕಾಗಿ ಬರುತ್ತೆ. ಡಿಸ್ಟ್ರಿಕ್ಟು ಅಮುಲಿ ಇರುವ ವಬ್ಬು ಮುಖ್ಯವಾದ ಭಂಡಿ ಜಾಡುಗಳನ್ನು ಸರಿಯಾದ ಸ್ಥಿತೀಲಿ ಇಟ್ಟರತಕ್ಕ ಭಾಗದಲ್ಲೇನೋ ನಿಗೆ ಕೊಡಲ್ಪಡುತ್ತೆಂತ ಸಹಾ ತೀರ್ಮಾನಿಸಲಾಯಿತು.

ಮಂಜೂರಾದ ಡಿಸ್ಟ್ರಿಕ್ಟು ಕಾಂಗಾರಿಗಳ ತಃಖ್ತೆ.

	ಮೊಬಲಗು.
	ರೂ.
(1) ಶಿರಾ ತಾಲ್ಲೂಕು.—	
1. ತರೂರು ಗ್ರಾಮದಲ್ಲಿ ಒಂದು ಶೀನೀರು ಭಾವಿ ತೋಡಿಸತಕ್ಕ ಬಗ್ಯೆ ...	107.
2. ಶಿರಾ ಮುಸಾಫರಖಾನೆಯಲ್ಲಿ ಒಂದು ಲ್ಯಾಟರ್ನ್ ಕಟ್ಟತಕ್ಕ ಬಗ್ಯೆ ...	80.
3. ಶೀಬಿ ಛತ್ರದಲ್ಲಿರುವ ಭಾವಿಯನ್ನು ಆಳಪಡಿಸತಕ್ಕ ಬಗ್ಯೆ ...	25.
4. ಗಜ್ಜರಹಳ್ಳಿ ಬಳಿ ಒಂದು ಶೀನೀರು ಭಾವಿ ತೋಡಿಸತಕ್ಕ ಬಗ್ಯೆ ...	150.
5. ನಿಜಂತಿ ಗ್ರಾಮದಲ್ಲಿನ ಭಾವಿಯನ್ನು ಆಳಪಡಿಸತಕ್ಕ ಬಗ್ಯೆ ...	24.
6. ಕೊಟ್ಟ ಗ್ರಾಮದಲ್ಲಿ ಒಂದು ಶೀನೀರು ಭಾವಿ ತೋಡಿಸತಕ್ಕ ಬಗ್ಯೆ ...	260.
7. ಪಾತನಾಯಿಕನಹಳ್ಳಿಯಲ್ಲಿ ಒಂದು ಶೀನೀರು ಭಾವಿ ತೋಡಿಸತಕ್ಕ ಬಗ್ಯೆ ...	380.
8. ಕಳ್ಳಂಬೆಳ್ಳದ ಮುಸಾಫರಖಾನೆ ಕಾಂಗಾರಿ ಬಗ್ಯೆ ...	400.
ಜುಮ್ಲಾ ...	1,426.
(2) ತುಮಕೂರು ತಾಲ್ಲೂಕು.—	
ಚಿಕ್ಕನಾರುವಂಗಲದಲ್ಲಿ ಒಂದು ಶೀನೀರು ಭಾವಿ ತೋಡಿಸತಕ್ಕ ಬಗ್ಯೆ ...	28[illegible].
(3) ಮದ್ದಗಿರಿ ತಾಲ್ಲೂಕು.—	
1. ಆವಿನಮಡು ಗ್ರಾಮದಲ್ಲಿ ಒಂದು ಶೀನೀರು ಭಾವಿ ತೋಡಿಸತಕ್ಕ ಬಗ್ಯೆ ...	160.
2. ಯರ್ರಗುಂಟೆ ಗ್ರಾಮದಲ್ಲಿ ಒಂದು ಶೀನೀರು ಭಾವಿ ತೋಡಿಸತಕ್ಕ ಬಗ್ಯೆ ...	305.
3. ಕಲ್ಲಿದ್ಯಾಪುರದಲ್ಲಿ ಒಂದು ಶೀನೀರು ಭಾವಿ ತೋಡಿಸತಕ್ಕ ಬಗ್ಯೆ ...	326.
4. ತೆರೆಯೂರು ಛತ್ರದ ಕಾಂಗಾರಿ ಬಗ್ಯೆ ...	244.
ಜುಮ್ಲಾ ...	1,035.

IV. ಮೇಲ್ಕಂಡ ಡಿಸ್ಟ್ರಿಕ್ಟು ಫಂಡು ಕಾಂಗಾರಿಗಳ ಅಂದಾಜುಗಳ ಲೀಸ್ಟು ಓದಿ ಮಂಜೂರ್ಮಾಡಲಾಯಿತು.

V. ಭಾವಿ ವಗೈರೆ ಕಾಂಗಾರಿಗಳಿಗಾಗಿ ಶಿರಾ ತಾಲ್ಲೂಕಿಗೆ ಮಂಜೂರಾದ 1,458 ರೂಪಾಯಿಗಳನ್ನು ಹಾಲಿ ಕಳುಹಿಸಿರುವ ಅಂದಾಜುಗಳಲ್ಲಿ ಕಂಡ ಕಾಂಗಾರಿಗಳಿಗೆ ರೀ ಅಪ್ರೊಪ್ರಿಯೇಷನ್ ಮಾಡಿಕೊಳ್ಳಲು ಮಂಜೂರಿ ಆರ್ಡರ್ ಅಪೇಕ್ಷಿಸಲ್ಪಟ್ಟ ಮದ್ದಗಿರಿ ಸಬ್ ಡಿವಿಜನ್ ಆಫೀಸರವರ 23—9—1907ನೆ ಮಾರ್ಕ್ಕಂ 351ನೆ ನಂಬರು ಯಾದಿ ವಡನೆ ತಲ್ಪಿದ ಶಿರಾ ತಾಲ್ಲೂಕು ಅಮಲ್ದಾರ್ರು 21—9—1907ನೆ ಮಾರ್ಕ್ಕಂ 135ನೆ ನಂಬರು ರಿಪೋರ್ಟನ್ನು ಓದಿ ಮಂಜೂರ್ಮಾಡಲಾಯಿತು.

VI. ಯಡಿಯೂರು-ತಿಪಟೂರು ರಸ್ತೇಲಿ ಒಂದು ಟನಲ್ ಹೊಸದಾಗಿ ಪುನಃ ಕಟ್ಟಲು ತಯಾರಾದ 454 ರೂಪಾಯಿಗಳ ಅಂದಾಜು ಓದಿ ಅಪ್ರೂವ್ ಮಾಡಲಾಯಿತು.

VII. ಮುಂದಿನ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗ್ ಸನ್ 1907ನೆ ಇಸವಿ ಡಿಸೆಂಬರ್ ಮಾಹೇ ತಾರೀಖು 3ರಲ್ಲು ಮಧ್ಯಾಹ್ನ 2 ಘಂಟೆಗೆ ನಡಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

ಕೆ. ದೊರೆಸ್ವಾಮಿ ಅಯ್ಯರ್,
ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟು.

ಇಸಿ ಹಾರ್ನಾಮೆ.

ತಾರೀಖು 11ನೆ ಅಕ್ಟೋಬರ್ 1907.

ತಿರಮಕೂಡ್ಲು ನರಸೀಪುರ ತಾಲ್ಲೂಕು ತಲ್ಕಾಡು ಹೋಬಳಿಗೆ ಸೇರಿದ ಖಾಯಂ ಗುತ್ತಾ ಮೇಗಡಹಳ್ಳಿ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ತಿರಮಕೂಡ್ಲು ನರಸೀಪುರ ತಾಲ್ಲೂಕು ಕಛೇರಿಯಲ್ಲಿ 1905ನೆ ಜನವರಿ ಮಾಹೆ 8ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಸೀಲ್ ಬಗ್ಗೆ ಸನ್ 1907ನೆ ಇಸವಿ ಅಕ್ಟೋಬರ್ ತಾರೀಖು 31ನೆ ಮಾರ್ಕುಂ 43ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 515, 516ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 11ನೆ ಅಕ್ಟೋಬರ್ 1907.

ಹುಣಸೂರು ತಾಲ್ಲೂಕು ಪೆರಿಯಾಪಟ್ಟಣದ ಹೋಬಳಿಗೆ ಸೇರಿದ ಜೋಡಿ ಹಿಟ್ಟ ಹೆಬ್ಬಾಗಿಲು ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಹುಣಸೂರು ತಾಲ್ಲೂಕು ಅಮಲ್ದಾರ್ರವರ ಕಛೇರಿಯಲ್ಲಿ 1907ನೆ ಡಿಸೆಂಬರ್ ಮಾಹೆ 5ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಸೀಲ್ ಬಗ್ಗೆ ಸನ್ 1907ನೆ ಇಸವಿ ಅಕ್ಟೋಬರ್ 31ನೆ ಮಾರ್ಕುಂ 43ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 514, 515ನೆ ನಂಬರ್ ಪೇಜು ನೋಡತಕ್ಕದ್ದು.

ಟಿ. ಕೆ. ಸುಂದರರಾಜೈಯ್ಯಂಗಾರ್,
ಛಾರ್ ಡೆಪ್ಯುಟಿ ಕಮಿಷನರ್.

ನೋಟಿಸ್.

ತಾರೀಖು 18ನೆ ಸೆಪಟಂಬರ್ 1907.

ಎರಡು ವರುಷಗಳಿಗಿಂತಲೂ ಅಧಿಕಕಾಲದಿಂದ ಬೇವಾರಸ್ಸಾಗಿ ಇರುವ ಇದರಡಿ ಕಂಡ ದಸ್ತೈವಜುಗಳನ್ನ ಹಾಜರು ಮಾಡಿದವರೇ ಆಗಲಿ ಅಥವಾ ಇವರಿಂದ ಅಧಿಕಾರ ಹೊಂದಿದ ಮುತಾಲೀಕರೆ ಆಗಲಿ ಈ ನೋಟಿಫಿಕೇಷನ್ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಆಯಾಯ ರಿಜಸ್ಟ್ರೇಷನ್ ಆಫೀಸುಗಳಲ್ಲಿ ಹಾಜರಾಗಿ ತೆಗದುಕೊಳ್ಳದಿದ್ದರೆ ರಿಜಸ್ಟ್ರೇಷನ್ ರಗ್ಯುಲೇಷನ್ ನಂಬರ್ 1ರ 85ನೆ ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಾಗುವ ದಸ್ತೈವಜುಗಳನ್ನು ನಾಶಪಡಿಸುತ್ತೆ:—

ಕ್ರಮ ಸಂಖ್ಯೆ.	ರಿಜಸ್ಟ್ರೇಷನ್ ಆಫೀಸುಗಳ ಹೆಸರು.	ಪುಸ್ತಕ ಸಂಖ್ಯೆ.	ದಸ್ತೈವಜಿನ ನಂಬರ್.	ದಸ್ತೈವಜು ಹುಟ್ಟಿದ ತಾರೀಖು.	ದಸ್ತೈವಜು ರಿಜಸ್ಟರಾದ ಅಥವಾ ತಿರಸ್ಕರಿಸಿದ ತಾರೀಖು.	ದಸ್ತೈವಜು ಬರದುಕೊಟ್ಟವನ ಹೆಸರು.	ದಸ್ತೈವಜು ಬರಿಸಿಕೊಂಡವನ ಹೆಸರು.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತ್ತು.
1	ಮೈಸೂರು ...	I	505	17—2 1904	19—2—1904	ಮೇಟಗಳ್ಳಿ ಬಲ್ಗೈ ಮರಿಕೆಂಚ ಮಗ ಕಿದ್ದ ಮೈನರ್, ಗಾರ್ಡಿಯನ್ ಕೇರಿ.	ದೊಡ್ಡ ಹೊಸಗೇರಿ ಬಲಗೈ ದೇವಿ ಕಿದ್ದನ - ಮಗ ಅರಂಬಕೇವನದ ಕಿದ್ದಾ.	100 ರೂಪಾಯಿ ಕ್ರಯ.
2	ಡಿಟೋ	I	1011	12—1—1905	21—1—1905	ಮೈಸೂರು ನಜರಬಾದ್ ಮುಸಲ್ಮಾನರ ಜಮಾಲ್ ಷರೀಫ್ ಸಾಬರ ಮಗ ಹೈದರ್ ಷರೀಫ್ ಸಾಬಿ.	ಮೈಸೂರು ನಜರ್‌ಬಾದಿನಲ್ಲಿ ಇರುವ ಮಹಮದ್ ಹರ್ಸ್ ಬಲವಂತರವರ ಹೆಂಡತಿ ಜೈನಬ್ಬಿ.	0 ರೂಪಾಯಿ ಭೋಗ್ಯ.
3	ಡಿಟೋ ...	I	1020	14—1—1905	23—1—1905	ಮೈಸೂರು ಲಷ್ಕರ್ ಮೊಹಲ್ಲಾದಲ್ಲಿ ಇರುವ ಬಟ್ಲರ್ ಖಾಕೀಮ್ ಸಾಬರ ಹೆಂಡತಿ ಹನಿಷಾಬಿ.	ಮೈಸೂರು ಲಷ್ಕರ್ ಮೊಹಲ್ಲಾದಲ್ಲಿ ಇರುವ ಸಾಲಾರ್ ಮಹಮದ್‌ಸಾಬರ ಹೆಂಡತಿ ಜಮಾಲ್‌ಬಿ.	40 ರೂಪಾಯಿ ಕ್ರಯ.
4	ಡಿಟೋ ...	I	148	6—8—1904	11—3—1905	ಮೈಸೂರು ಸಂತೆಪೇಟೆಯಲ್ಲಿ ಇರುವ ಇಬ್ರಾಹಿಂಮ್ ಜೋಸಫ್ ಶೇಟ್.	ಮೈಸೂರು ಸಂತೇಪೇಟೆಯಲ್ಲಿ ಇರುವ ಗಂಜಾಂ ವೀರಪ್ಪನವರ ಮಕ್ಕಳು ತಿಂಮೈಯ್ಯ.	ಬಾಡಿಗೆ ಕರಾರು ವಾಯಿದೆ 3 ವರುಷ.
5	ಡಿಟೋ ...	II	7	26—6—1904	ತಿರಸ್ಕಾರ. 15—6—1905	ಮೈಸೂರು ದೇವರಾಜ ಮೊಹಲ್ಲಾದಲ್ಲಿ ಇರುವ ದ್ಯಾಶೆಟ್ಟಿ ಮಗ ವೆಂಕಟಶೆಟ್ಟಿ ಉರಫ್ ಹೊಟ್ಟೆ.	ನಾಗನಹಳ್ಳಿ ಕಿರಗಾಣಗರ ಯಜಮಾನ್ ಆಲಶೆಟ್ಟಿ ಮಗ ಮಾಳಶೆಟ್ಟಿ.	154 ರೂಪಾಯಿ ಕ್ರಯ.

6	ಡಿಟೋ ...	I	1787	7— 1—1904	17— 6—1905	ಪಡುವಾರಹಳ್ಳಿಯಲ್ಲಿ ಇರುವ ಕೆಂಚೇಗೌಡನ ಮಗ ಮುದ್ದೇಗೌಡ.	ಮೈಸೂರ್ ಜಯಲಕ್ಷ್ಮಿ ವಿಲಾಸ್ ವರ್ಕ್ಸ್ ಇಲಾಖಾ ಇನ್‌ಚಾರ್ಜಿನಲ್ಲಿ ಇರುವ ಎ|| ಇ|| ರಾಮರಾಯರು.	142—8—0 ರೂಪಾಯಿ ಖರಾರ್
7	ನಂಜನಗೂಡು ...	I	825	21— 7—1904	2—1?—1904	ನಂಜನಗೂಡು ತಾಲ್ಲೂಕು ತೋರವಳ್ಳಿ ದಾಖಲೆ ಮೋಳೆಯಲ್ಲಿರುವ ಚೌಡನ ಮಗ ಬಸವ, ಇವನ ಮಗ ಬಸವಾ.	ಚಾಮರಾಜನಗರ ತಾಲ್ಲೂಕು ಕೆಸ್ತು ದಾಖಲೆ ಹೊನ್ನೆಗೌಡನ ಹುಂಡಿಯಲ್ಲಿ ಇರುವ ದೇವೇಗೌಡನ ಮಗ ಹುಚ್ಚೇಗೌಡ.	100 ರೂಪಾಯಿ ಆಧಾರ.
8	ಡಿಟೋ ...	I	182	20— 7—1905	20— 7—1905	ನಂಜನಗೂಡು ತಾಲ್ಲೂಕು ಚಿಕ್ಕಹೊಂಮಪಲ್ಲಿರುವ ಪುಟ್ಟೆಗೌಡನ ಮಗ ಬಸಪ್ಪ.	ಡಿಟೋ	ಡಿಟೋ
9	ಮಂಡ್ಯ	I	577	13—10—1904	13—10—1904	ಮದ್ದೂರಲ್ಲಿ ಇರುವ ಫರ್‌ಬೇಗ್‌ಸಾಬರ ಮಗ ಅಬ್ದುಲ್ಲಾ ಬೇಗ್.	ಕುಣಿಗಲ್ ತಾಲ್ಲೂಕು ಚಲಮಸಂದ್ರದ ಖುರ್ಷಪೀರ್‌ಸಾಬರ ಮಗ ಖಾಶಿಂಸಾಬಿ.	50 ರೂಪಾಯಿ ಆಧಾರ.
10	ಟಿ. ನರಶೀಪುರ ...	I	16	12— 6—1904	4— 7—1905	ಹ್ಯಾಕನೂರು ಕುರುಡ ಹೊಂಗೈಯ್ಯನ ಚಿಕ್ಕ ಮಲ್ಲೈಯ್ಯನ ಹೆಂಡತಿ ಲಿಂಗಂಮ.	ಕೊಳ್ಳೆಗಾಲದ ತಾಲ್ಲೂಕು ಹೋಬಳಿಪುರ ಮಲ್ಲೆಗೌಡನ ಮಗ ಚನ್ನಪ್ಪ.	150 ಡಿಟೋ
11	ಡಿಟೋ ...	I	2020	5— 5—1903	6— 5—1905	ತಲಕಾಡು ಕಸಬಾದಲ್ಲಿರುವ ಮಾಜೀ ದಫೇದಾರ ವಿರೇಗೌಡನ ಮಗ ವೀರೆಗೌಡ ಉರುಫ್ ಕುಳ್ಳೇಗೌಡ.	ಮಳವಳ್ಳಿ ತಾಲ್ಲೂಕು ರಿಜಸ್ಟ್ರೇಷನ್ ಗುಮಾಸ್ತೆ ಶ್ರೀಕಂಠೈಯನವರ ಮಗ ನಾರಣಪ್ಪಾ.	ಗುತ್ತಿಗೆ ಖರಾರ್ ಮತ್ತು 75 ರೂಪಾಯಿ ಮದಗಡ ಅಡಗಿವೆ.
12	ಡಿಟೋ ...	I	2350	27— 5—1905	31— 5—1905	ಶ್ರೀರಂಗರಾಜಪುರದಲ್ಲಿ ಇರುವ ಕುಂಭಕೋಣ ಶ್ರೀನಿವಾಸರಾಮಾನುಜಾಚಾರ್ ಮಗ ರಂಗನಾಥ ತಾತಾಚಾರ್.	ಹಾಸನದ ಡಿಸ್ಟ್ರಿಕ್ಟ್ ಪೋಲೀಸ್ ಡೆಪ್ಯುಟಿ ಮುನಷಿ ಎಂ. ಶ್ರೀನಿವಾಸೈಯಂಗಾರ್.	200 ರೂಪಾಯಿ ಆಧಾರ.
13	ಚಾಮರಾಜನಗರ ...	I	2079	30— 4—1905	2— 5—1906	ಆಲದೂರು ದಾಖಲೆ ಬೇರಣಿ ಮಲ್ಲನ ಕಟ್ಟೆ ಹುಂಡಿಯಲ್ಲಿ ಇರುವ ಕುರುಬರ ಬೆಳ್ಳೆಗೌಡ್ನ ಮಗ ಮಲ್ಲಾ.	ನಾಲೂರು ಗ್ರಾಮದಲ್ಲಿರುವ ಕೃಷ್ಣೇಗೌಡ.	100 ರೂಪಾಯಿ ಆಧಾರ.

ಅಂಕಿ ನಂಬರು.	ರಿಜಿಸ್ಟ್ರೇಷನ್ ಆಫೀಸುಗಳ ಹೆಸರು.	ಪುಸ್ತಕದ ನಂಬರು.	ದಸ್ತಾವೇಜಿನ ನಂಬರು.	ದಸ್ತಾವೇಜು ಹುಟ್ಟಿದ ತಾರೀಖು.	ದಸ್ತೈವಜು ರಿಜಿಸ್ಟರಾದ ಅಥವಾ ತಿರಸ್ಕರಿಸಿದ ತಾರೀಖು.	ದಸ್ತೈವಜು ಬರದುಕೊಟ್ಟವನ ಹೆಸರು.	ದಸ್ತೈವಜು ಬರಿಸಿಕೊಂಡವರ ಹೆಸರು.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತ್ತು.
14	ಚಾಮರಾಜನಗರ ...	I	2082	30— 4—1905	2— 5—1906	ಆಲದೂರು ಗ್ರಾಮದ ದಾಖಲೆ ಬೇರಣಿ ಮಲ್ಲನ ಹುಂಡಿಯಲ್ಲಿ ಇರುವ ಕುರುಬರ ಮಲ್ಲಾ.	ನಾಲೂರು ಗ್ರಾಮದಲ್ಲಿರುವ ಕೃಷ್ಣೇಗೌಡ.	175 ರೂಪಾಯಿ ಆಧಾರ.
15	ಕೃಷ್ಣರಾಜಪೇಟೆ ...	I	140	10— 6—1903	25— 7—1904	ಬೂವ್ವನಹಳ್ಳಿ ಗ್ರಾಮದಲ್ಲಿ ಇರುವ ಹೊಂನನ ಮಗ ಜವರಾ.	ಹಳೆಯೂರು ಶಿವನೇಗೌಡನ ಮಗ ಬೊಮ್ಮೇಗೌಡ.	40 ರೂಪಾಯಿ ಜೀವನಾಂಶದ ಕರಾರು.
16	ಡಿಟೋ ...	I	606	5— 3—1903	5—11—1904	ಹೊಸಕೋಟೆಯಲ್ಲಿ ಇರುವ ಕೆಂಗೇರಿ ಕೃಷ್ಣಪ್ಪ.	ಎಡತ್ತೊರೆಯಲ್ಲಿ ಇರುವ ಬಳೇ ಚಿಕ್ಕಬಸವಣ್ಣ.	600 ರೂಪಾಯಿ ಕ್ರಯ.
17	ಡಿಟೋ ...	I	1566	14— 6—1905	14— 6—1905	ಮಾವಿನಕೆರೆ ಗ್ರಾಮದಲ್ಲಿ ಇರುವ ಕೆಂಗೇಗೌಡನ ಮಗ ಗೋಸೇಗೌಡ.	ಮಾವಿನಕೆರೆ ಗ್ರಾಮದಲ್ಲಿ ಇರುವ ನರಸುಂಹೇಗೌಡ.	31—4—0 ಆಧಾರ.
18	ನಾಗಮಂಗಲ ...	I	92	9— 2—1903	13— 8—1904	ಬೆಂಗಳೂರಿನಲ್ಲಿ ಇರುವ ಪಾಲಗ್ರಹಾರದ ಕಾಳಾಚಾರಿ ಮಗ ಸೂರಾಚಾರಿ.	ಮೈಸೂರಿನಲ್ಲಿ ಇರುವ ವೀರಭದ್ರಾಚಾರಿ.	50 ರೂಪಾಯಿ ಕ್ರಯ.
19	ಮಳವಳ್ಳಿ ...	I	1428	19— 5—1905	19— 5—1905	ಚಿಕ್ಕಅರಶಿನಕೆರೆ ಗ್ರಾಮದಲ್ಲಿರುವ ಗಂಗಡಿಕಾರ ಒಕ್ಕಲಿಗರ ತಿಮ್ಮೇಗೌಡನ ಮಗ ಶಿದ್ದಲಿಂಗೇಗೌಡ	ಚಿಕ್ಕ ಅರಸಿನಕೆರೆ ಗ್ರಾಮದಲ್ಲಿ ಇರುವ ತಿಪ್ಪೇಗೌಡನ ಮಗ ಶಿದ್ದಲಿಂಗೇಗೌಡ.	20 ರೂಪಾಯಿ ಕ್ರಯ.
20	ಶ್ರೀರಂಗಪಟ್ಟಣ ...	II	3	23— 2—1904	16— 6—1904	ಗೊಬ್ಬರಗಾಲದಲ್ಲಿ ಇರುವ ಬೋರಶೆಟ್ಟಿ ವುರುಫ್ ಕರೀಶೆಟ್ಟಿ.	ಮೈಸೂರು ಕೋಟೆಯಲ್ಲಿ ಇರುವ ಮುದಗೆರೆ ಲಿಂಗಪ್ಪೈಯ್ಯನ ಮಗ ರಂಗೈಯ್ಯ.	3 ಸಾಲಿಗೇಣಿ 22-9 ರೂಪಾಯಿ ಬಾಳುವ 3¾ ಖಂಡಿ ಭತ್ತ ಕೊಡುವದಾಗಿ.

21	ಹೆಗ್ಗಡದೇವನಕೋಟೆ ...	I	207	29 - 4 - 1905	29 — 4—1905	ವಡ್ಡರಪಾಳ್ಯದಲ್ಲಿ ಇರುವ ದಾದಾಬೋಯಿ ವುರುಫ್ ಗಿರಿಯಾಬೋಯಿ; 2. ಡಿಟೋ ಯವನ ತಾಯಿ ಯಲ್ಲಮ್ಮ ವುರುಫ್ ಸಂಣಮ್ಮ.	ಹೊಂಮರಗಳ್ಳಿ ಪಟೇಲ್ ರಾಮಂಣ.	100 ರೂಪಾಯಿ ಕ್ರಯ.
22	ಡಿಟೋ ..	II	1	19— 4 —1904	23— 2 1905	ಖಂತವಾಡಿ ಗ್ರಾಮದ ಪಟೇಲ್ ಅಂಕೇಗೌಡನ ಮಗ ಅಂಕೇಗೌಡ ವುರುಫ್ ಕೂಸೇಗೌಡ.	ಸರಗೂರಿನಲ್ಲಿ ಇರುವ ಚಂನಾಚಾರಿ ಮಗ ಬೆಟ್ಟಾಚಾರಿ.	95 ರೂಪಾಯಿ ಕ್ರಯ.
23	ಡಿಟೋ ...	ಡಿಟೋ	2	20— 6 —1904	27 — 2—19 5	ಸೋಗಹಳ್ಳಿಯಲ್ಲಿ ಇರುವ ಚಲುವ, 2. ಮೇಲ್ಕಂಡವನ ಮಗ ಪುಟ್ಟ.	ಸೋನಹಳ್ಳಿ ಚಕ್ರಗೋಪಾಲಿ ಮಗ ಗೋಪಾಲಿ.	80 ರೂಪಾಯಿ ಕ್ರಯ.
24	ಹೆಗ್ಗಡದೇವನಕೋಟೆ ...	ಡಿಟೋ	6	5— 8—1904	29 4—1905	ಆಗತ್ತೂರು ಗ್ರಾಮದಲ್ಲಿ ಇರುವ ವೀರನಾಯಿಕನ ಮಗ ಜೋಳ ನಾಯಿಕ.	ಸಾಗರೆ ಕಾಳನಾಯಿಕನ ಮಗ ಕುಳ್ಳನಾಯಿಕ.	48 ರೂಪಾಯಿ ಕ್ರಯ.
25	ಎಳಂದೂರು ...	IV	1	14— 7—1904	18 — 7—1904	ಎಳಂದೂರು ಕಸಬಾದಲ್ಲಿ ಇರುವ 1ನೆಯ ಕೃಷ್ಣಮಾಚಾರ್, 2ನೆ ಶಿವಲಿಂಗಶೆಟ್ಟಿ ಮಗ ೨. ವೀರಬಸವಪ್ಪ, 3ನೆ ಕುಂನೇಗೌಡನ ಮಗ ಎಂ. ಪಿ. ಸುಬ್ಬಣ್ಣ.	ಮಧುವನಹಳ್ಳಿಯಲ್ಲಿ ಇರುವ ಯಜಮಾನ ಮಲ್ಲಶೆಟ್ಟರ ಮಕ್ಕಳು ಎಂ. ಮಾದಶೆಟ್ಟಿ.	1,000 ರೂಪಾಯಿ ಚರಸ್ವತ್ತಿನ ಆಧಾರ.
26	ಪೊಣಸೂರು. ...	I	716	26 — 4—1905	26— 4—1905	ವೀರರಾಜೇಂದ್ರಪೇಟೆ ತಾಲ್ಲೂಕು ಬಳಗುಂದ ಗ್ರಾಮದಲ್ಲಿ ಇರುವ ವೆಂಕಟರಾಜು ಮಗ ನರಸಿಂಹರಾಜೈಯ.	ಪಿರಿಯಾಪಟ್ಟಣದ ಕಿಲ್ಲೆಯಲ್ಲಿ ಇರುವ ಸುಬ್ಬಾಯ.	90 ರೂಪಾಯಿ ಭೋಗ್ಯ.

ಟಿ. ಕೆ. ಸುಂದರರಾಜೈಯ್ಯಂಗಾರಿ,
ಫೋರ್ ಡಿಸ್ಟ್ರಿಕ್ಟು ರಿಜಿಸ್ಟ್ರಾರ್.

ಹಾಸನ ಡಿಸ್ಟ್ರಿಕ್ಟ್.

ನೋಟೀಸು, ತಾರೀಖು 5ನೆ ಅಕ್ಟೋಬರು 1907ನೆ ಇಸವಿ.

ಎರಡು ವರುಷಗಳಿಗಿಂತಲೂ ಅಧಿಕಕಾಲದಿಂದ ಬೇವಾರಸಾಗಿ ಇರುವ ಇದರಡಿ ಕಂಡ ದಸ್ತಾವೇಜನ್ನು ಹಾಜರು ಮಾಡಿದವರೇ ಆಗಲಿ ಅಥವಾ ಇವರಿಂದ ಅಧಿಕಾರ ಹೊಂದಿದ ಮುಕ್ತಾರರೇ ಆಗಲಿ ಈ ನೋಟಿಸ್ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಚನ್ನರಾಯಪಟ್ಟಣದ ಸಬ್ ರಿಜಿಸ್ಟ್ರಾರ್ ರೂಬರೂಬ್ ಹಾಜರಾಗಿ ತೆಗೆದುಕೊಳ್ಳದೆ ಇದ್ದರೆ, ರಿಜಿಸ್ಟ್ರೇಷನ್ ರೆಗ್ಯುಲೇಷನ್ ನಂ. 1ರ 85ನೆ ಸೆಕ್ಷನ್ ಅನುಸಾರ ಈ ಕೆಳಗೆ ನಮೂದಾಗುವ ದಸ್ತಾವೇಜನ್ನು ನಾಶಪಡಿಸುತ್ತೆ:—

ಅನುಕ್ರಮ ನಂಬರು.	ಸಬ್ ರಿಜಿಸ್ಟ್ರಾರರ ಆಫೀಸಿನ ಹೆಸರು.	ಪುಸ್ತಕದ ನಂಬರು.	ದಸ್ತಾವೇಜಿನ ನಂಬರು.	ದಸ್ತಾವೇಜು ಬರೆದುಕೊಟ್ಟ ತಾರೀಖು.	ದಸ್ತಾವೇಜು ರಿಜಿಸ್ಟರಿಗೆ ಹಾಜರು ಮಾಡಿದ ತಾರೀಖು.	ದಸ್ತಾವೇಜು ಬರೆದುಕೊಟ್ಟವರ ಹೆಸರು.	ದಸ್ತಾವೇಜು ಬರೆಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಮತ್ತು ಮೌಲ್ಯ.
1	ಚನ್ನರಾಯಪಟ್ಟಣ.	I	465 / 1894—95	25—4—1895	27—6—95	[illegible] 1. [illegible] 2. [illegible] 3. [illegible]	[illegible]	1,000 [illegible]

ಎಂ. ಲಕ್ಷ್ಮಣಶಾಸ್ತ್ರಿ,
ಫಾರ್ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸರ್ 1907—08ನೆ ಇಸವಿ ಮಿ|| ಅರ್ಜಿ ನಂಬರು 361.

ಕ್ಲೋಸ್ಟ್ಯಾಟ್ ಫಾರಸ್ಟಿನಲ್ಲಿ ವಾಚರಾಗಿದ್ದು ಮೃತಪಟ್ಟ ನರಸನೆಂಬುವನ ಆಸ್ತಿ ವಿಷಯದಲ್ಲಿ—

ಅರ್ಜಿದಾರರು ದೊಡ್ಡಬಳ್ಳಾಪುರದ ತಾಲ್ಲೂಕು ಹಾಲಿ ಸಾಸಲು ಸಮ್ಮತು ಉಜ್ಜನಿ ಗ್ರಾಮದ ಮಜರೆ ಮಂಗಳಹಳ್ಳಿ ಲಿರುವ 1ನೆ ನಂಜುಂಡಪ್ಪ, 2ನೆ ಮರಿಯಪ್ಪ, ಮೃತಪಟ್ಟ ಸದರೀ ನರಸನಿಗೆ ಅಣ್ಣತಮ್ಮಂದರು ಆಗಬೇಕೆಂಬ ಹಕ್ಕುದಾರಿ ಮೇಲೆ ಕ್ಲೋಸ್ಟ್ಯಾಟ್‌ಲಿ ವಾಸಸ್ತನಾಗಿ ಮೃತಪಟ್ಟ ನರಸನ ಜೆಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 303—15—2 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ನಂಜುಂಡಪ್ಪ, 2ನೆ ಮರಿಯಪ್ಪನ ಅರ್ಜಿಯನ್ನು ಸರ್ 1907ನೆ ಇಸವಿ ನವಂಬರು ತಿಂಗಳು 8ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ನರಸನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1907ನೆ ಇಸವಿ ಅಕ್ಟೋಬರು ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತೊಡನೆ ಕೊಡೋಣಾಗಿದೆ.

ಸರ್ 1907—08ನೆ ಇಸವಿ ಮಿ|| ಅರ್ಜಿ ನಂಬರು 371.

ಆನೇಕಲ್ ತಾಲ್ಲೂಕು ಸರ್ಜಾಪುರದ ಹೋಬಳಿ ದೊಮ್ಮಸಂದ್ರ ಗ್ರಾಮದಲ್ಲಿ ವಾಸವಾಗಿದ್ದು ಮೃತಪಟ್ಟ ತಿಮ್ಮಕ್ಕನ ಆಸ್ತೀ ವಿಷಯದಲ್ಲಿ—

ಅರ್ಜಿದಾರರು ಆನೇಕಲ್ ತಾಲ್ಲೂಕು ಸರ್ಜಾಪುರದ ಕಸಬೇಲಿರುವ ಚನ್ನಸಂದ್ರದ ತಿಮ್ಮಕ್ಕನ ಮಗಳು ನಂಜಮ್ಮ, ಮೃತಪಟ್ಟ ಸದರೀ ತಿಮ್ಮಕ್ಕನಿಗೆ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ದೊಮ್ಮಸಂದ್ರದಲ್ಲಿ ವಾಸಸ್ತರಾಗಿ ಮೃತಪಟ್ಟ ತಿಮ್ಮಕ್ಕನ ಜೆಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 101—15—10 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ನಂಜಮ್ಮನ ಅರ್ಜಿಯನ್ನು ಸರ್ 1907ನೆ ಇಸವಿ ನವಂಬರು ತಿಂಗಳು ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಮ್ಮಕ್ಕನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1907ನೆ ಇಸವಿ ಅಕ್ಟೋಬರು ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಮ ಐಯ್ಯರ್,
ಸಬಾರ್ಡಿನೇಟ್ ಜಡ್ಜ್.

106

ಮೈಸೂರ ಗೆಜೆಟ್.

[ನಂ. 42.] ಸರ್ಕಾರದಿಂದ ಛಾಯಿಷ್ ಆದ್ದು. [ನಂ. 45.

ಬೆಂಗಳೂರು, ಗುರುವಾರ, ನವೆಂಬರ್ ತಾ॥ 14, ಸ॥ 1907.

II ನೆ ಭಾಗ.

ಇಂಡ್ಯ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಮೈಸೂರು ಡಿಸ್ಟ್ರಿಕ್ಟು ಎಕ್ಸೈಜು ಆಫೀಸು.

ಇಸ್ತಿಹಾರ್‌ನಾಮೆ.

ಮೈಸೂರು, ತಾರೀಖು 21ನೆ ಅಕ್ಟೋಬರ್ 1907.

ಈ ಕೆಳಗೆ ಕಾಣಿಸಿರುವ ಗ್ರಾಮಗಳ ಇನಾಂದಾರರುಗಳಿಗೆ ತಿಳಿಯಪಡಿಸುವದೇನೆಂದರೆ :—ಈ ಕೆಳಗೆ ಕಾಣಿಸಿರುವ ಇನಾಂ ಗ್ರಾಮಗಳ ಬಾಬತು ಮಾನ್ಯದಾರರಿಗೆ ಆಯಾ ಗ್ರಾಮದ ಶೇಂದಿ ಹುಟ್ಟುವಳಿ ಹಕ್ಕು ಇರುವ ವಿಚಾರದಲ್ಲಿ ಕೆಳಗೆ ನಮೂದಿಸಿರುವ ತಾರೀಖುಗಳಲ್ಲಿ ಅವಶ್ಯವಿರುವ ವಿಚಾರಣೆ ನಡಿಸಲ್ಪಡುತ್ತೆ. ಆಯಾ ಗ್ರಾಮಗಳಿಗೆ ಸಂಬಂಧಪಟ್ಟ ಇನಾಂದಾರರುಗಳು ಖುದ್ದಾಗಿಯಾಗಲೀ ಅಥವಾ ಅವರಿಂದ ಮೊಕ್ತ್ಯಾರುನಾಮೆ ಪಡೆದವರಾಗಲೀ ಅವಶ್ಯವಿರುವ ಸನ್ನದು ಆಯಾ ಗ್ರಾಮದ ಇನಾಂ ಸೆಟ್ಲುಮೆಂಟು ರಿಜಿಸ್ಟರು ಎಕ್ಸ್ಟ್ರಾಕ್ಟು ಮುಂತಾದ ದಾಖಲೆಗಳ ನಿಶಿ ಮೈಸೂರಲ್ಲಿ ನಮ್ಮ ಆಫೀಸು ಬಳಿ ನಿಯಾಮಕ ಮಾಡಲ್ಪಟ್ಟ ತಾರೀಖಿನ ಹಗಲು 11 ಘಂಟೆಗೆ ಸರಿಯಾಗಿ ಹಾಜರಾಗತಕ್ಕದ್ದು. ಹಾಗೆ ಹಾಜರಾಗದೆ ತಪ್ಪಿದಲ್ಲಿ ರೂಲ್ಸು ಮೇರೆ ಕ್ರಮ ಜರಿಗಿಸಲ್ಪಡುತ್ತೆ. ನಂತರ ಬರುವ ಯಾವ ತಕರಾರನ್ನೂ ಅಂಗೀಕರಿಸಲು ಆಗಲಾರದಾಗಿ ತಿಳಿಯಪಡಿಸಿದೆ.

ತಾಲ್ಲೂಕು.	ಗ್ರಾಮ.	ಹೀರಿಂಗು ತಾರೀಖು.
ಮೈಸೂರು ...	ಮದ್ದೂರು ...	1907ನೆ ನವಂಬರು 26
ಡಿಟ್ಟೋ ...	ಕಲ್ಲಹಳ್ಳಿ ...	ಡಿಟ್ಟೋ 26
ನಂಜನಗೂಡು ...	ಹಟ್ವಾಳು ...	ಡಿಟ್ಟೋ 27
ಡಿಟ್ಟೋ ...	ಕಣಿಯನೂರು ...	ಡಿಟ್ಟೋ 27
ಮೈಸೂರು ...	ಕಡಕೊಳ, ಸಿಂದುವಳ್ಳಿ ...	ಡಿಟ್ಟೋ 27
ಡಿಟ್ಟೋ ...	ದುದ್ದಗೆರೆ ...	ಡಿಟ್ಟೋ 28
ಡಿಟ್ಟೋ ...	ಗೋಪಾಲಪುರ ...	ಡಿಟ್ಟೋ 28
ಡಿಟ್ಟೋ ...	ಉಂಡೆಹಳ್ಳಿ ...	ಡಿಟ್ಟೋ 29

ಎ. ಕೆ. ಸೈಯದ್ ತಾಜ್‌ಪಿರಾ,
ಡಿಸ್ಟ್ರಿಕ್ಟು ಎಕ್ಸೈಜ್ ಆಫಿಸರ್, ಮೈಸೂರು.

ಫಾರೆಸ್ಟ್ ಇಲಾಖಾ.

ಸೆಂಡಲ್ ಹರಾಜ್ ನೋಟಿಫಿಕೇಷನ್.

ತಾರೀಖು 24ನೆ ಆಗಸ್ಟ್, 1907ನೆ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಸರಕಾರದ ಶ್ರೀಗಂಧದ ಸಾಲಿಯಾನಾ ನಡಿಯುತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರದರ ಬಾಜೂದಲ್ಲಿ ನಮೂದಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡೆಸಲ್ಪಡುವದು:—

ಡಿಸ್ಟ್ರಿಕ್ಟ್.	ಕೋಠಿ.	ಹರಾಜು ತಾರೀಖು.	ಸುಮಾರು ಮೊತ್ತ.
			ಟನ್‌ಗಳು.
ಶಿವಮೊಗ್ಗ ...	ತೀರ್ಥಹಳ್ಳಿ ...	18ನೆ ನವಂಬರ 1907 ...	200
ಡಿಟೋ ...	ಸಾಗರ ...	21ನೆ ಡಿಟೋ ...	150
ಡಿಟೋ ...	ಶಿವಮೊಗ್ಗ ...	25ನೆ ಡಿಟೋ ...	500
ಕಡೂರು ...	ತರೀಕೆರೆ ...	28ನೆ ಡಿಟೋ ...	250
ಡಿಟೋ ...	ಚಿಕ್ಕಮಗಳೂರು ...	2ನೆ ಡಿಸೆಂಬರ 1907 ...	350
ಹಾಸನ ...	ಹಾಸನ ...	5ನೆ ಡಿಟೋ ...	150
ಬೆಂಗಳೂರು ...	ಬೆಂಗಳೂರು ...	9ನೆ ಡಿಟೋ ...	100
ಮೈಸೂರು ...	ಶ್ರೀರಂಗಪಟ್ಟಣ ...	12ನೆ ಡಿಟೋ ...	250
ಡಿಟೋ ...	ಹುಣಸೂರು ...	16ನೆ ಡಿಟೋ ...	500
		ಜುಮ್ಲಾ	2,450

2. ಪ್ರತಿ ಕೋಠಿಯಲ್ಲಿಯೂ ಹರಾಜಾಗುವ ಸುಮಾರು ಲಾಟು, ಮೊತ್ತ ಮತ್ತು ಇತರ ತಪಶೀಲುಗಳು ಬರುವ ಅಕ್ಟೋಬರ್ ಮಾಹೆಯ ಆಖೈರುನಲ್ಲಿ ತಿಳಿಯಪಡಿಸುತ್ತೆ.

ಎಂ. ಮುತ್ತಣ್ಣಾ,
ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ಇಸ್ತಿಹಾರ್ನಾಮಾ, ತಾರೀಖು 28ನೆ ಅಕ್ಟೋಬರ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಈ ಕೆಳಗೆ ಕಂಡ ಡಿಪೋಗಳಲ್ಲಿ ಚಾಬೀನಾವನ್ನು ಸದರಿ ಡಿಪೋಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ದಿವಿ 12 ಘಂಟೆಗೆ ಹರಾಜು ಪ್ರಾರಂಭಿಸಲ್ಪಡುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟಾಗಳ ವಿವರ.	ಸಲೆ ಅಡಿ.		ಷರಾ.
				ನಂಬರ.	ಅಡಿ.	
1	ಮೈಸೂರು ಉಡಿ ಯಾರ್ಡು	27-11—07	ಸಾಗ್ವಾನಿ ...	1,200	30,000	
			ಹೊನ್ನೆ ...	100	20,000	
			ಮತ್ತಿ ...	150	3,000	
			ಸಾಗ್ವಾನಿ ಸರ ...	2,000	2,000	
			ಬೀಡೆ ...	160	2,000	
2	ನಂಜನಗೂಡು ಡಿಪೋ.	28-11—07	ಸಾಗ್ವಾನಿ ...	200	5,000	
			ಹೊನ್ನೆ ...	200	5,000	
			ಮತ್ತಿ ...	180	2,000	
			ಬೀಡೆ ...	100	2,000	

ಹರಾಜು ಷರತ್ತುಗಳು.

1. ಚಡ ದರಖಾಸ್ತುದಾರನು ಹರಾಜು ಆದ 3 (ಮೂರು) ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಶೇಕಡ 25 ರಂತೆ ಆಗುವ ಮೊಬಲಗನ್ನು ಹತ್ತರವಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜು ಮಾಡಿ ಅದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.

2. ಖರೀದಿ ಮೊಬಲಗು ಪೈಕಿ ವುಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟಿರುವ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.

3. ಆತನು ಹರಾಜಿನಲ್ಲಿ ಪಡೆದಿರುವ ಚವುಬೀನಾ ಕಿಮ್ಮತ್ತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮೋಪನ್ನು ರಫ್ತು ಮಾಡಕೂಡದು.

4. ಹರಾಜು ತಾರೀಖು ಲ.ಗ.ಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಒಂದಕ್ಕೆ ಶೇಕಡ ಒಂದಕ್ಕೆ 12 ರೂಪಾಯಿನ ಮೇರೆ ಡಿಪೋ ಭಾಡಾ ವಸೂಲು ಮಾಡಲಾಗುತ್ತೆ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಮೈಸೂರು ಡಿಸ್ಟ್ರಿಕ್ಟು.

ಹಾಸನ ಡಿಸ್ಟ್ರಿಕ್ಟು.

ನೋಟೀಸು, ತಾರೀಖು 5ನೆ ಅಕ್ಟೋಬರು 1907ನೆ ಇಸವಿ.

ಎರಡು ವರುಷಗಳಿಗಿಂತಲೂ ಅಧಿಕಕಾಲದಿಂದ ಕೇವಾರಸಾಗಿ ಇರುವ ಇದರಡಿ ಕಂಡ ದಸ್ತಾವೇಜನ್ನು ಹಾಜರು ಮಾಡಿದವರೇ ಆಗಲಿ ಅಥವಾ ಇವರಿಂದ ಅಧಿಕಾರ ಹೊಂದಿದ ಮುಕ್ತಾಲೀಕರೆ ಆಗಲಿ ಈ ನೋಟಿಸ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಮಂಜರಾಬಾದ ಸಬ ರಿಜಿಸ್ಟ್ರಾರಿ ರೂಬ ರೂಬ್ ಹಾಜರಾಗಿ ತೆಗೆದುಕೊಳ್ಳದೆ ಇದ್ದಲ್ಲಿ, ರಿಜಿಸ್ಟ್ರೇಷನ್ ರೆಗ್ಯುಲೇಷನ್ ನಂ. 1ರ 85ನೆ ಸೆಕ್ಷನ್ ಅನುಸರಿಸಿ ಈ ಕಳಗೆ ನಮೂದಾಗುವ ದಸ್ತಾವೇಜನ್ನು ನಾಶಪಡಿಸುತ್ತೆ :—

ಜಂಜರ್ ನಂಬರ್.	ಸಬ್ ರಿಜಿಸ್ಟ್ರಾರ್ರವರ ಆಫೀಸು ಹೆಸರು.	ಬುಕ್ಕಿನ ನಂಬರು.	ದಸ್ತಾವೇಜಿನ ನಂಬರು.	ದಸ್ತಾವೇಜು ಹುಟ್ಟಿದ ತಾರೀಖು.	ದಸ್ತಾವೇಜು ರಿಜಿಸ್ಟರು ಅಥವಾ ತಿರಸ್ಕರಿಸಿದ ತಾರೀಖು.	ದಸ್ತಾವೇಜು ಬರೆದುಕೊಟ್ಟವರ ಹೆಸರು.	ದಸ್ತಾವೇಜು ಬರೆಸಿಕೊಂಡವರ ಹೆಸರು.	ದಸ್ತಾವೇಜು ಸ್ವಭಾವ ಮತ್ತು ಕಿಮ್ಮತ್ತು.
1	ಮಂಜರಾಬಾದು	I	465 / 1894-95	25-4-1895	27-6-95	ಮಂಜರಾಬಾದು ತಾಲ್ಲೂಕು ಶುಕ್ರವಾರ ಸಂತೆ ಹೋಬಳಿ ನಲ್ಲುಲ್ಲಿ ಗ್ರಾಮದಲ್ಲಿರುವ ಕೆಳ್ಳಮನೆ ದೊಡ್ಡೇಗೌಡ. 2. ಡಿಟೋ ಪುಟ್ಟೇಗೌಡ 3. ಡಿಟೋ ಮಂಜೇಗೌಡ	ಶುಕ್ರವಾರ ಸಂತೆ ಹೋಬಳಿ ಎಡರಳ್ಳಿ ಗ್ರಾಮದಲ್ಲಿರುವ ಲೋಗೌಡನ ಮಗ ನಂಜೇಗೌಡ.	1,000 ರೂಪಾಯಿನ [illegible] ಪತ್ರ.

ಎಂ. ಲಕ್ಷ್ಮಣಶಾಸ್ತ್ರಿ,
ಫಾರ್ ಡಿಸ್ಟ್ರಿಕ್ಟು ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 11ನೆ ಅಕ್ಟೋಬರ್ 1907.

ತಿರಮಕೂಡ್ಲು ನರಸೀಪುರ ತಾಲ್ಲೂಕು ತಲ್ಕಾಡು ಹೋಬಳಿಗೆ ಸೇರಿದ ಖಾಯಂ ಗುತ್ತಾ ಮೇಗಡಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ತಿರಮಕೂಡ್ಲು ನರಸೀಪುರ ತಾಲ್ಲೂಕು ಕಛೇರಿಯಲ್ಲಿ 190-ನೆ ಜನವರಿ ಮಾಹೆ 8ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹೆಚ್ಚು ತಪಸೀಲ್ ಬಗ್ಗೆ ಸ್ 1907ನೆ ಇಸವಿ ಅಕ್ಟೋಬರ್ ತಾರೀಖು 31ನೆ ಮರ್ಕುಂ 43ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 515, 516ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 11ನೆ ಅಕ್ಟೋಬರ್ 1907.

ಹುಣಸೂರು ತಾಲ್ಲೂಕು ಪೆರಿಯಾಪಟ್ಟಣದ ಹೋಬಳಿಗೆ ಸೇರಿದ ಜೋಡಿ ಹಿಟ್ಟ ಹೆಬ್ಬಾಗಿಲು ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಹುಣಸೂರು ತಾಲ್ಲೂಕು ಅಮಲ್ದಾರ್ರವರ ಕಛೇರಿಯಲ್ಲಿ 190-ನೆ ಡಿಸೆಂಬರ್ ಮಾಹೆ -ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹೆಚ್ಚು ತಪಸೀಲ್ ಬಗ್ಗೆ ಸ್ 1907ನೆ ಇಸವಿ ಅಕ್ಟೋಬರ್ 31ನೆ ಮರ್ಕುಂ 43ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 514, 515ನೆ ನಂಬರ್ ಪೇಜು ನೋಡತಕ್ಕದ್ದು.

ಟಿ. ಕೆ. ಸುಂದರರಾಜೈಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ನೋಟಿಸ್.

ತಾರೀಖು 18ನೆ ಸೆಪಟಂಬರ್ 1907.

ಎರಡು ವರುಷಗಳಿಗಿಂತಲೂ ಅಧಿಕಕಾಲದಿಂದ ಬೇವಾರಸ್ಸಾಗಿ ಇರುವ ಈ ಕೆಳಕಂಡ ದಸ್ತೈವಜುಗಳನ್ನು ಹಾಜರು ಮಾಡಿದವರೇ ಆಗಲಿ ಅಥವಾ ಇವರಿಂದ ಅಧಿಕಾರ ಹೊಂದಿದ ಮುತಾಲೀಕರೇ ಆಗಲಿ ಈ ನೋಟೀಸಿನ ಕೇರ್ಷ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಆಯಾಯ ರಿಜಸ್ಟ್ರೇಷನ್ ಆಫೀಸುಗಳಲ್ಲಿ ಹಾಜರಾಗಿ ತೆಗೆದುಕೊಳ್ಳದಿದ್ದರೆ ರಿಜಸ್ಟ್ರೇಷನ್ ರೆಗ್ಯುಲೇಷನ್ ನಂಬರ 1ರ 85ನೆ ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಾಗುವ ದಸ್ತೈವಜುಗಳನ್ನು ನಾಶಪಡಿಸುತ್ತೇ:—

ಜಾಬತಾ ನಂಬರು.	ರಿಜಸ್ಟ್ರೇಷನ್ ಆಫೀಸುಗಳ ಹೆಸರು.	ಬುಕ್ಕು ನಂಬರು.	ದಸ್ತೈವಜಿನ ನಂಬರ್.	ದಸ್ತೈವಜು ಹುಟ್ಟಿದ ತಾರೀಖು.	ದಸ್ತೈವಜು ರಿಜಸ್ಟರಾದ ಅಥವಾ ತಿರಸ್ಕರಿಸಿದ ತಾರೀಖು.	ದಸ್ತೈವಜು ಬರೆದುಕೊಟ್ಟವನ ಹೆಸರು.	ದಸ್ತೈವಜು ಬರಸಿಕೊಂಡವನ ಹೆಸರು.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತು.
1	ಮೈಸೂರು	I	505	17—2—1904	19—2—1904	ಮೇಟಗಳ್ಳಿ, ಬಲಗೈ ಮರಿಕೆಂಚಿ ಮಗ ಶಿದ್ದ, ಮೈನರ್, ಗಾರ್ಡಿಯನ್ ಶೀರಿ.	ದೊಡ್ಡ ಹೊಲಗೇರಿ ಬಲಗೈ ದೇವಿ ಶಿದ್ದನ ಮಗ ಅರಂಬಳೀವನದ ಶಿದ್ದ.	100 ರೂಪಾಯಿ ಕ್ರಯ.
2	ಡಿಟೋ ...	I	101	12—1—1905	21—1—1905	ಮೈಸೂರು ನಜರಬಾದ್ ಮುಸಲ್ಮಾನರ ಜಮಾಲ್ ಷರೀಫ್ ಸಾಬರ ಮಗ ಹೈದರ್ ಷರೀಫ್ ಸಾಬಿ.	ಮೈಸೂರು ನಜರ್‌ಬಾದಿನಲ್ಲಿ ಇರುವ ಮುಹಮದ್ ಹಸ್ಸನ್ ಬಲವಂತರವರ ಹೆಂಡತಿ ಜೈನಬ್ಬಿ.	50 ರೂಪಾಯಿ ಭೋಗ್ಯ.
3	ಡಿಟೋ ...	I	1020	14—1—1905	23—1—1905	ಮೈಸೂರು ಲಷ್ಕರ್ ಮೊಹಲ್ಲಾದಲ್ಲಿ ಇರುವ ಬಟ್ಲರ್ ಖಾಸೀಮ್ ಸಾಬರ ಹೆಂಡತಿ ಹನಿಫಾಬಿ.	ಮೈಸೂರು ಲಷ್ಕರ್ ಮೊಹಲ್ಲಾದಲ್ಲಿ ಇರುವ ಸಾಲಾರ್ ಮಹಮ್ಮದ್‌ಸಾಬರ ಹೆಂಡತಿ ಜಮಾಲ್‌ಬಿ.	9 ರೂಪಾಯಿ ಕ್ರಯ.
[illegible]	ಡಿಟೋ ...	I	[illegible]	[illegible]—1904	11—3—1905	ಮೈಸೂರು ಸಂತೆಪೇಟೆಯಲ್ಲಿ ಇರುವ ಇಬ್ರಾಹಿಮ್ ಜೋಸಫ್ ಶೇಟ್.	ಮೈಸೂರು ಸಂತೇಪೇಟೆಯಲ್ಲಿ ಇರುವ ಗಂಜಾಂ ಪೀರಪ್ಪನವರ ಮಕ್ಕಳು ತಿಂಮೈಯ್ಯ	ಬಾಡಿಗೆ ಕರಾರು ವಾಯಿದೆ 3 ವರುಷ.
5	ಡಿಟೋ ...	II	7	26—6—1904	ತಿರಸ್ಕಾರ. 15—6—1905	ಮೈಸೂರು ದೇವರಾಜ ಮೊಹಲ್ಲಾದಲ್ಲಿ ಇರುವ ದ್ಯಾಶೆಟ್ಟಿ ಮಗ ವೆಂಕಟಶೆಟ್ಟಿ ಉರಫ್ ಹೊಟ್ಟೆ.	ನಾಗನಹಳ್ಳಿ ಕಿರಗಾಣಿಗರ ಯಜಮಾನ ಆಲಶೆಟ್ಟಿ ಮಗ ಮಾಳಶೆಟ್ಟಿ.	154 ರೂಪಾಯಿ ಕ್ರಯ.

6	ಡಿಟೋ	...	1	1787	7— 1—1904	17— 6—1905	ಪಡುವಾರಹಳ್ಳಿಯಲ್ಲಿ ಇರುವ ಕೆಂಚೇಗೌಡನ ಮಗ ಮುದ್ದೇಗೌಡ.	ಮೈಸೂರ ಜಯಲಕ್ಷ್ಮಿ ವಿಲಾಸ ವರ್ಕ್ಸ್ ಇಲಾಖಾ ಇನ್‌ಚಾರ್ಜ್‌ನಲ್ಲಿ ಇರುವ ಎ|| ಇ|| ರಾಮರಾಯರು.	142—0—0 ರೂಪಾಯಿ ಖರಾರ್
7	ನಂಜನಗೂಡು	...	1	825	21— 7—1904	2—12—1904	ನಂಜನಗೂಡು ತಾಲ್ಲೂಕು ತೋರವಳ್ಳಿ ದಾಖಲೆ ಮೋಳೆಯಲ್ಲಿರುವ ಚಂಗೌಡನ ಮಗ ಬಸವ. ಇವನ ಮಗ ಬಸವಾ.	ಚಾಮರಾಜನಗರ ತಾಲ್ಲೂಕು ಕೆಸ್ತೂ ದಾಖಲೆ ಹೊನ್ನೆಗೌಡನ ಹುಂಡಿಯಲ್ಲಿ ಇರುವ ದೇವೇಗೌಡನ ಮಗ ಹುಚ್ಚೇಗೌಡ.	100 ರೂಪಾಯಿ ಆಧಾರ.
8	ಡಿಟೋ	...	I	182	20— 7—1905	20— 7—1905	ನಂಜನಗೂಡು ತಾಲ್ಲೂಕು ಚಿಕ್ಕ ಹೊಂಮದಲ್ಲಿರುವ ಪುಟ್ಟೆಗೌಡನ ಮಗ ಬಸಪ್ಪ.	ಡಿಟೋ	ಡಿಟೋ
9	ಮಂಡ್ಯ	...	I	577	13—10—1904	13—10—1904	ಮದ್ದೂರಲ್ಲಿ ಇರುವ ಫರ್‌ಬೇಗಸಾಬರ ಮಗ ಅಬ್ದುಲ್ಲಾ ಬೇಗ.	ಕುಣಿಗಲ್ ತಾಲ್ಲೂಕು ಚಲಮಸಂದ್ರದ ಖುರ್ಷಿ ಪೀರಸಾಬರ ಮಗ ಖಾಸಿಂಸಾಬಿ.	50 ರೂಪಾಯಿ ಆಧಾರ.
10	ಟ. ನರಶೀಪುರ	...	I	16	12— 6—1904	4— 7—1905	ಹ್ಯಾಕನೂರು ಕುರುಡ ಹೊಂಗ್ಯೈಯ್ಯನ ಚಿಕ್ಕ ಮಲ್ಲೈಯ್ಯನ ಹೆಂಡತಿ ಲಿಂಗಂಮ.	ಕೊಳ್ಳೆಗಾಲದ ತಾಲ್ಲೂಕು ಹೋಬಳಿಪುರ ಮಲ್ಲೆಗೌಡನ ಮಗ ಚನ್ನಪ್ಪ.	150 ಡಿಟೋ
11	ಡಿಟೋ	...	I	2020	5 — 5—1903	6— 5—1905	ತಲಕಾಡು ಕಸಬಾದಲ್ಲಿರುವ ಮಾಜೀ ದಫೇದಾರ, ವಿರೇಗೌಡನ ಮಗ ವೀರೆಗೌಡ ಉರುಫ್ ಕುಳ್ಳೇಗೌಡ.	ಮಳವಳ್ಳಿ ತಾಲ್ಲೂಕು ರಿಜಸ್ಟ್ರೇಷನ್ ಗುಮಾಸ್ತೆ ಶ್ರೀಕಂಠೈಯನವರ ಮಗ ನಾರಣಪ್ಪಾ.	ಗುತ್ತಿಗೆ ಖರಾರ್ ಮತ್ತು 75 ರೂಪಾಯಿ ಮದಗಡ ಅಡಗಿದೆ.
12	ಡಿಟೋ	...	I	2350	27— 5—1905	31— 5—1905	ಶ್ರೀರಂಗರಾಜಪುರದಲ್ಲಿ ಇರುವ ಕುಂಭಕೋಣ ಶ್ರೀನಿವಾಸರಾಮಾನುಜಾಚಾರ್ ಮಗ ರಂಗನಾಥ ತಾತಾಚಾರ್.	ಹಾಸನದ ಡಿಸ್ಟ್ರಿಕ್ಟ್ ಪೊಲೀಸ ಡೆಪ್ಯುಟಿ ಮುನಷಿ ಎಂ. ಶ್ರೀನಿವಾಸೈಯಂಗಾರ್.	200 ರೂಪಾಯಿ ಆಧಾರ.
13	ಚಾಮರಾಜನಗರ	...	I	2079	30— 4—1905	2— 5—1906	ಆಲದೂರು ದಾಖಲೆ ಬೇರಣಿ ಮಲ್ಲನ ಕಟ್ಟೆ ಹುಂಡಿಯಲ್ಲಿ ಇರುವ ಕುರುಬರ ಬೆಳ್ಳೆಗೌಡ್ನ ಮಗ ಮಲ್ಲಾ.	ನಾಲೂರು ಗ್ರಾಮದಲ್ಲಿರುವ ಕೃಷ್ಣೇಗೌಡ.	100 ರೂಪಾಯಿ ಆಧಾರ.

ಅನುಕ್ರಮ ನಂಬರು.	ರಿಜಸ್ಟ್ರೇಷನ್ ಆಫೀಸುಗಳ ಹೆಸರು.	ಪುಸ್ತಕ ನಂಬರು.	ದಸ್ತಾವೇಜಿನ ನಂಬರು.	ದಸ್ತಾವೇಜು ಹುಟ್ಟಿದ ತಾರೀಖು.	ದಸ್ತೈವಜು ರಿಜಿಸ್ಟರಾದ ಅಥವಾ ತಿರಸ್ಕರಿಸಿದ ತಾರೀಖು	ದಸ್ತೈವಜು ಬರೆದುಕೊಟ್ಟವನ ಹೆಸರು.	ದಸ್ತೈವಜು ಬರಸಿಕೊಂಡವರ ಹೆಸರು.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತ್ತು.
14	ಚಾಮರಾಜನಗರ ...	I	2082	30—4—1905	2—5—1906	ಆಲದೂರು ಗ್ರಾಮದ ದಾಖಲೆ ಬೇರಣಿ ಮಲ್ಲನ ಹುಂಡಿಯಲ್ಲಿ ಇರುವ ಕ್ಯುರುಬರ ಮಲ್ಲಾ.	ನಾಲೂರು ಗ್ರಾಮದಲ್ಲಿರುವ ಕೃಷ್ಣೇಗೌಡ.	175 ರೂಪಾಯಿ ಆಧಾರ.
15	ಕೃಷ್ಣರಾಜಪೇಟೆ ...	I	140	10—6—1903	25—7—1904	ಬೂವ್ವನಹಳ್ಳಿ ಗ್ರಾಮದಲ್ಲಿ ಇರುವ ಹೊಂನನ ಮಗ ಜವರಾ.	ಹಳೆಯೂರು ಶಿವನೇಗೌಡನ ಮಗ ಬೊಮ್ಮೇಗೌಡ.	40 ರೂಪಾಯಿ ಜೀವನಾಂಶದ ಕರಾರು.
16	ಡಿಟೋ ...	I	606	5—3—1903	5—11—1904	ಹೊಸಕೋಟೆಯಲ್ಲಿ ಇರುವ ಕೆಂಗೇರಿ ಕೃಷ್ಣಪ್ಪ.	ಎಡತೊರೆಯಲ್ಲಿ ಇರುವ ಬಳೇ ಚಿಕ್ಕಬಸವಣ್ಣ.	600 ರೂಪಾಯಿ ಕ್ರಯ.
17	ಡಿಟೋ ...	I	1566	14—6—1905	14—6—1905	ಮಾವಿನಕೆರೆ ಗ್ರಾಮದಲ್ಲಿ ಇರುವ ಕೆಂಗೇಗೌಡನ ಮಗ ಗೋಸೇಗೌಡ.	ಮಾವಿನಕೆರೆ ಗ್ರಾಮದಲ್ಲಿ ಇರುವ ನರಸಿಂಹೇಗೌಡ.	31—4—0 ಆಧಾರ.
18	ನಾಗಮಂಗಲ ...	I	92	9—2—1903	13—8—1904	ಬೆಂಗಳೂರಿನಲ್ಲಿ ಇರುವ ಪಾಲಗ್ರಹಾರದ ಕಾಳಾಚಾರಿ ಮಗ ಸೂರಾಚಾರಿ.	ಮೈಸೂರಿನಲ್ಲಿ ಇರುವ ವೀರಭದ್ರಾಚಾರಿ	50 ರೂಪಾಯಿ ಕ್ರಯ.
19	ಮಳವಳ್ಳಿ ...	I	1428	19—5—1905	19—5—1905	ಚಿಕ್ಕ ಅರಸಿನಕೆರೆ ಗ್ರಾಮದಲ್ಲಿರುವ ಗಂಗಧಿಕಾರ ಒಕ್ಕಲಿಗರ ತಿಮ್ಮೇಗೌಡನ ಮಗ ಶಿದ್ದಲಿಂಗೇಗೌಡ.	ಚಿಕ್ಕ ಅರಸಿನಕೆರೆ ಗ್ರಾಮದಲ್ಲಿ ಇರುವ ತಿಪ್ಪೇಗೌಡನ ಮಗ ಶಿದ್ದಲಿಂಗೇಗೌಡ.	20 ರೂಪಾಯಿ ಕ್ರಯ.
20	ಶ್ರೀರಂಗಪಟ್ಟಣ ...	II	3	23—2—1904	16—6—1904	ಗೊಬ್ಬರಗಾಲದಲ್ಲಿ ಇರುವ ಬೋರಶೆಟ್ಟಿ ಪುರುಷ ಕರೀಶೆಟ್ಟಿ.	ಮೈಸೂರು ಕೋಟೆಯಲ್ಲಿ ಇರುವ ಮುದಗೆರೆ ಲಿಂಗಪ್ಪೈಯ್ಯನ ಮಗ ರಂಗೈಯ್ಯ.	3 ಸಾಲಿಗೇಣಿ 22-9 ರೂಪಾಯಿ ಬಾಳುವ $3\frac{1}{4}$ ಖಂಡಿ ಭತ್ತ ಕೊಡುವದಾಗಿ.

21	ಹೆಗ್ಗಡದೇವನಕೋಟೆ ...	I	207	29— 4—1905	29 — 4—1905	ವಡ್ಡರಪಾಳ್ಯದಲ್ಲಿ ಇರುವ ದಾದಾ ಬೋಯಿ ಪುರುಫ಼ ಗಿರಿಯಾಬೋಯಿ, 2. ಡಿಟೋ ಯವನ ತಾಯಿ ಯಲ್ಲಮ್ಮ ಪುರುಫ಼ ಸಣ್ಣಮ್ಮ.	ಹೊಂಮರಗಳ್ಳಿ ಪಟೇಲ್ ರಾಮಣ್ಣ.	100 ರೂಪಾಯಿ ಕ್ರಯ.
22	ಡಿಟೋ	II	1	19— 4—1904	23— 2 1905	ಬಂತವಾಡಿ ಗ್ರಾಮದ ಪಟೇಲ್ ಅಂಕೇಗೌಡನ ಮಗ ಅಂಕೇಗೌಡ ಪುರುಫ಼ ಕೊಸೇಗೌಡ.	ಸರಗೂರಿನಲ್ಲಿ ಇರುವ ಚಂನಾಚಾರಿ ಮಗ ಬೆಟ್ಟಾಚಾರಿ.	95 ರೂಪಾಯಿ ಕ್ರಯ.
23	ಡಿಟೋ ...	ಡಿಟೋ	2	20— 6—1904	27 — 2—19 5	ಸೋಗಹಳ್ಳಿಯಲ್ಲಿ ಇರುವ ಚಲುವ, 2. ಮೇಲ್ಕಂಡವನ ಮಗ ಪುಟ್ಟ.	ಸೋನಹಳ್ಳಿ ಚಿಕ್ಕಗೋಪಾಲಿ ಮಗ ಗೋಪಾಲಿ.	80 ರೂಪಾಯಿ ಕ್ರಯ.
24	ಹೆಗ್ಗಡದೇವನಕೋಟೆ	ಡಿಟೋ	6	5— 8—19 4	29 4 1905	ಆಗತೂರು ಗ್ರಾಮದಲ್ಲಿ ಇರುವ ವೀರನಾಯಿಕನ ಮಗ ಜೋಳನಾಯಿಕ.	ನಾಗರೆ ಕಾಳನಾಯಿಕನ ಮಗ ಕುಳನಾಯಿಕ.	48 ರೂಪಾಯಿ ಕ್ರಯ.
25	ಎಳಂದೂರು ...	IV	1	14 — 7—1904	18 — 7—1904	ಎಳಂದೂರು ಕಸಬಾದಲ್ಲಿ ಇರುವ 1ನೆಯ ಕೃಷ್ಣಮಾಚಾರ್, 2ನೆ ಶಿವಲಿಂಗಶೆಟ್ಟಿ ಮಗ ವೀರಬಸವಪ್ಪ, 3ನೆ ಕ್ಯಾತೇಗೌಡನ ಮಗ ಎಂ. ಸುಬ್ಬಣ್ಣ.	ಮಧುವನಹಳ್ಳಿಯಲ್ಲಿ ಇರುವ ಯಜಮಾನ ಮಲ್ಲಶೆಟ್ಟರ ಮಕ್ಕಳು ಎಂ. ಮಾದಶೆಟ್ಟಿ.	1,000 ರೂಪಾಯಿ ಚರಸ್ವತ್ತಿನ ಆಧಾರ.
26	ಹನಸೂರು ...	I	716	26 4—1905	26— 4—1905	ವೀರರಾಜೇಂದ್ರಪೇಟೆ ತಾಲ್ಲೂಕು ಬಳಗುಂದ ಗ್ರಾಮದಲ್ಲಿ ಇರುವ ವೆಂಕಟರಾಜು ಮಗ ನರಸಿಂಹರಾಜೈಯ.	ಪಿರಿಯಾಪಟ್ಟಣದ ಕಿಲ್ಲೆಯಲ್ಲಿ ಇರುವ ಸಬ್ಬಯ್ಯ.	90 ರೂಪಾಯಿ ಭೋಗ್ಯ.

ಟಿ. ಕೆ. ಸುಂದರರಾಜೈಯ್ಯಂಗಾರಿ,
ಫಾರ್ ಡಿಸ್ಟ್ರಿಕ್ಟು ರಿಜಿಸ್ಟ್ರಾರ್.

ಚಿತ್ರದುರ್ಗ ಡಿಸ್ಟ್ರಿಕ್ಟು.

1907ನೆ ಇಸವಿ ಆಗಸ್ಟ್ ತಾರೀಖು 28ನೆ ಬುಧುವಾರ ನಡೆದ ಚಿತ್ರದುರ್ಗ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

ಪ್ರೆಸಿಡೆಂಟರು—ಎಂ. ಚೆಂಗಯ್ಯ ಶೆಟ್ಟರವರು, ಎಸ್ಕ್ವೈಯರ್, ಬಿ. ಎ.

ವೈಸ ಪ್ರೆಸಿಡೆಂಟರು—ಬಿ. ಭೀಮರಾಯರವರು, ಎಸ್ಕ್ವೈಯರ್, ಬಿ. ಎ.

ಅಫಿಷಿಯಲ್ ಮೆಂಬರುಗಳು.

1. ಚಿತ್ರದುರ್ಗ ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರ್ ಸಾಹೇಬರವರು, (ಗೈರ್‌ಹಾಜರ್).
2. ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರವರು.
3. ದಾವಣಗೆರೆ ಸಬ್ ಡಿವಿಜನ್ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು.
4. ಚಿತ್ರದುರ್ಗ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು.
5. ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರವರು, (ಗೈರ್ ಹಾಜರ್).

ನಾನ್ ಅಫಿಷಿಯಲ್ ಮೆಂಬರುಗಳು.

1. ಮೆ॥ ಸೈಯದ್ ಮಹಮ್ಮದ್ ಹಸನ್ ಸಾಹೇಬರವರು, (ಗೈರ್‌ಹಾಜರ್).
2. ,, ಟಿ. ಸ್ವಾಮಿರಾಯಾಚಾರು.
3. ,, ಪಟೇಲ್ ಕೆಂಚವೀರಪ್ಪನವರು.
4. ,, ನಾಯಕನಹಟ್ಟಿ ಹನುಮಂತಪ್ಪನವರು.
5. ,, ನೇರ್ಲಹಳ್ಳಿ ಸಣ್ಣಪ್ಪನವರು.
6. ,, ಭಾರಿ ಸಣ್ಣಪ್ಪನವರು.
7. ,, ಜಗಲೂರು ಫಕೀರ್ ಸಾಹೇಬರವರು.
8. ,, ಸಿ. ಎನ್. ಕೃಷ್ಣಪ್ಪನವರು.
9. ,, ಗುಂಡೇರಿ ಗೋಪಾಲಯ್ಯನವರು.
10. ,, ನಾಡಿಗ ಸಿದ್ದರಾಮಯ್ಯನವರು.
11. ,, ಹೊಸದುರ್ಗದ ಖಾಸಿಂಸಾಹೇಬರವರು.
12. ,, ಪಾಳೇದಹಳ್ಳಿ ನಾಗಪ್ಪನವರು.
13. ,, ಹರಿಹರದ ಬಾಲಕೃಷ್ಣರಾಯರವರು.
14. ,, ದಾವಣಗೆರೆ ಷಡಾಕ್ಷರಪ್ಪನವರು, (ಗೈರ್‌ಹಾಜರ್).
15. ,, ಡಿಟೋ ನಬೀ ಸಾಹೇಬರವರು.
16. ,, ಹಿರಿಯೂರು ತಾಲ್ಲೂಕು ಚೆನ್ನಗಾರಯ್ಯನವರು, (ಗೈರ್ ಹಾಜರ್).
17. ,, ಲೋಕಿಕೆರೆ ಹನುಮಂತಪ್ಪನವರು, (ಗೈರ್ ಹಾಜರ್).
18. ,, ಸಾವುಕಾರ್ ವೀರಣ್ಣನವರು.

ಷರಾ.—ಎಲ್ಲಾ ತಾಲ್ಲೂಕುಗಳ ಅಮಲ್ದಾರರವರು ಮತ್ತು ಹರಿಹರದ ಡೆಪ್ಯುಟಿ ಅಮಲ್ದಾರರವರು ಸಹಾ ಹಾಜರಿದ್ದರು.

1. 1907ನೆ ಇಸವಿ ಜೂನ್ ತಾರೀಖು 6ರಲ್ಲು ನಡೆದ ಬೋರ್ಡು ಮೀಟಿಂಗಿನ ಪ್ರೊಸೀಡಿಂಗ್ಸು ನಕಲು ಓದಿ ದೃಢಪಡಿಸಲಾಯಿತು.

2. ಈ ವರುಷ ಮೈಸೂರಲ್ಲಿ ನಡೆಯತಕ್ಕ ಪ್ರಜಾ ಪ್ರತಿನಿಧಿ ಸಭೆಗೆ ಈ ಬೋರ್ಡಿನಿಂದ ಹೋಗತಕ್ಕ ಮೆಂಬರುಗಳನ್ನು ಚುನಾಯಿಸತಕ್ಕ ವಿಷಯದಲ್ಲಿನ ದಸರಾ ಕ್ಯಾಲೆಂಡರನ್ನು ಓದಲಾಯಿತು.

ಮಹಾರಾಜಶ್ರೀ ಭಾರಿ ಸಣ್ಣಪ್ಪನವರನ್ನು ಮತ್ತು ನೇರಲಹಳ್ಳಿ ಸಣ್ಣಪ್ಪನವರನ್ನು ಸಹಾ ಮೈಸೂರಿಗೆ ಹೋಗಬೇಕಾಗಿ ತೀರ್ಮಾನಿಸಲಾಯಿತು.

3. ಕಳೆದ ಸಾಲಿನಲ್ಲಿ ನೇಮಕಲಾಬಂದ ಕಾಮಗಾರಿಗಳಿಗೆ ಚಾಲ್ತಿ ಸಾಲಿನಲ್ಲಿ ಪೂರೈಸತಕ್ಕ ಬಗ್ಯೆ ಬೇಕಾದ ಮೊಬಲಗನ್ನು ತೋರಿಸುವ ಪಟ್ಟಿಯನ್ನು ಓದಲಾಯಿತು.

ಸದರಿ ಪಟ್ಟಿಯನ್ನು ಅಪ್ರೂವ್ ಮಾಡಿ ಅದನ್ನು ಮಂಜೂರ್ ಬಗ್ಯೆ ಗವರ್ನಮೆಂಟಿಗೆ ಕಳುಹಿಸಬೇಕಾಗಿ ತೀರ್ಮಾನಿಸಲಾಯಿತು.

4. ಜರೂರು ಆಗಿ ನಡೆಯಬೇಕಾದ ಕಾಮಗಾರಿಗಳನ್ನು ಬೋರ್ಡಿನವರು ಅಪ್ರೂವ್ ಮಾಡುತ್ತಾರೆಂಬ ನಿರೀಕ್ಷಣೆ ಮೇಲೆ ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರವರು ಮಂಜೂರ್ಮಾಡಿದ ಕಾಮಗಾರಿಗಳ ಲೀಸ್ಟು ಓದಲಾಯಿತು.

ಸದರಿ ಲೀಸ್ಟನ್ನು ಅಂಗೀಕರಿಸಿ ಗವರ್ನಮೆಂಟಿಗೆ ಕಳುಹಿಸಬೇಕಾಗಿ ತೀರ್ಮಾನಿಸಲಾಯಿತು.

5. ಇಟ್ಟಿಗೆ ಅಥವಾ ಕಲ್ಲಿನಿಂದ ನೆಲವನ್ನು ಹೊದ್ದಿಸಲ್ಪಡಬೇಕಾದ ಈ ಡಿಸ್ಟ್ರಿಕ್ಟಿನ ಕೆಲವು ಆಸ್ಪತ್ರೆಗಳ ವಿಷಯದಲ್ಲಿ ಬೋರ್ಡಿನವರ ಅಭಿಪ್ರಾಯ ಕೇಳಿರುವ ಗವರ್ನಮೆಂಟ್ ಪ್ರೊಸೀಡಿಂಗ್ಸು ಓದಲಾಯಿತು.

ಚಾಲತಿ ಸಾಲಿನಲ್ಲಿ ಹೊಳಲ್ಕೆರೆ ಮತ್ತು ದಾವಣಗೆರೆ ಈ 2 ಆಸ್ಪತ್ರೆಗಳ ನೆಲಕ್ಕೆ ಹೊದ್ದಿಸಬೇಕಾಗಿಯೂ ಮತ್ತು ಇವೆರಡರಿಂದಲು ತಗಲಬಹುದಾದ ಲಾಗವಡು 605 ರೂಪಾಯಿಗಳನ್ನು ಡಿಸ್ಟ್ರಿಕ್ಟು ಮತ್ತು ಮುನಸಿಪಲ್ ಫಂಡ್ಸಿಗೆ ಸಮವಾಗಿ ಹಂಚಬೇಕಾಗಿ ತೀರ್ಮಾನಿಸಲಾಯಿತು.

6. ಕ್ಲೋಸೆಪೇಟೆ... ಹೊಳೆಮಲಾಪುರದ ರೈಲ್ವೆ ಸ್ಟೇಷನ್ನಿಗೆ ಹೋಗುವ ಕಾಲುದಾರಿಯಲ್ಲಿ ಜಿನಸಿ ಭರ್ತಿ ಮಾಡಲ್ಪಟ್ಟ ಬಂಡಿಗಳ ಓಡ್ಯಾಟ ಬಹಳ ಜಾಸ್ತಿಯಾಗಿ ಇರುವದಾದರೆ ಅಲ್ಲಿ ಒಂದು ಟೋಲ್‌ಗೇಟ್ ಇಡಲು ಬೋರ್ಡಿನವರಿಗೆ ಅಭ್ಯಂತರವೇನಿದೆ ಎಂಬ ಅಂಶ ಕೇಳಿರುವ ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯವರ ಡಾಕೆಟ್ ಓದಲಾಯಿತು.

ಸದರಿ ರಸ್ತೆಯಲ್ಲಿ ಗಾಡಿಗಳ ಓಡ್ಯಾಟವು ಶುರುವಿನಲ್ಲಿ ಇದ್ದಷ್ಟು ಈಗ ಇಲ್ಲವಾಗಿ ತಿಳಿಯಬರುತ್ತೆ ಆದ್ದರಿಂದ ಪ್ರಕೃತದಲ್ಲಿ ಈ ರಸ್ತೆ ಹಾಕತಕ್ಕದ್ದು ಅವಶ್ಯಕವಿಲ್ಲವಾಗಿ ತೀರ್ಮಾನಿಸಲಾಯಿತು.

7. (*a*) ಹೊಳಲ್ಕೆರೆಯಲ್ಲಿ ಪ್ರಯಾಣಿಕರ ಉಪಯೋಗಕ್ಕೋಸ್ಕರ ಪ್ರತ್ಯೇಕವಾಗಿ ಮುಸಾಫರಖಾನೆಯನ್ನು ಕಟ್ಟಿಸಲು ಏರ್ಪಾಡು ಇಡಬೇಕೇ ಅಥವಾ ಹಾಲಿ ಇರತಕ್ಕ ಕಟ್ಟಡದ ಪೈಕಿ ಹೊಳಲ್ಕೆರೆ ಅಮಲ್ದಾರರ ವಾಸಕ್ಕೂ ಮತ್ತು D. P. W. ಸಬ್ ಡಿವಿಜನ್ ಆಫೀಸಿನ ಉಪಯೋಗಕ್ಕೂ ಬಿಟ್ಟುಕೊಟ್ಟಿರುವ ಭಾಗಗಳನ್ನು ಸದರಿಯವರ ಸುಪರ್ದಿನಿಂದ ತಪ್ಪಿಸಬೇಕೇ ಹ್ಯಾಗೆಂಬ ವಿಷಯದಲ್ಲಿ ಬೋರ್ಡಿನವರ ಅಭಿಪ್ರಾಯವನ್ನು ಕೇಳಿರುವ ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯವರ ಡಾಕೆಟ್ ಓದಲಾಯಿತು.

(*b*). D. P. W. ಸಬ್ ಡಿವಿಜನ್ ಆಫೀಸು ಉಪಯೋಗಕ್ಕೋಸ್ಕರ ಹೊಳಲ್ಕೆರೆ ಮುಸಾಫರಖಾನೆಯ ನಾಲ್ಕು ಕೊಠಡಿಗಳನ್ನು ಸ್ವಾಧೀನ ಇಟ್ಟುಕೊಂಡಿರುವುದರ ಮೇಲೆ ಬೋರ್ಡಿನವರು ಅದಕ್ಕೋಸ್ಕರ ಮಾಹೆಯಾನ 4 ರೂಪಾಯಿಗಳಂತೆ ಬಾಡಿಗೆ ಕೊಡಬೇಕಾಗಿ ಸದರಿ ಡಿಪಾರ್ಟ್‌ಮೆಂಟಿನವರಿಗೆ ತಗಾದೆ ಮಾಡಿದ್ದಕ್ಕೆ ಸದರಿ ಕಟ್ಟಡವು ಪ್ರೊವಿನ್ಷಿಯಲ್ (Provincial) ಫಂಡ್ಸಿನಿಂದ ಕಟ್ಟಲ್ಪಟ್ಟು ಬೋರ್ಡಿನವರಿಗೆ ಕೊಟ್ಟಿರುವುದರಿಂದ ಇದಕ್ಕೋಸ್ಕರ ಬಾಡಿಗೆ ಕೇಳುವುದು ಸರಿಯಲ್ಲವೆಂಬದಾಗಿ ಚೀಫ್ ಇಂಜಿನಿಯರ್ ಸಾಹೇಬರವರು ಬರೆದಿರುವ ಡಾಕೆಟ್ಟನ್ನು ಓದಲಾಯಿತು.

ಹೊಳಲ್ಕೆರೆ ಅಮಲ್ದಾರ್‌ರವರು ತಮ್ಮ ವಾಸಕ್ಕೋಸ್ಕರ ಪ್ರತ್ಯೇಕವಾದ ಮನೆಯು ಸಿಕ್ಕುವದಿಲ್ಲವೆಂಬುವುದು ನಿಶ್ಚಯವಾದ್ದರಿಂದಲೂ ಮತ್ತು D. P. W. ಸಬ್ ಡಿವಿಜನ್ ಆಫೀಸ್ ಬ್ಯಾರೆ ಕಟ್ಟಡಕ್ಕೆ ಸಾಗಿಸುವುದು ಈಗ ಸಾಧ್ಯವಾದದ್ದಾಗಿ ತೋರದೆ ಇರುವುದರಿಂದಲೂ ಹಾಲಿ ಇರುವ ಕಟ್ಟಡದ ಬದಲಾಗಿ ಹೊಸದಾಗಿ ಮುಸಾಫರಖಾನೆಯನ್ನು ಕಟ್ಟಿಸಬೇಕಾಗಿ ಗವರ್ನ್‌ಮೆಂಟಿಗೆ ಬರಿಯಬೇಕಾಗಿ ತೀರ್ಮಾನಿಸಲಾಯಿತು.

8. ಹರಿಹರದ ಟೌನ್ ನೀರಿನ ಸರಬರಾಯಿ ಬಗ್ಗೆ ತಗಲುವ ಲಾಗವಡು ಪೈಕಿ ಅರ್ಧಭಾಗ ಡಿಸ್ಟ್ರಿಕ್ಟು ಫಂಡಿನಿಂದ ಮಿಟಿ ಮಾಡಬೇಕಾದ ವಿಷಯದಲ್ಲಿ ಬೋರ್ಡಿನವರು ಪಟ್ಟಿರುವ ಅಭಿಪ್ರಾಯದಮೇಲೆ ಸದರಿ ಟೌನ್ ಡೆಪ್ಯುಟಿ ಅಮಲ್ದಾರ್‌ರವರ ಹೆಡ್‌ಕ್ವಾರ್ಟರಾಗಿ ಮತ್ತು ಈ ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಿಂದಲೂ ಅನೇಕ ಜನಗಳು ಯಾತ್ರಾರ್ಥವಾಗಿ ಈ ಸ್ಥಳಕ್ಕೆ ಬಂದು ಹೋಗುವುದರಿಂದಲೂ ಸದರಿ ಖರ್ಚನ್ನು ಡಿಸ್ಟ್ರಿಕ್ಟು ಫಂಡಿನಿಂದ ಮಿಟಿ ಮಾಡುವುದು ಅನ್ಯಾಯವಾದ್ದಲ್ಲವೆಂಬುವ ವಿಷಯವನ್ನು ತಿಳಿಸುವ ಜನರಲ್ ಮತ್ತು ರೆವಿನ್ಯು ಸೆಕ್ರಿಟೆರಿಯವರ ಡಾಕೆಟ್ ಓದಲಾಯಿತು.

ಮೇಲ್ಕಂಡ ಡಾಕೆಟಿನಲ್ಲಿ ಕಂಡ ವಿಷಯವನ್ನು ನೋಟ್ ಮಾಡಿಕೊಂಡಿದೆ. ಹರಿಹರವು ಒಳ್ಳೇ ಕ್ಷೇತ್ರಸ್ಥಳವಾದ್ದರಿಂದ ಅನೇಕ ಭಕ್ತಾದಿಗಳು ಮೈಸೂರು ದೇಶದವರಲ್ಲದೆ ಬೇರೆ ದೇಶಗಳಿಂದ ಬರುತ್ತಾರಾಗಿ ಡಿಸ್ಟ್ರಿಕ್ಟು ಫಂಡಿನಮೇಲೆ ಹಾಕಿರತಕ್ಕ ಲಾಗವಡು ಪೈಕಿ ಅರ್ಧ ಭಾಗವನ್ನಾದರೂ ಮುಜರಾಯಿ ಫಂಡ್ಸಿನಿಂದಲಾದರೂ ಭರ್ತಿ ಮಾಡಿಸಲು ಬೋರ್ಡಿನವರ ಅಭಿಪ್ರಾಯವಾಗಿರುತ್ತೆ.

9. D. P. W. ಯವರಿಗೆ ಕಳೆದ ಸಾಲಿನಲ್ಲಿ ಕಾಮಗಾರಿಗಳಿಗೋಸ್ಕರ ಕೊಟ್ಟಿದ್ದ ಫಂಡ್ಸ್ ಪೈಕಿ ಕೆಲವು ಭಾಗವನ್ನು ಚಾಲ್ತಿ ಸಾಲಿಗೆ ರಿ ಅಪ್ರೋಪ್ರಿಯೇಷನ್ ಮಾಡಿಕೊಳ್ಳಲು ಬೋರ್ಡಿನವರ ಅಭಿಪ್ರಾಯವನ್ನು ಕೇಳುವ ಚಿತ್ರದುರ್ಗ ಎಗ್ಸಿಕ್ಯೂಟಿವ್ ಇಂಜಿನಿಯರ್ ಸಾಹೇಬರವರಿಂದ ತಲುಪಿರುವ ಡಾಕೆಟನ್ನು ಓದಲಾಯಿತು.

ಅಪ್ರೂವ್ ಮಾಡಿದೆ.

10. ಪರಶುರಾಂಪುರದ ಸುಬ್ಬಾವಧಾನಿಗಳವರು ಚಿತ್ರದುರ್ಗದ ಹಿಂದೂ ಹುಡುಗರಿಗೆ ವೇದಾಧ್ಯಯನ ಪಾಠವನ್ನು ಹೇಳುವದಕ್ಕೆ ಇವರಿಗೆ ಡಿಸ್ಟ್ರಿಕ್ಟು ಫಂಡಿನಿಂದ ಮಾಹೇಯಾನಾ 5 ರೂಪಾಯಿಗಳು ವೇತನ ಸಹಾಯ ಕೊಡಿಸಿಕೊಡಬೇಕಾಗಿ ಚಿತ್ರದುರ್ಗದ ಎಲ್ಲಾ ಹಿಂದೂ ನಿವಾಸಿಗಳಿಂದ ತಲ್ಪಿದ ಅರ್ಜಿಯನ್ನು ಓದಲಾಯಿತು.

ಈ ಅರ್ಜಿಯ ವಿಷಯವನ್ನು ಮುಂದಿನ ಮೀಟಿಂಗಿಗೆ ಇಡಬೇಕಾಗಿ ತೀರ್ಮಾನಿಸಲಾಯಿತು.

11. ಚಿತ್ರದುರ್ಗದ ವೈದ್ಯ ಲಕ್ಷ್ಮೀನರಸಯ್ಯನವರು ತಮಗೆ ಹಾಲಿ ಬರತಕ್ಕ ಅಲೋವೆನ್ಸು ರೂ. 12ರಿಂದ 25ಕ್ಕೆ ಹೆಚ್ಚಿಸಬೇಕಾಗಿ ಕೇಳಿಕೊಂಡಿರುವ ಅರ್ಜಿಯನ್ನು ಓದಲಾಯಿತು.

ಈ ವೈದ್ಯಶಾಲೆಗೆ ಬರತಕ್ಕ ಜನರು ಅಧಿಕವಾಗುತ್ತಾ ಇರುವುದರಿಂದಲೂ ಮತ್ತು ಹಾಲಿ ಪಾವತಿ ಆಗುತ್ತಾ ಇರುವ ಅಲೋವೆನ್ಸು ಕಮ್ಮಿಯಾದ್ದರಿಂದಲೂ ಈತನಿಗೆ 20 ರೂಪಾಯಿಗಳು ಕೊಡಬೇಕಾಗಿಯೂ ಮತ್ತು ಸದರಿ ಮೊಬಲಗು ಪೈಕಿ 3ನೆ 2 ಭಾಗವನ್ನು ಡಿಸ್ಟ್ರಿಕ್ಟು ಫಂಡಿನಿಂದ ಮಿಟಿ ಮಾಡಬೇಕಾಗಿ ನಿರ್ಧರಿಸಲಾಯಿತು.

12. ಜಗಳೂರು ತಾಲ್ಲೂಕು ಬಿಳಚೋಡು ಮುಸಾಫರಖಾನೆ ಉಪಯೋಗದ ಬಗ್ಗೆ ತೆಗೆದುಕೊಳ್ಳಬೇಕಾದ ಕೆಲವು ಪಾತ್ರೆಗಳ ಖರೀದಿ ಮೊಬಲಗು ರೂ. 81—4—0 ತಗಲುತ್ತೆಂಬದಾಗಿ ದಾವಣಗೆರೆ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಿಂದ ತಲ್ಪಿದ ಯಾದಿ ಓದಲಾಯಿತು.

ಮಂಜೂರ್ ಮಾಡಿದೆ.

13. ಹರಿಹರದ ಸಬ್ ತಾಲ್ಲೂಕು ಸಾರಥಿ ಗ್ರಾಮದಲ್ಲಿ ಮತ್ತು ಹೊಸದುರ್ಗ ತಾಲ್ಲೂಕು ಕ್ಯಾದಿಗೆರೆ ಗ್ರಾಮದಲ್ಲೂ ದೊಡ್ಡಿಗಳನ್ನು ಹೊಸದಾಗಿ ಏರ್ಪಾಡು ಮಾಡಬೇಕೆಂಬದಾಗಿ ದಾವಣಗೆರೆ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಿಂದ ತಲ್ಪಿದ ಯಾದಿ ಓದಲಾಯಿತು.

ಸದರಿ ಗ್ರಾಮಗಳಲ್ಲಿ ಅಜಮಾಯಿಷಿ ತರೀಕು ಒಂದು ವರ್ಷದವರಿಗೆ ದೊಡ್ಡಿ ಏರ್ಪಾಡು ಮಾಡಬೇಕಾಗಿ ತೀರ್ಮಾನಿಸಲಾಯಿತು.

14. ಚಳ್ಳಕೆರೆಯಲ್ಲಿ ಹಾಲಿ ಇರತಕ್ಕ ಮುಸಾಫರಖಾನೆ ಕಟ್ಟಡವು ಹೀನಸ್ಥಿತಿಯಲ್ಲಿದ್ದು ರಿಪೇರಿಗೆ ಸಹಾ ನಾಲಾಯಖಾಗಿ ಇರುವದ್ದರಿಂದ ಅದನ್ನು ಹರಾಜುಮಾಡಿ ಅದಕ್ಕೆ ಪ್ರತಿಯಾಗಿ ಹೊಸ ಕಟ್ಟಡವನ್ನು ಪೋಸ್ಟು ಆಫೀಸಿನ ಹತ್ತರ ಸರಿಯಾದ ನಮೂನೆಯಂತೆ ಕಟ್ಟಸಬೇಕಾಗಿ ಚಳ್ಳಕೆರೆ ತಾಲ್ಲೂಕು ಬೋರ್ಡಿನಿಂದ ತಲ್ಪಿರುವ ಯಾದಿಯನ್ನು ಓದಲಾಯಿತು.

ಸದರಿ ಮುಸಾಫರಖಾನೆ ಕಟ್ಟಡವು ಪ್ರಯಾಣೀಕರಿಗೆ ಸುತರಾಂ ಉಪಯೋಗವಾಗ್ವಿಲ್ಲ. ತಾಲ್ಲೂಕು ಬೋರ್ಡುನವರು ಅಭಿಪ್ರಾಯ ಪಡುವಮೇರೆ ಸದರಿ ಕಟ್ಟಡ ಮತ್ತು ಜಾಗ ಸಹಾ ಹರಾಜ್ ಮೂಲಕ ವಿಲೆ ಮಾಡಿಸಿ ಅದರಲ್ಲಿ ಹುಟ್ಟುವ ಮೊಬಲಗುನಿಂದ ಹೊಸಕಟ್ಟಡವನ್ನು ಕಟ್ಟಸಬೇಕು. ಹಣ ಸಾಲದೆ ಬಂದ ಪಕ್ಷದಲ್ಲಿ ಡಿಸ್ಟ್ರಿಕ್ಟು ಫಂಡಿನಿಂದ ಕಮ್ಮಿ ಬರತಕ್ಕ ಹಣವನ್ನು ಭರ್ತಿ ಮಾಡಬೇಕಾಗಿ ತೀರ್ಮಾನಿಸಲಾಯಿತು.

15. ಹೊಳಲ್ಕೆರೆ ಮುಸಾಫರಖಾನೆಯನ್ನು ಮಾಹೆಯಾನಾ 1 ರೂಪಾಯಿಗಳಿಗೆ ಅಲ್ಲಿನ ಆಫಿಸರುಗಳಿಗೆ ಬಾಡಿಗ್ಗೆ ಕೊಡಬೇಕಾಗಿಯೂ ಪ್ರಯಾಣೀಕರ ಉಪಯೋಗಕ್ಕೆ 2,000 ರೂಪಾಯಿಗಳು ವುಟ್ಟಿಸಿ ಪ್ರತ್ಯೇಕ ಹೊಸ ಕಟ್ಟಡವನ್ನು ಕಟ್ಟಸಬೇಕಾಗಿ ದಾವಣಗೆರೆ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಿಂದ ತಲ್ಪಿದ ಯಾದಿ ಓದಲಾಯಿತು.

ಹಿಂದೆ 7ನೆ ಪ್ಯಾರಾದಲ್ಲಿ ಮಾಡಿರುವ ಅಭಿಪ್ರಾಯವು ಇದಕ್ಕೆ ಅನ್ವಯಿಸುತ್ತೆ.

16. 13—4—98ರಲ್ಲು ಹೊಸದುರ್ಗದ ಮುಸಾಫರುಖಾನೆ ರಿಪೇರಿಗೋಸ್ಕರ ಕೊಟ್ಟ ಮೊಬಲಗು 1—13—6ರ ಬಾಬತು ಹೊಸದುರ್ಗ ತಾಲ್ಲೂಕು ಅಮಲ್ದಾರ್ರವರ ಯಾದಿಯೊಂದಿಗೆ ತಲ್ಪಿದ ಬಿಲ್ಲು ಓದಲಾಯಿತು.

ಅಪ್ರೂವ್ ಮಾಡಿದೆ.

17. ಚಿತ್ರದುರ್ಗ ತಾಲ್ಲೂಕು ಹುಲ್ಲೂರು ಕೆರೆ ಏರಿಯನ್ನು ಬಡಾವಣೆ ಮಾಡುವುದಕ್ಕೆ ತಗಲಬಹುದಾದ ಖರ್ಚು ಮೊಬಲಗು 1,4 8 ರೂಪಾಯಿಗಳನ್ನು ಡಿಸ್ಟ್ರಿಕ್ಟ ಫಂಡ್ಸಿನಿಂದ ಕಂಟ್ರಿಬ್ಯೂಷನ್ ತರೀಕು ಕೊಡಬೇಕಾಗಿ ಕೇಳಿರುವ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರ ಡಾಕೆಟನ್ನು ಓದಲಾಯಿತು.

ಹಾಲಿ ಸದರಿ ಕೆರೆ ಏರಿ ಮೇಲೆ ಡಿಸ್ಟ್ರಿಕ್ಟು ಫಂಡು ರಸ್ತೆ ಹೋಗುವದಿಲ್ಲವಾಗಿ ಮುಂದೆ ಯಾವ ರಸ್ತೆಯೂ ಹೋಗಬೇಕಾದ ಸಂಭವವಿಲ್ಲವಾದ್ದರಿಂದ ಸದರಿ ಹಣದ ಪೈಕಿ ಯಾವ ಭಾಗವು ಕೊಡತಕ್ಕದ್ದಲ್ಲವೆಂತ ತೀರ್ಮಾನಿಸಲಾಯಿತು.

18. ಚಿತ್ರದುರ್ಗದಿಂದ ಚಳ್ಳಕೆರೆಗೆ ಹೋಗತಕ್ಕ ರಸ್ತೆ ಹೀನಸ್ಥಿತಿಯಲ್ಲಿರುವದ್ದರಿಂದ ಇದಕ್ಕೋಸ್ಕರ ನಡಿಯಬೇಕಾದ ಸ್ಪೆಷಲ್ ಕಾಮಗಾರಿಗಳಿಗೆ ಮೊಬಲಗು 3,965 ರೂಪಾಯಿಗಳು ಖರ್ಚಾಗುತ್ತೆಂಬದಾಗಿ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಂದ ತಲ್ಪಿದ ಅಂದಾಜಾವನ್ನು ಓದಲಾಯಿತು.

ಅಪ್ರೂವ್ ಮಾಡಿದೆ.

19. ಈ ಕೆಳಗೆ ನಮೂದಿರುವ ಗವರ್ನಮೆಂಟ್ ಆರ್ಡರುಗಳನ್ನು ಓದಿ ರಿಕಾರ್ಡು ಮಾಡಲಾಯಿತು.

(a) ಲೋಕಲ್ ಬೋರ್ಡುಗಳ ಅವಧಿಯು ಪೂರೈಸುವದರೊಂದಿಗೆ ಅವರಲ್ಲಿರುವ ಮೆಂಬರುಗಳ ಅವಧಿಯು ಸಹಾ ಪೂರೈಸುತ್ತಾದ್ದರಿಂದ ಹೊಸ ಮೆಂಬರುಗಳ ಚುನಾವಣೆ ಕ್ರಮವನ್ನು ಸಾಲ್ ಷುರು ಜುಲೈ ತಿಂಗಳ ಗೆಜೆಟನಲ್ಲಿ ಥಾಯಿಷ್ ಮಾಡುವಂತೆ ಸಕ್ಕಾಲದಲ್ಲಿ ಮುಂದಿನ ಕ್ರಮ ನಡಿಸಬೇಕೆಂಬದಾಗಿ—

(b) ಎಲ್ಲಾ ಆಸ್ಪತ್ರೆಗಳಿಗೂ ವಗೈರೆ ಔಷಧ ಜಿನಸಿಗಳನ್ನು ಕೊಂಡುಕೊಳ್ಳುವದಕ್ಕೋಸ್ಕರ ಹಾಲಿ ಮಂಜೂರ್ಮಾಡಿರತಕ್ಕ ಮೊಬಲಗು ಸಾಲದು. ಇದನ್ನು 5 ರೂಪಾಯಿನಿಂದ 6 ರೂಪಾಯಿಗಳಿಗೆ ಹೆಚ್ಚಿಸಬೇಕಾಗಿ ಕೇಳಿಕೊಂಡ ಮೇರೆ ಮಂಜೂರ್ಮಾಡಲು ಆಗುವದಿಲ್ಲವಾಗಿಯೂ ಇನ್ನು ಮುಂದೆ ಸದರಿ ಔಷಧಿ ಜಿನಸುಗಳಿಗೋಸ್ಕರ ಖರ್ಚು ಆಗುವಷ್ಟು ಮೊಬಲಗನ್ನು ಕರಾರುವಾಕಾ ಕಂಟ್ರೋಲರ್ ಸಾಹೇಬರವರು ಡಿಸ್ಟ್ರಿಕ್ಟು ಮತ್ತು ಮ್ಯುನಿಸಿಪಲ್ ಫಂಡುಗಳಿಗೆ ಖರ್ಚು ತೋರಿಸುತ್ತಾ ಬರಬೇಕೆಂದು ಗವರ್ನಮೆಂಟಿನಿಂದ ತಲುಪಿದ ಪ್ರೊಸೀಡಿಂಗ್ಸ್.

(c) ಟ್ರಾವಲಿಂಗ್ ಅಲವನ್ಸು ದೊರಿಯದೆ ಇರುವ ಸರ್ಕಾರಿ ನೌಕರಮಾನೇರು ನೌಕರಿ ಮೇಲೆ ಇದ್ದ ಕಾಲದಲ್ಲಿ ಅವರಿಂದ ಟೋಲ್ ವಸೂಲ್ಮಾಡತಕ್ಕದ್ದಿಲ್ಲವೆಂಬ ವಿಷಯವುಳ್ಳ ಗವರ್ನಮೆಂಟ್ ಪ್ರೊಸೀಡಿಂಗ್ಸು.

(d) ಎಲ್ಲಾ ಲೋಕಲ್ ಫಂಡ್ ಆಸ್ಪತ್ರೆಗಳ ಉಪಯೋಗದ ಬಗ್ಯೆ ಖಾಲೀ ಕಾಗದಗಳನ್ನು ಗವರ್ನಮೆಂಟ್ ಸ್ಟೇಷನರಿ ಡಿಪೋದಿಂದ ಮೆಡಿಕಲ್ ಸ್ಟೋರ್ಸ್ ಮೂಲಕ ರವಾನೆ ಆಗಬೇಕೆಂಬ ವಿಷಯವುಳ್ಳ ಗವರ್ನಮೆಂಟ್ ಪ್ರೊಸೀಡಿಂಗ್ಸು.

(f) ಡಿಸ್ಟ್ರಿಕ್ಟು ಬೋರ್ಡು ಉಪಯೋಗದ ಬಗ್ಯೆ 150 ರೂಪಾಯಿಗಳ ಬೆಲೆ ಬಾಳತಕ್ಕ 25 ಕುರ್ಚಿಗಳನ್ನು ಕೊಂಡುಕೊಳ್ಳಬಹುದು ಸದರಿ ಹಣವನ್ನು ಚಾಲ್ತಿ ಸಾಲ್ ಡಿಸ್ಟ್ರಿಕ್ಟು ಫಂಡು ಬಡ್ಜೆಟ್ಟಿನ ಪೈಕಿ ಮಿಸಾಟ ಮಾಡಬಹುದಾಗಿ ತಿಳಿಸುವ ಗವರ್ನಮೆಂಟ್ ಪ್ರೊಸೀಡಿಂಗ್ಸು.

(g) ಗ್ರಾಮಾಂತರಗಳಲ್ಲಿ ಆಗತಕ್ಕ ಸ್ಯಾನಿಟರಿ ಇಂಪ್ರೂವ್ಮೆಂಟ್ಸ್‌ಗಳ ವಿಷಯದಲ್ಲಿ ಆದ ಗವರ್ನಮೆಂಟ್ ಪ್ರೊಸೀಡಿಂಗ್ಸ್.

20. ಬರುವ ಮೀಟಿಂಗ್ 1907ನೆ ಸೆಪಟಂಬರ್ 25ನೆ ತಾರೀಖಿಗೆ ನಡಿಯತಕ್ಕದ್ದೆಂದು ಗೊತ್ತು ಮಾಡಲಾಯಿತು.

21. ಹರಿಹರ ಸಬ್ ತಾಲ್ಲೂಕು ಜಾಲನಕೆರೆ ಕೆಳಭಾಗದಲ್ಲಿ ಹರಿಯುವ ಕಾಲುವೆಯನ್ನು ತಿರುಗಿಸುವದಕ್ಕೆ ಖರ್ಚಾಗುವ ಮೊಬಲಗು 907 ರೂಪಾಯಿಗಳ ಬಾಬತು ಅಂದಾಜಾವನ್ನು ಮಂಜೂರ್ಮಾಡಿ ಮತ್ತು ಸದರಿ ಕಾಮಗಾರಿ D. P. W. ಇಲಾಖೆ ಮೂಲಕ ನಡಿಸಬೇಕೆಂಬ ವಿಷಯದಲ್ಲಿ ತಲ್ಪಿದ ಗವರ್ನ್ಮೆಂಟ್ ಪ್ರೊಸೀಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

22. ದಾವಣಗೆರೆ ಮುಸಾಫರುಖಾನೆ ಕೇವಲ ಹೀನಸ್ಥಿತಿಯಲ್ಲಿರುತ್ತೆ. ಅದರ ರಿಪೇರಿ ಬಗ್ಯೆ ಪ್ರತಿವರ್ಷದಲ್ಲಿಯೂ 300 ರೂಪಾಯಿಗಳು ತಗಲುತ್ತಾ ಇದೆ. ಆದ್ದರಿಂದ ಅದಕ್ಕೆ ಬದಲಾಗಿ ಬ್ಯಾರೆ ಹೊಸಕಟ್ಟಡವನ್ನು ಕಟ್ಟಿಸುವುದು ಉತ್ತಮವೆಂಬ ವಿಷಯದಲ್ಲಿ ತಲುಪಿದ ಚಿತ್ರದುರ್ಗ ಡಿಸ್ಟ್ರಿಕ್ಟ್ ಎಗ್ಸಿಕ್ಯೂಟಿವ್ ಇಂಜನಿಯರ್ ಸಾಹೇಬರವರ ಡಾಕೆಟ್ ಓದಲಾಯಿತು.

ಸದರಿ ಕಟ್ಟಡವು ಬಹಳ ಹಳೇದಾದದ್ದು ಇದಕ್ಕೆ ಪ್ರತಿ ವರ್ಷದಲ್ಲಿಯೂ 300 ರೂಪಾಯಿಗಳ ವರಿಗೂ ರಿಪೇರಿ ಆಗವಡು ತಗಲುತ್ತೆಂತ ರಿಪೋರ್ಟಿನಿಂದ ತಿಳಿಯುಬರುತ್ತೆ. ದಾವಣಗೆರೆ ಸಬ್ ಡಿವಿಜನ್ ಆಫೀಸರವರು ಈಗ ಹಾಲಿ ಇರತಕ್ಕ ಕಟ್ಟಡವನ್ನು ಹರಾಜು ಮಾಡಿಸಿ ಅದಕ್ಕೆ ಬದಲಾಗಿ ಬ್ಯಾರೆ ಕಟ್ಟಡವನ್ನು ನಮೂನೆ ಮೇರೆ ಅನುಕೂಲವಾದ ಸ್ಥಳದಲ್ಲಿ ಕಟ್ಟಿಸಬೇಕಾಗಿ ಅಭಿಪ್ರಾಯಪಡುವದನ್ನು ಚಿತ್ರದುರ್ಗ ಡಿಸ್ಟ್ರಿಕ್ಟ್ ಎಗ್ಸಿಕ್ಯೂಟಿವ್ ಇಂಜನೀಯರ್ ಸಾಹೇಬರವರು ಕೂಡ ಅದಕ್ಕೆ ಅನುಮೋದಿಸಿರುತ್ತಾರೆ. ಸದರಿ ಕಟ್ಟಡ ಹರಾಜಾದರೆ, ಸುಮಾರು 3,000 ರೂಪಾಯಿಗಳ ಮೇಲ್ಪಟ್ಟು ಹುಟ್ಟಬಹುದು. ಮೊದಲನೆ ತರಗತಿಯ ಮುಸಾಫರುಖಾನೆಯನ್ನು ಕಟ್ಟಿಸುವದಕ್ಕೆ 4,000 ರೂಪಾಯಿಗಳು ಬೇಕಾಗುತ್ತೆ. ದಾವಣಗೆರೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮ್ಮಿಷನರ್ ಸಾಹೇಬರವರು ಮಾಡಿದ ಪ್ರೊಪೋಜಲನ್ನು ಬೋರ್ಡಿನವರು ಅಂಗೀಕಾರ ಮಾಡಿ ಹೊಸ ಮುಸಾಫರ್‌ಖಾನೆಯನ್ನು ಕಟ್ಟಿಸಬೇಕಾಗಿ ತೀರ್ಮಾನಿಸಲಾಯಿತು.

23. ಜಗಲೂರು, ಹೊಸದುರ್ಗ, ಬಿದರಕೆರೆ, ತಳಕು, ರಾಂಪುರ, ಹಾನಗಲ್, ಈ ಸ್ಥಳಗಳಲ್ಲಿರತಕ್ಕ 3ನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲೋಗಳ ಉಪಯೋಗಕ್ಕೆ ಬೇಕಾದ ಸಾಮಾನುಗಳನ್ನು ಕೊಂಡುಕೊಳ್ಳುವದಕ್ಕೆ ಬೋರ್ಡು ಪ್ರೆಸಿಡೆಂಟರವರು 1907ನೆ ಇಸವಿ ಮೇ ಮಾಹೆಯಲ್ಲಿ ಮಂಜೂರ್ಮಾಡಿದ ಹಣವನ್ನು ತೋರಿಸತಕ್ಕ ಸ್ಟೇಟ್‌ಮೆಂಟನ್ನು ಓದಲಾಯಿತು.

ಸದರಿ ಲೀಸ್ಟನ್ನು ಅಪ್ರೂವ್ ಮಾಡಿದೆ.

ಎಂ. ಚೆಂಗೈಯ್ಯಶೆಟ್ಟಿ,
ಪ್ರೆಸಿಡೆಂಟ್.

ಮಧ್ದುಗಿರಿ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರ ಆಫೀಸ್.

ನೋಟಫಿಕೇಷನ್, ತಾರೀಖು 6ನೆ ನವೆಂಬರ್ 1907.

ಮಧ್ದುಗಿರಿಯಲ್ಲಿರುವ ಆರ್ಯಬಾಲಿಕಾ ಪಾಠಶಾಲೆ ಆಡಳಿತವನ್ನು ಗವರ್ನಮೆಂಟಿಗೆ ಒಪ್ಪಿಸಿರುವದ್ದರಿಂದ ಈ ಕಟ್ಟಡವನ್ನು ಮತ್ತು ಚಂದಾ ಮೊಬಲಗು ಪೈಕಿ ಉಳಿದ 600 ರೂಪಾಯಿಗಳನ್ನು ಸರ್ಕಾರಕ್ಕೆ ಒಪ್ಪಿಸುವ ವಿಷಯದಲ್ಲಿ ಈ ಕಟ್ಟಡ ತಯಾರೀಗೋಸ್ಕರ ಚಂದಾ ಕೊಟ್ಟ ದೊಡ್ಡಮನುಷ್ಯರ ಅಭಿಪ್ರಾಯವನ್ನು ತಿಳಿಯಲು 1907ನೆ ಇಸವಿ ಡಿಸೆಂಬರ್ 6ನೆ ತಾರೀಖು ಶುಕ್ರವಾರ ಬೆಳಿಗ್ಗೆ 7 ಘಂಟೆಗೆ ಆರ್ಯಬಾಲಿಕಾ ಪಾಠಶಾಲೆಯಲ್ಲಿ ಮೀಟಿಂಗ್ ನಡಿಸಲ್ಪಡುವದ್ದರಿಂದ ಸದರಿ ಮೀಟಿಂಗಿಗೆ ಚಂದಾದಾರರುಗಳೆಲ್ಲರೂ ದಯಮಾಡಿಸಬೇಕಾಗಿ ಕೋರಲ್ಪಟ್ಟಿದೆ.

ಮೀಟಿಂಗನಲ್ಲಿ ತೀರ್ಮಾನವಾಗುವ ರಸೂಲ್ಯೂಷನಂತೆ ಜಾರಿಯಲ್ಲಿ ತರುವಬಗ್ಯೆ ಗವರ್ನಮೆಂಟಿಗೆ ಬರಿಸಲ್ಪಡುತ್ತೆ.

ಸಿ. ವೆಂಕಟರಾವ್,
ಅಸಿಸ್ಟೆಂಟ್ ಕಮ್ಮಿಷನರ್.

ನೋಟಿಸ್.

ಇದರಿಂದ ಸಮಸ್ತರಿಗೂ ತಿಳಿಸುವದೇನಂದರೆ:—ಕೊಪ್ಪ ತಾಲ್ಲೂಕು ಬೆಳುವನಕೊಡಿಗೆ ಗ್ರಾಮದ ಸರ್ವೆ ನಂ. 149–151ನೆ ತರಿ ಜಮೀನುಗಳನ್ನ ಸರಕಾರದ ಕಂದಾಯ ಬಾಕೀಗಾಗಿ ನಡದ ಹರಾಜಿನಲ್ಲಿ ಪಡದಿದ್ದ ಕೃಷ್ಣರಾಯರಿಂದ ನಾನು ಖರೀದಿಗೆ ಪಡದುಕೊಂಡಿಧೇನೆ. ಇದು ತಿಳಿಯದೆ ಸದರಿ ಜಮೀನುಗಳನ್ನ ಮೆಸ್ಸರ್ಸ್ ಆರಬತನಾಟ್ ಕಂಪನಿಯವರ ಇನಸಾಲ್ವೆನ್ಸಿ ವಿಷಯವಾಗಿ ಕ್ರಯವಾಗುವ ಜಮೀನುಗಳ ಜೊತೇಲಿ ಯಾರಾದರೂ ಕೊಂಡುಕೊಂಡು ಮೋಸಹೋಗಬಾರದೆಂದು ಈ ಮೂಲಕ ಎಚ್ಚರಿಸಿರುತ್ತೇನೆ.

ಭೂವನಕೋಟೆ ಕೇಶವ ಉಪಾಧ್ಯನ ರುಜುವು.

ಮೈಸೂರ ಗೆಜೆಟ ಚಂದಾದಾರು ವಗೈರೆ.

ಮೈಸೂರ ಗೆಜೆಟ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ	ಟಪ್ಪಾಲ ಹಾಸಲ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ
	ರೂ. ಆ.	ರೂ. ಆ.
ಇಂಗ್ಲಿಷ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲಿಷ ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಛಪ ಮಾಹೇ ಯಾ ಕ್ವಾರಟರಿಗೆ		ದಾಮಾಷಾಯಿ ಪ್ರಕಾರ ದರಗಳು.
		ರೂ. ಆ.
ಚಾಲತಿ ವರುಷದ ಗೆಜೆಟ ಕಾಪಿ 1ಕ್ಕೆ ರೆಗ್ಯುಲೇಷ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.		0 8

ಹಿಂದಿನ ವರುಷದ ಗೆಜೆಟ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮಿರ್ಸ್ಥಂ 155ನೆ ನಂಬರ ಉಳ್ಳ ಗವರ್ನಮೆಂಟ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ ಮೈಸೂರು ಸೀಮೆಯಲ್ಲಿನ ಪಟೇಲ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭೋಗಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್‌ದಾರರಿಂದ ಒಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ 21ನೆ ಮಿರ್ಸ್ಥಂ 24205—6—ಜಿ. 6200ನೆ ನಂಬರ ಗವರ್ನಮೆಂಟ ಆರಡರ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ ಮಾಡಲ್ಪಟ್ಟಿರುತ್ತೆ.

ಸಿವಿಲ ಕೋರ್ಟನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇಷನ ಅನುಸರಿಸಿ ಸರ್ಟಿಫಿಕೇಟ ಬಗ್ಗೆ ನೋಟಿಸಗಳು :—

	ರೂ. ಆ.
ಮೊದಲನೇ ದಫಾ ಪ್ರಾಯಿಷ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ	2 8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ	1 4

ಸಿವಿಲ ಪ್ರೊಸಿಡ್ಯೂರ ಕೋಡಿನ 347ನೆ ಸೆಕ್ಷನ ಅನುಸರಿಸಿ ದಿವಾಳಿ ಅಪ್ಲಿಕೇಷನಗಳ ಬಗ್ಗೆ ನೋಟಿಸಗಳಿಗೆ:—

ಮೊದಲನೇ ಸಲಕ್ಕೆ	5 0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ	2 8

ಸಿವಿಲ ಪ್ರೊಸಿಡ್ಯೂರ ಕೋಡಿನ 354ನೆ ಸೆಕ್ಷನ ಅನುಸರಿಸಿ ಸಿವಿಲ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ ಚಾರ್ಜು ಪ್ರಕಟಿಸಲ್ಪಡುತ್ತವೆ.

ಡುಪ್ಲಿಕೇಟ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಗೆ ರೆವಿನ್ಯೂ ಆಫಿಸರಗಳು ಕೊಡುವ ನೋಟಿಸಗಳಿಗೆ:—

ಮೊದಲನೇ ಸಲಕ್ಕೆ	ಪುಟ 1ಕ್ಕೆ	10 0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ	,,	5 0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜು ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ ಅಥವಾ ಕನ್ನಡಕ್ಕೆ		ಪಙ್ತಿ 1ಕ್ಕೆ	0 8
ಎರಡನೇ ದಫಾ	ಡಿಟೋ	ಡಿಟೋ	0 6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ			0 4

ಷರಾ.—ಗೆಜೆಟ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟನೆಗಳ ಛಾರ್ಜು ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ ಬಗ್ಗೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ ಮಜಕೂರಿಗೆ ದಾಖಲೆ ಬಗ್ಗೆ ರವಾನಿಸತಕ್ಕದ್ದು. ಮನಿ ಆರ್ಡರ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ ಪಡೆಯುವ ಬಗ್ಗಾದ ದರಖಾಸ್ತುಗಳು ಮೈಸೂರ ಗವರ್ನಮೆಂಟ ಜನರಲ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರನಾಮೆಗಳೂ ಆ ಗೆಜೆಟ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ಒಳಗಾಗಿ ಕಂಪೈಲರ ಆಫೀಸಿಗೆ ತಲಪಬೇಕಾಗಿರುತ್ತೆ. ಆತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ ಇಲ್ಲ.

ಸಿ. ಹಚ್. ಪಿಟ್ಸ,
ಕಂಪೈಲರ, ಮೈಸೂರ ಗೆಜೆಟ.

ನಂ. 42.] ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. [ನಂ. 46

ಮೈಸೂರು ಗೆಜೆಟ್.

ಬೆಂಗಳೂರು, ಗುರುವಾರ, ನವೆಂಬರ್ ತಾ|| 21, ಸನ್ 1907.

II ನೆ ಭಾಗ.

ಇಂಡ್ಯಾ ಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀಯರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರು ಡಿಸ್ಟ್ರಿಕ್ಟು ಎಕ್ಸೈಜು ಆಫೀಸು.

ಇಸ್ತಿಹಾರ್‌ನಾಮೆ.

ಮೈಸೂರು, ತಾರೀಖು 2[illegible]ನೆ ಅಕ್ಟೋಬರ್ 1907.

ಈ ಕೆಳಗೆ ಕಾಣಿಸಿರುವ ಗ್ರಾಮಗಳ ಇನಾಂದಾರರುಗಳಿಗೆ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಾಣಿಸಿರುವ ಇನಾಂ ಗ್ರಾಮಗಳ ಬಾಬತು ಮಾನ್ಯದಾರರಿಗೆ ಆಯಾ ಗ್ರಾಮದ ಸೇಂದಿ ಹುಟ್ಟುವಳಿ ಹಕ್ಕು ಇರುವ ವಿಚಾರದಲ್ಲಿ ಕೆಳಗೆ ನಮೂದಿಸಿರುವ ತಾರೀಖುಗಳಲ್ಲಿ ಅವಶ್ಯವಿರುವ ವಿಚಾರಣೆ ನಡಿಸಲ್ಪಡುತ್ತೆ. ಆಯಾ ಗ್ರಾಮಗಳಿಗೆ ಸಂಬಂಧಪಟ್ಟ ಇನಾಂದಾರರುಗಳು ಖುದ್ದಾಗಿ ಯಾಗಲೀ ಅಥವಾ ಅವರಿಂದ ಮೊಕ್ತ್ಯಾರುನಾಮೆ ಪಡೆದವರಾಗಲೀ ಅವಶ್ಯವಿರುವ ಸನ್ನದು ಆಯಾ ಗ್ರಾಮದ ಇನಾಂ ಸೆಟಲ್ಮೆಂಟು ರಿಜಿಸ್ಟರು ಎಕ್ಸ್‌ಟ್ರ್ಯಾಕ್ಟು ಮುಂತಾದ ದಾಖಲೆಗಳ ಸಹ ಮೈಸೂರಲ್ಲಿ ನಮ್ಮ ಆಫೀಸು ಬಳಿ ನಿಯಾಮಕ ಮಾಡಲ್ಪಟ್ಟ ತಾರೀಖಿನ ಹಗಲು 11 ಘಂಟೆಗೆ ಸರಿಯಾಗಿ ಹಾಜರಾಗತಕ್ಕದ್ದು. ಹಾಗೆ ಹಾಜರಾಗದೆ ತಪ್ಪಿದಲ್ಲಿ ರೂಲ್ಸು ಮೇರೆ ಕ್ರಮ ಜರಿಗಿಸಲ್ಪಡುತ್ತೆ. ನಂತರ ಬರುವ ಯಾವ ತಕರಾರನ್ನೂ ಅಂಗೀಕರಿಸಲು ಆಗಲಾರದಾಗಿ ತಿಳಿಯಪಡಿಸಿದೆ.

ತಾಲ್ಲೂಕು.	ಗ್ರಾಮ.	ಹೀರಿಂಗು ತಾರೀಖು.
ಮೈಸೂರು ...	ಮದ್ದೂರು ...	1907ನೆ ನವಂಬರು 26
ಡಿಟೋ ...	ಕಲ್ಲಹಳ್ಳಿ ...	ಡಿಟೋ 26
ನಂಜನಗೂಡು ...	ಹಟ್ವಾಳು ...	ಡಿಟೋ 27
ಡಿಟೋ ...	ಕಣಿಯನೂರು ...	ಡಿಟೋ 27
ಮೈಸೂರು ..	ಕಡಕೊಳ, ಸಿಂದುವಳ್ಳಿ ...	ಡಿಟೋ 27
ಡಿಟೋ ..	ದುದ್ದಗೆರೆ ..	ಡಿಟೋ 28
ಡಿಟೋ ...	ಗೋಪಾಲಪುರ ...	ಡಿಟೋ 28
ಡಿಟೋ ...	ಯಂಡೆಹಳ್ಳಿ ..	ಡಿಟೋ 29

ಎ. ಕೆ. ಸೈಯದ್ ತಾಜ್‌ಪೀರಾ,
ಡಿಸ್ಟ್ರಿಕ್ಟು ಎಕ್ಸೈಜ್ ಆಫೀಸರ್, ಮೈಸೂರು.

ಫಾರೆಸ್ಟ್ ಇಲಾಖಾ.

ಸಂಡಲ್ ಹರಾಜ್ ನೋಟಿಫಿಕೇಷನ್.

ತಾರೀಖು 24ನೆ ಆಗಸ್ಟ್ 1907ನೆ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಸರಕಾರದ ಶ್ರೀಗಂಧದ ಸಾಲಿಯಾನಾ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರದರ ಬಾಜೂದಲ್ಲಿ ನಮೂದಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡೆಸಲ್ಪಡುವದು :—

ಡಿಸ್ಟ್ರಿಕ್ಟು.	ಕೋಠಿ.	ಹರಾಜ್ ತಾರೀಖು.	ಸುಮಾರು ಮೊತ್ತ.
			ಟನ್‌ಗಳು.
ಶಿವಮೊಗ್ಗ ...	ತೀರ್ಥಹಳ್ಳಿ ...	18ನೆ ನವೆಂಬರ್ 1907 ...	200
ಡಿಟೋ ...	ಸಾಗರ ...	21ನೆ ಡಿಟೋ ..	150
ಡಿಟೋ ...	ಶಿವಮೊಗ್ಗ ...	25ನೆ ಡಿಟೋ ...	500
ಕಡೂರು ...	ತರೀಕೆರೆ ...	28ನೆ ಡಿಟೋ ...	250
ಡಿಟೋ ...	ಚಿಕ್ಕಮಗಳೂರು ..	2ನೆ ಡಿಸೆಂಬರ್ 1907 ..	350
ಹಾಸನ ...	ಹಾಸನ ...	5ನೆ ಡಿಟೋ ..	150
ಬೆಂಗಳೂರು ...	ಬೆಂಗಳೂರು ...	9ನೆ ಡಿಟೋ ...	100
ಮೈಸೂರು ...	ಶ್ರೀರಂಗಪಟ್ಟಣ ...	12ನೆ ಡಿಟೋ ..	250
ಡಿಟೋ ...	ಹುಣಸೂರು ...	16ನೆ ಡಿಟೋ ..	500
		ಜುಮ್ಲಾ	2,450

2. ಪ್ರತಿ ಕೋಠಿಯಲ್ಲಿಯೂ ಹರಾಜಾಗುವ ಕ್ಲಾಸುವಾರು ಲಾಟು, ಮೊತ್ತ ಮತ್ತು ಇತರ ತಪಶೀಲುಗಳು ಬರುವ ಅಕ್ಟೋಬರ್ ಮಾಹೆಯ ಆಖೈರಿನಲ್ಲಿ ತಿಳಿಯಪಡಿಸುತ್ತೆ.

ಎಂ. ಮುತ್ತಣ್ಣ,
ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ಇಸ್ತಿಹಾರ್ನಾಮಾ, ತಾರೀಖು 28ನೆ ಅಕ್ಟೋಬರ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಂಡ ಡಿಪೋಗಳಲ್ಲಿ ಚೌಬೀನಾವನ್ನು ಸದರಿ ಡಿಪೋಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ದಿವಿ 12 ಘಂಟೆಗೆ ಹರಾಜು ಪ್ರಾರಂಭಿಸಲ್ಪಡುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟಾಗಳ ವಿವರ.	ಸಲೆ ಅಡಿ.		ಷರಾ.
				ನಂಬರ್.	ಅಡಿ.	
1	ಮೈಸೂರು ಉಡಿ ಯಾರ್ಡು	27–11—07	ಸಾಗ್ವಾನಿ	1,200	30,000	
			ಹೊನ್ನೆ ...	100	20,000	
			ಮತ್ತಿ ...	150	3,000	
			ಸಾಗ್ವಾನಿ ಸರ ...	2,000	2,000	
			ಬೀಟೆ ...	160	2,000	
2	ನಂಜನಗೂಡು ಡಿಪೋ.	28–11—07	ಸಾಗ್ವಾನಿ ...	200	5,000	
			ಹೊನ್ನೆ ...	200	5,000	
			ಮತ್ತಿ	180	2,000	
			ಬೀಟೆ ...	100	2,000	

ಹರಾಜು ಷರತ್ತುಗಳು.

1. ಕಡೆ ಧರಖಾಸ್ತುದಾರನು ಹರಾಜು ಆದ 3 (ಮೂರು) ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಶೇಕಡ 25 ರಂತೆ ಆಗುವ ಮೊಬಲಗನ್ನು ಹತ್ತಿರವಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜು ಮಾಡಿ ಅದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.

2. ಖರೀದಿ ಮೊಬಲಗು ಪೈಕಿ ಪುಳಿದ ಮೊಬಲಗನ್ನು ಹರಾಜು ತಾರೀಖು ಲಗಾಯಿತು 30 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟಿರುವ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.

3. ತಾನು ಹರಾಜಿನಲ್ಲಿ ಪಡೆದಿರುವ ಚವುಬೀನಾ ಕ್ರಿಮ್ಮತ್ತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚವುಬೀನಾ ವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.

4. ಹರಾಜು ತಾರೀಖು ಲಗಾಯಿತು 90 ದಿವಸಗಳ ಮೇಲ್ಪಟ್ಟು ಮಾಲುಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಒಂದಕ್ಕೆ ಶೇಕಡ ಒಂದಕ್ಕೆ 12 ರೂಪಾಯಿನ ಮೇರೆ ಡಿಪೋ ಭಾಡಾ ವಸೂಲು ಮಾಡಲಾಗುತ್ತೆ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್ಟು.

ಮೈಸೂರು ಡಿಸ್ಟ್ರಿಕ್ಟ್ಟು

ತಾರೀಖು 17ನೆ ನವೆಂಬರ್ 1907.

ಸನ್ 1908ನೆ ಇಸವಿ ಜನವರಿ ಮಾಹೆ 16ನೆ ತಾರೀಖಿನಲ್ಲಿ ಪ್ರಾರಂಭವಾಗಿ ಒಂದು ವಾರದ ವರಿಗೂ, ಎಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ನಡೆಯುವ ಶ್ರೀ ರಾಮದೇವರ ರಥೋತ್ಸವ ಕಾಲದಲ್ಲಿ ಗವರ್ನಮೆಂಟಿನಿಂದ ತಲುಪಿರುವ 2—11—06ನೆ ಮ ರ್ಕುಂ 5436-8—L. B. (254-05)—6ನೆ ನಂಬರಿನ ಪ್ರೊಸಿಡಿಂಗ್ಸ್ ಪ್ರಕಾರ ದನಗಳ ಪ್ರದರ್ಶನವು ನಡೆಯುತ್ತೆ.

2. ಕಾವೇರಿ ನದಿಯ ಬಲಭಾಗದಲ್ಲಿರುವ ಮುಸಾಫರ ಬಂಗ್ಲೆ ಬಳಿ ಇರುವ ಮೈದಾನದಲ್ಲಿ ಪ್ರದರ್ಶನಶಾಲೆಗೆ ಏರ್ಪಡಿಸುತ್ತೆ.

3. ಈ ಕೆಳಗೆ ಕಂಡಂತೆ ಬಹುಮಾನಗಳು ಕೊಡಲ್ಪಡುತ್ತವೆ.

	ಮೊದಲನೇ ಬಹುಮಾನ	ಎರಡನೇ ಬಹುಮಾನ	ಮೂರನೇ ಬಹುಮಾನ	ನಾಲ್ಕನೇ ಬಹುಮಾನ	ಬಹುಮಾನಗಳ ಸಂಖ್ಯೆ	ಒಟ್ಟು ಮೊಬಲಗು
	ರೂ.	ರೂ.	ರೂ.	ರೂ.	ರೂ.	ರೂ.
ಅತ್ಯಂತ ಉತ್ತಮವಾದ ಎತ್ತುಗಳ ಜೊತೆ ..	35	25	20	...	3	80
ಡಿಟೋ (ಬೆಟ್ಟದಪುರ) ..	10	...	...	...	1	10
ಬೀಜದ ಹೋರಿ ..	30	15	...	...	2	45
ಡಿಟೋ (ನಾಡು ಅಥವಾ ಕಂಟ್ರಿ) ..	10	..	...	..	1	10
ಗಂಡು ಕರು ..	20	10	5 ರೂಪಾಯಿ ನಂತೆ ಮೂರು ಬಹುಮಾನ	..	5	45
ಬೆಟ್ಟದಪುರದ ಎತ್ತು ..	10	...	...	..	1	10

4. ಬಹುಮಾನಗಳನ್ನು ಕೊಡಲು ಉತ್ತಮ ಜಾನುವಾರಗಳನ್ನು ಚುನಾಯಿಸಲು ಒಂದು ಕಮಿಟಿ ಏರ್ಪಡಿಸುತ್ತೆ. ಪ್ರದರ್ಶನ ಮುಗಿದ ಕೂಡ್ಲೆ ಇನಾಂಗಳನ್ನು ಹಂಚುತ್ತೆ.

5. ಮೇಲ್ಕಂಡಂತೆ ದ್ರವ್ಯರೂಪದ ಇನಾಂ ಅಲ್ಲದೆ, ಒಂದು ಯೋಗ್ಯತಾಪತ್ರವು ಸಹ ದೊರೆಯುತ್ತೆ.

6. ಇನಾಂ ಪಡೆಯಲು ಲಾಯಖಾದ ಜಾನವಾರು ಪ್ರದರ್ಶನಶಾಲೆಯಲ್ಲಿ ಇಲ್ಲದಿದ್ದರೆ, ಸದರಿ ಇನಾಂ ಅನಾವೃತ್ತಿ ನಲ್ಲಿ ಇಡುವದಕ್ಕಾಗಲಿ ಅಥವಾ ಇನಾಮಿಗೆ ಅರ್ಹವಾದ ಇತರ ತರಗತಿ ಜಾನವಾರುಗಳಿಗೆ ಕೊಡುವದಕ್ಕಾಗಲಿ, ಕಮಿಟಿ ಮೆಂಬರುಗಳು ಅಧಿಕಾರವುಳ್ಳವರಾಗಿರುತ್ತಾರೆ.

7. ಪ್ರದರ್ಶನಶಾಲೆಗೆ ಒಂದು ದಿವಸ ಮುಂಚಿತವಾಗಿ ಜಾನವಾರುಗಳನ್ನು ಪ್ರದರ್ಶನ ಮಾಡಲು ಇಷ್ಟವುಳ್ಳವರು, ಎಡತೊರೆ ತಾಲ್ಲೂಕು ಅಮಲ್ದಾರರವರಿಗೆ ಆಗಲಿ ಅಥವಾ ಅವರಿಂದ ನೇಮಕ ಮಾಡಲ್ಪಟ್ಟ ಇತರ ನವುಕರರಿಗೆ ಆಗಲಿ, ಪ್ರದರ್ಶನ ಷುರುವಾಗುವದಕ್ಕೆ ಮುಂಚಿತವಾಗಿ ಒಂದು ದಿವಸಕ್ಕೆ ಕಮ್ಮಿಯಿಲ್ಲದೆ ಅವಕಾಶವಿರುವಂತೆ, ಬರೆದು ತಮ್ಮ ಹೆಸರು, ಜಾನವಾರು ತಪಶೀಲು ದಾಖಲ್ಮಾಡಿಸಿಕೊಳ್ಳಬೇಕು.

8. ಪ್ರದರ್ಶನಶಾಲೆಯಲ್ಲಿ ಸೇರುವ ಜಾನವಾರುಗಳಿಗಾಗಲಿ, ಅಥವಾ ಅವುಗಳಿಂದ ಜನಗಳಿಗೇ ಆಗಲಿ ಯಾವ ಅಪಾಯವು ಸಂಭವಿಸದಂತೆ ಅವುಗಳ ಸ್ವಂತಗಾರರು ನೋಡಿಕೊಳ್ಳಬೇಕು.

9. ಸ್ಥಳದಲ್ಲಿ ಜವಾಯಿಸಬಹುದಾದ ಜಾನುವಾರುಗಳಿಗೆ ರಾತೀಪು ಸಾಲದೆ ಹೋಗಬಹುದಾದ್ದರಿಂದ ಪ್ರದರ್ಶನದಲ್ಲಿ ಸೇರಬಹುದಾದ ಜಾನವಾರುಗಳಿಗೆ ರಾತೀಪಿನ ಏರ್ಪಾಡನ್ನು ಅವುಗಳ ಸ್ವಂತಗಾರರೇ ನೋಡಿಕೊಳ್ಳುವದು ಒಳ್ಳೇದು.

10. ಚುಂಚನಕಟ್ಟೆ ರಥೋತ್ಸವಕ್ಕೆ ಬಹಳ ದೊಡ್ಡದಾದ ಪರಸೆ ಸೇರುವದ್ದರಿಂದ ದನಗಳ ವ್ಯಾಪಾರ ಬಹಳ ಚನ್ನಾಗಿ ನಡೆಯುತ್ತೆ.

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ನೋಟಿಸ.

ತಾರೀಖು 18ನೆ ಸೆಪಟಂಬರ್ 1907.

ಎರಡು ವರುಷಗಳಿಗಿಂತಲೂ ಅಧಿಕಕಾಲದಿಂದ ಬೇವಾರಸ್ಸಾಗಿ ಇರುವ ಇದರಡಿ ಕಂಡ ದಸ್ತೈವಜುಗಳನ್ನು ಹಾಜರು ಮಾಡಿದವರೇ ಆಗಲಿ ಅಥವಾ ಇವರಿಂದ ಅಧಿಕಾರ ಹೊಂದಿದ ಮುಖ್ತಾಲೀಕರೆ ಆಗಲಿ ಈ ನೋಟಿಫಿಕೇಷನ್ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಆಯಾಯ ರಿಜಿಸ್ಟ್ರೇಷನ್ ಆಫೀಸುಗಳಲ್ಲಿ ಹಾಜರಾಗಿ ತೆಗೆದುಕೊಳ್ಳದಿದ್ದರೆ ರಿಜಿಸ್ಟ್ರೇಷನ್ ರೆಗ್ಯುಲೇಷನ್ ನಂಬರ್ 1ರ 85ನೆ ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಾಗುವ ದಸ್ತೈವಜುಗಳನ್ನು ನಾಶಪಡಿಸುತ್ತೆ :—

ಕ್ರಮ ನಂಬರು.	ರಿಜಿಸ್ಟ್ರೇಷನ್ ಆಫೀಸುಗಳ ಹೆಸರು.	ಪುಸ್ತಕ ನಂಬರು.	ದಸ್ತೈವಜಿನ ನಂಬರ್.	ದಸ್ತೈವಜು ಹುಟ್ಟಿದ ತಾರೀಖು.	ದಸ್ತೈವಜು ರಿಜಿಸ್ಟರಾದ ಅಥವಾ ತಿರಸ್ಕರಿಸಿದ ತಾರೀಖು.	ದಸ್ತೈವಜು ಬರೆದುಕೊಟ್ಟವನ ಹೆಸರು.	ದಸ್ತೈವಜು ಬರೆಸಿಕೊಂಡವನ ಹೆಸರು.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತ್ತು.
1	ಮೈಸೂರು ...	I	505	17—2—1904	19—2—1904	ಮೇಟಗಳ್ಳಿ ಬಲಗೈ ಮರಿಕೆಂಚಿ ಮಗ ಶಿದ್ದ ಮೈನರ್, ಗಾರ್ಡಿಯನ್ ಶೀರಿ.	ದೊಡ್ಡ ಹೊಲಗೇರಿ ಬಲಗೈ ದೇವಿಶಿದ್ದನ ಮಗ ಆರಂಬಶೀವನದ ಶಿದ್ದಾ.	100 ರೂಪಾಯಿ ಕ್ರಯ.
2	ಡಿಟೋ	I	1011	12—1—1905	21—1—1905	ಮೈಸೂರು ನಜರಬಾದ್ ಮುಸಲ್ಮಾನರ ಜಮಾಲ್ ಷರೀಫ್ ಸಾಬರ ಮಗ ಹೈದರ್ ಷರಿಫ್‌ಸಾಬಿ.	ಮೈಸೂರು ನಜರ್‌ಬಾದಿನಲ್ಲಿ ಇರುವ ಮಹಮದ್ ಹರ್ಸ ಬಲವಂತ'ರವರ ಹೆಂಡತಿ ಜೈನಬ್ಬಿ.	50 ರೂಪಾಯಿ ಭೋಗ್ಯ.
3	ಡಿಟೋ ...	I	1020	14—1—1905	23—1—1905	ಮೈಸೂರು ಲಷ್ಕರ್ ಮೊಹಲ್ಲಾದಲ್ಲಿ ಇರುವ ಬಟ್ಲರ್ ಖಾಶೀಮ್ ಸಾಬರ ಹೆಂಡತಿ ಹನಿಷಾಬಿ.	ಮೈಸೂರು ಲಷ್ಕರ್ ಮೊಹಲ್ಲಾದಲ್ಲಿ ಇರುವ ಸಾಲಾರ್ ಮಹಮದ್‌ಸಾಬರ ಹೆಂಡತಿ ಜಮಾಲ್‌ಬಿ.	[illegible]9 ರೂಪಾಯಿ ಕ್ರಯ.
4	ಡಿಟೋ	I	1248	6—9—1904	11—3—1905	ಮೈಸೂರು ಸಂತೆಪೇಟೆಯಲ್ಲಿ ಇರುವ ಇಬ್ರಾಹಿಮ್ ಜೋಸಫ್ ಶೇಟ್.	ಮೈಸೂರು ಸಂತೇಪೇಟೆಯಲ್ಲಿ ಇರುವ ಗಂಜಾಂ ಪೀರಪ್ಪನವರ ಮಕ್ಕಳು ತಿಂಮೈಯ್ಯ	ಬಾಡಿಗೆ ಕರಾರು ಮಾಯಿದೆ 3 ವರುಷ.
5	ಡಿಟೋ	II	7	26—6—1904	ತಿರಸ್ಕಾರ. 15—6—1905	ಮೈಸೂರು ದೇವರಾಜ ಮೊಹಲ್ಲಾದಲ್ಲಿ ಇರುವ ದ್ಯಾಶೆಟ್ಟಿ ಮಗ ವೆಂಕಟಶೆಟ್ಟಿ ಉರಫ್ ಹೊಟ್ಟೆ.	ನಾಗನಹಳ್ಳಿ ಕಿರಗಾಣಿಗರ ಯಜಮಾನ್ ಆಲಶೆಟ್ಟಿ ಮಗ ಮಾಳಶೆಟ್ಟಿ	154 ರೂಪಾಯಿ ಕ್ರಯ.

6	ಡಿಟೋ	...	I	1787	7— 1—1904	17— 6—1905	ಪಡುವಾರಹಳ್ಳಿಯಲ್ಲಿ ಇರುವ ಕೆಂಚೇಗೌಡನ ಮಗ ಮುದ್ದೇಗೌಡ.	ಮೈಸೂರ್ ಜಯಲಕ್ಷ್ಮಿ ವಿಲಾಸ್ ವರ್ಕ್ಸ್ ಇಲಾಖಾ ಇಙ್‌ಚಾರ್ಜಿನಲ್ಲಿ ಇರುವ ಎ|| ಇ|| ರಾಮರಾಯರು.	142—8—0 ರೂಪಾಯಿ ಖರಾರ್
7	ನಂಜನಗೂಡು	...	I	825	21— 7—1904	2—12—1904	ನಂಜನಗೂಡು ತಾಲ್ಲೂಕು ತೋರವಳ್ಳಿ ದಾಖಲೆ ಮೋಳೆಯಲ್ಲಿರುವ ಚೌಡನ ಮಗ ಬಸವ, ಇವನ ಮಗ ಬಸವಾ.	ಚಾಮರಾಜನಗರ ತಾಲ್ಲೂಕು ಕೆಸ್ತು ದಾಖಲೆ ಹೊನ್ನೆಗೌಡನ ಹುಂಡಿಯಲ್ಲಿ ಇರುವ ದೇವೇಗೌಡನ ಮಗ ಹುಚ್ಚೇಗೌಡ.	100 ರೂಪಾಯಿ ಆಧಾರ.
8	ಡಿಟೋ	...	I	182	20— 7—1905	20— 7—1905	ನಂಜನಗೂಡು ತಾಲ್ಲೂಕು ಚಿಕ್ಕಹೊಂಮದಲ್ಲಿರುವ ಪುಟ್ಟೇಗೌಡನ ಮಗ ಬಸಪ್ಪ.	ಡಿಟೋ	ಡಿಟೋ
9	ಮಂಡ್ಯ	....	I	577	13—10—1904	13—10—1904	ಮದ್ದೂರಲ್ಲಿ ಇರುವ ಫರ್‌ಬೇಗ್‌ಸಾಬರ ಮಗ ಅಬ್ದುಲ್ಲಾ ಬೇಗ್.	ಕುಣಿಗಲ್ ತಾಲ್ಲೂಕು ಚೆಲಮಸಂದ್ರದ ಖುರ್ಷಪೀರ್‌ಸಾಬರ ಮಗ ಖಾಶಿಂಸಾಬಿ.	50 ರೂಪಾಯಿ ಆಧಾರ.
10	ಟಿ. ನರಶೀಪುರ	...	I	16	12— 6—1904	4— 7—1905	ಹ್ಯಾಕನೂರು ಕುರುಡ ಹೊಂಗೈಯ್ಯನ ಚಿಕ್ಕ ಮಲ್ಲಯ್ಯನ ಹೆಂಡತಿ ಲಿಂಗಂಮ.	ಕೊಳ್ಳೆಗಾಲದ ತಾಲ್ಲೂಕು ಹೋಬಳಿಪುರ ಮಲ್ಲೆಗೌಡನ ಮಗ ಚನ್ನಪ್ಪ.	150 ಡಿಟೋ
11	ಡಿಟೋ	...	I	2020	5— 5—1903	6— 5—1905	ತಲಕಾಡು ಕಸಬಾದಲ್ಲಿರುವ ಮಾಜೀ ದಫೇದಾರ್ ವೀರೇಗೌಡನ ಮಗ ವೀರೆಗೌಡ ಉರುಫ್ ಕುಳ್ಳೇಗೌಡ.	ಮಳವಳ್ಳಿ ತಾಲ್ಲೂಕು ರಿಜಸ್ಟ್ರೇಷನ್ ಗುಮಾಸ್ತೆ ಶ್ರೀಕಂಠೈಯನವರ ಮಗ ನಾರಣಪ್ಪಾ.	ಗುತ್ತಿಗೆ ಖರಾರ್ ಮತ್ತು 75 ರೂಪಾಯಿ ಮದಗಡ ಅಡಗಿದೆ.
12	ಡಿಟೋ	...	I	2350	27— 5—1905	31— 5—1905	ಶ್ರೀರಂಗರಾಜಪುರದಲ್ಲಿ ಇರುವ ಕುಂಭಕೋಣ ಶ್ರೀನಿವಾಸರಾಮಾನುಜಾಚಾರ್ ಮಗ ರಂಗನಾಥ ತಾತಾಚಾರ್.	ಹಾಸನದ ಡಿಸ್ಟ್ರಿಕ್ಟ್ ಪೋಲೀಸ್ ಡೆಪ್ಯುಟಿ ಮುನಷಿ ಎಂ. ಶ್ರೀನಿವಾಸೈಯಂಗಾರ್.	200 ರೂಪಾಯಿ ಆಧಾರ.
[illegible] 13	ಚಾಮರಾಜನಗರ	...	I	2079	30— 4—1905	2— 5—1906	ಆಲದೂರು ದಾಖಲೆ ಬೇರಣಿ ಮಲ್ಲನ ಕಟ್ಟೆ ಹುಂಡಿಯಲ್ಲಿ ಇರುವ ಕುರುಬರ ಬೆಳ್ಳೆಗೌಡ್ನ ಮಗ ಮಲ್ಲಾ.	ನಾಲೂರು ಗ್ರಾಮದಲ್ಲಿರುವ ಕೃಷ್ಣೇಗೌಡ.	100 ರೂಪಾಯಿ ಆಧಾರ.

ಅಂಕೆ ನಂಬರು.	ರಿಜಿಸ್ಟ್ರೇಷನ್ ಆಫೀಸುಗಳ ಹೆಸರು.	ಪುಸ್ತಕದ ನಂಬರು	ದಸ್ತಾವೇಜಿನ ನಂಬರು.	ದಸ್ತಾವೇಜು ಹುಟ್ಟಿದ ತಾರೀಖು.	ದಸ್ತೈವಜು ರಿಜಿಸ್ಟರಾದ ಅಥವಾ ತಿರಸ್ಕರಿಸಿದ ತಾರೀಖು	ದಸ್ತೈವಜು ಬರದುಕೊಟ್ಟವನ ಹೆಸರು.	ದಸ್ತೈವಜು ಬರಸಿಕೊಂಡವರ ಹೆಸರು.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತ್ತು.
14	ಚಾಮರಾಜನಗರ ...	I	2082	30— 4—1905	2— 5—1906	ಆಲಧೂರು ಗ್ರಾಮದ ದಾಖಲೆ ಬೇರಣಿ ಮಲ್ಲನ ಹುಂಡಿಯಲ್ಲಿ ಇರುವ ಕುರುಬರ ಮಲ್ಲಾ.	ನಾಲೂರು ಗ್ರಾಮದಲ್ಲಿರುವ ಕೃಷ್ಣೇಗೌಡ.	175 ರೂಪಾಯಿ ಆಧಾರ.
15	ಕೃಷ್ಣರಾಜಪೇಟೆ ...	I	140	10— 6—1903	25— 7—1904	ಬೂವ್ವನಹಳ್ಳಿ ಗ್ರಾಮದಲ್ಲಿ ಇರುವ ಹೊಂನನ ಮಗ ಜವರಾ.	ಹಳೆಯೂರು ಶಿವನೆಗೌಡನ ಮಗ ಬೊಮ್ಮೇಗೌಡ.	40 ರೂಪಾಯಿ ಜೀವನಾಂಶದ ಕರಾರು.
16	ಡಿಟೋ ...	I	606	5— 3—1903	5—11—1904	ಹೊಸಕೋಟೆಯಲ್ಲಿ ಇರುವ ಕೆಂಗೇರಿ ಕೃಷ್ಣಪ್ಪ.	ಎಡತೊರೆಯಲ್ಲಿ ಇರುವ ಬಳೇ ಚಿಕ್ಕಬಸವಣ್ಣ.	600 ರೂಪಾಯಿ ಕ್ರಯ.
17	ಡಿಟೋ ...	I	1566	14— 6—1905	14— 6—1905	ಮಾವಿನಕೆರೆ ಗ್ರಾಮದಲ್ಲಿ ಇರುವ ಕೆಂಗೇಗೌಡನ ಮಗ ಗೋಸೇಗೌಡ.	ಮಾವಿನಕೆರೆ ಗ್ರಾಮದಲ್ಲಿ ಇರುವ ಸರಸುಂಹೇಗೌಡ.	31—4—0 ಆಧಾರ.
18	ನಾಗಮಂಗಲ ...	I	92	9— 2—1903	13— 8—1904	ಬೆಂಗಳೂರಿನಲ್ಲಿ ಇರುವ ಪಾಲಗ್ರಹಾರದ ಕಾಳಾಚಾರಿ ಮಗ ಸೂರಾಚಾರಿ.	ಮೈಸೂರಿನಲ್ಲಿ ಇರುವ ವೀರಭದ್ರಾಚಾರಿ.	50 ರೂಪಾಯಿ ಕ್ರಯ.
19	ಮಳವಳ್ಳಿ ...	I	1428	19— 5—1905	19— 5 1905	ಚಿಕ್ಕ ಅರಶಿನಕೆರೆ ಗ್ರಾಮದಲ್ಲಿರುವ ಗಂಗಡಿಕಾರ ವಕ್ಕಲಿಗರ ತಿಮ್ಮೇಗೌಡನ ಮಗ ಶಿದ್ದಲಿಂಗೇಗೌಡ	ಚಿಕ್ಕ ಅರಸಿನಕೆರೆ ಗ್ರಾಮದಲ್ಲಿ ಇರುವ ತಿಪ್ಪೇಗೌಡನ ಮಗ ಶಿದ್ದಲಿಂಗೇಗೌಡ.	20 ರೂಪಾಯಿ ಕ್ರಯ.
20	ಶ್ರೀರಂಗಪಟ್ಟಣ ...	II	3	23— 2—1904	16— 6—1904	ಗೊಬ್ಬುರಗಾಲದಲ್ಲಿ ಇರುವ ಬೋರಶೆಟ್ಟಿ ಪುರುಷ ಕರೀಶೆಟ್ಟಿ.	ಮೈಸೂರು ಕೋಟೆಯಲ್ಲಿ ಇರುವ ಮುದಗೆರೆ ಲಿಂಗಪ್ಪೈಯ್ಯನ ಮಗ ರಂಗೈಯ್ಯ.	3 ಸಾಲಗೇಣಿ 22-8 ರೂಪಾಯಿ ಬಾಳುವ 3¾ ಖಂಡಿ ಭತ್ತ ಕೊಡುವದಾಗಿ.

21	ಹೆಗ್ಗಡದೇವನಕೋಟೆ ...	I	207	29— 4—1905	29 — 4—1905	ವಡ್ಡರಪಾಳ್ಯದಲ್ಲಿ ಇರುವ ದಾಡಾ ಬೋಯಿ ಪುರುಫ' ಗಿರಿಯಾಬೋಯಿ, 2. ಡಿಟ್ಟೋ ಯವನ ತಾಯಿ ಯಲ್ಲಮ್ಮ ಪುರುಫ' ಸಣ್ಣಮ್ಮ.	ಹೊಂಮರಗಳ್ಳಿ ಪಟೇಲ್ ರಾಮಣ್ಣ.	100 ರೂಪಾಯಿ ಕ್ರಯ.
22	ಡಿಟ್ಟೋ ..	II	1	1[illegible]— 4—1904	23— 2 1905	ಬಂತವಾಡಿ ಗ್ರಾಮದ ಪಟೇಲ್ ಅಂಕೇಗೌಡನ ಮಗ ಅಂಕೇಗೌಡ ಪುರುಫ' ಕೂಸೇಗೌಡ.	ಸರಗೂರಿನಲ್ಲಿ ಇರುವ ಚೆಂನಾಚಾರಿ ಮಗ ಬೆಟ್ಟಾಚಾರಿ.	95 ರೂಪಾಯಿ ಕ್ರಯ.
23	ಡಿಟ್ಟೋ ...	ಡಿಟ್ಟೋ	2	20— 6 - 1904	27 – 2—19 5	ಸೋಗಹಳ್ಳಿಯಲ್ಲಿ ಇರುವ ಚಲುವ, 2. ಮೊಲ್ಕಡವನ ಮಗ ಪುಟ್ಟಾ.	ಸೋಸಹಳ್ಳಿ ಚಕ್ರಗೋಪಾಲಿ ಮಗ ಗೋಪಾಲಿ.	80 ರೂಪಾಯಿ ಕ್ರಯ.
24	ಹೆಗ್ಗಡದೇವನಕೋಟೆ ...	ಡಿಟ್ಟೋ	6	5— 8—1904	29 – 4—1905	ಆಗತ್ತೂರು ಗ್ರಾಮದಲ್ಲಿ ಇರುವ ವೀರನಾಯಿಕನ ಮಗ ಜೋಳಿ ನಾಯಿಕ.	ಸಾಗರೆ ಕಾಳನಾಯಿಕನ ಮಗ ಕುಳ್ಳನಾಯಿಕ.	48 ರೂಪಾಯಿ ಕ್ರಯ.
25	ಎಳಂದೂರು ...	IV	1,	14— 7—1904	18 – 7—1904	ಎಳಂದೂರು ಕಸಬಾದಲ್ಲಿ ಇರುವ 1ನೆಯ ಕೃಷ್ಣಮಾಚಾರ್, 2ನೆ ಶಿವಲಿಂಗಶೆಟ್ಟಿ ಮಗ ಶಿ. ವೀರಬಸವಪ್ಪ, 3ನೆ ಕುಂನೇಗೌಡನ ಮಗ ಎಂ. ಪಿ. ಸುಬ್ಬಣ್ಣ.	ಮಧುವನಹಳ್ಳಿಯಲ್ಲಿ ಇರುವ ಯಜಮಾನ ಮಲ್ಲಶೆಟ್ಟರ ಮಕ್ಕಳು ಎಂ. ಮಾದಶೆಟ್ಟಿ.	1,000 ರೂಪಾಯಿ ಚರಸ್ವತ್ತಿನ ಆಧಾರ.
26	ಹುಣಸೂರು. ...	I	716	26 — 4—1905	26— 4—1905	ವೀರರಾಜೇಂದ್ರಪೇಟೆ ತಾಲ್ಲೂಕು ಬಳಗುಂದ ಗ್ರಾಮದಲ್ಲಿ ಇರುವ ವೆಂಕಟರಾಜು ಮಗ ನರಸಿಂಹ ರಾಜೈಯ.	ಪಿರಿಯಾಪಟ್ಟಣದ ಕಿಲ್ಲೆಯಲ್ಲಿ ಇರುವ ಸುಬ್ರಾಯ.	90 ರೂಪಾಯಿ ಭೋಗ್ಯ.

ಟಿ. ಕೆ. ಸುಂದರರಾಜೈಯ್ಯಂಗಾರಿ,
ಫಾರ್ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

ಹಾಸನ ಡಿಸ್ಟ್ರಿಕ್ಟು.

ನೋಟಿಸು, ತಾರೀಖು 5ನೆ ಅಕ್ಟೋಬರು 1907ನೆ ಇಸವಿ.

ಎರಡು ವರುಷಗಳಿಗಿಂತಲೂ ಅಧಿಕಕಾಲದಿಂದ ಪೇವಾರಸಾಗಿ ಇರುವ ಇದರಡಿ ಕಂಡ ದಸ್ತಾವೇಜನ್ನ ಹಾಜರು ಮಾಡಿದವರೇ ಆಗಲಿ ಅಥವಾ ಇವರಿಂದ ಅಧಿಕಾರ ಹೊಂದಿದ ಮುತಾಲೀಕರೆ ಆಗಲಿ ಈ ನೋಟಿಸ್ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಮಂಜರಾಬಾದ್ ಸಬ್ ರಿಜಿಸ್ಟ್ರಾರ್ ರೂಬ್ ರೂಬ್ ಹಾಜರಾಗಿ ತೆಗೆದುಕೊಳ್ಳದೆ ಇದ್ದರೆ, ರಿಜಿಸ್ಟ್ರೇಷನ್ ರೆಗ್ಯುಲೇಷನ್ ನಂ. 1ರ 85ನೆ ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಾಗುವ ದಸ್ತಾವೇಜನ್ನ ನಾಶಪಡಿಸುತ್ತೆ :—

ಜಂಬರ ನಂಬರು.	ಸಬ್ ರಿಜಿಸ್ಟ್ರಾರರ ಆಫೀಸು ಹೆಸರು.	ಪುಸ್ತಕ ನಂಬರು.	ದಸ್ತಾವೇಜಿನ ನಂಬರು.	ದಸ್ತಾವೇಜು ಬರೆದುಕೊಟ್ಟ ತಾರೀಖು.	ದಸ್ತಾವೇಜು ರಿಜಿಸ್ಟ್ರಿ ಆದ ಅಥವಾ ತಿರಸ್ಕರಿಸಿದ ತಾರೀಖು.	ದಸ್ತಾವೇಜು ಬರೆದುಕೊಟ್ಟವರ ಹೆಸರು.	ದಸ್ತಾವೇಜು ಬರೆಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಮತ್ತು ಕ್ರಯ.
1	ಮಂಜರಾಬಾದು.	1	465 / 1894—95	25—4—1895	27—6—95	ಮಂಜರಾಬಾದು ತಾಲ್ಲೂಕು ಹುಕ್ಕುಂದ ಹೋಬಳಿ ಸಕ್ಲೀಪುರ ಗ್ರಾಮದ ಚಿಕ್ಕಣ್ಣನ ಮಗ ದೊಡ್ಡೇಗೌಡ, 2. ತಿಮ್ಮೇಗೌಡ, 3. ಮಂಜೇಗೌಡ.	ಹುಕ್ಕುಂದ ಹೋಬಳಿ ವಡ್ಡರಹಳ್ಳಿ ಗ್ರಾಮದ ಲಿಂಗೇಗೌಡನ ಮಗ ಚಿಕ್ಕೇಗೌಡ.	1,000 ರೂಪಾಯಿನ ಕ್ರಯಪತ್ರ.

ಎಂ. ಲಕ್ಷ್ಮಣಶಾಸ್ತ್ರಿ,
ಫಾರ್ ಡಿಸ್ಟ್ರಿಕ್ಟು ರಿಜಿಸ್ಟ್ರಾರ್.

ಕಡೂರು ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 10ನೆ ನವಂಬರ್ 1907ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, — ಕೊಪ್ಪ ತಾಲ್ಲೂಕು ಅಡಿಗೆಬೈಲ್ ಗ್ರಾಮದಲ್ಲಿ ಇನ ಮೇಲೆ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಗೆ ದರಖಾಸ್ತು ಬಂದಿರೋಣದರಿಂದ ಸನ್ 1907ನೆ ಇಸವಿ ನವಂಬರ ತಾರೀಖು 30ನೆ ಶನಿವಾರ ಹಗಲು 11 ಘಂಟೆಗೆ ಕಡೂರು ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಡಿಸಿ ಕೊಪ್ಪ ತಾಲ್ಲೂಕು ಅಮಲ್ದಾರ್ರವರು ಬಾಳಗಡಿ ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ಒಳಪಟ್ಟು ಬಹಿರಂಗವಾದ ಹರಾಜು ಮೂಲಕ ಸರ್ವೇ ಲೀಲಾವ್ ನಡಿಸತಕ್ಕದ್ದು. ಎಕರೆ 1ಕ್ಕೆ ಹತ್ತು ರೂಪಾಯಿಗಳ ಮೇರೆ ಆಗುವ ಅಪ್ಸೆಟ್ ಪ್ರೈಸ್ ಯಾನೆ ನಿಯಮಿತವಾದ ಸರ್ಕಾರ್ ಸವಾಲಿಗೆ ಒಳಪಟ್ಟು ಖಾಯಿಷ್ ಮಾಡುವ ಅರ್ಜಿ ಕೊಡ ದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ್ ಹರಾಜನ್ನು ಕ್ಲೋಜ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ್ ಸವಾಲ್ ಮೊಬಲಗು (ಅಪ್ಸೆಟ್ ಪ್ರೈಸ್ ಪೈಕಿ ಯಾ ಅವಧಾಹಿಸ್ಸೆ ಡಿಪಾಜಿಟ್) ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ಸೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗೂ) ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಪಡೆದರೆ ದರಖಾಸ್ತುದಾರನ ಪೂರಾ ಕೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್ ಪ್ರೈಸ್ ಯಾನೆ ನಿಯಮವಾದ ಸರಕಾರ್ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೆನೆ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸ್ಯಾಂಡಲ್ ವಿನಹ ಬಾಕಿ ಎಲ್ಲಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಅವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಸೇಕಡಾ 25 ರೂಪಾಯಿಗಳ ಮೇರೆ ಆಗುವ ಕೇವಣಿ ಮೊಬಲಗನ್ನು, ಹರಾಜು ಬೈದಾದ ವಡನೆಯೇ 2ನೆ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಪೂರಾ ಡಿಪಾಜಿಟ್ ಮೊಬಲಗಿನ ಭರ್ತಿಗೆ ಒಳಪಟ್ಟು ಅರ್ಜಿ ಕೊಡ ದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯ್ತು 15ನೆ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಅರ್ಜಿ ಕೊಡ ದರಖಾಸ್ತುದಾರನು ಪಾವತಿ ಮಾಡ

ಕ್ಷದ್ದು. ಹಾಗೆ ಚಡ ದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕೀ ಮೊಬಲಗನ್ನು ಕೊಡದೆ ತಪ್ಪಿದರೆ ಅವನ ಖ ರ್ಚಿನಿಂದಲೂ ಅವನಿಗೆ ನಷ್ಟಕರವಾಗಿಯೂ ಸದರೀ ಜಮೀನ್ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿ ಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು ಆದರೆ ಜಾಸ್ತಿ ಏನಾದರೂ ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕೂ ಇರಲಾರದು.

5. ಈ ನಿಬಂಧನೆಗಳಿಗೆ ಒಳಪಟ್ಟು ಹರಾಜಾದ ಜಮೀನನ್ನು ಮೂರು ಸಾಲ್ ಆಕಾರವಿಲ್ಲದೆ ಮುಫತ್ತು, 4ನೆ 5ನೆ ಸಾಲ್ ಅರ್ಧ ಆಕಾರ, 6ನೆ ಸಾಲ್ ಲಾಗಾಯಿತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತ ಕ್ಕದ್ದು. ಈ ರಿಯಾಯತಿ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರ ಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟುವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವ ನ್ನಾದರೂ ಫೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಮೂರು ಸಾಲ್ ಲಾಗಾಯಿತು ಪೂರಾ ಆಕಾರ ಕೊಡಲು ಒಳ್ಳೆವನೆಂತ ಬರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆ ಮುಂತ ಬದ್ಧನಾಗಬೇಕು.

ನಂಬರು	ದರಖಾಸ್ತುದಾರನ ಹೆಸರು.	ಜಮೀನ್ ಹೆಸರು ಮತ್ತು ಅದರ ಸ್ಥಳ.	ಚತುರ್ಸೀಮ.	ದರಖಾಸ್ತು ಜಮೀನಿನ	
				ವಿಸ್ತೀರ್ಣ.	ಆಕಾರ.
				ಎ. ಗು.	
146	ಮ॥ ಸಿ. ಎಸ್. ಕ್ರಾಫರ್ಡ್ ಸಾಹೇಬರವರು.	ಅಡ್ಡಿಗೆಬೈಲು ಗ್ರಾಮ.	ಸರ್ವೆ ಪ್ರಕಾರ.	80 19	...

ತಿಳುವಳಿಕೆ ಪರಾ :— ಒಂದು ಸರ್ವೆ ನಂಬರು ಪೈಕಿ ಕೆಲವು ಜಾಗಕ್ಕೆ ದರಖಾಸ್ತು ಬಂದು ಕಚ್ಚಾ ಅಳತೆ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್‌ಸೆಟ್ ಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕ್ ಮೋಜಣೀ ಎಕರೆಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್‌ಸೆಟ್ ಪ್ರೈಸ್ ವಸೂಲೀ ಕೊಡುವುದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೇ ಆ ಗಲಿ ಜಮೀನ್ ಹಿಡುವಳಿದಾರನು ಬದ್ಧನೂ ಅರ್ಹನೂ ಆಗಿರಬೇಕು.

ಬಿ. ಜೆ. ಕುಮಾರಸ್ವಾಮಿ ನಾಯಕ್,
ಡೆಪ್ಯುಟಿ ಕಮಿಷನರ್.

ಅಮೃತಮಹಲ್ ಇಲಾಖಾ

ಪ್ರಕಟನೆ.

(ಮೊಕ್ಕಾಂ) ಹಾಸನ, ತಾರೀಖು 13-14ನೆ ನವಂಬರ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :— ಅಮೃತಮಹಲ್ ಇಲಾಖಾ ಬಾಬತ್ತು ಹೆಣ್ಣು ಮತ್ತು ಗಂಡು ರಾಸುಗಳನ್ನ ಚಾಲ್ತೀ ಇಸವಿ ಡಿಸೆಂಬರ್ ಮಾಹೆ 2 ನೆ ತಾರೀಖು ಲಾಗಾಯಿತು "ಹೊಳಲ್ಕೆರೆ" ಮೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಸದರಿ ಹರಾಜಾಗುವ ಸ್ಥಳಕ್ಕೆ ಹಾಜರಾಗಿ ರಾಸುಗಳನ್ನ ಛಡ ಸವಾಲಿನಿಂದ ಪಡಿಯ ಬಹುದು.

ಹೆಚ್. ನಂಜುಂಡರಾಜೇ ಅರಸ್,
ಸೂಪರಿಂಟೆಂಡೆಂಟ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸೆ॥ 1907—08ನೆ ಇಸವಿ ಮಿ॥ ಅರ್ಜೀ ನಂಬರ್ 366.

ಅರ್ಜಿದಾರರು ಬೀರೂರಿನಲ್ಲಿರುವ ಲೇಟ್ ಏ. ಪಿ. ಸದಾಶಿವರಾವ್ ತಮ್ಮ ವೆಂಕೋಬರಾವ್ ಹೆಂಡತಿ ಸಂತೂಬಾಯಿ ಮೈನರಾದ ಬೀರೂರು ಸ್ಥಳದ ಶ್ರೀಕಂಠರಾವ್ ಆಸ್ತೀ ವಿಷಯದಲ್ಲಿ—

ಸದರಿ ಮೈನರಾದ ಶ್ರೀಕಂಠರಾವ್‌ಗೆ ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ಬೀರೂರು ಸ್ಥಳದ ಮೇಲ್ಕಂಡವರು ಸದರೀ ಮೈ ನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸೆ॥ 1907ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 6ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

1907ನೆ ಇಸವಿ ಅಕ್ಟೋಬರ್ ತಿಂಗಳು 25ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋ

ಸರ್ 1907—08ನೆ ಇಸವಿ ಮಿ|| ಅರ್ಜೀ ನಂಬರು 398.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ ಗುಮಾಸ್ತೆಯಾಗಿದ್ದ R. ವೆಂಕಟರಾಮೈಯ್ಯನವರ ಮಗ ಮೃತಪಟ್ಟ ಕೃಷ್ಣಸ್ವಾಮಿ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಬಸವನಪುರದಲ್ಲಿರುವ ಪೆರ್ಷ R. ವೆಂಕಟರಾಮೈಯ್ಯನವರು, ಮೃತಪಟ್ಟ ಸದರೀ ಕೃಷ್ಣಸ್ವಾಮಿ ಯವರಿಗೆ ತಂದೆ ಆಗಬೇಕೆಂಬ ಹಕ್ಕು ದಾರಿಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಕೃಷ್ಣಸ್ವಾಮಿಯವರ ಜೆಂಬಗಿ ಬಗ್ಯಾಗಿ ಬರತಕ್ಕ ರೂಪಾಯಿ 483—0—0 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷರ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಫಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ R. ವೆಂಕಟರಾಮೈಯ್ಯನವರ ಅರ್ಜಿಯನ್ನು ಸರ್ 1907ನೆ ಇಸವಿ ಡಿಸೆಂಬರು ತಿಂಗಳು 6ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಸ್ವಾಮಿಯವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1907ನೆ ಇಸವಿ ನವೆಂಬರ್ ತಿಂಗಳು 10ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಜೆ. ಎಚ್. ಭಾಭಾ, ಸಬ್ ಜಡ್ಜ.

ನೋಟಿಸ.

ತೀರ್ಥಹಳ್ಳಿ, ತಾರೀಖು 9ನೆ ನವೆಂಬರು 1907.

ಈ ಕೆಳಗೆ ರುಜು ಮಾಡಿದ ತೀರ್ಥಹಳ್ಳೀ ಜವಳಿ ರಘುಪತಯ್ಯನವರ ಮಗ ಹನುಮಂತರಾಯನು ಇದರಿಂದ ಸಮಸ್ತ ಜನಗಳಿಗೂ ಶೃತಪಡಿಸುವದೇನಂದರೆ :—

1. ತೀರ್ಥಹಳ್ಳೀ ಜವಳಿ ಕೃಷ್ಣಯ್ಯನವರ ಮಕ್ಕಳು ವಿಠಲೈಯ್ಯನವರು ಮತ್ತು ಜವಳಿ ಸುಬ್ರಾಯರ ಮಕ್ಕಳು ಮಂಜಪ್ಪನವರು ಸಹಾ ನಮ್ಮ ಮೈನಾರಿಟಿ ಕಾಲದಾರಭ್ಯ ನಮ್ಮ ಜನಕತಂದೆ ರಘುಪತಯ್ಯನವರಿಗೆ ಸ್ವಾರ್ಜಿತವಾಗಿಯು ನಮಗೆ ಪಿತರಾರ್ಜಿತವಾಗಿಯೂ ಇರುವ ವೈವಟ್ಟಿನ ಆಡಳಿತ ನೋಡುತ್ತಾ ಇದ್ದರು. ಈ ಪೈಕಿ ವಿಠಲೈಯ್ಯನವರು ಈಚಿಗೆ ಮೃತಪಟ್ಟಿದ್ದಾರೆ.

2. ಈ ವಿಠಲೈಯ್ಯನವರು ಮತ್ತು ಈ ಮಂಜಪ್ಪನವರು ಇವರುಗಳ ಒಟ್ಟಿನ ಅಥವಾ ಇವರುಗಳ ಪೈಕಿ ಯಾರೊಬ್ಬರ ಹೆಸರಿಗೆ ಆಗಲೀ, ವ ಜವಳಿ ಶೇಷಗಿರಿಯಪ್ಪನವರು ಬಿನ್ ರಘುಪತಯ್ಯನವರು ಮತ್ತು ಈ ಶೇಷಗಿರಿಯಪ್ಪನವರ ತಮ್ಮ ಹನುಮಂತರಾಯನಾದ ನಾನು ಈರೀತಿ ಇರುವ ನಮ್ಮ ಒಟ್ಟಿನ ಅಥವಾ ನಮ್ಮ ಪೈಕಿ ಯಾರೊಬ್ಬರ ಹೆಸರಿಗೆ ಆಗಲಿ, ಕ್ರಯವಾಗಿರತಕ್ಕ ಆಸ್ತಿಗಳು ಮತ್ತು ಇವುಗಳಿಂದ ಸಾಲೆಸಾಲು ಬರತಕ್ಕ ಗುತ್ತಿಗೆ ಅಡಿಕೆ, ಗಡಿಭತ್ತ, ನಗದು ಗೇಣಿ ವ ಕಿಸ್ತು ವಗೈರೆಯು, ಮತ್ತು ಭೋಗ್ಯಾಧಾರ ವ ದೃಷ್ಯಾಧಾರ ವ ಮೈಸಾಲ ಪತ್ರ ಅಥವಾ ಪತ್ರಗಳ ಮತ್ತು ಪ್ರೊನೋಟ್ ಅಥವಾ ಪ್ರೊನೋಟುಗಳ ವಗೈರೆ ಡಾಕ್ಯುಮೆಂಟುಗಳ ಬಾಬತು ಅಸಲು ಹಣ ಇದರ ಬಡ್ಡಿ ವ ಬಡ್ಡಿಯ ಬಡ್ಡಿಯು, ಮತ್ತು ಗವರ್ನಮೆಂಟ್ ಸೇವಿಂಗ್ಸು ಬ್ಯಾಂಕಿನಲ್ಲಿ ಮತ್ತು ಸರ್ 1906–07ನೆ ಸೇಕಡಾ 4ರ ಮೈಸೂರ್ ಸ್ಟೇಟ್ ಲೋನ್ ಪ್ರೊನೋಟುಗಳ ಬಾಬತು ಇವರುಗಳ ಮತ್ತು ನಮ್ಮ ಮತ್ತು ನಮ್ಮ ಮಕ್ಕಳು ಮೈನರರು ಗಾರ್ಡಿಯನ್ ನಾವು ಈ ರೀತಿ ಇರತಕ್ಕ ಅಸಲು ಹಣ ಮತ್ತು ಇದರ ಬಡ್ಡಿಯು ಸಹಾ ಮೇಲ್ಕಂಡ ನಮ್ಮ ವೈವಟ್ಟಿಗೆ ಸಮ್ಮಂಧಪಟ್ಟದ್ದಾಗಿ ನಮಗೆ ಬರತಕ್ಕದ್ದಾಗಿರುತ್ತದೆ.

3. ಇದರಲ್ಲಿ ಈ ವಿಠಲೈಯ್ಯನವರಿಗೆ ಆಗಲಿ, ಈ ಮಂಜಪ್ಪನವರಿಗಾಗಲಿ ಅಥವಾ ಈ ವಿಠಲೈಯನವರ ತಮ್ಮ ಶ್ರೀಪತಿರಾಯರ ಮಕ್ಕಳು 1ನೆ ರಂಗರಾವ್, 2ನೆ ಬಾಲಕೃಷ್ಣರಾವ್, 3ನೆ ಆನಂದರಾವ್, 4ನೆ ವಾಮನರಾವ್; 1–4 ಮೈನರು, ಗಾರ್ಡಿಯನ್ 1ನೆ ರಂಗರಾವ್ ಮತ್ತು ಈ ಮಂಜಪ್ಪನವರ ತಮ್ಮಂದರು 5ನೆ ಪಾಂಡುರಂಗಪ್ಪನವರು, 6ನೆ ರಾಮರಾಯರು, 7ನೆ ನಾಗೇಶರಾವ್ ಶ್ರೀಪತಿ ಮಗ ಭಾಸ್ಕರರಾವ್ ಮೈನರ್, ಗಾರ್ಡಿಯನ್ ಮಂಜಪ್ಪನವರು, 8ನೆ ಗೋಪಾಲರಾವ್ ಬಿನ್ ಪಾಂಡುರಂಗಪ್ಪನವರು, 9ನೆ ಇವರ ತಮ್ಮ ಮೂಜಗಿರಿಯಪ್ಪನವರು, 10ನೆ ಮಾಧವರಾವ್ ಬಿನ್ ರಾಮರಾಯರು ಇವರುಗಳಿಗೇ ಆಗಲಿ ಹಕ್ಕು ಬಾಧ್ಯತೆ ಇರುವದಿಲ್ಲಾ.

4. ಈ ವಿಠಲೈಯನವರು ಮತ್ತು ಈ ಮಂಜಪ್ಪನವರು ಈಚಿಗೆ ಈ ಮಂಜಪ್ಪನವರು ಮೇಲೆ ಕಂಡ ಇವರ ತಮ್ಮಂದರ ಮಕ್ಕಳ ಮತ್ತು ತಮ್ಮಂದರ ಸಾಲಗಳಿಗೆ ಈ ನಮ್ಮ ವೈವಟ್ಟಿನ ಆಸ್ತಿಯನ್ನು ಗುರ್ತಿಸಿದ್ದು ಇದರ ಆಸ್ತಿಗಳಿಗೆ ಲೋಪಪಡಿಸಿದ್ದು ಮತ್ತು ಇನ್ನೂ ಲೋಪ ವಗೈರೆ ಪಡಿಸುವದಕ್ಕೆ ಪ್ರಯತ್ನಿಸುವದೂ, ಇನ್ನೂ ಕೆಲವು ಸಂಗತಿಗಳಲ್ಲಿ ನಮಗೆ ಮೋಸವಿರ್ಬಂಧಪಡಿಸಿದ್ದೂ ಮತ್ತು ಇನ್ನೂ ಮೋಸ ವಗೈರೆ ಪಡಿಸುವದಕ್ಕೆ ಪ್ರಯತ್ನಿಸುವದೂ, ವಗೈರೆ ಅನೇಕ ವಿಧವಾದ ಈ ವೈವಟ್ಟಿಗೂ ಇದರ ಹಕ್ಕು ದಾರರಾದ ನಮಗೂ ನಮ್ಮ ಪ್ರತಿನಿಧಿಯವರಿಗೂ ವಿರೋಧವಾದ ವಿದ್ಯಮಾನಗಳು ನಡಿಸಿದ್ದೂ ಮತ್ತು ಇನ್ನೂ ನಡಸುವದಕ್ಕೆ ಪ್ರಯತ್ನಿಸುವದೂ ವಗೈರೆ ನನ್ನ ನೋಟೀಸಿಗೆ ಬಂದಿರುವದರಿಂದ ನಾನು ಇವರ ಆಡಳತವನ್ನು ವಜಾ ಮಾಡಿದ್ದೇನೆ.

5. ಮೇಲೆ 2ನೆ ಕಲಂನಲ್ಲಿ ಕಂಡ ಹೆಸರುಗಳಿಗೆ ಕ್ರಯವಾಗಿರತಕ್ಕ ಆಸ್ತಿಗಳ ಬಾಬತು ಗುತ್ತಿಗೆ ಅಡಿಕೆ, ಗಡಿಭತ್ತ, ನಗದು ಗೇಣಿ ವ ಕಿಸ್ತು ವಗೈರೆಯನ್ನು ಮತ್ತು ಭೋಗ್ಯಾಧಾರ ವಗೈರೆ ಡಾಕ್ಯೂಮೆಂಟುಗಳ ಸಮ್ಮಂಧ ಅಸಲು ಹಣ ಇದರ ಬಡ್ಡಿ ವ ಬಡ್ಡಿಯ ಬಡ್ಡಿಯನ್ನೂ ಈ ಮುಂತಾದ್ದು ವಗೈರೆ ಎಷ್ಟನ್ನಾದರೂ ಮೇಲೆ 3ನೆ ಕಲಂನಲ್ಲಿ ನಮೂದಿಸಿದ ಈ ವೈವಟ್ಟಿಗೆ ಹಕ್ಕು ದಾರರಲ್ಲದವರ ಕಡಿಗೆ ವಸೂಲು ಕೊಡಕೂಡದು. ಕೊಟ್ಟರೆ ನಮ್ಮ ವೈವಟ್ಟಿಗೆ ವ ನನಗೆ ಬಂದಂತೆ ನಾನು ಒಪ್ಪಿಕೊಳ್ಳುವದಿಲ್ಲಾ. ಮೇಲ್ಕಂಡ ಪತ್ರಗಳು ವಗೈರೆ ಇವರು ಇದರ ಆಡಳತ ನೋಡುತ್ತಾ ಇರುವಾಗ್ಯೆ ಇವರ ಹೆಸರಿಗೆ ನಾಮಮಾತ್ರ ಹುಟ್ಟಿದ್ದಾಗಿರುತ್ತವೆ. ಈ ಮೇಲೆ ಕಂಡ ಆಸ್ತಿಗಳ ಪೈಕಿ ಅಥವಾ ಡಾಕ್ಯೂಮೆಂಟುಗಳ ಪೈಕಿ ಎಷ್ಟನ್ನಾದರೂ ಈ ವೈವಟ್ಟಿಗೆ ಹಕ್ಕು ದಾರರಲ್ಲದ ಮೇಲೆ ವಿವರಿಸಿದ ಈ ಮಂಜಪ್ಪನವರು ವಗೈರೇರ ಪೈಕಿ ಯಾರಿಂದಲೇ ಆಗಲಿ ಕ್ರಯ ಪರಿವರ್ತನಾ ಮೂಲಕ ಯಾವಾದರೂ ಪಡಕೊಂಡರೆ ಆಗಲಿ ಮೇಡೂರು ವಗೈರೆ ಮೂಲಕ ಪರಭಾರೆ ಪಡಕೊಂಡರೆ ಆಗಲಿ ಅದಕ್ಕೆ ನಾನು ಒಪ್ಪಿಕೊಳ್ಳುವದಿಲ್ಲ ಮತ್ತು ಹಾಂಗೆ ಪಡಕೊಂಡವರ ಕಡಿಗೆ ಎಷ್ಟನ್ನಾದರೂ ವಸೂಲು ಕೊಟ್ಟಾಗ್ಯೂ ಅದನ್ನು ನಾನು ಒಪ್ಪಿಕೊಳ್ಳುವದಿಲ್ಲ ಎಂಬುವದನ್ನು ತಿಳಿದಿರತಕ್ಕದ್ದು. ಇವರುಗಳು ಮತ್ತು ನಾವು ಸಹಾ ಒಂದೇ ಮನೆಯಲ್ಲಿ ವಾಸವಾಗಿದ್ದಾಗ್ಯೂ ಈ ವೈವಟ್ಟಿನಲ್ಲಿ ಇವರುಗಳಿಗೆ ಏನೂ ಹಕ್ಕು ಇರುವದಿಲ್ಲಾ ಎಂಬುವದನ್ನು ಸಹಾ ತಿಳಿದಿರತಕ್ಕದ್ದು.

ತೀರ್ಥಹಳ್ಳಿಯ ಜವಳಿ ಹನುಮಂತರಾಯನ ರುಜು.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಖಾಯಿಸ್ ಆದ್ದು. [ನಂ. 47.

ಬೆಂಗಳೂರು, ಗುರುವಾರ, ನವೆಂಬರ್ ತಾ॥ 28, ಸನ್ 1907.

II ನೆ ಭಾಗ.

ಇಂಡ್ಯಾ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಫಾರೆಸ್ಟ್ ಇಲಾಖಾ.

ಸಂಡಲ್ ಹರಾಜ್ ನೋಟಿಫಿಕೇಷನ್.

ತಾರೀಖು 24ನೆ ಆಗಸ್ಟ್, 1907ನೆ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಸರಕಾರದ ಶ್ರೀಗಂಧದ ಸಾಲಿಯಾನಾ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರದರ ಎದುರಿನಲ್ಲಿ ನಮೂದಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡೆಸಲ್ಪಡುವದು:—

ಡಿಸ್ಟ್ರಿಕ್ಟು.	ಕೋಠಿ.	ಹರಾಜು ತಾರೀಖು.	ಸುಮಾರು ಮೊತ್ತ.
			ರೂಗಳು.
ಶಿವಮೊಗ್ಗ ...	ತೀರ್ಥಹಳ್ಳಿ ...	18ನೆ ನವೆಂಬರ್ 1907 ...	200
ಡಿಟೋ ...	ಸಾಗರ ...	21ನೆ ಡಿಟೋ ...	150
ಡಿಟೋ ...	ಶಿವಮೊಗ್ಗ ...	25ನೆ ಡಿಟೋ ...	500
ಕಡೂರು ...	ತರೀಕೆರೆ ...	28ನೆ ಡಿಟೋ ...	250
ಡಿಟೋ ...	ಚಿಕ್ಕಮಗಳೂರು ...	2ನೆ ಡಿಸೆಂಬರ್ 1907 ...	350
ಹಾಸನ ...	ಹಾಸನ ...	5ನೆ ಡಿಟೋ ...	150
ಬೆಂಗಳೂರು ...	ಬೆಂಗಳೂರು ...	9ನೆ ಡಿಟೋ ...	100
ಮೈಸೂರು ...	ಶ್ರೀರಂಗಪಟ್ಟಣ ...	12ನೆ ಡಿಟೋ ...	[illegible]50
ಡಿಟೋ ...	ಹುಣಸೂರು ...	16ನೆ ಡಿಟೋ ...	500
		ಜುಮ್ಲಾ ...	2,450

2. ಪ್ರತಿ ಕೋಠಿಯಲ್ಲಿಯೂ ಹರಾಜಾಗುವ ಕ್ಲಾಸುವಾರು ಲಾಟು, ಮೊತ್ತ ಮತ್ತು ಇತರ ತಪಸೀಲುಗಳು ಬರುವ ಅಕ್ಟೋಬರ್ ಮಾಹೆಯ ಆಖೈರಿನಲ್ಲಿ ತಿಳಿಯಪಡಿಸುತ್ತೆ.

ಎಂ. ಮುತ್ತಣ್ಣ,
ಕನ್‌ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 17ನೆ ಮಾಹೆ ನವಂಬರು 1907.

ಸನ್ 1908ನೆ ಇಸವಿ ಜನವರಿ ಮಾಹೆ 16ನೆ ತಾರೀಖಿನಲ್ಲಿ ಪ್ರಾರಂಭವಾಗಿ ಒಂದು ವಾರದ ವರಿಗೂ, ಎಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ನಡಿಯುವ ಶ್ರೀರಾಮದೇವರ ರಥೋತ್ಸವ ಕಾಲದಲ್ಲಿ ಗೌರ್ನಮೆಂಟಿನಿಂದ ತಲುಪಿರುವ 17—9—07ನೆ ಮರ್ಕುಂ 2585-95—L. B. (46?-06)—3ನೆ ನಂಬರು ಪ್ರೊಸೀಡಿಂಗ್ಸ ಪ್ರಕಾರ ದನಗಳ ಪ್ರದರ್ಶನವೂ ನಡಿಯುತ್ತೆ. ಬಾಕಿ ತಪಸೀಲುಗಳಿಗೆಲ್ಲಾ 1907ನೆ ನವಂಬರ್ 21ನೆ ಮರ್ಕುಂ 46ನೆ ನಂಬರು ಮೈಸೂರು ಗೆಜೆಟ್ಟಿನ ೨ನೆ ಭಾಗದ 545ನೆ ನಂಬರು ಪುಟದಲ್ಲಿ ನೋಡಬೇಕು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ ವ ಪ್ರಸಿದ್ಧ ಪತ್ರಿಕೆ.

ತಾರೀಖು 19ನೆ ಅಕ್ಟೋಬರ 1907.

1. ಕಂದಾಯದ ಬಾಕೀದಾರರಾದ ಹ್ಯಾಕನೂರು ಗ್ರಾಮದ ಗುತ್ತಿಗೆದಾರರಾದ ಕೆ. ಅಶ್ವತ್ಥನಾರಾಯಣ ಶಾಸ್ತ್ರಿಗಳಿಂದ ಬರಬೇಕಾದ ಜರ್ಮಿ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟ. ನರಸೀಪುರದ ತಾಲ್ಲೂಕು ಕಚೇರಿಯಲ್ಲಿ 1908ನೆ ಇಸವಿ ಜನವರಿ ಮಾಹೆ 30ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ಆ ದಿವಸ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1906—07ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪಸೀಲ್ ಮೇರಿಗೆ ರೂಪಾಯಿ 782—11—1 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು	ಹೋಬಳಿ	ಗ್ರಾಮ.	ಖಾತೇದಾರರ ಹೆಸರು.	ಸ್ವತ್ತಿನ ವಿವರ: ಕಟ್ಟಡಗಳು: [illegible]	[illegible]	ಜಮೀನು: [illegible]	[illegible]	[illegible]	[illegible]	[illegible]	[illegible]	[illegible]
ತಿ. ನರಸೀಪುರ	[illegible]	ಹ್ಯಾಕನೂರು	ಗುತ್ತಿಗೆದಾರ ಕೆ. ಅಶ್ವತ್ಥನಾರಾಯಣ ಶಾಸ್ತ್ರಿ			ಗ್ರಾಮ ಪೂರ್ತಾ		ಗುತ್ತಾ ... ಲೋಕಲ್ ... ಸಾಬ್ತು ಬೇರೀಜು ಕ್ವಿಟ್‌ರೆಂಟ. ರೂ. ಅ. ಪೈ. 1,598 6 6		ರೂ. 2,500	ರೂ. ಆ. ಪೈ. 1,161 13 0 76 0 9 0 3 0 1,238 0 9 ಹರಾಜು ತಾರೀಖಿನ ವರಿಗೆ ಬಡ್ಡಿ.	ರೂ. 782 11 1

ಎಂ. ಕಾಂತರಾಜೆ ಅರಸ್, ಡೆಪ್ಯುಟಿ ಕಮಿಷನರ.

ಚಿತ್ರದುರ್ಗ ಡಿಸ್ಟ್ರಿಕ್ಟು.

ತಾರೀಖು 19ನೆ ನವೆಂಬರ 1907, ಚಿತ್ರದುರ್ಗ.

ಚಿತ್ರದುರ್ಗ ಡಿಸ್ಟ್ರಿಕ್ಟು ಚಳ್ಳಕೆರೆ ತಾಲ್ಲೂಕು ವಿಪಾಸಾಬಿಹಳ್ಳಿ ಗ್ರಾಮದಬಳಿ ಹೊಸದಾಗಿ ಕಟ್ಟಿ ಇರುವ ರಾಣಿತಲಾವ್‌ಕೆರೆ ಅಚ್ಚುಕಟ್ಟಿಗೆ ಸೇರಿ ಇರುವ ಇದರಡಿ ಕಂಡ ಜಮೀನುಗಳ ಹಿಡುವಳಿ ಹಕ್ಕನ್ನು ವಿಪಾಸಾಬಿಹಳ್ಳಿ ಗ್ರಾಮದಬಳಿ ಚಿತ್ರದುರ್ಗದ ಸಬ್ ಡಿವಿಜನ್ ಛಾರ್ಜಿನಲ್ಲಿ ಇರುವ ಅಸಿಸ್ಟೆಂಟ ಕಮಿಷನರವರಿಂದ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ ಎಂದು ಇದರ ಮೂಲಕ ನೋಟೀಸನ್ನು ಕೊಟ್ಟಿರುತ್ತದೆ. ಈ ಹರಾಜು ಸ 1908ನೆ ಇಸವಿ ಜನವರಿ ತಾರೀಖು 6ನೆ ಸೋಮವಾರದ ದಿನ ಮತ್ತು ಮುಂದಿವಸಗಳಲ್ಲಿ ಪೂರ್ವಾಹ್ನ 11 ಘಂಟೆಗೆ ಶುರುಮಾಡಿ ಅಪರಾಹ್ನ 5 ಘಂಟೆಗೆ ಕೈದು ಮಾಡಲ್ಪಡುತ್ತೆ.—

ಚಿತ್ರದುರ್ಗದ ಸಬ್ ಡಿವಿಜನ್ ಛಾರ್ಜಿನಲ್ಲಿರುವ ಅಸಿಸ್ಟೆಂಟ ಕಮಿಷನರವರಿಂದ ರುಜು ಮಾಡಲ್ಪಟ್ಟ ಹರಾಜಿನ ಬರಹ ಮೂ

ಲಕವಾದ ಷರತ್ತುಗಳನ್ನು ಹರಾಜಿನ ದಿನಕ್ಕೆ ಮುಂಚೆ ಯಾವ ಕಚೇರಿ ದಿನದಲ್ಲಿ ಆದರೂ ಕಚ್ಚೇರಿ ಹೊತ್ತಿನಲ್ಲಿ ಚಿತ್ರದುರ್ಗದಲ್ಲಿರುವ ಸದರಿ ಆಫಿಸರವರಿಗೆ ಅಥವಾ ಚಳ್ಳಕೆರೆ ತಾಲ್ಲೂಕು ಅಮಲ್‌ದಾರ್ರಿಗೆ ಅಥವಾ ಹರಾಜಿನ ಕಾಲದಲ್ಲಿ ಯಾರು ಹರಾಜು ನಡಿಸುತ್ತಾರೊ ಆ ಆಫಿಸರಿಗೆ ಆಗಲಿ ಅರ್ಜಿಕೊಟ್ಟುಮೇಲೆ ನೋಡಬಹುದು. ಮತ್ತು ಸವಾಲು ಮಾಡಲು ಉದ್ದೇಶಿಸುವವರು ಸದರಿ ಷರತ್ತುಗಳನ್ನು ಸವಾಲು ಮಾಡುವದಕ್ಕೆ ಮುಂದಾಗಿ ಗೊತ್ತುಮಾಡಿಕೊಳ್ಳಬೇಕೆಂದು ಅವರಿಗೆ ಎಚ್ಚರಿಕೆ ಇರುತ್ತದೆ.

SHEDULE OF LANDS.

Number.	Name of Village.	Original Sur. No.	Revision Sur. No.	According to Resurvey. Description.				Assessment.	Area irrigable.			
				Dry.	Wet.	Baga-yet.	Total.		Dry.	Wet.	Baga-yet.	Total.
1	2	3	4	5	6	7	8	9	10	11	12	13
				A. g.	A. g.	A. g.	A. g.	Rs. a.	A. g.	A. g.	A. g.	A. g.
1	Meerasabi-halli.	6	13	5 9	...	...	5 9	1 12	1 0	..	..	1 0
	ಮಿರಾಸಾಬಿಹಳ್ಳಿ	31	34	6 23	...	...	6 23	2 8 }	12 9	...	...	12 9
			35	5 26	...	..	5 26	2 0 }				
		33	38	35 3	...	..	35 3	7 8	35 3	..	...	35 3
2	Vidupana-Kunte.	83	94	32 27	...	...	32 27	5 0	11 0	..	..	11 0
	ವಿಡುಪನಕುಂಟೆ	92	105	3 27	...	..	3 27	0 12 }	4 25	..	..	4 25
			87	4 4	..		4 4	1 0 }				
			88	7 12	...	...	7 12	1 8 }				
		29	33	22 24	...	...	22 24	7 0	15 0	..	..	15 0
		27	31	27 14	....	...	27 14	6 0	7 0	...	..	7 0
		21	21	7 21	...		7 21	2 0	7 5	...	...	7 5
3	Rangavana-halli.	27	29	...	0 36	...	0 36	4 0	...	0 36	..	0 36
	ರಂಗವ್ವನಹಳ್ಳಿ	26	28	...	1 6	..	1 6	5 0	..	1 6	..	1 6
		21	23	...	0 30	..	0 30	3 8	...	0 30	...	0 30
		19	20	...	2 10	..	2 10	6 8 }	..	4 28	..	4 28
			21	...	2 18	...	2 18	10 0 }				
		62	71	14 37	..	...	14 37	5 8	..	..	....	...
		57	65	66 5	...	..	66 5	21 0	9 0	...	...	9 0
4	Hosahalli ಹೊಸಹಳ್ಳಿ ...	22	22	16 21	...	...	16 21	5 0	12 17	..	...	12 17
		18	18	28 27	..	...	28 27	7 0	24 0	...	..	24 0
		25	25	49 20	..	....	49 20	11 0	45 0	...	....	45 0
		2	2	2 24	...	8 3	10 27	11 0	1 23	9 4	..	10 27
		7	7	25 4	...	...	25 4	8 0	13 0	..	..	13 0
		8	8	37 2	...	...	37 2	12 0	1 0	...	...	1 0
		9	9	29 21	...	..	29 21	9 0	8 0	...	...	8 0
5	Karekere ಕರೆಕೆರೆ ...	27	27	44 3	...	..	44 3	15 0	22 0	...	..	22 0
6	Kalvehalli ಕಾಲವೆಹಳ್ಳಿ ...	153	184	26 37	..	...	26 37	9 8	26 37	...	...	26 37
		154	18[illegible]	20 22	...	..	20 22	7 0	16 0	..	....	16 0
		161	192	53 1	...	...	53 1	22 0	12 0	...	..	12 0
		165	196	12 9	...		12 9	5 0 }	17 39	..	...	17 39
			198	5 30	...	...	5 30	2 4 }				
		144	174	...	0 15	..	0 15	1 8	...	0 15	..	0 15

ಹರಾಜು ಷರತು ಗಳು.

1. ಒಂದು ಅಥವಾ ಜಾಸ್ತಿ ಸರ್ವೆ ನಂಬರುಗಳನ್ನ ಶೇರಿಸಿ ಲಾಟ್ಟುಗಳನ್ನಾಗಿ ಮಾಡಿ ಜಮೀನುಗಳನ್ನು ಹರಾಜು ಮಾಡಿಸುತ್ತೆ.

2. ಪ್ರತಿ ಒಂದು ಲಾಟನ್ನು ಹರಾಜು ಮಾಡಿಸುವದಕ್ಕೆ ಮುಂಚೆ ಹರಾಜು ಮಾಡಿಸುವ ಆಫಿಸರರು ಆಯಾ ಲಾಟಿನ ಅಪ್ಸೆಟ್ಟು ಪ್ರಯಿಜಿನ ಮೊಬಲಗು ಇಷ್ಟೆಂದು ನಿರ್ಧರಪಡಿಸಿ ಹೇಳುತ್ತಾರೆ. ಆ ಮೊಬಲಗಿನವರೆಗೆ ಹರಾಜಿನಲ್ಲಿ ಸವಾಲು ಬಾರದೆ ಇದ್ದರೆ ಆ ಲಾಟನ್ನು ವಾಪಸು ತೆಗೆದುಕೊಳ್ಳುತ್ತೆ.

3. ಹರಾಜಿನಲ್ಲಿ ಹುಟ್ಟುವ ಮೊಬಲಗು ಶಿವಾಯಿ ಆಯಾ ಸರ್ವೆ ನಂಬರುಗಳಲ್ಲಿ ತರಿ ಸಾಗುವಳಿಗೆ ಬರಬಹುದಾದಂಥಾ ಭಾಗಕ್ಕೆ ಎಕರೆ 1ಕ್ಕೆ 8 ರೂಪಾಯಿ ದರಪ್ರಕಾರ ಕಂಟ್ರಿಬ್ಯೂಷನ್ ಕೊಡಬೇಕು.

4. ಹರಾಜು ಡೆಪ್ಯುಟಿ ಕಮಿಷನರಿಂದ ಖಾಯಂ ಆಗುವದಕ್ಕೆ ಒಳಪಟ್ಟಿರತಕ್ಕದ್ದು.

5. ಯಾವದಾದರು ಲಾಟಿನ ಹರಾಜು ಕಾಯಂ ಮಾಡೋಣ ಅಥವಾ ಕಾರಣಗಳನ್ನು ನಮೂದಿಸದೆ ರದ್ದು ಮಾಡೋಣ ಡೆಪ್ಯುಟಿ ಕಮಿಷನರ ವಿಚಾರಣೆಗೆ ಒಳಪಟ್ಟಿರತಕ್ಕದ್ದು ಮತ್ತು ತನ್ನ ಸವಾಲು ಎಲ್ಲಾರದಕ್ಕಿಂತಲೂ ಜಾಸ್ತಿಯಾದದ್ದು ಎಂಬ ಕಾರಣದ ಮೇಲೆ ತನ್ನ ಸವಾಲು ತಿರಸ್ಕರಿಸಲ್ಪಟ್ಟಿತು ಅಥವಾ ಹರಾಜು ಕಾಯಂ ಆಗುವದರಲ್ಲಿ ಸಾವಕಾಶ ಆಯಿತು ಎಂಬದಾಗಿ ಛಡ ಸವಾಲುದಾರನ ಫಿರ್ಯಾದಿಗೆ ಅವಕಾಶವಿರುವದಿಲ್ಲ.

6. ಒಂದು ಲಾಟಿಗೆ ಯಾರು ಆಖೈರು ಛಡಸವಾಲುದಾರ್ರಾಗುತ್ತಾರೊ, ಅಂಥವರು ಅಂಥಾ ಸವಾಲಿನ ಮೊಬಲಗಿನ ಮೇಲೆ ಶೇಕಡಾ 25ನ್ನು ವಡನೆ ಠೇವಣಿ ಇಡಬೇಕು ಮತ್ತು ಅಂಥಾ ಠೇವಣಿಯನ್ನು ಇಡದೆ ತಪ್ಪಿದರೆ ಸದರಿ ಹಿಡುವಳಿ ಹಕ್ಕನ್ನು ಖರೀದಿದಾರನ್ನ ನಷ್ಟಕ್ಕೆ ಗುರಿಪಡಿಸಿ ವಡನೆ ಪುನಹಾ ಹರಾಜು ಮಾಡಿಸತಕ್ಕದ್ದು.

7. ಹಾಗೆ ತಪ್ಪುವ ಖರೀದಿದಾರನಿಂದ ಬಂದ ಸವಾಲಿಗಿಂತ ಅನಂತರ ಆಗುವ ಹರಾಜಿನ ಹುಟ್ಟುವಳಿ ಕಮ್ಮಿಯಾದರೆ ಅವನಿಂದ ಅವೆರಡರ ವ್ಯತ್ಯಾಸದ ಮೊಬಲಗನ್ನು ಜಮೀನ ಕಂದಾಯದ ಬಾಕಿಯಂತೆ ಡೆಪ್ಯುಟಿ ಕಮಿಷನರವರು ವಸೂಲು ಮಾಡತಕ್ಕದ್ದು.

8. ಹರಾಜು ಮೊಬಲಗಿನಲ್ಲಿ ಬಾಕಿ ಉಳಿದ ಪೂರಾ ಮೊಬಲಗನ್ನು ಹರಾಜು ನಡದ ದಿನದಿಂದಾ 15ನೆ ದಿವಸದ ಸೂರ್ಯಾಸ್ತಮಾನಕ್ಕೆ ಮುಂಚೆ ಖರೀದಿದಾರನು ಪಾವತಿ ಮಾಡತಕ್ಕದ್ದು ಅಥವಾ ಸದರಿ ಹದಿನೈದನೆ ದಿನ ಆದಿತ್ಯವಾರ ಅಥವಾ ಮಂಜೂರಾಗಿದ್ದ ರಜಾ ದಿನವಾಗಿದ್ದರೆ, ಆಗ್ಯೆ ಅಂಥಾ ಹದಿನೈದನೆ ದಿವಸಕ್ಕೆ ತರುವಾಯ ಕಚ್ಚೇರಿ ಆಗುವ ಮೊದಲನೆ ದಿವಸದ ಸೂರ್ಯಾಸ್ತಮಾನಕ್ಕೆ ಮುಂದಾಗಿ ಪಾವತಿ ಮಾಡಬೇಕು.

9. ಖರೀದಿ ಮೊಬಲಗಿನ ಪೂರಾ ಮೊತ್ತವನ್ನು ಸದರಿ ವಾಯಿದೆ ಒಳಗೆ ಪಾವತಿ ಮಾಡಲು ತಪ್ಪಿದಲ್ಲಿ ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚುಗಳನ್ನು ವಜಾ ಮಾಡಿಕೊಂಡ ತರುವಾಯ ಅದು ಸರ್ಕಾರಕ್ಕೆ ಮುಟ್ಟುಗೋಲಾಗತಕ್ಕದ್ದು ಮತ್ತು ಹಿಡುವಳಿ ಹಕ್ಕನ್ನು ಪುನಹಾ ಹರಾಜು ಮಾಡತಕ್ಕದ್ದು. ಮತ್ತು ತಪ್ಪಾಗಿ ನಡದ ಖರೀದಿದಾರನು ಸದರಿ ಹಿಡುವಳಿ ಹಕ್ಕಿಗೆ ಅಥವಾ ಈಚೆಗೆ ಅದು ಎಷ್ಟಕ್ಕೆ ಹರಾಜು ಹಾಕಬಹುದೊ ಆ ಮೊಬಲಗಿನ ಪೈಕಿ ಯಾವ ಭಾಗಕ್ಕಾಗಲಿ ಎಲ್ಲಾ ಬಾಧ್ಯತೆಯನ್ನು ಹೋಗಲಾಡಿಸಿಕೊಳ್ಳತಕ್ಕದ್ದು.

10. ಯಾವದಾದರು ಲಾಟಿನ ಹರಾಜು ಕಾಯಂ ಆಗದಿದ್ದರೆ ಸಂದರ್ಭವಿರಬಹುದಾದಂತೆ ಅವನ ಠೇವಣಿಯನ್ನು ಅಥವಾ ಖರೀದಿ ಹಣವನ್ನು ವಾಪಸು ಬರಮಾಡಿಕೊಳ್ಳಲು ಖರೀದಿದಾರನು ಬಾಧ್ಯನಾಗಿರತಕ್ಕದ್ದು.

11. ಜಮೀನು ಅನುಭವಕೆ ಪ್ರವೇಶಿಸುವದಕ್ಕೆ ಮುಂದಾಗಿ ಲ್ಯಾಂಡ್ ರೆವಿನ್ಯೂ ಕೋಡಿನ 58ನೆ ಪ್ರಕರಣ ಪ್ರಕಾರ ಅಮಲ್ದಾರರ ಬರಹ ಮೂಲಕವಾದ ಅಪ್ಪಣೆಯನ್ನು ಖರೀದಿದಾರನು ಪಡಿಯಬೇಕು. ಮೊದಲು ಅಂತಾ ಅಪ್ಪಣೆಯನ್ನು ಹೊಂದದೆ ಜಮೀನನ್ನು ಅನುಭವಕ್ಕೆ ತೆಗೆದುಕೊಂಡರೆ ಆ ಅನುಭವವು ಲ್ಯಾಂಡ್ ರೆವಿನ್ಯೂ ಕೋಡಿನ 59ನೆ ಪ್ರಕರಣ ಪ್ರಕಾರ ಹುಕುಮಲ್ಲದ್ದೆಂದು ಅದರ ವಿಷಯದಲ್ಲಿ ಅಮಲ್ ನಡಿಯಲು ಅದು ಗುರಿಯಾಗುತ್ತೆ.

12. ಖರೀದಿದಾರನು ಚಾಲತಿ ಸಾಲಿನೊಂದಿಗೆ ಮೊದಲು ಮಾಡಿಕೊಂಡು ಜಮೀನಿನ ಆಕಾರವನ್ನು, ಮತ್ತು, ಅದರ ಮೇಲಣ ಲೋಕಲು ಫಂಡು ಸೆಸ್ಸನ್ನು ಕೊಡಬೇಕಾಗುತ್ತೆ. ಆದರೆ ಅವನ ಸ್ವಂತ ತಪ್ಪಿತವಲ್ಲದ ಇತರ ಕಾರಣಗಳಿಂದ ಆ ವರುಷ ಜಮೀನನ್ನು ಉಪಯೋಗಿಸಲು ಅವನು ಅದರ ಸ್ವಾಧೀನವನ್ನು ಸರಿಯಾದ ಕಾಲದಲ್ಲಿ ಹೊಂದದಿದ್ದರೆ ಆ ವರುಷದ ಕಂದಾಯ ಮತ್ತು ಲೋಕಲು ಫಂಡು ಸೆಸ್ಸು ಅವನಿಂದ ವಸೂಲಾಗುವದಿಲ್ಲ.

13. ಜಮೀನುಗಳ ಬಾಬ್ತು ಅಥವಾ ವಿಸ್ತೀರ್ಣದಲ್ಲಿ ತಪ್ಪುಗಳು ಅಥವಾ ಲೋಪಗಳು ಏನಾದರೂ ಇದ್ದರೆ ಅಂಥಾವುಗಳಿಗೆ ಸರ್ಕಾರದವರು ಜವಾಬ್ದಾರರಲ್ಲ.

ಎಂ. ಚಂಗೈಯ್ಯಶೆಟ್ಟಿ,
ಡೆಪ್ಯುಟಿ ಕಮಿಷನರ್.

ನೋಟಿಸ.

ಬೆಂಗಳೂರು ತಾಲ್ಲೂಕು ದೊಡ್ಡಬಳ್ಳಾಪುರ ರೇಂಜ್ ಅಸಿಸ್ಟೆಂಟ್ ಕಮಿಷನರವರ ಆಫೀಸು.

ತಾರೀಖು 18ನೆ ನವಂಬರ 1907.

ನೆಲಮಂಗಲ ತಾಲ್ಲೂಕು ದಾಸನಪುರದ ಹೋಬಳಿ ಜೋಡಿ ಬೈಯ್ಯಂಡಹಳ್ಳಿ ಗ್ರಾಮದ ಅರ್ಧ ಪಾಲು ಹಿಸ್ಸೆದಾರು, ಬೆಂಗಳೂರು ಚಿಕ್ಕಪೇಟೆ ಸುಮತೇಂದ್ರ ಮಠದಲ್ಲಿರುವ ಭೀಮಾಚಾರ್ರ ಸ್ತ್ರೀ ವೆಂಕೋಬಮ್ಮ, ಬೆಂಗಳೂರು ಪುಲಕಂಕದ ಬಾಗಿಲನಲ್ಲಿ ವಾಸವಾಗಿರುವ ಕಾಗಪಾಲು ಹಿಸ್ಸೆದಾರ್ ಹುಲ್ಲಾಳು ಮಲ್ಲಿಕಾರ್ಜುನೈಯ್ಯನವರ ಮಗ ನಾಗಪ್ಪ ಮತ್ತು ಕಾಗಪಾಲು ಹಿಸ್ಸೆದಾರ್ ಬೈಯ್ಯಂಡಹಳ್ಳಿ ಗ್ರಾಮದ ಕುಸ್ತೂರು ಚನ್ನಪ್ಪ, ಅನುಭವದಾರ್ ಪಟೇಲ್ ಶಾಂತವೀರಪ್ಪ ಇವರಿಗೆ ತಿಳಿಯಪಡಿಸುವದೇನಂದರೆ :—

ಸದ್ರಿ ಜೋಡಿ ಗ್ರಾಮದ ಕೇಂದ್ರ ಹುಟ್ಟುವಳಿಯಲ್ಲಿ ನಿಮಗೆ ಇರಬಹುದಾದ ಹಕ್ಕಿನ ವಿಚಾರವನ್ನು ಕುರಿತು ತನಿಖಿ ಕ್ರಮ

ನಡಿಯಬೇಕಾಗಿರುವದ್ದರಿಂದ ಈ ಬಗ್ಯೆ ನಿಮ್ಮಲ್ಲಿರತಕ್ಕ ವಿಶಿಷ್ಟ ದಾಖಲಾತಿಗಳ ನಿಶಿ ನೀವು ಪ್ರತಿಬಬ್ಬರು 1908ನೆ ಇಸವಿ ಜನವರಿ 4ನೆ ತಾರೀಖು ದಿವಿ 11ಕ್ಕೆ ಬೆಂಗಳೂರು ಮೊಕ್ಕಾಂ ಈ ಕೋರ್ಟ ರೂಬರೂಬ್ ಹಾಜರಾಗಬೇಕು. ಇದಕ್ಕೆ ತಪ್ಪಿದರೆ ನಿಮ್ಮ ತಕರಾರು ಅಂಗೀಕರಿಸದೆ ಏಕಪಕ್ಷವಾಗಿ ನಿಮಗೆ ಈ ಬಾಬಿನಲ್ಲಿ ಬರತಕ್ಕದ್ದೇನೂ ಇಲ್ಲವೆಂದು ನಿರ್ಣಯಿಸಲ್ಪಡುತ್ತೆ ತಿಳಿಯುವದು.

ಟಿ. ಚೊಕ ಣ್ಣ, ಅಸಿಸ್ಟೆಂಟ್ ಕಮಿಷನರ.

ಅಮೃತಮಹಲ್ ಇಲಾಖಾ.

ಪ್ರ ಕ ಟ ನೆ.

(ಮೊಕ್ಕಾಂ) ಹಾಸನ, ತಾರೀಖು 13–14ನೆ ನವಂಬರ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಅಮೃತಮಹಲ್ ಇಲಾಖಾ ಬಾಬತು ಹೆಂಣು ಮತ್ತು ಗಂಡು ರಾಸುಗಳನ್ನ ಚಾಲ್ತೀ ಇಸವಿ ಡಿಸೆಂಬರ್ ಮಾಹೆ 2 ನೆ ತಾರೀಖು ಲಾಗಾಯಿತು "ಹೊಳಲ್ಕೆರೆ" ಮೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಸದರಿ ಹರಾಜಾಗುವ ಸ್ಥಳಕ್ಕೆ ಹಾಜರಾಗಿ ರಾಸುಗಳನ್ನ ಖಡ ಸವಾಲ್‌ನಿಂದ ಪಡಿಯಬಹುದು.

ಹೆಚ್. ನಂಜುಂಡರಾಜೇ ಅರಸ್,
ಸೂಪರಿಂಟೆಂಡೆಂಟ್.

ನೋಟಿಸ.

ತೀರ್ಥಹಳ್ಳಿ, ತಾರೀಖು 9ನೆ ನವಂಬರು 1907.

ಈ ಕೆಳಗೆ ರುಜು ಮಾಡಿದ ತೀರ್ಥಹಳ್ಳೀ ಜವಳಿ ರಘುಪತಯ್ಯನವರ ಮಗ ಹನುಮಂತರಾಯನು ಇದರಿಂದ ಸಮಸ್ತ ಜನಗಳಿಗೂ ಶೃತಪಡಿಸುವದೇನಂದರೆ :—

1. ತೀರ್ಥಹಳ್ಳೀ ಜವಳಿ ಕೃಷ್ಣಯ್ಯನವರ ಮಕ್ಕಳು ವಿಠಲೈಯ್ಯನವರು ಮತ್ತು ಜವಳಿ ಸುಬ್ರಾಯರ ಮಕ್ಕಳು ಮಂಜಪ್ಪನವರು ಸಹಾ ನಮ್ಮ ಮೈನಾರಿಟಿ ಕಾಲದಾರಭ್ಯ ನಮ್ಮ ಜನಕತಂದೆ ರಘುಪತಯ್ಯನವರಿಗೆ ಸ್ವಾರ್ಜಿತವಾಗಿಯು ನಮಗೆ ಪಿತರಾರ್ಜಿತವಾಗಿಯೂ ಇರುವ ವೈವಟ್ಟಿನ ಆಡಳಿತ ನೋಡುತ್ತಾ ಇದ್ದರು. ಈ ಪೈಕಿ ವಿಠಲೈಯ್ಯನವರು ಈಚಿಗೆ ಮೃತಪಟ್ಟಿದ್ದಾರೆ.

2. ಈ ವಿಠಲೈಯ್ಯನವರು ಮತ್ತು ಈ ಮಂಜಪ್ಪನವರು ಇವರುಗಳ ಒಟ್ಟಿನ ಅಥವಾ ಇವರುಗಳ ಪೈಕಿ ಯಾರೊಬ್ಬರ ಹೆಸರಿಗೆ ಆಗಲೀ, ವ ಜವಳಿ ಶೇಷಗಿರಿಯಪ್ಪನವರು ಬಿನ್ ರಘುಪತಯ್ಯನವರು ಮತ್ತು ಈ ಶೇಷಗಿರಿಯಪ್ಪನವರ ತಮ್ಮ ಹನುಮಂತರಾಯನಾದ ನಾನು ಈರೀತಿ ಇರುವ ನಮ್ಮ ಒಟ್ಟಿನ ಅಥವಾ ನಮ್ಮ ಪೈಕಿ ಯಾರೊಬ್ಬರ ಹೆಸರಿಗೆ ಆಗಲಿ, ಕ್ರಯವಾಗಿರತಕ್ಕ ಆಸ್ತಿಗಳು ಮತ್ತು ಇವುಗಳಿಂದ ಸಾಲೆಸಾಲು ಬರತಕ್ಕ ಗುತ್ತಿಗೆ ಅಡಿಕೆ, ಗಡಿಭತ್ತ, ನಗದು ಗೇಣಿ ವ ಕಿಸ್ತು ವಗೈರೆಯು, ಮತ್ತು ಭೋಗ್ಯಾಧಾರ ವ ದೃಶ್ಯಾಧಾರ ವ ಮೈಸಾಲ ಪತ್ರ ಅಥವಾ ಪತ್ರಗಳ ಮತ್ತು ಪ್ರೊನೋಟ ಅಥವಾ ಪ್ರೊನೋಟುಗಳ ವಗೈರೆ ಡಾಕ್ಯುಮೆಂಟುಗಳ ಬಾಬತು ಅಸಲು ಹಣ ಇದರ ಬಡ್ಡಿ ವ ಬಡ್ಡಿಯ ಬಡ್ಡಿಯು, ಮತ್ತು ಗವರ್ನಮೆಂಟ ಸೇವಿಂಗ್ಸು ಬ್ಯಾಂಕಿನಲ್ಲಿ ಮತ್ತು ಸನ 1906–07ನೆ ಸೇಕಡಾ 4ರ ಮೈಸೂರ್ ಸ್ಟೇಟ್ ಲೋನ್ ಪ್ರೊನೋಟುಗಳ ಬಾಬತು ಇವರುಗಳ ಮತ್ತು ನಮ್ಮ ಮತ್ತು ನಮ್ಮ ಮಕ್ಕಳು ಮೈನರರು ಗಾರ್ಡಿಯನ್ ನಾವು ಈ ರೀತಿ ಇರತಕ್ಕ ಅಸಲು ಹಣ ಮತ್ತು ಇದರ ಬಡ್ಡಿಯು ಸಹಾ ಮೇಲ್ಕಂಡ ನಮ್ಮ ವೈವಟ್ಟಿಗೆ ಸಮ್ಮಂಧಪಟ್ಟಿದ್ದಾಗಿ ನಮಗೆ ಬರತಕ್ಕದ್ದಾಗಿರುತ್ತದೆ.

3. ಇದರಲ್ಲಿ ಈ ವಿಠಲೈಯ್ಯನವರಿಗೆ ಆಗಲಿ ಈ ಮಂಜಪ್ಪನವರಿಗಾಗಲಿ ಅಥವಾ ಈ ವಿಠಲೈಯನವರ ತಮ್ಮ ಶ್ರೀಪತಿರಾಯರ ಮಕ್ಕಳು 1ನೆ ರಂಗರಾವ್, 2ನೆ ಬಾಲಕೃಷ್ಣರಾವ್, 3ನೆ ಆನಂದರಾವ್, 4ನೆ ವಾಮನರಾವ್ 2–4 ಮೈನರು, ಗಾರ್ಡಿಯನ್ 1ನೆ ರಂಗರಾವ್ ಮತ್ತು ಈ ಮಂಜಪ್ಪನವರ ತಮ್ಮಂದರು 5ನೆ ಪಾಂಡುರಂಗಪ್ಪನವರು, 6ನೆ ರಾಮರಾಯರು, 7ನೆ ನಾಗೇಶರಾವ್ ಘವತಿ ಮಗೆ ಭಾಸ್ಕರರಾವ್ ಮೈನರ್, ಗಾರ್ಡಿಯನ್ ಮಂಜಪ್ಪನವರು, 8ನೆ ಗೋಪಾಲರಾವ್ ಬಿನ್ ಪಾಂಡುರಂಗಪ್ಪನವರು, 9ನೆ ಇವರ ತಮ್ಮ ಮೂಡ್ಲಗಿರಿಯಪ್ಪನವರು, 10ನೆ ಮಾಧವರಾವ್ ಬಿನ್ ರಾಮರಾಯರು ಇವರುಗಳಿಗೇ ಆಗಲಿ ಹಕ್ಕು ಬಾಧ್ಯತೆ ಇರುವದಿಲ್ಲಾ.

4. ಈ ವಿಠಲೈಯನವರು ಮತ್ತು ಈ ಮಂಜಪ್ಪನವರು ಈಚಿಗೆ ಈ ಮಂಜಪ್ಪನವರು ಮೇಲೆ ಕಂಡ ಇವರ ತಮ್ಮಂದರ ಮಕಳ ಮತ್ತು ತಮ್ಮಂದರ ಸಾಲಗಳಿಗೆ ಈ ನಮ್ಮ ವೈವಟ್ಟಿನ ಆಸ್ತಿಯನ್ನು ಗುರಿಪಡಿಸಿದ್ದು ಇದರ ಆಸ್ತಿಗಳಿಗೆ ಲೋಪ ಪಡಿಸಿದ್ದು ಮತ್ತು ಇನ್ನೂ ಲೋಪ ವಗೈರೆ ಪಡಿಸುವದಕ್ಕೆ ಪ್ರಯತ್ನಿಸುವದೂ, ಇನ್ನೂ ಕೆಲವು ಸಂಗತಿಗಳಲ್ಲಿ ನಮಗೆ ಮೋಸವೆ ನಿರ್ಬಂಧಪಡಿಸಿದ್ದೂ ಮತ್ತು ಇನ್ನೂ ಮೋಸ ವಗೈರೆ ಪಡಿಸುವದಕ್ಕೆ ಪ್ರಯತ್ನಿಸುವದೂ, ವಗೈರೆ ಅನೇಕ ವಿಧವಾದ ಈ ವೈವಟ್ಟಿಗೂ ಇದರ ಹಕ್ಕುದಾರರಾದ ನಮಗೂ ನಮ್ಮ ಪ್ರತಿನಿಧಿಯವರಿಗೂ ವಿರೋಧವಾದ ವಿದ್ಯಮಾನಗಳು ನಡಿಸಿದ್ದೂ ಮತ್ತು ಇನ್ನೂ ನಡಸುವದಕ್ಕೆ ಪ್ರಯತ್ನಿಸುವದೂ ವಗೈರೆ ನನ್ನ ನೋಟೀಸಿಗೆ ಬಂದಿರುವದರಿಂದ ನಾನು ಇವರ ಆಡಳತವನ್ನು ವಜಾ ಮಾಡಿಧೇನೆ.

5. ಮೇಲೆ 2ನೆ ಕಲಂನಲ್ಲಿ ಕಂಡ ಹೆಸರುಗಳಿಗೆ ಕ್ರಯವಾಗಿರತಕ್ಕ ಆಸ್ತಿಗಳ ಬಾಬತು ಗುತ್ತಿಗೆ ಅಡಿಕೆ, ಗಡಿಭತ್ತ, ನಗದು ಗೇಣಿ ವ ಕಿಸ್ತು ವಗೈರೆಯನ್ನು ಮತ್ತು ಭೋಗ್ಯಾಧಾರ ವಗೈರೆ ಡಾಕ್ಯೂಮೆಂಟುಗಳ ಸಮ್ಮಂಧ ಅಸಲು ಹಣ ಇದರ ಬಡ್ಡಿ ವ ಬಡ್ಡಿಯ ಬಡ್ಡಿಯನ್ನೂ ಈ ಮುಂತಾದ್ದು ವಗೈರೆ ಏಷ್ಟನ್ನಾದರೂ ಮೇಲೆ 3ನೆ ಕಲಂಮಿನಲ್ಲಿ ನಮೂದಿಸಿದ ಈ ವೈವಟ್ಟಿಗೆ ಹಕ್ಕುದಾರರಲ್ಲದವರ ಕಡಿಗೆ ವಸೂಲು ಕೊಡಕೂಡದು. ಕೊಟ್ಟರೆ ನಮ್ಮ ವೈವಟ್ಟಿಗೆ ವ ನನಗೆ ಬಂದಂತೆ ನಾನು ಒಪ್ಪಿಕೊಳ್ಳುವದಿಲ್ಲಾ. ಮೇಲ್ಕಂಡ ಪತ್ರಗಳು ವಗೈರೆ ಇವರು ಇದರ ಆಡಳತ ನೋಡುತ್ತಾ ಇರುವಾಗ್ಯೆ ಇವರ ಹೆಸರಿಗೆ ನಾಮಪೂರ್ತ ಹುಟ್ಟಿದ್ದಾಗಿರುತ್ತವೆ. ಈ ಮೇಲೆ ಕಂಡ ಆಸ್ತಿಗಳ ಪೈಕಿ ಅಥವಾ ಡಾಕ್ಯೂಮೆಂಟುಗಳ ಪೈಕಿ ಏಷ್ಟನ್ನಾದರೂ ಈ ವೈವಟ್ಟಿಗೆ ಹಕ್ಕುದಾರರಲ್ಲದ ಮೇಲೆ ವಿವರಿಸಿದ ಈ ಮಂಜಪ್ಪನವರು ವಗೈರೇರ ಪೈಕಿ ಯಾರಿಂದಲೇ ಆಗಲಿ ಕ್ರಯ ಪರಿವರ್ತನಾ ಮೂಲಕ ಯಾರಾದರೂ ಪಡಕೊಂಡರೆ ಆಗಲಿ ಮೋಡೂರು ವಗೈರೆ ಮೂಲಕ ಪರಭಾರೆ ಪಡಕೊಂಡರೆ ಆಗಲಿ ಅದಕ್ಕೆ ನಾನು ಒಪ್ಪಿಕೊಳ್ಳುವದಿಲ್ಲ ಮತ್ತು ಹಾಂಗೆ ಪಡಕೊಂಡವರ ಕಡಿಗೆ ಏಷ್ಟನ್ನಾದರೂ ವಸೂಲು ಕೊಟ್ಟಾಗ್ಯೂ ಅದನ್ನು ನಾನು ಒಪ್ಪಿಕೊಳ್ಳುವದಿಲ್ಲ ಎಂಬುವದನ್ನು ತಿಳದಿರತಕ್ಕದ್ದು. ಇವರುಗಳು ಮತ್ತು ನಾವು ಸಹಾ ಒಂದೇ ಮನೆಯಲ್ಲಿ ವಾಸವಾಗಿದ್ದಾಗ್ಯೂ ಈ ವೈವಟ್ಟಿನಲ್ಲಿ ಇವರುಗಳಿಗೆ ಏನೂ ಹಕ್ಕು ಇರುವದಿಲ್ಲಾ ಎಂಬುವದನ್ನು ಸಹಾ ತಿಳದಿರತಕ್ಕದ್ದು.

ತೀರ್ಥಹಳ್ಳೀ ಜವಳಿ ಹನುಮಂತರಾಯನ ರುಜು.

ಮೈಸೂರ ಗೆಜೆಟ ಚಂದಾದಾರು ವಗ್ಯೆರೆ.

ಮೈಸೂರ ಗೆಜೆಟ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ ದ್ದು.

	ಚಂದಾ.	ಟಪ್ಪಾಲ ಹಾಸಲ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಅ.	ರೂ. ಅ.
ಇಂಗ್ಲಿಷ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲಿಷ ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಚಷ ಮಾಹೇ ಯಾ ಕ್ವಾರಟರಿಗೆ		ದಾಮೂಷಾಯಿ ಪ್ರಕಾರ ದರಗಳು
		ರೂ. ಅ.
ಚಾಲತಿ ವರುಷದ ಗೆಜೆಟ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.		0 8

ಹಿಂದಿನ ವರುಷದ ಗೆಜೆಟ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮರ್ಕುಂ 155ನೆ ನಂಬರ ಉಳ್ಳ ಗವರ್ನಮೆಂಟ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ ಮೈಸೂರು ಸೀಮೆಯಲ್ಲಿನ ಪಟೇಲ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲದಾರರಿಂದ ಒಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ 21ನೆ ಮರ್ಕುಂ 24205—6—ಜಿ. 6200ನೆ ನಂಬರ ಗವರ್ನಮೆಂಟ ಆರಡರ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ ಮಾಡಲ್ಪಟ್ಟಿರುತ್ತೆ.

ಸಿವಿಲ ಕೋರ್ಟನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇಷನ ಅನುಸರಿಸಿ ಸರ್ಟಿಫಿಕೇಟ ಬಗ್ಯೆ ನೋಟಿಸ್‌ಗಳು:—		ರೂ. ಅ.
ಮೊದಲನೇ ದಫಾ ಫಾಯಿಷ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ		2 8
ಎರಡನೇ ಸಲ ವ ಆತರುವಾಯು ಪ್ರತಿ ಆವರ್ತಿಗೂ ಡಿಟೋ		1 4
ಸಿವಿಲ ಪ್ರೊಸಿಡ್ಯೂರ ಕೋಡಿನ 347ನೆ ಸೆಕ್ಷನ ಅನುಸರಿಸಿ ದಿವಾಳಿ ಅಪ್ಲಿಕೇಷನಗಳ ಬಗ್ಯೆ ನೋಟಿಸ್‌ಗಳಿಗೆ:—		
ಮೊದಲನೇ ಸಲಕ್ಕೆ		5 0
ಎರಡನೇ ವ ಆತರುವಾಯು ಪ್ರತಿ ದಫಾಕ್ಕೆ		2 8
ಸಿವಿಲ ಪ್ರೊಸಿಡ್ಯೂರ ಕೋಡಿನ 354ನೆ ಸೆಕ್ಷನ ಅನುಸರಿಸಿ ಸಿವಿಲ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ ಚಾರ್ಜ ಪ್ರಕಟಿಸಲ್ಪಡುತ್ತವೆ.		
ಡ್ಯೂಪ್ಲಿಕೇಟ ಕಾಪೀ ಪಟ್ಟೆ ವಗ್ಯೆರೆ ಕೊಡುವ ಬಗ್ಯೆ ರೆವಿನ್ಯೂ ಆಫಿಸರಗಳು ಕೊಡುವ ನೋಟಿಸಗಳಿಗೆ:—		
ಮೊದಲನೇ ಸಲಕ್ಕೆ	ಪುಟ 1ಕ್ಕೆ	10 0
ಎರಡನೇ ಸಲ ವ ಆತರುವಾಯು ಪ್ರತಿ ಸಲಕ್ಕೂ		5 0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ ಮಾಡಲ್ಪಡುತ್ತೆ:—		
ಮೊದಲನೇ ದಫಾ ಇಂಗ್ಲೀಷ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ	0 8
ಎರಡನೇ ದಫಾ ಡಿಟೋ	ಡಿಟೋ	0 6
ಮೂರನೇ ವ ಆತರುವಾಯು ಪ್ರತಿ ಸಲಕ್ಕೆ		0 4

ಷರಾ.—ಗೆಜೆಟ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟನೆಗಳ ಛಾರ್ಜು ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ ಬಗ್ಯೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ ಮಜಕೂರಿಗೆ ದಾಖಲೆ ಬಗ್ಯೆ ರವಾನಿಸತಕ್ಕದ್ದು. ಮನಿ ಆರ್ಡರ ವಗ್ಯೆರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ ಗವರ್ನಮೆಂಟ ಜನರಲ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರನಾಮೆಗಳೂ ಆ ಗೆಜೆಟ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ವಳಗಾಗಿ ಕಂಪೈಲರ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯು ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ ಇಲ್ಲ.

ಸಿ. ಹೆಚ್. ಪಟ್ಟೆ,
ಕಂಪೈಲರ, ಮೈಸೂರ ಗೆಜೆಟ.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಛಾಪಿಸಲ್ಪಟ್ಟದ್ದು. [ಸಂ. 4

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 5, ಸನ್ 1907.

II ನೆ ಭಾಗ.

ಇಂಡ್ಯ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಹೊರಡೋಣವಾದ ಇಸ್ತಿಹಾರನಾಮೆಗಳು.

ಅಬ್ಕಾರಿ ಇಲಾಖೆ.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 27ನೆ ನವೆಂಬರ್ 1907, ಮೈಸೂರು.

ಈ ಕೆಳಗೆ ಕಾಣಿಸಿರುವ ಇನಾಂ ವಗೈರೆ ಗ್ರಾಮಗಳ ಮಾನ್ಯದಾರ್ರಿಗೆ ಆಯಾ ಗ್ರಾಮದ ಶೇಂದಿ ಹುಟ್ಟುವಳಿ ಹಕ್ಕು ಇರು... ವಿಚಾರದಲ್ಲಿ ಆಯಾ ಗ್ರಾಮದ ಸದರಿಗೆ ಕಾಣಿಸಿರುವ ತಾರೀಖಿನ ದಿನ ವಿಚಾರಣೆ ನಡಿಸಲ್ಪಡುತ್ತೆ.

ಆಯಾ ಗ್ರಾಮಕ್ಕೆ ಸಮ್ಮಂಧಪಟ್ಟ ಇನಾಂದಾರರುಗಳು ಖುದ್ದಾಗಿಯಾಗಲೀ ಅಥವಾ ಅವರಿಂದ ಕ್ರಮವಾದ ಮೊಖ್ತ್ಯಾ... ನಾಮೆ ಹೊಂದಿದವರಾಗಲೀ ಹಕ್ಕು ಸ್ಥಾಪಿಸುವದಕ್ಕೆ ಅವಶ್ಯವಾದ ಸನ್ನದು, ಇನಾಂಸೆಟಲ್‌ಮೆಂಟ್ ರಿಜಿಸ್ಟರ ಕಾಪಿ, ಟೈಟಲ್... ಡೀಡು, ಮುಚ್ಚಳಿಕೆಗಳೇ ಮುಂತಾದ ವಿಶಿಷ್ಟ ದಾಖಲೆಗಳ ಸಹಿ ಹೀರಿಂಗ್ ತಾರೀಖು ದಿವಸ ಮೈಸೂರಲ್ಲಿ ನಮ್ಮ ಆಫೀಸು ಬ... ಹಾಜರಾಗತಕ್ಕದ್ದು.

ಹಾಗೆ ಹಾಜರಾಗದೇ ತಪ್ಪಿದ್ದಲ್ಲಿ ರೂಲ್ಸು ಮೇರೆ ಎಕ್ಸ್‌ಪಾರ್ಟಿ ಫೈಸಲ್ಮಾಡುತ್ತೆಯಾಗಿ ಈ ಮೂಲಕ ತಿಳಿಸಿದೆ.

ತಾಲ್ಲೂಕು ಹೆಸರು.	ಇನಾಂ ಗ್ರಾಮದ ಹೆಸರು.	ಹೀರಿಂಗ್ ತಾರೀಖು.
ಎಡತೊರೆ	ಅರಕೆರೆ ಕೊಪ್ಪಲ್ ...	1908ನೆ ಜನವರಿ ತಾ॥ 3.
ಡಿಟ್ಟೋ ...	ಕಲ್ಲೀನಹಳ್ಳಿ ಕೊಪ್ಪಲ್ ...	
ಡಿಟ್ಟೋ ...	ಚಾಮುಲಾಪುರ ...	
ಡಿಟ್ಟೋ ...	ಕಲ್ಲಹಳ್ಳಿ ...	
ಡಿಟ್ಟೋ ...	ವಡ್ಡರಹಳ್ಳಿ ...	
ಡಿಟ್ಟೋ ...	ಮೆಟ್ಟಿಕೆರೆ ...	1908ನೆ ಜನವರಿ ತಾ॥ 4.
ಡಿಟ್ಟೋ ...	ಹೊಸೂರು ...	
ಡಿಟ್ಟೋ ...	ಯರಮನುಗಾನಹಳ್ಳಿ ...	
ಡಿಟ್ಟೋ ...	ಗುಡಗಹಳ್ಳಿ ...	

ತಾಲ್ಲೂಕು ಹೆಸರು.	ಇನಾಂ ಗ್ರಾಮದ ಹೆಸರು.	ಹೀರಿಂಗ್ ತಾರೀಖು.
ಹುಣಸೂರು	ಆಹ್ವಾಳಾ	1908ನೆ ಜನವರಿ ತಾ॥ 6.
ಡಿಟೋ	ತುಂಗಾ	
ಹೆಗ್ಗಡದೇವನಕೋಟೆ	ಗಂಗಡಹೊಸಹಳ್ಳಿ	
ಡಿಟೋ	ಚಕ್ಕೂರು	
ಡಿಟೋ	ಮಲಿಯೂರು	
ಡಿಟೋ	ಸಂಕಹಳ್ಳಿ	
ಚಾಮರಾಜನಗರ	ಮೂಡ್ಲು ಅಗ್ರಹಾರ	1908ನೆ ಜನವರಿ ತಾ॥ 7.
ಡಿಟೋ	ಉಮ್ಮತ್ತೂರು	
ಡಿಟೋ	ನವಲೂರು	
ಡಿಟೋ	ಯಲ್ಲುಕೂರು	1908ನೆ ಜನವರಿ ತಾ॥ 8.
ಡಿಟೋ	ಸಪ್ಪಯ್ಯನಪುರ	
ಡಿಟೋ	ಹಂಡರಕಳ್ಳಿ	
ಡಿಟೋ	ಹನಹಳ್ಳಿ	
ಡಿಟೋ	ಬೆಂಡರವಾಡಿ	
ಡಿಟೋ	ಕಟ್ನೆಪುರ	
ಡಿಟೋ	ಹೆಗ್ಗೊಟಾರ	1908ನೆ ಜನವರಿ ತಾ॥ 9.
ಡಿಟೋ	ಶಿವಪುರ	
ಡಿಟೋ	ಬೇಡರಪುರ	
ಡಿಟೋ	ಹಂಗರೆಪುರ	
ಡಿಟೋ	ಪಡ್ಡಲಿಕೂಡು ಹೊಸಹಳ್ಳಿ	

ಎ. ಕೆ. ಸೈಯದ್ ತಾಜ್‌ಪಿರಾ,
ಡಿಸ್ಟ್ರಿಕ್ಟು ಎಕ್ಸೈಜ್ ಆಫಿಸರ, ಮೈಸೂರು.

ಫಾರೆಸ್ಟು ಇಲಾಖಾ.

ಸಂಟಲ್ ಹರಾಜ್ ನೋಟಿಫಿಕೇಷನ್.

ತಾರೀಖು 24ನೆ ಆಗಸ್ಟು 1907ನೆ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಸರಕಾರದ ಶ್ರೀಗಂಧದ ಸ್ವಾಲಿಯಾನಾ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಆದರದರ ಬಾಜೂದಲ್ಲಿ ನಮೂದಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರುಗಳಿಂದ ನಡೆಸಲ್ಪಡುವದು :—

ಡಿಸ್ಟ್ರಿಕ್ಟು.	ಕೋಠಿ.	ಹರಾಜು ತಾರೀಖು.	ಸುಮಾರು ಮೊತ್ತ.
			ಟನ್ನುಗಳು.
ಶಿವಮೊಗ್ಗ	ತೀರ್ಥಹಳ್ಳಿ	18ನೆ ನವಂಬರ 1907	200
ಡಿಟೋ	ಸಾಗರ	21ನೆ ಡಿಟೋ	150
ಡಿಟೋ	ಶಿವಮೊಗ್ಗ	25ನೆ ಡಿಟೋ	500
ಕಡೂರು	ತರೀಕೆರೆ	28ನೆ ಡಿಟೋ	250
ಡಿಟೋ	ಚಿಕ್ಕಮಗಳೂರು	2ನೆ ಡಿಸೆಂಬರ 1907	350
ಹಾಸನ	ಹಾಸನ	5ನೆ ಡಿಟೋ	150
ಬೆಂಗಳೂರು	ಬೆಂಗಳೂರು	9ನೆ ಡಿಟೋ	100
ಮೈಸೂರು	ಶ್ರೀರಂಗಪಟ್ಟಣ	12ನೆ ಡಿಟೋ	250
ಡಿಟೋ	ಹುಣಸೂರು	16ನೆ ಡಿಟೋ	500
		ಜುಮಲಾ	2,450

2. ಪ್ರತಿ ಕೋಠಿಯಲ್ಲಿಯೂ ಹರಾಜಾಗುವ ಕ್ಲಾಸುವಾರು ಲಾಟು, ಮೊತ್ತ ಮತ್ತು ಇತರ ತಪಶೀಲುಗಳು ಬರುವ ಅಕ್ಟೋಬರ್ ಮಾಹೆಯ ಆಖೈರುನಲ್ಲಿ ತಿಳಿಯಪಡಿಸುತ್ತೆ.

ಎಂ. ಮುತ್ತಣ್ಣ,
ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ಬೆಂಗಳೂರು ಡಿಸ್ಟ್ರಿಕ್ಟ್.

ತಾರೀಖು 29ನೆ ನವಂಬರ್ 1907.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಜೋಡಿ ನರಗನಹಳ್ಳಿ ಗ್ರಾಮದ ಜೋಡಿದಾರ್ ರಾಮಸ್ವಾಮ್ಯೆಯ್ಯಂಗಾರಿಂದ ಬರಬೇಕಾದ ಜವಿರ್ಾ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ನೆಲಮಂಗಲ ತಾಲ್ಲೂಕು ಕಛೇರಿಯಲ್ಲಿ 1908ನೆ ಇಸವಿ ಜನವರಿ 6ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಥಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1906—07ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 85—6—2 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪ್ರತಿಕೆಯನ್ನ ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರ್ಟಿಫಿಕೇಟ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ವಲ್ಪ ಲೋಪಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಮೂಲಿಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ಡಿಸ್ಟ್ರಿಕ್ಟ್	ತಾಲ್ಲೂಕು	ಹೋಬಳಿ	ಗ್ರಾಮ	ಖಾತೆದಾರರ ಹೆಸರು	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಖಾನೇಷುಮಾರಿ ನಂಬರು	ಅಂದಾಜು ಕ್ರಯ	ಜಮೀನು. ನಂಬರು ಸರ್ವೆ	ಸ್ಥಳ ಮತ್ತು ಜಮೀನು ವರ್ಗ	ವಿಸ್ತೀರ್ಣ	ಕಂದಾಯ	ಅಂದಾಜು	ಹರಾಜಿಗೆ ಕಾರಣವಾದ ಬಾಕಿ	ಹರಾಜು ದಾರನು ಪಾವತಿ ಮಾಡಬೇಕಾದ ಕಂದಾಯ
ಬೆಂಗಳೂರು	ನೆಲಮಂಗಲ	ದಾಸನಪುರ	ಜೋಡಿ ನರಗನಹಳ್ಳಿ	ರಾಮಸ್ವಾಮ್ಯೆಯ್ಯಂಗಾರು	ಮನೆಗಳು 258	600	...	ಖರಾಬು ... ಖುಷ್ಕಿ ... ತರಿ ಬಾಗಾಯಿತು. ಜುಮ್ಲಾ	ಎ. ಗು. 89 24 469 32 6 23 0 5 566 4	ರೂ. ಆ. ಪೈ. 11 0 0 315 1 6 28 1 9 0 4 0 354 7 3	ರೂ. 600	ರೂ. 115 ಆ. 7 ಪೈ. 2	ರೂ. 35 ಆ. 6 ಪೈ. 2

ಷರಾ—ಜೋಡೀದಾರರುಗಳಿಂದಲಾಗಲಿ ಯಾ ಖಾಯಂಗುತ್ತಾದಾರರುಗಳಿಂದಲಾಗಲಿ ಬಾಧ್ಯತೆ ಮೂಲಕ ಇವರುಗಳಿಗೆ ಹಿಂದೆಯಿದ್ದವರಿಂದಲಾಗಲಿ ಉಂಟುಮಾಡಲ್ಪಟ್ಟ ತನಖಾ ಹಿಡುವಳಿಗಾಗಲಿ ದೇಣೆಗಳಿಗೆ ಆಗಲಿ ಮತ್ತು ಹಕ್ಕುಗಳಿಗಾಗಲಿ ಅಥವಾ ಮತ್ಯಾವ ಸಂಬಂಧಗಳಿಗಾಗಲಿ ಸದರಿ ಹರಾಜು ಒಳಪಟ್ಟಿರುವದಿಲ್ಲ.

ಡಿ. ದೇವರಾಜೆ ಅರಸ್,
ಡೆಪ್ಯುಟ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟ್.

ತಾರೀಖು 17ನೆ ಮಾಹೆ ನವಂಬರು 1907.

ಸರ್ 1908ನೆ ಇಸವಿ ಜನವರಿ ಮಾಹೆ 16ನೆ ತಾರೀಖಿನಲ್ಲಿ ಪ್ರಾರಂಭವಾಗಿ ಒಂದು ವಾರದ ವರೆಗೂ, ಎಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ನಡಿಯುವ ಶ್ರೀರಾಮದೇವರ ರಥೋತ್ಸವ ಕಾಲದಲ್ಲಿ ಗಾರ್ನ್ಮೆಂಟಿನಿಂದ ತಲುಪಿರುವ 17—9—07 ನೆ ಮುರ್ಕುಂ 2585-95—L. B. (462-06)—3ನೆ ನಂಬರು ಪ್ರೊಸೀಡಿಂಗ್ಸ್ ಪ್ರಕಾರ ದನಗಳ ಪ್ರದರ್ಶನವೂ ನಡಿಯುತ್ತೆ. ಬಾಕಿ ತಪಶೀಲುಗಳೆಲ್ಲಾ 1907ನೆ ನವಂಬರ್ 21ನೆ ಮುರ್ಕುಂ 46ನೆ ನಂಬರು ಮೈಸೂರು ಗೆಜೆಟ್ಟಿನ 2ನೆ ಭಾಗದ 545ನೆ ನಂಬರು ಪುಟದಲ್ಲಿ ನೋಡಬೇಕು.

ಇಸ್ತಿಹಾರ್‌ನಾಮೆ

ತಾರೀಖು 14ನೆ ನವಂಬರ್ 1907.

ತಿರಮಕೂಡ್ಲು ನರಸೀಪುರ ತಾಲ್ಲೂಕು ಮೂಗೂರು ಹೋಬಳಿಗೆ ಸೇರಿದ ಕಾಯಂಗುತ್ತಾ ಹ್ಯಾಕನೂರು ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ತಿರಮಕೂಡ್ಲು ನರಸೀಪುರ ತಾಲ್ಲೂಕು ಕಚೇರಿಯಲ್ಲಿ 1908ನೆ ಜನವರಿ 30ನೆ ತಾರೀಖು ದಿವಸ ಬಹಿರಂಗವಾಗಿ ಹರಾಜ್ ಮಾಡಿಸಲ್ಪಡುತ್ತೆ ಯು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ ಬಗ್ಗೆ 1907ನೆ ನವಂಬರ್ 28ನೆ ಮುರ್ಕುಂ 4 ನೆ ನಂಬರ್ ಮೈಸೂರು ಗೆಜೆಟ್ಟಿನ 11ನೆ ಭಾಗದ 554ನೆ ನಂಬರ್ ಪೇಜು ನೋಡತಕ್ಕದ್ದು.

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ನೋಟಿಸ್.

ಬ ತಾರೀಖು 26ನೆ ನವಂಬರ್ 1907.

ಸರ್ 1907ನೆ ನವಂಬರ್ ಮಾಹೆ 21ನೆ ತಾರೀಖಿನ ಮೈಸೂರು ಗೆಜೆಟ್ 2ನೆ ಭಾಗದ 545ನೆ ನಂಬರ್ ಪುಟದಲ್ಲಿ ಚುಂಚನಕಟ್ಟೆ ಜಾತ್ರೆ ಕಾಲದಲ್ಲಿ ನಡೆಯುವ ಪ್ರದರ್ಶನಶಾಲೆಯ ವಿಷಯವಾದ ಇಸ್ತಿಹಾರಿನಲ್ಲಿ "ಬಿಟ್ಟಿದಪೂರ" ಎಂಬುವದಕ್ಕೆ ಬದಲಾಗಿ "ಬಿಟ್ಟಿರ ದನ" ಎಂಬುವದಾಗಿ ಓದಬೇಕು.

1907ನೆ ಇಸವಿ ನವಂಬರು ತಾರೀಖು 2ನೆ ಶನಿವಾರ ಮಧ್ಯಾಹ್ನ 2 ಘಂಟೆಯಲ್ಲಿ ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳು ಸೇರಿ ನಡೆಸಿದ ಪ್ರೊಸೀಡಿಂಗ್ಸ್.

ಎಕ್ಸ್ ಅಫಿಷಿಯೊ ಮೆಂಬರುಗಳು.

ಹಾಜರು.

1. ಮ॥ ಎಂ. ಕಾಂತರಾಜೆ ಅರಸಿನವರು, ಬಿ. ಎ., ಪ್ರೆಸಿಡೆಂಟ್ ಸಾಹೇಬರವರು.
2. ,, ಎಸ್. ವೈದ್ಯನಾಥೈಯ್ಯರವರು, ನಂಜನಗೂಡು ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್.
3. ,, ಎ. ಸುಬ್ರಹ್ಮಣ್ಯ ಐಯ್ಯರವರು, ಬಿ. ಎ., ಮೈಸೂರು ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್.
4. ,, ಬಿ. ಕೃಷ್ಣರಾಯರವರು, ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್.
5. ,, ಟಿ. ಕೆ. ಸುಂದರರಾಜೈಯ್ಯಂಗಾರ್ರವರು, ಟ್ರೆಜರಿ ಅಸಿಸ್ಟೆಂಟ್ ಕಮಿಷನರು ಮತ್ತು ವೈಸ್ ಪ್ರೆಸಿಡೆಂಟರು.
6. ,, ಇ. ಎಸ್. ಕೃಷ್ಣಸ್ವಾಮಿ ಐಯ್ಯರವರು, ಬಿ. ಎ., ಎಂ. ಬಿ. ಸಿ. ಎಂ., ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು.
7. ,, ಬಿ. ಸುಬ್ಬರಾಯರವರು, ಎಲ್. ಸಿ. ಇ., ಮೈಸೂರು ಡಿವಿಜನ್ ಎಕ್ಸಿಕ್ಯುಟಿವ್ ಇಂಜಿನಿಯರು.
8. ,, ಎಂ. ರಾಮಸ್ವಾಮಯ್ಯನವರು, ಬಿ. ಎ., ಮೈಸೂರು ಡಿಸ್ಟ್ರಿಕ್ಟ್ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರು.

ಇತರ ಮೆಂಬರುಗಳು.

ಲೋಕಲ್ ಬೋರ್ಡ್ ರೂಲ್ಸ್ 3ನೆ ಪ್ಯಾರಾ (ಡಿ) ಕ್ಲಾಸಿನಲ್ಲಿ ನಮೂದಾಗುವ ಮೇರೆ.

9. ಮ॥ ಲಿಂಗೇಗೌಡರು, ಮೈಸೂರು ತಾಲ್ಲೂಕು.
10. ,, ಷಡಗೋಪಾಚಾರ್ಯರು, ಎಡತೊರೆ ತಾಲ್ಲೂಕು.
11. ,, ಉಂಡವಾಡಿ ನರಸಿಂಗರಾಯರು, ಹುಣಸೂರು ತಾಲ್ಲೂಕು.
12. ,, ಪಿ. ಸುಬ್ಬರಾಯರು, ಹೆಗ್ಗಡದೇವನಕೋಟೆ ತಾಲ್ಲೂಕು.
13. ,, ಶಾಮೈಯ್ಯಂಗಾರ್ರು, ಚಾಮರಾಜನಗರ ತಾಲ್ಲೂಕು.
14. ,, ಟಿ. ಎಸ್. ಕೃಷ್ಣರಾಯರು, ನಂಜನಗೂಡು ತಾಲ್ಲೂಕು.
15. ,, ಗಂಜಾಂ ವೆಂಕಟರಾವ ಶೆಟ್ಟರು, ತಿ. ನರಸೀಪುರ ತಾಲ್ಲೂಕು.
16. ,, ಬಿ. ನರಸಿಂಗರಾಯರು, ಶ್ರೀರಂಗಪಟ್ಣ ತಾಲ್ಲೂಕು.
17. ,, ಕೃಷ್ಣಶಾಸ್ತ್ರಿಗಳು, ಕೃಷ್ಣರಾಜಪೇಟೆ ತಾಲ್ಲೂಕು.

18. ಮಿ|| ಚಂದ್ರಶೇಖರೈಯ್ಯನವರು, ನಾಗಮಂಗಲ ತಾಲ್ಲೂಕು.
19. ,, ಶಂಕರಯ್ಯನವರು, ಮಳವಳ್ಳಿ ತಾಲ್ಲೂಕು.
20. ,, ಎಂ. ಜಿ. ಶಾಮೈಯ್ಯಂಗಾರ್ಯರವರು, ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು.
21. ,, ಗುರುಕಾರ ನಂಜಪ್ಪನವರು, ಗುಂಡ್ಲುಪೇಟೆ ತಾಲ್ಲೂಕು.
22. ,, ಹಸರಾಳು ಲಿಂಗಂಣೈಯ್ಯನವರು, ಮಂಡ್ಯ ತಾಲ್ಲೂಕು.

ಲೋಕಲ್ ಬೋರ್ಡ್ಸ್ ರೂಲ್ಸ್ 8ನೆ ಪ್ಯಾರಾ (ಇ) ಕ್ಲಾಸ್ ಮೇರೆ.

23. ,, ಬಳೆ ಬಸವಂಣನವರು, ಎಡತೊರೆ ತಾಲ್ಲೂಕು.
24. ,, ಚಿಕ್ಕ ಸುಬ್ಬರಾಯರು, ಹುಣಸೂರು ತಾಲ್ಲೂಕು.
25. ,, ಎ. ಅಂಣೈಯ್ಯಪಂಡಿತರು.
26. ,, ವಿ. ರಾಘವಾಚಾರ್ಯರವರು, (ಗೈರ್‌ಹಾಜರು).
27. ,, ರೆವರೆಂಡ್ ಡಿ. ಎಫ್. ಲ್ಯಾರೆಟ್ ಸಾಹೇಬರವರು, ಗಂಜಾಂ ರೋಮನ್ ಕ್ಯಾಥಲಿಕ್ ಪಾದ್ರಿಗಳು.
28. ,, ಟಿ. ಎಂ. ಮಾರಕವಾಲುದ್ದೀನ್ ಅಲ್ಲೀಖಾನ್ ಸಾಹೇಬರವರು, ರಿಟೈರ್ಡ್ ಅಸಿಸ್ಟೆಂಟ್ ಕಮಿಷನರವರು ಮತ್ತು ಹುಜೂರು ಮು|| ಸಾಹೇಬರು.
29. ,, ವೆಂಕಟಸಾಮೈಯ್ಯನವರು, ಚಾಮರಾಜನಗರ ತಾಲ್ಲೂಕು.
30. ,, ಕೃಷ್ಣಮಾಚಾರ್ಯರು, ತಿ. ನರಸೀಪುರ ತಾಲ್ಲೂಕು.

ನೋಟ್:—ಹೆಗ್ಗಡದೇವನಕೋಟೆ ಮತ್ತು ನಾಗಮಂಗಲದ ತಾಲ್ಲೂಕುಗಳ ಅಮಲ್ದಾರುಗಳು ವಿನಹ ಬಾಕಿ ಎಲ್ಲಾ ತಾಲ್ಲೂಕು ಅಮಲ್ದಾರುಗಳು ಹಾಜರಾಗಿದ್ದರು. ಶ್ರೀರಂಗಪಟ್ಟಣದ ತಾಲ್ಲೂಕು ಅಮಲ್ದಾರರವರು ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಛಾರ್ಜಿನಲ್ಲಿದ್ದಾರೆ.

1. ಈ ಕೆಳಗೆ ನಮೂದಾಗುವವುಗಳನ್ನು ಓದಿ ರಿಕಾರ್ಡ್ ಮಾಡಲಾಯಿತು.

(a) ಅಜಮಾಯಿಷಿ ತರೀಖು ಕೆಲಸ ಮಾಡುವದಕ್ಕಾಗಿ ಒಂದು ಸಾವಿರ ರೂಪಾಯಿ ಬೆಲೆ ಬಾಳುವ ಭಾವಿ ತೋಡುವ ಕೆಲಸದ ಯಂತ್ರಗಳನ್ನು ಕೋಲಾರದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಕೊಂಡುಕೊಳ್ಳಬಹುದೆಂದು ಗವರ್ನಮೆಂಟಿನಿಂದ ಸಾದರಾಗಿರುವ 7—8—1907ನೆ ಮರ್ಕುಂ R. 971-81—Agri. 121-06-5ನೆ ನಂಬರು ಹುಕುಂ:—

(b) ಮೈಲೇಜ್ ಮತ್ತು ಭತ್ಯ ತೆಗದುಕೊಳ್ಳುವದಕ್ಕೆ ಅನರ್ಹರಾದ ಸರ್ಕಾರಿ ನೌಕರರುಗಳು ಸರ್ಕಾರಿ ಕೆಲಸದ ಮೇಲೆ ಸಂಚಾರ ಮಾಡುತ್ತಿರುವಾಗ ಟೋಲ್ ಎಂಬ ಸುಂಕ ಕೊಡೋಣದರಿಂದ ವಿನಾಯಿಸಲ್ಪಡಬೇಕೆಂದು ಗವರ್ನಮೆಂಟಿನಿಂದ ತಲಪಿರುವ 10—8—1907ನೆ ಮರ್ಕುಂ 1360-8—L. B. 393-06-2ನೆ ನಂಬರು ಆರ್ಡರು.

(c) ಅಮೃತಮಹಲ್ ಗೂಳಿಗಳನ್ನು ಸರಬರಾಯಿ ಮಾಡತಕ್ಕ ವಿಚಾರದಲ್ಲಿ ಗವರ್ನಮೆಂಟಿನಿಂದ ಸಾದರಾಗಿರುವ 9—9—1907ನೆ ಮರ್ಕುಂ 2311-9—L. B. 28?-06-2ನೆ ನಂಬರು ಆರ್ಡರು.

(d) ಎಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ನಡೆಯುವ ವಾರ್ಷಿಕ ದನಗಳ ಪ್ರದರ್ಶನದ ಸಂದರ್ಭದಲ್ಲಿ ಬಹುಮಾನ ಕೊಡುವದಕ್ಕಾಗಿ ಮುಜರಾಯಿ ಫಂಡಿನಿಂದ 100 ರೂಪಾಯಿಯೂ ಡಿಸ್ಟ್ರಿಕ್ಟ್ ಫಂಡಿನಿಂದ 100 ರೂಪಾಯಿಯೂ ಜುಮ್ಲಾ ಎರಡುನೂರು ರೂಪಾಯಿಗಳನ್ನು ಮಂಜೂರು ಮಾಡಿರುವದಾಗಿ ಗವರ್ನಮೆಂಟಿನಿಂದ ಸಾದರಾಗಿರುವ 17—9—07ನೆ ಮರ್ಕುಂ 2585-95—L. B. 462-06-3ನೆ ನಂಬರು ಆರ್ಡರು.

(e) ಯೂನಿಯನ್ ಸ್ಥಾಪನೆ ಮಾಡಲ್ಪಟ್ಟ ಗ್ರಾಮಗಳ ಬಡಾವಣೆಗಾಗಿ ಬೇಕಾಗುವ ನಿವೇಶನಗಳ ಲಾಗವಡು ಮೊಬಲಗನ್ನು ಗವರ್ನಮೆಂಟಿನಿಂದ ಕೊಡಬೇಕೆಂದು ಗವರ್ನಮೆಂಟಿನಿಂದ ತಲಪಿರುವ 25—9—1907ರ ಮರ್ಕುಂ R. 2233-42—L. R. 184-07-?ನೆ ನಂಬರು ಆರ್ಡರು.

(f) ಹೋಬಳಿ ಸ್ಕೂಲ್ ಮತ್ತು ತಾಲ್ಲೂಕು ಬ್ರಾಂಚು ಸ್ಕೂಲುಗಳ ಅಪ್ಪರ್‌ಪ್ರೈಮರಿ II ಮತ್ತು IIIನೆ ತರಗತಿಗಳಲ್ಲಿ ವ್ಯಾಸಂಗ ಮಾಡುವ ಬಾಲಕರಿಂದ ಫೀ ವಸೂಲ್ಮಾಡುವಿಕೆಯನ್ನು ವಜಾ ಮಾಡಿರುವದಾಗಿ ಗವರ್ನಮೆಂಟಿನಿಂದ ಸಾದರಾಗಿರುವ 4—10—1907ನೆ ಮರ್ಕುಂ 3116-32—Ed. 261-06-3ನೆ ನಂಬರು ಆರ್ಡರು.

2. ಟೋಲು ಗೇಟುಗಳು ಸ್ಥಾಪನೆಯಾಗಿರುವ ಪ್ರದೇಶದ ಆಜು ಬಾಜು ಗ್ರಾಮಾಂತರಗಳಲ್ಲಿ ವಾಸಮಾಡಿಕೊಂಡು ಗಾಡಿಗಳನ್ನು ಇಟ್ಟುಕೊಂಡಿರುವ ವ್ಯವಸಾಯಗಾರರು ಮತ್ತು ಇತರರು ಟೋಲು ಕಂಟ್ರಾಕ್ಟರ ಸಂಗಡ ವರ್ಷಾಕಾಲದ ಮೊತ್ತದ ಮೊಬಲಗಿಗಾಗಿ ನಿಗದಿ ಮಾಡಿಕೊಳ್ಳಬಹುದೆಂದು ಗವರ್ನಮೆಂಟಿನಿಂದ ತಲಪಿದ 10—8—07ನೆ ಮರ್ಕುಂ 1369-76—L. B. 81-05-16ನೆ ನಂಬರು ಆರ್ಡರನ್ನು ಓದಲಾಯಿತು.

ಗಾಡಿಗಳ ಮಾಲೀಕರು ಒಂದು ವರುಷದ ನಿಗದಿ ಮೊಬಲಗಿಗಾಗಿ ಟೋಲು ಕಂಟ್ರಾಕ್ಟರಿಗೆ ವರ್ಷದ ಒಟ್ಟು ಮೊಬಲಗಿನ ಪೈಕಿ $\frac{1}{8}$ ಭಾಗ ಮೊಬಲಗು ಕೊಡುವ ಸಂದರ್ಭದಲ್ಲಿ ಬಡ ರೈತರಿಗೆ ತುಂಬಾ ತೊಂದರೆಯಾಗುವದ್ದರಿಂದ ಬೋರ್ಡಿನವರು 190? ನೆ ಇಸವಿ ಫೆಬ್ರವರಿ 16ನೆ ಮರ್ಕುಂನಲ್ಲಿ ನಡೆದ ಮೀಟಿಂಗಿನಲ್ಲಿ ಮಾಡಿರುವ ತೀರ್ಮಾನವನ್ನು ಪುನರಾಲೋಚನೆಗೆ ತರಬೇಕೆಂತಲೂ, ವರ್ಷಾಂತ್ಯದ ಒಟ್ಟು ಮೊಬಲಗು ಪೈಕಿ $\frac{1}{8}$ ಭಾಗ ಕೊಡುವದಕ್ಕೆ ಬದಲಾಗಿ $\frac{1}{16}$ ಭಾಗ ಮೊಬಲಗನ್ನು ವಸೂಲು ಮಾಡಿಕೊಳ್ಳಲು ಹುಕುಂ ಕೊಡಿಸತಕ್ಕ ವಿಚಾರದಲ್ಲಿ ಗವರ್ನಮೆಂಟಿಗೆ ರಿಫಾರಸ್ ಮಾಡಬೇಕೆಂದು ತೀರ್ಮಾನವಾಯಿತು.

3. "ಮೈಸೂರು ಶೀಮೆಯಲ್ಲಿ ಆರೋಗ್ಯಾಭಿವೃದ್ಧಿಗಾಗಿ "ಪಬ್ಲಿಕ ಹೆಲ್ತ್ ಡಿಪಾರ್ಟಮೆಂಟ" ಎಂಬದಾಗಿ ಒಂದು ಇಲಾಖೆಯನ್ನು ಏರ್ಪಾಡು ಮಾಡಿರುವದಾಗಿ ಗವರ್ನ್‌ಮೆಂಟಿನಿಂದ ಸಾದರಾದ 10—8—07ನೆ ಮುರ್ಕ್ಕಂ 1378–92—San. 93–06–8ನೆ ನಂಬರು ಆರ್ಡರು ಮತ್ತು ಡಿಸ್ಟ್ರಿಕ್ಟ್ ಸ್ಯಾನಿಟರಿ ಬೋರ್ಡು ಏರ್ಪಾಡಾಗತಕ್ಕ ವಿಚಾರ ಈ ಬೋರ್ಡಿಗೆ ಕೊಡಬೇಕಾದ ಅಧಿಕಾರ, ಇವರ ಆಡಳಿತದಲ್ಲಿ ಇಡತಕ್ಕ ಫಂಡಿನ ಮೊತ್ತ, ಈ ವಿಚಾರದಲ್ಲಿ ಬೋರ್ಡಿನವರ ಸಲಹೆಗಳನ್ನು ತಿಳಿಸಬೇಕೆಂದು ಸ್ಯಾನಿಟರಿ ಕಮಿಷನರವರಿಂದ ತಲಪಿರುವ 26—8—07ನೆ ಮುರ್ಕ್ಕಂ 639–46ನೆ ನಂಬರು ಸರ್ಕ್ಯುಲರನ್ನು ಸಹಾ ಓದಲಾಯಿತು.

ಮೇಲ್ಕಂಡ ಗವರ್ನ್‌ಮೆಂಟ ಆರ್ಡರಿನಂತೆ ಒಂದು ಡಿಸ್ಟ್ರಿಕ್ಟ ಸ್ಯಾನಿಟರಿ ಬೋರ್ಡನ್ನು ಏರ್ಪಾಡು ಮಾಡಬೇಕೆಂತಲೂ, ಈ ಬೋರ್ಡಿಗೆ ಬೇಕಾದ ಉದ್ಯೋಗರಹಿತರಾದ 2 ಮೆಂಬರುಗಳನ್ನು ಪ್ರೆಸಿಡೆಂಟರು ಡಿಸ್ಟ್ರಿಕ್ಟ ಬೋರ್ಡು ಮೆಂಬರುಗಳ ಪೈಕಿ ಚುನಾಯಿಸಬಹುದೆಂತಲೂ, ಈ ಸ್ಯಾನಿಟರಿ ಬೋರ್ಡು ಆರೋಗ್ಯ ಸಂಬಂಧವಾದ ವಿಚಾರಗಳಲ್ಲೆಲ್ಲಾ ಡಿಸ್ಟ್ರಿಕ್ಟ ಬೋರ್ಡಿಗೆ ಅಡ್ವೈಸರಿ ಬಾಡಿಯಾಗಿರಬೇಕೆಂತಲೂ, ಕನ್ಸರ್ವೆನ್ಸಿ ಮತ್ತು ಆರೋಗ್ಯ ಸಂಬಂಧವಾದ ಬಾಬುಗಳಿಗೆ ಡಿಸ್ಟ್ರಿಕ್ಟ ಫಂಡಿನಿಂದ ವಿಧಾಯಕ ಮಾಡಿಕೊಡಲ್ಪಡುವ ಫಂಡನ್ನು ಡಿಸ್ಟ್ರಿಕ್ಟ ಸ್ಯಾನಿಟರಿ ಬೋರ್ಡಿನವರ ಅನುಮತಿ ಪಡೆದು ಖರ್ಚು ಮಾಡಬೇಕೆಂತಲೂ ಸಹ ತೀರ್ಮಾನಿಸಲಾಯಿತು.

4. ಮೈಸೂರು ಸಿಟಿ ನಜರುಬಾದು ಮೊಹಲ್ಲಾದಲ್ಲಿ ಆಸ್ಪತ್ರೆ ಇಡಲ್ಪಟ್ಟಿರುವ ಕಟ್ಟಡಕ್ಕೆ ಮಾಹೆಯಾನಾ ಕೊಡಲ್ಪಡುವ ಬಾಡಿಗೆಯನ್ನು 8 ರೂಪಾಯಿನಿಂದ ಹತ್ತು ರೂಪಾಯಿಗೆ ಬಡಾಯಿಸಬೇಕೆಂದು ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿನವರು ಸಲಹೆ ಕೊಟ್ಟಿರುವದರ ವಿಚಾರದಲ್ಲಿ ಡಿಸ್ಟ್ರಿಕ್ಟ ಫಂಡಿನಿಂದ ದಾವಾಮಾಷಾಯಿ ಮೇರೆ ಕೊಡಲ್ಪಡಬೇಕಾಗುವ ಮೊಬಲಗಿನ ವಿಚಾರದಲ್ಲಿ ಇರಾದೆ ತಿಳಿಸಬೇಕೆಂದು ಗವರ್ನ್‌ಮೆಂಟನಿಂದ ಸಾದರಾದ 27—8—07ನೆ ಮುರ್ಕ್ಕಂ 1862—Ml. 12?–07–2ನೆ ನಂಬರು ಆರ್ಡರನ್ನು ಓದಲಾಯಿತು.

ಡಿಸ್ಟ್ರಿಕ್ಟ ಫಂಡಿನಿಂದ ದಾವಾಮಾಷಾಯಿನಂತೆ ಕೊಡಲ್ಪಡಬೇಕಾಗುವ ಮೊಬಲಗನ್ನು ಕೊಡಿಸಬಹುದೆಂದು ತೀರ್ಮಾನಿಸಲಾಯಿತು.

5. ಮಂಡ್ಯದ ತಾಲ್ಲೂಕು ಮದ್ದೂರು ರೈಲ್ವೆ ಸ್ಟೇಷನ್ ಬಳಿ ಇರುವ ಶಿವಪುರದ ಛತ್ರವನ್ನು ಡಿಸ್ಟ್ರಿಕ್ಟ ಬೋರ್ಡಿನ ಆಡಳಿತಕ್ಕೆ ವರ್ಗ ಮಾಡಿರುವದಾಗಿ ಗವರ್ನ್‌ಮೆಂಟನಿಂದ ಸಾದರಾದ 2—9—07ನೆ ಮುರ್ಕ್ಕಂ 1287–9—Muz. ನೆ ನಂಬರು ಆರ್ಡರು ಒಂದು, ಡಿಸ್ಟ್ರಿಕ್ಟ ಬೋರ್ಡಿನವರು ಈ ಛತ್ರವನ್ನು ಮುಸಾಫರಖಾನೆಯಾಗಿ ಮಾಡಿಕೊಂಡು ಉತ್ತಮ ಸ್ಥಿತಿಯಲ್ಲಿ ಇಟ್ಟುಕೊಳ್ಳಲು ಮತ್ತು ಈ ಮುಸಾಫರಖಾನೆಯ ಶಿಬ್ಬಂದಿ ಖರ್ಚನ್ನು ವಹಿಸಿಕೊಳ್ಳುವ ವಿಚಾರದಲ್ಲಿ ಸಹಾ ಡಿಸ್ಟ್ರಿಕ್ಟ ಬೋರ್ಡಿನ ಅಭಿಪ್ರಾಯವನ್ನು ತಿಳಿಸಬೇಕೆಂದು ಗವರ್ನ್‌ಮೆಂಟನಿಂದ ಸಾದರಾದ 1—10—07ನೆ ಮುರ್ಕ್ಕಂ. 3030—L. B. 87–07–2ನೆ ನಂಬರು ಡಾಕೆಟ ಒಂದು. ಮಂಡ್ಯದ ತಾಲ್ಲೂಕು ಬೋರ್ಡಿನವರು ಅಭಿಪ್ರಾಯನಿಶಿ ಆ ತಾಲ್ಲೂಕು ಅಮಲ್ದಾರರು ಛತ್ರದ ರಿಪೇರಿ ಬಗ್ಯೆ ಹಾಲಿ ಬೇಕಾಗುವ ಅಂದಾಜಾ ಮೊಬಲಗು 1, 80 ರೂಪಾಯಿಗೆ ಕಳುಹಿಸಿರುವ ಅಂದಾಜಾ ಶಿಬ್ಬಂದಿ ಖರ್ಚಿನ ತಖ್ತೆ ಒಂದು ಇವು ಮೂರನ್ನು ಓದಲಾಯಿತು.

ಡಿಸ್ಟ್ರಿಕ್ಟ ಬೋರ್ಡಿನ ಆಡಳಿತಕ್ಕೆ ಈ ಕಟ್ಟಡವನ್ನು ತೆಗೆದುಕೊಳ್ಳಬೇಕೆಂತಲೂ ಸಾಲಿಯಾನಾ ಆಗಬೇಕಾದ ರಿಪೇರಿ ಮಾಡಿಸಬೇಕೆಂತಲೂ ಗವರ್ನ್‌ಮೆಂಟಿನವರ ಮಂಜೂರಾತಿಯಿಂದ ಈ ಕಟ್ಟಡಕ್ಕೆ ಮಾಹೆಯಾನಾ 7 ರೂಪಾಯಿ ತಲಬಿನ ಮೇಲೆ ಒಬ್ಬ ಕಾವಲುಗಾರ ಪ್ರತಿ ಒಬ್ಬನಿಗೂ ಮಾಹೆಯಾನಾ ಒಂದು ರೂಪಾಯಿ ವೇತನದ ಮೇರೆ ಒಬ್ಬ ಝಾಡಮಾಲಿ ಮತ್ತು ಒಬ್ಬ ಹಲಾಲುಕೋರರವನನ್ನು ನೌಕರರೂ ಮಾಡಿಕೊಳ್ಳಬಹುದೆಂತಲೂ ಸಹಾ ತೀರ್ಮಾನಿಸಲಾಯಿತು.

6. ಅಮೃತಮಹಲ್ ಗೂಳಿಗಳ ಖರೀದಿ ಮೊಬಲಗಿನ ಪೈಕಿ ಅರ್ಧ ಮೊಬಲಗನ್ನು ಡಿಸ್ಟ್ರಿಕ್ಟ ಫಂಡಿನಿಂದ ಕೊಡಲ್ಪಡುವ ವಿಚಾರದಲ್ಲಿ ಗವರ್ನ್‌ಮೆಂಟನಿಂದ ವಿಧಾಯಕವಾಗಿರುವ 16–9–1891ನೆ ಮುರ್ಕ್ಕಂ 6999–7008 Cir: 123ನೆ ನಂಬರು ಆರ್ಡರು ಮೇರೆ ಈ ವಿಚಾರದಲ್ಲಿ ಬರತಕ್ಕ ದರಖಾಸ್ತುಗಳನ್ನು ಫೈಸಲು ಮಾಡಬೇಕೆಂದು ಗವರ್ನ್‌ಮೆಂಟನಿಂದ ತಲಪಿರುವ 2—9—1907ನೆ ಮುರ್ಕ್ಕಂ 2093–4—L. B. 49–07–2ನೆ ನಂಬರು ಆರ್ಡರು ಒಂದು. ರೆವರೆಂಡ್ ಡಿ. ಎಫ್. ಲ್ಯಾರೆಟ ಸಾಹೇಬರಿಗೆ ಕೊಡಿಸಿದ ಗೂಳಿಯ ಬಾಬತು ಅರ್ಧ ಖರೀದಿ ಮೊಬಲಗನ್ನು ಡಿಸ್ಟ್ರಿಕ್ಟ ಫಂಡಿನಿಂದ ಕಳುಹಿಸಿಕೊಡಬೇಕೆಂದು ಅಮೃತಮಹಲ್ ಇಲಾಖಾ ಸೂಪರಿಂಟೆಂಡೆಂಟರವರಿಂದ ತಲಪಿದ 5—10—07ನೆ ಮುರ್ಕ್ಕಂ 35ನೆ ನಂಬರು ಯಾದಾಸ್ತು ಸಹ ಓದಲಾಯಿತು.

ಸೂಪರಿಂಟೆಂಡೆಂಟರವರು ಕೇಳುವ ಮೊಬಲಗನ್ನು ಡಿಸ್ಟ್ರಿಕ್ಟ ಫಂಡಿನಿಂದ ಕೊಡಬಹುದೆಂದು ತೀರ್ಮಾನಿಸಲಾಯಿತು.

7. ಕೆಲವು ಸಲಹೆಗಳು ನಿಶಿ ಡಿಸ್ಟ್ರಿಕ್ಟ ಫಂಡ ಅರ್ಜೆಂಟ ಕಾಮಗಾರಿಗಳನ್ನು ಮಂಜೂರು ಮಾಡಿರುವದಾಗಿ ಗವರ್ನ್‌ಮೆಂಟನಿಂದ ಸಾದರಾಗಿರುವ 17—10—1907ನೆ ಮುರ್ಕ್ಕಂ 3302–3—L. B. 112–07–2ನೆ ನಂಬರು ಆರ್ಡರನ್ನು ಓದಲಾಯಿತು.

"ಡಿಸ್ಟ್ರಿಕ್ಟ ಫಂಡು" ಮದ್ದಿನಲ್ಲಿ ಒಂದು ಲಕ್ಷ ರೂಪಾಯಿಗಳಿಗಿಂತಲೂ ಜಾಸ್ತಿಯಾಗಿ ಶಿಲ್ಕು ಉಳಿದಿರುವದ್ದರಿಂದ ಈ ಹಣದಿಂದ ಕಾಮಗಾರಿಗಳನ್ನು ನಡೆಸಲು ಮಂಜೂರಾತಿ ಬಗ್ಯೆ ಗವರ್ನ್‌ಮೆಂಟನ್ನು ಪ್ರಾರ್ಥಿಸಬೇಕೆಂದು ತೀರ್ಮಾನಿಸಲಾಯಿತು.

8. 1907ನೆ ಸಾಲ ಇಂಡಸ್ಟ್ರಿಯಲ್ ಮತ್ತು ಅಗ್ರಿಕಲ್ಚರಲ್ ಎಗ್ಸಿಬಿಷನ್ ಸಂದರ್ಭದಲ್ಲಿ ಒಂದು ಹೆಲ್ತ್ ಸೆಕ್ಷನ್ ಅಥವಾ "ಆರೋಗ್ಯಪ್ರದರ್ಶನ" ಸ್ಥಾಪಿಸತಕ್ಕ ವಿಚಾರದಲ್ಲಿ ಮೈಸೂರು ಸಿಟಿ ಮ್ಯುನಿಸಿಪಲ್ ಫಂಡಿನಿಂದ 300 ರೂಪಾಯಿಗಳನ್ನು ಕೊಡಿಸುವಂತೆಯೂ ಡಿಸ್ಟ್ರಿಕ್ಟ ಬೋರ್ಡಿನ ಅನುಮತಿ ನಿಶಿ ಡಿಸ್ಟ್ರಿಕ್ಟ ಫಂಡಿನಿಂದ 200 ರೂಪಾಯಿಗಳನ್ನು ಕೊಡಿಸುವಂತೆಯೂ

ಸಹ ಗವರ್ನಮೆಂಟಿನಿಂದ ಸಾದರಾದ 22—10—1907ನೆ ಮುರ್ಕುಂ 3560-4—220-07-4ನೆ ನಂಬರು ಆರ್ಡ ರನ್ನು ಓದಲಾಯಿತು.

ಗವರ್ನಮೆಂಟ್ ಆರ್ಡರನ್ನು ಅನುಮೋದಿಸಿರುವದಾಗಿ ತೀರ್ಮಾನವಾಯಿತು.

9. ಶ್ರೀರಂಗಪಟ್ಟಣದ ಆಸ್ಪತ್ರೆ ಬಡಾವಣೆಗಾಗಿ ತಗಲುವ ಮೊಬಲಗಿನ ಪೈಕಿ ಅರ್ಧ ಮೊಬಲಗನ್ನು ಡಿಸ್ಟ್ರಿಕ್ಟು ಫಂಡಿನಿಂದ ಕೊಡಿಸತಕ್ಕ ವಿಚಾರದಲ್ಲಿ ಗವರ್ನಮೆಂಟಿನಿಂದ ಸಾದರಾಗಿರುವ 10—10—07ನೆ ಮುರ್ಕುಂ 3246—Med. 159-06-4ನೆ ನಂಬರ ಆರ್ಡರನ್ನು ಓದಲಾಯಿತು.

ಈ ಮೊಬಲಗನ್ನು ಡಿಸ್ಟ್ರಿಕ್ಟು ಫಂಡಿನಿಂದ ಕೊಡಿಸಬಹುದೆಂದು ತೀರ್ಮಾನವಾಯಿತು.

10. ಶ್ರೀರಂಗಪಟ್ಟಣ ಚಾಮರಾಜನಗರದ ರಸ್ತೆಯ ಸ್ಪೆಷಲ್ ಕಾಮಗಾರಿಗಾಗಿ 3,253 ರೂಪಾಯಿಗಳ ಅಂದಾಜಾ ನಿಶಿ ತಲಪಿದ ಮೈಸೂರು ಡಿವಿಜನ್ ಎಕ್ಸಿಕ್ಯೂಟಿವ್ ಇಂಜನೀರವರ 16—8—07ನೆ ಮುರ್ಕುಂ 755ನೆ ನಂಬರ ಡಾಕೆಟ್ ಓದಲಾಯಿತು.

ಈ ಅಂದಾಜಾವನ್ನು ಮಂಜೂರು ಮಾಡಿರುವದಾಗಿಯೂ 1907ನೆ ಜುಲೈ 1ನೆ ತಾರೀಖಿನಲ್ಲಿ ಡಿಸ್ಟ್ರಿಕ್ಟು ಬೋರ್ಡಿನ ಶಿಲ್ಕಿನಲ್ಲಿ ಉಳಿದಿರುವ ಮೊಬಲಗು ಪೈಕಿ ಅಂದಾಜಾದ ಅರ್ಧ ಮೊಬಲಗನ್ನು ಮಾತ್ರ ಉಪಯೋಗಿಸಿಕೊಳ್ಳಬೇಕೆಂ ತಲೂ ಸಹ ತೀರ್ಮಾನವಾಯಿತು.

11. ಇನಾಂ ಕಗ್ಗಲೀಪುರ ಗ್ರಾಮದ ಮೈನರ್ ಕೆರೆಯ ಮೇಲ್ಭಾಗದಲ್ಲಿ ಬರುವ ಶ್ರೀರಂಗಪಟ್ಟಣ-ಸೋಸಲೆ-ಶಿವಸಮುದ್ರದ ರಸ್ತೆಯ ಒಂದು ಭಾಗವನ್ನು ರಿಪೇರಿ ಮಾಡಿಸಿದ್ದಕ್ಕಾಗಿ ತಗಲಿದ ಮೊಬಲಗು ಪೂರ್ತಿ ಡಿಸ್ಟ್ರಿಕ್ಟು ಫಂಡಿಗೆ ಛಾರ್ಜು ಮಾಡಬೇಕೆಂದು ಮೈಸೂರು ಡಿವಿಜನ್ ಎಕ್ಸಿಕ್ಯೂಟಿವ್ ಇಂಜನೀರವರಿಂದ ತಲಪಿದ 19—9—1907ನೆ ಮುರ್ಕುಂ 343ನೆ ನಂಬರು ಡಾಕೆಟ್ಟನ್ನು ಓದಲಾಯಿತು.

ಈ ರಸ್ತೆಯ ಕೆಲವು ಭಾಗ ಕೆರೆಯ ಕಟ್ಟೆಯಾಗಿರುವದ್ದರಿಂದಲೂ, ಕೆರೆಯು ಉತ್ತಮ ಸ್ಥಿತಿಯು ರಸ್ತೆಯ ಅನುಕೂಲ್ಯ ಸ್ಥಿತಿಯಲ್ಲಿಯೇ ಸೇರಿರುವದ್ದರಿಂದಲೂ ಸಹ, ಆ ಗ್ರಾಮದ ಇನಾಂದಾರರು ಖರ್ಚಾದ ಒಟ್ಟು ಮೊಬಲಗಿನ ಪೈಕಿ ಅರ್ಧ ಮೊಬಲಗು ಕೊಡಬೇಕೆಂತಲೂ, ಬಾಕಿ ಅರ್ಧ ಮೊಬಲಗನ್ನು ಡಿಸ್ಟ್ರಿಕ್ಟು ಫಂಡಿಗೆ ಛಾರ್ಜು ಮಾಡಬೇಕೆಂತಲೂ ಸಹ ತೀರ್ಮಾನವಾಯಿತು.

12. ಫ್ರೆಂಚ್‌ರಾಕ್ಸ್-ನೆಲ್ಲಿಗೆರೆ ರಸ್ತೆಯ 4ನೆ ಮೈಲಿಯಲ್ಲಿರುವ ಸೇತುವೆಗೆ ಇನ್ನು 2 ಕಮಾನುಗಳನ್ನು ಸೇರಿಸಿ ಕಟ್ಟುವದಕ್ಕಾಗಿ ತಯಾರಾದ 390 ರೂಪಾಯಿಗಳ ಅಂದಾಜಾನಿಶಿ ಮೈಸೂರು ಡಿವಿಜನ್ ಎಗ್ಸಿಕ್ಯೂಟಿವ್ ಇಂಜನೀರವರಿಂದ ತಲಪಿದ 9—9—07ನೆ ಮುರ್ಕುಂ 871ನೆ ನಂಬರು ಡಾಕೆಟ್ಟನ್ನು ಓದಲಾಯಿತು.

ಈ ಮೊಬಲಗನ್ನು ಚಾಲ್ತಿ ಸಾಲಿಗೆ ಆಡಿಷನಲ್ ಗ್ರಾಂಟಾಗಿ ಮಂಜೂರು ಮಾಡಲು ಗವರ್ನಮೆಂಟಿಗೆ ಶಿಫಾರಸ್ ಮಾಡ್ಬೇಕೆಂತೆ ತೀರ್ಮಾನವಾಯಿತು.

13. ಹುಣಸೂರು ತಾಲ್ಲೂಕು ಪಿರಿಯಾಪಟ್ಟಣಕ್ಕೆ ಒಬ್ಬ ಸೂಲಗಿತ್ತಿಯನ್ನು ನೌಕರರೂರು ಮಾಡಿಸಿಕೊಡಬೇಕೆಂದು ಹುಣಸೂರು ತಾಲ್ಲೂಕು ಆಮಿಲ್ದಾರಿಂದ ತಲಪಿದ 14—5—07ನೆ ಮುರ್ಕುಂ 352ನೆ ನಂಬರು ರಿಪೋರ್ಟನ್ನು ಓದಲಾಯಿತು.

ಈ ಸಲಹೆಯನ್ನು ಮಂಜೂರು ಮಾಡಬಹುದೆಂದು ತೀರ್ಮಾನಿಸಲಾಯಿತು.

14. ಅಳಗಂಚಿಯಿಂದ ನಂಜನಗೂಡು-ತಗಡೂರು ರಸ್ತೆಗೆ ಬಂದು ಸೇರುವ ಹಾಗೆ ಒಂದು ಛಂಡಿ ದಾರಿಯನ್ನು ಹಾಕತಕ್ಕ ವಿಚಾರದಲ್ಲಿ 635 ರೂಪಾಯಿಗಳಿಗೆ ಒಂದು ಅಂದಾಜಾನಿಶಿ ಈ ಮೊಬಲಗಿನ ಪೈಕಿ ಅರ್ಧ ಮೊಬಲಗನ್ನು ಇನಾಂದಾರರುಗಳು ದ್ರವ್ಯರೂಪಕವಾಗಿಯಾಗಲಿ ಅಥವಾ ಕಾಮಗಾರಿ ಮೂಲಕವಾಗಿಯಾಗಲಿ ಕೊಡಲು ಒಪ್ಪಿದ್ದಾರೆಂದು ವಗ್ಯೆರ ನಂಜನಗೂಡು ತಾಲ್ಲೂಕು ಅಮಲ್ದಾರ್ರಿಂದ ತಲಪಿದ 16—5—07ನೆ ಮುರ್ಕುಂ 487ನೆ ನಂಬರು ರಿಪೋರ್ಟನ್ನು ಓದಲಾಯಿತು.

ಗ್ರಾಮಾಂತ್ರಗಳಿಗೆ ಹೊಸದಾಗಿ ಹಾಕತಕ್ಕ ರಸ್ತೆಗಳ ವಿಚಾರದಲ್ಲಿ ಗವರ್ನಮೆಂಟಿನಿಂದ ಸಾದರಾಗಿರುವ 3—7—07ನೆ ಮುರ್ಕುಂ 64-72—L. B. 130-06—5ನೆ ನಂಬರು ಹುಕುಮಿನಲ್ಲಿ ವಿಧಾಯಕವಾಗಿರುವಂತೆ ಅಂದಾಜಾವನ್ನು ರಿವೈಸ್ ಮಾಡಿಸುವಂತೆ ತೀರ್ಮಾನವಾಯಿತು.

15. ಕೊಪ್ಪದ ಹೋಬಳಿ ಕೆರೆ ಮೇಲಣ ದೊಡ್ಡಿಯ ಬಳಿ ಒಂದು ಭಾವಿ ತೋಡಿಸುವದಕ್ಕಾಗಿ 422 ರೂಪಾಯಿಗಳ ಅಂದಾಜಾನಿಶಿ ಮಂಡ್ಯದ ತಾಲ್ಲೂಕು ಆಮಿಲ್ದಾರಿಂದ ತಲಪಿದ 21—8—07ನೆ ಮುರ್ಕುಂ 29ನೆ ನಂಬರು ರಿಪೋರ್ಟಿನಿಶಿ ತಲಪಿದ ನಡವಳಿಕೆಯನ್ನು ಓದಲಾಯಿತು.

ಹಾಲಿ ಈ ಬಾವಿಗೆ ನಡೆದಿರುವ ಕಾಮಗಾರಿಯನ್ನು ಸಬ್ ಡಿವಿಜನ್ ಆಫಿಸರವರು ಅಜಮಾಯಿಷಿ ಮಾಡುವ ನಿರೀಕ್ಷಣೆ ಮೇಲೆ ಮುಂದಣ ಮೀಟಿಂಗಿಗೆ ಅಡ್ಜರ್ನ ಮಾಡಲಾಯಿತು.

16. ನಾಗಮಂಗಲದ ತಾಲ್ಲೂಕು ದಡಗದಲ್ಲಿ ಒಂದು ಸಂತೆ ಕಟ್ಟಲು ಏರ್ಪಾಡು ಮಾಡಬೇಕೆಂದು 28—8—07ನೆ ಮುರ್ಕುಂನಲ್ಲಿ ನಾಗಮಂಗಲದ ತಾಲ್ಲೂಕು ಬೋರ್ಡಿನವರು ತೀರ್ಮಾನ ಮಾಡಿದ್ದರಮೇಲೆ ಅದರ ಎಕ್ಸ್‌ಟ್ರಾಕ್ಟನಿಶಿ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫಿಸರವರಿಂದ ತಲಪಿದ 13—9—07ನೆ ಮುರ್ಕುಂ 55ನೆ ನಂಬರು ಯಾದಾಸ್ತು ಓದಲಾಯಿತು.

ತಾಲ್ಲೂಕು ಬೋರ್ಡಿನವರು ಮಾಡಿರುವ ತೀರ್ಮಾನವನ್ನು ಅನುಮೋದಿಸಿರುವದಾಗಿಯೂ ಇದಕ್ಕಾಗಿ ಗವರ್ನಮೆಂಟ್ ಮಂಜೂರಾತಿ ಪಡೆಯಬೇಕೆಂತಲೂ ಸಹಾ ತೀರ್ಮಾನವಾಯಿತು.

17. 12—9—07ನೆ ಮುರ್ಕುಂನಲ್ಲಿ ನಡೆದ ಎಡತೊರೆ ತಾಲ್ಲೂಕು ಬೋರ್ಡು ಮೀಟಿಂಗಿನಲ್ಲಿ ತೀರ್ಮಾನವಾದಂತೆ ಆ ತಾಲ್ಲೂಕಿನ ಉಪಯೋಗಕ್ಕಾಗಿ ಒಂದು ಅಥವಾ ಎರಡು ಅಮೃತಮಹಲ್ ಗೂಳಿಗಳನ್ನು ಸರಬರಾಯಿ ಮಾಡಿಸಿಕೊಡಬೇಕೆಂದು ಎಡತೊರೆ ತಾಲ್ಲೂಕು ಆಮಿಲ್ದಾರಿಂದ ತಲಪಿದ 1—8—07ನೆ ಮುರ್ಕುಂ 116ನೆ ನಂಬರು ರಿಪೋರ್ಟು ಓದಲಾಯಿತು.

ಡಿಸ್ಟ್ರಿಕ್ಟ್ ಫಂಡಿನಿಂದ ಎಡತೊರೆ, ಹೆಗ್ಗಡದೇವನಕೋಟೆ, ಚಾಮರಾಜನಗರ ಈ ಮೂರು ತಾಲ್ಲೂಕುಗಳಿಗೆ ಪ್ರತಿ ಒಂದು ತಾಲ್ಲೂಕಿಗೂ, ಒಂದೊಂದರ ಮೇರೆ ಅಮೃತಮಹಲ್ ಗೂಳಿಗಳನ್ನು ಕೊಂಡುಕೊಳ್ಳಬೇಕೆಂತಲೂ, ಬವರಿ ಮಾಡಿಸಲ್ಪಡುವ ಪ್ರತಿ ಒಂದು ಹಸುವಿಗೂ, ಒಂದು ರೂಪಾಯಿನಂತೆ ಫೀಜು ವಸೂಲ್ಮಾಡಬೇಕೆಂತಲೂ, ಈ ರೀತಿ ವಸೂಲಾದ ಫೀಯಲ್ಲಿ ಅರ್ಧ ಮೊಬಲಗನ್ನು ಗೂಳಿಯ ಸಂರಕ್ಷಣಾರ್ಥವಾಗಿ ಅದನ್ನು ಕಾಪಾಡುವ ಛಾರ್ಜಿನಲ್ಲಿರುವ ಮನುಷ್ಯನಿಗೆ ಕೊಡಬೇಕೆಂತಲೂ ಸಹ ತೀರ್ಮಾನಿಸಲಾಯಿತು.

18. ಟಿ. ನರಸೀಪುರದ ತಾಲ್ಲೂಕಿನಲ್ಲಿರುವ ಸೋಸಲೆ ನರಸೀಪುರದ ರಸ್ತೆ, ಶ್ರೀರಂಗಪಟ್ಟಣ, ಸೋಸಲೆ, ಶಿವಸಮುದ್ರದ ರಸ್ತೆ ಇವುಗಳ ಮೈಲೇಜು ಅಲಾಟ್‌ಮೆಂಟನ್ನು ಮೈಲಿ ಒಂದಕ್ಕೆ 80 ರೂಪಾಯಿಗಳಿಗೆ ಜಡಾಯಿಸಬೇಕೆಂದು 30—8—07ನೆ ಮರ್ಸ್ತಂನಲ್ಲಿ ತಿರಮಕೂಡ್ಲು ನರಸೀಪುರದಲ್ಲಿ ನಡೆದ ತಾಲ್ಲೂಕು ಬೋರ್ಡು ಮೀಟಿಂಗಿನಲ್ಲಿ ತೀರ್ಮಾನವಾಗಿರುವಂತೆ ಸದರಿ ಎಕ್ಸ್‌ಟ್ರಾಕ್ಟನಿಶಿ ನಂಜನಗೂಡು ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರಿಂದ ತಲಪಿದ 26—9—07ನೆ ಮರ್ಸ್ತಂ 38ನೆ ನಂಬರು ಯಾದಾಸ್ತು ಓದಲಾಯಿತು.

ನರಸೀಪುರ-ಸೋಸಲೆ ರಸ್ತೆಗೆ ಮಾತ್ರ ಮೈಲೇಜು ಅಲಾಟ್‌ಮೆಂಟ್ ಜಾಸ್ತಿ ಮಾಡತಕ್ಕದ್ದೆಂದು ತೀರ್ಮಾನಿಸಲಾಯಿತು.

19. 16—9—07ನೆ ಮರ್ಸ್ತಂನಲ್ಲಿ ಚಾಮರಾಜನಗರದಲ್ಲಿ ನಡೆದ ತಾಲ್ಲೂಕು ಬೋರ್ಡು ಮೀಟಿಂಗಿನಲ್ಲಿ ತೀರ್ಮಾನವಾಗಿರುವಂತೆ ಜೋಡೆತ್ತಿನ ಚಕಡಾ ಗಾಡಿಗಳಿಂದ ಹಾಲಿ ಟೋಲು ಗೇಟುಗಳಲ್ಲಿ ವಸೂಲಾಗುತ್ತಿರುವ ಟೋಲು ಮೊಬಲಗಿನಲ್ಲಿ ಅರ್ಧದರದಂತೆ ಟೋಲು ಮುಖಾಂತರ ಬರುವ ವಡ್ಡರ ಗಾಡಿಗಳಿಂದ ಟೋಲು ವಸೂಲಾಗತಕ್ಕ ವಿಚಾರವಲ್ಲಿ ಚಾಮರಾಜನಗರದ ತಾಲ್ಲೂಕು ಅಮಿಲ್ದಾರರಿಂದ ತಲಪಿದ 25—9—07ನೆ ಮರ್ಸ್ತಂ 79ನೆ ನಂಬರು ರಿಪೋರ್ಟನ್ನು ಓದಲಾಯಿತು.

ಈ ಸಲಹೆಯನ್ನು ಮಂಜೂರಾತಿ ಬಗ್ಗೆ ಗವರ್ನಮೆಂಟಿಗೆ ಕಳುಹಿಸಬೇಕೆಂದು ತೀರ್ಮಾನವಾಯಿತು.

20. ಹುಣಸೂರು-ಹನಗೋಡು ರಸ್ತೆಯಲ್ಲಿ ಅಡ್ಡವಾಗಿ ಬರುವ ವದರಿ (ನೀರಿನ ಪ್ರವಾಹ) ಗೆ ಸೇತುವೆ ಕಟ್ಟತಕ್ಕ ವಿಚಾರದಲ್ಲಿ ಮ॥ ಪಟ್ರಿಕಹೇ ಸಾಹೇಬರು ಮತ್ತು ಮ॥ ತಿರುವೆಂಗಡಸ್ವಾಮಿ ಮೊದಲಿಯಾರ್ರು ಸಹ, 190 ನೆ ದಸರಾ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಚರ್ಚಿಸಬೇಕೆಂದು ಉದ್ದೇಶ ಮಾಡಿದ್ದ ವಿಷಯವನ್ನು ಓದಲಾಯಿತು.

ಬೋರ್ಡಿನವರು ಈ ಕಾಮಗಾರಿಯ ಅವಶ್ಯಕತೆಯನ್ನು ಆಲೋಚಿಸಿ ಈ ಕೆಲಸಕ್ಕಾಗಿ ಬೇಕಾಗುವ ಮೊಬಲಗಿನ ಅಂದಾಜಾವನ್ನು ತಯಾರು ಮಾಡಿಸಿ ಕಳುಹಿಸಲು ಎಗ್ಜಿಕ್ಯೂಟಿವ್ ಇಂಜನೀಯರವರಿಗೆ ಬರೆಸಬೇಕೆಂದು ತೀರ್ಮಾನಿಸಲಾಯಿತು.

21. ಮೈಸೂರು ತಾಲ್ಲೂಕು ಮೆಂಬರು ಮಿ॥ ಲಿಂಗೇಗೌಡರು ಕಳುಹಿಸಿದ ಈ ಕೆಳಗಣ ಸಲಹೆಗಳನ್ನು ಓದಲಾಯಿತು.

(a) ಸಾಗರ ಕಟ್ಟೆಯ ಬಳಿ ಇರುವ ಆನಂದೂರು ನಾಲಾಕ್ಕೆ ತಂತಿಗಳಿಂದ ಕಟುಕಟಿ ಕಟ್ಟಿಸತಕ್ಕ ವಿಚಾರ.

(b) ಗ್ರಾಮಾಂತ್ರಗಳಲ್ಲಿ ಹೊಸದಾಗಿ ಹಾಕಬೇಕಾದ ರಸ್ತೆಗಳನ್ನು ಗೊತ್ತು ಮಾಡುವದಕ್ಕಾಗಿ ಟ್ಯಾಂಕು ಇನ್‌ಸ್ಪೆಕ್ಟರು ಅಥವಾ ವರ್ಕ್ ಇನ್‌ಸ್ಪೆಕ್ಟರನ್ನು ನೇಮಿಸತಕ್ಕ ವಿಚಾರ.

(c) ಒಂದುನೂರು ಮನೆಗಳಿಗಿಂತಲೂ ಜಾಸ್ತಿಯಾಗಿರುವ ಗ್ರಾಮಗಳಲ್ಲಿ ಗ್ರಾಮ ಪಾಕೀಜಾ ಉಸ್ತುವಾರಿ ನೋಡಿಕೊಳ್ಳುವ ತೋಟಿಗಳಿಗೆ ದ್ರವ್ಯರೂಪಕವಾದ ಪ್ರತಿ ಫಲ ಕೊಡಲ್ಪಡುವ ವಿಚಾರ.

(d) ಬೋಗಾದಿ ರಸ್ತೆಯನ್ನು ಜಟ್ಟಿಹುಂಡಿಯವರಿಗೂ ಬಡವಣೆ ಮಾಡತಕ್ಕ ವಿಚಾರ.

(e) ಅಯರ ಹಳ್ಳಿ ಮಾರ್ಗವಾಗಿ ಕಡಕೊಳದಿಂದ ಹದಿನಾರು ಗ್ರಾಮಕ್ಕೆ ಒಂದು ಬಂಡಿದಾರಿ ಹಾಕತಕ್ಕ ವಿಚಾರ.

(a) ಸ್ವಾಗರ ಕಟ್ಟೆಯ ಆನಂದೂರು ನಾಲಾಕ್ಕೆ ಸಾಧಾರಣ ಮಣ್ಣಿನಗೋಡೆ ಹಾಕಿಸಲು ಒಂದು ಅಂದಾಜಾ ತಯಾರು ಮಾಡಿಸಿ ಕಳುಹಿಸಲು ಎಕ್ಸಿಕ್ಯೂಟಿವ್ ಇಂಜನೀರವರಿಗೆ ಬರೆಸಬೇಕೆಂದು ತೀರ್ಮಾನಿಸಲಾಯಿತು.

(b) ಈ ವಿಚಾರದಲ್ಲಿ ಅವಶ್ಯಕವಾದ ನಿಗಾ ಕೊಡಲು ತಾಲ್ಲೂಕು ಅಮಿಲ್ದಾರರುಗಳಿಗೆ ಬರೆಸಬೇಕೆಂದು ತೀರ್ಮಾನವಾಯಿತು.

(c) ಹೊಸದಾಗಿ ಡಿಸ್ಟ್ರಿಕ್ಟ್ ಸ್ಯಾನಿಟರಿ ಬೋರ್ಡು ಸ್ಥಾಪನೆಯಾದ ಮೇಲೆ ಈ ಸಲಹೆಯನ್ನು ಆ ಬೋರ್ಡಿಗೆ ಕಳುಹಿಸಬೇಕೆಂದು ತೀರ್ಮಾನಿಸಲಾಯಿತು.

(d) ಈ ಕೆಲಸ ನಡೆಸುವದಕ್ಕೆ ಒಂದು ಅಂದಾಜಾ ತಯಾರು ಮಾಡಿಸಿ ಕಳುಹಿಸಲು ಎಕ್ಸಿಕ್ಯೂಟಿವ್ ಇಂಜನೀರವರಿಗೆ ಬರೆಸಬೇಕೆಂದು ತೀರ್ಮಾನವಾಯಿತು.

(e) ಸಬ್ ಡಿವಿಜನ್ ಆಫಿಸರವರು ಸ್ಥಳ ಆಜಮಾಯಿಷಿ ಮಾಡಿ ಅಭಿಪ್ರಾಯ ಬೇಳಿಸಲು ಅವರಿಗೆ ಬರೆಸಬೇಕೆಂದು ತೀರ್ಮಾನವಾಯಿತು.

22. ಗವರ್ನಮೆಂಟಿಗೆ ಕಳುಹಿಸಿಕೊಟ್ಟಿರುವ ಡಿಸ್ಟ್ರಿಕ್ಟ್ ಫಂಡು ಆಡಳಿತದ ರಿಪೋರ್ಟನ್ನು ಓದಲಾಯಿತು.

ರೆಕಾರ್ಡು ಮಾಡುವಂತೆ ತೀರ್ಮಾನವಾಯಿತು.

23. ಚಾಲ್ತಿ ಸಾಲಿನ ಬಡ್ಜೆಟ್ಟಿನಲ್ಲಿ ಬಿ.—"ಪಬ್ಲಿಕ್ ವರ್ಕ್ಸ್" ಎಂಬ ಹೆಡ್ಡಿನಲ್ಲಿ ಮಂಜೂರಾಗಿರುವ ಹಣವನ್ನು ಖರ್ಚು ಮಾಡಲು ಅಪ್ಪಣೆ ಬೇಡಿ ತಾಲ್ಲೂಕು ಬೋರ್ಡುಗಳಿಂದ ತಲಪಿದ ಎಸ್ಟಿಮೇಟುಗಳನ್ನು ಓದಲಾಯಿತು.

ಇದಕ್ಕೆ ಲಗತ್ತಿರುವ ತಃಖ್ತೆಯಲ್ಲಿ ನಮೂದಾಗುವ ಅಂದಾಜುಗಳನ್ನು ಮಂಜೂರು ಮಾಡಿರುವಂತೆ ತೀರ್ಮಾನಿಸಲಾಯಿತು.

24. ಮುಂದಣ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು 1908ನೆ ಇಸವಿ ಫೆಬ್ರುವರಿ ಮಾಹೆ 1 ನೆ ತಾರೀಖು ಶನಿವಾರ ಮಧ್ಯಾಹ್ನ 2 ಘಂಟೆಗೆ ನಡೆಸುವದೆಂದು ತೀರ್ಮಾನವಾಯಿತು.

ಎಂ. ಕಾಂತರಾಜೇ ಅರಸ್,
ಪ್ರೆಸಿಡೆಂಟ್.

ಕಡೂರು ಡಿಸ್ಟ್ರಿಕ್ಟು.

ಸನ್ 1907ನೆ ಇಸವಿ ಸೆಪಟಂಬರು ತಾರೀಖು 25ನೆ ಬುಧವಾರ ನಡೆದ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗ್ ನಡವಳಿಕೆಗಳು.

ಹಾಜರು.

ಮಿ|| ಬಿ. ಜೆ. ಕುಮಾರಸ್ವಾಮಿನಾಯಕರು, ಎಸ್ಕ್ವಯರ್, ಬಿ. ಎ. ಪ್ರೆಸಿಡೆಂಟರು.

ಉದ್ಯೋಗ ಪ್ರಯುಕ್ತ ಮೆಂಬರುಗಳು.

2. ಮೆ|| ಎ. ಕೃಷ್ಣಸ್ವಾಮ್ಯೈಯ್ಯಂಗಾರ್ರು, ಟ್ರೆಜರಿ ಅಸಿಸ್ಟೆಂಟ ಕಮಿಷನರು ಮತ್ತು ಡಿಸ್ಟ್ರಿಕ್ಟು ಬೋರ್ಡು ವೈಸ್ ಪ್ರೆಸಿಡೆಂಟರು.
3. ,, ಡಿ. ಎಂ. ನರಸಿಂಗರಾಯರು, ಡಿವಿಜನಲ್ ಅಸಿಸ್ಟೆಂಟು ಕಮಿಷನರು.
4. ,, ನವರತ್ನ ರಾಮರಾಯರು, ಎಗ್ಜಿಕ್ಯೂಟಿವ್ ಇಂಜಿನಿಯರು.
5. ,, ಹೆಚ್. ಎಲ್. ವೆಂಕಟರಮಣಯ್ಯನವರು, ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರು.
6. ,, ಕೆ. ಎಂ. ಅಪ್ಪಯ್ಯನವರು, ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು.

ಉದ್ಯೋಗ ಪ್ರಯುಕ್ತವಲ್ಲದ ಮೆಂಬರುಗಳು.

7. ಮೆ|| ಬಿ. ರಂಗಣ್ಣನವರು.
8. ,, ದಾವೂದ್ ಸಾಹೇಬರು.
9. ,, ಸಿ. ಶ್ರೀನಿವಾಸರಾಯರು.
10. ,, ಎ. ಚಂದ್ರೇಗೌಡರು.

ಗೈರ್ ಹಾಜರು.

11. ,, ಪಿ. ರಂಗಣ್ಣನವರು.
12. ,, ಎ. ರಾಮಣ್ಣನವರು.
13. ,, ಟಿ. ನರಸಿಂಹೈಯ್ಯಂಗಾರ್ರು.
14. ,, ಎಸ್. ಪರ್ವತಪ್ಪನವರು.
15. ,, ಕೆ. ಗೋವಿಂದಪ್ಪನವರು.
16. ,, ಎಚ್. ಪಿಲ್ಕಿಂಗ್ಟನ್ ಸಾಹೇಬರು.
17. ,, ಟಿ. ಶ್ರೀನಿವಾಸರಾಯರು.
18. ,, ಜೆ. ಗಣೇಶರಾಯರು.
19. ,, ವೈ. ಶಾಂತಪ್ಪ ಶೆಟ್ಟರು.
20. ,, ಎಂ. ರಾಮಚಂದ್ರರಾಯರು.
21. ,, ಎಂ. ಚನ್ನಕೇಶವರಾಯರು.
22. ,, ಹಾಲ್‌ಗಾರ್ ವೆಂಕಟಸುಬ್ಬಯ್ಯನವರು.
23.–25. } ಸ್ಥಳ ಖಾಲೀ.

1. ಸನ್ 1907ನೆ ಜೂನ್ ಆಖೈರು ವರಿಗಿನ ಕಂಟ್ರೋಲರವರಿಂದ ತನಿಖೆಯಾಗಿ ಬಂದ ಡಿಸ್ಟ್ರಿಕ್ಟು ಫಂಡು ಜಮಾ ಖರ್ಚು ಲೆಖ್ಖಗಳನ್ನು ಒದಿ ರಿಕಾರ್ಡು ಮಾಡಲಾಯಿತು.

	ರೂ.	ಆ.	ಪೈ.
1906ನೆ ಜುಲೈ 1ರಲ್ಲು ಶಿಲ್ಕು	2,458	10	6
1907ನೆ ಜೂನ್ ಆಖೈರುವರಿಗೆ ಜಮಾ	52,367	7	9
ಜಮ್ಲಾ ...	54,826	2	3
1906—1907ಕ್ಕೆ ಖರ್ಚು	52,674	1	10
ಬಾಕಿ ...	2,152	0	5

ಇದರಿಂದ ಡಿಸ್ಟ್ರಿಕ್ಟು ಬೋರ್ಡಿನಲ್ಲಿ ನಿಂತಿರುವ ಶಿಲ್ಕು ರೂಲ್ಸು ಮೇರೆ ನಿಲ್ಲುವ ಶಿಲ್ಕಿಗಿಂತಲೂ 4,394 ರೂಪಾಯಿಗಳು ಕಮ್ಮಿ ಇರುತ್ತೆಂತ ಕಂಡುಬರುತ್ತೆ.

2. ಸನ್ 1907ನೆ ಜುಲೈ ಆಖೈರುವರಿಗೆ ಚಿಕ್ಕಮಗಳೂರು—ತರೀಕೆರೆ ಮತ್ತು ಬೀರೂರು ಹಿಂದೂ ವೈದ್ಯಶಾಲೆಗಳಲ್ಲಿ ಚಿಕಿತ್ಸೆ ಹೊಂದಿದ ರೋಗಿಗಳ ಸಂಖ್ಯೆಗಳನ್ನು ತೋರಿಸತಕ್ಕ ಲೆಖ್ಖಗಳನ್ನು ಒದಿ ಬೋರ್ಡಿನಲ್ಲಿ ರಿಕಾರ್ಡು ಮಾಡಲಾಯಿತು. ಆಸ್ಪತ್ರೆ ಲೆಖ್ಖಕ್ಕೆ ಸೇರಿದ ರೋಗಿಗಳ ಸಂಖ್ಯೆ ಪರಸ್ಪರ 1621, 1033 ಮತ್ತು 1149 ಇದ್ದಿತು. ಗತ ಸಾಲಿನ ಇದೇ ಮಾಹೆಯಲ್ಲಿ ಪರಸ್ಪರ 915, 1031 ಮತ್ತು 1024 ಇದ್ದಿತು.

3. ಎಳ್ಳಂಬಳಸೆ ಗ್ರಾಮದಲ್ಲಿ 241 ಮನೆಗಳೂ ಮತ್ತು 799 ಪ್ರಜೆಯೂ ಇರೋಣವರಿಂದ ಅಲ್ಲಿ ಬಬ್ಬ ಕಚರಾ ಗುಡಿಸ್ತ ವವನನ್ನು ನೇಮಿಸಬೇಕೆಂತ ಶಿಫಾರಸು ಮಾಡಿರುವ ಡಿವಿಜನಲ್ ಅಸಿಸ್ಟೆಂಟು ಕಮಿಷನರವರ 12—7—07ನೆ ಮರ್ಸು೦ 37ನೆ ಯಾದಿ ಓದಲಾಗಿ 500 ಪ್ರಜೆಗಳಿಗಿಂತಲೂ ಹೆಚ್ಚಾಗಿಯೂ 1000 ಪ್ರಜೆಗಳಿಗಿಂತಲೂ ಕಮ್ಮಿಯಾಗಿಯೂ ಇರತಕ್ಕ ಗ್ರಾಮಗಳ ಲಿಸ್ಟನ್ನು ತೆಗೆಸಿಕೊಂಡು ನಂತರ ಪ್ರತಿ ಗ್ರಾಮದ ಪ್ರಾಮುಖ್ಯತೆಯನ್ನು ಯೋಚಿಸಿ ಯಾವ ಗ್ರಾಮಕ್ಕೆ ಸ್ವೀಪರನ್ನು ಇಡಿಸಬೇಕಾದ್ದು ಅವಶ್ಯಕವೆಂಬುದನ್ನು ನಿರ್ಧರಿಸಬೇಕಾಗುತ್ತೆಂತ ತೀರ್ಮಾನಿಸಲಾಯಿತು.

4. ಡಿಸ್ಟ್ರಿಕ್ಟ್ ಫಂಡು ಖರ್ಚಿನಿಂದ ಕಡೂರು ತಾಲ್ಲೂಕು ಯಗಟಿಯಲ್ಲಿ ಒಂದು ವೈದ್ಯಶಾಲೆಯನ್ನು ಇಡಿಸಬೇಕೆಂತ ಶಿಫಾರಸು ಮಾಡಿ ಬಂದಿರುವ 28—5—07ನೆ ಮರ್ಸು೦ 1133ನೆ ನಂಬರು ಡಿವಿಜನಲ್ ಅಸಿಸ್ಟೆಂಟು ಕಮಿಷನರ ಯಾದಿ ಓದಲಾಗಿ ಈ ವಿಚಾರವನ್ನು ಮುಂದಿನ ಡಿಸ್ಟ್ರಿಕ್ಟ್ ಬೋರ್ಡ್ ಬಜೆಟ್ ಮೀಟಿಂಗಿನಲ್ಲಿಡಬೇಕಾಗಿ ತೀರ್ಮಾನಿಸಲಾಯಿತು.

5. ಕಡೂರು, ಚಿಕ್ಕಮಗಳೂರು, ತರೀಕೆರೆ ತಾಲ್ಲೂಕುಗಳಲ್ಲಿ ಸಹಾ ಡಿಸ್ಟ್ರಿಕ್ಟ್ ಫಂಡು ಕೆಲಸಕ್ಕೆ ಮಾತ್ರವೇ ಬಬ್ಬ ಇಸಂಗೋಸ್ಕರ ಉಂಟಾಗುವ ಖರ್ಚನ್ನು ಸಹಿಸಲು ಡಿಸ್ಟ್ರಿಕ್ಟ್ ಬೋರ್ಡಿನವರು ಒಪ್ಪುತ್ತಾರೆಯೇ ಏನು ಅಂಶವನ್ನು ತಿಳಿಸಬೇಕೆಂತಲೂ ಕೊಪ್ಪ, ಮೂಡಿಗೆರೆ ಮತ್ತು ಎಡೇಹಳ್ಳಿಯಲ್ಲಿರುವ ಮುನಸಿಪಲ್ ಮುತ್ಸದ್ದಿಗಳ ತಲಬನ್ನು 15 ರೂಪಾಯಿಗಳಿಗೆ ಹೆಚ್ಚಿಸಿ, ಮುನಸಿಪಲ್ ಮತ್ತು ಡಿಸ್ಟ್ರಿಕ್ಟ್ ಫಂಡು ಕೆಲಸವನ್ನು ಸಹಾ ಮಾಡುವದಕ್ಕೆ ನೇಮಿಸಿದರೆ ಸದರೀ ಮುನಸಿಪಲ್ ಮುತ್ಸದ್ದಿಯರ ತಲಬಿನ ಪೈಕಿ ಯಾವ ಭಾಗವನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಕೊಡಲು ಒಪ್ಪುತ್ತಾರೆಂಬುವದನ್ನು ಸಹಾ ತಿಳಿಸಬೇಕೆಂತ ತಲಪಿದ 25—7—07ನೆ ಮರ್ಸು೦ 716—Ml. (452—06) 14ನೆ ನಂಬರು ಗವರ್ನಮೆಂಟು ಆರ್ಡರು ಮತ್ತು ಪದೇಪದೇ ಅನೇಕ ನೌಕರರು ಖಾಯಿಲೆ ಬೀಳುವದರಿಂದ ಅನೇಕ ಕೆಲಸಗಳನ್ನು ಬಬ್ಬನೇ ಮಾಡಬೇಕಾಗಿ ಬರುವದರಿಂದ ಡಿಸ್ಟ್ರಿಕ್ಟ್ ಫಂಡು ಕೆಲಸಕ್ಕೆ ಬಬ್ಬ ಇಸಮನ್ನ ನೇಮಿಸಬೇಕಾಗಿಯೂ ಅಭಿಪ್ರಾಯ ಪಟ್ಟಿರುವ ಮೂಡಿಗೆರೆ ತಾಲ್ಲೂಕು ಬೋರ್ಡು ರೆಸಲ್ಯೂಷನನ್ನೂ ಇದೇ ಅರ್ಥಕ್ಕೆ ತರೀಕೆರೆ ತಾಲ್ಲೂಕು ಬೋರ್ಡಿನವರು ರೆಸಲ್ಯೂಷನನ್ನೂ ಡಿಸ್ಟ್ರಿಕ್ಟ್ ಫಂಡು ಕೆಲಸವನ್ನೂ ಹಾಲಿ ಇರತಕ್ಕ ಮುನಿಸಿಪಲ್ ಮುತ್ಸದ್ದಿಯೇ ಎರಡು ವರ್ಷದಲ್ಲಿ ಸದರೀ ಖರ್ಚಿನ ಪೈಕಿ 3ರಲ್ಲಿ 1 ಭಾಗವನ್ನು ಕೊಡಲು ತಾಲ್ಲೂಕು ಬೋರ್ಡಿನವರು ಒಪ್ಪಿರುತ್ತಾರೆಂಬ ಅರ್ಥಕ್ಕೆ ಎಡೇಹಳ್ಳಿ ತಾಲ್ಲೂಕು ಬೋರ್ಡು ರೆಸಲ್ಯೂಷನ್ ಸಹಾ ಓದಲಾಗಿ ಈ ವಿಚಾರವನ್ನು ಮುಂದಿನ ಮೀಟಿಂಗಿನಲ್ಲಿ ಚರ್ಚಿಸಬೇಕೆಂತಲೂ ಅಷ್ಟರಲ್ಲಿ ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಕೆಲಸ ಡಿಸ್ಟ್ರಿಕ್ಟ್ ಫಂಡು ಗುಮಾಸ್ತಗಳಿಂದ ನಡೆಯಬೇಕಾಗಿರುತ್ತದೆಂಬವನ್ನು ಸಹಾ ತಿಳಿದುಕೊಳ್ಳಬೇಕೆಂತ ತೀರ್ಮಾನಿಸಲಾಯಿತು.

6. ಕಡೂರು ತಾಲ್ಲೂಕು ಸಕ್ಕರೇಪಟ್ಟಣದ ಹೋಬಳಿ ಮಂಚಿಹಳ್ಳಿ ಗ್ರಾಮದಲ್ಲಿ ಇರುವ ಭಾವಿ ರಿಪೇರಿ ಮಾಡತಕ್ಕ ಬಗ್ಗೆ ತಯಾರಾಗಿ ಬಂದ 208 ರೂಪಾಯಿಗಳ ಅಂದಾಜನ್ನು ಮಂಜೂರು ಮಾಡಬೇಕೆಂತ ಕಳುಹಿಸಿದ 23—7—07ನೆ ಮರ್ಸು೦ 124ನೆ ನಂಬರ ಡಿವಿಜನಲ ಅಸಿಸ್ಟೆಂಟ ಕಮಿಷನರವರ ಯಾದಿಯನ್ನು ಓದಲಾಗಿ ಈ ವಿಷಯವನ್ನು ಮುಂದಿನ ಬಜೆಟ್ ಮೀಟಿಂಗಿನಲ್ಲಿ ಆಲೋಚಿಸಬೇಕಾಗಿ ತೀರ್ಮಾನಿಸಲಾಯಿತು.

7. ಹಿಂದೂ ವೈದ್ಯಶಾಲೆಗಳಲ್ಲಿ ಇಡತಕ್ಕ ಬಗ್ಗೆ ಗೊತ್ತುಮಾಡಿರತಕ್ಕ ಲೆಕ್ಕಗಳ ನಮೂನೆಗಳಲ್ಲಿ ಕೆಲವು ಬದಲಾವಣೆ ಆಗಬೇಕೆಂತಲೂ ಸಿದ್ಧವಾದ ಔಷಧಗಳು ವೈದ್ಯಶಾಲೆಗಳಿಗೆ ಸಪ್ಲೈ ಆಗತಕ್ಕ ಬಗ್ಗೆ ಏರ್ಪಾಡು ಮಾಡಬೇಕೆಂತಲೂ ಸಹಾ ತಲಪಿದ 3—8—07ನೆ ಮರ್ಸು೦ ಡಿವಿಜನಲ್ ಅಸಿಸ್ಟೆಂಟು ಕಮಿಷನರ 131ನೆ ನಂಬರು ಮೆಮೋ ಓದಲಾಗಿ ಹಾಲಿ ಇರತಕ್ಕ ರೂಲು ಮೇರೆ ರೋಗಿಗಳ ಹುಟ್ಟಿನ ಗುರುತನ್ನು ಹಾಕಿಸಬೇಕೆಂಬುವದು ಸಲೀಸ ವೈದ್ಯಶಾಲೆಗಳಲ್ಲಿ ಔಷಧ ತೆಗೆದುಕೊಳ್ಳುವದಕ್ಕೆ ಬರತಕ್ಕ ರೋಗಿಗಳನ್ನು ಪ್ರತಿಬಂಧಕ ಪಡಿಸುತ್ತದೆಂತಲೂ, ಆದ್ದರಿಂದ ಈ ಪದ್ಧತಿಯನ್ನು ನಿಲ್ಲಿಸತಕ್ಕ ಬಗ್ಗೆ ಗವರ್ನಮೆಂಟಿಗೆ ಬರೆಸಬೇಕೆಂಬದಾಗಿಯೂ ಹಾಲೀ ವೈದ್ಯಶಾಲೆಗಳಿಗೆ ಔಷಧಿ ಖರ್ಚಿಗೋಸ್ಕರವಾಗಿ ಮಹೆಯಾನಾ ಕೊಡುತ್ತಲಿರುವ ಮೊಬಲಗಿಗೆ ಬದಲಾಗಿ ಪಂಡಿತರುಗಳಿಂದ ತಯಾರಾಗಿ ಸಿದ್ಧವಾಗಿರತಕ್ಕ ಔಷಧಿಗಳನ್ನು ಮೈಸೂರು ಹಿಂದೂ ವೈದ್ಯಶಾಲೆಯಿಂದ ನೇರಾ ಪ್ರತಿ ವೈದ್ಯಶಾಲೆಗೂ ಸಪ್ಲೈ ಆಗುವ ಭಾಗದಲ್ಲಿಯೂ ಸಹಾ ಗವರ್ನಮೆಂಟಿಗೆ ಬರೆಸಬೇಕಾಗಿ ತೀರ್ಮಾನಿಸಲಾಯಿತು.

8. ಹಾಲಿ ಡಿಸ್ಟ್ರಿಕ್ಟ್ ಫಂಡಿನಿಂದ ಸಾಲಾಬಾದು ರಿಪೇರಿ ಮಾಡಿಸುತ್ತಲಿರುವ ಕೆಲವು ರಸ್ತೆಗಳಿಗೆ ಉಂಟಾಗತಕ್ಕ ಖರ್ಚನ್ನು ಪ್ರಾವಿನ್ಷಿಯಲ್ ಫಂಡಿನಿಂದ ಕೊಡುವದಕ್ಕಾಗುವದಿಲ್ಲವೆಂತ ತಲಪಿದ 5—8—07ನೆ ಮರ್ಸು೦ 1050-I—L. B. 178—05ನೆ ನಂಬರ ಗವರ್ನಮೆಂಟ ಆರ್ಡರ ಓದಲಾಗಿ ಈ ವಿಷಯವನ್ನು ಮುಂದೆ ಏರ್ಪಡಿಸತಕ್ಕ ಸಬ್ ಕಮಿಟಿಯ ಆಲೋಚನೆಗೆ ಇಡತಕ್ಕದ್ದೆಂತ ತೀರ್ಮಾನಿಸಲಾಯಿತು.

9. ಆನೆಮಹಲ್ ಮೂಡಿಗೆರೆ ಡಿಸ್ಟ್ರಿಕ್ಟ್ ಫಂಡು ರಸ್ತೆಯಲ್ಲಿರತಕ್ಕ ಹೊಸದಾಗಿ ಕಟ್ಟಿ ಪೂರೈಸಿರುವ ಅಣಸಾಲ್ ಸೇತುವೆಯ ಮೇಲೆ ಸುಂಕವನ್ನು ಹಾಕಬೇಕೆಂಬ ಪ್ರಸ್ತಾಪ ಬಂದದ್ದರ ಮೇಲೆ, ಈ ಸೇತುವೆಯು ಇನ್ನೂ ಪೂರೈಸಿಲ್ಲವೆಂದು ತಿಳಿದದ್ದರ ಮೇಲೆ ಈ ವಿಷಯವನ್ನು ಸದ್ಯಕ್ಕೆ ನಿಲ್ಲಿಸಬೇಕೆಂತ ತೀರ್ಮಾನಿಸಲಾಯಿತು.

10. ತರೀಕೆರೆ ತಾಲ್ಲೂಕು ಶಿವನೀ ಹೋಬಳಿ ಜಲ್ದೀಹಳ್ಳಿಯಲಿರತಕ್ಕ ಇರುವ ಭಾವಿಗೆ ಕಲ್ಲು ಕಟ್ಟತಕ್ಕ ಬಗ್ಗೆ ತಯಾರಾಗಿ ಬಂದ 714 ರೂಪಾಯಿಗಳ ಅಂದಾಜು ಮಂಜೂರು ಬಂದ 8—8—07ನೆ ಮರ್ಸು೦ ತರೀಕೆರೆ ತಾಲ್ಲೂಕು ಅಮಲ್ದಾರ್ 25ನೆ ನಂಬರು ರಿಪೋರ್ಟು ಓದಲಾಗಿ ಸದರಿ ಭಾವಿಯನ್ನು ಡಿವಿಜನಲ್ ಅಸಿಸ್ಟೆಂಟು ಕಮಿಷನರವರು ಅಜಮಾಯಿಷಿ ಮಾಡಿದ ನಂತರ ಈ ವಿಷಯ ಚರ್ಚಿಸಬೇಕಾಗಿ ತೀರ್ಮಾನಿಸಲಾಯಿತು.

11. ಆಣಜೂರು ಕಡವಿನಲ್ಲಿರತಕ್ಕ ದೋಣಿಯನ್ನು ಕತ್ತಲೆಗಂಡಿಗೆ ವರ್ಗಾಯಿಸುವದರಿಂದ ಆಣಜೂರು ಮತ್ತು ಅದರ ಸುತ್ತು ಮುತ್ತಲೂ ಇರತಕ್ಕ ಗ್ರಾಮಸ್ಥರುಗಳಿಗೆ ಬಹಳ ಅನಾನುಕೂಲವಾಗುತ್ತೆಂಬ ಅರ್ಥಕ್ಕೆ ಮೂಡಿಗೆರೆ ತಾಲ್ಲೂಕು ಬೋರ್ಡಿನವರು ಪಟ್ಟಿರತಕ್ಕ ಅಭಿಪ್ರಾಯವನ್ನು ಮಂಜೂರು ಬಂದ ಮೂಡಿಗೆರೆ ತಾಲ್ಲೂಕು ಅಮಲ್ದಾರವರ 11—8—07ನೆ ಮರ್ಸು೦,

45ನೆ ನಂಬರಿ ರಿಪೋರ್ಟು ಓದಲಾಗಿ ಅಣಜಾರಿನಲ್ಲಿರತಕ್ಕ ದೋಣಿಯನ್ನು ಕತ್ತಲೇಗಂಡಿಗೆ ವರ್ಗಾಯಿಸತಕ್ಕ ಅವಶ್ಯಕವಿಲ್ಲವೆಂತ ತೀರ್ಮಾನಿಸಲಾಯಿತು.

12. ಗುಲಗಂಜೀ ಮನೆಯಿಂದ ಗಂಗಾವುೂಲಕ್ಕೆ ಹೋಗುವ ರಸ್ತೆಯನ್ನು ಸ್ವಲ್ಪಮಟ್ಟಿಗೆ ರಿಪೇರಿ ಮಾಡತಕ್ಕ ಬಗ್ಗೆ ಮೈಲಿ ಒಂದರ 30 ರೂಪಾಯಿ ಬೇಕಾಗುತ್ತೆಂತ ಕಡೂರು ಡಿವಿಜನ್ ಎಗ್ಜಿಕ್ಯೂಟಿವ ಇಂಜನಿಯರವರ 21—8—07ನೆ ಮುರ್ಸಲ 242ನೆ ಡಾಕೆಟ್ಟು ಓದಲಾಗಿ, ಈ ರಸ್ತೆಯನ್ನು ರಿಪೇರಿ ಮಾಡಲು ಡಿಸ್ಟ್ರಿಕ್ಟ್ ಫಂಡಿನಲ್ಲಿ ಕೇವಲ ಜಾಜತಿ ಹಣ ಇರೋಣವರಿಂದಲೂ ಮತ್ತು ಜನ ಬಾಹುಳ್ಯ ಈ ರಸ್ತೆಯು ಪ್ರಯೋಜನಕರವಾಗಿಲ್ಲದಿರೋಣವರಿಂದಲೂ ಡಿಸ್ಟ್ರಿಕ್ಟು ಫಂಡಿನಿಂದ ಇದನ್ನು ಮಾಡತಕ್ಕದ್ದು ಅನಾವಶ್ಯಕವಾಗಿರುತ್ತೆ. ಆದ್ದರಿಂದ ಈ ಕಾಮಗಾರಿಗೆ ತಗಲುವ ಖರ್ಚನ್ನು ಪ್ರೊವಿಂಷಿಯಲ್ ಫಂಡಿನಿಂದ ಸಹಿಸಬೇಕೆಂತ ಗೌರ್ನಮೆಂಟಿಗೆ ಬರೆಯಬೇಕಾಗಿ ತೀರ್ಮಾನಿಸಲಾಯಿತು.

13. ತರೀಕೆರೆ ತಾಲ್ಲೂಕು ಜೋಡಿಕಟ್ಟೆ ಟ್ರಾವಲರ್ಸ್ ಬಂಗ್ಲೊ ರಿಪೇರಿ ಬಗ್ಗೆ ತಯಾರಾಗಿ ಬಂದ 207 ರೂಪಾಯಿಗಳು ಅಂದಾಜಾವನ್ನು ಮಂಜೂರಿ ಬಗ್ಗೆ ಮಾಲಫೂಫಿಸಿ ಬಂದ ಕಡೂರು ಡಿಸ್ಟ್ರಿಕ್ಟ್ ಎಗ್ಜಿಕ್ಯೂಟಿವ ಇಂಜನಿಯರವರ 25—8—07ನೆ ಮುರ್ಸಲ 249ನೆ ನಂಬರ ಡಾಕೆಟ ಓದಲಾಗಿ ಈ ವಿಷಯವನ್ನು ಮುಂದಿನ ಬಡಜಟ ಮೀಟಿಂಗಿನಲ್ಲಿ ಚರ್ಚಿಸಬೇಕಾಗಿ ತೀರ್ಮಾನಿಸಲಾಯಿತು.

14. ಅಜ್ಜಂಪುರದ ಹಳೇ ಟ್ರಾವಲರ್ಸ್ ಬಂಗ್ಲೆಯನ್ನು ರಿಪೇರಿ ಮಾಡೋಣದರಿಂದ ಉಪಯೋಗವಿಲ್ಲವೆಂತಲೂ ಒಂದು ಹೊಸ ಕಟ್ಟಡವನ್ನು ಕಟ್ಟಬೇಕಾದ್ದು ಅವಶ್ಯಕವೆಂತಲೂ ಅಭಿಪ್ರಾಯ ಪಟ್ಟಿರುವ 25—8—07ನೆ ಮುರ್ಸಲ ಕಡೂರು ಡಿಸ್ಟ್ರಿಕ್ಟ್ ಎಗ್ಜಿಕ್ಯೂಟಿವ ಇಂಜನಿಯರವರ 250ನೆ ನಂಬರು ಡಾಕೆಟ್ಟು ಓದಲಾಗಿ ಹಾಲಿ ಇರತಕ್ಕ ಕಟ್ಟಡವನ್ನು ರಿಪೇರಿ ಮಾಡತಕ್ಕದ್ದು ಸಾಧ್ಯವಿಲ್ಲವೇ ಎಂಬುವದನ್ನು ಆಜಮಾಯಿಷಿ ಮಾಡತಕ್ಕ ಬಗ್ಗೆ ಹೊಸ ಬಂಗಲೆಯನ್ನೇ ಕಟ್ಟಬೇಕಾದ್ದು ಅವಶ್ಯಕವೆ ಎಂಬುದನ್ನು ನಿರ್ಧರಿಸುವ ಬಗ್ಗೆ ಸದರಿ ಎಗ್ಜಿಕ್ಯೂಟಿವ ಇಂಜನಿಯರಿಗೆ ಬರೆಯಬೇಕಾಗಿ ತೀರ್ಮಾನಿಸಲಾಯಿತು.

15. ಈ ಡಿಸ್ಟ್ರಿಕ್ಟಿನ ಬೇರೆಬೇರೆ ಸ್ಥಳಗಳಲ್ಲಿ ಪ್ರತಿಒಂದು ವಿಧವಾದ ಕೆಲಸಕ್ಕೂ ನಿಯಾಮಕವಾಗಿರತಕ್ಕ ದರಗಳ ಪಟ್ಟಿಯನ್ನು ಮಾಲಫೂಫಿಸಿ ಬಂದ 1—9—07ನೆ ಮುರ್ಸಲ ಕಡೂರು ಡಿವಿಜನ್ ಎಗ್ಜಿಕ್ಯೂಟಿವ ಇಂಜನಿಯರವರ 257ನೆ ನಂಬರು ಡಾಕೆಟ ಓದಲಾಗಿ ಸದರಿ ದರಗಳ ಪಟ್ಟಿಯನ್ನು ಬೋರ್ಡಿನವರು ಒಪ್ಪಿರುತ್ತಾರೆಂಬದಾಗಿ ಅಭಿಪ್ರಾಯ ಪಟ್ಟಿರುತ್ತಾರೆ.

16. ಮೈಸೂರು ಸಂಸ್ಥಾನದಲ್ಲಿ ಹಲ್ತ ಸ್ಕೀಮನ್ನು ಮಂಜೂರ್ಮಾಡಿರುವ ಬಗ್ಗೆ ತಲಪಿದ 3—9—07ನೆ ಮುರ್ಸಲ 2109-24—San. 213—06-2ನೆ ನಂಬರ ಗೌರ್ನಮೆಂಟ ಆರ್ಡರ ಓದಿ ರಿಕಾರ್ಡು ಮಾಡಲಾಯಿತು.

17. ಈ ಕೆಳಗೆ ನಮೂದಾಗುವ ಗೌರ್ನಮೆಂಟ ಆರ್ಡರ್ ಮತ್ತು ಇತರ ಕಾಗದಗಳನ್ನು ಓದಿ ರಿಕಾರ್ಡು ಮಾಡಲಾಯಿತು.

(i) ಹರಿಹರಪುರದ ಆಸ್ಪತ್ರೆಯನ್ನು ಬಾಳೂರಿಗೆ ವರ್ಗಾಯಿಸುವದನ್ನು ಮಂಜೂರ್ಮಾಡಿರುತ್ತೆಂತ ತಲಪಿದ 2—9—07ನೆ ಮುರ್ಸಲ 2096-7—L. B. 408—06-3ನೆ ನಂಬರು ಗೌರ್ನಮೆಂಟ ಆರ್ಡರು ಮಾಲಫೂಫಿಸಿ ಬಂದ ಮೆ|| ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮೀಷನರವರ 1465ನೆ ಮೆಮೊ.

(ii) ಸನ್ 1907ನೆ ಇಸವಿ ಮಾರ್ಚಿ ತಿಂಗಳಲ್ಲಿ ಕೂಡ್ಲಿ ಹಳ್ಳಿ ನಡೆದ ದನಗಳ ಪರಿಷೆಯು ಸಮರ್ಪಕವಾಗಿತ್ತೆಂದು ಶಿವಮೊಗ್ಗ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರವರು ರಿಪೋರ್ಟು ಮಾಡಿದ್ದನ್ನು ರಿಕಾರ್ಡು ಮಾಡಿರುತ್ತದೆಂತ ತಲಪಿದ 6—8—07ನೆ ಮುರ್ಸಲ 1098-1106—L. B. 320—06-9ನೆ ನಂಬರು ಗೌರ್ನಮೆಂಟು ಆರ್ಡರು.

(iii) ಕೂನೂರಿನಲ್ಲಿರತಕ್ಕ "ಪ್ಯಾಸ್ಟಿಯರ್ ಇನ್ಸ್ಟಿಟ್ಯೂಟಿಗೆ" 5 ವರುಷಗಳ ವರಿಗೂ ಪ್ರತಿ ಸಾಲಿನಲ್ಲಿಯೂ ಲೋಕಲ್ ಫಂಡ್ಸ್ ಜನರಲ್‌ನಿಂದ 500 ರೂಪಾಯಿಗಳು ಗ್ರಾಂಟ್ ಕೊಡುವದನ್ನು ಮಂಜೂರ್ಮಾಡಿರುವುದೆಯೂ, ಪ್ರತಿ ಒಂದು ಬೋರ್ಡಿನವರು ಪ್ರತ್ಯೇಕವಾಗಿ ಅದಕ್ಕೆ ಏನೂ ವಂತಿಗೆ ಕೊಡಬೇಕಾದ್ದಿಲ್ಲವೆಂತಲೂ ಸಹ ತಲಪಿದ 10—8—07ನೆ ಮುರ್ಸಲ 1352-9—L. B. 458—06-2ನೆ ಗೌರ್ನಮೆಂಟ ಆರ್ಡರು.

(iv) ಶಿಡಬು ಹಾಕತಕ್ಕ ಕೆಲಸಗಳು ಮತ್ತು ಮೈಸೂರು ಸಂಸ್ಥಾನದಲ್ಲಿರತಕ್ಕ "ಶಿಡಬು ಹಾಕುವದನ್ನು ಕಲಿಸತಕ್ಕ ಆಲಯದ" ವಿಷಯದಲ್ಲಿಯೂ ಸನ್ 1906ನೆ ಕ್ಯಾಲೆಂಡರ ವರ್ಷದ ರಿಪೋರ್ಟನ್ನು ಪರಿಶೀಲಿಸಿದ ಬಗ್ಗೆ ತಲಪಿದ 7—8—07ನೆ ಮುರ್ಸಲ 1173—Med. 328—06-4ನೆ ನಂಬರು ಗೌರ್ನಮೆಂಟ ಆರ್ಡರು.

(v) ಬೀಜದ ಹೋರಿಗಳನ್ನು ಅಪೇಕ್ಷಿಸತಕ್ಕ ರೈತರುಗಳಿಗೆ ಜಾಗ್ರತೆ ಸಪ್ಲೈ ಆಗತಕ್ಕದ್ದಕ್ಕೆ ಸರಿಯಾದ ಏರ್ಪಾಡನ್ನು ಮಾಡಿಸತಕ್ಕ ಬಗ್ಗೆ ಮಿಲಿಟರಿ ಅಸಿಸ್ಟೆಂಟ ಮತ್ತು ಅಮೃತಮಹಲ ಡಿಪಾರ್ಟಮೆಂಟ ಚಾರ್ಜಿನಲ್ಲಿರತಕ್ಕ ಆಫೀಸರು ಸಹ ನಿಗಾ ಇಡಿಸಬೇಕಾಗಿ ತಲಪಿದ 9—9—07ನೆ ಮುರ್ಸಲ 2311-9—L. B. 285—06-2ನೆ ಗೌರ್ನಮೆಂಟ ಆರ್ಡರು.

(vi) ಸನ್ 1907ನೆ ಜನವರಿಯಲ್ಲಿ ಎಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ನಡಿಸಿದ ದನವಿನ ಪರಿಷೆಯಿಂದ ಉಂಟಾದ ಫಲಿತಾಂಶಗಳ ವಿಷಯದಲ್ಲಿ ತಲಪಿದ ರಿಪೋರ್ಟನ್ನು ರಿಕಾರ್ಡು ಮಾಡಿರುತ್ತೆಂತ ತಲಪಿದ 30—7—07ನೆ ಮುರ್ಸಲ 860-9—L. B. 462—06-2ನೆ ನಂಬರು ಗೌರ್ನಮೆಂಟ ಆರ್ಡರು.

(vii) ಲೋಕಲ ಬೋರ್ಡು ಮೆಂಬರುಗಳ ಅವಧಿಯು, ತಾಲ್ಲೂಕು ಬೋರ್ಡು ಮೆಂಬರುಗಳ ಅವಧಿ ಪೂರೈಸುವಾಗಲೇ ಪೂರೈಸಬೇಕೆಂತಲೂ ಮತ್ತು ಅದೇ ಸಾಲಿನ ಜುಲೈ ತಿಂಗಳಲ್ಲಿ ಪ್ರಸಿದ್ಧಪಡಿಸತಕ್ಕ ಬಗ್ಗೆ ಮೊದಲೆ ಮೆಂಬರುಗಳ ಚುನಾವಣೆಯನ್ನು ಮಾಡತಕ್ಕ ಬಗ್ಗೆ ತಕ್ಕ ಏರ್ಪಾಡನ್ನು ಮಾಡಿಸಬೇಕೆಂತಲೂ ಸಹ ತಲಪಿದ 8-8-07ನೆ ಮುರ್ಸಲ 1256-63—L. B. 90—06-10ನೆ ನಂಬರು ಗೌರ್ನಮೆಂಟು ಆರ್ಡರು.

(viii) ಪ್ರತಿಒಂದು ಆಸ್ಪತ್ರೆಗೂ ದೇಶೀಯ ಔಷಧಿಗಳನ್ನು ಕೊಂಡುಕೊಳ್ಳತಕ್ಕ ಬಗ್ಗೆ ಬಡ್ಜಟ್ಟಿನಲ್ಲಿ ಮದಗಿಸಿರುವ ಮಾಹೆಯಾನಾ 5 ರೂಪಾಯಿಗಳಿಗೆ ಬದಲಾಗಿ 6 ರೂಪಾಯಿಗೆ ಹೆಚ್ಚಿಸಲು ಆಗುವದಿಲ್ಲವೆಂತಲೂ ಇನ್ನು ಮುಂದೆ ಈ ಬಗ್ಗೆ ನ್ಯಾಯವಾಗಿ ಎಷ್ಟು ಮೊಬಲಗು ಖರ್ಚಾಗುತ್ತೊ ಅಷ್ಟನ್ನೇ ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟು ಫಂಡಿಗೆ ತೋರಿಸಬೇಕೆಂತ ತೀರ್ಮಾನಿಸಲಾಯಿತು.

18. "ಫೈನಾನ್ಸ ಕಮಿಟಿ" ಯವರು ತಯಾರ್ಮಾಡಿದ 1906—07ನೆ ಸಾಲಿನ ಡಿಸ್ಟ್ರಿಕ್ಟು ಫಂಡಿನ ಜಮಾ ಖರ್ಚು ಲೆಖ್ಖಗಳನ್ನು ಮತ್ತು ಬೇರೆಬೇರೆ ಹೆಡ್ಡುಗಳಲ್ಲಿ ಉಂಟಾಗಿರತಕ್ಕ ವ್ಯತ್ಯಾಸಗಳಿಗೆ ಸಮಜಾಯಿಷಿಗಳನ್ನು ತೋರಿಸುವ ಪಟ್ಟಿಯನ್ನು ಸಹ ಓದಿ ರಿಕಾರ್ಡು ಮಾಡಲಾಯಿತು.

19. ಎಡೇಹಳ್ಳಿ ಆಸ್ಪತ್ರೆ ಅಸಿಸ್ಟೆಂಟ್ ಮುತ್ತಿನ ಕೊಪ್ಪಕ್ಕೆ ಸಂತೆ ದಿವಸ ಹೋಗಿ ಅಲ್ಲಿರತಕ್ಕ ರೋಗಿಗಳಿಗೆ ಔಷಧಗಳನ್ನು ವಾರಕ್ಕೊಂದಾವರ್ತಿ ಕೊಡಬೇಕೆಂಬ ಎಡೆಹಳ್ಳಿ ಸಬ್ ತಾಲ್ಲೂಕು ಬೋರ್ಡಿನವರು 31—8—07ನೆ ಮರ್ಕ್ಯಂನಲ್ಲಿ ಮಾಡಿದ ತೀರ್ಮಾನವನ್ನು ಡಿಸ್ಟ್ರಿಕ್ಟು ಬೋರ್ಡಿನವರ ಆಲೋಚನೆ ಬಗ್ಯೆ ಮಲಪ್ರೂಫಿಸಿ ಬಂದ 12—9—07ನೆ ಮರ್ಕ್ಯಂ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ಯಾದಿ ಓದಲಾಗಿ ಈ ವಿಚಾರದಲ್ಲಿ ಗೌರ್ನಮೆಂಟಿನವರು ಆಖೈರು ಹುಕುಂ ಕೊಟ್ಟಿರುತ್ತಾರಾದಕಾರಣ ಈ ಪ್ರಶ್ನೆಯನ್ನು ಪುನಹ ಹಾಕಬೇಕಾದ ಅವಶ್ಯಕತೆ ಇಲ್ಲವೆಂಬದಾಗಿ ತೀರ್ಮಾನಿಸಲಾಯಿತು.

20. ಕಡೂರು ತಾಲ್ಲೂಕು ಕಸಬಾ ಹೋಬಳಿ ಚಿಕ್ಕಪಟ್ಟಣಗೆರೆಯಲ್ಲಿರತಕ್ಕ ಕೇದೋಭಾವಿಗೆ ಸುತ್ತುಕಲ್ಲು ಕಟ್ಟಿಸತಕ್ಕ ಬಗ್ಯೆ ತಯಾರಾಗಿ ಬಂದ 460 ರೂಪಾಯಿಗಳ ಅಂದಾಜಾವನ್ನು ಡಿಸ್ಟ್ರಿಕ್ಟು ಬೋರ್ಡಿನವರ ಮಂಜೂರಾತಿ ಬಗ್ಯೆ ಮಲಪ್ರೂಫಿಸಿ ಬಂದ 12—9—07ನೆ ಮರ್ಕ್ಯಂ 44ನೆ ನಂಬರು ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ಯಾದಿ ಓದಲಾಗಿ ಈ ವಿಚಾರವನ್ನು ಬಡ್ಜಟ್ ಮೀಟಿಂಗನಲ್ಲಿ ಚರ್ಚಿಸಬೇಕಾಗಿ ತೀರ್ಮಾನಿಸಲಾಯಿತು.

21. ಗ್ರಾಮಪಂಚಾಯಿತಿಯಲ್ಲಿ ಮನೆ ಕಂದಾಯವನ್ನು ಕೊಡದೆ ತಪ್ಪಿದವರಿಗೆ ಕೊಡತಕ್ಕ ತಗಾದೆ ನೋಟೀಸಿನ ಮೇಲೆ ಸದರಿ ನೋಟೀಸುಗಳಲ್ಲಿ ಕಂಡ ಬಾಕಿಯು ಒಂದು ರೂಪಾಯಿಗೆ ಅತಿಕ್ರಮಿಸದೆ ಇದ್ದಲ್ಲಿ 0—2—0 ಆಣೆಗಳ ಫೀ ವಸೂಲ್ಮಾಡಬೇಕೆಂತಲೂ ಒಂದು ರೂಪಾಯಿಗೆ ಮೀರಿ 5 ರೂಪಾಯಿಗಳಿಗೆ ಮೀರದಿದ್ದಲ್ಲಿ ಪ್ರತಿ ಒಂದು ನೋಟೀಸಿಗೂ 4 ಆಣೆಯನ್ನೂ, 5 ರೂಪಾಯಿಗಳಿಗೆ ಮೇಲ್ಪಟ್ಟು ಬಾಕಿ ಸಮೂದಿರುವ ಬಾಕಿಯುಳ್ಳ ಪ್ರತಿ ಒಂದು ನೋಟೀಸಿಗೂ 8 ಆಣೆ ಫೀಜು ವಸೂಲ್ಮಾಡಬೇಕೆಂತಲೂ ತಲಪಿನ 18—9—07ನೆ ಮರ್ಕ್ಯಂ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ 293ನೆ ಯಾದಿ ಓದಲಾಗಿ ಈ ವಿಚಾರವನ್ನು ಮುಂದಿನ ಮೀಟಿಂಗಿನಲ್ಲಿ ಚರ್ಚಿಸಬೇಕಾಗಿ ತೀರ್ಮಾನಿಸಲಾಯಿತು.

22. ಮುಂದಿನ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗ್ ನವಂಬರ್ 30ನೆ ಶನಿವಾರ ನಡೆಯಬೇಕಾಗಿ ತೀರ್ಮಾನಿಸಲಾಯಿತು.

ಬಿ. ಜೆ. ಕುಮಾರಸಾಮಿ ನಾಯಕ್,
ಪ್ರೆಸಿಡೆಂಟ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ತಾರೀಖು ನೆ ನವಂಬರ್ 1907.

ಚಿತ್ರದುರ್ಗದ ಡಿಸ್ಟ್ರಿಕ್ಟು ಚೆಳ್ಳಕೆರೆ ತಾಲ್ಲೂಕು ಮೀರಾಸಾಬಿಹಳ್ಳಿ ಬಳಿ ಹೊಸದಾಗಿ ಕಟ್ಟಿ ಇರುವ ರಾಣಿತಲಾವ್‌ಕೆರೆ ಅಚ್ಚುಕಟ್ಟಿಗೆ ಸೇರಿ ಇರುವ ಜಮೀನುಗಳ ಹಿಡುವಳಿ ಹಕ್ಕನ್ನು ಮೀರಾಸಾಬಿಹಳ್ಳಿ ಬಳಿ ಸನ್ 1908ನೆ ಇಸವಿ ಜನವರಿ ತಾರೀಖು 6ನೆ ಸೋಮವಾರದ ದಿನ ಮತ್ತು ಮರುದಿವಸಗಳಲ್ಲಿ ಬಹಿರಂಗವಾಗಿ ಹರಾಜು ಮಾಡಿಸುತ್ತೆ ಏಂಬದಾಗಿ ಈ ಮೂಲಕ ನೋಟೀಸನ್ನು ಕೊಟ್ಟಿರುತ್ತೆ.

ಜಾಸ್ತಿ ತಪಶೀಲುಗಳನ್ನು ಸನ್ 1907ನೆ ಮರ್ಕ್ಯಂ ನವಂಬರು ತಾರೀಖು 28ನೆ ಗೆಜೆಟ್ಟಿನ IIನೆ ಭಾಗದ 554—555—556ನೆ ಪಾನುಗಳನ್ನು ನೋಡಿಕೊಳ್ಳಬೇಕು.

ಎಂ. ಚೆಂಗ್ಯೆಯ್ಯಶೆಟ್ಟಿ,
ಡೆಪ್ಯುಟಿ ಕಮಿಷನರ್.

1907ನೆ ಇಸವಿ ಸೆಪ್ಟಂಬರ್ ತಾರೀಖು 25ನೆ ಬುಧವಾರ ನಡೆದ ಚಿತ್ರದುರ್ಗದ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

ಪ್ರೆಸಿಡೆಂಟರು—ಎಂ. ಚೆಂಗಯ್ಯಶೆಟ್ಟರವರು, ಎಸ್‌ಕ್ವೈಯರ್, ಬಿ. ಎ.
ವೈಸ ಪ್ರೆಸಿಡೆಂಟರು—ಬಿ. ಭೀಮರಾಯರವರು, ಎಸ್‌ಕ್ವೈಯರ್, ಬಿ. ಎ.

ಅಫಿಷಿಯಲ್ ಮೆಂಬರುಗಳು.

1. ಚಿತ್ರದುರ್ಗ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರು, (ಗೈರಹಾಜರ್).
2. ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರವರು.
3. ದಾವಣಗೆರೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು.
4. ಚಿತ್ರದುರ್ಗದ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು.
5. ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರವರು.

ನಾನ್ ಅಫಿಷಿಯಲ್ ಮೆಂಬರುಗಳು.

1. ಮೌ|| ಸೈಯದ್ ಮಹಮ್ಮದ್ ಹಸನ್ ಸಾಹೇಬರವರು, (ಗೈರಹಾಜರ್).
2. ,, ಟಿ. ಸ್ವಾಮಿರಾಯಾಚಾರ್ರು, ಗೈರಹಾಜರ್.
3. ,, ಪಟೇಲ್ ಕೆಂಚವೀರಪ್ಪನವರು.

4. ಮಿ|| ನಾಯಕನಹಟ್ಟಿ ಹನುಮಂತಪ್ಪನವರು.
5. ,, ನೇರ್ಲಹಳ್ಳಿ ಸಂಣಪ್ಪನವರು.
6. ,, ಭಾರಿ ಸಂಣಪ್ಪನವರು.
7. ,, ಜಗಲೂರು ಫಕೀರ್ ಸಾಹೇಬರವರು.
8. ,, ಸಿ. ಎನ್. ಕೃಷ್ಣಪ್ಪನವರು, ಗೈರ್ ಹಾಜರ್.
9. ,, ಗುಂಡೇರಿ ಗೋಪಾಲಯ್ಯನವರು.
10. ,, ನಾಡಿಗ ಸಿದ್ಧರಾಮಯ್ಯನವರು.
11. ,, ಹೊಸದುರ್ಗದ ಖಾಸಿಂಸಾಹೇಬರವರು.
12. ,, ಪಾಳೇದಹಳ್ಳಿ ನಾಗಪ್ಪನವರು.
13. ,, ಹರಿಹರದ ಬಾಲಕೃಷ್ಣರಾಯರವರು.
14. ,, ದಾವಣಗೆರೆ ಷಡಾಕ್ಷರಪ್ಪನವರು, ಗೈರ್‌ಹಾಜರ್.
15. ,, ಡಿಟೋ ನಬೀ ಸಾಹೇಬರವರು, ಗೈರ್ ಹಾಜರ್.
16. ,, ಹಿರಿಯೂರು ತಾಲ್ಲೂಕು ಚನ್ನಗೌರಯ್ಯನವರು.
17. ,, ಲೋಕಿಕೆರೆ ಹನುಮಂತಪ್ಪನವರು, ಗೈರ್ ಹಾಜರ್.
18. ,, ಸಾವುಕಾರ್ ವೀರಣ್ಣನವರು, ಗೈರ್ ಹಾಜರ್.

I. 1907ನೆ ಇಸವಿ ಆಗಸ್ಟು ಮಾಹೆ 28ರಲ್ಲು ನಡೆದ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ದೃಢಪಡಿಸಲಾಯಿತು.

II. ಫೈನಾನ್ಸು ಕಮಿಟಿಯವರಿಂದ ತಲ್ಪಿದ 1906–07ನೆ ಸಾಲಿನ ಡಿಸ್ಟ್ರಿಕ್ಟು ಫಂಡು ಅಡ್ಮಿನಿಸ್ಟ್ರೇಷನ್ ರಿಪೋರ್ಟನ್ನು ಓದಲಾಯಿತು.

ಇದನ್ನು ಅಂಗೀಕರಿಸಿ ಗವರ್ನಮೆಂಟಿಗೆ ರವಾನಿಸಬೇಕಾಗಿ ತೀರ್ಮಾನಿಸಲಾಯಿತು.

III. ವಿಲೇಜ್ ಯೂನಿಯನ್‌ಗಳಲ್ಲಿ ನೋಟಸ್ ಫಿ ವಸೂಲ್ಮಾಡತಕ್ಕ ವಿಷಯದಲ್ಲಿ ರಿಪೋರ್ಟು ಕಳುಹಿಸಬೇಕಾಗಿ ಗವರ್ನಮೆಂಟಿನಿಂದ ತಲ್ಪಿದ ಸರ್ಕ್ಯೂಲರ್ ಓದಲಾಯಿತು.

ಅದರಲ್ಲಿ ಪ್ರೊಪೋಜ್ ಮಾಡಿರುವ ಮೇರೆ ನೋಟಸ್ ಫೀ ವಸೂಲ್ಮಾಡತಕ್ಕದ್ದು ಅನಾವಶ್ಯಕವೆಂತ ತೀರ್ಮಾನಿಸಲಾಯಿತು.

IV. ಮೈಸೂರು ಸಂಸ್ಥಾನವಲ್ಲಿ (Public Health) ಡಿಪಾರ್ಟಮೆಂಟ ಸ್ಥಾಪನೆ ಮಾಡತಕ್ಕ ಬಗ್ಯೆ ಆಗಿರುವ ಏರ್ಪಾಡನ್ನು ಮಂಜೂರ್ಮಾಡಿರುವದಾಗಿ ಗವರ್ನಮೆಂಟನಿಂದ ತಲ್ಪಿದ ಪ್ರೊಸೀಡಿಂಗ್ಸು ಓದಲಾಯಿತು.

ಇದನ್ನು ಮುಂದಿನ ಮೀಟಿಂಗ್‌ನಲ್ಲಿ ಚರ್ಚಿಸಬೇಕಾಗಿ ತೀರ್ಮಾನಿಸಲಾಯಿತು.

V. ರೈತರಿಗೆ ಬೀಜದ ಹೋರಿಗಳನ್ನು ಅಮೃತಮಹಲ್ ಇಲಾಖೆಯಿಂದ ಕೊಡಿಸತಕ್ಕ ವಿಚಾರದಲ್ಲಿ ತಲುಪಿದ ಗವರ್ನಮೆಂಟ್ ಪ್ರೊಸೀಡಿಂಗ್ಸು ಓದಿ ರಿಕಾರ್ಡು ಮಾಡಲಾಯಿತು.

VI. ಈ ಕೆಳಗೆ ಕಂಡ ಪ್ರಜಾಪ್ರತಿ ಮೆಂಬರುಗಳಿಂದ ತರಲ್ಪಟ್ಟ ಅಂಶಗಳನ್ನು ಚರ್ಚಿಸಲಾಯಿತು.

ಮೆಂಬರ್ ಹೆಸರು.	ವಿಷಯ.	ತೀರ್ಮಾನ.
(1) ಮೆ|| ಮೊಡ್ಲಗಿರಿರಾವ್, ಜಗಲೂರು ತಾಲ್ಲೂಕು.	ಬಿಳಚೋಡಿನಿಂದ ಭರಮಸಾಗರಕ್ಕೆ ಹೋಗತಕ್ಕ ಕಾಲುದಾರಿ ಕಪ್ಪು ಭೂಮಿಯಾದ್ದರಿಂದಲೂ ಮತ್ತು ಅಲ್ಲಲ್ಲಿ ಹಳ್ಳ ತಿಟ್ಟಿಗಳು ಇರುವುದ್ದರಿಂದಲೂ ಹೊಸದಾಗಿ ರಸ್ತೆ ಆಗಬೇಕೆಂಬ ವಿಷಯ.	ಡಿಸ್ಟ್ರಿಕ್ಟು ಬೋರ್ಡಿನಿಂದ ಈ ಸಾಲಿಗೆ ಮಂಜೂರಾಗಿರುವ ರಸ್ತೆಗಳ ಪೈಕಿ ಇದು ನಾಲ್ಕನೇದಾಗಿರುತ್ತೆ.
(2) ,, ಫಕೀರ್ ಸಾಹೇಬರು, ಜಗಲೂರ್	ಜಗಲೂರ್-ದಾವಣಗೆರೆ ರಸ್ತೆಯನ್ನು ರಿಪೇರಿ ಮಾಡಿಸಬೇಕೆಂತ.	ಚಾಲ್ತಿ ಸಾಲಿಗೆ ಮಂಜೂರಾಗಿರತಕ್ಕ ಬಡಜೆಟ್ಟನಲ್ಲಿ ರಸ್ತೆಗಳ ರಿಪೇರಿಗೋಸ್ಕರ 1,000 ರೂಪಾಯಿಗಳು ಮಂಜೂರ್ಮಾಡಿದೆ.
(3) ,, ಮಾಚೇನಹಳ್ಳಿ ವೆಂಕಂಣನವರು, ಮೊಳಕಾಲ್ಮುರು.	ಮೊಳಕಾಲ್ಮುರುವಿಂದ ನಂಕಿದೇವರ ಬೆಟ್ಟಕ್ಕೆ ರಸ್ತೆ ಆಗಬೇಕಲ್ಲದೆ ಅಲ್ಲಿಗೆ ಬರತಕ್ಕ ಯಾತ್ರ ಜನರ ಅನುಕೂಲದ ಬಗ್ಯೆ ಒಂದು ಕಟ್ಟಡ ಕಟ್ಟಿಸತಕ್ಕ ವಿಷಯದಲ್ಲಿ ಏರ್ಪಾಟು ಇಡಿಸಬೇಕೆಂತ.	ಈ ವಿಷಯವನ್ನು ತಾಲ್ಲೂಕು ಬೋರ್ಡಿನವರ ಅಭಿಪ್ರಾಯದ ಬಗ್ಯೆ ರಿಫರು ಮಾಡಿದೆ.
(4) ,, ವೆಂಕಟಗಿರಿಯಪ್ಪ, ದಾವಣಗೆರೆ.	ಸಗಟಿ ಮತ್ತು ಕರ್ಲೆ ಹಳ್ಳಗಳಿಗೆ ಸೇತುವೆ ಕಟ್ಟಿಸಿಕೊಡಬೇಕೆಂಬ ವಿಷಯ.	ಡಿಟೋ
(5) ,, ಬಿ. ವಿ. ನಾರಣಪ್ಪನವರು, ಹೊಸದುರ್ಗ.	ಹೊಸದುರ್ಗ ರೋಡ್ ರೈಲ್ವೆಸ್ಟೇಷನ್ ರಸ್ತೆಯನ್ನು ಚನ್ನಗಿರಿ-ಹೊಳಲ್ಕೆರೆ ರಸ್ತೆಗೆ ಸೇರಿಸತಕ್ಕ ಬಗ್ಯೆ 10 ಮೈಲಿ ಫಾಸಲೆ ರಸ್ತೆಯನ್ನು ಹೊಸದಾಗಿ ಹಾಕಿಸಿಕೊಡಬೇಕಾಗಿ.	ಈ ರಸ್ತೆ ಆಗತಕ್ಕದ್ದು ಅನಾವಶ್ಯಕವಾದ್ದಾಗಿದೆ.

VII. ಚಿತ್ರದುರ್ಗ ಡಿ|| ಆಫೀಸಿಗೆ ಹೊಸದಾಗಿ ಗವರ್ನ್ಮೆಂಟಿನಿಂದ ಮಂಜೂರಾಗಿರುವ ಲೋಕಲ್ ಫಂಡು ಗುಮಾಸ್ತೆಯ ಉಪಯೋಗದ ಬಗ್ಗೆ ಒಂದು ಮೇಜು, ಕುರ್ಜಿ, ಪಿಜನ್‌ಹೋಲ್ ಈ ಮೂರು ಸಾಮಾನುಗಳಿಗೆ ತಗಲತಕ್ಕ 40 ರೂಪಾಯಿಗಳ ಅಂದಾಜಾವನ್ನು ಓದಿ ಅಪ್ರೂವ್ ಮಾಡಲಾಯಿತು.

VIII. ಮಾರಿಕಣಿವೆ ಕೆಲವು ಕಾಲದವರಿಗೆ ಚಿತ್ರದುರ್ಗ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನೀರ್ ಸಾಹೇಬರವರ ಹೆಡ್‌ಕ್ವಾರ್ಟರಾಗಿರುವುದರಿಂದ ಸದರಿ ಸ್ಥಳದಲ್ಲಿ ಬ್ಯಾರೆ ಯಾವ ಕಟ್ಟಡವು ಮುಸಾಫರಖಾನೆಯಾಗಿ ಉಪಯೋಗಿಸುವದಕ್ಕೆ ಇಲ್ಲವಾದ ಸಬಬು ಅಸಿಸ್ಟೆಂಟ್ ಇಂಜನೀರುಗಳ ಕ್ವಾರ್ಟರುಗಳ ಪೈಕಿ ಒಂದನ್ನು ಪ್ರಕೃತಕ್ಕೆ ಮುಸಾಫರಖಾನೆಗೋಸ್ಕರ ತೆಗೆದುಕೊಳ್ಳಬಹುದಾಗಿರುತ್ತೆಂಬ ವಿಷಯವನ್ನು ತಿಳಿಸುವ ಸೂಪರಿಂಟೆಂಡಿಂಗ್ ಇಂಜನೀರ್ ಸಾಹೇಬರವರಿಂದ ತಲುಪಿದ ಲೆಟರ್ ಓದಿ ರಿಕಾರ್ಡು ಮಾಡಲಾಯಿತು.

IX. ದಾವಣಗೆರೆ ತಾಲ್ಲೂಕು ಬೋರ್ಡು ಉಪಯೋಗದ ಬಗ್ಗೆ 15 ಕುರ್ಜಿಗಳು ಅವಶ್ಯಕವೆಂದು ದಾವಣಗೆರೆ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಿಂದ ತಲ್ಪಿರುವ ಯಾದಿಯನ್ನು ಓದಲಾಯಿತು.

ಅಪ್ರೂವ್ ಮಾಡಿದೆ.—ತಾಲ್ಲೂಕು ಬೋರ್ಡುಗಳ ಉಪಯೋಗದ ಬಗ್ಗೆ ಬೇಕಾಗುವ ಫರನೀಚರಿಗೆ ಒಂದು ಪಟ್ಟಿ ಲಿಸ್ಟು ತಯಾರ್ಮಾಡಿಸಿ ಅದಕ್ಕೆ ಬೇಕಾಗುವ ಹಣವನ್ನು ಮುಂದಿನ ವರ್ಷದ ಬಡಜಟನಲ್ಲಿ ಸೇರಿಸಿ ಮಂಜೂರ್ ಬಗ್ಗೆ ಗವರ್ನ್ಮೆಂಟಿಗೆ ಕಳುಹಿಸಬೇಕಾಗಿ ತೀರ್ಮಾನಿಸಲಾಯಿತು.

X. ಹೊಳಲ್ಕೆರೆ ತಾಲ್ಲೂಕಿಗೆ ಹೊಸದಾಗಿ ಮಂಜೂರ್ಮಾಡಿರುವ ಲೋಕಲ್ ಫಂಡ್ ಗುಮಾಸ್ತೆಯ ಉಪಯೋಗದ ಬಗ್ಗೆ ಬೇಕಾದ ಫರನೀಚರ್‌ಗೋಸ್ಕರ ಅಮಲ್ದಾರ್ರಿಂದ ತಲ್ಪಿದ 20 ರೂಪಾಯಿಗಳ ಅಂದಾಜಾ ಓದಲಾಯಿತು.

IXನೆ ಪ್ರಾಪೋಜಿಷನಿನ ರಿಜೊಲ್ಯೂಷನ್ ಇದಕ್ಕೆ ಲಗಾವಾಗುತ್ತೆ.

XI. ಮೊಳಕಾಲ್ಮುರುವಿನಲ್ಲಿ ಹಾಲಿ ಇರತಕ್ಕ ಮುಸಾಫರ್‌ಖಾನೆಗೆ ಲಗತ್ತಾಗಿ ಒಂದು ಇನ್ಸ್‌ಪೆಕ್ಷನ್ ಲಾಡ್ಜ್ ಕಟ್ಟಿಸತಕ್ಕ ಬಗ್ಗೆ ಮುಟ್ಟುವ 499 ರೂಪಾಯಿಗಳಿಗೆ ಒಂದು ಅಂದಾಜಾವನ್ನು ಮಂಜೂರ್ ಬಗ್ಗೆ ತಾಲ್ಲೂಕು ಬೋರ್ಡು ಪ್ರೆಸಿಡೆಂಟರವರ 354ನೆ ನಂಬರು ಇತ್ತಿಲ್ಲೆಯೊಂದಿಗೆ ತಲುಪಿರುವದನ್ನು ಓದಲಾಯಿತು.

ಅಪ್ರೂವ್ ಮಾಡಿದೆ—ಚಾಲ್ತಿ ಸಾಲ್ ಬಡ್ಜಟನಲ್ಲಿ ಮಂಜೂರ್ಮಾಡಿರುವ ಹಣದ ಪೈಕಿ ಕೊಡಬಹುದಾಗಿ ತೀರ್ಮಾನಿಸಲಾಯಿತು.

XII. ಹೊಸದಾಗಿ ಸ್ಯಾಂಕ್ಷನ್ ಮಾಡಿರುವ ಲೋಕಲ್ ಫಂಡು ಗುಮಾಸ್ತೆ ಮತ್ತು ಪಮಂಗಲದ ಯೂನಿಯನ್ ಮುತ್ಸದ್ದಿ ಇವರ ಉಪಯೋಗದ ಬಗ್ಗೆ ಬೇಕಾಗುವ ಫರನೀಚರ್ ತರಿಸಿಕೊಡಬೇಕಾಗಿ ಹಿರಿಯೂರು ತಾಲ್ಲೂಕು ಅಮಲ್ದಾರ್ರಿಂದ ತಲ್ಪಿದ ರಿಪೋರ್ಟು ಓದಲಾಯಿತು.

IXನೆ ಪ್ರಾಪೋಜಿಷನಲ್ಲಿ ಮಾಡಿರುವ ತೀರ್ಮಾನವು ಇದಕ್ಕೆ ಲಗಾವಾಗುತ್ತೆ.

XIII. ಬರುವ ಮೀಟಿಂಗ್ 1907ನೆ ಇಸವಿ ಡಿಸೆಂಬರ್ ತಾರೀಖು 21ಕ್ಕೆ ನಡೆಯತಕ್ಕದ್ದೆಂದು ಗೊತ್ತುಮಾಡಲಾಯಿತು.

ಎಂ. ಚೆಂಗೈಯ್ಯಶೆಟ್ಟಿ,
ಪ್ರೆಸಿಡೆಂಟ್.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1907—08ನೆ ಇಸವಿ ಮಿಸ್ ಅರ್ಜೀ ನಂಬರು 305.

ಅರ್ಜೀದಾರರು ಬೆಂಗಳೂರು ತಾಲ್ಲೂಕು ಕೃಷ್ಣರಾಜಪುರದ ಹೋಬಳಿ ರಾಜೇನಹಳ್ಳಿಲಿರುವ ಮುನಿಯಪ್ಪನ ಮಗ ಚನ್ನರಾಯಪ್ಪ ಮೈನರ್, ಗಾರಡಿಯನ್ ಹನುಮಂತರಾಯಪ್ಪ, ಮೈನರಾದ ಚನ್ನರಾಯಪ್ಪನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಚನ್ನರಾಯಪ್ಪನಿಗೆ ಮುಖ್ಯವಾರಸ್‌ದಾರನಾಗಬೇಕೆಂಬ ಹಕ್ಕಿನಮೇಲೆ ರಾಜೇನಹಳ್ಳಿ ಹನುಮಂತರಾಯಪ್ಪನು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿಕೊಟ್ಟು ಇರುತ್ತಾನೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸನ್ 1907ನೆ ಇಸವಿ ಡಿಸೆಂಬರ್ ತಾರೀಖು 13ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟೀಸ್ ಕೊಡೋಣಾಗಿದೆ.

ಸನ್ 1907ನೆ ಇಸವಿ ನವೆಂಬರ್ ತಿಂಗಳು 19ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1907—08ನೆ ಮಿ|| ಅರ್ಜೀ ನಂಬರ್ 426.

ಬೆಂಗಳೂರು ಸಿಟಿ ಪೋಲೀಸ್ ಇಲಾಖೆಯಲ್ಲಿ 116ನೆ ನಂಬರ್ ಕಾನಿಸ್ಟೇಬಲಾಗಿದ್ದು ಮೃತಪಟ್ಟ ಗಣೇಶರಾವ್ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಅಂಚೆಪೇಟೆಲಿರುವ ಮರಾಟಿಗರ ವೆಂಕಟರಾವ್ ಉರುಫ್ ಲಕ್ಷ್ಮಣರಾವು ಮೃತಪಟ್ಟ ಸದರೀ ಗಣೇಶರಾಯರಿಗೆ ಖಾಸ ತಂದೆ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಗಣೇಶರಾವ್ ಜಿಂದಗಿ ಬಗ್ಯಾಗಿ ಬರತಕ್ಕ ಗ್ರಾಂಟು ಬಾಬತು 121—8—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಫಾಯಿಷು ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟರಾವ್ ಉರ್ಫ್ ಲಕ್ಷ್ಮೀರಾವ್ ಅರ್ಜಿಯನ್ನು ಸ೯ 1907ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗಣೇಶರಾವ್ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ೯ 1907ನೆ ಇಸವಿ ನವಂಬರ್ ತಿಂಗಳು 19ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ೯ 1907—08ನೆ ಇಸವಿ ಮಿ॥ ಅರ್ಜೀ ನಂಬರು 4_8.

ಬೆಂಗಳೂರು ನಗರ್ತರಪೇಟೆಲಿದ್ದು ಫವತಿಪಟ್ಟ ವೈರಾಗ್ಯಶೆಟ್ಟಿರ ಗಡಿದಪ್ಪನವರ ಮಗ ಮರಿಯಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ನಗರ್ತರ ಪ್ಯಾಟೇಲಿರುವ ಮಣಿಗಮ್ಮ, ಮೃತಪಟ್ಟ ಸದರೀ ಮರಿಯಪ್ಪನವರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಮರಿಯಪ್ಪನವರ ಜಿಂದಗಿ ಬಗ್ಗ್ಯಾಗಿ ಬರತಕ್ಕ 2,800 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಮಣಿಗಮ್ಮನ ಅರ್ಜಿಯನ್ನು ಸ೯ 1907ನೆ ಇಸವಿ ಡಿಸೆಂಬರು ತಿಂಗಳು ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮರಿಯಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ೯ 1907ನೆ ಇಸವಿ ನವಂಬರ್ ತಿಂಗಳು 19ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ೯ 190_—0_ನೆ ಇಸವಿ ಮಿ॥ ಅರ್ಜೀ ನಂಬರ್ 453.

ಬೆಂಗಳೂರು ಸಿಟಿ ಮುನಿಸಿಪಲ್ ಆಫೀಸಿನಲ್ಲಿ ಕ್ಲಾರ್ಕ್ ಆಗಿದ್ದು ಮೃತಪಟ್ಟ ಎನ್. ಶ್ರೀನಿವಾಸಮೂರ್ತಿ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರಲ್ಲಿರುವ ಜನರಲ್ ಅಂಡ್ ರವಿನ್ಯೂ ಹೆಡ್ ರಿಕಾರ್ಡ್ ಕೀಪರ್ ಮಗಳು ಶಾರದಬಾಯಿ ಮೈನರ್, ಗಾರ್ಡಿಯನ್ ಎ. ರಾಜರಾವ್, ಮೃತಪಟ್ಟ ಸದರೀ ಎನ್. ಶ್ರೀನಿವಾಸಮೂರ್ತಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಎನ್. ಶ್ರೀನಿವಾಸಮೂರ್ತಿಯವರ ಜಿಂದಗಿ ಬಗ್ಗ್ಯಾಗಿ ಬರತಕ್ಕ 407 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಶಾರದಾಬಾಯಿ ಮೈನರ್, ಗಾರಡಿಯನ್ ಎ. ರಾಜಾರಾಯರ ಅರ್ಜಿಯನ್ನು ಸ೯ 1907ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಎನ್. ಶ್ರೀನಿವಾಸಮೂರ್ತಿಯವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ೯ 1907ನೆ ಇಸವಿ ನವಂಬರ್ ತಿಂಗಳು 19ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ೯ 1907—0_ನೆ ಇಸವಿ ಮಿ॥ ಅರ್ಜೀ ನಂಬರ್ 457.

ಬೆಂಗಳೂರು ಗಾಡನಪೇಟೇಲಿ ವಾಸವಾಗಿದ್ದು ಮೃತಪಟ್ಟ ವೆಂಕಟಪ್ಪನ ಮಗಳು ಅಕ್ಕಯಮ್ಮನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಬಿಡಿಕುಳದ ಪೇಟೇಲಿ ಇರುವ ಮೋಟಪ್ಪನ ಮೊಮ್ಮಗ ಮರಿಯಪ್ಪ, ಮೃತಪಟ್ಟ ಸದರೀ ಅಕ್ಕಯಮ್ಮನಿಗೆ ಖಾಸಾ ಚಿಕ್ಕತಾಯಿ ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಅಕ್ಕಯಮ್ಮನ ಜಿಂದಗಿ ಬಗ್ಗ್ಯಾಗಿ ಬರತಕ್ಕ 52—14—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಮರಿಯಪ್ಪನ ಅರ್ಜಿಯನ್ನು ಸ೯ 1907ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಕ್ಕಯಮ್ಮನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ೯ 1907ನೆ ಇಸವಿ ನವಂಬರ್ ತಿಂಗಳು 19ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಜೆ. ಎಚ್. ಭಾಭಾ,
ಸಬ್ ಜಡ್ಜ್.

ಮೈಸೂರು ಸಬಾರ್ಡಿನೇಟ್ ಜಡ್ಜ್ ರವರ ಕೋರ್ಟಿನಲ್ಲಿ.

ಸ೯ 1907—08ನೆ ಇಸವಿ ಮಿ॥ ಅರ್ಜೀ ನಂಬರ್ 169.

ಬೆಂಗಳೂರು ಸೆಂಟ್ರಲ್ ನಾಜರ್ ಆಫೀಸಿನಲ್ಲಿ ಅಮೀನಾ ಕೆಲಸದಲ್ಲಿದ್ದು ಮೃತಪಟ್ಟ ಬೈರಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ಮಂಡಿ ಮೊಹಲಾ ದೊಡ್ಡ ಪಕ್ಕಲಗೇರಿಯಲ್ಲಿರುವ ಫವತಿ ಸರ್ವೆಪ್ಯಾತೆ ಲಿಂಗಣ್ಣನ ಮಗ ಸರ್ವೆಪ್ಯಾತೆ ಕೆಂಪ, ಮೃತಪಟ್ಟ ಸದರೀ ಅಮೀನಾ ಬೈರಯ್ಯನವರಿಗೆ ಅವಿಭಕ್ತ ಸಹೋದರ ಆಗಬೇಕೆಂಬ ಹಕ್ಕುದಾರಿ ಮೇ:

ಲೆ, ಮೈಸೂರು ವಾಸ್ತವ್ಯರಾಗಿ ಮೃತಪಟ್ಟ ಅಮಿನಾ ಬೈರಯ್ಯನೆಂಬುವರ ಜಿಂದಗಿ ಬಗ್ಯಾಗಿ ಬರತಕ್ಕ 100 ರೂಪಾಯಿ ಶೇವಣಿ ಮೊಬಲಗನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಕೆಂಪನೆಂಬುವನ ಅರ್ಜಿಯನ್ನು ಸನ್ 1907ನೆ ಇಸವಿ ಡಿಸೆಂಬರು ತಿಂಗಳು ತಾರೀಖು 17ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಮಿನಾ ಬೈರಯ್ಯನೆಂಬುವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1907ನೆ ಇಸವಿ ನವಂಬರ ತಿಂಗಳು 26ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತಿನೊಡನೆ ಕೊಡೋಣಾಗಿದೆ.

ಬಿ. ಎಸ್. ಕೃಷ್ಣಸ್ವಾಮಿ,
ಸಬಾರ್ಡಿನೇಟ್ ಜಡ್ಜ್.

ನೋಟಿಸ.

ಬೆಂಗಳೂರು ತಾಲ್ಲೂಕು ದೊಡ್ಡಬಳ್ಳಾಪುರ ರೇಂಜ್ ಅಸಿಸ್ಟೆಂಟ್ ಕಮಿಷನರವರ ಆಫೀಸು.

ತಾರೀಖು 18ನೆ ನವಂಬರ 1907.

ನೆಲಮಂಗಲ ತಾಲ್ಲೂಕು ದಾಸನಪುರದ ಹೋಬಳಿ ಜೋಡಿ ಬೈಯ್ಯಂಡಹಳ್ಳಿ ಗ್ರಾಮದ ಅರ್ಧಪಾಲು ಹಿಸ್ಸೆದಾರು ಬೆಂಗಳೂರು ಚಿಕ್ಕಪೇಟೆ ಸುಮತೇಂದ್ರ ಮಠದಲ್ಲಿರುವ ಭೀಮಾಚಾರ್ರ ಸೊಸೆ ವೆಂಕೋಬಾಮ್ಮ, ಬೆಂಗಳೂರು ಮಲಕಂಕದ ಬಾಗಿಲನಲ್ಲಿ ವಾಸವಾಗಿರುವ ನಾಗಪಾಲು ಹಿಸ್ಸೆದಾರ್ ಹುಲ್ಲೂರು ಮಲ್ಲಿಕಾರ್ಜುನೈಯ್ಯನವರ ಮಗ ನಾಗಪ್ಪ ಮತ್ತು ನಾಗಪಾಲು ಹಿಸ್ಸೆದಾರ್ ಬೈಯ್ಯಂಡಹಳ್ಳಿ ಗ್ರಾಮದ ಹುಸೂರು ಚನ್ನಪ್ಪ, ಅನುಭವದಾರ್ ಪಟೇಲ್ ಶಾಂತವೀರಪ್ಪ ಇವರಿಗೆ ತಿಳಿಯಪಡಿಸುವದೇನಂದರೆ :—

ಮೇಲ್ಕಂಡ ಜೋಡಿ ಗ್ರಾಮದ ಕೆಂದಿ ಹುಟ್ಟುವಳಿಲಿ ನಿಮಗೆ ಇರಬಹುದಾದ ಹಕ್ಕಿನ ವಿಚಾರವನ್ನು ಕುರಿತು ತನಿಖೆ ಕ್ರಮ ನಡಿಯಬೇಕಾಗಿರುವದ್ದರಿಂದ ಈ ಬಗ್ಯೆ ನಿಮ್ಮಲ್ಲಿರತಕ್ಕ ವಿಶಿಷ್ಟ ದಾಖಲಾತಿಗಳ ನಿಶಿ ನೀವು ಪ್ರತಿಬಬ್ಬರು 1908ನೆ ಇಸವಿ ಜನವರಿ 4ನೆ ತಾರೀಖು ದಿವಿ 11ಕ್ಕೆ ಬೆಂಗಳೂರು ಮೊಕ್ಕಾಂ ಈ ಕೋರ್ಟಿನ ರೂಬರೂಬ್ ಹಾಜರಾಗಬೇಕು. ಇದಕ್ಕೆ ತಪ್ಪಿದರೆ ನಿಮ್ಮ ತಕರಾರು ಅಂಗೀಕರಿಸದೆ ಏಕಪಕ್ಷವಾಗಿ ನಿಮಗೆ ಈ ಬಾಬಿನಲ್ಲಿ ಬರತಕ್ಕದ್ದೇನೂ ಇಲ್ಲವೆಂದು ನಿರ್ಣಯಿಸಲ್ಪಡುತ್ತೆ ತಿಳಿಯುವದು.

ಟಿ. ಜೋಕಣ್ಣ, ಅಸಿಸ್ಟೆಂಟ್ ಕಮಿಷನರ್.

ಅಮೃತಮೆಹಲ್ ಇಲಾಖಾ.

ಪ್ರಕಟನೆ.

(ಮೊಕ್ಕಾಂ) ಹಾಸನ, ತಾರೀಖು 13–14ನೆ ನವಂಬರ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಅಮೃತಮೆಹಲ್ ಇಲಾಖಾ ಬಾಬತು ಹೆಣ್ಣು ಮತ್ತು ಗಂಡು ರಾಸುಗಳನ್ನ ಚಾಲ್ತಿ ಇಸವಿ ಡಿಸೆಂಬರ್ ಮಾಹೆ 2ನೆ ತಾರೀಖು ಲಾಗಾಯಿತು "ಹೊಳಲ್ಕೆರೆ" ಮೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಸದರಿ ಹರಾಜಾಗುವ ಸ್ಥಳಕ್ಕೆ ಹಾಜರಾಗಿ ರಾಸುಗಳನ್ನ ಥಡ ಸವಾಲ್‌ನಿಂದ್ದ ಪಡಿಯಬಹುದು.

ಮೊಕ್ಕಾಂ ಹೊಳಲ್ಕೆರೆ, ತಾರೀಖು 25–27ನೆ ನವಂಬರ 1907.

ಅಮೃತಮಹಲ್ ಇಲಾಖಾ ಬಾಬತು ಕೆಲವು ಗಂಡುರಾಸುಗಳನ್ನ ಚಾಲ್ತಿ ಇಸವಿ ಡಿಸೆಂಬರು 10ನೆ ತಾರೀಖು ಲಾಗಾಯಿತು ತಿಪಟೂರು ತಾಲ್ಲೂಕು ಕೊನೆಹಳ್ಳಿ ರೈಲ್ವೆ ಸ್ಟೇಷನ್ ಬಳಿಯಲ್ಲು ಅದೇ ಮಾಹೆ 15ನೆ ತಾರೀಖು ಲಾಗಾಯಿತು ಹಾಸನ ತಾಲ್ಲೂಕು ದುದ್ದದ ಮೊಕ್ಕಾಂನಲ್ಲೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟವುಳ್ಳವರು ಸದರಿ ಸ್ಥಳಗಳಿಗೆ ಹಾಜರಾಗಿ ಥಡ ಸವಾಲಿನಲ್ಲಿ ರಾಸುಗಳನ್ನ ಪಡಿಯಬಹುದು.

ಹೆಚ್. ನಂಜುಂಡರಾಜೇ ಅರಸ್,
ಸೂಪರಿಂಟೆಂಡೆಂಟ್.

ನೋಟಿಸ.

ತೀರ್ಥಹಳ್ಳಿ, ತಾರೀಖು 9ನೆ ನವಂಬರು 1907.

ಈ ಕೆಳಗೆ ರುಜು ಮಾಡಿದ ತೀರ್ಥಹಳ್ಳೀ ಜವಳಿ ರಘುಪತಯ್ಯನವರ ಮಗ ಹನುಮಂತರಾಯನು ಇದರಿಂದ ಸಮಸ್ತ ಜನಗಳಿಗೂ ಶೃತಪಡಿಸುವದೇನಂದರೆ :—

1. ತೀರ್ಥಹಳ್ಳೀ ಜವಳಿ ಕೃಷ್ಣಯ್ಯನವರ ಮಕ್ಕಳು ವಿಠ್ಠಲೈಯ್ಯನವರು ಮತ್ತು ಜವಳಿ ಸುಬ್ರಾಯರ ಮಕ್ಕಳು ಮಂಜಪ್ಪನವರು ಸಹಾ ನಮ್ಮ ಮೈನಾರಿಟಿ ಕಾಲದಾರಭ್ಯ ನಮ್ಮ ಜನಕತಂದೆ ರಘುಪತಯ್ಯನವರಿಗೆ ಸ್ವಾರ್ಜಿತವಾಗಿಯು ನಮಗೆ ಪಿತ್ರಾರ್ಜಿತವಾಗಿಯೂ ಇರುವ ಪ್ರೈವೆಟ್ಟಿನ ಆಡಳಿತ ನೋಡುತ್ತಾ ಇದ್ದರು. ಈ ಪೈಕಿ ವಿಠ್ಠಲೈಯ್ಯನವರು ಈಚೆಗೆ ಮೃತಪಟ್ಟಿದ್ದಾರೆ.

2. ಈ ವಿಠಲೈಯ್ಯನವರು ಮತ್ತು ಈ ಮಂಜಪ್ಪನವರು ಇವರುಗಳ ಒಟ್ಟಿನ ಅಥವಾ ಇವರುಗಳ ಪೈಕಿ ಯಾರೊಬ್ಬರ ಹೆಸರಿಗೆ ಆಗಲೀ, ವ ಜವಳಿ ಶೇಷಗಿರಿಯಪ್ಪನವರು ಬಿನ್ ರಘುಪತಯ್ಯನವರು ಮತ್ತು ಈ ಶೇಷಗಿರಿಯಪ್ಪನವರ ತಮ್ಮ ಹನುಮಂತರಾಯನಾದ ನಾನು ಈರೀತಿ ಇರುವ ನಮ್ಮ ಒಟ್ಟಿನ ಅಥವಾ ನಮ್ಮ ಪೈಕಿ ಯಾರೊಬ್ಬರ ಹೆಸರಿಗೆ ಆಗಲಿ, ಕ್ರಯವಾಗಿರತಕ್ಕ ಆಸ್ತಿಗಳು ಮತ್ತು ಇವುಗಳಿಂದ ಸಾಲೆಸಾಲು ಬರತಕ್ಕ ಗುತ್ತಿಗೆ ಅಡಿಕೆ, ಗಡಿಭತ್ತ, ನಗದು ಗೇಣಿ ವ ಕಿಸ್ತು ವಗೈರೆಯು, ಮತ್ತು ಭೋಗ್ಯಾಧಾರ ವ ದೃಶ್ಯಾಧಾರ ವ ಮೈಸಾಲ ಪತ್ರ ಅಥವಾ ಪತ್ರಗಳ ಮತ್ತು ಪ್ರೊನೋಟ್ ಅಥವಾ ಪ್ರೊನೋಟುಗಳ ವಗೈರೆ ಡಾಕ್ಯುಮೆಂಟುಗಳ ಬಾಬತು ಅಸಲು ಹಣ ಇದರ ಬಡ್ಡಿ ವ ಬಡ್ಡಿಯ ಬಡ್ಡಿಯು; ಮತ್ತು ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಮತ್ತು ಸನ್ 1906–07ನೆ ಸೇಕಡಾ 4ರ ಮೈಸೂರ್ ಸ್ಟೇಟ್ ಲೋನ್ ಪ್ರೊನೋಟುಗಳ ಬಾಬತು ಇವರುಗಳ ಮತ್ತು ನಮ್ಮ ಮತ್ತು ನಮ್ಮ ಮಕ್ಕಳು ಮೈನರರು ಗಾರ್ಡಿಯನ್ ನಾವು ಈ ರೀತಿ ಇರತಕ್ಕ ಅಸಲು ಹಣ ಮತ್ತು ಇದರ ಬಡ್ಡಿಯು ಸಹಾ ಮೇಲ್ಕಂಡ ನಮ್ಮ ವೈವಟ್ಟಿಗೆ ಸಮ್ಮಂಧಪಟ್ಟದ್ದಾಗಿ ನಮಗೆ ಬರತಕ್ಕದ್ದಾಗಿರುತ್ತದೆ.

3. ಇದರಲ್ಲಿ ಈ ವಿಠಲೈಯ್ಯನವರಿಗೆ ಆಗಲಿ, ಈ ಮಂಜಪ್ಪನವರಿಗಾಗಲಿ ಅಥವಾ ಈ ವಿಠಲೈಯನವರ ತಮ್ಮ ಶ್ರೀಪತಿರಾಯರ ಮಕ್ಕಳು 1ನೆ ರಂಗರಾವ್, 2ನೆ ಬಾಲಕೃಷ್ಣರಾವ್, 3ನೆ ಆನಂದರಾವ್, 4ನೆ ವಾಮನರಾವ್, 3–4 ಮೈನರು, ಗಾರ್ಡಿಯನ್ 1ನೆ ರಂಗರಾವ್ ಮತ್ತು ಈ ಮಂಜಪ್ಪನವರ ತಮ್ಮಂದರು 5ನೆ ಪಾಂಡುರಂಗಪ್ಪನವರು, 6ನೆ ರಾಮರಾಯರು, 7ನೆ ನಾಗೇಶರಾವ್ ಘನತಿ ಮಗ ಭಾಸ್ಕರರಾವ್ ಮೈನರ್, ಗಾರ್ಡಿಯನ್ ಮಂಜಪ್ಪನವರು, 8ನೆ ಗೋಪಾಲರಾವ್ ಬಿನ್ ಪಾಂಡುರಂಗಪ್ಪನವರು, 9ನೆ ಇವರ ತಮ್ಮ ಮೊಡ್ಡಗಿರಿಯಪ್ಪನವರು, 10ನೆ ಮಾಧವರಾವ್ ಬಿನ್ ರಾಮರಾಯರು ಇವರುಗಳಿಗೇ ಆಗಲಿ ಹಕ್ಕು ಬಾಧ್ಯತೆ ಇರುವದಿಲ್ಲಾ.

4. ಈ ವಿಠಲೈಯನವರು ಮತ್ತು ಈ ಮಂಜಪ್ಪನವರು ಈಚಿಗೆ ಈ ಮಂಜಪ್ಪನವರು ಮೇಲೆ ಕಂಡ ಇವರ ತಮ್ಮಂದಿರ ಮಕ್ಕಳ ಮತ್ತು ತಮ್ಮಂದರ ಸಾಲಗಳಿಗೆ ಈ ನಮ್ಮ ವೈವಟ್ಟಿನ ಆಸ್ತಿಯನ್ನು ಗುರಿಪಡಿಸಿದ್ದು ಇದರ ಆಸ್ತಿಗಳಿಗೆ ಲೋಪ ಪಡಿಸಿದ್ದು ಮತ್ತು ಇನ್ನೂ ಲೋಪ ವಗೈರೆ ಪಡಿಸುವದಕ್ಕೆ ಪ್ರಯತ್ನಿಸುವದೂ, ಇನ್ನೂ ಕೆಲವು ಸಂಗತಿಗಳಲ್ಲಿ ನಮಗೆ ಮೋಸ ವ ತಿರ್ಬಂಧಪಡಿಸಿದ್ದೂ ಮತ್ತು ಇನ್ನೂ ಮೋಸ ವಗೈರೆ ಪಡಿಸುವದಕ್ಕೆ ಪ್ರಯತ್ನಿಸುವದೂ, ವಗೈರೆ ಅನೇಕ ವಿಧವಾದ ಈ ವೈವಟ್ಟಿಗೂ ಇದರ ಹಕ್ಕುದಾರರಾದ ನಮಗೂ ನಮ್ಮ ಪ್ರತಿನಿಧಿಯವರಿಗೂ ವಿರೋಧವಾದ ವಿದ್ಯಮಾನಗಳು ನಡಿಸಿದ್ದೂ ಮತ್ತು ಇನ್ನೂ ನಡಸುವದಕ್ಕೆ ಪ್ರಯತ್ನಿಸುವದೂ ವಗೈರೆ ನನ್ನ ನೋಟೀಸಿಗೆ ಬಂದಿರುವದರಿಂದ ನಾನು ಇವರ ಆಡಳಿತವನ್ನು ವಜಾ ಮಾಡಿದ್ದೇನೆ.

5. ಮೇಲೆ 2ನೆ ಕಲಂನಲ್ಲಿ ಕಂಡ ಹೆಸರುಗಳಿಗೆ ಕ್ರಯವಾಗಿರತಕ್ಕ ಆಸ್ತಿಗಳ ಬಾಬತು ಗುತ್ತಿಗೆ ಅಡಿಕೆ, ಗಡಿಭತ್ತ, ನಗದು ಗೇಣಿ ವ ಕಿಸ್ತು ವಗೈರೆಯನ್ನು ಮತ್ತು ಭೋಗ್ಯಾಧಾರ ವಗೈರೆ ಡಾಕ್ಯುಮೆಂಟುಗಳ ಸಮ್ಮಂಧ ಅಸಲು ಹಣ ಇದರ ಬಡ್ಡಿ ವ ಬಡ್ಡಿಯ ಬಡ್ಡಿಯನ್ನೂ ಈ ಮುಂತಾದ್ದು ವಗೈರೆ ಎಷ್ಟನ್ನಾದರೂ ಮೇಲೆ 2ನೆ ಕಲಂನಲ್ಲಿ ನಮೂದಿಸಿದ ಈ ವೈವಟ್ಟಿಗೆ ಹಕ್ಕುದಾರರಲ್ಲದವರ ಕಡಿಗೆ ವಸೂಲು ಕೊಡಕೂಡದು. ಕೊಟ್ಟರೆ ನಮ್ಮ ವೈವಟ್ಟಿಗೆ ವ ನನಗೆ ಬಂದಂತೆ ನಾನು ಒಪ್ಪಿಕೊಳ್ಳುವದಿಲ್ಲಾ. ಮೇಲ್ಕಂಡ ಪತ್ರಗಳು ವಗೈರೆ ಇವರು ಇದರ ಆಡಳಿತ ನೋಡುತ್ತಾ ಇರುವಾಗ್ಯೆ ಇವರ ಹೆಸರಿಗೆ ನಾಮಪ್ರಾರ್ತ ಹುಟ್ಟಿದ್ದಾಗಿರುತ್ತವೆ. ಈ ಮೇಲೆ ಕಂಡ ಆಸ್ತಿಗಳ ಪೈಕಿ ಅಥವಾ ಡಾಕ್ಯುಮೆಂಟುಗಳ ಪೈಕಿ ಎಷ್ಟನ್ನಾದರೂ ಈ ವೈವಟ್ಟಿಗೆ ಹಕ್ಕುದಾರರಲ್ಲದ ಮೇಲೆ ವಿವರಿಸಿದ ಈ ಮಂಜಪ್ಪನವರು ವಗೈರೇರ ಪೈಕಿ ಯಾರಿಂದಲೇ ಆಗಲಿ ಕ್ರಯ ಪರಿವರ್ತನಾ ಮೂಲಕ ಯಾರಾದರೂ ಪಡಕೊಂಡರೆ ಆಗಲಿ ಮೇಡೂರು ವಗೈರೆ ಮೂಲಕ ಪರಭಾರೆ ಪಡಕೊಂಡರೆ ಆಗಲಿ ಅದಕ್ಕೆ ನಾನು ಒಪ್ಪಿಕೊಳ್ಳುವದಿಲ್ಲ ಮತ್ತು ಹಾಗೆ ಪಡಕೊಂಡವರ ಕಡಿಗೆ ಎಷ್ಟನ್ನಾದರೂ ವಸೂಲು ಕೊಟ್ಟಾಗ್ಯೂ ಅದನ್ನು ನಾನು ಒಪ್ಪಿಕೊಳ್ಳುವದಿಲ್ಲ ಎಂಬುವದನ್ನು ತಿಳಿಯಿರತಕ್ಕದ್ದು. ಇವರುಗಳು ಮತ್ತು ನಾವು ಸಹಾ ಒಂದೇ ಮನೆಯಲ್ಲಿ ವಾಸವಾಗಿದ್ದಾಗ್ಯೂ ಈ ವೈವಟ್ಟಿನಲ್ಲಿ ಇವರುಗಳಿಗೆ ಏನೂ ಹಕ್ಕು ಇರುವದಿಲ್ಲಾ ಎಂಬುವದನ್ನು ಸಹಾ ತಿಳಿದಿರತಕ್ಕದ್ದು.

ತೀರ್ಥಹಳ್ಳಿ, ಜವಳಿ ಹನುಮಂತರಾಯನ ರುಜು.

ಮೈಸೂರ ಗೆಜೆಟ್ ಚಂದಾದಾರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ಜಮಾಂ ನೋಟೀಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಚಷ್ ಮಾಹೇ ಯಾ ಕ್ವಾರ್ಟರಿಗೆ		ದಾಮಾಷಾಯಿ ಪ್ರಕಾರ ದರಗಳು
		ರೂ. ಆ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ		0 8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜ್ ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮಾರ್ಚ್ಯ 155ನೆ ನಂಬರ ಉಳ್ಳ ಗವರ್ನಮೆಂಟ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭೋವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲದಾರರಿಂದ ಒಂದು ಸರಟಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ 21ನೆ ಮಾರ್ಚ್ಯ 24205—6—ಜಿ. 6200ನೆ ನಂಬರ ಗವರ್ನಮೆಂಟ ಆರಡರ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ಸಾಹ ಪಟೇಲರಿಗೂ ಲಗಾವ ಮಾಡಲ್ಪಟ್ಟಿರುತ್ತೆ.

	ರೂ.	ಆ.
ಸಿವಿಲ ಕೋರ್ಟನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇಷನ ಅನುಸರಿಸಿ ಸರ್ಟಿಫಿಕೇಟ ಬಗ್ಯೆ ನೋಟಿಸಗಳು :—		
ಮೊದಲನೇ ದಫಾ ಛಾಯಿಷ್ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ	2	8
ಎರಡನೇ ಸಲ ವ ಅತರುವಾಯ ಪ್ರತಿ ಆವರ್ತಿಗೂ ಡಿಟೋ	1	4
ಸಿವಿಲ ಪ್ರೊಸಿಡ್ಯೂರ ಕೋಡಿನ 347ನೆ ಸೆಕ್ಷನ ಅನುಸರಿಸಿ ದಿವಾಳಿ ಅಪ್ಲಿಕೇಷನಗಳ ಬಗ್ಯೆ ನೋಟಿಸಗಳಿಗೆ:—		
ಮೊದಲನೇ ಸಲಕ್ಕೆ	5	0
ಎರಡನೇ ವ ಅತರುವಾಯ ಪ್ರತಿ ದಫೆಕ್ಕೆ	2	8
ಸಿವಿಲ ಪ್ರೊಸಿಡ್ಯೂರ ಕೋಡಿನ 354ನೆ ಸೆಕ್ಷನ ಅನುಸರಿಸಿ ಸಿವಿಲ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗೆರೆ ಚಾರ್ಜ ಪ್ರಕಟಿಸಲ್ಪಡುತ್ತವೆ.		
ಡ್ಯೂಪ್ಲಿಕೇಟ ಕಾಪೀ ಪಟ್ಟಾ ವಗೈರ ಕೊಡುವ ಬಗ್ಯೆ ರೆವಿನ್ಯೂ ಆಫಿಸರಗಳು ಕೊಡುವ ನೋಟಿಸಗಳಿಗೆ:—		
ಮೊದಲನೇ ಸಲಕ್ಕೆ ಫುಟ 1ಕ್ಕೆ	10	0
ಎರಡನೇ ಸಲ ವ ಅತರುವಾಯ ಪ್ರತಿ ಸಲಕ್ಕೆ	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ ಮಾಡಲ್ಪಡುತ್ತೆ:—		
ಮೊದಲನೇ ದಫಾ ಇಂಗ್ಲೀಷ ಅಥವಾ ಕನ್ನಡಕ್ಕೆ ಪಙ್ತಿ 1ಕ್ಕೆ	0	8
ಎರಡನೇ ದಫಾ ಡಿಟೋ ಡಿಟೋ	0	6
ಮೂರನೇ ವ ಅತರುವಾಯ ಪ್ರತಿ ಸಲಕ್ಕೆ	0	4

ಷರಾ.—ಗೆಜೆಟ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟನೆಗಳ ಛಾರ್ಜ ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಯೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ ಮಜಕೂರಿಗೆ ದಾಖಲೆ ಬಗ್ಯೆ ರವಾನಿಸತಕ್ಕದ್ದು. ಮನಿ ಆರ್ಡರ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ ಗವರ್ನಮೆಂಟ ಜನರಲ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರನಾಮೆಗಳೂ ಆ ಗೆಜೆಟ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ವಳಗಾಗಿ ಕಂಪೈಲರ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ ಇಲ್ಲ.

ಸಿ. ಹೆಚ್. ಪಟ್ನಿ,
ಕಂಪೈಲರ, ಮೈಸೂರ ಗೆಜೆಟ.

532

152

ಮೈಸೂರ ಗೆಜೆಟ್.

ನಂ. 42.] ಸರ್ಕಾರದಿಂದ ಛಾಪಿಸಿದ್ದು. [ನಂ. 49

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 12, ಸನ್ 1907.

II ನೆ ಭಾಗ.

ಇಂಡ್ಯಾ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜುಡಿಷಿಯಲ್ ಇಲಾಖಾ.

ಮೈಸೂರು ಚೀಫ್ ಕೋರ್ಟಿನಲ್ಲಿ.

ಸನ್ 1907—08ನೆ ಇಸವಿ ಕಂಪನಿ ಮಿ॥ ನಂಬರ್ 7.

ಕೋಲಾರ ಗೋಲ್ಡ್ ಫೀಲ್ಡ್ಸ್ ರಾಬರ್ಟ್‌ಸನ್‌ಪೇಟೆ ಟ್ರೇಡಿಂಗ್ ಕಂಪನಿ ವಿಷಯದಲ್ಲಿ—

ಅರ್ಜಿದಾರು. ಎದುರು ಅರ್ಜಿದಾರು.

ಅಡಿಯಾಡಿ. 1ನೆ ಆದಿನಾರಣ ಸೆಟ್ಟಿ ವಗೈರೆ 5.

ಇದರಿಂದ ಕಂಪನಿ ಷೇರ್‌ದಾರ್ ವಗೈರೆ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—

ಕೋಲಾರ ಗೋಲ್ಡ್ ಫೀಲ್ಡ್ಸ್ ರಾಬರ್ಟ್‌ಸನ್ ಪೇಟೆಲಿರುವ ಟ್ರೇಡಿಂಗ್ ಕಂಪನೀ ಲಿಮಿಟೆಡನ್ನು ವೈಂಡಪ್ ಮಾಡಬೇಕೆಂತ ಮೇಲ್ಕಂಡ ಅರ್ಜಿದಾರನು ಈ ಕೋರ್ಟಿಗೆ ಅರ್ಜಿ ಕೊಟ್ಟಿರುವದ್ದರಿಂದ ಆ ಪ್ರಕಾರ ವೈಂಡಪ್ ಬಗ್ಯೆ ಆರ್ಡರು ಕೊಡಕೂಡದೆಂಬ ಇರಾದೇವುಳ್ಳವರು ಸನ್ 1908ನೆ ಇಸವಿ ಜನವರಿ 17ನೆ ತಾರೀಖು ಶುಕ್ರವಾರ ಪ್ರಾತಃಕಾಲ 11 ಘಂಟೆಗೆ ಈ ಕೋರ್ಟಿನ ರೂಬರೂಬ್ ಖುದ್ದಾಗಿಯಾಗಲಿ ಅಥವಾ ಕ್ರಮವಾದ ಅಧಿಕಾರವನ್ನು ಹೊಂದಿದ ವಕೀಲರ ಮೂಲಕವಾಗಿಯಾಗಲಿ ಹಾಜರಾಗಿ ಆಕ್ಷೇಪಣೆಯನ್ನು ತಿಳಿಸತಕ್ಕದ್ದಿದೆ. ಇದಕ್ಕೆ ತಪ್ಪಿದರೇ ಡಿಟೋ ಅಪ್ಲಿಕೇಷನ್ ಏಕಪಕ್ಷ ವಿಚಾರಣೆಯಿಂದ ಫೈಸಲ್ ಮಾಡಲ್ಪಡುತ್ತೆ.

ಸನ್ 1907ನೆ ಇಸವಿ ಡಿಸೆಂಬರು 7ನೆ ತಾರೀಖು ಕೋರ್ಟಿನ ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಏ. ಎ. ರಾಜರತ್ನ ಮೊದಲಿಯಾರ್,
ರಿಜಿಸ್ಟ್ರಾರ್.

ಆಬ್ಕಾರಿ ಇಲಾಖೆ.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರನಾಮೆ.

ತಾರೀಖು 27ನೆ ನವಂಬರ 1907, ಮೈಸೂರು.

ಈ ಕೆಳಗೆ ಕಾಣಿಸಿರುವ ಇನಾಂ ವಗೈರೆ ಗ್ರಾಮಗಳ ಮಾನ್ಯದಾರ್ರಿಗೆ ಆಯಾ ಗ್ರಾಮದ ಕೇಂದಿ ಹುಟ್ಟುವಳಿ ಹಕ್ಕು ಇರುವ ವಿಚಾರದಲ್ಲಿ ಆಯಾ ಗ್ರಾಮದ ಸದರಿಗೆ ಕಾಣಿಸಿರುವ ತಾರೀಖಿನ ದಿನ ವಿಚಾರಣೆ ನಡಿಸಲ್ಪಡುತ್ತೆ.

ಆಯಾ ಗ್ರಾಮಕ್ಕೆ ಸಮ್ಮಂಧಪಟ್ಟ ಇನಾಂದಾರರುಗಳು ಖುದ್ದಾಗಿಯಾಗಲೀ ಅಥವಾ ಅವರಿಂದ ಕ್ರಮವಾದ ಮೊಖ್ತ್ಯಾರ ನಾಮೆ ಹೊಂದಿದವರಾಗಲೀ ಹಕ್ಕು ಸ್ಥಾಪಿಸುವದಕ್ಕೆ ಅವಶ್ಯವಾದ ಸನ್ನದು, ಇನಾಂಸೆಟಲ್‌ಮೆಂಟ್ ರಿಜಸ್ಟರ ಕಾಪಿ, ಟೈಟಲ ಡೀಡು, ಮುಚ್ಚಳಿಕೆಗಳೇ ಮುಂತಾದ ವಿಶಿಷ್ಟ ದಾಖಲೆಗಳ ನಿಶಿ ಹೀರಿಂಗ ತಾರೀಖು ದಿವಸ ಮೈಸೂರಲ್ಲಿ ನಮ್ಮ ಆಫೀಸು ಬಳಿ ಹಾಜರಾಗತಕ್ಕದ್ದು.

ಹಾಗೆ ಹಾಜರಾಗದೇ ತಪ್ಪಿದ್ದಲ್ಲಿ ರೂಲ್ಸು ಮೇರೆ ಎಕ್ಸಪಾರ್ಟಿ ಫೈಸಲ್ಮಾಡುತ್ತೆಯಾಗಿ ಈ ಮೂಲಕ ತಿಳಿಸಿದೆ.

ತಾಲ್ಲೂಕು ಹೆಸರು.	ಇನಾಂ ಗ್ರಾಮದ ಹೆಸರು.	ಹೀರಿಂಗ ತಾರೀಖು.
ಎಡತೊರೆ	ಅರಕೆರೆ ಕೊಪ್ಪಲ	1908ನೆ ಜನವರಿ ತಾ॥ 3.
ಡಿಟೋ	ಕಲ್ಲೀನಹಳ್ಳಿ ಕೊಪ್ಪಲ	
ಡಿಟೋ	ಚಾಮಲಾಪುರ	
ಡಿಟೋ	ಕಲ್ಲಹಳ್ಳಿ	
ಡಿಟೋ	ವಸ್ತ್ರರಹಳ್ಳಿ	
ಡಿಟೋ	ಮೆಟ್ಟಕೆರೆ	1908ನೆ ಜನವರಿ ತಾ॥ 4.
ಡಿಟೋ	ಹೊಸೂರು	
ಡಿಟೋ	ಯರವನಸುಗಾನಹಳ್ಳಿ	
ಡಿಟೋ	ಗುಡಗಹಳ್ಳಿ	
ಹುಣಸೂರು	ಅಹ್ವಾಳ	1908ನೆ ಜನವರಿ ತಾ॥ 6.
ಡಿಟೋ	ತುಂಗಾ	
ಹೆಗ್ಗಡದೇವನಕೋಟೆ	ಗಂಗಡಹೊಸಹಳ್ಳಿ	
ಡಿಟೋ	ಚಕ್ಕೂರು	
ಡಿಟೋ	ಮಲಿಯೂರು	
ಡಿಟೋ	ಸಂಕಹಳ್ಳಿ	
ಚಾಮರಾಜನಗರ	ಮೂಡ್ಳು ಅಗ್ರಹಾರ	1908ನೆ ಜನವರಿ ತಾ॥ 7.
ಡಿಟೋ	ಉಮ್ಮತ್ತೂರು	
ಡಿಟೋ	ನವಲೂರು	
ಡಿಟೋ	ಯಲ್ಲುಕೂರು	
ಡಿಟೋ	ಸಪ್ಪಯ್ಯನಪುರ	1908ನೆ ಜನವರಿ ತಾ॥ 8.
ಡಿಟೋ	ಹಂಡರಕಳ್ಳಿ	
ಡಿಟೋ	ಹನಹಳ್ಳಿ	
ಡಿಟೋ	ಬೆಂಡರವಾಡಿ	
ಡಿಟೋ	ಕೃಷ್ಣಪುರ	
ಡಿಟೋ	ಹೆಗ್ಗೊಟಾರ	1908ನೆ ಜನವರಿ ತಾ॥ 9.
ಡಿಟೋ	ಶಿವಪುರ	
ಡಿಟೋ	ಬೇಡರಪುರ	
ಡಿಟೋ	ಹೆಂಗರಪುರ	
ಡಿಟೋ	ಬಡ್ಡಲಕೂಡು ಹೊಸಹಳ್ಳಿ	

ಎ. ಕೆ. ಸೈಯದ ತಾಜ್‌ಪೀರಾ,
ಡಿಸ್ಟ್ರಿಕ್ಟು ಎಕ್ಸೈಜ ಆಫೀಸರ, ಮೈಸೂರು.

184633

ಫಾರೆಸ್ಟ್ ಇಲಾಖೆ.

ಸಂಡಲ್ ಹರಾಜ್ ನೋಟಿಫಿಕೇಷನ್.

ತಾರೀಖು 24ನೇ ಆಗಸ್ಟ್ 1907ನೇ ಇಸವಿ.

ಈ ಕೆಳಗಿನ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:—ಮೈಸೂರು ಸರಕಾರದ ಶ್ರೀಗಂಧದ ಸಾಲಿಯಾನಾ ಸಾಮಾನುಗಳ ಹರಾಜು ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅವುಗಳ ಎದುರು ನಮೂದಿಸಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫೀಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರುಗಳಿಂದ ನಡೆಸಲ್ಪಡುವುದು:—

ಡಿಸ್ಟ್ರಿಕ್ಟ್.	ಕೋಠಿ.	ಹರಾಜು ತಾರೀಖು.	ಸುಮಾರು ಮೊತ್ತ.
			ಟನ್‌ಗಳು.
ಶಿವಮೊಗ್ಗ ...	ತೀರ್ಥಹಳ್ಳಿ ...	18ನೇ ನವಂಬರ್ 1907 ...	200
ಡಿಟ್ಟೋ ...	ಸಾಗರ ...	21ನೇ ಡಿಟ್ಟೋ ...	150
ಡಿಟ್ಟೋ ...	ಶಿವಮೊಗ್ಗ ...	25ನೇ ಡಿಟ್ಟೋ ...	500
ಕಡೂರು ...	ತರೀಕೆರೆ ...	28ನೇ ಡಿಟ್ಟೋ ...	250
ಡಿಟ್ಟೋ ...	ಚಿಕ್ಕಮಗಳೂರು ...	2ನೇ ಡಿಸೆಂಬರ್ 1907 ...	350
ಹಾಸನ ...	ಹಾಸನ ...	5ನೇ ಡಿಟ್ಟೋ ...	150
ಬೆಂಗಳೂರು ...	ಬೆಂಗಳೂರು ...	9ನೇ ಡಿಟ್ಟೋ ...	100
ಮೈಸೂರು ...	ಶ್ರೀರಂಗಪಟ್ಟಣ ...	12ನೇ ಡಿಟ್ಟೋ ...	250
ಡಿಟ್ಟೋ ...	ಹುಣಸೂರು ...	16ನೇ ಡಿಟ್ಟೋ ...	500
		ಜಮಾ ...	2,450

2. ಪ್ರತಿ ಕೋಠಿಯಲ್ಲಿಯೂ ಹರಾಜಾಗುವ ಕ್ಲಾಸುವಾರು ಲಾಟು, ಮೊತ್ತ ಮತ್ತು ಇತರ ತಪಶೀಲುಗಳು ಬರುವ ಅಕ್ಟೋಬರ್ ಮಾಹೆಯ ಆಖೈರಿನಲ್ಲಿ ತಿಳಿಯಪಡಿಸುತ್ತೆ.

ಎಂ. ಮುತ್ತಣ್ಣಾ,
ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ಬೆಂಗಳೂರು ಡಿಸ್ಟ್ರಿಕ್ಟ್.

ಅಬಸ್ಟ್ರಾಕ್ಟ್ ನೋಟಿಫಿಕೇಷನ್.

ನೆಲಮಂಗಲದ ತಾಲ್ಲೂಕು ದಾಸನಪುರದ ಹೋಬಳಿಗೆ ಸೇರಿದ ಜೋಡಿ ಕಮ್ಮಸಂದ್ರ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ನೆಲಮಂಗಲದ ತಾಲ್ಲೂಕು ಕಛೇರಿಯಲ್ಲಿ 1908ನೇ ಇಸವಿ ಜನವರಿ 6ನೇ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಸೀಲ್ ಬಗ್ಗೆ 1907ನೇ ಇಸವಿ ಡಿಸೆಂಬರ್ 5ನೇ ಮುರ್ಕಾಂ 48ನೇ ನಂಬರ್ ಮೈಸೂರು ಗೆಜೆಟ್ಟಿನ IIನೇ ಭಾಗದ 561ನೇ ನಂಬರ್ ಪೇಜು ನೋಡತಕ್ಕದ್ದು.

ಡಿ. ದೇವರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾರೀಖು 14ನೇ ನವಂಬರ್ 1907.

ತಿರಮುಕೂಡ್ಲು ನರಸೀಪುರ ತಾಲ್ಲೂಕು ಮೂಗೂರು ಹೋಬಳಿಗೆ ಸೇರಿದ ಕಾಯಂಗುತ್ತಾ ಹ್ಯಾಕನೂರು ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ತಿರಮುಕೂಡ್ಲು ನರಸೀಪುರ ತಾಲ್ಲೂಕು ಕಛೇರಿಯಲ್ಲಿ 1908ನೇ ಜನವರಿ 30ನೇ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ ಬಗ್ಗೆ 1907ನೇ ನವಂಬರ್ 28ನೇ ಮುರ್ಕಾಂ 47ನೇ ನಂಬರ್ ಮೈಸೂರು ಗೆಜೆಟ್ಟಿನ IIನೇ ಭಾಗದ 554ನೇ ನಂಬರ್ ಪೇಜು ನೋಡತಕ್ಕದ್ದು.

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 1ನೆ ಡಿಸೆಂಬರ್ 1907ನೇ ಇ ಸ

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಫ್ತಿ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಪ್ರಾರಂಭವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಕಡಮೆದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಿಖ್ತಿಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರರು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು.

6. ಡೆಪ್ಯುಟಿ ಕಮ್ಮಿಷ್ನರ್ರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನ ಡೆಪ್ಯುಟಿ ಕಮಿಷನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರು ಮಾಡೋಣಾದ ಒಂದು ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ನುಕ್ಸಾನ್‌ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರು ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿ	ಗ್ರಾಮ	ಜೋಡಿದಾರರ ಹೆಸರು	ಅಂದಾಜಾ ಬೀಜವರಿ.			ಅಂದಾಜಾ ಹುಟ್ಟುವಳಿ	ಸರಕಾರದ ಕಂದಾಯ	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂತಾ ಸರಕಾರದ ಕಂದಾಯದ ಬಾಕಿ.			ಯಾವ ವರ್ಷದ ಬಾಕಿ	
						ಎ.	ಗು.	ರೂ. ಆ.	ರೂ.	ರೂ.	ಆ.	ಪೈ		
ಹಾಸನ	ಹಾಸನ	ಹಾಸನ ಕಸಬಾ	[illegible]	[illegible]	ಖರಾಬು	1,194	4	18 12		63?	4	2	ಕ್ರೋಧಿ	1904-05
					ಖುಷ್ಕಿ	1,037	32	926 4		1,099	5	9	ವಿಶ್ವಾವಸು	1905-06
					ತರಿ	311	9	1,105 12		1,099	5	9	ಪರಾಭವ	1906-07
					ಬಾಗಾಯತು	43	6	195 0		1,099	5	9	ಪ್ಲವಂಗ	1907-08
					ಜುಮ್ಲಾ	2,586	11	2,245 12	959	3,936	5	5	ಮತ್ತು ನೋಟೀಸ್ ಫೀ, ಹಿಂದಿನ ಬಾಕಿ ಮೇಲಿನ ಬಡ್ಡಿ ಸಹಾ.	

1908ನೆ ಇಸವಿ ಫೆಬ್ರುವರಿ 17ನೆ ತಾರೀಖು ಸೋಮವಾರ ದಿವಿ 11 ಘಂಟೆ ಲಾಗಾಯಿತು ಹಾಸನ ತಾಲ್ಲೂಕು ಕಚೇರಿಯಲ್ಲಿ ಹಾಸನ ಡಿಸ್ಟ್ರಿಕ್ಟ್ ಟ್ರೆಜರಿ ಅಸಿಸ್ಟೆಂಟ್ ಕಮಿಷ್ನರವರು ಯಾ ಡೆಪ್ಯುಟಿ ಕಮಿಷ್ನರವರಿಂದ ನೇಮಕವಾಗುವ ಇತರ ಆಫೀಸರು ಹರಾಜನ್ನ ನಡಿಸುತ್ತಾರೆ.

ನರಸಿಂಗರಾವ್ ಪೂರ್ಣಯ್ಯ,
ಛಾರ್ ಡೆಪ್ಯುಟಿ ಕಮ್ಮಿಷನರ್.

18652

ಸ 1907ನೆ ಇಸವಿ ನವಂಬರ ಮಾಹೆ 11ನೆ ತಾರೀಖಿನಲ್ಲಿ ನಡಿಸಿದ ಹಾಸನ ಡಿಸ್ಟ್ರಿಕ್ಟ ಬೋರ್ಡ ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

ಕೆ. ಆರ್. ಶ್ರೀನಿವಾಸೈಯ್ಯಂಗಾರ್, ಎಸ್‌ಕ್ವೈರ್, ಎಂ. ಎ., ಪ್ರೆಸಿಡೆಂಟ.

ಎಕ್ಸ ಅಫಿಷಿಯೋ ಮೆಂಬರುಗಳು.

ಮೆ॥ ನರಸಿಂಗರಾವ್ ಪೂರ್ಣೈಯ್ಯ, ಬಿ. ಎ., ಟ್ರೆಜರಿ ಅಸಿಸ್ಟೆಂಟ ಕಮಿಷನರವರು ಮತ್ತು ವೈಸ ಪ್ರೆಸಿಡೆಂಟರು.
,, ಎಂ. ಎ. ನಾರಾಯಣೈಯ್ಯಂಗಾರ್, ಬಿ. ಎ., ಬಿ. ಎಲ್. ಸೀನಿಯರ ಅಸಿಸ್ಟೆಂಟ ಕಮಿಷನರವರು.
,, ಎಂ. ಲಕ್ಷ್ಮಣಶಾಸ್ತ್ರಿ, ಬಿ. ಎ., ಜನರಲ ಅಸಿಸ್ಟೆಂಟ ಕಮಿಷನರವರು.
,, ಸಿ. ರಾಜಾರಾವುರಾವ್, ಎಲ್. ಎಂ. ಎಸ್., ಡಿಸ್ಟ್ರಿಕ್ಟ ಮೆಡಿಕಲ ಮತ್ತು ಸ್ಯಾನಿಟರಿ ಆಫೀಸರವರು.

ನಾನ್ ಅಫಿಷಿಯಲ್ ಮೆಂಬರುಗಳು.

ಮೆ॥ ಲಕ್ಷ್ಮೀನರಸಿಹ್ಮಾಚಾರ್, ಹಾಸನ
,, ಕೆ. ಮಹದೇವಪ್ಪನವರು, ಹಾಸನ.
,, ಕೆ. ತಮ್ಮೈಯ್ಯನವರು, ಬೇಲೂರು.
,, ಹಬಿಬುಲ್ಲಾಸಾಬರು, ಬೇಲೂರು.
,, ಹೆ. ದಾಸಪ್ಪನವರು, ಅರಸೀಕೆರೆ.
,, ಕೆಂಚರಾಯ ಶೆಟ್ಟರು, ಅರಸೀಕೆರೆ.
,, ಜಿ. ತಿರುನಾರಣೈಯ್ಯಂಗಾರ್ರು, ಚನ್ನರಾಯಪಟ್ಣ.
,, ನಂಜಣ್ಣ, ಚನ್ನರಾಯಪಟ್ಣ.
,, ಧರಣೈಯ್ಯಶೆಟ್ರು, ಚನ್ನರಾಯಪಟ್ಣ.
,, ಮಹಲಿಂಗೆ ಗೌಡರು, ಅರಕಲಗೂಡು.
,, ಸೂರ್ಯನಾರಾಯಣಶೆಟ್ಟರು, ಅರಕಲಗೂಡು.
,, ಅಬ್ದುಲ್ಲಾಸಾಬರು, ಅರಕಲಗೂಡು.

ಗೈರ ಹಾಜರು.

ಎಕ್ಸ ಅಫಿಷಿಯೋ ಮೆಂಬರುಗಳು.

ಮೆ॥ ಕೆ. ಪ್ರಹ್ಲಾದರಾವ್, ಹಾಸನ ಡಿವಿಜನ ಎಗ್ಸಿಕ್ಯೂಟಿವ ಇಂಜನಿಯರವರು.
,, ಎಂ. ಕೆ. ತಿರುಮಲಾಚಾರ್ಯರು, ಹಾಸನ ಡಿಸ್ಟ್ರಿಕ್ಟ ಸ್ಕೂಲ ಡೆಪ್ಯುಟಿ ಇನಸ್ಪೆಕ್ಟರವರು.

ನಾನ್ ಅಫಿಷಿಯಲ್ ಮೆಂಬರುಗಳು.

ಮೆ॥ ಡಬ್ಲಿಯು. ಎಲ್. ಕ್ರಾಫರ್ಡ ಸಾಹೇಬರವರು, ಮಂಜರಾಬಾದು.
,, ಐಗೂರು ಮಲ್ಲೀಗೌಡರು, ಮಂಜರಾಬಾದು.
,, ಪುಟ್ಟೇಗೌಡರು, ಮಂಜರಾಬಾದು.
,, ವೆಂಕಟರಾಮೈಯ್ಯನವರು, ಹೊಳೇನರಸೀಪುರ.
,, ಕೊ. ರಾಮಶೆಟ್ಟರು, ಹೊಳೇನರಸೀಪುರ.
,, ಗುರುಲಿಂಗೆಗೌಡರು, ಆಲೂರು.

I. 1906—07ನೆ ಸಾಲಿನ ಬಾಬತ್ತು ಹಾಸನ ಡಿಸ್ಟ್ರಿಕ್ಟ ಬೋರ್ಡು ಅಡ್ಮಿನಿಸ್ಟ್ರೇಷನ ರಿಪೋರ್ಟು ಓದಲಾಯಿತು.

ತೀರ್ಮಾನ.—ಕೇಳಿ ಅನುಮೋದಿಸಲಾಯಿತು.

II. 1900—01ನೆ ಸಾಲಿನ ಬಾಬತ್ತು ಗೊರೂರು ಹೇಮಾವತಿ ಕಡುವು ಕಂಟ್ರಾಕ್ಟುದಾರ ಮರಡಿ ನರಸಿಂಹನೆಂಬುವನಿಂದ ಬರಬೇಕಾದ 225 ರೂಪಾಯಿಗಳನ್ನು ರಿಮಿಷನ ಆಗಬೇಕೆಂಬ ಅಂಶವನ್ನು ಡಿಸ್ಟ್ರಿಕ್ಟ ಬೋರ್ಡು ಮೀಟಿಂಗಿನಲ್ಲಿಟ್ಟು ತೀರ್ಮಾನದ ನಕಲುಸಹಿತ ಗೌರ್ನಮೆಂಟು ಆರ್ಡರ ಬಗ್ಯೆ ಕಳುಹಿಸಿಕೊಡಬೇಕೆಂದು ವಗೈರೆ ಜನರಲ ಮತ್ತು ರೆವಿನ್ಯು ಸೆಕ್ರಟರಿಯವರಿಂದ ತಲಪಿದ 1907ನೆ ಸೆಪ್ಟಂಬರ 2ನೆ ತಾರೀಖಿನ ಬಾಬತು 2095 ಎಲ್. ಬಿ. 71—07—2ನೆ ನಂಬರ ಡಾಕೆಟ್ಟು ಓದಲಾಯಿತು.

ತೀರ್ಮಾನ.—ಕೆಲವು ತಿಂಗಳ ವರಿಗೆ ಜಂಗಾಲ ಉಪಯೋಗಿಸಲು ಕಂಟ್ರಾಕ್ಟರಿಗೆ ಅವಕಾಶ ತಪ್ಪಿತೆಂಬ ಅಂಶವನ್ನು ಪರ್ಯಾಲೋಚಿಸುವಲ್ಲಿ ಕಂಟ್ರಾಕ್ಟರು ಬೇಡುವಂತೆ ರಿಮಿಷನ ಕೊಡುವದು ನ್ಯಾಯವಾಗಿರುತ್ತೆಂತ ತೀರ್ಮಾನಿಸಲಾಯಿತು.

III. ಅರಕಲಗೂಡು ತಾಲ್ಲೂಕು ಕೊಣನೂರು ಯೂನಿಯನನಲ್ಲಿರುವ 7 ಜನ ಝಾಡಮಾಲಿಗಳಿಗೆ ಹಾಲಿ ಮಾಹೆಯಾನಾ 4—8—0 ತಲಬು ಕೊಡುತ್ತಾ ಇದೆ. ಈ ಕಮ್ಮಿ ತಲಬಿಗೆ ಆಸಂಗಳು ದೊರಕದೆ ಇರುವದರಿಂದ ಪ್ರತಿ ಆಸಂಗೂ ಮಾಹೆಯಾನ 8 ಆಣೆ ತಲಬು ಹೆಚ್ಚಿಸಿ ಕೊಡಬೇಕೆಂದು ವಗೈರೆ ಯೂನಿಯನ ಪಂಚಾಯಿತರು ಶಿಫಾರಸು ಮಾಡಿರುವ ತೀರ್ಮಾನದ ವಿಚಾರದಲ್ಲಿ ಅರಕಲಗೂಡು ತಾಲ್ಲೂಕು ಅಮಲ್ದಾರರಿಂದ ತಲಪಿದ 1907ನೆ ಅಕ್ಟೋಬರ 25ರ ಮುಕಾಂ 503ನೆ ನಂಬರ ರಿಪೋರ್ಟು ಓದಲಾಯಿತು.

ತೀರ್ಮಾನ.—ಅಮಲ್ದಾರರ ಶಿಫಾರ್ಸಿನಂತೆ ಪ್ರಸಕ್ತನಾದ ತಲಬನ್ನು 5 ರೂಪಾಯಿಗೆ ಹೆಚ್ಚಿಸಬೇಕೆಂತ ತೀರ್ಮಾನಿಸಲಾಯಿತು.

IV. ಹಾನುಬಾಳ್‌ನಲ್ಲಿರುವ ಭಾವಿ ರಿಪೇರಿ (ಬಡ್ಜೆಟ್ಟನಲ್ಲಿ ದಾಖಲಾದ ಕೆಲಸ) ಗೋಸ್ಕರ 136 ರೂಪಾಯಿ ಅಂದಾಜನಿತ ಸೀನಿಯರ್ ಅಸಿಸ್ಟೆಂಟ್ ಕಮಿಷನರವರಿಂದ ತಲಪಿದ 7—9—07ನೆ ಮುರ್ಸಲಂ 16ನೆ ನಂಬರ ಯಾದಿ ಓದಲಾಯಿತು.

ತೀರ್ಮಾನ.—ಪ್ರಸಕ್ತವಾದ ಅಂದಾಜವನ್ನು ಮಂಜೂರ್ಮಾಡಬೇಕೆಂತ ತೀರ್ಮಾನಿಸಲಾಯಿತು.

V(1). ಹಾಲ್‌ಸಾಲ್‌ನಲ್ಲಿ ಪಬ್ಲಿಕ ವರ್ಕ್ಸ್ ಡಿಪಾರ್ಟುಮೆಂಟ್ಸನವರಿಂದ ನಡಿಯಬೇಕಾದ A ಪಬ್ಲಿಕ ವರ್ಕ್ಸಗಳ ಬಾಬತು ಅಂದಾಜಗಳು ಪ್ರೆಸಿಡೆಂಟರಿಂದ ಕ್ವಾರ್ಟರ್ ಸೈಕ್ಷ್ ಆದವುಗಳ್ಯಾವವಂದರೆ :—

ಕಾಂಗಾರಿ ಹೆಸರು.			ಅಂದಾಜಾ ಮೊಬಲಗು.	
ಶುಕ್ರವಾರಸಂತೆ	IIIನೆ ಕ್ಲಾಸ್ ಟ್ರಾವಲರಸ್ ಬಂಗ್ಲಾ ರಿಪೇರಿ	...	39	ಹಾಲ್‌ಸಾಲ್ ಡಿಸ್ಟ್ರಿಕ್ಟು ಫಂಡು ಬಡ್ಜೆಟ್ಟು ಎ. ಪಬ್ಲಿಕ ವರ್ಕ್ಸ II. ರಿಸರ್ವ 510 ರೂಪಾಯಿಗಳಲ್ಲಿ.
ಹಾನುಬಾಳು	ಡಿಟ್ಟೋ		115	
ಕೆಂಪುಹೊಳೆ	ಡಿಟ್ಟೋ		22	
ಡಿಟ್ಟೋ	ಡಿಟ್ಟೋ ಚಾಟು ಕಾಂಗಾರಿಗೆ	...	18	
ಮಾರ್ನ ಹಳ್ಳಿ	ಡಿಟ್ಟೋ ಡಿಟ್ಟೋ		32	
ಶುಕ್ರವಾರಸಂತೆ	ಡಿಟ್ಟೋ ಡಿಟ್ಟೋ	...	28	ಡಿಟ್ಟೋ A ಪಬ್ಲಿಕ ವರ್ಕ್ಸ I. ರಿಸರ್ವ 500 ರೂಪಾಯಿಗಳಲ್ಲಿ.
ಬಿಸ್ಲೆ	ಡಿಟ್ಟೋ ಡಿಟ್ಟೋ		21	
ಹಾನುಬಾಳು	ಡಿಟ್ಟೋ ಡಿಟ್ಟೋ		25	

V(2). ಪ್ರೆಸಿಡೆಂಟರವರಿಂದ ಮಂಜೂರಾದ ಹಾಲ್‌ಸಾಲ್ ಬಡ್ಜೆಟ್ಟನಲ್ಲಿ ದಾಖಲಾಗಿರುವ ಬಿ. ಪಬ್ಲಿಕ ವರ್ಕ್ಸಗಳ ಬಾಬತು ಅಂದಾಜಗಳನ್ನು ಓದಲಾಯಿತು.

ತಾಲ್ಲೂಕಿನ ಹೆಸರು.	ಕಾಂಗಾರಿ ಹೆಸರು.	ಅಂದಾಜ ಮೊಬಲಗು.
		ರೂ.
1. ಮಂಜರಾಬಾದು ...	ಸಕಲೇಶಪುರದಿಂದ ಕೆಂಚಮ್ಮನ ಹೊಸಕೋಟೆಗೆ ಹೋಗುವ ಬಂಡಿ ಜಾಡು ಅಭಿವೃದ್ಧಿಗೋಸ್ಕರ.	200
2. ಡಿಟ್ಟೋ ...	ಹನಸೆ ಶನಿವಾರಸಂತೆ ರಸ್ತೆ ರಿಪೇರಿ ...	40
3. ಡಿಟ್ಟೋ ...	ಹೊಸಕೋಟೆ ಈಚಲುಬೀಡು ರಸ್ತೆ ರಿಪೇರಿ ...	40
4. ಡಿಟ್ಟೋ ..	ಮಾರ್ನ ಹಳ್ಳಿ ಮುಸಾಫರ್‌ಖಾನ ರಿಪೇರಿ ...	100
5. ಡಿಟ್ಟೋ ..	ಶುಕ್ರವಾರಸಂತೆ ಛತ್ರದ ರಿಪೇರಿ ...	100
6. ಅರಸೀಕೆರೆ ...	ಮಹಮ್ಮದಪುರದಲ್ಲಿನ ಭಾವಿಗೆ ಕಲ್ಲು ಕೆಲಸ ...	300
7. ಡಿಟ್ಟೋ ...	ಹೊಳಲಕೆರೆಯಲ್ಲಿನ ಡಿಟ್ಟೋ ...	298
8. ಡಿಟ್ಟೋ ...	ಹರಳುಕಟ್ಟೆ ಡಿಟ್ಟೋ ...	298
9. ಚನ್ನರಾಯಪಟ್ಟಣ ...	ಹಿರಿಸಾವೆಯಲ್ಲಿ ಚರಂಡಿ ಕಟ್ಟುವದರ ಮೂಲಕ ಗ್ರಾಮ ಪಾಕೀಜಾ ಅಭಿವೃದ್ಧಿಪಡಿಸುವದಕ್ಕೋಸ್ಕರ.	206
10. ಡಿಟ್ಟೋ	ಶ್ರವಣಬೆಳಗುಳದಲ್ಲಿ ಚರಂಡಿ ಕಟ್ಟುವದಕ್ಕೆ ...	202
11. ಡಿಟ್ಟೋ ...	ಚನ್ನರಾಯಪಟ್ಟಣದ ಮುಸಾಫರ್‌ಖಾನ ರಿಪೇರಿ ...	100
12. ಡಿಟ್ಟೋ ...	ಹಿರಿಸಾವೆ ಡಿಟ್ಟೋ ...	150
13. ಡಿಟ್ಟೋ ...	ರಾಜೇನಹಳ್ಳಿಯ ಭಾವಿ ಕಲ್ಲು ಕೆಲಸ ...	374
14. ಡಿಟ್ಟೋ ...	ಹೊಸೂರು ಡಿಟ್ಟೋ ...	160
15. ಹೊಳೇನರಸೀಪುರ ...	ಮಾವಿನಕೆರೆ ಮುಸಾಫರ್‌ಖಾನೆ ರಿಪೇರಿ ...	50
16. ಡಿಟ್ಟೋ ...	ಮಾವಿನಕೆರೆಯಿಂದ ಇಲವಾಲ-ಹಾಸನ ರಸ್ತೆಗೆ ಸೇರುವ ಗಾಡಿ ಜಾಡು ರಿಪೇರಿ.	25
17. ಡಿಟ್ಟೋ ...	ಗಂಗೂರು ಭಾವಿ ಆಳಪಡಿಸಿ ಕಲ್ಲುಕಟ್ಟುವದು	299
18. ಡಿಟ್ಟೋ ...	ಸೀಗೇಕಲ್ಲು ಚಟ್ಟದಿಂದ ಹೊಳೇ ನರಸೀಪುರಕ್ಕೆ ಹೋಗುವ ಗಾಡಿ ಜಾಡು ರಿಪೇರಿ.	80
19. ಅರಕಲಗೂಡು ...	ಕೊಣನೂರಲ್ಲಿ ಚರಂಡಿ ಕಟ್ಟುವದಕ್ಕೋಸ್ಕರ ...	131
20. ಆಲೂರು ಸಬ್ ತಾಲ್ಲೂಕು ...	ಆಲೂರು ಪೇಟೆಯಿಂದ ಕಾರ್ಜವಳ್ಳಿ ಮೂಲಕ ಬೇಲೂರು ತಾಲ್ಲೂಕು ಎಲ್ಲೆ ವರಿಗೆ ಹೋಗುವ ಗಾಡಿ ಜಾಡು ರಿಪೇರಿ.	150
		3,303

ತೀರ್ಮಾನ.—ಮಂಜೂರಾಗಿರುವದನ್ನು ಅನುಮೋದಿಸಿ ಇರುತ್ತೆಂತ ತೀರ್ಮಾನಿಸಲಾಯಿತು.

VI. ಇದರಡಿ ನಮೂದಿಸಿರುವವುಗಳನ್ನು ಬೋರ್ಡಿನವರ ತಿಳುವಳಿಕೆ ಬಗ್ಯೆ ಓದಲಾಯಿತು.

(1) 1907—08ನೆ ಸಾಲಿಗೋಸ್ಕರ ಯೂನಿರ್ಯಗಳ ಬಾಬತು ಬಡ್ಜೆಟ್ ಸ್ಯಾಂಕ್ಷನ್ ಆಗಿರುತ್ತೆಂಬ ಬಗ್ಯೆ ತಲಪಿದ 28—10—07ರ ಮುರ್ಸ್ಕಂ 3690-1—ಎಲ್. ಬಿ. 98—07-2ನೆ ನಂಬರ ಪ್ರೊಸೀಡಿಂಗ್ಸ್.

ತೀರ್ಮಾನ.—ಕೇಳಿ ವಿಲೆ ಇಡಿಸಲಾಯಿತು.

(2) ಲೋಕಲ್ ಫಂಡು ಡಿಸ್ಪೆನ್ಸರಿಗಳಿಗೆ ರಿಪೇರಿ ವಗೈರೆ ಆಗತಕ್ಕ ಬಗ್ಯೆ ತಯಾರಾದ ಅಂದಾಜಗಳನ್ನು ಡಿಸ್ಟ್ರಿಕ್ಟು ಮತ್ತು ಮುನಸಿಪಲ್ ಬೋರ್ಡುಗಳ ಪ್ರೆಸಿಡೆಂಟರವರ ಅಭಿಪ್ರಾಯುಕ್ತು ಮತ್ತು ಕೌಂಟರ ಸೈನ್ ಬಗ್ಯೆ ಕಳುಹಿಸಿಕೊಡತಕ್ಕ ಬಗ್ಯೆ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರವರುಗಳಿಗೆ ತಿಳುವಳಿಕೆ ಕೊಡಿಸಬೇಕೆಂತ ವಗೈರೆ ಚೀಫ್ ಇಂಜನಿಯರವರಿಗೆ ಸೀನಿಯರ ಸರ್ಜನ ಸಾಹೇಬರು ಬರಸಿರತಕ್ಕ 28—10—07ರ ಮುರ್ಸ್ಕಂ 2042ನೆ ನಂಬರು ಲೆಟರು ಸದರಿಯವರ ವೇಲ್ಕಂಡ ಮುರ್ಸ್ಕಂ ನ 2043-52ನೆ ನಂಬರು ಮೆಮೊ ಸಂಗಡ ತಲಪಿದ್ದನ್ನು ಓದಲಾಯಿತು.

ತೀರ್ಮಾನ.—ಕೇಳಿ ವಿಲೆ ಇಡಿಸಲಾಯಿತು.

VII. ಚನ್ನರಾಯಪಟ್ಣ ತಾಲ್ಲೂಕಿನಲ್ಲಿ ಸ್ಥಾಪಿಸಿರುವ ಕ್ರೋಮಿಯಂ ಕಂಪೆನಿಯವರು ಡಿಸ್ಟ್ರಿಕ್ಟು ಫಂಡ ರಸ್ತೆ ಮೇಲೆ ಭಾರಿಯಾದ ಮೆಷಿನೆರಿ ಸಾಮಾನುಗಳನ್ನು ಸಾಗಿಸುವದರಿಂದ ರಸ್ತೆ ಕೆಡುತ್ತೆಂತಲೂ ಇದನ್ನು ಸರಿಯಾದ ಸ್ಥಿತಿಯಲ್ಲಿ ಇಡಿಸಲು ಸದರಿ ಕಂಪೆನಿಯವರಿಂದ ಕಂಟ್ರಿಬ್ಯೂಷನ ತೆಗದುಕೊಳ್ಳುವ ವಿಚಾರದಲ್ಲಿ ತುಮುಕೂರು ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರವರು ಗಾರ್ನಮೆಂಟಿಗೆ ಬರೆಸಿದ 21—10—07ರ ಮುರ್ಸ್ಕಂ 31ನೆ ನಂಬರು ಲೆಟರು ಮತ್ತು ಇದರ ಮುಲಪೂಫಿಗಳ ಕಾಪಿಗಳನ್ನು ಈ ಡಿಸ್ಟ್ರಿಕ್ಟು ಬೋರ್ಡಿನೊಂದಿಗೆ ಆಲೋಚಿಸಿ ಏನು ಕ್ರಮ ಜರಿಗಿಸಬಹುದೆಂಬ ಬಗ್ಯೆ ಜವಾಬು ಅಪೇಕ್ಷಿಸಿ ಜನರಲ್ ಮತ್ತು ರೆವಿನ್ಯು ಸೆಕ್ರಿಟರಿಯವರಿಂದ ತಲಪಿದ 8—11—07ರ ಮುರ್ಸ್ಕಂ 4175—ಎಲ್. ಬಿ. 143—07-2ನೆ ನಂಬರ ಡಾಕೆಟ್ ಓದಲಾಯಿತು.

ತೀರ್ಮಾನ. ಗಾರ್ನಮೆಂಟಿಗೆ ತುಮುಕೂರು ಡೆಪ್ಯುಟಿ ಕಮಿಷನರವರು ಬರಸಿರುವ 21—10—07ರ ಮುರ್ಸ್ಕಂ 31ನೆ ನಂಬರ ಲೆಟರನಲ್ಲಿನ ಅಭಿಪ್ರಾಯುಕ್ಕೆ ಈ ಬೋರ್ಡಿನವರು ಒಪ್ಪುತ್ತಾರೆ. ಪ್ರಸಕ್ತವಾದ ರಸ್ತೆಯನ್ನು ಸಾಧಾರಣವಾದ ಆಮದು ರಫ್ತಿಗೆ ಅನುಕೂಲಿಸುವ ಸ್ಥಿತಿಯಲ್ಲಿ ಇಡಲು ಡಿಸ್ಟ್ರಿಕ್ಟು ಫಂಡಿನಿಂದ ಸಾಧ್ಯವಾದಷ್ಟು ಮೊಬಲಗು ಖರ್ಚುಮಾಡಲು ವಿಶೇಷ ಪ್ರಯತ್ನ ಪಡುತ್ತಿರುವದರಿಂದ ಕ್ರೋಮಿಯಂ ಕಂಪನಿಯವರ ಬಹಳವಾದ ಆಮದು ರಫ್ತಿಗನುಸಾರವಾಗಿ ರಸ್ತೆಯನ್ನು ಸರಿಪಡಿಸಲು ಡಿಸ್ಟ್ರಿಕ್ಟು ಫಂಡಿನಲ್ಲಿ ಹಣವಿಲ್ಲದ್ದರಿಂದ ಪ್ರಸಕ್ತವಾದ ಕೆಲಸಕ್ಕೆ ಹೆಚ್ಚಾಗಿ ಬೇಕಾಗುವ ಮೊಬಲಗು ಮೇಲ್ಕಂಡ ಕಂಪೆನಿಯಿಂದ ಕಂಟ್ರಿಬ್ಯೂಷನ ತರೀಖಾಗಿ ವಸೂಲಿ ನಿಂದಲಾಗಲಿ ಅಥವಾ ಇತರ ಬಾಬಿನ ಹಣದಿಂದಲಾಗಲಿ ವದಗಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

VIII. ಇದರಡಿ ನಮೂದಿಸಿರುವ ಮೆಂಬರುಗಳು ಮೀಟಂಗಿಗೆ ಹಾಜರಾಗಲು ಅನುಕೂಲವಿಲ್ಲವೆಂಬ ಬಗ್ಯೆ ಬರೆಸಿದ ಲೇಖನಗಳನ್ನು ಓದಲಾಯಿತು.

1. ಮಿ॥ ಡಬ್ಲ್ಯು. ಎಲ್. ಕ್ರಾಫರ್ಡು ಸಾಹೇಬರವರು.
2. ,, ಐಗೂರು ಮಲ್ಲೇಗೌಡರು.
3. ,, ಪುಟ್ಟೇಗೌಡರು.
4. ,, ರಾಮಶೆಟ್ಟರು.

ತೀರ್ಮಾನ.—ಕೇಳಿ ವಿಲೆ ಇಡಿಸಲಾಯಿತು.

IX. ಬರುವ ಮೀಟಂಗನ್ನು 1908ನೆ ಇಸವಿ ಫೆಬ್ರವರಿ 8ನೆ ತಾರೀಖಿಗೆಂತ ತೀರ್ಮಾನಿಸಲಾಯಿತು.

ಕೆ. ಆರ್. ಶ್ರೀನಿವಾಸೈಯ್ಯಂಗಾರ್,
ಪ್ರೆಸಿಡೆಂಟ್.

ಶಿವಮೊಗ್ಗ ಡಿಸ್ಟ್ರಿಕ್ಟು.

1907ನೆ ಇಸವಿ ಸೆಪಟಂಬರ ತಿಂಗಳು ತಾರೀಖು 28ರಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿ ನಡೆದ ಡಿಸ್ಟ್ರಿಕ್ಟು ಬೋರ್ಡು ಮೀಟಂಗ ಪ್ರೊಸೀಡಿಂಗ್ಸಿಯಾದ ನಡವಳಿಕೆಗಳು.

ಹಾಜರು.

ಉದ್ಯೋಗದ ಮೆಂಬರುಗಳು.

1. ಮೆ॥ ಎಂ. ನಾರಾಯಣರಾವ್, ಡೆಪ್ಯುಟಿ ಕಮಿಷನರ್, ಮತ್ತು ಪ್ರೆಸಿಡೆಂಟ್.
2. ,, ಆರ್. ಟಿ. ಸುಖದೇವರಾವ್, 1ನೆ ಅಸಿಸ್ಟೆಂಟ್ ಕಮಿಷನರ ಶಿವಮೊಗ್ಗಾ ಡಿವಿಜನ್.
3. ,, ಎ. ವೇದಾಂತದೇಶಿಗಂ ಅಯ್ಯಂಗಾರ್, ಟ್ರೆಜರಿ ಅಸಿಸ್ಟೆಂಟ್ ಕಮಿಷನರ ಮತ್ತು ವೈಸ ಪ್ರೆಸಿಡೆಂಟ್.
4. ,, ಮಹಮ್ಮದ ಉಸ್ಮಾನ ಸಾಹೇಬರವರ, ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟೇರಿ ಆಫೀಸರ.
5. ,, ಬಿ. ರಾಮಯ್ಯ, ಅಫಿಷಿಯೇಟಿಂಗ ಡೆಪ್ಯುಟಿ ಇನ್ಸ್ಪೆಕ್ಟರ.

ಉದ್ಯೋಗಸ್ಥರಲ್ಲದ ಮೆಂಬರುಗಳು.

6. ಮೆ॥ ನಾಡಿಗಗೋಪಾಲಪ್ಪನವರು, ಹೊನ್ನಾಳಿ ತಾಲ್ಲೂಕು.
7. ,, ತಾಗರ್ತಿ ದ್ಯಾವಪ್ಪನವರು, ಶಿಕಾರಿಪುರದ ತಾಲ್ಲೂಕು.

8. ಮಿ॥ ಎ. ನರಸಿಂಹಯ್ಯಂಗಾರ್, ಸಾಗರ ತಾಲ್ಲೂಕು.
9. ,, ಸಿ. ನಾಗಪ್ಪನವರು, ನಗರದ ತಾಲ್ಲೂಕು.

ಇತರೆ ಮೆಂಬರುಗಳು.

10. ,, ರವರೆಂಡ್ ಎ. ಇ. ನೈಟಿಂಗೇಲ್ ಸಾಹೇಬರವರು.
11. ,, ರವರೆಂಡ್ ಫಾದರ್ ಎಫ್. ವಾಲ್ಶ್ ಸಾಹೇಬರವರು.
12. ,, ಪಂಡಿದೇವರ ಗುರುಸಿದ್ದಪ್ಪ, ಹೊನ್ನಾಳಿ ತಾಲ್ಲೂಕು.
13. ,, ವೀರಪ್ಪ, ಶಿಕಾರಿಪುರ ಗೈರಹಾಜರ್.

ಉದ್ಯೋಗದ ಮೆಂಬರುಗಳು.

1. ಶಿವಮೊಗ್ಗ ಡಿ॥ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರು.
2. ಸಾಗರ ಡಿವಿಜನ್ ಅಸಿಸ್ಟೆಂಟ್ ಕಮಿಷನರವರು.
3. ಹೊನ್ನಾಳಿ ಡಿವಿಜನ್ ಅಸಿಸ್ಟೆಂಟ್ ಕಮಿಷನರವರು.

ಉದ್ಯೋಗಸ್ಥರಲ್ಲದ ಮೆಂಬರುಗಳು.

4. ಮ॥ ನಾಡಿಗ ಶೀತಾರಾಮಪ್ಪನವರು, ಶಿವಮೊಗ್ಗಾ ತಾಲ್ಲೂಕು (ಭವತಿ).
5. ,, ಲಾಡಿ ಅಬ್ದುಲ್ ಕರೀಂ ಸಾಹೇಬರವರು, ಕುಂಸಿ ಕಸಬ, ತಾಲ್ಲೂಕು.
6. ,, ಹೋಲೀಗೆರ ಅಡವೆಪ್ಪನವರು, ಚನ್ನಗಿರಿ.
7. ,, ಹೊಸಬಾಳೆ ತಿಮ್ಮಪ್ಪ, ಸೊರಬ.
8. ,, ಎ. ಲಕ್ಷ್ಮೀನಾರಣಪ್ಪ, ತೀರ್ಥಹಳ್ಳಿ.
9. ,, ಟಿ. ಭೀಮರಾವ್, ಶಿವಮೊಗ್ಗ.
10. ,, ಸೈಯದ್ ಖಾಜಿಮಹಮ್ಮದ್, ಶಿವಮೊಗ್ಗ.
11. ,, ಕೋರಿ ಹಿರಣ್ಯಪ್ಪ, ಸಾಗರ.
12. ,, ರಟ್ಟೆಹಳ್ಳಿ ಪುಟ್ಟಪ್ಪ, ಸಾಗರ.

1. ಡಿಸ್ಟ್ರಿಕ್ಟ್ ಫಂಡು ಬಾಬಿನ 1907ನೆ ಏಪ್ರೇಲ್ ಮತ್ತು ಮೇ ತಿಂಗಳ ಜಮಾ ಖರ್ಚು ಲೆಖ್ಖ ಕಂಟ್ರೋಲರವರಿಂದ ಆಡಿಟ್ಟಾಗಿ ಬಂದದ್ದನ್ನು ಓದಿ ಇದನ್ನು ಇಲ್ಲಿ ಇಡಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

ಈ ಲೆಖ್ಖದ ಸಾರಾಂಶದ ತಪಶೀಲ್:—

		ಜಮಾ.			ಖರ್ಚು.		
		ರೂ.	ಆ.	ಪೈ.	ರೂ.	ಆ.	ಪೈ.
ತಾರೀಖು 1—4—07 ರಲ್ಲಿ ಶಿಲ್ಕು	...	48,072	15	10		...	
ಏಪ್ರೇಲ್ ...	...	6,649	6	9	4,482	5	1
ಮೇ ...	...	6,571	9	4	4,645	5	8
ತಾರೀಖು 3—5—07ರಲ್ಲಿ ಶಿಲ್ಕು	...	...		...	52,166	5	2
ಜುಮ್ಲಾ		61,293	15	11	61,293	15	11

2. 1906—07ನೆ ಸಾಲ್ ಡಿಸ್ಟ್ರಿಕ್ಟ್ ಫಂಡು ಬಾಬಿನ ಆಡಳಿತ ಸಮ್ಮಂಧವಾದ ರಿಪೋರ್ಟು ಮತ್ತು ಆ ಸಾಲಿನ ಒಟ್ಟು ಜಮಾ ಖರ್ಚು ಒದಲಾಗಿ ಗವರ್ನ್ಮೆಂಟಿಗೆ ರಿಪೋರ್ಟನ್ನು ರವಾನಿಸಬಹುದೆಂತ ತೀರ್ಮಾನಿಸಲಾಯಿತು. ಈ ಸಾಲ್ ಷುರುವಿನಲ್ಲಿ 29,694 ರೂಪಾಯಿಗಳು ಶಿಲ್ಕು ಇದ್ದು 89,700 ರೂಪಾಯಿಗಳು ಜಮಾ ಆಗಿ 88,193 ರೂಪಾಯಿ ಖರ್ಚು ಆಗಿ ಸಾಲ್ ಆಖೈರಿಗೆ 31,201 ರೂಪಾಯಿ ಶಿಲ್ಕು ನಿಂತಿರುವದಾಗಿ ರಿಮಾರ್ಷ್‌ನಿಂದ ತಿಳಿಯಬಂತು.

3. ಗವರ್ನ್ಮೆಂಟಿನಿಂದ ಸಾದರಾದ ನಂಬರು 1378—98, 93—06—8, ತಾ॥ 10—8—07ನೆ ಪ್ರೊಸೀಡಿಂಗ್ಸ್‌ನಲ್ಲಿ ಪ್ರಜಾರೋಗ್ಯ ಸಮ್ಮಂಧದ ಇಲ್ಲಾಖೆ ಏರ್ಪಾಡು ಮಂಜೂರಾಗಿರುವದರಲ್ಲಿ ಡಿ ಸ್ಯಾನಿಟೆರಿ ಬೋರ್ಡು ಏರ್ಪಾಡು ಆಗಿ ಅವರು ಚಲಾಯಿಸಬೇಕಾದ ಅಧಿಕಾರ ಮತ್ತು ಅವರ ಅಧಿಕಾರಕ್ಕೆ ಒಳಪಡತಕ್ಕ ಹಣವಿನ ವಿಷಯದಲ್ಲಿ ಸಹಾ ಸಲಹೆಗಳನ್ನು ಕಳುಹಿಸಿ ಕೊಡಬೇಕಾಗಿ ಸ್ಯಾನಿಟೆರಿ ಕಮಿಷನರ್ ಸಾಹೇಬರವರು ಬರೆಸಿದ ನಂಬರು 639—4 ತಾ॥ 26—8—07ನೆ ಸರಕ್ಯುಲರ ಓದಲಾಯಿತು. ಡಿಸ್ಟ್ರಿಕ್ಟ್ ಸ್ಯಾನಿಟೆರಿ ಬೋರ್ಡು ಏರ್ಪಾಡನ್ನು ಮೇಲ್ಕಂಡ ಗವರ್ನ್ಮೆಂಟ್ ಆರ್ಡರಿನಲ್ಲಿಯೇ ಮಂಜೂರು ಮಾಡಿರುವ ಕಾರಣ ಡಿಸ್ಟ್ರಿಕ್ಟ್ ಬೋರ್ಡಿನವರು ಜಾಸ್ತಿ ಏನೂ ಹೇಳತಕ್ಕದ್ದು ಇಲ್ಲ. ಡಿಸ್ಟ್ರಿಕ್ಟ್ ಸ್ಯಾನಿಟೆರಿ ಬೋರ್ಡಿನವರಿಗೆ ಕೊಡತಕ್ಕ ಅಧಿಕಾರ ಮತ್ತು ಅವರು ಮಾಡತಕ್ಕ ಕೆಲಸಗಳ ವಿಷಯದಲ್ಲಿ ಲೋಕಲ್ ಬೋರ್ಡು ರೂಲ್ಸು ಪ್ರಕಾರ ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಇರುವ ಅಧಿಕಾರ ಬದಲಾವಣೆಯು ನ್ಯೂನತೆ ಯಾವ ಭಾಗದಲ್ಲಿಯೂ ಆಗಕೂಡದು. ಆರೋಗ್ಯ ಸಮ್ಮಂಧವಾದ ಕಾಂಗಾರಿಗಳ ಬಾಬತು 100 ರೂಪಾಯಿಗಳಿಗೆ ಮೇಲ್ಪಟ್ಟ ಅಂದಾಜಾಗಳು ಡಿಸ್ಟ್ರಿಕ್ಟ್ ಸ್ಯಾನಿಟೆರಿ ಬೋರ್ಡಿನವರ ಅಭಿಪ್ರಾಯದ ಬಗ್ಗೆ ಡಿಸ್ಟ್ರಿಕ್ಟ್ ಬೋರ್ಡಿನಿಂದ ಕಳುಹಿಸಲ್ಪಡುತ್ತೆ. ಡಿಸ್ಟ್ರಿಕ್ಟ್ ಸ್ಯಾನಿಟೆರಿ ಬೋರ್ಡಿನವರಿಗೆ ಈ ಕಾಮಗಾರಿಗಳನ್ನು ಮಂಜೂರ್ ಮಾಡುವದಕ್ಕಾಗಲಿ ಅಥವಾ ಕೆಲಸ ನಡಿಸುವದಕ್ಕಾಗಲಿ ಸ್ವತಂತ್ರ ಅಧಿಕಾರ ಯಾವದೂ ಇರುವದಿಲ್ಲ. ಸಾಂಕ್ರಾಮಿಕ ರೋಗವು ವ್ಯಾಪ್ತವಾದಾಗ ಪ್ರಜಾ ಕ್ಷೇಮಕ್ಕೋಸ್ಕರವಾಗಿ ಎರಡು ಬೋರ್ಡಿನವರು ಒಗ್ಗಟ್ಟಾಗಿ ಏರ್ಪಾಡು ಮಾಡುವದಲ್ಲದೆ ಆಗ್ಯೆ ಒದಗಬಹುದಾದ ಖರ್ಚು ವೆಚ್ಚಗಳನ್ನು ಮತ್ತು ಕಾಂಗಾರಿಗಳನ್ನು ಡಿಸ್ಟ್ರಿಕ್ಟ್ ಸ್ಯಾನಿಟೆರಿ ಬೋರ್ಡಿನವರು ಚಲಾಯಿಸತಕ್ಕದ್ದು ಎಂತ ತೀರ್ಮಾನಿಸಲಾಯಿತು.

4. ಆಗುಂಬೆ ಟೋಲ್‌ಗೇಟ್ ಬಳಿ ಭಾವಿ ತೆಗಿಸತಕ್ಕ ಬಾಬತು ಲಾಗುವದು ವಿಷಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿನಲ್ಲಿ ಚರ್ಚಿಸಿ ಆಗುವ ತೀರ್ಮಾನವನ್ನು ಕಳುಹಿಸಿಕೊಡಬೇಕಾಗಿ ಗೌರ್ನಮೆಂಟಿನಿಂದ ಸಾದರಾದ 6—8—07ನೆ ಮೆರ್ಕ್ಯಂ ನಂಬರು 1090-1 4—07–2ನೆ ಪ್ರೊಸೀಡಿಂಗ್ಸ್ ಓದಲಾಗಿ ಪ್ರಯಾಣೀಕರು ಟೋಲ್ ಗೇಟ್ ಬಳಿ ಇಳದುಕೊಳ್ಳದೆ ಆಗುಂಬೆಯಲ್ಲಿರುವ ಛತ್ರ ಅಥವಾ ಮುಸಾಫರ್‌ಖಾನೆಗೆ ಬಂದು ಇಳಕೊಳ್ಳುವದರಿಂದ ಟೋಲ್ ಗೇಟ್ ಬಳಿ ತೆಗಿಯುವ ಭಾವಿಯಿಂದ ಪ್ರಯಾಣೀಕರಿಗೆ ಯಾವ ವಿಧವಾದ ಪ್ರಯೋಜನವೂ ಇಲ್ಲವೆಂತಲೂ ಈ ಕಾರಣದಿಂದ ಈ ಬಗ್ಯೆ ತಗಲುವ ಖರ್ಚಿನ ಪೈಕಿ ಒಂದು ಭಾಗವನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಸಹಿಸಲು ಕಾರಣವಿಲ್ಲವೆಂತ ಏಕವಾಕ್ಯತೆಯಿಂದ ತೀರ್ಮಾನಿಸಲಾಯಿತು.

5. ಚೆನ್ನಗಿರಿ ತಾಲ್ಲೂಕು ಹೊಸೂರಿನಿಂದ ದಾವಣಗೆರೆ ತಾಲ್ಲೂಕು ಹದಡಿಗೆ ತಯಾರಾಗುವ ರಸ್ತೆ ಬಗ್ಯೆ ಚಾಲ್ತಿ ಸಾಲಿಗೆ 3,000 ರೂಪಾಯಿಗಳನ್ನು ಹೆಚ್ಚಾಗಿ ಕೊಡಿಸಬೇಕೆಂತ ಶಿವಮೊಗ್ಗಾ ಡಿ|| ಎಗ್ಸಿಕ್ಯೂಟಿವ್ ಇಂಜನಿಯರವರು ಬರಸಿದ ನಂಬರು 955ನೆ ಡಾಕೆಟ್ ಓದಲಾಗಿ ಈ ಕಾಂಗಾರಿಯು ಪೂರೈಸಿರುವದಾಗಿ ತಿಳಿಯಬರುವದರಿಂದ ಚಾಲ್ತಿ ಸಾಲ್ ಡಿಸ್ಟ್ರಿಕ್ಟ್ ಫಂಡ್ಸು ಶಿಲ್ಕು ಪೈಕಿ 3,000 ರೂಪಾಯಿಗಳನ್ನು ಕೊಡತಕ್ಕ ಬಗ್ಯೆ ಗೌರ್ನಮೆಂಟಿಗೆ ಬರಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

6. ಮೇಲ್ಪಂಡೆ ಹೊಸೂರು-ಹವಡಿ ರಸ್ತೆ ಸಾಲಾಬಾದ್ ಕಾಂಗಾರಿ ಬಗ್ಯೆ 400 ರೂಪಾಯಿ ಅಂದಾಜಾ ಮಂಜೂರಿ ಬಗ್ಯೆ ಕಳುಹಿಸಿ ಇರುವದಾಗಿ ಎಗ್ಸಿಕ್ಯೂಟಿವ್ ಇಂಜಿನಿಯರ್ರವರು ಬರಸಿದ ನಂಬರು 886ನೆ ಡಾಕೇಟ್ ಓದಲಾಗಿ ಪಬ್ಲಿಕ್ ವರ್ಕ್ಸ್ ಇಲಾಖೆಯವರ ಖರ್ಚಿಗೋಸ್ಕರ ಇಟ್ಟಿರುವ ಹಣದ ಪೈಕಿ ಈ ಕಾಂಗಾರಿ ಬಗ್ಯೆ ಹಣವನ್ನು ನೆಗಾವಗೀರಿಯಿಂದ ಉಪಯೋಗಿಸಿಕೊಳ್ಳಲೂ ಎಗ್ಸಿಕ್ಯೂಟಿವ್ ಇಂಜಿನಿಯರವರಿಗೆ ತಿಳಿಸತಕ್ಕದೆಂತ ತೀರ್ಮಾನಿಸಲಾಯಿತು.

7. ಹುಲಿಕಲ್ ಮುಸಾಫರ್‌ಖಾನೆ ರಿಪೇರಿ ಬಗ್ಯೆ 678 ರೂಪಾಯಿಗಳು ತಾಜಾ ಅಂದಾಜಾ ತಯಾರ್‌ಮಾಡಿ ಕಳುಹಿಸಿ ಇರುವದಾಗಿ ಬರಸಿದ ಎಗ್ಸಿಕ್ಯೂಟಿವ್ ಇಂಜಿನಿಯರ್ರವರ ನಂಬರು 919ನೆ ಡಾಕೆಟ್ ಓದಲಾಗಿ ಈ ಅಂದಾಜಾವನ್ನು ಬೋರ್ಡಿನವರು ಒಪ್ಪಿರುವದರಿಂದ ಗೌರ್ನಮೆಂಟ್ ಮಂಜೂರಿ ಬಗ್ಯೆ ಕಳುಹಿಸಿಕೊಟ್ಟು ಚಾಲ್ತಿ ಸಾಲ್ ಈ ಬಗ್ಯೆ ಇರುವ ಹಣದ ಪೈಕಿ 200 ರೂಪಾಯಿ ಖರ್ಚಿನ ಬಗ್ಯೆ ಕೊಡತಕ್ಕದ್ದೆಂತ ತೀರ್ಮಾನಿಸಲಾಯಿತು.

8. ತುಪ್ಪೂರು ಭಾವಿ ಬಾಬತು 766 ರೂಪಾಯಿನ ರಿವೈಜ್ ಅಂದಾಜಾ ತಕ್‌ಮಾಡಿ ಕಳುಹಿಸಿರುವದಾಗಿ ಎಗ್ಸಿಕ್ಯೂಟಿವ್ ಇಂಜಿನಿಯರ್ರವರು ಬರಸಿದ ನಂಬರು 549ನೆ ಡಾಕೆಟ್ ಓದಲಾಗಿ ಈ ವಿಷಯ ಬರುವ ಮೀಟಿಂಗ್‌ವರೆಗೆ ಅವಮಾನತು ಇರತಕ್ಕದ್ದೆಂತ ತೀರ್ಮಾನಿಸಲಾಯಿತು.

9. ಅನಂತಪುರದ ಮುಸಾಫರ್‌ಖಾನೆ ಝಾಡಮಾಲಿ ತಲಬು 2 ರೂಪಾಯಿನಿಂದ 5 ರೂಪಾಯಿಗೆ ಹೆಚ್ಚಿಸಬೇಕಾಗಿ ಸಾಗರ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರು ಬರಸಿದ ನಂಬರು 194ನೆ ಯಾದಿ ಓದಲಾಗಿ ಹೆಚ್ಚಾದ ತಲಬ್ ಬರುವ ಸಾಲ್ ಬಡ್ಜೆಟ್ಟಿನಲ್ಲಿ ದಾಖಲ್ ಮಾಡತಕ್ಕದ್ದೆಂತಲೂ ಸದ್ಯಕ್ಕೆ ಮುಜಂರಾನ ಮಠದ ರಖವಾಲಿ ಅನಂತಪುರದ ಮುಸಾಫರ್‌ಖಾನೆಯ ಝಾಡಮಾಲಿ ಕೆಲಸವನ್ನು ಮಾಡತಕ್ಕದ್ದೆಂತಲೂ ಈ ಬಗ್ಯೆ 2 ರೂಪಾಯಿ ಅಲೌನ್ಸು ಕೊಡತಕ್ಕದೆಂತಲೂ ತೀರ್ಮಾನಿಸಲಾಯಿತು.

10. ತಾಳಗುಪ್ಪೆಯಲ್ಲಿ ತೆಗಿಯುವ ಭಾವಿ ಕಾಂಗಾರಿ ಬಗ್ಯೆ 400 ರೂಪಾಯಿ ಅಂದಾಜಾ ಕಳುಹಿಸಿರುವದಾಗಿ ಬರಸಿದ ನಂಬರು 153ನೆ ಯಾದಿ ಓದಿ ಈ ರಿವೈಜ್ ಅಂದಾಜಾ ಹಣ ಇಲ್ಲದ್ದರಿಂದ ಅಮಾನತ್ತು ಮಾಡತಕ್ಕದ್ದೆಂತಲೂ ಈ ಕಾಂಗಾರಿ ಬಗ್ಯೆ ಇನ್‌ಕಂಪ್ಲೀಟ್ ಕಾಂಗಾರಿ ಲಿಸ್ಟಿನಲ್ಲಿ ಸೇರಿಸಿರುವ 50 ರೂಪಾಯಿಗಳನ್ನು ನಡೆದು ಇರುವ ಕಾಂಗಾರಿ ಬಗ್ಯೆ ಪಾವತಿ ಮಾಡತಕ್ಕದ್ದೆಂತಲೂ ತೀರ್ಮಾನಿಸಲಾಯಿತು.

11. ಅನಂತಪುರದಲ್ಲಿ ದೊಡ್ಡಿ ಮನೆ ಕಟ್ಟತಕ್ಕ ಬಗ್ಯೆ 300 ರೂಪಾಯಿಗಳ ಅಂದಾಜಾ ಕಳುಹಿಸಿ ಇರುವದಾಗಿ ಬರಸಿರುವ ಸಾಗರ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ನಂಬರು 197ನೆ ಯಾದಿ ಓದಿ ಅಂದಾಜಾ ಮಂಜೂರು ಮಾಡಿ ಚಾಲ್ತಿ ಸಾಲ್ ಹೊಸಕಾಂಗಾರಿ ಬಗ್ಯೆ ಇರತಕ್ಕ ಹಣವಿನ ಪೈಕಿ 150 ರೂಪಾಯಿಗಳನ್ನು ಉಪಯೋಗಿಸಿಕೊಳ್ಳತಕ್ಕದ್ದೆಂತ ತೀರ್ಮಾನಿಸಲಾಯಿತು.

12. ಸೊರಬ ತಾಲ್ಲೂಕು ಉಳವಿ, ಬಿಳಗಲಿ, ಜಡೆ, ಗ್ರಾಮಗಳ ದೊಡ್ಡಿ ಮನೆ ತಯಾರಿ ಬಗ್ಯೆ 160 ರೂಪಾಯಿಗಳ ಬಾಬತು 3 ಅಂದಾಜಾ ಕಳುಹಿಸಿ ಇರುವದಾಗಿ ಬರಸಿದ ಸಾಗರ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನ್ ಸಾಹೇಬರವರ ನಂಬರು 290—292—293ನೆ ಯಾದಿ ಓದಲಾಗಿ ಈ ಅಂದಾಜಾಗಳು ಹಣ ಇಲ್ಲದ್ದರಿಂದ ಸದ್ಯಕ್ಕೆ ಅಮಾನತ್ತು ಮಾಡತಕ್ಕದ್ದೆಂದು ತೀರ್ಮಾನಿಸಲಾಯಿತು.

13. ಸೊಗಿಲ ಗ್ರಾಮದಲ್ಲಿ ದೊಡ್ಡಿ ಮನೆ ಕಟ್ಟತಕ್ಕ ಬಗ್ಯೆ 180 ರೂಪಾಯಿನ ಅಂದಾಜಾ ಕಳುಹಿಸಿ ಇರುವದಾಗಿ ಬರಸಿದ ನಂಬರು 464ನೆ ಯಾದಿ ಓದಲಾಗಿ ಈ ಅಂದಾಜಾ ಮಂಜೂರು ಮಾಡಿ ಚಾಲ್ತಿ ಸಾಲ್ ದೊಡ್ಡಿ ಕಟ್ಟಡಗಳ ಬಗ್ಯೆ ಮಂಜೂರು ಆಗಿರುವ ಹಣಗಳ ಪೈಕಿ 100 ರೂಪಾಯಿಗಳನ್ನು ಈ ಬಗ್ಯೆ ಉಪಯೋಗಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

14. ಶಿವಮೊಗ್ಗಾ ಎಡಿಹಳ್ಳಿ ರಸ್ತೆ ಸ್ಪೆಷಲ್ ರಿಪೇರಿ ಬಗ್ಯೆ 4,441 ರೂಪಾಯಿನ ಅಂದಾಜಾ ಕಾಂಟ್ರಾಕ್ಟ್ ಬಗ್ಯೆ ಕಳುಹಿಸಿರುವದಾಗಿ ಎಗ್ಸಿಕ್ಯೂಟಿವ್ ಇಂಜಿನಿಯರವರು ಬರಸಿದ ನಂಬರ್ 952ನೆ ಡಾಕೆಟ್ ಓದಿ ಈ ಅಂದಾಜಾವನ್ನು ಕಾಂಟ್ರಾಕ್ಟ್ ಮಾಡಿ ಕಳುಹಿಸಬಹುದೆಂದು ತೀರ್ಮಾನವಾಯಿತು.

15. ದಸರಾ ರೆಪ್ರಜೆಂಟೇಟಿವ್ ಮೆಂಬರುಗಳು ಡಿಸ್ಟ್ರಿಕ್ಟ್ ಫಂಡ್ ಕಾಂಗಾರಿಗಳ ವಿಷಯದಲ್ಲಿ ಮಾಡಿದ ಸಲಹೆಗಳ ಬಾಬತು ಎಕ್ಸ್‌ಟ್ರಾಕ್ಟ್‌ಗಳನ್ನು ಫೈಸಲ್ ಬಗ್ಯೆ ಕಳುಹಿಸಿರುವದಾಗಿ ಡೆಪ್ಯುಟಿ ಕಮಿಷನರವರು ಬರಸಿದ ನಂಬರ್ 1,251ನೆ ಡಾಕೆಟ್ ಓದಿ ಈ ವಿಷಯವು ಬರುವ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗ್‌ವರೆಗೆ ಅಮಾನತ್ತು ಇಡತಕ್ಕದ್ದೆಂತ ತೀರ್ಮಾನವಾಯಿತು.

16. ಬೋರ್ಡಿನವರ ಮಂಜೂರಿಗೆ ಒಳಪಟ್ಟು ಪ್ರೆಸಿಡೆಂಟರವರು ಮಂಜೂರು ಮಾಡಿರುವ ಕಾಂಗಾರಿಗಳ ತಪಸೀಲ್ ಲಿಸ್ಟು ಓದಿ ಇದನ್ನು ಒಪ್ಪಿರುವದಾಗಿ ತೀರ್ಮಾನಿಸಲಾಯಿತು.

ಕಾಂಗಾರಿ ಹೆಸರು.	ಮೊಬಲಗು.
ಸಾಗರ-ಕೆಳದಿ ರಸ್ತೆ ರಿಪೇರಿ	70 ರೂ.

17. ಬೋರ್ಡಿನವರ ಒಪ್ಪಿಗೆಗೆ ವಳಪಟ್ಟ ಪ್ರೆಸಿಡೆಂಟರವರು ಕಾರ್ಟರ್‌ಸ್ಯೆ ಮಾಡಿ ಕಳುಹಿಸಿಕೊಟ್ಟು ಇರುವ ಅಂದಾಜಾ ತಪಶೀಲ್ ಲೀಸ್ಟು ಓದಿ ಇದನ್ನು ಮಂಜೂರು ಮಾಡತಕ್ಕದ್ದೆಂದು ತೀರ್ಮಾನಿಸಲಾಯಿತು.

ಕಾಂಗಾರಿ ಹೆಸರು.	ಮೊಬಲಗು.
ಅನಂತಪುರ-ತೀರ್ಥಹಳ್ಳಿ ಸ್ಪೇಷಲ್ ರಿಪೇರಿ	809 ರೂ.

ಈ ಕೆಳಗೆ ನಮೂದಾಗುವ ದಾಖಲೆಗಳನ್ನು ಓದಿ ಫಿಲೆ ಇಡಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

1. ಟೋಲ್‌ಗೇಟಿಗೆ ಸಮೀಪ ಇರತಕ್ಕ ಜಿರಾಯಿತು ಕಸಬುದಾರರು ಅಥವಾ ಇತರರು ತಮ್ಮ ಬಾಬತು ಗಾಡಿಗಳು ಟೋಲ್ ಗೇಟಿನಲ್ಲಿ ಹೋಗಿ ಬರುವ ಸಂದರ್ಭದಲ್ಲಿ ಈ ಬಗ್ಯೆ ಕೊಡುವ ಟೋಲಿನ ಬಗ್ಯೆ ರಾಜಿ ಮಾಡಿಕೊಳ್ಳಬಹುದೆಂತ ಆಗಿರುವ ಗಾರ್ನ ಮೆಂಟ್ ನಂಬರ್ 1369—76 L. B. 81–05–16ನೆ ಪ್ರೊಸೀಡಿಂಗ್ಸ್.

2. ಹೊಸದಾಗಿ ಮೆಂಬರುಗಳು ಆಗತಕ್ಕ ಮೆಂಬರುಗಳ ವಿಷಯದಲ್ಲಿ ಜುಲ್ಯೆ ಗುರ್ರೇ ತಾರೀಖಿನಲ್ಲಿಯೇ ಖಾಯಿಷ್ ಆಗಲು ಏರ್ಪಾಡು ಇಡಬೇಕಾಗಿ ಸಾದರಾಗಿರುವ ಗಾರ್ನಮೆಂಟ್ ನಂಬರ್ 1256–63—L. B. 90–06–10ನೆ ಪ್ರೊಸೀಡಿಂಗ್ಸ್.

3. ಮ್ಯುನಿಸಿಪೆಲ್ ಅಥವಾ ಡಿಸ್ಟ್ರಿಕ್ಟ್ ಬೋರ್ಡ್ ಬಾಬತು ಶಿಲ್ಕು ಮೊಬಲಗು ಏನು ಇಲ್ಲದೆ ಇದ್ದ ಇಂಥಾ ಮೊಬಲಗು ಒಂದು ತಿಂಗಳಿಗೆ ಮೇಲ್ಪಟ್ಟು ಭರ್ತಿ ಆಗದೆ ಬಾಕಿಲಿ ಬರುವ ಪಕ್ಷಕ್ಕೆ 1908–09ನೆ ಸಾಲ್ ಶುರುವಿನಿಂದ ಶೇಕಡಾ ಸಾಲೀಯಾನ 4 ರೂಪಾಯಿ ಪ್ರಕಾರ ಬಡ್ಡಿ ದಾಖಲ್ಮಾಡುವದಾಗಿ ಸಾದರಾಗಿರುವ ಗಾರ್ನಮೆಂಟ್ ನಂಬರ್ 1000–9—7–8–07ನೆ ಪ್ರೊಸೀಡಿಂಗ್ಸ್.

4. ಅಮೃತಮಹಲ್ ಬೀಜದ ಹೋರಿಗಳ ಸಪ್ಲೈ ವಿಷಯದಲ್ಲಿ ಗಾರ್ನಮೆಂಟಿನಿಂದ ಸಾದರಾಗಿರುವ ನಂಬರು 2311–9—L. B. 255—06–2ನೆ ಪ್ರೊಸೀಡಿಂಗ್ಸು.

5. ಏಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ನಡೆಯುವ ದನಗಳ ಪ್ರದರ್ಶನಕಾಲದಲ್ಲಿ ಕೊಡತಕ್ಕ ಬಹುಮಾನದ ಮೊಬಲಗು 200 ರೂಪಾಯಿಗಳಿಗೆ ಹೆಚ್ಚಿಸುವದನ್ನು ಮಂಜೂರು ಮಾಡಿರುವದಾಗಿ ಗಾರ್ನಮೆಂಟ್ ನಂಬರ್ 2585–95ನೆ ಪ್ರೊಸೀಡಿಂಗ್ಸ್.

ಬರುವ ಮೀಟಿಂಗ್ ತಾರೀಖು 9—12—07ರಲ್ಲಿ ನಡಿಯತಕ್ಕದ್ದೆಂದು ತೀರ್ಮಾನಿಸಲಾಯಿತು.

ಎಂ. ನಾರಾಯಣರಾವ್,
ಪ್ರೆಸಿಡೆಂಟ್.

ಚಿತ್ರದುರ್ಗ ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು ..ನೆ ನವಂಬರ್ 1907

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆ ತಾಲ್ಲೂಕು ಮೀರಾಸಾಬಿಹಳ್ಳಿ ಬಳಿ ಹೊಸದಾಗಿ ಕಟ್ಟಿ ಇರುವ ರಾಂತಲಾಪ್‌ಕೆರೆ ಅಚ್ಚು ಕಟ್ಟಿಗೆ ಸೇರಿ ಇರುವ ಜಮೀನುಗಳ ಹಿಡುವಳಿ ಹಕ್ಕನ್ನು ಮೀರಾಸಾಬಿಹಳ್ಳಿ ಬಳಿ ಸರ್ 1908ನೆ ಇಸವಿ ಜನವರಿ ತಾರೀಖು 6ನೆ ಸೋಮವಾರದ ದಿನ ಮತ್ತು ಮರು ದಿವಸಗಳಲ್ಲಿ ಬಹಿರಂಗವಾಗಿ ಹರಾಜು ಮಾಡಿಸುತ್ತೆ ಎಂಬದಾಗಿ ಈ ಮೂಲಕ ನೋಟೀಸನ್ನು ಕೊಟ್ಟಿರುತ್ತೆ.

ಜಾಸ್ತಿ ತಪಶೀಲುಗಳನ್ನು ಸರ್ 1907ನೆ ಮರ್ಕುಂ ನವಂಬರು ತಾರೀಖು 28ನೆ ಗೆಜೆಟ್ಟಿನ IIನೆ ಭಾಗದ 554—555—556ನೆ ಪಾನುಗಳನ್ನು ನೋಡಿಕೊಳ್ಳಬೇಕು.

ತಾರೀಖು 4ನೆ ಡಿಸೆಂಬರು 1907.

ಸರ್ 1907ನೆ ಇಸವಿ ನವಂಬರು 28ನೆ ತಾರೀಖಿನ ಮೈಸೂರು ಕನ್ನಡ ಗೆಜೆಟ್ಟಿನ 2ನೆ ಭಾಗದ 556ನೆ ಪುಟದಲ್ಲಿ ಖಾಯಿಷ್ಠಾಗಿರುವ ತಾರೀಖು 19—11—1907ನೆ ಮರ್ಕುಂಮಿನ ಹರಾಜು ಷರತ್ತು 6ನೆ ಪ್ಯಾರಾದಲ್ಲಿ "ಶೇಕಡಾ 25 ನ್ನು" ಎಂಬ ಶಬ್ದಗಳ ತರುವಾಯ ಮತ್ತು 8ನೆ ಪ್ಯಾರಾದಲ್ಲಿ "ಪೂರಾ ಮೊಬಲಗನ್ನು" ಎಂಬ ಶಬ್ದದ ತರುವಾಯ "ಮತ್ತು ರೂಪಾಯಿ ಒಂದರ ಒಂದಾಣೆಯಂತೆ ಆಗುವ ಲೋಕಲ್ ಸೆಸ್ಸನ್ನು" ಎಂಬ ಶಬ್ದಗಳನ್ನು ಸೇರಿಸಿಕೊಳ್ಳಬೇಕು.

ಎಂ. ಚೆಂಗ್ಯೆಯ್ಯಶೆಟ್ಟಿ,
ಡೆಪ್ಯುಟಿ ಕಮಿಷನರ್.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1907—08ನೆ ಇಸವಿ ಮಿ॥ ಅರ್ಜೀ ನಂಬರು 167.

ಬೆಂಗಳೂರು ಗುಡುಮ್ಯೆಯ್ಯನಪ್ಯಾಟೇಲಿದ್ದು ಮೃತಪಟ್ಟ ಪೆನ್ಷನ್ ಅಮಲ್‌ದಾರ್ ವೆಂಕಟರಾವ್ ಸಿಂಧೆಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ಜೋತೋಜಿರಾವ್, 2ನೆ ಭಾಯಾಪತಿರಾವ್, 3ನೆ ವಾಸುದೇವರಾವ್, 4ನೆ ವಿಶ್ವನಾಥರಾವ್, ಮೃತಪಟ್ಟ ವೆಂಕಟರಾವ್ ಸಿಂಧೆ ಯವರಿಗೆ ಖಾಸ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ವೆಂಕಟರಾವ್ ಸಿಂಧೆ ಯವರ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 4,713—11—6 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಜೋತೋಜಿರಾವ್ ವಗೈರೇರ ಅರ್ಜಿಯನ್ನು ಸ್ 1907ನೆ ಇಸವಿ ಡಿಸೆಂಬರು ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಾವ್ ಸಿಂಧೆ ಯವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1907ನೆ ಇಸವಿ ಡಿಸೆಂಬರು ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸ್ 1907—08ನೆ ಇಸವಿ ಮಿ|| ಅರ್ಜೀ ನಂಬರು 472.

ಬೆಂಗಳೂರು ಅಕ್ಕಿಪೇಟೆಲಿದ್ದು ಮೃತಪಟ್ಟ ಕೆಂಪಂಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಅಕ್ಕಿಪೇಟೆಲಿರುವ ಕೆಂಪಂಣನ ಮಕ್ಕಳು 1ನೆ ಮರಿಸ್ವಾಮಿ, 2ನೆ ಚಿಕ್ಕವೀರಪ್ಪ, 3ನೆ ನಾರಣಪ್ಪ, 4ನೆ ಕ್ರಿಷ್ಣಪ್ಪ, ಮೃತಪಟ್ಟ ಸದರೀ ಕೆಂಪಂಣನವರಿಗೆ ಖಾಸ ಮಕ್ಕಳು ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಕೆಂಪಂಣನವರ ಜಿಂದಗಿ ಬಗ್ಗ್ಯಾಗಿ ಬರತಕ್ಕ ರೂಪಾಯಿ 24,812—14—9 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಮರಿಸ್ವಾಮಿ ವಗೈರೇರ ಅರ್ಜಿಯನ್ನು ಸ್ 1907ನೆ ಇಸವಿ ಡಿಸೆಂಬರು ತಿಂಗಳು 20ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೆಂಪಂಣನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1907ನೆ ಇಸವಿ ಡಿಸೆಂಬರ್ ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸ್ಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಜೆ. ಹೆಚ್. ಭಾಭಾ,
ಸಬ್ ಜಡ್ಜ್.

ನೋಟಿಸ್.

ಬೆಂಗಳೂರು ತಾಲ್ಲೂಕು ದೊಡ್ಡಬಳ್ಳಾಪುರ ರೇಂಜ್ ಅಸಿಸ್ಟೆಂಟ್ ಕಮಿಷನರವರ ಆಫೀಸು.

ತಾರೀಖು 18ನೆ ನವಂಬರ್ 1907.

ನೆಲಮಂಗಲ ತಾಲ್ಲೂಕು ದಾಸನಪುರದ ಹೋಬಳಿ ಜೋಡಿ ಬೈಯ್ಯಂಡಹಳ್ಳಿ ಗ್ರಾಮದ ಅರ್ಧಪಾಲು ಹಿಸ್ಸೆದಾರ್ರು ಬೆಂಗಳೂರು ಚಿಕ್ಕಪೇಟೆ ಸುಮತೇಂದ್ರ ಮಠದಲ್ಲಿರುವ ಭೀಮಾಚಾರ್ರು ಸೊಸೆ ವೆಂಕೋಬಾಮಮ್ಮ. ಬೆಂಗಳೂರು ಮಲತಿಂಕದ ಬಾಗಿಲನಲ್ಲಿ ವಾಸವಾಗಿರುವ ಹಾಗಪಾಲು ಹಿಸ್ಸೆದಾರ್ ಹುಲ್ಲಾಳು ಮಲ್ಲಿಕಾರ್ಜುನೈಯ್ಯನವರ ಮಗ ನಾಗಪ್ಪ ಮತ್ತು ಹಾಗಪಾಲು ಹಿಸ್ಸೆದಾರ್ ಬೈಯ್ಯಂಡಹಳ್ಳಿ ಗ್ರಾಮದ ಹುಸ್ಕೂರು ಚನ್ನಪ್ಪ, ಅನುಭವದಾರ್ ಪಟೇಲ್ ಶಾಂತವೀರಪ್ಪ ಇವರಿಗೆ ತಿಳಿಯಪಡಿಸುವದೇನಂದರೆ :—

ಮೇಲ್ಕಂಡ ಜೋಡಿ ಗ್ರಾಮದ ಕೆಂದಿ ಹುಟ್ಟುವಳೀಲಿ ನಿಮಗೆ ಇರಬಹುದಾದ ಹಕ್ಕಿನ ವಿಚಾರವನ್ನ ಕುರಿತು ತನಿಖೆ ಕ್ರಮ ನಡಿಯಬೇಕಾಗಿರುವದ್ದರಿಂದ ಈ ಬಗ್ಯೆ ನಿಮ್ಮಲ್ಲಿರತಕ್ಕ ವಿಶಿಷ್ಟ ದಾಖಲಾತಿಗಳ ನಿಶಿ ನೀವು ಪ್ರತಿಬಬ್ಬರು 1908ನೆ ಇಸವಿ ಜನವರಿ 4ನೆ ತಾರೀಖು ದಿವಿ 11ಕ್ಕೆ ಬೆಂಗಳೂರು ಮೊಕ್ಕಾಂ ಈ ಕೋರ್ಟ್ ರೂಬರೂಬ್ ಹಾಜರಾಗಬೇಕು. ಇದಕ್ಕೆ ತಪ್ಪಿದರೆ ನಿಮ್ಮ ತಕರಾರು ಅಂಗೀಕರಿಸದೆ ಏಕಪಕ್ಷವಾಗಿ ನಿಮಗೆ ಈ ಬಾಬಿನಲ್ಲಿ ಬರತಕ್ಕದ್ದೇನೂ ಇಲ್ಲವೆಂದು ನಿರ್ಣಯಿಸಲ್ಪಡುತ್ತೆ ತಿಳಿಯುವದು.

ಟಿ. ಚೊಕ್ಕಣ್ಣ. ಅಸಿಸ್ಟೆಂಟ್ ಕಮಿಷನರ್.

ಅಮೃತಮಹಲ್ ಇಲಾಖಾ.

ಪ್ರಕಟನೆ.

ಮೊಕ್ಕಾಂ ಹೊಳಲ್ಕೆರೆ, ತಾರೀಖು 25–27ನೆ ನವಂಬರ್ 1907.

ಅಮೃತಮಹಲ್ ಇಲಾಖಾ ಬಾಬತು ಕೆಲವು ಗಂಡುರಾಸುಗಳನ್ನ ಚಾಲ್ತಿ ಇಸವಿ ಡಿಸೆಂಬರು 10ನೆ ತಾರೀಖು ಲಾಗಾಯಿತು ತಿಪಟೂರು ತಾಲ್ಲೂಕು ಕೊನೆಹಳ್ಳಿ ರೈಲ್ವೆ ಸ್ಟೇಷನ್ ಬಳಿಯಲ್ಲೂ ಅದೇ ಮಾಹೆ 15ನೆ ತಾರೀಖು ಲಾಗಾಯಿತು ಹಾಸನ ತಾಲ್ಲೂಕು ದುದ್ದದ ಮೊಕ್ಕಾಂನಲ್ಲೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟವುಳ್ಳವರು ಸದರ ಸ್ಥಳಗಳಿಗೆ ಹಾಜರಾಗಿ ಛಡಸವಾಲಿನಲ್ಲಿ ರಾಸುಗಳನ್ನ ಪಡಿಯಬಹುದು.

ಹೆಚ್. ನಂಜುಂಡರಾಜೇ ಅರಸ್,
ಸೂಪರಿಂಟೆಂಡೆಂಟ್.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಬೆಂಗಳೂರು, ತಾರೀಖು ನೆ ಡಿಸೆಂಬರ್ 1907.

ಪ್ರತಿ ಸಂವತ್ಸರದಲ್ಲೂ ನಡಿಯತಕ್ಕ ಮಾರ್ಕಟ್ ಷೋ

ಮತ್ತು

ಕೈಗಾರಿಕೆ ವಸ್ತುಪ್ರದರ್ಶನ 1908ನೆ ಇಸವಿ.

ಸ್ 1908ನೆ ಇಸವಿ ಜನವರಿ ತಿಂಗಳು 14ನೆ ತಾರೀಖು ಮಂಗಳವಾರದ ದಿನ ಜನೋಪಕಾರಿ ಮೆ॥ ದೊಡ್ಡಣ್ಣ ಶೆಟ್ಟರ ಸ್ಕೂಲ್ ಕಟ್ಟಡದಲ್ಲಿ ನಡಿಯುವ ಸಿಟಿ ಮಾರ್ಕಟ್ ಷೋ ಪೋಟಾಪೋಟಿಯ ಬಗ್ಗೆ ಕೊಡಲ್ಪಡುವ ಇನಾಂಗಳ ಪಟ್ಟಿಯು ಸಕಲ ಜನರ ತಿಳವಳಿಕೆ ಬಗ್ಗೆ ಪ್ರಕಟಿಸಲ್ಪಟ್ಟಿರುತ್ತೆ.

1ನೆ ತರಗತಿ—ನೇಟಿವ್ ತರ್ಕಾರಿಗಳು.

			ರೂ.
1.	ನಾನಾವಿಧ ತರ್ಕಾರಿಗಳುಳ್ಳ ಉತ್ತಮವಾದ ತರ್ಕಾರಿ ಅಂಗಡಿಗೆ		10
2.	ಡಿಟೋ	2ನೆ ತರಹೆ ...	6
3.	ಡಿಟೋ	3ನೆ ತರಹೆ ...	4
4.	ಬೆಂಡೇಕಾಯಿ	ಉತ್ತಮವಾದ ಮಂಕರೀಗೆ ...	3
5.	ನೆಲ್ಲವರೇಕಾಯಿ	ಡಿಟೋ ...	3
6.	ಅವರೇಕಾಯಿ	ಡಿಟೋ ...	3
7.	ಗೋರೀಕಾಯಿ	ಡಿಟೋ ...	2
8.	ಹುರಳೀಕಾಯಿ	ಡಿಟೋ ...	3
9.	ಹಾಗಲಕಾಯಿ	ಡಿಟೋ ...	3
10.	ಪಡವಲಕಾಯಿ	ಡಿಟೋ ...	3
11.	ಸಾತೇಕಾಯಿ	ಡಿಟೋ ...	3
12.	ಬದನೇಕಾಯಿ	ಡಿಟೋ ...	3
13.	ಬೂದಕುಂಬಳಕಾಯಿ	ಡಿಟೋ ...	3
14.	ಕುಂಬಳಕಾಯಿ	ಡಿಟೋ ...	3
15.	ತೊಗರೀಕಾಯಿ	ಡಿಟೋ ...	3
16.	ಹಸೀಮೆಣಸಿನಕಾಯಿ	ಡಿಟೋ ...	2
17.	ಬಾಳೇಕಾಯಿ	ಡಿಟೋ ...	3
18.	ಉರಳಗಡ್ಡೆ	ಡಿಟೋ ...	8
19.	ಡಿಟೋ	2ನೆ ತರಹೆ ...	6
20.	ಡಿಟೋ	3ನೆ ತರಹೆ ...	4
21.	ಗೆಣಸುಗಡ್ಡೆ	ಉತ್ತಮವಾದ ಮಂಕರೀಗೆ ...	3
22.	ಮುಲ್ಲಂಗಿ	ಡಿಟೋ ...	2
23.	ಮೆಂತ್ಯಸೊಪ್ಪು	ಡಿಟೋ ...	2
24.	ಈರುಳ್ಳಿ	ಡಿಟೋ ...	3
25.	ಕೊತ್ತುಂಬರಿ ಸೊಪ್ಪು	ಡಿಟೋ ...	2
26.	ಕೋಸುಗಡ್ಡೆ (ಕ್ಯಾಬೆಜ್)	ಉತ್ತಮ ತರಹೆ ...	4
27.	ಡಿಟೋ	2ನೆ ತರಹೆ ...	2
28.	ಕಾಲೀಫ್ಲವರ್	ಉತ್ತಮ ತರಹೆ ...	4
29.	ಡಿಟೋ	2ನೆ ತರಹೆ ...	2
30.	ಕಬ್ಬು	ಉತ್ತಮ ತರಹೆ ...	5
31.	ಡಿಟೋ	2ನೆ ತರಹೆ ...	3
32.	ಔಷಧಸೊಪ್ಪು	ಉತ್ತಮವಾದ ಮಂಕರೀಗೆ ...	5
33.	ಡಿಟೋ	2ನೆ ತರಹೆ ...	3
34.	ಆರು ವಿಧಗಳಿಗೆ ಕಮ್ಮಿ ಇಲ್ಲದಂಥ ವಿಶೇಷವಾದ ಉತ್ತಮ ತರಹೆ ಇಂಗ್ಲಿಷ್ ತರಕಾರಿ ಸಮುದಾಯಕ್ಕೆ.		6
35.	ಡಿಟೋ ಡಿಟೋ	2ನೆ ತರಹೆ ...	4
		ಜುಮ್ಲಾ ...	128

2ನ ತರಗತಿ—ಹಂಣುಗಳು.

			ರೂ.
1.	ಸೇವು	ಉತ್ತಮವಾದ ಮಂಕರೀಗೆ	10
2.	ಡಿಟೋ	2ನೆ ತರಹೆ	8
3.	ಪೀಚಸ್	ಉತ್ತಮವಾದ ಮಂಕರೀಗೆ	5
4.	ಡಿಟೋ	2ನೆ ತರಹೆ	3
5.	ರಾಸ್‌ಬರಿ	ಉತ್ತಮವಾದ ಮಂಕರೀಗೆ	3
6.	ಅಂಜೂರ	ಡಿಟೋ	5
7.	ಡಿಟೋ	2ನೆ ತರಹೆ	2
8.	ಸ್ಟ್ರಾಬರಿ	ಉತ್ತಮವಾದ ಮಂಕರೀಗೆ	3
9.	ದ್ರಾಕ್ಷಿಹಂಣು	ಡಿಟೋ (2 ವಿಧ ಪ್ರತಿ ಒಂದಕ್ಕೆ 4—0—0 ಯಂತೆ).	8
10.	ಕಿತ್ತಲೆಹಂಣು	ಡಿಟೋ	4
11.	ಡಿಟೋ	2ನೆ ತರಹೆ ಕಂಟ್ರಿ	2
12.	ಬಾಳೆಹಂಣು (ರಸಬಾಳೆ)	ಉತ್ತಮವಾದ ಮಂಕರೀಗೆ	4
13.	ಡಿಟೋ (ರಾಜಬಾಳೆ)	ಡಿಟೋ	3
14.	ಶೀಬೆಹಂಣು	ಡಿಟೋ	2
15.	ದಾಳಿಂಬರೆಹಂಣು	ಡಿಟೋ	3
16.	ನಿಂಬೇಹಂಣು	ಡಿಟೋ	2
17.	ಎಲ್ಲಾ ತರಹೆ ಹಂಣುಗಳ	ಉತ್ತಮ ತರಹೆ ಸಮುದಾಯಕ್ಕೆ	7
18.	ಡಿಟೋ	2ನೆ ತರಹೆ ಡಿಟೋ	5
		ಜುಮ್ಲಾ	79

3ನೆ ತರಗತಿ—ಮಾಂಸದ ಅಂಗಡಿ.

1.	ಉತ್ತಮವಾದ	ಮಾಂಸಕ್ಕೆ	12
2.	2ನೆ ತರಹೆ	ಡಿಟೋ	10
3.	3ನೆ ತರಹೆ	ಡಿಟೋ	8
		ಜುಮ್ಲಾ	30

4ನೆ ತರಗತಿ—ಕೋಳಿಗಳು.

1.	ಉತ್ತಮವಾದ	ಕೋಳಿಗಳಿಗೆ	5
2.	ಡಿಟೋ	2ನೆ ತರಹೆ	4
		ಜುಮ್ಲಾ	9

5ನೆ ತರಗತಿ—ಮಿಾನು.

1.	ಉತ್ತಮವಾದ ಶೀನೀರಿನ ಮಿಾನಿಗೆ	4

6ನೆ ತರಗತಿ—ಮೊಟ್ಟೆಗಳು.

1.	ಮೊಟ್ಟೆ ಗೂಡುಗಳಿಗೆ ಒಂದು ಡಜಗೆ ಕಮ್ಮಿ ಇಲ್ಲದೆ ಇರುವದಕ್ಕೆ		3
2.	2ನೆ ತರಹೆ	ಡಿಟೋ	2
		ಜುಮ್ಲಾ	5

7ನೆ ತರಗತಿ.

1.	ಉತ್ತಮವಾದ ಹೂವಿನ ಬೊಕ್ಕೆಗೆ	3
2.	ಉತ್ತಮವಾದ ಹೂವಿನ ಹಾರಕ್ಕೆ	5
	ಜುಮ್ಲಾ	8

8ನೆ ತರಗತಿ.

		ರೂ.
1.	ಉತ್ತಮವಾದ ಮಿಠಾಯಿ ಅಂಗಡಿಗೆ	5
2.	2ನೆ ತರಹೆ ಡಿಟೋ	3
	ಜುಮ್ಲಾ ...	8

9ನೆ ತರಗತಿ.

1.	ಉತ್ತಮವಾದ ಊದು ಬಡ್ಡಿಗೆ	5
2.	2ನೆ ತರಹೆ ಡಿಟೋ	3
	ಜುಮ್ಲಾ	8

10ನೆ ತರಗತಿ.

1.	ಉತ್ತಮ ತರಹೆ ಜರಿ ಮತ್ತು ರೇಶ್ಮೆ ಬಟ್ಟೆಗಳು ಬೆಂಗಳೂರಿನಲ್ಲಿ ತಯಾರ್ಮಾಡಲ್ಪಟ್ಟದ್ದು ...	10
2.	2ನೆ ತರಹ ಡಿಟೋ ಡಿಟೋ	5
	ಜುಮ್ಲಾ ..	15
	ಒಟ್ಟು ಜುಮ್ಲಾ ...	294

ವಿಶೇಷವಾದ ಇನಾಮುಗಳು.

ಮಾರ್ಕೆಟ್ಟಿಗೋಸ್ಕರ ಬೆಳೆಯುವ ಪದಾರ್ಥಗಳಲ್ಲಿ ಅಪೂರ್ವವಾದ ಅಥವಾ ವಿಜಾತೀಯವಾದ ತರಹೆಗಳಿಗೂ ಮತ್ತು ಕೈಗಾರಿಕೆ ವಸ್ತುಗಳಿಗೂ ವಿಶೇಷವಾದ ಇನಾಂಗಳು ಕೊಡುವದಕ್ಕೆ ಕಮಿಟಿಯವರು ಸಿದ್ಧರಾಗಿರುತ್ತಾರೆ.

ಆಚರಿಸಬೇಕಾದ ಕ್ರಮಗಳು.

ಅಂಡಿಗಳನ್ನು ಇಡಿಸಲು ಕೆಲವು ಏರ್ಪಾಡುಗಳನ್ನು ಮುಂದಾಗಿಯೇ ಮಾಡಬೇಕಾಗಿರುವದ್ದರಿಂದ ಸಾಮಾನು ತರಲು ಇಷ್ಟವಿರುವವರು ತಾವು ತರತಕ್ಕ ಸಾಮಾನುಗಳನ್ನು ಮತ್ತು ತಾವು ಪೋಟಾಪೋಟಿ ಮಾಡತಕ್ಕ ಬಹುಮಾನಗಳನ್ನು ಸಹ ಕೆಳಗೆ ರುಜು ಮಾಡಿರುವವರಿಗೆ ಪ್ರದರ್ಶನ ದಿವಸಕ್ಕಿಂತ ನಾಲ್ಕು ದಿವಸ ಮುಂಚಿತವಾಗಿಯೆ ತಿಳಿಸಬೇಕು

2. ಪೋಟಾಪೋಟಿ ಮಾಡತಕ್ಕವರು ತಮ್ಮ ಸ್ವಂತ ಸಾಮಾನುಗಳನ್ನು ವಿಂಗಡಿಸಿಕೊಳ್ಳಬೇಕು ಮತ್ತು 1908ನೆ ಇಸವಿ ಜನವರಿ 12ನೆ ತಾರೀಖಿನ ಮಧ್ಯರಾತ್ರಿಯೊಳಗಾಗಿ ಅವುಗಳನ್ನು ಗೊತ್ತುಮಾಡಿದ ಸ್ಥಳದಲ್ಲಿ ಇಡಬೇಕು.

3. ಯಾವ ಬಹುಮಾನ ದೊರಿಯಬೇಕಾದರೂ ಅದಕ್ಕೆ ಪೋಟಾಪೋಟಿ ಮಾಡುವವರು ಕೊನೇಪಕ್ಷ ಇಬ್ಬರಾದರು ಇರಬೇಕು. ಇಲ್ಲದಿದ್ದರೆ ಅಂಥಾ ಬಹುಮಾನ ದೊರಿಯಲಾರದು. ಆದರೆ ಅತ್ಯಂತ ಉತ್ತಮವಾದ ಸಾಮಾನುಗಳೆಂದು ಜಡ್ಜಿಗಳಿಗೆ ತೋರಿದ ಸಂದರ್ಭಗಳಲ್ಲಿ ಅವರು ತಮ್ಮ ಸ್ವಂತ ವಿವೇಚನೆಯಿಂದ ಬಹುಮಾನಗಳನ್ನು ಕೊಡುವರು.

4. ಪ್ರದರ್ಶನಶಾಲೆಗೆ ತರತಕ್ಕ ಸಾಮಾನುಗಳೆಲ್ಲಾ ತರತಕ್ಕವರಿಂದ ಸ್ವಂತವಾಗಿ ತಯಾರ್ಮಾಡಲ್ಪಟ್ಟ ಅಥವಾ ಬೆಳದವುಗಳಾಗಿರಬೇಕು. ಮತ್ತು ಬೆಂಗಳೂರು ಪ್ರಾಂತ್ಯ ಬೆಳದವುಗಳಾಗಿರಬೇಕು. ಮೇಲೆ ನಮೂದಿಸಿರುವ ಷರತ್ತುಗಳ ಸರಿಯಾದ ರುಜುವಾತು ಕೊಡುವವರಿವಿಗೂ ಜಡ್ಜಿಗಳು ಯಾವ ಬಹುಮಾನವನ್ನಾದರೂ ಕೊಡದೇ ನಿಲ್ಲಿಸಬಹುದು.

5. ಸಾಮಾನು ತರತಕ್ಕವರುಗಳಿಗೆ ಮಾಫೀ ಟಿಕೆಟ್ಟುಗಳು ಸಾಕಾದಷ್ಟು ವಿಚಾರಾನಂತರ ಕೊಡಲ್ಪಡುವವು. ಮತ್ತು 12ನೆ ತಾರೀಖಿನ ಮಧ್ಯಾಹ್ನಾತ್ಪರದಲ್ಲಿ ಅಂಥಾ ಟಿಕೆಟ್ಟುಗಳು ದೊರಿಯಲಾರವು

6. ತರಲ್ಪಟ್ಟ ಸಾಮಾನುಗಳು ಆಯಾಯ ಬಹುಮಾನಕ್ಕೆ ನಿಷ್ಕರ್ಷೆಯಾಗಿರುವ ಮೊಬಲಗನ್ನು ಪೂರ್ತಿಯಾಗಿ ಪಡೆಯಲು ಸಾಕಾದಷ್ಟು ಉತ್ತಮವಾದವುಗಳಲ್ಲವೆಂದು ಜಡ್ಜಿಯವರು ಅಭಿಪ್ರಾಯಪಟ್ಟರೆ ಅಂಥಾ ಜಡ್ಜಿಗಳು ಆಯಾ ಬಹುಮಾನದ ಮೊಬಲಗನ್ನು ಕಮ್ಮಿ ಮಾಡಬಹುದು ಅಥವಾ ಕೊಡದೇನೆ ನಿಲ್ಲಿಸಲೂಬಹುದು.

7. ಪ್ರದರ್ಶನವು ಅದೇ ದಿವಸ ಸಾಯಂಕಾಲ 6 ಘಂಟೆಗೆ ಮುಗಿಯುವದು. ನಂತರ ಸಾಮಾನು ತಂದಿರುವವರು ತಮ್ಮ ಸಾಮಾನುಗಳನ್ನು ತೆಗೆದುಕೊಂಡು ಹೋಗಬಹುದು.

8. ಪೋಟಾಪೋಟೀಗೆ ಕಳುಹಿಸಲ್ಪಟ್ಟ ಸಾಮಾನುಗಳು ಪ್ರದರ್ಶನದ ದಿವಸ ಪ್ರಾತಃಕಾಲ 10 ಘಂಟೆಗಿಂತ ಮುಂಚೆ ಬಾರಲ್ಪಡಕೂಡದು.

ಡಿ ದೇವರಾಜ ಅರಸ್,
ಪ್ರೆಸಿಡೆಂಟ್, ಸಿಟಿ ಮ್ಯುನಿಸಿಪಲ್ ಕೌನ್ಸಿಲ್.

ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರ ಆಫೀಸ್.

ನೋಟಿಫಿಕೇಷನ್ ನಂ. 259—C. S. ಬೆಂಗಳೂರು, ತಾರೀಖು 5ನೆ ಡಿಸೆಂಬರ್ 1907.

ಈ ಕೆಳಗೆ ನಮೂದಿಸಿರುವ ಕೋ ಆಪರೇಟಿವ್ ಸೊಸೈಟಿಯು 1905ನೆ ಇಸವಿಯ ಮೈಸೂರು ಕೋ ಆಪರೇಟಿವ್ ಸೊಸೈಟಿಗಳ ರೆಗ್ಯುಲೇಷನ್ 6ನೆ ಸೆಕ್ಷನ್ (2) ನೆ ಒಳ ಪ್ರಕರಣಕ್ಕನುಸಾರವಾಗಿ ರಿಜಿಸ್ಟರು ಮಾಡಲ್ಪಟ್ಟಿರುತ್ತೆ.

ಹೆಸರು.	ಸ್ಥಳ.	ರಿಜಿಸ್ಟರು ಆದ ತಾರೀಖು.
ಗುಂಡ್ಲಪೇಟೆ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್.	ಗುಂಡ್ಲಪೇಟೆ ...	ಡಿಸೆಂಬರು 4, 1907.

ಎಂ. ಶಾಮರಾವ್,
ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್.

ನೋಟಿಸ್.

ತೀರ್ಥಹಳ್ಳಿ, ತಾರೀಖು 9ನೆ ನವಂಬರು 1907.

ಈ ಕೆಳಗೆ ರುಜು ಮಾಡಿದ ತೀರ್ಥಹಳ್ಳಿ ಜವಳಿ ರಘುಪತಯ್ಯನವರ ಮಗ ಹನುಮಂತರಾಯನು ಇದರಿಂದ ಸಮಸ್ತ ಜನಗಳಿಗೂ ಶೃತಪಡಿಸುವದೇನಂದರೆ :—

1. ತೀರ್ಥಹಳ್ಳಿ ಜವಳಿ ಕೃಷ್ಣಯ್ಯನವರ ಮಕ್ಕಳು ವಿಠಲೈಯ್ಯನವರು ಮತ್ತು ಜವಳಿ ಸುಬ್ರಾಯರ ಮಕ್ಕಳು ಮಂಜಪ್ಪನವರು ಸಹಾ ನಮ್ಮ ಮೈನಾರಿಟಿ ಕಾಲದಾರಭ್ಯ ನಮ್ಮ ಜನಕತಂದೆ ರಘುಪತಯ್ಯನವರಿಗೆ ಸ್ವಾರ್ಜಿತವಾಗಿಯು ನಮಗೆ ಪಿತರಾರ್ಜಿತವಾಗಿಯೂ ಇರುವ ವೈವಟ್ಟನ ಆಡಳಿತ ನೋಡುತ್ತಾ ಇದ್ದರು. ಈ ಪೈಕಿ ವಿಠಲೈಯ್ಯನವರು ಈಚಿಗೆ ಮೃತಪಟ್ಟಿದ್ದಾರೆ.

2. ಈ ವಿಠಲೈಯ್ಯನವರು ಮತ್ತು ಈ ಮಂಜಪ್ಪನವರು ಇವರುಗಳ ಒಟ್ಟಿನ ಅಥವಾ ಇವರುಗಳ ಪೈಕಿ ಯಾರೊಬ್ಬರ ಹೆಸರಿಗೆ ಆಗಲೀ, ವ ಜವಳಿ ಶೇಷಗಿರಿಯಪ್ಪನವರು ಬಿನ್ ರಘುಪತಯ್ಯನವರು ಮತ್ತು ಈ ಶೇಷಗಿರಿಯಪ್ಪನವರ ತಮ್ಮ ಹನುಮಂತರಾಯನಾದ ನಾನು ಈರೀತಿ ಇರುವ ನಮ್ಮ ಒಟ್ಟಿನ ಅಥವಾ ನಮ್ಮ ಪೈಕಿ ಯಾರೊಬ್ಬರ ಹೆಸರಿಗೆ ಆಗಲಿ, ಕ್ರಯವಾಗಿರತಕ್ಕ ಆಸ್ತಿಗಳು ಮತ್ತು ಇವುಗಳಿಂದ ಸಾಲೆಸಾಲು ಬರತಕ್ಕ ಗುತ್ತಿಗೆ ಅಡಿಕೆ, ಗಡಿಭತ್ತ, ನಗದು ಗೇಣಿ ವ ಶಿಸ್ತು ವಗೈರೆಯು, ಮತ್ತು ಭೋಗ್ಯಾಧಾರ ವ ದೃಷ್ಟ್ಯಾಧಾರ ವ ಮೈಸಾಲ ಪತ್ರ ಅಥವಾ ಪತ್ರಗಳ ಮತ್ತು ಪ್ರೊನೋಟ್ ಅಥವಾ ಪ್ರೊನೋಟುಗಳ ವಗೈರೆ ಡಾಕ್ಯುಮೆಂಟುಗಳ ಬಾಬತು ಅಸಲು ಹಣ ಇದರ ಬಡ್ಡಿ ವ ಬಡ್ಡಿಯ ಬಡ್ಡಿಯು, ಮತ್ತು ಗವರ್ನಮೆಂಟ್ ಸೇವಿಂಗ್ಸು ಬ್ಯಾಂಕಿನಲ್ಲಿ ಮತ್ತು ಸನ 1906–07ನೆ ಸೇಕಡಾ ೩ ಮೈಸೂರ್ ಸ್ಟೇಟ್ ಲೋನ್ ಪ್ರೊನೋಟುಗಳ ಬಾಬತು ಇವರುಗಳ ಮತ್ತು ನಮ್ಮ ಮತ್ತು ನಮ್ಮ ಮಕ್ಕಳು ಮೈನರು ಗಾರ್ಡಿಯನ್ ನಾವು ಈ ರೀತಿ ಬರತಕ್ಕ ಅಸಲು ಹಣ ಮತ್ತು ಇದರ ಬಡ್ಡಿಯು ಸಹಾ ಮೇಲ್ಕಂಡ ನಮ್ಮ ವೈವಟ್ಟಿಗೆ ಸಮ್ಮಂಧಪಟ್ಟದ್ದಾಗಿ ನನಗೆ ಬರತಕ್ಕದ್ದಾಗಿರುತ್ತದೆ.

3. ಇದರಲ್ಲಿ ಈ ವಿಠಲೈಯ್ಯನವರಿಗೆ ಆಗಲಿ, ಈ ಮಂಜಪ್ಪನವರಿಗಾಗಲಿ ಅಥವಾ ಈ ವಿಠಲೈಯನವರ ತಮ್ಮ ಶ್ರೀಪತಿರಾಯರ ಮಕ್ಕಳು 1ನೆ ರಂಗರಾವ್, 2ನೆ ಬಾಲಕೃಷ್ಣರಾವ್, 3ನೆ ಆನಂದರಾವ್, 4ನೆ ವಾಮನರಾವ್, 2–4 ಮೈನರು, ಗಾರ್ಡಿಯನ್ 1ನೆ ರಂಗರಾವ್ ಮತ್ತು ಈ ಮಂಜಪ್ಪನವರ ತಮ್ಮಂದಿರು 5ನೆ ಪಾಂಡುರಂಗಪ್ಪನವರು, 6ನೆ ರಾಮರಾಯರು, 7ನೆ ನಾಗೇಶರಾವ್ ಫವತಿ ಮಗ ಭಾಸ್ಕರರಾವ್ ಮೈನರ್, ಗಾರ್ಡಿಯನ್ ಮಂಜಪ್ಪನವರು, 8ನೆ ಗೋಪಾಲರಾವ್ ಬಿನ್ ಪಾಂಡುರಂಗಪ್ಪನವರು, 9ನೆ ಇವರ ತಮ್ಮ ಮೂಡ್ಲಗಿರಿಯಪ್ಪನವರು, 10ನೆ ಮಾಧವರಾವ್ ಬಿನ್ ರಾಮರಾಯರು ಇವರುಗಳಿಗೇ ಆಗಲಿ ಹಕ್ಕು ಬಾಧ್ಯತೆ ಇರುವದಿಲ್ಲಾ.

4. ಈ ವಿಠಲೈಯನವರು ಮತ್ತು ಈ ಮಂಜಪ್ಪನವರು ಈಚಿಗೆ ಈ ಮಂಜಪ್ಪನವರು ಮೇಲೆ ಕಂಡ ಇವರ ತಮ್ಮಂದಿರ ಮಕ್ಕಳ ಮತ್ತು ತಮ್ಮಂದಿರ ಸಾಲಗಳಿಗೆ ಈ ನಮ್ಮ ವೈವಟ್ಟಿನ ಆಸ್ತಿಯನ್ನು ಗುರಿಪಡಿಸಿದ್ದು ಇದರ ಆಸ್ತಿಗಳಿಗೆ ಲೋಪ ಪಡಿಸಿದ್ದು ಮತ್ತು ಇನ್ನೂ ಲೋಪ ವಗೈರೆ ಪಡಿಸುವದಕ್ಕೆ ಪ್ರಯತ್ನಿಸುವದೂ, ಇನ್ನೂ ಕೆಲವು ಸಂಗತಿಗಳಲ್ಲಿ ನನಗೆ ಮೋಸ ವ ನಿರ್ಬಂಧಪಡಿಸಿದ್ದೂ ಮತ್ತು ಇನ್ನೂ ಮೋಸ ವಗೈರೆ ಪಡಿಸುವದಕ್ಕೆ ಪ್ರಯತ್ನಿಸುವದೂ, ವಗೈರೆ ಅನೇಕ ವಿಧವಾದ ಈ ವೈವಟ್ಟಿಗೂ ಇದರ ಹಕ್ಕುದಾರರಾದ ನಮಗೂ ನಮ್ಮ ಪ್ರತಿನಿಧಿಯವರಿಗೂ ವಿರೋಧವಾದ ವಿದ್ಯಮಾನಗಳು ನಡಿಸಿದ್ದೂ ಮತ್ತು ಇನ್ನೂ ನಡಸುವದಕ್ಕೆ ಪ್ರಯತ್ನಿಸುವದೂ ವಗೈರೆ ನನ್ನ ನೋಟೀಸಿಗೆ ಬಂದಿರುವದರಿಂದ ನಾನು ಇವರ ಆಡಳಿತವನ್ನು ವಜಾ ಮಾಡಿದ್ದೇನೆ.

5. ಮೇಲೆ 2ನೆ ಕಲಂನಲ್ಲಿ ಕಂಡ ಹೆಸರುಗಳಿಗೆ ಕ್ರಯವಾಗಿರತಕ್ಕ ಆಸ್ತಿಗಳ ಬಾಬತು ಗುತ್ತಿಗೆ ಅಡಿಕೆ, ಗಡಿಭತ್ತ, ನಗದು ಗೇಣಿ ವ ಶಿಸ್ತು ವಗೈರೆಯನ್ನು ಮತ್ತು ಭೋಗ್ಯಾಧಾರ ವಗೈರೆ ಡಾಕ್ಯುಮೆಂಟುಗಳ ಸಮ್ಮಂಧ ಅಸಲು ಹಣ ಇದರ ಬಡ್ಡಿ ವ ಬಡ್ಡಿಯ ಬಡ್ಡಿಯನ್ನೂ ಈ ಮುಂತಾದ್ದು ವಗೈರೆ ಎಷ್ಟನ್ನಾದರೂ ಮೇಲೆ 3ನೆ ಕಲಂಮಿನಲ್ಲಿ ನಮೂದಿಸಿದ ಈ ವೈವಟ್ಟಿಗೆ ಹಕ್ಕುದಾರರಲ್ಲದವರ ಕಡಿಗೆ ವಸೂಲು ಕೊಡಕೂಡದು. ಕೊಟ್ಟರೆ ನಮ್ಮ ವೈವಟ್ಟಿಗೆ ವ ನನಗೆ ಬಂದಂತೆ ನಾನು ಒಪ್ಪಿಕೊಳ್ಳುವದಿಲ್ಲಾ. ಮೇಲ್ಕಂಡ ಪತ್ರಗಳು ವಗೈರೆ ಇವರು ಇದರ ಆಡಳಿತ ನೋಡುತ್ತಾ ಇರುವಾಗ್ಯೆ ಇವರ ಹೆಸರಿಗೆ ನಾಮಮಾತ್ರ ಹುಟ್ಟಿದ್ದಾಗಿರುತ್ತವೆ. ಈ ಮೇಲೆ ಕಂಡ ಆಸ್ತಿಗಳ ಪೈಕಿ ಅಥವಾ ಡಾಕ್ಯುಮೆಂಟುಗಳ ಪೈಕಿ ಎಷ್ಟನ್ನಾದರೂ ಈ ವೈವಟ್ಟಿಗೆ ಹಕ್ಕುದಾರರಲ್ಲದ ಮೇಲೆ ವಿವರಿಸಿದ ಈ ಮಂಜಪ್ಪನವರು ವಗೈರೇರ ಪೈಕಿ ಯಾರಿಂದಲೇ ಆಗಲಿ ಕ್ರಯ ಪರಿವರ್ತನಾ ಮೂಲಕ ಯಾರಾದರೂ ಪಡಕೊಂಡರೆ ಆಗಲಿ ವೇಡೂರು ವಗೈರೆ ಮೂಲಕ ಪರಭಾರೆ ಪಡಕೊಂಡರೆ ಆಗಲಿ ಅದಕ್ಕೆ ನಾನು ಒಪ್ಪಿಕೊಳ್ಳುವದಿಲ್ಲ ಮತ್ತು ಹಾಗೆ ಪಡಕೊಂಡವರ ಕಡಿಗೆ ಎಷ್ಟನ್ನಾದರೂ ವಸೂಲು ಕೊಟ್ಟಾಗ್ಯೂ ಅದನ್ನು ನಾನು ಒಪ್ಪಿಕೊಳ್ಳುವದಿಲ್ಲ ಎಂಬುವದನ್ನು ತಿಳಿದಿರತಕ್ಕದ್ದು. ಇವರುಗಳು ಮತ್ತು ನಾವು ಸಹಾ ಒಂದೇ ಮನೆಯಲ್ಲಿ ವಾಸವಾಗಿದ್ದಾಗ್ಯೂ ಈ ವೈವಟ್ಟಿನಲ್ಲಿ ಇವರುಗಳಿಗೆ ಏನೂ ಹಕ್ಕು ಇರುವದಿಲ್ಲಾ ಎಂಬುವದನ್ನು ಸಹಾ ತಿಳಿದಿರತಕ್ಕದ್ದು.

ತೀರ್ಥಹಳ್ಳಿ ಜವಳಿ ಹನುಮಂತರಾಯನ ರುಜು.

ಮೈಸೂರ ಗೆಜೆಟ ಚಂದಾದಾರು ವಗ್ಯೆರೆ.

ಮೈಸೂರ ಗೆಜೆಟ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ ಮತ್ತು ಸದರೀ ಗೆಜೆಟ್ನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ ಕಂಪ್ಯೈಲರವರ ಹೆಸರಿಗೆ ವಿಳಾಸ ಬರಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲಿಷ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲಿಷ ಮತ್ತು ಕನ್ನಡ ಸುಭಾ 12 ತಿಂಗಳಿಗೆ	7 0	3 8
ಛಷ ಮಾಹೇ ಯಾ ಕ್ವಾರಟರಿಗೆ		ದಾವಹಷಾಯಿ ಪ್ರಕಾರ ದರಗಳು
		ರೂ. ಆ.
ಚಾಲತಿ ವರುಷದ ಗೆಜೆಟ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.		0 8

ಹಿಂದಿನ ವರುಷದ ಗೆಜೆಟ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮರ್ಕುಂ 155ನೆ ನಂಬರ ಉಳ್ಳ ಗವರ್ನಮೆಂಟ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ ಮೈಸೂರು ಸೀಮೆಯಲ್ಲಿನ ಪಟೇಲಿ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿದ್ದಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ಒಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ್ 21ನೆ ಮರ್ಕುಂ 24205—6—ಜಿ. 6200ನೆ ನಂಬರ ಗವರ್ನಮೆಂಟ ಆರಡರ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

ಸಿವಿಲ ಕೋರ್ಟಗಳಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇಷನ್ ಅನುಸರಿಸಿ ಸರ್ಟಿಫಿಕೇಟ ಬಗ್ಯೆ ನೋಟಿಸಗಳು :—		ರೂ. ಆ.
ಮೊದಲನೇ ದಫಾ ಛಾಯಿಷ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ		2 8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ		1 4
ಸಿವಿಲ ಪ್ರೊಸಿಡ್ಯೂರ ಕೋಡಿನ 347ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಯೆ ನೋಟಿಸಗಳಿಗೆ :—		
ಮೊದಲನೇ ಸಲಕ್ಕೆ		5 0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ		2 8
ಸಿವಿಲ ಪ್ರೊಸಿಡ್ಯೂರ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗೆರೆ ಚಾರ್ಜ ಪ್ರಕಟಿಸಲ್ಪಡುತ್ತವೆ.		
ಡ್ಯೂಪ್ಲಿಕೇಟ ಕಾಪೀ ಪಟ್ಟೆ ವಗ್ಯೆರೆ ಕೊಡುವ ಬಗ್ಯೆ ರೆವಿನ್ಯೂ ಆಫಿಸರಗಳು ಕೊಡುವ ನೋಟಿಸಗಳಿಗೆ :—		
ಮೊದಲನೇ ಸಲಕ್ಕೆ	ಪುಟ 1ಕ್ಕೆ	10 0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ	,,	5 0
ಬಾಕಿ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ ಮಾಡಲ್ಪಡುತ್ತೆ :—		
ಮೊದಲನೇ ದಫಾ ಇಂಗ್ಲೀಷ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ	0 8
ಎರಡನೇ ದಫಾ ಡಿಟೋ	ಡಿಟೋ	0 6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ		0 4

ಷರಾ.—ಗೆಜೆಟ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಚಾರ್ಜ ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ ಬಗ್ಯೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ ಮಜಕೂರಿಗೆ ದಾಖಲೆ ಬಗ್ಯೆ ರವಾನಿಸತಕ್ಕದ್ದು. ಮನಿ ಆರ್ಡರ ವಗ್ಯೆರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ ಗವರ್ನಮೆಂಟ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರನಾಮೆಗಳೂ ಆ ಗೆಜೆಟ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ಒಳಗಾಗಿ ಕಂಪೈಲರ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ಸಾವ್ಕಾಶಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ನಲ್ಲಿ ಛಾಪಿಸಲ್ಪಡುತ್ತೆಂಬ ಖಾತರಿ ಇಲ್ಲ.

ಸಿ. ಹಚ್. ಪಿಟ್ಟ್,
ಕಂಪೈಲರ್, ಮೈಸೂರ ಗೆಜೆಟ.

540

168

ಮೈಸೂರ ಗೆಜೆಟ್.

ನಂ. 42.] ಸರ್ಕಾರದಿಂದ ಛಾಯಿಷ್ ಆದ್ದು. [ನಂ. 50.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 19, ಸನ್ 1907.

II ನೆ ಭಾಗ.

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಮೈಸೂರ ರೆವಿನ್ಯೂ ಸರ್ವೆ ಮತ್ತು ಸೆಟ್ಲಮೆಂಟ ಡಿಪಾರ್ಟಮೆಂಟ.

ಇಸ್ತಿಹಾರ್ನಾಮೆ.

ತಾರೀಖು 15ನೆ ಡಿಸೆಂಬರ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಶಿವಮೊಗ್ಗ ಡಿಸ್ಟ್ರಿಕ್ಟ ಸಾಗರ ತಾಲ್ಲೂಕಿನ 170 ಸರಕಾರಿ ಗ್ರಾಮಗಳ ರಿವಿಜನ್ ಸರ್ವೆ ಸೆಟ್ಲಮೆಂಟ ಆಕಾರದ ದರಗಳನ್ನು ಪ್ರಸಿದ್ಧಪಡಿಸುವಿಕೆಯು ಕಸಬಾ ಸಾಗರ ಮೊಕ್ಕಾಂನಲ್ಲಿ ಬರುವ ತಿಂಗಳ (ಜನವರಿ 1908) 20ನೆ ಸೋಮವಾರ ಅಥವಾ ಆ ಸುಮಾರಿನಲ್ಲಿ ಪ್ರಾರಂಭಿಸಲ್ಪಡುವದು.

ಡಿ. ಶಾಮರಾವ್,
ಸೂಪರಿಂಟೆಂಡೆಂಟ್, ಮೈಸೂರ ರೆವಿನ್ಯೂ ಸರ್ವೆ.

ಆಬ್ಕಾರಿ ಇಲಾಖೆ.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 27ನೆ ನವೆಂಬರ್ 1907, ಮೈಸೂರು.

ಈ ಕೆಳಗೆ ಕಾಣಿಸಿರುವ ಇನಾಂ ವಗೈರೆ ಗ್ರಾಮಗಳ ಮಾನ್ಯದಾರರಿಗೆ ಆಯಾ ಗ್ರಾಮದ ಶೇಂದಿ ಹುಟ್ಟುವಳಿ ಹಕ್ಕು ಇರುವ ವಿಚಾರದಲ್ಲಿ ಆಯಾ ಗ್ರಾಮದ ಸದರಿಗೆ ಕಾಣಿಸಿರುವ ತಾರೀಖಿನ ದಿನ ವಿಚಾರಣೆ ನಡಿಸಲ್ಪಡುತ್ತೆ.

ಆಯಾ ಗ್ರಾಮಕ್ಕೆ ಸಮ್ಮಂಧಪಟ್ಟ ಇನಾಂದಾರರುಗಳು ಖುದ್ದಾಗಿಯಾಗಲೀ ಅಥವಾ ಅವರಿಂದ ಕ್ರಮವಾದ ಮೊಖ್ತ್ಯಾರ್ ನಾಮೆ ಹೊಂದಿದವರಾಗಲೀ ಹಕ್ಕು ಸ್ಥಾಪಿಸುವದಕ್ಕೆ ಅವಶ್ಯವಾದ ಸನ್ನದು, ಇನಾಂಸೆಟಲ್ಮೆಂಟ ರಿಜಿಸ್ಟರ ಕಾಪಿ, ಟೈಟಲ್ ಡೀಡು, ಮುಚ್ಚಳಿಕೆಗಳೇ ಮುಂತಾದ ವಿಶಿಷ್ಟ ದಾಖಲೆಗಳ ಸಹ ಹೀರಿಂಗ್ ತಾರೀಖು ದಿವಸ ಮೈಸೂರಲ್ಲಿ ನಮ್ಮ ಆಫೀಸು ಬಳಿ ಹಾಜರಾಗತಕ್ಕದ್ದು.

ಹಾಗೆ ಹಾಜರಾಗದೇ ತಪ್ಪಿದ್ದಲ್ಲಿ ರೂಲ್ಸು ಮೇರೆ ಎಕ್ಸಪಾರ್ಟಿ ಫೈಸಲ್ಮಾಡುತ್ತೆಯಾಗಿ ಈ ಮೂಲಕ ತಿಳಿಸಿದೆ.

ತಾಲ್ಲೂಕು ಹೆಸರು.	ಇನಾಂ ಗ್ರಾಮದ ಹೆಸರು.	ಹೀರಿಂಗ್ ತಾರೀಖು.
ಎಡತೊರೆ	ಅರಕೆರೆ ಕೊಪ್ಪಲ್	1908ನೆ ಜನವರಿ ತಾ॥ 3.
ಡಿಟೋ	ಕಲ್ಲೇನಹಳ್ಳಿ ಕೊಪ್ಪಲ್	
ಡಿಟೋ	ಚಾಮಲಾಪುರ	
ಡಿಟೋ	ಕಲ್ಲಹಳ್ಳಿ	
ಡಿಟೋ	ವಡ್ಡರಹಳ್ಳಿ	
ಡಿಟೋ	ಮೊಟ್ಟಕೆರೆ	1908ನೆ ಜನವರಿ ತಾ॥ 4.
ಡಿಟೋ	ಹೊಸೂರು	
ಡಿಟೋ	ಯರಮನುಗನಹಳ್ಳಿ	
ಡಿಟೋ	ಗುಡಗಹಳ್ಳಿ	

ತಾಲ್ಲೂಕು ಹೆಸರು.	ಇನಾಂ ಗ್ರಾಮದ ಹೆಸರು.	ಹೀರಿಂಗ್ ತಾರೀಖು.
ಹುಣಸೂರು	ಆಹ್ವಾಳಾ	1908ನೆ ಜನವರಿ ತಾ॥ 6.
ಡಿಟೋ	ತುಂಗಾ	
ಹೆಗ್ಗಡದೇವನಕೋಟೆ	ಗಂಗಡಹೊಸಹಳ್ಳಿ	
ಡಿಟೋ	ಚಿಕ್ಕೂರು	
ಡಿಟೋ	ಮಲಿಯೂರು	
ಡಿಟೋ	ಸ್ತಂಕಹಳ್ಳಿ	
ಚಾಮರಾಜನಗರ	ಮೂಡ್ಲು ಅಗ್ರಹಾರ	1908ನೆ ಜನವರಿ ತಾ॥ 7.
ಡಿಟೋ	ಉಮ್ಮತ್ತೂರು	
ಡಿಟೋ	ನವಲೂರು	
ಡಿಟೋ	ಯಲ್ಲುಕೂರು	
ಡಿಟೋ	ಸಪ್ಪಯ್ಯನಪುರ	1908ನೆ ಜನವರಿ ತಾ॥ 8.
ಡಿಟೋ	ಹಂಡರಹಳ್ಳಿ	
ಡಿಟೋ	ಹನಹಳ್ಳಿ	
ಡಿಟೋ	ಬೆಂಡರವಾಡಿ	
ಡಿಟೋ	ಕಟ್ನೆಪುರ	
ಡಿಟೋ	ಹೆಗ್ಗೋಟಾರ	1908ನೆ ಜನವರಿ ತಾ॥ 9.
ಡಿಟೋ	ಶಿವಪುರ	
ಡಿಟೋ	ಜೇಡರಪುರ	
ಡಿಟೋ	ಹಂಗರಪುರ	
ಡಿಟೋ	ಪಡ್ಡಲ್‌ಕೂಡು ಹೊಸಹಳ್ಳಿ	

ಎ. ಕೆ. ಸೈಯದ್ ತಾಜ್‌ಪಿರಾ,
ಡಿಸ್ಟ್ರಿಕ್ಟು ಎಕ್ಸೈಜ್ ಆಫಿಸರ್, ಮೈಸೂರು.

ಫಾರೆಸ್ಟು ಇಲಾಖಾ.

ಸಂದಲ್ ಹರಾಜ್ ನೋಟಿಫಿಕೇಷನ್.

ತಾರೀಖು 24ನೆ ಆಗಸ್ಟು 1907ನೆ ಇಸವಿ.

ಸರ್ವರಿಗೂ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಸರಕಾರದ ಶ್ರೀಗಂಧದ ಸಾಲಿಯಾನಾ ನಡಿಯತಕ್ಕ ಹರಾಜುಗಳು ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರದರ ಬಾಜೂದಲ್ಲಿ ನಮೂದಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರು, ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡೆಸಲ್ಪಡುವವು:—

ಡಿಸ್ಟ್ರಿಕ್ಟು.	ಕೋಠಿ.	ಹರಾಜು ತಾರೀಖು.	ಸುಮಾರು ಮೊತ್ತ.
			ಟನ್‌ಗಳು.
ಶಿವಮೊಗ್ಗ	ತೀರ್ಥಹಳ್ಳಿ	18ನೆ ನವೆಂಬರ 1907	200
ಡಿಟೋ	ಸಾಗರ	21ನೆ ಡಿಟೋ	150
ಡಿಟೋ	ಶಿವಮೊಗ್ಗ	25ನೆ ಡಿಟೋ	500
ಕಡೂರು	ತರೀಕೆರೆ	28ನೆ ಡಿಟೋ	250
ಡಿಟೋ	ಚಿಕ್ಕಮಗಳೂರು	2ನೆ ಡಿಸೆಂಬರ್ 1907	350
ಹಾಸನ	ಹಾಸನ	5ನೆ ಡಿಟೋ	150
ಬೆಂಗಳೂರು	ಬೆಂಗಳೂರು	9ನೆ ಡಿಟೋ	100
ಮೈಸೂರು	ಶ್ರೀರಂಗಪಟ್ಟಣ	12ನೆ ಡಿಟೋ	250
ಡಿಟೋ	ಹುಣಸೂರು	16ನೆ ಡಿಟೋ	500
		ಜಮಾ	2,450

2. ಪ್ರತಿ ಕೋಠಿಯಲ್ಲಿಯೂ ಹರಾಜಾಗುವ ಈ ಸುಮಾರು ಲಾಟು, ಮೊತ್ತ ಮತ್ತು ಇತರ ತಪಶೀಲುಗಳು ಬರುವ ಅಕ್ಟೋಬರ್ ಮಾಹೆ ಗೆಜೆಟ್ಟಿನಲ್ಲಿ ತಿಳಿಯಪಡಿಸುತ್ತೆ.

ಎಂ. ಮುತ್ತಣ್ಣ,
ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ಬೆಂಗಳೂರು ಡಿಸ್ಟ್ರಿಕ್ಟು.

ಅಬಸ್ಟ್ರಾಕ್ಟ್ ನೋಟಿಫಿಕೇಷನ್.

ನೆಲಮಂಗಲದ ತಾಲ್ಲೂಕು ದಾಸನಪುರದ ಹೋಬಳಿಗೆ ಸೇರಿದ ಜೋಡಿ ಕಮ್ಮಸಂದ್ರ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ನೆಲಮಂಗಲದ ತಾಲ್ಲೂಕು ಕಛೇರಿಯಲ್ಲಿ 1908ನೆ ಇಸವಿ ಜನವರಿ 6ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟದೆ.

ಹೆಚ್ಚು ತಪಸೀಲ್ ಬಗ್ಗೆ 1907ನೆ ಇಸವಿ ಡಿಸೆಂಬರ್ 5ನೆ ಮರ್ಕೂಂ 48ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 561ನೆ ನಂಬರ್ ಪೇಜು ನೋಡತಕ್ಕದ್ದು.

ಡಿ. ದೇವರಾಜೆ ಅರಸ್, ಡೆಪ್ಯುಟಿ ಕಮಿಷನರ್.

ತಾರೀಖು 11ನೆ ಡಿಸೆಂಬರ್ 1907.

ಬೆಂಗಳೂರು ಡಿಸ್ಟ್ರಿಕ್ಟ್ ಸಬ್ ರಿಜಿಸ್ಟ್ರಾರುಗಳ ಆಫೀಸುಗಳಲ್ಲಿ ಇರುವ ಇದರ ಕೆಳಗೆ ನಮೂದಿಸಿರುವ ಬೇವಾರ್ಸ್ ದಸ್ತಾವೇಜುಗಳನ್ನು ಕ್ರಮಪ್ರಕಾರ ವಾರಸುದಾರರಾಗಲಿ ಅಥವಾ ಅಧಿಕಾರ ಹೊಂದಿದ ಮುಖ್ತಾರೀಕನಾಗಲಿ ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ ಪಡಿಯಬೇಕು. ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟ್ 85ನೆ ಸೆಕ್ಷನ್ ಮೇರಿಗೆ ನಾಶಪಡಿಸಲ್ಪಡುತ್ತೆ:

ಪುಸ್ತಕದ ನಂಬರ.	ದಸ್ತಾವೇಜಿನ ನಂಬರ.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಾನ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಾನ.	ದಸ್ತಾವೇಜಿನ ತಾರೀಖು.	ರಿಜಿಸ್ಟರಾದ ಅಥವಾ ತಿರಸ್ಕಾರವಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
		ಬೆಂಗಳೂರು ಸಬ್ ರಿಜಿಸ್ಟ್ರಾರ ಆಫೀಸು				
I	174 / 1904—05	ರಾಣಸಿಂಗ್ ಪ್ಯಾಟೆಯಲ್ಲಿರುವ ತಿಮ್ಮಣ್ಣನ ಮಗ ಕೆಂಪಣ್ಣ ಈತನ ಹೆಂಡತಿ ವೆಂಕಟಮ್ಮ.	ರಾಣಸಿಂಗ್‌ಪ್ಯಾಟೆ ಬೀಲಿಯಲ್ಲಿರುವ ಷೇಕ್ ಬುರ್ಹಾನ್‌ಸಾಬ ಮಗ ಷೇಕ್‌ದಾವುದ್‌ಸಾಬ್.	14—7—1904	16—7—1904	ತಿಂಗಳು 1ಕ್ಕೆ 4 ರೂಪಾಯಿ ಬಾಡಿಗೆ ವಾಯಿದೆ ಮೂರು ತಿಂಗಳು.
I	536 / 1904—05	ಪವಾಡಶೆಟ್ಟಿ ಪ್ಯಾಟೆಯಲ್ಲಿರುವ ಕುಂಚಿಟಿಗರ ಈರಪ್ಪನ ಹೆಂಡತಿ ಬೊಮ್ಮಕ್ಕ.	ರಣವಿ ರಶೆಟ್ಟಿ ಪ್ಯಾಟೆಯಲ್ಲಿರುವ ಕುಂಚಿಟಿಗರ ವೆಂಕಟಪ್ಪನ ಮಗ ದಾಸಪ್ಪ.	20—8—1904	20—8—1904	380 ರೂಪಾಯಿಗೆ ಕ್ರಯ
I	1058 / 1904—05	ಗೆದ್ದಲಹಳ್ಳಿ ಗ್ರಾಮದಲ್ಲಿರುವ ವಡ್ಡರ ಪಿಲ್ಲಣ್ಣನ ಮಗ ಮಾಲೂರು ಮುನಿಯ, ಮಾಲೂರು ಮುನಿಯನ ಮಗ ವೆಂಕಟಸ್ವಾಮಿ ಮೈನರು, ಗಾರ್ಡಿಯನ್ ಮುನಿಯಪ್ಪ	ಕಾಚಕನಕನಹಳ್ಳಿಯಲ್ಲಿರುವ ಬಿದರಹಳ್ಳಿ ಮುನಿಯಪ್ಪನ ಮಗ ನಡುಪ ಈರಪ್ಪ.	2—11—1904	2—11—1904	50 ರೂಪಾಯಿಗೆ ಕ್ರಯ
I	1304 / 1904—05	ಅಟ್ಟೂರಿನಲ್ಲಿರುವ ತೆಲುಗು ಬಣಜಿಗರ ರಾಮಣ್ಣನ ಮಗ ಹನುಮಂತ ಪುರಘುಂಡಾ.	ರಾಮಗೊಂಡನಹಳ್ಳಿಯಲ್ಲಿರುವ ಒಕ್ಕಲಿಗರ ಮ್ಯಾಕೆ ತಿಮ್ಮಯ್ಯನ ಮಗ ದೊಡ್ಡಬೈರಣ್ಣ.	26—11—1904	1—12—1904	80 ರೂಪಾಯಿಗೆ ಆಧಾರ ತಿಂಗಳು 1ಕ್ಕೆ ಶೇಕಡಾ 1 ರೂಪಾಯಿ ಬಡ್ಡಿ.
I	2067 / 1904—05	ಹನುಮಂತಪುರದ ಬಳಿ ಅಡ್ವೊಕೇಟ್ ನಾರಾಯಣರಾಯರ ತೋಟದಲ್ಲಿ ವಾಸವಾಗಿರುವ ತಿಗಳರ ಶೆಟ್ಟಪ್ಪನ ಮಕ್ಕಳು ರಾಮಸ್ವಾಮಿ, 2ನೆ ರಾಮಣ್ಣ.	ಅರಳೆ ಪ್ಯಾಟೆ ಮಸ್ತಾನ್‌ಸಾಬ್ ಮಸೀತಿ ಬಳಿ ಇರುವ ತುಮಕೂರು ಪಟೇಲ ಹುಸೇನ್ ಸಾಹೇಬರ ಮಕ್ಕಳು ಅಬ್ದುಲ್ ಕರೀಂ ಸಾಹೇಬ.	1[illegible]—3—1905	31—3—1905	100 ರೂಪಾಯಿಗೆ ಕ್ರಯ

ಪುಸ್ತಕ ನಂಬರು.	ದಸ್ತಾವೇಜಿನ ನಂಬರು.	ದಸ್ತಾವೇಜು ಬರೆದುಕೊಟ್ಟವರ ಹೆಸರು ಮತ್ತು ವಾಸಸ್ಥಾನ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಾನ.	ದಸ್ತಾವೇಜಿನ ತಾರೀಖು.	ರಿಜಿಸ್ಟರಾದ ಅಥವಾ ತಿರಸ್ಕರವಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
I	2121 / 1904—05	ಮಾರೇನಹಳ್ಳಿ ದಾಖಲೆ ವಸಂತೈಯ್ಯನ ಪಾಳ್ಯದಲ್ಲಿರುವ ಡಿಟೋ ಗ್ರಾಮದ ಮಾಜಿ ಪಟೇಲ್ ವೆಂಕಟರಮಣಪ್ಪ.	ಮಾರೇನಹಳ್ಳಿ ದಾಖಲೆ ವಸಂತೈಯ್ಯನ ಪಾಳ್ಯದಲ್ಲಿರುವ ಪಾಪಣ್ಣನ ಮಗ ಮುನಿಸೊಣ್ಣ.	22—3—1905.	6—4—1905.	7—8—0 ರೂಪಾಯಿಗೆ ಕ್ರಯ.
I	636 / 1905—06	ಚಾಮರಾಜಪ್ಯಾಟೆಯಲ್ಲಿರುವ ಚಿತ್ರದುರ್ಗದ ಮದ್ದೂರಾಯರ ಕುಮಾರರು ಕೃಷ್ಣರಾಯರ ಹೆಂಡತಿ ಭಾಗೀರಥಮ್ಮ.	ಮಲ್ಲೇಶ್ವರದಲ್ಲಿರುವ ಕೊಡತಿ ರಾಮಣ್ಣನ ಮಗ ಗುರಣ್ಣ.	10—9—1905.	11—9—1905	ಕತ್ರಿ ಚಿಣ್ಣಪ್ಪ, ದೊಡ್ಡವಾರುಸಾ ಮತ್ತು ಚಿಕ್ಕವಾರುಸಾ ವಗೈರೇರಿಂದ ಬರದುಕೊಟ್ಟವಳಿಗೆ ಬರಬೇಕಾದ ಬಾಡಿಗೆ ಬಾಬತು 62—6—0 ರೂಪಾಯಿಯನ್ನು ಬರಸಿಕೊಂಡವನು ವಸೂಲು ಮಾಡಿಕೊಳ್ಳುವಂತೆ ಹೇಳಿ ಇದರ ಪ್ರತಿಫಲಕ್ಕಾಗಿ 55 ರೂಪಾಯಿ ಬರಸಿಕೊಂಡವನಿಂದ ಬರದುಕೊಟ್ಟವಳು ತಗೆದುಕೊಂಡಿರುವುದಾಗಿ.
IV	37 / 1904—05	ಚಿಕ ಪ್ಯಾಟೆಯಲ್ಲಿರುವ ಪಾತ್ರೆ ಅಂಗಡಿ ಬಕ್ಕಯ್ಯನವರ ಮಗ ಪೊಮ್ಮಯ್ಯ.	ಎಲಿಕ್ಯಾತನಹಳ್ಳಿಯಲ್ಲಿರುವ ಧರಣಪ್ಪನವರ ಮಗ ಗಂಗಪ್ಪ.	28—10—1904	28—10—1904	ಕರಾರು
		ನೆಲಮಂಗಲ ಸಬ್ ರಿಜಿಸ್ಟ್ರಾರ ಆಫೀಸು.				
I	357 / 1905—06	ಬೆಂಗಳೂರಲ್ಲಿರುವ ಚಿಕ್ಕ ರಂಗಣ್ಣ	ಬೆಂಗಳೂರಲ್ಲಿರುವ ಬಿ. ಆರ್ ಕೃಷ್ಣೈಯ್ಯಂಗಾರ್.	22—10—1905	2—10—1905	ಕಿಮ್ಮತ್ತಿಲ್ಲದ ಕರಾರು
		ದೇವನಹಳ್ಳಿ ಸಬ್ ರಿಜಿಸ್ಟ್ರಾರ ಆಫೀಸು.				
I	550 / 1904—05	ವೆಂಕಟರಮಣೈಯ್ಯ ...	1. ಸೈದಬಿರಾಂಸಾಬರು, 1. ತಮ್ಮೈಯ್ಯ.	20—11—1904	24—2—1905	ಜಮೀನು ಮತ್ತು ಸರ್ವೆ ಸೊಸಿಗಳು ಸಹ 50 ರೂಪಾಯಿಗೆ ಕ್ರಯ ಮಾಡಿರುವುದಾಗಿ.

		ಮಾಗಡಿ ಸಬ್ ರಿಜಿಸ್ಟ್ರಾರ್ ಆಫೀಸು.				
I	1025 / 1904-05	ಮಾಗಡಿ ತಾಲ್ಲೂಕು ಸರಳೇಹಕ್ಕಿ ಖನವಾಡಿಯಲ್ಲಿರುವ ನರಸುಹ್ಮಯ್ಯ.	ನೆಲವಂಗಲದ ತಾಲ್ಲೂಕು ಲಕ್ಕೂರಲ್ಲಿರುವ ಬಲಗೈ ರಾಮನ ಮಗ ಮುದ್ದಯ್ಯ.	24—6—1905	24—6—1905	50 ರೂಪಾಯಿಗೆ ಕ್ರಯ.
		ದೊಡ್ಡಬಳ್ಳಾಪುರ ಸಬ್ ರಿಜಿಸ್ಟ್ರಾರ್ ಆಫೀಸು.				
II	9 / 1905-06	ದೊಡ್ಡಬಳ್ಳಾಪುರ ತಾಲ್ಲೂಕು ಕೋಡಿಹಳ್ಳಿಯಲ್ಲಿರುವ ಹುಲಿಯಪ್ಪನ ಮಗ ವಡ್ಡಣ.	ದೊಡ್ಡಬಳ್ಳಾಪುರ ತಾಲ್ಲೂಕು ಚಿಕ್ಕಮಂಕನಾಲಾದಲ್ಲಿ ವಾಸಿಸುವ ರಂಗೈಯ್ಯನ ಮಗ ನಂಜುಂಡೈಯ್ಯ	17—7—1905	21—12—1905	60 ರೂಪಾಯಿಗೆ ಆಧಾರ.
		ಹೊಸಕೋಟೆ ಸಬ್ ರಿಜಿಸ್ಟ್ರಾರ್ ಆಫೀಸು.				
I	122 / 1904-05	ಬೀರೇಗೌಡ, ಬಚ್ಚೇಗೌಡ ...	ಕೆಂಚಮ್ಮ, ಬೈರಪ್ಪ ...	22—8—1904	22—8—1904	300 ರೂಪಾಯಿಗೆ ಕ್ರಯ
I	333 / 1904-05	ಗುಂಜಾರಪ್ಪ ...	ಸಂಜೀವಪ್ಪ ...	3—5—1904	2—12—1904	150 ರೂಪಾಯಿಗೆ ಕ್ರಯ.
		ಕಾನಕಾನಹಳ್ಳಿ ಸಬ್ ರಿಜಿಸ್ಟ್ರಾರ್ ಆಫೀಸು.				
I	1867 / 1904-05	ಮಳವಳ್ಳಿ ತಾಲ್ಲೂಕು ಹಲಸೂರು ಹೋಬಳಿ ಭೂವಹಳ್ಳಿ ವಾಸಿ ಪುಟ್ಟಯ್ಯ.	ಮಳವಳ್ಳಿ ತಾಲ್ಲೂಕು ಹಲಸೂರು ಹೋಬಳಿ ಭೂವಹಳ್ಳಿ ವಾಸಿ ಚಿಕ್ಕಪುಟ್ಟಲಿಂಗಾಚಾರಿ.	28—10—1904	28—10—1904	20 ರೂಪಾಯಿಗೆ ಕ್ರಯ.

ಟಿ. ತಂಬುಶೆಟ್ಟಿ,
ಛಾರ್ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

ಹಾಸನ ಡಿಸ್ಟ್ರಿಕ್ಟು.

ನೋಟಿಫಿಕೇಷನ್, ತಾರೀಖು 7ನೆ ಡಿಸೆಂಬರ್ 1907ನೆ ಇಸವಿ.

ಮೈಸೂರು ಮ್ಯುನಸಿಪಲ್ ರೆಗ್ಯುಲೇಷನ್ನಲ್ಲಿನ 8ನೆ ಸೆಕ್ಷನ್ ಪ್ರಕಾರ ಇದರ ಕೆಳಗೆ ಕಾಣಿಸಿ ಇರುವ ಚಾತುರ್ಸೀಮೆಯಲ್ಲಿ ಸೇರುವ ಪ್ರದೇಶವನ್ನು ಹಾಸನ ಟೌನ್ ಮ್ಯುನಿಸಿಪಲ್ ಎಲ್ಲೆಯೊಳಗೆ ಸೇರಿಸಲು ಉದ್ದೇಶಿಸಿರುತ್ತೆ. ಈ ಉದ್ದೇಶಕ್ಕೆ ಆಕ್ಷೇಪಿಸುವ ಜನರೆಲ್ಲಾ ಈ ಪ್ರಸಿದ್ಧಪತ್ರಿಕೆಯ ತಾರೀಖು ಲಾಗಾಯಿತು ಎರಡು ತಿಂಗಳೊಳಗೆ ಸದರಿ ಆಕ್ಷೇಪಣೆಯನ್ನು ಕಾರಣ ಸಮೇತ ಲಿಖಿತಮೂಲಕವಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರಲ್ಲಿ ತಿಳಿಯಪಡಿಸಿಕೊಳ್ಳತಕ್ಕದ್ದಿರುತ್ತೆ.

ಚಾತುರ್ಸೀ:—

ಉತ್ತರಕ್ಕೆ:—ಹಾಸನ ಗ್ರಾಮದ ಸರ್ವೆ ನಂಬರು 293 ವುಳ್ಳ ಹುಣಸಿನಕೆರೆಗೆ ಪೂರ್ವಕ್ಕೆ ಅಂದರೆ ಬಾಯಂಗುತ್ತಾ ತವಲಾಪುರ ಗ್ರಾಮದ ದಕ್ಷಿಣ ಎಲ್ಲೆ ಲೈನ್ ಸೇರುವ ಸ್ಥಳದಿಂದ ಮ್ಯುನಿಸಿಪಲ್ ಸರಹದ್ದು ಲೈನ್ ಹೊರಟು, ಈಶಾನ್ಯವಾಗಿ ಬಾಯಂಗುತ್ತಾ ತವಲಾಪುರ ಗ್ರಾಮದ ಮೇಲ್ಕಂಡ ಎಲ್ಲೆ ಗುರ್ತಿನಲ್ಲಿ ಹೋಗಿ ಚಿಕ್ಕಕೊಂಡಗುಳ ಗ್ರಾಮದ ಸರ್ವೆ 76ನೆ ನಂಬರಿನ ಉತ್ತರ ಮೂಲೆ ಸೇರಿ, ಅಲ್ಲಿಂದ ಅದೇ ನಂಬರಿನ ದಕ್ಷಿಣಪಾರ್ಶ್ವದಲ್ಲಿ ಹೊರಟು, ಹಾಸನ-ಸಾಲ್ಗಾಮೆ ರಸ್ತೆ ದಾಟಿ, ಈಶಾನ್ಯಾಭಿಮುಖವಾಗಿ ಚಿಕ್ಕಕೊಂಡಗುಳ ಗ್ರಾಮದ ಸರ್ವೆ 75, 125, 124, 123ನೆ ನಂಬರುಗಳ ದಕ್ಷಿಣ ಪಾರ್ಶ್ವದಲ್ಲಿ ಹೋಗಿ, ಜೋಡಿ ಸತ್ಯಮಂಗಲ ಗ್ರಾಮದ ಎಲ್ಲೆಗೆ ಸೇರುತ್ತದೆ. ಈ ಸ್ಥಳವೇ ಮ್ಯುನಿಸಿಪಲ್ ಸರಹದ್ದಿಗೆ ಕೇವಲ ಈಶಾನ್ಯ ಪ್ರದೇಶ.

ಪೂರ್ವಕ್ಕೆ.—ಮೇಲ್ಕಂಡ ಸ್ಥಳದಿಂದ ಸದರಿ ಎಲ್ಲೆ ಲೈನ್ ಹೊರಟು ದಕ್ಷಿಣಾಭಿಮುಖವಾಗಿ ಇಳಿದು ಜೋಡಿ ಸತ್ಯಮಂಗಲ ಗ್ರಾಮದ ಪಶ್ಚಿಮದಿಕ್ಕಿನ ಎಲ್ಲೆ ಕೂಡ ಬಂದು ಬೀರನಹಳ್ಳಿ ಗ್ರಾಮದ ಸರ್ವೆ 48ನೆ ನಂಬರಿನ ವಾಯವ್ಯ ಮೂಲೆಗೆ ಸೇರಿ ನಂತರ ಅದೇ ಗ್ರಾಮದ ಸರ್ವೆ 48, 3, 5, 7, 11ನೆ ನಂಬರುಗಳ ಪಶ್ಚಿಮಗಡಿ ಮೂಲಕವಾಗಿ ಹೋಗಿ ನಂತರ ಪೂರ್ವಕ್ಕೆ ತಿರಿಗಿ ಸ್ವಲ್ಪದೂರ ಬೆಂಗಳೂರು-ಮಂಗಳೂರು ರಸ್ತೆ ಮಾರ್ಗವಾಗಿ ಹೋಗಿ ನಂತರ ಕೆಳಕ್ಕೆ ತಿರಿಗಿ ಚನ್ನಪಟ್ಟದ ಕೆರೆಗೆ ವಾಯವ್ಯಕರೆ ಮೂಲಕವಾಗಿ ಹೋಗುತ್ತಾ ಬಂದು ಉಲಿವಾಲ-ಹಾಸನ ರಸ್ತೆ ಮೂಲಕ (ಚನ್ನಪಟ್ಟದ ಕೆರೆ ಪೂರ್ಣವಾಗಿ ಬಿಟ್ಟು) ಬಂದು ಚನ್ನಪಟ್ಣ ಗ್ರಾಮದ ಸರ್ವೆ 8ನೆ ನಂಬರಿನ ಈಶಾನ್ಯಮೂಲೆ ಸೇರುತ್ತೆ.

ದಕ್ಷಿಣಕ್ಕೆ.—ಅಲ್ಲಿಂದ ಪಶ್ಚಿಮಾಭಿಮುಖವಾಗಿ ಹೊರಟು ಚನ್ನಪಟ್ಣ ಗ್ರಾಮದ ಸರ್ವೆ 6, 8, 10, 16, 15ನೆ ನಂಬರುಗಳ ಉತ್ತರ ಪಾರ್ಶ್ವದ ಗಡಿ ಮೂಲಕ ಹೋಗುತ್ತಾ ಮುಂದೆ ನೈರುತ್ಯಾಭಿಮುಖವಾಗಿ ತಿರುಗಿ ಸದರಿ ಗ್ರಾಮದ ಸರ್ವೆ 17, 18, 43, 44, 45ನೆ ನಂಬರುಗಳ ಪಶ್ಚಿಮಗಡಿ ಮೂಲಕ ಹೋಗುತ್ತಾ ಬಂದು ಜೋಡಿ ಬಿಟ್ಟುಗೋನಹಳ್ಳಿ ಗ್ರಾಮದ ಆಗ್ನೇಯ ದಿಕ್ಕಿನ ಗಡಿಗೆ ಸೇರಿ ಸ್ವಲ್ಪದೂರ ಪಶ್ಚಿಮಕ್ಕೆ ತಿರುಗಿ ನಂತರ ವಾಯವ್ಯಾಭಿಮುಖವಾಗಿ ಹೊರಟು ಸದರಿ ಜೋಡಿ ಗ್ರಾಮದ ಉತ್ತರದಿಕ್ಕಿನ ಎಲ್ಲೆಯೊಡನೆ ಹೋಗುತ್ತಾ ಹಾಸನ-ಪಿರಿಯಾಪಟ್ಟಣ-ಕ್ಯಾನನೂರು ರಸ್ತೆಯನ್ನು ಹೊಂದಿ ಅದರೊಂದಿಗೆ ಕೆಲವುದೂರ ಹೋಗುತ್ತಾ ಪಶ್ಚಿಮಾಭಿಮುಖವಾಗಿ ತಿರುಗಿ ಹುಲ್ಲೇನಹಳ್ಳಿ ಗ್ರಾಮದ ಸರ್ವೆ 12, 11, 10, 9, 13ನೆ ನಂಬರುಗಳ ಉತ್ತರದಿಕ್ಕಿನ ಗಡಿ ಮುಖಾಂತ್ರ ನಡೆದು ಹಾಸನ ಕಸಬಾ ಸರ್ವೆ 457ನೆ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತೆ.

ಪಶ್ಚಿಮಕ್ಕೆ.—ಮೇಲ್ಕಂಡ ಸ್ಥಳದಿಂದ ಹೊರಟು ಕಸಬಾ ಗ್ರಾಮದ 457, 456, 444, 443, 438, 437, 436, 435, 433ನೆ ಸರ್ವೆ ನಂಬರುಗಳ ಪೂರ್ವದಿಕ್ಕಿನ ಗಡಿ ಮೂಲಕ ಹೋಗುತ್ತಾ ಬೆಂಗಳೂರು-ಮಂಗಳೂರು-ರಸ್ತೆ ದಾಟಿ ನಂತರ ಈಶಾನ್ಯಾಭಿಮುಖವಾಗಿ ಹೊರಟು ಕಸಬಾ ಗ್ರಾಮದ 385, 386, 387, 414ನೆ ಸರ್ವೆ ನಂಬರುಗಳ ಪೂರ್ವದಿಕ್ಕಿನ ಗಡಿ ಮೂಲಕ ಸಾಗಿ ನಂತರ ಸ್ವಲ್ಪ ಪಶ್ಚಿಮಕ್ಕೆ ತಿರಿಗಿ ಹುಣಿಸನಕೆರೆ ಕಸಬಾ ಸರ್ವೆ 283ನೆ ನಂಬರು ಪೂರ್ವಪಾರ್ಶ್ವದಲ್ಲಿ ಹೋಗುತ್ತಾ ಬಂದು ಬಾಯಂಗುತ್ತಾ ತವಲಾಪುರ ಗ್ರಾಮದ ನೈರುತ್ಯಗಡಿ ಮೂಲೆಗೆ ಸೇರುತ್ತದೆ.

ನರಸಿಂಗರಾವ್ ಪೂರ್ಣಯ್ಯ,
ಫಾರ್ ಮ್ಯುನಿಸಿಪಲ್ ಪ್ರೆಸಿಡೆಂಟ್.

ಶಿವಮೊಗ್ಗಾ ಡಿಸ್ಟ್ರಿಕ್ಟು ಟ್ರೆಜರಿ.

ಶಿವಮೊಗ್ಗಾ ಡಿಸ್ಟ್ರಿಕ್ಟು ಸೇವಿಂಗ್ಸು ಬ್ಯಾಂಕು ಡಿಪಾಜಿಟರುಗಳಿಗೆ ಇದರಿಂದ ತಿಳಿಯಪಡಿಸುವದೇನಂದರೆ:—

1906-07ನೆ ಸಾಲ್ ಬಡ್ಡಿ ಪ್ಯಾಸು ಬುಕ್ಕುಗಳಲ್ಲಿ ದಾಖಲ್ ಮಾಡುವ ಉದ್ದೇಶ್ಯ, ಸದರಿ ಪ್ಯಾಸು ಬುಕ್ಕುಗಳನ್ನು ನಿಮ್ಮ ಅಕೌಂಟುಗಳು ಇರುವ ಟ್ರೆಜರಿಯಲ್ಲಿ ಹಾಜರ್ಪಡಿಸಬಹುದು.

ಎ. ವೇದಾಂತದೇಸಿಗಂ ಐಯ್ಯಂಗಾರ್,
ಟ್ರೆಜರಿ ಆಫೀಸರ್.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ 1907—08ನೆ ಇಸವಿ ಮಿ॥ ಅರ್ಜೀ ನಂಬರು 493.

ಬೆಂಗಳೂರಲ್ಲಿ ವಾಸವಾಗಿದ್ದ ಅಡ್ವಿಕೇಟ್ ಮಿ॥ ನಾರಾಯಣರಾಯರ ಹೆಂಡತಿ ಮೃತಪಟ್ಟ ರಂಗಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರಲ್ಲಿರುವ ಅಡ್ವಿಕೇಟ್, 1ನೆ ಎಸ್. ನಾರಾಯಣರಾವ್, 2ನೆ ಎಸ್. ರಾಮಕೃಷ್ಣರಾವ್, 3ನೆ ನಂಜನರಸಮ್ಮ, ಮೃತಪಟ್ಟ ಸದರೀ ರಂಗಮ್ಮನವರಿಗೆ ಖಾಸಾ ಗಂಡ ಮತ್ತು ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ

ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ರಂಗಮ್ಮನವರ ಜಿಂದಗಿ ಬಗ್ಗ್ಯಾಗಿ ಬರತಕ್ಕ 3,500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ ಪ್ರಕಾರ ಸರ್ಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ನಾರಾಯಣರಾಯರು ವಗೈರೇರ ಅರ್ಜಿಯನ್ನು ಸನ 1907ನೆ ಇಸವಿ ಡಿಸೆಂಬರು ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ 1907ನೆ ಇಸವಿ ಡಿಸೆಂಬರ್ ತಿಂಗಳು 6ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ 1907—08ನೆ ವಿ|| ಅರ್ಜಿ ನಂಬರ್ 500.

ಆನೆಕಲ್ ತಾಲ್ಲೂಕು ಜಿಗಣಿ ಹೋಬಳಿ ಹುಲಿಮಂಗಲದಲ್ಲಿ ವಾಸವಾಗಿದ್ದು ಮೃತಪಟ್ಟ ಅಪ್ಪಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಆನೆಕಲ್ ತಾಲ್ಲೂಕು ಜಿಗಣಿ ಹೋಬಳಿ ನಡುಬೀದಿ ಅಪ್ಪಯ್ಯನ ಮಗಳು ತಿಮ್ಮಕ್ಕ, ಮೃತಪಟ್ಟ ಸದರೀ ಅಪ್ಪಯ್ಯನವರಿಗೆ ಖಾಸ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಹುಲಿಮಂಗಲದಲ್ಲಿದ್ದು ಮೃತಪಟ್ಟ ಅಪ್ಪೈಯ್ಯನವರ ಜಿಂದಗಿ ಬಗ್ಗ್ಯಾಗಿ ಬರತಕ್ಕ 40 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ ಪ್ರಕಾರ ಸರ್ಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರಿ ದರಖಾಸ್ತುದಾರರಾದ ತಿಮ್ಮಕ್ಕನ ಅರ್ಜಿಯನ್ನು ಸನ 1907ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಪ್ಪೈಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ 1907ನೆ ಇಸವಿ ಡಿಸೆಂಬರ್ ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರ ನಿತ್ತಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಜೆ. ಎಚ್. ಭಾಭಾ,
ಸಬ್ ಜಡ್ಜ್.

ಬೆಂಗಳೂರು ಅಡಿಷನಲ್ ಮುನ್ಸೀಫ್ ಕೋರ್ಟು.

O. S. 328 of 1907—08.

ವಾದಿ. — ಪ್ರತಿವಾದಿ.

ಕುಂಟ ಲಿಂಗೇಗೌಡ. — ಚಲುವೇಗೌಡ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮೇಲ್ಕಂಡ ಅಸಲ್ ನಂಬರು ನೋಕದ್ದಮೆಯಲ್ಲಿ ವಾದಿಯು ಪ್ರತಿವಾದಿಯ ಮೇಲೆ ವಾದಿಯ ಹಿಡುವಳೀ ಬಾಬ್ತು ಷೆಡ್ಯೂಲು ಜಮೀನಿನಲ್ಲಿ 1904ನೆ ಇಸವಿ ನವಂಬರು 14ನೆ ತಾರೀಖಿನಲ್ಲಿ ಅಗತೇ ಮಾಡುವಾಗ ಶಿಕಿದ ಭಂಗಾರದ ಹಣ ಚಿಂತಾಕು ವಗೈರೆ ನಗಗಳ ಬಾಬತು 400 ರೂಪಾಯಿಗಳು ಪ್ರತಿವಾದಿಯಿಂದ ಬರ ಮಾಡಿಸಿಕೊಡಬೇಕೆಂದು ದಾವಾ ಮಾಡಿರುವದರಿಂದ ಸದರೀ ಭೂಮಿಯಲ್ಲಿ ಶಿಕ್ಕಿರತಕ್ಕ ಭಂಗಾರದ ನಾಣ್ಯ ಮುತ್ತು ಒಡವೇ ವಿಚಾರದಲ್ಲಿ ಮತ್ಯಾರಿಗಾದರೂ ಹಕ್ಕು ಬಾಧ್ಯತೆ ಇರುವಪಕ್ಷದಲ್ಲಿ 1908ನೆ ಇಸವಿ ಜನವರಿ 16ನೆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಕೋರ್ಟಿಗೆ ಹಾಜರಾಗಿ ತಿಳಿಸತಕ್ಕದ್ದು.

D. K. Rama Rao, *Additional Munsiff.*

ಷೆಡ್ಯೂಲ್.

ಚನ್ನಪಟ್ಟಣದ ತಾಲ್ಲೂಕು ಮಳೂರು ಹೋಬಳಿ ಕಸಬಾ ಬಳಿ ಸರ್ವೇ 602ನೆ ನಂಬರು ವಾದಿಯ ಹಿಡುವಳಿ ಜಮೀನಿಗೆ ಚಕ್ಕುಬಂದಿ—ಪೂರ್ವಕ್ಕೆ ನಂಜೇಗೌಡನ ತೋಟ, ಪಶ್ಚಿಮಕ್ಕೆ ಕಾರೆಮೋಳೆ, ದಕ್ಷಿಣಕ್ಕೆ ನೀರು ಮೊಗಿಯುವ ಕಟ್ಟೆ, ತಿಮ್ಮೇಗೌಡನ ತೆಂಗಿನ ತೋಟ, ಜನಗಳ ಹುಲ್ಲು ಹಿತ್ತಲು ಸಹ, ಉತ್ತರಕ್ಕೆ ವೆಂಕಟಗಿರಿ ಗೌಡನ ಹೊಲ ಉಪ್ಪುನೇರಳೆ ತೋಟ ಸಹ—ಈ ಮಧ್ಯೆ ಇರುವ ಜಮೀನು.

D. K. Rama Rao, *Additional Munsiff.*

ಅಮೃತಮಹಲ್ ಇಲಾಖಾ.

ಪ್ರಕಟನೆ.

ಮೊಕ್ಕಾಂ ಹೊಳಲ್ಕೆರೆ, ತಾರೀಖು 25—27ನೆ ನವಂಬರ 1907.

ಅಮೃತಮಹಲ್ ಇಲಾಖಾ ಬಾಬತು ಕೆಲವು ಗಂಡುರಾಸುಗಳನ್ನ ಚಾಲ್ತಿ ಇಸವಿ ಡಿಸೆಂಬರು 10ನೆ ತಾರೀಖು ಲಾಗಾಯಿತು ತಿಪಟೂರು ತಾಲ್ಲೂಕು ಕೊನೆಹಳ್ಳಿ ರೈಲ್ವೆ ಸ್ಟೇಷನ ಬಳಿಯಲ್ಲೂ ಅದೇ ಮಾಹೆ 15ನೆ ತಾರೀಖು ಲಾಗಾಯಿತು ಹಾಸನ ತಾಲ್ಲೂಕು ದುದ್ದದ ಮೊಕ್ಕಾಂನಲ್ಲೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟವುಳ್ಳವರು ಸದರಿ ಸ್ಥಳಗಳಿಗೆ ಹಾಜರಾಗಿ ಛಡ ಸವಾಲಿನಲ್ಲಿ ರಾಸುಗಳನ್ನ ಪಡಿಯಬಹುದು.

ಹೆಚ್. ನಂಜುಂಡರಾಜೇ ಅರಸ್,
ಸೂಪರಿಂಟೆಂಡೆಂಟ.

ಬೆಂಗಳೂರು ಸೆಂಟ್ರಲ್ ಜೈಲ್.

ತಾರೀಖು 11ನೆ ಡಿಸೆಂಬರ 1907.

ಸ್ತ್ರ 1908ನೆ ಇಸವಿ ಫೆಬ್ರುವರಿ 1ರ ಲಾಗಾಯತು ಸ್ತ್ರ 1909ನೆ ಇಸವಿ ಜನವರಿ 31ರ ವರಿವಿಗೆ, ಆ ಎರಡು ದಿವಸಗಳೂ ಸೇರಿ, 1 ವರ್ಷ ತನಕ, ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿಗಳ ಉಪಯೋಗಕ್ಕಾಗಿ ಈ ಕೆಳಗೆ ನಮೂದಿಸುವ ಸರಕನ್ನು ಸರಬರಾಯಿ ಮಾಡಲು ಕಂಟ್ರಾಕ್ಟು ತೆಗದುಕೊಳ್ಳುವದಕ್ಕಾಗಿ, ಕವರಿನಲ್ಲಿ ಹಾಕಿ ಮೊಹರು ಮಾಡಿದ ದರಖಾಸ್ತುಗಳನ್ನು ಸ್ತ್ರ 1908ನೆ ಇಸವಿ ಜನವರಿ 18ನೆ ತಾರೀಖು ಶನಿವಾರ ಬೆಳಿಗ್ಯೆ 10 ಘಂಟೆಯ ವರಿಗೆ, ಬೆಂಗಳೂರು ಸೆಂಟ್ರಲ್ ಜೈಲ್ ಸೂಪರ್ರಿಂಟೆಂಡೆಂಟರು ತೆಗೆದುಕೊಳ್ಳುವರೆಂದು ಇದರಿಂದ ಘಾಯಿಷ್ ಮಾಡಿದೆ.

2. ಮೇಲೆ ಕಂಡ ತಾರೀಖಾದ ತರುವಾಯ ದರಖಾಸ್ತುಗಳನ್ನು ಹಿಡಿಯುವದಿಲ್ಲ.

3. ದರಖಾಸ್ತು ಕವರಿನ ಮೇಲ್ಭಾಗದಲ್ಲಿ ಬರದಿರಬೇಕಾದ ಮೇಲ್ವಿಳಾಸವೇನಂದರೆ :—
"ಕುರೀ ಮಾಂಸದ ಸರಬರಾಯಿ ದರಖಾಸ್ತು"

4. ಕುರಿ ಮಾಂಸದ ಸರಬರಾಯಿಗೆ 75 ರೂಪಾಯಿ, ನಗದಾಗಿಯಾಗಲಿ ಕರ್ರೆನ್ಸೀ ನೋಟಿನ ಮೂಲಕವಾಗಿಯಾಗಲಿ ಠೇವಣಿಯನ್ನು ದರಖಾಸ್ತಿನ ಸಂಗಡ ಹಾಜರ್ಮಾಡಿದ್ದ ಹೊರತು, ದರಖಾಸ್ತುಗಳನು ಹಿಡಿಯುವದಿಲ್ಲ.

5. ಬೆಂಗಳೂರು ಸೆಂಟ್ರಲ್ ಜೈಲ್ ಸೂಪರ್ರಿಂಟೆಂಡೆಂಟರವರು ಮೇಲೆ ನಮೂದಾದ ತಾರೀಖಿನಲ್ಲಿ ಆ ಕಾಲದೊಳು ಹಾಜರಿರುವುದಕ್ಕೆ ಇಷ್ಟವುಳ್ಳಂಥಾ ದರಖಾಸ್ತುದಾರರ ರೂಬರೂ ಸದರೀ ದರಖಾಸ್ತುಗಳನ್ನು ತಮ್ಮ ಆಫೀಸಿನಲ್ಲಿ ಒಡೆಯುವರು.

6. ಮಾಂಸವನ್ನು ಒಂದು ರೂಪಾಯಿಗೆ ಇಷ್ಟು ಪೌಂಡು ತೂಕದ ಮೇರೆ ಸರಬರಾಯಿ ಮಾಡಲಾದೀತೆಂದು ಎಲ್ಲಾ ದರಖಾಸ್ತುಗಳಲ್ಲಿಯೂ ದರವು ನಮೂದಾಗಿರತಕ್ಕದ್ದು. ಮತ್ತು ಸರಬರಾಯಿ ಮಾಡತಕ್ಕ ಮಾಂಸವು ಒಳ್ಳೇದಾಗಿಯೂ ಸೂಪರ್ರಿಂಟೆಂಡೆಂಟರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

ಸಂವತ್ಸರದ ಅಂದಾಜಾ ಖರ್ಚು.

ಮೂಳೆ ಇಲ್ಲದ ಮಾಂಸ—20,000 ಪೌಂಡುಗಳು.

ಮೇಲೆ ಕಂಡ ಪರಿಮಾಣದಮೇಲೆ ಇಷ್ಟಿಷ್ಟೇ ಆಗಬೇಕೆಂದು ಖಾತರಿ ಯಾವುದೂ ದೊರೆಯುವುದಿಲ್ಲ.

7. ಸೂಪರ್ರಿಂಟೆಂಡೆಂಟರವರು ಯಾವ ದರಖಾಸ್ತನ್ನೇ ಆಗಲಿ ಯಾವ ಕಾರಣವನ್ನೂ ಕೊಡದೆ ತಿರಸ್ಕರಿಸುವ ಹಕ್ಕನ್ನು ಉಳಿಸಿಕೊಂಡಿದ್ದಾರೆ.

8. ಯಾರ ದರಖಾಸ್ತನ್ನು ಮಂಜೂರ್ಮಾಡಿಕೊಳ್ಳುತ್ತಾರೆಯೋ ಅಂಥಾ ದರಖಾಸ್ತುದಾರನು ಹಾಜರ್ಮಾಡಿದ ಠೇವಣೀ ಮೊಬಲಗು ಇಟ್ಟುಕೊಳ್ಳಲ್ಪಡುವದು. ಮತ್ತು ಆತನ ದರಖಾಸ್ತು ಮಂಜೂರಾಗಿದೆ ಎಂದು ಆತನಿಗೆ ತಿಳಿಯಪಡಿಸಿದ ಒಂದು ವಾರದೊಳಗಾಗಿ ಆತನು ಕಂಟ್ರಾಕ್ಟು ಕರಾರನ್ನು ಬರೆದುಕೊಡದೇ ಹೋದರೂ ಸರಿಯೇ, ಅಥವಾ 150 ರೂಪಾಯಿ, ನಗದಾಗಿಯಾಗಲಿ ಸರ್ಕಾರೀ ಬಾಂಡುಗಳ ಮೂಲಕವಾಗಿಯಾಗಲಿ ಸೆಕ್ಯೂರಿಟಿಯನ್ನು ಕೊಡದೆ ಇದ್ದರೂ ಸರಿಯೆ ಮೇಲ ಕಂಡ ಠೇವಣೀ ಮೊಬಲಗು ಶಿವಾಯಿ ಜಮಾಗಿ ತೆಗೆದುಕೊಳ್ಳಲಾದೀತು.

9. ಕಂಟ್ರಾಕ್ಟರು ಯಾ ಇಜಾರೆದಾರನಿಗೆ ನಗದು ಹಣ ಮುಂಗಡವಾಗಿ ಪಾವತಿಯಾಗಲಾರದು. ಸಾಮಾನುಗಳನ್ನು ಸರಬರಾಯಿ ಮಾಡಿದ್ದಕ್ಕಾಗಿ ಹಣವನ್ನು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರ್ರಿಂಟೆಂಡೆಂಟರವರು ಪ್ರತಿ ತಿಂಗಳ ಗುರ್ರೆ ತಾರೀಖಾದ ತರುವಾಯ ಸಾಧ್ಯವಾದ ಮಟ್ಟಿಗೂ ಜಾಗ್ರತೆಯಲ್ಲಿ ಪಾವತಿ ಮಾಡುವರು.

10. ಕುರೀ ಮಾಂಸವು ಪ್ರತಿ ದಿನವೂ ಬೆಳಿಗ್ಯೆ 7 ಘಂಟೆ ವಳಗಾಗಿ ಜೈಲಿನಲ್ಲಿ ಸಿದ್ಧಪಡಿಸತಕ್ಕದ್ದು.

11. ಕಂಟ್ರಾಕ್ಟನ್ನು ಷಿಕ್ಮಿ ಇಜಾರೆಯಾಗಿ ಕೊಡಕೂಡದು.

12. ಕಂಟ್ರಾಕ್ಟು ಷರತ್ತಿಗೆ ಏನಾದರೂ ವಿರುದ್ಧವಾಗಿ ನಡೆದರೂ ಸರಿಯೆ, ಗುಣದಲ್ಲಿ ಕಡಮೆಯಾಗಿರತಕ್ಕ ಮಾಂಸವನ್ನು ಸರಬರಾಯಿ ಮಾಡಿದರೂ ಸರಿಯೆ, ಬೆಂಗಳೂರು ಸೆಂಟ್ರಲ್ ಜೈಲ್ ಸೂಪರ್ರಿಂಟೆಂಡೆಂಟರವರು ಮುನಾಸಬು ಅರಿತು 50 ರೂಪಾಯಿಗಳಿಗೆ ಹೆಚ್ಚದೆ ಜುರ್ಮಾನೆಯನ್ನು ವಸೂಲ್ಮಾಡಬಹುದು ; ಪದೇಪದೇ ಕರಾರಿಗೆ ತಪ್ಪಿಹೋದರೆ ಕಂಟ್ರಾಕ್ಟನ್ನು ರದ್ದು ಮಾಡಿ ಸೆಕ್ಯೂರಿಟಿಯನ್ನು ಸರಕಾರಕ್ಕೆ ಮುಟ್ಟುಗೋಲಾಗಿ ತೆಗದುಕೊಳ್ಳಬಹುದು.

13. ಕಂಟ್ರಾಕ್ಟು ಕರಾರಿಗೆ ವಿರೋಧವಾಗಿ ನಡೆದ ಸಂಗತಿಗಳಲ್ಲೆಲ್ಲಾ ಸದರೀ ಸೆಂಟ್ರಲ್ ಜೈಲ್ ಸೂಪರ್ರಿಂಟೆಂಡೆಂಟರ ಫೈಸಲೆ ಆಖೈರ್ ಫೈಸಲಾಗಿರತಕ್ಕದ್ದು.

14. ಮತ್ತೆ ಯಾವ ಸಂಗತಿ ಬೇಕಾಗಿದ್ದರೂ ಸೂಪರ್ರಿಂಟೆಂಡೆಂಟರ ಆಫೀಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

15. ಈ ಕಂಟ್ರಾಕ್ಟುಗಳು ಮೈಸೂರು ಜೈಲ್ ಇನ್ಸ್ಪೆಕ್ಟರ್ ಜನರಲ್‌ರವರ ಮಂಜೂರಾತಿಗೆ ಒಳಪಟ್ಟು ಇರುವವು.

16. ಕಂಟ್ರಾಕ್ಟುದಾರರು ಇಜಾರೆಯನ್ನು ತೆಗದುಕೊಂಡ ತರುವಾಯ ತಮ್ಮ ಕರಾರಿನಂತೆ ನಡಿಯಲು ಇಷ್ಟಪಡದಿದ್ದರೆ ಒಂದು ತಿಂಗಳಿಗೆ ಮುಂಚಿತವಾಗಿಯೇ ನೋಟಿಸ್ ಕೊಡಬೇಕು ಮತ್ತು ಅವರ ಸೆಕ್ಯೂರಿಟಿ ಹಣವನ್ನು ಸರಕಾರಕ್ಕೆ ಬಿಟ್ಟುಬಿಡಬೇಕು.

17. ಕಂಟ್ರಾಕ್ಟುದಾರರು ಸರಬರಾಯಿ ಮಾಡಿದ ಜಿನಸಿ ಬಿಲ್ಲುಗಳನ್ನು ಹಣ ಪಾವತಿ ಬಗ್ಯೆ ಸೂಪರ್ರಿಂಟೆಂಡೆಂಟರವರು ಮೊಕರೂರು ಮಾಡಿದ ತಾರೀಖು ಅಥವಾ ಅದಕ್ಕೆ ತತ್ಪೂರ್ವವಾಗಲಿ ಹಾಜರು ಮಾಡಬೇಕು. ತಪ್ಪಿದರೆ ಸೂಪರ್ರಿಂಟೆಂಡೆಂಟರವರು ಸದರೀ ತಾರೀಖು ತರುವಾಯ ಹಾಜರು ಮಾಡಿದ ಬಿಲ್ಲುಗಳಿಗೆ ಹಣ ಪಾವತಿ ಮಾಡಲು ಅನ್ಕಾರು ಮಾಡುವರು. ಇಜಾರದಾರರು ತಪ್ಪಿಹೋಗುವದರಿಂದ ಸರ್ಕಾರಕ್ಕೆ ಆಗುವ ನಷ್ಟವನ್ನೂ ಅಥವಾ ಕಂಟ್ರಾಕ್ಟಿನಲ್ಲಿ ನಮೂದಾಗುವ ಪದಾರ್ಥಗಳನ್ನೂ ಸರ್ಕಾರದವರು ಕಂಟ್ರಾಕ್ಟು ದರಕ್ಕಿಂತಲೂ ಹೆಚ್ಚು ದರದ ಮೇರೆ ಬಜಾರದಲ್ಲಿ ಕೊಂಡುಕೊಂಡರೆ ಆ ನಷ್ಟವನ್ನೂ ಇಜಾರೆದಾರರು ಸರ್ಕಾರಕ್ಕೆ ಭರ್ತಿಮಾಡಿ ಕೊಡಬೇಕು. ವಿಚಾರ—ಮೇಲೆ ನಮೂದಾದ ಕಂಟ್ರಾಕ್ಟುಗಳ ವಿಷಯದಲ್ಲಿ ಯಾವ ವಿಧವಾದ ರಿಯಾಯಿತಿಯೂ ದೊರೆಯಲಾರದು.

ನೋಟಿಸ.

1907ನೆ ಇಸವಿ ಡಿಸೆಂಬರ್ ತಾರೀಖು 11.

ನೋಟಿಸ ಮೂಲಕ ತಿಳಿಯಪಡಿಸುವದೇನಂದರೆ:—1908ನೆ ಇಸವಿ ಫೆಬ್ರುವರಿ ಗುರ್ರೆ ತಾರೀಖು ಲಾಗಾಯಿತು 1909ನೆ ಇಸವಿ ಜನವರಿ 31ನೆ ತಾರೀಖು ವರಿವಿಗೂ ಜೈಲಿನಲ್ಲಿ ತಯಾರಾಗತಕ್ಕ ಸಾಮಾನುಗಳಿಗೆ ಬೇಕಾದಂಥಾ ಎಲ್ಲಾ ರಖಂ ತುಪಟಗಳೂ ಮತ್ತು ಇತರ ಸಾಮಾನುಗಳನ್ನೂ ಹಾಜರು ಮಾಡಲು ಕಂಟ್ರಾಕ್ಟು ಪಡೆಯಲು ಇಷ್ಟವುಳ್ಳವರಿಂದ ಹಾಜರು ಮಾಡಲ್ಪಡುವ ಸೀಲ್ಡ್ ಕವರುಸಿಸಿ ಇರುವ ದರಖಾಸ್ತುಗಳನ್ನು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು 1908ನೆ ಇಸವಿ ಜನವರಿ 18ನೆ ಶನಿವಾರ ಹವಿ 10 ಘಂಟೆ ವರಿವಿಗೂ ಅಂಗೀಕರಿಸುವರು.

2. ನಗದಾಗಿ 250 ರೂಪಾಯಿಗಳೇ ಆಗಲಿ ಅಥವಾ 250 ರೂಪಾಯಿಗಳಿಗೆ ತಕ್ಕ ನಡವಳಿಕೆಯಲ್ಲಿ ಇರುವ ನೋಟುಗಳನ್ನು ಆಗಲಿ ಡಿಪಾಜಿಟ್ ತಾರೀಖು ಹಾಜರು ಮಾಡದೇ ಇರುವಂಥಾ ದರಖಾಸ್ತುಗಳು ಅಂಗೀಕರಿಸಲ್ಪಡಲಾರವು.

3. ದರಖಾಸ್ತುದಾರರಿಂದ ಹಾಜರು ಮಾಡಲ್ಪಡುವ ದರಖಾಸ್ತುಗಳ ಮೇಲ್ಭಾಗದಲ್ಲಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ "ಸಾಮಾನುಗಳು ತಯಾರಾಗತಕ್ಕ ಬಗ್ಗೆ ಬೇಕಾಗಿರುವ ಸಾಮಾನುಗಳನ್ನು ಸಪ್ಲೈ ಮಾಡತಕ್ಕ ಬಗ್ಗೆ ಕೊಟ್ಟ ದರಖಾಸ್ತು" ಎಂದು ನಮೂದಿಸಬೇಕು.

4. ಮೇಲ್ಕಂಡ ದಿನದಲ್ಲಿ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ತಮ್ಮ ಆಫೀಸಿನಲ್ಲಿ ಹಾಜರಿರುವ ದರಖಾಸ್ತುದಾರು ಯಾ ಅವರುಗಳ ಏಜಂಟುಗಳ ರೂಬರೂಬ್ ದರಖಾಸ್ತುಗಳನ್ನು ಒಡೆದು ನೋಡುವರು.

5. ಯಾವ ದರಖಾಸ್ತನ್ನೇ ಆಗಲಿ ಕಾರಣ ನಮೂದಿಸದೆ ತಿರಸ್ಕರಿಸುವ ಅಧಿಕಾರವನ್ನು ಸೂಪರಿಂಟೆಂಡೆಂಟರವರು ವಹಿಸಿ ಇದ್ದಾರೆ.

6. ಎಲ್ಲಾ ದರಖಾಸ್ತುದಾರರೂ ಇದಕ್ಕೆ ಜಂಟಿಸಿರುವ ಫಾರಮಿನಲ್ಲಿ ಕಂಡಂತೆ ಬಳ್ಳಿ ಸರಕುಗಳನ್ನು ಯಾವ ರೇಟಿನಲ್ಲಿ ಕೊಡುತ್ತಾರೋ ಅವುಗಳನ್ನು ತಮ್ಮ ದರಖಾಸ್ತಿನಲ್ಲಿ ನಮೂದಿಸಬೇಕು.

7. ಕಂಟ್ರಾಕ್ಟು ಯಾರ ಹೆಸರಿಗೆ ಮಂಜೂರಾಗುತ್ತೋ ಅವರಿಂದ ಹಾಜರ್ಮಾಡಲ್ಪಟ್ಟ ಡಿಪಾಜಿಟ್ ಮೊಬಲಗನ್ನು ವಾಪ್ಪಸು ಕೊಡುವದಿಲ್ಲ ಮತ್ತು ಸದರೀ ಯವರ ಕಂಟ್ರಾಕ್ಟು ಮಂಜೂರು ಮಾಡಲ್ಪಟ್ಟಿದೆ ಎಂದು ಅವರಿಗೆ ತಿಳಿಸಿದ ಒಂದು ವಾರದೊಳಗಾಗಿ ಕಂಟ್ರಾಕ್ಟು ಬಾಂಡು ಬರದುಕೊಡದೇ ಹೋದರೂ ಅಥವಾ ಜಾಮೀನ್ ತರೀಕ ನಗದು 500 ರೂಪಾಯಿ ಅಥವಾ ಅದಕ್ಕೆ ತಕ್ಕ ಸರಕಾರದ ಬಾಂಡುಗಳನ್ನೇ ಆಗಲಿ ಹಾಜರು ಮಾಡದೇ ಹೋದರೂ ಡಿಟ್ಟೋ ಡಿಪಾಜಿಟ್ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

8. ಯಾವ ಮೊಬಲಗೂ ಅಡ್ವಾನ್ಸ ತರೀಕ ಕಂಟ್ರಾಕ್ಟುದಾರನಿಗೆ ಪ್ರತಿ ತಿಂಗಳಲ್ಲೂ ದೊರೆಯಲಾರದು. ಪ್ರತಿ ತಿಂಗಳಲ್ಲೂ ಕಂಟ್ರಾಕ್ಟುದಾರನಿಂದ ಹಾಜರು ಮಾಡಲ್ಪಟ್ಟ ಸಾಮಾನುಗಳ ಕ್ರಯವನ್ನು ಸೂಪರಿಂಟೆಂಡೆಂಟರವರು ಗುರ್ರೆ ತಾರೀಖು ಕಳೆದ ನಂತರ ಸಾಧ್ಯವಾದ ಮಟ್ಟಿಗೆ ಜಾಗ್ರತೆಯಾಗಿ ಕೊಡುವರು. ಮತ್ತು ಪ್ರತಿ ತಿಂಗಳಲ್ಲೂ 6ನೆ ತಾರೀಖಿನ ವಳಗಾಗಿ ಬಿಲ್ಲುಗಳನ್ನು ವೋಚರುಗಳ ಸಮೇತ ಕಂಟ್ರಾಕ್ಟುದಾರನೇ ಖುದ್ದಾಗಿ ಸೂಪರಿಂಟೆಂಡೆಂಟರವರ ರೂಬರೂಬ್ ಸೈನ್ ಮಾಡಿ ಬಟವಾಡೇ ಬಗ್ಗೆ ಹಾಜರ್ಮಾಡತಕ್ಕದ್ದು.

9. ಕಂಟ್ರಾಕ್ಟನ್ನು ಷಿಕಿಮಿ ಕಂಟ್ರಾಕ್ಟಾಗಿ ಕೊಡಕೂಡದು.

10. ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟ ಷರತ್ತು ಮೇರೆ ನಡಿಯದೇ ತಪ್ಪಿದರೂ ಅಥವಾ ಕನಿಷ್ಠ ರಖಂ ಸಾಮಾನುಗಳನ್ನು ಹಾಜರು ಮಾಡಿದರೂ, ಜೈಲ್ ಸೂಪರಿಂಟೆಂಡೆಂಟರವರು ಮುನಾಸಬ್ ಮೇರೆ 30 ರೂಪಾಯಿಗಳ ವರಿಗೂ ಜುಲ್ಮಾನೆ ವಿಧಿಸಬಹುದು. ಹೀಗೆ ಪದೇ ಪದೇ ಮಾಡಿದರೆ ಕಂಟ್ರಾಕ್ಟನ್ನು ವಜಾ ಮಾಡಿ ಜಾಮೀನ್ ತರೀಕ ಕೊಟ್ಟ ಮೊಬಲಗನ್ನು ಸರಕಾರಕ್ಕೆ ತೆಗೆದುಕೊಳ್ಳಲ್ಪಡುವದು.

11. ಕಂಟ್ರಾಕ್ಟುದಾರನು ಷರತ್ತಿಗೆ ವಿರೋಧವಾಗಿ ನಡೆದುಕೊಂಡರೆ ಆ ವಿಷಯದಲ್ಲಿ ಜೈಲ್ ಸೂಪರಿಂಟೆಂಡೆಂಟರು ಮಾಡುವ ಹುಕುಮೇ ಆಖೈರು ಹುಕುಂ ಆಗಿ ಇದೆ.

12. ಕಂಟ್ರಾಕ್ಟುದಾರನು ಅಪೇಕ್ಷಿಸಿದ ಪಕ್ಷದಲ್ಲಿ ನಾಶಪಡದೇ ಇರುವಂಥಾ ಪದಾರ್ಥಗಳನ್ನ ಇಟ್ಟುಕೊಳ್ಳಲು ಒಂದು ಕೊಠಡಿ ಕೊಡಲ್ಪಡಬಹುದು. ಅಲ್ಲಿ ಸಾಮಾನು ಇಟ್ಟುಕೊಂಡು ಕೇಳಿದವೇಳೆ ಕೊಡಬಹುದು.

13. ಇನ್ನೂ ಇತರ ಸಂಗತಿಗಳು ವಿಚಾರಿಸಬೇಕಾಗಿದ್ದರೆ ಸೂಪರಿಂಟೆಂಡೆಂಟರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

14. ಇದಕ್ಕೆ ಜಂಟಿಸಿರುವ ಪಟ್ಟಿಯಲ್ಲಿ ಕಂಡ * ಮಾರ್ಕು ಮಾಡಿರುವ ಸಾಮಾನುಗಳ ನಮೂನೇ ಸಹ ದರಖಾಸ್ತು ಜೊತೆಯಲ್ಲಿ ಹಾಜರು ಮಾಡಬೇಕು.

15. ಮೇಲೆ ನಮೂದಿಸಿರುವ ಷರತ್ತುಗಳಿಗೆ ಬಳಪಟ್ಟು ಮತ್ತು 100 ರೂಪಾಯಿ ಡಿಪಾಜಿಟ್ ಕಟ್ಟಿದರೆ ಮೇಲ್ಕಂಡ ತಾರೀಖಿನಲ್ಲಿ ತುಪಟಗಳು ಹಾಜರು ಯಾ ಸಪ್ಲೈ ಮಾಡತಕ್ಕ ಬಗ್ಗೆ ಕೊಡುವ ಅಲಾಹಿದಾ ದರಖಾಸ್ತುಗಳನ್ನು ಅಂಗೀಕರಿಸಲ್ಪಡುವದು.

16. 25 ಪೌಂಡು ತೂಕವುಳ್ಳ ಮಣದ ಮೇಲೆ ದರ ನಮೂದಿಸಬೇಕು.

17. ಈ ಅಂಗೀಕರಿಸಿದ ದರಖಾಸ್ತು ಇನ್ಸ್ಪೆಕ್ಟರ್ ಜನರಲ್ ಆಫ್ ಪ್ರಿಜನ್ಸ ಯವರ ಮಂಜೂರಾತಿಗೆ ವಳಪಟ್ಟಿರತಕ್ಕದ್ದು.

18. ಈ ಕೆಳಗೆ ನಮೂದು ಮಾಡುವ ಸಾಮಾನುಗಳ ಮೊತ್ತಗಳು ಇಷ್ಟೇ ಖರ್ಚಾದೀತೆಂಬುವದನ್ನು ಗೊತ್ತಾಗಿ ಹೇಳಲು ಆಗುವದಿಲ್ಲ.

19. ಕಂಟ್ರಾಕ್ಟುದಾರನಿಂದ ಠೇವಣಾತಿ ಇಡಲ್ಪಟ್ಟ ಮೊಬಲಗೇ ಆಗಲಿ ಅಥವಾ ಅವನಿಂದ ಸರಬರಾಯಿ ಮಾಡಲ್ಪಟ್ಟ ಸಾಮಾನುಗಳಿಗಾಗಿ ಅವನಿಗೆ ಸಲ್ಲಬೇಕಾದ ಮೊಬಲಗೇ ಆಗಲಿ ಕೋರ್ಟಿನವರು ಜಫ್ತಿ ಮಾಡಿದ ಪಕ್ಷದಲ್ಲಿ ಕಂಟ್ರಾಕ್ಟು ರದ್ದು ಮಾಡಲ್ಪಡುವದಲ್ಲದೆ ಅದರಿಂದ ಸರ್ಕಾರಕ್ಕೆ ಆಗಬಹುದಾದ ನುಕ್ಸಾನು ಮೊಬಲಗನ್ನು ಭರ್ತಿಮಾಡಲು ಸಾಕಾಗುವಷ್ಟು ಹಣವನ್ನು ಠೇವಣಾತಿ ಮೊಬಲಗಿನಲ್ಲೇ ಆಗಲಿ ಅಥವಾ ಆ ವರಿವಿಗೆ ಕಂಟ್ರಾಕ್ಟುದಾರನಿಂದ ಸರಬರಾಯಿ ಮಾಡಲ್ಪಟ್ಟ ಸಾಮಾನಿನ ಕಿಮ್ಮತ್ತು ಮೊಬಲಗಿನಲ್ಲೇ ಆಗಲಿ ಕಟಾಯಿಸಲ್ಪಡುತ್ತೆ.

ಜಿನಸಿ.	ಈ ವರುಷಕ್ಕೆ ಬೇಕಾಗಿರುವ ಸುಮಾರು ನಿಬಂಧನೆ.
ಸ್ಟಿಕ್ಕು ಗ್ಲೂ ಯಾನೆ ವಜ್ರ 25 ಪವನಿನ ಮಣಕ್ಕೆ ...	200
ಅಳಲೆಕಾಯಿ ಡಿಟೋ	275
*ಚೌಳು (ಬಿಲ್ಲೆಯಾಗಿ) ಡಿಟೋ	1,200
ಅಡಿಕೆ ಡಿಟೋ	50
ಕಾಂಚು ಡಿಟೋ ...	50
ಹುಣಸೇಬೀಜ (ರೂಪಾಯಿಗೆ ಇಷ್ಟು ಸೇರೆಂದು) ...	300 ಸೇರು
ಅರಿದ್ರೆ 25 ಪವನಿನ ಮಣಕ್ಕೆ ...	200 ಪವನು
ತಾಂಬ್ರದ ತಗಡು ನಾನಾತರ ದಪ್ಪದ್ದು ...	600
ಹಿತಾಳೀ ತಗಡು ಡಿಟೋ	50
ಪಟಿಕಾರವು 25 ಪವನಿನ ಮಣಕ್ಕೆ ...	250
*ಅರಗು ಪೆಪ್ಪರ ಅಥವಾ ರಂಗೂನದು ಕಡ್ಡಿಯಿಲ್ಲದ್ದು ...	700 ಪವನು
*ಕೆಂಪುಮರ ಸಣ್ಣಗೆ ಸೀಳಿದ್ದು ...	200 ಪವನು
ಬಿಳೀ ಸೀಮೆ ಸುಣ್ಣ ...	20 ಪವನು
*ಅವಲ ನೀಲಿ ಅವಲ, ದುಯ್ಯಂ ಮತ್ತು ಸಿಯ್ಯಂ ರಖಂ ...	150 ಪವನು
ಅವಲ್ ಟಾರು ...	6 ಪೀಪಾಯಿ
ಮರದೆಣ್ಣೆ ...	3 ಮಣ
ಗೋಪಿ ...	200 ಪವನು
ಅವಲ್ ಕೊಬರಿ ಎಣ್ಣೆ ...	56 ಪವನು
ಅವಲ್ ಅಚ್ಚೆಳ್ಳೆಣ್ಣೆ ...	50 ಪವನು
ಅವಲ್ ದೀಪದ ಎಣ್ಣೆ ...	75 ಪವನು
*ಅವಲ ಬಿಳೀ ಜೆತ್ತ 1ನೆ ಕ್ಲಾಸು ...	350 ಪವನು
ತೊಳದ ದಪ್ಪ ಮತ್ತು ಅಗಲವುಳ್ಳ ಮಲ್‌ಮಲ್ ...	30 ಗಜ
ಅಗಲವಾದ ಮತ್ತು ದಪ್ಪವಾದ ಟರಕಿ ಕೆಂಪು ಬಟ್ಟೆ ...	30 ಗಜ
ಒಂದು ಅಡಿ ಅಗಲವುಳ್ಳ ಟೆಂಟುಗನಿ (ಚೀಲಕ್ಕೆ) ಗಜಕ್ಕೆ ...	100 ಗಜ
ನೇವಿ ಕ್ಯಾನ್ವಸ್ ನಂ. 1 ಗಜಕ್ಕೆ ...	30 ಗಜ
ಡಿಟೋ ನಂ. 2 ಡಿಟೋ ...	5 ಗಜ
ಡಿಟೋ ನಂ. 3 ಡಿಟೋ ...	5 ಗಜ
*ಬಾರ್ ಐರನು ಯಾನೆ ಕಬ್ಬಿಣ 25 ಪವನು ಮಣಕ್ಕೆ ...	200 ಪವನು
ಹೂಪು ಐರನು ಡಿಟೋ ...	200 ಪವನು
ಅರ ಒಂದಕ್ಕೆ ...	50
ಹಳೇ ಹಿತ್ತಾಳೆ 25 ಪವನು ಮಣಕ್ಕೆ ...	200 ಪವನು
*ಸರ್ವೋತ್ಕೃಷ್ಟವಾದ ಸ್ಪೆಷೆಲ್ ಕ್ಲಾಸ್ ಬಿಳೀ ತುಪಟ ...	5,000 ಪವನು
ಡಿಟೋ ಕ್ಲಾಸಿನ ಕಪ್ಪು ತುಪಟ ...	5,000 ಪವನು
*ಕತ್ತರಿಸಿದ ಮಂಡ್ಯದ ಬಿಳೀ ತುಪಟ 25 ಪವನು ಮಣಕ್ಕೆ 1ನೆ ರಖಂ ...	500 ಪವನು
*2ನೆ ರಖಂ ಕತ್ತರಿಸಿದ ಚಿತ್ರದುರ್ಗದ ತುಪಟ ...	1,000 ಪವನು
*ಕುರಿಮರಿ ತುಪಟ ಚಿತ್ರದುರ್ಗದ್ದು (ಬ್ಲಾಕು ಕ್ರಿಮ್ಸಿ) ...	2,500 ಪವನು
*ಡಿಟೋ ಬಿಳೀ ತುಪಟ ...	3,000 ಪವನು
*ಡಿಟೋ ಮರಿ ತುಪಟ ...	1,000 ಪವನು
*ಡಿಟೋ ಗ್ರೇಯಾನೆ ಬಿಳೀ ತುಪಟ ...	3,000 ಪವನು
ಕಾರ್ಟ್ ರೀಲ ಯಾವತರಹದ್ದೇ ಆಗಲಿ, ನಂ. 20-30—40 ಮತ್ತು ಡಜರ್ ಒಂದಕ್ಕೆ ...	252
*ಹತ್ತಿ ಮಣ ಒಂದಕ್ಕೆ 25 ಪವನು ...	250 ಪವನು
ಜೇನುಮೇಣ (ಹಳದಿ) ...	30 ಪವನು
ಹುಣಸೇಹಣ್ಣು (ಕೊಳೆ ಕಲ್ಲು ವಗೈರೆ ಇಲ್ಲದ್ದು) 25 ಪವನಿನ ಮಣಕ್ಕೆ ...	2,000 ಪವನು
*ಹಳದಿ ಹೂ ಡಿಟೋ ...	1,500 ಪವನು
ಬಿಳೀ ಗೋಂದು (ಕೊಳೆ ಇಲ್ಲದ್ದು) ಡಿಟೋ ...	25 ಪವನು
ದೋಬಿಸ್ಟಾಂಡು ಯಾನೆ ಮರಳು ಡಿಟೋ ...	200 ಮಣ
ಬೆಸಿಯುತಕ್ಕ ಸೀಸ ಡಿಟೋ ...	75 ಪವನು
ಟಂಕವು (ಬಿಳಿಗಾರ) ಡಿಟೋ ...	75 ಪವನು
ಸಾಲಿಮೋನಿಯಾಕ ಡಿಟೋ ...	75 ಪವನು
ಅಪಘೋಟ ಡಿಟೋ ...	10 ಮಣ
ಭತ್ತದ ಹೊಟ್ಟು ಡಿಟೋ ...	100 ಮಣ
ನೀಲೀಬೀಜ ಡಿಟೋ ...	600 ಪವನು
ಅವಲ ಇದ್ದಲು (ಚೀಲಗಳಲ್ಲಿ) ಚೀಲಕ್ಕೆ ದರ (50 ಪೌನುಗಳಿಗೆ ಕಮ್ಮಿ ತೂಗದೆ ಇರತಕ್ಕ ಚೀಲ) ...	150 ಚೀಲ
ಸಣಬಿನದಾರ ಒಂದು ಡಜನ್ ವುಂಡೆಗೆ ...	100 ವುಂಡೆ
ತೆಂಗಿನ ನಾರು (ಅವಲ ಕಳ್ಳಿಕೋಟೇದು) 25 ಪವನಿನ ಮಣಕ್ಕೆ ...	3,000 ಪ॥
ಸವುದೆ (ಸಣ್ಣಗೆ ಸೀಳಿದ್ದು) ...	1,200 ಮಣ
ಪುಂಡೀನಾರು (ಬಿಳೀದು) 25 ಪವನು ಮಣಕ್ಕೆ ...	800 ಪವನು

[illegible] ಜಿನಸಿ	ಈ ವರುಷಕ್ಕೆ ಬೇಕಾಗಿರುವ ಸುಮಾರು ನಿಬಂಧನೆ.
*ತೂತು ಇಲ್ಲದ ಅವಲ್ ಕೋಣನ ಚಕ್ಕಳ	
ಡಿಟೋ ಹದಮಾಡಿದ ಎತ್ತಿನ ಚಕ್ಕಳ ...	10
ತೂತು ಇಲ್ಲದ ಅವಲ್ ಹದಮಾಡಿದ ಎತ್ತಿನ ಚಕ್ಕಳ ಸಾಧಾರಣದ್ದು ...	10
ದೊಡ್ಡ ಕುರಿ ಚಕ್ಕಳ ಡಿಟೋ ...	5
ಜೇಯಿಸಿದ ಅಗಸೇಬೀಜದ ಎಣ್ಣೆ 2½ ಸೇರಿನ ಸೀಸೆಕ್ಕೆ ...	10
ಟರ್ಪೆಂಟೈನ್ ಎಣ್ಣೆ ಡಿಟೋ ...	50 ಸೀಸೆ
ಗೋಪಾಲ್ ವಾರ್ನಿಷ್ ಡಿಟೋ ...	30 ಸೀಸೆ
ಬ್ಲಾಕ್ ಜಪಾನ್ ಡಿಟೋ ...	10 ಸೀಸೆ
ಆಸ್ಪಿನಲ್‌ಸ್ ಯನಾಮಲ್ (ಪೈನ್ ಆಪಲ್ ಟಿನ್‌ಗಳಲ್ಲಿ ...	10 ಸೀಸೆ
ಒಣಗಿದ ಕರ್ಪೂರದ ಪವನಿಗೆ ...	25 ಟಿನ್‌ಗಳು
ಷೀಟು ಐರನು ಎಂಬ ಕಬ್ಬಿಣ 25 ಪೌನು ಮಣಕ್ಕೆ ...	20 ಪವನು
ಸತ್ತು 25 ಪವನು ಮಣಕ್ಕೆ ...	200 ಪವನು
*ಹಾಸಿಗೆ ಗೌಸ ಹಾಕುವ ಬಟ್ಟೆ ಗಜಕ್ಕೆ ...	200 ಪವನು
*ಕತ್ತರಿಸಿದ ಬಿಳಿ ಬಂಡ (ಮಂಡ್ಯದ್ದು) ದುಯಂ ತರಹ 25 ಪೌಂಡಿನ ಮಣ 1ಕ್ಕೆ ...	30 ಗಜ
*ಡಿಟೋ ಕರಿ ಬಂಡ (ಚಿತ್ರದುರ್ಗದ್ದು) ಡಿಟೋ ...	1,500 ಪೌಂಡುಗಳು
*ಕುರಿಮರಿ ಬಂಡ (ಚಿತ್ರದುರ್ಗದ್ದು) ಡಿಟೋ ...	1,000 ಡಿಟೋ
*ಸಣ್ಣದ ಬಂಡ ಕರೀದು ಡಿಟೋ ...	2,500 ಡಿಟೋ
*ಡಿಟೋ ಬಿಳೀದು ಡಿಟೋ ...	5,000 ಡಿಟೋ
*ಡಿಟೋ ಕುರಿಮರೀದು ಡಿಟೋ ...	3,000 ಡಿಟೋ
*ಡಿಟೋ ಗ್ರೇಯಾನೆ ಬಿಳಿ ತುಪಟ ಡಿಟೋ ...	1,000 ಡಿಟೋ
ಬಂಡ ಉಪಯೋಗಿಸುವದಕ್ಕೆ ಮುಂಚೆ ಆರಿಸಿ ಕಮಾನು ಹೊಡಿಯಲ್ಪಡುತ್ತೆ.	3,000 ಡಿಟೋ
ಮರದ ದಿಮ್ಮಿಗಳು ಮೈಸೂರು 1ನೆ ಕ್ಲಾಸು ತ್ಯಾಗ, ಹೊನ್ನೆ, ಕರೀದು ಮತ್ತು ರೋಸ್‌ವುಡ್ ಅಡಿ 1ಕ್ಕೆ	
ಸ್ಕ್ರೂಗಳು ¼ ಅಂಗುಲ ಮೊದಲು 3 ಅಂಗುಲದ ವರಿಗೆ ಗ್ರೋಸ್ 1ಕ್ಕೆ ...	20 ಗ್ರೋಸ್ ಅಳತೆವಾರು
ಸ್ಯಾಂಡ್ ಪೇಪರು ಡಜನ್ 1ಕ್ಕೆ ...	60 ಡಜನ್‌ಗಳು
ಪುಳಿಗಳು ¼ ಅಂಗುಲದ ಲಾಗಾಯಿತು 2 ಅಂಗುಲದ ವರಿಗೆ ಬಂಡಕ್ಕೆ ...	6 ತರಹವಾರು
ಒಳ್ಳೆ ಎಳ್ಳು ರೂಪಾಯಿ 1ಕ್ಕೆ ಸೇರುಗಳು ...	1,000 ಸೇರುಗಳು
30ನೆ ನಂ. ನೂಲು ಕಟ್ಟು 1ಕ್ಕೆ ಬಿಳೀದು (5 ಪೌನಿನ ಕಟ್ಟು) ...	150
40ನೆ ಡಿಟೋ " " " ...	100
60ನೆ ಡಿಟೋ " " " ...	50
4ನೆ ಡಿಟೋ " " (10 ಪೌನಿನ ಕಟ್ಟು) ...	30
ಸನ್‌ಲೈಟ್ ಸೋಪು ಮೂರು ಸ್ಟಿಕ್ಕು ಇರುವ ಪೆಟ್ಟಿಗೆ 1ಕ್ಕೆ ...	30
ಸ್ಟಾರ್ಚಿ ಪೆಟ್ಟಿಗೆ 1ಕ್ಕೆ ...	30
ತರಹವಾರು ಬಿದರು ಬೊಂಬುಗಳು ಕಟ್ಟು 1ಕ್ಕೆ ...	200
10ನೆ ನಂಬರಿ ಬಿಳೀ ನೂಲು (ಪಾಂಡುಚೆರಿ ದೇಶದ್ದು) 10 ಪೌನಿನ ಕಟ್ಟು ದರ ಕಟ್ಟು 1ಕ್ಕೆ ...	7,200 ಪೌಂಡುಗಳು
ಗೇರು ಬೀಜ 25 ಪೌನಿನ ಮಣ 1ಕ್ಕೆ ...	100 "
ತರಹವಾರಿ ರಂಗಿನ ಯನಾಮಲ್ ಟಿನ್‌ಗಳು ದರ ಟಿನ್ 1ಕ್ಕೆ ...	20 ಟಿನ್‌ಗಳು
ವೈಟಲೆಡ್ ಪೌನ್ 1ಕ್ಕೆ ...	5 ಪೌಂಡುಗಳು
ಫರನಿಚರ್‌ಗಳಿಗೆ ಉಪಯೋಗಿಸತಕ್ಕ ಹಿತ್ತಾಳೆ ಮತ್ತು ಕಬ್ಬಿಣದ ಹುಕ್ಕುಗಳು ರಖಂವಾರಿ ದರ ಡಜನ್ 1ಕ್ಕೆ.	6 ಡಜನ್
ಡಿಟೋ ಡಿಟೋ ಹಿತ್ತಾಳೆ ಮತ್ತು ಕಬ್ಬಿಣದ ಕೈಪಿಡಿ ರಖಂವಾರ್, ದರ ಜೋಡಿ 1ಕ್ಕೆ ...	25 ಜೋಡಿ
ಗ್ರೀನ್ ಮಲ್ಲು ಗಜ 1ಕ್ಕೆ ...	75 ಗಜ
ಸ್ಪೈಜ್‌ವಾರ್ ಬೊಂಬುಗಳು 100ಕ್ಕೆ ...	500
ಡಿಟೋ ವೇಲೂರು ಬೊಂಬುಗಳು 100ಕ್ಕೆ ...	200
ಸೂಸಿ ಪಟ್ಟೆ 25 ಪೌನಿನ ಮಣ 1ಕ್ಕೆ ...	20 ಮಣ
ಬೆಂಗಾಲ್ ಟ್ವೈನ್ ಪೌನು ಒಂದಕ್ಕೆ ...	15 ಪೌನ್
ನಾಪ್ತಲೈನ್ ಗುಳಿಗೆಗಳು ಪೌನು 1ಕ್ಕೆ ...	10 ಪೌನ್
ವೈರ್ ನೆಟ್ಟಿಂಗ (ತಂತಿ ಝಾಲಿ) ಗಜ 1ಕ್ಕೆ ...	50 ಗಜ
ರಖಂವಾರಿ ತಂತಿ ಮತ್ತು ಗುಲ್ ಮಾಳೆಗಳು ಪೌನ್ 1ಕ್ಕೆ ...	20 ಪೌನ್
ಯಮರಿ ಪೇಪರ್ ಡಜನ್ 1ಕ್ಕೆ ...	2 ಡಜನ್
ತಾಂಬ್ರ ಮತ್ತು ಕಬ್ಬಿಣದ ರಿವಿಟ್ ಮಳೆಗಳು ಪೌನ್ 1ಕ್ಕೆ ...	30 ಪೌನ್
1ರಿಂದ 4 ಅಂಗುಲದ ವರಿಗಿನ ಹಿತ್ತಾಳೆ ಮತ್ತು ಕಬ್ಬಿಣದ ಕೀಲುಗಳು ದರ ಜೋಡಿ 1ಕ್ಕೆ ...	250 ಜೋಡಿ
ರಖಂವಾರ್ ಹಿತ್ತಾಳೆ, ಕಬ್ಬಿಣ ಮತ್ತು ತಾಂಬ್ರದ ತಂತಿ ಪೌನ್ 1ಕ್ಕೆ ...	50 ಪೌನ್
ಸುಣ್ಣ ಸೇರು 1ಕ್ಕೆ ...	450 ಸೇರು
30ನೆ ನಂಬರಿ ಕೆಂಪುಕಟ್ಟು ನೂಲು 5 ಪೌನಿನ ಕಟ್ಟು 1ಕ್ಕೆ ...	125 ಪೌನ್
ಬೇವು ಕೀಲಿಗಳು ದರ ಪೌನ್ 1ಕ್ಕೆ ...	150 ಪೌನ್

[illegible]	ಜಿನಸು.	ಈ ವರುಷಕ್ಕೆ ಬೇಕಾಗಿರುವ ಸುಮಾರು ನಿಬಂಧನೆ
ದರಾಗಳಿಗೆ ಹಾಕತಕ್ಕದ್ದು	ಹಿತ್ತಾಳೆ ಬೀಗಗಳು 2ರಿಂದ 4 ಅಂಗುಲದ ವರವಿಗೆ 1 ರಿಂದ 4 ಲಿವರು ಇರತಕ್ಕದ್ದು ದರ ಬೀಗ 1ಕ್ಕೆ.	100
	ಡಿಟೋ ಕಬ್ಬಿಣದ್ದು ಡಿಟೋ ಡಿಟೋ ಡಿಟೋ	50
ಡಿಟೋ		25
ಪೆಟ್ಟಿಗೆಗೆ ಹಾಕತಕ್ಕ	ಹಿತ್ತಾಳೆ ಬೀಗಗಳು 2 ರಿಂದ 4 ಅಂಗುಲದ ವರವಿಗೆ 1 ರಿಂದ 4 ಲಿವರು ಇರತಕ್ಕದ್ದು ದರ ಬೀಗ 1ಕ್ಕೆ.	25
ಡಿಟೋ	ಕಬ್ಬಿಣದ್ದು ಡಿಟೋ ಡಿಟೋ ಡಿಟೋ ...	25
ಅಲ್ಮೈರಾಗಳಿಗೆ ಹಾಕತಕ್ಕದ್ದು	ಹಿತ್ತಾಳೆ ಬೀಗಗಳು ಡಿಟೋ ಡಿಟೋ	25
ಡಿಟೋ	ಕಬ್ಬಿಣದ್ದು ಡಿಟೋ ಡಿಟೋ ...	10 ಪೌ
ದಾಮರ್ ಪೌ 1ಕ್ಕೆ.		50 ಕನ್ನಡಿಗಳು
ಬೀರುಗಳಿಗೆ ಹಾಕತಕ್ಕ	ಕನ್ನಡಿಗಳು 18 ಅಂಗುಲ × 14 ಅಂಗುಲ ವುಳ್ಳವುಗಳು ಮತ್ತು 12 ಅಂಗುಲ × 10 ಅಂಗುಲ ವುಳ್ಳವುಗಳು ಕನ್ನಡಿ 1ಕ್ಕೆ.	100
	ಹಿತ್ತಾಳೆ ಮತ್ತು ಕಬ್ಬಿಣದ ತಾಪಾಳಗಳು 2ರಿಂದ 4 ಅಂಗುಲಗಳ ವರವಿಗೆ ...	50 ಪೌ
ಉಪ್ಪು ಪೌ 1ಕ್ಕೆ ...		100 ಪೌ
*2ನೆ ತರಹ ಬಿಳಿ ಚೆತ್ತು (ನಾಟಿ ಚೆತ್ತು) 25 ಪೌನಿನ ಮಣ 1ಕ್ಕೆ ...		
	ಬಣ್ಣಗಳು.	50 ಟಿನ್ನುಗಳು
ಕೆಂಪು 1 ಪೌ ಟಿನ್ನುಗಳು ದರ ಟಿನ್ 1ಕ್ಕೆ		30 ,,
ಕಿತ್ತಳೆ ಡಿಟೋ	ಡಿಟೋ ...	50 ,,
ಕುಸುಂಬ ಡಿಟೋ	ಡಿಟೋ ...	25 ,,
ಹಳದಿ ಡಿಟೋ	ಡಿಟೋ ...	25 ,,
ಗ್ರೀನ್ (ಹಸರು) ಡಿಟೋ	ಡಿಟೋ ...	20 ,,
ಮೆಜಂಟ ಡಿಟೋ	ಡಿಟೋ ...	20 ,,
ನಾಫರಮಾನಿ ಡಿಟೋ	ಡಿಟೋ ...	15 ,,
ಬ್ಲೂ (ನೀಲಿ) ಡಿಟೋ	ಡಿಟೋ ...	500 ಅಡಿಗಳು
ನಂದಿ ಮರ ಸಲೆ ಅಡಿ 1ಕ್ಕೆ	...	100 ಪೌ
ವೇಲೂರು ಅರಗು 25 ಪೌನಿನ ಮಣ 1ಕ್ಕೆ	...	

N. B.—ಜೈಲ್ ಮ್ಯಾನುಫ್ಯಾಕ್ಚರಿಗೆ ಬೇಕಾಗುವ ಇನ್ನೂ ಇತರ ಸಾಮಾನುಗಳು ಸೂಪರಿಂಟೆಂಡೆಂಟರವರು ಅಪೇಕ್ಷಿಸಿದಲ್ಲಿ ಬಾಜಾರಿನಲ್ಲಿ ಮಾರುವ ದರದ ಮೇರೆಗೆ ಕಂಟ್ರಾಕ್ಟುದಾರನು ಸರಬರಾಯಿ ಮಾಡತಕ್ಕದು.

ತಾರೀಖು 11ನೆ ಡಿಸೆಂಬರು 1907.

ಸನ್ 1908ನೆ ಇಸವಿ ಫೆಬ್ರವರಿ 1ರ ಲಾಗಾಯತು ಸನ್ 1909ನೆ ಇಸವಿ ಜನವರಿ 31ರ ವರವಿಗೆ, ಆ ಎರಡು ದಿವಸಗಳೂ ಸೇರಿ, 12 ತಿಂಗಳ ತನಕ, ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿಗಳ ಉಪಯೋಗಕ್ಕಾಗಿ ಈ ಕೆಳಗೆ ನಮೂದಿಸುವ ಸರಕನ್ನು ಸರಬರಾಯಿ ಮಾಡಲು ಕಂಟ್ರಾಕ್ಟು ತೆಗೆದುಕೊಳ್ಳುವದಕ್ಕಾಗಿ ಕವರಿನಲ್ಲಿ ಹಾಕಿ ಮೊಹರು ಮಾಡಿದ ದರಖಾಸ್ತುಗಳನ್ನು ಸನ್ 1908ನೆ ಇಸವಿ ಜನವರಿ 18ನೆ ಶನಿವಾರ ಹಗಲು 10 ಘಂಟೆಯವರಿಗೆ, ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರು ತೆಗೆದುಕೊಳ್ಳುವರೆಂದು ಇದರಿಂದ ಘೋಯಿಷ್ ಮಾಡಿದೆ.

2. ಮೇಲೆ ಕಂಡ ತಾರೀಖಾದ ತರುವಾಯ ದರಖಾಸ್ತುಗಳನ್ನು ಹಿಡಿಯುವದಿಲ್ಲ.

3. ದರಖಾಸ್ತು ಕವರಿನ ಮೇಲ್ಭಾಗದಲ್ಲಿ ಬರೆದಿರಬೇಕಾದ ಮೇಲ್ವಿಳಾಸವೇನಂದರೆ :—

"ಸವದೆ ಸರಬರಾಯಿ ದರಖಾಸ್ತು"

4. ಸವದೇ ಸರಬರಾಯಿಗೆ 50 ರೂಪಾಯಿ, ನಗದಾಗಿಯಾಗಲಿ ಕರೆನ್ಸೀ ನೋಟಿನ ಮೂಲಕವಾಗಿಯಾಗಲಿ ಠೇವಣಾತಿಯನ್ನು ದರಖಾಸ್ತಿನ ಸಂಗಡ ಹಾಜರ್ಮಾಡಿದ ಹೊರತು, ದರಖಾಸ್ತುಗಳನ್ನು ಹಿಡಿಯುವದಿಲ್ಲ.

5. ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಮೇಲೆ ನಮೂದಾದ ತಾರೀಖಿನಲ್ಲಿ ಆ ಕಾಲದೊಳು ಹಾಜರಿರುವುದಕ್ಕೆ ಇಷ್ಟವುಳ್ಳಂಥಾ ದರಖಾಸ್ತುದಾರರ ರೂಬರೂ ಸದರೀ ದರಖಾಸ್ತುಗಳನ್ನು ತಮ್ಮ ಆಫೀಸಿನಲ್ಲಿ ಒಡೆಯುವರು.

6. ಈ ಕೆಳಗೆ ನಮೂದಿಸುವ ಪದಾರ್ಥವನ್ನು ಒಂದು ರೂಪಾಯಿಗೆ ಇಷ್ಟು ಪೌಂಡು ತೂಕದ ಮೇರೆ ಸರಬರಾಯಿ ಮಾಡಲಾದೀತೆಂದು ಎಲ್ಲಾ ದರಖಾಸ್ತುಗಳಲ್ಲಿಯೂ ದರವು ನಮೂದಾಗಿರತಕ್ಕದ್ದು. ಮತ್ತು ಸರಬರಾಯಿ ಮಾಡತಕ್ಕ ಪದಾರ್ಥ ಒಳ್ಳೇದಾಗಿಯೂ ಸೂಪರಿಂಟೆಂಡೆಂಟರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

ಸಂವತ್ಸರದ ಅಂದಾಜಾ ಖರ್ಚು.

ಒಣಗಿದ ಸವದೆ—ಕೈದಿಗಳ ಕೈಲಿ ಕಡಿಸತಕ್ಕದ್ದು, ತುಂಡುಗಳ ಪ್ರಮಾಣ ಒಂದು ಮೊಳ ಉದ್ದವೂ 1½ ಲಾಗಾಯತು 3 ಇಂಚು ಘಾತ್ರವಾಗಿಯೂ ಇರತಕ್ಕದ್ದು 300,000 ಪೌಂಡುಗಳು.

ಸವದೆಯು ಮೇಲೆ ಕಂಡ ಪರಿಮಾಣದ ಮೇಲೆ ಇಷ್ಟಿಷ್ಟು ಆಗಬೇಕೆಂದು ಖಾತರಿ ಯಾವುದೂ ದೊರೆಯುವುದಿಲ್ಲ.

7. ಸೂಪರಿಂಟೆಂಡೆಂಟರವರು ಯಾವ ದರಖಾಸ್ತನ್ನೇ ಆಗಲಿ ಯಾವ ಕಾರಣವನ್ನೂ ಕೊಡದೆ ತಿರಸ್ಕರಿಸುವ ಹಕ್ಕನ್ನು ಉಳಿಸಿಕೊಂಡಿದ್ದಾರೆ.

8. ಯಾರ ದರಖಾಸ್ತನ್ನು ಮಂಜೂರ್ಮಾಡಿಕೊಳ್ಳುತ್ತಾರೆಯೋ ಅಂಥಾ ದರಖಾಸ್ತುದಾರರು ಹಾಜರ್ಮಾಡಿದ ಠೇವಣೀ ಮೊಬಲಗು ಇಟ್ಟುಕೊಳ್ಳಲ್ಪಡುವದು. ಮತ್ತು ಅವರ ದರಖಾಸ್ತು ಮಂಜೂರಾಗಿದೆ ಯೆಂದು ಅವರಿಗೆ ತಿಳಿಯಪಡಿಸಿದ ಒಂದು ವಾರದೊಳಗಾಗಿ ಅವರ ಕಂಟ್ರಾಕ್ಟು ಕರಾರನ್ನು ಬರೆದುಕೊಡದೇ ಹೋದರೂ ಸರಿಯೇ, ಅಥವಾ 100 ರೂಪಾಯಿ, ನಗದಾಗಿಯಾಗಲಿ ಸರ್ಕಾರೀ ಬಾಂಡುಗಳ ಮೂಲಕವಾಗಿಯಾಗಲಿ ಸೆಕ್ಯೂರಿಟಿಯನ್ನು ಕೊಡದೆ ಇದ್ದರೂ ಸರಿಯೆ ಮೇಲೆ ಕಂಡ ಠೇವಣೀ ಮೊಬಲಗು ಶಿವಾಯಿ ಜಮೆಯಾಗಿ ತೆಗೆದುಕೊಳ್ಳಲಾದೀತು.

9. ಕಂಟ್ರಾಕ್ಟರು ಯಾ ಇಜಾರೆದಾರರಿಗೆ ನಗದು ಹಣ ಮುಂಗಡವಾಗಿ ಪಾವತಿಯಾಗಲಾರದು. ಸವದೆಯನ್ನು ಸರಬರಾಯಿ ಮಾಡಿದ್ದಕ್ಕಾಗಿ ಹಣವನ್ನು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಪ್ರತಿ ತಿಂಗಳ ಗುರ್ರೆ ತಾರೀಖಾದ ತರುವಾಯ ಸಾಧ್ಯವಾದ ಮಟ್ಟಿಗೂ ಜಾಗ್ರತೆಯಲ್ಲಿ ಪಾವತಿ ಮಾಡುವರು.

10. ಸ್ಟೋರ್ ರೂಂ ಎಂಬ ಒಂದು ಉಗ್ರಾಣವನ್ನು ಸವದೇ ಇಜಾರೆದಾರರ ವಶಕೆ ಕೊಡಲಾದೀತು; ಆತನು ಅದರಲ್ಲಿ ಸವುದೆಯನ್ನು ಇಟ್ಟುಕೊಳ್ಳತಕ್ಕದ್ದು. ಮತ್ತು ಅದರಲ್ಲಿ ಯಾವಾಗ್ಯೂ ಒಂದು ತಿಂಗಳಿಗೆ ಕಡಮೆ ಇಲ್ಲದಂತೆ ಸರಬರಾಯಿಯನ್ನು ಇಟ್ಟಿರಬೇಕು.

11. ಈ ಕಂಟ್ರಾಕ್ಟನ್ನು ಷಿಕ್ಮಿ ಇಜಾರೆಯಾಗಿ ಕೊಡಕೂಡದು.

12. ಕಂಟ್ರಾಕ್ಟು ಷರತ್ತಿಗೆ ಏನಾದರೂ ವಿರುದ್ಧವಾಗಿ ನಡೆದರೂ ಸರಿಯೆ, ಗುಣದಲ್ಲಿ ಕಡಮೆಯಾಗಿರತಕ್ಕ ಪದಾರ್ಥಗಳನ್ನು ಸರಬರಾಯಿ ಮಾಡಿದರೂ ಸರಿಯೆ, ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಮುನಾಸಬು ಅರಿತು 50 ರೂಪಾಯಿಗಳಿಗೆ ಹೆಚ್ಚದೆ ಜುರ್ಮಾನೆಯನ್ನು ವಸೂಲ್ಮಾಡಬಹುದು; ಪದೇ ಪದೇ ಕರಾರಿಗೆ ತಪ್ಪಿಹೋದರೆ ಕಂಟ್ರಾಕ್ಟನ್ನು ರದ್ದುಮಾಡಿ ಸೆಕ್ಯೂರಿಟಿಯನ್ನು ಸರಕಾರಕ್ಕೆ ಮುಟ್ಟುಗೋಲಾಗಿ ತೆಗದುಕೊಳ್ಳಬಹುದು.

13. ಕಂಟ್ರಾಕ್ಟು ಕರಾರಿಗೆ ವಿರೋಧವಾಗಿ ನಡೆದ ಸಂಗತಿಗಳೆಲ್ಲಾ ಸದರೀ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರ ಫೈಸಲೆ ಆಖೈರ್ ಫೈಸಲಾಗಿರತಕ್ಕದ್ದು.

14. ಮತ್ತೆ ಯಾವ ಸಂಗತಿ ಬೇಕಾಗಿದ್ದರೂ ಸೂಪರಿಂಟೆಂಡೆಂಟರ ಆಫೀಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

15. ಈ ಕಂಟ್ರಾಕ್ಟು ಮೈಸೂರು ಜೈಲ್ ಇನ್ಸ್ಪೆಕ್ಟರ್ ಜನರಲ್‌ರವರ ಮಂಜೂರಾತಿಗೆ ಒಳಪಟ್ಟು ಇರುವದು.

16. ಕಂಟ್ರಾಕ್ಟುದಾರರು ಇಜಾರೆಯನ್ನು ತೆಗದುಕೊಂಡ ತರುವಾಯ ತಮ್ಮ ಕರಾರಿನಂತೆ ನಡಿಯಲು ಇಷ್ಟಪಡದಿದ್ದರೆ ಒಂದು ತಿಂಗಳಿಗೆ ಮುಂಚಿತವಾಗಿಯೇ ನೋಟಿಸ ಕೊಡಬೇಕು, ಮತ್ತು ಅವರ ಸೆಕ್ಯೂರಿಟಿ ಹಣವನ್ನು ಸರಕಾರಕ್ಕೆ ಬಿಟ್ಟು ಬಿಡಬೇಕು.

17. ಇಜಾರೆದಾರರು ತಪ್ಪಿಹೋಗುವದರಿಂದ ಸರ್ಕಾರಕ್ಕೆ ಆಗುವ ನಷ್ಟವನ್ನೂ ಅಥವಾ ಕಂಟ್ರಾಕ್ಟಿನಲ್ಲಿ ನಮೂದಾಗುವ ಸವದೆಯನ್ನು ಸರ್ಕಾರದವರು ಕಂಟ್ರಾಕ್ಟು ದರಕ್ಕಿಂತಲೂ ಹೆಚ್ಚು ದರದ ಮೇರೆ ಬಾಜಾರದಲ್ಲಿ ಕೊಂಡುಕೊಂಡರೆ ಆ ನಷ್ಟವನ್ನೂ ಇಜಾರದಾರರು ಸರ್ಕಾರಕ್ಕೆ ಭರ್ತಿಮಾಡಿ ಕೊಡಬೇಕು: ವಿಚಾರ:—ಮೇಲೆ ನಮೂದಾದ ಕಂಟ್ರಾಕ್ಟುಗಳ ವಿಷಯದಲ್ಲಿ ಯಾವ ವಿಧವಾದ ರಿಯಾಯಿತಿಯೂ ದೊರೆಯಲಾರದು.

18. ಕಂಟ್ರಾಕ್ಟುದಾರರಿಂದ ಡಿಪಾಜಟ್ಟು ಮಾಡಿರುವ ಹಣವಾಗಲಿ ಅಥವಾ ಅವರಿಗೆ ಸಲ್ಲತಕ್ಕ ಇತರ ಮೊಬಲಗು ಆಗಲಿ ಕೋರ್ಟು ಮೂಲಕ ಜಫ್ತಿ ಆದರೆ ಅಂಥಾ ಕಂಟ್ರಾಕ್ಟುದಾರನ ಕಂಟ್ರಾಕ್ಟು ರದ್ದು ಮಾಡಲ್ಪಡುತ್ತೆ.

ತಾರೀಖು 11ನೆ ಡಿಸೆಂಬರು 1907.

ಇದರಿಂದ ತಿಳಿಯಪಡಿಸುವದೇನಂದರೆ,—ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಖೈದು ಮಾಡಲ್ಪಟ್ಟು ಇರುವ ಕೈದಿಗಳ ಉಪಯೋಗದ ಬಗ್ಗೆ ಸರ್ 1908ನೆ ಇಸವಿ ಫೆಬ್ರುವರಿ ಗುರ್ರೇ ಲಾಗಾಯಿತು 1909ನೆ ಇಸವಿ ಜನವರಿ 31ನೆ ತಾರೀಖಿನ ವರಿಗೂ ಆ 2 ದಿನಗಳೂ ಸೇರಿ ಕೆಳಗೆ ನಮೂದು ಮಾಡುವ ಜಿನಸುಗಳನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಗೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರಿಂದ ಸರ್ 1908ನೆ ಇಸವಿ ಜನವರಿ ತಾರೀಖು 18ನೆ ಶನಿವಾರ ಹಗಲು 10 ಘಂಟೆ ವರಿಗೂ ತೆಗದುಕೊಳ್ಳಲ್ಪಡುವವು.

2. ಮೇಲೆ ನಮೂದು ಮಾಡಿರುವ ತಾರೀಖಿನ ನಂತರ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡುವದಿಲ್ಲ.

3. ಟೆಂಡರುಗಳಿಗೆ ಈ ಕೆಳಗೆ ನಮೂದು ಮಾಡಿರುವಂತೆ ಬೇರೆ ಬೇರೆ ಮೇಲ್ ವಿಳಾಸ ಬರೆದು ಇರತಕ್ಕದ್ದು:—

1ನೆ ಧಾನ್ಯಕ್ಕೆ	..	ದರಖಾಸ್ತು
2ನೆ ಮಸಾಲೆ ಜಿನಸುಗಳಿಗೆ	..	ಡಿಟೋ
3ನೆ ಇತರ ಅವಶ್ಯಕವಾದ ಪದಾರ್ಥಗಳ ಬಗ್ಗೆ	..	ಡಿಟೋ

4. ಧಾನ್ಯಕ್ಕೆ	..	ರೂಪಾಯಿ 200
ಮಸಾಲೆ ಜಿನಸುಗಳಿಗೆ	...	,, 50
ಇತರ ಅವಶ್ಯಕವಾದ ಪದಾರ್ಥಗಳಿಗೆ	:	,, 150

ಈ ಮೇರಿಗೆ ನಗದಾಗಿ ಆಗಲಿ, ಕರ್ರೆಸಿ ನೋಟಾಗಿ ಆಗಲಿ ಠೇವಣಾತಿ ಮೊಬಲಗು ಇಲ್ಲದೆ ಬರುವ ದರಖಾಸ್ತುಗಳು ಅಂಗೀಕರಿಸಲ್ಪಡುವದಿಲ್ಲ.

5. ದರಖಾಸ್ತುಗಳು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರಿಂದ ಅವರ ಆಫೀಸಿನಲ್ಲಿ ಆ ಕಾಲದೊಳು ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರುಗಳ ರೂಬರೂಬ್ ಮೇಲ್ಕಂಡ ತಾರೀಖು ಮತ್ತು ಘಂಟೆಯಲ್ಲಿ ಖುಲ್ಲಾ ಮಾಡಲ್ಪಡುವವು.

6. ಕೆಳಗೆ ವಿವರಿಸಿರುವ ಜಿನಸುಗಳನ್ನು ಸರಬರಾಯಿ ಮಾಡುವ ದರ ರೂಪಾಯಿ 1ಕ್ಕೆ ಇಷ್ಟು ಪೌಂಡ್ ಎಂತ ದರಖಾಸ್ತುಗಳಲ್ಲಿ ನಮೂದಾಗಬೇಕು. ಮತ್ತು ಜಿನಸುಗಳು ಒಳ್ಳೇದಾಗಿರಬೇಕು.

ಸಂವತ್ಸರಕ್ಕೆ ಬೇಕಾಗಬಹುದಾದ ಜಿನಸುಗಳ ಪಟ್ಟಿ.

1ನೆ ಧಾನ್ಯ.

	ಸುಮಾರು ಬೇಕಾದ್ದು.
ಅಕ್ಕಿ	56,000 ಪೌಂಡು.
ರಾಗಿ	240,000 ,,
ತೊಗರಿಬ್ಯಾಳೆ	11,000 ,,
ಅವರೇಬ್ಯಾಳೆ	19,000 ,,

2ನೆ ಮಸಾಲೆ ಜಿನಸುಗಳು.

* ಖಾರದ ಸಾಮಾನಿಗೆ ಬೇಕಾದ ಜಿನಸುಗಳು		* ಖಾರದ ಸಾಮಾನು ಯಾ ಪುಡಿ	4,200 ಪೌಂಡು.
1 ಪೌಂಡ್	ಮೆಣಸಿನಕಾಯಿ	ಈರುಳ್ಳಿ	6,000 ,,
12 ಔನ್ಸ್	ಕೊತ್ತುಂಬರೀ ಬೀಜ	ಬೆಳ್ಳುಳ್ಳಿ	600 ,,
2 ,,	ಅರಿಸಿನ	ಹುಣಸೇಹಣ್ಣು	6,000 ,,
1 ,,	ಜೀರಿಗೆ	ಉಪ್ಪು	8,400 ,,
6 ,,	ಮೆಣಸು	ಮೆಣಸು	100 ,,
3 ,,	ಪೋಸ್ತುಕಾಯಿ		
1 ,,	ಮೆಂಥ್ಯ		
1 ,,	ಸಾಸಿವೆ		
1 ,,	ಕರಿಬೇವು ಸೊಪ್ಪು		

3ನೆ ಇತರ ಅವಶ್ಯಕವಾದ ಪದಾರ್ಥಗಳು.

ಮೊಸರು ..	24,000 ಪೌಂಡ್.	ರೊಟ್ಟಿ ..	1,000 ಪೌಂಡು.
ಒಳ್ಳೆ ಯಂಣೆ ..	2,400 ,,	ಹಾಲು ..	3,600 ಇಂಪೀರಿಯಲ್ ಪೈಂಟುಗಳು.
ತುಪ್ಪ ..	1,200 ,,		
ತರಕಾರಿ ..	72,000 ,,	ಸೀಗೇಕಾಯಿ ..	400 ಪೌಂಡು.
ರವೆ ..	200 ,,	ಗೇರುಬೀಜ ..	300 ,,
ಸಕ್ಕರೆ ..	300 ,,	ದೀಪದೆಂಣೆ ..	350 ,,
ಕಾಫಿ ..	50 ,,	ಪೊರಕೆಗಳು ..	1,500 ಅದದು
ಟೀ ..	10 ,,	ಕೊಬ್ಬರಿ ಎಂಣೆ ..	100 ಪೌಂಡು

ಮೇಲೆ ನಮೂದು ಮಾಡಿರುವ ಜಿನಸಿನ ಮೊತ್ತಗಳು ಇಷ್ಟೇ ತೆಗದುಕೊಳ್ಳುತ್ತೇವೆಂದು ಖಾತರ್ ದೊರೆಯಲಾರದು.

7. ಕಂಟ್ರಾಕ್ಟುದಾರನು ಕೈದಿಗಳಿಂದ ಬೀಸಲ್ಪಡುವುದಕ್ಕೆ ರಾಗಿ ಸರಬರಾಯಿ ಮಾಡಬೇಕು. ಹಾಗೆ ತಯಾರಾದ ಹಿಟ್ಟನ್ನು ಕೈದಿಗಳಿಗೆ ಕೊಡಲ್ಪಡುವದು. ಹಾಗೆ ಸರಬರಾಯಿ ಆದ ರಾಗಿ ಹಿಟ್ಟಿಗೆ ಸರಿಯಾದ ರಾಗಿ ಇಷ್ಟೆಂದು ಲೆಖ್ಖ ಮಾಡಿ ಆ ರಾಗಿ ದರದ ಮೇಲೆ ಹಣ ಪಾವತಿಯಾದೀತು.

8. ಸೂಪರಿಂಟೆಂಡೆಂಟರವರು ಅತ್ಯಂತ ಕಮ್ಮಿ ದರವನ್ನಾಗಲಿ ಅಥವಾ ಮತ್ತೆ ಯಾವ ದರವನ್ನೇ ಆಗಲಿ ಅಂಗೀಕರಿಸಲು ಬದ್ಧರಾಗಿರುವದಿಲ್ಲ. ಮತ್ತು ಕಾರಣವನ್ನು ಹೇಳದೆ ಬೇಕಾದ ದರಖಾಸ್ತನ್ನು ತಿರಸ್ಕರಿಸಬಹುದು.

9. ಮಂಜೂರಾದ ದರಖಾಸ್ತುದಾರನ ಠೇವಣಿ ಮೊಬಲಗು ಇಟ್ಟುಕೊಳ್ಳಲ್ಪಡುವದು. ಮತ್ತು ಅವರ ದರಖಾಸ್ತು ಮಂಜೂರಾದ ಸಂಗತಿ ಅವರಿಗೆ ತಿಳಿಸಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಅವರು ಕಂಟ್ರಾಕ್ಟು ಮುಚ್ಚಳಿಕೆ ಬರದುಕೊಡುವುದಕ್ಕೆ ತಪ್ಪಿದರೆ, ಅಥವಾ ನಗದಾಗಿ ಆಗಲಿ ಗವರ್ನಮೆಂಟ್ ಬಾಂಡ್ ಮೂಲಕವಾಗಿಯಾಗಲಿ ಧಾನ್ಯಕ್ಕೆ 500 ರೂಪಾಯಿ.

ಮಸಾಲೆ ಜಿನಸಿಗೆ 100

ಇತರ ಅವಶ್ಯಕವಾದ ಪದಾರ್ಥಗಳಿಗೆ 300

ಈ ಮೇರೆ ಜಾಮೀನ್ ಕೊಡಲು ತಪ್ಪಿದರೆ ಅಂಥಾ ಠೇವಣಿ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುವದು.

10. ಕಂಟ್ರಾಕ್ಟುದಾರರಿಗೆ ನಗದಾಗಿ ಅಡ್ವಾನ್ಸ್ ಏನೂ ಕೊಡುವದಿಲ್ಲ. ಸರಬರಾಯಿ ಮಾಡಲ್ಪಟ್ಟಂಥಾ ಸಾಮಾನ್ ಕಿಮ್ಮತ್ತು ಪ್ರತಿ ತಿಂಗಳ 1ನೆ ತಾರೀಖು ನಂತರ ಕಂಟ್ರಾಕ್ಟುದಾರರಿಗೆ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರಿಂದ ಪಾವತಿ ಮಾಡಲ್ಪಡುವದು.

11. ಉಗ್ರಾಣದ ಕೊಠಡಿಗಳು ಸ್ವಾಧೀನ ಕಂಟ್ರಾಕ್ಟುದಾರರಿಗೆ ಕೊಡಲ್ಪಡುವದು. ಅವುಗಳಲ್ಲಿ ಅವರು ಕೆಟ್ಟುಹೋಗದೆ ಇರತಕ್ಕ ಎಲ್ಲಾ ಜಿನಸುಗಳನ್ನೂ ಒಂದು ತಿಂಗಳ ಸರಬರಾಯಿಗೆ ಕಮ್ಮಿ ಇಲ್ಲದಂತೆ ಯಾವಾಗಲೂ ಇಟ್ಟಿರಬೇಕು. ಕೆಟ್ಟುಹೋಗತಕ್ಕಂಥಾ ಪದಾರ್ಥಗಳು ಅಂದರೆ ತರಕಾರಿ ಮುಂತಾದ್ದು ಪ್ರತಿದಿನವೂ ಬೆಳಗಿನ 8 ಘಂಟೆಗೆ ಜೈಲಿನಲ್ಲಿ ಹಾಜರ್ಮಾಡಬೇಕು.

12. ಈ ಕಂಟ್ರಾಕ್ಟು ಒಳಗುತ್ತಿಗೆಯಾಗಿ ಕೊಡಬಾರದು.

13. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮುಚ್ಚಳಿಕೆಯ ಷರತ್ತಿಗೆ ತಪ್ಪಿ ನಡೆದರೂ ಅಥವಾ ನಾಲಾಯಖಾದ ಸಾಮಾನನ್ನ ಸರಬರಾಯಿ ಮಾಡಿದರೂ ಜೈಲ್ ಸೂಪರಿಂಟೆಂಡೆಂಟರು ಅವರ ಯುಕ್ತಾನುಸಾರ 50 ರೂಪಾಯಿಗೆ ಮೀರದ ಜುರ್ಮಾನೆ ಹಾಕುವರು ಮತ್ತು ಪದೇಪದೇ ಆ ಮುಚ್ಚಳಿಕೆ ಷರತ್ತಿಗೆ ವಿರೋಧವಾಗಿ ನಡೆದರೆ ಆ ಕಂಟ್ರಾಕ್ಟು ರದ್ದುಮಾಡಿ ಠೇವಣಾತಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ತಕ್ಕೊಳ್ಳಲ್ಪಟ್ಟೀತು.

14. ಮುಚ್ಚಳಿಕೆ ಷರತ್ತಿಗೆ ತಪ್ಪಿ ನಡದ ಎಲ್ಲಾ ಪ್ರಮೇಯಗಳಲ್ಲೂ ಸೂಪರಿಂಟೆಂಡೆಂಟರವರಿಂದ ಮಾಡಲ್ಪಟ್ಟ ಫೈಸಲ್ ಅಖೈರಾಗಿರತಕ್ಕದ್ದು.

15. ಕಂಟ್ರಾಕ್ಟುದಾರನು ಕೈದಿಗಳ ಉಪಯೋಗಕ್ಕಾಗಿ ಬೇಕಾಗಿರುವ ಹಾಲನ್ನೂ, ತರಕಾರಿಯನ್ನೂ ಮತ್ತು ತೋಟದ ಬೆಳಸನ್ನೂ ಮುಚ್ಚಳಿಕೆಯಲ್ಲಿ ನಮೂದಾಗುವ ದರದಂತೆ ಜೈಲಿನಿಂದ ಕೊಂಡುಕೊಳ್ಳಲು ಬದ್ಧನಾಗಿರುವನು.

16. ಈ ವಿಷಯವಾಗಿ ಇನ್ನೇನಾದರೂ ಹೆಚ್ಚು ವರ್ತಮಾನ ಅಗತ್ಯವಾದಲ್ಲಿ ಸೂಪರಿಂಟೆಂಡೆಂಟರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

17. ಅಂಗೀಕರಿಸಿದ ದರಖಾಸ್ತು ಮೈಸೂರು ದೇಶದ ಜೈಲುಗಳ ಇನ್ಸ್‌ಪೆಕ್ಟರ್ ಜನರಲರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

ಇವರು ದರಖಾಸ್ತುಗಳು ಎಲ್ಲವನ್ನೇ ಆಗಲಿ ಅಥವಾ ಯಾವ ದರಖಾಸ್ತನ್ನೇ ಆಗಲಿ ತಿರಸ್ಕರಿಸಲು ಅಧಿಕಾರವನ್ನ ಇಟ್ಟುಕೊಂಡಿದಾರೆ.

18. ಕಂಟ್ರಾಕ್ಟುದಾರರು ತಮ್ಮ ಕರಾರು ಮೇರಿಗೆ ನಡೆಯಲು ಇಷ್ಟವಿಲ್ಲದವರಾಗಿದ್ದರೆ, ಅಥವಾ ಶಕ್ತಿ ಇಲ್ಲದವರಾಗಿದ್ದರೆ, ಅವರು ಕೊನೇಪಕ್ಷ ಒಂದು ತಿಂಗಳು ಮುಂಚಿತವಾಗಿ ನೋಟೀಸ್ ಕೊಟ್ಟು ತಮ್ಮ ಠೇವಣಾತಿ ಹಣವನ್ನ ಸರಕಾರಕ್ಕೆ ದಂಡವಾಗಿ ಬಿಟ್ಟುಬಿಡಬೇಕು.

19. ಆ ಪ್ರಕಾರ ಸದರಿ ಕಂಟ್ರಾಕ್ಟುದಾರರು ತಮ್ಮ ಕರಾರಿಗೆ ತಪ್ಪಿದ್ದರಿಂದ ಅಥವಾ ಅವರ ಮುಚ್ಚಳಿಕೆಯಲ್ಲಿ ನಮೂದಾದ ಪದಾರ್ಥಗಳನ್ನು ಸರಕಾರದವರು ಸ್ಥಳೀಯವಾದ ಬಾಜಾರಿನಲ್ಲಿ ಮುಚ್ಚಳಿಕೆ ದರಕ್ಕಿಂತಲೂ ಹೆಚ್ಚು ದರ ಕೊಟ್ಟು ತಕ್ಕೊಳ್ಳುವದರಿಂದ ಸರಕಾರದವರಿಗೆ ಉಂಟಾಗಬಹುದಾದ ನಷ್ಟವನ್ನ ಭರ್ತೀ ಮಾಡುವದಕ್ಕೂ ಸಹ ಬದ್ಧರಾಗಿರಬೇಕು.

ಷರಾ.—ಈ ಕಂಟ್ರಾಕ್ಟುಗಳಲ್ಲಿ ಯಾವ ವಿಧವಾದ ರಿಯಾಯತಿಯನ್ನೂ ಮಾಡೋಣಾಗಲಾರದು.

ಪಿ. ಎಸ್. ಅಚ್ಯುತರಾವ್,
ಸೂಪರಿಂಟೆಂಡೆಂಟ್.

ರೆವಿನ್ಯೂ ಕಮಿಷನರ್ ಆಫೀಸ್.

ತಾರೀಖು 10ನೆ ಡಿಸೆಂಬರು 1907ನೆ ಇಸವಿ.

ಸರ್‍ಕ್ಯುಲರ್.

ತಾಲ್ಲೂಕು ಅಮಲ್ದಾರರುಗಳು ಮತ್ತು ಇತರ ಉದ್ಯೋಗಸ್ಥರುಗಳು ಇವರುಗಳಿಗೆ ಕೊಟ್ಟಿರುವ ಇಂಪ್ರೆಸ್ಟು ಮತ್ತು ಪರಮೆನೆಂಟು ಅಡ್ವಾನ್ಸುಗಳ ಬಾಬತು ಮೊಬಲಗುಗಳನ್ನು ರೂಲ್ಸಿನಲ್ಲಿ ನಮೂದಿಸಲ್ಪಟ್ಟ ಕೆಲಸಗಳಿಗೆ ಮಾತ್ರವೇ ಉಪಯೋಗಿಸತಕ್ಕದ್ದು ಮತ್ತು ಕರ್ಚು ಆದ ಮೊಬಲಗನ್ನು ಕೂಡಲೇ ಕ್ರಮಪಡಿಸತಕ್ಕದ್ದು. ತಪ್ಪಿದರೆ ಸದರಿ ಆಫಿಸರವರು ನಿಂದಾರ್ಹರಾಗುವರಲ್ಲದೆ ಇವರುಗಳಿಂದ ಲೆಕ್ಕದಲ್ಲಿ ಕಮ್ಮಿ ಬಂದ ಮೊಬಲಗು ವಸೂಲ್ಮಾಡಲ್ಪಡಲಾದೀತೆಂದು ಡೆಪ್ಯುಟಿ ಕಮಿಷನರುಗಳಿಗೆ 1907ನೆ ಇಸವಿ ಅಕ್ಟೋಬರು 9ನೆ ತಾರೀಖಿನ 101—106ನೆ ನಂಬರಿನಲ್ಲಿ ಈ ಆಫೀಸಿನಿಂದ ಸರ್‍ಕ್ಯುಲರ್ ಮೂಲಕ ತಿಳಿಯಪಡಿಸಿ ಇರುತ್ತದೆಯಷ್ಟೆ. ಇದೇ ವಿಷಯವಾಗಿ ಗೌರ್ನಮೆಂಟಿನಿಂದ ಸಾದರಾಗಿರುವ 1907ನೆ ಇಸವಿ ಡಿಸೆಂಬರ್ 5ನೆ ಮಕ್ರೂಂ R. 3505-6—L. R. 207—07-2ನೆ ನಂಬರು ಗೌರ್ನಮೆಂಟು ಪ್ರೊಸೀಡಿಂಗ್ಸ್ ಕಾಪಿಯನ್ನು ಸಂಬಂಧಪಟ್ಟ ಆಫಿಸರುಗಳ ತಿಳುವಳಿಕೆ ಮತ್ತು ನಡವಳಿಕೆ ಬಗ್ಗೆ ಕಳುಹಿಸಿರುವದಲ್ಲದೆ ಡೆಪ್ಯುಟಿ ಕಮಿಷನರ್‌ಗಳು ಅರಸೀಕೆರೆ ತಾಲ್ಲೂಕಿನಲ್ಲಿ ಕಂಡುಬಂದ ಅಕ್ರಮಗಳು ತಮ್ಮತಮ್ಮ ಡಿಸ್ಟ್ರಿಕ್ಟುಗಳಲ್ಲಿ ನಡಿಯದರೀತಿ ನಿಗಾ ಇಡಬೇಕಾಗಿ ತಿಳುಹಿಸಿ ಇದೆ.

* * * * * * *

ಗೌರ್ನಮೆಂಟು ಪ್ರೊಸೀಡಿಂಗ್ಸ್ ನಂಬರು R. 3505-6—L. R. 207—07-2.

ತಾರೀಖು 5ನೆ ಡಿಸೆಂಬರು 1907ನೆ ಇಸವಿ.

ಅರಸೀಕೆರೆ ತಾಲ್ಲೂಕಿನಲ್ಲಿ ಕಂಡುಬಂದ ಲೋಪಗಳು, ಸದರಿ ತಾಲ್ಲೂಕು ಚಾರ್ಜಿನಲ್ಲಿ ಇದ್ದ ಆಯಾ ಅಮಲ್ದಾರುಗಳಿಗೂ ಮತ್ತು ತಾಲ್ಲೂಕು ಟ್ರೆಜರಿಯನ್ನು ತನಿಖೆ ಮಾಡಿದ ಆಫಿಸರುಗಳಿಗೂ ಶ್ಲಾಘನೀಯವಾಗಿರುವದಿಲ್ಲ. ಈಗಿನ ಅಮಲದಾರರು ಈ ಲೋಪಗಳು ತಮ್ಮ ಗೋಚರಕ್ಕೆ ಬರಲಿಲ್ಲವೆಂದು ಕೊಟ್ಟ ಉದಹರಣೆಯಿಂದ ಕರ್ಚು ವಿಚಾರದಲ್ಲಿಯೂ ಮತ್ತು ಕ್ರಮವಾಗಿ ಲೆಕ್ಕ ಇಡುವದರಲ್ಲಿಯೂ ಸಹಾ ಇವರು ಹೆಚ್ಚು ಮೇಲ್ವಿಚಾರಣೆ ಮಾಡುತ್ತಿರಲಾರರೆಂದು ಸ್ಪಷ್ಟವಾಗಿ ತೋರಿಸುತ್ತದೆ. ಲೆಕ್ಕಗಳಲ್ಲಿ ಇಂಥಾ ಲೋಪಗಳು ಕಂಡು ಬರುವ ಸಂದರ್ಭಗಳು ಹೆಚ್ಚುತ್ತಿರುವದರಿಂದ, ಸದರಿ ತಾಲ್ಲೂಕು ಚಾರ್ಜಿನಲ್ಲಿ ಇದ್ದ ಯಾವ ಯಾವ ಅಮಲದಾರರ ಬೇಹುಷಾರಿಯಿಂದ ಈರೀತಿ ನಡಿಯಿತೋ ಅಂಥಾ ಅಮಲದಾರರುಗಳ ಹೆಸರು, ಈ ಪೈಕಿ ಯಾರು ಯಾರು ಎಷ್ಟು ಮೊಬಲಗಿಗೆ ಜವಾಬ್ದಾರರೆಂಬ ತಪಶೀಲನ್ನು, ಅವರ ನಡತೆ ವಿಷಯವಾಗಿ ಸರ್ಕಾರದವರು ನೋಟೀಸ್ ಮಾಡುವ ಬಗ್ಗೆ, ರೆವಿನ್ಯೂ ಕಮಿಷನರವರು ರಿಪೋರ್ಟು ಮಾಡಬೇಕಲ್ಲದೆ ಇಂಪ್ರೆಸ್ಟು ಲೆಕ್ಕಗಳನ್ನು ಅವಶ್ಯಕ ಕಂಡುಬಂದಲ್ಲಿ ಈ ಲೋಪಗಳಿಗೆ ಜವಾಬುದಾರರಾದವರಿಂದ ಹಣವನ್ನ ವಸೂಲ್ ಜಮೆ ಕಟ್ಟಿಸಿ ಸರಿಪಡಿಸತಕ್ಕದ್ದಾಗಿರುತ್ತೆ.

(ಸೈನ್ಡ್) ಪಿ. ಜಿ. ಡಿಸೋಜಾ,
ಫಾರ್ ಗವರ್ನ್ಮೆಂಟ್ ಸೆಕ್ರಿಟೆರಿ.

(ಸೈನ್ಡ್) ಎ. ರಂಗಸ್ವಾಮೈಯ್ಯಂಗಾರ್,
ರೆವಿನ್ಯೂ ಕಮಿಷನರ್.

ಮೈಸೂರ ಗೆಜೆಟ್ ಚಂದಾದಾರು ವಗೈರೆ.

ಮೈಸೂರ ಗೆಜೆಟ್ಟು ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ ..	7	0	3	8
ಚಷ್ ಮಾಹೇ ಯಾ ಕ್ವಾರ್ಟರಿಗೆ			ಧಾವಶಾಷಾಯಿ ಪ್ರಕಾರ ದರಗಳು	

	ರೂ.	ಆ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.	0	8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮರ್ಕುಂ 155ನೆ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್‌ದಾರರಿಂದ ಒಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ್ 21ನೆ ಮರ್ಕುಂ 24205—6—ಜಿ. 6200ನೆ ನಂಬರ ಗವರ್ನಮೆಂಟ್ ಆರ್ಡರ್ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು ನಾಡ್ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

	ರೂ.	ಆ.
ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇಷನ್ ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ನೋಟಿಸ್‌ಗಳು:—		
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ ..	2	8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ ..	1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಗೆ ನೋಟಿಸ್‌ಗಳಿಗೆ:—		
ಮೊದಲನೇ ಸಲಕ್ಕೆ	5	0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ	2	8
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗೆರೆ ಚಾರ್ಜ್ ಪ್ರಕಟಿಸಲ್ಪಡುತ್ತವೆ.		
ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಗೆ ರೆವಿನ್ಯೂ ಆಫಿಸರುಗಳು ಕೊಡುವ ನೋಟಿಸ್‌ಗಳಿಗೆ:—		
ಮೊದಲನೇ ಸಲಕ್ಕೆ ಪುಟ 1ಕ್ಕೆ	10	0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ ,,	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—		
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಙ್ತಿ 1ಕ್ಕೆ	0	8
ಎರಡನೇ ದಫಾ ಡಿಟೋ ಡಿಟೋ	0	6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ ..	0	4

ಷರಾ.—ಗೆಜೆಟ್ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜು ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಗೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ್ ಮಜಕೂರಿಗೆ ದಾಖಲೆ ಬಗ್ಗೆ ರವಾನಿಸತಕ್ಕದ್ದು. ಮನಿ ಆರ್ಡರ್ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ್ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಗಾದ ದರಖಾಸ್ತುಗಳು ಮೈಸೂರ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ಒಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಆದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಇಲ್ಲ.

ಸಿ. ಹಚ್. ಪಿಟ್ಸ್,
ಕಂಪೈಲರ್, ಮೈಸೂರ ಗೆಜೆಟ್.

ಮೈಸೂರ ಗೆಜೆಟ್.

ನಂ. 42.] ಸರ್ಕಾರದಿಂದ ಛಾಯಿಸ್ಪ್ ಆದ್ದು. [ನಂ. 3.

ಬೆಂಗಳೂರು, ಗುರುವಾರ, ಜನವರಿ ತಾ॥ 17, ಸನ್ 1907.

III ನೆ ಭಾಗ.

ಲೆಜಿಸ್ಲೇಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೇಟಿವ್ ಇಲಾಖೆ.

ತಾರೀಖು 20ನೆ ಡಿಸೆಂಬರ 1906.

ನಂ. ಜೆ. 1706—ಲೆಜಿಸ್. 8—06—4, 1903ನೆ ಇಸವಿಯ 1ನೆ ನಂಬರಿನ ಮೈಸೂರು ರೆಜಿಸ್ಟ್ರೇಷನ್ ರೆಗ್ಯುಲೇಷನಿನ 78ನೆ ಪ್ರಕರಣಾನುಸಾರವಾಗಿ, ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, 1905ನೆ ಇಸವಿ ಫೆಬ್ರವರಿ 28ನೆ ತಾರೀಖಿನ ಜೆ. 2483-ರೆಜಿಸ್. 12–4ನೆ ನಂಬರಿನ ಇಸ್ತಿಹಾರ್‌ನಾಮೆಯ 17ನೆ ಕಲಮಿನಲ್ಲಿ ನಮೂದಾದ ರುಸುಮಿನ ದರಕ್ಕೆ ಬದಲಾಗಿ ಈ ಕೆಳಗೆ ನಮೂದು ಮಾಡುವ ದರವನ್ನು 1907ನೆ ಇಸವಿಯ ಜನವರಿ ಮೊದಲನೆ ತಾರೀಖಿನಿಂದ ಮತ್ತು ಅದಕ್ಕೆ ತರುವಾಯ ಜಾರಿಯಲ್ಲಿ ತರಬೇಕೆಂದು ಹುಕುಂ ಕೊಡಲು ಅಪ್ಪಣೆ ದಯಪಾಲಿಸಿರುತ್ತಾರೆ :—

"XVII. ರೆಜಿಸ್ಟರ್ ಮಾಡಲ್ಪಡುವ ಎಲ್ಲಾ ಪತ್ರಗಳ ಮೇಲೂ, 300 ಕ್ಕಿಂತ ಹೆಚ್ಚಿಗೆ ಮಾತುಗಳಿದ್ದರೆ, 300ರ ಮೇಲೆ ಇರುವ ಪ್ರತಿ 100 ಅಥವಾ 100ಕ್ಕೆ ಕಡಮೆಯಾದ ಮಾತುಗಳಿಗೆ 4 ಆಣೆಯ ದರದಂತೆ ರುಸುಮನ್ನು ವಸೂಲ್ಮಾಡತಕ್ಕದ್ದು."

ತಾರೀಖು 20ನೆ ಡಿಸೆಂಬರ 1906.

ನಂ. ಜೆ. 1709–ರೆಜಿಸ್. 11—06—6, 1903ನೆ ಇಸವಿಯ 1ನೆ ನಂಬರಿ ಮೈಸೂರು ರೆಜಿಸ್ಟ್ರೇಷನ್ ರೆಗ್ಯುಲೇಷನಿನ 78ನೆ ಪ್ರಕರಣಾನುಸಾರವಾಗಿ, ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, 1878ನೆ ಇಸವಿಯ ಆಗಸ್ಟು 12ನೆ ತಾರೀಖಿನ 131ನೆ ನಂಬರಿನ ಇಸ್ತಿಹಾರ್‌ನಾಮೆಯಲ್ಲಿ ಪ್ರಕಟಿಸಲ್ಪಟ್ಟ ರುಸುಮಿನ ಪಟ್ಟಿಯ 8ನೆ ಕಲಮಿನಲ್ಲಿ ಕಾಣಿಸಿದ ರುಸುಮಿನ ದರಕ್ಕೆ ಬದಲಾಗಿ ಈ ಕೆಳಗಿನ ದರವನ್ನು 1907ನೆ ಇಸವಿಯ ಜನವರಿ ಮೊದಲನೆ ತಾರೀಖಿನಿಂದ ಸೇರಿಸಬೇಕೆಂದು ಅಪ್ಪಣೆ ದಯಪಾಲಿಸಿರುತ್ತಾರೆ :—

VIII. ಒಂದೇಒಂದು ಖತಾಯಿತಿಯನ್ನು ಅಥವಾ ದಸ್ತೈವಜನ್ನು ಹುಡುಕುವುದು ಅಥವಾ ಪರೀಕ್ಷಿಸಿ ನೋಡುವುದು :—

(1) ಯಾವ ವರ್ಷದ ಬುಕ್ಕುಗಳಲ್ಲಿ ಹುಡುಕುವಿಕೆ ನಡೆಯುವದೋ ಆ ಮೊದಲನೆ ವರ್ಷಕ್ಕೆ ಪ್ರತಿ ಖತಾಯಿತಿ ಅಥವಾ ದಸ್ತೈವಜಿಗೆ ....ಒಂದು ರೂಪಾಯಿ.

(2) ಹಾಗೆ ಬುಕ್ಕುಗಳಲ್ಲಿ ಹುಡುಕುವಿಕೆ ನಡೆಯುವ ಪ್ರತಿ ಇತರ ವರ್ಷಕ್ಕೂ ಪ್ರತಿ ಖತಾಯಿತಿಗೆ ಅಥವಾ ದಸ್ತೈವಜಿಗೆ..........................ನಾಲ್ಕು ಆಣೆ.

ತಾರೀಖು 28ನೆ ಡಿಸೆಂಬರ್ 1906.

ನಂಬರು 5618—ಮೆಡಿ. 43-04—4.

ಪ್ರಕಟನೆ.

1906ನೆ 1ನೆ ನಂಬರ್ ಮೈಸೂರು ಸಿಡುಬು ಹಾಕುವ ರೆಗ್ಯುಲೇಷನಿನ ಮೇರೆ ಮಾಡಿದ ಇದರಡಿ ಕಂಡ ಮಸೂದಾ ಯಾ ಚಿತ್ತು ನಿಬಂಧನೆಗಳನ್ನು ಸರ್ವಜನರ ತಿಳುವಳಿಕೆಯ ಬಗ್ಗೆ ಪ್ರಕಟಿಸಿ ಇದೆ :—

2. ಗೆಜೆಟನಲ್ಲಿ ಮೇಲ್ಕಂಡ ಮಸೂದಾ ಯಾ ಚಿತ್ತು ನಿಬಂಧನೆಗಳು ಪ್ರಕಟನೆಯಾದ ತೇದಿಯಿಂದ ಎರಡೂವರೆ ತಿಂಗಳುಗಳ ಕೊನೆಯಲ್ಲಿ ಅವು ಆಲೋಚನೆಗೆ ತೆಗೆದುಕೊಳ್ಳಲ್ಪಡುವುವು ; ಮತ್ತು ಆ ಕಾಲದೊಳಗೆ ಬರುವ ಎಲ್ಲಾ ಸೂಚನೆಗಳೂ ಗುಣದೋಷ ನಿರೂಪಣೆಗಳೂ ಕ್ರಮವಾಗಿ ಪರ್ಯಾಲೋಚಿಸಲ್ಪಡುವುವು.

ಅಪ್ಪಣೆಯ ಮೇರೆಗೆ,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಸರ್ಕಾರಿ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.

1906ನೆ ಮೈಸೂರು ಸಿಡುಬು ಹಾಕುವ ರೆಗ್ಯುಲೇಷನಿನ ಪ್ರಕಾರದ ನಿಬಂಧನೆಗಳು.

1906ನೆ ಮೈಸೂರು ಸಿಡುಬು ಹಾಕುವ ರೆಗ್ಯುಲೇಷನಿನ 2, (1) ನೆ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ನಡೆಸುವುದರಲ್ಲಿ, ಎಲ್ಲಿ ಸಿಡುಬು ಹಾಕೋಣವು ಅವಶ್ಯವಾಗಿರತಕ್ಕದೆಂದು ಪ್ರಕಟಿಸಿದೆಯೋ ಅಂಥಾ ಸ್ಥಳೀಯ ಪ್ರದೇಶಗಳಲ್ಲಿ, ಅಂಥಾ ಪ್ರಕಟನೆಯು ಉಪಯೋಗದಲ್ಲಿರುವ ಗಡುವಿನ ವರೆಗೂ ಅಲ್ಲಿನ ಜನಗಳಿಗೆ ಸಿಡುಬು ಹಾಕೋಣವನ್ನು ಕ್ರಮ ಪಡಿಸುವುದಕ್ಕೆ ಈ ಕೆಳಗಿನ ನಿಬಂಧನೆಗಳನ್ನು ವಿಧಿಸಲು ಶ್ರೀಮನ್ಮಹಾರಾಜರವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ :—

1. ವಿಷಯದಲ್ಲಿ ಅಥವಾ ಪೂರ್ವಾಪರ ಸಂಬಂಧದಲ್ಲಿ ಏನಾದರೂ ವಿರೋಧವಾಗಿದ್ದ ಹೊರತು ಈ ನಿಬಂಧನೆಗಳಲ್ಲಿ,

"ತಂದೆ ತಾಯಿ" — (1) ತಂದೆ ತಾಯಿ ಎಂದರೆ ಒಂದು ಔರಸ ಮಗುವಿನ ತಂದೆ ಅಥವಾ ತಾಯಿ ಮತ್ತು ಒಂದು ಅನೌರಸ ಮಗುವಿನ ತಾಯಿ ಎಂದು ಅರ್ಥ.

"ರಕ್ಷಕ" — (2) ರಕ್ಷಕ ಎಂದರೆ, ವ್ಯವಹಾರಶಾಸ್ತ್ರ ರೀತ್ಯಾ ಅಥವಾ ಸಹಜವಾದ ಹಕ್ಕಿನಿಂದ, ಅಥವಾ ಅಂಗೀಕರಿಸಲ್ಪಟ್ಟ ವಾಡಿಕೆಯಿಂದ ಯಾವುದಾದರೂ ಮಗುವಿನ ರಕ್ಷಣೆ, ಪೋಷಣೆ, ಮತ್ತು ಬದರಿಕೆಯು ಯಾವನಿಗೆ ಸಂಬಂಧಪಟ್ಟಿದೆಯೋ ಅಥವಾ ಯಾವನು ಯಾವುದಾದರೂ ಮಗುವಿನ ರಕ್ಷಣೆ, ಪೋಷಣೆ ಅಥವಾ ಬದರಿಕೆಯನ್ನು ಅಂಗೀಕರಿಸಿರುತ್ತಾನೆಯೊ ಅಥವಾ ವಹಿಸಿರುತ್ತಾನೆಯೊ ಅಥವಾ ಯಾವುದಾದರೂ ಮಗುವಿನ ರಕ್ಷಣೆ ಅಥವಾ ಬದರಿಕೆಯು ಇದಕ್ಕಾಗಿ ನ್ಯಾಯವಾಗಿ ಅಧಿಕಾರ ಹೊಂದಿರುವ ಯಾವನಾದರೂ ಅಧಿಕಾರಿಯಿಂದ ಯಾವನಿಗೆ ಒಪ್ಪಿಸಲ್ಪಟ್ಟಿದೆಯೊ ಅಂಥಾ ಯಾವನಾದರೂ ಮನುಷ್ಯನೆಂದು ಅರ್ಥ.

"ಸಿಡುಬು ಹಾಕುವವನು" — (3) ಸಿಡುಬು ಹಾಕುವವನು ಎಂದರೆ ಸಿಡುಬಿನ ವ್ಯಾಧಿಯು ಬಾರದಂತೆ ಜನಗಳಿಗೆ ಸಿಡುಬು ಹಾಕಲು ಸರ್ಕಾರಿ ಸ್ಯಾನಿಟರಿ ಕಮಿಷನರಿಂದ ಅಧಿಕಾರ ಕೊಡಲ್ಪಟ್ಟಿರುವ ಯಾವನಾದರೂ ವೈದ್ಯ ಅಥವಾ ಇತರ ಕ್ರಮವಾಗಿ ಯೋಗ್ಯತೆಯನ್ನು ಹೊಂದಿದ ಮನುಷ್ಯನೆಂದು ಅರ್ಥ ಮತ್ತು ಆ ಮಾತಿನಲ್ಲಿ ಸಿಡುಬಿನ ಸೂಪರಿಂಟೆಂಡೆಂಟುಗಳೂ ಸೇರಿರುತ್ತಾರೆ.

"ವೈದ್ಯ" — (4) ವೈದ್ಯನು ಎಂದರೆ ಒಂದು (ಯೂನಿವರ್ಸಿಟಿ) ವಿಶ್ವವಿದ್ಯಾಲಯದ ಅಥವಾ ಕಾಲೇಜಿನ (ಡಿಗ್ರಿ) ಪದವಿಯನ್ನು ಅಥವಾ ವೈದ್ಯದಲ್ಲಿ ಸನ್ನದನ್ನು ಅಥವಾ ಒಂದು ಪರಿಗ್ರಹಿಸಲ್ಪಟ್ಟ ವೈದ್ಯಪಾಠಶಾಲೆಯಿಂದ ಯೋಗ್ಯತಾ ಪತ್ರಿಕೆಯನ್ನು ಹೊಂದಿ ಸಿಡುಬು ಹಾಕೋಣವು ಅವಶ್ಯಕವಾಗಿ ಮಾಡಲ್ಪಟ್ಟಿರುವ ಸ್ಥಳೀಯ ಪ್ರದೇಶದಲ್ಲಿ ಉದ್ಯೋಗಿಸಲ್ಪಟ್ಟಿರುವ ಹಾಸ್ಪಿಟಲ ಆಸಿಸ್ಟೆಂಟಿನ ಅಥವಾ ಮೇಲ್ಪಟ್ಟ ಸ್ಥಾನದ ಮನುಷ್ಯನೆಂದು ಅರ್ಥ.

"ಮಗು" — (5) ಮಗು ಎಂದರೆ ಆರು ತಿಂಗಳಿಗೆ ಮೇಲ್ಪಟ್ಟು ಹನ್ನೆರಡು ವರ್ಷಗಳ ವಯಸ್ಸಿಗೆ ಒಳಪಟ್ಟಿರುವ ಹುಡುಗ ಅಥವಾ ಹುಡುಗಿ ಎಂದು ಅರ್ಥ.

"ವಯಸ್ಕ" — (6) ವಯಸ್ಕನು ಎಂದರೆ ಹನ್ನೆರಡರ ಅಥವಾ ಅದಕ್ಕೆ ಮೇಲ್ಪಟ್ಟ ಮತ್ತು ಅರವತ್ತಕ್ಕೆ ಒಳಪಟ್ಟ ವಯಸ್ಸಿನ ಯಾವನಾದರೂ ಮನುಷ್ಯನೆಂದು ಅರ್ಥ.

"ರಕ್ಷಿಸಲ್ಪಡದ ಮನುಷ್ಯನು" — (7) ರಕ್ಷಿಸಲ್ಪಡದ ಮನುಷ್ಯನು — ಸಿಡುಬಿನ ವ್ಯಾಧಿಯನ್ನು ಉಂಟಾಗಿ ಇದ್ದುದರಿಂದ ಅಥವಾ ಸಾರ್ಥಕವಾಗಿ ಸಿಡುಬು ಹಾಕಲ್ಪಟ್ಟಿರುವುದರಿಂದ ಸಿಡುಬಿನ ವ್ಯಾಧಿಯು ಬಾರದಂತೆ ರಕ್ಷಿಸಲ್ಪಡದೆ ಇರುವ ಅಥವಾ ಸಿಡುಬು ಹಾಕುವುದಕ್ಕೆ ಅಗ್ರಾಹಕನಾಗಿರುವುದಾಗಿ ಈ ನಿಬಂಧನೆಗಳಲ್ಲಿ 11ನೆ ನಿಬಂಧನೆಯ ಮೇರೆ ದೃಢೀಕರಿಸಲ್ಪಡದೆ ಇರುವ ಮನುಷ್ಯ, ಮಗು ಅಥವಾ ವಯಸ್ಕನಾಗಿ ಇರುತ್ತಾನೆ.

"ಸಿಡುಬು ಹಾಕುವ ಕೋಠಿ" — (8) ಸಿಡುಬು ಹಾಕುವ ಕೋಠಿ ಎಂದರೆ ಎಲ್ಲಿ ಸಿಡುಬು ಹಾಕುವವನಿಂದ ಜನಗಳಿಗೆ ಸಿಡುಬು ಹಾಕಲ್ಪಡುತ್ತದೆಯೊ ಅಥವಾ ಎಲ್ಲಿ ಉಚಿತವಾಗಿ ಸಿಡುಬು ಹಾಕಲ್ಪಡುತ್ತದೆಯೊ ಅಂಥಾ ಸ್ಥಳ ಅಥವಾ ಕಟ್ಟಡ ಎಂದು ಅರ್ಥ.

(9) "ಸಿಡುಬು ಹಾಕುವ ಮಂಡಲ" ಎಂದರೆ ಎಲ್ಲಿ ಸಿಡುಬು ಹಾಕೋಣವು ಅವಶ್ಯಕವಾಗಿ ಮಾಡಲ್ಪಟ್ಟಿದೆಯೊ ಮತ್ತು ಯಾವುದು ಸಿಡುಬು ಹಾಕುವ ಕೆಲಸಗಳಿಗಾಗಿ ಭಾಗಗಳಾಗಿ ವಿಭಾಗಿಸಲ್ಪಟ್ಟಿದೆಯೊ ಮತ್ತು ಯಾವುದರ ಅಂಥಾ ಪ್ರತಿ ಭಾಗದಲ್ಲಿಯೂ ಎರಡು ಅಥವಾ ಹೆಚ್ಚು ಸಿಡುಬು ಹಾಕುವ ಕೋಠಿಗಳು ಇಡಲ್ಪಟ್ಟಿವೆಯೊ ಅಂಥಾ ಸ್ಥಳೀಯ ಪ್ರದೇಶದ ಅಂಥಾ ಭಾಗಗಳಲ್ಲಿ ಒಂದು ಎಂದು ಅರ್ಥ.

ಸಿಡುಬು ಹಾಕುವ ಮಂಡಲ.

2. ಯಾವುದರಲ್ಲಿ ಸಿಡುಬು ಹಾಕೋಣವು ಅವಶ್ಯಕವೆಂದು ಪ್ರಕಟಿಸಲ್ಪಟ್ಟಿದೆಯೊ ಅಂಥಾ ಪ್ರತಿ ಸ್ಥಳೀಯ ಪ್ರದೇಶವೂ ಸಿಡುಬು ಹಾಕುವ ಮಂಡಲವಾಗಿರತಕ್ಕದ್ದು, ಅಥವಾ ಇದರಲ್ಲಿ ಮುಂದೆ ವಿಧಿಸಿರುವ ರೀತಿಯಲ್ಲಿ ಅಂಥಾ ಮಂಡಲಗಳಾಗಿ ವಿಭಾಗಿಸಲ್ಪಡತಕ್ಕದ್ದು.

"ಸಿಡುಬು ಹಾಕುವ ಕೋಠಿಗಳು" "ಸಿಡುಬು ಹಾಕುವುದು" "ಸಿಡುಬು ಹಾಕುವುದರ ಸೂಪರಿಂಟೆಂಡೆಂಟುಗಳು."

3. ಎಲ್ಲಿ ಸಿಡುಬು ಹಾಕೋಣವು ಕ್ಲುಪ್ತವಾದ ಕೆಲವು ಘಂಟೆಗಳಲ್ಲಿ ಉಚಿತವಾಗಿ ಮಾಡಲ್ಪಡುತ್ತದೆಯೊ ಅಂಥಾ ಒಂದು ಅಥವಾ ಹೆಚ್ಚು ಸಿಡುಬು ಹಾಕುವ ಕೋಠಿಗಳನ್ನು ಪ್ರತಿ ಮಂಡಲಕ್ಕೂ ಉಂಟಾಗಿರತಕ್ಕದ್ದು. ಪ್ರತಿ ಮಂಡಲಕ್ಕೂ ಇದರಲ್ಲಿ ಮುಂದೆ ವಿಧಿಸಿರುವ ರೀತಿಯಲ್ಲಿ ಒಂದು ಅಥವಾ ಹೆಚ್ಚು ಹೆಂಗಸು ಮತ್ತು ಗಂಡಸು ಸಿಡುಬು ಹಾಕುವವರನ್ನು ನೇಮಿಸತಕ್ಕದ್ದು; ಮತ್ತು ಪ್ರತಿ ಸ್ಥಳೀಯ ಪ್ರದೇಶಕ್ಕೂ, ಇದರಲ್ಲಿ ಮುಂದೆ ವಿಧಿಸಿರುವ ರೀತಿಯಲ್ಲಿ ಒಬ್ಬ ಅಥವಾ ಹೆಚ್ಚು ಸಿಡುಬು ಹಾಕುವುದರ ಸೂಪರಿಂಟೆಂಡೆಂಟುಗಳನ್ನು ನೇಮಿಸತಕ್ಕದ್ದು. ಅಂಥಾ ಸೂಪರಿಂಟೆಂಡೆಂಟುಗಳು ಯಾವಾಗಲೂ ಕ್ರಮವಾಗಿ ಯೋಗ್ಯತೆಯನ್ನು ಹೊಂದಿದ ವೈದ್ಯರಾಗಿರತಕ್ಕದ್ದು, ಅಥವಾ ಎಲ್ಲಿ ಸಿಡುಬು ಹಾಕೋಣವು ಅವಶ್ಯಕವಾಗಿ ಮಾಡಲ್ಪಟ್ಟಿದೆಯೊ ಅಂಥಾ ಸ್ಥಳೀಯ ಪ್ರದೇಶದಲ್ಲಿ ಉದ್ಯೋಗಿಸಲ್ಪಟ್ಟಿರುವ ಹಾಸ್ಪಿಟಲ್ ಅಸಿಸ್ಟೆಂಟಿನ ಸ್ಥಾನದ ಅಥವಾ ಅದಕ್ಕೆ ಮೇಲ್ಪಟ್ಟ (ಮೆಡಿಕಲ್ ಆಫಿಸರ್ಸ್) ವೈದ್ಯ ಅಧಿಕಾರಿಗಳಾಗಿರತಕ್ಕದ್ದು.

"ಸ್ವಂತ ಸಿಡುಬು ಹಾಕುವವರು."

4. ಸ್ವಂತ ಸಿಡುಬು ಹಾಕುವವರ ನೇಮಕವು ಮೈಸೂರು ಸರ್ಕಾರದ ಸ್ಯಾನಿಟರಿ ಕಮಿಷನರಿಗೆ ಸೇರಿ ಇರತಕ್ಕದ್ದು, ಅವರು ಸಿಡುಬು ಹಾಕುವವನಾಗಲಪೇಕ್ಷಿಸುವವನು ಯೋಗ್ಯನಾಗಿದ್ದಾನೆಂದು ತೃಪ್ತಿಪಟ್ಟ ತರುವಾಯ, ಒಂದು ಸಿಡುಬು ಹಾಕುವ ಮಂಡಲದಲ್ಲಿ ಸಿಡುಬು ಹಾಕುವುದಕ್ಕೆ ಅವನಿಗೆ ಅಧಿಕಾರ ಕೊಡುವ ಒಂದು ಬರಹಮೂಲಕವಾದ ಲೈಸೆನ್ಸನ್ನು ಅವನಿಗೆ ಕೊಡುವರು. ಮೇಲ್ಕಂಡ ಸ್ಯಾನಿಟರಿ ಕಮಿಷನರ ವಿವೇಕಾನುಸಾರವಾಗಿ ಈ ಲೈಸೆನ್ಸನ್ನು ಸ್ವಲ್ಪಕಾಲದ ಮಟ್ಟಿಗೆ ನಿಲ್ಲಿಸಬಹುದು ಅಥವಾ ತೆಗೆದುಹಾಕಬಹುದು.

"ರಕ್ಷಿಸಲ್ಪಡದ" ಮನುಷ್ಯನಿಗೆ ಸಿಡುಬು ಹಾಕತಕ್ಕದ್ದು.

5. ಎಲ್ಲಿ ಸಿಡುಬು ಹಾಕೋಣವು ಅವಶ್ಯಕವೆಂದು ಸರ್ಕಾರದಿಂದ ಪ್ರಕಟಿಸಲ್ಪಟ್ಟಿದೆಯೊ ಅಂಥಾ ಸ್ಥಳೀಯ ಪ್ರದೇಶದಲ್ಲಿ ಒಂದು ತಿಂಗಳ ಕಾಲದ ವರೆಗೆ ಯಾವನಾದರೂ "ರಕ್ಷಿಸಲ್ಪಡದ" ಮನುಷ್ಯನು, ವಯಸ್ಕನು ಅಥವಾ ಆರು ತಿಂಗಳ ವಯಸ್ಸಿನೊಳಗಿಲ್ಲದೆ ಇರುವ ಮಗು, ವಾಸಮಾಡಿದಾಗ ಅವನು ಅಥವಾ ಅವಳು, ವಯಸ್ಕನಾಗಿ ಅಥವಾ ವಯಸ್ಕಳಾಗಿ ಇದ್ದರೆ ಸಿಡುಬು ಹಾಕಿಸಿಕೊಳ್ಳುವುದಕ್ಕಾಗಿ ಒಂದು ಸಿಡುಬು ಹಾಕುವ ಕೋಠಿಗೆ ಹೋಗತಕ್ಕದ್ದು ಅಥವಾ ಒಂದು ಮಗುವಾಗಿದ್ದರೆ ಸಿಡುಬು ಹಾಕಿಸುವುದಕ್ಕಾಗಿ ಅದರ ತಂದೆ ತಾಯಿ ಅಥವಾ ರಕ್ಷಕನು ಅದನ್ನು ಅಲ್ಲಿಗೆ ಕರದುಕೊಂಡು ಹೋಗತಕ್ಕದ್ದು—ಅಥವಾ ಸಿಡುಬು ಹಾಕಿಸಿಕೊಳ್ಳಬೇಕೆಂಬುವವನು ಅಥವಾ, ಒಂದು ಮಗುವಾಗಿದ್ದರೆ ಅದರ ತಂದೆ ತಾಯಿ ಅಥವಾ ರಕ್ಷಕನು ಅವನ ಅಥವಾ ಅದರ ಸಿಡುಬು ಹಾಕೋಣವನ್ನು ಒಬ್ಬ ಸಿಡುಬು ಹಾಕುವನಿಂದ ಸ್ವಂತವಾಗಿ ಮಾಡಿಸಬಹುದು. ಆದರೆ ಸಿಡುಬಿನ ವ್ಯಾಧಿಯ ಸೋಂಕಿನ ತತ್ಕ್ಷಣದ ಅಪಾಯವು ಇದ್ದಹೊರತು ಒಂದು ಮನೆತನಕ್ಕೆ ಸೇರಿದ "ರಕ್ಷಿಸಲ್ಪಡದವರು" ತಾವು ವಾಸಮಾಡುವ ಮಂಡಲದ ಸೂಪರಿಂಟೆಂಡೆಂಟಿನ ಅಪ್ಪಣೆಯನ್ನು ಪಡೆದು, ಸಿಡುಬು ಹಾಕಿಸಿಕೊಳ್ಳುವುದರಿಂದ ಆ ಮನೆತನಕ್ಕೆ ಸೇರಿದವರ ಪ್ರತಿದಿನದ ಜೀವಿಕೆಗೆ ಸಾಧ್ಯವಾದಷ್ಟು ಸ್ವಲ್ಪ ಅಡ್ಡಿಯಾಗುವಂತೆ ಮೇಲ್ಕಂಡ ಸೂಪರಿಂಟೆಂಡೆಂಟು ನಿಶ್ಚಯಿಸಬಹುದಾದಹಾಗೆ ಸರದಿಮೇರೆ ಒಬ್ಬೊಬ್ಬರಾಗಿ ಅಥವಾ ಗುಂಪುಗುಂಪುಗಳಾಗಿ ಸಿಡುಬುಹಾಕಿಸಿಕೊಳ್ಳಬಹುದು. ಆದರೆ ಯಾವ ಸಂದರ್ಭದಲ್ಲಿಯೂ ಒಬ್ಬ ಮನುಷ್ಯನು ಅಥವಾ ಒಂದು ಗುಂಪಿನವರು ಸಿಡುಬು ಹಾಕಿಸಿಕೊಳ್ಳುವುದಕ್ಕೂ ಮತ್ತು ಮತ್ತೊಬ್ಬ ಮನುಷ್ಯನು ಅಥವಾ ಮತ್ತೊಂದು ಗುಂಪಿನವರು ಸಿಡುಬು ಹಾಕಿಸಿಕೊಳ್ಳುವುದಕ್ಕೂ ಮೇಲ್ಕಂಡ ಕಾರಣಕ್ಕಾಗಿ ಆಗುವ ಮಧ್ಯಕಾಲವು ನಾಲ್ಕು ವಾರಗಳಿಗಿಂತ ಹೆಚ್ಚಾಗಲು ಅವಕಾಶ ಕೊಡಕೂಡದು.

ಸಿಡುಬು ಹಾಕುವವನು ಜನಗಳಿಗೆ ಸಿಡುಬು ಹಾಕತಕ್ಕದ್ದು ಅಥವಾ ಸಿಡುಬು ಹಾಕುವುದನ್ನು ಮುಂದಕ್ಕೆ ಇಟ್ಟುದಕ್ಕಾಗಿ ಸರ್ಟಿಫಿಕೇಟುಗಳನ್ನು ಕೊಡತಕ್ಕದ್ದು.

6. ಅಂಥಾ ಸಿಡುಬು ಹಾಕುವವರು ಅಂಥಾ ಮನುಷ್ಯನಿಗೆ ಸಿಡುಬು ಹಾಕತಕ್ಕದ್ದು ಮತ್ತು ಅವನಿಗೆ ಅಥವಾ ಅವಳಿಗೆ ಅಥವಾ ಒಂದು ಮಗುವಾಗಿದ್ದರೆ, ಅದರ ತಂದೆ ತಾಯಿ ಅಥವಾ ರಕ್ಷಕನಿಗೆ, ಸಿಡುಬು ಹಾಕಿದ ತೇದಿಯನ್ನೂ ಸಿಡುಬು ಹಾಕುವುದರ ಫಲವನ್ನೂ ತಿಳಿದುಕೊಳ್ಳುವುದಕ್ಕಾಗಿ ಸಿಡುಬು ಹಾಕಿದ ಮನುಷ್ಯನನ್ನು ಅಥವಾ ಮಗುವನ್ನು ಪರೀಕ್ಷಿಸುವ ತೇದಿಯನ್ನೂ ಘಂಟೆಯನ್ನೂ ವಿವರಿಸಿ ಒಂದು ಜ್ಞಾಪಕ ಪತ್ರಿಕೆಯನ್ನು ಕೊಡತಕ್ಕದ್ದು; ಅಥವಾ ಆತನು ಸಿಡುಬು ಹಾಕಿಸಿಕೊಳ್ಳುವುದಕ್ಕೆ ತಕ್ಕದ್ದಲ್ಲದ ಆರೋಗ್ಯಸ್ಥಿತಿಯಲ್ಲಿ ಅಂಥಾ ಮನುಷ್ಯನನ್ನು ಕಂಡರೆ ಅಂಥಾ ಮನುಷ್ಯನಿಗೆ ಅಥವಾ ಒಂದು ಮಗುವಾಗಿದ್ದರೆ, ಅದರ ತಂದೆ ತಾಯಿಗೆ ಅಥವಾ ರಕ್ಷಕನಿಗೆ ಅಂಥಾ ಮನುಷ್ಯನು ಸಿಡುಬು ಹಾಕಿಸಿಕೊಳ್ಳುವುದಕ್ಕೆ ತಕ್ಕದ್ದಲ್ಲದ ಸ್ಥಿತಿಯಲ್ಲಿದ್ದಾನೆಂಬುದನ್ನೂ ಮತ್ತು ಅಂಥಾ ಮನುಷ್ಯನು ಹಾಗೆ ತಕ್ಕವನಲ್ಲವಾಗಿ ಬಹುಶಃ ಇರುವ ಕಾಲವನ್ನೂ ತೋರಿಸುವ ಒಂದು ಸರ್ಟಿಫಿಕೇಟನ್ನು ತನ್ನ ರುಜುನಿಶಾನಿಯೊಡನೆ ಕೊಡತಕ್ಕದ್ದು.

ಸಿಡುಬು ಹಾಕಿದ ತರುವಾಯ ಪರೀಕ್ಷೆ.

7. ಮೇಲಿನ ಪ್ರಕರಣದಂತೆ ಸಿಡುಬು ಹಾಕಲ್ಪಟ್ಟ ಪ್ರತಿ ಮನುಷ್ಯನೂ, ಅಥವಾ ಒಂದು ಮಗುವಾಗಿದ್ದರೆ ಅದರ ತಂದೆ ತಾಯಿ ಅಥವಾ ರಕ್ಷಕನೂ ಜ್ಞಾಪಕ ಪತ್ರಿಕೆಯಲ್ಲಿ ಕಂಡ ತೇದಿ ಮತ್ತು ಘಂಟೆಯಲ್ಲಿ ಪರೀಕ್ಷೆಗಾಗಿ ಸಿಡುಬು ಹಾಕುವವನ ಬಳಿಗೆ ಹೋಗತಕ್ಕದ್ದು ಅಥವಾ ಮಗುವನ್ನು ಕರೆದುಕೊಂಡುಹೋಗತಕ್ಕದ್ದು ಅಥವಾ ಕರೆದುಕೊಂಡುಹೋಗುವಂತೆ ಮಾಡಿಸತಕ್ಕದ್ದು ಅಥವಾ ತನ್ನ ಸ್ವಂತ ಮನೆಯಲ್ಲಿ ಸಿಡುಬು ಹಾಕುವವನಿಂದ ಅದನ್ನು ಪರೀಕ್ಷೆ ಮಾಡಿಸತಕ್ಕದ್ದು; ಮತ್ತು ಅಂಥಾ ಸಿಡುಬು ಹಾಕುವವನು ಆಮೇಲೆ ಅಂಥಾ ಮನುಷ್ಯನು ಅಥವಾ ಮಗುವು ಪರೀಕ್ಷಿಸಲ್ಪಟ್ಟಿತು ಎಂಬುವುದನ್ನು ಮತ್ತು ಅಂಥಾ ಪರೀಕ್ಷೆಯ ಫಲಿತಾಂಶವನ್ನು ವಿವರಿಸುವ ಒಂದು ಸರ್ಟಿಫಿಕೇಟನ್ನು ಮೇಲ್ಕಂಡ ಜ್ಞಾಪಕ ಪತ್ರಿಕೆಗೆ ಸೇರಿಸತಕ್ಕದ್ದು.

ಟಿಪ್ಪಣಿ—"ಗೋಷ" ಅಥವಾ "ಪರದಾ" ವಿನಾ ಕ್ರಮವನ್ನು ಆಚರಿಸುವ ವಯಸ್ಥರಾದ ಹೆಂಗಸರ ವಿಷಯದಲ್ಲಿ ಅವರು ಹಾಗೆ ಅಪೇಕ್ಷಿಸಿದರೆ, ಸಿಡುಬು ಹಾಕೋಣ ಮತ್ತು ಪರೀಕ್ಷೆ ಇವೆರಡೂ ಒಬ್ಬಳು ಸಿಡುಬು ಹಾಕುವ ಹೆಂಗಸಿಂದ ಮಾಡಲ್ಪಡತಕ್ಕದ್ದು.

ಸಿಡುಬುಹಾಕುವುದು ಸಾರ್ಥಕವಾಗಿರುವಾಗ ನಡವಳಿಕೆ.

8. ಮೇಲಿನ 7ನೆ ನಿಬಂಧನೆಯಂತೆ ಒಬ್ಬ ಮನುಷ್ಯನನ್ನು ಅಥವಾ ಮಗುವನ್ನು ಪರೀಕ್ಷಿಸುವ ಕಾಲದಲ್ಲಿ ಸಿಡುಬು ಹಾಕೋಣವು ಸಾರ್ಥಕವಾಗಿ ಆಯಿತು ಎಂದು ಗೊತ್ತಾದಾಗ ಆ ಅಭಿಪ್ರಾಯಕ್ಕೆ ಒಂದು ಸರ್ಟಿಫಿಕೇಟನ್ನು ಸಿಡುಬು ಹಾಕುವವನು ಆ ಮನುಷ್ಯನಿಗೆ ಅಥವಾ ಒಂದು ಮಗುವಾಗಿದ್ದರೆ, ಅದರ ತಂದೆ ತಾಯಿಗೆ ಅಥವಾ ರಕ್ಷಕನಿಗೆ ಕೊಡತಕ್ಕದ್ದು, ಮತ್ತು ಮನುಷ್ಯನು ಅಥವಾ ಮಗುವು "ರಕ್ಷಿಸಲ್ಪಟ್ಟಿದೆ" ಎಂದು ಭಾವಿಸತಕ್ಕದ್ದು.

ಸಿಡುಬು ಹಾಕೋಣವು ನಿಷ್ಫಲವಾದಾಗ ನಡವಳಿಕೆ.

9. ಸಿಡುಬು ಹಾಕೋಣವು ನಿಷ್ಫಲವಾಯಿತೆಂದು ಮೇಲ್ಕಂಡಂತೆ ಗೊತ್ತಾದಾಗ ಆ ಮನುಷ್ಯನು ಅಥವಾ ಒಂದು ಮಗುವಾಗಿದ್ದರೆ ಅದರ ತಂದೆತಾಯಿ ಅಥವಾ ರಕ್ಷಕನು ಸಿಡುಬು ಹಾಕುವವನು ಹಾಗೆ ಹೇಳಿದರೆ, ಆ ಮನುಷ್ಯನು ಅಥವಾ ಮಗುವು ತೃಪ್ತಿಕರವಾದ ಆರೋಗ್ಯಸ್ಥಿತಿಯಲ್ಲಿದ್ದರೆ ಕೂಡಲೆ ತಿರಿಗಿ ಸಿಡುಬು ಹಾಕಿಸಿಕೊಳ್ಳತಕ್ಕದ್ದು ಮತ್ತು ಇದರಲ್ಲಿ ಮುಂದೆ ವಿಧಿಸಿರುವ ರೀತಿಯಲ್ಲಿ ತರುವಾಯ ಪರೀಕ್ಷಿಸಲ್ಪಡತಕ್ಕದ್ದು. ಆ ಮನುಷ್ಯನು ತಕ್ಕ ಆರೋಗ್ಯ ಸ್ಥಿತಿಯಲ್ಲಿ ಇಲ್ಲದೆ ಇದ್ದರೆ ಆ ಮನುಷ್ಯನು ಹಾಗೆ ತಕ್ಕವನಲ್ಲವಾಗಿರಬಹುದಾದ ಕಾಲವನ್ನು ವಿವರಿಸಿ 6ನೆ ನಿಬಂಧನೆಯಂತೆ ಒಂದು ಸರ್ಟಿಫಿಕೇಟನ್ನು ಸಿಡುಬು ಹಾಕುವವನು ಕೊಡತಕ್ಕದ್ದು. ಆದರೆ ತಿರಿಗಿ ಅಥವಾ ಎರಡನೆ ಸಲ ಸಿಡುಬು ಹಾಕೋಣವು ನಿಷ್ಫಲವಾದ ಸಂದರ್ಭದಲ್ಲಿ, ಆ ಮನುಷ್ಯನು ಮುಂದಿನ ಏಳು ವರ್ಷಗಳ ವರೆಗೆ ತಿರಿಗಿ ಸಿಡುಬು ಹಾಕಲ್ಪಡುವುದಕ್ಕಾಗಿ ಬಲಾತ್ಕರಿಸಲ್ಪಡತಕ್ಕದ್ದಲ್ಲ, ಆದರೆ ಕಡೇಪಕ್ಷ ಮತ್ತೊಂದಾವರ್ತಿ ಎಂದರೆ ಹದಿನೈದು ದಿನಗಳೊಳಗಾಗಿ ಸಿಡುಬು ಹಾಕಿಸಿಕೊಳ್ಳಬೇಕೆಂದು ಆ ಮನುಷ್ಯನಿಗೆ ಖಂಡಿತವಾಗಿ ಬುದ್ಧಿ ಹೇಳತಕ್ಕದ್ದು, ಯಾತಕ್ಕೆಂದರೆ ಕೆಲವು ವೇಳೆಗಳಲ್ಲಿ ಸಿಡುಬನ್ನು ಸರಿಯಾಗಿ ಹಾಕದೆ ಇರುವುದರಿಂದಲೂ ಅಥವಾ ಮನುಷ್ಯನು ಅಗ್ರಾಹಕನಾಗಿ ಇರುವುದರಿಂದಲೂ ಸಿಡುಬು ಹಾಕೋಣವು ನಿಷ್ಫಲವಾಗುತ್ತದೆ.

ಮನುಷ್ಯನು ಸಿಡುಬು ಹಾಕಿಸಿಕೊಳ್ಳಲು ತಕ್ಕವನಾಗಿ ಇಲ್ಲದೆ ಇರುವಾಗ ನಡವಳಿಕೆ.

10. ಒಬ್ಬ ಮನುಷ್ಯನು ಅಥವಾ ಮಗುವು ಸಿಡುಬು ಹಾಕಿಸಿಕೊಳ್ಳಲು ತಕ್ಕ ಸ್ಥಿತಿಯಲ್ಲಿಲ್ಲವೆಂದು ತೋರಿಸುವ ಮೇಲ್ಕಂಡ 6ನೆ ಮತ್ತು 9ನೆ ನಿಬಂಧನೆಗಳ ಮೇರೆ ಕೊಟ್ಟ ಸರ್ಟಿಫಿಕೇಟು ಅದರಲ್ಲಿ ಕಂಡ ಗಡುವಿನ ವರೆಗೆ ಉಪಯೋಗದಲ್ಲಿ ಇರತಕ್ಕದ್ದು ಮತ್ತು ಆ ಗಡುವು ತೀರಿದ ನಂತರ ಆ ಮನುಷ್ಯನು ಸಿಡುಬು ಹಾಕಿಸಿಕೊಳ್ಳಲು ಸಿಡುಬು ಹಾಕುವವನ ಬಳಿಗೆ ಹೋಗತಕ್ಕದ್ದು ಅಥವಾ ಒಬ್ಬ ಸಿಡುಬು ಹಾಕುವವನಿಂದ ತನ್ನ ಮನೆಯಲ್ಲಿ ಸಿಡುಬು ಹಾಕಿಸಿಕೊಳ್ಳತಕ್ಕದ್ದು ಅಥವಾ ಒಂದು ಮಗುವಾಗಿದ್ದರೆ ಅದರ ತಂದೆ ತಾಯಿ ಅಥವಾ ರಕ್ಷಕನು ಸಿಡುಬು ಹಾಕಿಸುವ ಬಗ್ಗೆ ಸಿಡುಬು ಹಾಕುವವನ ಬಳಿಗೆ ಕರೆದುಕೊಂಡು ಹೋಗತಕ್ಕದ್ದು, ಅಥವಾ ಒಬ್ಬ ಸಿಡುಬು ಹಾಕುವವನಿಂದ ತನ್ನ ಮನೆಯಲ್ಲಿ ಸಿಡುಬು ಹಾಕಿಸತಕ್ಕದ್ದು.

ಸಿಡುಬು ಹಾಕುವುದನ್ನು ಮುಂದಕ್ಕೆ ಹಾಕಿದುದನ್ನು ಕುರಿತ ಸರ್ಟಿಫಿಕೇಟುಗಳ ನವೀಕರಣ.

ಆದರೆ ಆ ಮನುಷ್ಯನು ಅಥವಾ ಮಗುವು ಇನ್ನೂ ಸಿಡುಬು ಹಾಕಿಸಿಕೊಳ್ಳುವುದಕ್ಕೆ ತಕ್ಕ ಸ್ಥಿತಿಯಲ್ಲಿ ಇಲ್ಲದೆ ಇರುವುದಾಗಿ ಕಂಡುಬಂದರೆ ಮೇಲೆ ಕಂಡ 6ನೆ ಮತ್ತು 9ನೆ ನಿಬಂಧನೆಗಳ ಮೇರೆ ಕೊಡಲ್ಪಟ್ಟ ಸರ್ಟಿಫಿಕೇಟನ್ನು ನವೀಕರಿಸತಕ್ಕದ್ದು.

ಸಾರ್ಥಕವಾಗಿ ಸಿಡುಬು ಹಾಕುವುದರ ಅಸಾಧ್ಯತೆಯ ಸರ್ಟಿಫಿಕೇಟುಗಳು.

11. ಮೂರುವೇಳೆಗಳಲ್ಲಿ ಅಸಾರ್ಥಕವಾಗಿ ಸಿಡುಬು ಹಾಕಲ್ಪಟ್ಟ ಮನುಷ್ಯನಿಗೆ ಅಥವಾ ಮಗುವಿಗೆ ಸಾರ್ಥಕವಾಗಿ ಸಿಡುಬು ಹಾಕುವುದು ಸಾಧ್ಯವಲ್ಲವೆಂದು ಸಿಡುಬು ಹಾಕುವುದರ ಸೂಪರಿಂಟೆಂಡೆಂಟು ಅಭಿಪ್ರಾಯಪಟ್ಟರೆ ಆ ಅಭಿಪ್ರಾಯಕ್ಕೆ ಒಂದು ಸರ್ಟಿಫಿಕೇಟನ್ನು ತನ್ನ ರುಜುನಿಂದ ಆ ಮನುಷ್ಯನಿಗೆ ಅಥವಾ ಒಂದು ಮಗುವಾಗಿದ್ದರೆ ಅಂಥಾ ಮಗುವಿನ ತಂದೆತಾಯಿಗೆ ಅಥವಾ ರಕ್ಷಕನಿಗೆ ಕೊಡತಕ್ಕದ್ದು; ಮತ್ತು ಆ ಮನುಷ್ಯನನ್ನು ಅಥವಾ ಮಗುವನ್ನು ಅಲ್ಲಿಂದ ಮುಂದೆ ಸಿಡುಬು ಹಾಕಿಸಿಕೊಳ್ಳುವಂತೆ ಅಥವಾ ಸಿಡುಬುಹಾಕಿಸಿಕೊಳ್ಳುವಂತೆ ಮಾಡಲ್ಪಡುವಂತೆ ಕೇಳತಕ್ಕದ್ದಲ್ಲ.

ಸ್ವಂತ ಸಿಡುಬು ಹಾಕುವವರಿಂದ ಸಿಡುಬು ಹಾಕೋಣದರ ಸರ್ಟಿಫಿಕೇಟುಗಳನ್ನು ಸೂಪರಿಂಟೆಂಡೆಂಟಿಗೆ ಕಳುಹಿಸತಕ್ಕದ್ದು.

12. ಯಾವನಾದರೂ ಮನುಷ್ಯನು ವಾಸಮಾಡುವ ಮಂಡಲದಲ್ಲಿ ಸಾರ್ವಜನಿಕ ಸಿಡುಬು ಹಾಕುವವರಾಗಿ ನೇಮಕ ಮಾಡಲ್ಪಟ್ಟವನಲ್ಲದ ಇತರ ಸಿಡುಬು ಹಾಕುವವನಿಂದ ತಾನೆ ಸಿಡುಬು ಹಾಕಿಸಿಕೊಳ್ಳುವ ಅಥವಾ ತನ್ನ ಮನೆತನದ ಯಾವನಾದರೂ ಇತರನಿಗೆ ಅಥವಾ ತನ್ನ ರಕ್ಷಕತ್ವಕ್ಕೆ ಒಳಪಟ್ಟ ಯಾವುದಾದರೂ ಮಗುವಿಗೆ ಸಿಡುಬು ಹಾಕಿಸುವ ಅಂಥಾ ಯಾವ ಮನುಷ್ಯನಾದರೂ ಸಿಡುಬು ಹಾಕುವವನಿಂದ ರುಜು ಮಾಡಲ್ಪಟ್ಟ ಅಂಥಾ ಸಿಡುಬು ಹಾಕೋಣದರ ಮತ್ತು ಅದರ ಫಲಿತಾಂಶದ ಸರ್ಟಿಫಿಕೇಟನ್ನು ಅಂಥಾ ಸಿಡುಬು ಹಾಕೋಣದರ ತೇದಿಯಿಂದ ಹದಿನೈದು ದಿವಸಗಳೊಳಗಾಗಿ ಮೇಲ್ಕಂಡ ಮಂಡಲದ ಸಿಡುಬು ಹಾಕೋಣದರ ಸೂಪರಿಂಟೆಂಡೆಂಟಿಗೆ ಕಳುಹಿಸತಕ್ಕದ್ದು.

ಯೋಗ್ಯತೆಯನ್ನು ಹೊಂದಿದ ವೈದ್ಯನ ಮತ್ತು ಸ್ವಂತ ಸಿಡುಬು ಹಾಕುವವರ ಸರ್ಟಿಫಿಕೇಟುಗಳನ್ನು ಅಂಗೀಕರಿಸತಕ್ಕದ್ದು.

13. ಸಿಡುಬು ಹಾಕೋಣವರ ಸೂಪರಿಂಟೆಂಡೆಂಟು (1) ಸಾರ್ಥಕವಾಗಿ ಸಿಡುಬುಹಾಕಿದುದನ್ನು ಕುರಿತು (2) ಸಿಡುಬು ಹಾಕುವುದಕ್ಕೆ ಒಬ್ಬ ಮನುಷ್ಯನು ತಕ್ಕವನಾಗಿ ಇಲ್ಲದೆ ಇರುವುದನ್ನು ಕುರಿತು (3) ಸಿಡುಬು ಹಾಕುವುದರ ಅಗ್ರಾಹಕತ್ವ ಅಥವಾ ಅಸಾಧ್ಯತೆಯನ್ನು ಕುರಿತು ಒಬ್ಬ ಯೋಗ್ಯತೆಯನ್ನು ಹೊಂದಿದ ವೈದ್ಯನಿಂದ ಅಥವಾ ಸ್ವಂತ ಸಿಡುಬು ಹಾಕುವವನಿಂದ ಸರ್ಟಿಫಿಕೇಟುಗಳನ್ನು ಅಂಗೀಕರಿಸತಕ್ಕದ್ದು.

ನಿಯಮ.

ಆದರೆ ಈ ನಿಬಂಧನೆಗಳ ಮೇರೆ ಕೊಟ್ಟ ಯಾವ ಸರ್ಟಿಫಿಕೇಟಾದರೂ ಅಕ್ರಮವಾಗಿ ಕೊಡಲ್ಪಟ್ಟಿತೆಂದು ಅಥವಾ ಯಾವನಾದರೂ ರಕ್ಷಿಸಲ್ಪಡದ ಮನುಷ್ಯನ ಅಥವಾ ಮಗುವಿನ ಪರವಾಗಿ ಹೊಂದಲ್ಪಟ್ಟಿತೆಂದೂ ಸೂಪರಿಂಟೆಂಡೆಂಟಿಗೆ ತೃಪ್ತಿಯಾಗುವಂತೆ ಕಂಡುಬಂದರೆ ಅಂಥಾ ಸರ್ಟಿಫಿಕೇಟನ್ನು ಸೂಪರಿಂಟೆಂಡೆಂಟು ತಳ್ಳುಪಡಿಮಾಡಬಹುದು. ಮತ್ತು ಆ ಮೇಲೆ ಅಂಥಾ ಸರ್ಟಿಫಿಕೇಟು ರದ್ದಾಗಿರತಕ್ಕದ್ದು. ಈ ಸರ್ಟಿಫಿಕೇಟುಗಳನ್ನು ಕುರಿತು ಯಾವುದಾದರೂ ಸಂಶಯವಿದ್ದ ಸಂದರ್ಭದಲ್ಲಿ ಸೂಪರಿಂಟೆಂಡೆಂಟು ಸಿಡುಬು ಹಾಕಲ್ಪಟ್ಟ ಅಥವಾ ಸಿಡುಬು ಹಾಕಲು ತಕ್ಕವನಲ್ಲವಾಗಿ ಅಥವಾ ಅಗ್ರಾಹಕನಾಗಿರುವಂತೆ ದೃಢೀಕರಿಸಲ್ಪಟ್ಟ ಮನುಷ್ಯನನ್ನು ಸ್ವತಃ ಪರೀಕ್ಷೆ ಮಾಡತಕ್ಕದ್ದು. ಆದರೆ ಯಾವಾಗಲೂ, ಆ ವ್ಯಕ್ತಿಯು ಗೋಷ ಅಥವಾ ಪರದ ಹೆಂಗಸಾಗಿದ್ದರೆ ಪರೀಕ್ಷೆಯು 7ನೇ ನಿಬಂಧನೆಯಲ್ಲಿ ವಿಧಿಸಿರುವ ಮೇರೆ ಒಬ್ಬಳು ಸಿಡುಬುಹಾಕುವ ಹೆಂಗಸಿನಿಂದ ಮಾಡಲ್ಪಡತಕ್ಕದ್ದು.

ಎಂಥಾ ಸಿಡುಬಿನ ಹಾಲನ್ನು ಉಪಯೋಗಿಸತಕ್ಕದ್ದು.

14. ಜನಗಳಿಗೆ ಸಿಡುಬು ಹಾಕೋಣವನ್ನು ಕರುವಿನ ಸಿಡುಬು ಹಾಲಿನಿಂದ ಎಂದರೆ, ಹೊಸದು ಅಥವಾ ಉಳಿಸಿಟ್ಟದ್ದು ಇವೆರಡರಲ್ಲಿ ಯಾವುದು ದೊರೆಯುತ್ತದೆಯೋ ಅದರಿಂದ ಮಾಡತಕ್ಕದ್ದು.

ಉಪಯೋಗಿಸಲ್ಪಡತಕ್ಕ ಸಿಡುಬಿನ ಹಾಲಿನ ಶಾಸ್ತ್ರೀಯವಾದ ಪರಾಮರಿಕೆ.

15. ಸಿಡುಬು ಹಾಕುವುದಕ್ಕೆ ಉಪಯೋಗಿಸಲ್ಪಡುವ ಎಲ್ಲಾ ಸಿಡುಬಿನ ಹಾಲನ್ನೂ ಸರ್ಕಾರಿ ಸ್ಯಾನಿಟರಿ ಕಮೀಷನರು ಆಗಾಗ ವಿಧಿಸಬಹುದಾದ ಶಾಸ್ತ್ರೀಯವಾದ ಪರಾಮರಿಕೆಯಿಂದ ತಯಾರು ಮಾಡಿ ಸಂಗ್ರಹಿಸಿ ಉಳಿಸಿಟ್ಟು ಹಂಚಿಕೆ ಮಾಡಿ ಉಪಯೋಗಿಸತಕ್ಕದ್ದು ಮತ್ತು ಅದು ಸ್ಯಾನಿಟರಿ ಕಮಿಷನರಿಂದ ಆ ಕೆಲಸಕ್ಕಾಗಿ ಯೋಗ್ಯನೆಂದು ಹೇಳಲ್ಪಟ್ಟಿರುವ ಅಧಿಕಾರಿಯಿಂದ ನಿರ್ಮಲವಾದುದೆಂದು ದೃಢೀಕರಿಸಲ್ಪಟ್ಟಿರತಕ್ಕದ್ದು.

ಇತರ ಸಿಡುಬಿನ ಹಾಲಿನ ಉಪಯೋಗ.

16. ಮೇಲೆ 14ನೆ ನಿಬಂಧನೆಯಲ್ಲಿ ವಿವರಿಸಲ್ಪಟ್ಟವುಗಳಲ್ಲದ ಇತರ ಯಾವುದಾದರೂ ಸಿಡುಬಿನ ಹಾಲಿನಿಂದ, ತಾನು ಸಿಡುಬುಹಾಕಿಸಿಕೊಳ್ಳಬೇಕೆಂದು ತನ್ನ ಮನೆತನಕ್ಕೆ ಸೇರಿದವರಲ್ಲಿ, ಯಾರಿಗಾದರೂ ಅಥವಾ ತನ್ನ ರಕ್ಷಕತ್ವಕ್ಕೆ ಒಳಪಟ್ಟ ಯಾವುದಾದರೂ ಮಕ್ಕಳಿಗಾದರೂ ಸಿಡುಬು ಹಾಕಿಸಬೇಕೆಂದು ಅಪೇಕ್ಷಿಸುವ ಯಾವ ಮನುಷ್ಯನಾದರೂ ಅದನ್ನು ತನ್ನ ಸ್ವಂತ ಖರ್ಚಿನಿಂದ ತರಿಸಿಕೊಂಡು ಅದರಿಂದ ತನಗೆ ಅಥವಾ ತನ್ನ ಮನೆತನದವರಿಗೆ ಅಥವಾ ತನ್ನ ರಕ್ಷಕತ್ವಕ್ಕೆ ಒಳಪಟ್ಟ ಮಕ್ಕಳಿಗೆ ಸಿಡುಬುಹಾಕಿಸಬಹುದು ಆದರೆ ಹಾಗೆ ಹೊಂದಲ್ಪಟ್ಟ ಸಿಡುಬಿನ ಹಾಲು ಸ್ಯಾನಿಟರಿ ಕಮಿಷನರಿಂದ ಯೋಗ್ಯನೆಂದು ಅಂಗೀಕರಿಸಲ್ಪಟ್ಟ ಒಬ್ಬ ಅಧಿಕಾರಿಯಿಂದ ನಿರ್ಮಲವಾಗಿರುವುದಾಗಿ ದೃಢೀಕರಿಸಲ್ಪಡಬೇಕು.

ಸಿಡುಬು ಹಾಕೋಣದರಲ್ಲಿ ಅಜಾಗ್ರತೆಯು ಮತ್ತು ಅಧಿಕಾರ ಹೊಂದದ ಜನಗಳಿಂದ ಸಿಡುಬು ಹಾಕೋಣವು ತಪ್ಪಿತಗಳಾಗಿ ಭಾವಿಸಲ್ಪಡತಕ್ಕದ್ದು.

17. ಸಿಡುಬು ಹಾಕುವವನು ಸಾಧ್ಯವಾದಷ್ಟು ಮಟ್ಟಿಗೂ ಪರಾಮರಿಕೆಯಿಂದಲೂ ಕೊಳೆಯುವುದಕ್ಕೆ ಗುರಿಯಾಗದಂತೆಯೂ ಸಿಡುಬು ಹಾಕುವ ಕೆಲಸವನ್ನು ಮಾಡಲು ಎಲ್ಲಾ ತಕ್ಕ ಎಚ್ಚರಿಕೆಗಳನ್ನೂ ತೆಗೆದುಕೊಳ್ಳಬೇಕು; ಮತ್ತು ಅಜಾಗ್ರತೆಯಿಂದ ಅಥವಾ ಅಸಡ್ಡೆಯಿಂದ ಅಥವಾ 15 ಮತ್ತು 16ನೆ ನಿಬಂಧನೆಗಳಲ್ಲಿ ಅಪ್ಪಣೆ ಮಾಡಿರುವಂತೆ ದೃಢೀಕರಿಸಲ್ಪಡದ ಸಿಡುಬಿನ ಹಾಲಿನ ಉಪಯೋಗದಿಂದ ಸಿಡುಬುಹಾಕಲ್ಪಟ್ಟ ಮನುಷ್ಯನ ಆರೋಗ್ಯವನ್ನು ಕೆಡಿಸುವ ಯಾವ ಸಿಡುಬು ಹಾಕುವವನಾದರೂ, ಮತ್ತು ಈ ನಿಬಂಧನೆಗಳಿಗೆ ಅನುಸಾರವಾಗಿ ಸಿಡುಬುಹಾಕಲು ಕ್ರಮವಾಗಿ ಅಧಿಕಾರ ಹೊಂದದವನಾಗಿ ಈ ನಿಬಂಧನೆಗಳು ಲಗಾವಾಗುವಂತೆ ಮಾಡಲ್ಪಟ್ಟಿರುವ ಪ್ರದೇಶದೊಳಗೆ ಯಾವುದಾದರೂ ಸಿಡುಬಿನ ಹಾಲಿನಿಂದ ಜನಗಳಿಗೆ ಸಿಡುಬುಹಾಕುವ ಯಾವ ಮನುಷ್ಯನಾದರೂ, 1906ನೆ ಮೈಸೂರು ಸಿಡುಬುಹಾಕುವ ರೆಗ್ಯುಲೇಷನಿನಲ್ಲಿ ವಿವರಿಸಿರುವ ತಪ್ಪನ್ನು ಮಾಡಿರುವಂತೆ ಎಣಿಸಲ್ಪಡತಕ್ಕದ್ದು.

ಸ್ವಂತ ಸಿಡುಬು ಹಾಕುವವನಿಂದ ಹೊರತು ಯಾವ ರುಸುಮೂ ಹಾಕಲ್ಪಡತಕ್ಕದ್ದಲ್ಲ.

18. ಈ ನಿಬಂಧನೆಗಳ ಮೇರೆ ಯಾವನಾದರೂ ಸಿಡುಬು ಹಾಕುವವನಿಗೆ ನೇಮಕ ಮಾಡಿರುವ ಯಾವುದಾದರೂ ಕೆಲಸಗಳಿಗೋಸ್ಕರ ಸಿಡುಬುಹಾಕಿಸಿಕೊಳ್ಳುವ ಮನುಷ್ಯನಿಗೆ ಅಥವಾ ಅದು ಒಂದು ಮಗುವಾಗಿದ್ದರೆ ಅದರ ತಂದೆ ತಾಯಿಗೆ ಅಥವಾ ರಕ್ಷಕನಿಗೆ ಒಬ್ಬ ಸ್ವಂತ ಸಿಡುಬು ಹಾಕುವವನಿಂದ ವಿನಾ ಯಾವ ಸಿಡುಬು ಹಾಕುವವನಿಂದಲೂ ಯಾವ ರುಸುಮೂ ಹಾಕಲ್ಪಡತಕ್ಕದ್ದಲ್ಲ. (1) ಆದರೆ ಒಬ್ಬ ಸಿಡುಬು ಹಾಕುವವನು ಕೆಲಸ ಮಾಡುತ್ತಿರುವ ಕೋಠಿಯಲ್ಲದೆ ಇನ್ನೆಲ್ಲಿಯಾದರೂ ಒಬ್ಬ ಮನುಷ್ಯನಿಗೆ ಅಥವಾ ಅವನ ಮನೆಯವರಿಗೆ ಅವನ ಕೋರಿಕೆಯಂತೆ ಅಥವಾ ಒಂದು ಮಗುವಾಗಿದ್ದರೆ ಅದರ ತಂದೆ ತಾಯಿಯ ಅಥವಾ ರಕ್ಷಕನ ಕೋರಿಕೆಯಂತೆ ಸಿಡುಬು ಹಾಕಲು ಒಂದು ರುಸುಮನ್ನು ಅಂಗೀಕರಿಸುವುದು ಸಿಡುಬು ಹಾಕುವವನಿಗೆ ನ್ಯಾಯವಾಗಿರತಕ್ಕದ್ದು. (2) ಮತ್ತು ಗೋಷ ಅಥವಾ ಪರದ ಕ್ರಮವನ್ನು ಆಚರಿಸುತ್ತಿರುವ ಹೆಂಗಸರ ವಿಷಯದಲ್ಲಿ, ಅಂಥಾ ಸಿಡುಬು ಹಾಕುವವನು ನೇಮಿಸಲ್ಪಟ್ಟಿರುವ ಮುಂಡಲದೊಳಗಿನ ಮನೆಗಳಲ್ಲಿ ಅಂಥಾ ಹೆಂಗಸರಿಗೆ ಸಿಡುಬು ಹಾಕಲು ಯಾವ ರುಸುಮನ್ನೂ ಹಾಕತಕ್ಕದ್ದಲ್ಲ.

ಸಿಡುಬು ಹಾಕುವುದರ ಸೂಪರಿಂಟೆಂಡೆಂಟಿನ ಕೆಲಸಗಳು.

19. ಸಿಡುಬು ಹಾಕುವುದರ ಸೂಪರಿಂಟೆಂಡೆಂಟು, ಈ ನಿಬಂಧನೆಗಳಿಂದ ಅಥವಾ ಅವುಗಳ ಮೇರೆ ತನಗೆ ನೇಮಕವಾಗಿರುವ ಇತರ ಕೆಲಸಗಳ ಜತೆಗೆ ತನ್ನ ನೇರ್ಪ್ವಿಚಾರಣೆಯೊಳಗಿನ ಪ್ರದೇಶದೊಳಗೆ ಆರು ತಿಂಗಳುಗಳ ವಯಸ್ಸಿಗೆ ಮೇಲ್ಪಟ್ಟ ಎಲ್ಲಾ (ರಕ್ಷಿಸಲ್ಪಡದ) ಮನುಷ್ಯರಿಗೂ ಸಿಡುಬು ಹಾಕಿದೆಯೋ ಎಂದು ತಿಳಿದುಕೊಳ್ಳತಕ್ಕದ್ದು; ಮತ್ತು ಯಾವನಾದರೂ ಮನುಷ್ಯನು ತನಗೆ ಅಥವಾ ತನ್ನ ರಕ್ಷಣೆಯಲ್ಲಿ ಮತ್ತು ರಕ್ಷಕತ್ವದಲ್ಲಿ ಇರುವ ಮಗುವಿಗೆ ಸಿಡುಬು ಹಾಕಿಸಿಕೊಳ್ಳುವುದಕ್ಕೆ ಅಥವಾ ಪರೀಕ್ಷೆಗಾಗಿ ತಾನು ಬರುವುದಕ್ಕೆ ಅಥವಾ ಅದನ್ನು ಕರೆದುಕೊಂಡು ಬರುವುದಕ್ಕೆ ಇದರಲ್ಲಿ ಮೊದಲೆ ಅಡಗಿರುವ ನಿಯಮಗಳಂತೆ ಬದ್ಧನಾಗಿದ್ದಾನೆಂದು ಮತ್ತು ಹಾಗೆ ಮಾಡುವುದಕ್ಕೆ ತಪ್ಪಿಹೋದನೆಂದು ನಂಬುವುದಕ್ಕೆ ಸೂಪರಿಂಟೆಂಡೆಂಟಿಗೆ ಕಾರಣವಿದ್ದರೆ ಪ್ರಾತಃಕಾಲ 6 ಘಂಟೆಗೂ ಸಾಯಂಕಾಲ 6 ಘಂಟೆಗೂ ಮಧ್ಯೆ ಯಾವ ಕಾಲದಲ್ಲಿಯಾದರೂ ಅಂಥಾ ಮನುಷ್ಯನ ಮನೆಗೆ ಸ್ವತಃ ಹೋಗಿ ವಿಚಾರಣೆ ಮಾಡಿ ಆ ವಿದ್ಯಮಾನವು ರುಜುವಾತಾದರೆ ಅಂಥಾ ಮನುಷ್ಯನು ಅಥವಾ ಅವನ ರಕ್ಷಣೆ ಅಥವಾ ರಕ್ಷಕತ್ವದಲ್ಲಿ ಇರುವ ಮಗುವು ಸಿಡುಬು ಹಾಕಿಸಿಕೊಳ್ಳಬೇಕೆಂದು ಅಥವಾ (ಸಂದರ್ಭಾನುಸಾರವಾಗಿ) ಮುಂದೆ ಬರುವ ನೋಟೀಸಿನಲ್ಲಿ ವಿವರಿಸುವ ಕಾಲ ಮತ್ತು ಸ್ಥಳದಲ್ಲಿ ಪರೀಕ್ಷೆಯ ಬಗ್ಗೆ ಬರಬೇಕೆಂದು ಅಥವಾ ಕರೆತರಬೇಕೆಂದು ಅಪ್ಪಣೆ ಮಾಡಿ ಒಂದು ನೋಟೀಸನ್ನು ಅಂಥಾ ಮನುಷ್ಯನಿಗೆ ಕೊಡತಕ್ಕದ್ದು ಅಥವಾ ಅವನ ಮನೆಗೆ ಅಂಟಿಸುವಂತೆ ಮಾಡತಕ್ಕದ್ದು.

ಈ ನಿಬಂಧನೆಗಳಿಗೆ ಅನುಸಾರವಾಗಿ ನಡೆಯಲು ಅಸಡ್ಡೆ ಮಾಡುವ ಮನುಷ್ಯನಿಗೆ ಅಥವಾ ತಂದೆ ತಾಯಿಗೆ ಅಥವಾ ರಕ್ಷಕನಿಗೆ, ನೋಟೀಸು.

ಮನೆಯ ಮುಖ್ಯಸ್ಥನು ಮನೆಗೆ ಸೇರಿದವರನ್ನು ಪರೀಕ್ಷೆಗೆ ತೋರಿಸತಕ್ಕದ್ದು ಮತ್ತು ಸರಿಯಾದ ವರ್ತಮಾನವನ್ನು ಕೊಡತಕ್ಕದ್ದು.

20. 18ನೇ ನಿಬಂಧನೆಗೆ ಅನುಸಾರವಾಗಿ ಸಿಡುಬು ಹಾಕುವುದರ ಸೂಪರಿಂಟೆಂಡೆಂಟು ಅವಶ್ಯಕವಾದ ವಿಚಾರಣೆಗಳನ್ನು ಮಾಡಲು ತನ್ನ ಮಂಡಲದಲ್ಲಿ ಇರುವ ಒಂದು ಮನೆಗೆ ಹೋದಾಗ ಸಿಡುಬು ಹಾಕುವುದರ ಸೂಪರಿಂಟೆಂಡೆಂಟಿನ ಪರೀಕ್ಷೆಯ ಬಗ್ಗೆ ಅತನ ಮುಂದೆ ಹಾಗೆ ಅಪೇಕ್ಷಿಸಲ್ಪಟ್ಟರೆ, ತನ್ನ ಮನೆಗೆ ಸೇರಿದವರೆಲ್ಲರನ್ನೂ ಅಥವಾ ಅವರಲ್ಲಿ ಯಾರನ್ನಾದರೂ ತೋರಿಸುವುದೂ ಮತ್ತು ಅವರ ಹೆಸರು, ವಯಸ್ಸು, ವಾಸದ ಕಾಲ, ಮತ್ತು ಸೂಪರಿಂಟೆಂಡೆಂಟು ಕೇಳಬಹುದಾದ ಇತರ ವಿವರಗಳು ಇವುಗಳನ್ನು ಹೇಳುವುದೂ ಪ್ರತಿ ಮನೆಯ ಮುಖ್ಯಸ್ಥನ ಅಥವಾ ಮುಖ್ಯಸ್ಥಳ ಅಥವಾ ಅವನು ಅಥವಾ ಅವಳು ಇಲ್ಲದಾಗ ಮನೆಯಲ್ಲಿರುವ ಮನೆಗೆ ಸೇರಿದ ಎಲ್ಲರಿಗಿಂತ ದೊಡ್ಡ ವಯಸ್ಸನ ಅಥವಾ ವಯಸ್ಸಳ ಕರ್ತವ್ಯವಾಗಿರತಕ್ಕದ್ದು.

ನಿಯಮ.

ಆದರೆ ಹನ್ನೆರಡು ವಯಸ್ಸಿನ ಮತ್ತು ಅದಕ್ಕೆ ಮೇಲ್ಪಟ್ಟ ತತ್ರಾಪಿ ಗೋಷ ಅಥವಾ ಪರದ ಕ್ರಮವನ್ನು ಆಚರಿಸುವ ಹೆಂಗಸರ ವಿಷಯದಲ್ಲಿ ಪರೀಕ್ಷೆಯು ಮತ್ತು ವಿಚಾರಣೆಗಳು ಸಂಬಂಧಪಟ್ಟ ಜನಗಳಿಂದ ಹಾಗೆ ಅಪೇಕ್ಷಿಸಲ್ಪಟ್ಟರೆ, ಸೂಪರಿಂಟೆಂಡೆಂಟಿನಪರವಾಗಿ ಯಾವಳಾದರೂ ಯೋಗ್ಯಳಾದ ಹೆಂಗಸಿನಿಂದ ಮಾಡಲ್ಪಡತಕ್ಕದ್ದು.

ನೋಟೀಸಿನಂತೆ ನಡೆಯದೆ ಹೋದಾಗ ಮಾಜಿಸ್ಟ್ರೇಟಿನ ಅಪ್ಪಣೆ.

21. 19ನೇ ನಿಬಂಧನೆಯಲ್ಲಿ ಕಂಡ ನೋಟೀಸು ತಲುಪಿಸಲ್ಪಟ್ಟು ಅದು ಅನುಸರಿಸಲ್ಪಡದೆ ಹೋದರೆ ಸಿಡುಬು ಹಾಕುವುದರ ಸೂಪರಿಂಟೆಂಡೆಂಟು ಆ ವಿಷಯವನ್ನು ಸ್ಥಳೀಯ ನ್ಯಾಯಾಧಿಕಾರವಿದ್ದ ಯಾವನಾದರೂ ಮಾಜಿಸ್ಟ್ರೇಟಿಗೆ ರಿಪೋರ್ಟು ಮಾಡತಕ್ಕದ್ದು; ಮತ್ತು ಅಂಥಾ ರಿಪೋರ್ಟನ್ನು ತೆಗೆದುಕೊಳ್ಳುವ ಮಾಜಿಸ್ಟ್ರೇಟು ಆ ಮನುಷ್ಯನನ್ನು ಸಮನ್ ಮಾಡಿ ಅವನ ವಿವರವನ್ನು ಕೇಳತಕ್ಕದ್ದು ಮತ್ತು ಅಂಥಾ ವಿವರವು ತೃಪ್ತಿಕರವಾಗಿ ಇಲ್ಲದೆ ಇದ್ದರೆ ಅಪ್ಪಣೆಯಲ್ಲಿ ಕಂಡ ತೇದಿಗೆ ಮುಂಚೆ ನೋಟೀಸಿನಂತೆ ನಡೆಯಬೇಕೆಂದು ಅಂಥಾ ಮನುಷ್ಯನನ್ನು ಆಜ್ಞಾಪಿಸಿ ಬರಹದಲ್ಲಿ ಒಂದು ಅಪ್ಪಣೆಯನ್ನು ಮಾಡತಕ್ಕದ್ದು.

ಅಪ್ಪಣೆಗೆ ವಿಧೇಯವಾಗಿ ನಡೆಯದೆ ಹೋದಾಗ ನಡವಳಿಕೆ.

22. ಅಂಥಾ ತಾರೀಖಿನಲ್ಲಿ ಆ ಮನುಷ್ಯನು ಅಪ್ಪಣೆಗೆ ವಿಧೇಯವಾಗಿ ನಡೆಯದೆ ಹೋಗಿದ್ದರೆ, ಮಾಜಿಸ್ಟ್ರೇಟು ಅವನನ್ನು ತನ್ನ ಮುಂದೆ ಸಮನ್ ಮಾಡಿಸತಕ್ಕದ್ದು ಮತ್ತು ನ್ಯಾಯವಾದ ಕಾರಣ ಅಥವಾ ನೆವವು ತೋರಿಸಲ್ಪಟ್ಟ ಹೊರತು ಅಂಥಾ ಅವಿಧೇಯತೆಯ ವಿಷಯದಲ್ಲಿ 1906ನೇ ಮೈಸೂರು ಸಿಡುಬು ಹಾಕುವ ರೆಗ್ಯುಲೇಷನಿನ 2 (3)ನೇ ಪ್ರಕರಣದ ಮೇರೆ ಶಿಕ್ಷೆಯಾಗತಕ್ಕ ಒಂದು ತಪ್ಪಿನಂತೆ ನಡೆಸತಕ್ಕದ್ದು.

ಉಪನಿಬಂಧನೆಗಳನ್ನು ಮಾಡಲು ಅಧಿಕಾರ.

23. ಎಲ್ಲಿ ಸಿಡುಬು ಹಾಕೋಣವು ಸರ್ಕಾರದಿಂದ ಅವಶ್ಯವಾಗಿ ಮಾಡಲ್ಪಟ್ಟಿದೆಯೋ ಅಂಥಾ ಯಾವುದಾದರೂ ಸ್ಥಳೀಯ ಪ್ರದೇಶಕ್ಕೆ ಮೇಲ್ಕಂಡ ನಿಬಂಧನೆಗಳು ಲಾಗೂವಾಗುವಂತೆ ಮಾಡಲ್ಪಟ್ಟಾಗ ಅಂಥಾ ಪ್ರದೇಶದ ಸ್ಥಳೀಯ ಅಧಿಕಾರಿಗಳು ಸಿಡುಬಿನ ರೆಗ್ಯುಲೇಷನು ಲಾಗೂವಾಗುವ ಸರಹದ್ದಿನೊಳಗೆ ಅದನ್ನು ಸರಿಯಾಗಿ ಉಪಯೋಗದಲ್ಲಿ ತರುವುದಕ್ಕೆ ಈ ನಿಬಂಧನೆಗಳಿಗೆ ಅನುಗುಣವಾಗಿ ಉಪನಿಬಂಧನೆಗಳನ್ನು ಆಗಾಗ್ಗೆ ಮಾಡಬಹುದು. ಅಂಥಾ ಉಪನಿಬಂಧನೆಗಳು, ತತ್ಕಾಲದಲ್ಲಿ ಉಪಯೋಗದಲ್ಲಿರುವ ವ್ಯವಹಾರ ಶಾಸ್ತ್ರದ ಮೇರೆ ಯಾವ ರೀತಿಯಲ್ಲಿ ಸ್ಥಳೀಯ ಅಧಿಕಾರಿಗಳು ಉಪನಿಬಂಧನೆಗಳನ್ನು ಮಾಡಬಹುದೋ ಅದೇ ರೀತಿಯಲ್ಲಿ ನಿರ್ಣಯಿಸಲ್ಪಡತಕ್ಕದ್ದು ಮತ್ತು ಸರ್ಕಾರದವರಿಂದ ಸ್ಥಿರಪಡಿಸಲ್ಪಟ್ಟು ಸರ್ಕಾರಿ ಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟಾಗ ವ್ಯವಹಾರಶಾಸ್ತ್ರದ ಬಲವನ್ನು ಉಂಟುಮಾಡಿರತಕ್ಕದ್ದು;

ಆದರೆ ಸರ್ಕಾರದವರು ಅಂಥಾ ಯಾವ ಉಪನಿಬಂಧನೆಗಳನ್ನು ಯಾವಾಗಲಾದರೂ ತೆಗೆದುಹಾಕಬಹುದು ಅಥವಾ ಬದಲಾಯಿಸಬಹುದು.

24. ಮೇಲಿನ 23ನೇ ನಿಬಂಧನೆಯಂತೆ ಯಾವುದಾದರೂ ಸ್ಥಳೀಯ ಪ್ರದೇಶಕ್ಕೆ ಮಾಡತಕ್ಕ ಉಪನಿಬಂಧನೆಗಳಲ್ಲಿ ಇತರ ವಿಷಯಗಳಲ್ಲದೆ ಈ ಕೆಳಗಿನವುಗಳಿಗೆ ಏರ್ಪಾಡು ಮಾಡಬಹುದು:

23ನೆ ನಿಬಂಧನೆಯು ಪ್ರಕಾರದ ಉಪ ನಿಬಂಧನೆಗಳು ಯಾವುವುಗಳಿಗೆ ಏರ್ಪಾಡು ಮಾಡಬಹುದು.

(a) ಸಿಡುಬು ಹಾಕುವ ಕೆಲಸ ನಡೆಯುವುದಕ್ಕಾಗಿ ಅನುಕೂಲವಾದ ಮಂಡಲಗಳಾಗಿ ಸ್ಥಳೀಯ ಪ್ರದೇಶದ ವಿಭಾಗ.

(b) ಪ್ರತಿ ಮಂಡಲದಲ್ಲಿಯೂ ಒಂದು ಅಥವಾ ಹೆಚ್ಚು ಸ್ಥಳಗಳನ್ನು ಸಾರ್ವಜನಿಕ ಸಿಡುಬು ಹಾಕುವ ಕೋಠಿಗಳಾಗಿ ನೇಮಕ ಮಾಡುವುದು ಮತ್ತು ಪ್ರತಿ ಕೋಠಿಯ ಹತ್ತಿರ ಕಣ್ಣಿಗೆ ಕಾಣಿಸುವ ಎತ್ತರವಾದ ಸ್ಥಳದಲ್ಲಿ ಸ್ಪಷ್ಟವಾಗಿ ತಿಳಿಯುವ ಗುರುತುಗಳನ್ನು ತಗುಲಹಾಕುವುದು.

(c) ಬೆಳೆದ ಹುಡುಗಿಯರಿಗೂ ಮತ್ತು ವಯಸ್ಕರಾದ ಹೆಂಗಸರಿಗೂ ತತ್ಕಾಲ ಗೋಷ ಅಥವಾ ಪರದ ಕ್ರಮವನ್ನು ಅನುಸರಿಸುವವರಿಗೆ ಸಿಡುಬು ಹಾಕುವದಕ್ಕಾಗಿ ವಿಶೇಷವಾದ ಏರ್ಪಾಡುಗಳನ್ನು ಮಾಡತಕ್ಕದ್ದು.

(d) ಪ್ರತಿ ಮಂಡಲಕ್ಕೂ ಬೇಕಾದ ಗಂಡಸು ಮತ್ತು ಹೆಂಗಸು ಸಾರ್ವಜನಿಕ ಸಿಡುಬು ಹಾಕುವವರು.

(e) ಸಿಡುಬು ಹಾಕುವ ಕೋಠಿಗಳಲ್ಲಿ ಸಾರ್ವಜನಿಕ ಸಿಡುಬು ಹಾಕುವವರು ಇರಬೇಕಾದ ಕಾಲ.

(f) ಸಿಡುಬು ಹಾಕುವ ಮಂಡಲಗಳ ಎಲ್ಲೆಗಳೊಳಗೆ ಅವರು ವಾಸಮಾಡೋಣ.

(g) ಅವರು ಕೆಲಸದಮೇಲಿರುವಾಗ್ಗೆ ಧರಿಸಬೇಕಾದ ಸ್ಪಷ್ಟವಾದ ಗುರುತು ಅಥವಾ ಚಿಹ್ನೆ.

(h) ಸ್ವಂತ ಸಿಡುಬುಹಾಕುವವರು ಹಾಕಬಹುದಾದ ರುಸುಮಿನ ಮೊತ್ತ ಮತ್ತು ಸಿಡುಬುಹಾಕುವ ಕೋಠಿಗಳ ಅಥವಾ ಮಂಡಲಗಳ ಹೊರಗಿನ ಸ್ಥಳಗಳಲ್ಲಿ ಸಿಡುಬುಹಾಕುವುದಕ್ಕೆ ಸಾರ್ವಜನಿಕ ಸಿಡುಬು ಹಾಕುವವರು ಕೇಳಬಹುದಾದ ವೇತನದ ಪ್ರಮಾಣ.

(i) ಜನಗಳು ತಮ್ಮ ಸ್ವಂತ ಮನೆಗಳಲ್ಲಿ ಅವರ ಮಕ್ಕಳಿಗೂ ಪರದಾ ಹೆಂಗಸರಿಗೂ ಸಿಡುಬುಹಾಕಿಸುವುದಕ್ಕೆ ಮಾಡಬೇಕಾದ ಅನುಕೂಲ್ಯಗಳು.

(j) ಸ್ಥಳೀಯ ಪ್ರದೇಶದಲ್ಲಿರುವ ಜನಗಳ ಹೆಸರುಗಳನ್ನೂ ಅವರು "ರಕ್ಷಿಸ" ಲ್ಪಟ್ಟವರೆಯೆ, ಅಥವಾ "ರಕ್ಷಿಸ" ಲ್ಪಟ್ಟಿಲ್ಲವೆ ಎಂಬುವುದನ್ನೂ, ಸಿಡುಬು ಹಾಕೋಣವನ್ನು ಅವಶ್ಯವಾಗಿ ಮಾಡಿದಮೇಲೆ ಅಥವಾ ತರುವಾಯ ಅಂಥಾ ಪ್ರದೇಶದಲ್ಲಿ ಹುಟ್ಟಿದ ಮಕ್ಕಳ ಹೆಸರುಗಳನ್ನೂ, ಸಿಡುಬು ಹಾಕೋಣವು ಅವಶ್ಯವೆಂದು ಪ್ರಕಟಿಸಲ್ಪಟ್ಟ ತರುವಾಯ ಯಾವ ಕಾಲದಲ್ಲಿಯಾದರೂ ಆ ಪ್ರದೇಶದೊಳಕ್ಕೆ ಬರುವ ಅಥವಾ ಕರೆತರಲ್ಪಡುವ ಮತ್ತು ಒಂದು ತಿಂಗಳವರೆಗೆ ಅಲ್ಲಿ ವಾಸಮಾಡಿದ "ರಕ್ಷಿಸಲ್ಪಡದ" ಮನುಷ್ಯರ ಅಥವಾ ಮಕ್ಕಳ ಹೆಸರುಗಳನ್ನೂ, ಪ್ರತಿ ಸಿಡುಬು ಹಾಕೋಣದ ಅಥವಾ ಅದನ್ನು ಮುಂದಕ್ಕೆ ಹಾಕೋಣದ ಫಲವನ್ನೂ ಮತ್ತು ಸರ್ಟಿಫಿಕೇಟುಗಳು ಏನಾದರೂ ಇದ್ದರೆ, ಕೊಡೋಣವನ್ನೂ ತೋರಿಸುವ ರಿಜಿಸ್ಟರುಗಳನ್ನು ಸಿದ್ಧಪಡಿಸೋಣ ಮತ್ತು ಇಡೋಣ.

(k) ಈ ರಿಜಿಸ್ಟರುಗಳ ಸಿದ್ಧಪಡಿಸೋಣದರಲ್ಲಿಯೂ ಇತರ ವಿಷಯಗಳಲ್ಲಿಯೂ ಮ್ಯುನಿಸಿಪಾಲಿಟಿಯಿಂದ ಮಾಡಲ್ಪಡತಕ್ಕ ಸಹಾಯ.

(l) ಸಿಡುಬು ಹಾಕುವುದರ ಲೆಕ್ಕಗಳ ಮತ್ತು ರಿಪೋರ್ಟುಗಳ ಸಿದ್ಧಪಡಿಸೋಣ.

ತಪ್ಪಿತಗಳಿಗೆ ಶಿಕ್ಷೆ.

25. (1) ಈ ನಿಬಂಧನೆಗಳಿಗೆ ವಿರೋಧವಾಗಿ (a) ನ್ಯಾಯವಾದ ಕಾರಣವಿಲ್ಲದೆ ತನಗೆ ಅಥವಾ ತನ್ನ ರಕ್ಷಣೆ ಅಥವಾ ಪಾಲನೆಯಲ್ಲಿರುವ ಮಗುವಿಗೆ ಸಿಡುಬು ಹಾಕಿಸಲು ಅಥವಾ ಸಿಡುಬು ಹಾಕಿದ ಹರುವಾಯ ಸಿಡುಬು ಹಾಕುವವನು ಹೇಳುವ ತಾರೀಖು ಮತ್ತು ಕಾಲದಲ್ಲಿ ಪರೀಕ್ಷಿಸಲ್ಪಡಲು ಅಸಡ್ಡೆ ಮಾಡುವ, (b) 12ನೆಯ ನಿಬಂಧನೆ ಮೇರೆ ಸಿಡುಬು ಹಾಕುವುದರ ಮತ್ತು ಅದರ ಫಲವನ್ನು ತೋರಿಸುವ ಸರ್ಟಿಫಿಕೇಟನ್ನು ಕಳುಹಿಸಲು ಅಸಡ್ಡೆಮಾಡುವ; (c) 19ನೆಯ ನಿಬಂಧನೆಯಂತೆ ಕೇಳಲ್ಪಟ್ಟಾಗ ವರ್ತಮಾನವನ್ನು ಕೊಡಲು ನಿರಾಕರಿಸುವ ಅಥವಾ ಮನಃಪೂರ್ವಕವಾಗಿ ಸುಳ್ಳು ವರ್ತಮಾನವನ್ನು ಕೊಡುವ ಅಥವಾ ಅದೇ ನಿಬಂಧನೆಯ ಮೇರೆ ತಲುಪಿಸಲ್ಪಟ್ಟ ನೋಟಿಸಿನಂತೆ ನಡೆಯಲು ಅಸಡ್ಡೆಮಾಡುವ (d) 23ನೆ ನಿಬಂಧನೆಯಂತೆ ಮಾಡಲ್ಪಟ್ಟು ಸ್ಥಿರಪಡಿಸಲ್ಪಟ್ಟ ಯಾವ ಉಪನಿಬಂಧನೆಗಳನ್ನಾದರೂ ಉಲ್ಲಂಘಿಸುವ ಯಾವ ಮನುಷ್ಯನಿಗಾದರೂ ;

(2) ಅವನ ಕೆಲಸವು ಅವಶ್ಯವೆಂದು ಕೇಳಿದಾಗ ಹಣ ತೆಗದುಕೊಂಡು ಸಿಡುಬು ಹಾಕಲು ನಿರಾಕರಿಸುವ ಅಥವಾ ಈ ನಿಬಂಧನೆಗಳಿಗೆ ಅನುಸಾರವಾಗಿ ಕೊಡಲ್ಪಡಬೇಕಾದ ಸರ್ಟಿಫಿಕೇಟುಗಳನ್ನು ಕೊಡಲು ಅಸಡ್ಡೆಮಾಡುವ ಅಥವಾ ಸಿಡುಬು ಹಾಕುವುದಕ್ಕಾಗಿ ಅಥವಾ ಸರ್ಟಿಫಿಕೇಟನ್ನು ಕೊಡುವುದಕ್ಕಾಗಿ ನೇಮಕವಾಗದ ಯಾವುದಾದರೂ ರುಸುಮನ್ನು ಅಥವಾ ವೇತನವನ್ನು ವಸೂಲುಮಾಡುವ ಯಾವ ಸಿಡುಬು ಹಾಕುವವನಿಗಾದರೂ,

ಒಬ್ಬ ಮಾಜಿಸ್ಟ್ರೇಟಿನ ಮುಂದೆ ತಪ್ಪು ಸ್ಥಿರಪಟ್ಟಾಗ 20 ರೂಪಾಯಿಗಳ ವರೆಗೆ ವಿಸ್ತರಿಬಹುದಾದ ಅಪರಾಧದಿಂದ ಶಿಕ್ಷೆಯಾಗತಕ್ಕದ್ದು.

(3) (a) ಈ ನಿಬಂಧನೆಗಳು ಉಪಯೋಗದಲ್ಲಿ ಬಂದಿರುವ ಪ್ರದೇಶದಲ್ಲಿ ಒಬ್ಬ ಮನುಷ್ಯನಿಗೆ ಸಿಡುಬು ಹಾಕುವ ಮತ್ತು 17ನೆ ನಿಬಂಧನೆಯ ಮೇರೆ ಅಧಿಕಾರ ಹೊಂದದ ಯಾವ ಮನುಷ್ಯನಾದರೂ ;

(b) ಮತ್ತು ಸಿಡುಬು ಹಾಕುವಾಗ ಸರಿಯಾದ ಎಚ್ಚರಿಕೆಗಳನ್ನು ತೆಗೆದುಕೊಳ್ಳಲು ಅಸಡ್ಡೆ ಮಾಡುವ ಅಥವಾ ನಿರಾಕರಿಸುವ ಅಥವಾ 15 ಮತ್ತು 17ನೆ ನಿಬಂಧನೆಗಳಲ್ಲಿ ವಿಧಿಸಿರುವ ಮೇರೆ ತಕ್ಕ ಅಧಿಕಾರಿಯಿಂದ ನಿರ್ಮಲವಾದುದೆಂದು ದೃಢೀಕರಿಸಲ್ಪ

ಡದ ಸಿಡುಬಿನ ಹಾಲನ್ನು ಉಪಯೋಗಿಸಿ ತನ್ಮೂಲಕ ಸಿಡುಬು ಹಾಕಲ್ಪಟ್ಟ ಯಾವನಾದರೂ ಮನುಷ್ಯನ ಆರೋಗ್ಯವನ್ನು ಕೆಡಿಸುವ ಯಾವ ಅಧಿಕಾರ ಹೊಂದಿದ ಸಿಡುಬು ಹಾಕುವವನಾಗಲಿ;

(c) 21ನೆ ನಿಬಂಧನೆಯ ಪ್ರಕಾರದ ಮಾಜಿಸ್ಟ್ರೇಟನ ಅಪ್ಪಣೆಗೆ ಅವಿಧೇಯನಾಗಿ ನಡೆಯುವ ಯಾವ ಮನುಷ್ಯನಾದರೂ, ಬಳ್ಳಿ ಮಾಜಿಸ್ಟ್ರೇಟನ ಮುಂದೆ ತಪ್ಪು ಸ್ಥಿರಪಟ್ಟಾಗ 50 ರೂಪಾಯಿನವರೆಗೆ ವಿಸ್ತರಿಸಬಹುದಾದ ಅಪರಾಧಕ್ಕೆ ಗುರಿಯಾಗತಕ್ಕದ್ದು.

26. 25ನೆ ನಿಬಂಧನೆಯಂತೆ ತಪ್ಪು ಸ್ಥಿರಪಟ್ಟ ತರುವಾಯ ತನಗೆ ಅಥವಾ ತನ್ನ ಪಾಲನೆಯಲ್ಲಿರುವ ಮಗುವಿಗೆ ಸಿಡುಬು ಹಾಕಿಸಲು ತನ್ನ ನಿರಾಕರಣೆಯನ್ನು ಪ್ರಬಲವಾದ ಕಾರಣವಿಲ್ಲದೆ ಒಂದು ವಾರದವರೆಗೆ ನಡೆಸುವ ಯಾವ ಮನುಷ್ಯನಾದರೂ 20 ರೂಪಾಯಿಗೆ ಮೀರದ ಅಪರಾಧಕ್ಕೆ ತಿರಿಗಿ ಗುರಿಯಾಗತಕ್ಕದ್ದು.

ತಾರೀಖು 10ನೆ ಜನವರಿ 1907.

ನಂ. ಜೆ. 1977-ಲೆಜಿಸ್. 23-06—2. 1901ನೆ ಇಸವಿಯ 2ನೆ ನಂಬರ ಮೈಸೂರು ಸೀಮೆಯ ಬೇಟೆ ಮೃಗಗಳ ಮತ್ತು ಮೀನಿನ ರಕ್ಷಣೆಯ ರೆಗ್ಯುಲೇಷನಿನಿಂದ ಕೊಡಲ್ಪಟ್ಟ ಅಧಿಕಾರವನ್ನು ಚಲಾಯಿಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, 1905ನೆ ಇಸವಿಯ ಮಾರ್ಚಿ 7ನೆ ತಾರೀಖಿನ ಜೆ. 2542-ಲೆಜಿಸ್. 23—7ನೆ ನಂಬರಿನ ಇಸ್ತಿಹಾರಿನಿಂದ ತಿದ್ದುಪಾಟು ಮಾಡಲ್ಪಟ್ಟ 1901ನೆ ಇಸವಿಯ ಡಿಸೆಂಬರ 11ನೆ ತಾರೀಖಿನ 9007-ಲೆಜಿಸ್. 56ನೆ ನಂಬರಿನ ಇಸ್ತಿಹಾರ್‌ನಾಮೆಯ ಮೇರೆಗೆ ಪ್ರಕಟಿಸಲ್ಪಟ್ಟ ನಿಬಂಧನೆಗಳ 3ನೆ ನಿಬಂಧನೆಗೆ ಬದಲಾಗಿ ಈ ಕೆಳಗಣ ನಿಬಂಧನೆಯನ್ನು ಸೇರಿಸತಕ್ಕದ್ದೆಂದು ಹುಕುಂ ದಯಪಾಲಿಸಿರುತ್ತಾರೆ.

"3. (1) 1908ನೆ ಇಸವಿಯ ಜೂನ್ 15ನೆ ತಾರೀಖಿಗೆ ಮುಗಿಯುವ ಮುಂದಿನ ಇನ್ನೊಂದು ಅವಧಿಯ ವರೆಗೆ, ಕಾಂತಿಯುಕ್ತವಾದ ಬಣ್ಣದ ಗರಿಗಳುಳ್ಳ ಪಕ್ಷಿಗಳನ್ನೂ ನವಿಲುಗಳನ್ನೂ ಮತ್ತು (ಈ ನಿಬಂಧನೆಯ 2ನೆ ಕಲಮಿನಲ್ಲಿ ನಿಯಮಿಸಿದ ಮೇರೆಗೆ ವಿನಾ) ಜಿಂಕೆಗಳನ್ನೂ ಕೊಲ್ಲುವುದಾಗಲಿ ಹಿಡಿಯುವುದಾಗಲಿ ನಿಷೇಧಿಸಲ್ಪಟ್ಟಿದೆ.

(2) ಈ ನಿಬಂಧನೆಗಳ ಮೇರೆಗೆ ಬೇಟೆ ಲೈಸೆನ್ಸು ಪಡೆದಿರುವವನು ಅರ್ಜಿ ಕೊಟ್ಟರೆ, ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರು, ಅಂಥಾ ಲೈಸೆನ್ಸುದಾರನಿಗೆ, ಸದರಿ ಲೈಸೆನ್ಸು ಯಾವ ವರ್ಷಕ್ಕೋಸ್ಕರ ಕೊಡಲ್ಪಟ್ಟಿದೆಯೋ ಆ ವರ್ಷದ ಒಳಗಾಗಿ, ಕೃಷ್ಣಮೃಗವಾದರೆ 15 ಅಂಗುಲಗಳಿಗಿಂತ ಕಮ್ಮಿಯಲ್ಲದ ಮತ್ತು ಕೊಂಡೆಗುರಿಯಾದರೆ 5 ಅಂಗುಲಗಳಿಗಿಂತ ಕಮ್ಮಿಯಲ್ಲದ ಪ್ರಮಾಣದ ಕೊಂಬುಗಳುಳ್ಳ, ಒಟ್ಟು ಎರಡಕ್ಕಿಂತ ಹೆಚ್ಚಾಗದ ಜಿಂಕೆಗಳನ್ನು ಕೊಲ್ಲುವುದಕ್ಕೆ ಹುಕುಂ ಕೊಡಬಹುದು. ಲೈಸೆನ್ಸದಾರನು ತಾನು ಕೊಂದ ಜಿಂಕೆಗಳ ವಿಷಯವಾಗಿ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಿಗೆ ನಿಷ್ಕಾರಣವಾಗಿ ಸಾವಕಾಶ ಮಾಡದೆ ಒಂದು ರಿಪೋರ್ಟನ್ನು ಕೊಡಬೇಕು."

ಅಪ್ಪಣೆಯ ಮೇರೆಗೆ,

ಕೆ. ಎಸ್. ಚಂದ್ರಶೇಖರ ಐಯ್ಯರ್,

ಸೆಕ್ರೆಟರಿ.

ಮೈಸೂರ ಗೆಜೆಟ್.

ನಂ. 42.] ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. [ನಂ. 5.

ಬೆಂಗಳೂರು, ಗುರುವಾರ, ಜನವರಿ ತಾ॥ 31, ಸನ್ 1907.

III ನೆ ಭಾಗ.

ಲೆಜಿಸ್ಲೇಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನ್‌ಮೆಂಟು.

ಲೆಜಿಸ್ಲೇಟಿವ್ ಇಲಾಖೆ.

ತಾರೀಖು: 10ನೆ ಜನವರಿ 1907.

ನಂ. ಜೆ. 1977-ಲೆಜಿಸ. 23-06—2. 1901ನೆ ಇಸವಿಯ 2ನೆ ನಂಬರ ಮೈಸೂರು ಸೀಮೆಯ ಬೇಟೆ ಮೃಗಗಳ ಮತ್ತು ಮೀನಿನ ರಕ್ಷಣೆಯ ರೆಗ್ಯುಲೇಷನಿನಿಂದ ಕೊಡಲ್ಪಟ್ಟ ಅಧಿಕಾರವನ್ನು ಚಲಾಯಿಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, 1905ನೆ ಇಸವಿಯ ಮಾರ್ಚಿ 7ನೆ ತಾರೀಖಿನ ಜೆ. 2542-ಲೆಜಿಸ. 23—7ನೆ ನಂಬರಿನ ಇಸ್ತಿಹಾರನಿಂದ ತಿದ್ದುಪಾಟು ಮಾಡಲ್ಪಟ್ಟ 1901ನೆ ಇಸವಿಯ ಡಿಸೆಂಬರ 11ನೆ ತಾರೀಖಿನ 9007-ಲೆಜಿಸ. 56ನೆ ನಂಬರಿನ ಇಸ್ತಿಹಾರನಾಮೆಯ ಮೇರೆಗೆ ಪ್ರಕಟಿಸಲ್ಪಟ್ಟ ನಿಬಂಧನೆಗಳ 3ನೆ ನಿಬಂಧನೆಗೆ ಬದಲಾಗಿ ಈ ಕೆಳಗಣ ನಿಬಂಧನೆಯನ್ನು ಸೇರಿಸತಕ್ಕದ್ದೆಂದು ಹುಕುಂ ದಯಪಾಲಿಸಿರುತ್ತಾರೆ.

"3. (1) 1908ನೆ ಇಸವಿಯ ಜೂನ 15ನೆ ತಾರೀಖಿಗೆ ಮುಗಿಯುವ ಮುಂದಿನ ಇನ್ನೊಂದು ಅವಧಿಯ ವರೆಗೆ, ಕಾಂತಿಯುಕ್ತವಾದ ಬಣ್ಣದ ಗರಿಗಳುಳ್ಳ ಪಕ್ಷಿಗಳನ್ನೂ ನವಿಲುಗಳನ್ನೂ ಮತ್ತು (ಈ ನಿಬಂಧನೆಯ 2ನೆ ಕಲಮಿನಲ್ಲಿ ನಿಯಮಿಸಿದ ಮೇರೆಗೆ ವಿನಾ) ಜಿಂಕೆಗಳನ್ನೂ ಕೊಲ್ಲುವುದಾಗಲಿ ಹಿಡಿಯುವುದಾಗಲಿ ನಿಷೇಧಿಸಲ್ಪಟ್ಟಿದೆ.

"(2) ಈ ನಿಬಂಧನೆಗಳ ಮೇರೆಗೆ ಬೇಟೆ ಲೈಸೆನ್ಸು ಪಡೆದಿರುವವನು ಅರ್ಜಿ ಕೊಟ್ಟರೆ, ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರು, ಅಂಥಾ ಲೈಸೆನ್ಸುದಾರನಿಗೆ, ಸದರಿ ಲೈಸೆನ್ಸು ಯಾವ ವರ್ಷಕ್ಕೋಸ್ಕರ ಕೊಡಲ್ಪಟ್ಟಿದೆಯೋ ಆ ವರ್ಷದ ಒಳಗಾಗಿ, ಕೃಷ್ಣಮೃಗವಾದರೆ 15 ಅಂಗುಲಗಳಿಗಿಂತ ಕಮ್ಮಿಯಲ್ಲದ, ಮತ್ತು ಕೊಂಡಗುರಿಯಾದರೆ 5 ಅಂಗುಲಗಳಿಗಿಂತ ಕಮ್ಮಿಯಲ್ಲದ ಪ್ರಮಾಣದ ಕೊಂಬುಗಳುಳ್ಳ, ಒಟ್ಟು ಎರಡಕ್ಕಿಂತ ಹೆಚ್ಚಾಗದ ಜಿಂಕೆಗಳನ್ನು ಕೊಲ್ಲುವುದಕ್ಕೆ ಹುಕುಂ ಕೊಡಬಹುದು. ಲೈಸೆನ್ಸದಾರನು ತಾನು ಕೊಂದ ಜಿಂಕೆಗಳ ವಿಷಯವಾಗಿ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಿಗೆ ನಿಷ್ಕಾರಣವಾಗಿ ಸಾವಕಾಶ ಮಾಡದೆ ಒಂದು ರಿಪೋರ್ಟನ್ನು ಕೊಡಬೇಕು."

ಅಪ್ಪಣೆಯ ಮೇರೆಗೆ,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಸೆಕ್ರೆಟರಿ.

ತಾರೀಖು 28ನೆ ಡಿಸೆಂಬರ 1906.

ನಂಬರು 5618—ಮೆಡಿ. 43-04—4.

ಪ್ರಕಟನೆ.

1906ನೆ 1ನೆ ನಂಬರ ಮೈಸೂರು ಸಿಡುಬು ಹಾಕುವ ರೆಗ್ಯುಲೇಷನಿನ ಮೇರೆ ಮಾಡಿದ ಇದರಡಿ ಕಂಡ ಮಸೂದಾ ಯಾದಿಷ್ಟು ನಿಬಂಧನೆಗಳನ್ನು ಸರ್ವಜನರ ತಿಳುವಳಿಕೆಯ ಬಗ್ಗೆ ಪ್ರಕಟಿಸಿ ಇದೆ :—

2. ಗೆಜೆಟನಲ್ಲಿ ಮೇಲ್ಕಂಡ ಮಸೂದಾ ಯಾದಿಷ್ಟು ನಿಬಂಧನೆಗಳು ಪ್ರಕಟನೆಯಾದ ತೇದಿಯಿಂದ ಎರಡೂವರೆ ತಿಂಗಳುಗಳ ಕೊನೆಯಲ್ಲಿ ಅವು ಆಲೋಚನೆಗೆ ತೆಗೆದುಕೊಳ್ಳಲ್ಪಡುವುವು ; ಮತ್ತು ಆ ಕಾಲದೊಳಗೆ ಬರುವ ಎಲ್ಲಾ ಸೂಚನೆಗಳೂ ಗುಣದೋಷ ನಿರೂಪಣೆಗಳೂ ಕ್ರಮವಾಗಿ ಪರ್ಯಾಲೋಚಿಸಲ್ಪಡುವುವು.

ಅಪ್ಪಣೆಯ ಮೇರೆಗೆ,

ಕೆ. ಎಸ್. ಚಂದ್ರಶೇಖರ ಐಯ್ಯರ್,

ಸರ್ಕಾರಿ ಜನರಲ್ ಮತ್ತು ರವಿನ್ಯೂ ಇಲಾಖೆಗಳ ಸಕ್ರೆಟರಿ.

1906ನೆ ಮೈಸೂರು ಸಿಡುಬು ಹಾಕುವ ರೆಗ್ಯುಲೇಷನಿನ ಪ್ರಕಾರದ ನಿಬಂಧನೆಗಳು.

1906ನೆ ಮೈಸೂರು ಸಿಡುಬು ಹಾಕುವ ರೆಗ್ಯುಲೇಷನಿನ 21(1)ನೆ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ನಡೆಸುವುದರಲ್ಲಿ, ಎಲ್ಲಿ ಸಿಡುಬು ಹಾಕೋಣವು ಅವಶ್ಯವಾಗಿ ತಕ್ಕದೆಂದು ಪ್ರಕಟಿಸಿದೆಯೊ ಅಂಥಾ ಸ್ಥಳೀಯ ಪ್ರದೇಶಗಳಲ್ಲಿ ಅಂಥಾ ಪ್ರಕಟನೆಯು ಉಪಯೋಗದಲ್ಲಿರುವ ಗಡುವಿನ ವರೆಗೂ ಅಲ್ಲಿನ ಜನಗಳಿಗೆ ಸಿಡುಬು ಹಾಕೋಣವನ್ನು ಕ್ರಮ ಪಡಿಸುವುದಕ್ಕೆ ಈ ಕೆಳಗಿನ ನಿಬಂಧನೆಗಳನ್ನು ವಿಧಿಸಲು ಶ್ರೀಮನ್ ಮಹಾರಾಜಾವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ :—

1. ವಿಷಯದಲ್ಲಿ ಅಥವಾ ಪೂರ್ವಾಪರ ಸಂಬಂಧದಲ್ಲಿ ಏನಾದರೂ ವಿರೋಧವಾಗಿದ್ದ ಹೊರತು ಈ ನಿಬಂಧನೆಗಳಲ್ಲಿ,

"ತಂದೆ ತಾಯಿ" — (1) ತಂದೆ ತಾಯಿ ಎಂದರೆ ಒಂದು ಔರಸ ಮಗುವಿನ ತಂದೆ ಅಥವಾ [illegible] ತಾಯಿ, ಮತ್ತು ಜಾರ [illegible] ಮಗುವಿನ ತಾಯಿ ಎಂದು ಅರ್ಥ.

"ರಕ್ಷಕ" — (2) ರಕ್ಷಕ ಎಂದರೆ ವ್ಯವಹಾರಶಾಸ್ತ್ರ ರೀತ್ಯಾ ಅಥವಾ ಸಹಜವಾದ ಹಕ್ಕಿನಿಂದ, ಅಥವಾ ಅಂಗೀಕರಿಸಲ್ಪಟ್ಟ ವಾಡಿಕೆಯಿಂದ ಯಾವುದಾದರೂ ಮಗುವಿನ ರಕ್ಷಣೆ, ಪೋಷಣೆ, ಮತ್ತು ಬದರಿಕೆಯು ಯಾವನಿಗೆ ಬಂದಿದೆಯೊ ಅಥವಾ ಯಾವನು ಯಾವುದಾದರೂ ಮಗುವಿನ ರಕ್ಷಣೆ, ಪೋಷಣೆ ಅಥವಾ ಬದರಿಕೆಯನ್ನು ಅಂಗೀಕರಿಸಿರುತ್ತಾನೆಯೊ ಅಥವಾ ವಹಿಸಿರುತ್ತಾನೆಯೊ ಅಥವಾ ಯಾವುದಾದರೂ ಮಗುವಿನ ರಕ್ಷಣೆ ಅಥವಾ ಬದರಿಕೆಯ [illegible] ನ್ಯಾಯಸ್ಥಾನ [illegible] ಅಧಿಕಾರ ಹೊಂದಿರುವ ಯಾವನಾದರೂ ಅಧಿಕಾರಿಯಿಂದ ಯಾವನಿಗೆ ಒಪ್ಪಿಸಲ್ಪಟ್ಟಿದೆಯೊ ಅಂಥಾ ಯಾವನಾದರೂ ಮನುಷ್ಯನೆಂದು ಅರ್ಥ.

"ಸಿಡುಬು ಹಾಕುವವನು" — (3) ಸಿಡುಬು ಹಾಕುವವನು ಎಂದರೆ ಸಿಡುಬಿನ ವ್ಯಾಧಿಯು ಬಾರದಂತೆ ಜನಗಳಿಗೆ ಸಿಡುಬು ಹಾಕಲು ಸರ್ಕಾರಿ ಸ್ಯಾನಿಟರಿ ಕಮಿಷನರಿಂದ ಅಧಿಕಾರ ಕೊಡಲ್ಪಟ್ಟಿರುವ ಯಾವನಾದರೂ ವೈದ್ಯ, ಅಥವಾ ಇತರ ಕ್ರಮವಾಗಿ ಯೋಗ್ಯತೆಯನ್ನು ಹೊಂದಿದ ಮನುಷ್ಯನೆಂದು ಅರ್ಥ ಮತ್ತು ಆ ಮಾತಿನಲ್ಲಿ ಸಿಡುಬಿನ ಸೂಪರಿಂಟೆಂಡೆಂಟುಗಳೂ ಸೇರಿರುತ್ತಾರೆ. [illegible]

"ವೈದ್ಯ" — (4) ವೈದ್ಯನು ಎಂದರೆ ಒಂದು (ಯೂನಿವರ್ಸಿಟಿ) ವಿಶ್ವವಿದ್ಯಾಲಯದ ಅಥವಾ ಕಾಲೇಜಿನ (ಡಿಗ್ರಿ) ಪದವಿಯನ್ನು [illegible] ಅಥವಾ ವೈದ್ಯದಲ್ಲಿ ಸನ್ನದನ್ನು ಅಥವಾ ಬರೆದು ಪರಿಗ್ರಹಿಸಲ್ಪಟ್ಟ ವೈದ್ಯಶಾಸ್ತ್ರ [illegible] ಯೋಗ್ಯತಾ ಪತ್ರಿಕೆಯನ್ನು ಹೊಂದಿ ಸಿಡುಬು ಹಾಕೋಣವು ಅವಶ್ಯಕವಾಗಿ ಮಾಡಲ್ಪಟ್ಟಿರುವ ಸ್ಥಳೀಯ ಪ್ರದೇಶದಲ್ಲಿ ಉಪಯೋಗಿಸಲ್ಪಟ್ಟಿರುವ ಹಾಸ್ಪಿಟಲ್ [illegible] ಅಸಿಸ್ಟೆಂಟಿನ ಅಥವಾ ಮೇಲ್ಪಟ್ಟ ಸ್ಥಾನದ ಮನುಷ್ಯನೆಂದು ಅರ್ಥ.

"ಮಗು" — (5) ಮಗು ಎಂದರೆ ಆರು ತಿಂಗಳಿಗೆ ಮೇಲ್ಪಟ್ಟು ಹನ್ನೆರಡು ವರ್ಷಗಳ ವಯಸ್ಸಿಗೆ ಒಳಪಟ್ಟಿರುವ ಹುಡುಗ ಅಥವಾ ಹುಡುಗಿ ಎಂದು ಅರ್ಥ.

"ವಯಸ್ಥ" — (6) ವಯಸ್ಥನು ಎಂದರೆ ಹನ್ನೆರಡರ ಅಥವಾ ಅದಕ್ಕೆ ಮೇಲ್ಪಟ್ಟು ಮತ್ತು ಅರವತ್ತಕ್ಕೆ ಒಳಪಟ್ಟ ವಯಸ್ಸಿನ ಯಾವನಾದರೂ ಮನುಷ್ಯನೆಂದು ಅರ್ಥ.

"ರಕ್ಷಿಸಲ್ಪಡದ ಮನುಷ್ಯನು" — (7) ರಕ್ಷಿಸಲ್ಪಡದ ಮನುಷ್ಯನು—ಸಿಡುಬಿನ ವ್ಯಾಧಿಯನ್ನು ಉಂಟಾಗಿದ್ದದರಿಂದ ಅಥವಾ ಸಾರ್ಥಕವಾಗಿ ಸಿಡುಬು ಹಾಕಲ್ಪಟ್ಟಿರುವದರಿಂದ ಸಿಡುಬಿನ ವ್ಯಾಧಿಯು ಬಾರದಂತೆ ರಕ್ಷಿಸಲ್ಪಡದೆ ಇರುವ ಅಥವಾ ಸಿಡುಬು ಹಾಕುವದಕ್ಕೆ ಅಗ್ರಾಹ್ಯಕನಾಗಿರುವದಾಗಿ, ಈ ನಿಬಂಧನೆಗಳಲ್ಲಿ 11ನೆ ನಿಬಂಧನೆಯ ಮೇರೆ ದೃಢೀಕರಿಸಲ್ಪಡದೆ ಇರುವ ಮನುಷ್ಯ, ಮಗು ಅಥವಾ ವಯಸ್ಥನಾಗಿ ಇರುತ್ತಾನೆ.

"ಸಿಡುಬು ಹಾಕುವ ಕೋಠಿ" — (8) ಸಿಡುಬು ಹಾಕುವ ಕೋಠಿ ಎಂದರೆ ಎಲ್ಲಿ ಸಿಡುಬು ಹಾಕುವವನಿಂದ ಜನಗಳಿಗೆ ಸಿಡುಬು ಹಾಕಲ್ಪಡುತ್ತದೆಯೊ ಅಥವಾ ಎಲ್ಲಿ ಉಚಿತವಾಗಿ ಸಿಡುಬು ಹಾಕಲ್ಪಡುತ್ತದೆಯೊ ಅಂಥಾ ಸ್ಥಳ ಅಥವಾ ಕಟ್ಟಡ ಎಂದು ಅರ್ಥ.

"ಸಿಡುಬು ಹಾಕುವ ಮಂಡಲ"

(9) ಸಿಡುಬು ಹಾಕುವ ಮಂಡಲ ಎಂದರೆ ಎಲ್ಲಿ ಸಿಡುಬು ಹಾಕೋಣವು ಅವಶ್ಯಕವಾಗಿ ಮಾಡಲ್ಪಟ್ಟದೆಯೊ ಮತ್ತು ಯಾವುದು ಸಿಡುಬು ಹಾಕುವ ಕೆಲಸಗಳಿಗಾಗಿ ಭಾಗಗಳಾಗಿ ವಿಭಾಗಿಸಲ್ಪಟ್ಟದೆಯೊ ಮತ್ತು ಯಾವುವರ ಆದೊ ಪ್ರತಿ ಭಾಗದಲ್ಲಿಯೂ ಒಂದು ಅಥವಾ ಹೆಚ್ಚು ಸಿಡುಬು ಹಾಕುವ ಕೋಠಿಗಳು ಇಡಲ್ಪಟ್ಟವೆಯೊ ಅಂಥಾ ಸ್ಥಳೀಯ ಪ್ರದೇಶದ ಅಂಥಾ ಭಾಗ ಎಲ್ಲಿ ಒಂದು ಎಂಬ ಅರ್ಥ.

2. ಯಾವುದರಲ್ಲಿ ಸಿಡುಬು ಹಾಕೋಣವು ಅವಶ್ಯಕವೆಂದು ಪ್ರಕಟಿಸಲ್ಪಟ್ಟದೆಯೊ ಅಂಥಾ ಪ್ರತಿ ಸ್ಥಳೀಯ ಪ್ರದೇಶವೂ ಸಿಡುಬು ಹಾಕುವ ಮಂಡಲವಾಗಿರತಕ್ಕದ್ದು ಅಥವಾ ಇದರಲ್ಲಿ ಮುಂದೆ ವಿಧಿಸಿರುವ ರೀತಿಯಲ್ಲಿ ಅಂಥಾ ಮಂಡಲಗಳಾಗಿ ವಿಭಾಗಿಸಲ್ಪಡತಕ್ಕದ್ದು.

"ಸಿಡುಬು ಹಾಕುವ ಕೋಠಿಗಳು" "ಸಿಡುಬು ಹಾಕುವುದು" "ಸಿಡುಬು ಹಾಕುವುದರ ಸೂಪರಿಂಟೆಂಡೆಂಟುಗಳು."

3. ಎಲ್ಲಿ ಸಿಡುಬು ಹಾಕೋಣವು ಕ್ಲುಪ್ತವಾದ ಕೆಲವು ಘಂಟೆಗಳಲ್ಲಿ ಉಚಿತವಾಗಿ ಮಾಡಲ್ಪಡುತ್ತದೆಯೊ ಅಂಥಾ ಒಂದು ಅಥವಾ ಹೆಚ್ಚು ಸಿಡುಬು ಹಾಕುವ ಕೋಠಿಗಳನ್ನು ಪ್ರತಿ ಮಂಡಲವೂ ಉಳ್ಳದಾಗಿರತಕ್ಕದ್ದು. ಪ್ರತಿ ಮಂಡಲಕ್ಕೂ ಇದರಲ್ಲಿ ಮುಂದೆ ವಿಧಿಸಿರುವ ರೀತಿಯಲ್ಲಿ ಒಂದು ಅಥವಾ ಹೆಚ್ಚು ಹೆಂಗಸು ಮತ್ತು ಗಂಡಸು ಸಿಡುಬು ಹಾಕುವವರನ್ನು ನೇಮಿಸತಕ್ಕದ್ದು; ಮತ್ತು ಪ್ರತಿ ಸ್ಥಳೀಯ ಪ್ರದೇಶಕ್ಕೂ ಇದರಲ್ಲಿ ಮುಂದೆ ವಿಧಿಸಿರುವ ರೀತಿಯಲ್ಲಿ ಒಬ್ಬ ಅಥವಾ ಹೆಚ್ಚು ಸಿಡುಬು ಹಾಕುವುದರ ಸೂಪರಿಂಟೆಂಡೆಂಟುಗಳನ್ನು ನೇಮಿಸತಕ್ಕದ್ದು. ಅಂಥಾ ಸೂಪರಿಂಟೆಂಡೆಂಟುಗಳು ಯಾವಾಗಲೂ ಕ್ರಮವಾಗಿ ಯೋಗ್ಯತೆಯನ್ನು ಹೊಂದಿದ ವೈದ್ಯರಾಗಿರತಕ್ಕದ್ದು ಅಥವಾ ಎಲ್ಲಿ ಸಿಡುಬು ಹಾಕೋಣವು ಅವಶ್ಯಕವಾಗಿ ಮಾಡಲ್ಪಟ್ಟದೆಯೊ ಅಂಥಾ ಸ್ಥಳೀಯ ಪ್ರದೇಶದಲ್ಲಿ ಉದ್ಯೋಗಿಸಲ್ಪಟ್ಟಿರುವ ಹಾಸ್ಪಿಟಲ್ ಅಸಿಸ್ಟೆಂಟಿನ ಸ್ಥಾನಕ್ಕೆ ಅಥವಾ ಅದಕ್ಕೆ ಮೇಲ್ಪಟ್ಟ (ಮೆಡಿಕಲ್ ಆಫೀಸರ್) ವೈದ್ಯ ಅಧಿಕಾರಿಗಳಾಗಿರತಕ್ಕದ್ದು.

"ಸ್ವಂತ ಸಿಡುಬು ಹಾಕುವವರು"

4. ಸ್ವಂತ ಸಿಡುಬು ಹಾಕುವವರ ನೇಮಕವು ಮೈಸೂರು ಸರ್ಕಾರದ ಸ್ಯಾನಿಟರಿ ಕಮಿಷನರಿಗೆ ಸೇರಿ ಇರತಕ್ಕದ್ದು. ಅವರು ಸಿಡುಬು ಹಾಕುವವನಾಗಲಪೇಕ್ಷಿಸುವವನು ಯೋಗ್ಯನಾಗಿದಾನೆಂದು ತೃಪ್ತಿಪಟ್ಟ ತರುವಾಯ, ಒಂದು ಸಿಡುಬು ಹಾಕುವ ಮಂಡಲದಲ್ಲಿ ಸಿಡುಬು ಹಾಕುವುದಕ್ಕೆ ಅವನಿಗೆ ಅಧಿಕಾರ ಕೊಡುವ ಒಂದು ಬರಹಮೂಲಕವಾದ ಲೈಸೆನ್ಸನ್ನು ಅವನಿಗೆ ಕೊಡುವರು. ಮೇಲ್ಕಂಡ ಸ್ಯಾನಿಟರಿ ಕಮಿಷನರ ವಿವೇಕಾನುಸಾರವಾಗಿ ಈ ಲೈಸೆನ್ಸನ್ನು ಸ್ವಲ್ಪಕಾಲದ ಮಟ್ಟಿಗೆ ನಿಲ್ಲಿಸಬಹುದು ಅಥವಾ ತೆಗೆದುಹಾಕಬಹುದು.

"ರಕ್ಷಿಸಲ್ಪಡುವ" ಮನುಷ್ಯನಿಗೆ ಸಿಡುಬು ಹಾಕತಕ್ಕದ್ದು.

5. ಎಲ್ಲಿ ಸಿಡುಬು ಹಾಕೋಣವು ಅವಶ್ಯಕವೆಂದು ಸರ್ಕಾರದಿಂದ ಪ್ರಕಟಿಸಲ್ಪಟ್ಟದೆಯೊ ಅಂಥಾ ಸ್ಥಳೀಯ ಪ್ರದೇಶದಲ್ಲಿ ಒಂದು ತಿಂಗಳ ಕಾಲದ ವರೆಗೆ ಯಾವನಾದರೂ "ರಕ್ಷಿಸಲ್ಪಡುವ" ಮನುಷ್ಯನು, ಪುರುಷನು, ಅಥವಾ ಆರು ತಿಂಗಳ ವಯಸ್ಸಿನೊಳಗಿಲ್ಲದೆ ಇರುವ ಮಗು, ವಾಸ ಮಾಡಿದ್ದರೆ ಅವನು ಅಥವಾ ಅವಳು, ವಯಸ್ಕನಾಗಿ ಅಥವಾ ವಯಸ್ಕಳಾಗಿ ಇದ್ದರೆ, ಸಿಡುಬು ಹಾಕಿಸಿಕೊಳ್ಳುವುದಕ್ಕಾಗಿ ಒಂದು ಸಿಡುಬು ಹಾಕುವ ಕೋಠಿಗೆ ಹೋಗತಕ್ಕದ್ದು ಅಥವಾ ಒಂದು ಮಗುವಾಗಿದ್ದರೆ ಸಿಡುಬು ಹಾಕಿಸುವುದಕ್ಕಾಗಿ ಅದರ ತಂದೆ ತಾಯಿ ಅಥವಾ ರಕ್ಷಕರು ಅದನ್ನು ಅಲ್ಲಿಗೆ ಕರೆದುಕೊಂಡು ಹೋಗತಕ್ಕದ್ದು ಅಥವಾ ಸಿಡುಬು ಹಾಕಿಸಿಕೊಳ್ಳಬೇಕೆಂಬುವವನು ಅಥವಾ, ಒಂದು ಮಗುವಾಗಿದ್ದರೆ, ಅದರ ತಂದೆ ತಾಯಿ ಅಥವಾ ರಕ್ಷಕನು ಅವನ ಅಥವಾ ಅದರ ಸಿಡುಬು ಹಾಕೋಣವನ್ನು ಒಬ್ಬ ಸಿಡುಬು ಹಾಕುವನಿಂದ ಸ್ವಂತವಾಗಿ ಮಾಡಿಸಬಹುದು. ಆದರೆ ಸಿಡುಬಿನ ವ್ಯಾಧಿಯ ಸೋಂಕಿನ ತತ್ಕ್ಷಣದ ಅಪಾಯವು ಇದ್ದ ಹೊತ್ತು ಒಂದು ಮನೆತನಕ್ಕೆ ಸೇರಿದ ರಕ್ಷಿಸಲ್ಪಡುವವರು ತಾವು ವಾಸ ಮಾಡುವ ಮಂಡಲದ ಸೂಪರಿಂಟೆಂಡೆಂಟಿನ ಅಪ್ಪಣೆಯನ್ನು ಪಡೆದು, ಸಿಡುಬು ಹಾಕಿಸಿಕೊಳ್ಳುವುದರಿಂದ ಆ ಮನೆತನಕ್ಕೆ ಸೇರಿದವರ ಪ್ರತಿದಿನದ ಜೀವಿಕೆಗೆ ಸಾಧ್ಯವಾದಷ್ಟು ಸ್ವಲ್ಪ ಅಡ್ಡಿಯಾಗುವಂತೆ ಮೇಲೆ ಕಂಡ ಸೂಪರಿಂಟೆಂಡೆಂಟು ನಿಶ್ಚಯಿಸಬಹುದಾದಹಾಗೆ ಸರದಿ ವೇಳೆ ಬಿಡಿಬಿಡಿಯಾಗಿ ಅಥವಾ ಗುಂಪುಗುಂಪುಗಳಾಗಿ ಸಿಡುಬು ಹಾಕಿಸಿಕೊಳ್ಳಬಹುದು. ಆದರೆ ಯಾವ ಸಂದರ್ಭದಲ್ಲಿಯೂ ಒಬ್ಬ ಮನುಷ್ಯನು ಅಥವಾ ಒಂದು ಗುಂಪಿನವರು ಸಿಡುಬು ಹಾಕಿಸಿಕೊಳ್ಳುವುದಕ್ಕೂ ಮತ್ತು ಮತ್ತೊಬ್ಬ ಮನುಷ್ಯನು ಅಥವಾ ಮತ್ತೊಂದು ಗುಂಪಿನವರು ಸಿಡುಬು ಹಾಕಿಸಿಕೊಳ್ಳುವುದಕ್ಕೂ ಮೇಲ್ಕಂಡ ಕಾರಣಕ್ಕಾಗಿ ಆಗುವ ಮಧ್ಯಕಾಲವು ನಾಲ್ಕು ವಾರಗಳಿಗಿಂತ ಹೆಚ್ಚಾಗಲು ಅವಕಾಶ ಕೊಡಕೂಡದು.

ಸಿಡುಬು ಹಾಕುವವನು ಜನಗಳಿಗೆ ಸಿಡುಬು ಹಾಕತಕ್ಕದ್ದು ಅಥವಾ ಸಿಡುಬು ಹಾಕುವುದನ್ನು ಮುಂದಕ್ಕೆ ಇಟ್ಟುದಕ್ಕಾಗಿ ಸರ್ಟಿಫಿಕೇಟುಗಳನ್ನು ಕೊಡತಕ್ಕದ್ದು.

6. ಅಂಥಾ ಸಿಡುಬು ಹಾಕುವವರು ಅಂಥಾ ಮನುಷ್ಯನಿಗೆ ಸಿಡುಬು ಹಾಕತಕ್ಕದ್ದು ಮತ್ತು ಅವನಿಗೆ ಅಥವಾ ಅವಳಿಗೆ ಅಥವಾ ಒಂದು ಮಗುವಾಗಿದ್ದರೆ, ಅದರ ತಂದೆ ತಾಯಿ ಅಥವಾ ರಕ್ಷಕನಿಗೆ, ಸಿಡುಬು ಹಾಕಿದ ತೇದಿಯನ್ನೂ ಸಿಡುಬು ಹಾಕುವುದರ ಫಲವನ್ನೂ ತಿಳಿದುಕೊಳ್ಳುವುದಕ್ಕಾಗಿ ಸಿಡುಬು ಹಾಕಿದ ಮನುಷ್ಯನನ್ನು ಅಥವಾ ಮಗುವನ್ನು ಪರೀಕ್ಷಿಸುವ ತೇದಿಯನ್ನೂ ಘಂಟೆಯನ್ನೂ ವಿವರಿಸಿ ಒಂದು ಜ್ಞಾಪಕ ಪತ್ರಿಕೆಯನ್ನು ಕೊಡತಕ್ಕದ್ದು: ಅಥವಾ ತಾನು ಸಿಡುಬು ಹಾಕಿಸಿಕೊಳ್ಳುವುದಕ್ಕೆ ತಕ್ಕದ್ದಲ್ಲದ ಆರೋಗ್ಯಸ್ಥಿತಿಯಲ್ಲಿ ಅಂಥಾ ಮನುಷ್ಯನನ್ನು ಕಂಡರೆ ಅಂಥಾ ಮನುಷ್ಯನಿಗೆ ಅಥವಾ ಒಂದು ಮಗುವಾಗಿದ್ದರೆ, ಅದರ ತಂದೆ ತಾಯಿಗೆ ಅಥವಾ ರಕ್ಷಕನಿಗೆ ಅಂಥಾ ಮನುಷ್ಯನು ಸಿಡುಬು ಹಾಕಿಸಿಕೊಳ್ಳುವುದಕ್ಕೆ ತಕ್ಕದ್ದಲ್ಲದ ಸ್ಥಿತಿಯಲ್ಲಿರುವನೆಂಬುದನ್ನೂ ಮತ್ತು ಅಂಥಾ ಮನುಷ್ಯನು ಹಾಗೆ ತಕ್ಕವನಲ್ಲವಾಗಿ ಬಹುಶಃ ಇರುವ ಕಾಲವನ್ನೂ ತೋರಿಸುವ ಒಂದು ಸರ್ಟಿಫಿಕೇಟನ್ನು ತನ್ನ ರುಜುವಿನಿಂದ ಕೊಡತಕ್ಕದ್ದು.

7. ಮೇಲಿನ ಪ್ರಕಟಣದಂತೆ ಸಿಡುಬು ಹಾಕಲ್ಪಟ್ಟ ಪ್ರತಿ ಮನುಷ್ಯನೂ, ಅಥವಾ ಒಂದು ಮಗುವಾಗಿದ್ದರೆ ಅದರ ತಂದೆ ತಾಯಿ ಅಥವಾ ರಕ್ಷಕನೂ ಜ್ಞಾಪಕ ಪತ್ರಿಕೆಯಲ್ಲಿ ಕಂಡ ತೇದಿ ಮತ್ತು ಘಂಟೆಯಲ್ಲಿ ಪರೀಕ್ಷೆಗಾಗಿ ಸಿಡುಬು ಹಾಕುವವನ ಬಳಿಗೆ ಹೋಗತಕ್ಕದ್ದು ಅಥವಾ, ಮಗುವನ್ನು ಕರೆದುಕೊಂಡುಹೋಗತಕ್ಕದ್ದು ಅಥವಾ ಕರೆದುಕೊಂಡುಹೋಗುವಂತೆ ಮಾಡಿಸತಕ್ಕದ್ದು ಅಥವಾ ತನ್ನ ಸ್ವಂತ ಮನೆಯಲ್ಲಿ ಸಿಡುಬು ಹಾಕುವವನಿಂದ ಅದನ್ನು ಪರೀಕ್ಷೆ ಮಾಡಿಸತಕ್ಕದ್ದು; ಮತ್ತು ಅಂಥಾ ಸಿಡುಬು ಹಾಕುವವನು ಮೇಲೆ ಅಂಥಾ ಮನುಷ್ಯನು ಅಥವಾ ಮಗುವು ಪರೀಕ್ಷಿಸಲ್ಪಟ್ಟಿತು ಎಂಬುವುದನ್ನು ಮತ್ತು ಅಂಥಾ ಪರೀಕ್ಷೆಯ ಫಲಿತಾಂಶವನ್ನು ವಿವರಿಸುವ ಒಂದು ಸರ್ಟಿಫಿಕೇಟನ್ನು ಮೇಲ್ಕಂಡ ಜ್ಞಾಪಕ ಪತ್ರಿಕೆಗೆ ಸೇರಿಸತಕ್ಕದ್ದು.

ಸಿಡುಬು ಹಾಕಿದ ತರುವಾಯ ಪರೀಕ್ಷೆ.

ಟಿಪ್ಪಣಿ—"ಗೋಷ" ಅಥವಾ "ಪರದಾ" ವಿನಾ ಕ್ರಮವನ್ನು ಅನುಸರಿಸುವ ವಯಸ್ಥರಾದ ಹೆಂಗಸರ ವಿಷಯದಲ್ಲಿ ಅವರು ಹಾಗೆ ಅಪೇಕ್ಷಿಸಿದರೆ, ಸಿಡುಬು ಹಾಕೋಣ ಮತ್ತು ಪರೀಕ್ಷೆ ಇವೆರಡೂ ಒಬ್ಬಳು ಸಿಡುಬು ಹಾಕುವ ಹೆಂಗಸಿಂದ ಮಾಡಲ್ಪಡತಕ್ಕದ್ದು.

8. ಮೇಲಿನ 7ನೆ ನಿಬಂಧನೆಯಂತೆ ಒಬ್ಬ ಮನುಷ್ಯನನ್ನು ಅಥವಾ ಮಗುವನ್ನು ಪರೀಕ್ಷಿಸುವ ಕಾಲದಲ್ಲಿ ಸಿಡುಬು ಹಾಕೋಣವು ಸಾರ್ಥಕವಾಗಿ ಆಯಿತು ಎಂದು ಗೊತ್ತಾದಾಗ ಆ ಅಭಿಪ್ರಾಯಕ್ಕೆ ಒಂದು ಸರ್ಟಿಫಿಕೇಟನ್ನು ಸಿಡುಬು ಹಾಕುವವನು ಆ ಮನುಷ್ಯನಿಗೆ ಅಥವಾ, ಒಂದು ಮಗುವಾದ್ದರೆ, ಅದರ ತಂದೆ ತಾಯಿಗೆ ಅಥವಾ ರಕ್ಷಕನಿಗೆ ಕೊಡತಕ್ಕದ್ದು, ಮತ್ತು ಮನುಷ್ಯನು ಅಥವಾ ಮಗುವು "ರಕ್ಷಿಸಲ್ಪಟ್ಟಿದೆ" ಎಂದು ಭಾವಿಸತಕ್ಕದ್ದು.

ಸಿಡುಬುಹಾಕುವುದು ಸಾರ್ಥಕವಾಗಿರುವಾಗ ನಡವಳಿಕೆ.

9. ಸಿಡುಬು ಹಾಕೋಣವು ನಿಷ್ಫಲವಾಯಿತೆಂದು ಮೇಲ್ಕಂಡಂತೆ ಗೊತ್ತಾದಾಗ ಆ ಮನುಷ್ಯನು ಅಥವಾ ಒಂದು ಮಗುವಾಗಿದ್ದರೆ ಅದರ ತಂದೆ ತಾಯಿ ಅಥವಾ ರಕ್ಷಕನು ಸಿಡುಬು ಹಾಕುವವನು ಹಾಗೆ ಹೇಳಿದರೆ, ಆ ಮನುಷ್ಯನು ಅಥವಾ ಮಗುವು ತೃಪ್ತಿಕರವಾದ ಆರೋಗ್ಯಸ್ಥಿತಿಯಲ್ಲಿದ್ದರೆ ಕೂಡಲೆ ತಿರಿಗಿ ಸಿಡುಬು ಹಾಕಿಸಿಕೊಳ್ಳತಕ್ಕದ್ದು ಮತ್ತು ಇದರಲ್ಲಿ ಮುಂದೆ ವಿಧಿಸಿರುವ ರೀತಿಯಲ್ಲಿ ತರುವಾಯ ಪರೀಕ್ಷಿಸಲ್ಪಡತಕ್ಕದ್ದು. ಆ ಮನುಷ್ಯನು ತಕ್ಕ ಆರೋಗ್ಯ ಸ್ಥಿತಿಯಲ್ಲಿ ಇಲ್ಲದೆ ಇದ್ದರೆ ಆ ಮನುಷ್ಯನು ಹಾಗೆ ತಕ್ಕವನಲ್ಲವಾಗಿರಬಹುದಾದ ಕಾಲವನ್ನು ವಿವರಿಸಿ 6ನೆ ನಿಬಂಧನೆಯಂತೆ ಒಂದು ಸರ್ಟಿಫಿಕೇಟನ್ನು ಸಿಡುಬು ಹಾಕುವವನು ಕೊಡತಕ್ಕದ್ದು. ಆದರೆ ತಿರಿಗಿ ಅಥವಾ ಎರಡನೆ ಸಲ ಸಿಡುಬು ಹಾಕೋಣವು ನಿಷ್ಫಲವಾದ ಸಂದರ್ಭದಲ್ಲಿ, ಆ ಮನುಷ್ಯನು ಮುಂದಿನ ಏಳು ವರ್ಷಗಳ ವರೆಗೆ ತಿರಿಗಿ ಸಿಡುಬು ಹಾಕಲ್ಪಡುವುದಕ್ಕಾಗಿ ಬಲಾತ್ಕರಿಸಲ್ಪಡತಕ್ಕದ್ದಲ್ಲ, ಆದರೆ ಆ ಮನುಷ್ಯನಿಗೆ ಖಂಡಿತವಾಗಿ ಬುದ್ಧಿ ಹೇಳತಕ್ಕದ್ದು. ಯಾತಕ್ಕೆಂದರೆ ಕೆಲವು ವೇಳಗಳಲ್ಲಿ ಸಿಡುಬನ್ನು ಸರಿಯಾಗಿ ಹಾಕದೆ ಇರುವುದರಿಂದಲೂ ಅಥವಾ ಮನುಷ್ಯನು ಅಗ್ರಾಹಕನಾಗಿ ಇರುವುದರಿಂದಲೂ ಸಿಡುಬು ಹಾಕೋಣವು ನಿಷ್ಫಲವಾಗುತ್ತದೆ.

ಸಿಡುಬು ಹಾಕೋಣವು ನಿಷ್ಫಲವಾದಾಗ ನಡವಳಿಕೆ.

10. ಒಬ್ಬ ಮನುಷ್ಯನು ಅಥವಾ ಮಗುವು ಸಿಡುಬು ಹಾಕಿಸಿಕೊಳ್ಳಲು ತಕ್ಕ ಸ್ಥಿತಿಯಲ್ಲಿಲ್ಲವೆಂದು ತೋರಿಸುವ ಮೇಲ್ಕಂಡ 6ನೆ ಮತ್ತು 9ನೆ ನಿಬಂಧನೆಗಳ ಮೇರೆ ಕೊಟ್ಟ ಸರ್ಟಿಫಿಕೇಟು ಅದರಲ್ಲಿ ಕಂಡ ಗಡುವಿನ ವರೆಗೆ ಉಪಯೋಗದಲ್ಲಿ ಇರತಕ್ಕದ್ದು ಮತ್ತು ಆ ಗಡುವು ತೀರಿದ ನಂತರ ಆ ಮನುಷ್ಯನು ಸಿಡುಬು ಹಾಕಿಸಿಕೊಳ್ಳಲು ಸಿಡುಬು ಹಾಕುವವನ ಬಳಿಗೆ ಹೋಗತಕ್ಕದ್ದು ಅಥವಾ ಒಬ್ಬ ಸಿಡುಬು ಹಾಕುವವನಿಂದ ತನ್ನ ಮನೆಯಲ್ಲಿ ಸಿಡುಬು ಹಾಕಿಸಿಕೊಳ್ಳತಕ್ಕದ್ದು ಅಥವಾ ಒಂದು ಮಗುವಾಗಿದ್ದರೆ ಅದರ ತಂದೆ ತಾಯಿ ಅಥವಾ ರಕ್ಷಕನು ಸಿಡುಬು ಹಾಕಿಸುವ ಬಗ್ಗೆ ಸಿಡುಬು ಹಾಕುವವನ ಬಳಿಗೆ ಕರೆದುಕೊಂಡು ಹೋಗತಕ್ಕದ್ದು, ಅಥವಾ ಒಬ್ಬ ಸಿಡುಬು ಹಾಕುವವನಿಂದ ತನ್ನ ಮನೆಯಲ್ಲಿ ಸಿಡುಬು ಹಾಕಿಸತಕ್ಕದ್ದು. ಆದರೆ ಆ ಮನುಷ್ಯನು ಅಥವಾ ಮಗುವು ಇನ್ನೂ ಸಿಡುಬು ಹಾಕಿಸಿಕೊಳ್ಳುವುದಕ್ಕೆ ತಕ್ಕ ಸ್ಥಿತಿಯಲ್ಲಿ ಇಲ್ಲದೆ ಇರುವುದಾಗಿ ಕಂಡುಬಂದರೆ ಮೇಲೆ ಕಂಡ 6ನೆ ಮತ್ತು 9ನೆ ನಿಬಂಧನೆಗಳ ಮೇರೆ ಕೊಡಲ್ಪಟ್ಟ ಸರ್ಟಿಫಿಕೇಟನ್ನು ನವೀಕರಿಸತಕ್ಕದ್ದು.

ಮನುಷ್ಯನು ಸಿಡುಬು ಹಾಕಿಸಿಕೊಳ್ಳಲು ತಕ್ಕವನಾಗಿ ಇಲ್ಲದೆ ಇರುವಾಗ ನಡವಳಿಕೆ.

ಸಿಡುಬು ಹಾಕುವುದನ್ನು ಮುಂದಕ್ಕೆ ಹಾಕಿದ ದನ್ನು ಕುರಿತ ಸರ್ಟಿಫಿಕೇಟುಗಳ ನವೀಕರಣ.

11. ಮೂರುವೇಳೆಗಳಲ್ಲಿ ಅಸಾರ್ಥಕವಾಗಿ ಸಿಡುಬು ಹಾಕಲ್ಪಟ್ಟ ಮನುಷ್ಯನಿಗೆ ಅಥವಾ ಮಗುವಿಗೆ ಸಾರ್ಥಕವಾಗಿ ಸಿಡುಬು ಹಾಕುವುದು ಸಾಧ್ಯವಲ್ಲವೆಂದು ಸಿಡುಬು ಹಾಕುವುದರ ಸೂಪರಿಂಟೆಂಡೆಂಟು ಅಭಿಪ್ರಾಯಪಟ್ಟರೆ ಆ ಅಭಿಪ್ರಾಯಕ್ಕೆ ಒಂದು ಸರ್ಟಿಫಿಕೇಟನ್ನು ತನ್ನ ರುಜುವಿನಿಂದ ಆ ಮನುಷ್ಯನಿಗೆ ಅಥವಾ ಒಂದು ಮಗುವಾಗಿದ್ದರೆ ಅಂಥಾ ಮಗುವಿನ ತಂದೆತಾಯಿಗೆ ಅಥವಾ ರಕ್ಷಕನಿಗೆ ಕೊಡತಕ್ಕದ್ದು, ಮತ್ತು ಆ ಮನುಷ್ಯನನ್ನು ಅಥವಾ ಮಗುವನ್ನು ಅಲ್ಲಿಂದ ಮುಂದೆ ಸಿಡುಬು ಹಾಕಿಸಿಕೊಳ್ಳುವಂತೆ ಅಥವಾ ಸಿಡುಬು ಹಾಕಿಸಿಕೊಳ್ಳುವಂತೆ ಮಾಡಲ್ಪಡುವಂತೆ ಕೇಳತಕ್ಕದ್ದಲ್ಲ.

ಸಾರ್ಥಕವಾಗಿ ಸಿಡುಬು ಹಾಕುವುದರ ಅಸಾಧ್ಯತೆಯ ಸರ್ಟಿಫಿಕೇಟುಗಳು.

12. ಯಾವನಾದರೂ ಮನುಷ್ಯನು ವಾಸಮಾಡುವ ಮಂಡಲದಲ್ಲಿ ಸಾರ್ವಜನಿಕ ಸಿಡುಬು ಹಾಕುವವರಾಗಿ ನೇಮಕ ಮಾಡಲ್ಪಟ್ಟವನಲ್ಲದ ಇತರ ಸಿಡುಬು ಹಾಕುವವನಿಂದ ತಾನೆ ಸಿಡುಬು ಹಾಕಿಸಿಕೊಳ್ಳುವ ಅಥವಾ ತನ್ನ ಮನೆತನದ ಯಾವನಾದರೂ ಇತರನಿಗೆ ಅಥವಾ ತನ್ನ ರಕ್ಷಕತ್ವಕ್ಕೆ ಒಳಪಟ್ಟ ಯಾವುದಾದರೂ ಮಗುವಿಗೆ ಸಿಡುಬು ಹಾಕಿಸುವ ಅಂಥಾ ಯಾವ ಮನುಷ್ಯನಾದರೂ ಸಿಡುಬು ಹಾಕುವವನಿಂದ ರುಜು ಮಾಡಲ್ಪಟ್ಟ ಅಂಥಾ ಸಿಡುಬು ಹಾಕೋಣದರ ಮತ್ತು ಅದರ ಫಲಿತಾಂಶದ ಸರ್ಟಿಫಿಕೇಟನ್ನು ಅಂಥಾ ಸಿಡುಬು ಹಾಕೋಣದರ ತೇದಿಯಿಂದ ಹದಿನೈದು ದಿವಸಗಳೊಳಗಾಗಿ ಮೇಲ್ಕಂಡ ಮಂಡಲದ ಸಿಡುಬು ಹಾಕೋಣದರ ಸೂಪರಿಂಟೆಂಡೆಂಟಿಗೆ ಕಳುಹಿಸತಕ್ಕದ್ದು.

ಸ್ವಂತ ಸಿಡುಬು ಹಾಕುವವರಿಂದ ಸಿಡುಬು ಹಾಕೋಣದರ ಸರ್ಟಿಫಿಕೇಟುಗಳನ್ನು ಸೂಪರಿಂಟೆಂಡೆಂಟಿಗೆ ಕಳುಹಿಸತಕ್ಕದ್ದು.

ಯೋಗ್ಯತೆಯನ್ನು ಹೊಂದಿದ ವೈದ್ಯನ ಮತ್ತು ಸ್ವಂತ ಸಿಡುಬು ಹಾಕುವವರ ಸರ್ಟಿಫಿಕೇಟುಗಳನ್ನು ಅಂಗೀಕರಿಸತಕ್ಕದ್ದು

13. ಸಿಡುಬು ಹಾಕೋಣದರ ಸೂಪರಿಂಟೆಂಡೆಂಟು (1) ಸಾರ್ಥಕವಾಗಿ ಸಿಡುಬುಹಾಕಿದುದನ್ನು ಕುರಿತು (2) ಸಿಡುಬು ಹಾಕುವುದಕ್ಕೆ ಒಬ್ಬ ಮನುಷ್ಯನು ತಕ್ಕವನಾಗಿ ಇಲ್ಲದೆ ಇರುವುದನ್ನು ಕುರಿತು (3) ಸಿಡುಬು ಹಾಕುವುದರ ಅಗ್ರಾಹಕತ್ವ ಅಥವಾ ಅಸಾಧ್ಯತೆಯನ್ನು ಕುರಿತು ಒಬ್ಬ ಯೋಗ್ಯತೆಯನ್ನು ಹೊಂದಿದ ವೈದ್ಯನಿಂದ ಅಥವಾ ಸ್ವಂತ ಸಿಡುಬು ಹಾಕುವವನಿಂದ ಸರ್ಟಿಫಿಕೇಟುಗಳನ್ನು ಅಂಗೀಕರಿಸತಕ್ಕದ್ದು.

ನಿಯಮ.

ಆದರೆ ಈ ನಿಬಂಧನೆಗಳ ಮೇರೆ ಕೊಟ್ಟ ಯಾವ ಸರ್ಟಿಫಿಕೇಟಾದರೂ ಅಕ್ರಮವಾಗಿ ಕೊಡಲ್ಪಟ್ಟಿತೆಂದು ಅಥವಾ ಯಾವನಾದರೂ "ರಕ್ಷಿಸಲ್ಪಡದ" ಮನುಷ್ಯನ ಅಥವಾ ಮಗುವಿನ ಪರವಾಗಿ ಹೊಂದಲ್ಪಟ್ಟಿತೆಂದೂ ಸೂಪರಿಂಟೆಂಡೆಂಟಿಗೆ ತೃಪ್ತಿಯಾಗುವಂತೆ ಕಂಡುಬಂದರೆ ಅಂಥಾ ಸರ್ಟಿಫಿಕೇಟನ್ನು ಸೂಪರಿಂಟೆಂಡೆಂಟು ತಳ್ಳಿಬಿಡಮಾಡಬಹುದು. ಮತ್ತು ಆ ಮೇಲೆ ಅಂಥಾ ಸರ್ಟಿಫಿಕೇಟು ರದ್ದಾಗಿರತಕ್ಕದ್ದು. ಈ ಸರ್ಟಿಫಿಕೇಟುಗಳನ್ನು ಕುರಿತು ಯಾವುದಾದರೂ ಸಂಶಯವಿರುವ ಸಂದರ್ಭದಲ್ಲಿ ಸೂಪರಿಂಟೆಂಡೆಂಟು ಸಿಡುಬು ಹಾಕಲ್ಪಟ್ಟ ಅಥವಾ ಸಿಡುಬು ಹಾಕಲು ತಕ್ಕವನಲ್ಲವಾಗಿ ಅಥವಾ ಅಗ್ರಾಹಕನಾಗಿರುವಂತೆ ದೃಢೀಕರಿಸಲ್ಪಟ್ಟ ಮನುಷ್ಯನನ್ನು ಸ್ವತಃ ಪರೀಕ್ಷೆ ಮಾಡತಕ್ಕದ್ದು, ಆದರೆ ಯಾವಾಗಲೂ, ಆ ವ್ಯಕ್ತಿಯು ಗೋಷ ಅಥವಾ ಪರದ ಹೆಂಗಸಾಗಿದ್ದರೆ ಪರೀಕ್ಷೆಯು 7ನೇ ನಿಬಂಧನೆಯಲ್ಲಿ ವಿಧಿಸಿರುವ ಮೇರೆ ಒಬ್ಬಳು ಸಿಡುಬುಹಾಕುವ ಹೆಂಗುಸಿಂದ ಮಾಡಲ್ಪಡತಕ್ಕದ್ದು.

ಎಂಥಾ ಸಿಡುಬಿನ ಹಾಲನ್ನು ಉಪಯೋಗಿಸತಕ್ಕದ್ದು.

14. ಜನಗಳಿಗೆ ಸಿಡುಬು ಹಾಕೋಣವನ್ನು ಕರುವಿನ ಸಿಡುಬು ಹಾಲಿನಿಂದ ಎಂದರೆ, ಹೊಸದು ಅಥವಾ ಉಳಿಸಿಟ್ಟದ್ದು ಇವೆರಡರಲ್ಲಿ ಯಾವುದು ದೊರೆಯುತ್ತದೆಯೋ ಅದರಿಂದ ಮಾಡತಕ್ಕದ್ದು.

ಉಪಯೋಗಿಸಲ್ಪಡತಕ್ಕ ಸಿಡುಬಿನ ಹಾಲಿನ ಶಾಸ್ತ್ರೀಯವಾದ ಪರಾಮರಿಕೆ.

15. ಸಿಡುಬು ಹಾಕುವುದಕ್ಕೆ ಉಪಯೋಗಿಸಲ್ಪಡುವ ಎಲ್ಲಾ ಸಿಡುಬಿನ ಹಾಲನ್ನೂ ಸರ್ಕಾರಿ ಸ್ಯಾನಿಟರಿ ಕಮಿಷನರು ಆಗಾಗ ವಿಧಿಸಬಹುದಾದ ಶಾಸ್ತ್ರೀಯವಾದ ಪರಾಮರಿಕೆಯಿಂದ ತೈಯಾರು ಮಾಡಿ ಸಂಗ್ರಹಿಸಿ ಉಳಿಸಿಟ್ಟು ಹಂಚಿಕೆ ಮಾಡಿ ಉಪಯೋಗಿಸತಕ್ಕದ್ದು ಮತ್ತು ಅದು ಸ್ಯಾನಿಟರಿ ಕಮಿಷನರಿಂದ ಆ ಕೆಲಸಕ್ಕಾಗಿ ಯೋಗ್ಯನೆಂದು ಹೇಳಲ್ಪಟ್ಟಿರುವ ಆಫೀಸರಿಂದ ನಿರ್ಮಲವಾದುದೆಂದು ದೃಢೀಕರಿಸಲ್ಪಟ್ಟಿರತಕ್ಕದ್ದು

ಇತರ ಸಿಡುಬಿನ ಹಾಲಿನ ಉಪಯೋಗ.

16. ಮೇಲೆ 14ನೆ ನಿಬಂಧನೆಯಲ್ಲಿ ವಿವರಿಸಲ್ಪಟ್ಟವುಗಳಲ್ಲದ ಇತರ ಯಾವುದಾದರೂ ಸಿಡುಬಿನ ಹಾಲಿನಿಂದ ತಾನು ಸಿಡುಬುಹಾಕಿಸಿಕೊಳ್ಳಬೇಕೆಂದು ತನ್ನ ಮನೆತನಕ್ಕೆ ಸೇರಿದವರಲ್ಲಿ ಯಾರಿಗಾದರೂ ಅಥವಾ ತನ್ನ ರಕ್ಷಕತ್ವಕ್ಕೆ ಒಳಪಟ್ಟ ಯಾವುದಾದರೂ ಮಕ್ಕಳಿಗಾದರೂ ಸಿಡುಬು ಹಾಕಿಸಬೇಕೆಂದು ಅಪೇಕ್ಷಿಸುವ ಯಾವ ಮನುಷ್ಯನಾದರೂ ಅದನ್ನು ತನ್ನ ಸ್ವಂತ ಖರ್ಚಿನಿಂದ ತರಿಸಿಕೊಂಡು ಅದರಿಂದ ತನಗೆ ಅಥವಾ ತನ್ನ ಮನೆತನದವರಿಗೆ ಅಥವಾ ತನ್ನ ರಕ್ಷಕತ್ವಕ್ಕೆ ಒಳಪಟ್ಟ ಮಕ್ಕಳಿಗೆ ಸಿಡುಬುಹಾಕಿಸಬಹುದು ಆದರೆ ಹಾಗೆ ಹೊಂದಲ್ಪಟ್ಟ ಸಿಡುಬಿನ ಹಾಲು ಸ್ಯಾನಿಟರಿ ಕಮಿಷನರಿಂದ ಯೋಗ್ಯನೆಂದು ಅಂಗೀಕರಿಸಲ್ಪಟ್ಟ ಒಬ್ಬ ಅಧಿಕಾರಿಯಿಂದ ನಿರ್ಮಲವಾಗಿರುವುದಾಗಿ ದೃಢೀಕರಿಸಲ್ಪಡಬೇಕು.

ಸಿಡುಬು ಹಾಕೋಣವರಲ್ಲಿ ಅಜಾಗ್ರತೆಯು ಮತ್ತು ಅಧಿಕಾರ ಹೊಂದದ ಜನಗಳಿಂದ ಸಿಡುಬು ಹಾಕೋಣವು ತಪ್ಪಿತಗಳಾಗಿ ಭಾವಿಸಲ್ಪಡತಕ್ಕದ್ದು

17. ಸಿಡುಬು ಹಾಕುವವನು ಸಾಧ್ಯವಾದಷ್ಟು ಮಟ್ಟಿಗೂ ಪರಾಮರಿಕೆಯಿಂದಲೂ ಕೊಳೆಯುವುದಕ್ಕೆ ಗುರಿಯಾಗದಂತೆಯೂ ಸಿಡುಬು ಹಾಕುವ ಕೆಲಸವನ್ನು ಮಾಡಲು ಎಲ್ಲಾ ತಕ್ಕ ಎಚ್ಚರಿಕೆಗಳನ್ನೂ ತೆಗೆದುಕೊಳ್ಳಬೇಕು ; ಮತ್ತು ಅಜಾಗ್ರತೆಯಿಂದ ಅಥವಾ ಅಸಡ್ಡೆಯಿಂದ ಅಥವಾ 15 ಮತ್ತು 16ನೆ ನಿಬಂಧನೆಗಳಲ್ಲಿ ಅಪ್ಪಣೆ ಮಾಡಿರುವಂತೆ ದೃಢೀಕರಿಸಲ್ಪಡದ ಸಿಡುಬಿನ ಹಾಲಿನ ಉಪಯೋಗದಿಂದ ಸಿಡುಬುಹಾಕಲ್ಪಟ್ಟ ಮನುಷ್ಯನ ಆರೋಗ್ಯವನ್ನು ಕೆಡಿಸುವ ಯಾವ ಸಿಡುಬು ಹಾಕುವವನಾದರೂ, ಮತ್ತು ಈ ನಿಬಂಧನೆಗಳಿಗೆ ಅನುಸಾರವಾಗಿ ಸಿಡುಬುಹಾಕಲು ಕ್ರಮವಾಗಿ ಅಧಿಕಾರ ಹೊಂದದವನಾಗಿ ಈ ನಿಬಂಧನೆಗಳು ಲಗಾವಾಗುವಂತೆ ಮಾಡಲ್ಪಟ್ಟಿರುವ ಪ್ರದೇಶದೊಳಗೆ ಯಾವುದಾದರೂ ಸಿಡುಬಿನ ಹಾಲಿನಿಂದ ಜನಗಳಿಗೆ ಸಿಡುಬುಹಾಕುವ ಯಾವ ಮನುಷ್ಯನಾದರೂ, 1906ನೆ ಮೈಸೂರು ಸಿಡುಬುಹಾಕುವ ರೆಗ್ಯುಲೇಷನಿನಲ್ಲಿ ವಿವರಿಸಿರುವ ತಪ್ಪನ್ನು ಮಾಡಿರುವಂತೆ ಎಣಿಸಲ್ಪಡತಕ್ಕದ್ದು.

ಸ್ವಂತ ಸಿಡುಬು ಹಾಕುವವನಿಂದ ಹೊರತು ಯಾವ ರುಸುಮೂ ಹಾಕಲ್ಪಡತಕ್ಕದ್ದಲ್ಲ.

18. ಈ ನಿಬಂಧನೆಗಳ ಮೇರೆ ಯಾವನಾದರೂ ಸಿಡುಬು ಹಾಕುವವನಿಗೆ ನೇಮಕ ಮಾಡಿರುವ ಯಾವುದಾದರೂ ಕೆಲಸಗಳಿಗೋಸ್ಕರ ಸಿಡುಬು ಹಾಕಿಸಿಕೊಳ್ಳುವ ಮನುಷ್ಯನಿಗೆ ಅಥವಾ ಅದು ಒಂದು ಮಗುವಾಗಿದ್ದರೆ ಅದರ ತಂದೆ ತಾಯಿಗೆ ಅಥವಾ ರಕ್ಷಕನಿಗೆ ಒಬ್ಬ ಸ್ವಂತ ಸಿಡುಬು ಹಾಕುವವನಿಂದ ವಿನಾ ಯಾವ ಸಿಡುಬು ಹಾಕುವವನಿಂದಲೂ ಯಾವ ರುಸುಮೂ ಹಾಕಲ್ಪಡತಕ್ಕದ್ದಲ್ಲ (1) ಆದರೆ ಒಬ್ಬ ಸಿಡುಬು ಹಾಕುವವನು ಕೆಲಸ ಮಾಡುತ್ತಿರುವ ಕೋಠಿಯಲ್ಲದೆ ಇನ್ನೆಲ್ಲಿಯಾದರೂ ಒಬ್ಬ ಮನುಷ್ಯನಿಗೆ ಅಥವಾ ಅವನ ಮನೆಯವರಿಗೆ ಅವನ ಕೋರಿಕೆಯಂತೆ ಅಥವಾ ಒಂದು ಮಗುವಾಗಿದ್ದರೆ ಅದರ ತಂದೆ ತಾಯಿಯ ಅಥವಾ ರಕ್ಷಕನ ಕೋರಿಕೆಯಂತೆ ಸಿಡುಬು ಹಾಕಲು ಒಂದು ರುಸುಮನ್ನು ಅಂಗೀಕರಿಸುವುದು ಸಿಡುಬು ಹಾಕುವವನಿಗೆ ನ್ಯಾಯವಾಗಿರತಕ್ಕದ್ದು. (2) ಮತ್ತು ಗೋಷ ಅಥವಾ ಪರದ ಕ್ರಮವನ್ನು ಆಚರಿಸುತ್ತಿರುವ ಹೆಂಗಸರ ವಿಷಯದಲ್ಲಿ, ಅಂಥಾ ಸಿಡುಬು ಹಾಕುವವನು ನೇಮಿಸಲ್ಪಟ್ಟಿರುವ ಮಂಡಲದೊಳಗಿನ ಮನೆಗಳಲ್ಲಿ ಅಂಥಾ ಹೆಂಗಸರಿಗೆ ಸಿಡುಬು ಹಾಕಲು ಯಾವ ರುಸುಮನ್ನೂ ಹಾಕತಕ್ಕದ್ದಲ್ಲ.

19. ಸಿಡುಬು ಹಾಕುವುದರ ಸೂಪರ್ಇಂಟೆಂಡೆಂಟು, ಈ ನಿಬಂಧನೆಗಳಿಂದ ಅಥವಾ ಅವುಗಳ ಮೇರೆ ತನಗೆ ನೇಮಕವಾಗಿರುವ ಇತರ ಕೆಲಸಗಳ ಜತೆಗೆ ತನ್ನ ಮೇಲ್ವಿಚಾರಣೆಯೊಳಗಿನ ಪ್ರದೇಶದೊಳಗೆ ಆರು ತಿಂಗಳುಗಳ ವಯಸ್ಸಿಗೆ ಮೇಲ್ಪಟ್ಟ ಎಲ್ಲಾ "ರಕ್ಷಿಸಲ್ಪಡದ" ಮನುಷ್ಯರಿಗೂ ಸಿಡುಬು ಹಾಕಿದೆಯೋ ಎಂದು ತಿಳಿದುಕೊಳ್ಳತಕ್ಕದ್ದು; ಮತ್ತು ಯಾವನಾದರೂ ಮನುಷ್ಯನು ತನಗೆ ಅಥವಾ ತನ್ನ ರಕ್ಷಣೆಯಲ್ಲಿ ಮತ್ತು ರಕ್ಷಕತ್ವದಲ್ಲಿ ಇರುವ ಮಗುವಿಗೆ ಸಿಡುಬು ಹಾಕಿಸಿಕೊಳ್ಳುವುದಕ್ಕೆ ಅಥವಾ ಪರೀಕ್ಷೆಗಾಗಿ ತಾನು ಬರುವುದಕ್ಕೆ ಅಥವಾ ಅದನ್ನು ಕರೆದುಕೊಂಡು ಬರುವುದಕ್ಕೆ ಇದರಲ್ಲಿ ಮೇಲೆ ಅಡಗಿರುವ ನಿಯಮಗಳಂತೆ ಬದ್ಧನಾಗಿದ್ದಾನೆಂದು ಮತ್ತು ಹಾಗೆ ಮಾಡುವುದಕ್ಕೆ ತಪ್ಪಿಹೋದನೆಂದು ನಂಬುವುದಕ್ಕೆ ಸೂಪರ್ಇಂಟೆಂಡೆಂಟಿಗೆ ಕಾರಣವಿದ್ದರೆ ಪ್ರಾತಃಕಾಲ 6 ಘಂಟೆಗೂ ಸಾಯಂಕಾಲ 6 ಘಂಟೆಗೂ ಮಧ್ಯೆ ಯಾವ ಕಾಲದಲ್ಲಿಯಾದರೂ ಅಂಥಾ ಮನುಷ್ಯನ ಮನೆಗೆ ಸ್ವತಃ ಹೋಗಿ ವಿಚಾರಣೆ ಮಾಡಿ ಆ ವಿದ್ಯಮಾನವು ರುಜುವಾತಾದರೆ ಅಂಥಾ ಮನುಷ್ಯನು ಅಥವಾ ಅವನ ರಕ್ಷಣೆ ಅಥವಾ ರಕ್ಷಕತ್ವದಲ್ಲಿ ಇರುವ ಮಗುವು ಸಿಡುಬು ಹಾಕಿಸಿಕೊಳ್ಳಬೇಕೆಂದು ಅಥವಾ (ಸಂದರ್ಭಾನುಸಾರವಾಗಿ) ಮುಂದೆ ಬರುವ ನೋಟೀಸಿನಲ್ಲಿ ವಿವರಿಸುವ ಕಾಲ ಮತ್ತು ಸ್ಥಳದಲ್ಲಿ ಪರೀಕ್ಷೆಯ ಬಗ್ಗೆ ಬರಬೇಕೆಂದು ಅಥವಾ ಕರೆತರಬೇಕೆಂದು ಅಪ್ಪಣೆ ಮಾಡಿ ಒಂದು ನೋಟೀಸನ್ನು ಅಂಥಾ ಮನುಷ್ಯನಿಗೆ ಕೊಡತಕ್ಕದ್ದು ಅಥವಾ ಅವನ ಮನೆಗೆ ಅಂಟಿಸುವಂತೆ ಮಾಡತಕ್ಕದ್ದು.

ಸಿಡುಬು ಹಾಕುವುದರ ಸೂಪರ್ಇಂಟೆಂಡೆಂಟಿನ ಕೆಲಸಗಳು.

ಈ ನಿಬಂಧನೆಗಳಿಗೆ ಅನುಸಾರವಾಗಿ ನಡೆಯಲು ಅಸಡ್ಡೆ ಮಾಡುವ ಮನುಷ್ಯನಿಗೆ ಅಥವಾ ತಂದೆ ತಾಯಿಗೆ ಅಥವಾ ರಕ್ಷಕನಿಗೆ ನೋಟೀಸು.

20. 18ನೆ ನಿಬಂಧನೆಗೆ ಅನುಸಾರವಾಗಿ ಸಿಡುಬು ಹಾಕುವುದರ ಸೂಪರ್ಇಂಟೆಂಡೆಂಟು ಆವಶ್ಯಕವಾದ ವಿಚಾರಣೆಗಳನ್ನು ಮಾಡಲು ತನ್ನ ಮಂಡಲದಲ್ಲಿ ಇರುವ ಒಂದು ಮನೆಗೆ ಹೋದಾಗ ಸಿಡುಬು ಹಾಕುವುದರ ಸೂಪರ್ಇಂಟೆಂಡೆಂಟಿನ ಪರೀಕ್ಷೆಯ ಬಗ್ಗೆ ಆತನ ಮುಂದೆ ಹಾಗೆ ಅಪೇಕ್ಷಿಸಲ್ಪಟ್ಟರೆ, ತನ್ನ ಮನೆಗೆ ಸೇರಿದವರೆಲ್ಲರನ್ನು ಅಥವಾ ಅವರಲ್ಲಿ ಯಾರನ್ನಾದರೂ ತೋರಿಸುವುದು ಮತ್ತು ಅವರ ಹೆಸರು, ವಯಸ್ಸು, ವಾಸದ ಕಾಲ, ಮತ್ತು ಸೂಪರ್ಇಂಟೆಂಡೆಂಟು ಕೇಳಬಹುದಾದ ಇತರ ವಿವರಗಳು ಇವುಗಳನ್ನು ಹೇಳುವುದು ಪ್ರತಿ ಮನೆಯ ಮುಖ್ಯಸ್ಥನ ಅಥವಾ ಮುಖ್ಯಸ್ಥಳ ಅಥವಾ ಅವನು ಅಥವಾ ಅವಳು ಇಲ್ಲದಾಗ ಮನೆಯಲ್ಲಿರುವ ಮನೆಗೆ ಸೇರಿದ ಎಲ್ಲರಿಗಿಂತ ದೊಡ್ಡ ವಯಸ್ಸನ ಅಥವಾ ವಯಸ್ಸಳ ಕರ್ತವ್ಯವಾಗಿರತಕ್ಕದ್ದು.

ಮನೆಯ ಮುಖ್ಯಸ್ಥನು ಮನೆಗೆ ಸೇರಿದವರನ್ನು ಪರೀಕ್ಷೆಗೆ ತೋರಿಸತಕ್ಕದ್ದು ಮತ್ತು ಸರಿಯಾದ ವರ್ತಮಾನವನ್ನು ಕೊಡತಕ್ಕದ್ದು.

ಆದರೆ ಹನ್ನೆರಡು ವಯಸ್ಸಿನ ಮತ್ತು ಅದಕ್ಕೆ ಮೇಲ್ಪಟ್ಟ ತತ್ರಾಪಿ ಗೋಷ ಅಥವಾ ಪರದ ಕ್ರಮವನ್ನು ಆಚರಿಸುವ ಹೆಂಗಸರ ವಿಷಯದಲ್ಲಿ ಪರೀಕ್ಷೆಯು ಮತ್ತು ವಿಚಾರಣೆಗಳು, ಸಂಬಂಧಪಟ್ಟ ಜನಗಳಿಂದ ಹಾಗೆ ಅಪೇಕ್ಷಿಸಲ್ಪಟ್ಟರೆ, ಸೂಪರ್ಇಂಟೆಂಡೆಂಟಿನಪರವಾಗಿ ಯಾವಳಾದರೂ ಯೋಗ್ಯಳಾದ ಹೆಂಗಸಿನಿಂದ ಮಾಡಲ್ಪಡತಕ್ಕದ್ದು.

ನಿಯಮ.

21. 19ನೆ ನಿಬಂಧನೆಯಲ್ಲಿ ಕಂಡ ನೋಟೀಸು ತಿಳಿಪಿಸಲ್ಪಟ್ಟು ಅದು ಅನುಸರಿಸಲ್ಪಡದೆ ಹೋದರೆ ಸಿಡುಬು ಹಾಕುವುದರ ಸೂಪರ್ಇಂಟೆಂಡೆಂಟು ಆ ವಿಷಯವನ್ನು ಸ್ಥಳೀಯ ನ್ಯಾಯಾಧಿಕಾರವಿರುವ ಯಾವನಾದರೂ ಮಾಜಿಸ್ಟ್ರೇಟಿಗೆ ರಿಪೋರ್ಟು ಮಾಡತಕ್ಕದ್ದು. ಮತ್ತು ಅಂಥಾ ರಿಪೋರ್ಟನ್ನು ತೆಗೆದುಕೊಳ್ಳುವ ಮಾಜಿಸ್ಟ್ರೇಟು ಆ ಮನುಷ್ಯನನ್ನು ಸರ್ವಣೆ ಮಾಡಿ ಅವನ ವಿವರವನ್ನು ಕೇಳತಕ್ಕದ್ದು ಮತ್ತು ಅಂಥಾ ವಿವರವು ತೃಪ್ತಿಕರವಾಗಿ ಇಲ್ಲದೆ ಇದ್ದರೆ ಅಪ್ಪಣೆಯಲ್ಲಿ ಕಂಡ ತೇದಿಗೆ ಮುಂಚೆ ನೋಟೀಸಿನಂತೆ ನಡೆಯಬೇಕೆಂದು ಅಂಥಾ ಮನುಷ್ಯನನ್ನು ಆಜ್ಞಾಪಿಸಿ ಬರಹದಲ್ಲಿ ಒಂದು ಅಪ್ಪಣೆಯನ್ನು ಮಾಡತಕ್ಕದ್ದು.

ನೋಟೀಸಿನಂತೆ ನಡೆಯದೆ ಹೋದಾಗ ಮಾಜಿಸ್ಟ್ರೇಟಿಂದ ಅಪ್ಪಣೆ.

22. ಅಂಥಾ ತಾರೀಕಿನಲ್ಲಿ ಆ ಮನುಷ್ಯನು ಅಪ್ಪಣೆಗೆ ವಿಧೇಯನಾಗಿ ನಡೆಯದೆ ಹೋಗಿದ್ದರೆ, ಮಾಜಿಸ್ಟ್ರೇಟು ಅವನನ್ನು ತನ್ನ ಮುಂದೆ ಸಮನ್ ಮಾಡಿಸತಕ್ಕದ್ದು ಮತ್ತು ನ್ಯಾಯವಾದ ಕಾರಣ ಅಥವಾ ನೆವವು ತೋರಿಸಲ್ಪಟ್ಟ ಹೊರತು ಅಂಥಾ ಅವಿಧೇಯತೆಯ ವಿಷಯದಲ್ಲಿ 1906ನೆ ಮೈಸೂರು ಸಿಡುಬು ಹಾಕುವ ರೆಗ್ಯುಲೇಷನಿನ 2 (3)ನೆ ಪ್ರಕರಣದ ಮೇರೆ ಶಿಕ್ಷೆಯಾಗತಕ್ಕ ಒಂದು ತಪ್ಪಿನಂತೆ ನಡೆಸತಕ್ಕದ್ದು.

ಅಪ್ಪಣೆಗೆ ವಿಧೇಯವಾಗಿ ನಡೆಯದೆ ಹೋದಾಗ ನಡವಳಿಕೆ.

23. ಎಲ್ಲಿ ಸಿಡುಬು ಹಾಕೋಣವು ಸರ್ಕಾರದಿಂದ ಅವಶ್ಯವಾಗಿ ಮಾಡಲ್ಪಟ್ಟಿದೆಯೋ ಅಂಥಾ ಯಾವುದಾದರೂ ಸ್ಥಳೀಯ ಪ್ರದೇಶಕ್ಕೆ ಮೇಲ್ಕಂಡ ನಿಬಂಧನೆಗಳು ಲಗಾವಾಗುವಂತೆ ಮಾಡಲ್ಪಟ್ಟಾಗ ಅಂಥಾ ಪ್ರದೇಶದ ಸ್ಥಳೀಯ ಅಧಿಕಾರಿಗಳು ಸಿಡುಬಿನ ರೆಗ್ಯುಲೇಷನು ಲಗಾವಾಗುವ ಸರಹದ್ದಿನೊಳಗೆ ಅದನ್ನು ಸರಿಯಾಗಿ ಉಪಯೋಗದಲ್ಲಿ ತರುವುದಕ್ಕೆ ಈ ನಿಬಂಧನೆಗಳಿಗೆ ಅನುಗುಣವಾಗಿ ಉಪನಿಬಂಧನೆಗಳನ್ನು ಆಗಾಗ್ಗೆ ಮಾಡಬಹುದು. ಅಂಥಾ ಉಪನಿಬಂಧನೆಗಳು ತತ್ಕಾಲದಲ್ಲಿ ಉಪಯೋಗದಲ್ಲಿರುವ ವ್ಯವಹಾರ ಶಾಸ್ತ್ರದ ಮೇರೆ ಯಾವ ರೀತಿಯಲ್ಲಿ ಸ್ಥಳೀಯ ಅಧಿಕಾರಿಗಳು ಉಪನಿಬಂಧನೆಗಳನ್ನು ಮಾಡಬಹುದೋ ಅದೇ ರೀತಿಯಲ್ಲಿ ನಿರ್ಮಾಯಿಸಲ್ಪಡತಕ್ಕದ್ದು ಮತ್ತು ಸರ್ಕಾರದವರಿಂದ ಸ್ಥಿರಪಡಿಸಲ್ಪಟ್ಟು ಸರ್ಕಾರಿ ಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟಾಗ ವ್ಯವಹಾರಶಾಸ್ತ್ರದ ಬಲವನ್ನು ಉಂಟುಮಾಡಿರತಕ್ಕದ್ದು;

ಉಪನಿಬಂಧನೆಗಳನ್ನು ಮಾಡಲು ಅಧಿಕಾರ.

ಆದರೆ ಸರ್ಕಾರದವರು ಅಂಥಾ ಯಾವ ಉಪನಿಬಂಧನೆಗಳನ್ನು ಯಾವಾಗಲಾದರೂ ತೆಗೆದುಹಾಕಬಹುದು ಅಥವಾ ಬದಲಾಯಿಸಬಹುದು.

24. ಮೇಲಿನ 23ನೆ ನಿಬಂಧನೆಯಂತೆ ಯಾವುದಾದರೂ ಸ್ಥಳೀಯ ಪ್ರದೇಶಕ್ಕೆ ಮಾಡತಕ್ಕ ಉಪನಿಬಂಧನೆಗಳಲ್ಲಿ ಇತರ ವಿಷಯಗಳಲ್ಲದೆ ಈ ಕೆಳಗಿನವುಗಳಿಗೆ ಏರ್ಪಾಡು ಮಾಡಬಹುದು.

2ನೆ ನಿಬಂಧನೆಯ ಪ್ರಕಾರದ ಉಪ ನಿಬಂಧನೆಗಳು ಯಾವುವುಗಳಿಗೆ ಏರ್ಪಾಡು ಮಾಡಬಹುದು.

(a) ಸಿಡುಬು ಹಾಕುವ ಕೆಲಸ ನಡೆಯುವುದಕ್ಕಾಗಿ ಅನುಕೂಲವಾದ ಮಂಡಲಗಳಾಗಿ ಸ್ಥಳೀಯ ಪ್ರದೇಶದ ವಿಭಾಗ.

(b) ಪ್ರತಿ ಮಂಡಲದಲ್ಲಿಯೂ ಒಂದು ಅಥವಾ ಹೆಚ್ಚು ಸ್ಥಳಗಳನ್ನು ಸಾರ್ವಜನಿಕ ಸಿಡುಬು ಹಾಕುವ ಕೋಠಿಗಳಾಗಿ ನೇಮಕ ಮಾಡುವುದು ಮತ್ತು ಪ್ರತಿ ಕೋಠಿಯ ಹತ್ತಿರ ಕಣ್ಣಿಗೆ ಕಾಣಿಸುವ ಎತ್ತರವಾದ ಸ್ಥಳದಲ್ಲಿ ಸ್ಪಷ್ಟವಾಗಿ ತಿಳಿಯುವ ಗುರುತುಗಳನ್ನು ತಗುಲಹಾಕುವುದು.

(c) ಬೆಳೆದ ಹುಡುಗಿಯರಿಗೂ ಮತ್ತು ವಯಸ್ಸರಾದ ಹೆಂಗಸರಿಗೂ ತತ್ರಾಪಿ ಗೋಷ ಅಥವಾ ಪರದ ಕ್ರಮವನ್ನು ಆಚರಿಸುವವರಿಗೆ ಸಿಡುಬು ಹಾಕುವದಕ್ಕಾಗಿ ವಿಶೇಷವಾದ ಏರ್ಪಾಡುಗಳನ್ನು ಮಾಡತಕ್ಕದ್ದು.

(d) ಪ್ರತಿ ಮಂಡಲಕ್ಕೂ ಬೇಕಾದ ಗಂಡಸು ಮತ್ತು ಹೆಂಗಸು ಸಾರ್ವಜನಿಕ ಸಿಡುಬು ಹಾಕುವವರು.

(e) ಸಿಡುಬು ಹಾಕುವ ಕೋಠಿಗಳಲ್ಲಿ ಸಾರ್ವಜನಿಕ ಸಿಡುಬು ಹಾಕುವವರು ಇರಬೇಕಾದ ಕಾಲ.

(f) ಸಿಡುಬು ಹಾಕುವ ಮಂಡಲಗಳ ಎಲ್ಲೆಗಳೊಳಗೆ ಅವರು ವಾಸಮಾಡೋಣ.

(g) ಅವರು ಕೆಲಸದಮೇಲಿರುವಾಗ ಧರಿಸಬೇಕಾದ ಸ್ಪಷ್ಟವಾದ ಗುರುತು ಅಥವಾ ಚಿಹ್ನೆ.

(h) ಸ್ವಂತ ಸಿಡುಬುಹಾಕುವವರು ಹಾಕಬಹುದಾದ ರುಸುಮಿನ ಮೊತ್ತ ಮತ್ತು ಸಿಡುಬುಹಾಕುವ ಕೋಠಿಗಳ ಅಥವಾ ಮಂಡಲಗಳ ಹೊರಗಿನ ಸ್ಥಳಗಳಲ್ಲಿ ಸಿಡುಬುಹಾಕುವುದಕ್ಕೆ ಸಾರ್ವಜನಿಕ ಸಿಡುಬು ಹಾಕುವವರು ಕೇಳಬಹುದಾದ ವೇತನದ ಪ್ರಮಾಣ.

(i) ಜನಗಳು ತಮ್ಮ ಸ್ವಂತ ಮನೆಗಳಲ್ಲಿ ಅವರ ಮಕ್ಕಳಿಗೂ ಪರದಾ ಹೆಂಗಸರಿಗೂ ಸಿಡುಬುಹಾಕಿಸುವುದಕ್ಕೆ ಮಾಡಬೇಕಾದ ಅನುಕೂಲ್ಯಗಳು.

(j) ಸ್ಥಳೀಯ ಪ್ರದೇಶದಲ್ಲಿರುವ ಜನಗಳ ಹೆಸರುಗಳನ್ನೂ ಅವರು "ರಕ್ಷಿಸ" ಲ್ಪಟ್ಟಿದಾರೆಯೆ, ಅಥವಾ "ರಕ್ಷಿಸ" ಲ್ಪಟ್ಟಿಲ್ಲವೆ ಎಂಬುವುದನ್ನೂ, ಸಿಡುಬು ಹಾಕೋಣವನ್ನು ಅವಶ್ಯವಾಗಿ ಮಾಡಿದಮೇಲೆ ಅಥವಾ ತರುವಾಯ ಅಂಥಾ ಪ್ರದೇಶದಲ್ಲಿ ಹುಟ್ಟಿದ ಮಕ್ಕಳ ಹೆಸರುಗಳನ್ನೂ, ಸಿಡುಬು ಹಾಕೋಣವು ಅವಶ್ಯವೆಂದು ಪ್ರಕಟಿಸಲ್ಪಟ್ಟ ತರುವಾಯ ಯಾವ ಕಾಲದಲ್ಲಿಯಾದರೂ ಆ ಪ್ರದೇಶದೊಳಕ್ಕೆ ಬರುವ ಅಥವಾ ಕರೆತರಲ್ಪಡುವ ಮತ್ತು ಒಂದು ತಿಂಗಳವರೆಗೆ ಅಲ್ಲಿ ವಾಸಮಾಡಿದ "ರಕ್ಷಿಸಲ್ಪಡದ" ಮನುಷ್ಯರ ಅಥವಾ ಮಕ್ಕಳ ಹೆಸರುಗಳನ್ನೂ, ಪ್ರತಿ ಸಿಡುಬು ಹಾಕೋಣದರ ಅಥವಾ ಅದನ್ನು ಮುಂದಕ್ಕೆ ಹಾಕೋಣದರ ಫಲವನ್ನೂ ಮತ್ತು ಸರ್ಟಿಫಿಕೇಟುಗಳು ಏನಾದರೂ ಇದ್ದರೆ, ಕೊಡೋಣವನ್ನೂ, ತೋರಿಸುವ ರಿಜಿಸ್ಟರುಗಳನ್ನು ಸಿದ್ಧಪಡಿಸೋಣ ಮತ್ತು ಇಡೋಣ.

(k) ಈ ರಿಜಿಸ್ಟರುಗಳ ಸಿದ್ಧಪಡಿಸೋಣದರಲ್ಲಿಯೂ ಇತರ ವಿಷಯಗಳಲ್ಲಿಯೂ ಮ್ಯುನಿಸಿಪಾಲಿಟಿಯಿಂದ ಮಾಡಲ್ಪಡತಕ್ಕ ಸಹಾಯ.

(l) ಸಿಡುಬು ಹಾಕುವುದರ ಲೆಕ್ಕಗಳ ಮತ್ತು ರಿಪೋರ್ಟುಗಳ ಸಿದ್ಧಪಡಿಸೋಣ.

25 (1) ಈ ನಿಬಂಧನೆಗಳಿಗೆ ವಿರೋಧವಾಗಿ

ತಪ್ಪಿತಗಳಿಗೆ ಶಿಕ್ಷೆ.

(a) ನ್ಯಾಯವಾದ ಕಾರಣವಿಲ್ಲದೆ ತನಗೆ ಅಥವಾ ತನ್ನ ರಕ್ಷಣೆ ಅಥವಾ ಪಾಲನೆಯಲ್ಲಿರುವ ಮಗುವಿಗೆ ಸಿಡುಬು ಹಾಕಿಸಲು ಅಥವಾ ಸಿಡುಬು ಹಾಕಿದ ತರುವಾಯ ಸಿಡುಬು ಹಾಕುವವನು ಹೇಳುವ ತಾರೀಖು ಮತ್ತು ಕಾಲದಲ್ಲಿ ಪರೀಕ್ಷಿಸಲ್ಪಡಲು ಅಸಡ್ಡೆ ಮಾಡುವ, (b) 12ನೆಯ ನಿಬಂಧನೆ ಮೇರೆ ಸಿಡುಬು ಹಾಕುವುದರ ಮತ್ತು ಅದರ ಫಲವನ್ನು ತೋರಿಸುವ ಸರ್ಟಿಫಿಕೇಟನ್ನು ಕಳುಹಿಸಲು ಅಸಡ್ಡೆ ಮಾಡುವ, (c) 19ನೆಯ ನಿಬಂಧನೆಯಂತೆ ಕೇಳಲ್ಪಟ್ಟಾಗ ವರ್ತಮಾನವನ್ನು ಕೊಡಲು ನಿರಾಕರಿಸುವ ಅಥವಾ ಮನಃಪೂರ್ವಕವಾಗಿ ಸುಳ್ಳು ವರ್ತಮಾನವನ್ನು ಕೊಡುವ ಅಥವಾ ಅದೇ ನಿಬಂಧನೆಯ ಮೇರೆ ತಿಳಿಸಲ್ಪಟ್ಟ ನೋಟೀಸಿನಂತೆ ನಡೆಯಲು ಅಸಡ್ಡೆ ಮಾಡುವ, (d) 23ನೆ ನಿಬಂಧನೆಯಂತೆ ಮಾಡಲ್ಪಟ್ಟು ಸ್ಥಿರಪಡಿಸಲ್ಪಟ್ಟ ಯಾವ ಉಪನಿಬಂಧನೆಗಳನ್ನಾದರೂ ಉಲ್ಲಂಘಿಸುವ ಯಾವ ಮನುಷ್ಯನಿಗಾದರೂ ;

(2) ಅವನ ಕೆಲಸವು ಅವಶ್ಯವೆಂದು ಕೇಳಿದಾಗ ಹಣ ತೆಗದುಕೊಂಡು ಸಿಡುಬು ಹಾಕಲು ನಿರಾಕರಿಸುವ ಅಥವಾ ಈ ನಿಬಂಧನೆಗಳಿಗೆ ಅನುಸಾರವಾಗಿ ಕೊಡಲ್ಪಡಬೇಕಾದ ಸರ್ಟಿಫಿಕೇಟುಗಳನ್ನು ಕೊಡಲು ಅಸಡ್ಡೆ ಮಾಡುವ ಅಥವಾ ಸಿಡುಬು ಹಾಕುವುದಕ್ಕಾಗಿ ಅಥವಾ ಸರ್ಟಿಫಿಕೇಟನ್ನು ಕೊಡುವುದಕ್ಕಾಗಿ ನೇಮಕವಾಗದ ಯಾವುದಾದರೂ ರುಸುಮನ್ನು ಅಥವಾ ವೇತನವನ್ನು ವಸೂಲ್ಮಾಡುವ ಯಾವ ಸಿಡುಬು ಹಾಕುವವನಿಗಾದರೂ;

ಒಬ್ಬ ಮಾಜಿಸ್ಟ್ರೇಟಿನ ಮುಂದೆ ತಪ್ಪು ಸ್ಥಿರಪಟ್ಟಾಗ 20 ರೂಪಾಯಿಗಳ ವರೆಗೆ ವಿಸ್ತರಿಬಹುದಾದ ಅಪರಾಧದಿಂದ ಶಿಕ್ಷೆಯಾಗತಕ್ಕದ್ದು.

(3) (a) ಈ ನಿಬಂಧನೆಗಳು ಉಪಯೋಗದಲ್ಲಿ ಬಂದಿರುವ ಪ್ರದೇಶದಲ್ಲಿ ಒಬ್ಬ ಮನುಷ್ಯನಿಗೆ ಸಿಡುಬು ಹಾಕುವ 4 ಮತ್ತು 17ನೆ ನಿಬಂಧನೆಯ ಮೇರೆ ಅಧಿಕಾರ ಹೊಂದದ ಯಾವ ಮನುಷ್ಯನಾದರೂ ;

(b) ಮತ್ತು ಸಿಡುಬು ಹಾಕುವಾಗ ಸರಿಯಾದ ಎಚ್ಚರಿಕೆಗಳನ್ನು ತೆಗೆದುಕೊಳ್ಳಲು ಅಸಡ್ಡೆ ಮಾಡುವ ಅಥವಾ ನಿರಾಕರಿಸುವ ಅಥವಾ 15 ಮತ್ತು 17ನೆ ನಿಬಂಧನೆಗಳಲ್ಲಿ ವಿಧಿಸಿರುವ ಮೇರೆ ತಕ್ಕ ಅಧಿಕಾರಿಯಿಂದ ನಿರ್ಮಲವಾದುದೆಂದು ದೃಢೀಕರಿಸಲ್ಪಡದ ಸಿಡುಬಿನ ಹಾಲನ್ನು ಉಪಯೋಗಿಸಿ ತನ್ಮೂಲಕ ಸಿಡುಬು ಹಾಕಲ್ಪಟ್ಟ ಯಾವನಾದರೂ ಮನುಷ್ಯನ ಆರೋಗ್ಯವನ್ನು ಕೆಡಿಸುವ ಯಾವ ಅಧಿಕಾರ ಹೊಂದಿದ ಸಿಡುಬು ಹಾಕುವವನಾಗಲಿ ;

(c) 21ನೆ ನಿಬಂಧನೆಯ ಪ್ರಕಾರದ ಮಾಜಿಸ್ಟ್ರೇಟಿನ ಅಪ್ಪಣೆಗೆ ಅವಿಧೇಯನಾಗಿ ನಡೆಯುವ ಯಾವ ಮನುಷ್ಯನಾದರೂ,

ಒಬ್ಬ ಮಾಜಿಸ್ಟ್ರೇಟಿನ ಮುಂದೆ ತಪ್ಪು ಸ್ಥಿರಪಟ್ಟಾಗ 50 ರೂಪಾಯಿನವರೆಗೆ ವಿಸ್ತರಿಸಬಹುದಾದ ಅಪರಾಧಕ್ಕೆ ಗುರಿಯಾಗತಕ್ಕದು

26. 25ನೆ ನಿಬಂಧನೆಯಂತೆ ತಪ್ಪು ಸ್ಥಿರಪಟ್ಟ ತರುವಾಯ ತನಗೆ ಅಥವಾ ತನ್ನ ಪಾಲನೆಯಲ್ಲಿರುವ ಮಗುವಿಗೆ ಸಿಡುಬು ಹಾಕಿಸಲು ತನ್ನ ನಿರಾಕರಣೆಯನ್ನು ಪ್ರಬಲವಾದ ಕಾರಣವಿಲ್ಲದೆ ಒಂದು ವಾರದವರೆಗೆ ನಡೆಸುವ ಯಾವ ಮನುಷ್ಯನಾದರೂ 20 ರೂಪಾಯಿಗೆ ಮೀರದ ಅಪರಾಧಕ್ಕೆ ತಿರಿಗಿ ಗುರಿಯಾಗತಕ್ಕದ್ದು.

ಮೈಸೂರ ಗೆಜೆಟ್.

ಸಂ॰ 42.] ಸರ್ಕಾರದಿಂದ ಛಾಪಿಸಿ ಪ್ರಕಟಿಸಲ್ಪಟ್ಟಿದ್ದು. [ನಂ॰ 12

ಬೆಂಗಳೂರು, ಗುರುವಾರ, ಮಾರ್ಚಿ ತಾ॥ 21, ಸನ್ 1907.

III ನೆ ಭಾಗ.

ಲೆಜಿಸ್ಲೇಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೇಟಿವ್ ಇಲಾಖೆ.

ತಾರೀಖು 8ನೆ ಮಾರ್ಚಿ 1907.

ನಂ. ಜೆ. 2753.—ಲೆಜಿಸ್. 21-06--੬, 1905ನೆ ಇಸವಿಯ 3ನೆ ನಂಬರಿನ ಮೈಸೂರು ಅನ್ಯೋನ್ಯ ಸಹಾಯ ಸಂಘಗಳ ರೆಗ್ಯುಲೇಷನಿನ ಪ್ರಕಾರ ಪ್ರಕಟಿಸಬೇಕೆಂದು ಉದ್ದೇಶಿಸಿರುವ ನಿಬಂಧನೆಗಳ ಈ ಕೆಳಗಿನ ಮುಸುವಿದಾ ಯಾ ಚಿತ್ತು ಪ್ರತಿಯನ್ನು ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಪ್ರಕಟಿಸಿ ಇದೆ. 1907ನೆ ಇಸವಿಯ ಏಪ್ರಿಲ್ 1ನೆ ತಾರೀಖಿನ ದಿನ ಅಥವಾ ಅದಕ್ಕೆ ತರುವಾಯ ಸದರಿ ಚಿತ್ತು ಪ್ರತಿಯನ್ನು ಆಲೋಚನೆಗೆ ತೆಗೆದುಕೊಳ್ಳಲಾಗುವುದು.

ಆ ತಾರೀಖಿಗೆ ಮುಂಚೆ ಬರುವ ಎಲ್ಲಾ ಗುಣದೋಷನಿರೂಪಣೆಗಳನ್ನೂ ಸೂಚನೆಗಳನ್ನೂ ಕ್ರಮವಾಗಿ ಆಲೋಚಿಸಲಾಗುವುದು.

ಅಪ್ಪಣೆಯ ಮೇರೆಗೆ,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.

ಮುಸೂವಿದಾ ಯಾ ಚಿತ್ತು ಪ್ರತಿ.

1905ನೆ ಇಸವಿಯ ಸೆಪ್ಟಂಬರು 27ನೆ ತಾರೀಖಿನ ಜೆ. 982 – ಲೆಜಿಸ್. 4–3ನೆ ನಂಬರಿನ ಇಸ್ತಿಹಾರ್ನಾಮೆಯೊಡನೆ ಪ್ರಕಟಿಸಿದ ನಿಬಂಧನೆಗಳಿಗೆ ಪುರವಣಿಯಾಗಿಯೂ 1905ನೆ ಇಸವಿಯ 3ನೆ ನಂಬರು ಮೈಸೂರು ಅನ್ಯೋನ್ಯ ಸಹಾಯ ಸಂಘಗಳ ರೆಗ್ಯುಲೇಷನಿನಿಂದ ಕೊಡಲ್ಪಟ್ಟ ಅಧಿಕಾರಗಳನ್ನು ನಡೆಸುವುದರಲ್ಲಿಯೂ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಈ ಕೆಳಗಿನ ಅಧಿಕ ನಿಬಂಧನೆಗಳನ್ನು ಮಾಡಲು ಅಪ್ಪಣೆ ದಯಪಾಲಿಸಿರುತ್ತಾರೆ :—

(a) ಸಂಘದ ಸಾಮಾಜಿಕನಾಗಿ ಇರುವ ಅಥವಾ (ಈ ವರೆಗೆ) ಇದ್ದವನಿಗೂ, ಅಥವಾ

(b) ಸಾಮಾಜಿಕನಾಗಿ ಇರುವವನ ಅಥವಾ ಈ ವರೆಗೆ ಇದ್ದವನ ಮೂಲಕವಾಗಿ ಕೇಳುವವನಿಗೂ,

ಮತ್ತು ಅಂಥಾ ಸಂಘಕ್ಕೂ ಅಥವಾ ಅದರ ಕಮಿಟಿ ಯಾ ಸಭೆಗೂ ಅಥವಾ ಅದರ ಉದ್ಯೋಗಸ್ಥರಲ್ಲಿ ಯಾವನಿಗೂ,

ಸಂಘದ ಕೆಲಸದ ವಿಷಯದಲ್ಲಿ ಉಂಟಾದ ಯಾವುದಾದರೂ ವಿವಾದವು ನಿರ್ಣಯದ ಬಗ್ಗೆ ರಿಜಿಸ್ಟ್ರಾರಿಗೆ ಕಳುಹಿಸಲ್ಪಡತಕ್ಕದ್ದು.

(2) 1ನೆ ನಿಬಂಧನೆಯಲ್ಲಿ ಕಂಡ ವಿವಾದದ ನೋಟಿಸು ತಲಪಿದಾಗ ರಿಜಿಸ್ಟ್ರಾರು ತಾನೆ ಆ ವಿವಾದವನ್ನು ನಿರ್ಣಯಿಸತಕ್ಕದ್ದು ಅಥವಾ ಮೂವರು ಮಧ್ಯಸ್ಥರಿಗೆ ನಿರ್ಣಯಕ್ಕೆ ಕಳುಹಿಸತಕ್ಕದ್ದು. ವಿವಾದದ ಕಕ್ಷಿಗಾರರಲ್ಲಿ ಪ್ರತಿ ಒಬ್ಬನಿಂದ ಮಧ್ಯಸ್ಥರ ಪೈಕಿ ಒಬ್ಬೊಬ್ಬನೂ ರಿಜಿಸ್ಟ್ರಾರಿಂದ ಮೂರನೆಯವನೂ ನೇಮಿಸಲ್ಪಡತಕ್ಕದ್ದು.

(3) ರಿಜಿಸ್ಟ್ರಾರಿಂದ ನೋಟಿಸು ತಲಪಿದ ಹದಿನೈದು ದಿವಸಗಳೊಳಗಾಗಿ ವಿವಾದದ ಯಾವನಾದರೂ ಕಕ್ಷಿಗಾರನು ಒಬ್ಬ ಮಧ್ಯಸ್ಥನನ್ನು ನೇಮಕ ಮಾಡಲು ತಪ್ಪಿದರೆ ರಿಜಿಸ್ಟ್ರಾರೇ ಅಂಥಾ ನೇಮಕವನ್ನು ಮಾಡತಕ್ಕದ್ದು.

(4) ರಿಜಿಸ್ಟ್ರಾರಿನ ಅಥವಾ ಮಧ್ಯಸ್ಥರ ಮುಂದೆ ನಡೆದ 2ನೆ ನಿಬಂಧನೆಯ ಪ್ರಕಾರದ ನಡವಳಿಕೆಗಳಲ್ಲಿ ಹಾಜರಿರುವ ಕಕ್ಷಿಗಾರರ, ಮತ್ತು ಅವರು ಹಾಜರುಪಡಿಸಬಹುದಾದ ಸಾಕ್ಷಿಗಳ ಹೇಳಿಕೆಗಳನ್ನು ಬರೆದಿಡತಕ್ಕದ್ದು, ಮತ್ತು ಹಾಗೆ ಬರೆದಿಟ್ಟ ಸಾಕ್ಷ್ಯದ ಮೇಲೆ ಮತ್ತು ಉಭಯಪಕ್ಷದವರಿಂದ ಹಾಜರು ಪಡಿಸಲ್ಪಟ್ಟ ಯಾವುದಾದರೂ ದಸ್ತೈವಜಿನ ಸಾಕ್ಷ್ಯವನ್ನು ಆಲೋಚಿಸಿದ ತರುವಾಯ ನ್ಯಾಯಕ್ಕೂ ಧರ್ಮಕ್ಕೂ, ಅಂತಃಕರಣ ಶುದ್ಧಿಗೂ ಅನುಗುಣವಾಗಿ ಸಂದರ್ಭಾನುಸಾರವಾಗಿ ಒಂದು ನಿರ್ಣಯವನ್ನು ಅಥವಾ ತೀರ್ಪನ್ನು ಕೊಡತಕ್ಕದ್ದು.

(5) ನಿರ್ಣಯವು ಅಥವಾ ತೀರ್ಪು ಹಣದ ಸಲಿಕೆಗೆ ಅಥವಾ ಧಾನ್ಯವನ್ನು ಕೊಡುವುದಕ್ಕೆ ಸಂಬಂಧಿಸಿ ಇದ್ದರೆ ಮತ್ತು ಅಂಥಾ ಸಲಿಕೆಯು ಅಥವಾ ಕೊಡೋಣವು ಒಂದು ವಾರದೊಳಗೆ ಅಥವಾ ರಿಜಿಸ್ಟ್ರಾರಿಂದ ಅಪ್ಪಣೆ ಮಾಡಲ್ಪಡಬಹುದಾದ ಇನ್ನೂ ಹೆಚ್ಚು ಕಾಲದೊಳಗೆ ಮಾಡಲ್ಪಡದೆ ಇದ್ದರೆ ನಿರ್ಣಯದ ಅಥವಾ ತೀರ್ಪಿನ ಜಾರಿಯ ಬಗ್ಗೆ ರಿಜಿಸ್ಟ್ರಾರು ನಡವಳಿಕೆಗಳ ಕಾಗದ ಪತ್ರಗಳನ್ನು ಡೆಪ್ಯುಟಿ ಕಮಿಷನರಿಗೆ ಕಳುಹಿಸತಕ್ಕದ್ದು; ಮತ್ತು ಡೆಪ್ಯುಟಿ ಕಮಿಷನರು ಆಗ ನಿರ್ಣಯವು ಜಮೀನ್ ಕಂದಾಯದ ಬಾಕಿಗಾಗಿ ಒಂದು ಡಿಕ್ರಿಯಾಗಿದ್ದರೆ ಹೇಗೋ ಹಾಗೆ ಅದನ್ನು ಜಾರಿ ಮಾಡತಕ್ಕದ್ದು.

(6) 1. ಮಧ್ಯಸ್ಥರ ತೀರ್ಪಿನಿಂದ ನೊಂದ ಯಾವ ಕಕ್ಷಿಗಾರನಾದರೂ ತೀರ್ಪಿನ ತಾರೀಖಿನಿಂದ ಒಂದು ತಿಂಗಳೊಳಗೆ ರಿಜಿಸ್ಟ್ರಾರಿಗೆ ಅಪೀಲ್ಮಾಡಬಹುದು.

2. ಈ ನಿಬಂಧನೆಗಳ ಮೇರೆ ರಿಜಿಸ್ಟ್ರಾರಿಂದ ಮಾಡಲ್ಪಟ್ಟ ಪ್ರತಿ ಅಪ್ಪಣೆಯೂ ಕಡೆಯದಾಗಿಯೂ ಮುಕ್ತಾಯವಾಗಿಯೂ ಇರತಕ್ಕದ್ದು.

(7) ಈ ನಿಬಂಧನೆಗಳ ಪ್ರಕಾರದ ನಡವಳಿಕೆಗಳಲ್ಲಿ ಯಾವ ಕಕ್ಷಿಗಾರನೂ ಯಾವನಾದರೂ ಲಾಯರನ್ನು ತನ್ನ ಪ್ರತಿನಿಧಿಯಾಗಿ ಕಳುಹಿಸಕೂಡದು.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪ್ರಾಯಿಸ್ ಆದ್ದು [ನಂ. 16

ಬೆಂಗಳೂರು, ಗುರುವಾರ, ಏಪ್ರೈಲ್ ತಾ॥ 18, ಸ್ 1907.

III ನೆ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನ್ಮೆಂಟು.

ಲೆಜಿಸ್ಲೆಟಿವ್ ಇಲಾಖೆ.

ತಾರೀಖು ೨೦ನೆ ಮಾರ್ಚಿ 1907.

ನಂಬರು ಜಿ. 2916—ಲೆಜಿಸ್. 47-1906.

ಇಸ್ತಿಹಾರ್ನಾಮೆ.

ನ್ಯಾಯಗಳನ್ನೂ (ಕಾನೂನು) ಮತ್ತು ರೆಗ್ಯುಲೇಷನ್ಗಳನ್ನೂ ಮಾಡುವುದರಲ್ಲಿ ಸಹಾಯಮಾಡುವುದಕ್ಕೆ ಕಾರ್ಯತಃ ಅನುಭವದಿಂದಲೂ, ಸ್ಥಳೀಯ ವಿದ್ಯಮಾನಗಳ ಮತ್ತು ಆವಶ್ಯಕತೆಗಳ ಪರಿಚಯದಿಂದಲೂ ಯೋಗ್ಯರಾಗಿರುವ ಸರ್ಕಾರಿ ಉದ್ಯೋಗಸ್ಥರಾದ ಮತ್ತು ಸರ್ಕಾರಿ ಉದ್ಯೋಗಸ್ಥರಲ್ಲದ ಕೆಲವು ದೊಡ್ಡ ಮನುಷ್ಯರನ್ನು ನ್ಯಾಯವಿಧಾಯಕದ ಕೆಲಸದಲ್ಲಿ ತಮ್ಮ ಸರ್ಕಾರದೊಡನೆ ಸೇರಿಸುವ ಕಾಲವು ಪ್ರಾಪ್ತವಾಗಿದೆಯೆಂದೂ, ಆಲೋಚಿಸಿರುವ ಉಪಾಯಗಳನ್ನು ಕೆಲವು ಯೋಗ್ಯರಾದ ಮನುಷ್ಯರು ಚರ್ಚಿಸಿ ನಾನಾಮುಖವಾಗಿ ಅವುಗಳನ್ನು ಪರ್ಯಾಲೋಚಿಸುವುದರ ಪ್ರಯೋಜನವು ಅವುಗಳಿಗೆ ಉಂಟಾಗುವಹಾಗೆ ಸರ್ಕಾರಿ ಉದ್ಯೋಗಸ್ಥರೂ ಉದ್ಯೋಗಸ್ಥರಲ್ಲದವರೂ ಸೇರಿರುವ ಒಂದು ನ್ಯಾಯವಿಧಾಯಕ ಸಭೆಯನ್ನು ಏರ್ಪಡಿಸುವುದು ಅವಶ್ಯಕವೆಂದೂ, ಶ್ರೀಮನ್ ಮಹಾರಾಜರವರು ಆಲೋಚಿಸುತ್ತಾರೆ. ಇಂಥಾ ಯಾವುದಾವರೂ ಸಭೆಯ ಏರ್ಪಾಡು ಸಂಸ್ಥಾನದ ಆಡಳಿತಕ್ಕೆ ಸಂಬಂಧಪಟ್ಟ ಇತರ ಎಲ್ಲಾ ವಿಷಯಗಳಲ್ಲಿಯೂ ಇರುವಂತೆ ನ್ಯಾಯವಿಧಾಯಕ ಮಾಡುವುದರಲ್ಲಿ ಕಡೆಗೆ ಶ್ರೀಮನ್ ಮಹಾರಾಜರವರಿಗೆ ಮಾತ್ರವೇ ಸೇರಿರುವ ಜವಾಬ್ದಾರಿಯನ್ನು ಯಾವ ರೀತಿಯಿಂದಲೂ ಬಾಧಿಸುವಂತೆ ಅಥವಾ ಕಡಮೆ ಮಾಡುವಂತೆ ಉದ್ದೇಶಿಸಿ ಇಲ್ಲವೆಂದು ಹೇಳಬಹುದು. ಆದರೆ ಜನಗಳ ಕೊರತೆಗಳನ್ನೂ ಇಚ್ಛೆಗಳನ್ನೂ ಅನುಭವಗಳನ್ನೂ ಯಥಾರ್ಥವಾಗಿ ತಿಳಿದುಕೊಂಡು ಮೈಸೂರು ಸಂಸ್ಥಾನವನ್ನು ಆಳುವವರಾಗಿ ತಮ್ಮಿಂದ ವಿಧಿಸಲ್ಪಟ್ಟ ನ್ಯಾಯಗಳು (ಕಾನೂನು) ಎಲ್ಲಾ ಪ್ರಕಾರದಲ್ಲೂ ಅವುಗಳ ಉದ್ದೇಶಗಳಿಗೆ ಚೆನ್ನಾಗಿ ತಕ್ಕವಾಗಿರುವಂತೆ ಭದ್ರಪಡಿಸಲು ಶ್ರೀಮನ್ಮಹಾರಾಜರವರಿಗೂ ಅವರ ಸರ್ಕಾರಕ್ಕೂ ಅನುಕೂಲಮಾಡಿ ಕೊಡುವುದು ಒಂದೇ ಮೇಲ್ಕಂಡ ಸಭೆಯನ್ನು ಏರ್ಪಡಿಸುವುದರ ಉದ್ದೇಶವಾಗಿದೆ. ಮೇಲ್ಕಂಡ ಸಭೆಯಲ್ಲಿ ಚರ್ಚೆಗಳನ್ನು ಸಾಧಾರಣವಾಗಿ ಬಹಿರಂಗವಾಗಿ ನಡೆಸೋಣವೂ, ಕ್ರಮವಾಗಿ ಏರ್ಪಡಿಸಿದ ನ್ಯಾಯವಿಧಾಯಕ ಸಭೆಗೆ ಮುಖ್ಯವಾದ ಲಕ್ಷಣಗಳಲ್ಲಿ ಒಂದಾಗಿರುವ ಸೆಲೆಕ್ಟ ಕಮಿಟಿ ಅಥವಾ ನಿಯುಕ್ತ ಸಮಾಜದಲ್ಲಿ ಪ್ರತಿ ಉಪಾಯವನ್ನೂ ತಪಶೀಲುವಾರಾಗಿ ಆಲೋಚಿಸುವುದಕ್ಕೆ ಉಂಟಾಗುವ ಅನುಕೂಲವೂ, ಮೇಲ್ಕಂಡ ಸಭೆಯಿಂದ ಕಾರ್ಯತಃ ಬಹಳ ಒಳ್ಳೆಯದು ಆಗಬಹುದೆಂದು ನಿರೀಕ್ಷಿಸುವುದಕ್ಕೆ ಹೆಚ್ಚು ಕಾರಣಗಳಾಗಿವೆ.

ಈ ಕಾರಣಗಳಿಂದ ಮೈಸೂರಿನಲ್ಲಿ ನ್ಯಾಯಗಳನ್ನೂ (ಕಾನೂನು) ರೆಗ್ಯುಲೇಷನ್ಗಳನ್ನೂ ಏರ್ಪಡಿಸುವುದಕ್ಕಾಗಿ ಒಂದು ಸಭೆಯನ್ನು ಸ್ಥಾಪಿಸುವುದಕ್ಕೋಸ್ಕರ ಇದಕ್ಕೆ ಲಗತ್ತುಮಾಡಿರುವ ರೆಗ್ಯುಲೇಷನನ್ನು ವಿಧಿಸಲು ಶ್ರೀಮನ್ ಮಹಾರಾಜರವರು ಅಪ್ಪಣೆ ದಯಪಾಲಿಸಿರುತ್ತಾರೆ.

2. ಮೊದಲು ಸಲ ಪ್ರಕಟನೆಯಾದ ತಾರೀಖಿನಿಂದ ಮೂರು ತಿಂಗಳುಗಳು ತೀರಿದ ಮೇಲೆ ಜಾರಿಗೆ ಬರುವ ಈ ರೆಗ್ಯುಲೇಷನ್ ಪ್ರಕಾರ ನ್ಯಾಯವಿಧಾಯಕ ಸಭೆಯಲ್ಲಿ ದಿವಾನರು ಸಭಾಧ್ಯಕ್ಷರಾಗಿಯೂ ಇಬ್ಬರು ಕೌನ್ಸಿಲರುಗಳೂ ಉದ್ಯೋಗಪ್ರಯುಕ್ತವಾದ ಸಭಿಕರಾಗಿಯೂ ಸರ್ಕಾರದಿಂದ ನೇಮಿಸಲ್ಪಟ್ಟು, ಒಂದು ಸಲಕ್ಕೆ ಎರಡು ವರ್ಷಗಳ ಕಾಲಪರ್ಯಂತ ಉದ್ಯೋಗದಲ್ಲಿರುವ ಹತ್ತಕ್ಕೆ ಕಡಮೆಯಿಲ್ಲದ ಅಥವಾ ಹದಿನೈದಕ್ಕೆ ಮೀರದ ಹೆಚ್ಚು ಸಭಿಕರೂ ಸೇರಿರುವರು. ಅಂಥಾ ಹೆಚ್ಚು ಸಭಿಕರಲ್ಲಿ ಐದರಲ್ಲಿ ಎರಡು ಭಾಗಕ್ಕೆ ಕಡಮೆಯಿಲ್ಲದಷ್ಟು ಮಂದಿ ಉದ್ಯೋಗಸ್ಥರಲ್ಲದವರಾಗಿರಬೇಕು ಮತ್ತು ಸರ್ಕಾರದಿಂದ ನೇಮಕವಾಗುವುದಕ್ಕೆ ಮುಂಚೆ ಉದ್ಯೋಗಸ್ಥರಲ್ಲದ ಸಭಿಕರ ಪೈಕಿ ಎಲ್ಲರನ್ನೂ ಅಥವಾ ಅವರಲ್ಲಿ ಯಾರನ್ನಾದರೂ ಆರಿಸುವುದಕ್ಕೆ ಷರತ್ತುಗಳನ್ನು ಗೊತ್ತು ಮಾಡಲು ನಿಯಮಮಾಡಿದೆ. ಪ್ರಕೃತದಲ್ಲಿ ಹೆಚ್ಚು ಸಭಿಕರ ಸಂಖ್ಯೆಯನ್ನು ಹತ್ತಕ್ಕೆ ಗೊತ್ತುಮಾಡಿ ನೇಮಕಗಳನ್ನೆಲ್ಲಾ ಸರ್ಕಾರದವರ ಕೈಯಲ್ಲಿ ಇಟ್ಟುಕೊಳ್ಳಲಾಗುವುದು. ಸ್ಥಳೀಯ ಸಂಘಗಳಿಗೆ ಪ್ರಶಂಸೆಗಳನ್ನು ಕಳುಹಿಸುವ ಸ್ವಾತಂತ್ರ್ಯವನ್ನು ಕೊಡುವ ವಿಷಯವನ್ನು ಮುಂದೆ ಸಾಕಾದಷ್ಟು ಅನುಭವವುಂಟಾದಮೇಲೆ ಪರ್ಯಾಲೋಚಿಸಲಾಗುವುದು. ನೇಮಕಮಾಡಲ್ಪಟ್ಟ ಹೆಚ್ಚು ಸಭಿಕರ ಹೆಸರುಗಳನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗುವುದು.

3. ನ್ಯಾಯವಿಧಾಯಕ ಸಭೆಯಲ್ಲಿ ಕೆಲಸ ನಡೆಯೋಣವನ್ನು ಕ್ರಮಪಡಿಸುವುದಕ್ಕೆ ಆಗಾಗ್ಗೆ ಅವಶ್ಯವಾಗಬಹುದಾದ ನಿಬಂಧನೆಗಳನ್ನು ಮಾಡುವುದು ಸದರಿ ಸಭೆಯ ಕೆಲಸವಾಗಿದ್ದರೂ ಅಂಥಾ ನಿಬಂಧನೆಗಳಲ್ಲಿ ಯಾವುದಕ್ಕೋಸ್ಕರ ನಿಯಮ ಮಾಡಬೇಕೆಂದು ಉದ್ದೇಶಿಸಿದೆಯೋ ಅದಕ್ಕೆ ಉದಾಹರಣೆಯಾಗಿಯೂ, ಅಂಥಾ ನಿಬಂಧನೆಗಳನ್ನು ಹೆಚ್ಚಿಸುವುದಕ್ಕೆ ಅಥವಾ ಬದಲಾಯಿಸುವುದಕ್ಕೆ ಆವಶ್ಯಕತೆ ತೋರುವವರೆಗೆ ಮೇಲ್ಕಂಡ ಹೊಸ ಸಭೆಯ ಬಾಲ್ಯದಲ್ಲಿ ಎಲ್ಲಾ ಉದ್ದೇಶಗಳಿಗೂ ಕಾರ್ಯತಃ ಸಾಕಾಗಿರಬಹುದಾದವುಗಳಾಗಿಯೂ, ಮೇಲ್ಕಂಡ ರೆಗ್ಯುಲೇಷನಿನ ಕೊನೆಯಲ್ಲಿರುವ ಪಟ್ಟಿಯಲ್ಲಿ ಮೇಲ್ಕಂಡ ವಿಷಯವನ್ನು ಕುರಿತು ಕೆಲವು ನಿಬಂಧನೆಗಳನ್ನು ಕೊಡುವುದು ಅನುಕೂಲವಾಗಿರುವುದೆಂದು ಯೋಚಿಸಿ ಇದೆ. ಸಭೆಯಿಂದ ಮಾಡಲ್ಪಟ್ಟ ಎಲ್ಲಾ ನಿಬಂಧನೆಗಳನ್ನೂ ಅಥವಾ ಅವುಗಳಲ್ಲಿ ಯಾವುದನ್ನಾದರೂ ಒಪ್ಪದಿರುವ ಹಕ್ಕನ್ನು ಸರ್ಕಾರಕ್ಕೆ ಉಳಿಸಿಕೊಂಡಿದ್ದರೂ, ಅದನ್ನು ಸಹಜವಾಗಿ ಸಭೆಯಿಂದ ಮಾಡಲ್ಪಟ್ಟ ಒಂದು ನಿಬಂಧನೆಯು ಸಭೆಯ ಕೆಲಸವು ಕಾರ್ಯಸಾಧಕವಾಗಿ ಹೊಂದಿಕೆಯಾಗಿ ಅಥವಾ ತ್ವರೆಯಾಗಿ ನಡೆಯುವುದಕ್ಕೆ ಅನನುಕೂಲವಾಗಿರಬಹುದಾದ ಅಪರೂಪವಾದ ಸಂದರ್ಭಗಳಲ್ಲಿ ಮಾತ್ರ ನಡೆಸಲಾಗುವುದು.

4. ಸಭೆಯ ಕೂಟಗಳಲ್ಲಿ ನಡೆಸಬೇಕಾಗಿರುವ ಕೆಲಸವನ್ನು ಅಲ್ಲಿ ಪ್ರಸ್ತಾಪಿಸಲ್ಪಟ್ಟ ಉಪಾಯಗಳನ್ನು "ಆಲೋಚಿಸಿ ನಿರ್ಣಯಿಸುವುದಕ್ಕೆ" ಮಾತ್ರ ನಿಬಂಧಿಸಲ್ಪಡುವುದು. ಪ್ರತಿ ಉಪಾಯದ ವಿಧಿಯನ್ನು ವಿಧಿಸೋಣವು ಶ್ರೀಮನ್ ಮಹಾರಾಜರವರಿಗೆ ಸೇರಿರುತ್ತದೆ ಮತ್ತು ಅಂಥಾ ಉಪಾಯಕ್ಕೆ ಅವರ ಅನುಜ್ಞೆಯನ್ನು ಕೊಡೋಣದರಿಂದ ಅದು ನ್ಯಾಯವಿಧಿಯಾಗಿ ಆಗುತ್ತದೆ. 12ನೆ ಪ್ರಕರಣಕ್ಕೆ ಲಗತ್ತು ಮಾಡಿರುವ ನಿಯಮವು, ಈ ರಾಜ್ಯಕ್ಕೂ ಬ್ರಿಟಿಷ್ ಸಾಮ್ರಾಜ್ಯಕ್ಕೂ ಇರುವ ಸಂಬಂಧಗಳಿಗೆ ಸೇರಿರುವ ಎಲ್ಲಾ ವಿಷಯಗಳನ್ನೂ ಹಾಗೆಯೇ ಸರ್ಕಾರದ ಪರ್ಯಾಲೋಚನೆಗಾಗಿ ಶ್ರೀಮನ್ ಮಹಾರಾಜರವರಿಂದ ವಿಶೇಷವಾಗಿ ಉಳಿಸಿ ಇಡಲ್ಪಡಬಹುದಾದ ಯಾವದಾದರೂ ಇತರ ವಿಷಯಗಳನ್ನೂ ಸಭೆಯ ಆಲೋಚನೆಗಳಿಂದ ಪ್ರತಿಷೇಧಿಸುತ್ತದೆ. ಅಂಥಾ ಎಲ್ಲಾ ಸಂದರ್ಭಗಳಲ್ಲಿಯೂ 14ನೆ ಪ್ರಕರಣದಿಂದ ಉಳಿಸಿಡಲ್ಪಟ್ಟಿರುವ ಅಧಿಕಾರದ ಮೂಲಕ ಅವಶ್ಯವಾದ ರೆಗ್ಯುಲೇಷನ್‌ಗಳನ್ನು ಏರ್ಪಡಿಸಿ ಅವನ್ನು ಶ್ರೀಮನ್ ಮಹಾರಾಜರವರ ಅನುಜ್ಞೆಗೆ ಕಳುಹಿಸುವುದು ಸರ್ಕಾರಕ್ಕೆ ಯೋಗ್ಯವಾಗಿರುವುದು.

5. ಯಾವುವು ನ್ಯಾಯವಿಧಾಯಕ ಸಭೆಯ ಅಧಿಕಾರಕ್ಕೆ ಹೊರಗಾಗಿಲ್ಲದೆ ಇದ್ದರೂ ಅತ್ಯವಶ್ಯವಾಗಿ ಬೇಕಾಗಿದ್ದು ಅವುಗಳನ್ನು ಕ್ರಮವಾಗಿ ಸಭೆಯಲ್ಲಿ ಪ್ರಸ್ತಾಪಿಸಿ ಆಲೋಚಿಸಿ ನಿರ್ಣಯಿಸುವುದಕ್ಕೆ ಬಹಳ ಕಾಲ ವಿಳಂಬವಾಗಬಹುದೋ ಅಥವಾ ಹಾಗೆ ಮಾಡುವುದು ಅನ್ಯಥಾ ಅಯುಕ್ತವಾಗಿರಬಹುದೋ ಅಂಥಾ ಉಪಾಯಗಳನ್ನು ನಿರ್ಣಯಿಸುವುದಕ್ಕೆ 15ನೆ ಪ್ರಕರಣದಲ್ಲಿ ವಿಶೇಷ ನಿಯಮ ಮಾಡಿದೆ. ಆದಾಗ್ಯೂ ಅಂಥಾ ರೆಗ್ಯುಲೇಷನ್‌ಗಳು ಆರು ತಿಂಗಳಿಗಿಂತ ಹೆಚ್ಚಾಗಿ ಉಪಯೋಗದಲ್ಲಿರುವಂತೆ ಉದ್ದೇಶಿಸಲ್ಪಟ್ಟಿಲ್ಲ; ಆ ಕಾಲಕ್ಕೆ ಮೀರಿ ಅವುಗಳನ್ನು ಉಪಯೋಗದಲ್ಲಿ ಇಡಬೇಕಾದರೆ ಎಲ್ಲಾ ಉಪಾಯಗಳನ್ನೂ ಪದ್ಧತಿಮೇರೆ ಆಲೋಚನೆ ಬಗ್ಗೆ ಸಭೆಯ ಮುಂದೆ ಕ್ರಮವಾದ ಮಾರ್ಗದಲ್ಲಿ ಇಡುವಹಾಗೆ ಆ ವಿಷಯವನ್ನೂ ಇಡಲಾಗುವುದು.

ಅಪ್ಪಣೆಯ ಮೇರೆಗೆ,

ಕೆ. ಎಸ್. ಚಂದ್ರಶೇಖರ ಐಯ್ಯರ್,

ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟರಿ.

1907ನೆ ಇಸವಿಯ 1ನೆ ನಂಬರ್ ರೆಗ್ಯುಲೇಷನ್.

(1907ನೆ ಇಸವಿಯ ಮಾರ್ಚಿ 6ನೆ ತಾರೀಖಿನಲ್ಲಿ ನಿರ್ಣಯಿಸಲಾಯಿತು).

ಮೈಸೂರು ಸೀಮೆಯಲ್ಲಿ ನ್ಯಾಯ ವಿಧಾಯಕ ಸಭೆಯನ್ನು ಸ್ಥಾಪಿಸಲು ಹುಟ್ಟಿದ ರೆಗ್ಯುಲೇಷನ್.

ಪೀಠಿಕೆ.

ಮೈಸೂರು ಸೀಮೆಯಲ್ಲಿ ನ್ಯಾಯಗಳನ್ನೂ (ಕಾನೂನು) ರೆಗ್ಯುಲೇಷನ್‌ಗಳನ್ನೂ ಏರ್ಪಡಿಸಲು ಒಂದು ಸಭೆಯನ್ನು ಸ್ಥಾಪಿಸುವುದು ಯುಕ್ತವಾಗಿರುವುದರಿಂದ; ಶ್ರೀಮನ್ ಮಹಾರಾಜರವರು ಈ ಕೆಳಗಿನಂತೆ ವಿಧಿಸಲು ಅಪ್ಪಣೆ ದಯಪಾಲಿಸಿರುತ್ತಾರೆ:—

ಚಿಕ್ಕ ಹೆಸರು.

1. (1) ಈ ರೆಗ್ಯುಲೇಷನನ್ನು 1907ನೆ ಇಸವಿಯ ಮೈಸೂರು ನ್ಯಾಯ ವಿಧಾಯಕ ಸಭೆಯ ರೆಗ್ಯುಲೇಷನ್ ಎಂದು ಕರೆಯಬಹುದು.

ಪ್ರಾರಂಭ.

(2) ಇದು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟವಾದ ತಾರೀಖಿನಿಂದ ಮೂರು ತಿಂಗಳುಗಳು ಕಳೆದ ತರುವಾಯ ಉಪಯೋಗದಲ್ಲಿ ಬರತಕ್ಕದ್ದು.

ಅರ್ಥ ವಿವರಣೆಯ ವಾಕ್ಯ.

2. ಈ ರೆಗ್ಯುಲೇಷನಿನಲ್ಲಿ ವಿಷಯದಲ್ಲಿ ಅಥವಾ ಪೂರ್ವಾಪರ ಸಂಬಂಧದಲ್ಲಿ ಏನಾದರೂ ವಿರೋಧವಾಗಿದ್ದ ಹೊರತು,

(1) "ಕೌನ್ಸಿಲರ್" ಎಂದರೆ ಸಂಸ್ಥಾನದ ಆಡಳಿತವನ್ನು ನಡೆಸುವುದರಲ್ಲಿ ಸಹಾಯ ಮಾಡಲು ನೇಮಕ ಮಾಡಲ್ಪಟ್ಟ ಶ್ರೀಮನ್ ಮಹಾರಾಜರವರ ಸಭೆಯ ಒಬ್ಬ ಸಭಿಕನೆಂದು ಅರ್ಥ.

(2) "ನ್ಯಾಯ ವಿಧಾಯಕ ಸಭೆ ಅಥವಾ ಸಭೆ" ಎಂದರೆ, ನ್ಯಾಯಗಳನ್ನೂ ರೆಗ್ಯುಲೇಷನ್‌ಗಳನ್ನೂ ಮಾಡಲು 3ನೆ ಪ್ರಕರಣದ ಮೇರೆ ನೇಮಕ ಮಾಡಲ್ಪಟ್ಟ ಸಭೆಯೆಂದು ಅರ್ಥ.

(3) "ಸಭಿಕ" ಎಂದರೆ, ನ್ಯಾಯವಿಧಾಯಕ ಸಭೆಯ ಸಭಿಕನೆಂದು ಅರ್ಥ.

ನ್ಯಾಯ ವಿಧಾಯಕ ಸಭೆಯ ಏರ್ಪಾಡು.

3. ನ್ಯಾಯಗಳನ್ನೂ ರೆಗ್ಯುಲೇಷನ್‌ಗಳನ್ನೂ ಮಾಡುವುದಕ್ಕೋಸ್ಕರ ಒಬ್ಬ ಅಧ್ಯಕ್ಷರನ್ನೂ ಇಬ್ಬರು ಉದ್ಯೋಗ ಪ್ರಯುಕ್ತವಾದ ಸಭಿಕರನ್ನೂ ಮತ್ತು ಆಗಾಗ್ಗೆ ಶ್ರೀಮನ್ ಮಹಾರಾಜರವರ ಸರ್ಕಾರದವರು ಗೊತ್ತು ಮಾಡಬಹುದಾದ ಹತ್ತಕ್ಕೆ ಕಡಮೆಯಿಲ್ಲದ ಅಥವಾ ಹದಿನೈದಕ್ಕೆ ಮೀರದಷ್ಟು ಮಂದಿ ಹೆಚ್ಚು ಸಭಿಕರುಳ್ಳ ನ್ಯಾಯವಿಧಾಯಕ ಸಭೆಯೆಂದು ಕರೆಯಲ್ಪಡುವ ಒಂದು ಸಭೆಯು ಇರತಕ್ಕದ್ದು.

ಅಧ್ಯಕ್ಷರೂ ಸಭಿಕರೂ.

4. (1) ದಿವಾನರು ನ್ಯಾಯ ವಿಧಾಯಕ ಸಭೆಯ ಉದ್ಯೋಗ ಪ್ರಯುಕ್ತವಾದ ಅಧ್ಯಕ್ಷರಾಗಿಯೂ ಕೌನ್ಸಿಲರುಗಳು ಅದರ ಉದ್ಯೋಗ ಪ್ರಯುಕ್ತವಾದ ಸಭಿಕರಾಗಿಯೂ ಇರತಕ್ಕದ್ದು.

(2) ಉಳಿದ ಸಭಿಕರು ಆಗಾಗ್ಗೆ ಸರ್ಕಾರದಿಂದ ನೇಮಿಸಲ್ಪಡತಕ್ಕದ್ದು. ಆದರೆ, ಹಾಗೆ ನೇಮಿಸಲ್ಪಟ್ಟ ಮನುಷ್ಯರಲ್ಲಿ ಐದರಲ್ಲಿ ಎರಡು ಭಾಗಕ್ಕೆ ಕಡಮೆಯಿಲ್ಲದಷ್ಟು ಮಂದಿ ಸರಕಾರದ ಉದ್ಯೋಗಸ್ಥರಲ್ಲದ ಜನಗಳಾಗಿ, ಎಂದರೆ, ಅಂಥಾ ನೇಮಕದ ಕಾಲದಲ್ಲಿ ಸರ್ಕಾರದ ಉದ್ಯೋಗದಲ್ಲಿ ಇಲ್ಲದವರಾಗಿ ಇರತಕ್ಕದ್ದು; ಮತ್ತು ಸರ್ಕಾರಿ ನೌಕರಿಯನ್ನು ಅಂಗೀಕರಿಸುವ ಸರಕಾರದ ಉದ್ಯೋಗಸ್ಥನಲ್ಲದ ಸಭಿಕನ ಸಭೆಯಲ್ಲಿನ ಸ್ಥಾನವು ಅಂಥಾ ಅಂಗೀಕಾರ ಮಾಡಿದಾಗ ಬರಿದಾಗತಕ್ಕದ್ದು.

ಸರಕಾರಿ ಉದ್ಯೋಗಸ್ಥರಲ್ಲದ ಸಭಿಕರನ್ನು ಆರಿಸುವುದಕ್ಕೆ ನಿಬಂಧನೆಗಳನ್ನು ಮಾಡಲು ಅಧಿಕಾರ.

5. ಶ್ರೀಮನ್ ಮಹಾರಾಜರವರ ಸರ್ಕಾರದವರು, ಯಾವುವುಗಳ ಮೇರೆ ನ್ಯಾಯವಿಧಾಯಕ ಸಭೆಯ ಸರ್ಕಾರಿ ಉದ್ಯೋಗಸ್ಥರಲ್ಲದ ಎಲ್ಲಾ ಸಭಿಕರೂ, ಅಥವಾ ಅವರ ಪೈಕಿ ಯಾರಾದರೂ ನೇಮಕದ ಬಗ್ಗೆ ಆರಿಸಲ್ಪಡತಕ್ಕದ್ದೋ ಅಂಥಾ ನಿಯಮಗಳನ್ನು ಕುರಿತು ನಿಬಂಧನೆಗಳನ್ನು ಆಗಾಗ್ಗೆ ಮಾಡಬಹುದು.

ಸಭಿಕತನದ ಕಾಲ ಮತ್ತು ಸಭಿಕರ ಕೂಟಕ್ಕೆ ಕರೆಯಲ್ಪಡುವುದಕ್ಕೆ ಸಭಿಕರ ಬಾಧ್ಯತೆ.

6. ಸಭೆಯ ಸಭಿಕನಾಗಿ ನೇಮಿಸಲ್ಪಡುವ ಪ್ರತಿ ಮನುಷ್ಯನೂ ಎರಡು ವರ್ಷಗಳ ಕಾಲಪರ್ಯಂತ ಅಂಥಾ ಸಭಿಕನಾಗಿ ಇರತಕ್ಕದ್ದು, ಮತ್ತು, ಅಂಥಾ ಕಾಲದಲ್ಲಿ ಅವನು ನ್ಯಾಯಗಳನ್ನೂ (ಕಾನೂನು) ರೆಗ್ಯುಲೇಷನ್‌ಗಳನ್ನೂ ಮಾಡುವುದಕ್ಕೋಸ್ಕರ ನಡೆಯುವ ಎಲ್ಲಾ ಕೂಟಗಳಿಗೂ ಕರೆಯಲ್ಪಡತಕ್ಕದ್ದು.

ಸಭಿಕತನವು ಯಾವಾಗ ಬರಿದಾಗತಕ್ಕದ್ದು.

7. (1) ಸಭೆಯ ಯಾವ ಸಭಿಕನಿಗಾದರೂ ಯಾವ ಕಾಲದಲ್ಲಿಯಾದರೂ ತನ್ನ ಉದ್ಯೋಗಕ್ಕೆ ರಾಜಿನಾಮೆ ಕೊಡುವುದು ನ್ಯಾಯವಾಗಿರತಕ್ಕದ್ದು, ಮತ್ತು ಅಂಥಾ ರಾಜಿನಾಮೆಯು ಶ್ರೀಮನ್ ಮಹಾರಾಜರವರ ಸರ್ಕಾರದಿಂದ ಅಂಗೀಕರಿಸಲ್ಪಟ್ಟಾಗ ಅಂಥಾ ಉದ್ಯೋಗವು ಬರಿದಾಗತಕ್ಕದ್ದು.

(2) ಸಭೆಯ ಯಾವನಾದರೂ ಸಭಿಕನ ಮೇಲೆ ನೀತಿಗೇಡಿತನಕ್ಕೆ ಸಂಬಂಧಿಸುವ ಯಾವುದಾದರೂ ತಪ್ಪು ಸ್ಥಾಪಿಸಲ್ಪಟ್ಟಾಗ ಅಥವಾ ಆತನು ದಿವಾಳಿಯೆಂದು ಪ್ರಕಟಿಸಲ್ಪಟ್ಟಾಗ, ಅಥವಾ ದಿವಾಳಿತನದ ಕಾರಣದ ಮೇಲೆ ತನ್ನ ಸಾಲಗಳನ್ನು ತೀರಿಸುವ ಜವಾಬ್ದಾರಿಯಿಂದ ಬಿಡಿಸಲ್ಪಡುವಂತೆ ಕೇಳಿಕೊಳ್ಳುವಾಗ ಅವನ ಉದ್ಯೋಗವು ಬರಿದಾಗತಕ್ಕದ್ದು.

(3) ಒಬ್ಬ ಉದ್ಯೋಗಸ್ಥನಾದ ಸಭಿಕನು ತಾನು ಸರ್ಕಾರದ ಉದ್ಯೋಗದಿಂದ ತಳ್ಳಿ ಬಿಡಲ್ಪಟ್ಟಾಗ ಅಥವಾ ನಿವೃತ್ತನಾದಾಗ ತನ್ನ ಸ್ಥಾನವನ್ನು ಖರಿದು ಮಾಡತಕ್ಕದ್ದು.

ವಿವರಣೆ— ಯಾವನಾದರೂ ಸಭಿಕನ ಮೇಲೆ ಸ್ಥಾಪಿಸಲ್ಪಟ್ಟಿರಬಹುದಾದ ತಪ್ಪು ನೀತಿಗೇಡಿತನಕ್ಕೆ ಸಂಬಂಧಿಸುತ್ತದೆಯೋ ಎಂಬುವುದನ್ನು ಕುರಿತು ಸರ್ಕಾರದವರ ನಿರ್ಣಯವು ಕಡೆಯದಾಗಿರತಕ್ಕದ್ದು ಮತ್ತು ನ್ಯಾಯದ ಯಾವ ಕೋರ್ಟಿನಲ್ಲಿಯೂ ಅದನ್ನು ಕುರಿತು ಸಂಶಯಿಸಕೂಡದು.

ಅವ್ಯವಹಿತವಾದ ಮೂರು ಸಾಧಾರಣ ಕೂಟಗಳಿಗೆ ಬಾರದೆ ಇರುವ ಸಭಿಕನು ಸ್ಥಾನವನ್ನು ಖರಿದು ಮಾಡುತ್ತಾನೆ.

8. ಯಾವನಾದರೂ ಸಭಿಕನು ಸಭೆಯ ಮೂರು ಅವ್ಯವಹಿತವಾದ ಸಾಧಾರಣ ಕೂಟಗಳಿಗೆ ಬರಲಾರದೆ ಹೋದರೆ, ಸಭೆಯಲ್ಲಿ ಅಂಥಾ ಸಭಿಕನ ಸ್ಥಾನವು ಬರಿದಾಯಿತೆಂದು ಸರ್ಕಾರಿ ಗೆಜೆಟ್ಟಿನಲ್ಲಿ ಇಸ್ತಿಹಾರಿನ ಮೂಲಕ ಪ್ರಕಟಿಸುವುದು ಸರ್ಕಾರಕ್ಕೆ ನ್ಯಾಯವಾಗಿರತಕ್ಕದ್ದು.

ದೀವಾನರು ಇಲ್ಲದೆ ಇರುವಾಗ ಕೂಟಗಳಲ್ಲಿ ಯಾರು ಅಧ್ಯಕ್ಷರಾಗಿ ಇರುವುದು.

9. (1) ದೀವಾನರು ಇಲ್ಲದಿರುವಾಗ, ಸಭೆಯಲ್ಲಿರುವ ಹಿರಿಯ ಕೌನ್ಸಿಲರು, ಅಥವಾ, ಒಬ್ಬರು ಕೌನ್ಸಿಲರು ಮಾತ್ರ ಇದ್ದರೆ, ಅಂಥಾ ಕೌನ್ಸಿಲರು ಸಭೆಯ ಕೂಟಗಳಲ್ಲಿ ಅಧ್ಯಕ್ಷರಾಗಿರತಕ್ಕದ್ದು; ಮತ್ತು ಸಭೆಗೆ ಕೊಡಲ್ಪಟ್ಟಿರುವ ನ್ಯಾಯಗಳನ್ನೂ (ಕಾನೂನು) ರೆಗ್ಯುಲೇಷನ್‌ಗಳನ್ನೂ ಮಾಡುವ ಅಧಿಕಾರವನ್ನು, ಯಾವುವುಗಳಿಗೆ ದೀವಾನರು ಅಥವಾ ಕೌನ್ಸಿಲರುಗಳಲ್ಲಿ ಯಾರಾದರೂ ಒಬ್ಬರು ಮತ್ತು ಸಭೆಯ ಸಭಿಕರ ಒಟ್ಟು ಸಂಖ್ಯೆಯಲ್ಲಿ ಅರ್ಧಕ್ಕೆ ಕಡಮೆ ಇಲ್ಲದಷ್ಟು ಮಂದಿ ಬಂದಿದ್ದರೆಯೂ ಅಂಥಾ ಮೇಲ್ಕಂಡ ಸಭೆಯ ಕೂಟಗಳಲ್ಲಿ ಮಾತ್ರ ನಡೆಸತಕ್ಕದ್ದು.

ಸಾಕಾದಷ್ಟು ಮಂದಿ ಸಭಿಕರು.

ನಿಶ್ಚಯಿಸುವ ಸಮ್ಮತಿ.

(2) ಮೇಲ್ಕಂಡ ಸಭೆಯ ಕೂಟಗಳಲ್ಲಿ ಭಿನ್ನಾಭಿಪ್ರಾಯದ ಪ್ರತಿ ಸಂದರ್ಭದಲ್ಲಿಯೂ ಸಮ್ಮತಿಗಳು ಸಮವಾಗಿರುವಾಗಲೆಲ್ಲಾ, ದೀವಾನರು, ಅಥವಾ, ಅವರು ಇಲ್ಲದಿರುವಾಗ, ಆಗ ಅಧ್ಯಕ್ಷನಾಗಿರುವ ಕೌನ್ಸಿಲರು, ಎರಡು ಸಮ್ಮತಿಗಳನ್ನು ಅಥವಾ ನಿಶ್ಚಯಿಸುವ ಸಮ್ಮತಿಯನ್ನು ಉಂಟಾಗಿರತಕ್ಕದ್ದು.

ಕೂಟಗಳ ಕಾಲವನ್ನೂ ಸ್ಥಳವನ್ನೂ ದೀವಾನರು ನೇಮಕ ಮಾಡತಕ್ಕದ್ದು.

10. ಆಗಾಗ್ಗೆ ಸಭೆಯ ಕೂಟಗಳ ಕಾಲವನ್ನೂ ಸ್ಥಳವನ್ನೂ ನೇಮಿಸುವುದೂ, ಕೂಟಗಳನ್ನು ಮುಂದಕ್ಕೆ ಹಾಕುವುದೂ ಅಥವಾ ಆಗಾಗ್ಗೆ ತಾವು ಇಲ್ಲದೆ ಇರುವಾಗ ಅಧ್ಯಕ್ಷರಾಗಿರುವ ಕೌನ್ಸಿಲರಿಗೆ ಯಾವ ಕೂಟವನ್ನಾದರೂ ಆಗಾಗ್ಗೆ ಮುಂದಕ್ಕೆ ಹಾಕಲು ಅಧಿಕಾರ ಕೊಡುವುದೂ, ದೀವಾನರಿಗೆ ನ್ಯಾಯವಾಗಿರತಕ್ಕದ್ದು.

ಕೂಟಗಳಲ್ಲಿ ಕೆಲಸ ನಡೆಸುವುದಕ್ಕೆ ನಿಬಂಧನೆಗಳು.

11. (1) ಸಭೆಯ ಕೂಟಗಳಲ್ಲಿ ಕೆಲಸವನ್ನು ನಡೆಸುವ ಬಗ್ಗೆ ನಿಬಂಧನೆಗಳನ್ನು ಆಗಾಗ್ಗೆ ಮಾಡುವುದು ನ್ಯಾಯವಿಧಾಯಕ ಸಭೆಗೆ ನ್ಯಾಯವಾಗಿರತಕ್ಕದ್ದು. ಆದರೆ ಅಂಥಾ ಎಲ್ಲಾ ನಿಬಂಧನೆಗಳನ್ನೂ ಅಥವಾ ಅವುಗಳಲ್ಲಿ ಯಾವುವನ್ನಾದರೂ ಒಪ್ಪದೆ ಇರುವುದು ಸರ್ಕಾರಕ್ಕೆ ನ್ಯಾಯವಾಗಿರತಕ್ಕದ್ದು.

(2) ಇದಕ್ಕೆ ಲಗತ್ತು ಮಾಡಿರುವ ಪಟ್ಟಿಯಲ್ಲಿ ಅಡಗಿರುವ ನಿಬಂಧನೆಗಳು ಈ ಪ್ರಕರಣದ (1)ನೆ ಒಳಪ್ರಕರಣದ ಮೇರೆ ಮಾಡಲ್ಪಟ್ಟ ನಿಬಂಧನೆಗಳಿಂದ ತಳ್ಳುಪಡಿ ಅಥವಾ ತಿದ್ದುಪಾಟು ಮಾಡಲ್ಪಡುವ ವರೆಗೆ ಉಪಯೋಗದಲ್ಲಿರತಕ್ಕದ್ದು ಮತ್ತು ನಿಂತಿರತಕ್ಕದ್ದು.

ದೀವಾನರ ಅನುಮತಿ ಇಲ್ಲದೆ ಉಪಾಯಗಳನ್ನು ಪ್ರಸ್ತಾಪಿಸಕೂಡದು.

12. (1) ಮೊದಲು ದೀವಾನರ ಬರಹ ಮೂಲಕವಾದ ಅನುಮತಿಯನ್ನು ಪಡೆಯದೆ ಮತ್ತು 11ನೆ ಪ್ರಕರಣದ ಮೇರೆ ಮಾಡಿದ ನಿಬಂಧನೆಗಳ ಪ್ರಕಾರ ಸಭೆಯ ಅಪ್ಪಣೆಯನ್ನು ಹೊಂದದೆ ಸಭೆಯಲ್ಲಿ ಯಾವ ತರದ ಉಪಾಯವನ್ನೂ ಪ್ರಸ್ತಾಪಿಸಕೂಡದು.

ಕೂಟಗಳಲ್ಲಿ ನಡೆಸತಕ್ಕ ಕೆಲಸದ ಸ್ವಭಾವ.

(2) ಆಲೋಚಿಸಿ ನಿರ್ಣಯಿಸುವುದಕ್ಕಾಗಿ ಅಂಥಾ ಸಭೆಯಲ್ಲಿ ಪ್ರಸ್ತಾಪಿಸಲ್ಪಟ್ಟ ಉಪಾಯಗಳ ಆಲೋಚನೆ ಮತ್ತು ನಿರ್ಣಯವಲ್ಲದ ಮತ್ತ್ಯಾವ ಕೆಲಸವನ್ನೂ ಸಭೆಯ ಯಾವ ಕೂಟದಲ್ಲಿಯೂ ನಡೆಸಕೂಡದು; ಮತ್ತು ಯಾವುದಾದರೂ ವಿಜ್ಞಾಪನೆಯು ಸಭೆಯಲ್ಲಿ ಮೇಲ್ಕಂಡಂತೆ ಒಂದಾನೊಂದು ಉಪಾಯವನ್ನು ಪ್ರಸ್ತಾಪಿಸಲು ಅಪ್ಪಣೆಗೋಸ್ಕರವಾಗಿ ಇದ್ದ ಹೊರತು ಅಥವಾ ಅಲ್ಲಿ ನಿಜವಾಗಿ ಪ್ರಸ್ತಾಪಿಸಲ್ಪಟ್ಟ ಒಂದಾನೊಂದು ಉಪಾಯಕ್ಕೆ ಸಂಬಂಧಿಸುವ ಹೊರತು ಅಂಥಾ ವಿಜ್ಞಾಪನೆಯನ್ನು ಮಾಡುವುದು ಯಾವ ಸಭಿಕನಿಗೂ ಅಥವಾ ಅಂಥಾ ವಿಜ್ಞಾಪನೆಯನ್ನು ಅಂಗೀಕರಿಸುವುದು ಸಭೆಗೂ ನ್ಯಾಯವಾಗಿರತಕ್ಕದ್ದಲ್ಲ.

ಆದರೆ ಈ ಕೆಳಗಿನ ವಿಷಯಗಳಿಗೆ ಸಂಬಂಧಿಸುವ ಯಾವ ಉಪಾಯವನ್ನೂ ಆಲೋಚಿಸುವುದು ಸಭೆಗೆ ನ್ಯಾಯವಾಗಿರತಕ್ಕದ್ದಲ್ಲ:

(a) ಮೈಸೂರನ್ನಾಳುವ ರಾಜ ವಂಶ,

(b) ಬ್ರಿಟಿಷ ಸಾಮ್ರಾಜ್ಯದೊಡನೆ ಅಥವಾ ಪರದೇಶದ ರಾಜರೊಡನೆ ಅಥವಾ ಸಂಸ್ಥಾನಗಳೊಡನೆ ಶ್ರೀಮನ್ ಮಹಾರಾಜರಿಗಿರುವ ಸಂಬಂಧಗಳು,

(c) ಈಗ ಉಪಯೋಗದಲ್ಲಿರುವ ಅಥವಾ ಇನ್ನು ಮೇಲೆ ಬ್ರಿಟಿಷ ಸಾಮ್ರಾಜ್ಯದೊಡನೆ ಶ್ರೀಮನ್ ಮಹಾರಾಜರವರಿಂದ ಮಾಡಲ್ಪಡುವ ಕೌಲುಗಳಿಗೆ, ಒಪ್ಪಂದಗಳಿಗೆ ಅಥವಾ ಒಡಂಬಡಿಕೆಗಳಿಗೆ ಅನುಸಾರವಾದ ವಿಷಯಗಳು,

(d) ಅಪರಾಧಿಗಳ ಎಕಸ್ಟ್ರಾಡಿಷ್ರ್ ಅಥವಾ ಒಪ್ಪಿಸ್ಯೋಣ,

(e) ಯೂರೋಪಿಯರ್ ತಿರುಕರು,

(f) ಯೂರೋಪಿಯರ್ ಬ್ರಿಟಿಷ ಪ್ರಜೆಗಳು,

(g) ತಪಾಲು ಆಪೀಸು, ತಂತಿ ತಪಾಲುಗಳು ಮತ್ತು ರೇಲ್ವೆಗಳು,

(h) ಮೈಸೂರು ಸೈನ್ಯಗಳು, ಅಥವಾ,

(i) ಸರ್ಕಾರದ ಆಲೋಚನೆಯು ಬಗ್ಗೆ ಶ್ರೀಮರ್ ಮಹಾರಾಜರವರಿಂದ ಆಗಾಗ್ಗೆ ವಿಶೇಷವಾಗಿ ಉಳಿಸಲ್ಪಡಬಹುದಾದ ಇತ್ತರ ವಿಷಯುಗಳು.

ಶ್ರೀಮರ್ ಮಹಾರಾಜರವರ ಅನುಮತಿಯನ್ನು ಹೊಂದುವ ವರೆಗೆ ಯಾವ ನ್ಯಾಯವೂ (ಕಾನೂನು) ಅಥವಾ ರೆಗ್ಯುಲೇಷನೂ ಪ್ರಬಲ್ಲವಾಗಿರತಕ್ಕದ್ದಲ್ಲ.

13. ಸಭೆಯಿಂದ ಯಾವುದಾದರೂ ನ್ಯಾಯವು (ಕಾನೂನು) ಅಥವಾ ರೆಗ್ಯುಲೇಷನ್ನು ಮಾಡಲ್ಪಟ್ಟಾಗ, ಅದು ಅನುಮತಿಯು ಬಗ್ಗೆ ದೀವಾನರ ಮೂಲಕ ಶ್ರೀಮರ್ ಮಹಾರಾಜರವರಿಗೆ ಕಳುಹಿಸಲ್ಪಡತಕ್ಕದ್ದು. ಅಂಥಾ ನ್ಯಾಯ (ಕಾನೂನು) ಅಥವಾ ರೆಗ್ಯುಲೇಷನು ಶ್ರೀಮರ್ ಮಹಾರಾಜರವರ ಅನುಮತಿಯನ್ನು ಹೊಂದುವ ವರೆಗೆ ಪ್ರಾಬಲ್ಯವುಳ್ಳದ್ದಾಗಿರತಕ್ಕದ್ದಲ್ಲ.

ಸಭೆಯ ಅಧಿಕಾರಕ್ಕೆ ಹೊರಗಿನ ವಿಷಯಗಳಲ್ಲಿ ರೆಗ್ಯುಲೇಷರ್‌ಗಳು.

14. ಈ ರೆಗ್ಯುಲೇಷನಿನ 12ನೆ ಪ್ರಕರಣದ ನಿಯಮದಲ್ಲಿ ಕಂಡಿರುವ ಸಂದರ್ಭಗಳಲ್ಲಿ ಸರ್ಕಾರದವರು ಬೇಕಾಗಿರುವ ಯಾವುದ್ದಾದರೂ ರೆಗ್ಯುಲೇಷನ್ನನ್ನು ಮಾಡಬಹುದು, ಮತ್ತು ಅಂಥಾ ಪ್ರತಿ ರೆಗ್ಯುಲೇಷನೂ ಶ್ರೀಮರ್ ಮಹಾರಾಜರವರಿಂದ ಅನುಮತಿಸಲ್ಪಟ್ಟರೆ, ನ್ಯಾಯದ ಬಲವನ್ನು ಉಂಟಾಗಿರತಕ್ಕದ್ದು.

ಅವಸರದ ಯಾ ಜರೂರಿನ ರೆಗ್ಯುಲೇಷರ್‌ಗಳು.

15. ಈ ರೆಗ್ಯುಲೇಷನಿನಲ್ಲಿ ಏನು ಅಡಗಿದ್ದಾಗ್ಯೂ, ಯಾವುವುಗಳಲ್ಲಿ ನ್ಯಾಯವು (ಕಾನೂನು) ಅವಸರವಾಗಿ ಬೇಕಾಗಿದೆಯೊ ಅಂಥಾ ಈ ರೆಗ್ಯುಲೇಷನಿನ 12ನೆ ಪ್ರಕರಣದ ನಿಯಮಕ್ಕೆ ಒಳಪಡದ ಸಂದರ್ಭಗಳಲ್ಲಿ, ಯಾವ ರೆಗ್ಯುಲೇಷನನ್ನಾದರೂ ಮಾಡುವುದು ಸರ್ಕಾರಕ್ಕೆ ನ್ಯಾಯವಾಗಿರತಕ್ಕದ್ದು, ಮತ್ತು ಅಂಥಾ ಪ್ರತಿ ರೆಗ್ಯುಲೇಷನೂ, ಶ್ರೀಮರ್ ಮಹಾರಾಜರವರಿಂದ ಅನುಮತಿಸಲ್ಪಟ್ಟರೆ, ಸರ್ಕಾರಿ ಗೆಜೆಟ್ಟಿನಲ್ಲಿ ಅದು ಪ್ರಕಟವಾದ ಆರು ತಿಂಗಳಕಾಲ ಪರ್ಯಂತ, ಸಭೆಯ ಮೂಲಕ ನಿರ್ಣಯಿಸಲ್ಪಟ್ಟ ಒಂದು ರೆಗ್ಯುಲೇಷನು ಯಾವ ಬಲವನ್ನು ಉಂಟಾಗಿರುವುದೋ ಅದೇ ಬಲವನ್ನು ಉಂಟಾಗಿರತಕ್ಕದ್ದು.

ಸರ್ಕಾರದ ಉದ್ಯೋಗಸ್ಥರಲ್ಲದ ಸಭಿಕರ ಸಂಖ್ಯೆಯು ಅಪೂರ್ಣತೆಯು ಕಾರಣದಿಂದ ಯಾವ ರೆಗ್ಯುಲೇಷನೂ ನಿರ್ಬಲವಾಗಿರತಕ್ಕದ್ದಲ್ಲ.

16. ಈ ರೆಗ್ಯುಲೇಷನಿನ ಅಧಿಕಾರದ ಮೇಲೆ ನ್ಯಾಯವಿಧಾಯಕ ಸಭೆಯಿಂದ ನಿರ್ಣಯಿಸಲ್ಪಟ್ಟ ಯಾವ ನ್ಯಾಯ (ಕಾನೂನು) ಅಥವಾ ರೆಗ್ಯುಲೇಷನೂ ಅದನ್ನು ಸಭೆಯಲ್ಲಿ ಪ್ರಸ್ತಾಪಿಸುವ ಅಥವಾ ಅದು ಸಭೆಯಿಂದ ನಿರ್ಣಯಿಸಲ್ಪಡುವ ತಾರೀಖಿನಲ್ಲಿ, ಈ ಮೂಲಕವಾಗಿ ನಿಯಮ ಮಾಡಲ್ಪಟ್ಟಿರುವ ಸರ್ಕಾರದ ಉದ್ಯೋಗಸ್ಥರಲ್ಲದ ಸಭಿಕರ ಪರಿಮಾಣವು ಪೂರ್ತಿಯಾಗಿ ಇರಲಿಲ್ಲವೆಂಬ ಕಾರಣದಿಂದ ನಿರ್ಬಲವಾಗಿರುವಂತೆ ಭಾವಿಸಲ್ಪಡತಕ್ಕದ್ದಲ್ಲ.

ವಿ. ಪಿ. ಮಾಧವರಾವ್,
ಮೈಸೂರು ದೀವಾನ್.

ಪಟ್ಟಿ.

ಮೈಸೂರು ನ್ಯಾಯವಿಧಾಯಕ ಸಭೆಯಲ್ಲಿ ಕೆಲಸ ನಡೆಯುವುದಕ್ಕೆ ನಿಬಂಧನೆಗಳು.

1. ಅರ್ಥವಿವರಣೆ.

1. ಈ ನಿಬಂಧನೆಗಳಲ್ಲಿ—

"ಬಿಲ್" ಎಂದರೆ ಶ್ರೀಮನ್ ಮಹಾರಾಜರವರ ಅನುಮತಿಯನ್ನು ಹೊಂದುವುದಕ್ಕೆ ಮುಂಚೆ ಯಾವ ಸ್ಥಿತಿಯಲ್ಲಾದರೂ ಇರುವ ಉದ್ದೇಶಿಸಲ್ಪಟ್ಟ ವ್ಯವಹಾರವಿಧಿ (ಕಾನೂನು) ಎಂದು ಅರ್ಥ.

"ಸರಿಯಾದ ದಿನಗಳ" ಲೆಕ್ಕಗಳಲ್ಲಿ ಭಾನುವಾರಗಳೂ ರಜಾದಿನಗಳೂ ಸೇರಿಸಲ್ಪಟ್ಟಿಲ್ಲ.

2. ಸಭೆಯನ್ನು ಕರೆಸೋಣ ಮತ್ತು ಮುಂದಕ್ಕೆ ಹಾಕೋಣ.

2. ಕೂಟಗಳ ಕಾಲಗಳು ಮತ್ತು ಸ್ಥಳಗಳು ದೀವಾನರಿಂದ ಗೊತ್ತುಮಾಡಲ್ಪಡತಕ್ಕದ್ದು, ಮತ್ತು ಸೆಕ್ರೆಟರಿಯು ಸರ್ಕಾರಿ ಗೆಜೆಟ್ಟಿನಲ್ಲಿ ಅವುಗಳನ್ನು ಪ್ರಕಟಿಸಿ ಕಾಗದದ ಮೂಲಕ ಪ್ರತಿ ಸಭಿಕನಿಗೂ ತಿಳಿಸತಕ್ಕದ್ದು.

3. ಒಂದು ಕೂಟದ ಮುಂದೆ ಇರುವ ಕೆಲಸವು ಮುಗಿದಾಗ, ಅಧ್ಯಕ್ಷರು ಕೂಟವು ಮುಗಿಯಿತೆಂದು ತಿಳಿಸತಕ್ಕದ್ದು. ಅಧ್ಯಕ್ಷರು, ಯಾವ ಚರ್ಚೆಯನ್ನೂ ನಡೆಸದೆ ಅಥವಾ ಯಾವ ಸಮ್ಮತಿಯನ್ನೂ ಕೇಳದೆ, ಯಾವ ಕೂಟವನ್ನಾದರೂ ಅಥವಾ ಕೆಲಸವನ್ನಾದರೂ, ಮುಂದೆ ಯಾವುದಾದರೂ ದಿನಕ್ಕೆ ಅಥವಾ ಅದೇ ದಿನದ ಯಾವುದಾದರೂ ಭಾಗಕ್ಕೆ ಹಾಕಬಹುದು. ಸಭೆಯೂ ಕೂಡ, ವಿಜ್ಞಾಪನೆ ಮಾಡಲ್ಪಟ್ಟು ಅಂಗೀಕರಿಸಲ್ಪಟ್ಟಾಗ, ಯಾವ ಕೂಟ ಅಥವಾ ಕೆಲಸವನ್ನಾದರೂ ಮುಂದಕ್ಕೆ ಹಾಕಬಹುದು.

4. ಯಾವ ಕೂಟವನ್ನಾದರೂ ಅಥವಾ ಕೆಲಸವನ್ನಾದರೂ ಮುಂದಕ್ಕೆ ಹಾಕಬೇಕೆಂದು ಅಥವಾ ಕೆಲಸದ ಪಟ್ಟಿಯಲ್ಲಿರುವ ಕ್ರಮವಾದ ಮುಂದಿನ ಕೆಲಸಕ್ಕೆ ಸಭೆಯು ಹೋಗಬೇಕೆಂದು ಒಂದು ವಿಜ್ಞಾಪನೆಯನ್ನು ಯಾವ ಕಾಲದಲ್ಲಿಯಾದರೂ ಮತ್ತು ಅದನ್ನು ಒಂದು ಪ್ರತ್ಯೇಕವಾದ ಪ್ರಮೇಯವಾಗಿ ಮುಂದಾಗಿ ತಿಳಿಸದೆ, ಅದರ ಒಂದು ಪ್ರಸಂಗಕ್ಕೆ ಅಡ್ಡಿ ಮಾಡದಹಾಗೆ ಮಾಡಬಹುದು. ಆ ವಿಜ್ಞಾಪನೆಯು ಅಂಗೀಕರಿಸಲ್ಪಟ್ಟರೆ, (ಸಭೆಯು ಸಂದರ್ಭಾನುಸಾರವಾಗಿ ಕೂಟವನ್ನು ಅಥವಾ ಕೆಲಸವನ್ನು ಮುಂದಕ್ಕೆ ಹಾಕತಕ್ಕದ್ದು, ಅಥವಾ ಆಗ ಚರ್ಚೆಯಲ್ಲಿರುವ ಕೆಲಸದ ಪರ್ಯಾಲೋಚನೆಯನ್ನು ಅಲ್ಲಿಗೆ ನಿಲ್ಲಿಸತಕ್ಕದ್ದು.

5. ಹಿಂದಿನ ಕಡೇ ನಿಬಂಧನೆಯಲ್ಲಿ ಕಂಡ ತರದ ವಿಜ್ಞಾಪನೆಯನ್ನು ಆಗ ಸಭೆಯ ಮುಂದೆ ಇರುವ ಯಾವುದಾದರೂ ಇತರ ವಿಜ್ಞಾಪನೆಗೆ ಮುಂಚೆ ತೆಗೆದುಕೊಳ್ಳತಕ್ಕದ್ದು, ಮತ್ತು, ಅಂಥಾ ಯಾವುದಾದರೂ ವಿಜ್ಞಾಪನೆಯು ತಳ್ಳಿಬಿಡಲ್ಪಟ್ಟಾಗ, ಅಧ್ಯಕ್ಷರು ನ್ಯಾಯವಾದ ಕಾಲವೆಂದು ಎಣಿಸಬಹುದಾದಷ್ಟು ಕಾಲವು ಕಳೆದುಹೋಗುವವರೆಗೆ ಅದೇ ರೀತಿಯಾದ ಯಾವ ವಿಜ್ಞಾಪನೆಯೂ (ಯಾರಿಂದಲೂ) ಅಥವಾ ಯಾರಿಂದ ಹಿಂದಿನ ವಿಜ್ಞಾಪನೆಯು ಮಾಡಲ್ಪಟ್ಟಿತೊ ಆ ಸಭಿಕರಿಂದಲೂ ಮಾಡಲ್ಪಡತಕ್ಕದ್ದಲ್ಲ.

6. ಒಂದು ಕೂಟವನ್ನು ಅಥವಾ ಮೇಲ್ಕಂಡಂತೆ ಮುಂದಕ್ಕೆ ಇಡಲ್ಪಟ್ಟ ಕೂಟವನ್ನು ನಡೆಸುವುದಕ್ಕೆ ನೇಮಿಸಿದ ಕಾಲದಲ್ಲಿ, ಅಥವಾ ಅಂಥಾ ಕೂಟದ ಕೆಲಸವು ಪ್ರಾರಂಭವಾದ ಮೇಲೆ ಯಾವಾಗಲಾದರೂ ಈ ರೆಗ್ಯುಲೇಷನಿನ 9ನೆ ಪ್ರಕರಣದಿಂದ ವಿಧಿಸಲ್ಪಟ್ಟಂತೆ ಸಾಕಾದಷ್ಟು ಮಂದಿ ಸಭಿಕರು (ಎಂದರೆ, ದೀವಾನರೂ, ಅಥವಾ ಕೌನ್ಸಿಲರುಗಳ ಪೈಕಿ ಯಾರಾದರೂ ಒಬ್ಬರು ಮತ್ತು ಸಭೆಯ ಸಭಿಕರ ಒಟ್ಟು ಸಂಖ್ಯೆಯಲ್ಲಿ ಅರ್ಧದಷ್ಟು ಮಂದಿಯು) ಬಂದಿಲ್ಲದೆ ಇದ್ದರೆ, ಬಂದಿರುವ ಸಭಿಕರು, ಯಾವ ವಿಧವಾದ ಕೆಲಸಕ್ಕೂ ಹೋಗದೆ, ದೀವಾನರಿಂದ ತಿರಿಗಿ ಕರೆಸಲ್ಪಡುವವರೆಗೆ ನಿಲ್ಲತಕ್ಕದ್ದು, ಮತ್ತು ಆ ಸಂಗತಿಯು ಸಭೆಯ ದಿನಚರಿಯಲ್ಲಿ ಸೆಕ್ರೆಟರಿಯಿಂದ ಬರೆಯಲ್ಪಡತಕ್ಕದ್ದು.

3. ಕೆಲಸದ ಕ್ರಮ.

7. ಸೆಕ್ರೆಟರಿಯು ಪ್ರತಿ ಕೂಟಕ್ಕೂ ಗೊತ್ತುಮಾಡಿರುವ ತಾರೀಖಿಗೆ ಕನಿಷ್ಠಪಕ್ಷ ಮೂರು ಸರಿಯಾದ ದಿವಸಗಳಿಗೆ ಮುಂಚೆ ಪ್ರತಿ ಸಭಿಕನಿಗೂ ಸೇರುವಂತೆ ಅಂಥಾ ಕೂಟದಲ್ಲಿ ನಡೆಸತಕ್ಕ ಕೆಲಸದ ವಿವರವನ್ನು ಕಳುಹಿಸತಕ್ಕದ್ದು.

8. 7ನೆ ನಿಬಂಧನೆಯ ಮೇರೆಗೆ ತಯಾರುಮಾಡಲ್ಪಟ್ಟ ಕೆಲಸದ ವಿವರಣೆಯಲ್ಲಿ ದಾಖಲಾಗದ ಯಾವ ಕೆಲಸವೂ ಯಾವ ಕೂಟದಲ್ಲಿಯೂ, ಅಂಥಾ ಕೂಟಕ್ಕೆ ದೀವಾನರ ಅಪ್ಪಣೆಯು ಮುಂದಾಗಿ ಪಡೆಯಲ್ಪಟ್ಟಿದ್ದ ಹೊರತು, ನಡೆಸಲ್ಪಡಕೂಡದು.

9. ಅಧ್ಯಕ್ಷರಿಗೆ ಕೆಲಸವು ನಡೆಸಲ್ಪಡತಕ್ಕ ಕ್ರಮವನ್ನು ಗೊತ್ತುಮಾಡುವ ಅಧಿಕಾರವಿರತಕ್ಕದ್ದು, ಆದರೆ, ಸಾಧಾರಣವಾಗಿ, ಕೆಲಸದ ಕ್ರಮವು 10ನೆ ನಿಬಂಧನೆಯಲ್ಲಿ ವಿವರಿಸಿರುವಂತೆ ಇರತಕ್ಕದ್ದು.

10. ಅಧ್ಯಕ್ಷರು ಆಸನದಲ್ಲಿ ಕೂತುಕೊಂಡ ತರುವಾಯ:—

(1) ಸೆಕ್ರೆಟರಿಯು, ಈ ರೆಗ್ಯುಲೇಷನಿನ 13ನೆ ಪ್ರಕರಣದ ಮೇರೆ, ಶ್ರೀಮನ್ ಮಹಾರಾಜರವರ ಅನುಮತಿಯನ್ನು ಪಡೆದಿರುವ ರೆಗ್ಯುಲೇಷನ್‌ಗಳನ್ನೂ, ಕಡೇ ಸಲದ ಕೂಟವು ಸೇರಿದ ಈಚೆಗೆ ಸಮ್ಮತಿಸಲ್ಪಡದ ಬಿಲ್ಲುಗಳನ್ನೂ ಸಭೆಗೆ ತಿಳಿಸತಕ್ಕದ್ದು;

(2) ಸೆಕ್ರೆಟರಿಯು ಕಡೇ ಸಲದ ಕೂಟವು ಸೇರಿದ ಈಚೆಗೆ ತನ್ನ ಬಳಿಗೆ ಬಂದಿರುವ ಸಭೆಯ ಕೆಲಸಕ್ಕೆ ಸಂಬಂಧಪಟ್ಟ ಅರ್ಜಿಗಳನ್ನೂ ಇತರ ಕಾಗದ ಪತ್ರಗಳನ್ನೂ ಸಭೆಗೆ ತಿಳಿಸತಕ್ಕದ್ದು, ಮತ್ತು ಅವಶ್ಯವಿದ್ದರೆ, ಅಂಥಾ ಅರ್ಜಿಗಳನ್ನೂ ಕಾಗದ ಪತ್ರಗಳನ್ನೂ ಸಭೆಗೆ ಓದತಕ್ಕದ್ದು;

(3) ಬಿಲ್ಲುಗಳನ್ನು ಪ್ರಸ್ತಾಪಿಸಲು ಅಪ್ಪಣೆಯನ್ನು ಹೊಂದಲಪೇಕ್ಷಿಸುವ ಸಭಿಕರು ಅದಕ್ಕೆ ದೀವಾನರ ಬರಹಮೂಲಕವಾದ ಅಪ್ಪಣೆಯನ್ನು ಪಡೆದು ಅಂಥಾ ಅಪ್ಪಣೆಯು ಪಡೆಯಲ್ಪಟ್ಟಿತೆಂದು ವಿಜ್ಞಾಪಿಸತಕ್ಕದ್ದು;

(4) ಸಭೆಯು ಆಗ ಕಡೇ ಕೂಟದಲ್ಲಿ ಮುಗಿಸದೆ ಬಿಡಲ್ಪಟ್ಟಿರುವ ಕೆಲಸ ಯಾವುದಾದರೂ ಇದ್ದರೆ, ಅದನ್ನು ವ್ಯವಸ್ಥೆ ಮಾಡಲು ಪ್ರವರ್ತಿಸತಕ್ಕದ್ದು, ಮತ್ತು ಇದನ್ನು ಮಾಡಿ,

(5) ಸಭೆಯು ಆ ದಿನದ ಉಳಿದ ಕೆಲಸವನ್ನು ವ್ಯವಸ್ಥೆ ಮಾಡಲು ಪ್ರವರ್ತಿಸತಕ್ಕದ್ದು.

4. ಚರ್ಚೆಗಳನ್ನು ಕ್ರಮಪಡಿಸೋಣ.

11. ಅಧ್ಯಕ್ಷರು ಸಭೆಯ ಕ್ರಮವನ್ನು ಕಾಪಾಡತಕ್ಕದ್ದು ಮತ್ತು ಸಭಿಕರಿಂದ ತಮ್ಮ ನಿರ್ಣಯಕ್ಕೆ ಕಳುಹಿಸಲ್ಪಟ್ಟ ಕ್ರಮದ ಎಲ್ಲಾ ಅಂಶಗಳನ್ನೂ ಮತ್ತು ಈ ನಿಬಂಧನೆಗಳ ಅರ್ಥ ವಿವರಣೆಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ನಿರ್ಣಯಿಸತಕ್ಕದ್ದು. ಕ್ರಮದ ಯಾವುದಾದರೂ ಅಂಶವನ್ನು ಕುರಿತು ಯಾ ಚರ್ಚೆಯೂ ನಡೆಕೂಡದು ಮತ್ತು ಅಧ್ಯಕ್ಷರ ನಿರ್ಣಯವು ಕಡೆಯದಾಗಿರತಕ್ಕದ್ದು.

12. ಯಾವ ಸಭಿಕನಾದರೂ ಕ್ರಮದ ಉಲ್ಲಂಘನೆಯನ್ನು ಅಧ್ಯಕ್ಷರ ಅವಧಾನಕ್ಕೆ ತರಬಹುದು; ಮತ್ತು ಆತನು ಹಾಗೆ ಮಾಡುತ್ತಿರುವಾಗ ಇತರ ಎಲ್ಲಾ ಸಭಿಕರೂ ನಿಶ್ಶಬ್ದವಾಗಿರಬೇಕು.

13. ಸಭೆಯ ಮುಂದೆ ಆಲೋಚನೆಗೆ ಬರುವ ವಿಷಯಗಳನ್ನು ಚರ್ಚಿಸುವುದರಲ್ಲಿ, ಸಭಿಕನು ತನ್ನ ಸ್ಥಳದಿಂದ ಮಾತಾಡಬೇಕು ಮತ್ತು ಅಧ್ಯಕ್ಷರನ್ನು ಸಂಬೋಧಿಸತಕ್ಕದ್ದು.

14. ಸಭಿಕರು ತಮ್ಮ ಪ್ರಸಂಗಗಳನ್ನು ಓದಬಹುದು ಮತ್ತು ಚರ್ಚೆಯಲ್ಲಿರುವ ವಿಷಯಕ್ಕೆ ಸಂಬಂಧಪಟ್ಟ ಪುಸ್ತಕಗಳಿಂದ ಅಥವಾ ಕಾಗದಗಳಿಂದ ವಚನಗಳನ್ನೂ ಕೂಡ ಪ್ರಸಂಗಗಳ ಭಾಗವಾಗಿ ಓದಬಹುದು.

15. ತತ್ಕಾಲದಲ್ಲಿ ಕ್ರಮವಾಗಿ ಸಭೆಯ ಮುಂದೆ ಇರುವ ಕೆಲಸವನ್ನು ಕುರಿತು ವಿನಾ, ಅಥವಾ ಅಧ್ಯಕ್ಷರ ವಿಶೇಷ ಅಪ್ಪಣೆಯನ್ನು ಪಡೆದು, ಹಿಂದಿನ ಚರ್ಚೆಯಲ್ಲಿ ತಾನು ಹೇಳಿದ್ದುದಕ್ಕೆ ವಿವರಣೆಯಾಗಿ ವಿನಾ, ಯಾವ ಸಭಿಕನೂ ಮಾತನಾಡಕೂಡದು.

16. ತಿದ್ದುಪಾಟುಗಳನ್ನು ಚರ್ಚಿಸುವುದರಲ್ಲಿ ವಿನಾ, ಒಂದು ಬಿಲ್ಲಿನ ಬೇರೆ ಬೇರೆ ವಾಕ್ಯಗಳನ್ನು ಸಭೆಯು ನಿಶ್ಚಯಿಸುತ್ತಿರುವಾಗ ವಿಜ್ಞಾಪಕನಲ್ಲದ ಯಾವ ಸಭಿಕನೂ ಒಂದು ವಿಷಯವನ್ನು ಕುರಿತು ಒಂದಾವರ್ತಿಗಿಂತ ಹೆಚ್ಚಾಗಿ ಮಾತನಾಡಕೂಡದು; ಆದರೆ, ವಿಜ್ಞಾಪಕನು ತನ್ನ ವಿಜ್ಞಾಪನೆಯನ್ನು ಮಾಡುವಾಗ ಚರ್ಚೆಯಲ್ಲಿರುವ ವಿಷಯವನ್ನು ಕುರಿತು ಮಾತನಾಡಿದ್ದರೆ ಅವನು ಒಂದು ಪ್ರತ್ಯುತ್ತರವನ್ನು ಮಾಡಲು ಅಪ್ಪಣೆ ಕೊಡಲ್ಪಡತಕ್ಕದ್ದು.

ಆದರೆ ಸಭೆಯ ಮುಂದೆ ಇರುವ ವಿಷಯವು ಒಂದು ಬಿಲ್ಲಿನ ತಿದ್ದುಪಾಟಾಗಿದ್ದರೆ, ಆ ಬಿಲ್ಲನ್ನು ಕೈಕೊಂಡಿರುವ ಸಭಿಕನು ತಿದ್ದುಪಾಟಿನ ವಿಜ್ಞಾಪಕನ ಮತ್ತು ಅನುಮೋದಿಯ ತರುವಾಯ ಮಾತನಾಡಲು ಹಕ್ಕುಳ್ಳವನಾಗಿರತಕ್ಕದ್ದು.

17. ಒಂದು ವಿಜ್ಞಾಪನೆಯನ್ನು ಕುರಿತು ಮಾತನಾಡಿದ ಸಭಿಕನು ಆ ವಿಜ್ಞಾಪನೆಯ ತಿದ್ದುಪಾಟನ್ನು ಕುರಿತು ತಿರಿಗಿ ಮಾತನಾಡಬಹುದು ಒಬ್ಬ ಸಭಿಕನು ತಾನು ಹಿಂದೆ ಹೇಳಿದ ವಿಷಯವು ತಪ್ಪಾಗಿ ತಿಳಿದುಕೊಳ್ಳಲ್ಪಟ್ಟಿದ್ದರೆ ಅದನ್ನು ವಿವರಿಸುವುದಕ್ಕೋಸ್ಕರವೂ ಕೂಡ ತಿರಿಗಿ ಮಾತನಾಡಬಹುದು

18. ವಿವರಿಸುವುದಕ್ಕೋಸ್ಕರ ಅಥವಾ ಯಾವುದಾದರೂ ಇತರ ಕಾರಣಕ್ಕೋಸ್ಕರ, ಒಬ್ಬ ಸಭಿಕನು ಸಭೆಯ ಮುಂದೆ ಇರುವ ಕೆಲಸಕ್ಕೆ ಸಂಬಂಧಪಟ್ಟ ಮತ್ತೊಬ್ಬ ಸಭಿಕನನ್ನು ಒಂದು ಪ್ರಶ್ನೆ ಕೇಳಬೇಕಾಗಿದ್ದರೆ, ಆತನು ಅಧ್ಯಕ್ಷರ ಮೂಲಕವಾಗಿ ಆ ಪ್ರಶ್ನೆಯನ್ನು ಕೇಳತಕ್ಕದ್ದು.

19. ನಿರ್ಣಯದ ಬಗ್ಗೆ ಸಭೆಯ ಮುಂದೆ ಬರುವ ಪ್ರತಿ ವಿಷಯವೂ (1) ವಿಜ್ಞಾಪನೆಯು ಮಾಡಲ್ಪಟ್ಟು, ಅನುಮೋದಿಸಲ್ಪಟ್ಟು ಮತ್ತು (2) ಅಧ್ಯಕ್ಷರಿಂದ ಪ್ರಶ್ನೆಯು ಹಾಕಲ್ಪಟ್ಟ ತರುವಾಯ ಬಹು (ಮಹಾಪಕ್ಷದವರ) ಸಮ್ಮತಿಗಳಿಗೆ ಅನುಸಾರವಾಗಿ ನಿರ್ಣಯಿಸಲ್ಪಡತಕ್ಕದ್ದು.

20. ಅಧ್ಯಕ್ಷರಿಂದ ಪ್ರಶ್ನೆಯು ಹಾಕಲ್ಪಟ್ಟ ತರುವಾಯ ಯಾವ ಚರ್ಚೆಯೂ ನಡೆಯತಕ್ಕದ್ದಲ್ಲ.

21. ಸಭೆಯ ಮುಂದೆ ಇರುವ ಕೆಲಸಕ್ಕೆ ಸಂಬಂಧಪಟ್ಟ ಯಾವ ಕಾಗದಗಳನ್ನಾದರೂ ಅಥವಾ ವರ್ತಮಾನವನ್ನಾದರೂ ಯಾವ ಸಭಿಕನಾದರೂ ಕೇಳಬಹುದು ಮತ್ತು ಅಧ್ಯಕ್ಷರು ಅಂಥಾ ಕಾಗದಗಳನ್ನು ಅಥವಾ ವರ್ತಮಾನವನ್ನು ಕೊಡಬಹುದೆ ಎಂಬುದನ್ನು ನಿಶ್ಚಯಿಸತಕ್ಕದ್ದು.

ಅಧ್ಯಕ್ಷರು ದಿವಾನರಾಗಿಲ್ಲದೆ; ಕೇಳಲ್ಪಟ್ಟ ಕಾಗದಗಳು ಅಥವಾ ವರ್ತಮಾನವು ಸಂಸ್ಥಾನದ ನ್ಯಾಯವಿಧಾಯಕ ಇಲಾಖೆಯಲ್ಲದ ಯಾವುದಾದರೂ ಇಲಾಖೆಗೆ ಸೇರಿ ಇದ್ದರೆ, ದಿವಾನರು ಅಧ್ಯಕ್ಷರ ನಿರ್ಣಯವನ್ನು ತಳ್ಳಿಪಡಿಮಾಡಬಹುದು.

5. ಸಾಮಾನ್ಯವಾಗಿ ವಿಜ್ಞಾಪನೆಗಳು.

22. ಯಾವುದಾದರೂ ಕೂಟದಲ್ಲಿ ಯಾವುದಾದರೂ ವಿಜ್ಞಾಪನೆಯನ್ನು ಮಾಡಲು ಅಪೇಕ್ಷಿಸುವ ಸಭಿಕರು ಅದಕ್ಕೆ ಹಿಂದಿನ ಕೂಟದಲ್ಲಿ ತಮ್ಮ ಉದ್ದೇಶವನ್ನು ಕುರಿತು ವರ್ತಮಾನ ಕೊಡತಕ್ಕದ್ದು ಅಥವಾ ಯಾವುದರಲ್ಲಿ ಅವರು ವಿಜ್ಞಾಪನೆಯನ್ನು ಮಾಡಲು ಉದ್ದೇಶಿಸುತ್ತಾರೆಯೊ, ಅಂಥಾ ಕೂಟಕ್ಕೆ ಗೊತ್ತು ಮಾಡಿರುವ ದಿನಕ್ಕೆ ಕಡೇಪಕ್ಷ ಆರು ಸರಿಯಾದ ದಿನಗಳಿಗೆ ಮುಂಚೆ ಸೆಕ್ರಿಟರಿಗೆ ತಲಪುವಂತೆ ಬರಹದ ಮೂಲಕವಾಗಿ ಅಂಥಾ ವರ್ತಮಾನವನ್ನು ಕೊಡಬೇಕು. ಆದರೆ ಅಧ್ಯಕ್ಷರು, ತಮಗೆ ಯುಕ್ತವಾಗಿ ತೋರಿದರೆ, ಯಾವುದನ್ನು ಕುರಿತು ಅಂಥಾ ವರ್ತಮಾನವು ಕೊಡಲ್ಪಟ್ಟಿಲ್ಲವೊ ಅಂಥಾ ವಿಜ್ಞಾಪನೆಯನ್ನು ಮಾಡಲು ಅಪ್ಪಣೆ ಕೊಡಬಹುದು.

23. ಹಿಂದಿನ ನಿಬಂಧನೆಯ ಮೇರೆ ಯಾವುವುಗಳನ್ನು ಕುರಿತು ವರ್ತಮಾನ ಕೊಡಲ್ಪಟ್ಟಿದೆಯೋ ಅಂಥಾ ಎಲ್ಲಾ ವಿಜ್ಞಾಪನೆಗಳೂ 7ನೆ ನಿಬಂಧನೆಯ ಮೇರೆ ಸೆಕ್ರೆಟೆರಿಯಿಂದ ತಯಾರುಮಾಡಲ್ಪಟ್ಟ ಕೆಲಸದ ವಿವರಣೆಯಲ್ಲಿ ಬರೆಯಲ್ಪಡತಕ್ಕವು.

24. ಅನುಮೋದಿಸಲ್ಪಟ್ಟ ಹೊರತು ಯಾವ ವಿಜ್ಞಾಪನೆಯೂ ಸಭೆಯಿಂದ ಆಲೋಚನೆಗೆ ತೆಗೆದುಕೊಳ್ಳಲ್ಪಡತಕ್ಕದ್ದಿಲ್ಲ.

25. ಯಾವುದನ್ನು ಕುರಿತು ತಕ್ಕ ವರ್ತಮಾನವು ಕೊಡಲ್ಪಟ್ಟಿದೆಯೋ ಅಂಥಾ ವಿಜ್ಞಾಪನೆಯು, ಯಾರಿಂದ ವರ್ತಮಾನವು ಕೊಡಲ್ಪಟ್ಟಿತೋ ಆ ಸಭಿಕನು ಇಲ್ಲದೆ ಇರುವಾಗ ಮತ್ತು ಅವನ ಕೋರಿಕೆಯ ಮೇರೆ ಯಾವನಾದರೂ ಇತರ ಸಭಿಕನಿಂದ ಮಾಡಲ್ಪಡಬಹುದು; ಆದರೆ, ಹಾಗೆ ಮಾಡಲ್ಪಡದೆ ಇದ್ದರೆ, ಅಥವಾ ಒಬ್ಬ ಸಭಿಕನು ತನ್ನ ಹೆಸರಿನಲ್ಲಿ ಇರುವ ಒಂದು ವಿಜ್ಞಾಪನೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಾಗಿ ತನ್ನ ಉದ್ದೇಶವನ್ನು ತಿಳಿಸಿದರೆ, ವಿಜ್ಞಾಪನೆಯು ಯಾವನಾದರೂ ಇತರ ಸಭಿಕನಿಂದ ಮಾಡಲ್ಪಡಬಹುದು, ಮತ್ತು, ಹಾಗೆ ಮಾಡಲ್ಪಡದೆ ಇದ್ದರೆ, ಸಭೆಯು ಅನ್ಯಥಾ ಅಪ್ಪಣೆ ಮಾಡಿದ ಹೊರತು ಅದರ ಮುಂದೆ ಇಡಲ್ಪಡಕೂಡದು.

26. ಯಾವುದಾದರೂ ವಿಜ್ಞಾಪನೆಯ ತಿದ್ದುಪಾಟುಗಳು ವಿಜ್ಞಾಪಿಸಲ್ಪಟ್ಟಿತೆ; ಅಧ್ಯಕ್ಷರು, ಅದನ್ನು ಕುರಿತು ಸಭೆಯ ಅಭಿಪ್ರಾಯವನ್ನು ಕೇಳುವಾಗ, ತಮಗೆ ಯುಕ್ತವಾಗಿ ತೋರಿದರೆ, ಮೊದಲಿನ ವಿಜ್ಞಾಪನೆಯನ್ನಾದರೂ ಅಥವಾ ಅದರ ಉದ್ದೇಶಿಸಲ್ಪಟ್ಟ ತಿದ್ದುಪಾಟುಗಳಲ್ಲಿ ಯಾವುದನ್ನಾದರೂ, ಸಮ್ಮತಿಗೆ ಮೊದಲು ಹಾಕತಕ್ಕದ್ದು (ಅಂದರೆ ಅವನ್ನು ಕುರಿತು ಸಭಿಕರ ಸಮ್ಮತಿಗಳನ್ನು ಕೇಳತಕ್ಕದ್ದು.)

27. ಒಂದು ವಿಜ್ಞಾಪನೆಯ ಬಗ್ಗೆ ಮಾತ್ರವೇ ತಿದ್ದುಪಾಟನ್ನು ಆ ವಿಜ್ಞಾಪನೆಯನ್ನು ಕುರಿತ ಚರ್ಚೆಯಲ್ಲಿ ಯಾವಾಗಲಾದರೂ ಮುಂದಾಗಿ ವರ್ತಮಾನ ಕೊಡದೆ ವಿಜ್ಞಾಪಿಸಬಹುದು; ಆದರೆ, ಒಂದು ವಿಜ್ಞಾಪನೆಯ ನಿಜವಾಗಿ ನಿಷೇಧಾರ್ಥಕವಾದ ಯಾವ ತಿದ್ದುಪಾಟೂ ಸಭೆಯಿಂದ ಆಲೋಚನೆಗೆ ತೆಗೆದುಕೊಳ್ಳಲ್ಪಡತಕ್ಕದ್ದಿಲ್ಲ.

28. ಒಂದು ವಿಜ್ಞಾಪನೆಯು ಕೂಟದಲ್ಲಿ ಆಗಲೆ ವ್ಯವಸ್ಥೆ ಮಾಡಲ್ಪಟ್ಟ ಒಂದು ವಿಷಯವನ್ನು ನಿಜವಾಗಿ ಪ್ರಸ್ತಾಪಿಸಿದ್ದರೆ ಅಥವಾ ಕೂಟದಲ್ಲಿ ಆಗಲೆ ಮಾಡಲ್ಪಟ್ಟ ಯಾವುದಾದರೂ ಉಪಕ್ಷೇಪ (ತೀರ್ಮಾನ) ಕ್ಕೆ ಅಸಂಗತವಾಗಿದ್ದರೆ ಅದು ಸಭೆಯಿಂದ ಆಲೋಚನೆಗೆ ತೆಗೆದುಕೊಳ್ಳಲ್ಪಡತಕ್ಕದ್ದಿಲ್ಲ.

29. ಪ್ರಸ್ತಾಪಿಸಲ್ಪಟ್ಟ ರೀತಿಯಲ್ಲಿ, ಯಾವುದಾದರೂ ವಿಜ್ಞಾಪನೆಯು ಬೇರೆಬೇರೆ ಅಂಶಗಳಿಗೆ ಸಂಬಂಧಿಸಿದರೆ, ಅಧ್ಯಕ್ಷರು, ಅವರಿಗೆ ಯುಕ್ತವಾಗಿ ತೋರಿದರೆ, ಪ್ರತಿ ಅಂಶವೂ ಪ್ರತ್ಯೇಕವಾಗಿ ತೀರ್ಮಾನಿಸಲ್ಪಡುವ ಹಾಗೆ, ಆ ವಿಜ್ಞಾಪನೆಯನ್ನು ವಿಭಾಗಿಸಬಹುದು.

6. ಬಿಲ್ಲುಗಳ ಪ್ರಸ್ತಾಪನೆ.

30. ಸಭೆಯಲ್ಲಿ ಒಂದು ಬಿಲ್ಲನ್ನು ಪ್ರಸ್ತಾಪಿಸಲು ಬರಹ ಮೂಲಕವಾಗಿ ದಿವಾನರ ಅನುಮತಿಯನ್ನು ಮುಂದಾಗಿ ಪಡೆದಿರಬಹುದಾದ ಯಾವ ಸಭಿಕನಾದರೂ ಈ ರೆಗ್ಯುಲೇಷನಿನ 12ನೆ ಪ್ರಕರಣಕ್ಕೆ ಅನುಸಾರವಾಗಿ ಅದನ್ನು ಪ್ರಸ್ತಾಪಿಸಲು ಅಪ್ಪಣೆಯ ಬಗ್ಗೆ ಸಭೆಯ ಕೂಟದಲ್ಲಿ ವಿಜ್ಞಾಪಿಸಬಹುದು; ಆದರೆ ಹಾಗೆ ಮಾಡಲು ಬಿಲ್ಲಿನ ಹೆಸರನ್ನು ಮತ್ತು ವಿಷಯವನ್ನು ಕುರಿತು ಕಡೇ ಪಕ್ಷ ಆರು ಸರಿಯಾದ ದಿನಗಳಿಗೆ ಮುಂಚೆ ಸೆಕ್ರೆಟೆರಿಗೆ ವರ್ತಮಾನವು ಕೊಡಲ್ಪಟ್ಟಿರಬೇಕು.

31. ಒಂದು ಬಿಲ್ಲನ್ನು ಪ್ರಸ್ತಾಪಿಸಲು ಅಪ್ಪಣೆಗೋಸ್ಕರ ಮಾಡಿದ ಬಿನ್ನಹವು ಅಂಗೀಕರಿಸಲ್ಪಟ್ಟರೆ, ವಿಜ್ಞಾಪಕನು ಉದ್ದೇಶಿಸಿರುವ ಉಪಾಯದ (ನ್ಯಾಯ ಅಥವಾ ಕಾನೂನು) ಉದ್ದೇಶಗಳ ಮತ್ತು ಕಾರಣಗಳ ಸಂಪೂರ್ಣವಾದ ವಿವರಣೆಯೊಡನೆಯೂ ಅದಕ್ಕೆ ಸಂಬಂಧಪಟ್ಟ ಕಾಗದಗಳೊಡನೆಯೂ ಬಿಲ್ಲನ್ನು ಸೆಕ್ರೆಟೆರಿಗೆ ಕಳುಹಿಸತಕ್ಕದ್ದು. ಸೆಕ್ರೆಟೆರಿಯು ಕೂಡಲೆ ಬಿಲ್ಲನ್ನೂ ಉದ್ದೇಶಗಳ ಮತ್ತು ಕಾರಣಗಳ ವಿವರಣೆಯನ್ನೂ ಅದಕ್ಕೆ ಸಂಬಂಧಪಟ್ಟ ಕಾಗದಗಳನ್ನೂ ಅಚ್ಚು ಹಾಕಿಸಿ ಅದರ ಪ್ರತಿಗಳನ್ನು ಸಭಿಕರಲ್ಲಿ ಪ್ರತಿ ಒಬ್ಬನಿಗೂ ಕಳುಹಿಸಿ ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಸರ್ಕಾರಿ ಗೆಜೆಟಿನಲ್ಲಿ ಪ್ರಕಟಿಸತಕ್ಕದ್ದು.

ಆದರೆ ಯಾವಾಗ ಅಂಥಾ ಬಿಲ್ಲಿನ ಪ್ರಕಟನೆಯು ಆಲೋಚಿಸಲ್ಪಡತಕ್ಕದ್ದೋ ಸಭೆಯು ಅಂಥಾ ಮುಂದಿನ ಕೂಟದ ವರೆಗೆ ದಿವಾನರ ಅಪ್ಪಣೆಯ ಮೇರೆಗೆ ಪ್ರಕಟನೆಯನ್ನು ನಿಲ್ಲಿಸಬಹುದು.

32. ದಿವಾನರು, ತಮಗೆ ಯುಕ್ತವಾಗಿ ತೋರಿದರೆ, 30ನೆ ನಿಬಂಧನೆಯ ಮೇರೆ ಬಿಲ್ಲನ್ನು ಕುರಿತು ಪ್ರಸ್ತಾಪಿಸಲು ಅಪ್ಪಣೆಯು ಕೋರಲ್ಪಡದೆ ಇದ್ದರೂ ಯಾವುದಾದರೂ ಬಿಲ್ಲನ್ನು ಅದರ ಉದ್ದೇಶಗಳ ಮತ್ತು ಕಾರಣಗಳ ವಿವರಣೆ ಸಹಿತ ಸರ್ಕಾರಿ ಗೆಜೆಟಿನಲ್ಲಿ ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಕಟಿಸುವಂತೆ ಸೆಕ್ರೆಟೆರಿಗೆ ಆಜ್ಞಾಪಿಸಬಹುದು ಮತ್ತು ತದನುಸಾರವಾಗಿ ಸೆಕ್ರೆಟೆರಿಯು ಅದನ್ನು ಪ್ರಕಟಿಸಿ ಬಿಲ್ಲಿನ ಮತ್ತು, ಉದ್ದೇಶಗಳ ಮತ್ತು ಕಾರಣಗಳ ವಿವರಣೆಯ ಒಂದು ಪ್ರತಿಯನ್ನು ಸಭಿಕರಲ್ಲಿ ಪ್ರತಿಒಬ್ಬನಿಗೂ ಕಳುಹಿಸತಕ್ಕದ್ದು. ಈ ನಿಬಂಧನೆಯ ಮೇರೆ ಒಂದು ಬಿಲ್ಲು ಪ್ರಕಟಿಸಲ್ಪಟ್ಟಾಗ, ಅದನ್ನು ಕುರಿತು ಪ್ರಸ್ತಾಪಿಸಲು ಅಪ್ಪಣೆಗೋಸ್ಕರ 30ನೆ ನಿಬಂಧನೆಯ ಮೇರೆ ವಿಜ್ಞಾಪಿಸಲು ಅವಶ್ಯವಾಗಿರತಕ್ಕದ್ದಿಲ್ಲ.

33. 31ನೆ ನಿಬಂಧನೆಯ ಮೇರೆ ಒಂದು ಬಿಲ್ಲನ್ನು ಪ್ರಸ್ತಾಪಿಸಲು ಅಪ್ಪಣೆ ಕೊಡಲ್ಪಟ್ಟ ತರುವಾಯ ಅಥವಾ 32ನೆ ನಿಬಂಧನೆಯ ಮೇರೆ ಪ್ರಕಟನೆಗೆ ಅಪ್ಪಣೆಯಾದ ತರುವಾಯ ಯಾವಾಗಲಾದರೂ ಬಿಲ್ಲನ್ನು ಕೈಕೊಂಡಿರುವ ಸಭಿಕನು ಸೆಕ್ರೆಟೆರಿಗೆ ಆರು ಸರಿಯಾದ ದಿನಗಳ ವರ್ತಮಾನ ಕೊಟ್ಟ ತರುವಾಯ ಅದನ್ನು ಪ್ರಸ್ತಾಪಿಸಬಹುದು; ಆದರೆ ಪ್ರಕಟನೆಯ ತಾರೀಖಿನಿಂದ 15 ಸರಿಯಾದ ದಿನಗಳ ವರೆಗೆ ಯಾವ ಬಿಲ್ಲನ್ನೂ ಪ್ರಸ್ತಾಪಿಸಕೂಡದು.

ಒಂದು ಬಿಲ್ಲನ್ನು ಪ್ರಸ್ತಾಪಿಸುವಾಗ ಅದನ್ನು ಕೈಕೊಂಡಿರುವ ಸಭಿಕನು ಸಭೆಯಲ್ಲಿ ಬಿಲ್ಲು ಓದಲ್ಪಡಬೇಕೆಂದು ವಿಜ್ಞಾಪಿಸತಕ್ಕದ್ದು. ಬಿಲ್ಲಿನ ಮೂಲತತ್ವವೂ ಅದರ ಸಾಮಾನ್ಯ ನಿಯಮಗಳೂ ಆಗ ಚರ್ಚಿಸಲ್ಪಡಬಹುದು, ಮತ್ತು ಆ ವಿಜ್ಞಾಪನೆಯು ಅಂಗೀಕರಿಸಲ್ಪಟ್ಟರೆ ಸಭೆಯು ಆಗ ಬಿಲ್ಲನ್ನು ಒಂದು ನಿಯುಕ್ತ ಸಮಾಜಕ್ಕೆ (ಸೆಲೆಕ್ಟ್ ಕಮಿಟಿ) ಕಳುಹಿಸುವ ವಿಷಯವನ್ನು

ಆಲೋಚಿಸತಕ್ಕದ್ದು ಮತ್ತು ಆ ವಿಷಯವನ್ನು ಹೀಗೆ ಮಾಡಬೇಕೆಂದು ನಿರ್ಣಯಿಸಿದರೆ, ಸಭೆಯು ನಿಯುಕ್ತ ಸಭೆ (ಕಮಿಟಿ) ಯನ್ನು ನೇಮಕ ಮಾಡತಕ್ಕದ್ದು ಮತ್ತು ಅದರ ರಿಪೋರ್ಟನ್ನು ಒಂದು ಕ್ಲುಪ್ತ ಪಡಿಸಿದ ಕಾಲದೊಳಗೆ ಕಳುಹಿಸತಕ್ಕದ್ದೆಂದೂ ಕೂಡ ಆಜ್ಞಾಪಿಸಬಹುದು.

34. ಒಂದು ಬಿಲ್ಲು ಸಾಗುತ್ತಿರುವಾಗ ಯಾವಾಗಲಾದರೂ ಅದನ್ನು ಕೈಕೊಂಡಿರುವ ಸಭಿಕನು ಅದನ್ನು ವಾಪಸು ತೆಗೆದುಕೊಳ್ಳಲು ಅಪ್ಪಣೆಗೋಸ್ಕರ ವಿಜ್ಞಾಪಿಸಬಹುದು ಮತ್ತು ಅಂಥಾ ಅಪ್ಪಣೆಯು ಕೊಡಲ್ಪಟ್ಟರೆ, ತದನುಸಾರವಾಗಿ ಬಿಲ್ಲು ವಾಪಸು ತೆಗೆದುಕೊಳ್ಳಲ್ಪಡತಕ್ಕದ್ದು. 32ನೆ ನಿಬಂಧನೆಯ ಮೇರೆ ಪ್ರಕಟಿಸಲ್ಪಟ್ಟರೂ ಸಭೆಯಲ್ಲಿ ಪ್ರಸ್ತಾಪಿಸಲ್ಪಡದೆ ಮತ್ತು ಓದಲ್ಪಡದ ಇರುವ ಬಿಲ್ಲನ್ನು ಕೈಕೊಂಡಿರುವ ಸಭಿಕನು ವಾಪಸು ತೆಗೆದುಕೊಳ್ಳುವುದನ್ನು ಸಭೆಗೆ ತಿಳಿಸುವುದು ಮಾತ್ರಕ್ಕಿಂತ ಹೆಚ್ಚು ಕ್ರಮವನ್ನು ನಡೆಸದೆ ಅದನ್ನು ವಾಪಸು ತೆಗೆದುಕೊಳ್ಳಬಹುದು.

7. ನಿಯುಕ್ತ ಸಮಾಜ (ಸೆಲೆಕ್ಟ್ ಕಮಿಟಿ).

35. ಸಭೆಯ ಕೆಲಸಕ್ಕೆ ಸಂಬಂಧಪಟ್ಟ ಯಾವ ಉದ್ದೇಶಕ್ಕಾದರೂ ಸಭೆಯಿಂದ ನಿಯುಕ್ತ ಸಮಾಜಗಳು ನೇಮಕವಾಡಲ್ಪಡಬಹುದು ಮತ್ತು ಸಭೆಯು ಮುಂದಕ್ಕೆ ನಿಲ್ಲಿಸಿ ಇಡಲ್ಪಟ್ಟದ್ದಾಗ್ಯೂ ಅಂಥಾ ನಿಯುಕ್ತ ಸಮಾಜಗಳು ಸೇರಿ ಅವರ ರಿಪೋರ್ಟುಗಳನ್ನು ಕಳುಹಿಸಬಹುದು. ಬಿಲ್ಲನ್ನು ಕೈಕೊಂಡಿರುವ ಸಭಿಕನು ಯಾವಾಗಲೂ ಬಿಲ್ಲನ್ನು ಆಲೋಚಿಸಲು ನೇಮಿಸಲ್ಪಟ್ಟಿರುವ ನಿಯುಕ್ತ ಸಮಾಜದ ಸಾಮಾಜಿಕನಾಗಿರತಕ್ಕದ್ದು.

36. ಒಂದು ಬಿಲ್ಲು ಆಲೋಚನೆಗಾಗಿ ಒಂದು ನಿಯುಕ್ತ ಸಮಾಜಕ್ಕೆ ಹಾಕಲ್ಪಟ್ಟಿರುವಾಗ, ಬಿಲ್ಲಿನ ಪ್ರತಿ ವಾಕ್ಯವನ್ನೂ ಚರ್ಚಿಸುವುದು ಮತ್ತು ತನಗೆ ಯುಕ್ತವಾಗಿ ತೋರುವ ತಿದ್ದುಪಾಟುಗಳನ್ನು ಕುರಿತು ಸಭೆಗೆ ಶಿಫಾರಸು ಮಾಡುವುದು ನಿಯುಕ್ತ ಸಮಾಜದ ಕೆಲಸವಾಗಿರತಕ್ಕದ್ದು.

37. ಯಾವುದರೊಳಗೆ ನಿಯುಕ್ತ ಸಮಾಜವು ಒಂದು ಬಿಲ್ಲನ್ನು ಕುರಿತು ತನ್ನ ರಿಪೋರ್ಟನ್ನು ಕಳುಹಿಸತಕ್ಕದ್ದೋ ಅಂಥಾ ಕಾಲವನ್ನು ಸಭೆಯು ಗೊತ್ತುಮಾಡಿದ್ದು ನಿಯುಕ್ತ ಸಮಾಜವು ಆ ಕಾಲದೊಳಗೆ ತನ್ನ ರಿಪೋರ್ಟನ್ನು ಕಳುಹಿಸಲು ಯಾವ ಕಾರಣದಿಂದಲಾದರೂ ಆಗದೆ ಇದ್ದರೆ ದೀವಾನರು ಬಿಲ್ಲನ್ನು ಕೈಕೊಂಡಿರುವ ಸಭಿಕನ ಬಿನ್ನಹದ ಮೇಲೆ ಆ ಕಾಲವನ್ನು ಆಗಾಗ್ಗ ಹೆಚ್ಚಿಸಬಹುದು.

38. ನಿಯುಕ್ತ ಸಮಾಜದ ರಿಪೋರ್ಟು ನಿಯುಕ್ತ ಸಮಾಜದ ಎಲ್ಲಾ ಸಾಮಾಜಿಕರಿಂದಲೂ ಅಥವಾ ಅವರಲ್ಲಿ ಮಹಾಪಕ್ಷ (ಮೆಜಾರಿಟಿ) ದವರಿಂದ ರುಜು ಮಾಡಲ್ಪಡತಕ್ಕದ್ದು ; ಆದರೆ ನಿಯುಕ್ತ ಸಮಾಜದ ಯಾವ ಸಾಮಾಜಿಕನಾದರೂ ತನ್ನ ಅಭಿಪ್ರಾಯಗಳನ್ನು ಒಂದು ಪ್ರತ್ಯೇಕವಾದ ಟಿಪ್ಪಣಿಯಲ್ಲಿ ಬರೆಯಬಹುದು.

39. ಒಂದು ಬಿಲ್ಲನ್ನು ಆಲೋಚಿಸಲು ನೇಮಿಸಲ್ಪಟ್ಟ ನಿಯುಕ್ತ ಸಮಾಜದ ರಿಪೋರ್ಟು ಉದ್ದೇಶಿಸಲ್ಪಟ್ಟ ಮುಖ್ಯವಾದ ತಿದ್ದುಪಾಟುಗಳ ಮತ್ತು ಅಂಥಾ ತಿದ್ದುಪಾಟುಗಳ ಕಾರಣಗಳ ವಿವರಗಳನ್ನು ಒಳಕೊಂಡಿರತಕ್ಕದ್ದು, ಅಥವಾ ಅದು ಆಲೋಚನೆಯಲ್ಲಿರುವ ಬಿಲ್ಲನ್ನು ಬಿಟ್ಟುಬಿಡಬೇಕೆಂಬ ಒಂದು ಶಿಫಾರಸನ್ನು ಒಳಕೊಂಡಿರಬಹುದು.

40. ನಿಯುಕ್ತ ಸಮಾಜದ ರಿಪೋರ್ಟು ನಿಯುಕ್ತ ಸಮಾಜದ ಬೇರೆಬೇರೆ ಸಾಮಾಜಿಕರಿಂದ ಬರೆಯಲ್ಪಟ್ಟಿರಬಹುದಾದ ಟಿಪ್ಪಣಿಗಳು, ಮತ್ತು (ಬಿಲ್ಲು ತಿದ್ದುಪಾಟು ಮಾಡಲ್ಪಟ್ಟಿದ್ದರೆ) ನಿಯುಕ್ತ ಸಮಾಜದಿಂದ ತಿದ್ದುಪಾಟು ಮಾಡಲ್ಪಟ್ಟ ಹಾಗೆ ಇರುವ ಬಿಲ್ಲು ಅಚ್ಚು ಹಾಕಲ್ಪಟ್ಟ ಅದರ ಪ್ರತಿಗಳು ಸಭೆಯ ಪ್ರತಿ ಸಭಿಕನಿಗೂ ಕೊಡಲ್ಪಡತಕ್ಕದ್ದು. ರಿಪೋರ್ಟು ಮತ್ತು ಟಿಪ್ಪಣಿಗಳು (ಏನಾದರೂ ಇದ್ದರೆ) ಮತ್ತು (ಬಿಲ್ಲು ತಿದ್ದುಪಾಟು ಮಾಡಲ್ಪಟ್ಟಿದ್ದರೆ) ತಿದ್ದುಪಾಟು ಮಾಡಲ್ಪಟ್ಟ ಬಿಲ್ಲು ಅಥವಾ ತಿದ್ದುಪಾಟು ಮಾಡಲ್ಪಟ್ಟಿರಬಹುದಾದ ಅದರ ಭಾಗವು ಕೂಡ, ನಿಯುಕ್ತ ಸಭೆಯಿಂದ ಅನ್ಯಥಾ ಆಜ್ಞಾಪಿಸಲ್ಪಟ್ಟದ್ದು ಹೊರತು, ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಡತಕ್ಕದ್ದು.

41. ಬಿಲ್ಲನ್ನು ಕೈಕೊಂಡಿರುವ ಸಭಿಕನೂ ಸೇರಿ ನಿಯುಕ್ತ ಸಮಾಜದ ಸಾಮಾಜಿಕರಲ್ಲಿ ಮಹಾಪಕ್ಷದವರು ಬಂದಿದ್ದ ಹೊರತು ನಿಯುಕ್ತ ಸಮಾಜದ ಯಾವ ಕೂಟದಲ್ಲಿಯಾದರೂ ಯಾವ ಕೆಲಸವನ್ನೂ ನಡೆಸಕೂಡದು.

42. ನಿಯುಕ್ತ ಸಮಾಜವು ಅವರ ಸ್ವಂತ ಸಭಾನಾಯಕನನ್ನು ಆರಿಸಿಕೊಳ್ಳಬಹುದು ; ಯಾರು ಅಸಡ್ಡೆ ಮಾಡುತ್ತಾನೆಯೊ ಅಥವಾ ಕೂಟಗಳಿಗೆ ಬರಲು ಅಶಕ್ತನಾಗಿರುತ್ತಾನೆಯೊ ನಿಯುಕ್ತ ಸಮಾಜದ ಅಂಥಾ ಯಾವನಾದರೂ ಸಾಮಾಜಿಕನ ಹೆಸರನ್ನು ದೀವಾನರಿಗೆ ರಿಪೋರ್ಟು ಮಾಡಲು ಸಭಾನಾಯಕನಿಗೆ ಅಧಿಕಾರವಿರತಕ್ಕದ್ದು, ಮತ್ತು ದೀವಾನರು ಆಮೇಲೆ ಸಭೆಯ ಸಭಿಕರಲ್ಲಿ ಒಬ್ಬನನ್ನು ನಿಯುಕ್ತ ಸಮಾಜದ ಹೆಚ್ಚು ಸಾಮಾಜಿಕನಾಗಿ ನೇಮಿಸಬಹುದು.

43. ಒಂದು ನಿಯುಕ್ತ ಸಮಾಜವು, ವರ್ತಮಾನವನ್ನು ಹೊಂದುವ ಬಗ್ಗೆ, ತಮ್ಮ ಕೂಟಗಳಿಗೆ ಬಂದಿರಲು ಯಾವ ಮನುಷ್ಯನನ್ನಾದರೂ ಕರೆಯಬಹುದು.

44. ಒಂದು ನಿಯುಕ್ತ ಸಮಾಜವು ಒಂದು ಬಿಲ್ಲನ್ನು ಆಲೋಚಿಸಲು ಸೇರಿರುವಾಗ, ಬಿಲ್ಲಿಗೆ ಸಂಬಂಧಪಟ್ಟ ಸೆಕ್ರೆಟರಿಗೆ ತಲುಪಿರುವ ಎಲ್ಲಾ ಕಾಗದ ಪತ್ರಗಳೂ ನಿಯುಕ್ತ ಸಮಾಜಕ್ಕೆ ಕಳುಹಿಸಲ್ಪಡತಕ್ಕದ್ದು.

8. ಬಿಲ್ಲುಗಳನ್ನು ನಿರ್ಣಯಿಸೋಣ.

45. 33ನೆ ನಿಬಂಧನೆಯ ಮೇರೆ ಸಭೆಯಲ್ಲಿ ಒಂದು ಬಿಲ್ಲು ಪ್ರಸ್ತಾಪಿಸಲ್ಪಟ್ಟ ಮತ್ತು ಓದಲ್ಪಟ್ಟ ಒಂದು ನಿಯುಕ್ತ ಸಮಾಜಕ್ಕೆ ಆಲೋಚನೆಯ ಬಗ್ಗೆ ಅದನ್ನು ಕಳುಹಿಸಲು ಅವಶ್ಯವಿಲ್ಲವೆಂದು ಸಭೆಯು ನಿರ್ಣಯಿಸಿದಾಗ, ಯಾವುದರಲ್ಲಿ ಬಿಲ್ಲು

ಕ್ಕಿನೆ ನಿಬಂಧನೆಯ ಮೇರೆ ಒಪ್ಪಿಸಲ್ಪಟ್ಟಿತೋ ಅಂಥಾ ತಾರೀಖಿನಿಂದ ಹದಿನೈದು ಸರಿಯಾದ ದಿನಗಳು ಕಳೆದು ಹೋಗುವವರೆಗೆ ಸಭೆಯು ಬಿಲ್ಲನ್ನು ಆಲೋಚನೆಗೆ ತೆಗೆದುಕೊಳ್ಳಲು ಪ್ರವರ್ತಿಸಕೂಡದು.

ಈ ಸಂದರ್ಭದಲ್ಲಿ ಬಿಲ್ಲು ಆಲೋಚನೆಗೆ ಬರುವ ದಿನದಲ್ಲಿ ಬಿಲ್ಲನ್ನು ಆಲೋಚನೆಗೆ ತೆಗೆದುಕೊಳ್ಳಬೇಕೆಂದು ಒಂದು ಕ್ರಮವಾದ ವಿಜ್ಞಾಪನೆಯನ್ನು ಮಾಡಲು ಅವಶ್ಯವಾಗಿರತಕ್ಕದ್ದಿಲ್ಲ.

46. 35ನೆ ನಿಬಂಧನೆಯ ಮೇರೆ ಬಿಲ್ಲು ನಿಯುಕ್ತ ಸಮಾಜಕ್ಕೆ ಕಳುಹಿಸಲ್ಪಟ್ಟಾಗ ನಿಯುಕ್ತ ಸಮಾಜದ ರಿಪೋರ್ಟಿನ ಮತ್ತು (ಬಿಲ್ಲು ತಿದ್ದುಪಾಟು ಮಾಡಲ್ಪಟ್ಟಿದ್ದರೆ) ತಿದ್ದುಪಾಟು ಮಾಡಲ್ಪಟ್ಟ ಬಿಲ್ಲಿನ ಪ್ರತಿಗಳು, ಕನಿಷ್ಠಪಕ್ಷ ಹದಿನೈದು ಸರಿಯಾದ ದಿನಗಳಿಗೆ ಮುಂಚೆ, ಸಭೆಯ ಸಭಿಕರಲ್ಲಿ ಪ್ರತಿ ಒಬ್ಬನಿಗೂ ಕಳುಹಿಸಲ್ಪಟ್ಟಿದ್ದ ಹೊರತು ಮತ್ತು 36ನೆ ನಿಬಂಧನೆಯಲ್ಲಿ ಕಂಡ ಪ್ರಕಟನೆಯನ್ನು ನಿಯುಕ್ತ ಸಮಾಜವು ತೆಗೆದುಹಾಕದೆ ಇರುವ ಸಂದರ್ಭಗಳಲ್ಲಿ, ಅಂಥಾ ಪ್ರಕಟನೆಯ ತಾರೀಖಿನಿಂದ ಇಪ್ಪತ್ತೊಂದು ಸರಿಯಾದ ದಿನಗಳು ಕಳೆದುಹೋಗುವವರೆಗೆ, ಬಿಲ್ಲು ಸಭೆಯಿಂದ ಆಲೋಚನೆಗೆ ತೆಗೆದುಕೊಳ್ಳಲ್ಪಡತಕ್ಕದ್ದಿಲ್ಲ. ಈ ನಿಯಮಗಳಿಗೆ ಒಳಪಟ್ಟು, ಬಿಲ್ಲನ್ನು ಕೈಕೊಂಡಿರುವ ಸಭಿಕನು, ನಿಯುಕ್ತ ಸಮಾಜದ ರಿಪೋರ್ಟನ್ನು ಸಭೆಗೆ ಕೊಡುವಾಗ, ಬಿಲ್ಲು ಮತ್ತು ರಿಪೋರ್ಟು ಒಡನೆ ಆಲೋಚನೆಗೆ ತೆಗೆದುಕೊಳ್ಳಲ್ಪಡಬೇಕೆಂದು, ಅಥವಾ ಅವುಗಳ ಆಲೋಚನೆಯನ್ನು ಒಂದು ಮುಂದಿನ ಕ್ಲುಪ್ತಕ್ಕೆ ನಿಲ್ಲಿಸಬೇಕೆಂದು ವಿಜ್ಞಾಪಿಸಬಹುದು. ಒಂದು ಬಿಲ್ಲು ಆಲೋಚನೆಗೆ ತೆಗೆದುಕೊಳ್ಳಲ್ಪಡಬೇಕೆಂಬ ಈ ನಿಬಂಧನೆಯ ಪ್ರಕಾರದ ವಿಜ್ಞಾಪನೆಯ ಮೇಲಿನ ಚರ್ಚೆಯು ಆ ಬಿಲ್ಲಿನ ಮೂಲತತ್ವದ ವರೆಗೆ ಹೋಗಕೂಡದು.

47. ಒಂದು ಬಿಲ್ಲಿನ ಸಾರಾಂಶಕ್ಕೆ ಅನ್ವಯಿಸುವ ಒಂದು ತಿದ್ದುಪಾಟನ್ನು ಸೂಚಿಸಲಪೇಕ್ಷಿಸುವ ಯಾವ ಸಭಿಕನಾದರೂ ಸೂಚಿಸಿರುವ ತಿದ್ದುಪಾಟಿನ ಒಂದು ಪ್ರತಿಯನ್ನು 22ನೆ ನಿಬಂಧನೆಯ ಮೇರೆ ಸೆಕ್ರೆಟರಿಗೆ ಕಳುಹಿಸತಕ್ಕದ್ದು, ಮತ್ತು ಸೆಕ್ರೆಟರಿಯು 7ನೆ ನಿಬಂಧನೆಯ ಮೇರೆ ತಯಾರುಮಾಡಲ್ಪಟ್ಟ ಕೆಲಸದ ವಿವರಣೆಯಲ್ಲಿ ಅದನ್ನು ಬರೆಯತಕ್ಕದ್ದು; ಆದರೆ ಬರೀಮಾತಿನ ಸ್ವಭಾವವುಳ್ಳ ತಿದ್ದುಪಾಟುಗಳ ಅಥವಾ ಅಂಗೀಕರಿಸಲ್ಪಟ್ಟ (ಮಹಾಪಕ್ಷದವರಿಂದ ಒಪ್ಪಲ್ಪಟ್ಟ) ತಿದ್ದುಪಾಟುಗಳ ಮೇಲೆ ಹುಟ್ಟುವ, ಅಥವಾ ಅವುಗಳ ವಿಷಯದಲ್ಲಿ ವಿಜ್ಞಾಪಿಸಲ್ಪಟ್ಟ ತಿದ್ದುಪಾಟುಗಳ ವರ್ತಮಾನವನ್ನು ಮುಂದಾಗಿ ಕೊಡಲು ಅವಶ್ಯವಾಗಿ ಇರತಕ್ಕದ್ದಿಲ್ಲ.

48. ಬಿಲ್ಲು ನಿಜವಾಗಿ ಆಲೋಚನೆಗೆ ತೆಗೆದುಕೊಳ್ಳಲ್ಪಡುವವರೆಗೆ ಅದರ ಸೂಚಿಸಲ್ಪಟ್ಟ ತಿದ್ದುಪಾಟುಗಳನ್ನು ವಿಜ್ಞಾಪಿಸಕೂಡದು, ಮತ್ತು, ವಿಜ್ಞಾಪಿಸಲ್ಪಟ್ಟಾಗ, ಯಾವುವುಗಳಿಗೆ ಅವು ಸಂಬಂಧಿಸುತ್ತವೆಯೊ ಅಂಥಾ ಪ್ರಕರಣಗಳ ಅನುಕ್ರಮದಲ್ಲಿ ಅವನ್ನು ಆಲೋಚಿತಕ್ಕದ್ದು.

ಬಿಲ್ಲುಗಳ ಸೂಚಿಸಲ್ಪಟ್ಟ ತಿದ್ದುಪಾಟುಗಳು ವಿಜ್ಞಾಪನೆಗಳಿಗೆ ಸಂಬಂಧಿಸುವ 24, 25, 26, 28, ಮತ್ತು 29ನೆಯ ನಿಬಂಧನೆಗಳನ್ನು ಅನುಸರಿಸತಕ್ಕದ್ದು.

49. ಒಂದು ಬಿಲ್ಲಿನ ಒಂದು ಸೂಚಿಸಲ್ಪಟ್ಟ ತಿದ್ದುಪಾಟು ಅಸಂಬದ್ಧವಾಗಿದೆ ಅಥವಾ ಅಸಮಗ್ರವಾಗಿದೆ ಅಥವಾ ಸಾರಾಂಶದಲ್ಲಿ ಅದರ ಹಾಗೆಯೇ ಇರುವ ಒಂದು ತಿದ್ದುಪಾಟು ಅದೇ ಬಿಲ್ಲನ್ನು ಆಲೋಚಿಸುತ್ತಿರುವಾಗ ಸಭೆಯಿಂದ ಹಿಂದೆ ವ್ಯವಸ್ಥಾ ಮಾಡಲ್ಪಟ್ಟಿತು ಎಂಬ ಕಾರಣದ ಮೇಲೆ ಚರ್ಚಿಸಲ್ಪಡತಕ್ಕದ್ದಲ್ಲ ಅಥವಾ (ಸಭಿಕರ) ಸಮ್ಮತಿಗೆ ಹಾಕಲ್ಪಡತಕ್ಕದ್ದಲ್ಲವೆಂದು ಅಧ್ಯಕ್ಷರು ತಿಳಿಸಬಹುದು.

50. (ಬಿಲ್ಲು ನಿಯುಕ್ತ ಸಮಾಜಕ್ಕೆ ಕಳುಹಿಸಲ್ಪಟ್ಟಿದ್ದರೆ) ನಿಯುಕ್ತ ಸಮಾಜದಿಂದ ಸೂಚಿಸಲ್ಪಟ್ಟ ತಿದ್ದುಪಾಟುಗಳು ಮತ್ತು ಸಭೆಯ ಮುಂದೆ ಸಭಿಕರಲ್ಲಿ ಯಾರಿಂದಲಾದರೂ ಸೂಚಿಸಲ್ಪಟ್ಟಿರಬಹುದಾದ ಇತರ ತಿದ್ದುಪಾಟುಗಳು ಸಭೆಯಿಂದ ಆಲೋಚಿಸಲ್ಪಟ್ಟಾಗ, ಬಿಲ್ಲನ್ನು ಕೈಕೊಂಡಿರುವ ಸಭಿಕನು ಅಥವಾ ಆತನು ಇಲ್ಲದಿರುವಾಗ ಯಾವನಾದರೂ ಇತರ ಸಭಿಕನು, ಮುಂದಿನ ಒಂದು ಕೂಟದಲ್ಲಿ ತಿದ್ದುಪಾಟು ಮಾಡಲ್ಪಟ್ಟ ಬಿಲ್ಲನ್ನು ತೆಗೆದುಕೊಂಡು, ನಿರ್ಣಯಿಸಬೇಕೆಂದು ವಿಜ್ಞಾಪಿಸಬಹುದು.

ಅಂಥಾ ಕೂಟದಲ್ಲಿ ಸಭೆಯು ಸರ್ಕಾರದ ಪರವಾಗಿ ವಿಜ್ಞಾಪಿಸಲ್ಪಟ್ಟ ತಿದ್ದುಪಾಟುಗಳನ್ನು, ಏನಾದರೂ ಇದ್ದರೆ, ಆಲೋಚಿಸಿ ಬಿಲ್ಲನ್ನು ನಿರ್ಣಯಿಸತಕ್ಕದ್ದು. ಸರ್ಕಾರದ ಪರವಾಗಿ ವಿಜ್ಞಾಪಿಸಲ್ಪಟ್ಟ ತಿದ್ದುಪಾಟುಗಳಿಗೆ ಸಂಬಂಧಪಟ್ಟವುಗಳಲ್ಲದೆ ಯಾವ ತಿದ್ದುಪಾಟುಗಳನ್ನೂ, ದಿವಾನರ ವಿಶೇಷ ಅಪ್ಪಣೆ ಇಲ್ಲದೆ, ಈ ದಶೆಯಲ್ಲಿ ಆಲೋಚನೆಗೆ ತರತಕ್ಕದ್ದಲ್ಲ.

9. ಬಿಲ್ಲುಗಳ ಅಂತ್ಯ ದಶೆಗಳು.

51. ಒಂದು ಬಿಲ್ಲು ಸಭೆಯಿಂದ ನಿರ್ಣಯಿಸಲ್ಪಟ್ಟಾಗ, ಸೆಕ್ರೆಟರಿಯು ಅದರ ಅಂಚಿನಲ್ಲಿ ಕೊಟ್ಟಿರುವ ಸಂಗ್ರಹಗಳನ್ನೂ, ಅದರ ಪ್ರಕರಣಗಳಿಗೆ ಸಂಖ್ಯೆ ಕೊಡೋಣವನ್ನೂ ಪುನರ್ವಿಮರ್ಶಿಸ್ಪಷ್ಟಾದಿ ಸ್ಫೂರ್ತಿ ಮಾಡತಕ್ಕದ್ದು, ಮತ್ತು ಅದನ್ನು ಮೇಲಕ್ಕೆ ಶ್ರೀಮನ್ ಮಹಾರಾಜರವರಿಗೆ ಕಳುಹಿಸುವುದಕ್ಕೋಸ್ಕರ ದಿವಾನರಿಗೆ ಕಳುಹಿಸತಕ್ಕದ್ದು.

52. ದಿವಾನರು ಬಿಲ್ಲಿನ ಕೆಳಗೆ ಬರಹಮೂಲಕವಾದ ಸರ್ಟಿಫಿಕೇಟಿನಿಂದ ಶ್ರೀಮನ್ ಮಹಾರಾಜರ ಸಮ್ಮತಿ ಅಥವಾ ಅಸಮ್ಮತಿಯನ್ನು ತಿಳಿಸತಕ್ಕದ್ದು, ಮತ್ತು ಬಿಲ್ಲು ಅಂಥಾ ಸರ್ಟಿಫಿಕೇಟಿನ ಸಹಿತ ಸಭೆಯ ಕಾಗದಪತ್ರಗಳ ಜತೆಗೆ ಇಡಲ್ಪಡತಕ್ಕದ್ದು.

53. ಒಂದು ಬಿಲ್ಲಿಗೆ ಸಮ್ಮತಿಸದಿರುವ, ಅಥವಾ ಶ್ರೀಮನ್ ಮಹಾರಾಜರವರು ಅವಶ್ಯವೆಂದು ಎಣಿಸಬಹುದಾದ ಬದಲಾವಣೆಯೊಡನೆ ಅದಕ್ಕೆ ಅನುಮತಿಯನ್ನು ಕೊಡುವ, ಶ್ರೀಮನ್ ಮಹಾರಾಜರವರ ವಿಶೇಷಾಧಿಕಾರವನ್ನು ನಡೆಸೋಣವನ್ನು ಕುರಿತು ಯಾವ ಸಭಿಕನೂ ಯಾವ ವಿಜ್ಞಾಪನೆಯನ್ನೂ ಮಾಡಕೂಡದು ಅಥವಾ ಅನ್ಯಥಾ ಅದನ್ನು ಸಭೆಯು ಆಲೋಚನೆಗೆ ತರಕೂಡದು.

54. ಒಂದು ಬಿಲ್ಲು ಈ ರೆಗ್ಯುಲೇಷನ್ನಿನ 13ನೆ ಪ್ರಕರಣದ ಮೇರೆ ಶ್ರೀಮನ್ ಮಹಾರಾಜರವರ ಅನುಮತಿಯನ್ನು ಹೊಂದಿದಾಗ್ಗೆ, ಅದು ಸರ್ಕಾರಿ ಗೆಜೆಟಿನಲ್ಲಿ ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಕಟಿಸಲ್ಪಡತಕ್ಕದ್ದು.

10. ಅರ್ಜಿಗಳಿಗೆ ಸಂಬಂಧಿಸುವ ನಿಬಂಧನೆಗಳು.

55. ಸಭೆಗೆ ಬರುವ ಅರ್ಜಿಗಳು ಈ ಕೆಳಗಿನಂತೆ ಇರಬೇಕು:—

1. ನಿಜವಾಗಿ ಸಭೆಯು ಆಲೋಚನೆಯಲ್ಲಿರುವ ಒಂದಾನೊಂದು ವಿಷಯಕ್ಕೆ ಸಂಬಂಧಿಸಬೇಕು;
2. "ನ್ಯಾಯ ವಿಧಾಯಕ ಸಭೆಗೆ" ಎಂದು ಅವುಗಳಿಗೆ ವಿಳಾಸ ಬರೆದಿರಬೇಕು;
3. ತಾರೀಖು ಹಾಕಲ್ಪಟ್ಟು ಅರ್ಜಿದಾರ, ಅಥವಾ ಅರ್ಜಿದಾರರಿಂದ ರುಜು ಮಾಡಲ್ಪಟ್ಟಿರಬೇಕು;
4. ವಿನಯವಾದ ಮತ್ತು ಮರ್ಯಾದೆಯುಳ್ಳ ಮಾತುಗಳಲ್ಲಿ ಬರೆದಿರಬೇಕು; ಮತ್ತು
5. ಒಂದು ಸ್ಪಷ್ಟವಾದ ಪ್ರಾರ್ಥನೆಯೊಡನೆ ಮುಗಿಯಬೇಕು.

56. ಒಂದು ಅರ್ಜಿಯು 55ನೆ ನಿಬಂಧನೆಗೆ ಅನುಸಾರವಾಗಿ ಇಲ್ಲದೆ ಇದ್ದರೆ, ಅಥವಾ ಅದಕ್ಕೆ ಹಾಕಿರುವ ಯಾವುದಾದರೂ ರುಜುವಿನ ಪ್ರಾಮಾಣಿಕತೆಯನ್ನು ಕುರಿತು ಸಂದೇಹಪಡಲು ಸೆಕ್ರಿಟರಿಗೆ ಕಾರಣ ತೋರಿದರೆ, ಆತನು ಅರ್ಜಿಯ ಹಿಂಭಾಗದಲ್ಲಿ ಆ ಅಂಶವನ್ನು ವೃಥೀಕರಿಸಿ (ಸರ್ಟಿಫೈಮಾಡಿ) ಆ ಸಂಗತಿಯನ್ನು ಸಭೆಗೆ ರಿಪೋರ್ಟು ಮಾಡತಕ್ಕದ್ದು. ಸಭೆಯು ಆಗ ಆ ಅರ್ಜಿಯನ್ನು ತಳ್ಳಿಬಿಡಬಹುದು. ಅದು ಆಗ ಹಾಗೆ ತಳ್ಳಿಹಡೆಯಾದುದಕ್ಕೆ ಕಾರಣದ ವಿವರದೊಡನೆ ಅರ್ಜಿದಾರ ಅಥವಾ ಅರ್ಜಿದಾರರಿಗೆ ವಾಪಸು ಕಳುಹಿಸಲ್ಪಡತಕ್ಕದ್ದು.

57. ಅರ್ಜಿಯು 55ನೆ ನಿಬಂಧನೆಗೆ ಅನುಸಾರವಾಗಿದ್ದರೆ, ಸೆಕ್ರಿಟರಿಯು, ಅವಶ್ಯವಾಗಿದ್ದರೆ, ಅದರ ಒಂದು ಸಂಗ್ರಹವನ್ನು ಬರೆದು ಅರ್ಜಿಯನ್ನು ಅಥವಾ ಅದರ ಸಂಗ್ರಹವನ್ನು ಸಭೆಯ ಮುಂದೆ ಓದುವುದರಿಂದ ಅದನ್ನು ಪರ್ಯಾಲೋಚನೆಗೆ ತರಬಹುದು. ಸಭೆಯು ತನಗೆ ಯುಕ್ತವಾಗಿ ತೋರುವ ರೀತಿಯಲ್ಲಿ ಅರ್ಜಿಯನ್ನು ವ್ಯವಸ್ಥೆ ಮಾಡಬಹುದು.

11. ಸಭೆಗೆ ಪರಕೀಯರನ್ನು ಬಿಡೋಣ.

58. ಸಭೆಯು ಸೇರಿರುವ ಕಾಲಗಳಲ್ಲಿ ಸಭೆಗೆ ಪ್ರವೇಶಿಸಲಪೇಕ್ಷಿಸುವ ಜನಗಳು ಸೆಕ್ರಿಟರಿಗೆ ಬಿನ್ನಹ ಮಾಡಿಕೊಳ್ಳತಕ್ಕದ್ದು, ಆತನು ಅದರ ಮೇಲೆ ಅಧ್ಯಕ್ಷರ ಅಪ್ಪಣೆಯನ್ನು ಪಡೆಯತಕ್ಕದ್ದು.

59. ಸಭೆಯು ಸೇರಿರುವಾಗ ಯಾವಾಗಲಾದರೂ, ಅಧ್ಯಕ್ಷರು ಪರಕೀಯರೆಲ್ಲರೂ ಆಚೆಗೆ ಹೋಗತಕ್ಕದ್ದೆಂದು ಅಪ್ಪಣೆ ಮಾಡಬಹುದು.

60. ಸ್ವಾರ್ಥಗಳಿಗೆ ವಿಶೇಷವಾಗಿ ಸಂಬಂಧಿಸುವ ಒಂದು ಬಿಲ್ಲು ಸಭೆಯ ಅಥವಾ ಅದರ ನಿಯುಕ್ತ ಸಮಾಜದ ಆಲೋಚನೆಯಲ್ಲಿದ್ದು ಯಾವನ ಅರ್ಥಗಳು ಹಾಗೆ ಸಂಬಂಧಿಸಿವೆಯೋ ಅಂಥಾ ಯಾವ ಮನುಷ್ಯನಾದರೂ ಸ್ವತಃ ಅಥವಾ ವಕೀಲನ ಮೂಲಕ ವಿಚಾರಣೆ ಮಾಡಲ್ಪಡುವುದಕ್ಕೆ ಅಪ್ಪಣೆಗಾಗಿ ಸಭೆಗೆ ಅಥವಾ ನಿಯುಕ್ತ ಸಮಾಜಕ್ಕೆ ಬಿನ್ನಹ ಮಾಡಿಕೊಂಡರೆ, ಸಭೆಯು ಅಥವಾ ನಿಯುಕ್ತ ಸಮಾಜವು ಯಾವನಾದರೂ ಸಭಿಕನ ವಿಜ್ಞಾಪನೆಯ ಮೇಲೆ ಯಾವುದರಲ್ಲಿ ವಿಜ್ಞಾಪನೆಯು ಮಾಡಲ್ಪಟ್ಟಿತೋ ಅಂಥಾ ಕೂಟದಲ್ಲಿ ಅಥವಾ ಮುಂದೆ ಯಾವುದಾದರೂ ಗೊತ್ತಾದ ಕಾಲದಲ್ಲಿ ಮತ್ತು ದಿನದಲ್ಲಿ ಅರ್ಜಿದಾರನು ಅಥವಾ ಅವನ ವಕೀಲನು ವಿಚಾರಣೆ ಮಾಡಲ್ಪಡತಕ್ಕದೆಂದು ಅಪ್ಪಣೆ ಮಾಡಬಹುದು; ಮತ್ತು ಅರ್ಜಿದಾರನು ಅಥವಾ ಅವನ ವಕೀಲನು ಸಂದರ್ಭಾನುಸಾರವಾಗಿ ಮೇಲ್ಕಂಡ ಕೂಟದಲ್ಲಿ ಇಲ್ಲದೆ ಇದ್ದರೆ ಅಥವಾ ಮೇಲ್ಕಂಡ ಕಾಲದಲ್ಲಿ ಮತ್ತು ದಿನದಲ್ಲಿ ಬರದೆಹೋದರೆ, ಸಭೆಯಿಂದ ಅಥವಾ ನಿಯುಕ್ತ ಸಮಾಜದಿಂದ ಕೊಡಲ್ಪಟ್ಟ ಅಪ್ಪಣೆಯು ರದ್ದಾದಂತೆ ಭಾವಿಸತಕ್ಕದ್ದು.

61. 4[illegible]ನೆ ಮತ್ತು [illegible]0ನೆ ನಿಬಂಧನೆಗಳಲ್ಲಿ ವಿಧಿಸಿರುವಂತೆ ವಿನಾ ಯಾವ ಪರಕೀಯನೂ ಸಭೆಯನ್ನು ಅಥವಾ ಯಾವ ನಿಯುಕ್ತ ಸಮಾಜವನ್ನೂ ಸಂಬೋಧಿಸಲು ಅಪ್ಪಣೆ ಕೊಡಲ್ಪಡತಕ್ಕದ್ದಿಲ್ಲ.

62. ಸಭೆಯನ್ನು ಅಥವಾ ಒಂದು ನಿಯುಕ್ತ ಸಮಾಜವನ್ನು ಸಂಬೋಧಿಸಲು 60ನೆ ನಿಬಂಧನೆಯ ಮೇರೆ ಅಪ್ಪಣೆ ಕೊಡಲ್ಪಟ್ಟಿರುವ ಯಾವನಾದರೂ ಮನುಷ್ಯನ ವಿಚಾರಣೆಯು, ಅಂಥಾ ಮನುಷ್ಯನ ಹೇಳಿಕೆಯು ಅಸಂಗತವಾಗಿ ಅಥವಾ ಅತಿ ವಿಸ್ತಾರವಾಗಿ ಇದ್ದರೆ, ಅಥವಾ ಮತ್ತಾವುದಾದರೂ ಇತರ ಸಾಕಾದ ಕಾರಣಕ್ಕೋಸ್ಕರ, ನಿಂತುಹೋಗತಕ್ಕದ್ದೆಂದು ಯಾವ ಸಭಿಕನಾದರೂ ವಿಜ್ಞಾಪಿಸಬಹುದು.

12. ಸೆಕ್ರಿಟರಿಯ ಕೆಲಸಗಳು.

63. ಹಿಂದಿನ ನಿಬಂಧನೆಗಳಲ್ಲಿ ವಿವರಿಸಿರುವ ಕೆಲಸಗಳ ಜತೆಗೆ ಈ ಕೆಳಗಿನ ಕೆಲಸಗಳನ್ನು ಮಾಡಲು ಸೆಕ್ರಿಟರಿಯು ಬದ್ಧನಾಗಿರತಕ್ಕದ್ದು:—

1. ಸಭೆಯ ಕಾಗದ ಪತ್ರಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳುವುದು;
2. ವಿಧಿಸಲ್ಪಟ್ಟ ಪುಸ್ತಕಗಳನ್ನು ಇಡುವುದು;
3. ಎಲ್ಲಾ ಕೂಟಗಳಿಗೂ ಒಂದು ನಡವಳಿಕೆಗಳ ಟಿಪ್ಪಣಿಗಳನ್ನು ಬರೆಯುವುದು;
4. ಅಚ್ಚು ಹಾಕಬೇಕೆಂದು ಆಜ್ಞಾಪಿಸಲ್ಪಟ್ಟಿರುವ ಎಲ್ಲಾ ಕಾಗದಗಳ ಅಚ್ಚು ದಾಖಲೆಯನ್ನು ಮೇಲ್ವಿಚಾರಣೆ ಮಾಡುವುದು;
5. ಸಭೆಯಿಂದ ಆಜ್ಞಾಪಿಸಲ್ಪಟ್ಟಿರುವ ತಿದ್ದುಪಾಟುಗಳನ್ನು ಬಿಲ್ಲುಗಳಲ್ಲಿ ಬರೆಯುವುದು, ಮತ್ತು ಛಾಪಿಸುವುದಕ್ಕೆ ಸಂಬಂಧವಾದ ತಪ್ಪುಗಳಿಲ್ಲದಂತೆ ಎಲ್ಲಾ ಬಿಲ್ಲುಗಳನ್ನೂ ರೆಸ್ಯುಲೇಷನ್‌ಗಳನ್ನೂ ಪರಿಶೋಧಿಸುವುದು;

6. ಬಿಲ್ಲುಗಳ ಮತ್ತು ರೆಗ್ಯುಲೇಷನ್‌ಗಳ ಅಂಚಿನ ಸಂಗ್ರಹಗಳನ್ನೂ ಮತ್ತು ಅವುಗಳ ಅಧ್ಯಾಯಗಳ ಹೆಸರುಗಳನ್ನೂ (ಶಿರೋನಾಮೆಗಳು) ಮತ್ತು ವಿವರ್ಗಡನ್ನೂ ಮತ್ತು ಅವುಗಳ ಪ್ರಕರಣಗಳಿಗೆ ಸಂಖ್ಯೆ ಹಾಕೋಣವನ್ನೂ ಸಿದ್ಧಪಡಿಸಿ ತಿದ್ದುಪಾಟು ಮಾಡುವುದು;

7. ಸಭೆಯ ಅಪ್ಪಣೆಯ ಮೇರೆಗೆ ಕಾಗದ ಪತ್ರಗಳನ್ನು ನಡಸುವುದು;

8. ಅಪೇಕ್ಷಿಸಿದಾಗ ಬಿಲ್ಲುಗಳನ್ನು ವಿವರಿಸುವುದರಲ್ಲಿ ಸಹಾಯಮಾಡುವುದು;

9. ಸಭೆಗೆ ಸಾಮಾನ್ಯವಾಗಿ ಸಹಾಯ ಮಾಡುವುದು.

13. ಪುಸ್ತಕಗಳು ಮತ್ತು ಕಾಗದಪತ್ರಗಳು (ರಿಕಾರ್ಡು).

64. ಸಭೆಯ ನಡವಳಿಕೆಗಳ ಸಂಗ್ರಹವು ಅಡಗಿರುವ ಒಂದು ದಿನಚರಿಯನ್ನು (ಜರ್ನಲ್) ಇಡತಕ್ಕದ್ದು. ಈ ದಿನಚರಿಯನ್ನು ಪ್ರತಿ ಕೂಟದ ತರುವಾಯ ಸಾಧ್ಯವಾದಷ್ಟು ಜಾಗ್ರತೆಯಾಗಿ ದೃಢೀಕರಣಕ್ಕಾಗಿಯೂ ರುಜುವಿಗಾಗಿಯೂ ಅಧ್ಯಕ್ಷರಿಗೆ ಕಳುಹಿಸತಕ್ಕದ್ದು.

ಅಂಥಾ ಸಂಗ್ರಹದ ಒಂದು ಪ್ರತಿಯನ್ನು ಪ್ರತಿ ಕೂಟವೂ ಮುಗಿದ ತರುವಾಯ ಸಾಧ್ಯವಾದಷ್ಟು ಜಾಗ್ರತೆಯಾಗಿ ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಸರ್ಕಾರಿ ಗೆಜೆಟಿನಲ್ಲಿಯೂ ಕೂಡ ಪ್ರಕಟಿಸತಕ್ಕದ್ದು.

65. ಸಭೆಯ ವಿಳಾಸಕ್ಕೆ ಬಂದ ಅಥವಾ ಸಭೆಯ ಅಪ್ಪಣೆಯ ಮೇರೆ ರವಾನಿಸಲ್ಪಟ್ಟ ಎಲ್ಲಾ ಕಾಗದಗಳ ಮತ್ತು ಅರ್ಜಿಗಳ ಒಂದು ರಿಜಿಸ್ಟರನ್ನೂ ಅನುಕ್ರಮಣಿಕೆಯನ್ನೂ ಇಡತಕ್ಕದ್ದು.

14. ಸಾಮಾನ್ಯ ವಿಷಯ.

66. ಸಭೆಯು ಒಂದು ವಿಜ್ಞಾಪನೆಯ ಮೇಲೆ ಮತ್ತು ಯಾವ ಕಾಲದಲ್ಲಿಯಾದರೂ, ಮೇಲ್ಕಂಡ ನಿಬಂಧನೆಗಳಲ್ಲಿ ಯಾವುದರ ಉಪಯೋಗವನ್ನಾದರೂ ಕೊಂಚಕಾಲ ನಿಲ್ಲಿಸಬಹುದು.

67. ಯಾವುದರ ವಿಷಯದಲ್ಲಿ ಎರಡು ವರ್ಷಗಳ ಕಾಲಪರಿಯಂತ ಸಭೆಯಲ್ಲಿ ಯಾವ ವಿಜ್ಞಾಪನೆಯೂ ಮಾಡಲ್ಪಡಲಿಲ್ಲವೋ ಅಂಥಾ ಯಾವುದಾದರೂ ಬಿಲ್ಲನ್ನು ಅಧ್ಯಕ್ಷರ ಅಪ್ಪಣೆಯ ಮೇರೆ ಕೆಲಸದ ಪಟ್ಟಿಯಿಂದ ತೆಗೆದುಹಾಕಬಹುದು; ಮತ್ತು ಹಾಗೆ ತೆಗೆದುಹಾಕಿದ ಸಂಗತಿಯನ್ನು ಅಧ್ಯಕ್ಷರು ಸಭೆಗೆ ತಿಳಿಸತಕ್ಕದ್ದು.

68. ದೀವಾನರು ಅಥವಾ ಒಂದು ಬಿಲ್ಲನ್ನು ಕೈಕೊಂಡಿರುವ ಸಭಿಕನು ಇನ್ಯಾರಾದರೂ ಇತರ ಸಭಿಕನಿಗೆ ಅದನ್ನು ಒಪ್ಪಿಸಬಹುದು ಮತ್ತು ಯಾವನಿಗೆ ಅದು ಹಾಗೆ ಒಪ್ಪಿಸಲ್ಪಟ್ಟಿತೊ ಆ ಸಭಿಕನು ಈ ನಿಬಂಧನೆಗಳ ಉದ್ದೇಶಗಳಿಗಾಗಿ ಆ ಬಿಲ್ಲನ್ನು ಕೈಕೊಂಡಿರುವ ಸಭಿಕನಾಗಿರತಕ್ಕದ್ದು.

69. ಯಾವ ಸಭಿಕನಾದರೂ ಸಭೆಯ ಮುಂದೆ ಇರುವ ಕೆಲಸಕ್ಕೆ ಸಂಬಂಧಪಟ್ಟ ಯಾವುದಾದರೂ ಕಾಗದಗಳಿಗಾಗಿ ಅಥವಾ ವರ್ತಮಾನಕ್ಕಾಗಿ ಸೆಕ್ರೆಟರಿಗೆ ಬಿನ್ನಹ ಮಾಡಬಹುದು ಮತ್ತು ದೀವಾನರು ಅಂಥಾ ಕಾಗದಗಳನ್ನು ಅಥವಾ ವರ್ತಮಾನವನ್ನು ಕೊಡಬಹುದೆ ಎಂದು ನಿಶ್ಚಯಿಸತಕ್ಕದ್ದು.

ತಾರೀಖು 9ನೆ ಏಪ್ರೆಲ್ 1907.

ನಂ. 9350—ಸ್ಯಾನಿಟರಿ 124-06-3, 1897ನೆ ಇಸವಿಯ 2ನೆ ನಂಬರಿನ ಸಾಂಕ್ರಾಮಿಕ ವ್ಯಾಧಿಗಳ ರೆಗ್ಯುಲೇಷನಿನ 2ನೆ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಈ ಕೆಳಗೆ ನಮೂದಿಸುವ ರೆಗ್ಯುಲೇಷನನ್ನು ಹುಟ್ಟಿಸಲು ಹುಕುಂ ದಯಪಾಲಿಸುತ್ತಾರೆ:

ಪ್ಲೇಗ್ ಜಾಡ್ಯ ಸೋಂಕು ಹೋಗಲಾಡಿಸುವ ವಗೈರೆ ಏರ್ಪಾಡುಗಳನ್ನು ಮಾಡುವುದರ ಮೂಲಕ ಜನಗಳ ಸೌಖ್ಯವನ್ನು ಕಾಪಾಡುವುದಕ್ಕೂ ರೋಗದ ಸೋಂಕು ಹರಡದಂತೆ ಮಾಡುವುದಕ್ಕೂ ಅನುಕೂಲಿಸುವಹಾಗೆ, ಮೈಸೂರು ನಗರದ ಎಲ್ಲಾ ಜನರೂ ತಮ್ಮ ಮನೆಗಳಲ್ಲಿ ಸತ್ತ ಇಲಿಗಳನ್ನು ಕಂಡದ್ದನ್ನು ಕುರಿತು ಹಾಗೆ ಕಂಡ 12 ಘಂಟೆಗಳ ಒಳಗಾಗಿ ಹೆಲ್ತ್ ಆಫಿಸರ್ ಯಾ ಆರೋಗ್ಯಾಧಿಕಾರಿಗಾಗಲಿ ಅಥವಾ ಆರೋಗ್ಯಾಧಿಕಾರಿಗೆ ತಿಳಿಸುವ ಬಗ್ಗೆ ಅತ್ಯಂತ ಸಮೀಪದಲ್ಲಿರುವ ಪೋಲೀಸು ಸ್ಟೇಷನ್ ಹೌಸ್ ಯಾ ಠಾಣೆಯ ಆಫೀಸರಿಗಾಗಲಿ ರಿಪೋರ್ಟು ಮಾಡತಕ್ಕದ್ದು.

ತಾರೀಖು 16ನೆ ಏಪ್ರೆಲ್ 1907.

ನಂ. ಜಿ. 3183—Regis. 20-06—2, 1904ನೆ ಇಸವಿಯ IIIನೆಯ ನಂಬರು ರೆಗ್ಯುಲೇಷನಾದ (ಗ್ರಂಥ ಸಮುದಾಯಕ್ಕೂ, ಶಾಸ್ತ್ರಕ್ಕೂ ಮತ್ತು ಧರ್ಮಕಾರ್ಯಕ್ಕೂ ಸಂಬಂಧಪಡುವ) ಸಂಘಗಳ ರಿಜಿಸ್ಟ್ರೇಷನ್ ಬಗ್ಗೆ ಆದ ರೆಗ್ಯುಲೇಷನಿನ 4ನೆಯ ಪ್ರಕರಣದ ಮೇರೆಗೆ ಸಂಘಗಳ ರಿಜಿಸ್ಟ್ರೇಷನ್ ಬಗ್ಗೆ ಕೊಡಲ್ಪಡತಕ್ಕ ಫೀಸು, ಮತ್ತೊಂದು ಹುಕುಂ ಕೊಡುವ ವರೆಗೆ, ಇಪ್ಪತ್ತು ರೂಪಾಯಿಗಳಿಂದ ಹತ್ತು ರೂಪಾಯಿಗಳಿಗೆ ಇಳಿಸಿ ಮಾಡಲ್ಪಡತಕ್ಕದ್ದೆಂದು, ಶ್ರೀಮನ್ ಮಹಾರಾಜರವರ ಸರ್ಕಾರದವರು ಆಜ್ಞಾಪಿಸಿರುತ್ತಾರೆ.

ಅಪ್ಪಣೆಯ ಮೇರೆಗೆ,
ಕೆ. ಎಸ್. ಚಂದ್ರಶೇಖರ ಅಯ್ಯರ್,
ಸೆಕ್ರೆಟರಿ.

ಮೈಸೂರು ಗೆಜೆಟ್.

ನಂ. 42.] ಸರ್ಕಾರದಿಂದ ಪ್ರಕಟಿಸಲ್ಪಟ್ಟ ಪತ್ರಿಕೆ. [ನಂ. 17.

ಬೆಂಗಳೂರು, ಗುರುವಾರ, ಏಪ್ರೈಲ್ ತಾ॥ 25, ಸ್ ೧ 1907.

IIIನೆ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವ್ ಇಲಾಖೆ.

ತಾರೀಖು 20ನೆ ಮಾರ್ಚಿ 1907.

ನಂಬರು ಜೆ. 2916—ಲೆಜಿಸ್. 47-1906.

ಇಸ್ತಿಹಾರ್ನಾಮೆ.

ನ್ಯಾಯಗಳನ್ನೂ (ಕಾನೂನು) ಮತ್ತು ರೆಗ್ಯುಲೇಷನ್‍ಗಳನ್ನೂ ಮಾಡುವುದರಲ್ಲಿ ಸಹಾಯಮಾಡುವುದಕ್ಕೆ ಕಾರ್ಯತಃ ಅನುಭವದಿಂದಲೂ, ಸ್ಥಳೀಯ ವಿದ್ಯಮಾನಗಳ ಮತ್ತು ಆವಶ್ಯಕತೆಗಳ ಪರಿಚಯದಿಂದಲೂ ಯೋಗ್ಯರಾಗಿರುವ ಸರ್ಕಾರಿ ಉದ್ಯೋಗಸ್ಥರಾದ ಮತ್ತು ಸರ್ಕಾರಿ ಉದ್ಯೋಗಸ್ಥರಲ್ಲದ ಕೆಲವು ದೊಡ್ಡ ಮನುಷ್ಯರನ್ನು ನ್ಯಾಯವಿಧಾಯಕದ ಕೆಲಸದಲ್ಲಿ ತಮ್ಮ ಸರ್ಕಾರದೊಡನೆ ಸೇರಿಸುವ ಕಾಲವು ಪ್ರಾಪ್ತವಾಗಿದೆಯೆಂದೂ, ಆಲೋಚಿಸಿರುವ ಉಪಾಯಗಳನ್ನು ಕೆಲವು ಯೋಗ್ಯರಾದ ಮನುಷ್ಯರು ಚರ್ಚಿಸಿ ನಾನಾಮುಖವಾಗಿ ಅವುಗಳನ್ನು ಪರ್ಯಾಲೋಚಿಸುವುದರ ಪ್ರಯೋಜನವು ಅವುಗಳಿಗೆ ಉಂಟಾಗುವಹಾಗೆ ಸರ್ಕಾರಿ ಉದ್ಯೋಗಸ್ಥರೂ ಉದ್ಯೋಗಸ್ಥರಲ್ಲದವರೂ ಸೇರಿರುವ ಒಂದು ನ್ಯಾಯವಿಧಾಯಕ ಸಭೆಯನ್ನು ಏರ್ಪಡಿಸುವುದು ಅವಶ್ಯಕವೆಂದೂ, ಶ್ರೀಮನ್ಮಹಾರಾಜರವರು ಆಲೋಚಿಸುತ್ತಾರೆ. ಇಂಥಾ ಯಾವುದಾದರೂ ಸಭೆಯ ಏರ್ಪಾಡು ಸಂಸ್ಥಾನದ ಆಡಳಿತಕ್ಕೆ ಸಂಬಂಧಪಟ್ಟ ಇತರ ಎಲ್ಲಾ ವಿಷಯಗಳಲ್ಲಿಯೂ ಇರುವಂತೆ ನ್ಯಾಯವಿಧಾಯಕ ಮಾಡುವುದರಲ್ಲಿ ಕಡೆಗೆ ಶ್ರೀಮನ್ಮಹಾರಾಜರವರಿಗೆ ಮಾತ್ರವೇ ಸೇರಿರುವ ಜವಾಬ್ದಾರಿಯನ್ನು ಯಾವ ರೀತಿಯಿಂದಲೂ ಬಾಧಿಸುವಂತೆ ಅಥವಾ ಕಡಮೆ ಮಾಡುವಂತೆ ಉದ್ದೇಶಿಸಿ ಇಲ್ಲವೆಂದು ಹೇಳಬಹುದು. ಆದರೆ ಜನಗಳ ಕೊರತೆಗಳನ್ನೂ ಇಚ್ಛೆಗಳನ್ನೂ ಅನುಭವಗಳನ್ನೂ ಯಥಾರ್ಥವಾಗಿ ತಿಳಿದುಕೊಂಡು ಮೈಸೂರು ಸಂಸ್ಥಾನವನ್ನು ಆಳುವವರಾಗಿ ತಮ್ಮಿಂದ ವಿಧಿಸಲ್ಪಟ್ಟ ನ್ಯಾಯಗಳು (ಕಾನೂನು) ಎಲ್ಲಾ ಪ್ರಕಾರದಲ್ಲೂ ಅವುಗಳ ಉದ್ದೇಶಗಳಿಗೆ ಚೆನ್ನಾಗಿ ತಕ್ಕವಾಗಿರುವಂತೆ ಭದ್ರಪಡಿಸಲು ಶ್ರೀಮನ್ಮಹಾರಾಜರವರಿಗೂ ಅವರ ಸರ್ಕಾರಕ್ಕೂ ಅನುಕೂಲಮಾಡಿ ಕೊಡುವುದು ಒಂದೇ ಮೇಲ್ಕಂಡ ಸಭೆಯನ್ನು ಏರ್ಪಡಿಸುವುದರ ಉದ್ದೇಶವಾಗಿದೆ. ಮೇಲ್ಕಂಡ ಸಭೆಯಲ್ಲಿ ಚರ್ಚೆಗಳನ್ನು ಸಾಧಾರಣವಾಗಿ ಬಹಿರಂಗವಾಗಿ ನಡೆಸೋಣವೂ, ಕ್ರಮವಾಗಿ ಏರ್ಪಡಿಸಿದ ನ್ಯಾಯವಿಧಾಯಕ ಸಭೆಗೆ ಮುಖ್ಯವಾದ ಲಕ್ಷಣಗಳಲ್ಲಿ ಒಂದಾಗಿರುವ ಸೆಲೆಕ್ಟ್ ಕಮಿಟಿ ಅಥವಾ ನಿಯುಕ್ತ ಸಮಾಜದಲ್ಲಿ ಪ್ರತಿ ಉಪಾಯವನ್ನೂ ತಪಶೀಲುವಾರಾಗಿ ಆಲೋಚಿಸುವುದಕ್ಕೆ ಉಂಟಾಗುವ ಅನುಕೂಲವೂ, ಮೇಲ್ಕಂಡ ಸಭೆಯಿಂದ ಕಾರ್ಯತಃ ಬಹಳ ಒಳ್ಳೆಯದು ಆಗಬಹುದೆಂದು ನಿರೀಕ್ಷಿಸುವುದಕ್ಕೆ ಹೆಚ್ಚು ಕಾರಣಗಳಾಗಿವೆ.

ಈ ಕಾರಣಗಳಿಂದ ಮೈಸೂರಿನಲ್ಲಿ ನ್ಯಾಯಗಳನ್ನೂ (ಕಾನೂನು) ರೆಗ್ಯುಲೇಷನ್‍ಗಳನ್ನೂ ಏರ್ಪಡಿಸುವುದಕ್ಕಾಗಿ ಒಂದು ಸಭೆಯನ್ನು ಸ್ಥಾಪಿಸುವುದಕ್ಕೋಸ್ಕರ ಇದಕ್ಕೆ ಲಗತ್ತುಮಾಡಿರುವ ರೆಗ್ಯುಲೇಷನನ್ನು ವಿಧಿಸಲು ಶ್ರೀಮನ್ಮಹಾರಾಜರವರು ಅಪ್ಪಣೆ ದಯಪಾಲಿಸಿರುತ್ತಾರೆ.

2. ಮೊದಲು ಸಲ ಪ್ರಕಟನೆಯಾದ ತಾರೀಖಿನಿಂದ ಮೂರು ತಿಂಗಳುಗಳು ತೀರಿದ ಮೇಲೆ ಜಾರಿಗೆ ಬರುವ ಈ ರೆಗ್ಯುಲೇಷನ್ ಪ್ರಕಾರ ನ್ಯಾಯವಿಧಾಯಕ ಸಭೆಯಲ್ಲಿ ದಿವಾನರು ಸಭಾಧ್ಯಕ್ಷರಾಗಿಯೂ ಇಬ್ಬರು ಕೌನ್ಸಿಲರುಗಳೂ ಉದ್ಯೋಗಪ್ರಯುಕ್ತವಾದ ಸಭಿಕರಾಗಿಯೂ ಸರ್ಕಾರದಿಂದ ನೇಮಿಸಲ್ಪಟ್ಟು, ಒಂದು ಸಾರಕ್ಕೆ ಎರಡು ವರ್ಷಗಳ ಕಾಲಪರ್ಯಂತ ಉದ್ಯೋಗದಲ್ಲಿರುವ ಹತ್ತಕ್ಕೆ ಕಡಮೆಯಿಲ್ಲದ ಅಥವಾ ಹದಿನೈದಕ್ಕೆ ಮೀರದ ಹೆಚ್ಚು ಸಭಿಕರೂ ಸೇರಿರುವರು. ಅಂಥಾ ಹೆಚ್ಚು ಸಭಿಕರಲ್ಲಿ ಐವರಲ್ಲಿ ಎರಡುಭಾಗಕ್ಕೆ ಕಡಮೆಯಿಲ್ಲದಷ್ಟು ಮಂದಿ ಉದ್ಯೋಗಸ್ಥರಲ್ಲದವರಾಗಿರಬೇಕು ಮತ್ತು ಸರ್ಕಾರದಿಂದ ನೇಮಕವಾಗುವುದಕ್ಕೆ ಮುಂಚೆ ಉದ್ಯೋಗಸ್ಥರಲ್ಲದ ಸಭಿಕರ ಪೈಕಿ ಎಲ್ಲರನ್ನೂ ಅಥವಾ ಅವರಲ್ಲಿ ಯಾರನ್ನಾದರೂ ಆರಿಸುವುದಕ್ಕೆ ಷರತ್ತುಗಳನ್ನು ಗೊತ್ತುಮಾಡಲು ನಿಯಮಮಾಡಿದೆ. ಪ್ರಕೃತದಲ್ಲಿ ಹೆಚ್ಚು ಸಭಿಕರ ಸಂಖ್ಯೆಯನ್ನು ಹತ್ತಕ್ಕೆ ಗೊತ್ತುಮಾಡಿ ನೇಮಕಗಳನ್ನೆಲ್ಲಾ ಸರ್ಕಾರದವರ ಕೈಯಲ್ಲಿ ಇಟ್ಟುಕೊಳ್ಳಲಾಗುವುದು. ಸ್ಥಳೀಯ ಸಂಘಗಳಿಗೆ ಪ್ರಶಂಸೆಗಳನ್ನು ಕಳುಹಿಸುವ ಸ್ವಾತಂತ್ರ್ಯವನ್ನು ಕೊಡುವ ವಿಷಯವನ್ನು ಮುಂದೆ ಸಾಕಾದಷ್ಟು ಅನುಭವವುಂಟಾದಮೇಲೆ ಪರ್ಯಾಲೋಚಿಸಲಾಗುವುದು. ನೇಮಕಮಾಡಲ್ಪಟ್ಟ ಹೆಚ್ಚು ಸಭಿಕರ ಹೆಸರುಗಳನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗುವುದು.

3. ನ್ಯಾಯವಿಧಾಯಕ ಸಭೆಯಲ್ಲಿ ಕೆಲಸ ನಡೆಯೋಣವನ್ನು ಕ್ರಮಪಡಿಸುವುದಕ್ಕೆ ಆಗಾಗ್ಗೆ ಅವಶ್ಯವಾಗಬಹುದಾದ ನಿಬಂಧನೆಗಳನ್ನು ಮಾಡುವುದು ಸದರಿ ಸಭೆಯ ಕೆಲಸವಾಗಿದ್ದರೂ ಅಂಥಾ ನಿಬಂಧನೆಗಳಲ್ಲಿ ಯಾವುದಕ್ಕೋಸ್ಕರ ನಿಯಮ ಮಾಡಬೇಕೆಂದು ಉದ್ದೇಶಿಸಿದೆಯೋ ಅದಕ್ಕೆ ಉದಾಹರಣೆಯಾಗಿಯೂ, ಅಂಥಾ ನಿಬಂಧನೆಗಳನ್ನು ಹೆಚ್ಚಿಸುವುದಕ್ಕೆ ಅಥವಾ ಬದಲಾಯಿಸುವುದಕ್ಕೆ ಆವಶ್ಯಕತೆ ತೋರುವವರೆಗೆ ಮೇಲ್ಕಂಡ ಹೊಸ ಸಭೆಯ ಬಾಲ್ಯದಲ್ಲಿ ಎಲ್ಲಾ ಉದ್ದೇಶಗಳಿಗೂ ಕಾರ್ಯತಃ ಸಾಕಾಗಿರಬಹುದಾದವುಗಳಾಗಿಯೂ, ಮೇಲ್ಕಂಡ ರೆಗ್ಯುಲೇಷನಿನ ಕೊನೆಯಲ್ಲಿರುವ ಪಟ್ಟಿಯಲ್ಲಿ ಮೇಲ್ಕಂಡ ವಿಷಯವನ್ನು ಕುರಿತು ಕೆಲವು ನಿಬಂಧನೆಗಳನ್ನು ಕೊಡುವುದು ಅನುಕೂಲವಾಗಿರುವುದೆಂದು ಯೋಚಿಸಿ ಇದೆ. ಸಭೆಯಿಂದ ಮಾಡಲ್ಪಟ್ಟ ಎಲ್ಲಾ ನಿಬಂಧನೆಗಳನ್ನೂ ಅಥವಾ ಅವುಗಳಲ್ಲಿ ಯಾವುದನ್ನಾದರೂ ಒಪ್ಪದಿರುವ ಹಕ್ಕನ್ನು ಸರ್ಕಾರಕ್ಕೆ ಉಳಿಸಿಕೊಂಡಿದ್ದರೂ, ಅದನ್ನು ಸಹಜವಾಗಿ ಸಭೆಯಿಂದ ಮಾಡಲ್ಪಟ್ಟ ಒಂದು ನಿಬಂಧನೆಯು ಸಭೆಯ ಕೆಲಸವು ಕಾರ್ಯಸಾಧಕವಾಗಿ ಹೊಂದಿಕೆಯಾಗಿ ಅಥವಾ ತ್ವರೆಯಾಗಿ ನಡೆಯುವುದಕ್ಕೆ ಅನನುಕೂಲವಾಗಿರಬಹುದಾದ ಅಪರೂಪವಾದ ಸಂದರ್ಭಗಳಲ್ಲಿ ಮಾತ್ರ ನಡೆಸಲಾಗುವುದು.

4. ಸಭೆಯ ಕೂಟಗಳಲ್ಲಿ ನಡೆಸಬೇಕಾಗಿರುವ ಕೆಲಸವನ್ನೂ ಅಲ್ಲಿ ಪ್ರಸ್ತಾಪಿಸಲ್ಪಟ್ಟ ಉಪಾಯಗಳನ್ನೂ "ಆಲೋಚಿಸಿ ನಿರ್ಣಯಿಸುವುದಕ್ಕೆ" ಮಾತ್ರ ನಿಬಂಧಿಸಲ್ಪಡುವುದು. ಪ್ರತಿ ಉಪಾಯದ ವಿಧಿಯನ್ನೂ ವಿಧಿಸೋಣವು ಶ್ರೀಮನ್ಮಹಾರಾಜರವರಿಗೆ ಸೇರಿರುತ್ತದೆ ಮತ್ತು ಅಂಥಾ ಉಪಾಯಕ್ಕೆ ಅವರ ಅನುಜ್ಞೆಯನ್ನು ಕೊಡೋಣದರಿಂದ ಅದು ನ್ಯಾಯವಿಧಿಯಾಗಿ ಆಗುತ್ತದೆ. 12ನೆ ಪ್ರಕರಣಕ್ಕೆ ಲಗತ್ತುಮಾಡಿರುವ ನಿಯಮವು ಈ ರಾಜ್ಯಕ್ಕೂ ಬ್ರಿಟಿಷ್ ಸಾಮ್ರಾಜ್ಯಕ್ಕೂ ಇರುವ ಸಂಬಂಧಗಳಿಗೆ ಸೇರಿರುವ ಎಲ್ಲಾ ವಿಷಯಗಳನ್ನೂ ಹಾಗೆಯೇ ಸರ್ಕಾರದ ಪರ್ಯಾಲೋಚನೆಗಾಗಿ ಶ್ರೀಮನ್ಮಹಾರಾಜರವರಿಂದ ವಿಶೇಷವಾಗಿ ಉಳಿಸಿಇಡಲ್ಪಡಬಹುದಾದ ಯಾವುದಾದರೂ ಇತರ ವಿಷಯಗಳನ್ನೂ ಸಭೆಯ ಆಲೋಚನೆಗಳಿಂದ ಪ್ರತಿಷೇಧಿಸುತ್ತದೆ. ಅಂಥಾ ಎಲ್ಲಾ ಸಂದರ್ಭಗಳಲ್ಲಿಯೂ 14ನೆ ಪ್ರಕರಣದಿಂದ ಉಳಿಸಿಡಲ್ಪಟ್ಟಿರುವ ಅಧಿಕಾರದ ಮೂಲಕ ಅವಶ್ಯವಾದ ರೆಗ್ಯುಲೇಷನ್‌ಗಳನ್ನು ಏರ್ಪಡಿಸಿ ಅವನ್ನು ಶ್ರೀಮನ್ಮಹಾರಾಜರವರ ಅನುಜ್ಞೆಗೆ ಕಳುಹಿಸುವುದು ಸರ್ಕಾರಕ್ಕೆ ಯೋಗ್ಯವಾಗಿರುವುದು.

5. ಯಾವುವು ನ್ಯಾಯವಿಧಾಯಕ ಸಭೆಯ ಅಧಿಕಾರಕ್ಕೆ ಹೊರಗಾಗಿಲ್ಲದೆ ಇದ್ದರೂ ಅತ್ಯವಶ್ಯವಾಗಿ ಬೇಕಾಗಿದ್ದು ಅವುಗಳನ್ನು ಕ್ರಮವಾಗಿ ಸಭೆಯಲ್ಲಿ ಪ್ರಸ್ತಾಪಿಸಿ ಆಲೋಚಿಸಿ ನಿರ್ಣಯಿಸುವುದಕ್ಕೆ ಬಹಳ ಕಾಲ ವಿಳಂಬವಾಗಬಹುದೋ ಅಥವಾ ಹಾಗೆ ಮಾಡುವುದು ಅನ್ಯಥಾ ಅಯುಕ್ತವಾಗಿರಬಹುದೋ ಅಂಥಾ ಉಪಾಯಗಳನ್ನು ನಿರ್ಣಯಿಸುವುದಕ್ಕೆ 15ನೆ ಪ್ರಕರಣದಲ್ಲಿ ವಿಶೇಷ ನಿಯಮ ಮಾಡಿದೆ. ಆದಾಗ್ಯೂ ಅಂಥಾ ರೆಗ್ಯುಲೇಷನ್‌ಗಳು ಆರು ತಿಂಗಳಿಗಿಂತ ಹೆಚ್ಚಾಗಿ ಉಪಯೋಗದಲ್ಲಿರುವಂತೆ ಉದ್ದೇಶಿಸಲ್ಪಟ್ಟಿಲ್ಲ; ಆ ಕಾಲಕ್ಕೆ ಮೀರಿ ಅವುಗಳನ್ನು ಉಪಯೋಗದಲ್ಲಿ ಇಡಬೇಕಾದರೆ ಎಲ್ಲಾ ಉಪಾಯಗಳನ್ನೂ ಪದ್ಧತಿಮೇರೆ ಆಲೋಚನೆ ಬಗ್ಗೆ ಸಭೆಯ ಮುಂದೆ ಕ್ರಮವಾದ ಮಾರ್ಗದಲ್ಲಿ ಇಡುವಹಾಗೆ ಆ ವಿಷಯವನ್ನೂ ಇಡಲಾಗುವುದು.

ಅಪ್ಪಣೆಯ ಮೇರೆಗೆ,

ಕೆ. ಎಸ್. ಚಂದ್ರಶೇಖರ ಐಯ್ಯರ್,

ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.

1907ನೆ ಇಸವಿಯ 1ನೆ ನಂಬರ ರೆಗ್ಯುಲೇಷನ್.

(1907ನೆ ಇಸವಿಯ ಮಾರ್ಚಿ 6ನೆ ತಾರೀಖಿನಲ್ಲಿ ನಿರ್ಣಯಿಸಲಾಯಿತು).

ಮೈಸೂರು ಸೀಮೆಯಲ್ಲಿ ನ್ಯಾಯ ವಿಧಾಯಕ ಸಭೆಯನ್ನು ಸ್ಥಾಪಿಸಲು ಹುಟ್ಟಿದ ರೆಗ್ಯುಲೇಷನ್.

ಪೀಠಿಕೆ.

ಮೈಸೂರು ಸೀಮೆಯಲ್ಲಿ ನ್ಯಾಯಗಳನ್ನೂ (ಕಾನೂನು) ರೆಗ್ಯುಲೇಷನ್‌ಗಳನ್ನೂ ಏರ್ಪಡಿಸಲು ಒಂದು ಸಭೆಯನ್ನು ಸ್ಥಾಪಿಸುವುದು ಯುಕ್ತವಾಗಿರುವುದರಿಂದ; ಶ್ರೀಮನ್ ಮಹಾರಾಜರವರು ಈ ಕೆಳಗಿನಂತೆ ವಿಧಿಸಲು ಅಪ್ಪಣೆ ದಯಪಾಲಿಸುತ್ತಾರೆ:—

ಚಿಕ್ಕ ಹೆಸರು.

1. (1) ಈ ರೆಗ್ಯುಲೇಷನನ್ನು 1907ನೆ ಇಸವಿಯ ಮೈಸೂರು ನ್ಯಾಯ ವಿಧಾಯಕ ಸಭೆಯ ರೆಗ್ಯುಲೇಷನ್ ಎಂದು ಕರೆಯಬಹುದು.

ಪ್ರಾರಂಭ.

(2) ಇದು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟವಾದ ತಾರೀಖಿನಿಂದ ಮೂರು ತಿಂಗಳುಗಳು ಕಳೆದ ತರುವಾಯ ಉಪಯೋಗದಲ್ಲಿ ಬರತಕ್ಕದ್ದು.

ಅರ್ಥ ವಿವರಣೆಯ ವಾಕ್ಯ.

2. ಈ ರೆಗ್ಯುಲೇಷನಿನಲ್ಲಿ ವಿಷಯದಲ್ಲಿ ಅಥವಾ ಪೂರ್ವಾಪರ ಸಂಬಂಧದಲ್ಲಿ ಏನಾದರೂ ವಿರೋಧವಾಗಿದ್ದ ಹೊರತು,

(1) "ಕೌನ್ಸಿಲರ್" ಎಂದರೆ, ಸಂಸ್ಥಾನದ ಆಡಳಿತವನ್ನು ನಡೆಸುವುದರಲ್ಲಿ ಸಹಾಯ ಮಾಡಲು ನೇಮಕ ಮಾಡಲ್ಪಟ್ಟ ಶ್ರೀಮನ್ ಮಹಾರಾಜರವರ ಸಭೆಯ ಒಬ್ಬ ಸಭಿಕನೆಂದು ಅರ್ಥ.

(2) "ನ್ಯಾಯ ವಿಧಾಯಕ ಸಭೆ ಅಥವಾ ಸಭೆ" ಎಂದರೆ, ನ್ಯಾಯಗಳನ್ನೂ ರೆಗ್ಯುಲೇಷನ್‌ಗಳನ್ನೂ ಮಾಡಲು 3ನೆ ಪ್ರಕರಣದ ಮೇರೆ ನೇಮಕ ಮಾಡಲ್ಪಟ್ಟ ಸಭೆಯೆಂದು ಅರ್ಥ.

(3) "ಸಭಿಕ" ಎಂದರೆ, ನ್ಯಾಯವಿಧಾಯಕ ಸಭೆಯ ಸಭಿಕನೆಂದು ಅರ್ಥ.

ನ್ಯಾಯ ವಿಧಾಯಕ ಸಭೆಯ ಏರ್ಪಾಡು.

3. ನ್ಯಾಯಗಳನ್ನೂ ರೆಗ್ಯುಲೇಷನ್‌ಗಳನ್ನೂ ಮಾಡುವುದಕ್ಕೋಸ್ಕರ ಒಬ್ಬ ಅಧ್ಯಕ್ಷರನ್ನೂ ಇಬ್ಬರು ಉದ್ಯೋಗ ಪ್ರಯುಕ್ತವಾದ ಸಭಿಕರನ್ನೂ ಮತ್ತು ಆಗಾಗ್ಗೆ ಶ್ರೀಮನ್ ಮಹಾರಾಜರವರ ಸರ್ಕಾರದವರು ಗೊತ್ತು ಮಾಡಬಹುದಾದ ಹತ್ತಕ್ಕೆ ಕಡಮೆಯಿಲ್ಲದ ಅಥವಾ ಹದಿನೈದಕ್ಕೆ ಮೀರದಷ್ಟು ಮಂದಿ ಹೆಚ್ಚು ಸಭಿಕರುಳ್ಳ ನ್ಯಾಯವಿಧಾಯಕ ಸಭೆಯೆಂದು ಕರೆಯಲ್ಪಡುವ ಒಂದು ಸಭೆಯು ಇರತಕ್ಕದ್ದು.

ಅಧ್ಯಕ್ಷರೂ ಸಭಿಕರೂ.

4. (1) ದಿವಾನರು ನ್ಯಾಯ ವಿಧಾಯಕ ಸಭೆಯ ಉದ್ಯೋಗ ಪ್ರಯುಕ್ತವಾದ ಅಧ್ಯಕ್ಷರಾಗಿಯೂ, ಕೌನ್ಸಿಲರುಗಳು ಅದರ ಉದ್ಯೋಗ ಪ್ರಯುಕ್ತವಾದ ಸಭಿಕರಾಗಿಯೂ ಇರತಕ್ಕದ್ದು.

(2) ಉಳಿದ ಸಭಿಕರು ಆಗಾಗ್ಗೆ ಸರ್ಕಾರದಿಂದ ನೇಮಿಸಲ್ಪಡತಕ್ಕದ್ದು; ಆದರೆ, ಹಾಗೆ ನೇಮಿಸಲ್ಪಟ್ಟ ಮನುಷ್ಯರಲ್ಲಿ ಐದರಲ್ಲಿ ಎರಡು ಭಾಗಕ್ಕೆ ಕಡಮೆಯಿಲ್ಲದಷ್ಟು ಮಂದಿ ಸರಕಾರದ ಉದ್ಯೋಗಸ್ಥರಲ್ಲದ ಜನಗಳಾಗಿ, ಎಂದರೆ, ಅಂಥಾ ನೇಮಕದ ಕಾಲದಲ್ಲಿ ಸರ್ಕಾರದ ಉದ್ಯೋಗದಲ್ಲಿ ಇಲ್ಲದವರಾಗಿ ಇರತಕ್ಕದ್ದು; ಮತ್ತು ಸರ್ಕಾರಿ ನೌಕರಿಯನ್ನು ಅಂಗೀಕರಿಸುವ ಸರಕಾರದ ಉದ್ಯೋಗಸ್ಥನಲ್ಲದ ಸಭಿಕನ ಸಭೆಯಲ್ಲಿನ ಸ್ಥಾನವು ಅಂಥಾ ಅಂಗೀಕಾರ ಮಾಡಿದಾಗ ಬರಿದಾಗತಕ್ಕದ್ದು.

ಸರಕಾರಿ ಉದ್ಯೋಗಸ್ಥರಲ್ಲದ ಸಭಿಕರನ್ನು ಆರಿಸುವುದಕ್ಕೆ ನಿಬಂಧನೆಗಳನ್ನು ಮಾಡಲು ಅಧಿಕಾರ.

5. ಶ್ರೀಮನ್ ಮಹಾರಾಜರವರ ಸರ್ಕಾರದವರು, ಯಾವುವುಗಳ ಮೇರೆ ನ್ಯಾಯವಿಧಾಯಕ ಸಭೆಯು ಸರ್ಕಾರಿ ಉದ್ಯೋಗಸ್ಥರಲ್ಲದ ಎಲ್ಲಾ ಸಭಿಕರೂ, ಅಥವಾ ಅವರ ಪೈಕಿ ಯಾರಾದರೂ ನೇಮಕದ ಬಗ್ಗೆ ಆರಿಸಲ್ಪಡತಕ್ಕದ್ದೋ ಅಂಥಾ ನಿಯಮಗಳನ್ನು ಕುರಿತು ನಿಬಂಧನೆಗಳನ್ನು ಆಗಾಗ್ಗೆ ಮಾಡಬಹುದು.

ಸಭಿಕತನದ ಕಾಲ ಮತ್ತು ಸಭೆಗೆ ಕೂಟಕ್ಕೆ ಕರೆಯಲ್ಪಡುವುದಕ್ಕೆ ಸಭಿಕರ ಬಾಧ್ಯತೆ.

6. ಸಭೆಯ ಸಭಿಕನಾಗಿ ನೇಮಿಸಲ್ಪಡುವ ಪ್ರತಿ ಮನುಷ್ಯನೂ ಎರಡು ವರ್ಷಗಳ ಕಾಲಪರ್ಯಂತ ಅಂಥಾ ಸಭಿಕನಾಗಿ ಇರತಕ್ಕದ್ದು, ಮತ್ತು, ಅಂಥಾ ಕಾಲದಲ್ಲಿ ಅವನು ನ್ಯಾಯಗಳನ್ನೂ (ಕಾನೂನು) ರೆಗ್ಯುಲೇಷನ್‌ಗಳನ್ನೂ ಮಾಡುವುದಕ್ಕೋಸ್ಕರ ನಡೆಯುವ ಎಲ್ಲಾ ಕೂಟಗಳಿಗೂ ಕರೆಯಲ್ಪಡತಕ್ಕದ್ದು.

ಸಭಿಕತನವು ಯಾವಾಗ ಬರಿದಾಗತಕ್ಕದ್ದು.

7. (1) ಸಭೆಯ ಯಾವ ಸಭಿಕನಿಗಾದರೂ ಯಾವ ಕಾಲದಲ್ಲಿಯಾದರೂ ತನ್ನ ಉದ್ಯೋಗಕ್ಕೆ ರಾಜಿನಾಮೆ ಕೊಡುವುದು ನ್ಯಾಯವಾಗಿರತಕ್ಕದ್ದು, ಮತ್ತು, ಅಂಥಾ ರಾಜಿನಾಮೆಯು ಶ್ರೀಮನ್ ಮಹಾರಾಜರವರ ಸರ್ಕಾರದಿಂದ ಅಂಗೀಕರಿಸಲ್ಪಟ್ಟಾಗ ಅಂಥಾ ಉದ್ಯೋಗವು ಬರಿದಾಗತಕ್ಕದ್ದು.

(2) ಸಭೆಯ ಯಾವನಾದರೂ ಸಭಿಕನ ಮೇಲೆ ನೀತಿಗೇಡಿತನಕ್ಕೆ ಸಂಬಂಧಿಸುವ ಯಾವುದಾದರೂ ತಪ್ಪು ಸ್ಥಾಪಿಸಲ್ಪಟ್ಟಾಗ ಅಥವಾ ಆತನು ದಿವಾಳಿಯೆಂದು ಪ್ರಕಟಿಸಲ್ಪಟ್ಟಾಗ, ಅಥವಾ ದಿವಾಳಿತನದ ಕಾರಣದ ಮೇಲೆ ತನ್ನ ಸಾಲಗಳನ್ನು ತೀರಿಸುವ ಜವಾಬ್ದಾರಿಯಿಂದ ಬಿಡಿಸಲ್ಪಡುವಂತೆ ಕೇಳಿಕೊಳ್ಳುವಾಗ ಅವನ ಉದ್ಯೋಗವು ಬರಿದಾಗತಕ್ಕದ್ದು.

(3) ಒಬ್ಬ ಉದ್ಯೋಗಸ್ಥನಾದ ಸಭಿಕನು ತನ್ನ ಸರ್ಕಾರದ ಉದ್ಯೋಗದಿಂದ ತೆಗೆದು ಬಿಡಲ್ಪಟ್ಟಾಗ ಅಥವಾ ನಿವೃತ್ತನಾದಾಗ ತನ್ನ ಸ್ಥಾನವನ್ನು ಬರಿದುಮಾಡತಕ್ಕದ್ದು.

ವಿವರಣೆ—ಯಾವನಾದರೂ ಸಭಿಕನ ಮೇಲೆ ಸ್ಥಾಪಿಸಲ್ಪಟ್ಟ ರುಜುವಾದ ತಪ್ಪು ನೀತಿಗೇಡಿತನಕ್ಕೆ ಸಂಬಂಧಿಸುತ್ತದೆಯೋ ಎಂಬುವುದನ್ನು ಕುರಿತು ಸರ್ಕಾರದವರ ನಿರ್ಣಯವು ಕಾಯಿದಾಗಿರತಕ್ಕದ್ದು ಮತ್ತು ನ್ಯಾಯದ ಯಾವ ಕೋರ್ಟಿನಲ್ಲಿಯೂ ಅದನ್ನು ಕುರಿತು ಸಂಶಯ ಪಡಕೂಡದು.

ಅವ್ಯವಹಿತವಾದ ಮೂರು ಸಾಧಾರಣ ಕೂಟಗಳಿಗೆ ಬಾರದ ಇರುವ ಸಭಿಕನು ಸ್ಥಾನವನ್ನು ಬರಿದು ಮಾಡುತ್ತಾನೆ.

8. ಯಾವನಾದರೂ ಸಭಿಕನು ಸಭೆಯ ಮೂರು ಅವ್ಯವಹಿತವಾದ ಸಾಧಾರಣ ಕೂಟಗಳಿಗೆ ಬರಲಾರದೆ ಹೋದರೆ, ಸಭೆಯಲ್ಲಿ ಅಂಥಾ ಸಭಿಕನ ಸ್ಥಾನವು ಬರಿದಾಯಿತೆಂದು ಸರ್ಕಾರಿ ಗೆಜೆಟ್ಟಿನಲ್ಲಿ ಇಸ್ತಿಹಾರಿನ ಮೂಲಕ ಪ್ರಕಟಿಸುವುದು ಸರ್ಕಾರಕ್ಕೆ ನ್ಯಾಯವಾಗಿರತಕ್ಕದ್ದು.

ದೀವಾನರು ಇಲ್ಲದೆ ಇರುವಾಗ ಕೂಟಗಳಲ್ಲಿ ಯಾರು ಅಧ್ಯಕ್ಷರಾಗಿ ಇರುವುದು.

ಸಾಕಾದಷ್ಟು ಮಂದಿ ಸಭಿಕರು.

9. (1) ದೀವಾನರು ಇಲ್ಲದಿರುವಾಗ, ಸಭೆಯಲ್ಲಿರುವ ಹಿರಿಯ ಕೌನ್ಸಿಲರು, ಅಥವಾ, ಒಬ್ಬರು ಕೌನ್ಸಿಲರು ಮಾತ್ರ ಬಂದಿದ್ದರೆ, ಅಂಥಾ ಕೌನ್ಸಿಲರು ಸಭೆಯ ಕೂಟಗಳಲ್ಲಿ ಅಧ್ಯಕ್ಷರಾಗಿರತಕ್ಕದ್ದು; ಮತ್ತು ಸಭೆಗೆ ಕೊಡಲ್ಪಟ್ಟಿರುವ ನ್ಯಾಯಗಳನ್ನೂ (ಕಾನೂನು) ರೆಗ್ಯುಲೇಷನ್ಗಳನ್ನೂ ಮಾಡುವ ಅಧಿಕಾರವನ್ನು, ಯಾವುವುಗಳಿಗೆ ದೀವಾನರು ಅಥವಾ ಕೌನ್ಸಿಲರುಗಳಲ್ಲಿ ಯಾರಾದರೂ ಒಬ್ಬರು ಮತ್ತು ಸಭೆಯ ಸಭಿಕರ ಒಟ್ಟು ಸಂಖ್ಯೆಯಲ್ಲಿ ಅರ್ಧಕ್ಕೆ ಕಡಮೆ ಇಲ್ಲದಷ್ಟು ಮಂದಿ ಎಂದಿದ್ದಾರೆಯೋ ಅಂಥಾ ಮೇಲ್ಕಂಡ ಸಭೆಯ ಕೂಟಗಳಲ್ಲಿ ಮಾತ್ರ ನಡೆಸತಕ್ಕದ್ದು.

ನಿಶ್ಚಯಿಸುವ ಸಮ್ಮತಿ.

(2) ಮೇಲ್ಕಂಡ ಸಭೆಯ ಕೂಟಗಳಲ್ಲಿ ಭಿನ್ನಾಭಿಪ್ರಾಯದ ಪ್ರತಿ ಸಂದರ್ಭದಲ್ಲಿಯೂ, ಸಮ್ಮತಿಗಳು ಸಮವಾಗಿರುವಾಗಲೆಲ್ಲಾ, ದೀವಾನರು, ಅಥವಾ, ಅವರು ಇಲ್ಲದಿರುವಾಗ, ಆಗ ಅಧ್ಯಕ್ಷನಾಗಿರುವ ಕೌನ್ಸಿಲರು, ಎರಡು ಸಮ್ಮತಿಗಳನ್ನು ಅಥವಾ ನಿಶ್ಚಯಿಸುವ ಸಮ್ಮತಿಯನ್ನು ಉಂಟಾಗಿರತಕ್ಕದ್ದು.

ಕೂಟಗಳ ಕಾಲವನ್ನೂ ಸ್ಥಳವನ್ನೂ ದೀವಾನರು ನೇಮಕ ಮಾಡತಕ್ಕದ್ದು.

10. ಆಗಾಗ್ಗೆ ಸಭೆಯ ಕೂಟಗಳ ಕಾಲವನ್ನೂ ಸ್ಥಳವನ್ನೂ ನೇಮಿಸುವುದೂ, ಕೂಟಗಳನ್ನು ಮುಂದಕ್ಕೆ ಹಾಕುವುದೂ ಅಥವಾ ಆಗಾಗ್ಗೆ ತಾವು ಇಲ್ಲದೆ ಇರುವಾಗ ಅಧ್ಯಕ್ಷರಾಗಿರುವ ಕೌನ್ಸಿಲರಿಗೆ ಯಾವ ಕೂಟವನ್ನಾದರೂ ಆಗಾಗ್ಗೆ ಮುಂದಕ್ಕೆ ಹಾಕಲು ಅಧಿಕಾರ ಕೊಡುವುದೂ, ದೀವಾನರಿಗೆ ನ್ಯಾಯವಾಗಿರತಕ್ಕದ್ದು.

ಕೂಟಗಳಲ್ಲಿ ಕೆಲಸ ನಡೆಸುವುದಕ್ಕೆ ನಿಬಂಧನೆಗಳು.

11. (1) ಸಭೆಯ ಕೂಟಗಳಲ್ಲಿ ಕೆಲಸವನ್ನು ನಡೆಸುವ ಬಗ್ಗೆ ನಿಬಂಧನೆಗಳನ್ನು ಆಗಾಗ್ಗೆ ಮಾಡುವುದು ನ್ಯಾಯವಿಧಾಯಕ ಸಭೆಗೆ ನ್ಯಾಯವಾಗಿರತಕ್ಕದ್ದು, ಆದರೆ ಅಂಥಾ ಎಲ್ಲಾ ನಿಬಂಧನೆಗಳನ್ನೂ ಅಥವಾ ಅವುಗಳಲ್ಲಿ ಯಾವುವನ್ನಾದರೂ ಒಪ್ಪದೆ ಇರುವುದು ಸರ್ಕಾರಕ್ಕೆ ನ್ಯಾಯವಾಗಿರತಕ್ಕದ್ದು.

(2) ಇದಕ್ಕೆ ಲಗತ್ತು ಮಾಡಿರುವ ಪಟ್ಟಿಯಲ್ಲಿ ಅಡಗಿರುವ ನಿಬಂಧನೆಗಳು ಈ ಪ್ರಕರಣದ (1)ನೆ ಉಪಪ್ರಕರಣದ ಮೇರೆ ಮಾಡಲ್ಪಟ್ಟ ನಿಬಂಧನೆಗಳಿಂದ ತಳ್ಳುವಡಿ ಅಥವಾ ತಿದ್ದುಪಾಟು ಮಾಡಲ್ಪಡುವ ವರೆಗೆ ಉಪಯೋಗದಲ್ಲಿರತಕ್ಕದ್ದು ಮತ್ತು ನಿಂತಿರತಕ್ಕದ್ದು.

ದೀವಾನರ ಅನುಮತಿ ಇಲ್ಲದೆ ಉಪಾಯಗಳನ್ನು ಪ್ರಸ್ತಾಪಿಸಕೂಡದು.

12. (1) ಮೊದಲು ದೀವಾನರ ಬರಹ ಮೂಲಕವಾದ ಅನುಮತಿಯನ್ನು ಪಡೆಯದೆ ಮತ್ತು 11ನೆ ಪ್ರಕರಣದ ಮೇರೆ ಮಾಡಿದ ನಿಬಂಧನೆಗಳ ಪ್ರಕಾರ ಸಭೆಯ ಅಪ್ಪಣೆಯನ್ನು ಹೊಂದದೆ ಸಭೆಯಲ್ಲಿ ಯಾವ ತರದ ಉಪಾಯವನ್ನೂ ಪ್ರಸ್ತಾಪಿಸಕೂಡದು.

ಕೂಟಗಳಲ್ಲಿ ನಡೆಸತಕ್ಕ ಕೆಲಸದ ಸ್ವಭಾವ.

(2) ಆಲೋಚಿಸಿ ನಿರ್ಣಯಿಸುವುದಕ್ಕಾಗಿ ಅಂಥಾ ಸಭೆಯಲ್ಲಿ ಪ್ರಸ್ತಾಪಿಸಲ್ಪಟ್ಟ ಉಪಾಯಗಳ ಆಲೋಚನೆ ಮತ್ತು ನಿರ್ಣಯವಲ್ಲದ ಮತ್ಯಾವ ಕೆಲಸವನ್ನೂ ಸಭೆಯ ಯಾವ ಕೂಟದಲ್ಲಿಯೂ ನಡೆಸಕೂಡದು; ಮತ್ತು ಯಾವುದಾದರೂ ವಿಜ್ಞಾಪನೆಯು ಸಭೆಯಲ್ಲಿ ಮೇಲ್ಕಂಡಂತೆ ಬಂದಾನೊಂದು ಉಪಾಯವನ್ನು ಪ್ರಸ್ತಾಪಿಸಲು ಅಪ್ಪಣೆಗೋಸ್ಕರವಾಗಿ ಇದ್ದ ಹೊರತು ಅಥವಾ ಅಲ್ಲಿ ನಿಜವಾಗಿ ಪ್ರಸ್ತಾಪಿಸಲ್ಪಟ್ಟ ಬಂದಾನೊಂದು ಉಪಾಯಕ್ಕೆ ಸಂಬಂಧಿಸುವ ಹೊರತು ಅಂಥಾ ವಿಜ್ಞಾಪನೆಯನ್ನು ಮಾಡುವುದು ಯಾವ ಸಭಿಕನಿಗೂ ಅಥವಾ ಅಂಥಾ ವಿಜ್ಞಾಪನೆಯನ್ನು ಅಂಗೀಕರಿಸುವುದು ಸಭೆಗೂ ನ್ಯಾಯವಾಗಿರತಕ್ಕದ್ದಲ್ಲ.

ಆದರೆ ಈ ಕೆಳಗಿನ ವಿಷಯಗಳಿಗೆ ಸಂಬಂಧಿಸುವ ಯಾವ ಉಪಾಯವನ್ನೂ ಆಲೋಚಿಸುವುದು ಸಭೆಗೆ ನ್ಯಾಯವಾಗಿರತಕ್ಕದ್ದಲ್ಲ:

(a) ಮೈಸೂರನ್ನಾಳುವ ರಾಜ ವಂಶ,

(b) ಬ್ರಿಟಿಷ್ ಸಾಮ್ರಾಜ್ಯದೊಡನೆ ಅಥವಾ ಪರದೇಶದ ರಾಜರೊಡನೆ ಅಥವಾ ಸಂಸ್ಥಾನಗಳೊಡನೆ ಶ್ರೀಮನ್ ಮಹಾರಾಜರಿಗಿರುವ ಸಂಬಂಧಗಳು,

(c) ಈಗ ಉಪಯೋಗದಲ್ಲಿರುವ ಅಥವಾ ಇನ್ನುಮೇಲೆ ಬ್ರಿಟಿಷ್ ಸಾಮ್ರಾಜ್ಯದೊಡನೆ ಶ್ರೀಮನ್ ಮಹಾರಾಜರವರಿಂದ ಮಾಡಲ್ಪಡುವ ಕೌಲುಗಳಿಗೆ, ಒಪ್ಪಂದಗಳಿಗೆ ಅಥವಾ ಒಡಂಬಡಿಕೆಗಳಿಗೆ ಅನುಸಾರವಾದ ವಿಷಯಗಳು.

(d) ಅಪರಾಧಿಗಳ ಎಕಸ್ಟ್ರಾಡಿಷನ್ ಅಥವಾ ಒಪ್ಪಿಸೋಣ,

(e) ಯೂರೋಪಿಯನ್ ತಿರುಕರು,

(f) ಯೂರೋಪಿಯನ್ ಬ್ರಿಟಿಷ್ ಪ್ರಜೆಗಳು,

(g) ತಪಾಲು ಆಫೀಸು, ತಂತಿ ತಪಾಲುಗಳು ಮತ್ತು ರೇಲ್ವೆಗಳು,

(h) ಮೈಸೂರು ಸೈನ್ಯಗಳು, ಅಥವಾ,

(i) ಸರ್ಕಾರದ ಆಲೋಚನೆಯ ಬಗ್ಗೆ ಶ್ರೀಮನ್ ಮಹಾರಾಜರವರಿಂದ ಆಗಾಗ್ಗೆ ವಿಶೇಷವಾಗಿ ಉಳಿಸಲ್ಪಡಬಹುದಾದ ಇತರ ವಿಷಯಗಳು.

ಶ್ರೀಮನ್ ಮಹಾರಾಜರವರ ಅನುಮತಿಯನ್ನು ಹೊಂದುವ ವರೆಗೆ ಯಾವ ನ್ಯಾಯವೂ (ಕಾನೂನು) ಅಥವಾ ರೆಗ್ಯುಲೇಷನೂ ಪ್ರಬಲವಾಗಿರತಕ್ಕದ್ದಲ್ಲ.

13. ಸಭೆಯಿಂದ ಯಾವುದಾದರೂ ನ್ಯಾಯವು (ಕಾನೂನು) ಅಥವಾ ರೆಗ್ಯುಲೇಷನು ಮಾಡಲ್ಪಟ್ಟಾಗ, ಅದು ಅನುಮತಿಯ ಬಗ್ಗೆ ದೀವಾನರ ಮೂಲಕ ಶ್ರೀಮನ್ ಮಹಾರಾಜರವರಿಗೆ ಕಳುಹಿಸಲ್ಪಡತಕ್ಕದ್ದು. ಅಂಥಾ ನ್ಯಾಯ (ಕಾನೂನು) ಅಥವಾ ರೆಗ್ಯುಲೇಷನು ಶ್ರೀಮನ್ ಮಹಾರಾಜರವರ ಅನುಮತಿಯನ್ನು ಹೊಂದುವ ವರೆಗೆ ಪ್ರಾಬಲ್ಯವುಳ್ಳದ್ದಾಗಿರತಕ್ಕದ್ದಲ್ಲ.

ಸಭೆಯ ಅಧಿಕಾರಕ್ಕೆ ಹೊರಗಿನ ವಿಷಯಗಳಲ್ಲಿ ರೆಗ್ಯುಲೇಷನ್‌ಗಳು.

14. ಈ ರೆಗ್ಯುಲೇಷನಿನ 12ನೆ ಪ್ರಕರಣದ ನಿಯಮದಲ್ಲಿ ಕಂಡಿರುವ ಸಂದರ್ಭಗಳಲ್ಲಿ ಸರ್ಕಾರದವರು ಬೇಕಾಗಿರುವ ಯಾವುದಾದರೂ ರೆಗ್ಯುಲೇಷನನ್ನು ಮಾಡಬಹುದು, ಮತ್ತು ಅಂಥಾ ಪ್ರತಿ ರೆಗ್ಯುಲೇಷನೂ ಶ್ರೀಮನ್ ಮಹಾರಾಜರವರಿಂದ ಅನುಮತಿಸಲ್ಪಟ್ಟರೆ, ನ್ಯಾಯದ ಬಲವನ್ನು ಉಂಟಾಗಿರತಕ್ಕದ್ದು.

ಅವಸರದ ಯಾ ಜರೂರಿನ ರೆಗ್ಯುಲೇಷನ್‌ಗಳು.

15. ಈ ರೆಗ್ಯುಲೇಷನಿನಲ್ಲಿ ಏನು ಅಡಗಿದ್ದಾಗ್ಯೂ, ಯಾವುವುಗಳಲ್ಲಿ ನ್ಯಾಯವು (ಕಾನೂನು) ಅವಸರವಾಗಿ ಬೇಕಾಗಿದೆಯೋ ಅಂಥಾ ಈ ರೆಗ್ಯುಲೇಷನಿನ 12ನೆ ಪ್ರಕರಣದ ನಿಯಮಕ್ಕೆ ಒಳಪಡದ ಸಂದರ್ಭಗಳಲ್ಲಿ, ಯಾವ ರೆಗ್ಯುಲೇಷನನ್ನಾದರೂ ಮಾಡುವುದು ಸರ್ಕಾರಕ್ಕೆ ನ್ಯಾಯವಾಗಿರತಕ್ಕದ್ದು, ಮತ್ತು ಅಂಥಾ ಪ್ರತಿ ರೆಗ್ಯುಲೇಷನೂ ಶ್ರೀಮನ್ ಮಹಾರಾಜರವರಿಂದ ಅನುಮತಿಸಲ್ಪಟ್ಟರೆ ಸರ್ಕಾರಿ ಗೆಜೆಟ್ಟಿನಲ್ಲಿ ಅದು ಪ್ರಕಟವಾದ ಆರು ತಿಂಗಳ ಕಾಲ ಪರ್ಯಂತ ಸಭೆಯ ಮೂಲಕ ನಿರ್ಣಯಿಸಲ್ಪಟ್ಟ ಒಂದು ರೆಗ್ಯುಲೇಷನು ಯಾವ ಬಲವನ್ನುಂಟಾಗಿರುವುದೋ ಅದೇ ಬಲವನ್ನು ಉಂಟಾಗಿರತಕ್ಕದ್ದು.

ಸರ್ಕಾರದ ಉದ್ಯೋಗಸ್ಥರಲ್ಲದ ಸಭಿಕರ ಸಂಖ್ಯೆಯ ಅಪೂರ್ಣತೆಯ ಕಾರಣದಿಂದ ಯಾವ ರೆಗ್ಯುಲೇಷನೂ ನಿರ್ಬಲವಾಗಿರತಕ್ಕದ್ದಲ್ಲ.

16. ಈ ರೆಗ್ಯುಲೇಷನಿನ ಅಧಿಕಾರದ ಮೇಲೆ ನ್ಯಾಯವಿಧಾಯಕ ಸಭೆಯಿಂದ ನಿರ್ಣಯಿಸಲ್ಪಟ್ಟ ಯಾವ ನ್ಯಾಯ (ಕಾನೂನು), ಅಥವಾ ರೆಗ್ಯುಲೇಷನೂ ಅದನ್ನು ಸಭೆಯಲ್ಲಿ ಪ್ರಸ್ತಾಪಿಸುವ ಅಥವಾ ಅದು ಸಭೆಯಿಂದ ನಿರ್ಣಯಿಸಲ್ಪಡುವ ತಾರೀಖಿನಲ್ಲಿ, ಈ ಮೂಲಕವಾಗಿ ನಿಯಮ ಮಾಡಲ್ಪಟ್ಟಿರುವ ಸರ್ಕಾರದ ಉದ್ಯೋಗಸ್ಥರಲ್ಲದ ಸಭಿಕರ ಪರಿಮಾಣವು ಪೂರ್ತಿಯಾಗಿ ಇರಲಿಲ್ಲವೆಂಬ ಕಾರಣದಿಂದ ನಿರ್ಬಲವಾಗಿರುವಂತೆ ಭಾವಿಸಲ್ಪಡತಕ್ಕದ್ದಲ್ಲ.

ವಿ. ಪಿ. ಮಾಧವರಾವ್,

ಮೈಸೂರು ದೀವಾನ್.

ಪಟ್ಟಿ.

ಮೈಸೂರು ನ್ಯಾಯವಿಧಾಯಕ ಸಭೆಯಲ್ಲಿ ಕೆಲಸ ನಡೆಯುವುದಕ್ಕೆ ನಿಬಂಧನೆಗಳು.

1. ಅರ್ಥವಿವರಣೆ.

1. ಈ ನಿಬಂಧನೆಗಳಲ್ಲಿ—

"ಬಿಲ್" ಎಂದರೆ ಶ್ರೀಮನ್ಮಹಾರಾಜರವರ ಅನುಮತಿಯನ್ನು ಹೊಂದುವುದಕ್ಕೆ ಮುಂಚೆ, ಯಾವ ಸ್ಥಿತಿಯಲ್ಲಾದರೂ ಇರುವ ಉದ್ದೇಶಿಸಲ್ಪಟ್ಟ ವ್ಯವಹಾರವಿಧಿ (ಕಾನೂನು) ಎಂದು ಅರ್ಥ.

"ಸರಿಯಾದ ದಿನಗಳ" ಲೆಕ್ಕಗಳಲ್ಲಿ ಭಾನುವಾರಗಳೂ ರಜಾದಿನಗಳೂ ಸೇರಿಸಲ್ಪಟ್ಟಿಲ್ಲ.

2. ಸಭೆಯನ್ನು ಕರೆಸೋಣ ಮತ್ತು ಮುಂದಕ್ಕೆ ಹಾಕೋಣ.

2. ಕೂಟಗಳ ಕಾಲಗಳು ಮತ್ತು ಸ್ಥಳಗಳು ದೀವಾನರಿಂದ ಗೊತ್ತುಮಾಡಲ್ಪಡತಕ್ಕದ್ದು, ಮತ್ತು ಸೆಕ್ರೆಟರಿಯು ಸರ್ಕಾರಿ ಗೆಜೆಟ್ಟಿನಲ್ಲಿ ಅವುಗಳನ್ನು ಪ್ರಕಟಿಸಿ ಕಾಗದದ ಮೂಲಕ ಪ್ರತಿ ಸಭಿಕನಿಗೂ ತಿಳಿಸತಕ್ಕದ್ದು.

3. ಒಂದು ಕೂಟದ ಮುಂದೆ ಇರುವ ಕೆಲಸವು ಮುಗಿದಾಗ, ಅಧ್ಯಕ್ಷರು ಕೂಟವು ಮುಗಿಯಿತೆಂದು ತಿಳಿಸತಕ್ಕದ್ದು. ಅಧ್ಯಕ್ಷರು, ಯಾವ ಚರ್ಚೆಯನ್ನೂ ನಡೆಸದೆ ಅಥವಾ ಯಾವ ಸಮ್ಮತಿಯನ್ನೂ ಕೇಳದೆ, ಯಾವ ಕೂಟವನ್ನಾದರೂ ಅಥವಾ ಕೆಲಸವನ್ನಾದರೂ, ಮುಂದೆ ಯಾವುದಾದರೂ ದಿನಕ್ಕೆ ಅಥವಾ ಅದೇ ದಿನದ ಯಾವುದಾದರೂ ಭಾಗಕ್ಕೆ ಹಾಕಬಹುದು. ಸಭೆಯೂ ಕೂಡ, ವಿಜ್ಞಾಪನೆ ಮಾಡಲ್ಪಟ್ಟು ಅಂಗೀಕರಿಸಲ್ಪಟ್ಟಾಗ, ಯಾವ ಕೂಟ ಅಥವಾ ಕೆಲಸವನ್ನಾದರೂ ಮುಂದಕ್ಕೆ ಹಾಕಬಹುದು.

4. ಯಾವ ಕೂಟವನ್ನಾದರೂ ಅಥವಾ ಕೆಲಸವನ್ನಾದರೂ ಮುಂದಕ್ಕೆ ಹಾಕಬೇಕೆಂದು ಅಥವಾ ಕೆಲಸದ ಪಟ್ಟಿಯಲ್ಲಿರುವ ಕ್ರಮಪ್ರಕಾರ ಮುಂದಿನ ಕೆಲಸಕ್ಕೆ ಸಭೆಯು ಹೋಗಬೇಕೆಂದು ಒಂದು ವಿಜ್ಞಾಪನೆಯನ್ನು ಯಾವ ಕಾಲದಲ್ಲಿಯಾದರೂ ಮತ್ತು ಅದನ್ನು ಒಂದು ಪ್ರತ್ಯೇಕವಾದ ಪ್ರಮೇಯವಾಗಿ ಮುಂದಾಗಿ ತಿಳಿಸದೆ, ಅದರ ಒಂದು ಪ್ರಸಂಗಕ್ಕೆ ಅಡ್ಡಿ ಮಾಡದಹಾಗೆ ಮಾಡಬಹುದು. ಆ ವಿಜ್ಞಾಪನೆಯು ಅಂಗೀಕರಿಸಲ್ಪಟ್ಟರೆ, ಸಭೆಯು ಸಂದರ್ಭಾನುಸಾರವಾಗಿ ಕೂಟವನ್ನು ಅಥವಾ ಕೆಲಸವನ್ನು ಮುಂದಕ್ಕೆ ಹಾಕತಕ್ಕದ್ದು, ಅಥವಾ ಆಗ ಚರ್ಚೆಯಲ್ಲಿರುವ ಕೆಲಸದ ಪರ್ಯಾಲೋಚನೆಯನ್ನು ಅಲ್ಲಿಗೆ ನಿಲ್ಲಿಸತಕ್ಕದ್ದು.

5. ಹಿಂದಿನ ಕಡೇ ನಿಬಂಧನೆಯಲ್ಲಿ ಕಂಡ ತರದ ವಿಜ್ಞಾಪನೆಯನ್ನು ಆಗ ಸಭೆಯ ಮುಂದೆ ಇರುವ ಯಾವುದಾದರೂ ಇತರ ವಿಜ್ಞಾಪನೆಗೆ ಮುಂಚೆ ತೆಗೆದುಕೊಳ್ಳತಕ್ಕದ್ದು, ಮತ್ತು, ಅಂಥಾ ಯಾವುದಾದರೂ ವಿಜ್ಞಾಪನೆಯು ತಳ್ಳಿಬಿಡಲ್ಪಟ್ಟಾಗ, ಅಧ್ಯಕ್ಷರು ನ್ಯಾಯವಾದ ಕಾಲವೆಂದು ಎಣಿಸಬಹುದಾದಷ್ಟು ಕಾಲವು ಕಳೆದುಹೋಗುವವರೆಗೆ ಅದೇ ರೀತಿಯಾದ ಯಾವ ವಿಜ್ಞಾಪನೆಯೂ (ಯಾರಿಂದಲೂ) ಅಥವಾ ಯಾರಿಂದ ಹಿಂದಿನ ವಿಜ್ಞಾಪನೆಯು ಮಾಡಲ್ಪಟ್ಟಿತೊ ಆ ಸಭಿಕರಿಂದಲೂ ಮಾಡಲ್ಪಡತಕ್ಕದ್ದಲ್ಲ.

6. ಒಂದು ಕೂಟವನ್ನು ಅಥವಾ ಮೇಲ್ಕಂಡಂತೆ ಮುಂದಕ್ಕೆ ಇಡಲ್ಪಟ್ಟ ಕೂಟವನ್ನು ನಡೆಸುವುದಕ್ಕೆ ನೇಮಿಸಿದ ಕಾಲದಲ್ಲಿ, ಅಥವಾ ಅಂಥಾ ಕೂಟದ ಕೆಲಸವು ಪ್ರಾರಂಭವಾದ ಮೇಲೆ ಯಾವಾಗಲಾದರೂ ಈ ರೆಗ್ಯುಲೇಷನಿನ 9ನೆ ಪ್ರಕರಣದಿಂದ ವಿಧಿಸಲ್ಪಟ್ಟಂತೆ ಸಾಕಾದಷ್ಟುಮಂದಿ ಸಭಿಕರು (ಎಂದರೆ, ದೀವಾನರೂ, ಅಥವಾ ಕೌನ್ಸಿಲರುಗಳ ಪೈಕಿ ಯಾರಾದರೂ ಒಬ್ಬರು ಮತ್ತು ಸಭೆಯ ಸಭಿಕರ ಒಟ್ಟು ಸಂಖ್ಯೆಯಲ್ಲಿ ಅರ್ಧದಷ್ಟು ಮಂದಿಯು) ಬಂದಿಲ್ಲದೆ ಇದ್ದರೆ, ಬಂದಿರುವ ಸಭಿಕರು, ಯಾವ ವಿಧವಾದ ಕೆಲಸಕ್ಕೂ ಹೋಗದೆ, ದೀವಾನರಿಂದ ತಿರಿಗಿ ಕರಸಲ್ಪಡುವವರೆಗೆ ನಿಲ್ಲತಕ್ಕದ್ದು, ಮತ್ತು ಆ ಸಂಗತಿಯು ಸಭೆಯ ದಿನಚರಿಯಲ್ಲಿ ಸೆಕ್ರೆಟರಿಯಿಂದ ಬರೆಯಲ್ಪಡತಕ್ಕದ್ದು.

3. ಕೆಲಸದ ಕ್ರಮ.

7. ಸೆಕ್ರೆಟರಿಯು ಪ್ರತಿ ಕೂಟಕ್ಕೂ ಗೊತ್ತುಮಾಡಿರುವ ತಾರೀಖಿಗೆ ಕನಿಷ್ಠಪಕ್ಷ ಮೂರು ಸರಿಯಾದ ದಿವಸಗಳಿಗೆ ಮುಂಚೆ ಪ್ರತಿ ಸಭಿಕನಿಗೂ ಸೇರುವಂತೆ ಅಂಥಾ ಕೂಟದಲ್ಲಿ ನಡೆಸತಕ್ಕ ಕೆಲಸದ ವಿವರವನ್ನು ಕಳುಹಿಸತಕ್ಕದ್ದು.

8. 7ನೆ ನಿಬಂಧನೆಯ ಮೇರೆಗೆ ತಯಾರುಮಾಡಲ್ಪಟ್ಟ ಕೆಲಸದ ವಿವರಣೆಯಲ್ಲಿ ದಾಖಲಾಗದ ಯಾವ ಕೆಲಸವೂ ಯಾವ ಕೂಟದಲ್ಲಿಯೂ, ಅಂಥಾ ಕೂಟಕ್ಕೆ ದೀವಾನರ ಅಪ್ಪಣೆಯು ಮುಂದಾಗಿ ಪಡೆಯಲ್ಪಟ್ಟಿದ್ದ ಹೊರತು, ನಡೆಸಲ್ಪಡಕೂಡದು.

9. ಅಧ್ಯಕ್ಷರಿಗೆ ಕೆಲಸವು ನಡೆಸಲ್ಪಡತಕ್ಕ ಕ್ರಮವನ್ನು ಗೊತ್ತುಮಾಡುವ ಅಧಿಕಾರವಿರತಕ್ಕದ್ದು, ಆದರೆ, ಸಾಧಾರಣವಾಗಿ, ಕೆಲಸದ ಕ್ರಮವು 10ನೆ ನಿಬಂಧನೆಯಲ್ಲಿ ವಿವರಿಸಿರುವಂತೆ ಇರತಕ್ಕದ್ದು.

10. ಅಧ್ಯಕ್ಷರು ಆಸನದಲ್ಲಿ ಕೂತುಕೊಂಡ ತರುವಾಯ :—

(1) ಸೆಕ್ರೆಟರಿಯು, ಈ ರೆಗ್ಯುಲೇಷನಿನ 13ನೆ ಪ್ರಕರಣದ ಮೇರೆ, ಶ್ರೀಮನ್ಮಹಾರಾಜರವರ ಅನುಮತಿಯನ್ನು ಪಡೆದಿರುವ ರೆಗ್ಯುಲೇಷನ್‌ಗಳನ್ನೂ, ಕಡೇ ಸಲದ ಕೂಟವು ಸೇರಿದ ಈಚೆಗೆ ಸಮ್ಮತಿಸಲ್ಪಡದ ಬಿಲ್ಲುಗಳನ್ನೂ ಸಭೆಗೆ ತಿಳಿಸತಕ್ಕದ್ದು;

(2) ಸೆಕ್ರೆಟರಿಯು ಕಡೇ ಸಲದ ಕೂಟವು ಸೇರಿದ ಈಚೆಗೆ ತನ್ನ ಬಳಿಗೆ ಬಂದಿರುವ ಸಭೆಯ ಕೆಲಸಕ್ಕೆ ಸಂಬಂಧಪಟ್ಟ ಅರ್ಜಿಗಳನ್ನೂ ಇತರ ಕಾಗದ ಪತ್ರಗಳನ್ನೂ ಸಭೆಗೆ ತಿಳಿಸತಕ್ಕದ್ದು, ಮತ್ತು ಅವಶ್ಯವಿದ್ದರೆ, ಅಂಥಾ ಅರ್ಜಿಗಳನ್ನೂ ಕಾಗದ ಪತ್ರಗಳನ್ನೂ ಸಭೆಗೆ ಓದತಕ್ಕದ್ದು;

(3) ಬಿಲ್ಲುಗಳನ್ನು ಪ್ರಸ್ತಾಪಿಸಲು ಅಪ್ಪಣೆಯನ್ನು ಹೊಂದಲಪೇಕ್ಷಿಸುವ ಸಭಿಕರು ಅದಕ್ಕೆ ದೀವಾನರ ಬರಹಮೂಲಕವಾದ ಅಪ್ಪಣೆಯನ್ನು ಪಡೆದು ಅಂಥಾ ಅಪ್ಪಣೆಯು ಪಡೆಯಲ್ಪಟ್ಟಿತೆಂದು ವಿಜ್ಞಾಪಿಸತಕ್ಕದ್ದು;

(4) ಸಭೆಯು ಆಗ ಕಡೇ ಕೂಟದಲ್ಲಿ ಮುಗಿಸದೆ ಬಿಡಲ್ಪಟ್ಟಿರುವ ಕೆಲಸ ಯಾವುದಾದರೂ ಇದ್ದರೆ, ಅದನ್ನು ವ್ಯವಸ್ಥೆ ಮಾಡಲು ಪ್ರವರ್ತಿಸತಕ್ಕದ್ದು, ಮತ್ತು ಇದನ್ನು ಮಾಡಿ,

(5) ಸಭೆಯು ಆ ದಿನದ ಉಳಿದ ಕೆಲಸವನ್ನು ವ್ಯವಸ್ಥೆಮಾಡಲು ಪ್ರವರ್ತಿಸತಕ್ಕದ್ದು.

4. ಚರ್ಚೆಗಳನ್ನು ಕ್ರಮಪಡಿಸೋಣ.

11. ಅಧ್ಯಕ್ಷರು ಸಭೆಯ ಕ್ರಮವನ್ನು ಕಾಪಾಡತಕ್ಕದ್ದು ಮತ್ತು ಸಭಿಕರಿಂದ ತಮ್ಮ ನಿರ್ಣಯಕ್ಕೆ ಕಳುಹಿಸಲ್ಪಟ್ಟ ಕ್ರಮದ ಎಲ್ಲಾ ಅಂಶಗಳನ್ನೂ ಮತ್ತು ಈ ನಿಬಂಧನೆಗಳ ಅರ್ಥ ವಿವರಣೆಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ನಿರ್ಣಯಿಸತಕ್ಕದ್ದು. ಕ್ರಮದ ಯಾವುದಾದರೂ ಅಂಶವನ್ನು ಕುರಿತು ಯಾ ಚರ್ಚೆಯೂ ನಡೆಕೂಡದು ಮತ್ತು ಅಧ್ಯಕ್ಷರ ನಿರ್ಣಯವು ಕಡೆಯದಾಗಿರತಕ್ಕದ್ದು.

12. ಯಾವ ಸಭಿಕನಾದರೂ ಕ್ರಮದ ಉಲ್ಲಂಘನೆಯನ್ನು ಅಧ್ಯಕ್ಷರ ಅವಧಾನಕ್ಕೆ ತರಬಹುದು ಮತ್ತು ಆತನು ಹಾಗೆ ಮಾಡುತ್ತಿರುವಾಗ ಇತರ ಎಲ್ಲಾ ಸಭಿಕರೂ ನಿಶ್ಶಬ್ದವಾಗಿರಬೇಕು.

13. ಸಭೆಯ ಮುಂದೆ ಆಲೋಚನೆಗೆ ಬರುವ ವಿಷಯಗಳನ್ನು ಚರ್ಚಿಸುವುದರಲ್ಲಿ ಸಭಿಕನು ತನ್ನ ಸ್ಥಳದಿಂದ ಮಾತಾಡಬೇಕು ಮತ್ತು ಅಧ್ಯಕ್ಷರನ್ನು ಸಂಬೋಧಿಸತಕ್ಕದ್ದು.

14. ಸಭಿಕರು ತಮ್ಮ ಪ್ರಸಂಗಗಳನ್ನು ಓದಬಹುದು ಮತ್ತು ಚರ್ಚೆಯಲ್ಲಿರುವ ವಿಷಯಕ್ಕೆ ಸಂಬಂಧಪಟ್ಟ ಪುಸ್ತಕಗಳಿಂದ ಅಥವಾ ಕಾಗದಗಳಿಂದ ವಚನಗಳನ್ನೂ ಕೂಡ ಪ್ರಸಂಗಗಳ ಭಾಗವಾಗಿ ಓದಬಹುದು.

15. ತತ್ಕಾಲದಲ್ಲಿ ಕ್ರಮವಾಗಿ ಸಭೆಯ ಮುಂದೆ ಇರುವ ಕೆಲಸವನ್ನು ಕುರಿತು ವಿನಾ, ಅಥವಾ ಅಧ್ಯಕ್ಷರ ವಿಶೇಷ ಅಪ್ಪಣೆಯನ್ನು ಪಡೆದು, ಹಿಂದಿನ ಚರ್ಚೆಯಲ್ಲಿ ತಾನು ಹೇಳಿದ್ದುದಕ್ಕೆ ವಿವರಣೆಯಾಗಿ ವಿನಾ, ಯಾವ ಸಭಿಕನೂ ಮಾತನಾಡಕೂಡದು.

16. ತಿದ್ದುಪಾಟುಗಳನ್ನು ಚರ್ಚಿಸುವುದರಲ್ಲಿ ವಿನಾ, ಒಂದು ಬಿಲ್ಲಿನ ಬೇರೆ ಬೇರೆ ವಾಕ್ಯಗಳನ್ನು ಸಭೆಯು ನಿಶ್ಚಯಿಸುತ್ತಿರುವಾಗ ವಿಜ್ಞಾಪಕನಲ್ಲದ ಯಾವ ಸಭಿಕನೂ ಒಂದು ವಿಷಯವನ್ನು ಕುರಿತು ಒಂದಾವರ್ತಿಗಿಂತ ಹೆಚ್ಚಾಗಿ ಮಾತನಾಡಕೂಡದು; ಆದರೆ, ವಿಜ್ಞಾಪಕನು ತನ್ನ ವಿಜ್ಞಾಪನೆಯನ್ನು ಮಾಡುವಾಗ ಚರ್ಚೆಯಲ್ಲಿರುವ ವಿಷಯವನ್ನು ಕುರಿತು ಮಾತನಾಡಿದ್ದರೆ ಅವನು ಒಂದು ಪ್ರತ್ಯುತ್ತರವನ್ನು ಮಾಡಲು ಅಪ್ಪಣೆ ಕೊಡಲ್ಪಡತಕ್ಕದ್ದು.

ಆದರೆ ಸಭೆಯ ಮುಂದೆ ಇರುವ ವಿಷಯವು ಒಂದು ಬಿಲ್ಲಿನ ತಿದ್ದುಪಾಟಾಗಿದ್ದರೆ, ಆ ಬಿಲ್ಲನ್ನು ಕೈಕೊಂಡಿರುವ ಸಭಿಕನು ತಿದ್ದುಪಾಟಿನ ವಿಜ್ಞಾಪಕನ ಮತ್ತು ಅನುಮೋದಿಯ ತರುವಾಯ ಮಾತನಾಡಲು ಹಕ್ಕುಳ್ಳವನಾಗಿರತಕ್ಕದ್ದು.

17. ಒಂದು ವಿಜ್ಞಾಪನೆಯನ್ನು ಕುರಿತು ಮಾತನಾಡಿದ ಸಭಿಕನು ಆ ವಿಜ್ಞಾಪನೆಯ ತಿದ್ದುಪಾಟನ್ನು ಕುರಿತು ತಿರಿಗಿ ಮಾತನಾಡಬಹುದು. ಒಬ್ಬ ಸಭಿಕನು ತಾನು ಹಿಂದೆ ಹೇಳಿದ ವಿಷಯವು ತಪ್ಪಾಗಿ ತಿಳಿದುಕೊಳ್ಳಲ್ಪಟ್ಟಿದ್ದರೆ ಅದನ್ನು ವಿವರಿಸುವುದಕ್ಕೋಸ್ಕರವೂ ಕೂಡ ತಿರಿಗಿ ಮಾತನಾಡಬಹುದು.

18. ವಿವರಿಸುವುದಕ್ಕೋಸ್ಕರ ಅಥವಾ ಯಾವುದಾದರೂ ಇತರ ಕಾರಣಕ್ಕೋಸ್ಕರ, ಒಬ್ಬ ಸಭಿಕನು ಸಭೆಯ ಮುಂದೆ ಇರುವ ಕೆಲಸಕ್ಕೆ ಸಂಬಂಧಪಟ್ಟ ಮತ್ತೊಬ್ಬ ಸಭಿಕನನ್ನು ಒಂದು ಪ್ರಶ್ನೆ ಕೇಳಬೇಕಾಗಿದ್ದರೆ, ಆತನು ಅಧ್ಯಕ್ಷರ ಮೂಲಕವಾಗಿ ಆ ಪ್ರಶ್ನೆಯನ್ನು ಕೇಳತಕ್ಕದ್ದು.

19. ನಿರ್ಣಯದ ಬಗ್ಗೆ ಸಭೆಯ ಮುಂದೆ ಬರುವ ಪ್ರತಿ ವಿಷಯವೂ (1) ವಿಜ್ಞಾಪನೆಯು ಮಾಡಲ್ಪಟ್ಟು, ಅನುಮೋದಿಸಲ್ಪಟ್ಟು ಮತ್ತು (2) ಅಧ್ಯಕ್ಷರಿಂದ ಪ್ರಶ್ನೆಯು ಹಾಕಲ್ಪಟ್ಟ ತರುವಾಯ ಬಹು (ಮಹಾಪಕ್ಷದವರ) ಸಮ್ಮತಿಗಳಿಗೆ ಅನುಸಾರವಾಗಿ ನಿರ್ಣಯಿಸಲ್ಪಡತಕ್ಕದ್ದು.

20. ಅಧ್ಯಕ್ಷರಿಂದ ಪ್ರಶ್ನೆಯು ಹಾಕಲ್ಪಟ್ಟ ತರುವಾಯ ಯಾವ ಚರ್ಚೆಯೂ ನಡೆಯತಕ್ಕದ್ದಲ್ಲ.

21. ಸಭೆಯಮುಂದೆ ಇರುವ ಕೆಲಸಕ್ಕೆ ಸಂಬಂಧಪಟ್ಟ ಯಾವ ಕಾಗದಗಳನ್ನಾದರೂ ಅಥವಾ ವರ್ತಮಾನವನ್ನಾದರೂ ಯಾವ ಸಭಿಕನಾದರೂ ಕೇಳಬಹುದು ಮತ್ತು ಅಧ್ಯಕ್ಷರು ಅಂಥಾ ಕಾಗದಗಳನ್ನು ಅಥವಾ ವರ್ತಮಾನವನ್ನು ಕೊಡಬಹುದೆ ಎಂಬುದನ್ನು ನಿಶ್ಚಯಿಸತಕ್ಕದ್ದು.

ಅಧ್ಯಕ್ಷರು ದಿವಾನರಾಗಿಲ್ಲದೆ, ಕೇಳಲ್ಪಟ್ಟ ಕಾಗದಗಳು ಅಥವಾ ವರ್ತಮಾನವು ಸಂಸ್ಥಾನದ ನ್ಯಾಯವಿಧಾಯಕ ಇಲಾಖೆಯಲ್ಲದ ಯಾವುದಾದರೂ ಇಲಾಖೆಗೆ ಸೇರಿದ್ದರೆ, ದಿವಾನರು ಅಧ್ಯಕ್ಷರ ನಿರ್ಣಯವನ್ನು ತಳ್ಳಿಪಡಿಮಾಡಬಹುದು.

5. ಸಾಮಾನ್ಯವಾಗಿ ವಿಜ್ಞಾಪನೆಗಳು.

---

22. ಯಾವುದಾದರೂ ಕೂಟದಲ್ಲಿ ಯಾವುದಾದರೂ ವಿಜ್ಞಾಪನೆಯನ್ನು ಮಾಡಲು ಅಪೇಕ್ಷಿಸುವ ಸಭಿಕರು ಅದಕ್ಕೆ ಹಿಂದಿನ ಕೂಟದಲ್ಲಿ ತಮ್ಮ ಉದ್ದೇಶವನ್ನು ಕುರಿತು ವರ್ತಮಾನ ಕೊಡತಕ್ಕದ್ದು ಅಥವಾ ಯಾವುದರಲ್ಲಿ ಅವರು ವಿಜ್ಞಾಪನೆಯನ್ನು ಮಾಡಲು ಉದ್ದೇಶಿಸುತ್ತಾರೆಯೊ, ಅಂಥಾ ಕೂಟಕ್ಕೆ ಗೊತ್ತು ಮಾಡಿರುವ ದಿನಕ್ಕೆ ಕಡೇಪಕ್ಷ ಆರು ಸರಿಯಾದ ದಿನಗಳಿಗೆ ಮುಂಚೆ ಸೆಕ್ರೆಟರಿಗೆ ತಲಪುವಂತೆ ಬರಹಮೂಲಕವಾಗಿ ಅಂಥಾ ವರ್ತಮಾನವನ್ನು ಕೊಡಬೇಕು. ಆದರೆ ಅಧ್ಯಕ್ಷರು, ತಮಗೆ ಯುಕ್ತವಾಗಿ ತೋರಿದರೆ, ಯಾವುದನ್ನು ಕುರಿತು ಅಂಥಾ ವರ್ತಮಾನವು ಕೊಡಲ್ಪಟ್ಟಿಲ್ಲವೊ ಅಂಥಾ ವಿಜ್ಞಾಪನೆಯನ್ನು ಮಾಡಲು ಅಪ್ಪಣೆ ಕೊಡಬಹುದು.

23. ಹಿಂದಿನ ನಿಬಂಧನೆಯ ಮೇರೆ ಯಾವುವುಗಳನ್ನು ಕುರಿತು ವರ್ತಮಾನ ಕೊಡಲ್ಪಟ್ಟಿದೆಯೋ ಅಂಥಾ ಎಲ್ಲಾ ವಿಜ್ಞಾಪನೆಗಳೂ 7ನೇ ನಿಬಂಧನೆಯ ಮೇರೆ ಸೆಕ್ರೆಟರಿಯಿಂದ ತಯಾರುಮಾಡಲ್ಪಟ್ಟ ಕೆಲಸದ ವಿವರಣೆಯಲ್ಲಿ ಬರೆಯಲ್ಪಡತಕ್ಕದ್ದು.

24. ಅನುಮೋದಿಸಲ್ಪಟ್ಟ ಹೊರತು ಯಾವ ವಿಜ್ಞಾಪನೆಯೂ ಸಭೆಯಿಂದ ಆಲೋಚನೆಗೆ ತೆಗೆದುಕೊಳ್ಳಲ್ಪಡತಕ್ಕದ್ದಿಲ್ಲ.

25. ಯಾವುದನ್ನು ಕುರಿತು ತಕ್ಕ ವರ್ತಮಾನವು ಕೊಡಲ್ಪಟ್ಟಿದೆಯೋ ಅಂಥಾ ವಿಜ್ಞಾಪನೆಯು, ಯಾರಿಂದ ವರ್ತಮಾನವು ಕೊಡಲ್ಪಟ್ಟಿತೋ ಆ ಸಭಿಕನು ಇಲ್ಲದೆ ಇರುವಾಗ ಮತ್ತು ಅವನ ಕೋರಿಕೆಯ ಮೇರೆ ಯಾವನಾದರೂ ಇತರ ಸಭಿಕನಿಂದ ಮಾಡಲ್ಪಡಬಹುದು; ಅದರೆ, ಹಾಗೆ ಮಾಡಲ್ಪಡದೆ ಇದ್ದರೆ, ಅಥವಾ ಒಬ್ಬ ಸಭಿಕನು ತನ್ನ ಹೆಸರಿನಲ್ಲಿ ಇರುವ ಒಂದು ವಿಜ್ಞಾಪನೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಾಗಿ ತನ್ನ ಉದ್ದೇಶವನ್ನು ತಿಳಿಸಿದರೆ, ವಿಜ್ಞಾಪನೆಯು ಯಾವನಾದರೂ ಇತರ ಸಭಿಕನಿಂದ ಮಾಡಲ್ಪಡಬಹುದು, ಮತ್ತು, ಹಾಗೆ ಮಾಡಲ್ಪಡದೆ ಇದ್ದರೆ, ಸಭೆಯು ಅನ್ಯಥಾ ಅಪ್ಪಣೆ ಮಾಡಿದ ಹೊರತು ಅದರ ಮುಂದೆ ಇಡಲ್ಪಡಕೂಡದು.

26. ಯಾವುದಾದರೂ ವಿಜ್ಞಾಪನೆಯ ತಿದ್ದುಪಾಟುಗಳು ವಿಜ್ಞಾಪಿಸಲ್ಪಟ್ಟರೆ, ಅಧ್ಯಕ್ಷರು, ಅದನ್ನು ಕುರಿತು ಸಭೆಯ ಅಭಿಪ್ರಾಯವನ್ನು ಕೇಳುವಾಗ, ತಮಗೆ ಯುಕ್ತವಾಗಿ ತೋರಿದರೆ, ಮೊದಲಿನ ವಿಜ್ಞಾಪನೆಯನ್ನಾದರೂ ಅಥವಾ ಅದರ ಉದ್ದೇಶಿಸಲ್ಪಟ್ಟ ತಿದ್ದುಪಾಟುಗಳಲ್ಲಿ ಯಾವುದನ್ನಾದರೂ, ಸಮ್ಮತಿಗೆ ಮೊದಲು ಹಾಕತಕ್ಕದ್ದು (ಎಂದರೆ ಅದನ್ನು ಕುರಿತು ಸಭಿಕರ ಸಮ್ಮತಿಗಳನ್ನು ಕೇಳತಕ್ಕದ್ದು.)

27. ಒಂದು ವಿಜ್ಞಾಪನೆಯ ಖರೇ ಮಾತಿನ ತಿದ್ದುಪಾಟನ್ನು ಆ ವಿಜ್ಞಾಪನೆಯನ್ನು ಕುರಿತ ಚರ್ಚೆಯಲ್ಲಿ ಯಾವಾಗಲಾದರೂ ಮುಂದಾಗಿ ವರ್ತಮಾನ ಕೊಡದೆ ವಿಜ್ಞಾಪಿಸಬಹುದು, ಆದರೆ, ಒಂದು ವಿಜ್ಞಾಪನೆಯ ನಿಜವಾಗಿ ನಿಷೇಧಾರ್ಥಕವಾದ ಯಾವ ತಿದ್ದುಪಾಟೂ ಸಭೆಯಿಂದ ಆಲೋಚನೆಗೆ ತೆಗೆದುಕೊಳ್ಳಲ್ಪಡತಕ್ಕದ್ದಿಲ್ಲ.

28. ಒಂದು ವಿಜ್ಞಾಪನೆಯು ಕೂಟದಲ್ಲಿ ಆಗಲೆ ವ್ಯವಸ್ಥೆ ಮಾಡಲ್ಪಟ್ಟ ಒಂದು ವಿಷಯವನ್ನು ನಿಜವಾಗಿ ಪ್ರಸ್ತಾಪಿಸಿದರೆ ಅಥವಾ ಕೂಟದಲ್ಲಿ ಆಗಲೆ ಮಾಡಲ್ಪಟ್ಟ ಯಾವುದಾದರೂ ಉಪಕ್ಷೇಪ (ತೀರ್ಮಾನ) ಕ್ಕೆ ಅಸಂಗತವಾಗಿದ್ದರೆ ಅದು ಸಭೆಯಿಂದ ಆಲೋಚನೆಗೆ ತೆಗೆದುಕೊಳ್ಳಲ್ಪಡತಕ್ಕದ್ದಲ್ಲ.

29. ಮಾಡಲ್ಪಟ್ಟ ರೀತಿಯಲ್ಲಿ, ಯಾವುದಾದರೂ ವಿಜ್ಞಾಪನೆಯು ಬೇರೆಬೇರೆ ಅಂಶಗಳಿಗೆ ಸಂಬಂಧಿಸಿದರೆ, ಅಧ್ಯಕ್ಷರು, ಅವರಿಗೆ ಯುಕ್ತವಾಗಿ ತೋರಿದರೆ, ಪ್ರತಿ ಅಂಶವೂ ಪ್ರತ್ಯೇಕವಾಗಿ ತೀರ್ಮಾನಿಸಲ್ಪಡುವ ಹಾಗೆ ಆ ವಿಜ್ಞಾಪನೆಯನ್ನು ವಿಭಾಗಿಸಬಹುದು.

6. ಬಿಲ್ಲುಗಳ ಪ್ರಸ್ತಾವನೆ.

30. ಸಭೆಯಲ್ಲಿ ಒಂದು ಬಿಲ್ಲನ್ನು ಪ್ರಸ್ತಾಪಿಸಲು ಬರಹ ಮೂಲಕವಾಗಿ ದೀವಾನರ ಅನುಮತಿಯನ್ನು ಮುಂದಾಗಿ ಪಡೆದಿರಬಹುದಾದ ಯಾವ ಸಭಿಕನಾದರೂ ಈ ರೆಗ್ಯುಲೇಷನಿನ 12ನೇ ಪ್ರಕರಣಕ್ಕೆ ಅನುಸಾರವಾಗಿ ಅದನ್ನು ಪ್ರಸ್ತಾಪಿಸಲು ಅಪ್ಪಣೆಯ ಬಗ್ಗೆ ಸಭೆಯ ಕೂಟದಲ್ಲಿ ವಿಜ್ಞಾಪಿಸಬಹುದು; ಆದರೆ ಹಾಗೆ ಮಾಡಲು ಬಿಲ್ಲಿನ ಹೆಸರನ್ನು ಮತ್ತು ವಿಷಯವನ್ನು ಕುರಿತು ಕಡೇಪಕ್ಷ ಆರು ಸರಿಯಾದ ದಿನಗಳಿಗೆ ಮುಂಚೆ ಸೆಕ್ರೆಟರಿಗೆ ವರ್ತಮಾನವು ಕೊಡಲ್ಪಟ್ಟಿರಬೇಕು.

31. ಒಂದು ಬಿಲ್ಲನ್ನು ಪ್ರಸ್ತಾಪಿಸಲು ಅಪ್ಪಣೆಗೋಸ್ಕರ ಮಾಡಿದ ಬಿನ್ನಹವು ಅಂಗೀಕರಿಸಲ್ಪಟ್ಟರೆ, ವಿಜ್ಞಾಪಕನು ಉದ್ದೇಶಿಸಿರುವ ಉಪಾಯದ (ನ್ಯಾಯ ಅಥವಾ ಕಾನೂನು) ಉದ್ದೇಶಗಳ ಮತ್ತು ಕಾರಣಗಳ ಸಂಪೂರ್ಣವಾದ ವಿವರಣೆಯೊಡನೆಯೂ ಅದಕ್ಕೆ ಸಂಬಂಧಪಟ್ಟ ಕಾಗದಗಳೊಡನೆಯೂ ಬಿಲ್ಲನ್ನು ಸೆಕ್ರೆಟರಿಗೆ ಕಳುಹಿಸತಕ್ಕದ್ದು. ಸೆಕ್ರೆಟರಿಯು ಕೂಡಲೆ ಬಿಲ್ಲನ್ನೂ ಉದ್ದೇಶಗಳ ಮತ್ತು ಕಾರಣಗಳ ವಿವರಣೆಯನ್ನೂ ಅದಕ್ಕೆ ಸಂಬಂಧಪಟ್ಟ ಕಾಗದಗಳನ್ನೂ ಅಚ್ಚು ಹಾಕಿಸಿ ಅದರ ಪ್ರತಿಗಳನ್ನು ಸಭಿಕರಲ್ಲಿ ಪ್ರತಿ ಒಬ್ಬನಿಗೂ ಕಳುಹಿಸಿ ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಸರ್ಕಾರಿ ಗೆಜೆಟಿನಲ್ಲಿ ಪ್ರಕಟಿಸತಕ್ಕದ್ದು.

ಆದರೆ ಯಾವಾಗ ಅಂಥಾ ಬಿಲ್ಲಿನ ಪ್ರಕಟನೆಯು ಆಲೋಚಿಸಲ್ಪಡತಕ್ಕದ್ದೋ ಸಭೆಯು ಅಂಥಾ ಮುಂದಿನ ಕೂಟದ ವರೆಗೆ ದೀವಾನರ ಅಪ್ಪಣೆಯ ಮೇರೆಗೆ ಪ್ರಕಟನೆಯನ್ನು ನಿಲ್ಲಿಸಬಹುದು.

32. ದೀವಾನರು, ತಮಗೆ ಯುಕ್ತವಾಗಿ ತೋರಿದರೆ, 30ನೇ ನಿಬಂಧನೆಯ ಮೇರೆ ಬಿಲ್ಲನ್ನು ಕುರಿತು ಪ್ರಸ್ತಾಪಿಸಲು ಅಪ್ಪಣೆಯು ಕೋರಲ್ಪಡದೆ ಇದ್ದರೂ ಯಾವುದಾದರೂ ಬಿಲ್ಲನ್ನು ಅದರ ಉದ್ದೇಶಗಳ ಮತ್ತು ಕಾರಣಗಳ ವಿವರಣೆ ಸಹಿತ ಸರ್ಕಾರಿ ಗೆಜೆಟಿನಲ್ಲಿ ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಕಟಿಸುವಂತೆ ಸೆಕ್ರೆಟರಿಗೆ ಆಜ್ಞಾಪಿಸಬಹುದು ಮತ್ತು ತದನುಸಾರವಾಗಿ ಸೆಕ್ರೆಟರಿಯು ಅದನ್ನು ಪ್ರಕಟಿಸಿ ಬಿಲ್ಲಿನ ಮತ್ತು, ಉದ್ದೇಶಗಳ ಮತ್ತು ಕಾರಣಗಳ ವಿವರಣೆಯ ಒಂದು ಪ್ರತಿಯನ್ನು ಸಭಿಕರಲ್ಲಿ ಪ್ರತಿ ಒಬ್ಬನಿಗೂ ಕಳುಹಿಸತಕ್ಕದ್ದು. ಈ ನಿಬಂಧನೆಯ ಮೇರೆ ಒಂದು ಬಿಲ್ಲು ಪ್ರಕಟಿಸಲ್ಪಟ್ಟಾಗ, ಅದನ್ನು ಕುರಿತು ಪ್ರಸ್ತಾಪಿಸಲು ಅಪ್ಪಣೆಗೋಸ್ಕರ 30ನೇ ನಿಬಂಧನೆಯ ಮೇರೆ ವಿಜ್ಞಾಪಿಸಲು ಅವಶ್ಯವಾಗಿರತಕ್ಕದ್ದಿಲ್ಲ.

33. 31ನೇ ನಿಬಂಧನೆಯ ಮೇರೆ ಒಂದು ಬಿಲ್ಲನ್ನು ಪ್ರಸ್ತಾಪಿಸಲು ಅಪ್ಪಣೆ ಕೊಡಲ್ಪಟ್ಟ ತರುವಾಯ ಅಥವಾ 32ನೇ ನಿಬಂಧನೆಯ ಮೇರೆ ಪ್ರಕಟನೆಗೆ ಅಪ್ಪಣೆಯಾದ ತರುವಾಯ ಯಾವಾಗಲಾದರೂ ಬಿಲ್ಲನ್ನು ಕೈಕೊಂಡಿರುವ ಸಭಿಕನು ಸೆಕ್ರೆಟರಿಗೆ ಆರು ಸರಿಯಾದ ದಿನಗಳ ವರ್ತಮಾನ ಕೊಟ್ಟ ತರುವಾಯ ಅದನ್ನು ಪ್ರಸ್ತಾಪಿಸಬಹುದು; ಆದರೆ ಪ್ರಕಟನೆಯ ತಾರೀಖಿನಿಂದ 15 ಸರಿಯಾದ ದಿನಗಳ ವರೆಗೆ ಯಾವ ಬಿಲ್ಲನ್ನೂ ಪ್ರಸ್ತಾಪಿಸಕೂಡದು.

ಒಂದು ಬಿಲ್ಲನ್ನು ಪ್ರಸ್ತಾಪಿಸುವಾಗ ಅದನ್ನು ಕೈಕೊಂಡಿರುವ ಸಭಿಕನು ಸಭೆಯಲ್ಲಿ ಬಿಲ್ಲು ಓದಲ್ಪಡಬೇಕೆಂದು ವಿಜ್ಞಾಪಿಸತಕ್ಕದ್ದು. ಬಿಲ್ಲಿನ ಮೂಲತತ್ವವೂ ಅದರ ಸಾಮಾನ್ಯ ನಿಯಮಗಳೂ ಆಗ ಚರ್ಚಿಸಲ್ಪಡಬಹುದು, ಮತ್ತು ಆ ವಿಜ್ಞಾಪನೆಯು ಅಂಗೀಕರಿಸಲ್ಪಟ್ಟರೆ ಸಭೆಯು ಆಗ ಬಿಲ್ಲನ್ನು ಒಂದು ನಿಯುಕ್ತ ಸಮಾಜಕ್ಕೆ (ಸೆಲೆಕ್ಟ್ ಕಮಿಟಿ) ಕಳುಹಿಸುವ ವಿಷಯವನ್ನು

ಆಲೋಚಿಸತಕ್ಕದ್ದು ಮತ್ತು ಆ ವಿಷಯವನ್ನು ಹಾಗೆ ಮಾಡಬೇಕೆಂದು ನಿರ್ಣಯಿಸಿದರೆ, ಸಭೆಯು ನಿಯುಕ್ತ ಸಭೆ (ಕಮಿಟಿ) ಯನ್ನು ನೇಮಕ ಮಾಡತಕ್ಕದ್ದು ಮತ್ತು ಅದರ ರಿಪೋರ್ಟನ್ನು ಒಂದು ಕ್ಲುಪ್ತಪಡಿಸಿದ ಕಾಲದೊಳಗೆ ಕಳುಹಿಸತಕ್ಕದ್ದೆಂದೂ ಕೂಡ ಆಜ್ಞಾಪಿಸಬಹುದು.

34. ಒಂದು ಬಿಲ್ಲು ಸಾಗುತ್ತಿರುವಾಗ ಯಾವಾಗಲಾದರೂ ಅದನ್ನು ಕೈಕೊಂಡಿರುವ ಸಭಿಕನು ಅದನ್ನು ವಾಪಸು ತೆಗೆದುಕೊಳ್ಳಲು ಅಪ್ಪಣೆಗೋಸ್ಕರ ವಿಜ್ಞಾಪಿಸಬಹುದು, ಮತ್ತು ಅಂಥಾ ಅಪ್ಪಣೆಯು ಕೊಡಲ್ಪಟ್ಟರೆ, ತದನುಸಾರವಾಗಿ ಬಿಲ್ಲು ವಾಪಸು ತೆಗೆದುಕೊಳ್ಳಲ್ಪಡತಕ್ಕದ್ದು. 32ನೆ ನಿಬಂಧನೆಯ ಮೇರೆ ಪ್ರಕಟಿಸಲ್ಪಟ್ಟರೂ ಸಭೆಯಲ್ಲಿ ಪ್ರಸ್ತಾಪಿಸಲ್ಪಡದೆ ಮತ್ತು ಬಿದ್ದಲ್ಪಡದೆ ಇರುವ ಬಿಲ್ಲನ್ನು ಕೈಕೊಂಡಿರುವ ಸಭಿಕನು ವಾಪಸು ತೆಗೆದುಕೊಳ್ಳುವುದನ್ನು ಸಭೆಗೆ ತಿಳಿಸುವುದು ಮಾತ್ರಕ್ಕಿಂತ ಹೆಚ್ಚು ಕ್ರಮವನ್ನು ನಡೆಸದೆ ಅದನ್ನು ವಾಪಸು ತೆಗೆದುಕೊಳ್ಳಬಹುದು.

7. ನಿಯುಕ್ತ ಸಮಾಜ (ಸೆಲೆಕ್ಟ್ ಕಮಿಟಿ).

35. ಸಭೆಯ ಕೆಲಸಕ್ಕೆ ಸಂಬಂಧಪಟ್ಟ ಯಾವ ಉದ್ದೇಶಕ್ಕಾದರೂ ಸಭೆಯಿಂದ ನಿಯುಕ್ತ ಸಮಾಜಗಳು ನೇಮಕವಾಗಲ್ಪಡಬಹುದು ಮತ್ತು ಸಭೆಯು ಮುಂದಕ್ಕೆ ನಿಲ್ಲಿಸಿ ಇಡಲ್ಪಟ್ಟಿದ್ದಾಗ್ಯೂ ಅಂಥಾ ನಿಯುಕ್ತ ಸಮಾಜಗಳು ಸೇರಿ ಅವರ ರಿಪೋರ್ಟುಗಳನ್ನು ಕಳುಹಿಸಬಹುದು. ಬಿಲ್ಲನ್ನು ಕೈಕೊಂಡಿರುವ ಸಭಿಕನು ಯಾವಾಗಲೂ ಬಿಲ್ಲನ್ನು ಆಲೋಚಿಸಲು ನೇಮಿಸಲ್ಪಟ್ಟಿರುವ ನಿಯುಕ್ತ ಸಮಾಜದ ಸಾಮಾಜಿಕನಾಗಿರತಕ್ಕದ್ದು.

36. ಒಂದು ಬಿಲ್ಲು ಆಲೋಚನೆಗಾಗಿ ಒಂದು ನಿಯುಕ್ತ ಸಮಾಜಕ್ಕೆ ಹಾಕಲ್ಪಟ್ಟಿರುವಾಗ, ಬಿಲ್ಲಿನ ಪ್ರತಿ ವಾಕ್ಯವನ್ನೂ ಚರ್ಚಿಸುವುದು ಮತ್ತು ತನಗೆ ಯುಕ್ತವಾಗಿ ತೋರುವ ತಿದ್ದುಪಾಟುಗಳನ್ನು ಕುರಿತು ಸಭೆಗೆ ಶಿಫಾರಸು ಮಾಡುವುದು ನಿಯುಕ್ತ ಸಮಾಜದ ಕೆಲಸವಾಗಿರತಕ್ಕದ್ದು.

37. ಯಾವುದರೊಳಗೆ ನಿಯುಕ್ತ ಸಮಾಜವು ಒಂದು ಬಿಲ್ಲನ್ನು ಕುರಿತು ತನ್ನ ರಿಪೋರ್ಟನ್ನು ಕಳುಹಿಸತಕ್ಕದ್ದೋ ಅಂಥಾ ಕಾಲವನ್ನು ಸಭೆಯು ಗೊತ್ತುಮಾಡಿದ್ದು ನಿಯುಕ್ತ ಸಮಾಜವು ಆ ಕಾಲದೊಳಗೆ ತನ್ನ ರಿಪೋರ್ಟನ್ನು ಕಳುಹಿಸಲು ಯಾವ ಕಾರಣದಿಂದಲಾದರೂ ಆಗದೆ ಇದ್ದರೆ ದೀವಾನರು ಬಿಲ್ಲನ್ನು ಕೈಕೊಂಡಿರುವ ಸಭಿಕನ ಬಿನ್ನಹದ ಮೇಲೆ ಆ ಕಾಲವನ್ನು ಆಗಾಗ್ಗೆ ಹೆಚ್ಚಿಸಬಹುದು.

38. ನಿಯುಕ್ತ ಸಮಾಜದ ರಿಪೋರ್ಟು ನಿಯುಕ್ತ ಸಮಾಜದ ಎಲ್ಲಾ ಸಾಮಾಜಿಕರಿಂದಲೂ ಅಥವಾ ಅವರಲ್ಲಿ ಮಹಾಪಕ್ಷ (ಮೆಜಾರಿಟಿ) ದವರಿಂದ ರುಜು ಮಾಡಲ್ಪಡತಕ್ಕದ್ದು ; ಆದರೆ ನಿಯುಕ್ತ ಸಮಾಜದ ಯಾವ ಸಾಮಾಜಿಕನಾದರೂ ತನ್ನ ಅಭಿಪ್ರಾಯಗಳನ್ನು ಒಂದು ಪ್ರತ್ಯೇಕವಾದ ಟಿಪ್ಪಣಿಯಲ್ಲಿ ಬರೆದಿಡಬಹುದು.

39. ಒಂದು ಬಿಲ್ಲನ್ನು ಆಲೋಚಿಸಲು ನೇಮಿಸಲ್ಪಟ್ಟ ನಿಯುಕ್ತ ಸಮಾಜದ ರಿಪೋರ್ಟು ಉದ್ದೇಶಿಸಲ್ಪಟ್ಟ ಮುಖ್ಯವಾದ ತಿದ್ದುಪಾಟುಗಳ ಮತ್ತು ಅಂಥಾ ತಿದ್ದುಪಾಟುಗಳ ಕಾರಣಗಳ ವಿವರಗಳನ್ನು ಒಳಕೊಂಡಿರತಕ್ಕದ್ದು, ಅಥವಾ ಅದು ಆಲೋಚನೆಯಲ್ಲಿರುವ ಬಿಲ್ಲನ್ನು ಬಿಟ್ಟುಬಿಡಬೇಕೆಂಬ ಒಂದು ಶಿಫಾರಸನ್ನು ಒಳಕೊಂಡಿರಬಹುದು.

40. ನಿಯುಕ್ತ ಸಮಾಜದ ರಿಪೋರ್ಟು ನಿಯುಕ್ತ ಸಮಾಜದ ಬೇರೆಬೇರೆ ಸಾಮಾಜಿಕರಿಂದ ಬರೆಯಲ್ಪಟ್ಟಿರಬಹುದಾದ ಟಿಪ್ಪಣಿಗಳು, ಮತ್ತು (ಬಿಲ್ಲು ತಿದ್ದುಪಾಟು ಮಾಡಲ್ಪಟ್ಟಿದ್ದರೆ) ನಿಯುಕ್ತ ಸಮಾಜದಿಂದ ತಿದ್ದುಪಾಟು ಮಾಡಲ್ಪಟ್ಟ ಹಾಗೆ ಇರುವ ಬಿಲ್ಲು ಅಚ್ಚು ಹಾಕಲ್ಪಟ್ಟು, ಅದರ ಪ್ರತಿಗಳು ಸಭೆಯ ಪ್ರತಿ ಸಭಿಕನಿಗೂ ಕೊಡಲ್ಪಡತಕ್ಕದ್ದು. ರಿಪೋರ್ಟು ಮತ್ತು ಟಿಪ್ಪಣಿಗಳು (ಏನಾದರೂ ಇದ್ದರೆ) ಮತ್ತು (ಬಿಲ್ಲು ತಿದ್ದುಪಾಟು ಮಾಡಲ್ಪಟ್ಟಿದ್ದರೆ) ತಿದ್ದುಪಾಟು ಮಾಡಲ್ಪಟ್ಟ ಬಿಲ್ಲು ಅಥವಾ ತಿದ್ದುಪಾಟು ಮಾಡಲ್ಪಟ್ಟಿರಬಹುದಾದ ಅದರ ಭಾಗವು ಕೂಡ, ನಿಯುಕ್ತ ಸಭೆಯಿಂದ ಅನ್ಯಥಾ ಆಜ್ಞಾಪಿಸಲ್ಪಟ್ಟದ್ದು ಹೊರತು, ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಡತಕ್ಕದ್ದು.

41. ಬಿಲ್ಲನ್ನು ಕೈಕೊಂಡಿರುವ ಸಭಿಕನೂ ಸೇರಿ ನಿಯುಕ್ತ ಸಮಾಜದ ಸಾಮಾಜಿಕರಲ್ಲಿ ಮಹಾಪಕ್ಷದವರು ಬಂದಿದ್ದ ಹೊರತು ನಿಯುಕ್ತ ಸಮಾಜದ ಯಾವ ಕೂಟದಲ್ಲಿಯಾದರೂ ಯಾವ ಕೆಲಸವನ್ನೂ ನಡೆಸಕೂಡದು.

42. ನಿಯುಕ್ತ ಸಮಾಜವು ಅವರ ಸ್ವಂತ ಸಭಾನಾಯಕನನ್ನು ಆರಿಸಿಕೊಳ್ಳಬಹುದು ; ಯಾರು ಅಸಡ್ಡೆ ಮಾಡುತ್ತಾನೆಯೊ ಅಥವಾ ಕೂಟಗಳಿಗೆ ಬರಲು ಅಶಕ್ತನಾಗಿರುತ್ತಾನೆಯೊ ನಿಯುಕ್ತ ಸಮಾಜದ ಅಂಥಾ ಯಾವನಾದರೂ ಸಾಮಾಜಿಕನ ಹೆಸರನ್ನು ದೀವಾನರಿಗೆ ರಿಪೋರ್ಟು ಮಾಡಲು ಸಭಾನಾಯಕನಿಗೆ ಅಧಿಕಾರವಿರತಕ್ಕದ್ದು, ಮತ್ತು ದೀವಾನರು ಆಮೇಲೆ ಸಭೆಯ ಸಭಿಕರಲ್ಲಿ ಒಬ್ಬನನ್ನು ನಿಯುಕ್ತ ಸಮಾಜದ ಹೆಚ್ಚು ಸಾಮಾಜಿಕನಾಗಿ ನೇಮಿಸಬಹುದು.

43. ಒಂದು ನಿಯುಕ್ತ ಸಮಾಜವು, ವರ್ತಮಾನವನ್ನು ಹೊಂದುವ ಬಗ್ಗೆ, ತಮ್ಮ ಕೂಟಗಳಿಗೆ ಬಂದಿರಲು ಯಾವ ಮನುಷ್ಯನನ್ನಾದರೂ ಕರೆಯಬಹುದು.

44. ಒಂದು ನಿಯುಕ್ತ ಸಮಾಜವು ಒಂದು ಬಿಲ್ಲನ್ನು ಆಲೋಚಿಸಲು ಸೇರಿರುವಾಗ, ಬಿಲ್ಲಿಗೆ ಸಂಬಂಧಪಟ್ಟ ಸೆಕ್ರೆಟರಿಗೆ ತಲುಪಿರುವ ಎಲ್ಲಾ ಕಾಗದ ಪತ್ರಗಳೂ ನಿಯುಕ್ತ ಸಮಾಜಕ್ಕೆ ಕಳುಹಿಸಲ್ಪಡತಕ್ಕದ್ದು.

8. ಬಿಲ್ಲುಗಳನ್ನು ನಿರ್ಣಯಿಸೋಣ.

45. 33ನೆ ನಿಬಂಧನೆಯ ಮೇರೆ ಸಭೆಯಲ್ಲಿ ಒಂದು ಬಿಲ್ಲು ಪ್ರಸ್ತಾಪಿಸಲ್ಪಟ್ಟು ಮತ್ತು ಓದಲ್ಪಟ್ಟು ಒಂದು ನಿಯುಕ್ತ ಸಮಾಜಕ್ಕೆ ಆಲೋಚನೆಯ ಬಗ್ಗೆ ಅದನ್ನು ಕಳುಹಿಸಲು ಅವಶ್ಯವಿಲ್ಲವೆಂದು ಸಭೆಯು ನಿರ್ಣಯಿಸಿದಾಗ, ಯಾವುದರಲ್ಲಿ ಬಿಲ್ಲು

33ನೇ ನಿಬಂಧನೆಯ ಮೇರೆ ಓದಲ್ಪಟ್ಟಿತೋ ಅಂಥಾ ತಾರೀಖಿನಿಂದ ಹದಿನೈದು ಸರಿಯಾದ ದಿನಗಳು ಕಳೆದು ಹೋಗುವವರೆಗೆ ಸಭೆಯು ಬಿಲ್ಲನ್ನು ಆಲೋಚನೆಗೆ ತೆಗೆದುಕೊಳ್ಳಲು ಪ್ರವರ್ತಿಸಕೂಡದು.

ಈ ಸಂದರ್ಭದಲ್ಲಿ ಬಿಲ್ಲು ಆಲೋಚನೆಗೆ ಬರುವ ದಿನದಲ್ಲಿ ಬಿಲ್ಲನ್ನು ಆಲೋಚನೆಗೆ ತೆಗೆದುಕೊಳ್ಳಬೇಕೆಂದು ಒಂದು ಕ್ರಮವಾದ ವಿಜ್ಞಾಪನೆಯನ್ನು ಮಾಡಲು ಅವಶ್ಯವಾಗಿರತಕ್ಕದ್ದಿಲ್ಲ.

46. 33ನೆ ನಿಬಂಧನೆಯ ಮೇರೆ ಬಿಲ್ಲು ನಿಯುಕ್ತ ಸಮಾಜಕ್ಕೆ ಕಳುಹಿಸಲ್ಪಟ್ಟಾಗ ನಿಯುಕ್ತ ಸಮಾಜದ ರಿಪೋರ್ಟಿನ ಮತ್ತು (ಬಿಲ್ಲು ತಿದ್ದುಪಾಟು ಮಾಡಲ್ಪಟ್ಟಿದ್ದರೆ) ತಿದ್ದುಪಾಟು ಮಾಡಲ್ಪಟ್ಟ ಬಿಲ್ಲಿನ ಪ್ರತಿಗಳು, ಕನಿಷ್ಠಪಕ್ಷ ಹದಿನೈದು ಸರಿಯಾದ ದಿನಗಳಿಗೆ ಮುಂಚೆ, ಸಭೆಯ ಸಭಿಕರಲ್ಲಿ ಪ್ರತಿ ಒಬ್ಬನಿಗೂ ಕಳುಹಿಸಲ್ಪಟ್ಟಿದ್ದ ಹೊರತು ಮತ್ತು, 40ನೆ ನಿಬಂಧನೆಯಲ್ಲಿ ಕಂಡ ಪ್ರಕಟನೆಯನ್ನು ನಿಯುಕ್ತ ಸಮಾಜವು ತೆಗೆದುಹಾಕದೆ ಇರುವ ಸಂದರ್ಭಗಳಲ್ಲಿ, ಅಂಥಾ ಪ್ರಕಟನೆಯ ತಾರೀಖಿನಿಂದ ಇಪ್ಪತ್ತೊಂದು ಸರಿಯಾದ ದಿನಗಳು ಕಳೆದುಹೋಗುವ ವರೆಗೆ, ಬಿಲ್ಲು ಸಭೆಯಿಂದ ಆಲೋಚನೆಗೆ ತೆಗೆದುಕೊಳ್ಳಲ್ಪಡತಕ್ಕದ್ದಿಲ್ಲ. ಈ ನಿಯಮಗಳಿಗೆ ಒಳಪಟ್ಟು, ಬಿಲ್ಲನ್ನು ಕೈಕೊಂಡಿರುವ ಸಭಿಕನು, ನಿಯುಕ್ತ ಸಮಾಜದ ರಿಪೋರ್ಟನ್ನು ಸಭೆಗೆ ಕೊಡುವಾಗ, ಬಿಲ್ಲು ಮತ್ತು ರಿಪೋರ್ಟು ಒಡನೆ ಆಲೋಚನೆಗೆ ತೆಗೆದುಕೊಳ್ಳಲ್ಪಡಬೇಕೆಂದು ಅಥವಾ ಅವುಗಳ ಆಲೋಚನೆಯನ್ನು ಒಂದು ಮುಂದಿನ ಕೂಟಕ್ಕೆ ನಿಲ್ಲಿಸಿಡಬೇಕೆಂದು ವಿಜ್ಞಾಪಿಸಬಹುದು. ಒಂದು ಬಿಲ್ಲು ಆಲೋಚನೆಗೆ ತೆಗೆದುಕೊಳ್ಳಲ್ಪಡಬೇಕೆಂಬ ಈ ನಿಬಂಧನೆಯ ಪ್ರಕಾರದ ವಿಜ್ಞಾಪನೆಯ ಮೇಲಿನ ಚರ್ಚೆಯು ಆ ಬಿಲ್ಲಿನ ಮೂಲತತ್ವದ ವರೆಗೆ ಹೋಗಕೂಡದು.

47. ಒಂದು ಬಿಲ್ಲಿನ ಸಾರಾಂಶಕ್ಕೆ ಅನ್ವಯಿಸುವ ಒಂದು ತಿದ್ದುಪಾಟನ್ನು ಸೂಚಿಸಲಪೇಕ್ಷಿಸುವ ಯಾವ ಸಭಿಕನಾದರೂ ಸೂಚಿಸಿರುವ ತಿದ್ದುಪಾಟಿನ ಒಂದು ಪ್ರತಿಯನ್ನು 22ನೆ ನಿಬಂಧನೆಯ ಮೇರೆ ಸೆಕ್ರೆಟರಿಗೆ ಕಳುಹಿಸತಕ್ಕದ್ದು, ಮತ್ತು ಸೆಕ್ರೆಟರಿಯು 7ನೆ ನಿಬಂಧನೆಯ ಮೇರೆ ತಯಾರ್ಮಾಡಲ್ಪಟ್ಟ ಕೆಲಸದ ವಿವರಣೆಯಲ್ಲಿ ಅದನ್ನು ಬರೆಯತಕ್ಕದ್ದು; ಆದರೆ ಬರೀಮಾತಿನ ಸ್ವಭಾವವುಳ್ಳ ತಿದ್ದುಪಾಟುಗಳ ಅಥವಾ ಅಂಗೀಕರಿಸಲ್ಪಟ್ಟ (ಮಹಾಪಕ್ಷದವರಿಂದ ಒಪ್ಪಲ್ಪಟ್ಟ) ತಿದ್ದುಪಾಟುಗಳ ಮೇಲೆ ಹುಟ್ಟುವ, ಅಥವಾ ಅವುಗಳ ವಿಷಯದಲ್ಲಿ ವಿಜ್ಞಾಪಿಸಲ್ಪಟ್ಟ ತಿದ್ದುಪಾಟುಗಳ ವರ್ತಮಾನವನ್ನು ಮುಂದಾಗಿ ಕೊಡಲು ಅವಶ್ಯವಾಗಿ ಇರತಕ್ಕದ್ದಿಲ್ಲ.

48. ಬಿಲ್ಲು ನಿಜವಾಗಿ ಆಲೋಚನೆಗೆ ತೆಗೆದುಕೊಳ್ಳಲ್ಪಡುವವರೆಗೆ ಅದರ ಸೂಚಿಸಲ್ಪಟ್ಟ ತಿದ್ದುಪಾಟುಗಳನ್ನು ವಿಜ್ಞಾಪಿಸಕೂಡದು, ಮತ್ತು, ವಿಜ್ಞಾಪಿಸಲ್ಪಟ್ಟಾಗ, ಯಾವುವುಗಳಿಗೆ ಅವು ಸಂಬಂಧಿಸುತ್ತವೆಯೊ ಅಂಥಾ ಪ್ರಕರಣಗಳ ಅನುಕ್ರಮದಲ್ಲಿ ಅವನ್ನು ಆಲೋಚಿತಕ್ಕದ್ದು.

ಬಿಲ್ಲುಗಳ ಸೂಚಿಸಲ್ಪಟ್ಟ ತಿದ್ದುಪಾಟುಗಳು ವಿಜ್ಞಾಪನೆಗಳಿಗೆ ಸಂಬಂಧಿಸುವ 24, 25, 26, 28, ಮತ್ತು 29ನೆಯ ನಿಬಂಧನೆಗಳನ್ನು ಅನುಸರಿಸತಕ್ಕದ್ದು.

49. ಒಂದು ಬಿಲ್ಲಿನ ಒಂದು ಸೂಚಿಸಲ್ಪಟ್ಟ ತಿದ್ದುಪಾಟು ಅಸಂಬದ್ಧವಾಗಿದೆ ಅಥವಾ ಅಸಮಗ್ರವಾಗಿದೆ ಅಥವಾ ಸಾರಾಂಶದಲ್ಲಿ ಅದರ ಹಾಗೆಯೇ ಇರುವ ಒಂದು ತಿದ್ದುಪಾಟು ಅದೇ ಬಿಲ್ಲನ್ನು ಆಲೋಚಿಸುತ್ತಿರುವಾಗ ಸಭೆಯಿಂದ ಹಿಂದೆ ವ್ಯವಸ್ಥೆ ಮಾಡಲ್ಪಟ್ಟಿತು ಎಂಬ ಕಾರಣದ ಮೇಲೆ ಚರ್ಚಿಸಲ್ಪಡತಕ್ಕದ್ದಲ್ಲ ಅಥವಾ (ಸಭಿಕರ) ಸಮ್ಮತಿಗೆ ಹಾಕಲ್ಪಡತಕ್ಕದ್ದಲ್ಲವೆಂದು ಅಧ್ಯಕ್ಷರು ತಿಳಿಸಬಹುದು.

50. (ಬಿಲ್ಲು ನಿಯುಕ್ತ ಸಮಾಜಕೆ ಕಳುಹಿಸಲ್ಪಟ್ಟಿದ್ದರೆ) ನಿಯುಕ್ತ ಸಮಾಜದಿಂದ ಸೂಚಿಸಲ್ಪಟ್ಟ ತಿದ್ದುಪಾಟುಗಳು ಮತು ಸಭೆಯ ಮುಂದೆ ಸಭಿಕರಲ್ಲಿ ಯಾರಿಂದಲಾದರೂ ಸೂಚಿಸಲ್ಪಟ್ಟಿರಬಹುದಾದ ಇತರ ತಿದ್ದುಪಾಟುಗಳು ಸಭೆಯಿಂದ ಆಲೋಚಿಸಲ್ಪಟ್ಟಾಗ, ಬಿಲ್ಲನ್ನು ಕೈಕೊಂಡಿರುವ ಸಭಿಕನು ಅಥವಾ ಆತನು ಇಲ್ಲದಿರುವಾಗ ಯಾವನಾದರೂ ಇತರ ಸಭಿಕನು, ಮುಂದಿನ ಒಂದು ಕೂಟದಲ್ಲಿ ತಿದ್ದುಪಾಟು ಮಾಡಲ್ಪಟ್ಟ ಬಿಲ್ಲನ್ನು ತೆಗೆದುಕೊಂಡು, ನಿರ್ಣಯಿಸಬೇಕೆಂದು ವಿಜ್ಞಾಪಿಸಬಹುದು.

ಅಂಥಾ ಕೂಟದಲ್ಲಿ ಸಭೆಯು ಸರ್ಕಾರದ ಪರವಾಗಿ ವಿಜ್ಞಾಪಿಸಲ್ಪಟ್ಟ ತಿದ್ದುಪಾಟುಗಳನ್ನು, ಏನಾದರೂ ಇದ್ದರೆ, ಆಲೋಚಿಸಿ ಬಿಲ್ಲನ್ನು ನಿರ್ಣಯಿಸತಕ್ಕದ್ದು. ಸರ್ಕಾರದ ಪರವಾಗಿ ವಿಜ್ಞಾಪಿಸಲ್ಪಟ್ಟ ತಿದ್ದುಪಾಟುಗಳಿಗೆ ಸಂಬಂಧಪಟ್ಟವುಗಳಲ್ಲದ ಯಾವ ತಿದ್ದುಪಾಟುಗಳನ್ನೂ, ದೀವಾನರ ವಿಶೇಷ ಅಪ್ಪಣೆ ಇಲ್ಲದೆ, ಈ ದಶೆಯಲ್ಲಿ ಆಲೋಚನೆಗೆ ತರತಕ್ಕದ್ದಲ್ಲ.

9. ಬಿಲ್ಲುಗಳ ಅಂತ್ಯ ದಶೆಗಳು.

51. ಒಂದು ಬಿಲ್ಲು ಸಭೆಯಿಂದ ನಿರ್ಣಯಿಸಲ್ಪಟ್ಟಾಗ, ಸೆಕ್ರೆಟರಿಯು ಅದರ ಅಂಚಿನಲ್ಲಿ ಕೊಟ್ಟಿರುವ ಸಂಗ್ರಹಗಳನ್ನೂ, ಅದರ ಪ್ರಕರಣಗಳಿಗೆ ಸಂಖ್ಯೆ ಕೊಡೋಣವನ್ನೂ ಪುನರ್ವಿಮರ್ಶೆಮಾಡಿ ಪೂರ್ತಿ ಮಾಡತಕ್ಕದ್ದು ಮತ್ತು ಅದನ್ನು ಮೇಲೆಕ್ಕೆ ಶ್ರೀಮನ್ ಮಹಾರಾಜರವರಿಗೆ ಕಳುಹಿಸುವುದಕ್ಕೋಸ್ಕರ ದೀವಾನರಿಗೆ ಕಳುಹಿಸತಕ್ಕದ್ದು.

52. ದೀವಾನರು ಬಿಲ್ಲಿನ ಕೆಳಗೆ ಬರಹಮೂಲಕವಾದ ಸರ್ಟಿಫಿಕೇಟಿನಿಂದ ಶ್ರೀಮನ್ ಮಹಾರಾಜರ ಸಮ್ಮತಿ ಅಥವಾ ಅಸಮ್ಮತಿಯನ್ನು ತಿಳಿಸತಕ್ಕದ್ದು, ಮತ್ತು ಬಿಲ್ಲು ಅಂಥಾ ಸರ್ಟಿಫಿಕೇಟಿನ ಸಹಿತ ಸಭೆಯ ಕಾಗದಪತ್ರಗಳ ಜತೆಗೆ ಇಡಲ್ಪಡತಕ್ಕದ್ದು.

53. ಒಂದು ಬಿಲ್ಲಿಗೆ ಸಮ್ಮತಿಸದಿರುವ, ಅಥವಾ ಶ್ರೀಮನ್ ಮಹಾರಾಜರವರು ಅವಶ್ಯವೆಂದು ಎಣಿಸಬಹುದಾದ ಬದಲಾವಣೆಯೊಡನೆ ಅದಕ್ಕೆ ಅನುಮತಿಯನ್ನು ಕೊಡುವ, ಶ್ರೀಮನ್ ಮಹಾರಾಜರವರ ವಿಶೇಷಾಧಿಕಾರವನ್ನು ನಡೆಸೋಣವನ್ನು ಕುರಿತು ಯಾವ ಸಭಿಕನೂ ಯಾವ ವಿಜ್ಞಾಪನೆಯನ್ನೂ ಮಾಡಕೂಡದು ಅಥವಾ ಅನ್ಯಥಾ ಅದನ್ನು ಸಭೆಯು ಆಲೋಚನೆಗೆ ತರಕೂಡದು.

54. ಒಂದು ಬಿಲ್ಲು ಈ ರೆಗ್ಯುಲೇಷನಿನ 13ನೆ ಪ್ರಕರಣದ ಮೇರೆ ಶ್ರೀಮನ್ ಮಹಾರಾಜರವರ ಅನುಮತಿಯನ್ನು ಹೊಂದಿದಾಗ, ಅದು ಸರ್ಕಾರಿ ಗೆಜೆಟಿನಲ್ಲಿ ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಕಟಿಸಲ್ಪಡತಕ್ಕದ್ದು.

10. ಅರ್ಜಿಗಳಿಗೆ ಸಂಬಂಧಿಸುವ ನಿಬಂಧನೆಗಳು.

55. ಸಭೆಗೆ ಬರುವ ಅರ್ಜಿಗಳು ಈ ಕೆಳಗಿನಂತೆ ಇರಬೇಕು :—

1. ನಿಜವಾಗಿ ಸಭೆಯ ಆಲೋಚನೆಯಲ್ಲಿರುವ ಒಂದಾನೊಂದು ವಿಷಯಕ್ಕೆ ಸಂಬಂಧಿಸಬೇಕು ;

2. "ನ್ಯಾಯ ವಿಧಾಯಕ ಸಭೆಗೆ" ಎಂದು ಅವುಗಳಿಗೆ ವಿಳಾಸ ಬರೆದಿರಬೇಕು ;

3. ತಾರೀಖು ಹಾಕಲ್ಪಟ್ಟು ಅರ್ಜಿದಾರ, ಅಥವಾ ಅರ್ಜಿದಾರರಿಂದ ರುಜು ಮಾಡಲ್ಪಟ್ಟಿರಬೇಕು ;

4. ವಿನಯವಾದ ಮತ್ತು ಮರ್ಯಾದೆಯುಳ್ಳ ಮಾತುಗಳಲ್ಲಿ ಬರೆದಿರಬೇಕು ; ಮತ್ತು

5. ಒಂದು ಸ್ಪಷ್ಟವಾದ ಪ್ರಾರ್ಥನೆಯೊಡನೆ ಮುಗಿಯಬೇಕು.

56. ಒಂದು ಅರ್ಜಿಯು 55ನೆ ನಿಬಂಧನೆಗೆ ಅನುಸಾರವಾಗಿ ಇಲ್ಲದೆ ಇದ್ದರೆ, ಅಥವಾ ಅದಕ್ಕೆ ಹಾಕಿರುವ ಯಾವುದಾದರೂ ರುಜುವಿನ ಪ್ರಾಮಾಣಿಕತೆಯನ್ನು ಕುರಿತು ಸಂದೇಹಪಡಲು ಸೆಕ್ರೆಟರಿಗೆ ಕಾರಣ ತೋರಿದರೆ, ಆತನು ಅರ್ಜಿಯ ಹಿಂಭಾಗದಲ್ಲಿ ಆ ಅಂಶವನ್ನು ದೃಢೀಕರಿಸಿ (ಸರ್ಟಿಫೈಮಾಡಿ) ಆ ಸಂಗತಿಯನ್ನು ಸಭೆಗೆ ರಿಪೋರ್ಟು ಮಾಡತಕ್ಕದ್ದು. ಸಭೆಯು ಆಗ ಆ ಅರ್ಜಿಯನ್ನು ತಳ್ಳಿಬಿಡಬಹುದು. ಅದು ಆಗ ಹಾಗೆ ತಳ್ಳುಪಡಿಯಾದುದಕ್ಕೆ ಕಾರಣದ ವಿವರದೊಡನೆ ಅರ್ಜಿದಾರ ಅಥವಾ ಅರ್ಜಿದಾರರಿಗೆ ವಾಪಸು ಕಳುಹಿಸಲ್ಪಡತಕ್ಕದ್ದು.

57. ಅರ್ಜಿಯು 55ನೆ ನಿಬಂಧನೆಗೆ ಅನುಸಾರವಾಗಿದ್ದರೆ, ಸೆಕ್ರೆಟರಿಯು, ಅವಶ್ಯವಾಗಿದ್ದರೆ, ಅದರ ಒಂದು ಸಂಗ್ರಹವನ್ನು ಬರೆದು ಅರ್ಜಿಯನ್ನು ಅಥವಾ ಅದರ ಸಂಗ್ರಹವನ್ನು ಸಭೆಯ ಮುಂದೆ ಓದುವುದರಿಂದ ಅದನ್ನು ಪರ್ಯಾಲೋಚನೆಗೆ ತರಬಹುದು. ಸಭೆಯು ತನಗೆ ಯುಕ್ತವಾಗಿ ತೋರುವ ರೀತಿಯಲ್ಲಿ ಅರ್ಜಿಯನ್ನು ವ್ಯವಸ್ಥೆ ಮಾಡಬಹುದು.

11. ಸಭೆಗೆ ಪರಕೀಯರನ್ನು ಬಿಡೋಣ.

58. ಸಭೆಯು ಸೇರಿರುವ ಕಾಲಗಳಲ್ಲಿ ಸಭೆಗೆ ಪ್ರವೇಶಿಸಲಪೇಕ್ಷಿಸುವ ಜನಗಳು ಸೆಕ್ರೆಟರಿಗೆ ಬಿನ್ನಹ ಮಾಡಿಕೊಳ್ಳತಕ್ಕದ್ದು, ಆತನು ಅದರ ಮೇಲೆ ಅಧ್ಯಕ್ಷರ ಅಪ್ಪಣೆಯನ್ನು ಪಡೆಯತಕ್ಕದ್ದು.

59. ಸಭೆಯು ಸೇರಿರುವಾಗ ಯಾವಾಗಲಾದರೂ, ಅಧ್ಯಕ್ಷರು ಪರಕೀಯರೆಲ್ಲರೂ ಆಚೆಗೆ ಹೋಗತಕ್ಕದ್ದೆಂದು ಅಪ್ಪಣೆ ಮಾಡಬಹುದು.

60. ಸ್ವಾರ್ಥಗಳಿಗೆ ವಿಶೇಷವಾಗಿ ಸಂಬಂಧಿಸುವ ಒಂದು ಬಿಲ್ಲು ಸಭೆಯ ಅಥವಾ ಆದರ ನಿಯುಕ್ತ ಸಮಾಜದ ಆಲೋಚನೆಯಲ್ಲಿದ್ದು ಯಾವನ ಅರ್ಥಗಳು ಹಾಗೆ ಸಂಬಂಧಿಸಿವೆಯೋ ಅಂಥಾ ಯಾವ ಮನುಷ್ಯನಾದರೂ ಸ್ವತಃ ಅಥವಾ ವಕೀಲನ ಮೂಲಕ ವಿಚಾರಣೆ ಮಾಡಲ್ಪಡುವುದಕ್ಕೆ ಅಪ್ಪಣೆಗಾಗಿ ಸಭೆಗೆ ಅಥವಾ ನಿಯುಕ್ತ ಸಮಾಜಕ್ಕೆ ಬಿನ್ನಹ ಮಾಡಿಕೊಂಡರೆ, ಸಭೆಯು ಅಥವಾ ನಿಯುಕ್ತ ಸಮಾಜವು ಯಾವನಾದರೂ ಸಭಿಕನ ವಿಜ್ಞಾಪನೆಯ ಮೇಲೆ ಯಾವುದರಲ್ಲಿ ವಿಜ್ಞಾಪನೆಯು ಮಾಡಲ್ಪಟ್ಟಿತೊ ಅಂಥಾ ಕೂಟದಲ್ಲಿ ಅಥವಾ ಮುಂದೆ ಯಾವುದಾದರೂ ಗೊತ್ತಾದ ಕಾಲದಲ್ಲಿ ಮತ್ತು ದಿನದಲ್ಲಿ ಅರ್ಜಿದಾರನು ಅಥವಾ ಅವನ ವಕೀಲನು ವಿಚಾರಣೆ ಮಾಡಲ್ಪಡತಕ್ಕದೆಂದು ಅಪ್ಪಣೆ ಮಾಡಬಹುದು ; ಮತ್ತು ಅರ್ಜಿದಾರನು ಅಥವಾ ಅವನ ವಕೀಲನು ಸಂದರ್ಭಾನುಸಾರವಾಗಿ ಮೇಲ್ಕಂಡ ಕೂಟದಲ್ಲಿ ಇಲ್ಲದೆ ಇದ್ದರೆ ಅಥವಾ ಮೇಲ್ಕಂಡ ಕಾಲದಲ್ಲಿ ಮತ್ತು ದಿನದಲ್ಲಿ ಬರದೆಹೋದರೆ, ಸಭೆಯಿಂದ ಅಥವಾ ನಿಯುಕ್ತ ಸಮಾಜದಿಂದ ಕೊಡಲ್ಪಟ್ಟ ಅಪ್ಪಣೆಯು ರದ್ದಾದಂತೆ ಭಾವಿಸತಕ್ಕದ್ದು.

61. 43ನೆ ಮತ್ತು 60ನೆ ನಿಬಂಧನೆಗಳಲ್ಲಿ ವಿಧಿಸಿರುವಂತೆ ವಿನಾ ಯಾವ ಪರಕೀಯನೂ ಸಭೆಯನ್ನು ಅಥವಾ ಯಾವ ನಿಯುಕ್ತ ಸಮಾಜವನ್ನೂ ಸಂಬೋಧಿಸಲು ಅಪ್ಪಣೆ ಕೊಡಲ್ಪಡತಕ್ಕದ್ದಿಲ್ಲ.

62. ಸಭೆಯನ್ನು ಅಥವಾ ಒಂದು ನಿಯುಕ್ತ ಸಮಾಜವನ್ನು ಸಂಬೋಧಿಸಲು 60ನೆ ನಿಬಂಧನೆಯ ಮೇರೆ ಅಪ್ಪಣೆ ಕೊಡಲ್ಪಟ್ಟಿರುವ ಯಾವನಾದರೂ ಮನುಷ್ಯನ ವಿಚಾರಣೆಯು, ಅಂಥಾ ಮನುಷ್ಯನ ಹೇಳಿಕೆಯು ಅಸಂಗತವಾಗಿ ಅಥವಾ ಅತಿ ವಿಸ್ತಾರವಾಗಿ ಇದ್ದರೆ, ಅಥವಾ ಮತ್ತಾವುದಾದರೂ ಇತರ ಸಾಕಾದ ಕಾರಣಕ್ಕೋಸರ, ನಿಂತುಹೋಗತಕ್ಕದ್ದೆಂದು ಯಾವ ಸಭಿಕನಾದರೂ ವಿಜ್ಞಾಪಿಸಬಹುದು

12. ಸೆಕ್ರೆಟರಿಯ ಕೆಲಸಗಳು.

63. ಹಿಂದಿನ ನಿಬಂಧನೆಗಳಲ್ಲಿ ವಿವರಿಸಿರುವ ಕೆಲಸಗಳ ಜತೆಗೆ ಈ ಕೆಳಗಿನ ಕೆಲಸಗಳನ್ನು ಮಾಡಲು ಸೆಕ್ರೆಟರಿಯು ಬದ್ಧನಾಗಿರತಕ್ಕದ್ದು :—

1. ಸಭೆಯ ಕಾಗದ ಪತ್ರಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳುವುದು ;

2. ವಿಧಿಸಲ್ಪಟ್ಟ ಪುಸ್ತಕಗಳನ್ನು ಇಡುವುದು ;

3. ಎಲ್ಲಾ ಕೂಟಗಳಿಗೂ ಒಂದು ನಡವಳಿಕೆಗಳ ಟಿಪ್ಪಣಿಗಳನ್ನು ಬರೆಯುವುದು ;

4. ಅಚ್ಚು ಹಾಕಬೇಕೆಂದು ಆಜ್ಞಾಪಿಸಲ್ಪಟ್ಟಿರುವ ಎಲ್ಲಾ ಕಾಗದಗಳ ಅಚ್ಚು ಹಾಕೋಣವನ್ನು ಮೇಲ್ವಿಚಾರಣೆ ಮಾಡುವುದು ;

5. ಸಭೆಯಿಂದ ಆಜ್ಞಾಪಿಸಲ್ಪಟ್ಟಿರುವ ತಿದ್ದುಪಾಟುಗಳನ್ನು ಬಿಲ್ಲುಗಳಲ್ಲಿ ಬರೆಯುವುದು, ಮತ್ತು ಛಾಪಿಸುವುದಕ್ಕೆ ಸಂಬಂಧವಾದ ತಪ್ಪುಗಳಿಲ್ಲದಂತೆ ಎಲ್ಲಾ ಬಿಲ್ಲುಗಳನ್ನೂ ರೆಗ್ಯುಲೇಷನ್‌ಗಳನ್ನೂ ಪರಿಶೋಧಿಸುವುದು ;

6. ಬಿಲ್ಲುಗಳ ಮತ್ತು ರೆಗ್ಯುಲೇಷನ್‌ಗಳ ಅಂಚಿನ ಸಂಗ್ರಹಗಳನ್ನೂ ಮತ್ತು ಅವುಗಳ ಅಧ್ಯಾಯಗಳ ಹೆಸರುಗಳನ್ನೂ (ಶಿರ್ಸ್ನಾಮೆಗಳು) ಮತ್ತು ಏರ್ಪಾಡನ್ನೂ ಮತ್ತು ಅವುಗಳ ಪ್ರಕರಣಗಳಿಗೆ ಸಂಖ್ಯೆ ಹಾಕೋಣವನ್ನೂ ಸಿದ್ಧಪಡಿಸಿ ತಿದ್ದುಪಾಟು ಮಾಡುವುದು;

7. ಸಭೆಯ ಅಪ್ಪಣೆಯ ಮೇರೆಗೆ ಕಾಗದ ಪತ್ರಗಳನ್ನು ನಡೆಸುವುದು;

8. ಅಪೇಕ್ಷಿಸಿದಾಗ ಬಿಲ್ಲುಗಳನ್ನು ಏರ್ಪಡಿಸುವುದರಲ್ಲಿ ಸಹಾಯಮಾಡುವುದು;

9. ಸಭೆಗೆ ಸಾಮಾನ್ಯವಾಗಿ ಸಹಾಯ ಮಾಡುವುದು.

13. ಪುಸ್ತಕಗಳು ಮತ್ತು ಕಾಗದಪತ್ರಗಳು (ರಿಕಾರ್ಡು).

64. ಸಭೆಯ ನಡವಳಿಕೆಗಳ ಸಂಗ್ರಹವು ಅಡಗಿರುವ ಒಂದು ದಿನಚರಿಯನ್ನು (ಜರ್ನಲ್) ಇಡತಕ್ಕದ್ದು. ಈ ದಿನಚರಿಯನ್ನು ಪ್ರತಿ ಕೂಟದ ತರುವಾಯ ಸಾಧ್ಯವಾದಷ್ಟು ಜಾಗ್ರತೆಯಾಗಿ ದೃಢೀಕರಣಕ್ಕಾಗಿಯೂ ರುಜುವಿಗಾಗಿಯೂ ಅಧ್ಯಕ್ಷರಿಗೆ ಕಳುಹಿಸತಕ್ಕದ್ದು.

ಅಂಥಾ ಸಂಗ್ರಹದ ಒಂದು ಪ್ರತಿಯನ್ನು ಪ್ರತಿ ಕೂಟವೂ ಮುಗಿದ ತರುವಾಯ ಸಾಧ್ಯವಾದಷ್ಟು ಜಾಗ್ರತೆಯಾಗಿ ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಸರ್ಕಾರಿ ಗೆಜೆಟಿನಲ್ಲಿಯೂ ಕೂಡ ಪ್ರಕಟಿಸತಕ್ಕದ್ದು.

65. ಸಭೆಯ ವಿಳಾಸಕ್ಕೆ ಬಂದ ಅಥವಾ ಸಭೆಯ ಅಪ್ಪಣೆಯ ಮೇರೆ ರವಾನಿಸಲ್ಪಟ್ಟ ಎಲ್ಲಾ ಕಾಗದಗಳ ಮತ್ತು ಅರ್ಜಿಗಳ ಒಂದು ರಿಜಿಸ್ಟರನ್ನೂ ಅನುಕ್ರಮಣಿಕೆಯನ್ನೂ ಇಡತಕ್ಕದ್ದು.

14. ಸಾಮಾನ್ಯ ವಿಷಯ.

66. ಸಭೆಯು, ಒಂದು ವಿಜ್ಞಾಪನೆಯ ಮೇಲೆ ಮತ್ತು ಯಾವ ಕಾಲದಲ್ಲಿಯಾದರೂ, ಮೇಲ್ಕಂಡ ನಿಬಂಧನೆಗಳಲ್ಲಿ ಯಾವುದರ ಉಪಯೋಗವನ್ನಾದರೂ ಕೊಂಚಕಾಲ ನಿಲ್ಲಿಸಬಹುದು.

67. ಯಾವುದರ ವಿಷಯದಲ್ಲಿ ಎರಡು ವರ್ಷಗಳ ಕಾಲಪರಿಯಂತ ಸಭೆಯಲ್ಲಿ ಯಾವ ವಿಜ್ಞಾಪನೆಯೂ ಮಾಡಲ್ಪಡಲಿಲ್ಲವೋ ಅಂಥಾ ಯಾವುದಾದರೂ ಬಿಲ್ಲನ್ನು ಅಧ್ಯಕ್ಷರ ಅಪ್ಪಣೆಯ ಮೇರೆ ಕೆಲಸದ ಪಟ್ಟಿಯಿಂದ ತೆಗೆದುಹಾಕಬಹುದು; ಮತ್ತು ಹಾಗೆ ತೆಗೆದುಹಾಕಿದ ಸಂಗತಿಯನ್ನು ಅಧ್ಯಕ್ಷರು ಸಭೆಗೆ ತಿಳಿಸತಕ್ಕದ್ದು.

68. ದಿವಾನರು ಅಥವಾ ಒಂದು ಬಿಲ್ಲನ್ನು ಕೈಕೊಂಡಿರುವ ಸಭಿಕನು ಇನ್ಯಾರಾದರೂ ಇತರ ಸಭಿಕನಿಗೆ ಅದನ್ನು ಒಪ್ಪಿಸಬಹುದು ಮತ್ತು ಯಾವನಿಗೆ ಅದು ಹಾಗೆ ಒಪ್ಪಿಸಲ್ಪಟ್ಟಿತೋ ಆ ಸಭಿಕನು ಈ ನಿಬಂಧನೆಗಳ ಉದ್ದೇಶಗಳಿಗಾಗಿ ಆ ಬಿಲ್ಲನ್ನು ಕೈಕೊಂಡಿರುವ ಸಭಿಕನಾಗಿರತಕ್ಕದ್ದು.

69. ಯಾವ ಸಭಿಕನಾದರೂ ಸಭೆಯ ಮುಂದೆ ಇರುವ ಕೆಲಸಕ್ಕೆ ಸಂಬಂಧಪಟ್ಟ ಯಾವುದಾದರೂ ಕಾಗದಗಳಿಗಾಗಿ ಅಥವಾ ವರ್ತಮಾನಕ್ಕಾಗಿ ಸೆಕ್ರೆಟರಿಗೆ ಬಿನ್ನಹ ಮಾಡಬಹುದು ಮತ್ತು ದಿವಾನರು ಅಂಥಾ ಕಾಗದಗಳನ್ನು ಅಥವಾ ವರ್ತಮಾನವನ್ನು ಕೊಡಬಹುದೆ ಎಂದು ನಿಶ್ಚಯಿಸತಕ್ಕದ್ದು.

ತಾರೀಖು 6ನೆ ಮಾರ್ಚ 1907.

ಇಸ್ತಿಹಾರ್ನಾಮೆ

ನಂ. ಜಿ. 2709—ಲೆಜಿಸ್. 19-1906, ಮೈಸೂರು ಸೀಮೆಯಲ್ಲಿ ಸಿಕ್ಕಿದ ನಿಕ್ಷೇಪಕ್ಕೆ ಸಂಬಂಧಪಟ್ಟ ರೆಗ್ಯುಲೇಷನಿನ ಇದರಡಿ ಇರುವ ಚಿತ್ತು ಪ್ರತಿಯು ಅದರ ಉದ್ದೇಶಗಳ ಮತ್ತು ಕಾರಣಗಳ ವಿವರಣೆಯೊಡನೆ ಸರ್ವಜನರ ತಿಳಿವಳಿಕೆಯ ಬಗ್ಗೆ ಪ್ರಕಟಿಸಲ್ಪಟ್ಟಿದೆ.

2. ಈ ಚಿತ್ತು ರೆಗ್ಯುಲೇಷನನ್ನು ಅದು ಗೆಜೆಟ್ಟಿನಲ್ಲಿ ಪ್ರಕಟನೆಯಾದ ಮೂರು ತಿಂಗಳ ಕೊನೆಯಲ್ಲಿ ಆಲೋಚನೆಗೆ ತೆಗೆದುಕೊಳ್ಳಲಾಗುವುದು. ಈ ಕಾಲದೊಳಗೆ ಆ ವಿಷಯದಲ್ಲಿ ಬರುವ ಎಲ್ಲಾ ಸೂಚನೆಗಳನ್ನೂ ಗುಣದೋಷ ನಿರೂಪಣೆಗಳನ್ನೂ ಕ್ರಮವಾಗಿ ಪರ್ಯಾಲೋಚಿಸಲಾಗುವುದು.

ಅಪ್ಪಣೆಯ ಮೇರೆಗೆ,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟರಿ.

ಮೈಸೂರು ಸರ್ಕಾರದ ಲೆಜಿಸ್ಲೆಟಿವ್ ಇಲಾಖೆ.

(ಚಿತ್ತು ಪ್ರತಿ).

190...ನೆ ವರ್ಷದ ...ನೆ ನಂಬರ್ ರೆಗ್ಯುಲೇಷನ್

ಸಿಕ್ಕಿದ ನಿಕ್ಷೇಪಕ್ಕೆ ಸಂಬಂಧಪಟ್ಟ ಒಂದು ನ್ಯಾಯವನ್ನು (ಕಾನೂನು) ಏರ್ಪಡಿಸಲು ಹುಟ್ಟಿದ ರೆಗ್ಯುಲೇಷನ್.

ಪೀಠಿಕೆ. ಮೈಸೂರು ಸೀಮೆಯಲ್ಲಿ ಸಿಕ್ಕಿದ ನಿಕ್ಷೇಪವನ್ನು ಕುರಿತು ಒಂದು ನ್ಯಾಯವನ್ನು (ಕಾನೂನನ್ನು) ಏರ್ಪಡಿಸುವುದು ಯುಕ್ತವಾಗಿರುವುದರಿಂದ ಶ್ರೀಮನ್ ಮಹಾರಾಜರವರು ಈ ಕೆಳಗೆ ಕಂಡಂತೆ ವಿಧಿಸಲು ಅಪ್ಪಣೆ ದಯಪಾಲಿಸಿರುತ್ತಾರೆ :—

ಅವತರಣಿಕೆ.

ಚಿಕ್ಕ ಹೆಸರು. 1. ಈ ರೆಗ್ಯುಲೇಷನನ್ನು "190......ನೆ ವರ್ಷದ ಮೈಸೂರು ಸೀಮೆಯಲ್ಲಿ ಸಿಕ್ಕಿದ ನಿಕ್ಷೇಪದ ರೆಗ್ಯುಲೇಷನ್" ಎಂದು ಕರೆಯಬಹುದು.

ವ್ಯಾಪ್ತಿ. ಇದು ಮೈಸೂರು ಸೀಮೆಗೆಲ್ಲಾ ವ್ಯಾಪಿಸುತ್ತದೆ.

ಪ್ರಾರಂಭ. ಇದು ನಿರ್ಣಯಿಸಲ್ಪಟ್ಟ ತಾರೀಖಿನಿಂದ ಉಪಯೋಗದಲ್ಲಿ ಬರತಕ್ಕದ್ದು.

ವ್ಯವಹಾರ ವಿಧಿಗಳ ತಳ್ಳುಪಡಿ. 2. ಹಿಂದಿನ ಮೈಸೂರು ಚೀಫ್ ಕಮಿಷನರ 1867ನೆ ಇಸವಿಯ ಏಪ್ರಿಲ್ 17ನೆ ತಾರೀಖಿನ 6ನೆ ನಂಬರು ಇಸ್ತಿಹಾರ್ನಾಮೆಯ ಕೆಳಗೆ ಪ್ರಕಟಿಸಲ್ಪಟ್ಟ ಸಿಕ್ಕಿದ ನಿಕ್ಷೇಪದ ವ್ಯವಸ್ಥೆಯ ನಿಬಂಧನೆಗಳು ಇದರಿಂದ ತಳ್ಳುಪಡಿ ಮಾಡಲ್ಪಟ್ಟವೆ.

ಅರ್ಥ ವಿವರಣೆಯ ವಾಕ್ಯ. 3. ಈ ರೆಗ್ಯುಲೇಷನಿನೊಳಗೆ—

ನಿಕ್ಷೇಪ. "ನಿಕ್ಷೇಪ" ಎಂಬ ಮಾತು ಭೂಮಿಯಲ್ಲಾಗಲಿ ಅದಕ್ಕೆ ಸಂಬಂಧಿಸಿದ ಯಾವ ವಸ್ತುವಿನಲ್ಲಾಗಲಿ ಬಚ್ಚಿಡಲ್ಪಟ್ಟ ಬೆಲೆಯುಳ್ಳ ಯಾವ ವಸ್ತುವಾಗಲಿ ಎಂಬ ಅರ್ಥ ಕೊಡುತ್ತದೆ.

ಡೆಪ್ಯುಟಿ ಕಮಿಷನರು. "ಡೆಪ್ಯುಟಿ ಕಮಿಷನರು" ಎಂಬುದು (1) ಒಂದು ಡಿಸ್ಟ್ರಿಕ್ಟಿನ ಸ್ವತಂತ್ರಾಧಿಕಾರದಲ್ಲಿರುವ ರೆವಿನ್ಯು ಆಫೀಸರೆನುತಲೂ (2) ಈ ರೆಗ್ಯುಲೇಷನಿಗನುಗುಣವಾಗಿ ಒಬ್ಬ ಡೆಪ್ಯುಟಿ ಕಮಿಷನರ ಕೆಲಸಗಳನ್ನು ಮಾಡಲು ಗವರ್ನಮೆಂಟಿನಿಂದ ನೇಮಿಸಲ್ಪಟ್ಟ ಆಫೀಸರೆನುತಲೂ ಅರ್ಥ ಕೊಡುತ್ತದೆ.

ಒಡೆಯನು. ಯಾವ ಮನುಷ್ಯನಾಗಲಿ ಯಾವುದಾದರೂ ಜಮೀನಿನ ಅಥವಾ ಅದಕ್ಕೆ ಸಂಬಂಧಿಸಿದ ವಸ್ತುವಿನ ಪರಭಾರೆಯ ಸಾಧನದಲ್ಲಿ ತನಗೆ ಉಳಿಸಿಕೊಂಡಿರುವ ಜಮೀನಿನಲ್ಲಿ ಅಥವಾ ವಸ್ತುವಿನಲ್ಲಿ ಸಿಕ್ಕಿದ ನಿಕ್ಷೇಪಕ್ಕೆ ಅರ್ಹನಾದರೆ ಅಂಥಾ ಮನುಷ್ಯನು ಸದರೀ ಜಮೀನಿನ ಅಥವಾ ವಸ್ತುವಿನ ಒಡೆಯನೆಂದು ಈ ರೆಗ್ಯುಲೇಷನಿನ ಉದ್ದೇಶಾರ್ಥಗಳ ಬಗ್ಗೆ ಎಣಿಸತಕ್ಕದ್ದು.

ನಿಕ್ಷೇಪವನ್ನು ಕಂಡಾಗ ಅನುಸರಿಸಬೇಕಾದ ಕ್ರಮ.

ನಿಕ್ಷೇಪವನ್ನು ಕಂಡವನಿಂದ ನೋಟೀಸು (ವರ್ತಮಾನ). 4. ಹತ್ತು ರೂಪಾಯಿ ಮೊತ್ತಕ್ಕಿಂತ ಅಥವಾ ಹತ್ತು ರೂಪಾಯಿ ಬೆಲೆಗಿಂತ ಜಾಸ್ತಿಯಾದ ಯಾವ ನಿಕ್ಷೇಪವಾಗಲಿ ಕಾಣಲ್ಪಟ್ಟರೆ ಕಂಡವನು, ಕೂಡಿದಷ್ಟು ತ್ವರಿತದಲ್ಲಿ,

(a) ಅಂಥಾ ನಿಕ್ಷೇಪದ ಸ್ವಭಾವ ಮತ್ತು ಮೊಬಲಗು ಅಥವಾ ಅದರ ಸುಮಾರು ಕ್ರಯ,

(b) ಅದನ್ನು ಕಂಡ ಸ್ಥಳ,

(c) ಕಂಡ ತಾರೀಖು,

ಇವುಗಳನ್ನು ಬರೆದು ಒಂದು ನೋಟೀಸನ್ನು (ವರ್ತಮಾನ) ಡೆಪ್ಯುಟಿ ಕಮಿಷನರಿಗೆ ಕೊಡತಕ್ಕದ್ದು ಮತ್ತು ನಿಕ್ಷೇಪವನ್ನು ಅತ್ಯಂತ ಸಮೀಪದಲ್ಲಿರುವ ಗವರ್ನಮೆಂಟು ಟ್ರಜರಿಯಲ್ಲಾಗಲಿ ಇಡಬಹುದು ಅಥವಾ ಡೆಪ್ಯುಟಿ ಕಮಿಷನರು ಅಗಿಂದಾಗ್ಯೆ ಹೇಳುವ ಕಾಲದಲ್ಲಿ ಮತ್ತು ಸ್ಥಳದಲ್ಲಿ ಸದರಿ ನಿಕ್ಷೇಪವನ್ನು ಹಾಜರ್ಮಾಡುವುದಕ್ಕೋಸ್ಕರ ಯುಕ್ತವೆಂದು ತಿಳಿದು ಗೊತ್ತುಮಾಡುವಂಥಾ ಜಾಮೀನನ್ನಾಗಲೀ ಸದರಿ ಡೆಪ್ಯುಟಿ ಕಮಿಷನರಿಗೆ ಕೊಡಬಹುದು.

ಬಾಧ್ಯಸ್ಥರು ಹಾಜರಾಗಲು ಕೋರುವಂಥಾ ಇಸ್ತಿಹಾರ್ನಾಮೆ.

5. ನಾಲ್ಕನೆ ಪ್ರಕರಣಕ್ಕನುಗುಣವಾಗಿ ಒಂದು ನೋಟೀಸನ್ನು ಬರೆಮಾಡಿಕೊಂಡವೇಳೆ ಡೆಪ್ಯುಟಿ ಕಮಿಷನರು ತನಗೆ ಯುಕ್ತವಾಗಿ ತೋರುವಂಥಾ ವಿಚಾರಣೆಯನ್ನು, ಏನಾದರೂ ಇದ್ದರೆ, ಮಾಡಿದ ಅನಂತರ ಈ ಕೆಳಗೆ ಹೇಳಿರುವ ಮೇರೆಗೆ ನಡೆದುಕೊಳ್ಳತಕ್ಕದ್ದು. ಎಂದರೆ :—

(a) ಗವರ್ನಮೆಂಟಿನವರು ಅಗಿಂದಾಗ್ಯೆ ವಿಧಿಸುವ ಮೇರೆಗೆ ಕೆಳಗೆ ಬರುವ ವಿಷಯವನ್ನು ಕುರಿತು ಒಂದು ಇಸ್ತಿಹಾರ್ನಾಮೆಯನ್ನು ಪ್ರಕಟಿಸತಕ್ಕದ್ದು. ಯಾವುದೆಂದರೆ :— ಫಲಾನೆ ತಾರೀಖಿನಲ್ಲಿ (ಆ ತಾರೀಖನ್ನು ನಮೂದಿಸಿ) ಫಲಾನೆ ಸ್ಥಳದಲ್ಲಿ (ಆ ಸ್ಥಳವನ್ನು ನಮೂದಿಸಿ) ಫಲಾನೆ ನಿಕ್ಷೇಪ (ಆ ನಿಕ್ಷೇಪದ ಸ್ವಭಾವ ಮೊತ್ತ ಮತ್ತು ಸುಮಾರು ಬೆಲೆ ಇವುಗಳನ್ನು ನಮೂದಿಸಿ) ಕಾಣಲ್ಪಟ್ಟಿತೆನುತಲೂ ಇಸ್ತಿಹಾರ್ನಾಮೆಯಲ್ಲಿ ಕಾಣಿಸಿರುವಂಥಾ ತಾರೀಖಿನಲ್ಲಿ ಇಸ್ತಿಹಾರ್ನಾಮೆಯೊಳಗೆ ಗೊತ್ತುಮಾಡಿರುವ ಸ್ಥಳದಲ್ಲಿ ಡೆಪ್ಯುಟಿ ಕಮಿಷನರ ಮುಂದೆ ಸದರಿ ನಿಕ್ಷೇಪಕ್ಕಾಗಲಿ ಅದರ ಯಾವ ಭಾಗಕ್ಕಾಗಲಿ ಬಾಧ್ಯಸ್ಥರಾದ ಸಮಸ್ತಜನರೂ ಖುದ್ದಾಗಿಯಾಗಲಿ ಮುಖ್ತಾರಿಕನ ಮೂಲಕವಾಗಿ ಆಗಲಿ ಹಾಜರಾಗಬೇಕೆನುತಲೂ ಬರೆದಿರತಕ್ಕದ್ದು. ಅಂಥಾ ತಾರೀಖು ಸದರಿ ಇಸ್ತಿಹಾರ್ನಾಮೆ ಪ್ರಕಟವಾದ ತಾರೀಖು ಮೊದಲು ನಾಲ್ಕು ತಿಂಗಳೊಳಗಾಗಿ ಅಥವಾ ಆರು ತಿಂಗಳುಗಳಿಗೆ ಮೀರಿ ಇರಕೂಡದು ;

(b) ಎಲ್ಲಿ ನಿಕ್ಷೇಪ ಕಂಡಿತೋ ಆ ಸ್ಥಳವು ಹಾಗೆ ಕಂಡ ತಾರೀಖಿನಲ್ಲಿ ಕಂಡಂಥಾವನ ಸ್ವಾಧೀನದಲ್ಲಿ ಅಲ್ಲದೆ ಮತ್ತೊಬ್ಬನ ಸ್ವಾಧೀನದಲ್ಲಿ ಇರುವಂತೆ ಡೆಪ್ಯುಟಿ ಕಮಿಷನರಿಗೆ ತಿಳಿಯಬಂದರೆ ಅಂಥಾ ಮನುಷ್ಯನಿಗೂ ಸಹ ಅದೇ ಅರ್ಥಕ್ಕೆ ಒಂದು ಸ್ಪೆಷಲ್ ನೋಟೀಸನ್ನು ಡೆಪ್ಯುಟಿ ಕಮಿಷನರು ಬರೆದುಕೊಡತಕ್ಕದ್ದು.

ಹಾಜರಾಗಲು ತಪ್ಪಿದರೆ. ಹಕ್ಕನ್ನು ಹೋಗಲಾಡಿಸಿಕೊಳ್ಳುವಿಕೆ.

6. ಅಂಥಾ ನಿಕ್ಷೇಪಕ್ಕೆ ಅಥವಾ ಅದರ ಯಾವುದಾದರೂ ಭಾಗಕ್ಕೆ ಅದನ್ನು ಕಂಡ ಸ್ಥಳದ ಒಡೆಯನಾಗಿಯಾಗಲಿ ಅನ್ಯಥಾ ಆಗಲಿ ಬಾಧ್ಯತೆಯನ್ನು ಹೊಂದಿರುವ ಯಾವ ಮನುಷ್ಯನಾಗಲಿ 5ನೆ ಪ್ರಕರಣಕ್ಕನುಗುಣವಾಗಿ ಪ್ರಕಟಿಸಲ್ಪಟ್ಟ ಇಸ್ತಿಹಾರಿನಲ್ಲಿ ಕೋರಿದ ಹಾಗೆ ಹಾಜರಾಗದೆ ಹೋದರೆ ಅಂಥಾ ಬಾಧ್ಯತೆಯನ್ನು ಹೋಗಲಾಡಿಸಿಕೊಳ್ಳತಕ್ಕದ್ದು.

ಡೆಪ್ಯುಟಿ ಕಮಿಷನರಿಂದ ವಿಚಾರಿಸಲ್ಪಡತಕ್ಕ ಮತ್ತು ಗೊತ್ತು ಮಾಡಲ್ಪಡತಕ್ಕ ಸಂಗತಿಗಳು.

7. ಐದನೆ ಪ್ರಕರಣಕ್ಕನುಗುಣವಾಗಿ ಪ್ರಕಟಿಸಿದ ತಾರೀಖಿನಲ್ಲಿ ಡೆಪ್ಯುಟಿ ಕಮಿಷನರು ಸದರಿ ನಿಕ್ಷೇಪವನ್ನು ತನ್ನ ಮುಂದೆ ಹಾಜರ್ಮಾಡಿಸಿಕೊಂಡು ವಿಚಾರಿಸತಕ್ಕ ಮತ್ತು ಗೊತ್ತುಮಾಡತಕ್ಕವುಗಳು ಯಾವುವೆಂದರೆ :—

(a) ಅಂಥಾ ನಿಕ್ಷೇಪವನ್ನು ಕಂಡ ಮನುಷ್ಯನು, ಸ್ಥಳ, ಮತ್ತು ಸಂದರ್ಭಗಳು, ಮತ್ತು

(b) ಸಾಧ್ಯವಾಗುವಷ್ಟರಮಟ್ಟಿಗೆ ಅಂಥಾ ನಿಕ್ಷೇಪವನ್ನು ಬಚ್ಚಿಟ್ಟ ಮನುಷ್ಯನು ಮತ್ತು ಹಾಗೆ ಬಚ್ಚಿಡಲು ಉಂಟಾದ ಸಂದರ್ಭಗಳು.

ನಿಕ್ಷೇಪಕ್ಕಾಗಿ ವಾದಿಸುವ ಮನುಷ್ಯನು ದಾವೆ ತರುವುದಕ್ಕೆ ಕೊಡಬೇಕಾದ ಕಾಲ.

8. ಏಳನೆ ಪ್ರಕರಣಕ್ಕನುಗುಣವಾಗಿ ವಿಚಾರಣೆ ಮಾಡುವಲ್ಲಿ ಸದರಿ ನಿಕ್ಷೇಪವು ಕಾಣಬಂದ ತಾರೀಖಿಗೆ ಮುಂಚೆ ನೂರು ವರುಷಗಳೊಳಗೆ ಅದು ಸದರಿ ಇಸ್ತಿಹಾರ್ನಾಮೆಗನುಗುಣವಾಗಿ ಹಾಜರಾಗಿ ಅಂಥಾ ನಿಕ್ಷೇಪ ತನ್ನದೆಂದು ವಾದಿಸುವ ಮನುಷ್ಯನಿಂದ ಅಥವಾ ಅಂಥಾ ಮನುಷ್ಯನಿಗೆ ಬಾಧ್ಯತೆಯನ್ನು ಉಂಟುಮಾಡಿಸಿರುವ ಬೇರೆ ಇತರ ಮನುಷ್ಯನಿಂದ ಬಚ್ಚಿಡಲ್ಪಟ್ಟದ್ದೆಂತ ನಂಬಲು ಡೆಪ್ಯುಟಿ ಕಮಿಷನರಿಗೆ ಕಾರಣವು ಕಾಣಬಂದರೆ ಬಾಧ್ಯಸ್ಥನು ತನ್ನ ಬಾಧ್ಯತೆಯನ್ನು ಸ್ಥಾಪಿಸಿಕೊಳ್ಳತಕ್ಕ ಬಗ್ಗೆ ಸಿವಿಲ್ ಕೋರ್ಟಿನಲ್ಲಿ ದಾವೆಯನ್ನು ದಾಖಲ್ಮಾಡುವುದಕ್ಕೋಸ್ಕರ ಸಾಕಾಗಿರುವಂತೆ ತನಗೆ ತೋರುವ ಕಾಲದ ತನಕ ಡೆಪ್ಯುಟಿ ಕಮಿಷನರು ಸದರಿ ಮೊಕದ್ದಮೆಯ ವಿಚಾರಣೆಯನ್ನು ತಳ್ಳಿಡಬೇಕೆಂದು ಒಂದು ಅಪ್ಪಣೆ ಮಾಡತಕ್ಕದ್ದು.

ನಿಕ್ಷೇಪಕ್ಕೆ ಒಡೆಯನು ಇಲ್ಲವೆಂದು ಹೇಳಬಹುದಾದ ಕಾಲ.

9. ಅಂಥಾ ವಿಚಾರಣೆಯಲ್ಲಿ ನಿಕ್ಷೇಪವನ್ನು ಹಾಗೆ ಬಚ್ಚಿಟ್ಟದ್ದೆಂತೆ ನಂಬಲು ಕಾರಣವಿಲ್ಲದ ಹಾಗೆ ಡೆಪ್ಯುಟಿ ಕಮಿಷನರಿಗೆ ತೋರಿದರೆ ; ಅಥವಾ

ಎಂಟನೆ ಪ್ರಕರಣಕ್ಕನುಗುಣವಾಗಿ ಒಂದು ವಾಯಿದೆಯು ಗೊತ್ತಾಗಿರುವಾಗ ಈ ವಾಯಿದೆಯ ಒಳಗಾಗಿ ಡೆಪ್ಯುಟಿ ಕಮಿಷನರಿಗೆ ತಿಳಿದ ಮಟ್ಟಿಗೆ ಯಾವ ವ್ಯಾಜ್ಯವೂ ದಾಖಲಾಗದೇ ಇದ್ದರೆ ; ಅಥವಾ

ಸದರಿ ವಾಯಿದೆಯೊಳಗೆ ಅಂಥಾ ವ್ಯಾಜ್ಯವು ದಾಖಲಾಗಿದ್ದಾಗ್ಯೂ ವಾದಿಯ ಬಾಧ್ಯತೆಯು ಕಡೆಯಲ್ಲಿ ತಳ್ಳಿಪಡಿಯಾಗಿದ್ದರೆ; ಸದರೀ ನಿಕ್ಷೇಪಕ್ಕೆ ಒಡೆಯನು ಇಲ್ಲವೆಂದು ಡೆಪ್ಯುಟಿ ಕಮಿಷನರು ಹೇಳಬಹುದು.

ಅಂಥಾ ಹೇಳಿಕೆಯ ಮೇಲೆ ಅಪ್ಪೀಲು.

ಈ ಪ್ರಕರಣಕ್ಕೆ ಅನುಗುಣವಾದ ಹೇಳಿಕೆಯಿಂದ ಅಸಮಾಧಾನಪಟ್ಟ ಯಾವ ಮನುಷ್ಯನಾಗಲಿ ಆ ತಾರೀಖು ಮೊದಲು ಎರಡು ತಿಂಗಳೊಳಗಾಗಿ ಗವರ್ನ್ಮೆಂಟಿಗೆ ಅಪ್ಪೀಲು ಮಾಡಿಕೊಳ್ಳಬಹುದು.

ಅಂಥಾ ಅಪ್ಪೀಲಿಗೆ ಒಳಪಟ್ಟು ಸದರಿ ಹೇಳಿಕೆಯು ಕಡೆಯದಾದ ಮತ್ತು ನಿಶ್ಚಯವಾದ ಶೀರಸ್ತ್ರನವಾಗಿರತಕ್ಕದ್ದು.

ಹೇಳಿಕೆಯ ಅನಂತರ ನಡೆದುಕೊಳ್ಳತಕ್ಕ ಕ್ರಮ.

10. ಯಾವ ನಿಕ್ಷೇಪವನ್ನು ಕುರಿತಾಗಲಿ ಒಂಭತ್ತನೆಯ ಪ್ರಕರಣಕ್ಕನುಗುಣವಾಗಿ ಹೇಳಿಕೆಯಾಗಿರುವಾಗ ಅಂಥಾ ನಿಕ್ಷೇಪವು ಈ ಕೆಳಗೆ ಅಡಗಿರುವ ನಿಯಮಗಳಿಗನುಗುಣವಾಗಿ ವ್ಯವಸ್ಥೆ ಮಾಡಲ್ಪಡತಕ್ಕದ್ದು.

ಸ್ಥಳದ ಒಡೆಯನಾಗಿ ಯಾವನೂ ವ್ಯಾಜ್ಯ ಮಾಡದಾಗ ಕಂಡುಹಿಡಿದಂಥಾವನಿಗೆ ನಿಕ್ಷೇಪವನ್ನು ಕೊಡಲ್ಪಡತಕ್ಕದ್ದು.

11. ಮೇಲ್ಕಂಡಹಾಗೆ ಯಾವ ನಿಕ್ಷೇಪವನ್ನು ಕುರಿತಾಗಲಿ ಹೇಳಿಕೆಯಾಗಿರುವಾಗ ಅಂಥಾ ನಿಕ್ಷೇಪವನ್ನು ಕಂಡ ಮನುಷ್ಯನಲ್ಲದೆ ಬೇರೆ ಯಾವನಾಗಲಿ ಐದನೆ ಪ್ರಕರಣಕ್ಕನುಗುಣವಾಗಿ ಪ್ರಕಟಿಸುವ ಇಸ್ತಿಹಾರಿನಲ್ಲಿ ಕೋರುವ ಪ್ರಕಾರ ಹಾಜರಾಗಿ ಸದರಿ ನಿಕ್ಷೇಪವನ್ನು ಕಂಡ ಸ್ಥಳದ ಒಡೆಯನಾಗಿ ತನಗೆ ಬರಬೇಕಾದ ಒಂದು ಹಿಸ್ಸೆಯನ್ನು ಕುರಿತು ವಾದಿಸದೇ ಇದ್ದರೆ ಡೆಪ್ಯುಟಿ ಕಮಿಷನರು 16ನೆ ಪ್ರಕರಣದ ನಿಯಮಗಳಿಗೆ ಒಳಪಟ್ಟು ಅಂಥಾ ನಿಕ್ಷೇಪವನ್ನು ಕಂಡು ಹಿಡಿದವನಿಗೆ ಒಪ್ಪಿಸಬಡತಕ್ಕದ್ದು.

ಅಂಥಾ ಒಬ್ಬ ಮನುಷ್ಯನು ಮಾತ್ರ ವಾದಿಸಿದಾಗ ಅವನ ಬಾಧ್ಯತೆಗೆ ವಿವಾದ ಇಲ್ಲದಿದ್ದರೆ ನಿಕ್ಷೇಪವನ್ನು ಭಾಗಿಸೋಣ.

12. ಮೇಲ್ಕಂಡಹಾಗೆ ಯಾವ ನಿಕ್ಷೇಪವನ್ನು ಕುರಿತಾಗಲಿ ಹೇಳಿಕೆಯಾಗಿರುವಾಗ ಅಂಥಾ ನಿಕ್ಷೇಪವನ್ನು ಕಂಡುಹಿಡಿದ ಮನುಷ್ಯನಲ್ಲದ ಬೇರೆ ಮನುಷ್ಯನೊಬ್ಬನು ಮಾತ್ರ ಹಾಗೆ ಹಾಜರಾಗಿ ವಾದಿಸಿದ್ದರೆ ಮತ್ತು ಅಂಥಾ ಮನುಷ್ಯನ ಬಾಧ್ಯತೆಯು ಕಂಡುಹಿಡಿದವನಿಂದ ವಿವಾದ ಮಾಡಲ್ಪಡದಿದ್ದರೆ ಡೆಪ್ಯುಟಿ ಕಮಿಷನರು ಹಾಗೆ ಕಂಡು ಹಿಡಿದಂಥಾವನಿಗೂ ವಾದಿಸುವಂಥಾವನಿಗೂ ಕೆಳಗೆ ಬರುವ ನಿಬಂಧನೆಗನುಗುಣವಾಗಿ ಹಂಚಿಕೊಡತಕ್ಕದ್ದು. ಎಂದರೆ:—

ನಿಕ್ಷೇಪವನ್ನು ಕಂಡುಹಿಡಿದಂಥಾವನೂ ಮತ್ತು ಹಾಗೆ ವಾದಿಸುವಂಥಾವನೂ ಸದರೀ ನಿಕ್ಷೇಪದ ವ್ಯವಸ್ಥೆಯನ್ನು ಕುರಿತು ಆಗ್ಯೆ ಜಾರಿಯಲ್ಲಿರುವ ಯಾವ ಒಡಂಬಡಿಕೆಯನ್ನಾಗಲಿ ಮಾಡಿಕೊಳ್ಳದೆ ಹೋದರೆ ನಿಕ್ಷೇಪದಲ್ಲಿ ಅರ್ಧ ಭಾಗವನ್ನು ಅಂಥಾ ಕಂಡು ಹಿಡಿದಂಥಾವನಿಗೂ ಉಳಿಕೆ ಅರ್ಧ ಭಾಗವನ್ನು ಅಂಥಾ (ವಾದಿಸುವ) ಮನುಷ್ಯನಿಗೂ ಹಂಚತಕ್ಕದ್ದು. ಅಂಥಾ ಕಂಡು ಹಿಡಿದಂಥಾವನೂ ಮತ್ತು ಅಂಥಾ ಮನುಷ್ಯನೂ ಅಂಥಾ ಯಾವ ಒಡಂಬಡಿಕೆಯನ್ನಾಗಲಿ ಮಾಡಿಕೊಂಡಿದ್ದರೆ ಆ ಒಡಂಬಡಿಕೆಗೆ ಅನುಗುಣವಾಗಿಯೇ ಸದರಿ ನಿಕ್ಷೇಪವನ್ನು ವ್ಯವಸ್ಥೆ ಮಾಡತಕ್ಕದ್ದು:—

ಪರಂತು ಯಾವ ಸಂದರ್ಭದಲ್ಲಾಗಲಿ ಡೆಪ್ಯುಟಿ ಕಮಿಷನರು ತನಗೆ ಯುಕ್ತವೆಂದು ತೋರಿದರೆ ಯಾವ ನಿಕ್ಷೇಪವನ್ನಾಗಲಿ ಈ ಪ್ರಕರಣದಲ್ಲಿ ನಿರ್ದೇಶಿಸಿರುವ ಮೇರೆಗೆ ಹಂಚುವುದಕ್ಕೆ ಬದಲಾಗಿ ಕೆಳಗೆ ಹೇಳುವ ಪ್ರಕಾರ ಮಾಡಬಹುದು.

(a) ಆಯಾ ಸಂಗತ್ಯನುಸಾರವಾಗಿ ಅಂಥಾ ಯಾವ ಕಕ್ಷಿಗಾರನಾದರೂ ಅಂಥಾ ಇತರ ಕಕ್ಷಿಗಾರನ ಹಿಸ್ಸೆಗೆ ಈಡೆಂದು ಡೆಪ್ಯುಟಿ ಕಮಿಷನರು ಗೊತ್ತುಮಾಡುವ ಮೊಬಲಗನ್ನು ಅಥವಾ ಹಂಚುವುದರಲ್ಲಿ ಜಾಸ್ತಿಯಾಗುವ ಮೊಬಲಗನ್ನು ಅಂಥಾ ಇತರ ಕಕ್ಷಿಗಾರನಿಗೋಸ್ಕರ ಡೆಪ್ಯುಟಿ ಕಮಿಷನರಿಗೆ ಸಂದಾಯ ಮಾಡಿದ ನಂತರ ಹೀಗೆ ಮಾಡಿದ ಯಾವ ಕಕ್ಷಿಗಾರನಿಗಾಗಲಿ ಸದರಿ ನಿಕ್ಷೇಪದಲ್ಲಿ ಪೂರಾ ಆಗಲಿ ಇವನ ಭಾಗಕ್ಕಿಂತ ಜಾಸ್ತಿಯಾಗಾಗಲಿ ಹಂಚಿಕೊಡಬಹುದು ಅಥವಾ:

(b) ಗವರ್ನಮೆಂಟಿನವರ ಅನುಜ್ಞೆಯನ್ನು ಪಡೆದು ಮತ್ತು ಅವರ ಅಪ್ಪಣೆಗಳಿಗೆ ಒಳಪಟ್ಟು, ಅಂಥಾ ನಿಕ್ಷೇಪವನ್ನಾಗಲಿ ಅದರ ಯಾವ ಭಾಗವನ್ನಾಗಲಿ ಬಹಿರಂಗವಾದ ಹರಾಜಿನಲ್ಲಿ ಮಾರಿ ಅದರಿಂದ ಉಂಟಾಗುವ ಹುಟ್ಟುವಳಿಯನ್ನು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ನಿಬಂಧನೆಯ ಪ್ರಕಾರ ಕಕ್ಷಿಗಾರರಿಗೆ ವಿಭಾಗಿಸತಕ್ಕದ್ದು.

ಪರಂತು ಡೆಪ್ಯುಟಿ ಕಮಿಷನರು ಒಂಭತ್ತನೆ ಪ್ರಕರಣಕ್ಕನುಗುಣವಾದ ತನ್ನ ಹೇಳಿಕೆಯಿಂದ ಸದರಿ ನಿಕ್ಷೇಪವನ್ನು ಕಂಡುಹಿಡಿದವನಲ್ಲದ ಅಥವಾ ಅದನ್ನು ಕಂಡ ಸ್ಥಳದ ಒಡೆಯನಲ್ಲದ ಬೇರೆ ಇತರ ಮನುಷ್ಯನು ಈ ರೆಗ್ಯುಲೇಷನಿಗನುಗುಣವಾಗಿ ಮಾಡಿದ ದಾವೆಯನ್ನು ತಳ್ಳಿಬಿಟ್ಟರೆ ಯಾರ ದಾವೆಯು ಹಾಗೆ ತಳ್ಳಲ್ಪಟ್ಟಿತೋ ಆ ಮನುಷ್ಯನಿಂದ ಒಂಭತ್ತನೆ ಪ್ರಕರಣಕ್ಕನುಗುಣವಾಗಿ ಅಪ್ಪೀಲ್ ಮಾಡಲ್ಪಡದಿದ್ದರೆ ಹಾಗೆ ತಳ್ಳಲ್ಪಟ್ಟ ಎರಡು ತಿಂಗಳ ತನಕ ಅಥವಾ ಹಾಗೆ ಅಪ್ಪೀಲಾಗಿದ್ದರೆ ಅಂಥಾ ಅಪ್ಪೀಲ್ ತಳ್ಳಲ್ಪಡುವ ತನಕ ನಿಕ್ಷೇಪವನ್ನು ಹಂಚಕೂಡದು.

ಮತ್ತು ಕಕ್ಷಿಗಾರರಿಗೆ ಹಿಸ್ಸೆಗಳನ್ನು ಒಪ್ಪಿಸೋಣ.

ಡೆಪ್ಯುಟಿ ಕಮಿಷನರು ಈ ಪ್ರಕರಣಕ್ಕನುಗುಣವಾಗಿ ಹಂಚಿದಾಗ ಆತನು ಅಂಥಾ ಹಂಚಿಕೆಯ ಪ್ರಕಾರ ಪ್ರತ್ಯೇಕವಾಗಿ ಅವರವರು ಅರ್ಹರಾಗುವ ಅಂಥಾ ನಿಕ್ಷೇಪದ ಭಾಗಗಳನ್ನು ಅಥವಾ ಅವುಗಳ ಬದಲಾಗಿ ಹಣವನ್ನು ಕಕ್ಷಿಗಾರರಿಗೆ ಒಪ್ಪಿಸತಕ್ಕದ್ದು.

ಸ್ಥಳದ ಒಡೆಯತನದ ವಿಷಯದಲ್ಲಿ ವಿವಾದವಿದ್ದರೆ ವ್ಯವಹರಣೆಯನ್ನು ನಿಲ್ಲಿಸೋಣ.

13. ಯಾವ ನಿಕ್ಷೇಪವನ್ನು ಕುರಿತಾಗಲಿ ಮೇಲ್ಕಂಡಹಾಗೆ ಹೇಳಿಕೆಯಾಗಿರುವಾಗ ಮತ್ತು ಇಬ್ಬರು ಅಥವಾ ಇಬ್ಬರಿಗಿಂತ ಹೆಚ್ಚು ಮಂದಿ ಮೇಲ್ಕಂಡಹಾಗೆ ಹಾಜರಾಗಿ ಇವರೊಳಗೆ ಒಬ್ಬೊಬ್ಬನೂ ಅಂಥಾ ನಿಕ್ಷೇಪ ಕಂಡ ಸ್ಥಳದ ಒಡೆಯನೆಂದು ವಾದಿಸಿದರೆ ಅಥವಾ ಹಾಗೆ ಹಾಜರಾಗಿ ವಾದಿಸುವ ಮನುಷ್ಯನ ಬಾಧ್ಯತೆಯು ಸದರಿ ನಿಕ್ಷೇಪವನ್ನು ಕಂಡವನಿಂದ ವಿವಾದ ಮಾಡಲ್ಪಟ್ಟರೆ ಡೆಪ್ಯುಟಿ ಕಮಿಷನರು ಅಂಥಾ ನಿಕ್ಷೇಪವನ್ನು ಇಟ್ಟುಕೊಳ್ಳತಕ್ಕದ್ದು ಮತ್ತು ಆ ವಿಷಯವು ಸಿವಿಲ್ ಕೋರ್ಟಿಂದ ವಿಚಾರಣೆ ಆಗಿ ತೀರ್ಮಾನವಾಗುವ ಉದ್ದೇಶ್ಯ ವ್ಯವಹರಣೆಯನ್ನು ನಿಲ್ಲಿಸಲು ಹುಕುಂ ಕೊಡತಕ್ಕದ್ದು.

ಅಂಥಾ ವಿವಾದದ ತೀರ್ಮಾನ.

14. ಹಾಗೆ ಹಾಜರಾಗಿ ವಾದಿಸಿದ ಯಾವ ಮನುಷ್ಯನಾಗಲಿ ಅಂಥಾ ಹುಕುಮಿನ ತಾರೀಖು ಮೊದಲ್ಗೊಂಡು ಒಂದು ತಿಂಗಳೊಳಗಾಗಿ ಸಿವಿಲ್ ಕೋರ್ಟಿನಲ್ಲಿ ತನ್ನ ಬಾಧ್ಯತೆಯನ್ನು ತೋರಿಸುವ ಒಂದು ಡಿಕ್ರಿಯನ್ನು ಹೊಂದಲು ದಾವೆಯನ್ನು ದಾಖಲ್ಮಾಡಬಹುದು; ಮತ್ತು ಅಂಥಾ ಪ್ರತಿ ಒಂದು ದಾವೆಯಲ್ಲೂ ಸದರಿ ನಿಕ್ಷೇಪವನ್ನು ಕಂಡ ಮನುಷ್ಯನನ್ನು ಮತ್ತು ಡೆಪ್ಯುಟಿ ಕಮಿಷನರ ಮುಂದೆ ಅಂಥಾ ಬಾಧ್ಯತೆಗಾಗಿ ವಿವಾದ ಮಾಡುವ ಎಲ್ಲಾ ಮನುಷ್ಯರನ್ನೂ ಪ್ರತಿವಾದಿಗಳಾಗಿ ಮಾಡತಕ್ಕದ್ದು.

ಮತ್ತು ಅದರಮೇಲಣ ಹಂಚಿಕೆ.

15. (1) ಅಂಥಾ ಯಾವ ದಾವೆಯಾಗಲಿ ದಾಖಲಾಗಿದ್ದು ಅದರಲ್ಲಿ ವಾದಿಯ ಬಾಧ್ಯತೆಯು ಕಡೆಯಲ್ಲಿ ಸ್ಥಾಪಿಸಲ್ಪಟ್ಟರೆ ಡೆಪ್ಯುಟಿ ಕಮಿಷನರು ಹನ್ನೆರಡನೆ ಪ್ರಕರಣದ ನಿಯಮಗಳಿಗೆ ಒಳಪಟ್ಟು ಸದರಿ ನಿಕ್ಷೇಪವನ್ನು ವಾದಿಗೂ ಮತ್ತು ಅದನ್ನು ಕಂಡು ಹಿಡಿದಂಥಾವನಿಗೂ ಹಂಚಿ ಕೊಡತಕ್ಕದ್ದು.

(2) ಮೇಲ್ಕಂಡ ಹಾಗೆ ಅಂಥಾ ದಾವೆ ದಾಖಲಾಗದೆ ಇದ್ದರೆ ಅಥವಾ ಅಂಥಾ ಎಲ್ಲಾ ದಾವೆಗಳಲ್ಲಿ ವಾದಿಗಳ ಬಾಧ್ಯತೆ ಕಡೆಯಲ್ಲಿ ತಳ್ಳಲ್ಪಟ್ಟರೆ ಡೆಪ್ಯುಟಿ ಕಮಿಷನರು ಸದರಿ ನಿಕ್ಷೇಪವನ್ನು ಹದಿನಾರನೆ ಪ್ರಕರಣದ ನಿಯಮಗಳಿಗೆ ಒಳಪಟ್ಟು ಕಂಡು ಹಿಡಿದವನಿಗೆ ಕೊಡತಕ್ಕದ್ದು.

ನಿಕ್ಷೇಪದ ಬೆಲೆಯು ಒಂದು ಲಕ್ಷಕ್ಕೆ ಮೀರಿದ್ದರೆ ಅದನ್ನು ಕಂಡು ಹಿಡಿದವನಿಗೆ ಒಂದುಲಕ್ಷ ಹೋಗತಕ್ಕದ್ದು, ಹೆಚ್ಚಿಗೆ ಹಣವು ವಿವರಿಸಿದ ಸಂದರ್ಭಗಳಲ್ಲಿ ಗವರ್ನಮೆಂಟಿಗೆ ಬರಬೇಕು.

16. 11ನೆ ಪ್ರಕರಣದಲ್ಲಿ ಅಥವಾ 15ನೆ ಪ್ರಕರಣದ (2)ನೆ ಒಳ ಪ್ರಕರಣದಲ್ಲಿ ಸೂಚಿಸಿದ ಸಂದರ್ಭದಲ್ಲಿ ಕಂಡು ಹಿಡಿದ ನಿಕ್ಷೇಪದ ಮೊತ್ತವು ಅಥವಾ ಅದರ ಬೆಲೆಯು ಒಂದು ಲಕ್ಷ ರೂಪಾಯಿಗೆ ಮೀರಿದರೆ, ಡೆಪ್ಯುಟಿ ಕಮಿಷನರು ಒಂದು ಲಕ್ಷ ರೂಪಾಯಿಗಳಷ್ಟು ಮೊತ್ತದ ಅಥವಾ ಬೆಲೆಯ ನಿಕ್ಷೇಪದ ಭಾಗವನ್ನು ನಿಕ್ಷೇಪವನ್ನು ಕಂಡು ಹಿಡಿದವನಿಗೆ ಒಪ್ಪಿಸತಕ್ಕದ್ದು, ಮತ್ತು ಹೆಚ್ಚಿಗೆಯನ್ನು ಗವರ್ನಮೆಂಟಿನ ವಶದಲ್ಲಿರುವುದಾಗಿ ಹೇಳತಕ್ಕದ್ದು.

ಗವರ್ನಮೆಂಟಿನ ತರಫ ನಿಕ್ಷೇಪವನ್ನು ಹೊಂದುವ ಅಧಿಕಾರ.

17. ಡೆಪ್ಯುಟಿ ಕಮಿಷನರು ಒಂಭತ್ತನೆ ಪ್ರಕರಣಕ್ಕನುಗುಣವಾದ ತನ್ನ ಹೇಳಿಕೆಯಾದ ಅನಂತರ ಯಾವ ಕಾಲದಲ್ಲಾಗಲಿ ಮತ್ತು ಸದರಿ ನಿಕ್ಷೇಪವನ್ನು ಇದರಲ್ಲಿ ಮುಂದೆ ವಿಧಿಸಿರುವ ಪ್ರಕಾರ ಒಪ್ಪಿಸುವುದಕ್ಕಿಂತ ಅಥವಾ ಹಂಚುವುದಕ್ಕಿಂತ ಮುಂಚೆ ಸದರಿ ನಿಕ್ಷೇಪದಲ್ಲಿ ಅಥವಾ ನಮೂದಿಸಿ ತೋರಿಸುವ ಅದರ ಭಾಗದಲ್ಲಿ ಬಾಧ್ಯತೆಯುಳ್ಳವರಿಗೆ ಸದರೀ ನಿಕ್ಷೇಪದ ಅಥವಾ ಭಾಗದ ವಸ್ತುಗಳ ಬೆಲೆಗೆ ಸರಿಯಾದ ಮೊಬಲಗನ್ನೂ, ಅದಕ್ಕೆ ಸೇರಿಸಿ ಈ ಬೆಲೆಯ ಐದು ಭಾಗಗಳೊಳಗೆ ಒಂದು ಭಾಗವನ್ನೂ ಕೊಟ್ಟು, ಅದನ್ನು ಗವರ್ನಮೆಂಟಿನವರ ಪರವಾಗಿ ಸಂಪಾದಿಸುವ ಉದ್ದೇಶವನ್ನು ತನ್ನ ದಸ್ತಕತು ನಿಶಿ ಬರೆದು ತಿಳಿಸಬಹುದು. ಮತ್ತು ಅಂಥಾ ಮೊಬಲಗನ್ನು ಅಂಥಾ ಮನುಷ್ಯರಿಗೆ ಸಲ್ಲಿಸತಕ್ಕ ಬಗ್ಯೆ ತನ್ನ ಖಜಾನೆಯಲ್ಲಿ ಠೇವಣೀ ಇಡಬಹುದು; ಮತ್ತು ಆ ತರುವಾಯ ಸದರಿ ನಿಕ್ಷೇಪವು ಅಥವಾ ಅದರ ಭಾಗವು ಗವರ್ನಮೆಂಟಿನವರ ಸ್ವತ್ತಿನಂತೆ ಗ್ರಹಿಸಲ್ಪಡತಕ್ಕದ್ದು, ಮತ್ತು ಹಾಗೆ ಠೇವಣಿಯಾಗಿ ಇಟ್ಟ ಹಣವು ಅಂಥಾ ನಿಕ್ಷೇಪ ಅಥವಾ ಅದರ ಭಾಗವಾಗಿದ್ದರೆ ಹೇಗೋ ಹಾಗೆ ಕೂಡಿದಮಟ್ಟಿಗೆ ಅದರ ವಿಷಯದಲ್ಲಿ ನಡೆಯತಕ್ಕದ್ದು.

ಡೆಪ್ಯುಟಿ ಕಮಿಷನರು ಮಾಡುವ ನಿರ್ಣಯವು ಕಡೆಯದಾಗಿರುತ್ತದೆ ಮತ್ತು ನಿರ್ವ್ಯಾಜನೆಯಾಗಿ ಮಾಡಿದ ಕಾರ್ಯಗಳಿಗಾಗಿ ಆತನ ಮೇಲೆ ದಾವೆ ತರಕೂಡದು.

18. ಈ ರೆಗ್ಯುಲೇಷನಿಗೆ ಅನುಗುಣವಾಗಿ ಡೆಪ್ಯುಟಿ ಕಮಿಷನರಿಂದ ಮಾಡಲ್ಪಡುವ ನಿರ್ಣಯವು ಅಥವಾ ಕೃತ್ಯವು ಯಾವ ಸಿವಿಲ್ ಕೋರ್ಟಿನಿಂದಲೂ ವಿಚಾರಿಸಲ್ಪಡತಕ್ಕದ್ದಲ್ಲ ಮತ್ತು ಇದರಿಂದ ಕೊಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ನಿರ್ವ್ಯಾಜನೆಯಾಗಿ ಮಾಡಿದ ಯಾವ ಕೆಲಸಕ್ಕೂ ಆತನಮೇಲೆ ಯಾವ ದಾವೆಯಾಗಲಿ ವ್ಯವಹರಣೆಯಾಗಲಿ ಇರತಕ್ಕದ್ದಲ್ಲ.

ಸಿವಿಲ್ ಕೋರ್ಟಿನ ಅಧಿಕಾರಗಳನ್ನು ಡೆಪ್ಯುಟಿ ಕಮಿಷನರು ನಡೆಸುವುದು.

19. ಈ ರೆಗ್ಯುಲೇಷನಿಗನುಗುಣವಾಗಿ ಮಾಡುವ ಯಾವ ವಿಚಾರಣೆಯಲ್ಲಾಗಲಿ ಡೆಪ್ಯುಟಿ ಕಮಿಷನರು ಸಿವಿಲ್ ಪ್ರೊಸಿಡ್ಯೂರ್ ಕೋಡಿನಿಂದ ಒಂದು ಸಿವಿಲ್ ಕೋರ್ಟಿಗೆ ದಾವೆಗಳನ್ನು ವಿಚಾರಿಸಲು ಕೊಡಲ್ಪಟ್ಟಿರುವ ಯಾವ ಅಧಿಕಾರವನ್ನಾದರೂ ನಡೆಸಬಹುದು.

ನಿಬಂಧನೆಗಳನ್ನು ಮಾಡಲು ಅಧಿಕಾರ.

20. ಇದರಲ್ಲಿ ಕೆಳಗೆ ಬರುವ ವ್ಯವಹರಣೆಗಳನ್ನೂ ಮತ್ತು ಸಾಮಾನ್ಯವಾಗಿ ಇಲ್ಲಿ ನಿಯಮ ಮಾಡಲ್ಪಡದೆ ಇರುವ ಎಲ್ಲಾ ವಿಷಯಗಳನ್ನೂ ಕ್ರಮಪಡಿಸಲು, ಗವರ್ನಮೆಂಟಿನವರು ಈ ರೆಗ್ಯುಲೇಷನಿಗನುಗುಣವಾದ ನಿಬಂಧನೆಗಳನ್ನು ಆಗಾಗ್ಗೆ ಮಾಡಬಹುದು.

ಅಂಥಾ ನಿಬಂಧನೆಗಳನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಿದಾಗ, ಅವು ನ್ಯಾಯದ (ಕಾನೂನಿನ) ಬಲವುಳ್ಳವುಗಳಾಗಿರತಕ್ಕದ್ದು.

ದಂಡನೆಗಳು.

ನಿಕ್ಷೇಪವನ್ನು ಕಂಡು ಹಿಡಿದವನು ನೋಟೀಸು ಮೊದಲಾದವುಗಳನ್ನು ಕೊಡದೇ ತಪ್ಪಿದರೆ ದಂಡನೆ.

21. ಯಾವ ನಿಕ್ಷೇಪವನ್ನಾಗಲಿ ಕಂಡು ಹಿಡಿದಂಥಾವನು ನಾಲ್ಕನೆ ಪ್ರಕರಣದಲ್ಲಿ ವಿಧಿಸಿರುವ ಮೇರೆಗೆ ನೋಟೀಸನ್ನು ಕೊಡದೆ ತಪ್ಪಿದರೂ ಠೇವಣಿ ಇಡದೆ ಹೋದರೂ ಜಾಮೀನು ಕೊಡದೇ ತಪ್ಪಿದರೂ ಅಥವಾ ಅಂಥಾ ನಿಕ್ಷೇಪದ ಭಾಗವನ್ನು ಮರೆಮಾಡಲು ಸದರಿ ನಿಕ್ಷೇಪವನ್ನು ಬದಲಾಯಿಸಿದರೂ ಅಥವಾ ಬದಲಾಯಿಸಲು ಯತ್ನಿಸಿದರೂ ಹಾಗೆ ಮಾಡದಿದ್ದರೆ ತಾನು ತೆಗೆದುಕೊಳ್ಳಲು ಅರ್ಹನಾಗಿರಬಹುದಾದ ಸದರಿ ನಿಕ್ಷೇಪದ ಭಾಗವು ಅಥವಾ ಅದಕ್ಕೆ ಪ್ರತಿಯಾಗಿ ಕೊಡುವ ಹಣವು ಗವರ್ನ್ಮೆಂಟಿಗೆ ಸೇರತಕ್ಕದ್ದು, ಮತ್ತು ಒಬ್ಬ ಮಾಜಿಸ್ಟ್ರೇಟನ ಮುಂದೆ ತಪ್ಪು ಸ್ಥಾಪಿಸಲ್ಪಟ್ಟಾಗ ಅವನು ಒಂದು ಸಂವತ್ಸರಕ್ಕೆ ಮೀರದ ಒಂದು ಮಾಯಿದೇ ಪರ್ಯಂತ ಕೈದಿನ ಮೂಲಕವಾಗಲಿ ಜುರ್ಮಾನೆಯ ಮೂಲಕವಾಗಲಿ ಈ ಎರಡರ ಮೂಲಕವಾಗಲಿ ಶಿಕ್ಷಿಸಲ್ಪಡತಕ್ಕದ್ದು.

ಒಡೆಯನು 21ನೆ ಪ್ರಕರಣದಲ್ಲಿ ವಿವರಿಸಿದ ತಪ್ಪನ್ನು ಸಹಕರಿಸಿದರೆ ದಂಡನೆ.

22. ನಿಕ್ಷೇಪವು ಎಲ್ಲಿ ಸಿಕ್ಕುತ್ತದೆಯೊ ಆ ಸ್ಥಳದ ಒಡೆಯನು 21ನೆ ಪ್ರಕರಣಕ್ಕನುಗುಣವಾದ ಯಾವ ತಪ್ಪನ್ನಾಗಲಿ ಪೀನಲ್ ಕೋಡಿನ ಅರ್ಥದ ಮೇರೆಗೆ ಸಹಕರಿಸಿದರೆ ತಾನು ಹೊಂದಲು ಅನ್ಯಥಾ ಅರ್ಹನಾಗಿರಬಹುದಾದ ಸದರಿ ನಿಕ್ಷೇಪದ ಭಾಗವು ಅಥವಾ ಅದಕ್ಕೆ ಪ್ರತಿಯಾಗಿ ಕೊಡುವ ಹಣವು ಗವರ್ನಮೆಂಟಿಗೆ ಸೇರತಕ್ಕದ್ದು. ಮತ್ತು ಒಬ್ಬ ಮಾಜಿಸ್ಟ್ರೇಟನ ಮುಂದೆ ತಪ್ಪು ಸ್ಥಾಪಿಸಲ್ಪಟ್ಟಾಗ ಅವನು ಆರು ತಿಂಗಳುಗಳಿಗೆ ಮೀರದ ಒಂದು ಮಾಯಿದೆ ಪರ್ಯಂತ ಕೈದಿನ ಮೂಲಕವಾಗಲಿ ಜುರ್ಮಾನೆಯ ಮೂಲಕವಾಗಲಿ, ಈ ಎರಡರ ಮೂಲಕವಾಗಲಿ ಶಿಕ್ಷಿಸಲ್ಪಡತಕ್ಕದ್ದು.

ಉದ್ದೇಶಗಳ ಮತ್ತು ಕಾರಣಗಳ ವಿವರಣೆ.

ಸಿಕ್ಕಿದ ನಿಕ್ಷೇಪದ ವಿಷಯದಲ್ಲಿ ಮೈಸೂರು ಸೀಮೆಯಲ್ಲಿ ಉಪಯೋಗದಲ್ಲಿರುವ ನ್ಯಾಯವು (ಕಾನೂನು) ಹಿಂದಿನ ಚೀಫ್ ಕಮಿಷನರ 1867ನೆ ಇಸವಿಯ ಏಪ್ರಿಲ್ 17ನೆ ತಾರೀಖಿನ 6ನೆ ನಂಬರಿನ ಇಸ್ತಿ*ಹಾರ್ನಾಮೆಯ ಕೆಳಗೆ ಪ್ರಕಟಿಸಿರುವ ನಿಬಂಧನೆಗಳಲ್ಲಿ ಅಡಗಿದೆ. ಈ ನಿಬಂಧನೆಗಳು ಮದರಾಸು ಕೋಡಿನ 1832ನೆ ಇಸವಿಯ 11ನೆ ರೆಗ್ಯುಲೇಷನಿನಿಂದ ತೆಗೆದುಕೊಳ್ಳಲ್ಪಟ್ಟವು; ಆದರೆ ಅವು ಇಂಡಿಯಾ ಸರ್ಕಾರದ ಅನುಜ್ಞೆಯಿಲ್ಲದೆ ಹಿಂದಿನ ಚೀಫ್ ಕಮಿಷನರಿಂದ ಪ್ರಕಟಿಸಲ್ಪಟ್ಟಿರುವುದರಿಂದ ಎಷ್ಟುದೂರದವರೆಗೆ ಅವುಗಳನ್ನು ಬಲವುಳ್ಳವುಗಳಾಗಿ ಎಣಿಸಬಹುದೊ ಅದು ಸಂಶಯಾಸ್ಪದವಾದ ವಿಷಯವಾಗಿದೆ. ಇದಲ್ಲದೆ ಅವು ಆಚರಣೆಯಲ್ಲಿ ಕೆಲಸಕ್ಕೆ ಬಾರದವುಗಳಾಗಿಯೂ ಕೆಲವು ವಿಷಯಗಳಲ್ಲಿ ಈಗಿನ ಆವಶ್ಯಕತೆಗಳಿಗೆ ತಕ್ಕವಲ್ಲವುಗಳಾಗಿಯೂ ಇರುವು. ಆದಕಾರಣದಿಂದ ಪ್ರಕೃತದ ರೆಗ್ಯುಲೇಷನಿಗೆ ಅಗತ್ಯ ಉಂಟಾಯಿತು.

*1867ನೆ ಇಸವಿಯ ಮೇ 4ನೆ ತಾರೀಖಿನ ಮೈಸೂರು ಗೆಜೆಟ್ಟಿನ 119ನೆ ಪುಟದಲ್ಲಿ ಪ್ರಕಟಿಸಿದೆ.

2. (1878ನೆ ಇಸವಿಯ 6ನೆದಾದ) ಇಂಡಿಯಾ ಗವರ್ನಮೆಂಟಿನ ಸಿಕ್ಕಿದ ನಿಕ್ಷೇಪದ ಆಕ್ಟಿನ ಆಧಾರದ ಮೇಲೆ ಈ ಚಿತ್ತು ರೆಗ್ಯುಲೇಷನನ್ನು ಏರ್ಪಡಿಸಿದೆ. ಆದರೆ, ಅದಕ್ಕೂ ಇದಕ್ಕೂ ಕೆಲವು ವ್ಯತ್ಯಾಸಗಳಿವೆ.

3. ನಿಕ್ಷೇಪವನ್ನು ಕಂಡುಹಿಡಿದವರಿಗೂ ಮತ್ತು ಅದಕ್ಕೆ ಸಂಬಂಧಪಟ್ಟ ಇತರರಿಗೂ ಕಂಡ ನಿಕ್ಷೇಪದಲ್ಲಿ ಇರುವ ಬಾಧ್ಯತೆಗಳನ್ನು ನಿಶ್ಚಯಿಸುವುದೂ ಈ ರೆಗ್ಯುಲೇಷನ ಉದ್ದೇಶವಾಗಿದೆ. ಈ ರೆಗ್ಯುಲೇಷನು ನಿಕ್ಷೇಪವನ್ನು ಕಂಡುಹಿಡಿದುದನ್ನು ಕುರಿತು ವರ್ತಮಾನಕೊಡಬೇಕೆಂದು ವಿಧಿಸುತ್ತದೆ. ಮತ್ತು ಅದರಲ್ಲಿ ಹಿಂದಿನ ಸ್ವತ್ವವನ್ನು ಸ್ಥಾಪಿಸಬಲ್ಲ ಎಲ್ಲಾ ಜನಗಳ ಬಾಧ್ಯತೆಯನ್ನೂ ಭದ್ರಪಡಿಸುತ್ತದೆ. ನಿಕ್ಷೇಪವು ನೂರು ವರ್ಷಗಳೊಳಗೆ ಬಚ್ಚಿಡಲ್ಪಟ್ಟಿತೆಂದು ಎಲ್ಲಿ ಅನುಮಾನಿಕ ಸಾಕ್ಷ್ಯವು ಇದೆಯೊ ಅಂಥಾ ಸಂದರ್ಭಗಳಲ್ಲಿ ಮಾತ್ರ ಮೇಲ್ಕಂಡ ಹಿಂದಿನ ಬಾಧ್ಯತೆಯು ಸ್ಥಾಪಿಸಲ್ಪಡಬಹುದು. ಅಂಥಾ ಬಾಧ್ಯತೆಯು ಸ್ಥಾಪಿಸಲ್ಪಡಲಾರದಿದ್ದರೆ, ನಿಕ್ಷೇಪವನ್ನು ಕಂಡುಹಿಡಿದವನ ಮತ್ತು ಕಂಡು ಹಿಡಿಯಲ್ಪಟ್ಟ ಸ್ಥಳದ ಒಡೆಯನ ಬೇರೆಬೇರೆ ಹಕ್ಕುಗಳನ್ನೂ ನಿಶ್ಚಯಿಸಲು ರೆಗ್ಯುಲೇಷನು ಪ್ರವರ್ತಿಸುತ್ತದೆ. ನಿಕ್ಷೇಪಕ್ಕಾಗಿ ಎಲ್ಲಾ ದಾವೆಗಳೂ ಮತ್ತು ಜಮೀನಿನ ಒಡೆಯತನಕ್ಕಾಗಿ ಎಲ್ಲಾ ವಿವಾದಗಳೂ ಸಿವಿಲ್ ಕೋರ್ಟಿಗೆ ಕಳುಹಿಸಲ್ಪಡತಕ್ಕವುಗಳಾಗಿವೆ. ನಿಕ್ಷೇಪವು ಮೊತ್ತದಲ್ಲಿ ಅಥವಾ ಬೆಲೆಯಲ್ಲಿ ಒಂದು ಲಕ್ಷ ರೂಪಾಯಿಗೆ ಮೀರಿದರೆ ಮತ್ತು ನಿಕ್ಷೇಪವನ್ನು ಕಂಡುಹಿಡಿದವನಲ್ಲದ ಯಾವ ಮನುಷ್ಯನೂ ಅದರಲ್ಲಿ ಒಂದು ಭಾಗಕ್ಕೆ ತನ್ನ ಬಾಧ್ಯತೆಯನ್ನು ಸ್ಥಾಪಿಸದೆ ಇದ್ದರೆ ನಿಕ್ಷೇಪವನ್ನು ಕಂಡು ಹಿಡಿದವನಿಗೆ ಒಂದು ಲಕ್ಷವೂ ಅದಕ್ಕೆ ಹೆಚ್ಚಾದುದು ಗವರ್ನಮೆಂಟಿಗೂ ಹೋಗುತ್ತವೆ. ನಿಕ್ಷೇಪದ ನಿಜವಾದ ಬೆಲೆಗಿಂತ ಅದರಲ್ಲಿ ಐದರಲ್ಲಿ ಒಂದು ಭಾಗದಷ್ಟು ಹೆಚ್ಚಾದ ಹಣವನ್ನು ಕೊಟ್ಟು ನಿಕ್ಷೇಪವನ್ನು ಇಟ್ಟುಕೊಳ್ಳುವ ಅಧಿಕಾರವು ಕೂಡ ಗವರ್ನಮೆಂಟಿಗೆ ಇದೆ.

4. ಚಿತ್ತು ರೆಗ್ಯುಲೇಷನು ಆಚರಣೆ ಬಗ್ಗೆ ಈ ಕೆಳಗಿನ ಕ್ರಮವನ್ನು ವಿಧಿಸುತ್ತದೆ :—

(a) ನಿಕ್ಷೇಪವನ್ನು ಕಂಡುಹಿಡಿದವನು ಕಂಡದ್ದನ್ನು ಕುರಿತು ಡೆಪ್ಯುಟಿ ಕಮಿಷನರಿಗೆ ವರ್ತಮಾನ ಕೊಡತಕ್ಕದ್ದು.

(b) ಡೆಪ್ಯುಟಿ ಕಮಿಷನರು ನಿಕ್ಷೇಪವು ಎಲ್ಲಿ ಕಾಣಲ್ಪಟ್ಟಿತೊ ಅಂಥಾ ಜಮೀನಿನ ಒಡೆಯ ಅಥವಾ ಒಡೆಯರಿಗೆ ವರ್ತಮಾನ ಕೊಡತಕ್ಕದ್ದು.

(c) ನಿಕ್ಷೇಪವನ್ನು ಕಂಡುಹಿಡಿದುದನ್ನು ಪ್ರಕಟಿಸತಕ್ಕದ್ದು, ಮತ್ತು ಬಾಧ್ಯಸ್ಥರೆಲ್ಲರೂ 6 ತಿಂಗಳೊಳಗಾಗಿ ತಮ್ಮ ಬಾಧ್ಯತೆಗಳನ್ನು ಹೊರಪಡಿಸಬೇಕೆಂದು ಕೋರಿ ಇದೆ.

(d) ನಿಕ್ಷೇಪಕ್ಕೆ ಅಥವಾ ಅದರ ಒಂದು ಭಾಗಕ್ಕೆ ದಾವೆಗಳು ವಿಚಾರಿಸಲ್ಪಡುವುವು.

5. ಈ ಚಿತ್ತು ರೆಗ್ಯುಲೇಷನಿಗೂ 1878ನೆ ಇಸವಿಯ 6ನೇ ಆಕ್ಟಿಗೂ ಈ ಕೆಳಗಿನ ವಿವರಗಳಲ್ಲಿ ವ್ಯತ್ಯಾಸವಾಗಿದೆ.

(a) ನಿಕ್ಷೇಪವನ್ನು ಕಂಡುಹಿಡಿದವನಲ್ಲದ ಯಾವ ಮನುಷ್ಯನೂ ಅದರಲ್ಲಿ ಒಂದು ಪಾಲಿಗೆ ತನ್ನ ಬಾಧ್ಯತೆಯನ್ನು ಸ್ಥಾಪಿಸದೆ ಹೋದರೆ (17ನೇ ಪ್ರಕರಣ) ಒಂದು ಲಕ್ಷಕ್ಕೆ ಮೇಲಿನ ಹೆಚ್ಚಿಗೆ ಹಣಕ್ಕೆ ಗವರ್ನಮೆಂಟಿಗೆ ಬಾಧ್ಯತೆಯು ಇದೆ. ಇಂಡಿಯಾ ಗವರ್ನಮೆಂಟಿನ ಆಕ್ಟಿನಲ್ಲಿ ಈರೀತಿಯಾದ ಯಾವ ನಿಯಮವೂ ಇಲ್ಲದೆ ಇದ್ದರೂ ಮೇಲ್ಕಂಡ ಅಂಶವನ್ನು ಚೀಫ್ ಕಮಿಷನರ ನಿಬಂಧನೆಗಳಿಂದ ತೆಗೆದುಕೊಂಡಿದೆ.

(b) ಜಮೀನಿನ ಒಡೆಯ ಮತ್ತು ನಿಕ್ಷೇಪವನ್ನು ಕಂಡುಹಿಡಿದವನು ಇವರಿಬ್ಬರ ಪೈಕಿ ಇಂಡಿಯಾ ಗವರ್ನಮೆಂಟಿನ ಆಕ್ಟಿನ ಮೇರೆ ನಿಕ್ಷೇಪವನ್ನು ಕಂಡುಹಿಡಿದವನಿಗೆ ಮೂರುಪಾಲೂ ಜಮೀನಿನ ಒಡೆಯನಿಗೆ ಒಂದುಪಾಲೂ ಸಿಕ್ಕುತ್ತವೆ. ಇದಕ್ಕಿಂತ ಇವರಿಬ್ಬರಿಗೂ ಸಮವಾಗಿ ಭಾಗಿಸುವುದು ನ್ಯಾಯವಾಗಿ ತೋರುವುದರಿಂದ ಈ ರೆಗ್ಯುಲೇಷನಿನಲ್ಲಿ ತದನುಸಾರವಾಗಿ ನಿಯಮಿಸಿದೆ. (12ನೆ ಪ್ರಕರಣ).

(c) ಡೆಪ್ಯುಟಿ ಕಮಿಷನರು 12ನೇ ಪ್ರಕರಣದ ಮೇರೆ ನಿಕ್ಷೇಪವನ್ನು ಮಾರಲು ಪ್ರವರ್ತಿಸುವಾಗ ಆತನು ಮಾರಾಟದ ವಿವರಗಳನ್ನು ಕುರಿತು ಗವರ್ನಮೆಂಟಿನ ಅಪ್ಪಣೆಗಳನ್ನು ಪಡೆಯಬೇಕಾಗಿದೆ.

(d) ಈ ರೆಗ್ಯುಲೇಷನಿನಲ್ಲಿ ನಿಯಮ ಮಾಡಲ್ಪಡದ ಸಿಕ್ಕಿದ ನಿಕ್ಷೇಪಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ನಿಬಂಧನೆಗಳನ್ನು ಮಾಡುವ ಅಧಿಕಾರವು ಗವರ್ನಮೆಂಟಿಗೆ ಉಳಿಸಲ್ಪಟ್ಟಿದೆ.

ತಾರೀಖು 8ನೆ ಮಾರ್ಚಿ 1907.

ನಂ. ಜಿ. 2754—ಲೆಜಿಸ್. 44—06—1.

ಇಸ್ತಿಹಾನಾಮೆ.

1. ಮೈಸೂರು ಸೀಮೆಯಲ್ಲಿ ಉಪಯೋಗದಲ್ಲಿರುವ ಸಿವಿಲ್ ಪ್ರೊಸೀಡ್ಯೂರ್ ಕೋಡನ್ನು ಇನ್ನೂ ತಿದ್ದುಪಾಟು ಮಾಡುವ ಈ ಕೆಳಗಿನ ಚಿತ್ತು ರೆಗ್ಯುಲೇಷನನ್ನು ಉದ್ದೇಶಗಳ ಮತ್ತು ಕಾರಣಗಳ ವಿವರಣೆಯೊಡನೆ ಸರ್ವ ಜನರ ತಿಳುವಳಿಕೆಯ ಬಗ್ಗೆ ಪ್ರಕಟಿಸಿದೆ.

2. ಈ ಚಿತ್ತು ರೆಗ್ಯುಲೇಷನನ್ನು ಅದು ಗೆಜೆಟ್ಟಿನಲ್ಲಿ ಪ್ರಕಟನೆಯಾದ ತಾರೀಖಿನಿಂದ ಮೂರುತಿಂಗಳ ಕೊನೆಯಲ್ಲಿ ಆಲೋಚನೆಗೆ ತೆಗೆದುಕೊಳ್ಳಲಾಗುವುದು ಮತ್ತು ಆ ಕಾಲದೊಳಗೆ ಬರುವ ಎಲ್ಲಾ ಸೂಚನೆಗಳನ್ನೂ ಗುಣದೋಷ ನಿರೂಪಣೆಗಳನ್ನೂ ಕ್ರಮವಾಗಿ ಪರ್ಯಾಲೋಚಿಸಲಾಗುವುದು.

ಅಪ್ಪಣೆಯ ಮೇರೆಗೆ,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.

ಸಿವಿಲ್ ಪ್ರೊಸೀಡ್ಯೂರ್ ಕೋಡನ್ನು ಇನ್ನೂ ತಿದ್ದುಪಾಟು ಮಾಡುವ ರೆಗ್ಯುಲೇಷನಿನ ಚಿತ್ತು ಪ್ರತಿ (ಮುಸೂದೆ).

ಮೈಸೂರು ಸೀಮೆಯಲ್ಲಿ ಉಪಯೋಗದಲ್ಲಿರುವ ಸಿವಿಲ್ ಪ್ರೊಸೀಡ್ಯೂರ್ ಕೋಡನ್ನು ಇನ್ನೂ ತಿದ್ದುಪಾಟುಮಾಡುವುದು ಯುಕ್ತವಾಗಿರುವುದರಿಂದ ಶ್ರೀಮನ್ ಮಹಾರಾಜರವರು ಈ ಕೆಳಗಿನಂತೆ ವಿಧಿಸಲು ಅಪ್ಪಣೆ ದಯಪಾಲಿಸಿರುತ್ತಾರೆ:

ಸಿವಿಲ್ ಪ್ರೊಸೀಡ್ಯೂರ್ ಕೋಡಿನ 310 A ಪ್ರಕರಣಕ್ಕೆ ಹೆಚ್ಚಾಗಿ ಸೇರಿಸೋಣ.

1. ಮೇಲ್ಕಂಡ ಕೋಡಿನ 310 A ಪ್ರಕರಣಕ್ಕೆ, (1)ನೆ ಮತ್ತು (2)ನೆ ಒಳ ಪ್ರಕರಣಗಳಿಗೆ ಮಧ್ಯೆ, ಈ ಕೆಳಗಿನ ಒಳ ಪ್ರಕರಣವನ್ನು ಸೇರಿಸತಕ್ಕದ್ದು, ಅದೇನೆಂದರೆ,

"(1. A.) ಹರಾಜು ತಾರೀಖಿನಿಂದ ಮೂವತ್ತು ದಿನಗಳೊಳಗಾಗಿ ಅಂಥಾ ಠೇವಣಿಯು ಇಡಲ್ಪಟ್ಟರೆ, ಹರಾಜನ್ನು ರದ್ದು ಮಾಡುವ ಒಂದು ಹುಕುಮನ್ನು ಕೋರ್ಟಿನವರು ಕೊಡತಕ್ಕದ್ದು."

584 (*d*) ಪ್ರಕರಣಕ್ಕೆ ಹೆಚ್ಚಾಗಿ ಸೇರಿಸೋಣ.

2. ಮೇಲ್ಕಂಡ ಕೋಡಿನ 584ನೆ ಪ್ರಕರಣದ (*d*) ವಾಕ್ಯದಲ್ಲಿ "ಯಾವ ಮೊಕದ್ದಮೆಗಳಲ್ಲಿ" ಎಂಬ ಮಾತುಗಳಿಗೆ ಮೊದಲು ಈ ಕೆಳಗಿನ ಮಾತುಗಳನ್ನು ಸೇರಿಸತಕ್ಕದ್ದು, ಎಂದರೆ

"ಯಾವ ಮೊಕದ್ದಮೆಗಳ ವಿವಾದಾಂಶದ ಮೊಬಲಗು ಅಥವಾ ಕಿಮ್ಮತ್ತು ಐನೂರು ರೂಪಾಯಿಗಳಾಗಿ ಅಥವಾ ಅದಕ್ಕೆ ಮೇಲ್ಪಟ್ಟು ಇದೆಯೋ ಮತ್ತು"

586ನೆ ಪ್ರಕರಣದ ತಿದ್ದುಪಾಟು.

3. 586ನೆ ಪ್ರಕರಣದಲ್ಲಿ "ಐವತ್ತು ರೂಪಾಯಿಗೆ" ಎಂಬ ಮಾತುಗಳಿಗೆ "ಐನೂರು ರೂಪಾಯಿಗೆ" ಎಂಬ ಮಾತುಗಳನ್ನು ಸೇರಿಸತಕ್ಕದ್ದು.

588ನೆ ಪ್ರಕರಣಕ್ಕೆ ಹೆಚ್ಚಾಗಿ ಸೇರಿಸೋಣ.

4. ಮೇಲ್ಕಂಡ ಕೋಡಿನ 588ನೆ ಪ್ರಕರಣಕ್ಕೆ, ಈ ಕೆಳಗಿನ ವಾಕ್ಯಾಂಗವನ್ನು ಸೇರಿಸತಕ್ಕದ್ದು ಎಂದರೆ,

"(16. A.) 310 A ಪ್ರಕರಣದ ಪ್ರಕಾರದ ಹುಕುಂಗಳು."

ಉದ್ದೇಶಗಳ ಮತ್ತು ಕಾರಣಗಳ ವಿವರಣೆ.

ಮೊದಲನೆಯದು, 1906ನೆ ಇಸವಿಯ 3ನೆ ರೆಗ್ಯುಲೇಷನಿನಿಂದ ತಿದ್ದುಪಾಟು ಮಾಡಲ್ಪಟ್ಟಿರುವ ಸಿವಿಲ್ ಪ್ರೊಸೀಡ್ಯೂರ್ ಕೋಡಿನಲ್ಲಿರುವ ಕೆಲವು ಕ್ರಮದ ಕೊರತೆಗಳನ್ನು ತಿದ್ದುವುದಕ್ಕೂ, ಮತ್ತು ಎರಡನೆಯದು, ಎರಡನೆ ಅಪೀಲಿನ ಹಕ್ಕನ್ನು ಸ್ವಲ್ಪಮಟ್ಟಿಗೆ ಕಡಮೆ ಮಾಡುವುದರಿಂದ ಚೀಫ್ ಕೋರ್ಟಿನಲ್ಲಿ ಕೆಲಸವು ಇನ್ನೂ ತ್ವರೆಯಾಗಿ ವ್ಯವಸ್ಥೆಯಾಗುವಂತೆ ಮಾಡುವುದಕ್ಕೂ ಈ ಚಿತ್ತು ರೆಗ್ಯುಲೇಷನು ಉದ್ದೇಶಿಸಲ್ಪಟ್ಟಿದೆ.

2. 1906ನೆ ಇಸವಿಯ 3ನೆ ರೆಗ್ಯುಲೇಷನಿನಿಂದ ಸೇರಿಸಲ್ಪಟ್ಟ 310 A. ಪ್ರಕರಣವು, ಸ್ಥಿರಸ್ವತ್ತಿನ ಒಡೆಯನಾದ ಅಥವಾ ಅದರಲ್ಲಿ ಕೆಲವು ತರದ ಸಂಬಂಧವುಳ್ಳ ಮನುಷ್ಯನು ಹರಾಜು ತಾರೀಖಿನಿಂದ ಮೂವತ್ತು ದಿನಗಳೊಳಗಾಗಿ ಕೆಲವು ಠೇವಣಿಗಳನ್ನು ಇಟ್ಟಾಗ ಅಂಥಾ ಸ್ವತ್ತಿನ ಹರಾಜನ್ನು ರದ್ದು ಮಾಡಿಸಲು ಅರ್ಜಿ ಮಾಡಬಹುದೆಂದು ನೇಮಿಸುತ್ತದೆ. ಮೇಲ್ಕಂಡಂತೆ ಅಂಥಾ ಠೇವಣಿಯು ಇಡಲ್ಪಟ್ಟಾಗ, ಕೋರ್ಟಿನವರು ಹರಾಜನ್ನು ರದ್ದು ಮಾಡುವ ಹುಕುಮನ್ನು ಕೊಡತಕ್ಕದ್ದೆಂಬ ಅಂಶವನ್ನು ಸ್ಪಷ್ಟೀಕರಿಸುವುದಕ್ಕೋಸ್ಕರ ಆ ಪ್ರಕರಣಕ್ಕೆ ಒಂದು ಒಳಪ್ರಕರಣವು ಸೇರಿಸಲ್ಪಟ್ಟಿದೆ. 310 A. ಪ್ರಕರಣದ ಪ್ರಕಾರದ ಹುಕುಂಗಳ ಮೇಲೆ ಅಪೀಲ್ಮಾಡುವುದಕ್ಕಾಗುವ ಹಾಗೆ 588ನೆ ಪ್ರಕರಣಕ್ಕೆ ಒಂದು ವಾಕ್ಯವನ್ನೂ ಕೂಡ ಸೇರಿಸಿ ಇದೆ. ಹಾಗೆ ಅಪೀಲ್ಮಾಡುವುದಕ್ಕಾಗುವ ಸಂಗತಿಯು 310 A. ಪ್ರಕರಣದ 4ನೆ ಒಳ ಪ್ರಕರಣದಿಂದ ಮೊದಲೆ ಗೂಢವಾಗಿ ಸೂಚಿಸಲ್ಪಟ್ಟಿದೆ.

3. 1888ರಲ್ಲಿ ಸಿವಿಲ್ ಪ್ರೊಸೀಡ್ಯೂರ್ ಕೋಡು ಮೈಸೂರಿಗೆ ಉಪಯೋಗಕ್ಕೆ ತರಲ್ಪಟ್ಟಾಗ, ವಸ್ತು ಸ್ಥಿತಿಗಳ ವಿಷಯಗಳಲ್ಲಿ ಕೆಳಗಿನ ಎರಡು ಕೋರ್ಟುಗಳು ಭಿನ್ನಾಭಿಪ್ರಾಯಪಟ್ಟಾಗ ಅಂಥಾ ವಿಷಯಗಳಲ್ಲಿ ಆಗ ಹೊಸದಾಗಿ (ಮೂರು ಜಡ್ಜಿಗಳೊಡನೆ ಏರ್ಪಡಿಸಲ್ಪಟ್ಟ) ಚೀಫ್ ಕೋರ್ಟಿಗೆ ಎರಡನೆ ಅಪೀಲ್ಮಾಡುವುದಕ್ಕಾಗುವ ಹಾಗೆ 584ನೆ ಪ್ರಕರಣಕ್ಕೆ (d) ವಾಕ್ಯವು ಹೆಚ್ಚಾಗಿ ಸೇರಿಸಲ್ಪಟ್ಟಿತು. (d) ವಾಕ್ಯವನ್ನು ಒಟ್ಟಿಗೆ ರದ್ದುಮಾಡಬಹುದು, ಅಥವಾ ವಸ್ತು ಸ್ಥಿತಿಗಳ ಮೇಲಿನ ಎರಡನೆ ಅಪೀಲುಗಳಿಗೆ ಸಂಬಂಧಪಟ್ಟ ನಿಯಮಗಳನ್ನು 500 ರೂಪಾಯಿ ಮತ್ತು ಅದಕ್ಕೆ ಮೇಲ್ಪಟ್ಟ ಬೆಲೆಯ ಅಪೀಲುಗಳಿಗೆ ಮಿತಪಡಿಸಬಹುದು, ಎಂದು ಚೀಫ್ ಕೋರ್ಟಿನವರು ಶಿಫಾರಸು ಮಾಡಿರುತ್ತಾರೆ. ಮೈಸೂರು ಸೀಮೆಯಲ್ಲಿ ಚೀಫ್ ಕೋರ್ಟಿನ ಡಿಕ್ರಿಗಳು ಅಖೈರಿನವುಗಳಾಗಿವೆ. ಮತ್ತು ಬ್ರಿಟಿಷ್ ಇಂಡಿಯಾವಿನಲ್ಲಿ ಇರುವಂತೆ ಅದಕ್ಕೆ ಮೇಲ್ಪಟ್ಟ ನ್ಯಾಯಸ್ಥಾನಕ್ಕೆ ಮುಂದೆ ಅಪೀಲು ಇಲ್ಲ ಎಂಬ ಸಂಗತಿಯನ್ನು ಆಲೋಚಿಸಿ ಮೇಲ್ಕಂಡ ಎರಡು ಅಂಶಗಳಲ್ಲಿ ಎರಡನೆಯದು ಒಳ್ಳೆಯದೆಂದು ಗವರ್ನಮೆಂಟಿನವರು ಅಭಿಪ್ರಾಯಪಡುತ್ತಾರೆ. ಆದುದರಿಂದ 584ನೆ ಪ್ರಕರಣಕ್ಕೆ ಸಂಬಂಧವಾದ ತಿದ್ದುಪಾಟನ್ನು ಆಲೋಚಿಸಿ ಇದೆ.

4. 1884ನೆ ಇಸವಿಯ 2ನೆ ರೆಗ್ಯುಲೇಷನಿನಿಂದ ತಿದ್ದುಪಾಟು ಮಾಡಲ್ಪಟ್ಟ 586ನೆ ಪ್ರಕರಣವು 50 ರೂಪಾಯಿ ಬೆಲೆಗೆ ಮೀರುವ ಸ್ಮಾಲ್‌ಕಾಜ್ ಸ್ವಭಾವದ ಎಲ್ಲಾ ಮೊಕದ್ದಮೆಗಳಲ್ಲಿಯೂ ಎರಡನೆ ಅಪೀಲಿಗೆ ಅವಕಾಶ ಕೊಡುತ್ತದೆ. ಬ್ರಿಟಿಷ್ ಇಂಡಿಯಾವಿನಲ್ಲಿ 500 ರೂಪಾಯಿನ ಅವಧಿ ಇದೆ; ಮತ್ತು ಮೈಸೂರು ಸೀಮೆಯಲ್ಲಿಯೂ ಹಾಗೆಯೇ ಅವಧಿಯನ್ನು ಯಾತಕ್ಕೆ ಹೆಚ್ಚಿಸಬಾರದು ಎಂಬುವುದಕ್ಕೆ ಯಾವ ಒಳ್ಳೆಯ ಕಾರಣವೂ ಇಲ್ಲವೆಂದು ತೋರುತ್ತದೆ. ಚಿಕ್ಕ ಮೊಕದ್ದಮೆಗಳಲ್ಲಿ ಎರಡನೆಯ ಅಪೀಲುಗಳಿಂದ ವ್ಯವಹಾರ ಸಾಗುವುದಕ್ಕೆ ಬಹಳವಾಗಿ ಅಡಚಣೆಯಾಗಿದೆ ಎಂಬ ಕಾರಣದ ಮೇಲೆ ಚೀಫ್ ಕೋರ್ಟಿನವರು ಬದಲಾವಣೆಯಾಗಬೇಕೆಂದು ಪ್ರೇರೇಪಿಸುತ್ತಾರೆ. ತದನುಸಾರವಾಗಿ 586ನೆ ಪ್ರಕರಣವನ್ನು ತಿದ್ದುಪಾಟು ಮಾಡುವುದಾಗಿ ಆಲೋಚಿಸಿ ಇದೆ.

574

236

ಮೈಸೂರ ಗೆಜೆಟ್.

[ನಂ. 42] ಸರ್ಕಾರದಿಂದ ಘಾಯಿಷ್ ಆದ್ದು. [ನಂ. 28.

ಬೆಂಗಳೂರು, ಗುರುವಾರ, ಜುಲೈ ತಾ॥ 11, ಸನ್ 1907.

III ನೆ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವ್ ಇಲಾಖೆ.

ತಾರೀಖು 9ನೆ ಜುಲೈ 1907.

ನಂ. ಜೆ. 106—ಲೆಜಿಸ್. 5-06—11, 1906ನೆ ಇಸವಿಯ 4ನೆಯದಾದ ಮೈಸೂರು ಗಣಿಗಳ ರೆಗ್ಯುಲೇಷನಿನಿಂದ ಕೊಡಲ್ಪಟ್ಟ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮತ್ ಮಹಾರಾಜರವರ ಸರ್ಕಾರದವರು, ಸದರಿ ರೆಗ್ಯುಲೇಷನಿನ ೩, 10 ಮತ್ತು 18ನೆ ಪ್ರಕರಣಗಳನ್ನು ಅನುಸರಿಸಿ ಇದರಡಿ ಕಂಡ ನಿಬಂಧನೆಗಳನ್ನೂ ಲೈಸೆನ್ಸುಗಳ ನಮೂನೆಗಳನ್ನೂ 1907ನೆ ಇಸವಿಯ ಆಗಸ್ಟು 1ನೆ ತಾರೀಖಿನಿಂದ ಜಾರಿಗೆ ಬರುವಂತೆ ವಿಧಿಸಿರುತ್ತಾರೆ :—

1. ಚಿನ್ನದ ವ್ಯಾಪಾರಿಗಳ ಮತ್ತು ಅಕ್ಕಸಾಲೆಗಳ ಲೈಸೆನ್ಸುಗಳಿಗಾಗಿ ಕೊಡುವ ಅರ್ಜಿಗಳಲ್ಲಿ ಈ ಕೆಳಗಿನ ವಿವರಗಳು ಅಡಗಿರಬೇಕು :—

(1) ಜಂಜರ್ ನಂಬರು.

(2) ತಾರೀಖು.

(3) ಅರ್ಜಿದಾರನ ಹೆಸರು.

(4) ತಂದೆಯ ಹೆಸರು ಗ್ರಾಮ ವಗೈರೆ.

(5) ಅರ್ಜಿ ಕೊಡುವುದಕ್ಕೆ ಕಾರಣ.

(6) ಚಿನ್ನದ ಗಣಿಯಲ್ಲಿ ಅಥವಾ ಬೇರೆ ಕಡೆಯಲ್ಲಿ ಚಿನ್ನದ ವ್ಯಾಪಾರಿಯ ಅಥವಾ ಅಕ್ಕಸಾಲೆಯ ಕೆಲಸವನ್ನು ಅರ್ಜಿದಾರನು ಮೊದಲು ನಡೆಸುತ್ತಿದ್ದನೋ.

(7) ಜಾಮೀನ್‌ದಾರರು ಅಥವಾ ಜಾಮೀನ್ ಆಗಲು ಸಿದ್ಧವಾಗಿರುವ ಜನಗಳು.

(8) ಕೊಡತಕ್ಕ ಲೈಸೆನ್ಸಿನಿಂದ ಅರ್ಜಿದಾರನಿಗೆ ವಿಧಿಸಬಹುದಾದ ಷರತ್ತುಗಳಂತೆ ನಡೆದುಕೊಳ್ಳಲು ಅರ್ಜಿದಾರನಿಗೆ ಇಷ್ಟವುಂಟೆ.

2. ಚಿನ್ನದ ವ್ಯಾಪಾರಿಗಳ ಮತ್ತು ಅಕ್ಕಸಾಲೆಗಳ ಲೈಸೆನ್ಸುಗಳೂ ಮತ್ತು ಕೋರೀಶೆಟ್ಟಿಗಳ (ಹಾಕರ್-Hawker) ಮತ್ತು ಬೀದಿ ಬೀದಿ ತಿರುಗುವ ಚಿಲ್ಲರೆ ವ್ಯಾಪಾರಗಾರರ (ಪೆಡ್ಲರ್-Pedlar) ಲೈಸೆನ್ಸುಗಳೂ ಕ್ರಮವಾಗಿ A, B, ಮತ್ತು C ಪಟ್ಟಿಗಳಲ್ಲಿ ಕೊಟ್ಟಿರುವ ನಮೂನೆಗಳಂತೆ ಇರತಕ್ಕದ್ದು.

3. ಲೈಸೆನ್ಸುಗಳಿಗಾಗಿ ಈ ಕೆಳಗಿನ ರುಸುಮುಗಳನ್ನು ಕೊಡತಕ್ಕದ್ದು :—

			ರೂಪಾಯಿ.
(1)	ಚಿನ್ನದ ವ್ಯಾಪಾರಿಯ ಲೈಸೆನ್ಸಿಗೆ ...	ವರ್ಷ ಬಂದಕ್ಕೆ	25
(2)	ಅಕ್ಕಸಾಲೆಯ ಲೈಸೆನ್ಸಿಗೆ ...	,,	5
(3)	ಕೋರೀಶೆಟ್ಟಿಯ (ಹಾಕರ) ಲೈಸೆನ್ಸಿಗೆ ...	,,	5
(4)	ಬೀದಿ ಬೀದಿ ತಿರುಗುವ ಚಿಲ್ಲರೆ ವ್ಯಾಪಾರಗಾರನ (ಪೆಡ್ಲರ) ಲೈಸೆನ್ಸಿಗೆ ...	,,	1

4. ಚಿನ್ನದ ವ್ಯಾಪಾರಿಗಳೂ ಅಕ್ಕಸಾಲೆಗಳೂ ಇಡಬೇಕಾಗಿರುವ ರಿಜಿಸ್ಟರು ಕ್ರಮವಾಗಿ D ಮತ್ತು E ಪಟ್ಟಿಗಳಲ್ಲಿರುವ ನಮೂನೆಗಳಲ್ಲಿ ಇರತಕ್ಕದ್ದು.

A. ಪಟ್ಟಿ.

ಚಿನ್ನದ ವ್ಯಾಪಾರಿಯ ಲೈಸೆನ್ಸು.

ಕೋಲಾರದ ಚಿನ್ನದ ಗಣಿಯ ಅಸಿಸ್ಟೆಂಟ್ ಕಮಿಷನರ್ ಮತ್ತು ಮೊದಲನೆ ತರಗತಿಯ ಮ್ಯಾಜಿಸ್ಟ್ರೇಟನ ಕೋರ್ಟಿನಲ್ಲಿ.

ಚಿನ್ನದ ವ್ಯಾಪಾರಿಯ ಲೈಸೆನ್ಸು. 190........ನೆ ವರ್ಷದ..............ನೆ ನಂಬರು.

ರುಸುಂ 25 ರೂಪಾಯಿ.

1906ನೆ ಇಸವಿಯ 4ನೆದಾದ ಮೈಸೂರು ಗಣಿಗಳ ರೆಗ್ಯುಲೇಷನಿನ ನಿಯಮಗಳ ಮೇರೆ ಮತ್ತು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು......................ಸ್ಥಳದಲ್ಲಿ......................ನೆ ನಂಬರು ಲೈಸೆನ್ಸು ಕೊಡಲ್ಪಟ್ಟ ವಠಾರದಲ್ಲಿ ಚಿನ್ನದ ವ್ಯಾಪಾರಿಯ ಕೆಲಸವನ್ನು ನಡೆಸಲು..............................ಲ್ಲಿ ವಾಸಮಾಡುವ..............................ನ ಮಗನಾದ ಮತ್ತು ಮುಂದೆ ಲೈಸೆನ್ಸುದಾರನೆಂದು ಹೇಳಲ್ಪಡುವ..............................ನಿಗೆ ಈ ಮೂಲಕ ಲೈಸೆನ್ಸು ಕೊಡಲ್ಪಟ್ಟಿರುತ್ತದೆ.

..............................ದಿನ ನಮ್ಮ ದಸ್ತಖತ್ತು ಮತ್ತು ಕೋರ್ಟಿನ ಮೊಹರು ನಿಶೀ ಕೊಡಲ್ಪಟ್ಟದೆ.

ಕೋಲಾರದ ಚಿನ್ನದ ಗಣಿಗಳ ಅಸಿಸ್ಟೆಂಟ್ ಕಮಿಷನರು,
ಮತ್ತು ಮೊದಲನೆ ತರಗತಿಯ ಮ್ಯಾಜಿಸ್ಟ್ರೇಟು.

ಷರತ್ತುಗಳು.

(a) ಕೋಲಾರದ ಚಿನ್ನದ ಗಣಿಗಳ ಅಸಿಸ್ಟೆಂಟ್ ಕಮಿಷನರು ಮತ್ತು ಮೊದಲನೆ ತರಗತಿಯ ಮ್ಯಾಜಿಸ್ಟ್ರೇಟನ ಆಫೀಸಿನಲ್ಲಿ ಕ್ರಮವಾಗಿ ರಿಜಿಸ್ಟರ್ಮಾಡಲ್ಪಟ್ಟ....................................ಲ್ಲಿರುವ..............ನೆ ನಂಬರು ಲೈಸೆನ್ಸು ಕೊಡಲ್ಪಟ್ಟ ವಠಾರದಲ್ಲಿ ಮಾತ್ರ ಲೈಸೆನ್ಸುದಾರನು ಕೆಲಸ ನಡೆಸತಕ್ಕದ್ದು.

(b) ಸಾರ್ವಜನಿಕವಾದ ಬೀದಿ ಅಥವಾ ಸರ್ವಸಾಮಾನ್ಯವಾದ ರಸ್ತೆಯ ಒಳಕ್ಕೆ ತೆರೆಯುವ ಬಾಗಿಲುಗಳನ್ನೂ ಕಿಟಕಿಗಳನ್ನೂ ಲೈಸೆನ್ಸು ಕೊಡಲ್ಪಟ್ಟ ವಠಾರಕ್ಕೆ ಇಟ್ಟಿರಬೇಕು, ಮತ್ತು ವಾಸಕ್ಕಾಗಿ ಉಪಯೋಗಿಸುವ ಯಾವ ಸ್ಥಳಕ್ಕೂ ಲೈಸೆನ್ಸು ಕೊಡಲ್ಪಟ್ಟ ವಠಾರದ ಮೂಲಕವಾಗಿ ದಾರಿ ಇರಕೂಡದು.

(c) ಕೋಲಾರದ ಚಿನ್ನದ ಗಣಿಗಳ ಅಸಿಸ್ಟೆಂಟ್ ಕಮಿಷನರ್ ಮತ್ತು ಮೊದಲನೆ ತರಗತಿಯ ಮ್ಯಾಜಿಸ್ಟ್ರೇಟನ ಬರಹಮೂಲಕವಾದ ಮಂಜೂರಾತಿ ಇಲ್ಲದೆ ಈ ಲೈಸೆನ್ಸು ಜಾರಿಯಲ್ಲಿರುವ ಕಾಲದಲ್ಲಿ ಯಾವ ವಿಧವಾಗಿಯೂ ಲೈಸೆನ್ಸು ಕೊಡಲ್ಪಟ್ಟ ವಠಾರದ ಸಾಮಾನುಗಳಾಗಲಿ ಕಟ್ಟಡವಾಗಲಿ ಬದಲಾಯಿಸಲ್ಪಡಕೂಡದು.

(d) ಲೈಸೆನ್ಸುದಾರನು ಸೂರ್ಯಾಸ್ತಮಯಕ್ಕೂ ಸೂರ್ಯೋದಯಕ್ಕೂ ಮಧ್ಯದ ಕಾಲದಲ್ಲಿ ಚಿನ್ನದ ವ್ಯಾಪಾರಿಯ ಯಾವ ಕೆಲಸವನ್ನೂ ನಡೆಸಕೂಡದು.

(e) ಲೈಸೆನ್ಸುದಾರನು ಈ ಕೆಳಗಿನ ಪಟ್ಟಿಯಲ್ಲಿ (D ಪಟ್ಟಿ) ವಿಧಿಸಿರುವ ನಮೂನೆಯಲ್ಲಿ ಒಂದು ರಿಜಿಸ್ಟರನ್ನು ಇಟ್ಟು ಅದರಲ್ಲಿ ಪ್ರತಿ ವ್ಯಾಪಾರವು ಪೂರ್ತಿಯಾದ ತತ್‌ಕ್ಷಣವೇ ಗೇಯದ (ಅಥವಾ ಕೆಲಸ ಮಾಡದ) ಎಲ್ಲಾ ಚಿನ್ನದ ಜಮೆ ಅಥವಾ ವಿಲೆವಾರಿಯನ್ನು ದಾಖಲ್ಮಾಡತಕ್ಕದ್ದು.

(f) ಪ್ರತಿ ಖತಾಯಿತಿಯನ್ನೂ ಮಾಡಿಯಾದ ಕೂಡಲೆ (e) ಷರತ್ತಿನಲ್ಲಿ ಕಂಡ ಪ್ರತಿ ಖತಾಯಿತಿಯ ಕೆಳಗೆ ಮತ್ತು ಅದರ ಹತ್ತಿರ ರಿಜಿಸ್ಟರಿನಲ್ಲಿ ಅಡ್ಡಲಾಗಿ ಒಂದು ರೂಲ್ ಗೆರೆಯನ್ನು ಎಳೆಯತಕ್ಕದ್ದು, ಮತ್ತು ಒಂದಾವರ್ತಿ ರಿಜಿಸ್ಟರಿನಲ್ಲಿ ದಾಖಲ್ಮಾಡಲ್ಪಟ್ಟದು ಯಾವುದನ್ನೂ ಅಳಿಸಿ ಬಿಡಕೂಡದು ಅಥವಾ ಬದಲಾಗದಂತೆ ಮಾಡಕೂಡದು, ಮತ್ತು ರಿಜಿಸ್ಟರಿನಲ್ಲಿ ಯಾವ ಭಾಗವನ್ನಾದರೂ ತೆಗೆದು ಹಾಕಕೂಡದು ಅಥವಾ ನಾಶ ಮಾಡಕೂಡದು.

(g) ಲೈಸೆನ್ಸುದಾರನು ತನ್ನ ಕೆಲಸದಲ್ಲಿ ತನಗೆ ಸಹಾಯ ಮಾಡುವುದಕ್ಕೆ ತಾನು ಇಟ್ಟುಕೊಂಡಿರುವ ಯಾವನಾದರೂ ಮನುಷ್ಯನ ಹೆಸರನ್ನೂ ವಿಳಾಸವನ್ನೂ ಕೋಲಾರದ ಚಿನ್ನದ ಗಣಿಗಳ ಅಸಿಸ್ಟೆಂಟ್ ಕಮಿಷನರ್ ಮತ್ತು ಮೊದಲನೆ ತರಗತಿಯ ಮ್ಯಾಜಿಸ್ಟ್ರೇಟನ ಆಫೀಸಿನಲ್ಲಿ ರಿಜಿಸ್ಟರ್ಮಾಡಿಸತಕ್ಕದ್ದು, ಮತ್ತು ಅಂಥಾ ಮನುಷ್ಯರನ್ನು ಕೆಲಸದಿಂದ ತೆಗೆದು ಹಾಕೋಣದರಿಂದ ಅಥವಾ ಅವರ ನೌಕರಿಯನ್ನು ನಿಲ್ಲಿಸಿ ಬಿಡೋಣದರಿಂದ ಅಥವಾ ಅನ್ಯಥಾ ಆಗಾಗ್ಗೆ ಸಂಭವಿಸುವ ಬದಲಾವಣೆಗಳನ್ನು ತಿಳಿಸತಕ್ಕದ್ದು.

(h) ಲೈಸೆನ್ಸುದಾರನು ಮೇಲ್ಕಂಡ (e) ಷರತ್ತಿನಲ್ಲಿ ವಿಧಿಸಲ್ಪಟ್ಟಿರುವ ರಿಜಿಸ್ಟರಿನಲ್ಲಿ ಪ್ರತಿ ಇಂಗ್ಲೀಷು ತಿಂಗಳಿನಲ್ಲಿಯೂ ಮಾಡಲ್ಪಟ್ಟ ಎಲ್ಲಾ ಖತಾಯಿತಿಗಳ ಯಥಾರ್ಥವಾದ ನಕಲನ್ನು ಪೊಲೀಸು ಡಿಸ್ಟ್ರಿಕ್ಟು ಸೂಪರಿಂಟೆಂಡೆಂಟಿಗೂ ಕೋಲಾರದ ಚಿನ್ನದ ಗಣಿಗಳ ಅಸಿಸ್ಟೆಂಟ್ ಕಮಿಷನರ್ ಮತ್ತು ಮೊದಲನೆ ತರಗತಿಯ ಮಾಜಿಸ್ಟ್ರೇಟಿಗೂ ಪ್ರತಿ ತಿಂಗಳೂ ಮುಗಿದ ಏಳು ದಿನಗಳೊಳಗಾಗಿ ಕಳುಹಿಸತಕ್ಕದ್ದು.

(i) ಲೈಸೆನ್ಸು ಕೊಡಲ್ಪಟ್ಟ ವಠಾರವೂ, (e) ಷರತ್ತಿನ ಮೇರೆ ವಿಧಿಸಲ್ಪಟ್ಟ ರಿಜಿಸ್ಟರೂ ಮತ್ತು ರಿಜಿಸ್ಟರಿನಲ್ಲಿ ಕಂಡ ಮತ್ತು ಲೈಸೆನ್ಸುದಾರನ ಸ್ವಾಧೀನದಲ್ಲಿರುವ ಯಾವುದಾದರೂ ಪದಾರ್ಥವೂ ಅಥವಾ ಕೆಲಸ ಮಾಡದ ಚಿನ್ನದ ರಖಮೂ, ಚೀಫ್ ಕಾನ್ಸ್ಟೆಬಿಲಿನ ದರ್ಜೆಗೆ ಕೀಳ್ಪಡದ ಯಾವನಾದರೂ ಪೊಲೀಸು ಆಫೀಸರ, ಅಥವಾ ಕೋಲಾರದ ಚಿನ್ನದ ಗಣಿಗಳ ಡಿಸ್ಟ್ರಿಕ್ಟು ಪೊಲೀಸು ಸೂಪರಿಂಟೆಂಡೆಂಟಿಂದ ಅಥವಾ ಒಬ್ಬ ಮೊದಲನೆ ತರಗತಿಯ ಮಾಜಿಸ್ಟ್ರೇಟಿಂದ ವಿಶೇಷವಾಗಿ ಅಧಿಕಾರ ಕೊಡಲ್ಪಟ್ಟಿರುವ ಯಾವ ಪೊಲೀಸು ಆಫಿಸರಿಂದಾದರೂ ಯಾವ ಕಾಲದಲ್ಲಿಯಾದರೂ ಅಜಮಾಯಿಷಿ ಮಾಡಲ್ಪಡುವ ಬಗ್ಗೆ ತೆರೆದಿಡಲ್ಪಡತಕ್ಕದ್ದು.

(j) ಈ ಷರತ್ತುಗಳಲ್ಲಿ ಯಾವುವಾದರೂ ಅನುಸರಿಸಲ್ಪಡದೆ ಹೋದರೆ ಅಥವಾ ಕೋಲಾರದ ಚಿನ್ನದ ಗಣಿಗಳ ಮಾಜಿಸ್ಟ್ರೇಟಾಗಲಿ ಅಥವಾ ಡಿಸ್ಟ್ರಿಕ್ಟು ಮಾಜಿಸ್ಟ್ರೇಟಾಗಲಿ, ತಾನು ಬರೆದಿಡತಕ್ಕ ಕಾರಣಗಳಿಗೋಸ್ಕರ, ಲೈಸೆನ್ಸು ರದ್ದು ಮಾಡಲ್ಪಡತಕ್ಕದ್ದೆಂದು ಯೋಚಿಸಿದರೆ, ಈ ಲೈಸೆನ್ಸು ರದ್ದು ಮಾಡಲ್ಪಡುವುದಕ್ಕೆ ಗುರಿಯಾಗತಕ್ಕದ್ದು.

(k) ಈ ಲೈಸೆನ್ಸು 190 ನೆ ವರ್ಷದ ಡಿಸೆಂಬರು 31ನೆ ತಾರೀಖಿಗೆ ತೀರಿಹೋಗತಕ್ಕದ್ದು.

B. ಪಟ್ಟಿ

ಅಕ್ಕಸಾಲೆಯ ಲೈಸೆನ್ಸು.

ಕೋಲಾರದ ಚಿನ್ನದ ಗಣಿಗಳ ಅಸಿಸ್ಟೆಂಟ್ ಕಮಿಷನರ್ ಮತ್ತು ಮೊದಲನೆ ತರಗತಿಯ ಮಾಜಿಸ್ಟ್ರೇಟಿನ ಕೋರ್ಟಿನಲ್ಲಿ.

ಲೈಸೆನ್ಸು 190 ನೆ ವರ್ಷದ ....ನೆ ನಂಬರು.

190 ನೆ ವರ್ಷದ.................ನೆ ತಾರೀಖು..........ನೆ ನಂಬರು ಸರ್ಕಾರಿ ಇಸ್ತಿಹಾರ್ನಾಮೆಯಿಂದ ವಿಧಿಸಲ್ಪಟ್ಟ ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ಅಕ್ಕಸಾಲೆಯ ಕೆಲಸವನ್ನು ನಡೆಸಲು.................. ಗ್ರಾಮದ..................ನ ಮಗನಾದ.................. ನಿಗೆ ಈ ಮೂಲಕ ಲೈಸೆನ್ಸು ಕೊಡಲ್ಪಟ್ಟಿದೆ.

(a) ಮೇಲ್ಕಂಡ ಲೈಸೆನ್ಸುದಾರನಾದ.................. ಎಂಬುವನು ಸಾರ್ವಜನಿಕ ಬೀದಿಗಳ ಅಥವಾ ಓಣಿಗಳ ಒಳಕ್ಕೆ ತೆರೆಯುವ ಆದರೆ ವಾಸಕ್ಕಾಗಿ ಉಪಯೋಗಿಸುವ ಸ್ಥಳದೊಳಕ್ಕೆ ತೆರೆಯದೆ ಇರುವ ಕಿಟಿಕಿಗಳನ್ನು ಇಟ್ಟಿರುವ ಮತ್ತು ಕೋಲಾರದ ಚಿನ್ನದ ಗಣಿಗಳ ಅಸಿಸ್ಟೆಂಟ್ ಕಮಿಷನರ್ ಮತ್ತು ಮೊದಲನೆ ತರಗತಿಯ ಮಾಜಿಸ್ಟ್ರೇಟಿನ ಆಫಿಸಿನಲ್ಲಿ ಕ್ರಮವಾಗಿ ರಿಜಿಸ್ಟರ್ಮಾಡಲ್ಪಟ್ಟಿರುವ.................. ಗ್ರಾಮದ..................ನಂಬರ ಮನೆಯಲ್ಲಿ ಕೆಲಸವನ್ನು ನಡೆಸತಕ್ಕದ್ದು.

(b) ಸೂರ್ಯಾಸ್ತಮಯಕ್ಕೂ ಮತ್ತು ಸೂರ್ಯೋದಯಕ್ಕೂ ಮಧ್ಯದ ಕಾಲದಲ್ಲಿ ಚಿನ್ನವನ್ನು ಅಥವಾ ಇತರ ಲೋಹವನ್ನು ಕರಗಿಸುವ ಅಥವಾ ಶುದ್ಧಿ ಮಾಡುವ ಯಾವ ಕೆಲಸವನ್ನೂ ನಡೆಸಕೂಡದು.

(c) ಮೇಲ್ಕಂಡ ಲೈಸೆನ್ಸುದಾರನು 1906ನೆ ಇಸವಿಯ 4ನೆಯ ಮೈಸೂರು ಗಣಿಗಳ ರೆಗ್ಯುಲೇಷನಿನ 10ನೆ ಪ್ರಕರಣದ ಮೇರೆ ತನ್ನ ರಿಜಿಸ್ಟರಿನಲ್ಲಿ ದಾಖಲ್ಮಾಡಲ್ಪಡತಕ್ಕದ್ದೆಂದೂ ಅಪ್ಪಣೆ ಮಾಡಿರುವ ಚಿನ್ನ, ಬೆಳ್ಳಿ, ಚಿನ್ನದ ಅಥವಾ ಬೆಳ್ಳಿಯ ಆಭರಣಗಳು, ಕೆಲಸ ಮಾಡದ ಚಿನ್ನ ಅಥವಾ ಚಿನ್ನದ ಇತರ ಪದಾರ್ಥವೇ ಮೊದಲಾದ ವಸ್ತುಗಳಲ್ಲಿ ಯಾವುವನ್ನಾದರೂ ಅಂಥಾ ವಸ್ತುವನ್ನು ತಾನು ಹೊಂದಿದ ಕಾಲದಿಂದ ಬರಾಬರಿ ಮೂರು ದಿವಸಗಳು ಕಳೆದು ಹೋಗುವವರೆಗೆ ಕರಗಿಸಕೂಡದು, ಕೆಲಸ ಮಾಡಕೂಡದು, ಉಪಯೋಗಿಸಕೂಡದು ಅಥವಾ ಏನೂ ಮಾಡಕೂಡದು. ಆದರೆ ಈ ಷರತ್ತು ಅಂಥಾ ವಸ್ತುಗಳ ರೂಪವನ್ನು ಬದಲಾಯಿಸದ ಅಥವಾ ಐಕ್ಯವನ್ನು ನಾಶಮಾಡದ ಯಾವ ರೀತಿಯಲ್ಲಾದರೂ ಲೈಸೆನ್ಸುದಾರನು ಒಡವೆಯ ವಸ್ತುಗಳನ್ನು ದುರಸ್ತು ಮಾಡುವುದಕ್ಕೆ ಲಗಾವಾಗತಕ್ಕದ್ದಲ್ಲ.

(d) ಮೇಲ್ಕಂಡ ಲೈಸೆನ್ಸುದಾರನು ವಿಧಿಸಲ್ಪಟ್ಟ ಇದಕ್ಕೆ ಲಗತ್ತು ಮಾಡಿರುವ ನಮೂನೆಯಲ್ಲಿ (E ಪಟ್ಟಿ) ಒಂದು ರಿಜಿಸ್ಟರನ್ನು ಇಟ್ಟು ಅದರಲ್ಲಿ ಅವನಿಂದ ತೆಗೆದುಕೊಳ್ಳಲ್ಪಟ್ಟ, ತಯಾರ್ಮಾಡಲ್ಪಟ್ಟ ಅಥವಾ ವಿಲೇವಾರಿ ಮಾಡಲ್ಪಟ್ಟ ಎಲ್ಲಾ ಚಿನ್ನದ, ಬೆಳ್ಳಿಯ, ಅಥವಾ ಚಿನ್ನ ಅಥವಾ ಬೆಳ್ಳಿ ಆಭರಣಗಳ, ಕೆಲಸಮಾಡದ ಚಿನ್ನದ ಅಥವಾ ಚಿನ್ನದ ಇತರ ಪದಾರ್ಥದ ಜಮೆ ಅಥವಾ ವಿಲೇವಾರಿಯನ್ನು ತತ್‌ಕ್ಷಣವೇ ಅವನು ತಾಖಲ್ಮಾಡತಕ್ಕದ್ದು.

(e) ಲೈಸೆನ್ಸುದಾರನು ಮಾಜಿಸ್ಟ್ರೇಟಿನ ಬರಹಮೂಲಕವಾದ ಅಪ್ಪಣೆ ಇಲ್ಲದೆ ಅಕ್ಕಸಾಲೆಯಾಗಿ ಯಾವ ಮನುಷ್ಯನನ್ನಾಗಲಿ ತನ್ನ ಕೆಲಸದಲ್ಲಿ ತನಗೆ ಸಹಾಯ ಮಾಡುವುದಕ್ಕೆ ತನ್ನ ಕೆಲಸದ ಸ್ಥಳದಲ್ಲಿ ಇಟ್ಟುಕೊಳ್ಳಕೂಡದು. ಹಾಗೆ ಕೆಲಸಕ್ಕೆ ಇಟ್ಟುಕೊಂಡ ಅಂಥಾ ಯಾವ ಮನುಷ್ಯನನ್ನಾದರೂ ಕೆಲಸದಿಂದ ತೆಗೆದುಹಾಕೋಣವನ್ನು ಅಥವಾ ನೌಕರಿಯಿಂದ ನಿಲ್ಲಿಸಿಬಿಡೋಣವನ್ನು ಮಾಜಿಸ್ಟ್ರೇಟಿಗೆ ಕೂಡಲೆ ತಿಳಿಸತಕ್ಕದ್ದು.

(f) ಮೇಲ್ಕಂಡ ಷರತ್ತುಗಳಲ್ಲಿ ಯಾವುದಾದರೂ ಅನುಸರಿಸಲ್ಪಡದೆ ಹೋದರೆ ಲೈಸೆನ್ಸು ರದ್ದುಮಾಡಲ್ಪಡುವುದಕ್ಕೆ ಗುರಿಯಾಗತಕ್ಕದ್ದು.

(g) ಲೈಸೆನ್ಸು 190 ನೆ ವರ್ಷದ ಡಿಸೆಂಬರು 31ನೆ ತಾರೀಖಿನ ವರೆಗೆ ಜಾರಿಯಲ್ಲಿರತಕ್ಕದ್ದು.

.... ನೆ ವರ್ಷದ .... ದಿನ ನಮ್ಮ ದಸ್ತಖತ್ತು ಮತ್ತು ಕೋರ್ಟಿನ ಮೊಹರು ನಿಶೀ ಕೊಡಲ್ಪಟ್ಟಿದೆ.

ಕೋಲಾರದ ಚಿನ್ನದ ಗಣಿಗಳ ಅಸಿಸ್ಟೆಂಟ್ ಕಮಿಷನರ್
ಮತ್ತು ಮೊದಲನೆ ತರಗತಿಯ ಮಾಜಿಸ್ಟ್ರೇಟು.

C. ಪಟ್ಟಿ.

ಹಾಕರ್ಸ್ (ಕೋರೀ ಶೆಟ್ಟಿಗಳು) ಮತ್ತು ಪೆಡ್ಲರ್ಸ್ (ಬೀದಿಬೀದಿ ತಿರುಗುವ ಚಿಲ್ಲರೆ ವ್ಯಾಪಾರಗಾರರು) ಇವರಿಗೆ ಲೈಸೆನ್ಸು.

ಲೈಸೆನ್ಸಿನ ನಮೂನೆ.

ಈ ಕೆಳಗೆ ನಮೂದಾಗುವ ಲೈಸೆನ್ಸಿನ ಷರತ್ತುಗಳಿಗೆ ಒಳಪಟ್ಟು ಈ ಲೈಸೆನ್ಸಿನಲ್ಲಿ ನಮೂದಾಗುವ ತರದ ಸಾಮಾನುಗಳಲ್ಲಿ ಈ ಲೈಸೆನ್ಸಿನಲ್ಲಿ ನಮೂದಾಗುವ ಸ್ಥಳ ಅಥವಾ ಸ್ಥಳಗಳಲ್ಲಿ ಮತ್ತು ಗಣಿಯ ಪ್ರದೇಶದೊಳಗಿರುವ ಮತ್ತಾವ ಸ್ಥಳದಲ್ಲಿಯೂ ಅಲ್ಲದೆ ಹಾಕರ (ಕೋರೀಶೆಟ್ಟಿಯ) ಪೆಡ್ಲರ (ಬೀದಿ ಬೀದಿ ತಿರುವ ಚಿಲ್ಲರೆ ವ್ಯಾಪಾರಗಾರನ) ಕೆಲಸವನ್ನು ನಡೆಸಲು .... ಲ್ಲಿ ವಾಸಮಾಡುವ .... ನ ಮಗನಾದ .... ಗೆ 1906ನೆ ಇಸವಿಯ 4ನೆ ನಂಬರ್ ಮೈಸೂರು ಘಣಿಗಳ ರೆಗ್ಯುಲೇಷನಿನ 18ನೆ ಪ್ರಕರಣದ ಮೇರೆ ಈ ಮೂಲಕ ಲೈಸೆನ್ಸು ಕೊಡಲ್ಪಟ್ಟಿದೆ.

ಲೈಸೆನ್ಸು ಕೊಡಲ್ಪಟ್ಟ ಸಾಮಾನಿನ ವಿವರ ಮತ್ತು ಒಂದುಕೆಲಸಕ್ಕೆ ಹಾಕರಿಂದ (ಕೋರೀಶೆಟ್ಟಿಯಿಂದ) ಅಥವಾ ಪೆಡ್ಲರಿಂದ (ಬೀದಿ ಬೀದಿ ತಿರುಗುವ ಚಿಲ್ಲರೆ ವ್ಯಾಪಾರಗಾರನಿಂದ) ಮಾರಲ್ಪಡತಕ್ಕ ಪ್ರತಿ ತರದ ಸಾಮಾನಿನ ಪರಮಾವಧಿಯ ಪ್ರಮಾಣ ಮತ್ತು ಬೆಲೆ.

ಯಾವುದಕ್ಕೆ ಮಾತ್ರ ಈ ಲೈಸೆನ್ಸು ಲಗಾವಾಗುತ್ತದೆಯೋ ಆ ಸ್ಥಳ.

1906ನೆ ಇಸವಿಯ 4ನೆದಾದ ಮೈಸೂರು ಗಣಿಗಳ ರೆಗ್ಯುಲೇಷನಿನ 18ನೆ ಪ್ರಕರಣದ ಮೇರೆ ಹಾಕರುಗಳಿಗೆ (ಕೋರೀಶೆಟ್ಟಿಗಳಿಗೆ) ಅಥವಾ ಪೆಡ್ಲರುಗಳಿಗೆ (ಬೀದಿಬೀದಿ ತಿರುಗುವ ಚಿಲ್ಲರೆ ವ್ಯಾಪಾರಗಾರರಿಗೆ) ಕೊಡಲ್ಪಡತಕ್ಕ ಲೈಸೆನ್ಸಿನ ಷರತ್ತುಗಳು :—

(a) "ಹಾಕರ್ ಯಾನೆ ಕೋರೀಶೆಟ್ಟಿ" ಎಂದರೆ ತಾನು ತಲೆಯಮೇಲೆ ಹೊತ್ತುಕೊಂಡು ಹೋಗಬಲ್ಲ ಪ್ರಮಾಣಕ್ಕೆ ಮೀರುವ ಅಥವಾ ಒಟ್ಟು ಬೆಲೆಯಲ್ಲಿ 50 ರೂಪಾಯಿಗೆ ಮೀರುವ ಯಾವುದಾದರೂ ತರದ ಸಾಮಾನನ್ನು ಸಂಚಾರಮಾಡಿ ಮಾರುವವನು ಎಂದು ಅರ್ಥ.

(b) "ಪೆಡ್ಲರ್ ಯಾನೆ ಬೀದಿಬೀದಿ ತಿರುಗುವ ವ್ಯಾಪಾರಗಾರ" ಎಂದರೆ, ತನ್ನ ತಲೆಯ ಮೇಲೆ ಹೊತ್ತುಕೊಂಡು ಹೋಗಬಲ್ಲ ಪ್ರಮಾಣಕ್ಕೆ ಮೀರದ ಅಥವಾ ಒಟ್ಟು ಬೆಲೆಯಲ್ಲಿ 50 ರೂಪಾಯಿಗೆ ಮೀರದ ಯಾವುದಾದರೂ ತರದ ಸಾಮಾನುಗಳನ್ನು ಸಂಚಾರ ಮಾಡಿ ಮಾರುವವನು ಎಂದು ಅರ್ಥ.

(c) ಲೈಸೆನ್ಸುದಾರನು ಗಣಿಯ ಪ್ರದೇಶದಲ್ಲಿ ತನ್ನ ಲೈಸೆನ್ಸಿನಲ್ಲಿ ನಮೂದು ಮಾಡಲ್ಪಡದ ಯಾವ ಸ್ಥಳದಲ್ಲಿಯಾದರೂ ಹಾಕರ್ (ಕೋರೀಶೆಟ್ಟಿ) ಅಥವಾ ಪೆಡ್ಲರಾಗಿ (ಬೀದಿ ಬೀದಿ ತಿರುಗುವ ವ್ಯಾಪಾರಗಾರನಾಗಿ) ತನ್ನ ಕೆಲಸವನ್ನು ನಡೆಸಕೂಡದು.

(d) ಲೈಸೆನ್ಸುದಾರನು ಲೈಸೆನ್ಸಿನಲ್ಲಿ ನಮೂದು ಮಾಡಲ್ಪಡದ ಅಥವಾ ಲೈಸೆನ್ಸಿನಲ್ಲಿ ವಿಧಿಸಲ್ಪಟ್ಟ ಪ್ರಮಾಣಕ್ಕೆ ಮೀರಿದ ಯಾವ ತರದ ಸಾಮಾನನ್ನಾಗಲಿ ಮಾರಕೂಡದು.

(e) ಲೈಸೆನ್ಸುದಾರನು ಸೂರ್ಯಾಸ್ತಮಯಕ್ಕೂ ಸೂರ್ಯೋದಯಕ್ಕೂ ಮಧ್ಯೆ ಯಾವ ಗಣಿಯಲ್ಲಾಗಲಿ ಸಾಮಾನುಗಳನ್ನು ಮಾರಕೂಡದು ಅಥವಾ ನಿಲ್ಲಕೂಡದು.

(f) ಲೈಸೆನ್ಸುದಾರನು ಯಾವುದಾದರೂ ಪಾಳೆಯದಲ್ಲಿ ಸಾಮಾನುಗಳನ್ನು ಮಾರಕೂಡದು ಅಥವಾ ನಿಲ್ಲಕೂಡದು ಎಂದು ಗಣಿಯ ಪ್ರದೇಶದಲ್ಲಿ ಅಧಿಕಾರವುಳ್ಳ ಯಾವನಾದರೂ ಮೊದಲನೇ ತರಗತಿಯ ಮಾಜಿಸ್ಟ್ರೇಟಿಂದ ದಸ್ತಖತ್ತು ಮಾಡಲ್ಪಟ್ಟ ಬರಹ ಮೂಲಕವಾದ ನೋಟಿಸು, ಸಿವಿಲ್ ಪ್ರೊಸೀಡ್ಯೂರ್ ಕೋಡಿನಲ್ಲಿ ಸಮ್ಮನ್ಸುಗಳ ಮತ್ತು ನೋಟಿಸುಗಳ ಸಾದರಾತಿಯ ಬಗ್ಗೆ ವಿಧಿಸಲ್ಪಟ್ಟಿರುವ ಯಾವುದಾದರೂ ರೀತಿಯಲ್ಲಿ ತನ್ನ ಮೇಲೆ ಸಾದರ್ಮಾಡಲ್ಪಟ್ಟ ತರುವಾಯ ಅಥವಾ ಸಾದರಾತಿಯ ಬಗ್ಗೆ ತನಗೆ ಕೊಡಲ್ಪಟ್ಟ ತರುವಾಯ ಹಾಗೆ ಮಾಡಕೂಡದು.

(g) ಲೈಸೆನ್ಸುದಾರನ ವಿಶಿಷ್ಟ ವ್ಯಾಪಾರಗಳೂ ಖಂಡಿತವಾಗಿ ನಗದಿಗಾಗಿರತಕ್ಕದ್ದೇ ಹೊರತು ಸಾಟಿಗಾಗಿ ಅಥವಾ ಅದಲು ಬದಲಿಗಾಗಿ ಇರಕೂಡದು.

(h) ಲೈಸೆನ್ಸುದಾರನು ಯಾವುದಾದರೂ ಗಣಿಯಲ್ಲಿ ಇರುವಾಗ ಅಂಥಾ ಗಣಿಯ ಕೆಲಸವನ್ನು ಕ್ರಮಪಡಿಸುವುದಕ್ಕಾಗಲಿ ಕೆಲಸಗಾರರ ಶಿಕ್ಷಣಕ್ಕಾಗಲಿ ಆ ಗಣಿಯ ಆರೋಗ್ಯಾಭಿವೃದ್ಧಿಗಾಗಲಿ ಅಂಥಾ ಗಣಿಯ ಸೂಪರಿಂಟೆಂಡೆಂಟಿಂದ ಕೊಡಲ್ಪಟ್ಟ ಯಾವುದಾ

ಷರತ್ತು ಹುಕುಂಗಳಿಗೆ ಒಳಪಟ್ಟಿರತಕ್ಕದ್ದು ಮತ್ತು ಅಂಥಾ ಯಾವುದಾದರೂ ನಿಬಂಧನೆಯ ಉಲ್ಲಂಘನೆಯು, ಸದರಿ ಉಲ್ಲಂಘನೆ ಮಾಡಲ್ಪಡುವುದಕ್ಕೆ ಲೈಸೆನ್ಸುದಾರನಿಗೆ ನಿಬಂಧನೆಯು ತಿಳಿಯಪಡಿಸಲ್ಪಟ್ಟಿದ್ದರೆ, ಈ ಲೈಸೆನ್ಸಿನ ಷರತ್ತುಗಳ ಉಲ್ಲಂಘನೆಯಾಗಿ ಭಾವಿಸಲ್ಪಡುವುದು.

(i) ತನ್ನ ಲೈಸೆನ್ಸಿನಲ್ಲಿ ನಮೂದಾಗಿರುವ ಯಾವುದಾದರೂ ಗಣಿಗೆ ಅಥವಾ ಇತರ ಪ್ರದೇಶಕ್ಕೆ ಪ್ಲೇಗು ಕಾಲರಾ, ಸಿಡುಬು, ಅಥವಾ ಇತರ ಅಂಟು ಅಥವಾ ಸೋಂಕು ರೋಗವು ಯಾವುದಾದರೂ ಸಾಂಕ್ರಾಮಿಕ ರೂಪದಲ್ಲಿ ತಗುಲಿರುವ ಹಾಗೆ ಜುಬಾನಿ ಅಥವಾ ಬರಹ ಮೂಲಕವಾದ ನೋಟೀಸನ್ನು ಹೊಂದಿದಾಗ ಲೈಸೆನ್ಸುದಾರನು ಅಂಥಾ ರೋಗಗತಗುಲಿದ ಪ್ರದೇಶದಲ್ಲಿ ಮೇಲೆಕಂಡ ತನ್ನ ಕೆಲಸವನ್ನು ಪುನಃ ಪ್ರಾರಂಭಿಸಲು ಘಣಿಯು ಪ್ರದೇಶದಲ್ಲಿ ಅಧಿಕಾರವಿರುವ ಯಾವನಾದರೂ ಮೊದಲನೆ ತರಗತಿಯ ಮಾಜಿಸ್ಟ್ರೇಟಿಂದ ದಸ್ತಖತ್ತು ಮಾಡಲ್ಪಟ್ಟ ಬರಹಮೂಲಕವಾದ ಹುಕುಂ ಮೂಲಕ ಅಪ್ಪಣೆ ಕೊಡಲ್ಪಡುವವರೆಗೆ ಅಂಥಾ ಪ್ರದೇಶದಲ್ಲಿ ತನ್ನ ಕೆಲಸ ನಡೆಸುವುದನ್ನು ನಿಲ್ಲಿಸತಕ್ಕದ್ದು.

(j) ಈ ಲೈಸೆನ್ಸು, ಅದರಲ್ಲಿ ನಮೂದಾಗಿರುವ ಯಾವುದಾದರೂ ಕ್ಯಾಂಪು ಯಾ ಪಾಳೆಯಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಅಂಥಾ ಪಾಳೆಯದ ಸೂಪರಿಂಟೆಂಡೆಂಟಿಂದ ಲೈಸೆನ್ಸಿನ ಮೇಲೆ ಬರಹಮೂಲಕವಾದ ಒಪ್ಪಿಗೆಯ ಷರಾ ಮಾಡಲ್ಪಡುವುದಕ್ಕೆ ಒಳಪಟ್ಟು ಕೊಡಲ್ಪಟ್ಟಿದೆ, ಮತ್ತು ಅಂಥಾ ಷರಾವನ್ನು ಹೊಂದುವವರೆಗೆ ಈ ಲೈಸೆನ್ಸು ಅಂಥಾ ಪಾಳೆಯದಲ್ಲಿ ಸಲ್ಲತಕ್ಕದ್ದಾಗಿಲ್ಲ.

(k) ಈ ಲೈಸೆನ್ಸಿನ ಉಲ್ಲಂಘನೆಯು ಲೈಸೆನ್ಸನ್ನು ದಂಡವಾಗಿ ಕಳೆದುಕೊಳ್ಳುವುದಕ್ಕೆ ಗುರಿಪಡಿಸುವುದಲ್ಲದೆ ಅದರ ಜತೆಗೆ 19ನೆ ಪ್ರಕರಣದ ಮೇರೆ 100 ರೂಪಾಯಿನ ಜುಲ್ಮಾನೆಗಾಗಲಿ ಮೂರು ತಿಂಗಳುಗಳಿಗೆ ಮೀರದ ಒಂದು ವಾಯಿದೆಯ ಪರ್ಯಂತ ಉಭಯ ತರದ ಕೈದಿಗಾಗಲಿ ಅಥವಾ ಇವೆರಡಕ್ಕೂ ಗುರಿಪಡಿಸತಕ್ಕದ್ದು.

(l) ಈ ಲೈಸೆನ್ಸು 190 . . ನೆ ವರ್ಷದ ಡಿಸೆಂಬರು 31ನೆ ತಾರೀಖಿನ ಕೊನೆಯವರೆಗೆ ಜಾರಿಯಲ್ಲಿರತಕ್ಕದ್ದು.

(m) ಲೈಸೆನ್ಸುದಾರನು, ಯಾವನಾದರೂ ಮಾಜಿಸ್ಟ್ರೇಟಿಂದ, ಅಥವಾ ಹೆಡ್ ಕಾನ್ಸ್ಟೆಬಲಿನ ದರ್ಜೆಗೆ ಕಡಮೆ ಇಲ್ಲದ ಪೋಲೀಸು ಆಫೀಸರಿಂದ ಅಥವಾ ಯಾವನಾದರೂ ವೈದ್ಯ ಅಥವಾ ಗಣಿಯ ಆಫೀಸರಿಂದ ಅಥವಾ ಸ್ಯಾನಿಟರಿ ಓವರ್ಸೀಯರ ದರ್ಜೆಗೆ ಕಡಮೆಯಿಲ್ಲದ ಯಾವನಾದರೂ ಸ್ಯಾನಿಟರಿ ಆಫೀಸರಿಂದ, ಲೈಸೆನ್ಸುದಾರನೂ ಹಾಕರಾಗಿ (ಕೋರೀಕಟ್ಟೆಯಾಗಿ) ಅಥವಾ ಪೆಡ್ಲರಾಗಿ (ಬೀದಿಬೀದಿ ತಿರುಗುವ ವ್ಯಾಪಾರಗಾರನಾಗಿ) ಮಾರುವ ಸಾಮಾನಿನ ಅಜಮಾಯಿಷಿಗೆ ಯಾವ ಕಾಲದಲ್ಲಿ ಯಾದರೂ ಧಾರಾಳವಾಗಿ ಅವಕಾಶಕೊಡತಕ್ಕದ್ದು.

. . . . ಇಸವಿಯ . . . . ದಿನದಲ್ಲಿ ನಮ್ಮ ದಸ್ತಖತ್ತು ಮತ್ತು ಕೋರ್ಟಿನ ಮೊಹರು ನಿಶೀ ಕೊಡಲ್ಪಟ್ಟಿದೆ.

ಕೋಲಾರದ ಚಿನ್ನದ ಗಣಿಗಳ ಮೊದಲನೆ ತರಗತಿಯ,
ಮಾಜಿಸ್ಟ್ರೇಟು.

D. ಪಟ್ಟಿ.

1906ನೆ ಇಸವಿಯ 4ನೆಯದಾದ ಮೈಸೂರು ಗಣಿಗಳ ರೆಗ್ಯುಲೇಷನಿನ 10 (1)ನೆ ಪ್ರಕರಣದ ಮತ್ತು A ಪಟ್ಟಿಯ (i) ಷರತ್ತಿನ ಮೇರೆ ಇಡಬೇಕಾಗಿರುವ ರಿಜಿಸ್ಟರಿನ ನಮೂನೆ.

ಈ ರಿಜಿಸ್ಟರು ರೂಲು ಹಾಕಿದ ಪುಟಗಳುಳ್ಳ ಬೈಂಡ್ ಮಾಡಿದ ಪುಸ್ತಕವಾಗಿರಬೇಕು, ಮತ್ತು ಅದರಲ್ಲಿ ಈ ಕೆಳಗಿನ ಮುದ್ದೆಗಳು ಅಡಗಿರಬೇಕು.

ವ್ಯಾಪಾರದ ಜಂಜರ್ ನಂಬರು.	ತಾರೀಖು.	ತೆಗೆದುಕೊಂಡ ಕೆಲಸ ಮಾಡದ ಚಿನ್ನದ ತೂಕ ಮತ್ತು ಮದಿಪಿನ ಬೆಲೆ.		ಕೊಟ್ಟಬೆಲೆ ಅಥವಾ ಇತರ ಪ್ರತಿಫಲ.	ಕೆಲಸಮಾಡದ ಚಿನ್ನವು ಯಾರಿಂದ ತೆಗೆದುಕೊಳ್ಳಲ್ಪಟ್ಟಿತೋ ಆ ಮನುಷ್ಯನ ಹೆಸರು, ವಿವರ ಮತ್ತು ಋಜು.	ಮಾರಾಟದ ಮೂಲಕ ಅಥವಾ ಅನ್ಯಥಾ ವಿಲೇವಾರಿ ಮಾಡಿದ ಕೆಲಸಮಾಡದ ಚಿನ್ನದ ತೂಕ ಮತ್ತು ಮದಿಪಿನ ಬೆಲೆ.		ತೆಗದುಕೊಂಡ ಬೆಲೆ ಅಥವಾ ಇತರ ಪ್ರತಿಫಲ.	ಕೆಲಸಮಾಡದ ಚಿನ್ನವು ಯಾರಿಗೆ ವಿಲೇವಾರಿ ಮಾಡಲ್ಪಟ್ಟಿತೊ ಆ ಮನುಷ್ಯನ ಹೆಸರು, ವಿವರ ಮತ್ತು ರುಜು.	ದಿನದ ಕೊನೆಯಲ್ಲಿ ಕೈಯಲ್ಲಿರುವ ಕೆಲಸ ಮಾಡದ ಚಿನ್ನದ ಒಟ್ಟು ಮೊತ್ತದ ತೂಕ ಮತ್ತು ಮದಿಪಿನ ಬೆಲೆ.		ಷರಾಗಳು.
		ತೂಕ ತೊಲೆಗಳು.	ಮದಿಪಿನ ಬೆಲೆ ರೂಪಾಯಿಗಳು.			ತೂಕ ತೊಲೆಗಳು.	ಬೆಲೆ ರೂಪಾಯಿಗಳು.			ತೂಕ ತೊಲೆಗಳು.	ಬೆಲೆ ರೂಪಾಯಿಗಳು.	
1	2	3	4	5	6	7	8	9	10	11	12	13

ಷರಾ—ಈ ರಿಜಿಸ್ಟರನ್ನು ಕೋಲಾರದ ಚಿನ್ನದ ಗಣಿಗಳ ಮೊದಲನೆ ತರಗತಿಯ ಮಾಜಿಸ್ಟ್ರೇಟಿಂದ ಹೊಂದತಕ್ಕದ್ದು, ಮತ್ತು ಅದರಲ್ಲಿ ಷೆಡ್ಯೂಲಿನಂತೆ ಇರುವ ಮುದ್ದೆಗಳು ಮಾತ್ರ ಅಡಗಿರತಕ್ಕದ್ದು.

E ಪಟ್ಟಿ.

1906ನೆ ಇಸವಿಯ 4ನೆಯದಾದ ಮೈಸೂರು ಗಣಿಗಳ ರೆಗ್ಯುಲೇಷನಿನ 10 (2)ನೆ ಪ್ರಕರಣದ ಮತ್ತು B ಪಟ್ಟಿಯ (d) ಷರತ್ತಿನ ಮೇರೆ ಇಡಬೇಕಾಗಿರುವ ರಿಜಿಸ್ಟರಿನ ನಮೂನೆ.

(ಈ ರಿಜಿಸ್ಟರು ರೂಲುಹಾಕಿದ ಪುಟಗಳುಳ್ಳ ಬೈಂಡ್ ಮಾಡಿದ ಪುಸ್ತಕವಾಗಿರಬೇಕು, ಮತ್ತು ಅದರಲ್ಲಿ ಈ ಕೆಳಗಿನ ಮದ್ದುಗಳು ಅಡಗಿರಬೇಕು.)

ವ್ಯಾಪಾರದ ಜಂಬರ ನಂಬರು.	ತಾರೀಖು.	ಕೈಯ್ಯಲ್ಲಿರುವ, ಚಿನ್ನ, ಬೆಳ್ಳಿ, ವಗೈರೆಯ ವಿವರ.					ಈ ತಾರೀಖಿನ ತರುವಾಯ ಬಂದ ಚಿನ್ನ, ಬೆಳ್ಳಿ ವಗೈರೆಯ ವಿವರ.					ಅದರ ತೂಕ ಮತ್ತು ಸುಮಾರು ಬೆಲೆ.	ಯಾವ ಕೆಲಸಕ್ಕೋಸ್ಕರ ಅದು ತೆಗೆದುಕೊಳ್ಳಲ್ಪಟ್ಟಿತು.	ಅದನ್ನು ಕೊಡುವ ಮನುಷ್ಯನ ಹೆಸರು, ಮತ್ತು ವಿವರ, ಅವನ ರುಜು ಸಹ.	ಅಂಗಡಿಯಿಂದ ಕೊಟ್ಟ ಚಿನ್ನ ಅಥವಾ ಬೆಳ್ಳಿ ಅಥವಾ ಅವುಗಳಿಂದ ಮಾಡಿದ ಆಭರಣಗಳು ಅಥವಾ ಇತರ ಪದಾರ್ಥಗಳು.	ತೂಕ ಮತ್ತು ಸುಮಾರು ಬೆಲೆ.	ಯಾರಿಗೆ ಒಪ್ಪಿಸಲ್ಪಟ್ಟಿತೋ ಅಥವಾ ಮಾರಲ್ಪಟ್ಟಿತೋ ಆ ಮನುಷ್ಯ ಮತ್ತು ಅವನ ವಿವರ.	ಅದನ್ನು ತೆಗೆದುಕೊಳ್ಳುವ ಮನುಷ್ಯನ ರುಜು.	ಷರಾಗಳು.
		ಚಿನ್ನ (ಪಾಳಗಳು).	ಚಿನ್ನದ ಆಭರಣಗಳು.	ಚಿನ್ನದ ಇತರ ಪದಾರ್ಥಗಳು.	ಬೆಳ್ಳಿ.	ಬೆಳ್ಳಿಯ ಆಭರಣಗಳು.	ಚಿನ್ನ (ಪಾಳಗಳು).	ಚಿನ್ನದ ಆಭರಣಗಳು.	ಚಿನ್ನದ ಇತರ ಪದಾರ್ಥಗಳು.	ಬೆಳ್ಳಿ.	ಬೆಳ್ಳಿಯ ಆಭರಣಗಳು.								
1	2	3	4	5	6	7	8	9	10	11	12	13	14	15	16	17	18	19	20

ಷರಾ.—ಈ ರಿಜಿಸ್ಟರನ್ನು ಕೋಲಾರದ ಚಿನ್ನದ ಗಣಿಗಳ ಮೊದಲನೆ ತರಗತಿಯ ಮಾಜಿಸ್ಟ್ರೇಟಿಂದ ಹೊಂದತಕ್ಕದ್ದು ಮತ್ತು ಅದರಲ್ಲಿ ಷೆಡ್ಯೂಲಿನಂತೆ ಇರುವ ಮದ್ದುಗಳು ಮಾತ್ರ ಅಡಗಿರತಕ್ಕದ್ದು.

ಅಪ್ಪಣೆ ಮೇರೆಗೆ

ಸಿ. ಎಸ್. ಬಾಲಸುಂದರಂ ಐಯ್ಯರ್,

ಅಫಿಷಿಯೇಟಿಂಗ್ ಸೆಕ್ರೆಟರಿ.

ಮೈಸೂರ ಗೆಜೆಟ್.

ನಂ. 42] ಸರ್ಕಾರದಿಂದ ಪ್ರಕಾಶಿತ ಅದ್ದು. [ನಂ. 31.

ಬೆಂಗಳೂರು, ಗುರುವಾರ, ಆಗೆಸ್ಟ್ ತಾ॥ 1, ಸ್ 1907.

IIIನೆ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವ್ ಇಲಾಖೆ.

ತಾರೀಖು 26ನೆ ಜುಲೈ 1907.

ನಂ. 29—ಎಲ್. ಸಿ., 1907ನೆ ಇಸವಿಯ 1ನೆ ನಂಬರ್ ರೆಗ್ಯುಲೇಷನಿನ ಮೇರೆಗೆ ಏರ್ಪಟ್ಟ ನಿಬಂಧನೆಗಳ 31ನೆ ನಿಬಂಧನೆಯನ್ನನುಸರಿಸಿ ಈ ಕೆಳಗಿನ ಬಿಲ್ಲುಗಳು, ಉದ್ದೇಶಗಳು ಮತ್ತು ಕಾರಣಗಳ ವಿವರಣೆಯು ಸಮೇತ ಸಮುಸ್ತರ ತಿಳಿವಳಿಕೆಯ ಬಗ್ಗೆ ಪ್ರಕಟಿಸಲ್ಪಟ್ಟಿವೆ:—

(1) ಗ್ರಾಮ ಉದ್ಯೋಗಗಳ ಬಿಲ್ಲು.

ಮೈಸೂರು ಸೀಮೆಯಲ್ಲಿ ಗ್ರಾಮ ಉದ್ಯೋಗಗಳಿಗೆ ಸಂಬಂಧಪಡುವ ವ್ಯವಹಾರ ವಿಧಿಯನ್ನು (ಕಾನೂನು) ಒಟ್ಟುಗೂಡಿಸಿ ತಿದ್ದುಪಾಟು ಮಾಡುವ ಬಿಲ್ಲು.

ಪೀಠಿಕೆ.

ಮೈಸೂರು ಸೀಮೆಯಲ್ಲಿ ಗ್ರಾಮ ಉದ್ಯೋಗಗಳಿಗೆ ಸಂಬಂಧಪಡುವ ವ್ಯವಹಾರ ವಿಧಿಯನ್ನು ಒಟ್ಟುಗೂಡಿಸಿ ತಿದ್ದುಪಾಟು ಮಾಡುವುದು ಯುಕ್ತವಾಗಿರುವುದರಿಂದ, ಶ್ರೀಮನ್ ಮಹಾರಾಜರವರು ಈ ಕೆಳಗಿನಂತೆ ವಿಧಿಸಲು ಅಪ್ಪಣೆ ದಯಪಾಲಿಸಿರುತ್ತಾರೆ:—

ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.

1. (1) ಈ ರೆಗ್ಯುಲೇಷನನ್ನು 190 ನೆ ವರ್ಷದ ಮೈಸೂರು ಗ್ರಾಮ ಉದ್ಯೋಗಗಳ ರೆಗ್ಯುಲೇಷನ್ ಎಂಬದಾಗಿ ಕರೆಯಬಹುದು;

(2) ಇದು ಮೈಸೂರು ಸಂಸ್ಥಾನಕ್ಕೆಲ್ಲಾ ವ್ಯಾಪಿಸುತ್ತದೆ, ಮತ್ತು

(3) ಇದು ಸರ್ಕಾರಿ ಗೆಜೆಟ್ಟಿನಲ್ಲಿ ಮೊದಲು ಸಲ ಪ್ರಕಟವಾದ ತೇದಿಯಿಂದ ಒಂದು ತಿಂಗಳು ಕಳೆದ ತರುವಾಯ ಉಪಯೋಗದಲ್ಲಿ ಬರತಕ್ಕದ್ದು.

ಅರ್ಥ ವಿವರಣೆಗಳು.

2. ಈ ರೆಗ್ಯುಲೇಷನಿನಲ್ಲಿ ಪ್ರಮೇಯದಲ್ಲಾಗಲಿ ಅಥವಾ ಪೂರ್ವಾಪರ ಸಂಬಂಧದಲ್ಲಿಯಾಗಲಿ ಏನಾದರೂ ವಿರೋಧವಿದ್ದರೆ ಹೊರತು,—

ಗ್ರಾಮ.

"ಗ್ರಾಮ" ಎಂದರೆ ಗವರ್ನಮೆಂಟಿನವರಿಂದ ಈಗ ಒಂದು ಗ್ರಾಮವಾಗಿ ಅಂಗೀಕರಿಸಲ್ಪಟ್ಟಿರುವ ಅಥವಾ ಒಂದು ಗ್ರಾಮವಾಗಿ ಇರತಕ್ಕದ್ದೆಂದು ಮುಂದೆ ಪ್ರಕಟಿಸಲ್ಪಡುವ ಯಾವುದಾದರೂ ಸ್ಥಳೀಯ ಪ್ರದೇಶವೆಂದು ಅರ್ಥ.

ಗ್ರಾಮ ಉದ್ಯೋಗ.

"ಗ್ರಾಮ ಉದ್ಯೋಗ" ಎಂದರೆ (ಆ ಉದ್ಯೋಗಕ್ಕೆ ಅದರಲ್ಲಿ ಸೇರಿ ಇದ್ದ ಕೆಲಸಗಳು ಈಗ ಮಾಡಲ್ಪಡುತ್ತಿರಲಿ ಅಥವಾ ನಿಂತುಹೋಗಿರಲಿ ಅಥವಾ ಮಾಡಲ್ಪಡಬೇಕೆಂದು ಕೇಳಲ್ಪಡಲಿ ಅಥವಾ ಇಲ್ಲದೆ ಇರಲಿ ಮತ್ತು ಆ ಉದ್ಯೋಗವು ಬೇರೆ ಬೇರೆ ಸ್ಥಳಗಳಲ್ಲಿ ಯಾವ ಹೆಸರಿನಿಂದಾದರೂ ಕರೆಯಲ್ಪಡಲಿ) ಯಾವುದಕ್ಕೆ ಆದಾಯಗಳು ಲಗತ್ತು ಮಾಡಲ್ಪಟ್ಟಿವೆಯೊ ಮತ್ತು ಯಾವುದು—ಕಂದಾಯದ ಆಡಳಿತಕ್ಕೆ ಅಥವಾ

ವಸೂಲಾತಿಗೆ, ಅಥವಾ ನೆಮ್ಮದಿಯನ್ನು ಕಾಪಾಡುವುದಕ್ಕೆ ಅಥವಾ ಎಲ್ಲೆಗಳ ವ್ಯವಸ್ಥೆಗೆ ಅಥವಾ ಗ್ರಾಮಕ್ಕೆ ಸೇರಿದ ಆಡಳಿತದ ಇತರ ವಿಷಯಗಳಿಗೆ ಸಂಬಂಧಪಟ್ಟ ಕೆಲಸಗಳನ್ನು ಮಾಡುವುದಕ್ಕಾಗಿ ನಡೆಸಲ್ಪಡುತ್ತದೆಯೊ ಅಂಥಾ ಪ್ರತಿ ಉದ್ಯೋಗವೆಂದು ಅರ್ಥ.

ನಿಯಮಗಳು. — ಈ ಕೆಳಗಿನಂತೆ ನಿಯಮ ಮಾಡಿ ಇದೆ :—

(1) ಈ ರೆಗ್ಯುಲೇಷನಿನ ಎಲ್ಲಾ ನಿಯಮಗಳ ಅಥವಾ ಅವುಗಳ ಪೈಕಿ ಯಾವುದಾದರೂ ನಿಯಮಗಳ ಕಾರ್ಯದಿಂದ ಯಾವುದಾದರೂ ಗ್ರಾಮ ಉದ್ಯೋಗವನ್ನು ಅಥವಾ ಉದ್ಯೋಗಗಳನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟನೆಯ ಮೂಲಕ ಸರ್ಕಾರದವರು ಬಿಟ್ಟುಬಿಡಬಹುದು; ಮತ್ತು ಹಾಗೆಯೇ ಅಂಥಾ ಪ್ರಕಟನೆಯನ್ನು ತಿದ್ದುಪಾಟು ಮಾಡಬಹುದು ಅಥವಾ ತೆಗೆದುಹಾಕಬಹುದು.

(2) ಯಾವುದಾದರೂ ಉದ್ಯೋಗವು ಗ್ರಾಮ ಉದ್ಯೋಗದ ಅರ್ಥ ವಿವರಣೆಯಲ್ಲಿ ಬರುತ್ತದೆಯೊ ಎಂದು, ಸಂದೇಹ ಬರುವ ಸಂದರ್ಭದಲ್ಲಿ, ನಿರ್ಣಯಿಸುವ ಅಧಿಕಾರವನ್ನು ಸರ್ಕಾರದವರು ಉಂಟಾಗಿರತಕ್ಕದ್ದು.

ಗ್ರಾಮ ಉದ್ಯೋಗಸ್ಥ. "ಗ್ರಾಮ ಉದ್ಯೋಗಸ್ಥನು" ಎಂದರೆ ಗ್ರಾಮ ಉದ್ಯೋಗದಲ್ಲಿರುವ ಅಥವಾ ಗ್ರಾಮ ಉದ್ಯೋಗಸ್ಥನ ಕೆಲಸಗಳನ್ನು ಮಾಡಲು ನಿಯಮಿಸಲ್ಪಟ್ಟಿರುವ ಅಥವಾ ಮಾಡುತ್ತಿರುವ ಉದ್ಯೋಗಸ್ಥನೆಂದು ಅರ್ಥ.

ಆದಾಯಗಳು. "ಆದಾಯಗಳು" ಎಂದರೆ ಯಾವುದಾದರೂ ಗ್ರಾಮ ಉದ್ಯೋಗದ ಬಗ್ಗೆ ಸರ್ಕಾರದಿಂದ ಕೊಡಲ್ಪಟ್ಟಿರುವ ಅಥವಾ ಸಲ್ಲುತ್ತಿರುವ ಅಥವಾ ಸೇರಿಸಲ್ಪಟ್ಟ—

(i) ಭೂಮಿ;

(ii) ಭೂಮಿಯ ಬಗ್ಗೆ ಕೊಡತಕ್ಕ ಕಂದಾಯದಲ್ಲಿ ನೇಮಕವಾದ ಭಾಗ;

(iii) ನಗದಾಗಿ ಅಥವಾ ವ್ಯವಸಾಯದ ಉತ್ಪತ್ತಿಯಿಂದ ಸಿಕ್ಕುವ ರುಸುಂ;

(iv) ನಗದಿ ಸಂಬಳ ಮತ್ತು ಇತರ ಎಲ್ಲಾತರದ ವೇತನ;

"ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರು." "ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರು" ಎಂದರೆ ಡಿಸ್ಟ್ರಿಕ್ಟಿನ ರೆವಿನ್ಯೂ ಆಡಳಿತದ ಅಧಿಕಾರದಲ್ಲಿರುವ ಮುಖ್ಯವಾದ ಸ್ಥಳೀಯ ಅಧಿಕಾರಿಯೆಂದು ಅರ್ಥ.

"ಡೆಪ್ಯುಟಿ ಕಮಿಷನರು" "ಡೆಪ್ಯುಟಿ ಕಮಿಷನರು" ಎಂಬ ಮಾತುಗಳಲ್ಲಿ ಡೆಪ್ಯುಟಿ ಕಮಿಷನರ ಅಧಿಕಾರಗಳನ್ನು ನಡೆಸಲು ತತಾ ಲದಲ್ಲಿ ಅಧಿಕಾರ ಹೊಂದಿ ಒಂದು ಡಿವಿಜನಿನ ಅಧಿಕಾರದಲ್ಲಿರುವ ಅಸಿಸ್ಟೆಂಟು ಕಮಿಷನರು ಸೇರಿ ಇರುತ್ತಾರೆ.

ಗ್ರಾಮ ಉದ್ಯೋಗಗಳ ಆದಾಯಗಳು ಪರಾಧೀನ ಮಾಡತಕ್ಕವಲ್ಲ ಮತ್ತು ಜಪ್ತಿಗೆ ಗುರಿಯಾಗತಕ್ಕವಲ್ಲ.

3. ಗ್ರಾಮ ಉದ್ಯೋಗಗಳ ಆದಾಯಗಳು ಅಂಥಾ ಉದ್ಯೋಗಗಳು ವಂಶಪಾರಂಪರ್ಯದ ಹಕ್ಕಿನವುಗಳಾಗಿದ್ದರೂ ಆಗಿಲ್ಲದಿದ್ದರೂ, ಯಾವ ರೀತಿಯಲ್ಲೂ ವರ್ಗ ಮಾಡಲ್ಪಡುವುದಕ್ಕೂ ಸಾಲ ಹೊರಿಸಲ್ಪಡುವುದಕ್ಕೂ ಗುರಿಯಾಗತಕ್ಕವಲ್ಲ ಮತ್ತು ಅಂಥಾ ಆದಾಯಗಳನ್ನು ಅಥವಾ ಅವುಗಳಲ್ಲಿ ಯಾವ ಭಾಗವನ್ನಾದರೂ ಜಪ್ತಿ ಮಾಡಲು ಅಥವಾ ಮಾರಲು ಯಾವ ಕೋರ್ಟಿಗೂ ನ್ಯಾಯವಾಗಿರತಕ್ಕದ್ದಲ್ಲ.

ಗ್ರಾಮಗಳನ್ನು ಗುಂಪುಕೂಡಿಸಬಹುದು ಒಟ್ಟಾಗಿ ಸೇರಿಸಬಹುದು ಅಥವಾ ವಿಭಾಗಿಸಬಹುದು.

4. (1) 21ನೆ ಪ್ರಕರಣದ ಮೇರೆ ಇದಕ್ಕೋಸ್ಕರ ಮಾಡಲ್ಪಟ್ಟ ನಿಬಂಧನೆಗಳಿಗನುಸಾರವಾಗಿ ಸರ್ಕಾರದವರು ಯಾವುದಾದರೂ ಎರಡು ಅಥವಾ ಹೆಚ್ಚು ಗ್ರಾಮಗಳನ್ನು ಅಥವಾ ಅವುಗಳ ಭಾಗಗಳನ್ನು ಒಂದು ಹೊಸ ಗ್ರಾಮವಾಗಿ ಏರ್ಪಡಿಸುವುದಕ್ಕೋಸ್ಕರ ಗುಂಪು ಕೂಡಿಸಬಹುದು ಅಥವಾ ಒಟ್ಟಾಗಿ ಸೇರಿಸಬಹುದು ಅಥವಾ ಯಾವುದಾದರೂ ಗ್ರಾಮವನ್ನು ಎರಡು ಅಥವಾ ಹೆಚ್ಚು ಭಾಗಗಳಾಗಿ ವಿಭಾಗಿಸಬಹುದು; ಮತ್ತು ಅನಂತರ ಮೇಲೆ ಹೇಳಿದ ಮೇರೆಗೆ ಗುಂಪು ಕೂಡಿಸಿದ, ಒಟ್ಟಾಗಿ ಸೇರಿಸಿದ ಅಥವಾ ವಿಭಾಗಿಸಿದ ಗ್ರಾಮಗಳಲ್ಲಿನ, ಗ್ರಾಮಗಳ ಭಾಗಗಳಲ್ಲಿನ ಅಥವಾ ಗ್ರಾಮದಲ್ಲಿನ ಎಲ್ಲಾ ಗ್ರಾಮ ಉದ್ಯೋಗಗಳು ಇರೋಣ ನಿಂತುಹೋಗತಕ್ಕದ್ದು, ಮತ್ತು ಹೊಸ ಗ್ರಾಮದ ಅಥವಾ ಗ್ರಾಮಗಳ ಬಗ್ಗೆ ಹೊಸ ಉದ್ಯೋಗಗಳನ್ನು ಉಂಟುಮಾಡತಕ್ಕದ್ದು.

(2) ಅಂಥಾ ಹೊಸ ಉದ್ಯೋಗಗಳನ್ನು ಭರ್ತಿ ಮಾಡುವ ಬಗ್ಗೆ ಜನಗಳನ್ನು ಆರಿಸುವುದರಲ್ಲಿ ನಿಂತುಹೋದ ಉದ್ಯೋಗಗಳನ್ನು ಕಡೆಯಲ್ಲಿ ಮಾಡಿದವರ ಕುಟುಂಬಗಳ ಪೈಕಿ, ಹೆಚ್ಚು ಯೋಗ್ಯತೆ ಹೊಂದಿದವರೆಂದು ಡೆಪ್ಯುಟಿ ಕಮಿಷನರು ಯೋಚಿಸಬಹುದಾದ ಮನುಷ್ಯರನ್ನು ಆತನು ಆರಿಸತಕ್ಕದ್ದು.

ಗ್ರಾಮ ಉದ್ಯೋಗಗಳನ್ನು ಕಡಮೆಮಾಡೋಣ.

(3) ಒಂದು ಗ್ರಾಮಕ್ಕೆ ಸೇರಿದ ಗ್ರಾಮ ಉದ್ಯೋಗಗಳ ಸಂಖ್ಯೆಯನ್ನು ಕಡಮೆ ಮಾಡತಕ್ಕದ್ದೆಂದು ಕೂಡ ಸರ್ಕಾರದವರು ಆಜ್ಞಾಪಿಸಬಹುದು, ಮತ್ತು ಆಮೇಲೆ ಡೆಪ್ಯುಟಿ ಕಮಿಷನರು ಅವಶ್ಯವಿಲ್ಲದ ಉದ್ಯೋಗಸ್ಥರನ್ನು ಕೆಲಸದಿಂದ ತೆಗೆದುಹಾಕತಕ್ಕದ್ದು ಮತ್ತು ಉಳಿದ ಉದ್ಯೋಗಗಳ ಕೆಲಸಗಳನ್ನು ನಿರ್ವಹಿಸುವುದಕ್ಕೆ ಹೆಚ್ಚು ಯೋಗ್ಯರೆಂದು ತಾನು ಯೋಚಿಸಬಹುದಾದ ಮನುಷ್ಯರನ್ನು ಇಟ್ಟುಕೊಳ್ಳತಕ್ಕದ್ದು.

ಗ್ರಾಮ ಉದ್ಯೋಗಸ್ಥರನ್ನು ಶಿಕ್ಷಿಸಲು ಅಧಿಕಾರ.

5. (1) ಒಂದು ಪರಾಧೀನಮಾಡಲ್ಪಡದ ಅಥವಾ ಪರಾಧೀನಮಾಡಲ್ಪಟ್ಟ ಗ್ರಾಮದಲ್ಲಿ ಕೆಟ್ಟನಡತೆಗಾಗಲಿ ಅಥವಾ ಕೆಲಸವನ್ನು ಅಸಡ್ಡೆ ಮಾಡಿದುದಕ್ಕಾಗಲಿ ಅಥವಾ ಅಯೋಗ್ಯತೆಗಾಗಲಿ, ಅಥವಾ ಗ್ರಾಮದಲ್ಲಿ ವಾಸಮಾಡದೆ ಇದ್ದುದಕ್ಕಾಗಲಿ, ಅಥವಾ ಮತ್ತೆ ಯಾವುದಾದರೂ ಸಾಕಾದ ಕಾರಣಕ್ಕೋಸ್ಕರ, ಡೆಪ್ಯುಟಿ ಕಮಿಷನರು ಸ್ವತಃ ಆಗಲಿ ಅಥವಾ ಫಿರ್ಯಾದಿನ ಮೇಲೆ ಮತ್ತು ವಿಚಾರಣೆಯ ತರುವಾಯ, ಒಂದು ಗ್ರಾಮ ಉದ್ಯೋಗದಲ್ಲಿ ಇರುವ ಯಾವನಿಗಾದರೂ ಅಪರಾಧ ಹಾಕಬಹುದು, ಅವನನ್ನು ಕೆಲಸದಿಂದ ಕೊಂಚಕಾಲ ನಿಲ್ಲಿಸಬಹುದು, ತಳ್ಳಿಬಿಡಬಹುದು, ಅಥವಾ ತೆಗೆದುಹಾಕಬಹುದು.

(2) ಅಮಲ್ದಾರನು ಅಥವಾ ಡೆಪ್ಯುಟಿ ಅಮಲ್ದಾರನು, ಸ್ವತಃ ಅಥವಾ ಫಿರ್ಯಾದಿನಮೇಲೆ ಮತ್ತು ವಿಚಾರಣೆಯ ಅನಂತರ (1)ನೆ ಒಳ ಪ್ರಕರಣದಲ್ಲಿ ಕಂಡ ಕಾರಣಗಳ ಪೈಕಿ ಯಾವುದಕ್ಕೋಸ್ಕರವಾದರೂ ಒಂದು ಪರಾಧೀನ ಮಾಡಲ್ಪಡದ ಗ್ರಾಮದಲ್ಲಿನ ಗ್ರಾಮ ಉದ್ಯೋಗದಲ್ಲಿರುವವನಿಗೆ ಸರ್ಕಾರದವರು ಸಾಮಾನ್ಯವಾದ ಅಥವಾ ವಿಶೇಷವಾದ ಅಪ್ಪಣೆಯಿಂದ ವಿಧಿಸಬಹುದಾದಷ್ಟು ಅಪರಾಧವನ್ನು ಹಾಕಬಹುದು.

(3) ಒಂದು ಪರಾಧೀನ ಮಾಡಲ್ಪಟ್ಟ ಗ್ರಾಮದ ಒಡೆಯನು ಸ್ವತಃ ಆಗಲಿ ಅಥವಾ ಫಿರ್ಯಾದಿನಮೇಲೆ ಮತ್ತು ವಿಚಾರಣೆಯ ಅನಂತರ (1)ನೆ ಒಳ ಪ್ರಕರಣದಲ್ಲಿ ಕಂಡ ಕಾರಣಗಳಲ್ಲಿ ಯಾವುದಕ್ಕಾದರೂ, ಪಟೇಲ, ಶಾನುಭೋಗ ಮತ್ತು ಗ್ರಾಮದ ಕ್ವಾವಲುಗಾರ ವಿನಾ ತನ್ನ ಗ್ರಾಮದಲ್ಲಿ ಗ್ರಾಮ ಉದ್ಯೋಗದಲ್ಲಿ ಇರುವವನು ಯಾವನನ್ನಾದರೂ ಕೆಲಸದಿಂದ ಕೊಂಚಕಾಲ ನಿಲ್ಲಿಸಬಹುದು, ತಳ್ಳಿಬಿಡಬಹುದು ಅಥವಾ ತೆಗೆದುಹಾಕಬಹುದು.

(4) ಈ ಪ್ರಕರಣದ ಹಿಂದಿನ ಒಳ ಪ್ರಕರಣಗಳಲ್ಲಿ ಯಾವುದರ ಪ್ರಕಾರವಾದರೂ ಒಬ್ಬ ಗ್ರಾಮ ಉದ್ಯೋಗಸ್ಥನಿಗೆ ವಿರೋಧವಾಗಿ ನಡವಳಿಕೆಗಳನ್ನು ನಡೆಸುವ ಅಧಿಕಾರಿಯಾಗಲಿ ಅಥವಾ ಮನುಷ್ಯನಾಗಲಿ ಹಾಗೆ ಮಾಡಲು ತನಗಿರುವ ಕಾರಣಗಳನ್ನು ಬರಹದಲ್ಲಿ ಬರೆದಿಟ್ಟು ಅದರ ಒಂದು ಪ್ರತಿಯನ್ನು ಅಂಥಾ ಗ್ರಾಮ ಉದ್ಯೋಗಸ್ಥನಿಗೆ ಕೊಡತಕ್ಕದ್ದು.

ಪರಾಧೀನ ಮಾಡಲ್ಪಡದ ಗ್ರಾಮದಲ್ಲಿ ಪಟೇಲ, ಶಾನುಭೋಗ ಮುಂತಾದವರ ಉದ್ಯೋಗಗಳಿಗೆ ನೇಮ್ಯಕಗಳನ್ನು ಮಾಡುವುದರಲ್ಲಿ ಅನುಸರಿಸಬೇಕಾದ ನಿಬಂಧನೆಗಳು.

6. ಪರಾಧೀನ ಮಾಡಲ್ಪಡದ ಒಂದು ಗ್ರಾಮದಲ್ಲಿ ಪಟೇಲನ, ಶಾನುಭೋಗನ, ನೀರಗಂಟಿಯ, ತೋಟಿಯ ಅಥವಾ ತಳವಾರನ ಉದ್ಯೋಗವು ಖಿಲಿದಾದಾಗ, ಡೆಪ್ಯುಟಿ ಕಮಿಷನರು ಬರಿದಾದ ಸ್ಥಳವನ್ನು ಈ ಕೆಳಗಿನ ಒಳ ಪ್ರಕರಣಗಳ ನಿಯಮಗಳ ಮೇರೆ ಭರ್ತಿ ಮಾಡತಕ್ಕದ್ದು.

ಎಲ್ಲಾ ಸಂದರ್ಭಗಳಲ್ಲಿಯೂ ಅಗತ್ಯವಾಗಿರುವ ಸಾಮಾನ್ಯ ಯೋಗ್ಯತೆಗಳು.

(1) ಈ ಕೆಳಗೆ ಕಾಣಿಸಿದಂಥಾ ಯಾವನೊಬ್ಬನೂ ಕೆಲಸ ಹೊಂದಲು ಅರ್ಹನಾಗುವುದಿಲ್ಲ:—

(a) ಗಂಡಸಲ್ಲದವನು;

(b) ಪ್ರಾಯಪ್ರಬುದ್ಧನಲ್ಲದ ಮನುಷ್ಯನು;

(c) ಉದ್ಯೋಗದ ಕೆಲಸಗಳನ್ನು ನಿರ್ವಹಿಸುವುದಕ್ಕೆ ಸಾಕಾದಷ್ಟು ಶಾರೀರಕ ತ್ರಾಣವೂ ಬುದ್ಧಿಚಾತುರ್ಯವೂ ಇಲ್ಲದವನು;

(d) 21ನೆ ಪ್ರಕರಣಕ್ಕೆ ಅನುಗುಣವಾಗಿ ಮಾಡಲ್ಪಟ್ಟ ನಿಬಂಧನೆಗಳಿಂದ ಆಯಾ ಉದ್ಯೋಗಕ್ಕೆ ವಿಧಿಸಲ್ಪಟ್ಟ ವಿದ್ಯಾಸಂಬಂಧವಾದ ಪರೀಕ್ಷೆ ಏನಾದರೂ ಇದ್ದರೆ ಅದರಲ್ಲಿ ತೇರ್ಗಡೆಯಾಗದವನು;

(e) ಒಂದು ಕ್ರಿಮಿನಲ್ ಕೋರ್ಟಿನಿಂದ ತನ್ನ ಮೇಲೆ ತಪ್ಪು ಸ್ಥಾಪಿಸಲ್ಪಟ್ಟವನಾಗಿ ಅಂಥಾ ತಪ್ಪಿನ ದೆಸೆಯಿಂದ ಕೆಲಸವನ್ನು ಇಟ್ಟುಕೊಳ್ಳುವುದಕ್ಕೆ ಡೆಪ್ಯುಟಿ ಕಮಿಷನರ ಅಭಿಪ್ರಾಯದ ಮೇರೆಗೆ ಅಯೋಗ್ಯನಾಗಿರುವ ಮನುಷ್ಯನು;

(f) ಡೆಪ್ಯುಟಿ ಕಮಿಷನರ ಅಭಿಪ್ರಾಯದ ಮೇರೆಗೆ, ಕೆಲಸವನ್ನು ಇಟ್ಟುಕೊಳ್ಳಲು, ಕೆಟ್ಟನಡತೆಯಿಂದ ಅಥವಾ ಕೆಟ್ಟ ಪೂರ್ವಚರಿತದಿಂದ ಅಯೋಗ್ಯನಾಗಿರುವ ಮನುಷ್ಯನು.

ಉತ್ತರಾಧಿಕಾರ ಬರುವುದಕ್ಕೆ ನಿಬಂಧನೆ.

(2) ಉತ್ತರಾಧಿಕಾರವು ಹಿಂದೂ ಧರ್ಮ ಶಾಸ್ತ್ರದ ಸಾಮಾನ್ಯ ನಿಯಮಗಳಿಂದ ಕ್ರಮಪಡಿಸಲ್ಪಡತಕ್ಕದ್ದು; ಆದರೆ ಅದು ಒಬ್ಬನೇ ಬಾಧ್ಯಸ್ಥನಿಗೆ ಅಥವಾ ಉತ್ತರಾಧಿಕಾರಿಗೆ ಹೋಗತಕ್ಕದ್ದು ಮತ್ತು ಮೇಲ್ಕಂಡ ಧರ್ಮ ಶಾಸ್ತ್ರದ ಸಾಮಾನ್ಯ ನಿಯಮಗಳ ಮೇರೆ ಕಡೆಯಲ್ಲಿ ಆ ಉದ್ಯೋಗವನ್ನು ಇಟ್ಟುಕೊಂಡಿದ್ದವನಿಗೆ ಉತ್ತರಾಧಿಕಾರಿಯಾಗಲು ಹಕ್ಕುಳ್ಳ ಒಬ್ಬನಿಗಿಂತ ಹೆಚ್ಚಾದ ಮನುಷ್ಯರು ಇರುವ ಸಂದರ್ಭಗಳಲ್ಲಿ, ಈ ಪ್ರಕರಣದ ನಿಯಮಗಳಿಗೆ ಒಳಪಟ್ಟು, ಅಂಥಾ ಮನುಷ್ಯರ ಜ್ಯೇಷ್ಠಶಾಖೆಯಲ್ಲಿ ಜ್ಯೇಷ್ಠನಾದವನು ಆರಿಸಲ್ಪಡತಕ್ಕದ್ದು.

ಕೆಲವು ಸಂದರ್ಭಗಳಲ್ಲಿ ಸಮೀಪದ ಬಾಧ್ಯಸ್ಥನಲ್ಲದವನನ್ನು ನೇಮಕ ಮಾಡಬಹುದು.

(3) ಸಮೀಪದ ಬಾಧ್ಯಸ್ಥನು (1)ನೆ ಒಳ ಪ್ರಕರಣದ ಮೇರೆ ಅರ್ಹನಲ್ಲದ ಪಕ್ಷದಲ್ಲಿ ಹಾಗೆ ಅರ್ಹನಾಗಿರುವ (ಜ್ಯೇಷ್ಠಶಾಖೆಯಲ್ಲಿ ವಯೋಜ್ಯೇಷ್ಠನು ಕ್ರಮದಲ್ಲಿ) ಪರಂಪರೆಯಲ್ಲಿ ಅನಂತರ ಬರುವ ಮನುಷ್ಯನನ್ನು ಡೆಪ್ಯುಟಿ ಕಮಿಷನರು ನೇಮಕ ಮಾಡತಕ್ಕದ್ದು ಮತ್ತು ವಂಶಾವಳಿಯಲ್ಲಿ ಅಂಥಾ ಯಾವ ಮನುಷ್ಯನೂ ಇಲ್ಲದ ಸಂದರ್ಭದಲ್ಲಿ (1)ನೆ ಒಳ ಪ್ರಕರಣದ ಮೇರೆ ಕ್ರಮವಾಗಿ ಅರ್ಹನಾದ ಯಾವ ಮನುಷ್ಯನನ್ನಾದರೂ ನೇಮಿಸಬಹುದು.

ಕೆಲವು ಸಂದರ್ಭಗಳಲ್ಲಿ ಬಾಧ್ಯಸ್ಥನ ತಾತ್ಕಾಲಿಕ ಅಯೋಗ್ಯತೆ.

(4) ಕಡೆಯುಸಲದ ಉದ್ಯೋಗಸ್ಥನನ್ನು ಕೆಲಸದಿಂದ ತಳ್ಳಿಬಿಡೋಣದರಿಂದ ಅಥವಾ ಕೊಂಚಕಾಲ ನಿಲ್ಲಿಸೋಣದರಿಂದ ಉದ್ಯೋಗವು ಬರಿದಾದಾಗ ಅಂಥಾ ಮನುಷ್ಯನು ಮೃತಪಡುವ ವರೆಗೆ ಅಥವಾ ಪುನಃ ಕೆಲಸದಮೇಲೆ ಬರುವ ವರೆಗೆ, ಸದರಿ ಉದ್ಯೋಗದ ಕೆಲಸಗಳನ್ನು (1) ನೆ ಒಳ ಪ್ರಕರಣದ ಮೇರೆ ತಕ್ಕ ಯೋಗ್ಯತೆಗಳಿರುವ ಮತ್ತು ಕೆಲಸದಿಂದ ತಳ್ಳಿಬಿಡಲ್ಪಟ್ಟ ಅಥವಾ ನಿಲ್ಲಿಸಲ್ಪಟ್ಟ ಉದ್ಯೋಗಸ್ಥನ ಕುಟುಂಬದ ಅವಿಭಕ್ತ ಬಂಧುವಲ್ಲದ ಒಬ್ಬ ಮನುಷ್ಯನು ನಿರ್ವಹಿಸತಕ್ಕದ್ದೆಂದು ಡೆಪ್ಯುಟಿ ಕಮಿಷನರು ಆಜ್ಞಾಪಿಸಬಹುದು; ಆದರೆ ಕೆಲಸದಿಂದ ತಳ್ಳಿಬಿಡಲ್ಪಟ್ಟ ಉದ್ಯೋಗಸ್ಥನು ಸತ್ತರೆ ಅಥವಾ ಕೆಲಸದಿಂದ ನಿಲ್ಲಿಸಲ್ಪಟ್ಟ ಮನುಷ್ಯನು ಹಾಗೆ ನಿಲ್ಲಿಸಲ್ಪಟ್ಟಿರುವಾಗ ಸತ್ತರೆ ಅಂಥಾ ಮರಣದಿಂದ ಬರಿದಾದ ಸ್ಥಾನವನ್ನು (2) ನೆ ಮತ್ತು (3) ನೆ ಒಳ ಪ್ರಕರಣಗಳ ನಿಯಮಗಳ ಮೇರೆ ಭರ್ತಿ ಮಾಡತಕ್ಕದ್ದು.

ಬಾಧ್ಯಸ್ಥನು ಅಪ್ರಾಯಸ್ಥನಾಗಿರುವ ಸಂದರ್ಭದಲ್ಲಿ ಅನುಸರಿಸತಕ್ಕ ಕ್ರಮ.

(5) ಒಂದು ಉದ್ಯೋಗಕ್ಕೆ ಉತ್ತರಾಧಿಕಾರಿಯಾಗಲು ಅನ್ಯಥಾ ಹಕ್ಕುಳ್ಳವನಾಗಿರುವ ಒಬ್ಬ ಮನುಷ್ಯನು ಅಪ್ರಾಯಸ್ಥನಾಗಿರುವ ಸಂದರ್ಭದಲ್ಲಿ ಡೆಪ್ಯುಟಿ ಕಮಿಷನರು ಅಪ್ರಾಯಸ್ಥನನ್ನು ಹಿಂದಿನ ಉದ್ಯೋಗಸ್ಥನ ಬಾಧ್ಯಸ್ಥನೆಂದು ರಿಜಿಸ್ಟರ್ ಮಾಡತಕ್ಕದ್ದು ಮತ್ತು ಬಾಧ್ಯಸ್ಥನೆಂದು ರಿಜಿಸ್ಟರ್ ಮಾಡಲ್ಪಟ್ಟ ಮನುಷ್ಯನು ಪ್ರಾಯಸ್ಥನಾಗಿ ಅಥವಾ ಆ ಅನಂತರ ಮೂರು ವರ್ಷಗಳೊಳಗೆ ಉದ್ಯೋಗದ ಕೆಲಸಗಳನ್ನು ತಾನೇ ನಿರ್ವಹಿಸಲು (1) ನೆ ಒಳ ಪ್ರಕರಣಕ್ಕೆ ಅನುಗುಣವಾಗಿ ಯೋಗ್ಯನಾಗುವ ವರೆಗೆ ಆ ಉದ್ಯೋಗದ ಕೆಲಸಗಳನ್ನು ನಿರ್ವಹಿಸುವುದಕ್ಕೆ (1)ನೆ ಒಳ ಪ್ರಕರಣದ ಮೇರೆ ಯೋಗ್ಯತೆಯುನ್ನು ಹೊಂದಿದ ಇತರ ಯಾವನೊಬ್ಬ ಮನುಷ್ಯನನ್ನು ನೇಮಕ ಮಾಡತಕ್ಕದ್ದು ಮತ್ತು ಸದರಿ ಪ್ರಾಯಸ್ಥನು ಯೋಗ್ಯನಾದ ಮೇಲೆ ಅವನನ್ನು ನೇಮಿಸತಕ್ಕದ್ದು. ಈ ಒಳ ಪ್ರಕರಣದ ಮೇರೆ ಬಾಧ್ಯಸ್ಥನೆಂಬುದಾಗಿ ರಿಜಿಸ್ಟರ್ ಮಾಡಲ್ಪಟ್ಟ ಮನುಷ್ಯನು ಮೃತಪಟ್ಟರೆ ಅಥವಾ ಪ್ರಾಯಸ್ಥನಾದ ಮೇಲೆ ಮೂರು ವರ್ಷಗಳ ವರೆಗೂ (1)ನೆ ಒಳ ಪ್ರಕರಣದ ಮೇರೆಗೆ ಯೋಗ್ಯನಾಗದೇಲೆ ಇದ್ದರೆ ಡೆಪ್ಯುಟಿ ಕಮಿಷನರು (2)ನೆ ಮತ್ತು (3)ನೆ ಒಳ ಪ್ರಕರಣಗಳಲ್ಲಿ ವಿಧಿಸಿರುವ ಮೇರೆಗೆ ಬರಿದಾದ ಸ್ಥಾನವನ್ನು ಭರ್ತಿ ಮಾಡತಕ್ಕದ್ದು.

ಕೆಲಸಕ್ಕೆ ರಾಜಿನಾಮೆ ಕೊಟ್ಟದ್ದರಿಂದ, ಕೆಲಸದಿಂದ ತಳ್ಳಿಬಿಡೋಣದರಿಂದ, ತೆಗೆದು ಹಾಕೋಣದರಿಂದ ಅಥವಾ ಕೊಂಚಕಾಲ ನಿಲ್ಲಿಸೋಣದರಿಂದ ಬರಿದಾದ ಸ್ಥಾನವನ್ನು ಭರ್ತಿಮಾಡುವ ಕ್ರಮ.

(6) ಒಬ್ಬ ಉದ್ಯೋಗಸ್ಥನು ರಾಜಿನಾಮೆ ಕೊಟ್ಟುದರಿಂದ, ಅಥವಾ ಅವನನ್ನು ಕೆಲಸದಿಂದ ತಳ್ಳಿಬಿಟ್ಟುದರಿಂದ, ತೆಗೆದು ಹಾಕಿದುದರಿಂದ, ಅಥವಾ ಕೊಂಚಕಾಲ ನಿಲ್ಲಿಸಿದುದರಿಂದ ಒಂದು ಉದ್ಯೋಗವು ಬರಿದಾದರೆ ಮತ್ತು (4)ನೆ ಒಳ ಪ್ರಕರಣದಲ್ಲಿ ಸೂಚಿಸಿದ ಅನುಜ್ಞೆಯನ್ನು ಡೆಪ್ಯುಟಿ ಕಮಿಷನರು ಕೊಡದೆ ಇದ್ದರೆ, ಆ ಉದ್ಯೋಗವು ಸದರಿ ಉದ್ಯೋಗಸ್ಥನ ಮರಣದಿಂದ ಬರಿದಾಗಿದ್ದರೆ ಹೇಗೋಹಾಗೆಯೇ ಈ ಪ್ರಕರಣದ ನಿಬಂಧನೆಗಳಿಗನುಸಾರವಾಗಿ ಆತನು ಬರಿದಾದ ಸ್ಥಾನವನ್ನು ಭರ್ತಿ ಮಾಡತಕ್ಕದ್ದು; ಆದರೆ ಕೆಲಸದಿಂದ ಕೊಂಚಕಾಲ ನಿಲ್ಲಿಸಲ್ಪಟ್ಟ ಉದ್ಯೋಗಸ್ಥನನ್ನು ನಿಲ್ಲಿಸಿದ್ದ ಕಾಲವು ಮುಗಿದ ತರುವಾಯ, ಅಥವಾ ಕೆಲಸದಿಂದ ತಳ್ಳಿಹಾಕಲ್ಪಟ್ಟ ತೆಗೆದುಹಾಕಲ್ಪಟ್ಟ ಅಥವಾ ನಿಲ್ಲಿಸಲ್ಪಟ್ಟ ಉದ್ಯೋಗಸ್ಥನಿಗೆ ಯಾವುದಾದರೂ ಕಾರಣದ ಬಗ್ಗೆ ಆತನು ಯಾವ ಉದ್ಯೋಗದಿಂದ ತಳ್ಳಿಹಾಕಲ್ಪಟ್ಟಿದ್ದನೋ, ತೆಗೆದುಹಾಕಲ್ಪಟ್ಟಿದ್ದನೊ ಅಥವಾ ನಿಲ್ಲಿಸಲ್ಪಟ್ಟಿದ್ದನೊ ಆ ಉದ್ಯೋಗವನ್ನು ಪುನಃ ಪಡೆದುಕೊಳ್ಳಲು ಅಪ್ಪಣೆ ಕೊಟ್ಟಲ್ಲಿ ಸದರಿ ನಿಲ್ಲಿಸಿದುದರ ತಳ್ಳಿಹಾಕಿದುದರ ಅಥವಾ ತೆಗೆದುಹಾಕಿದುದರ ದೆಸೆಯಿಂದ ಬರಿದಾದ ಉದ್ಯೋಗಕ್ಕೆ ನೇಮಕವಾಗಿದ್ದ ಮನುಷ್ಯನು ಉದ್ಯೋಗದಲ್ಲಿ ಇರುವುದು ನಿಂತುಹೋಗತಕ್ಕದ್ದು.

ಪರಾಧೀನಮಾಡಲ್ಪಟ್ಟ ಗ್ರಾಮಗಳಲ್ಲಿ ಪಟೇಲ ಶಾನಭೋಗ ಮುಂತಾದವರ ಉದ್ಯೋಗಗಳಿಗೆ ನೇಮಕಮಾಡುವಲ್ಲಿ ಅನುಸರಿಸತಕ್ಕ ನಿಬಂಧನೆಗಳು.

7. ಪರಾಧೀನ ಮಾಡಲ್ಪಟ್ಟ ಒಂದು ಗ್ರಾಮದ ಪಟೇಲನ, ಶಾನುಭೋಗನ, ನೀರಗಂಟಿಯ, ತೋಟಿಯ ತಳವಾರನ ಉದ್ಯೋಗವು ಬರಿದಾದಾಗ ಅಂಥಾ ಗ್ರಾಮದ ಒಡೆಯನು ಬರಿದಾದ ಸ್ಥಾನವನ್ನು ಈ ಕೆಳಗಿನ ಒಳ ಪ್ರಕರಣಗಳ ನಿಯಮಗಳ ಮೇರೆ ಭರ್ತಿ ಮಾಡತಕ್ಕದ್ದು :

ಎಲ್ಲಾ ಸಂದರ್ಭಗಳಲ್ಲಿಯೂ ಅಗತ್ಯವಾಗಿರುವ ಸಾಮಾನ್ಯ ಯೋಗ್ಯತೆಗಳು.

(1) ಈ ಕೆಳಗೆ ಕಾಣಿಸಿದಂಥಾ ಯಾವನೊಬ್ಬನೂ ಕೆಲಸ ಹೊಂದಲು ಅರ್ಹನಾಗುವುದಿಲ್ಲ—

(*a*) ಗಂಡಸಲ್ಲದವನು ;

(*b*) ಪ್ರಾಯಸ್ಥಬುದ್ಧನಲ್ಲದ ಮನುಷ್ಯನು ;

(*c*) ಉದ್ಯೋಗದ ಕೆಲಸಗಳನ್ನು ನಿರ್ವಹಿಸುವುದಕ್ಕೆ ಸಾಕಾದಷ್ಟು ಶಾರೀರಕ ತ್ರಾಣವೂ ಬುದ್ಧಿಚಾತುರ್ಯವೂ ಇಲ್ಲದವನು ;

ಉತ್ತರಾಧಿಕಾರ ಬರುವುದಕ್ಕೆ ನಿಬಂಧನೆ.

(2) ಉತ್ತರಾಧಿಕಾರವು ಹಿಂದೂ ಧರ್ಮಶಾಸ್ತ್ರದ ಸಾಮಾನ್ಯ ನಿಯಮಗಳಿಂದ ಕ್ರಮಪಡಿಸಲ್ಪಡತಕ್ಕದ್ದು; ಆದರೆ ಅದು ಒಬ್ಬನೇ ಬಾಧ್ಯಸ್ಥನಿಗೆ ಹೋಗತಕ್ಕದ್ದು ಮತ್ತು ಮೇಲ್ಕಂಡ ಧರ್ಮಶಾಸ್ತ್ರದ ಸಾಮಾನ್ಯ ನಿಯಮಗಳ ಮೇರೆ ಕಡೆಯಲ್ಲಿ ಆ ಉದ್ಯೋಗವನ್ನು ಇಟ್ಟುಕೊಂಡಿದ್ದವನಿಗೆ ಉತ್ತರಾಧಿಕಾರಿಯಾಗಲು ಹಕ್ಕುಳ್ಳ ಒಬ್ಬನಿಗಿಂತ ಹೆಚ್ಚಾದ ಮನುಷ್ಯರು ಇರುವ ಸಂದರ್ಭದಲ್ಲಿ ಈ ಪ್ರಕರಣದ ನಿಯಮಗಳಿಗೆ ಒಳಪಟ್ಟು ಅಂಥಾ ಮನುಷ್ಯರ ಜ್ಯೇಷ್ಠಶಾಖೆಯಲ್ಲಿ ಜ್ಯೇಷ್ಠನಾದವನು ಆರಿಸಲ್ಪಡತಕ್ಕದ್ದು.

ಕೆಲವು ಸಂದರ್ಭಗಳಲ್ಲಿ ಸಮೀಪ ಬಾಧ್ಯಸ್ಥನಲ್ಲದವನನ್ನು ನೇಮಕ ಮಾಡಬಹುದು.

(3) ಸಮೀಪದ ಬಾಧ್ಯಸ್ಥನನ್ನು (1)ನೆ ಒಳ ಪ್ರಕರಣದ ಮೇರೆಗೆ ಅರ್ಹನಲ್ಲದ ಪಕ್ಷದಲ್ಲಿ ಹಾಗೆ ಅರ್ಹನಾಗಿರುವ ಜ್ಯೇಷ್ಠ ಶಾಖೆಯಲ್ಲಿ ವಯೋಜ್ಯೇಷ್ಠನು ಕ್ರಮದಲ್ಲಿ ಪರಂಪರೆಯಲ್ಲಿ ಅನಂತರ ಬರುವ ಮನುಷ್ಯನನ್ನು ಒಡೆಯನು ನೇಮಕ ಮಾಡತಕ್ಕದ್ದು ಮತ್ತು ವಂಶಾವಳಿಯಲ್ಲಿ ಅಂಥಾ ಮನುಷ್ಯನು ಇಲ್ಲದ ಸಂದರ್ಭದಲ್ಲಿ (1) ನೆ ಒಳ ಪ್ರಕರಣದ ಮೇರೆ ಕ್ರಮವಾಗಿ ಅರ್ಹನಾದ ಯಾವ ಮನುಷ್ಯನನ್ನಾದರೂ ನೇಮಿಸಬಹುದು.

ಬಾಧ್ಯಸ್ಥನು ಅಪ್ರಾಯಸ್ಥನಾಗಿರುವ ಸಂದರ್ಭದಲ್ಲಿ ಅನುಸರಿಸತಕ್ಕ ಕ್ರಮ.

(4) ಒಂದು ಉದ್ಯೋಗಕ್ಕೆ ಉತ್ತರಾಧಿಕಾರಿಯಾಗಲು ಅನ್ಯಥಾ ಹಕ್ಕುಳ್ಳವನಾಗಿರುವ ಒಬ್ಬ ಮನುಷ್ಯನು ಅಪ್ರಾಯಸ್ಥನಾಗಿರುವ ಸಂದರ್ಭದಲ್ಲಿ ಒಡೆಯನು ಅಪ್ರಾಯಸ್ಥನನ್ನು ಹಿಂದಿನ ಉದ್ಯೋಗಸ್ಥನ ಬಾಧ್ಯಸ್ಥನೆಂದು ರಿಜಿಸ್ಟರ್ಮಾಡತಕ್ಕದ್ದು ಮತ್ತು ಬಾಧ್ಯಸ್ಥನೆಂದು ರಿಜಿಸ್ಟರ್ಮಾಡಲ್ಪಟ್ಟ ಮನುಷ್ಯನು ಉದ್ಯೋಗದ ಕೆಲಸಗಳನ್ನು ತಾನೇ ನಿರ್ವಹಿಸಲು (1)ನೆ ಒಳ ಪ್ರಕರಣಕ್ಕೆ ಅನುಗುಣವಾಗಿ ಯೋಗ್ಯನಾಗುವ ವರೆಗೆ ಆ ಉದ್ಯೋಗದ ಕೆಲಸಗಳನ್ನು ನಿರ್ವಹಿಸುವುದಕ್ಕೆ (1)ನೆ ಒಳ ಪ್ರಕರಣದ ಮೇರೆ ಯೋಗ್ಯತೆಯನ್ನು ಹೊಂದಿದ ಇತರ ಯಾವನೊಬ್ಬ ಮನುಷ್ಯನನ್ನು ನೇಮಕ ಮಾಡತಕ್ಕದ್ದು ಮತ್ತು ಸದರಿ ಅಪ್ರಾಯಸ್ಥನು ಯೋಗ್ಯನಾದಮೇಲೆ ಅವನನ್ನು ನೇಮಿಸತಕ್ಕದ್ದು. ಈ ಒಳ ಪ್ರಕರಣದ ಮೇರೆ ಬಾಧ್ಯಸ್ಥನೆಂದು ರಿಜಿಸ್ಟರ್ಮಾಡಲ್ಪಟ್ಟ ಮನುಷ್ಯನು ಸತ್ತರೆ ಅಥವಾ ಪ್ರಾಯಸ್ಥನಾದ ಮೇಲೆ (1)ನೆ ಒಳ ಪ್ರಕರಣದ (c) ವಾಕ್ಯದ ಮೇರೆ ಅಯೋಗ್ಯನಾಗಿರುವಂತೆ ಕಂಡುಬಂದರೆ ಒಡೆಯನು (2) ನೆ ಮತ್ತು (3) ನೆ ಒಳ ಪ್ರಕರಣಗಳಲ್ಲಿ ವಿಧಿಸಿರುವ ಮೇರೆ ಬರಿದಾದ ಸ್ಥಾನವನ್ನು ಭರ್ತಿ ಮಾಡತಕ್ಕದ್ದು.

ಪಟೇಲ, ಶಾನುಭೋಗ ಮುಂತಾದುವಲ್ಲದ ಉದ್ಯೋಗಗಳ ವಿಷಯದಲ್ಲಿ ಉತ್ತರಾಧಿಕಾರಿಯಾಗೋಣ.

8. ಪರಾಧೀನ ಮಾಡಲ್ಪಡದ ಮತ್ತು ಪರಾಧೀನ ಮಾಡಲ್ಪಟ್ಟ ಗ್ರಾಮಗಳಲ್ಲಿ ಪಟೇಲನ, ಶಾನಭೋಗನ, ನೀರಗಂಟಿಯ, ತೋಟಿಯ ಮತ್ತು ತಳವಾರನ ಉದ್ಯೋಗಗಳಲ್ಲದ ಗ್ರಾಮ ಉದ್ಯೋಗಗಳಿಗೆ ಉತ್ತರಾಧಿಕಾರವು ಈ ರೆಗ್ಯುಲೇಷನು ಉಪಯೋಗದಲ್ಲಿ ಬರುವ ತೇದಿಯಲ್ಲಿ ಆ ಉತ್ತರಾಧಿಕಾರಕ್ಕೆ ಲಗಾವಾಗುವ ವ್ಯವಹಾರವಿಧಿಗೆ ಅಥವಾ ಪದ್ಧತಿಗೆ ಅನುಸಾರವಾಗಿ ಅಥವಾ ಅಂಥಾ ವ್ಯವಹಾರವಿಧಿ ಅಥವಾ ಪದ್ಧತಿಯು ಇಲ್ಲದೆ ಇರುವ ಸಂದರ್ಭದಲ್ಲಿ 6ನೆ ಪ್ರಕರಣದ (2)ನೆ ಒಳ ಪ್ರಕರಣದ ಮತ್ತು 7ನೆ ಪ್ರಕರಣದ (2) ನೆ ಒಳ ಪ್ರಕರಣದ ನಿಯಮಗಳು ಅನ್ವಯಿಸುವಷ್ಟು ದೂರದವರೆಗೆ ಅವುಗಳ ಮೇರೆ ಹೋಗತಕ್ಕದ್ದು.

ಉದ್ಯೋಗಗಳನ್ನು ಹೊಂದುವುದಕ್ಕೂ ಆದಾಯಗಳನ್ನು ಬರಮಾಡಿಕೊಳ್ಳುವುದಕ್ಕೂ ಬಾಧ್ಯಸ್ಥನೆಂದು ರಿಜಿಸ್ಟರ್ಮಾಡುವುದಕ್ಕೂ ತರಲ್ಪಟ್ಟ ವ್ಯಾಜ್ಯಗಳು.

9. (1) ಯಾವನಾದರೂ ಮನುಷ್ಯನು ಯಾವುದಾದರೂ ಗ್ರಾಮ ಉದ್ಯೋಗಕ್ಕೋಸ್ಕರ ಅಥವಾ ಯಾವುದಾದರೂ ಅಂಥಾ ಉದ್ಯೋಗದ ಆದಾಯಗಳನ್ನು ಬರಮಾಡಿಕೊಳ್ಳುವುದಕ್ಕೋಸ್ಕರ ಅಂಥಾ ಉದ್ಯೋಗವನ್ನು ಇಟ್ಟುಕೊಳ್ಳುವುದಕ್ಕೆ ಮತ್ತು ಅಂಥಾ ಆದಾಯಗಳನ್ನು ಅನುಭವಿಸುವುದಕ್ಕೆ ಸಂದರ್ಭಾನುಸಾರವಾಗಿ ಈ ರೆಗ್ಯುಲೇಷನಿನ 6ನೆ ಪ್ರಕರಣದ (2) ಅಥವಾ (3)ನೆ ಒಳ ಪ್ರಕರಣದ ಮೇರೆ ಅಥವಾ 7ನೆ ಪ್ರಕರಣದ (2) ಅಥವಾ (3)ನೆ ಒಳ ಪ್ರಕರಣದ ಮೇರೆ ಅಥವಾ 8ನೆ ಪ್ರಕರಣದ ಮೇರೆ ತಾನು ಹಕ್ಕುಳ್ಳವನೆಂಬ ಕಾರಣದಮೇಲೆ ಡೆಪ್ಯುಟಿ ಕಮಿಷನರ ಮುಂದೆ ವ್ಯಾಜ್ಯ ನಡೆಸಬಹುದು ; ಅಥವಾ ಅಪ್ರಾಯಸ್ಥನಾಗಿರುವುದರಿಂದ ಯಾವುದಾದರೂ ಅಂಥಾ ಉದ್ಯೋಗವನ್ನು ಕಡೆಯಲ್ಲಿ ಇಟ್ಟುಕೊಂಡಿದ್ದವನ ಬಾಧ್ಯಸ್ಥನೆಂದು ರಿಜಿಸ್ಟರ್ಮಾಡುವುದಕ್ಕೆ ಡೆಪ್ಯುಟಿ ಕಮಿಷನರ ಮುಂದೆ ವ್ಯಾಜ್ಯ ನಡೆಸಬಹುದು.

ಬರೀ ವಾಗ್ರೂಪವಾದ ಡಿಕ್ರಿಯ ಬಗ್ಗೆ ವ್ಯಾಜ್ಯವಿಲ್ಲ.

ಆದರೆ :—

(i) ಬರೀ ವಾಗ್ರೂಪವಾದ ಡಿಕ್ರಿಗೋಸ್ಕರ ಯಾವ ವ್ಯಾಜ್ಯವನ್ನೂ ಅಂಗೀಕರಿಸತಕ್ಕದ್ದಲ್ಲ.

ಆದಾಯಗಳ ಸ್ವಭಾವವನ್ನು ಕುರಿತು ವಿವಾದದ ಸಂಗತಿಯಲ್ಲಿ ನಡೆಯುತಕ್ಕ ಕ್ರಮ.

(ii) ಒಂದು ವ್ಯಾಜ್ಯದಲ್ಲಿ ಉದ್ಯೋಗದ ಆದಾಯವು ಭೂಮಿಯೋ ಅಥವಾ ಭೂಮಿಯ ಬಗ್ಗೆ ಕೊಡತಕ್ಕ ಕಂದಾಯದ ಪೈಕಿ ನೇಮಕವಾದ ಭಾಗವೋ ಎಂಬುವುದು ವ್ಯವಸ್ಥೆಯಾಗತಕ್ಕ ಸಂಗತಿಗಳಲ್ಲಿ ಒಂದಾಗಿದ್ದ ಪಕ್ಷದಲ್ಲಿ ಡೆಪ್ಯುಟಿ ಕಮಿಷನರ ಸದರಿ ನೇಮಕವಾಗಿದ್ದ ಭಾಗ ಮಾತ್ರ ಆದಾಯವಾಗಿ ಏರ್ಪಟ್ಟಿರುತ್ತದೆ ಎಂಬ ಊಹೆಯ ಮೇಲೆ ವ್ಯಾಜ್ಯವನ್ನು ತೀರ್ಮಾನಿಸತಕ್ಕದ್ದು ; ಆದರೆ ಅಂಥಾ ತೀರ್ಪು ದಾವೇದಾರನಿಗೆ ಅಂಥಾ ಭೂಮಿಯನ್ನೇ ಸ್ವಾಧೀನ ಮಾಡಿಕೊಳ್ಳುವುದಕ್ಕೋಸ್ಕರ ಸಿವಿಲ್ ಕೋರ್ಟಿನಲ್ಲಿ ವ್ಯಾಜ್ಯ ಮಾಡುವುದಕ್ಕೆ ಇರುವ ಹಕ್ಕನ್ನು ಆತಂಕಪಡಿಸುವುದಿಲ್ಲ.

ದಾವೇದಾರನು ನೇಮಕಕ್ಕೆ ಅಯೋಗ್ಯನಾಗಿರುವ ಸಂದರ್ಭದಲ್ಲಿ ದಾವೆಯನ್ನು ತಿರಸ್ಕರಿಸೋಣ.

(2) ಈ ಪ್ರಕರಣಕ್ಕನುಗುಣವಾಗಿ ತರಲ್ಪಟ್ಟ ವ್ಯಾಜ್ಯದ ವಿಚಾರಣೆಯು ಮುಗಿಯುವುದಕ್ಕಿಂತ ಮುಂಚೆ ಯಾವಕಾಲದಲ್ಲಿಯಾದರೂ ದಾವೇದಾರನು ಸಂದರ್ಭಾನುಸಾರವಾಗಿ ಈ ರೆಗ್ಯುಲೇಷನಿನ 6ನೆ ಪ್ರಕರಣದ (1)ನೆ ಒಳ ಪ್ರಕರಣದ ಮೇರೆ ಅಥವಾ 7ನೆ ಪ್ರಕರಣದ (1)ನೆ ಒಳ ಪ್ರಕರಣದ ಮೇರೆ ಉದ್ಯೋಗವನ್ನು ಪಡೆಯುವುದಕ್ಕೆ ಅರ್ಹನಾಗಿಲ್ಲವೆಂದು ಡೆಪ್ಯುಟಿ ಕಮಿಷನರಿಗೆ ತೋರಿದರೆ ಆತನು ದಾವೆಯನ್ನು ತಿರಸ್ಕರಿಸಿ ಹುಕುಮನ್ನು ಕೊಡತಕ್ಕದ್ದು.

ಯಾವ ವಾಯಿದೆ ಒಳಗಾಗಿ ವ್ಯಾಜ್ಯವನ್ನು ತರಬಹುದೋ ಆ ವಾಯಿದೆಯ ಅವಧಿಯ ನಿರ್ಣಯ.

10. (1) ಹಿಂದಿನ ಕಡೇ ಪ್ರಕರಣಕ್ಕೆ ಅನುಗುಣವಾಗಿ ಡೆಪ್ಯುಟಿ ಕಮಿಷನರ ಮುಂದೆ ತರಲ್ಪಟ್ಟ ಯಾವ ವ್ಯಾಜ್ಯವನ್ನಾಗಲಿ ವ್ಯಾಜ್ಯದ ಕಾರಣ ಉಂಟಾದ ತೇದಿಯಿಂದ ಅಂಥಾ ತೇದಿ ಈ ರೆಗ್ಯುಲೇಷನಿನ ಪ್ರಾರಂಭಕ್ಕೆ ಮುಂಚೆಯಾದರೂ ಅಥವಾ ಅನಂತರವಾದರೂ ಸರಿಯೆ — ಮೂರು ವರ್ಷಗಳೊಳಗಾಗಿ ತರದೆಹೋದರೆ ಅಂಗೀಕರಿಸಕೂಡದು:

ಅಪ್ರಾಯಸ್ಥನಾಗಿದ್ದ ಸಂದರ್ಭದಲ್ಲಿ ಅವಧಿಯ ನಿರ್ಣಯ.

ಆದರೆ, ಅಪ್ರಾಯಸ್ಥನಾಗಿದ್ದ ಕಾರಣದಿಂದ ಉದ್ಯೋಗವನ್ನು ಹೊಂದುವುದಕ್ಕೆ ಅಯೋಗ್ಯನಾಗಿದ್ದ ಮನುಷ್ಯನ ವಿಷಯದಲ್ಲಿ ಅಂಥಾ ಉದ್ಯೋಗವನ್ನು ಅಥವಾ ಅದರ ಆದಾಯಗಳನ್ನು ಬರಮಾಡಿಕೊಳ್ಳುವುದಕ್ಕೆ ವ್ಯಾಜ್ಯ ಮಾಡುವ ಹಕ್ಕು ಅವನು ಪ್ರಾಯಸ್ಥನಾದ ತೇದಿ ಮೊದಲ್ಗೊಂಡು ಪ್ರಾರಂಭವಾಗತಕ್ಕದ್ದು.

ಡಿಕ್ರಿ ಅಥವಾ ಹುಕುಮಿನ ಅಮಲ್ಜಾರಿ ಬಗ್ಗೆ ಯಾವ ವಾಯಿದೆ ಅಥವಾ ಅವಧಿಯ ಒಳಗೆ ಅರ್ಜಿ ಮಾಡಬೇಕೋ ಆ ಅವಧಿಯ ನಿರ್ಣಯ.

(2) ಈ ರೆಗ್ಯುಲೇಷನಿಗೆ ಅನುಗುಣವಾಗಿ ಕೊಡಲ್ಪಟ್ಟ ಡಿಕ್ರಿಯ ಅಥವಾ ಹುಕುಮಿನ ಅಮಲ್ಜಾರಿ ಬಗ್ಗೆ ಅಂಥಾ ಡಿಕ್ರಿಯ ಅಥವಾ ಹುಕುಮಿನ ತೇದಿಯಿಂದ ಒಂದು ವರ್ಷ ಕಳೆದ ಅನಂತರ ಮಾಡಿದ ಯಾವ ಅರ್ಜಿಯನ್ನಾಗಲಿ ಅಂಗೀಕರಿಸಕೂಡದು.

ಈ ರೆಗ್ಯುಲೇಷನಿನ ಆರಂಭಕ್ಕೆ ಮುಂಚೆ ಕೊಡಲ್ಪಟ್ಟ ಡಿಕ್ರಿಗಳ ಮತ್ತು ಹುಕುಂಗಳ ಅಮಲ್ಜಾರಿ.

(3) ಗ್ರಾಮ ಉದ್ಯೋಗಗಳಿಗೆ ಹಕ್ಕುಗಳನ್ನು ಕುರಿತು ಅಥವಾ ಅವುಗಳಿಗೆ ಸೇರಿರುವ ಆದಾಯಗಳನ್ನು ಕುರಿತು ಈ ರೆಗ್ಯುಲೇಷನಿನ ಆರಂಭಕ್ಕೆ ಮುಂಚೆ ಕೊಡಲ್ಪಟ್ಟ ಡಿಕ್ರಿಗಳನ್ನು ಅಥವಾ ಹುಕುಂಗಳನ್ನು ಈ ರೆಗ್ಯುಲೇಷನಿನ ನಿಯಮಗಳ ಮೇರೆ ಅಮಲ್ಜಾರಿ ಮಾಡಬಹುದು; ಆದರೆ ಯಾವುದಾದರೂ ಅಂಥಾ ಡಿಕ್ರಿಯ ಅಥವಾ ಹುಕುಮಿನ ಅಮಲ್ಜಾರಿಯ ಬಗ್ಗೆ ಅಂಥಾ ಡಿಕ್ರಿಯ ಅಥವಾ ಹುಕುಮಿನ ತೇದಿಯಿಂದ ಮೂರು ವರ್ಷಗಳು ಕಳೆದ ಅನಂತರವಾಗಲಿ ಅಥವಾ ಈ ರೆಗ್ಯುಲೇಷನು ಉಪಯೋಗದಲ್ಲಿ ಬಂದ ಒಂದು ವರ್ಷದ ಅನಂತರವಾಗಲಿ ಮಾಡಲ್ಪಟ್ಟ ಯಾವ ಅರ್ಜಿಯನ್ನಾಗಲಿ ಅಂಗೀಕರಿಸತಕ್ಕದ್ದಲ್ಲ.

ಅಪೀಲ್ಮಾಡಲ್ಪಟ್ಟ ಸಂದರ್ಭದಲ್ಲಿ ಅವಧಿಯ ನಿರ್ಣಯ.

(4) ಅಮಲ್ಜಾರಿ ಮಾಡಿಸಲು ಅಪೇಕ್ಷಿಸುವ ಅಥವಾ ಹುಕುಮಿನ ಮೇಲೆ ಅಪೀಲ್ಮಾಡಲ್ಪಟ್ಟ ಸಂದರ್ಭದಲ್ಲಿ (2)ನೆ ಮತ್ತು (3)ನೆ ಒಳ ಪ್ರಕರಣಗಳಲ್ಲಿ ವಿಧಿಸಿರುವ ಅರ್ಜಿಯ ವಾಯಿದೆಯು ಅಪೀಲು ವ್ಯವಸ್ಥೆಯಾದಂದಿನಿಂದ ಪ್ರಾರಂಭವಾಗತಕ್ಕದ್ದು.

ವ್ಯಾಜ್ಯಗಳನ್ನು ವರ್ಗಮಾಡುವುದನ್ನು ಕುರಿತು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಿಗಿರುವ ಅಧಿಕಾರಗಳು.

11. ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರು ಆ ಡಿಸ್ಟ್ರಿಕ್ಟಿನಲ್ಲಿ ಒಂದು ಡಿವಿಜನಿನ ಅಧಿಕಾರವುಳ್ಳ ಯಾವನಾದರೂ ಅಸಿಸ್ಟೆಂಟು ಕಮಿಷನರ ಫೈಲಿನಿಂದ ಒಂದು ವ್ಯಾಜ್ಯವನ್ನು ವ್ಯವಸ್ಥೆ ಮಾಡುವ ಬಗ್ಗೆ ತನ್ನ ಫೈಲಿಗೂ ಅಥವಾ ಅಂಥಾ ಒಬ್ಬ ಅಸಿಸ್ಟೆಂಟು ಕಮಿಷನರ ಫೈಲಿನಿಂದ ಇನ್ನೊಬ್ಬ ಅಸಿಸ್ಟೆಂಟು ಕಮಿಷನರ ಫೈಲಿಗೂ ಅಥವಾ ಒಂದು ಡಿವಿಜನಿನ ಅಧಿಕಾರವಿಲ್ಲದ ಒಬ್ಬ ಅಸಿಸ್ಟೆಂಟು ಕಮಿಷನರ ಫೈಲಿಗೂ ವರ್ಗಮಾಡಬಹುದು.

ವ್ಯಾಜ್ಯಗಳನ್ನು ವಿಚಾರಣೆ ಮಾಡುವುದರಲ್ಲಿ ಅನುಸರಿಸತಕ್ಕ ಕ್ರಮ.

12. (1) ಈ ರೆಗ್ಯುಲೇಷನಿಗನುಗುಣವಾಗಿ ತಂದ ವ್ಯಾಜ್ಯಗಳ ವಿಚಾರಣೆಯು ಸರ್ಕಾರದವರು 2ನೆ ಪ್ರಕರಣಕ್ಕನುಗುಣವಾಗಿ ಏರ್ಪಡಿಸಿದ ನಿಬಂಧನೆಗಳಿಂದಲೂ ಈ ಕೆಳಗಿನ ನಿಯಮಗಳಿಂದಲೂ ಕ್ರಮಪಡಿಸಲ್ಪಡತಕ್ಕದ್ದು:—

ವ್ಯಾಜ್ಯ ಕೇಳುವ ತೇದಿಯನ್ನು ನಿಶ್ಚಯಿಸಿ ಕಕ್ಷಿಗಾರರ ಹೇಳಿಕೆಗಳನ್ನು ಕೇಳತಕ್ಕದ್ದು.

(i) ವ್ಯಾಜ್ಯವನ್ನು ಕೇಳುವ ಬಗ್ಗೆ ಒಂದು ತೇದಿಯನ್ನು ನಿಶ್ಚಯಿಸಿ ಕಕ್ಷಿಗಾರರಿಗೆ ಆ ತೇದಿಯನ್ನು ತಿಳಿಸತಕ್ಕದ್ದು, ಮತ್ತು ಅವರು ಸ್ವತಃ ಆಗಲಿ ವಕೀಲರ ಮುಖಾಂತರವಾಗಲಿ ತಮ್ಮ ಹೇಳಿಕೆಗಳನ್ನು ಹೇಳಲು ಹಕ್ಕುಳ್ಳವರಾಗಿರುತ್ತಾರೆ;

ಸಾಕ್ಷಿಗಾರರನ್ನು ಕರೆತರಬಹುದು ಅಥವಾ ಸಮನ್ಸ್ ಮಾಡಬಹುದು.

(ii) ಕಕ್ಷಿಗಾರರು ಸಾಕ್ಷಿಗಾರರನ್ನು ಕರೆತರುವುದಕ್ಕೂ ಮತ್ತು ತಮಗೆ ಯಾವ ಸಾಕ್ಷಿಗಾರನ ಸಾಕ್ಷ್ಯವು ಅಗತ್ಯವೆಂಟೋ ಅಂಥಾ ಮನುಷ್ಯನನ್ನು ಸಾಕ್ಷಿಗಾರನಾಗಿ ಸಮನ್ಸ್ ಮಾಡಬೇಕೆಂದು ಅಥವಾ ಯಾವನಾದರೂ ಮನುಷ್ಯನು ಒಂದು ಸಾಧನವನ್ನು ತರಬೇಕಾಗಿ ಸಮನ್ಸ್ ಮಾಡಬೇಕೆಂದು ಕೇಳುವುದಕ್ಕೂ ಹಕ್ಕುಳ್ಳವರಾಗಿರುತ್ತಾರೆ, ಮತ್ತು ವ್ಯಾಜ್ಯವನ್ನು ವಿಚಾರಣೆ ಮಾಡುವ ಆಫೀಸರು ಅಂಥಾ ಅರಿಕೆಯನ್ನು ನೆರವೇರಿಸುವುದು ಅನಾವಶ್ಯಕವೆಂದು ತಿಳಿದುಕೊಂಡರೇನೆ ಹೊರತು (ಅದಕ್ಕೆ ಕಾರಣಗಳನ್ನು ಬರೆದಿಡತಕ್ಕದ್ದು) ಅನ್ಯಥಾ ಆ ಅರಿಕೆಯನ್ನು ಸಲ್ಲಿಸತಕ್ಕದ್ದು.

ವ್ಯವಹಾರಗಳನ್ನು ಬರೆದಿಡೋಣ.

(iii) ವ್ಯಾಜ್ಯವನ್ನು ವಿಚಾರಣೆ ಮಾಡುವ ಆಫೀಸರು, ಕಕ್ಷಿಗಾರರ ಮುಖ್ಯ ವಾಜ್ಮೂಲಗಳನ್ನೂ ಸಾಕ್ಷ್ಯದ ಮುಖ್ಯಾಂಶವನ್ನೂ ತನ್ನ ತೀರ್ಪನ್ನೂ ಆ ಬಗ್ಗೆ ಇರುವ ಕಾರಣಗಳನ್ನೂ ಕಾಣಿಸಿ ಸ್ವಹಸ್ತದಿಂದ ಒಂದು ಜ್ಞಾಪಕ ಪತ್ರವನ್ನು ಬರೆಯತಕ್ಕದ್ದು.

ಸರ್ವರ್ಗಳಿಗೆ ವಿಧೇಯನಾಗಿ ನಡೆದುಕೊಳ್ಳಲು ಬದ್ಧನಾಗಿರೋಣ.

(2) ಈ ಪ್ರಕರಣಕ್ಕೆ ಅನುಗುಣವಾಗಿ ಸರ್ವರ್ ಮಾಡಲ್ಪಟ್ಟ ಪ್ರತಿ ಮನುಷ್ಯನೂ ಅದಕ್ಕೆ ವಿಧೇಯನಾಗಿ ನಡೆದುಕೊಳ್ಳಲು ನ್ಯಾಯ ವಿಹಿತವಾಗಿ ಬದ್ಧನಾಗಿರತಕ್ಕದ್ದು.

ಖರ್ಚನ್ನು ಕೊಡಬೇಕೆಂದು ಡಿಕ್ರಿಗಳಲ್ಲಿ ವಿಧಿಸಬಹುದು ಮತ್ತು ಅವುಗಳನ್ನು ಸರ್ಕಾರದವರು ಏರ್ಪಡಿಸಿದ ನಿಬಂಧನೆಗಳಿಗೆ ಅನುಸಾರವಾಗಿ ಜಾರಿ ಮಾಡತಕ್ಕದ್ದು.

13. ಈ ರೆಗ್ಯುಲೇಷನಿಗನುಗುಣವಾಗಿ ತರಲ್ಪಟ್ಟ ವ್ಯಾಜ್ಯಗಳಲ್ಲಿ ಉಂಟಾದ ಡಿಕ್ರಿ ಮತ್ತು ಹುಕುಮುಗಳಲ್ಲಿ ಸರ್ಕಾರದವರು 24ನೆ ಪ್ರಕರಣಕ್ಕನುಗುಣವಾಗಿ ವಿಧಿಸುವ ದರಗಳಲ್ಲಿ ಮತ್ತು ನಿಬಂಧನೆಗಳಿಗೊಳಪಟ್ಟು ಕರ್ಚುಗಳನ್ನು ಪಾವತಿ ಮಾಡಬೇಕಾಗಿ ವಿಧಿಸಬಹುದು, ಮತ್ತು ಆ ಡಿಕ್ರಿ ಅಥವಾ ಹುಕುಮುಗಳನ್ನು ಆ ಪ್ರಕರಣಕ್ಕನುಗುಣವಾಗಿ ಏರ್ಪಡಿಸಲ್ಪಡುವ ನಿಬಂಧನೆಗಳ ಮೇರೆ ಜಾರಿ ಮಾಡತಕ್ಕದ್ದು.

ಕೆಲವು ಸಂಗತಿಗಳಲ್ಲಿ ಡೆಪ್ಯುಟಿ ಕಮಿಷನರು ನ್ಯಾಯ ವಿಧಿಯನ್ನು ಕುರಿತ ಪ್ರಶಂಸೆಯನ್ನು ರೆವಿನ್ಯೂ ಮೇಲ್ವಿಚಾರಣೆಯ ಮುಖ್ಯಾಧಿಕಾರಿಗೆ ಕಳುಹಿಸಬಹುದು.

14. (1) ಈ ರೆಗ್ಯುಲೇಷನಿಗನುಗುಣವಾಗಿ ತಂದ ಒಂದು ವ್ಯಾಜ್ಯವನ್ನು ಅಥವಾ ಅಂಥಾ ಒಂದು ವ್ಯಾಜ್ಯದಲ್ಲಿ ಉಂಟಾದ ಡಿಕ್ರಿಯ ಅಥವಾ ಹುಕುಮಿನಮೇಲೆ ಮಾಡಿದ ಅಪೀಲನ್ನು ಕೇಳುವುದಕ್ಕಿಂತ ಮೊದಲು ಅಥವಾ ಕೇಳುವ ಕಾಲದಲ್ಲಿ ಅಥವಾ ಅಂಥಾ ಯಾವುದಾದರೂ ಡಿಕ್ರಿಯ ಅಮಲ್ದಾರಿ ನಡೆಸುವಾಗ್ಗೆ ವ್ಯವಹಾರ ವಿಧಿಯ ವಿಷಯವಾಗಿ ಅಥವಾ ವ್ಯವಹಾರ ವಿಧಿಯು ಷ್ಟೇ ಪ್ರಬಲವಾದ ವಾಡಿಕೆಯ ವಿಷಯವಾಗಿ, ಅಥವಾ ವ್ಯಾಜ್ಯದ ವಿದ್ಯಮಾನಗಳಿಗೆ ಬಾಧಕವಾಗುವಂಥ ಸಾಧನದ ಅನ್ವಯವನ್ನು ಕುರಿತು ಯಾವುದಾದರೂ ಪ್ರಶಂಸೆ ಹುಟ್ಟಿದರೆ, ಮತ್ತು ವ್ಯಾಜ್ಯವನ್ನು ಅಥವಾ ಅಪೀಲನ್ನು ವಿಚಾರಣೆ ಮಾಡುವ ಅಥವಾ ಡಿಕ್ರಿಯ ಅಮಲ್ದಾರಿಯನ್ನು ನಡೆಸುವ ಆಫಿಸರು ಅಂಥಾ ಪ್ರಶಂಸೆಯನ್ನು ಕುರಿತು ಸಕಾರಣವಾಗಿ ಅನುಮಾನಪಟ್ಟರೆ, ಆತನು, ಸ್ವತಃ ಪ್ರವರ್ತಿಸಿಯಾಗಲಿ ಅಥವಾ ಯಾರಾದರೂ ಕಕ್ಷಿಗಾರರ ಬಿನ್ನಹದಮೇಲೆಯಾಗಲಿ; ಮೊಕದ್ದಮೆಯ ವಿದ್ಯಮಾನಗಳ ಮತ್ತು ಅನುಮಾನ ಹುಟ್ಟಿದ ಪ್ರಶಂಸೆಯ ವಿಷಯದ ಒಂದು (ಸ್ಟೇಟ್‌ಮೆಂಟು) ವಿವರಣೆಯನ್ನು ಬರೆದು ಅಂಥಾ ವಿವರಣೆಯನ್ನು ರೆವಿನ್ಯೂ ಮೇಲ್ವಿಚಾರಣೆಯ ಮುಖ್ಯಾಧಿಕಾರಿಯ ತೀರ್ಮಾನದ ಬಗ್ಗೆ ಕಳುಹಿಸತಕ್ಕದ್ದು, ಮತ್ತು ಅಂಥಾ ತೀರ್ಮಾನವು ತನಗೆ ತಿಳಿಸಲ್ಪಡುವವರೆಗೆ ಮುಂದಿನ ವ್ಯವಹರಣೆಯನ್ನು ನಿಲ್ಲಿಸಿಡತಕ್ಕದ್ದು.

(2) ರೆವಿನ್ಯೂ ಮೇಲ್ವಿಚಾರಣೆಯ ಮುಖ್ಯಾಧಿಕಾರಿಯ ತೀರ್ಮಾನದ ಬಗ್ಗೆ ಕಳುಹಿಸಿ ಕೊಡುವ ಆಫಿಸರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಾಗಿ ಇಲ್ಲದೆ ಇದ್ದರೆ, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ ಮುಖಾಂತರ ಕಳುಹಿಸಿಕೊಡತಕ್ಕದ್ದು.

ಹಾಗೆ ಕಳುಹಿಸಿದ ಸಂಗತಿಗಳಲ್ಲಿ ಅನುಸರಿಸತಕ್ಕ ಕ್ರಮ.

(3) ಯಾವನಾದರೂ ಕಕ್ಷಿಗಾರನು ತನ್ನ ಅಥವಾ ತನ್ನ ವಕೀಲನ ಹೇಳಿಕೆಯನ್ನು ಕೇಳಬೇಕೆಂದು ಅರಿಕೆ ಮಾಡಿಕೊಂಡರೆ ರೆವಿನ್ಯೂ ಮೇಲ್ವಿಚಾರಣೆಯ ಮುಖ್ಯಾಧಿಕಾರಿಯು ಅಂಥಾ ಹೇಳಿಕೆಯನ್ನು ಕೇಳಿ ಕಳುಹಿಸಿದ ವಿಷಯವನ್ನು ತೀರ್ಮಾನಿಸತಕ್ಕದ್ದು ಮತ್ತು ಯಾವ ಆಫಿಸರು ಆ ವಿಷಯವನ್ನು ಕಳುಹಿಸಿದನೋ ಆ ಆಫಿಸರಿಗೆ ತನ್ನ ತೀರ್ಪಿನ ಒಂದು ಪ್ರತಿಯನ್ನು ಕಳುಹಿಸತಕ್ಕದ್ದು, ಮತ್ತು ಆ ಆಫಿಸರು ಅದು ತಲಪಿದಾಗ ರೆವಿನ್ಯೂ ಮೇಲ್ವಿಚಾರಣೆಯ ಮುಖ್ಯಾಧಿಕಾರಿಯ ತೀರ್ಪಿಗೆ ಅನುಸಾರವಾಗಿ ಆ ಮೊಕದ್ದಮೆಯನ್ನು ವ್ಯವಸ್ಥೆ ಮಾಡಲು ಪ್ರವರ್ತಿಸಬಹುದು, ಮತ್ತು ಆ ರೆವಿನ್ಯೂ ಮೇಲ್ವಿಚಾರಣೆಯ ಮುಖ್ಯಾಧಿಕಾರಿಯ ತೀರ್ಪಿನ ಯಥಾರ್ಥತ್ವವನ್ನು ಈ ರೆಗ್ಯುಲೇಷನಿಗೆ ಅನುಗುಣವಾಗಿ ಮಾಡಿದಂಥಾ ಯಾವ ಅಪೀಲಿನಲ್ಲಿಯೂ ವಾದಿಸಕೂಡದು.

ಈ ರೆಗ್ಯುಲೇಷನಿನ ಪ್ರಾರಂಭದಲ್ಲಿ ಬಾಕಿಯಲ್ಲಿರುವ ವ್ಯಾಜ್ಯಗಳ ಮತ್ತು ಅಪೀಲುಗಳ ವ್ಯವಸ್ಥೆ.

15. ಈ ರೆಗ್ಯುಲೇಷನಿನ ಪ್ರಾರಂಭಕ್ಕೆ ಮುಂಚೆ ತರಲ್ಪಟ್ಟ ಎಲ್ಲಾ ವ್ಯಾಜ್ಯಗಳೂ ಮತ್ತು ಮಾಡಲ್ಪಟ್ಟ ಅಪೀಲುಗಳೂ ಈ ರೆಗ್ಯುಲೇಷನಿನ ಪ್ರಾರಂಭದ ತರುವಾಯ ಅವುಗಳು ಈ ರೆಗ್ಯುಲೇಷನಿಗನುಗುಣವಾಗಿ ಮಾಡಲ್ಪಟ್ಟಿದ್ದರೆ ಹೇಗೋ ಹಾಗೆಯೇ ಕೇಳಲ್ಪಟ್ಟು ವ್ಯವಸ್ಥೆ ಮಾಡಲ್ಪಡತಕ್ಕದ್ದು.

ಸಿವಿಲ್ ಕೋರ್ಟುಗಳ ಅಧಿಕಾರಕ್ಕೆ ಆತಂಕ.

16. ಯಾವುದಾದರೂ ಗ್ರಾಮ ಉದ್ಯೋಗಕ್ಕೆ ಉತ್ತರಾಧಿಕಾರಿಯಾಗುವುದಕ್ಕೆ ಅಥವಾ ಅದರ ಸ್ವಾಧೀನತೆಗೆ ತರುವ ಯಾವುದಾದರೂ ದಾವೆಯನ್ನು ಅಥವಾ ಯಾವುದಾದರೂ ಗ್ರಾಮ ಉದ್ಯೋಗದ ಆದಾಯಗಳ ದರವನ್ನು ಅಥವಾ ಮೊಬಲಗನ್ನು ಕುರಿತ ಯಾವ ಪ್ರಶಂಸೆಯನ್ನಾದರೂ ಅಥವಾ 9ನೆ ಪ್ರಕರಣದ (1)ನೆ ಒಳ ಪ್ರಕರಣದ (ii)ನೆ ನಿಯಮದಲ್ಲಿ ವಿಧಿಸಿರುವ ಮೇರೆಗೆ ಹೊರತು ಅಂಥಾ ಉದ್ಯೋಗದ ಆದಾಯಗಳನ್ನು ಬರಮಾಡಿಕೊಳ್ಳುವುದಕ್ಕೆ ತರುವ ಯಾವ ದಾವೆಯನ್ನಾದರೂ ಆಲೋಚನೆಗೆ ತೆಗೆದುಕೊಳ್ಳುವುದಕ್ಕೆ ಅಥವಾ ತೀರ್ಮಾನಿಸುವುದಕ್ಕೆ ಯಾವ ಸಿವಿಲ್ ಕೋರ್ಟಿಗೂ ಅಧಿಕಾರವಿರುವುದಿಲ್ಲ.

ನಿಯಮ.

ಆದರೆ, ಈ ರೆಗ್ಯುಲೇಷನಿಗನುಗುಣವಾಗಿ ಮಾಡಲ್ಪಟ್ಟ ಯಾವುದಾದರೂ ವ್ಯಾಜ್ಯದಲ್ಲಿ ಪ್ರತಿವಾದಿಯು, ಯಾವ ಉದ್ಯೋಗದ ವಿಷಯವಾಗಿ ಆ ವ್ಯಾಜ್ಯವು ತರಲ್ಪಟ್ಟಿದೆಯೋ ಆ ಉದ್ಯೋಗಕ್ಕೆ ಈ ರೆಗ್ಯುಲೇಷನಿನಲ್ಲಿ ವಿವರಿಸಿರುವ ಪ್ರಕಾರದ ಆದಾಯಗಳು ಸೇರುವುದಿಲ್ಲ ಎಂಬ ಕಾರಣದ ಮೇಲೆ ಆ ವ್ಯಾಜ್ಯವನ್ನು ಅಂಗೀಕರಿಸುವುದಕ್ಕೆ ಒಂದು ರೆವಿನ್ಯೂ ಕೋರ್ಟಿಗೆ ಅಧಿಕಾರವಿಲ್ಲವೆಂದು ಡೆಪ್ಯುಟಿ ಕಮಿಷನರ ಮುಂದೆ ವ್ಯವಹರಿಸಿದರೆ, ಮತ್ತು ಅಂಥಾ ವ್ಯಾಜ್ಯದಲ್ಲಿ ಕೊಟ್ಟ ಡಿಕ್ರಿಯ ಮೇಲೆ ಮಾಡಿದ ಅಪೀಲಿನಲ್ಲಿ, ಅಪೀಲ್ ಅಧಿಕಾರಿಯು ಅಂಥಾ ವ್ಯವಹಾರಕ್ಕೆ ವಿರೋಧವಾಗಿ ತೀರ್ಮಾನಿಸಿದರೆ ಆ ಪ್ರತಿವಾದಿಯು ಅಪೀಲ್ ಡಿಕ್ರಿಯ ತೇದಿಯಿಂದ ಆರು ತಿಂಗಳೊಳಗೆ ಆ ಅಪೀಲ್ ಡಿಕ್ರಿಯನ್ನು ಆ ಕಾರಣದ ಮೇಲೆ ಮತ್ತು ಆ ಕಾರಣದ ಮೇಲೆ ಮಾತ್ರವೇ ತಳ್ಳಿಪಡಿ ಮಾಡಬೇಕೆಂದು ಒಂದು ಸಿವಿಲ್ ಕೋರ್ಟಿನಲ್ಲಿ ವ್ಯಾಜ್ಯ ತರಬಹುದು.

17. (1) 4ನೆ ಅಥವಾ 5ನೆ ಪ್ರಕರಣಕ್ಕನುಗುಣವಾಗಿ ಡೆಪ್ಯುಟಿ ಕಮಿಷನರಿಂದ ಕೊಡಲ್ಪಟ್ಟ ಪ್ರತಿ ಹುಕುಮಿನ ಮೇಲೆ ಮತ್ತು 9ನೆ ಪ್ರಕರಣಕ್ಕನುಗುಣವಾಗಿ ತರಲ್ಪಟ್ಟ ಒಂದು ವ್ಯಾಜ್ಯದಲ್ಲಿ ಒಬ್ಬ ಡೆಪ್ಯುಟಿ ಕಮಿಷನರಿಂದ ಕೊಡಲ್ಪಟ್ಟ ಪ್ರತಿ ಡಿಕ್ರಿಯ ಅಥವಾ ಹುಕುಮಿನ ಮೇಲೆ ಒಂದು ತಿಂಗಳೊಳಗೆ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಿಗೆ ಅಪೀಲ್ಮಾಡಬಹುದು ಅಥವಾ ಅಂಥಾ ಹುಕುಮು ಅಥವಾ ಡಿಕ್ರಿಯು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಿಂದ ಕೊಡಲ್ಪಟ್ಟದ್ದರೆ ರೆವಿನ್ಯೂ ಮೇಲ್ವಿಚಾರಣೆಯ ಮುಖ್ಯಾಧಿಕಾರಿಗೆ ಮೂರು ತಿಂಗಳೊಳಗೆ ಅಪೀಲ್ಮಾಡಬಹುದು. ಅಪೀಲಿನಲ್ಲಿ ಸಂದರ್ಭಾನುಸಾರವಾಗಿ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರು ಅಥವಾ ರೆವಿನ್ಯೂ ಮೇಲ್ವಿಚಾರಣೆಯ ಮುಖ್ಯಾಧಿಕಾರಿಯು ಕೊಟ್ಟ ತೀರ್ಪು ಕಡೇದಾಗಿರತಕ್ಕದ್ದು.

ಡೆಪ್ಯುಟಿ ಕಮಿಷನರ ಹುಕುಮಿನ ಅಥವಾ ಡಿಕ್ರಿಯಮೇಲೆ ಅಪೀಲು.

ಆದರೆ ಪಟೇಲನ ಮತ್ತು ಶಾನುಭೋಗನ ಉದ್ಯೋಗಗಳ ವಿಷಯದಲ್ಲಿ, 9ನೆ ಪ್ರಕರಣಕ್ಕನುಗುಣವಾಗಿ ತರಲ್ಪಟ್ಟ ವ್ಯಾಜ್ಯಗಳಲ್ಲಿ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರು ಅಪೀಲಿನಲ್ಲಿ ಕೊಟ್ಟ ತೀರ್ಪಿನ ಮೇಲೆ ಮತ್ತು 5ನೆ ಪ್ರಕರಣಕ್ಕನುಗುಣವಾಗಿ ಒಬ್ಬ ಗ್ರಾಮ ಉದ್ಯೋಗಸ್ಥನನ್ನು ಕೆಲಸದಿಂದ ತಳ್ಳಿಬಿಟ್ಟ ಸಂದರ್ಭಗಳಲ್ಲಿ ಸಹ ಮೂರು ತಿಂಗಳೊಳಗಾಗಿ ರೆವಿನ್ಯೂ ಮೇಲ್ವಿಚಾರಣೆಯ ಮುಖ್ಯಾಧಿಕಾರಿಗೆ ಎರಡನೆಯ ಅಪೀಲನ್ನು ಮಾಡಬಹುದಾಗಿರುತ್ತದೆ.

ಕೆಲವು ಸಂದರ್ಭಗಳಲ್ಲಿ ಎರಡನೆಯ ಅಪೀಲು.

(2) 5ನೆ ಪ್ರಕರಣದ (2)ನೆ ಒಳ ಪ್ರಕರಣಕ್ಕೆ ಅನುಗುಣವಾಗಿ ಒಬ್ಬ ಅಮಲ್ದಾರನು ಅಥವಾ ಡೆಪ್ಯುಟಿ ಅಮಲ್ದಾರನು ಕೊಟ್ಟ ಪ್ರತಿ ಹುಕುಮಿನ ಮೇಲೆ ಮತ್ತು 5ನೆ ಪ್ರಕರಣದ (3)ನೆ ಒಳ ಪ್ರಕರಣಕ್ಕೆ ಅನುಗುಣವಾಗಿ ಒಬ್ಬ ಒಡೆಯನು ಕೊಟ್ಟ ಪ್ರತಿ ಹುಕುಮಿನ ಮೇಲೆ ಒಂದು ತಿಂಗಳೊಳಗೆ ಡೆಪ್ಯುಟಿ ಕಮಿಷನರಿಗೆ ಅಪೀಲ್ಮಾಡಬಹುದು; ಆತನ ತೀರ್ಪು ಕಡೆಯದಾಗಿರತಕ್ಕದ್ದು.

ಅಮಲ್ದಾರನ, ಡೆಪ್ಯುಟಿ ಅಮಲ್ದಾರನ ಅಥವಾ ಒಡೆಯನ ಹುಕುಮಿನ ಮೇಲೆ ಅಪೀಲು.

18. ಯಾವ ಆಫಿಸರಿಗೆ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರೆಂಬದಾಗಿ ಅಥವಾ ಡೆಪ್ಯುಟಿ ಕಮಿಷನರೆಂಬದಾಗಿ ಈ ರೆಗ್ಯುಲೇಷನಿಗೆ ಅನುಗುಣವಾಗಿ ಒಂದು ಅಪೀಲು ಮಾಡಲ್ಪಟ್ಟದೆಯೋ ಆ ಆಫಿಸರೇ ಇನ್ನೊಂದು ಕೆಲಸವನ್ನು ನೋಡುವಾಗ್ಗೆ ಈಗ ಅಪೀಲು ಮಾಡಲ್ಪಟ್ಟ ತೀರ್ಪನ್ನು ಕೊಟ್ಟದ್ದ ಪಕ್ಷದಲ್ಲಿ ಆತನು ಆ ಸಂಗತಿಯನ್ನು ಸಂದರ್ಭಾನುಸಾರವಾಗಿ ರೆವಿನ್ಯೂ ಮೇಲ್ವಿಚಾರಣೆಯ ಮುಖ್ಯಾಧಿಕಾರಿಗೆ ಅಥವಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಿಗೆ ತಿಳಿಸತಕ್ಕದ್ದು, ಮತ್ತು ಆ ಅಪೀಲು ಸದರಿ ರೆವಿನ್ಯೂ ಮೇಲ್ವಿಚಾರಣೆಯ ಮುಖ್ಯಾಧಿಕಾರಿಯಿಂದ ಅಥವಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಿಂದ ವ್ಯವಸ್ಥೆ ಮಾಡಲ್ಪಡತಕ್ಕದ್ದು, ಮತ್ತು ಅಪೀಲಿನಲ್ಲಿ ಕೊಟ್ಟ ಹುಕುಂ ಕಡೆಯದಾಗಿರತಕ್ಕದ್ದು.

ಮೊದಲ ಹುಕುಮನ್ನು ಕೊಟ್ಟ ಆಫಿಸರು ಅಪೀಲನ್ನು ವ್ಯವಸ್ಥೆ ಮಾಡುವ ರೀತಿ.

19. 1877ನೆ ಇಸವಿಯ ಇಂಡಿಯಾವಿನ ಅವಧಿಯ ನಿಬಂಧನೆ ಆಕ್ಟಿನ 5ನೆ ಮತ್ತು 12ನೆ ಪ್ರಕರಣಗಳ ನಿಯಮಗಳು ವ್ಯಾಜ್ಯಗಳಿಗೂ, ಅಪೀಲುಗಳಿಗೂ, ಬಿನ್ನಹಗಳಿಗೂ ಲಗಾವಾಗುವಷ್ಟರ ಮಟ್ಟಿಗೆ ಅವಶ್ಯಕವಾಗಿರುವ ತಿದ್ದುಪಾಟುಗಳೊಡನೆ ಈ ರೆಗ್ಯುಲೇಷನಿಗೆ ಅನುಗುಣವಾಗಿ ದಾಖಲ್ಮಾಡಲ್ಪಟ್ಟ, ಮಾಡಲ್ಪಟ್ಟ, ಅಥವಾ ಕೊಡಲ್ಪಟ್ಟ ವ್ಯಾಜ್ಯಗಳಿಗೂ, ಅಪೀಲುಗಳಿಗೂ, ಡಿಕ್ರಿಗಳ ಅಥವಾ ಹುಕುಮುಗಳ ಅಮಲ್ಜಾರಿಯ ಬಗ್ಗೆ ಕೊಟ್ಟ ಬಿನ್ನಹಗಳಿಗೂ ಲಗಾವಾಗತಕ್ಕದ್ದು.

ಅವಧಿಯ ನಿಬಂಧನೆಯ ಆಕ್ಟಿನ ಕೆಲ ನಿಯಮಗಳು ಲಗಾವಾಗುತ್ತವೆ.

20. ಗ್ರಾಮ ಉದ್ಯೋಗಸ್ಥನನ್ನು ಶಿಕ್ಷಿಸುವುದರ ವಿಷಯದಲ್ಲಿ ಈ ರೆಗ್ಯುಲೇಷನಿನ ಮೇಲೆ ಡೆಪ್ಯುಟಿ ಕಮಿಷನರಿಗೆ ಕೊಡಲ್ಪಟ್ಟ ಅಧಿಕಾರಗಳು, ವಿವರಿಸಲ್ಪಟ್ಟ ಯಾವುದಾದರೂ ಸ್ಥಳೀಯ ಪ್ರದೇಶದಲ್ಲಿ ಅಲ್ಲಿನ ಸಮಸ್ತ ಅಥವಾ ಯಾರಾದರೂ ಗ್ರಾಮ ಕಾವಲುಗಾರರ ಅಥವಾ ಪೊಲೀಸು ಆಫಿಸರುಗಳ ವಿಷಯವಾಗಿ ಪೊಲೀಸು ಸೂಪರಿಂಟೆಂಡೆಂಟಿಂದ ಅಥವಾ ಅಸಿಸ್ಟೆಂಟ್ ಸೂಪರಿಂಟೆಂಡೆಂಟಿಂದ ನಡೆಸಲ್ಪಡತಕ್ಕದ್ದೆಂದು ಸರ್ಕಾರದವರು ಪ್ರಕಟಿಸಬಹುದು. ಈ ಪ್ರಕರಣಕ್ಕೆ ಅನುಗುಣವಾಗಿ ಮಾಡಿದ ಪ್ರಕಟನೆಯ ಮೇರೆ ಒಬ್ಬ ಗ್ರಾಮ ಕಾವಲುಗಾರನಿಗೆ ಅಥವಾ ಪೊಲೀಸು ಆಫಿಸರಿಗೆ ಅಪರಾಧ ವಿಧಿಸಿ ಅಥವಾ ಅವನನ್ನು ಕೆಲಸದಿಂದ ನಿಲ್ಲಿಸಿ, ಕೆಲಸದಿಂದ ತಳ್ಳಿಬಿಟ್ಟು, ಅಥವಾ ಕೆಲಸದಿಂದ ತೆಗೆದುಹಾಕಿ ಪೊಲೀಸು ಸೂಪರಿಂಟೆಂಡೆಂಟು ಅಥವಾ ಅಸಿಸ್ಟೆಂಟು ಸೂಪರಿಂಟೆಂಡೆಂಟು ಕೊಟ್ಟ ಪ್ರತಿ ಹುಕುಮಿನ ಮೇಲೆ ಒಂದು ತಿಂಗಳೊಳಗೆ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಿಗೆ ಅಪೀಲ್ಮಾಡಬಹುದು; ಆತನ ತೀರ್ಪು ಕಡೆಯದಾಗಿರತಕ್ಕದ್ದು.

ಗ್ರಾಮ ಕಾವಲುಗಾರನನ್ನು ಪೊಲೀಸು ಅಧಿಕಾರಿಗಳ ಕೈಕೆಳಗೆ ಇಡಲು ಸರ್ಕಾರದವರ ಅಧಿಕಾರ.

21. (1) ಸರ್ಕಾರದವರು, ಸರ್ಕಾರಿ ಗೆಜೆಟನಲ್ಲಿ ಪ್ರಕಟನೆಯ ಮೂಲಕ ಈ ಕೆಳಗಿನ ವಿಷಯಗಳನ್ನು ಕುರಿತು ಈ ರೆಗ್ಯುಲೇಷನಿಗೆ ಅನುಗುಣವಾದ ನಿಬಂಧನೆಗಳನ್ನು ಮಾಡಬಹುದು :—

ಸರ್ಕಾರದವರು ಕೆಲವು ಪ್ರಮೇಯಗಳಲ್ಲಿ ನಿಬಂಧನೆಗಳನ್ನು ಮಾಡಬಹುದು.

(i) ಗ್ರಾಮಗಳನ್ನು ವಿಭಾಗಿಸೋಣ, ಗುಂಪು ಕೂಡಿಸೋಣ, ಮತ್ತು ಒಟ್ಟಾಗಿ ಸೇರಿಸೋಣ;

(ii) 4ನೆ ಮತ್ತು 5ನೆ ಪ್ರಕರಣಗಳಿಗೆ ಅನುಗುಣವಾಗಿ ವಿಚಾರಣೆಗಳನ್ನು ನಡೆಸೋಣ ಮತ್ತು 17ನೆ ಪ್ರಕರಣಕ್ಕೆ ಅನುಗುಣವಾಗಿ ಅಪೀಲುಗಳನ್ನು ಕೇಳೋಣ;

(iii) ಗ್ರಾಮ ಉದ್ಯೋಗಗಳನ್ನು ನೋಡುವವರಿಗೆ ಇರಬೇಕಾದ (ಏನಾದರೂ ಇದ್ದರೆ) ವಿದ್ಯಾ ಸಂಬಂಧವಾದ ಯೋಗ್ಯತೆಗಳು;

(iv) ವ್ಯಾಜ್ಯಗಳನ್ನು ಮತ್ತು ವ್ಯಾಜ್ಯಗಳಲ್ಲಿ ಕೊಡಲ್ಪಟ್ಟ ಡಿಕ್ರಿಗಳ ಅಥವಾ ಹುಕುಂಗಳ ಮೇಲಿನ ಅಪೀಲುಗಳನ್ನು ವ್ಯವಸ್ಥೆ ಮಾಡುವುದರಲ್ಲಿ ಅನುಸರಿಸತಕ್ಕ ಕ್ರಮ, ಮತ್ತು ಆ ಸಂದರ್ಭಗಳಲ್ಲಿ ಇಡಬೇಕಾದ ರಿಜಿಸ್ಟರುಗಳು ;

(v) ವ್ಯಾಜ್ಯಗಳಲ್ಲಿ ಕೊಡಲ್ಪಟ್ಟ ಡಿಕ್ರಿಗಳ ಅಥವಾ ಹುಕುಮುಗಳ ಅಮಲ್ದಾರಿ ; ಮತ್ತು ಖರ್ಚುಗಳನ್ನು ಹೊರಿಸೋಣ;

(vi) ಗ್ರಾಮ ಉದ್ಯೋಗಗಳನ್ನು ನೋಡುವವರಿಗೆ ನೇಮಕ ಮಾಡಲ್ಪಡತಕ್ಕ ಆದಾಯಗಳು ಮತ್ತು ಅವುಗಳನ್ನು ಕಟ್ಟತಕ್ಕ ಮತ್ತು ಪಾವತಿ ಮಾಡತಕ್ಕ ವಿಧಾನ;

(vii) ಗ್ರಾಮ ಉದ್ಯೋಗಗಳನ್ನು ನೋಡುವವರ ಕೆಲಸಗಳು, ಮತ್ತು ಅವರು ಇಡತಕ್ಕ ಲೆಕ್ಕಗಳು ಮತ್ತು ರಿಜಿಸ್ಟರುಗಳ ವಿವರ ಮತ್ತು ನಮೂನೆಗಳು ;

(viii) ಗ್ರಾಮ ಉದ್ಯೋಗಗಳನ್ನು ನೋಡುವವರು ಇಟ್ಟ ಲೆಕ್ಕಗಳ ಮತ್ತು ಇತರ ಕಾಗದ ಪತ್ರಗಳ ಬದರಿಕೆ, ಅವುಗಳನ್ನು ತಂದು ತೋರಿಸೋಣ ಮತ್ತು ಕಳುಹಿಸೋಣ ;

(ix) ಗ್ರಾಮ ಉದ್ಯೋಗಸ್ಥರ ಯೋಗ್ಯತೆಯನ್ನು ಅಭಿವೃದ್ಧಿಪಡಿಸಬಹುದಾದ ಅಥವಾ ಈ ರೆಗ್ಯುಲೇಷನಿನ ಕೆಲಸಗಳನ್ನು ನೆರವೇರಿಸುವುದಕ್ಕೆ ಸಂಬಂಧಪಟ್ಟ ಯಾವುದಾದರೂ ಇತರ ವಿಷಯಗಳು.

ಅಂಥಾ ನಿಬಂಧನೆಗಳು ಮಾಡಲ್ಪಡುವವರೆಗೂ ಈಗಿನ ನಿಬಂಧನೆಗಳು ಉಪಯೋಗದಲ್ಲಿರತಕ್ಕದ್ದು.

(2) ಹಿಂದಿನ ಒಳ ಪ್ರಕರಣದಲ್ಲಿ ಕಂಡ ಯಾವುದಾದರೂ ವಿಷಯಗಳನ್ನು ಕುರಿತು ಸರ್ಕಾರದವರು ನಿಬಂಧನೆಗಳನ್ನು ಮಾಡುವವರೆಗೆ ಈ ರೆಗ್ಯುಲೇಷನು ಪ್ರಾರಂಭವಾಗುವುದಕ್ಕೆ ಅವ್ಯವಹಿತವಾಗಿ ಮೊದಲು ಆ ವಿಷಯವನ್ನು ಕುರಿತು ಉಪಯೋಗದಲ್ಲಿರುವ (ಏನಾದರೂ ಇದ್ದರೆ) ನಿಬಂಧನೆಗಳು, ಅವು ಈ ರೆಗ್ಯುಲೇಷನಿಗೆ ಅನುಗುಣವಾಗಿರುವಷ್ಟರ ಮಟ್ಟಿಗೆ ಉಪಯೋಗದಲ್ಲಿರುವಂತೆಯೂ ಮತ್ತು ಹಿಂದಿನ ಒಳ ಪ್ರಕರಣದ ಮೇರೆ ಮಾಡಲ್ಪಟ್ಟಿರುವಂತೆಯೂ ಭಾವಿಸಲ್ಪಡತಕ್ಕದ್ದು.

ಉದ್ದೇಶಗಳ ಮತ್ತು ಕಾರಣಗಳ ವಿವರಣೆ.

ಮೈಸೂರು ಸೀಮೆಯ ಗ್ರಾಮ ಉದ್ಯೋಗಗಳನ್ನು ಕುರಿತು ಈಗಿರುವ ವಿರಳವಾದ ಮತ್ತು ಪ್ರತ್ಯೇಕ ಪ್ರತ್ಯೇಕವಾದ ನಿಬಂಧನೆಗಳಿಗೆ ಮತ್ತು ಹುಕುಮುಗಳಿಗೆ ಬದಲಾಗಿ ಕ್ರಮವಾದ ವ್ಯವಹಾರ ವಿಧಿಯನ್ನು ಏರ್ಪಡಿಸುವುದರ ಅವಶ್ಯಕತೆಯು ಕೆಲವು ಕಾಲದಿಂದ ಸರ್ಕಾರದವರ ಆಲೋಚನೆಯಲ್ಲಿತ್ತು. ಈ ನಿಬಂಧನೆಗಳ ಮತ್ತು ಹುಕುಮುಗಳ ಪೈಕಿ ಕೆಲವು ಎಂದರೆ ಪಟೇಲ ಶಾನುಭೋಗರ ಮತ್ತು ಸಂಣ ಗ್ರಾಮ ನೌಕರರ ವೇತನವನ್ನು ಕುರಿತ ನಿಬಂಧನೆಗಳು * ವ್ಯವಹಾರ ವಿಧಿಯಂತೆ ಪ್ರಬಲವಾಗಿವೆ ; ಇತರವಾದುವುಗಳು ಕ್ರಮ ವ್ಯಾಜ್ಯಗಳಲ್ಲಿ ರೆವಿನ್ಯೂ ಆಫೀಸರುಗಳ ತೀರ್ಪುಗಳ ಮೇಲಿನ ಅಪೀಲಿನಲ್ಲಿ ಸರ್ಕಾರದವರು ಮಾಡಿದ ಹುಕುಮುಗಳಾಗಿವೆ ; ಮತ್ತು ಬಹಳವಾದುವು ವಿವಿಧ ವಿಷಯಗಳಲ್ಲಿ ಮಾಡಲ್ಪಟ್ಟ ಆಡಳಿತಕ್ಕೆ ಸಂಬಂಧಪಟ್ಟ ಹುಕುಮುಗಳು ಮಾತ್ರವಾಗಿರುವುದರಿಂದ ಕ್ರಮ ವ್ಯಾಜ್ಯಗಳಲ್ಲಿ ಕೆಳಗಿನ ಆಫೀಸರುಗಳಿಂದ ಅಲಕ್ಷ್ಯಮಾಡಲ್ಪಡುವುದಕ್ಕೆ ಗುರಿಯಾಗತಕ್ಕವಾಗಿವೆ. ಮುಖ್ಯವಾಗಿ ಗ್ರಾಮ ಉದ್ಯೋಗಗಳಿಗೆ ಉತ್ತರಾಧಿಕಾರಿಯಾಗೋಣದರ ವಿಷಯದಲ್ಲಿ ತೀರ್ಪುಗಳು ಪ್ರಾಯಃ ಏಕರೀತಿಯಾಗಿ ಅಥವಾ ನಿಶ್ಚಯವಾಗಿ ಇಲ್ಲ ; ಪರಸ್ಪರ ವಿರುದ್ಧವಾದ ಇಂಥಾ ತೀರ್ಮಾನಗಳಿಂದ ವ್ಯವಹಾರ ಹೆಚ್ಚುವುದಕ್ಕೆ ಪ್ರೋತ್ಸಾಹವಾಗಿದೆ. ಇದೂ ಅಲ್ಲದೆ ರೆವಿನ್ಯೂ ಆಡಳಿತವು ಸರಿಯಾಗಿ ನಡೆಯುವುದಕ್ಕೆ ಗ್ರಾಮ ಉದ್ಯೋಗಸ್ಥರ ಯೋಗ್ಯತೆಯು ಬಹಳ ಮಟ್ಟಿಗೆ ಕಾರಣವಾಗಿದೆ ; ಈಗ ಹದಿನೈದು ವರ್ಷಗಳಿಂದ ರೆವಿನ್ಯೂ ಆಡಳಿತವನ್ನು ಕ್ರಮಪಡಿಸಿದ ಲ್ಯಾಂಡ್ ರೆವಿನ್ಯೂ ಕೋಡು ಉಪಯೋಗದಲ್ಲಿ ಬಂದನಂತರ ಗ್ರಾಮ ಉದ್ಯೋಗಗಳನ್ನು ಕ್ರಮಪಡಿಸಿ ಸರಿಯಾದ ಆಧಾರದಮೇಲೆ ಇಡುವ ಒಂದು ವ್ಯವಹಾರ ವಿಧಿಯನ್ನು ಉಪಯೋಗದಲ್ಲಿ ತರುವುದು ಸಹಜವಾಗಿದೆ.

* ಇಂಡಿಯಾ ಸರ್ಕಾರದವರ ಅಪ್ಪಣೆಯ ಮೇರೆ 1877ನೆ ಇಸವಿಯ ಅಕ್ಟೋಬರು 27ನೆ ತೇದಿಯ 219ನೆ ನಂಬರು ಮತ್ತು 1878ನೆ ಇಸವಿಯ ಆಗಸ್ಟು 1ನೆ ತೇದಿಯ 123ನೆ ನಂಬರು ಚೀಫ್ ಕಮಿಷನರ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟಿವೆ.

ಆದುದರಿಂದ ಮೇಲ್ಕಂಡ ಬಿಲ್ಲಿಗೆ ಸಂದರ್ಭವು ಈರೀತಿಯಾಗಿದೆ. ಇದು 1895ನೆ ಇಸವಿಯ 3ನೆದಾದ ಮದರಾಸು ವಂಶ ಪರಂಪರೆಯ ಗ್ರಾಮ ಉದ್ಯೋಗಗಳ ಆಕ್ಟನ್ನು ಬಹಳಮಟ್ಟಿಗೆ (ಮುಖ್ಯವಾದ ಬದಲಾವಣೆಗಳೊಡನೆ) ಅನುಸರಿಸಿ ಹೋಗುತ್ತದೆ. ಚೆನ್ನಾಗಿ ಪರೀಕ್ಷೆಮಾಡಿ ನೋಡಿದುದರಲ್ಲಿ ಮೇಲ್ಕಂಡ ಆಕ್ಟಿನ ನಿಯಮಗಳು 1877ನೆ ಇಸವಿಯ 3ನೆದಾದ ಬೊಂಬಾಯಿ ವಂಶ ಪರಂಪರೆಯ ಉದ್ಯೋಗಗಳ ಆಕ್ಟಿನ ನಿಯಮಗಳಿಗಿಂತ ಸ್ಥಳೀಯ ಅವಶ್ಯಕತೆಗಳಿಗೆ ವಿಶೇಷವಾಗಿ ತಕ್ಕವುಗಳಾಗಿವೆ.

ಈಗ ಉದ್ದೇಶಿಸಲ್ಪಟ್ಟಿರುವ ರೆಗ್ಯುಲೇಷನಿನ ಮುಖ್ಯವಾದ ನಿಯಮಗಳನ್ನು ಸಂಕ್ಷೇಪವಾಗಿ ವಿವರಿಸಲಾಗುತ್ತದೆ.

2ನೆ ಪ್ರಕರಣದಲ್ಲಿ ಅರ್ಥವಿವರಣೆಗಳನ್ನು ಮಾಡಿದೆ.

ಇಲ್ಲಿ ಕೊಟ್ಟಿರುವ "ಗ್ರಾಮ" ವೆಂಬ ಮಾತಿನ ಅರ್ಥವಿವರಣೆಯಿಂದ ಸಾಮಾನ್ಯವಾಗಿ ಎರಡು ಅಥವಾ ಹೆಚ್ಚು ಗ್ರಾಮಗಳೆಂದು ಕರೆಯಲ್ಪಟ್ಟಿರುವವುಗಳನ್ನು ಈ ರೆಗ್ಯುಲೇಷನಿನ ಉದ್ದೇಶಗಳಿಗಾಗಿ ಒಂದೇ ಗ್ರಾಮವಾಗಿರತಕ್ಕದ್ದೆಂದು ಪ್ರಕಟಿಸಲು ಸಾಧ್ಯವಾಗುವುದು.

ಇಲ್ಲಿ ವಿವರಿಸಿರುವಂತೆ ಒಂದು "ಗ್ರಾಮ ಉದ್ಯೋಗದ" ಲಕ್ಷಣಗಳೇನೆಂದರೆ—

(i) "ಆದಾಯಗಳನ್ನು" (ಅದೇ ಪ್ರಕರಣದಲ್ಲಿ ವಿಸ್ತಾರವಾಗಿ ವಿವರಿಸಿದೆ) ನೇಮಕಮಾಡೋಣ ; ಮತ್ತು (ii) ಗ್ರಾಮ ಆಡಳಿತಕ್ಕೆ ಸಂಬಂಧಪಟ್ಟ ಗ್ರಾಮ ಆಡಳಿತದ ಯಾವುದಾದರೂ ಶಾಖೆಗೆ ಸಂಬಂಧಪಟ್ಟ ಕೆಲಸಗಳನ್ನು, ಈ ಕೆಲಸಗಳು ನಿಜವಾಗಿ ಕೇಳಲ್ಪಡಲಿ ಅಥವಾ ಇಲ್ಲದೆ ಇರಲಿ, ಗ್ರಾಮ ಉದ್ಯೋಗಕ್ಕೆ ಸೇರಿಸೋಣ.

ಈ ನಿಯಮಗಳು ಸರ್ಕಾರಕ್ಕೆ, ಒಂದು ಕಡೆಯಲ್ಲಿ, ಈ ರೆಗ್ಯುಲೇಷನಿನ ವ್ಯಾಪಾರದಿಂದ ಯಾವ ಉದ್ಯೋಗವನ್ನಾದರೂ ಹೊರಗೆ ಹಾಕುವುದಕ್ಕೂ, ಮತ್ತೊಂದು ಕಡೆಯಲ್ಲಿ ಯಾವುದಾದರೂ ಒಂದು ಉದ್ಯೋಗವು ಈ ಅರ್ಥ ವಿವರಣೆಗೆ ಒಳಪಡುತ್ತದೆಯೋ ಇಲ್ಲವೋ ಎಂದು ನಿಶ್ಚಯಿಸುವುದಕ್ಕೂ ಅಧಿಕಾರ ಕೊಡುತ್ತವೆ.

"ಡೆಪ್ಯುಟಿ ಕಮಿಷನರಿ" ಗೂ (ಈ ಮಾತುಗಳು ಕೆಲವು ಸಂದರ್ಭಗಳಲ್ಲಿ ಒಬ್ಬ ಡಿವಿಜನ್ ಅಸಿಸ್ಟೆಂಟ್ ಕಮಿಷನರಿಗೆ ಅನ್ವಯಿಸತಕ್ಕವುಗಳಾಗಿವೆ) "ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರಿ" ಗೂ (ಎಂದರೆ ಡಿಸ್ಟ್ರಿಕ್ಟಿನ ಮುಖ್ಯವಾದ ರೆವಿನ್ಯೂ ಆಫಿಸರು) ಕಲ್ಪಿಸಿರುವ ಭೇದವು ಅನುಕೂಲವಾದುದಾಗಿದೆ. ಅದನ್ನು 1891ನೆ ಇಸವಿಯ ಮದರಾಸು ಜನರಲ್ ಕ್ಲಾಸೆಸ್ (ಸಾಮಾನ್ಯ ವಾಕ್ಯಗಳ) ಆಕ್ಟಿನಿಂದ ತೆಗೆದುಕೊಂಡಿದೆ.

3ನೆ ಪ್ರಕರಣವು, ಆದಾಯಗಳು ಪರಾಧೀನ ಮಾಡಲ್ಪಡುವುದಕ್ಕೆ ಆಗದೇ ಇರುವುದನ್ನು ಕುರಿತ ಈಗಿನ ವ್ಯವಹಾರ ವಿಧಿಯನ್ನೂ ಮತ್ತು ಅವು ಕೋರ್ಟುಗಳಿಂದ ಜಪ್ತಿಗೆ ಮತ್ತು ಹರಾಜಿಗೆ ಗುರಿಯಾಗದೆ ಇರೋಣವನ್ನೂ ಅಡಗಿಸಿಕೊಂಡಿದೆ.

4ನೆ ಪ್ರಕರಣವು ಗ್ರಾಮಗಳನ್ನು ಗುಂಪು ಮಾಡಿಸುವುದಕ್ಕೂ, ಒಟ್ಟಾಗಿ ಸೇರಿಸುವುದಕ್ಕೂ, ಅಥವಾ ವಿಭಾಗಿಸುವುದಕ್ಕೂ ಮತ್ತು ಅವಶ್ಯವಾಗಿರಬಹುದಾದಂತೆ ಒಂದು ಗ್ರಾಮದಲ್ಲಿರುವ ಉದ್ಯೋಗಗಳ ಸಂಖ್ಯೆಯನ್ನು ಕಡಮೆ ಮಾಡುವುದಕ್ಕೂ ಸರ್ಕಾರಕ್ಕೆ ಅಧಿಕಾರ ಕೊಡುತ್ತದೆ.

5ನೆ ಪ್ರಕರಣವು ಬರೆದಿಡಬೇಕಾದ ಕಾರಣಗಳಿಗೋಸ್ಕರ ಗ್ರಾಮ ಉದ್ಯೋಗಸ್ಥರನ್ನು ಶಿಕ್ಷಿಸುವುದಕ್ಕೆ ಡೆಪ್ಯುಟಿ ಕಮಿಷನರುಗಳ, ಅಮಲ್ದಾರರ, ಮತ್ತು ಇನಾಂದಾರರ ಅಧಿಕಾರಗಳನ್ನು ವಿವರಿಸುತ್ತದೆ. ಈಗಿನ ಪದ್ಧತಿಗನುಸಾರವಾಗಿ ಪರಾಧೀನ ಮಾಡಲ್ಪಟ್ಟ ಗ್ರಾಮಗಳ ಉದ್ಯೋಗಸ್ಥರನ್ನು ಶಿಕ್ಷಿಸುವುದಕ್ಕೆ ಡೆಪ್ಯುಟಿ ಕಮಿಷನರಿಗೆ ಇರುವ ಅಧಿಕಾರಗಳನ್ನು ಸರ್ಕಾರಿ ಗ್ರಾಮಗಳ ಉದ್ಯೋಗಸ್ಥರ ವಿಷಯದಲ್ಲಿ ಇರುವ ಅಧಿಕಾರಗಳಿಗೆ ಸಮವಾಗಿ ಮಾಡಿದೆ. ಮದರಾಸಿನಲ್ಲಿ ಸರ್ಕಾರಿ ಗ್ರಾಮಗಳ ಉದ್ಯೋಗಸ್ಥರ ವಿಷಯವನ್ನು ಕುರಿತ ಅಧಿಕಾರಗಳು ನಿರ್ಬಂಧಕ್ಕೆ ಒಳಪಟ್ಟಿವೆ.

6ನೆ ಮತ್ತು 7ನೆ ಪ್ರಕರಣಗಳು ಐದು ಮುಖ್ಯವಾದ ಗ್ರಾಮ ಉದ್ಯೋಗಗಳಿಗೆ—ಎಂದರೆ ಪಟೇಲ, ಶಾನುಭೋಗ, ನೀರುಗಂಟಿ, ತೋಟಿ, ತಳವಾರ—ನೇಮಕಗಳನ್ನು ಮಾಡುವುದರಲ್ಲಿ ಅನುಸರಿಸಬೇಕಾದ ನಿಬಂಧನೆಗಳನ್ನು ತಿಳಿಸುತ್ತವೆ. ಈ ನಿಬಂಧನೆಗಳು, ಇತರ ವಿಷಯಗಳಲ್ಲದೆ, ಕೆಲವು ಸಂದರ್ಭಗಳಲ್ಲಿ ಗ್ರಾಮ ಉದ್ಯೋಗಗಳ ಹಿಡುವಳಿದಾರರಾಗಿ ರಿಜಿಸ್ಟರ್ ಮಾಡಲ್ಪಡುವುದಕ್ಕೆ ಹೆಂಗಸರ ಬಾಧ್ಯತೆಯನ್ನು ತೆಗೆದುಹಾಕುತ್ತವೆ ಆದರೆ ಹೆಂಗಸರ ಮೂಲಕ ಉತ್ತರಾಧಿಕಾರಿಯಾಗೋಣದರ ಹಕ್ಕುಗಳ ಗೊಡವೆಗೆ ಹೋಗುವಂತೆ ಅಲ್ಲ, ಮತ್ತು ಇಲ್ಲಿ ವಿಧಿಸಿರುವಂತೆ ಉತ್ತರಾಧಿಕಾರಿಯಾಗೋಣವು ಒಬ್ಬನೇ ಬಾಧ್ಯಸ್ಥನಿಗೆ ಬರಬೇಕೆಂಬುವ ನಿಬಂಧನೆಯು ಸರದಿಮೇರೆ ಕೆಲಸಗಳನ್ನು ಮಾಡೋಣವನ್ನು ತಪ್ಪಿಸುತ್ತದೆ: ಈ ಸರದಿಮೇರೆ ಕೆಲಸಮಾಡುವ ಪದ್ಧತಿಯಿಂದ ಅನೇಕ ಕಷ್ಟಗಳು ಉಂಟಾಗುತ್ತವೆ. ಅದು ಅದಕ್ಕೆ ಸಂಬಂಧಪಟ್ಟ ಜನಗಳಿಗೆ ತೃಪ್ತಿಕರವಾಗಿಯೂ ಇಲ್ಲ, ಆದರಿಂದ ಕೆಲಸವೂ ಸರಿಯಾಗಿ ನಡೆಯುವುದಿಲ್ಲ, ಇದೂ ಅಲ್ಲದೆ ಅದರಿಂದ ಪಕ್ಷ ಭೇದವೂ, ವ್ಯಾಜ್ಯವೂ, ಪಿತೂರಿಯೂ ಹುಟ್ಟುವುದಲ್ಲದೆ ಜವಾಬ್ದಾರಿಯ ಬಗೆಯೂ ತಪ್ಪುವುದು.

7ನೆ ಪ್ರಕರಣದಮೇರೆ ಇನಾಂ ಗ್ರಾಮಗಳ ಒಡೆಯರಿಂದ ಮಾಡಲ್ಪಟ್ಟ ಪಟೇಲರ ಮತ್ತು ಶಾನುಭೋಗರ ಉದ್ಯೋಗಗಳಿಗೆ ನೇಮಕಗಳಿಗೆ ಈಗಿನಂತೆ ಮುಂದೆ ಡೆಪ್ಯುಟಿ ಕಮಿಷನರ ಮಂಜೂರಾತಿಯು ಅವಶ್ಯವಾಗುವುದಿಲ್ಲ.

8ನೆ ಪ್ರಕರಣವು ಮೇಲ್ಕಂಡ ಐದು ಗ್ರಾಮ ಉದ್ಯೋಗಗಳಲ್ಲದ ಇತರ ಉದ್ಯೋಗಗಳು ಎಲ್ಲಿಯಾದರೂ ಇದ್ದು ಅವು ಅಂಗೀಕರಿಸಲ್ಪಟ್ಟಿರುವ ಸಂದರ್ಭದಲ್ಲಿ ಅಂಥಾವುಗಳಿಗೆ ಉತ್ತರಾಧಿಕಾರಿಯಾಗೋಣವನ್ನು ವಿವರಿಸುತ್ತದೆ. ಆದರೆ ಹಿಂದಿನ ಬಾರಾಬಲೂತಿ ಕ್ರಮದಲ್ಲಿ ಸೇರಿರುವ ಮೇಲ್ಕಂಡ ಇತರ ಉದ್ಯೋಗಗಳಿಗೆ ಸರ್ಕಾರದ ಸಂಬಂಧವು ಕಾರ್ಯತಃ ನಿಜವಾಗಿ ನಿಂತುಹೋಗಿದೆಯೆಂದು ಹೇಳಬಹುದು.

9ರಿಂದ 15ರ ವರೆಗಿನ ಮತ್ತು 17ರಿಂದ 19ರ ವರೆಗಿನ ಪ್ರಕರಣಗಳು, ವ್ಯಾಜ್ಯಗಳು, ನಡವಳಿಕೆಯ ಕ್ರಮ, ಅಪೀಲುಗಳು, ಅವಧಿಯ ನಿಬಂಧನೆ, ಮತ್ತು ಇಂಥಾ ಇತರ ವಿಷಯಗಳನ್ನು ಕುರಿತು ವಾಡಿಕೆಯಾದ ನಿಯಮಗಳನ್ನು ಅಡಗಿಸಿಕೊಂಡಿವೆ.

16ನೆ ಪ್ರಕರಣವು ಆದಾಯಗಳ ವಿಷಯದಲ್ಲಿ ಗ್ರಾಮ ಉದ್ಯೋಗಗಳಿಗೆ ಉತ್ತರಾಧಿಕಾರಿಯಾಗುವುದಕ್ಕೆ ಹಕ್ಕುಗಳ ವಿಷಯದಲ್ಲಿ ಸಿವಿಲ್ ಕೋರ್ಟುಗಳ ನ್ಯಾಯಾಧಿಕಾರವನ್ನು ಆತಂಕಪಡಿಸುತ್ತದೆ.

20ನೆ ಪ್ರಕರಣವು ಈಗ ಸರ್ಕಾರದ ಮುಂದೆ ಇರುವ ಪೊಲೀಸು ರೆಗ್ಯುಲೇಷನು ನಿರ್ಣಯಿಸಲ್ಪಟ್ಟಾಗ ಬಹುಶಃ ಅನವಶ್ಯವಾಗುವುದು.

21ನೆ ಪ್ರಕರಣವು ಸರ್ಕಾರದವರು ಯಾವುವುಗಳನ್ನು ಕುರಿತು ನಿಬಂಧನೆಗಳನ್ನು ಮಾಡಬಹುದೋ ಆ ವಿಷಯಗಳನ್ನು ವಿವರಿಸುತ್ತದೆ; ಮತ್ತು ನಿಬಂಧನೆಗಳು ಹಾಗೆ ಮಾಡಲ್ಪಡುವ ವರೆಗೆ ಈಗಿನ ನಿಬಂಧನೆಗಳು ಉಪಯೋಗದಲ್ಲಿ ಇರುತ್ತಿರತಕ್ಕದ್ದೆಂದು ತಿಳಿಸುತ್ತದೆ.

(2) ಮೈಸೂರು ಪೊಲೀಸು ಬಿಲ್ಲು.

ಅನುಕ್ರಮಣಿಕೆ.

1ನೆ ಅಧ್ಯಾಯ.—ಅವತರಣಿಕೆ.

ಪ್ರಕರಣ.

1. (1) ಚಿಕ್ಕ ಹೆಸರು,
(2) ವ್ಯಾಪನೆ.
(3) ಪ್ರಾರಂಭ.

2. ಚಟ್ಟಗಳ ತಳ್ಳುಪಡಿ,

3. ಗ್ರಾಮ ಪೊಲೀಸಿಗೆ ನಿಬಂಧನೆಗಳು.

4. ಅರ್ಥವಿವರಣೆಗಳು.
(a) "ಇನ್ಸ್‌ಪೆಕ್ಟರು ಜನರಲು," "ಡೆಪ್ಯುಟಿ ಇನ್ಸ್‌ಪೆಕ್ಟರು ಜನರಲು," "ಅಸಿಸ್ಟೆಂಟು ಇನ್ಸ್‌ಪೆಕ್ಟರು ಜನರಲು," "ಡಿಸ್ಟ್ರಿಕ್ಟು ಸೂಪರಿಂಟೆಂಡೆಂಟು," "ಅಸಿಸ್ಟೆಂಟು ಸೂಪರಿಂಟೆಂಡೆಂಟು."
(b) "ಡಿಸ್ಟ್ರಿಕ್ಟು ಸೂಪರಿಂಟೆಂಡೆಂಟು."
(c) "ಇನ್ಸ್‌ಪೆಕ್ಟರು."
(d) "ಪೊಲೀಸು ಆಫೀಸರು."
(e) "ಕಾನ್ಸ್‌ಟೇಬಲು."
(f) "ಡಿಸ್ಟ್ರಿಕ್ಟು."
(g) "ತಾಲ್ಲೂಕು" ಮತ್ತು "ಸಬ್ ತಾಲ್ಲೂಕು."
(h) "ಬೀದಿ."
(i) "ಸಾಧಾರಣ ಜೂಜು ಆಡುವ ಮನೆ."
(j) "ದನಕರ."
(k) ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡಿನಲ್ಲಿ ಅರ್ಥ ವಿವರಣೆಯಾಗಿರುವ ಮಾತುಗಳು ಮತ್ತು ಉಕ್ತಿಗಳು.

2ನೆ ಅಧ್ಯಾಯ.—ಕ್ರಮ ಪೊಲೀಸಿನ ಸಂಸ್ಥಾಪನೆ.

5. ಪೊಲೀಸು ಸೇನೆಯ ನಿರ್ಮಾಣ.

6. (1) ಪೊಲೀಸು ಇನ್ಸ್‌ಪೆಕ್ಟರು ಜನರಲಿನ ನೇಮಕ.
(2) ಮತ್ತು ಡೆಪ್ಯುಟಿ ಅಥವಾ ಅಸಿಸ್ಟೆಂಟು ಇನ್ಸ್‌ಪೆಕ್ಟರು ಜನರಲಿನ ನೇಮಕ.
(3) ಅವರ ಚಾಕರಿಯನ್ನು ನಿಲ್ಲಿಸೋಣ ಅಥವಾ ಅವರನ್ನು ಚಾಕರಿಯಿಂದ ತೆಗೆದುಹಾಕೋಣ.

7. ಡಿಸ್ಟ್ರಿಕ್ಟು ಮತ್ತು ಅಸಿಸ್ಟೆಂಟು ಸೂಪರಿಂಟೆಂಡೆಂಟರುಗಳ ನೇಮಕ.

8. ಇನ್ಸ್‌ಪೆಕ್ಟರುಗಳ ನೇಮಕ.

9. ಇನ್ಸ್‌ಪೆಕ್ಟರಿನ ಸ್ಥಾನಕ್ಕೆ ಕೀಳ್ಪಟ್ಟ ಪೊಲೀಸು ಆಫೀಸರುಗಳ ನೇಮಕ.

10. (1) ಇನ್ಸ್‌ಪೆಕ್ಟರುಗಳಿಗೆ ಕೊಡಬೇಕಾದ ಚಾಕರಿಯ ನೇಮಕದ ಸರ್ಟಿಫಿಕೇಟುಗಳು.
(2) ಇನ್ಸ್‌ಪೆಕ್ಟರಿನ ಸ್ಥಾನಕ್ಕೆ ಕೀಳ್ಪಟ್ಟ ಪೊಲೀಸು ಆಫೀಸರುಗಳಿಗೆ ಕೊಡಬೇಕಾದ ಉದ್ಯೋಗದ ಸರ್ಟಿಫಿಕೇಟುಗಳು.

11. (1) ಮೇಲೆ ಕಂಡಂತೆ ನೇಮಕವಾದ ಜನಗಳ ಅಧಿಕಾರಗಳು ಮುಂತಾದುವು.
(2) (a) ಅಂಥಾ ಸರ್ಟಿಫಿಕೇಟುಗಳು ಯಾವಾಗ ವ್ಯರ್ಥವಾಗೋಣ.
(b) ಪೊಲೀಸು ಆಫೀಸರುಗಳ ಅಧಿಕಾರಗಳು ಮುಂತಾದುವನ್ನು ಕೊಂಚಕಾಲದ ಮಟ್ಟಿಗೆ ನಿಲ್ಲಿಸೋಣ.

12. ಇನ್ಸ್‌ಪೆಕ್ಟರು ಜನರಲಿನ ಸಾಮಾನ್ಯ ಅಧಿಕಾರಗಳು.

13. ಇನ್ಸ್‌ಪೆಕ್ಟರು ಜನರಲು ಮಾಜಿಸ್ಟ್ರೇಟಿನ ಅಧಿಕಾರಗಳನ್ನು ಉಂಟಾಗುವುದು ಮತ್ತು ಅವುಗಳನ್ನು ಸರ್ಕಾರದವರು ವಿಧಿಸುವ ಮಟ್ಟುಗಳಿಗೆ ಒಳಪಟ್ಟು ನಡೆಸುವುದು.

14. ಡೆಪ್ಯುಟಿ ಕಮಿಷನರ ಸಾಮಾನ್ಯ ಅಧಿಕಾರಗಳು.

15. (1) ಸೂಪರಿಂಟೆಂಡೆಂಟಿನ ಅಧಿಕಾರಗಳು.
(2) ಅಮಲ್ದಾರರ ಡೆಪ್ಯುಟಿ ಅಮಲ್ದಾರರ ಮತ್ತು ಇನ್ಸ್‌ಪೆಕ್ಟರ ಅಧಿಕಾರಗಳು.

16. ಪೊಲೀಸು ಸೈನ್ಯದ ಅವಶ್ಯವಾದ ಹಂಚಿಕೆಯನ್ನು ಡೆಪ್ಯುಟಿ ಕಮಿಷನರು ಮಾಡಬ...

17. (1) ವಿಶೇಷ ಪೊಲೀಸು ಆಫೀಸರುಗಳ ನೇಮಕ.
(2) ವಿಶೇಷ ಪೊಲೀಸು ಆಫೀಸರುಗಳ ಅಧಿಕಾರಗಳು ಮತ್ತು ಅವರು ಮಾಡಬೇಕಾದ ಉತ್ತರ...

ಪ್ರಕರಣ.

18. (1) ಹೆಚ್ಚು ಪೊಲೀಸಿನ ಬಗ್ಗೆ ಅಗತ್ಯವನ್ನು ತೋರಿಸುವ ಜನರು ಕೇಳಿಕೊಂಡಂತೆ ಹೆಚ್ಚು ಪೊಲೀಸನ್ನು ಚಾಕರಿಗೆ ಇಟ್ಟುಕೊಳ್ಳೋಣ.
(2) ಆ ಹೆಚ್ಚು ಪೊಲೀಸಿಗಾಗಿ ತಗಲುವ ಕರ್ಚು.
(3) ಸದರಿ ಕರ್ಚು ಅದನ್ನು ವಹಿಸಿಕೊಳ್ಳುವವರಿಗೆ ತಪ್ಪುವ ವಿಚಾರವಾಗಿ ನಿಯಮ.

19. (1) ಭಾರಿ ಕೆಲಸಗಳು ನಡೆಯುವ ಬಳಿಯಲ್ಲಿ ಹೆಚ್ಚು ಪೊಲೀಸನ್ನು ಚಾಕರಿಗೆ ಇಡೋಣ.
(2) ಆ ಹೆಚ್ಚು ಪೊಲೀಸಿಗೆ ಮುಟ್ಟುವ ಕರ್ಚು.

20. ಸದರಿ ಕರ್ಚನ್ನು ಕೊಡುವ ವಿಷಯದಲ್ಲಿ ವಿವಾದಗಳು.

21. (1) ಸಾರ್ವಜನಿಕ ನೆಮ್ಮದಿಗೆ ವಿಶೇಷ ಅಪಾಯವು ಉಂಟಾಗುವ ಸಂದರ್ಭಗಳಲ್ಲಿ ಹೆಚ್ಚು ಪೊಲೀಸಿನ ನೇಮಕ.
(2) ಆ ಹೆಚ್ಚು ಪೊಲೀಸಿನ ಕರ್ಚು.
(3) ಆ ಕರ್ಚನ್ನು ಕೊಡುವ ಬಗ್ಗಾಗಿ ಅವಕಾಶವನ್ನು ಹೆಚ್ಚಿಸೋಣ.
(4) ಸದರಿ ಕರ್ಚನ್ನು ಕಟ್ಟೋಣ.
(5) ಕರ್ಚನ್ನು ವಹಿಸುವ ಉತ್ತರವಾದದಿಂದ ವಿನಾಯಿತಿ.

22. (1) ವಿವಾಸಿಗಳ ಕೆಟ್ಟ ನಡತೆಯಿಂದ ಅಥವಾ ಅಕ್ರಮ ಕೂಟದಿಂದ ಉಂಟಾಗುವ ಹಾನಿಗಾಗಿ ಪರಿಹಾರ ದ್ರವ್ಯಕ್ಕೆ ಬಿನ್ನಹ.
(2) ಪರಿಹಾರ ದ್ರವ್ಯವನ್ನು ಹೇಗೆ ಪಡೆಯತಕ್ಕದ್ದು.
(3) ಪರಿಹಾರ ದ್ರವ್ಯವನ್ನು ಕೊಡುವ ಉತ್ತರವಾದದಿಂದ ವಿನಾಯಿತಿ.
(4) ಪರಿಹಾರ ದ್ರವ್ಯವನ್ನು ಯಾವ ಒಡಂಬಡಿಕೆಗಳ ಪ್ರಕಾರ ಪಡೆಯತಕ್ಕದ್ದೋ ಆ ಒಡಂಬಡಿಕೆಗಳು.
(5) ಡೆಪ್ಯುಟಿ ಕಮಿಷನರ ಹುಕುಂಗಳು ಪುನರ್ವಿಮರ್ಶೆಗೆ ಒಳಗಾಗಿರತಕ್ಕದ್ದು.
(6) ಸಿವಿಲು ದಾವೆಯನ್ನು ಹಿಡಿಯುವುದಕ್ಕೆ ಅಡ್ಡಿ.

23. 1. 20ನೆ ಮತ್ತು 21ನೆ ಪ್ರಕರಣಗಳಂತೆ ತೆರಿಗೆಗಳನ್ನು ಮತ್ತು ಕರ್ಚುಗಳನ್ನು ಡೆಪ್ಯುಟಿ ಕಮಿಷನರು ಬರ ಮಾಡೋಣ.

3ನೆ ಅಧ್ಯಾಯ.—ಪೊಲೀಸು ಸೇನೆಯನ್ನು ಕ್ರಮಪಡಿಸೋಣ, ಅಂಕೆಯಲ್ಲಿ ಇಡೋಣ ಮತ್ತು ಅವರಿಗೆ ಕೆಲಸ, ಕವಾತು, ಮುಂತಾದುವನ್ನು ಕಲಿಸೋಣ.

24. ಪೊಲೀಸಿನ ಆಡಳಿತಕ್ಕಾಗಿ ನಿಬಂಧನೆಗಳ ನಿರ್ಮಾಣ.

25. ಇನ್ಸ್‌ಪೆಕ್ಟರ್ ಜನರಲು ಪರೀಕ್ಷೆಗಳನ್ನು ಮಾಡಬಹುದು ಮತ್ತು ಲೆಕ್ಕಗಳು ಮುಂತಾದುದಕ್ಕಾಗಿ ಅಪ್ಪಣೆ ಮಾಡಬಹುದು.

26. (1) ಕೆಲಸದ ಅಸಡ್ಡೆ ಮುಂತಾದುದಕ್ಕಾಗಿ ಇಲಾಖೆಯ ಮುಖಾಂತರವಾಗಿ ಪೊಲೀಸು ಆಪಿಸರುಗಳ ಶಿಕ್ಷೆ.
(2) ಈ ಪ್ರಕರಣದಂತೆ ಆಗುವ ಶಿಕ್ಷೆಯು 33, 58 ಅಥವಾ 59ನೆ ಪ್ರಕರಣಪ್ರಕಾರ ಹಾಕುವ ದಂಡವಲ್ಲದೆ ಆಗತಕ್ಕದ್ದು.
(3) ಇನ್ಸ್‌ಪೆಕ್ಟರ್ ಜನರಲಿಗೆ ಮತ್ತು ಡೆಪ್ಯುಟಿ ಕಮಿಷನರಿಗೆ ಇರುವ ದಂಡನಾ ಅಧಿಕಾರಗಳು.

27. (1) ಶಿಕ್ಷೆಯನ್ನು ಕೊಡೋಣದರಲ್ಲಿ ಆಚರಿಸಬೇಕಾದ ನಡವಳಿಕೆಯ ಕ್ರಮ.
(2) ಅಪೀಲುಗಳು.

28. (1) ಅವಿಧೇಯತ್ವಕ್ಕಾಗಿ ಇಲಾಖೆ ಮೂಲಕವಾದ ಶಿಕ್ಷೆ.
(2) ಅಂಥಾ ಶಿಕ್ಷೆಯನ್ನು ಕೊಡೋಣದರಲ್ಲಿ ಅನುಸರಿಸಬೇಕಾದ ನಡವಳಿಕೆಯ ಕ್ರಮ.

29. ಪೊಲೀಸು ಆಪಿಸರುಗಳು ಯಾವಾಗಲೂ ಕೆಲಸದಮೇಲೆ ಇರುವುದಾಗಿಯೂ ಮೈಸೂರು ಸೀಮೆಯ ಯಾವ ಭಾಗದಲ್ಲಿ ಆದರೂ ಕೆಲಸಕ್ಕೆ ನೇಮಕವಾಗಲು ಗುರಿಯಾಗಿ ಇರುವಂತೆಯೂ ಭಾವಿಸತಕ್ಕದ್ದು.

30. (1) ಪೊಲೀಸು ಆಪಿಸರು ವ್ಯಾಪಾರ ಮುಂತಾದುದರಲ್ಲಿ ಉದ್ಯುಕ್ತರಾಗಕೂಡದು.
(2) ಪೊಲೀಸು ಆಪಿಸರುಗಳನ್ನು ಪೊಲೀಸು ಕೆಲಸಗಳು ಅಲ್ಲದ ಬೇರೆ ಕೆಲಸಗಳ ಮೇಲೆ ನೇಮಿಸಕೂಡದು.
(3) ಈ ನಿರೋಧಗಳು ಪೊಲೀಸು ಆಪಿಸರು ರಜಾವಿನ ಮೇಲೆ ಇರುವಾಗ್ಗೆ ಅಥವಾ ಅವರ ಪೊಲೀಸು ಉದ್ಯೋಗವನ್ನು ನಿಲ್ಲಿಸಿ ಇರುವಾಗ್ಗೆ ಸಹ ಅವರಿಗೆ ಅನ್ವಯಿಸತಕ್ಕದ್ದು.

31. (1) ಪೊಲೀಸು ಆಪಿಸರು ಯಾವ ಒಡಂಬಡಿಕೆಗಳ ಪ್ರಕಾರ ಕೆಲಸವನ್ನು ಬಿಟ್ಟುಬಿಡಬಹುದು.
(2) ನಿಯಮ.
(3) ಈ [illegible]ಣಕ್ಕೆ ವಿರೋಧವಾಗಿ ನಡೆಯುವ ಪೊಲೀಸು ಆಪಿಸರ ಸಂಬಳದ ಬಾಕಿಯನ್ನು ದಂಡವಾಗಿ ತೆಗೆದು [illegible]ದು.

32. (1) [illegible]ೀಸು ಆಪಿಸರುತನ ಮುಗಿದುಹೋಗುತ್ತದೆಯೊ ಆ ಮನುಷ್ಯನು ಸರ್ಟಿಫಿಕೇಟು, ಆಯುಧಗಳು, [illegible]ವನ್ನು ಒಪ್ಪಿಸಿಬಿಡಬೇಕು, ಮತ್ತು
(2) [illegible]ದೆಹೋದರೆ, ಶೋಧ ವಾರಂಟಿನ ಮೇಲೆ ಅವುಗಳನ್ನು ಸ್ವಾಧೀನಮಾಡಿಕೊಳ್ಳಬಹುದು.
([illegible]) [illegible] ವಸ್ತುಗಳನ್ನು ಉಳಿಸಿಕೊಳ್ಳೋಣ.

ಕರಣ.

33. (1) ಸುಳ್ಳಾದ ಹೇಳಿಕೆಗಳನ್ನು ಹೇಳೋಣ ಮುಂತಾದುದಕ್ಕಾಗಿ ದಂಡನೆ, ಮತ್ತು

(2) ಪೊಲೀಸು ಆಪಿಸರುಗಳ ಕೆಟ್ಟ ನಡತೆಗಾಗಿ ದಂಡನೆ.

(3) ರಜಾ ಮುಗಿದಮೇಲೆ ಚಾಕರಿಗೆ ಪುನಃ ಬಾರದೆ ತಪ್ಪುವುದರ ಫಲ.

34. ಚಾಕರಿಯ ನೇಮಕದ ಅಥವಾ ಉದ್ಯೋಗದ ಸರ್ಟಿಫಿಕೇಟನ್ನು ಅಥವಾ ಇತರೆ ಪದಾರ್ಥವನ್ನು ಒಪ್ಪಿಸಿಬಿಡಲು ತಪ್ಪುವುದಕ್ಕಾಗಿ ದಂಡನೆ.

4ನೆ ಅಧ್ಯಾಯ.—ಪೊಲೀಸು ಕಟ್ಟಳೆಗಳು.

35. ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡಿನ 144ನೇ ಪ್ರಕರಣಕ್ಕೆ ಒಳಪಡುವ ವಿಷಯಗಳಲ್ಲಿ ಅಪ್ಪಣೆಗಳನ್ನು ಕೊಡಲು ಸರಕಾರದವರ ಅಧಿಕಾರ.

36. (1) ಬೀದಿಗಳ ಉಪಯೋಗ ಮುಂತಾದುದರ ವಿಚಾರವಾಗಿ ನಿಬಂಧನೆಗಳನ್ನು ಡಿಸ್ಟ್ರಿಕ್ಟು ಮಾಜಿಸ್ಟ್ರೇಟು ಮಾಡಬಹುದು.

(2) ಅಂಥಾ ನಿಬಂಧನೆಗಳ ಪ್ರಕಟನೆಯ ರೀತಿ.

(3) (1) ನೆ (k) ವಾಕ್ಯದ ಮೇರೆಗೆ ಮಾಡುವ ನಿಬಂಧನೆಗಳನ್ನು ಸರ್ಕಾರಕ್ಕೆ ತಿಳಿಸಬೇಕು.

37. ಸೂಳೇ ಮನೆಗಳನ್ನು ನಿಲ್ಲಿಸಿಬಿಡುವಿಕೆ.

38. ಸಾಧಾರಣ ಜೂಜಾಡುವ ಮನೆಯನ್ನು ಪ್ರವೇಶಿಸಲು ಪೊಲೀಸು ಆಪಿಸರಿಗೆ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟು ಮುಂತಾದವರು ಆಜ್ಞಾಪಿಸಬಹುದು.

39. (1) ಗಲಿಬಿಲಿ ನಡೆಯುವುದನ್ನು ತಪ್ಪಿಸುವುದಕ್ಕಾಗಿ ಮಾಜಿಸ್ಟ್ರೇಟುಗಳಿಂದ ಅಪ್ಪಣೆಗಳು ಕೊಡಲ್ಪಡೋಣ.

(2) ಕೀಳ್ಪಟ್ಟ ಮಾಜಿಸ್ಟ್ರೇಟುಗಳಿಂದ ಕೊಡಲ್ಪಡುವ ಅಪ್ಪಣೆಗಳನ್ನು ಡಿಸ್ಟ್ರಿಕ್ಟು ಮಾಜಿಸ್ಟ್ರೇಟಿಗೆ ತಿಳಿಸತಕ್ಕದ್ದು.

40. ದೊಂಬಿಯನ್ನು ಅಥವಾ ನೆಮ್ಮದಿಯ ಭಯಂಕರವಾದ ಭಂಗವನ್ನು ತಪ್ಪಿಸುವುದಕ್ಕೋಸ್ಕರ ಡಿಸ್ಟ್ರಿಕ್ಟು ಮಾಜಿಸ್ಟ್ರೇಟು ಅಪ್ಪಣೆಗಳನ್ನು ಕೊಡೋಣ.

41. (1) ಮತ ಸಂಬಂಧವಾದ ಉತ್ಸವಗಳು ಮುಂತಾದುದರಲ್ಲಿ ನೆಮ್ಮದಿಯ ಪೋಷಣೆ ಬಗ್ಗಾಗಿ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಿಂದ ಅಪ್ಪಣೆಗಳು ಹೊರಡೋಣ.

(2) ಅಪ್ಪಣೆಗಳು ಕೋರ್ಟುಗಳ ಡಿಕ್ರಿಗಳು ಮುಂತಾದುದಕ್ಕೆ ಒಳಪಟ್ಟಿರತಕ್ಕದ್ದು.

42. (1) ಸಂತೆಗಳು ಮುಂತಾದುದರಲ್ಲಿ ಸಾಂಕ್ರಾಮಿಕ ರೋಗದ ಉತ್ಪತ್ತಿಯನ್ನು ತಪ್ಪಿಸುವುದಕ್ಕೆ ಡಿಸ್ಟ್ರಿಕ್ಟು ಮಾಜಿಸ್ಟ್ರೇಟು ವಿಶೇಷ ಸನ್ನಾಹಗಳನ್ನು ಮಾಡಬಹುದು.

(2) ಅಂಥಾ ಸಂದರ್ಭಗಳಲ್ಲಿ ವೇತನಗಳ ವಸೂಲಿ.

(3) ಮ್ಯುನಿಸಿಪಾಲಿಟಿಗಳಿಂದ ಕರ್ಚುಗಳನ್ನು ವಸೂಲು ಮಾಡೋಣ.

43. ಜನಗಳ ಗುಂಪುಗಳನ್ನು ಮತ್ತು ಕೂಟಗಳನ್ನು ಚದರಿಸೋಣ.

44. (1) ಸಾರ್ವಜನಿಕವಾದ ವಿನೋದದ ಸ್ಥಳಗಳಲ್ಲಿ ಮತ್ತು ಸಾರ್ವಜನಿಕ ಸಭೆಗಳಲ್ಲಿ ಗಲಿಬಿಲಿ ಮುಂತಾದುದು ನಡೆಯದಂತೆ ಪೊಲೀಸಿನವರು ಏರ್ಪಾಟು ಮಾಡೋಣ.

(2) ಆ ಸ್ಥಳಗಳಿಗೆ ಪೊಲೀಸಿನವರ ಧಾರಾಳವಾದ ಪ್ರವೇಶ.

45. (1) ಬಹಿರಂಗವಾದ ಬೀದಿಗಳಲ್ಲಿ ಸಭೆಗಳು ಮುಂತಾದುವುಗಳನ್ನು ಪೊಲೀಸಿನವರು ಕ್ರಮಪಡಿಸಬೇಕು.

(2) ಅಂಥಾ ನಿಬಂಧನೆಗಳನ್ನು ಮತ್ತು ಅಪ್ಪಣೆಗಳನ್ನು ಪ್ರಕಟಿಸುವ ರೀತಿ.

(3) ಅಂಥಾ ನಿಬಂಧನೆಗಳನ್ನು ಅಥವಾ ಅಪ್ಪಣೆಗಳನ್ನು ಉಲ್ಲಂಘಿಸಿ ನಡೆಯುವ ಸಭೆಗಳು ಮುಂತಾದುವುಗಳ ವಿಚಾರದಲ್ಲಿ ಅಧಿಕಾರಗಳು.

(4) ಅಂಥಾ ಅಪ್ಪಣೆಗಳನ್ನು ಉಲ್ಲಂಘಿಸಿ ನಡೆಯುವ ಸಭೆಯನ್ನು ಅಕ್ರಮವಾದ ಕೂಟವೆಂದು ಎಣಿಸತಕ್ಕದ್ದು.

46. (1) ನಾಯಿಗಳ ವಿಚಾರವಾಗಿ ವಿಧಿಗಳು.

(2) ಪೊಲೀಸಿನವರು ನಾಯಿಗಳನ್ನು ಯಾವಾಗ ನಾಶಪಡಿಸಬಹುದು ಅಥವಾ ಹಿಡಿಯಬಹುದು.

(3) ಕರ್ಚುಗಳು ಹೇಗೆ ವಸೂಲಾಗಬಹುದು.

(4) ಒಡೆಯನ ವಿಳಾಸದೊಂದಿಗೆ ಕೊರಳುಪಟ್ಟಿಯನ್ನು ಧರಿಸಿರುವ ನಾಯಿಯ ವಿಷಯದಲ್ಲಿ ವಿಧಿ.

5ನೆ ಅಧ್ಯಾಯ.—ಪೊಲೀಸಿನವರು ನಡೆಸತಕ್ಕ ಅಧಿಕಾರಗಳು ಮತ್ತು ಅವರ ಕೆಲಸಗಳು.

47. (1) ಪೊಲೀಸು ಆಪಿಸರ ಕೆಲಸಗಳು.

(2) ಸರ್ವರೂ ಸುಳಿದಾಡುವ ಸ್ಥಳಗಳನ್ನು ವಾರಂಟಿಲ್ಲದೆ ಪ್ರವೇಶಿಸಲು ಅಧಿಕಾರ.

(3) ಬೀದಿಗಳಲ್ಲಿ ಸಂಶಯಾಸ್ಪದವಾದ ಜನಗಳನ್ನು ಶೋಧನೆ ಮಾಡಲು ಅಧಿಕಾರ.

48. ಜನರ ವಿಷಯದಲ್ಲಿ ಪೊಲೀಸು ಆಪಿಸರುಗಳ ಕೆಲಸಗಳು.

49. (1) (a) ಬೀದಿಗಳಲ್ಲಿ ವ್ಯಾಪಾರ ಮುಂತಾದುದನ್ನು ಪೊಲೀಸಿನವರು ಕ್ರಮಪಡಿಸಬೇಕು; ಮತ್ತು

(b) ಬೀದಿಗಳಲ್ಲೂ ಇತರೆ ಬಹಿರಂಗವಾದ ಜಾಗಗಳಲ್ಲೂ ನೆಮ್ಮದಿಯನ್ನು ಕಾಪಾಡಬೇಕು; ಮತ್ತು

(c) ಬಹಿರಂಗವಾದ ಸ್ಥಳಗಳಿಗೆ ಜನಗಳು ಸುಳಿದಾಡುವುದನ್ನು ಕ್ರಮಪಡಿಸಬೇಕು.

ಪ್ರಕರಣ.

(2) ಪೊಲೀಸಿನವರ ನ್ಯಾಯವಾದ ಅಪ್ಪಣೆಗಳಿಗೆ ಅನುಸರಿಸಿ ನಡೆಯಲು ಜನಗಳು ಬದ್ಧರಾಗಿರಬೇಕು.

(3) ನ್ಯಾಯಾಧಿಕಾರವನ್ನು ಹಟದಿಂದ ಅಲಕ್ಷ್ಯಮಾಡುವ ಮನುಷ್ಯನನ್ನು ಪೊಲೀಸು ಆಪಿಸರು ಅಂಕೆಯಲ್ಲಿ ಇಡಬಹುದು ಅಥವಾ ಸ್ಥಳಾಂತರಕ್ಕೆ ಸಾಗಿಸಬಹುದು.

50. 39, 40 ಅಥವಾ 41ನೆ ಪ್ರಕರಣ ಪ್ರಕಾರ ಹುಟ್ಟಿದ ಅಪ್ಪಣೆಗಳನ್ನು ನೆರವೇರಿಸೋಣ.

51. 42 ಅಥವಾ 43ನೆ ಪ್ರಕರಣದಂತೆ ಆದ ಅಪ್ಪಣೆಗಳು ನಡೆವುದನ್ನು ನೋಡಿಕೊಳ್ಳೋಣ ಪೊಲೀಸಿನವರ ಕೆಲಸ.

52. ತೊಡು ದನಕರವನ್ನು ಪೊಲೀಸಿನವರು ತಮ್ಮ ವಶಕ್ಕೆ ತೆಗೆದುಕೊಳ್ಳಬಹುದು.

53. ಬಾಧ್ಯರಿಲ್ಲದ ಸ್ವತ್ತಿನ ವಿಚಾರವಾಗಿ ಪೊಲೀಸಿನವರ ಕೆಲಸ.

54. ಮೇಲ್ಪಟ್ಟ ಪೊಲೀಸು ಆಪಿಸರು ತನಗೆ ಕೀಳ್ಪಟ್ಟವನಿಗೆ ನೇಮಕವಾದ ಕೆಲಸಗಳು ಮುಂತಾದುವನ್ನು ತಾನೇ ಮಾಡಬಹುದು.

6ನೆ ಅಧ್ಯಾಯ.—ತಪ್ಪಿತಗಳು ಮತ್ತು ಶಿಕ್ಷೆಗಳು.

55. ಕೆಲವು ಬೀದೀ ತಪ್ಪಿತಗಳಿಗಾಗಿ ಮತ್ತು ಹೇಸಿಕೆಗಳಿಗಾಗಿ ಶಿಕ್ಷೆ.

(a) ಕತ್ತಲು ರಾತ್ರಿಗಳಲ್ಲಿ ಬೆಳಕಿಲ್ಲದೆ ಗಾಡಿಯನ್ನು ಹೊಡೆದುಕೊಂಡು ಹೋಗೋಣ.

(b) ಮಾರ್ಗದ ನಿಬಂಧನೆಯನ್ನು ಅಲಕ್ಷ್ಯ ಮಾಡೋಣ.

(c) ಸಾಕಾದಷ್ಟು ಕಾವಲು ಇಲ್ಲದೆ ದನಕರ ಮುಂತಾದುದನ್ನು ಬಿಡೋಣ;

(d) ಮೃಗಗಳಿಂದ ತಡೆಯನ್ನು ಅಥವಾ ಕೆಡಕನ್ನು ಮಾಡಿಸೋಣ;

(e) ಬಾಡಿಗೆಗೆ ಅಥವಾ ಮಾರಾಟಕ್ಕೆ ಮೃಗಗಳನ್ನು ಹೊರಗೆ ಇಡೋಣ, ಮುಂತಾದುದು.

(f) ಬೀದಿಯಲ್ಲಿ ಯಾವ ತಡೆಯನ್ನಾದರೂ ಉಂಟುಮಾಡೋಣ;

(g) ಕಾಲುದಾರಿಗೆ ತಡೆಮಾಡೋಣ;

(h) ನಕಲಿಯು ವಾದ್ಯದೊಂದಿಗೆ ಸೇರಿದ ಅಥವಾ ಇತರ ನಾಟಕಗಳನ್ನು ತೋರಿಸೋಣ ಮುಂತಾದುದು;

(i) ಬೀದಿಯಲ್ಲಿ ಜೂಜು ಆಡೋಣ;

(j) ಬಹಿರಂಗವಾದ ಬೀದಿಗಳಲ್ಲಿ ಅಥವಾ ಅವುಗಳ ಹತ್ತಿರದಲ್ಲಿ ಬೇಸರಿಕೆಕರವಾದ ಕೃತ್ಯಗಳನ್ನು ಮಾಡೋಣ.

(k) ಕುದುರೆಗಳನ್ನು ಬಿಟ್ಟುಬಿಡುವುದು ಮುಂತಾದುದು, ಮತ್ತು ಕ್ರೂರವಾದ ನಾಯಿಗಳನ್ನು ತಡೆಯಿಲ್ಲದೆ ಇರಲು ಆಸ್ಪದ ಕೊಡೋಣ.

(l) ಆ ಕೆಲಸಗಳಿಗೆ ಎಂದು ಪ್ರತ್ಯೇಕವಾಗಿ ವಿಂಗಡವಾಗದೆ ಇರುವ ಸ್ಥಳಗಳಲ್ಲಿ ಸ್ನಾನ ಮಾಡೋಣ ಅಥವಾ ತೊಳೆಯೋಣ;

(m) ಸಾರ್ವಜನಿಕವಾದ ಬಾವಿಗಳಲ್ಲಿ ನೀರನ್ನು ಕೆಡಿಸೋಣ, ಮುಂತಾದುದು;

(n) ಸ್ನಾನ ಮಾಡುವವರಿಗೆ ಅಡ್ಡಿ ಮಾಡೋಣ;

(o) ಬಹಿರಂಗದಲ್ಲಿ ನಾಚಿಕೆಗೆಟ್ಟು ನಡೆಯೋಣ;

(p) ಮತ್ತೇರಿಸಿಕೊಂಡು ಬುದ್ಧಿ ಇಲ್ಲದೆ ಇರೋಣ;

(q) ಬೀದಿಗಳಲ್ಲಿ ಮಾರ್ಗಸ್ಥರನ್ನು ಅಡ್ಡಿಮಾಡೋಣ ಅಥವಾ ಅವರಿಗೆ ತೊಂದರೆ ಕೊಡೋಣ;

(r) ನೆಮ್ಮದಿಯ ಭಂಗವನ್ನು ಉಂಟುಮಾಡಬೇಕೆಂಬ ಉದ್ದೇಶದಿಂದ ಕೆಟ್ಟನಡತೆ;

(s) ಬೇಡೋಣ ಮತ್ತು ಬೇಸರಿಕೆಗೊಳಿಸುವ ರೋಗಗಳನ್ನು ತೆರೆದು ತೋರಿಸೋಣ;

(t) ಬೀದಿಯಲ್ಲಿ ಕಸವನ್ನು ಬಿಸಾಡೋಣ;

(u) ಅಪಾಯಕರವಾದ ಸ್ಥಳಗಳನ್ನು ರಕ್ಷಿಸಲು ಅಸಡ್ಡೆ ಮಾಡೋಣ;

(v) ಬಿಲ್ಲುಗಳನ್ನು ಅಂಟಿಸೋಣ ಅಥವಾ ಗೋಡೆಗಳನ್ನು ವಿರೂಪ ಮಾಡೋಣ;

(w) ಸೂಳೆಗಾರಿಕೆಗಾಗಿ ಬೇಡೋಣ.

56. ಮೃಗಗಳ ಹಿಂಸೆಗೋಸ್ಕರ ಶಿಕ್ಷೆ.

57. ವಿಶೇಷ ಪೊಲೀಸು ಆಪಿಸರು ಆಗಿ ಚಾಕರಿ ಮಾಡಲು ನಿರಾಕರಿಸುವುದಕ್ಕಾಗಿ ದಂಡನೆ.

58. ಪೊಲೀಸಿನವರು ಪೀಡಿಸುವಂಥಾ ಶೋಧನೆ, ಹಿಡಿತ, ಮುಂತಾದುದನ್ನು ಮಾಡುವುದಕ್ಕಾಗಿ ದಂಡನೆ.

59. ಹಿಡಿಯಲ್ಪಟ್ಟ ಮನುಷ್ಯನನ್ನು ಕಳುಹಿಸುವುದರಲ್ಲಿ ಪೀಡಿಸುವಂಥಾ ಕಾಲವಿಳಂಬಕ್ಕಾಗಿ ದಂಡನೆ.

60. 36ನೆ ಪ್ರಕರಣ ಪ್ರಕಾರದ ನಿಬಂಧನೆಗಳ, ಅಥವಾ 49ನೆ ಪ್ರಕರಣ ಪ್ರಕಾರವಾದ ಅನುಜ್ಞೆಗಳ ಉಲ್ಲಂಘನೆಗಾಗಿ ದಂಡನೆ.

61. 37ನೆ ಪ್ರಕರಣದಂತೆ ಆದ ಅಪ್ಪಣೆಯ ಮೇರೆಗೆ ನಡೆದುಕೊಳ್ಳಲು ತಪ್ಪುವುದಕ್ಕೆ ದಂಡನೆ.

62. (1) ಸಾಧಾರಣ ಜೂಜಾಟದ ಮನೆಯನ್ನು ಇಟ್ಟುಕೊಂಡಿರೋಣ ಮುಂತಾದುದಕ್ಕಾಗಿ ದಂಡನೆ.

(2) ಸಾಧಾರಣ ಜೂಜು ಆಡುವ ಮನೆಯಲ್ಲಿ ಜೂಜು ಆಡುತಿದ್ದಂತೆ ಸಿಕ್ಕಿದುದಕ್ಕಾಗಿ ದಂಡನೆ.

63. ತಪ್ಪಿತ ದೃಢಪಟ್ಟಮೇಲೆ ಜೂಜಿನ ಸಾಧನಗಳನ್ನು ನಾಶಮಾಡಿಬಿಡತಕ್ಕದೆಂದು ಆಜ್ಞಾಪಿಸಬಹುದು.

64. ಸಾಕ್ಷಿಗಳ ವಿವೇಚನೆ.

ಪ್ರಕರಣ.

65. ಪ್ರವೀಣತೆಯು ಜೂಜುಗಳ ರಕ್ಷಣೆ.

66. ವರ್ತಮಾನ ಕೊಟ್ಟವನಿಗೆ ಅಥವಾ ಪೊಲೀಸಿನವರಿಗೆ ಅಪರಾಧದ ಪೈಕಿ ಭಾಗವನ್ನು ಕೊಡೋಣ.

67. ಬಹಿರಂಗವಾದ ಬೀದಿಗಳಲ್ಲಿ ಅಥವಾ ಸ್ಥಳಗಳಲ್ಲಿ ಪಕ್ಷಿಗಳನ್ನೂ ಮೃಗಗಳನ್ನೂ ಕಾಳಗ ಕಾಯಿಸಿದ್ದುದಕ್ಕೆ ದಂಡನೆ.

68. ತಪ್ಪಿತ ಮುಂತಾದುದನ್ನು ಮಾಡುವ ಉದ್ದೇಶದಿಂದ ಸೂರ್ಯಾಸ್ತಮಯ ಮತ್ತು ಸೂರ್ಯೋದಯಕ್ಕೆ ನಡುವೆ ಆಯುಧಪಾಣಿಯಾಗಿ ಸಿಕ್ಕಿದುದಕ್ಕಾಗಿ ದಂಡನೆ.

69. 39, 40, 41, 44 ಮತ್ತು 45ನೆ ಪ್ರಕರಣಗಳಂತೆ ಆದ ನಿಬಂಧನೆಗಳಿಗೆ ಅಥವಾ ಆಜ್ಞೆಗಳಿಗೆ ವಿರೋಧ ವಾಗಿ ನಡೆವುದಕ್ಕಾಗಿ ದಂಡನೆ.

70. 42ನೆ ಪ್ರಕರಣ ಪ್ರಕಾರ ಮಾಡಿದ ಕಟ್ಟಳೆಯ ಉಲ್ಲಂಘನೆಗಾಗಿ ದಂಡನೆ.

71. 43ನೆ ಪ್ರಕರಣದ ಮೇರೆಗೆ ಕೊಟ್ಟ ಅಪ್ಪಣೆಯ ಉಲ್ಲಂಘನೆಗಾಗಿ ದಂಡನೆ.

72. 50ನೆ ಪ್ರಕರಣರೀತ್ಯಾ ಕೊಟ್ಟ ಅಪ್ಪಣೆಗೆ ಎದುರಿಸುವುದಕ್ಕಾಗಿ ಅಥವಾ ಆ ಅಪ್ಪಣೆಯಂತೆ ನಡೆದುಕೊಳ್ಳದೆ ಹೋಗುವುದಕ್ಕಾಗಿ ದಂಡನೆ.

73. ತಪ್ಪಿತಸ್ಥನು ಕಾನಸ್ಟೆಬಲಿನ ಸ್ಥಾನಕ್ಕೆ ಮೇಲ್ಪಟ್ಟ ಪೊಲೀಸು ಅಪಿಸರಾಗಿ ಇರುವಾಗ ನ್ಯಾಯಾಧಿಕಾರ.

74. ರೆಗ್ಯುಲೇಷನಿಗೆ ವಿರೋಧವಾದ ಕೆಲವು ತಪ್ಪಿತಗಳಿಗಾಗಿ ಕ್ರಿಮಿನಲು ವ್ಯವಹಾರವನ್ನು ನಡೆಸೋಣ ಪೊಲೀಸಿನವರ ವಿವೇಕಕ್ಕೆ ಅನುಸಾರವಾಗಿ ಇರತಕ್ಕದ್ದು.

75. ಇತರ ಚಟ್ಟಗಳ ಮೇರೆಗೆ ತಪ್ಪಿತಗಳಿಗಾಗಿ ಕ್ರಿಮಿನಲು ವ್ಯವಹರಣೆಗೆ ಈ ರೆಗ್ಯುಲೇಷನಿನಿಂದ ಆತಂಕವಿಲ್ಲ.

7ನೆ ಅಧ್ಯಾಯ—ವಿವಿಧ ವಿಷಯ.

76. ಪೊಲೀಸು ಅಪಿಸರುಗಳಿಗೆ ಕೊಡಬೇಕಾದ ಬಹುಮಾನಗಳು ಮುಂತಾದುದರ ವ್ಯವಸ್ಥೆ.

77. ಪೊಲೀಸು ಕಟ್ಟಡಗಳ ಮೇಲೆ ಸರ್ಕಾರದಿಂದ ಮ್ಯುನಿಸಿಪಲು ಅಥವಾ ಇತರ ತೆರಿಗೆಗಳು ಸಲ್ಲತಕ್ಕದ್ದಿಲ್ಲ.

78. (1) ನಿಬಂಧನೆಗಳನ್ನು ಮಾಡಲು ಸರ್ಕಾರದವರ ಅಧಿಕಾರ.

(2) ವಾಡಿಕೆಯಾಗಿ ಕಳವು ಮುಂತಾದ ತಪ್ಪಿತಗಳನ್ನು ಮಾಡುವವರ ಗುಂಪುಗಳನ್ನು ಕಾವಲಿನಲ್ಲಿಡೋಣ ಮುಂತಾದುದು.

(3) ನಿಬಂಧನೆಗಳ ಪ್ರಕಟಣೆ.

(4) ನಿಬಂಧನೆಗಳ ಉಲ್ಲಂಘನೆಗೆ ದಂಡನೆ.

79. ರೆಗ್ಯುಲೇಷನಿನ ಪ್ರಕಾರ ಹುಟ್ಟಿದ ಅಪ್ಪಣೆಗಳನ್ನು ಮತ್ತು ಪ್ರಕಟನೆಗಳನ್ನು ಸ್ಥಾಪಿಸುವ ವಿಧಾನ.

80. ನಡವಡಿಕೆ ಕ್ರಮದಲ್ಲಿ ಮಾದರಿಯ ಲೋಪಕ್ಕೋಸ್ಕರವಾಗಿ ಅಥವಾ ಅಕ್ರಮಕ್ಕೋಸ್ಕರವಾಗಿ ನಿಬಂಧನೆಗಳನ್ನು ಮತ್ತು ಅಪ್ಪಣೆಗಳನ್ನು ಅಸಿದ್ಧವೆಂದು ಭಾವಿಸಕೂಡದು.

81. (1) ಚಾಕರಿಗೆ ಅನುಸಾರವಾಗಿ ಒಳ್ಳೆ ನಂಬಿಕೆಯಿಂದ ಮಾಡಿದ ಕೃತ್ಯಕ್ಕಾಗಿ ದಂಡಕ್ಕೆ ಅಥವಾ ನಷ್ಟಕ್ಕೆ ಯಾವ ಮಾಜಿಸ್ಟ್ರೇಟೂ ಅಥವಾ ಪೊಲೀಸು ಅಪಿಸರೂ ಗುರಿಯಾಗತಕ್ಕದ್ದಿಲ್ಲ.

(2) ಸ್ಪಷ್ಟವಾದ ಅಧಿಕಾರದೊಡನೆ ಯಾವ ನಿಬಂಧನೆಯನ್ನು, ಅಪ್ಪಣೆಯನ್ನು ಅಥವಾ ಅನುಜ್ಞೆಯನ್ನು ಆದರೂ ಒಳ್ಳೆ ನಂಬಿಕೆಯಿಂದ ನೆರವೇರಿಸುವುದಕ್ಕಾಗಿ ಮೇಲೆ ಕಂಡಂತೆ ಸರ್ಕಾರದ ಚಾಕರನು ಗುರಿಯಾಗೋಣ ಇಲ್ಲ.

(3) ಒಂದು ವರ್ಷಕ್ಕೆ ತರುವಾಯ ತಂದರೆ ಮೇಲೆ ಕಂಡಂತೆ ಚಾಕರಿಯ ಕಾರಣದಿಂದ ಮಾಡಿದ ಕೃತ್ಯಗಳ ವಿಚಾರವಾದ ದಾವೆಗಳನ್ನು ಅಥವಾ ಕ್ರಿಮಿನಲು ವ್ಯವಹರಣೆಗಳನ್ನು ಹಿಡಿಯಕೂಡದು ಅಥವಾ ತಳ್ಳಿಹಾಕತಕ್ಕದ್ದು.

(4) ಪರಿಹಾರದ್ರವ್ಯವನ್ನು ಕೊಡುವುದಾಗಿ ಹೇಳೋಣ.

82. ಮ್ಯುನಿಸಿಪಾಲಿಟಿಗೆ ಸಂಬಂಧಪಡುವ ಯಾವ ಕಾನೂನನ್ನೂ ಈ ರೆಗ್ಯುಲೇಷನು ಬಾಧಿಸತಕ್ಕದ್ದಲ್ಲ.

A ಪಟ್ಟಿ.—ತಳ್ಳಿಪಡಿಯಾದ ಚಟ್ಟಗಳು.

B ಪಟ್ಟಿ.—ಇನ್ಸ್‌ಪೆಕ್ಟರ ನೇಮಕದ ಮತ್ತು ಇನ್ಸ್‌ಪೆಕ್ಟರಿನ ಸ್ಥಾನಕ್ಕೆ ಕೀಳ್ಪಟ್ಟ ಪೊಲೀಸು ಅಪಿಸರಿಗಾಗಿ ಸರ್ಟಿಪಿಕೇಟುಗಳ ಮಾದರಿಗಳು.

(2) ಮೈಸೂರು ಪೋಲೀಸು ಬಿಲ್ಲು.

ಮೈಸೂರು ಸೀಮೆಯ ಪೋಲೀಸಿಗೆ ಸಂಬಂಧಿಸುವ ನ್ಯಾಯವನ್ನು (ಕಾನೂನನ್ನು) ತಿದ್ದುಪಡಿ ಮಾಡಿ ಒಟ್ಟುಪಡಿಸುವ ಬಿಲ್ಲು.

ಮೈಸೂರು ಸೀಮೆಯ ಪೋಲೀಸಿಗೆ ಸಂಬಂಧಿಸುವ ನ್ಯಾಯವನ್ನು (ಕಾನೂನನ್ನು) ತಿದ್ದುಪಡಿ ಮಾಡಿ ಒಟ್ಟುಪಡಿಸುವುದು ಯುಕ್ತವಾಗಿರುವುದರಿಂದ ಶ್ರೀಮನ್ಮಹಾರಾಜರವರು ಇದರಡಿ ಕಂಡಂತೆ ವಿಧಿಸಲು ಅಪ್ಪಣೆ ದಯಪಾಲಿಸಿರುತ್ತಾರೆ :—

1ನೆ ಅಧ್ಯಾಯ—ಅವತರಣಿಕೆ.

ಚಿಕ್ಕ ಹೆಸರು. 1. (1) ಈ ರೆಗ್ಯುಲೇಷನನ್ನು 19 ನೆ ವರುಷದ ಮೈಸೂರು ಸೀಮೆಯ ಪೋಲೀಸು ರೆಗ್ಯುಲೇಷನೆಂದು ಕರೆಯಬಹುದು.

ವ್ಯಾಪ್ತಿ. (2) ಅದು ಮೈಸೂರು ಸೀಮೆಗೆಲ್ಲಾ ವ್ಯಾಪಿಸುತ್ತದೆ; ಮತ್ತು

ಪ್ರಾರಂಭ. (3) ಅದು ಕೂಡಲೆ ಉಪಯೋಗದಲ್ಲಿ ಬರತಕ್ಕದ್ದು.

ಚಟ್ಟಗಳ ತಳ್ಳುಪಡಿ. 2. A ಪಟ್ಟಿಯಲ್ಲಿ ಕಂಡಿರುವ ಚಟ್ಟಗಳನ್ನು ಆ ಪಟ್ಟಿಯ ಮೂರನೆ ಮಗ್ಗುಲಿನಲ್ಲಿ ಕಾಣಿಸಿರುವಷ್ಟರಮಟ್ಟಿಗೆ ತಳ್ಳುಪಡಿ ಮಾಡಿರುತ್ತದೆ.

...ಯಿನ 1890ರ 4 ಪ್ರ. 2. ಇದರಿಂದ ತಳ್ಳುಪಡಿಯಾದ ಯಾವ ಚಟ್ಟವನ್ನು ಕುರಿತು ಆಗಲೀ ಉಪಯೋಗದಲ್ಲಿ ಇರುವ ಯಾವ ಚಟ್ಟದಲ್ಲಿ ಆಗಲಿ ಮಾಡಲ್ಪಡುವ ಎಲ್ಲಾ ಪ್ರಸಕ್ತಿಗಳನ್ನೂ ಅವುಗಳಿಗೆ ಸರಿಬೀಳುವ ಈ ರೆಗ್ಯುಲೇಷನಿನ ಭಾಗವನ್ನು ಕುರಿತು ಮಾಡಲ್ಪಟ್ಟಿದ್ದರೆ ಹೇಗೋ ಹಾಗೆ ಓದಿಕೊಳ್ಳತಕ್ಕದ್ದು.

ಅಂಥಾ ಯಾವುದಾದರೂ ಚಟ್ಟದ ಪ್ರಕಾರ ವಿಧಾಯಕವಾದ ಎಲ್ಲಾ ನಿಬಂಧನೆಗಳನ್ನೂ, ಏರ್ಪಡಿಸಿದ ಉದ್ಯೋಗಗಳನ್ನೂ, ಕೊಟ್ಟ ಅಧಿಕಾರಗಳನ್ನೂ ಮತ್ತು ಹುಟ್ಟಿದ ಅಪ್ಪಣೆಗಳನ್ನೂ, ಸರ್ಟಿಫಿಕೇಟುಗಳನ್ನೂ ಸಹ, ಈ ರೆಗ್ಯುಲೇಷನಿನೊಂದಿಗೆ ಅವು ಹೊಂದಿಕೆಯಾಗಿ ಇರುವಷ್ಟು ದೂರ, ಇದರಂತೆ ವಿಧಾಯುಕವಾದುವನ್ನಾಗಿ, ಏರ್ಪಡಿಸಿದುವುಗಳನ್ನಾಗಿ, ಕೊಡಲ್ಪಟ್ಟವುಗಳನ್ನಾಗಿ ಮತ್ತು ಹುಟ್ಟಿದುವುಗಳನ್ನಾಗಿ ಭಾವಿಸತಕ್ಕದ್ದು.

ಗ್ರಾಮ ಪೋಲೀಸಿ ಉಪಯೋಗದಲ್ಲಿ ಇರುವ ನಿಬಂಧನೆಗಳನ್ನು ಸರ್ಕಾರ ಗೆಜೆಟ್ಟಿನಲ್ಲಿ ಗೆ ನಿಬಂಧನೆಗಳು. 3. ಮೈಸೂರು ಸೀಮೆಯಲ್ಲಿರುವ ಗ್ರಾಮ ಪೋಲೀಸಿನ ಸಂಸ್ಥಾಪನೆಯ ಮತ್ತು ಕ್ರಮಪಡಿಸುವಿಕೆಯ ವಿಷಯದಲ್ಲಿ ನ್ಯಾಯದಂತ ಕಾನೂನಿನಂತ) ಉಪಯೋಗದಲ್ಲಿ ಇರುವ ನಿಬಂಧನೆಗಳನ್ನು, ಸರ್ಕಾರ ಗೆಜೆಟ್ಟಿನಲ್ಲಿ ಪ್ರಕಟನೆಯ ಮೂಲಕ, ಆಗಾಗ್ಗೆ, ಸರ್ಕಾರದವರು ಮಾಡಬಹುದು ಮತ್ತು ಅಂಥಾ ನಿಬಂಧನೆಗಳನ್ನು ತಳ್ಳುಪಡಿ ಮಾಡಬಹುದು, ವ್ಯತ್ಯಾಸಪಡಿಸಬಹುದು ಅಥವಾ ಅವುಗಳಿಗೆ ಹೆಚ್ಚಾಗಿ ಸೇರಿಸಬಹುದು ; ಮತ್ತು ಸರ್ಕಾರದವರು ಅಂಥಾ ನಿಬಂಧನೆಗಳ ಮೂಲಕ, ಇತರ ವಿಷಯಗಳಲ್ಲದೆ, ಇನ್ನೂ ಏನು ಮಾಡಬಹುದು ಎಂದರೆ ;

(i) ಪ್ರತಿ ಗ್ರಾಮ ಅಥವಾ ಸ್ಥಳಕ್ಕೆ ಅಗತ್ಯವಾಗಿರಬಹುದಾದ ಗ್ರಾಮದ ಮುಖ್ಯಸ್ಥರ, ಗ್ರಾಮ ಕಾವಲುಗಾರರ, ತೋಟಿಗಳ, ತಳವಾರರ ಮತ್ತು ಗ್ರಾಮ ಪೋಲೀಸಿನ ಇತರ ಸಿಬ್ಬಂದಿಗಳ ಮೊಕರರಾತಿಗೂ ಮೇಲ್ಕಂಡ ಉದ್ಯೋಗಗಳಲ್ಲಿ ಸ್ಥಿರವಾಗಿ, ಸ್ವಲ್ಪಕಾಲದವರೆಗೆ ಅಥವಾ ಬದಲಿಯಾಗಿ ಕೆಲಸಮಾಡುವವರ ನೇಮಕಕ್ಕೂ ಮತ್ತು ಅವರ ವೇತನಕ್ಕೂ ಏರ್ಪಾಡು ಮಾಡೋಣ ;

(ii) ಗ್ರಾಮ ಪೋಲೀಸಿಗೆ ಸೇರಿದವರಲ್ಲಿ ಒಬ್ಬರಿಗೊಬ್ಬರಿಗೆ ಮತ್ತು ಅವರಿಗೂ ಕ್ರಮ ಪೋಲೀಸಿನವರಿಗೂ ಸಂಬಂಧಗಳನ್ನು ನಿಶ್ಚಯಿಸೋಣ ;

(iii) ಜನಗಳ ಸ್ಥಿತಿ, ತಪ್ಪಿತದ ಸ್ಥಿತಿ, ತಪ್ಪಿತಗಳನ್ನು ಮಾಡೋಣ, ಸಂಶಯಾಸ್ಪದವಾದ ಅಥವಾ ಅಸಹಜವಾದ ಮರಣಗಳು ಮೊದಲಾದುವುಗಳ ಸಂಭವ, ಪ್ರಾಸೆಸ್ಸುಗಳ ಜಾರಿ, ತಪ್ಪಿತಸ್ಥರ ಅಥವಾ ಸಂಶಯಾಸ್ಪದವಾದ ನಡತೆಯುಳ್ಳವರ ಹಿಡಿಯುವಿಕೆ, ಶೋಧನೆಗಳನ್ನು ನಡೆಸೋಣ ದುರ್ಮರಣಗಳ ವಿಚಾರಣೆಯನ್ನು ನಡೆಸೋಣ, ಬಾಧ್ಯವಿಲ್ಲದ ಸ್ವತ್ತಿನ ಖಬರಿಕೆ ಮತ್ತು ವ್ಯವಸ್ಥೆ, ತಪ್ಪಿತಗಳ ತನಿಖೆ, ಸಾಕ್ಷಿಗಳ ವಿಚಾರಣೆ, ಪ್ರಜೆಗಳ ಆರೋಗ್ಯ ನೆಮ್ಮದಿ ಅಥವಾ ಕ್ಷೇಮಕ್ಕೆ ಅಪಾಯ ಬಾರದಂತೆ ಮುಂಜಾಗ್ರತೆಯ ಸನ್ನಾಹಗಳನ್ನು ಮಾಡೋಣ, ಗ್ರಾಮದ ಎಲ್ಲೆಯ, ಬೇಲಿಗಳ ಮತ್ತು ಗೋಡೆಗಳ, ಊರುಬಾಗಿಲುಗಳ, ಚಾವಡಿಯ, ಮತ್ತು ಇತರ ಕಟ್ಟಡಗಳ, ರಕ್ಷಣೆ ಮತ್ತು ಕೈವಶ

ಮತ್ತು ಇತರ ವಿಷಯುಗಳು ; ಇವುಗಳನ್ನು ಕುರಿತು ವರ್ತಮಾನವನ್ನು ಸಂಗ್ರಹಿಸುವು ದರ ಮತ್ತು ತಿಳಿಸುವುದರ ವಿಷಯದಲ್ಲಿ ಬೇರೆ ಬೇರೆ ಸ್ಥಾನಗಳ ಗ್ರಾಮ ಪೊಲೀಸು ಅಧಿಕಾರಿಗಳ ಅಧಿಕಾರಗಳನ್ನು ಮತ್ತು ಕೆಲಸಗಳನ್ನು ನಿಯಾಮಕ ಮಾಡೋಣ ;

(iv) ರಾತ್ರಿಕಾಲದಲ್ಲಿ ಗ್ರಾಮಗಳಲ್ಲಿ ಕಾವಲು ಕಾಯೋಣ ಮತ್ತು ಗಸ್ತು ತಿರುಗೋಣ, ದರೋಡೆ ಅಥವಾ ಪೊಲೀಸಿನವರು ಹಿಡಿಯಬಹುದಾದ ಇತರ ತಪ್ಪಿತಗಳನ್ನು ತಪ್ಪಿಸೋಣ ಅಥವಾ ಎದುರಿಸೋಣ, ತಪ್ಪಿತಸ್ಥರನ್ನು ಅಟ್ಟಿಕೊಂಡು ಹೋಗೋಣ ಅಥವಾ ಹಿಡಿಯೋಣ, ಕಳವಾದ ಸ್ವತ್ತನ್ನು ತಿರುಗಿ ಸಂಪಾದಿಸೋಣ, ಗ್ರಾಮದ ಬೇಲಿಗಳನ್ನೂ, ಊರಬಾಗಿಲುಗಳನ್ನೂ ಒಳ್ಳೆಯ ಸ್ಥಿತಿಯಲ್ಲಿಡೋಣ, ಮತ್ತು ಅದೇ ರೀತಿಯಾದ ಜನಸಮೂಹಕ್ಕೆ ಸಂಬಂಧಪಟ್ಟ ಇತರ ಕೆಲಸಗಳನ್ನು ನೆರವೇರಿಸೋಣ ; ಈ ಕೆಲಸಗಳಲ್ಲಿ ಅಪೇಕ್ಷಿಸಲ್ಪಟ್ಟಾಗ ಗ್ರಾಮ ಪೊಲೀಸಿನವರಿಗೆ ಸಹಾಯ ಮಾಡಬೇಕೆಂದು ಗ್ರಾಮ ನಿವಾಸಿಗಳನ್ನು ಕೇಳೋಣ ;

(v) ತಪ್ಪಿತಸ್ಥರ ದರ್ಯಾಪ್ತು ಮತ್ತು ಶಿಕ್ಷೆಯ ವಿಷಯದಲ್ಲಿ ಗ್ರಾಮದ ಮುಖ್ಯಸ್ಥರ ಸಾಧಾರಣ ಅಧಿಕಾರಗಳನ್ನು, ಗ್ರಾಮದ ಮುಖ್ಯಸ್ಥರಿಗೆ ವಿಶೇಷವಾಗಿ ಕೊಡಬಹುದಾದ ಅಧಿಕಾರಗಳನ್ನೂ ಮತ್ತು ಅಂಥಾ ಅಧಿಕಾರಗಳನ್ನು ನಡೆಸುವುದರಲ್ಲಿ ಅನುಸರಿಸಬೇಕಾದ ರೀತಿಯನ್ನೂ ನಿಶ್ಚಯಿಸೋಣ ;

(vi) ಕೆಟ್ಟ ನಡತೆಗಾಗಿ ಅಥವಾ ಮಾಡಬೇಕಾದ ಕೆಲಸವನ್ನು ಮಾಡದೆ ಬಿಟ್ಟದಕ್ಕಾಗಿ ಗ್ರಾಮ ಪೊಲೀಸಿಗೆ ಸೇರಿದವರಿಗೆ ಇಲಾಖೆಯ ಮೂಲಕ ಅಥವಾ ಅನ್ಯಥಾ ಶಿಕ್ಷೆಯಾಗಲು ಏರ್ಪಾಡು ಮಾಡೋಣ ; ಮತ್ತು

(vii) ಈ ಪ್ರಕರಣ ಪ್ರಕಾರದ ಯಾವುದಾದರೂ ನಿಬಂಧನೆಯ ಉಲ್ಲಂಘನೆಗೆ ಒಬ್ಬ ಮಾಜಿಸ್ಟ್ರೇಟನ ಮುಂದೆ ತಪ್ಪು ಸ್ಥಿರಪಟ್ಟಾಗ ಒಂದುನೂರು ರೂಪಾಯಿಗಳಿಗೆ ಮೀರದ ದಂಡನೆಯನ್ನು ಲಗತ್ತು ಮಾಡೋಣ.

(2) ಮೇಲ್ಕಂಡಂತೆ ಅಂಥಾ ನಿಬಂಧನೆಗಳು ಮಾಡಲ್ಪಟ್ಟು ಪ್ರಕಟಿಸಲ್ಪಡುವವರೆಗೆ, 1872ನೆಯ ಅಕ್ಟೋಬರು 10ನೇ ತೇದಿಯ ಜಿ. 23ನೆ ನಂಬರಿನ ಇಂಡಿಯಾ ಸರ್ಕಾರದ ಫಾರಿನ್ ಇಲಾಖೆಯ ಪ್ರಕಟನೆಯ ಮೇರೆ ಪ್ರಕಟಿಸಲ್ಪಟ್ಟ ಮತ್ತು ಅದಕ್ಕೆ ತರುವಾಯ ಆಗಿದ್ದಾಗ್ಗೆ ತಿದ್ದುಪಾಟು ಮಾಡಲ್ಪಟ್ಟ "ಮೈಸೂರು ಸೀಮೆಯ ಗ್ರಾಮ ಪೊಲೀಸಿನ ಸಂಸ್ಥಾಪನೆಯ ಮತ್ತು ಕ್ರಮಪಡಿಸುವಿಕೆಯ ನಿಬಂಧನೆಗಳು" ಉಪಯೋಗದಲ್ಲಿ ಇರುತ್ತಿರತಕ್ಕದ್ದು ಮತ್ತು ಈ ಪ್ರಕರಣದ ಮೇರೆ ಮಾಡಲ್ಪಟ್ಟ ನಿಬಂಧನೆಗಳಾಗಿ ಇರುವಂತೆ ಭಾವಿಸಲ್ಪಡತಕ್ಕದ್ದು.

1890ರ 4 ಪ್ರ. 3.

ಅರ್ಥ ವಿವರಣೆಗಳು.

4. ಈ ರೆಗ್ಯುಲೇಷನಿನಲ್ಲಿ, ವಿಷಯದಲ್ಲಿ ಆಗಲಿ ಅನ್ವಯದಲ್ಲಾಗಲಿ ವಿರೋಧವಾದದ್ದು ಏನಾದರೂ ಇದ್ದ ಹೊರತು :—

"ಇನ್ಸ್ಪೆಕ್ಟರ್ ಜನರಲ್ಲು," "ಡೆಪ್ಯುಟಿ ಇನ್ಸ್ಪೆಕ್ಟರ್ ಜನರಲು," "ಅಸಿಸ್ಟೆಂಟ್ ಇನ್ಸ್ಪೆಕ್ಟರ್ ಜನರಲು," "ಡಿಸ್ಟ್ರಿಕ್ಟ ಸೂಪರಿಂಟೆಂಡೆಂಟ್," "ಅಸಿಸ್ಟೆಂಟ್ ಸೂಪರಿಂಟೆಂಡೆಂಟ್."

(a) "ಇನ್ಸ್ಪೆಕ್ಟರ್ ಜನರಲು," "ಡೆಪ್ಯುಟಿ ಇನ್ಸ್ಪೆಕ್ಟರ್ ಜನರಲು," "ಅಸಿಸ್ಟೆಂಟು ಇನ್ಸ್ಪೆಕ್ಟರ್ ಜನರಲು," "ಡಿಸ್ಟ್ರಿಕ್ಟ ಸೂಪರಿಂಟೆಂಡೆಂಟು," "ಮತ್ತು ಅಸಿಸ್ಟೆಂಟು ಸೂಪರಿಂಟೆಂಡೆಂಟು," ಎಂದರೆ ಈ ರೆಗ್ಯುಲೇಷನಿನಂತೆ ನೇಮಕವಾದ ಪೊಲೀಸು ಇನ್ಸ್ಪೆಕ್ಟರ್ ಜನರಲು, ಪೊಲೀಸು ಡೆಪ್ಯುಟಿ ಇನ್ಸ್ಪೆಕ್ಟರ್ ಜನರಲು, ಪೊಲೀಸು ಅಸಿಸ್ಟೆಂಟ್ ಇನ್ಸ್ಪೆಕ್ಟರ್ ಜನರಲು, ಪೊಲೀಸು ಡಿಸ್ಟ್ರಿಕ್ಟ ಸೂಪರಿಂಟೆಂಡೆಂಟು ಮತ್ತು ಪೊಲೀಸು ಅಸಿಸ್ಟೆಂಟು ಸೂಪರಿಂಟೆಂಡೆಂಟು ಎಂದು ಅರ್ಥ ;

...ಟಿನಿಂದ.

"ಡಿಸ್ಟ್ರಿಕ್ಟ ಸೂಪರಿಂಟೆಂಡೆಂಟು."

(b) "ಡಿಸ್ಟ್ರಿಕ್ಟ ಸೂಪರಿಂಟೆಂಡೆಂಟು" ಎಂಬುವುದರಲ್ಲಿ ಯಾವ ಡಿಸ್ಟ್ರಿಕ್ಟಿನಲ್ಲಾಗಲಿ ಅಥವಾ ಒಂದು ಡಿಸ್ಟ್ರಿಕ್ಟಿನ ಯಾವ ಭಾಗದಲ್ಲಾಗಲಿ ಈ ರೆಗ್ಯುಲೇಷನಿನ ಮೇರೆಗೆ ಒಬ್ಬ ಪೊಲೀಸು ಡಿಸ್ಟ್ರಿಕ್ಟ ಸೂಪರಿಂಟೆಂಡೆಂಟನ ಎಲ್ಲಾ ಕೆಲಸಗಳನ್ನು ಅಥವಾ ಆ ವ್ಯಕ್ತಿ ಯಾವ ಕೆಲಸಗಳನ್ನಾದರೂ ಮಾಡಲು ಸರ್ಕಾರದ ಸಾಮಾನ್ಯವಾದ ಅಥವಾ ವಿಶೇಷವಾದ ಅಪ್ಪಣೆಯಿಂದ ನೇಮಕವಾದ ಯಾವ ಅಸಿಸ್ಟೆಂಟು ಸೂಪರಿಂಟೆಂಡೆಂಟು ಅಥವಾ ಇತರ ಮನುಷ್ಯನಾದರೂ ಸೇರಿ ಇರುತ್ತಾನೆ ;

ಇನ್ಸ್ಪೆಕ್ಟರು.

(c) "ಇನ್ಸ್ಪೆಕ್ಟರು" ಎಂಬುವುದರಲ್ಲಿ, ಸರ್ಕಾರದವರು ಮಾಡಬಹುದಾದ ನಿಬಂಧನೆಗಳಿಗೆ ಮತ್ತು ಅಪ್ಪಣೆಗಳಿಗೆ ಒಳಪಟ್ಟು "ಸಬ್ ಇನ್ಸ್ಪೆಕ್ಟರ್" ಮತ್ತು "ಜಮೇದಾರ್" ಸೇರಿ ಇರುತ್ತಾರೆ ;

"ಪೊಲೀಸು ಆಫಿಸರು."

(d) "ಪೊಲೀಸು ಆಫಿಸರು" ಎಂದರೆ ಈ ರೆಗ್ಯು
ಪನಿನ ಪ್ರಕಾರ ನೇಮಕವಾದ ಪೊಲೀಸು ಸೈನ್ಯಕ್ಕೆ ಸೇರಿದ
ಯಾವನಾದರೂ ಒಬ್ಬನೆಂದು ಅರ್ಥ;

"ಕಾನ್‌ಸ್ಟೆಬಿಲು."

(e) "ಕಾನ್‌ಸ್ಟೆಬಿಲು" ಎಂದರೆ ಅತ್ಯಂತ ಕೀಳ
ಪೊಲೀಸು ಆಫಿಸರು ಎಂದು ಅರ್ಥ.

ಹೊಸದು

"ಡಿಸ್ಟ್ರಿಕ್ಟ್."

(f) "ಡಿಸ್ಟ್ರಿಕ್ಟು" ಎಂದರೆ 1888ನೆ ವರ್ಷದ ಮೈಸೂರು ಲ್ಯಾಂಡ್
ನ್ಯೂ ಕೋಡಿನ ಕೆಲಸಗಳಿಗಾಗಿ ಒಂದು ಡಿಸ್ಟ್ರಿಕ್ಟೆಂದು ಏಪ
ರುವ ರಾಜ್ಯದ ಭಾಗವೆಂದು ಅರ್ಥ ಮತ್ತು ಆ ಪಾಠಿನಲ್ಲಿ ಕ
ಗ್ಯುಲೇಷನಿನ ಕೆಲಸಗಳಿಗಾಗಿ ಒಬ್ಬ ಡಿಸ್ಟ್ರಿಕ್ಟು ಸೂಪರಿ
ಡೆಂಟಿನ ವಶದಲ್ಲಿ ಇಡಲ್ಪಟ್ಟಿರುವ ಡಿಸ್ಟ್ರಿಕ್ಟಿನ ಭಾಗವೂ ಸೇರಿ ಇರುತ್ತದೆ;

ಹೊಸದು

"ತಾಲ್ಲೂಕು" ಮತ್ತು "ಸಬ್ ತಾಲ್ಲೂಕು."

(g) "ತಾಲ್ಲೂಕು" ಮತ್ತು "ಸಬ್ ತಾಲ್ಲೂಕ
ಎಂದರೆ ಮೈಸೂರು ಸೀಮೆಯ ಲ್ಯಾಂಡ್ ರೆವಿನ್ಯೂ ಕೋಡಿನ
ರೆಗೆ ರವಿನ್ಯೂ ನ್ಯಾಯಾಧಿಕಾರವನ್ನು ಒಬ್ಬ ಅಮಲ್ದಾರು
ತ್ತು ಒಬ್ಬ ಡೆಪ್ಯುಟಿ ಅಮಲ್ದಾರು ಯಾವ ಸ್ಥಳೀಯ ಪ್ರಾ
ಗಳೊಳಗೆ ಸಾಧಾರಣವಾಗಿ ನಡೆಸುತ್ತಾರೆಯೋ ಆಯಾಯ ಸ್ಥ
ಪ್ರಾಂತ್ಯಗಳೆಂದು ಅರ್ಥ;

"ಬೀದಿ."

(h) "ಬೀದಿ" ಎಂಬುವುದರಲ್ಲಿ ಬಹಿರಂಗವಾದ ದಾರಿಯಾಗಿರಲಿ ಇಲ್ಲದೆ
ಲಿ ಜನರು ಸಂಚರಿಸಬಹುದಾದ ಯಾವ ರಾಜಮಾರ್ಗವಾದ
ಮತ್ತು ಯಾವ ದಡ್ಡಿನ ಮೇಲಾಗಲಿ, ಸೇತುವೆ ಮೇಲಾಗಲಿ, ಸ
ವಿನ ಅಥವಾ ಕಮಾನಿನ ಮೇಲಾಗಲಿ ಹಾಯುವ ದಾರಿ, ಮ
ಯಾವ ರಸ್ತೆ, ಸಂದು, ಕಾಲುದಾರಿ, ಚೌಕ, ಅಂಗಳ, ಓಣಿ ಅಥವಾ ಹಾದಿಯಾದ
ಸೇರಿ ಇರುತ್ತದೆ.

"ಸಾಧಾರಣ ಜೂಜು ಆಡುವ ಮನೆ."

(i) "ಸಾಧಾರಣ ಜೂಜು ಆಡುವ ಮನೆ" ಎಂದರೆ ಜೂಜಾಡುವ ಸಾಧನ
ಅಥವಾ ಜೂಜಾಡುವ ಕಟ್ಟಡದ ಆವರಣದ ಕೊಠಡಿಯು, ಅಥ
ಸ್ಥಳದ ಉಪಯೋಗಕ್ಕಾಗಿ ಆಗಲಿ, ಅಥವಾ ಬೇರೆ ಬಗೆಯಾಗಿ
ಗಾದರೂ ಸರಿಯೆ, ದುಡ್ಡು ತೆಗೆದುಕೊಳ್ಳುವುದರ ಮೂಲಕವಾ
ಅಂಥಾ ಕಟ್ಟಡವನ್ನು, ಆವರಣವನ್ನು, ಕೊಠಡಿಯನ್ನು ಅಥ
ಸ್ಥಳವನ್ನು ಅದರ ಒಡೆಯನಾಗಿ, ಸ್ವಾಧೀನಕರ್ತನಾಗಿ, ಉಪಯೋಗಿಸುವವನಾಗಿ, ಅಥ
ಇಟ್ಟುಕೊಂಡು ಇರುವವನಾಗಿ ಇರುವ ಮನುಷ್ಯನ ಆದಾಯ ಅಥವಾ ಲಾಭಕ್ಕೋಸ
ಎಲ್ಲಿ ಇಸ್ಪೇಟುಗಳನ್ನು, ಪತ್ತಗಳನ್ನು, ಜೂಜಾಟದ ಹಲಗೆಗಳನ್ನು ಅಥವಾ ಮೇಜ
ನ್ನು, ಅಥವಾ ಇತರ ಸಾಧನಗಳನ್ನು ಇಟ್ಟು ಇರುತ್ತಾರೆಯೋ ಅಥವಾ ಉಪಯೋಗಿಸು
ರೆಯೋ ಅಂಥಾ ಯಾವುದಾದರೂ ಕಟ್ಟಡ, ಆವರಣ, ಕೊಠಡಿ ಅಥವಾ ಸ್ಥಳವೆಂದು ಅರ್ಥ

"ದನಕರ."

(j) "ದನಕರ" ಎಂಬುವುದರಲ್ಲಿ ಆನೆಗಳು, ಒಂ
ಗಳು, ಕುದುರೆಗಳು, ಕತ್ತೆಗಳು, ಹೇಸರಗತ್ತೆಗಳು, ಕುರಿಗಳ
ಆಡುಗಳು ಮತ್ತು ಹಂದಿಗಳು ಸೇರಿರುತ್ತವೆ;

ಕ್ರಿಮಿನಲು ಪ್ರೊಸೀಡ್ಯುರು ಕೋಡಿನಲ್ಲಿ ಅರ್ಥ ವಿವರಿಸಿ ಇರುವ ಮಾತುಗಳು ಮತ್ತು ಉಕ್ತಿಗಳು.

(k) ಕ್ರಿಮಿನಲು ಪ್ರೊಸಿಡ್ಯುರು ಕೋಡಿನಲ್ಲಿ ಅ
ವಿವರಣೆಯಾಗಿರುವ ಮಾತುಗಳಿಗೆ ಮತ್ತು ಉಕ್ತಿಗಳಿಗೆ ಆ ಕೋ
ನಲ್ಲಿ ಯಾವ ಅರ್ಥವೋ ಅದೇ ಅರ್ಥವನ್ನು ಅವು ಉಳ್ಳವಾಗಿ ಇ
ತ್ತವೆ.

2ನೆ ಅಧ್ಯಾಯ—ಕ್ರಮ ಪೊಲೀಸಿನ ಸಂಸ್ಥಾಪನೆ.

1861ರ 5ನೆ ಆಕ್ಟಿನ 2ನೆ ಪ್ರಕರಣದಿಂದ ಹೊಂದಿಸಿದುದು.

ಪೊಲೀಸು ಸೇನೆಯ ಏರ್ಪಾಡು.

5. ಸರ್ಕಾರದ ಕೈಕೆಳಗೆ ಇರುವ ಎಲ್ಲಾ ಪೊಲೀಸು ಸಿಬ್ಬಂದಿಯನ್ನೂ ಈ ರೆಗ
ಲೇಷನಿನ ಕಾರ್ಯಗಳಿಗಾಗಿ, ಒಂದು ಪೋಲೀಸು ಸೇನೆ ಎಂದು ಎ
ಸತಕ್ಕದ್ದು, ಮತ್ತು ಅದರಲ್ಲಿ ಸರ್ಕಾರದಿಂದ ಆಗಿಂದಾಗ್ಗೆ ಅಜ್ಞ
ತವಾಗತಕ್ಕಷ್ಟುಮಂದಿ ಆಫಿಸರುಗಳು ಮತ್ತು ಸೈನಿಕರಾದ ಜ
ರು ಇರಬೇಕಲ್ಲದೆ ಅದಕ್ಕೆ ಸೇರಿದವರನ್ನೆಲ್ಲಾ ಕ್ರಮವಾಗಿ ಅ
ಬಗೆ ಪಟ್ಟಿಯಲ್ಲಿ ಸೇರಿಸಿಕೊಳ್ಳಬೇಕು, ಅವರನ್ನು ಹಾಗೆ ಸರ್ಕಾರದಿಂದ ಅಪ್ಪಣೆಯಾಗ
ರೀತಿಯಲ್ಲಿ ಏರ್ಪಡಿಸಿ ಅವರಿಗೆ ಹಾಗೆ ನೇಮಕವಾಗುವಂಥಾ ಸಂಬಳ ಸಲ್ಲತಕ್ಕದ್ದು.

ಬೊಂಬಾಯಿನ 1890ರ 4ಪ್ರ. 5.

ಪೊಲೀಸು ಇನ್ಸ್ಪೆಕ್ಟರ್ ಜನರಲಿನ,

6. (1) ಮೈಸೂರು ಸೀಮೆಯ ಪೋಲೀಸು ಸೈನ್ಯದ ಮೇಲಣ ಪಾರುಪತ್ಯ, ಮತ್ತು ವಿಚಾರಣೆ, ಇವುಗಳಿಗೋಸ್ಕರ, ಸರ್ಕಾರದವರು ಒಬ್ಬ ಪೊಲೀಸು ಇನ್ಸ್ಪೆಕ್ಟರ್ ಜನರಲನ್ನು ಏರ್ಪಡಿಸತಕ್ಕದ್ದು.

ಮತ್ತು ಡೆಪ್ಯೂಟಿ ಅಥವಾ ಅಸಿಸ್ಟೆಂಟು ಇನ್ಸ್ಪೆಕ್ಟರ್ ಜನರಲಿನ ನೇಮಕ.

(2) ಸರ್ಕಾರದವರು ಒಬ್ಬ ಅಥವಾ ಹೆಚ್ಚುಮಂದಿ ಡೆಪ್ಯೂಟಿ ಅಥವಾ ಅಸಿಸ್ಟೆಂಟು ಪೊಲೀಸು ಇನ್ಸ್ಪೆಕ್ಟರ್ ಜನರಲರನ್ನು ನೇಮಕ ಮಾಡಬಹುದು; ಇವರಿಗೆ ಸರ್ಕಾರಕ್ಕೆ ಯುಕ್ತವೆಂದು ತೋರುವಂತೆ; ಪೊಲೀಸು ಇನ್ಸ್ಪೆಕ್ಟರ್ ಜನರಲಿನ ನ್ಯಾಯವಾದ ಕೆಲಸಗಳಲ್ಲಿ ಸೇರಿದಂಥಾ ಕೆಲಸಗಳನ್ನಾಗಲಿ ಅಥವಾ ಆ ಕೆಲಸಗಳಿಗೆ ಸಹಾಯಕರವಾಗಿಯೂ ಮತ್ತು ಅವುಗಳನ್ನು ನೆರವೇರಿಸುವಂಥವಾಗಿಯೂ ಇರುವ ಕೆಲಸಗಳನ್ನು ಆಗಲಿ ಸರ್ಕಾರದವರು ಗೊತ್ತುಮಾಡಿಕೊಡಬಹುದು.

ಅವರ ಚಾಕರಿಯನ್ನು ಕೊಂಚ ಕಾಲ ಪರ್ಯಂತ ನಿಲ್ಲಿಸೋಣ ಅಥವಾ ಅವರನ್ನು ಚಾಕರಿಯಿಂದ ತೆಗೆದುಹಾಕೋಣ.

(3) ಇನ್ಸ್ಪೆಕ್ಟರು ಜನರಲನ್ನು ಮತ್ತು ಡೆಪ್ಯೂಟಿ ಅಥವಾ ಅಸಿಸ್ಟೆಂಟು ಇನ್ಸ್ಪೆಕ್ಟರ್ ಜನರಲನ್ನು ಅವರ ಉದ್ಯೋಗದಿಂದ ಸರ್ಕಾರದವರು ಕೊಂಚಕಾಲದ ವರೆಗೆ ನಿಲ್ಲಿಸಬಹುದು ಅಥವಾ ತೆಗೆದುಹಾಕಬಹುದು.

ಬೊಂಬಾಯಿ-1890ರ 4. ಪ್ರ. 6.

ಡಿಸ್ಟ್ರಿಕ್ಟು ಮತ್ತು ಅಸಿಸ್ಟೆಂಟು ಸೂಪರಿಂಟೆಂಡೆಂಟರ ನೇಮಕ.

7. ಸರ್ಕಾರದವರು ಯುಕ್ತವೆಂದು ಎಣಿಸಬಹುದಾದಂಥಾ ಪೊಲೀಸು ಸೂಪರಿಂಟೆಂಡೆಂಟರನ್ನು ಮತ್ತು ಅಸಿಸ್ಟೆಂಟು ಸೂಪರಿಂಟೆಂಡೆಂಟರನ್ನು ಪ್ರತಿ ಡಿಸ್ಟ್ರಿಕ್ಟಿಗೆ ನೇಮಿಸಬಹುದು, ಮತ್ತು ಅಂಥಾ ಆಫಿಸರುಗಳ ಪೈಕಿ ಯಾರನ್ನಾದರೂ ಸರ್ಕಾರದವರು ಯುಕ್ತವೆಂದು ಎಣಿಸಬಹುದಾದಂತೆ ಚಾಕರಿಯಿಂದ ತಪ್ಪಿಬಿಡಬಹುದು, ಕೊಂಚಕಾಲದ ತನಕ ನಿಲ್ಲಿಸಬಹುದು, ಕಮ್ಮಿ ಚಾಕರಿಗೆ ಇಳಿಸಬಹುದು, ತೆಗೆದುಹಾಕಬಹುದು ಅಥವಾ ವರ್ಗಮಾಡಬಹುದು.

ಬೊಂಬಾಯಿ-1890ರ 4 ಪ್ರ. 8,

ಇನ್ಸ್ಪೆಕ್ಟರುಗಳ ನೇಮಕ.

8. ಇನ್ಸ್ಪೆಕ್ಟರುಗಳ ನೇಮಕವು ಸರ್ಕಾರದ ನಿಬಂಧನೆಗಳಿಗೆ ಮತ್ತು ಅಪ್ಪಣೆಗಳಿಗೆ ಒಳಪಟ್ಟು, ಇನ್ಸ್ಪೆಕ್ಟರ್ ಜನರಲಿಗೆ ಸೇರಿ ಇರತಕ್ಕದ್ದು.

ಬೊಂಬಾಯಿ-1890ರ 4 ಪ್ರ. 9.

ಇನ್ಸ್ಪೆಕ್ಟರಿನ ಸ್ಥಾನಕ್ಕೆ ಕೀಳ್ಪಟ್ಟ ಪೊಲೀಸು ಆಫಿಸರುಗಳ ನೇಮಕ.

9. ಪ್ರತಿ ಡಿಸ್ಟ್ರಿಕ್ಟಿನಲ್ಲಿ ಇನ್ಸ್ಪೆಕ್ಟರಿನ ಸ್ಥಾನಕ್ಕೆ ಕೆಳಗಿನ ಪೊಲೀಸು ಆಫಿಸರುಗಳನ್ನು, ಸರ್ಕಾರದವರು ಆಗಿಂದಾಗ್ಗೆ ವಿಧಾಯಕ ಮಾಡಬಹುದಾದಂಥಾ ನಿಬಂಧನೆಗಳಿಗೆ ಒಳಪಟ್ಟು, ಡೆಪ್ಯುಟಿ ಕಮಿಷನರು ಮತ್ತು ಡಿಸ್ಟ್ರಿಕ್ಟು ಸೂಪರಿಂಟೆಂಡೆಂಟು ನೇಮಕ ಮಾಡತಕ್ಕದ್ದು.

ಬೊಂಬಾಯಿ-1890ರ 4 ಪ್ರ. 10.

ಇನ್ಸ್ಪೆಕ್ಟರುಗಳಿಗೆ ಕೊಡಬೇಕಾದ ಚಾಕರಿಯ ನೇಮಕದ ಸರ್ಟಿಫಿಕೇಟುಗಳು.

10. (1) ಚಾಕರಿಗೆ ನೇಮಕವಾದಮೇಲೆ, ಇನ್ಸ್ಪೆಕ್ಟರು, B. ಪಟ್ಟಿಯ Iನೆ ಮಾದರಿಯಲ್ಲಿ ನೇಮಕದ ಸರ್ಟಿಫಿಕೇಟನ್ನು ಇನ್ಸ್ಪೆಕ್ಟರು ಜನರಲಿಂದ ಬರಮಾಡಿಕೊಳ್ಳತಕ್ಕದ್ದು.

ಬೊಂಬಾಯಿ-1890ರ 4 ಪ್ರ. 11. (1)

ಇನ್ಸ್ಪೆಕ್ಟರ ಸ್ಥಾನಕ್ಕೆ ಕೀಳ್ಪಟ್ಟ ಪೊಲೀಸು ಆಫಿಸರುಗಳಿಗೆ ಕೊಡಬೇಕಾದ ಉದ್ಯೋಗದ ಸರ್ಟಿಫಿಕೇಟುಗಳು.

(2) ಇನ್ಸ್ಪೆಕ್ಟರ ಸ್ಥಾನಕ್ಕೆ ಕೆಳಗಿನ ಪ್ರತಿ ಪೊಲೀಸು ಆಫಿಸರು, ಸೈನ್ಯದ ಪಟ್ಟಿಗೆ ಸೇರಿ ಆದ ಮೇಲೆ, ಯಾವ ಡಿಸ್ಟ್ರಿಕ್ಟಿನಲ್ಲಿ ಅವನು ಆ ಪಟ್ಟಿಗೆ ಸೇರುತ್ತಾನೆಯೋ ಆ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಿಂದ B ಪಟ್ಟಿಯ IIನೆ ಮಾದರಿಯಲ್ಲಿ ಸರ್ಟಿಫಿಕೇಟನ್ನು ಬರಮಾಡಿಕೊಳ್ಳತಕ್ಕದ್ದು.

ಬೊಂಬಾಯಿ-1890ರ 4 ಪ್ರ. 11. (2)

ಮೇಲೆ ಕಂಡಂತೆ ನೇಮಕವಾದ ಜನಗಳ ಅಧಿಕಾರಗಳು, ಮುಂತಾದುದು.

11. (1) ಮೇಲೆ ಕಂಡಂತೆ ನೇಮಕವಾಗುವ ಪ್ರತಿ ಮನುಷ್ಯನಿಗೆ, ಹಾಗೆ ನೇಮಕವಾದ ನಿಮಿತ್ತದಿಂದ, ಒಬ್ಬ ಪೊಲೀಸು ಆಫಿಸರ ಅಧಿಕಾರಗಳು, ಕೆಲಸಗಳು, ಸ್ವಾತಂತ್ರ್ಯಗಳು ಮತ್ತು ಉತ್ತರವಾದಿತ್ವಗಳು ವಹಿಸಲ್ಪಡತಕದ್ದು.

ಬೊಂಬಾಯಿ-1890ರ 4 ಪ್ರ. 11. (3) (a) ಸ್ವಲ್ಪ ಹೆಚ್ಚಾಗಿ ಸೇರಿಸಿದೆ.

ಅಂಥಾ ಸರ್ಟಿಫಿಕೇಟುಗಳು ಯಾವಾಗ ವ್ಯರ್ಥವಾಗೋಣ.

(2) (a) ನೇಮಕದ ಪ್ರತಿ ಸರ್ಟಿಫಿಕೇಟು, ಅದರಲ್ಲಿ ಹೆಸರು ಕಂಡ ಮನುಷ್ಯನು ಯಾವ ಕಾರಣಕ್ಕೋಸ್ಕರವಾಗಿಯಾದರೂ, ಪೊಲೀಸಿಗೆ ಸೇರಿರೋಣ ಮುಗಿದಾಗೆಲ್ಲಾ ನಿರರ್ಥಕವಾಗತಕ್ಕದ್ದು, ಮತ್ತು ಅದು ಅದನ್ನು ಬರಮಾಡಿಕೊಳ್ಳುವುದಕ್ಕೆ ಅಧಿಕಾರವನ್ನು ಹೊಂದಿರುವ ಯಾವ ಆಫಿಸರಿಗಾದರೂ ಅವನಿಂದ ಕೂಡಲೆ ಒಪ್ಪಿಸಲ್ಪಡತಕ್ಕದ್ದು.

ಬೊಂಬಾಯಿ–1890ರ 4 ಪ್ರ. 11 (3) (b).

(b). ಒಬ್ಬ ಪೊಲೀಸು ಆಫಿಸರು ಅವನನ್ನು ಉದ್ಯೋಗದಿಂದ ನಿಲ್ಲಿಸಿರುವ ಕಾರಣದಿಂದ್ಲ ಪೊಲೀಸು ಆಫಿಸರಾಗಿರೋಣ ಮುಗಿಯತಕ್ಕದ್ದಿಲ್ಲ; ಆದರೆ ಹಾಗೆ ಉದ್ಯೋಗದಿಂದ ತಡೆದಿರುವಾಗ್ಗೆ ಆತನಿಗೆ ವರುಗಳ ಅಧಿಕಾರಗಳು ಹಿಸಿದ ಅಧಿಕಾರಗಳು ಕೆಲಸಗಳು ಮತ್ತು ಸ್ವಾತಂತ್ರ್ಯಗಳು ಕೊಂಚಕಾಲದವರೆಗೆ ನಿಲ್ಲತಕ್ಕದ್ದು, ಮತ್ತು ಹಾಗೆ ಅಧಿಕಾರಗಳು ಮುಂತಾದುವನ್ನು ನಿಲ್ಲಿಸೋಣ ನಡೆಯುವಿದ್ದರೆ ಹೇಗೋ ಹಾಗೆ ಅದೇ ಉತ್ತರವಾದಿತ್ವಗಳಿಗೂ ಅದೇ ಮೇಲಧಿಕಾರಿಗಳಿಗೂ ಒಳಪಟ್ಟು ಇರತಕ್ಕದ್ದು.

ಪೊಲೀಸು ಆಫಿಸರು ಮುಂತಾದುವನ್ನು ಕೊಂಚಕಾಲದ ಮಟ್ಟಿಗೆ ನಿಲ್ಲಿಸೋಣ.

ಹೊಸದು.

12. ಇನ್ಸ್‌ಪೆಕ್ಟರ್ ಜನರಲು ಪೊಲೀಸು ಇಲಾಖೆಯ ಮುಖ್ಯಸ್ಥನಾಗಿ ಮತ್ತು ಪೊಲೀಸಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳಲ್ಲಿಯೂ ಸರ್ಕಾರಕ್ಕೆ ಆಲೋಚನೆ ಹೇಳುವವನಾಗಿ ಇರತಕ್ಕದ್ದು. ಆತನು ಪೊಲೀಸು ಸೇನೆಯ ಮೇಲೆ ಮತ್ತು ತಪ್ಪಿತದ ಮೇಲೆ-ತಕ್ಷಾಪಿ ಕ್ರಮವಾಗಿ ತಪ್ಪಿತ ಮಾಡುವುದೇ ಕೆಲಸವಾಗಿರುವವರಿಂದ ಮಾಡಲ್ಪಡುವ ತಪ್ಪಿತದ ಮೇಲೆ—ಸಾಮಾನ್ಯವಾದ ಮೇಲ್ವಿಚಾರಣೆಯನ್ನು ನಡೆಸತಕ್ಕದ್ದು, ಮತ್ತು ಸರ್ಕಾರದವರ ಅನುಮತಿಗೆ ಒಳಪಟ್ಟು ಈ ರಗ್ಯುಲೇಷನಿನ 24 ಮತ್ತು 25ನೇ ಪ್ರಕರಣಗಳ ವಿಧಿಗಳ ಮೇರೆ ನಿಬಂಧನೆಗಳನ್ನೂ ಅಪ್ಪಣೆಗಳನ್ನೂ ಆತನು ಮಾಡಬಹುದು.

ಇನ್ಸ್‌ಪೆಕ್ಟರ್ ಜನರಲಿನ ಸಾಮಾನ್ಯ ಅಧಿಕಾರಗಳು.

ಬೊಂಬಾಯಿ–1890ರ 4 ಪ್ರ. 7.

13. ಪೊಲೀಸು ಇನ್ಸ್‌ಪೆಕ್ಟರು ಜನರಲಿಗೆ ಮೈಸೂರು ಸೀಮೆಯಲ್ಲೆಲ್ಲಾ ಮೊದಲನೆ ತರಗತಿಯ ಮಾಜಿಸ್ಟ್ರೇಟನ ಅಧಿಕಾರಗಳು ಇರತಕ್ಕದ್ದು, ಆದರೆ ಆತನು ಆ ಅಧಿಕಾರಗಳನ್ನು ಆಗಿಂದಾಗ್ಗೆ ಸರ್ಕಾರದಿಂದ ಗೊತ್ತಾಗಬಹುದಾದಮಟ್ಟಿಗೆ ಒಳಪಟ್ಟು ನಡೆಸತಕ್ಕದ್ದು.

ಇನ್ಸ್‌ಪೆಕ್ಟರು ಜನರಲು ಮಾಜಿಸ್ಟ್ರೇಟನ ಅಧಿಕಾರಗಳನ್ನು ಹೊಂದೋಣ; ಸರ್ಕಾರದಿಂದ ಗೊತ್ತಾಗುವ ಮಟ್ಟುಗಳಿಗೆ ಒಳಪಟ್ಟು ಆತನು ಆ ಅಧಿಕಾರಗಳನ್ನು ನಡೆಸೋಣ.

ಬೊಂಬಾಯಿ–1890ರ 4 ಪ್ರ. 12ಕ್ಕೆ ಹೆಚ್ಚು ವಿಷಯಗಳನ್ನು ಸೇರಿಸಿ ಹೊಂದಿಸಿದೆ.

14. ಇನ್ಸ್‌ಪೆಕ್ಟರು ಜನರಲಿನ ಸಾಧಾರಣ ಮೇಲ್ವಿಚಾರಣೆಗೆ ಒಳಪಟ್ಟು ಡೆಪ್ಯುಟಿ ಕಮಿಷನರು ತನ್ನ ಡಿಸ್ಟ್ರಿಕ್ಟು ಪೊಲೀಸಿನ ಮುಖ್ಯಸ್ಥನಾಗಿ ಇರತಕ್ಕದ್ದು ಮತ್ತು ಆ ಪ್ರಯುಕ್ತ, ತನ್ನ ಡಿಸ್ಟ್ರಿಕ್ಟಿನ ಪೊಲೀಸು ಸೈನ್ಯದವರು ಅವರ ಕೆಲಸಗಳನ್ನು ಸಮರ್ಥವಾಗಿ ನೆರವೇರಿಸುವುದಕ್ಕೆ ಸಂಬಂಧಪಡುವ ಎಲ್ಲಾ ಸಂಗತಿಗಳನ್ನೂ ನೇಮಿಸಿ ಕ್ರಮಪಡಿಸತಕ್ಕದ್ದು.

ಡೆಪ್ಯುಟಿ ಕಮಿಷನರ ಸಾಮಾನ್ಯ ಅಧಿಕಾರಗಳು.

ಹೊಸದು.

15. (1) ಈ ರಗ್ಯುಲೇಷನ್ ಮೇರೆ ಡೆಪ್ಯುಟಿ ಕಮಿಷನರಿಗಿರುವ ಎಲ್ಲಾ ಅಧಿಕಾರಗಳನ್ನೂ ಅಥವಾ ಅವುಗಳಲ್ಲಿ ಯಾವನ್ನಾದರೂ ಡಿಸ್ಟ್ರಿಕ್ಟು ಸೂಪರಿಂಟೆಂಡೆಂಟು ಇದಕ್ಕಾಗಿ ಸರ್ಕಾರದವರು ಮಾಡಬಹುದಾದ ನಿಬಂಧನೆಗಳಿಗೂ ಅಪ್ಪಣೆಗಳಿಗೂ, ಮತ್ತು ಡೆಪ್ಯುಟಿ ಕಮಿಷನರ ಸಾಮಾನ್ಯ ಮೇಲ್ವಿಚಾರಣೆಗೂ ಒಳಪಟ್ಟು, ನಡೆಸಬಹುದು; ಮತ್ತು ಡೆಪ್ಯುಟಿ ಕಮಿಷನರ ಅಧಿಕಾರಗಳಿಗೂ ಉತ್ತರವಾದಿತ್ವಕ್ಕೂ ಅಪಾಯವಿಲ್ಲದೆ, ಡಿಸ್ಟ್ರಿಕ್ಟು ಸೂಪರಿಂಟೆಂಡೆಂಟು ಈ ಕೆಳಗಿನವುಗಳಿಗೆ ಸಂಬಂಧಪಟ್ಟ ಎಲ್ಲಾ ಸಾಧಾರಣವಾದ ವಿಷಯಗಳ ಮೇಲೆ ನೇರಾದ ಮೇಲ್ವಿಚಾರಣೆಯನ್ನು ಉಂಟಾಗಿರತಕ್ಕದ್ದು:—

ಸೂಪರಿಂಟೆಂಡೆಂಟನ ಅಧಿಕಾರಗಳು.

(a) ಆಯುಧಗಳು, ಸೈನ್ಯದ ಉಪಕರಣಗಳು, ಬಟ್ಟೆ;

(b) ಕವಾತು, ವ್ಯಾಯಾಮ;—

(c) ಗುಂಪುಗಳನ್ನು, ಪ್ರಸಿದ್ಧರಾದ ಕೊಳ್ಳೆಯವರೆಂದು ಅನುಮಾನಿಸಲ್ಪಟ್ಟವರನ್ನು ನೋಡೋಣ ಮತ್ತು ಕಾವಲಿನಲ್ಲಿ ಇಡೋಣ; ವರ್ತಮಾನ ಮತ್ತು ಸಮಾಚಾರವನ್ನು ಸಂಗ್ರಹಿಸೋಣ ಮತ್ತು ತಿಳಿಸೋಣ; ಜೇಲಿಗೆ ಮುದ್ರೆ ಹಾಕಿಸುವುದರಿಂದ ಅಥವಾ ಅನ್ಯಥಾ ಜನಗಳ ಗುರುತು ಕಂಡುಹಿಡಿಯೋಣ;

(d) ಕೆಲಸಗಳ ಮತ್ತು ಜೀಟುಗಳ ಅಥವಾ ಗಸ್ತು ತಿರುಗುವ ಪ್ರದೇಶಗಳ ಹಂಚಿಗೆ;

(e) ನ್ಯಾಯಗಳಲ್ಲಿಯೂ (ಕಾನೂನುಗಳಲ್ಲಿಯೂ) ಅಪ್ಪಣೆಗಳಲ್ಲಿಯೂ ಮತ್ತು ಪೊಲೀಸು ನಡವಳಿಕೆಯ ವಿಧಾನಗಳಲ್ಲಿಯೂ ಪೊಲೀಸು ಸೈನಿಕರ ಮತ್ತು ಆಫಿಸರುಗಳ ವಿದ್ಯಾಭ್ಯಾಸ; ಮತ್ತು

(f) ವಾಡಿಕೆಯಾಗಿ ನಡೆಯುವ ಸ್ವಭಾವವುಳ್ಳ ಎಲ್ಲಾ ಇತರ ಸಾಧಾರಣ ವಿಷಯಗಳು;

ಮತ್ತು ಆಯುಧಗಳು ಸೈನ್ಯದ ಉಪಕರಣಗಳು, ಬಟ್ಟೆ, ಕವಾತು, ಮತ್ತು ಅಭ್ಯಾಸ, ವ್ಯಗಾವಲುಗಳು, ರಿಪೋರ್ಟುಗಳು ಮತ್ತು ಲೆಕ್ಕಗಳು, ಬೆರಳಿನ ಮುದ್ರೆಯ ಮೂಲಕ ಅಥವಾ ಅನ್ಯಥಾ ಜನಗಳನ್ನು ಗುರುತು ಕಂಡುಹಿಡಿಯೋಣ, ಮತ್ತು ಇತರ ವಾಡಿಕೆಯಾದ ವಿಷಯಗಳು—ಇವುಗಳಿಗೆ ಸಂಬಂಧಪಟ್ಟ ಸಾಧಾರಣ ಸಂಗತಿಗಳಲ್ಲಿ ಇನ್ಸ್ಪೆಕ್ಟರ್ ಜನರಲೊಡನೆ ನೇಟಾಗಿ ಕಾಗದ ಪತ್ರವನ್ನು ಬೆಳೆಸಬಹುದು.

ಅಮಲ್ದಾರರ, ಡೆಪ್ಯುಟಿ ಅಮಲ್ದಾರರ ಮತ್ತು ಇನ್ಸ್ಪೆಕ್ಟರರ ಅಧಿಕಾರಗಳು.

(2) ಮೇಲ್ಕಂಡಂತೆ ಒಳಪಟ್ಟು ಅಮಲ್ದಾರರು ಮತ್ತು ಡೆಪ್ಯುಟಿ ಅಮಲ್ದಾರರು ಅವರವರ ರೆವಿನ್ಯೂ ಅಧಿಕಾರದ ಸರಹದ್ದಿನೊಳಗೆ ಉದ್ಯೋಗ ಪ್ರಯುಕ್ತವಾದ ಪೊಲೀಸು ಆಫಿಸರುಗಳಾಗಿ ಇರತಕ್ಕದ್ದು ಮತ್ತು ಪೊಲೀಸಿನವರ ಮೇಲೆ ಮೇಲ್ವಿಚಾರಣೆಯ ಸಾಮಾನ್ಯ ಅಧಿಕಾರಗಳನ್ನು ಉಂಟಾಗಿರತಕ್ಕದ್ದು ಮತ್ತು ಅಂಥಾ ಅಧಿಕಾರ ಸರಹದ್ದಿನೊಳಗೆ ತಪ್ಪಿತವನ್ನು ತಡೆಯುವುದಕ್ಕೂ ಮತ್ತು ಕಂಡುಹಿಡಿಯುವುದಕ್ಕೂ ಮತ್ತು ನೆಮ್ಮದಿಯನ್ನು ಕಾಪಾಡುವುದಕ್ಕೂ ಉತ್ತರವಾದಿಗಳಾಗಿ ಇರತಕ್ಕದ್ದು; ಅಮಲ್ದಾರನ ಅಥವಾ ಡೆಪ್ಯುಟಿ ಅಮಲ್ದಾರನ ಸಾಮಾನ್ಯ ಮೇಲ್ವಿಚಾರಣೆಗೆ ಮತ್ತು ಅಪ್ಪಣೆಗೆ ಒಳಪಟ್ಟು ಇನ್ಸ್ಪೆಕ್ಟರು ತನ್ನ ಅಧಿಕಾರದ ಎಲ್ಲೆಯೊಳಗೆ ಪೊಲೀಸಿನ ಕಾರ್ಯನಿರ್ವಾಹದ ಮುಖ್ಯಸ್ಥನಾಗಿ ಇರತಕ್ಕದ್ದು.

ಕ್ರಮ ಪೊಲೀಸು ನಿಬಂಧನೆಗಳ 27ನೆ ನಿಬಂಧನೆಯನ್ನು ನೋಡಿ.

ತನ್ನ ಡಿಸ್ಟ್ರಿಕ್ಟಿನಲ್ಲಿ ಪೊಲೀಸು ಸೈನ್ಯದ ಅವಶ್ಯಕವಾದ ಹಂಚಿಕೆಯನ್ನು ಡೆಪ್ಯುಟಿ ಕಮಿಷನರು ಮಾಡಬಹುದು.

16. ಸ್ಥಳದ ಪ್ರಕೃತಗಳ ಮೇರೆಗೆ ಅಗತ್ಯವೆಂದು ಕಾಣಬಹುದಾದಂತೆ ತನ್ನ ಅಧಿಕಾರ ಸರಹದ್ದಿಗೆ ನೇಮಿಸಿರುವ ಪೊಲೀಸು ಸೇನೆಯ ಹಂಚಿಕೆಯನ್ನು ಮತ್ತು ಚಲನೆಯನ್ನು, ಇನ್ಸ್ಪೆಕ್ಟರ್ ಜನರಲಿನ ಒಪ್ಪಿತಕ್ಕೆ ಒಳಪಟ್ಟು, ಡೆಪ್ಯುಟಿ ಕಮಿಷನರು ಮಾಡಬಹುದು.

ಬೊಂಬಾಯಿ-1899ರ 4 ಪ್ರ. 21.

ವಿಶೇಷ ಪೊಲೀಸು ಆಫಿಸರುಗಳ ನೇಮಕ.

17. ನ್ಯಾಯಕ್ಕೆ (ಕಾನೂನಿಗೆ) ವಿರುದ್ಧವಾದ ಯಾವುದಾದರೂ ಗುಂಪು, ದೊಂಬಿ ಅಥವಾ ನೆಮ್ಮದಿಯ ಇತರ ಭಂಗ ನಡೆಯಿತು ಅಥವಾ ನಡೆದೀತೆಂಬ ಭಯ ನ್ಯಾಯವಾಗಿದೆ ಎನುತಲೂ, ಮತ್ತು ಎಲ್ಲಿ ಅಂಥಾ ಅಕ್ರಮಕೂಟ, ದೊಂಬಿ ಅಥವಾ ನೆಮ್ಮದಿಯ ಭಂಗ ನಡೆಯಿತೋ ಅಥವಾ ನಡೆದೀತೆಂದು ಭಯ ಉಂಟಾಗಿದೆಯೋ ಆ ಸ್ಥಳದಲ್ಲಿ ನೆಮ್ಮದಿಯನ್ನು ಕಾಪಾಡುವುದಕ್ಕೆ, ಅಲ್ಲಿನ ನಿವಾಸಿಗಳ ರಕ್ಷಣೆಗೆ, ಮತ್ತು ಸ್ವತ್ತಿನ ಭದ್ರತೆಗೆ ಸಹ ಅಲ್ಲಿ ಸಾಧಾರಣವಾಗಿ ಚಾಕರಿಗೆ ಇಟ್ಟಿರುವ ಪೊಲೀಸು ಸೈನ್ಯವು ಸಾಲದೆಂದು ತೋರಿದಾಗೆಲ್ಲಾ ನೆರೆಹೊರೆಯಲ್ಲಿರುವ ಯಾವನಾದರೂ ಮಾಜಿಸ್ಟ್ರೇಟು ಒಬ್ಬ ಪೊಲೀಸು ಠಾಣೆಯ ಮೇಲ್ವಿಚಾರಣೆಯ ಆಫಿಸರಿಗಿಂತ ಅಂತಸ್ತಿನಲ್ಲಿ ಕೀಳ್ಪಡದ ಆ ಸ್ಥಳದಲ್ಲಿ ಅಧಿಕಾರವುಳ್ಳ ಯಾವ ಪೊಲೀಸು ಆಫಿಸರದಾದರೂ ಬಿನ್ನಹದಮೇಲೆ, ತಾನು ಸ್ವಂತವಾಗಿ ಹೆಸರು ಬರೆಹ ಹಾಕಿ ತನ್ನ ಸರ್ಕಾರಿ ಮುದ್ರೆಯನ್ನು ಒತ್ತಿದ ಬರಹಮೂಲಕವಾದ ಅಪ್ಪಣೆಯ ದ್ವಾರಾ, ತಾನು ಅವಶ್ಯಕವೆಂದು ಎಣಿಸುವ ಕಾಲಪರ್ಯಂತವೂ ಮತ್ತು ಮೇರೆಗಳೊಳಗೂ ವಿಶೇಷ ಪೊಲೀಸು ಆಫಿಸರುಗಳಾಗಿ ನಡೆದುಕೊಳ್ಳಲು ಅರ್ಹರಾಗಿರುವ ಜನಗಳು ತಾನು ಸಮನೆಂದು ಎಣಿಸುವಷ್ಟು ಮಂದಿಯನ್ನು ನೇಮಕ ಮಾಡಬಹುದು.

ವಿಶೇಷ ಪೊಲೀಸು ಆಫಿಸರುಗಳ ಅಧಿಕಾರಗಳು ಮತ್ತು ಅವರು ಮಾಡಬೇಕಾದ ಉತ್ತರವಾದಗಳು

(2) ಹಾಗೆ ನೇಮಕ ಮಾಡಲ್ಪಟ್ಟ ಪ್ರತಿ ವಿಶೇಷ ಪೊಲೀಸು ಆಫಿಸರೂ ಒಬ್ಬ ಸಾಧಾರಣ ಪೊಲೀಸು ಆಫಿಸರಂತೆ ಅದೇ ಅಧಿಕಾರಗಳನ್ನು, ಕೆಲಸಗಳನ್ನು, ಸ್ವಾತಂತ್ರ್ಯಗಳನ್ನು ಮತ್ತು ಮಾನ್ಯಗಳನ್ನು ಉಂಟಾದವನಾಗಿ ಅದೇ ಕರ್ತವ್ಯಗಳಿಗೂ ಉತ್ತರವಾದಗಳಿಗೂ ಗುರಿಯಾಗಿ ಅದೇ ಅಧಿಕಾರಿಗಳಿಗೆ ಒಳಪಟ್ಟಿರತಕ್ಕದ್ದು; ಆದರೆ ಅವನು 10ನೆ ಪ್ರಕರಣ ಪ್ರಕಾರ ಉದ್ಯೋಗದ ಸರ್ಟಿಫಿಕೇಟನ್ನು ಹೊಂದುವುದು ಅಗತ್ಯವಾಗಿ ಇರತಕ್ಕದ್ದಿಲ್ಲ.

ಬೊಂಬಾಯಿ–1890ರ 4 ಪ್ರ. 22. ಸ್ವಲ್ಪ ಬದಲಾವಣೆಗಳೊಡನೆ.

ಹೆಚ್ಚು ಪೊಲೀಸಿನ ಬಗ್ಗೆ ಅಗತ್ಯವನ್ನು ತೋರಿಸುವ ಜನರು ಕೇಳಿಕೊಂಡಂತೆ ಹೆಚ್ಚು ಪೊಲೀಸನ್ನು ಚಾಕರಿಗೆ ಇಟ್ಟುಕೊಳ್ಳೋಣ.

18. (1) ಇನ್ಸ್ಪೆಕ್ಟರ್ ಜನರಲು ಅಥವಾ ಆತನ ಅನುಮತಿಗೆ ಒಳಪಟ್ಟು ಡೆಪ್ಯುಟಿ ಕಮಿಷನರು ಆ ಬಗ್ಗೆ ಅಗತ್ಯವನ್ನು ತೋರಿಸಿಕೊಡುವ ಯಾವನಾದರೂ ಮನುಷ್ಯನ ಬಿನ್ನಹದ ಮೇಲೆ, ತಮ್ಮ ತಮ್ಮ ಅಧಿಕಾರ ಸರಹದ್ದಿನೊಳಗಿರುವ ಯಾವ ಸ್ಥಳದಲ್ಲಾಗಲಿ ನೆಮ್ಮದಿಯನ್ನು ಕಾಪಾಡುವುದಕ್ಕೆ ಅಥವಾ ಇತರ ಪೊಲೀಸು ಕೆಲಸಗಳನ್ನು ಮಾಡುವುದಕ್ಕೆ ಎಷ್ಟು ಹೆಚ್ಚು ಮಂದಿ ಪೊಲೀಸಿನವರನ್ನಾದರೂ ನೇಮಿಸಿ ಕಳುಹಿಸಬಹುದು.

ಆ ಹೆಚ್ಚು ಪೊಲೀಸಿಗಾಗಿ ತಗಲುವ ವೆಚ್ಚ.

(2) ಅಂಥಾ ಹೆಚ್ಚು ಪೊಲೀಸನ್ನು, ಸದರಿ ಬಿನ್ನಹವನ್ನು ಮಾಡುವ ಮನುಷ್ಯನ ವೆಚ್ಚದಿಂದ, ಇಟ್ಟುಕೊಳ್ಳತಕ್ಕದ್ದು; ಆದರೆ ಅವರು ಪೊಲೀಸು ಅಧಿಕಾರಿಗಳ ಅಪ್ಪಣೆಗಳಿಗೆ ಒಳಪಟ್ಟಿರಬೇಕು, ಮತ್ತು ಅಗತ್ಯವೆಂದು ತೋರುವಷ್ಟು ಕಾಲಪರ್ಯಂತ ಚಾಕರಿಯಲ್ಲಿ ಇರತಕ್ಕದ್ದು.

ಸದರಿ ವೆಚ್ಚವನ್ನು ವಹಿಸುವವರಿಗೆ ಅವು ತಪ್ಪುವ ವಿಚಾರವಾದ ನಿಯಮ.

(3) ಆದರೆ ಯಾರ ಬಿನ್ನಹದ ಮೇಲೆ ಅಂಥಾ ಹೆಚ್ಚು ಪೊಲೀಸನ್ನು ಚಾಕರಿಗೆ ಇಟ್ಟುಕೊಳ್ಳೋಣಾಗುತ್ತದೆಯೊ ಆ ಮನುಷ್ಯನು ಸದರಿ ಪೊಲೀಸನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ಯಾವಾಗಲಾದರೂ ಇನ್ಸ್ಪೆಕ್ಟರ್ ಜನರಲನ್ನು ಅಥವಾ ಡೆಪ್ಯುಟಿ ಕಮಿಷನರನ್ನು ಬರವಣಿಗೆಯಲ್ಲಿ ಕೇಳಿಕೊಂಡರೆ, ಹಾಗೆ ಕೇಳಿಕೊಳ್ಳುವ ಮನವಿ ತಲುಪಿದ ದಿವಸದಿಂದ ಒಂದು ತಿಂಗಳಿಗೆ ಮಿಂಚದೆ, ಅಂಥಾ ಆಫಿಸರು ಗೊತ್ತು ಮಾಡತಕ್ಕ ಅವಕಾಶ ಕಳೆದ ತರುವಾಯ ಆ ಹೆಚ್ಚು ಪೊಲೀಸಿನ ವೆಚ್ಚವನ್ನು ಅವನಿಗೆ ತಪ್ಪಿಸತಕ್ಕದ್ದು.

ಬೊಂಬಾಯಿ–1890ರ 4 ಪ್ರ. 23. ಸ್ವಲ್ಪ ಹೆಚ್ಚಾಗಿ ಸೇರಿಸಿದೆ.

ಭಾರಿ ಕೆಲಸಗಳು ನಡೆಯುವ ಬಳಿಯಲ್ಲಿ ಹೆಚ್ಚು ಪೊಲೀಸನ್ನು ಚಾಕರಿಗೆ ಇಡೋಣ.

19. (1) ಯಾವ ಸ್ಥಳದಲ್ಲಾಗಲಿ ಯಾವುದಾದರೂ ರೇಲ್ವೆಮೇಲೆ, ಕಾಲಿವೆ ಮೇಲೆ ಅಥವಾ ಇತರ ಪಬ್ಲಿಕ್ಕು ವರ್ಕು ಕಾಂಗಾರಿಯ ಮೇಲೆ ಅಥವಾ ಕಟ್ಟುತ್ತಿರುವ ಅಥವಾ ಕೆಲಸ ನಡೆಯುತ್ತಿರುವ ಯಾವುದಾದರೂ, ಕಾರಖಾನೆಯಲ್ಲಿ ಅಥವಾ ಕಾರಖಾನೆಯ ಮೇಲೆ, ಅಥವಾ ವ್ಯಾಪಾರ ಸಂಬಂಧವಾದ ಇತರ ಬದುಕಿನಲ್ಲಿ ಅಥವಾ ಬದುಕಿನ ಮೇಲೆ ಚಾಕರಿ ಮಾಡುವ ಜನರ ನಡತೆಯು, ಅಥವಾ ಆ ನಡತೆಯನ್ನು ಕುರಿತ ನ್ಯಾಯವಾದ ಭಯವು ಅಂಥಾ ಸ್ಥಳದಲ್ಲಿ ಹೆಚ್ಚು ಪೊಲೀಸನ್ನು ಇಡೋಣವನ್ನು ಅಗತ್ಯಪಡಿಸುತ್ತದೆ ಎಂದು ಇನ್ಸ್ಪೆಕ್ಟರ್ ಜನರಲ್ಲಿಗೆ ಅಥವಾ ಡೆಪ್ಯುಟಿ ಕಮಿಷನರಿಗಾದರೂ ತೋರಿದಾಗೆಲ್ಲಾ, ಸರಕಾರದ ಅಂಗೀಕಾರದೊಡನೆ, ಅಂಥಾ ಆಫಿಸರು ಸದರಿ ಸ್ಥಳಕ್ಕೆ ಅಂಥಾ ಹೆಚ್ಚು ಪೊಲೀಸನ್ನು ನೇಮಿಸಿ ಕಳುಹಿಸಬಹುದು, ಮತ್ತು ಅಂಥಾ ಅಗತ್ಯದಿಂದ ಇಟ್ಟಿರಬೇಕೆಂದು ತನಗೆ ತೋರತಕ್ಕ ಕಾಲಪರ್ಯಂತ ಅಂಥಾ ಸ್ಥಳದಲ್ಲಿ ಆ ಪೊಲೀಸನ್ನು ಚಾಕರಿಮೇಲೆ ಇಡಬಹುದು.

ಆ ಹೆಚ್ಚು ಪೊಲೀಸಿಗೆ ಮುಟ್ಟುವ ವೆಚ್ಚ.

(2) ಸದರಿ ಕಾಮಗಾರಿಯನ್ನು ಕಾರಖಾನೆಯನ್ನು ಅಥವಾ ಬದುಕನ್ನು ಯಾರು ಕಟ್ಟುತ್ತಿದಾರೆಯೊ ಅಥವಾ ನಡೆಸುತ್ತಿದಾರೆಯೊ ಆ ಮನುಷ್ಯನ ವೆಚ್ಚದಿಂದ ಅಂಥಾ ಹೆಚ್ಚು ಪೊಲೀಸನ್ನು ಇಡತಕ್ಕದ್ದು, ಮತ್ತು ಆ ವೆಚ್ಚವನ್ನು, ಸರಕಾರದ ಅಂಗೀಕಾರದೊಡನೆ ಡೆಪ್ಯುಟಿ ಕಮಿಷನರು ಆಗಿಂದಾಗ್ಗೆ ಆಜ್ಞಾಪಿಸತಕ್ಕ ಪ್ರಮಾಣಗಳಂತೆಯೂ ಕಾಲಗಳಲ್ಲೂ, ಕೊಡತಕ್ಕದ್ದು.

ಬೊಂಬಾಯಿ–1890ರ 4 ಪ್ರ. 24.

ಸದರಿ ವೆಚ್ಚವನ್ನು ಕೊಡುವ ವಿಷಯದಲ್ಲಿ ವಿವಾದಗಳು.

20. 18ನೆ ಅಥವಾ 19ನೆ ಪ್ರಕರಣ ಪ್ರಕಾರ ಯಾವ ಸಂದರ್ಭದಲ್ಲಾಗಲಿ ಏನಾದರೂ ವಿವಾದಬಿದ್ದ ಪಕ್ಷದಲ್ಲಿ, ಕೊಡಬೇಕಾದ ಮೊತ್ತದ ವಿಷಯದಲ್ಲಿಯೂ ಮತ್ತು ಯಾರಿಂದ ಅದು ಕೊಡಲ್ಪಡಬೇಕೋ ಆ ಮನುಷ್ಯನ ವಿಚಾರದಲ್ಲಿಯೂ ಡೆಪ್ಯುಟಿ ಕಮಿಷನರು ಮಾಡುವ ವ್ಯವಸ್ಥೆಯು ಸಮಾಪ್ತ ವ್ಯವಸ್ಥೆಯಾಗಿ ಇರತಕ್ಕದ್ದು, ಮತ್ತು ಹಾಗೆ ಗೊತ್ತಾದ ಮೊತ್ತವನ್ನು ಅದು ಭೂಮಿಯ ಕಂದಾಯದ ಬಾಕಿಯಾಗಿ ಇದ್ದರೆ ಹೇಗೋ ಹಾಗೆ, ವಸೂಲ್ಮಾಡಬಹುದು.

ಬೊಂಬಾಯಿ–1890ರ 4 ಪ್ರ. 25.

ಸಾರ್ವಜನಿಕ ನೆಮ್ಮದಿಗೆ ವಿಶೇಷ ಅಪಾಯ ಉಂಟಾಗುವ ಸಂದರ್ಭಗಳಲ್ಲಿ ಹೆಚ್ಚು ಪೊಲೀಸಿನ ನೇಮಕ.

21. (1) ಯಾವುದು ತತ್ತರಿಸುವ ಅಥವಾ ಅಪಾಯಕರವಾದ ಸ್ಥಿತಿಯಲ್ಲಿ ಇರುವುದಾಗಿ ಸರ್ಕಾರಕ್ಕೆ ತೋರುತ್ತದೆಯೊ ಅಥವಾ ಎಲ್ಲಿ ಜನಗಳ ಅಥವಾ ಜನರ ಪೈಕಿ ಯಾವುದಾದರೂ ಗೊತ್ತಾದ ಭಾಗದವರ ನಡತೆಯು ಪೊಲೀಸಿನ ಸೇನಾ ಬಲವನ್ನು ಕೊಂಚಕಾಲದ ಮಟ್ಟಿಗೆ ಹೆಚ್ಚಿಸುವುದನ್ನು ಸರ್ಕಾರದ ಅಭಿಪ್ರಾಯ

ದಲ್ಲಿ ಯುಕ್ತಪಡಿಸುತ್ತದೆಯೋ ಅಂಥಾ ಯಾವುದಾದರೂ ಸ್ಥಳೀಯ ಪ್ರದೇಶದಲ್ಲಿ ಯುಕ್ತವೆಂದು ಸರ್ಕಾರದವರು ಎಣಿಸುವ ಕಾಲದವರೆಗೆ ಹೆಚ್ಚು ಪೋಲೀಸನ್ನು ಚಾಕರಿಗೆ ಇಟ್ಟುಕೊಳ್ಳೋಣವನ್ನು ಪ್ರಕಟಣೆಯ ಮೂಲಕವಾಗಿ ಸರಕಾರದವರು ಆಗಿಂದಾಗ್ಗೆ ನೇಮಿಸಬಹುದು.

ಆ ಹೆಚ್ಚು ಪೋಲೀಸಿನ ವೆಚ್ಚ.

(2) ಸರಕಾರದವರು ಹಾಗೆ ಆಜ್ಞಾಪಿಸಿದರೆ, ಅಂಥಾ ಹೆಚ್ಚು ಪೋಲೀಸಿನ ಪೂರಾ ವೆಚ್ಚವನ್ನು ಅಥವಾ ಅದರ ಭಾಗವನ್ನು ಇದರಡಿ ಕಾಣಿಸಿರುವ ಜನಗಳ ಮೇಲೆ ಹಾಕಿದ ವರಿಯ ಮೂಲಕವಾಗಿ, ಅಥವಾ ಅಂಥಾ ಜನಗಳ ಸ್ವತ್ತಿನ ಮೇಲೆ ಕಟ್ಟುವ ತೆರಿಗೆಯ ಪ್ರಕಾರ, ಅಥವಾ ಹಾಗೆ ಹಾಕಿದ ಮತ್ತು ಕಟ್ಟಿದ ವರಿ, ಮತ್ತು ತೆರಿಗೆ, ಈ ಎರಡರ ಮೂಲಕವಾಗಿ ಸಹ ಸಲ್ಲಿಸಬೇಕಲ್ಲದೆ:—

(a) ಆ ಪ್ರಕಟನೆಯು ಯಾವುದಕ್ಕೆ ಅನ್ವಯಿಸುತ್ತದೆಯೋ ಆ ಸ್ಥಳೀಯ ಪ್ರದೇಶದ ನಿವಾಸಿಗಳಾಗಿ ಇರುವ ಜನರಿಗೆಲ್ಲಾ ಸಾಮಾನ್ಯವಾಗಿ ಆಗಲಿ; ಅಥವಾ

(b) ವಿಶೇಷವಾಗಿ ಅಂಥಾ ಜನರಲ್ಲಿ ಯಾವುದಾದರೂ ಗೊತ್ತಾದ ಭಾಗದವರಿಗೆ ಅಥವಾ ಭಾಗಗಳವರಿಗೆ ಅಥವಾ ಗುಂಪಿಗೆ ಅಥವಾ ಗುಂಪುಗಳಿಗೆ ಆಗಲಿ ಹಾಕತಕ್ಕದ್ದು;

ಮತ್ತು ಅಂಥಾ ವರಿಯನ್ನು ಅಥವಾ ತೆರಿಗೆಯನ್ನು ಯಾವ ಹಾಳತಗಳ ಮೇರೆಗೆ ಕಟ್ಟತಕ್ಕದ್ದೋ ಆ ಹಾಳತಗಳನ್ನು ಸರಕಾರದವರು ನೇಮಿಸಬಹುದು.

ವಿವರಣೆ.—ಈ ಪ್ರಕರಣದ ಮತ್ತು 21ನೆ ಪ್ರಕರಣದ ಕಾರ್ಯಗಳಿಗೋಸ್ಕರ "ನಿವಾಸಿಗಳು" ಎಂಬುವುದರಲ್ಲಿ ಮೇಲೆ ಕಂಡ ಸ್ಥಳೀಯ ಪ್ರದೇಶದಲ್ಲಿ ಅವರು ನಿಜವಾಗಿ ವಾಸ ಮಾಡದೆ ಇದ್ದರೂ, ಅಂಥಾ ಪ್ರದೇಶದೊಳಗೆ ಭೂಮಿಯನ್ನು ಅಥವಾ ಇತರ ಸ್ಥಿರಸ್ವತ್ತನ್ನು ತಾವೇ ಸ್ವಂತವಾಗಿ ಆಗಲಿ ಅಥವಾ ತಮ್ಮ ವಕೀಲರ ಅಥವಾ ಚಾಕರರ ಮುಖಾಂತರವಾಗಿ ಆಗಲಿ ಯಾರು ಅನುಭವಿಸುತ್ತಾರೆಯೋ ಅಥವಾ ಪಡೆದಿರುತ್ತಾರೆಯೋ ಆ ಜನರೂ, ಮತ್ತು ಅಂಥಾ ಪ್ರದೇಶದಲ್ಲಿ ರೈತರಿಂದ ಅಥವಾ ಅನುಭವದಾರರಿಂದ ಸಾಕ್ಷಾತ್ತಾಗಿ ಗುತ್ತಿಗೆಗಳನ್ನು ಅಥವಾ ಕಂದಾಯವನ್ನು ಯಾರು ತಾವೇ ಸ್ವಂತವಾಗಿ ಅಥವಾ ತಮ್ಮ ವಕೀಲರ ಅಥವಾ ಚಾಕರರ ಮೂಲಕವಾಗಿ ವಸೂಲ್ಮಾಡಿಕೊಳ್ಳುತ್ತಾರೆಯೋ ಆ ಭೂಮಿಯ ಒಡೆಯರು ಸಹ ಸೇರಿರುತ್ತಾರೆ.

ಆ ವೆಚ್ಚವನ್ನು ಕೊಡುವ ಬಗ್ಗಾಗಿ ಅವಕಾಶವನ್ನು ಹೆಚ್ಚಿಸೋಣ.

(3) ಯಾವ ಗಡುವಿನತನಕ ಅಂಥಾ ಹೆಚ್ಚು ಪೋಲೀಸನ್ನು ನಿಜವಾಗಿ ಚಾಕರಿಗೆ ಇಟ್ಟುಕೊಂಡು ಇದೆಯೋ ಆ ಗಡುವಿಗೆ ಮಿಂಚಿ ಅಂಥಾ ವರಿಯನ್ನು ಅಥವಾ ತೆರಿಗೆಯನ್ನು ಕೊಡುವುದಕ್ಕೋಸ್ಕರ ವ್ಯವಧಾನವನ್ನು, ಯಾವಪಕ್ಷದಲ್ಲೂ ಐದು ವರುಷಗಳ ಅವಕಾಶವನ್ನು ಮೀರದೆ, ವಿಸ್ತರಿಸೋಣ ಸರಕಾರಕ್ಕೆ ನ್ಯಾಯವಾಗಿರತಕ್ಕದ್ದು.

ಬೊಂಬಾಯಿ-1890ರ 4 ಪ್ರ. 25. ವಾಕ್ಯ (4) ಸ್ವಲ್ಪ ಭಾಗಗಳನ್ನು ಬಿಟ್ಟುಬಿಟ್ಟಿದೆ.

ಸದರಿ ವೆಚ್ಚವನ್ನು ಕಟ್ಟೋಣ.

(4) ಡೆಪ್ಯುಟಿ ಕಮಿಷನರು ತಮ್ಮ ಯುಕ್ತಾನುಸಾರವಾಗಿ ಮೇಲೆ ಕಂಡ ವರಿಯನ್ನು ಹಾಕತಕ್ಕದ್ದು, ಅಥವಾ ಮೇಲೆ ಕಂಡ ತೆರಿಗೆಯನ್ನು ಕಟ್ಟತಕ್ಕದ್ದು.

ವೆಚ್ಚವನ್ನು ವಹಿಸುವ ಉತ್ತರವಾದಿತ್ವದಿಂದ ವಿನಾಯಿತಿ.

(5) ಅಂಥಾ ವೆಚ್ಚದ ಪೈಕಿ ಯಾವ ಭಾಗವನ್ನು ವಹಿಸಬೇಕಾದ ಉತ್ತರವಾದಿತ್ವದಿಂದಾಗಲಿ ಯಾವ ಜನರನ್ನಾದರೂ ಅಪ್ಪಣೆಯ ಮೂಲಕವಾಗಿ ವಿನಾಯಿಸೋಣ ಸರಕಾರಕ್ಕೆ ನ್ಯಾಯವಾಗಿ ಇರತಕ್ಕದ್ದು.

ಬೊಂಬಾಯಿ-1890ರ 4 ಪ್ರ. 25 (a).

ನಿವಾಸಿಗಳ ಕೆಟ್ಟ ನಡತೆಯಿಂದ ಅಥವಾ ಆಕ್ರಮ ಕೂಟದಿಂದ ಉಂಟಾದ ಹಾನಿಗೆ ಪರಿಹಾರ ದ್ರವ್ಯಕ್ಕೋಸ್ಕರ ಬಿನ್ನಹ.

22. (1) ಹಿಂದಿನ ಪ್ರಕರಣದಲ್ಲಿ ಕಂಡ ಯಾವುದಾದರೂ ಪ್ರದೇಶದಲ್ಲಿ ಜನಗಳ ಅಥವಾ ಅವರಲ್ಲಿ ಯಾವುದಾದರೂ ಗುಂಪಿನ ಅಥವಾ ಪಂಗಡದವರ ಕೆಟ್ಟ ನಡತೆಯಿಂದ ಅಥವಾ ಒಂದು ಆಕ್ರಮಕೂಟದ ಸಾಮಾನ್ಯ ಉದ್ದೇಶದ ಸಾಧನೆಯಲ್ಲಿ ಮಾಡಿದ ಯಾವುದರಿಂದಲಾದರೂ ಮರಣ ಅಥವಾ ಸಂಕಟಕರವಾದ ಗಾಯ ಅಥವಾ ಸ್ವತ್ತಿನ ನಷ್ಟ ಅಥವಾ ಹಾನಿ ಉಂಟಾಗಿದ್ದರೆ ಅಥವಾ ಆಗಿದ್ದರೆ ಅಂಥಾ ಕೆಟ್ಟ ನಡತೆಯಿಂದ ಅಥವಾ ಕೃತ್ಯದಿಂದ ಹಾನಿಯಾಗಿರುವುದಾಗಿ ಹೇಳಿಕೊಳ್ಳುವ ಯಾವ ಮನುಷ್ಯ ಅಥವಾ ಮನುಷ್ಯರಿಗಾದರೂ ಅಂಥಾ ಹಾನಿಯು ತೇದಿಯಿಂದ ಒಂದು ತಿಂಗಳ ಅಥವಾ ನಿಯಾಮಕ ಮಾಡಬಹುದಾದ ಅದಕ್ಕೆ ಕಡಮೆಯಾದ ಕಾಲದೊಳಗೆ, ಪರಿಹಾರ ದ್ರವ್ಯಕ್ಕೋಸ್ಕರ ಡೆಪ್ಯುಟಿ ಕಮಿಷನರಿಗೆ ಬಿನ್ನಹವನ್ನು ಮಾಡುವುದು ನ್ಯಾಯವಾಗಿರತಕ್ಕದ್ದು.

ಪರಿಹಾರದ್ರವ್ಯ ಹೇಗೆ ವಸೂಲಾಗತಕ್ಕದ್ದು.

(2) ಇನ್ಸ್ಪೆಕ್ಟರು ಜನರಲಿನ ಮುಖಾಂತರವಾಗಿ ಮುಂದಾಗಿ ಪಡೆದ ಸರಕಾರದ ಅಂಗೀಕಾರದೊಡನೆ ಡೆಪ್ಯುಟಿ ಕಮಿಷನರು—

(a) ಅವಶ್ಯಕವೆಂದು ತಾನು ಎಣಿಸುವಂಥಾ ವಿಚಾರಣೆಗೆ ತರುವಾಯ,

(i) ಅಂಥಾ ಮನುಷ್ಯ ಅಥವಾ ಮನುಷ್ಯರಿಗೆ ಕೊಡತಕ್ಕ ಪರಿಹಾರ ದ್ರವ್ಯದ ಮೊತ್ತವನ್ನು ನಿಷ್ಕರ್ಷೆ ಮಾಡಬಹುದು.

(ii) ಎಲ್ಲಿನ ನಿವಾಸಿಗಳು ಅವರ ನಡತೆಯಿಂದ ಅಂಥಾ ಕೂಟ ನಡೆಯುವ ಹಾಗೆ ಮಾಡಿದರೆಂದು ಅಥವಾ ಅದು ನಡೆಯುವುದಕ್ಕೆ ಸಹಾಯ ಮಾಡಿದರೆಂದು ತಾನು ಅಭಿಪ್ರಾಯ ಪಡುತ್ತಾನೆಯೊ ಆ ಸ್ಥಳೀಯ ಪ್ರದೇಶವನ್ನು ಪ್ರಕಟಪಡಿಸಬಹುದು;

(b) ಹಾಗೆ ನಿಷ್ಕರ್ಷೆಯಾದ ಮೊತ್ತವನ್ನು ತಾನು ಸಮನೆಂದು ಎಣಿಸಬಹುದಾದ ಹಾಳತಗಳ ಮೇರೆಗೆ ಮೇಲೆ ಹೇಳಿರುವಂತ ಪ್ರಕಟವಾದ ಸ್ಥಳೀಯ ಪ್ರದೇಶದ ಎಲ್ಲಾ ನಿವಾಸಿಗಳಿಂದ ಅಥವಾ ಅವರ ಪೈಕಿ ಯಾರಿಂದಾದರೂ ಅಥವಾ ಅಂಥಾ ಜನರ ಪೈಕಿ ಯಾವುದಾದರೂ ಭಾಗದಿಂದ ಅಥವಾ ಭಾಗಗಳಿಂದ ಅಥವಾ ತರಗತಿಯಿಂದ ಅಥವಾ ತರಗತಿಗಳಿಂದ ಬರವಮಾಡಬಹುದು;

(c) ಮೇಲೆ ಹೇಳಲ್ಪಟ್ಟ ನಷ್ಟದ ಅಥವಾ ಹಾನಿಯ ಅಥವಾ ಮರಣದ ಅಥವಾ ಸಂಕಟಕರವಾದ ಗಾಯದ ವಿಚಾರವಾಗಿ ಪರಿಹಾರದ್ರವ್ಯಕ್ಕೆ ಬಾಧ್ಯರೆಂದು ಯಾರನ್ನು ತಾನು ಎಣಿಸುತ್ತಾನೆಯೊ ಆ ಯಾವನಾದರೂ ಮನುಷ್ಯನಿಗೆ ಅಥವಾ ಎಲ್ಲಾ ಮನುಷ್ಯರಿಗೆ ಅಥವಾ ಅವರ ಪೈಕಿ ಯಾವ ಮನುಷ್ಯರಿಗೆ ಆದರೂ ಹಾಗೆ ಬರವಮಾಡಿದ ಎಲ್ಲಾ ಹಣಗಳನ್ನು ಅಥವಾ ಯಾವ ಹಣಗಳನ್ನಾದರೂ, ತಾನೇ ತೀರ್ಪುಮಾಡಿ ಕೊಡಿಸಬಹುದು ಅಥವಾ ಹಂಚಿಕೊಡಬಹುದು.

ಪರಿಹಾರ ದ್ರವ್ಯವನ್ನು ಕೊಡುವ ಉತ್ತರವಾದಿತ್ವದಿಂದ ವಿನಾಯಿತಿ.

(3) ಅಂಥಾ ಪರಿಹಾರದ್ರವ್ಯದ ಪೈಕಿ ಯಾವ ಭಾಗವನ್ನಾದರೂ ಕೊಡುವುದಕ್ಕೆ ಗುರಿಯಾಗೋಣವರಿಂದ ಯಾವ ಮನುಷ್ಯನನ್ನಾದರೂ, ಅಪ್ಪಣೆಯ ಮೂಲಕವಾಗಿ, ವಿನಾಯಿಸುವುದು ಸರಕಾರಕ್ಕೆ ನ್ಯಾಯವಾಗಿ ಇರತಕ್ಕದ್ದು.

ಪರಿಹಾರ ದ್ರವ್ಯವನ್ನು ಯಾವುದರಂತೆ ಪಡೆಯತಕ್ಕದ್ದೋ ಆ ಒಡಂಬಡಿಕೆಗಳು.

(4) ಮೇಲೆ ಕಂಡ ಮರಣಕ್ಕೆ, ಸಂಕಟಕರವಾದ ಗಾಯಕ್ಕೆ, ನಷ್ಟಕ್ಕೆ ಅಥವಾ ಹಾನಿಗೆ ಕಾರಣವಾದ ಸಂಭವಗಳ ವಿಚಾರವಾಗಿ ಪರಿಹಾರ ದ್ರವ್ಯ ಬರಬೇಕೆಂಬುವ ಮನುಷ್ಯನು ತನ್ನ ಮಟ್ಟಿಗೆ ತಪ್ಪಿಲ್ಲದವನಾಗಿ ಇದಾನೆಂದು ಡೆಪ್ಯುಟಿ ಕಮಿಷನರು ತೃಪ್ತಿಪಟ್ಟವಿನಾ, ಈ ಪ್ರಕರಣದಂತೆ ವಸೂಲಿಯನ್ನೂ ಮಾಡಕೂಡದು ಮತ್ತು ಪರಿಹಾರದ್ರವ್ಯವೂ ಸಲ್ಲಲಾಗದು.

ಡೆಪ್ಯುಟಿ ಕಮಿಷನರ ಅಪ್ಪಣೆಗಳು ಪುನರ್ವಿಮರ್ಶೆಗೆ ಒಳಗಾಗಿ ಇರತಕ್ಕದ್ದು.

(5) (1) ನೆ ಒಳ ಪ್ರಕರಣದಂತೆ ಡೆಪ್ಯುಟಿ ಕಮಿಷನರು ಮಾಡಿದ ಪ್ರತಿ ಪ್ರಕಟನೆ, ತೀರ್ಪು, ಮತ್ತು ಅಪ್ಪಣೆಯು ಸರ್ಕಾರದಿಂದ ಅಥವಾ ಆಗಿಂದಾಗ್ಗೆ ಈ ಬಗ್ಗಾಗಿ ಸರಕಾರ ಯಾರಿಗೆ ಅಧಿಕಾರವನ್ನು ಕೊಡುತ್ತದೆಯೊ ಅಂಥಾ ಆಫಿಸರಿಂದ ಪುನರ್ವಿಮರ್ಶೆಗೆ ಒಳಗಾಗಿ ಇರತಕ್ಕದ್ದು, ಆದರೆ ಮೇಲೆ ಕಂಡ ಮೇರೆಗೆ ವಿನಾ, ಡೆಪ್ಯುಟಿ ಕಮಿಷನರ ಅಪ್ಪಣೆಯು ಕಡೇ ಅಪ್ಪಣೆಯಾಗಿ ಇರತಕ್ಕದ್ದು.

ಸಿವಿಲು ದಾವೆಯನ್ನು ಹಿಡಿಯುವುದಕ್ಕೆ ಅಡ್ಡಿ.

(6) ಈ ಪ್ರಕರಣ ಪ್ರಕಾರ ಯಾವುದಕ್ಕಾಗಿ ಪರಿಹಾರ ದ್ರವ್ಯ ಕೊಡಲ್ಪಟ್ಟಿತೋ ಆ ಯಾವ ನಷ್ಟದ ಅಥವಾ ಹಾನಿಯ ವಿಚಾರವಾಗಿ ಆಗಲಿ ಸಿವಿಲು ದಾವೆಯನ್ನು ಹಿಡಿಯಕೂಡದು.

ಬೊಂಬಾಯಿ–1890ರ 4 ಪ್ರ. 26, ಕೆಲವು ವಿಷಯಗಳನ್ನು ಬಿಟ್ಟು ಬಿಟ್ಟಿದೆ.

20ನೆ ಮತ್ತು 21ನೆ ಪ್ರಕರಣಗಳಂತೆ ತೆರಿಗೆಗಳನ್ನು ಮತ್ತು ವೆಚ್ಚಗಳನ್ನು ಡೆಪ್ಯುಟಿ ಕಮಿಷನರು ವಸೂಲು ಮಾಡೋಣ.

23. (1) ಈ ರೆಗ್ಯುಲೇಷನಿನ ಹಿಂದಿನ ಕಡೇ ಎರಡು ಪ್ರಕರಣಗಳ ಪ್ರಕಾರ ಅಥವಾ ಇತರ ವಿಧಿಯ ಪ್ರಕಾರ ಹಾಕಲ್ಪಟ್ಟ ಪ್ರತಿ ವರಿಯನ್ನು ಅಥವಾ ಕಟ್ಟಲ್ಪಟ್ಟ ಪ್ರತಿ ತೆರಿಗೆಯನ್ನು ಅಥವಾ ವಸೂಲಾಗಬೇಕಾದ ಪ್ರತಿ ಮೊತ್ತವನ್ನು, ಅದಕ್ಕಾಗಿ ಉತ್ತರವಾದಿಯಾದ ಮನುಷ್ಯನಿಂದ ಬರಬೇಕಾದ ಭೂಮಿಯ ಕಂದಾಯದ ಬಾಕಿಯಾಗಿ ಅದು ಇದ್ದಂತೆ, ಡೆಪ್ಯುಟಿ ಕಮಿಷನರು ಬರವಮಾಡತಕ್ಕದ್ದು.

3ನೆ ಅಧ್ಯಾಯ.—ಪೊಲೀಸು ಸೈನ್ಯವನ್ನು ಕ್ರಮಪಡಿಸೋಣ, ಅಂಕೆಯಲ್ಲಿ ಇಡೋಣ ಮತ್ತು ಅವರಿಗೆ ಕೆಲಸ, ಕವಾತು ಮುಂತಾದ್ದುದನ್ನು ಕಲಿಸೋಣ.

ಪೊಲೀಸಿನ ಆಡಳಿತಕ್ಕಾಗಿ ನಿಬಂಧನೆಗಳ ನಿರ್ಮಾಣ.

24. ಸರಕಾರದ ಅಪ್ಪಣೆಗಳಿಗೆ ಒಳಪಟ್ಟು, ಈ ರೆಗ್ಯುಲೇಷನಿಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿ ಇರುವ ಬೇರೆ ಯಾವುದಾದರೂ ಚಟ್ಟಕ್ಕೆ ಹೊಂದಿಕೆಯಾಗಿ ಆಗಿಂದಾಗ್ಗೆ ಇನ್ಸ್ಪೆಕ್ಟರು ಜನರಲು ನಿಬಂಧನೆಗಳನ್ನು ಅಥವಾ ಅಪ್ಪಣೆಗಳನ್ನು ಯಾವ ವಿಚಾರವಾಗಿ ಮಾಡಬಹುದು ಎಂದರೆ—

(a) ಪೊಲೀಸಿನ ಭರ್ತಿಗೆ, ಸಂಸ್ಥಾಪನೆಗೆ, ತರಗತಿಗಳ ವಿಂಗಡಕ್ಕೆ ಮತ್ತು ಸುಶಿಕ್ಷೆಗೆ ಸಂಬಂಧಪಟ್ಟು;

(b) ತನ್ನ ಕೈಕೆಳಗಿನವರು ಮಾಡುವ ಪೊಲೀಸಿನ ಪರೀಕ್ಷೆಯನ್ನು ಕ್ರಮಪಡಿಸಿ;

(c) ಪೊಲೀಸಿಗೆ ಕೊಡಬೇಕಾದ ಆಯುಧಗಳು, ಸೈನ್ಯಸಂಬಂಧವಾದ ಉಪಕರಣಗಳು, ಉಡಿಗೆ ತೊಡಿಗೆಗಳು, ಇತರ ಅಗತ್ಯವಾದ ಸಾಹಿತ್ಯಗಳು, ಇವುಗಳ ವಿವರಣೆಯನ್ನು ಮತ್ತು ಮೊತ್ತವನ್ನು ನಿಷ್ಕರ್ಷೆಮಾಡಿ ;

(d) ಪೊಲೀಸು ಆಡಳಿತಕ್ಕೆ ಸಂಬಂಧಿಸಿದ ಯಾವ ಉದ್ದೇಶಕ್ಕಾಗಿ ಆದರೂ ಯಾವುದಾದರೂ ಪೊಲೀಸು ಹಣದ ಏರ್ಪಾಟು, ಮೇಲ್ವಿಚಾರಣೆ ಮತ್ತು ಆಯುಕಟ್ಟು, ಇವುಗಳಿಗೋಸ್ಕರವಾಗಿ;

(e) ಪೊಲೀಸಿನ ಹಂಚಿಕೆಯನ್ನು, ಚಲನೆಗಳನ್ನು ಮತ್ತು ಸ್ಥಳ ನೇಮಕವನ್ನು ಕ್ರಮಪಡಿಸಿ;

(f) ನಾನಾ ತರಗತಿಗಳ ಪೊಲೀಸು ಆಫಿಸರುಗಳ ಕೆಲಸಗಳನ್ನು ಕ್ರಮಪಡಿಸಿ;

(g) ಸಮಾಚಾರವನ್ನು ಮತ್ತು ವರ್ತಮಾನವನ್ನು ಪೊಲೀಸಿನವರು ಸಂಗ್ರಹಿಸಿ ತಿಳಿಸುವುದನ್ನೂ ಮತ್ತು ತಪ್ಪಿತದ ವಿಚಾರಣೆಯನ್ನೂ ಕ್ರಮಪಡಿಸಿ ;

(h) ಬೇರೆಬೇರೆ ಪೊಲೀಸು ಆಫಿಸರುಗಳು ಇಡಬೇಕಾದ ಪುಸ್ತಕಗಳನ್ನೂ ಮತ್ತು ರಿಜಿಸ್ಟರುಗಳನ್ನೂ ಮತ್ತು ಒಪ್ಪಿಸಬೇಕಾದ ಲೆಕ್ಕಗಳನ್ನೂ ನಿಯಾಮಕ ಮಾಡಿ;

(i) ಸಾಮಾನ್ಯವಾಗಿ, ಪೊಲೀಸು ಸೇನೆಯನ್ನು ಕಾರ್ಯಸಾಧಕವಾದುದನ್ನಾಗಿ ಮಾಡಿ ಅವರ ಕರ್ತವ್ಯಗಳ ದುಷ್ಪ್ರಯೋಗವನ್ನು ಅಥವಾ ಅಸಡ್ಡೆಯನ್ನು ತಪ್ಪಿಸುವ ಉದ್ದೇಶಕ್ಕೋಸ್ಕರ.

ಬೊಂಬಾಯಿ–1890ರ 4 ಪ್ರ. 15 ಮತ್ತು 23.

ಇನ್ಸ್ಪೆಕ್ಟರು ಜನರಲು ಪರೀಕ್ಷೆಗಳನ್ನು ಮಾಡಬಹುದು ಮತ್ತು ಲೆಕ್ಕಗಳು ಮುಂತಾದುದಕ್ಕಾಗಿ ಅಪ್ಪಣೆ ಮಾಡಬಹುದು.

25. ಇನ್ಸ್ಪೆಕ್ಟರ್ ಜನರಲು ಸರ್ಕಾರದ ನಿಬಂಧನೆಗಳಿಗೂ ಅಪ್ಪಣೆಗಳಿಗೂ ಒಳಪಟ್ಟು ಪೊಲೀಸು ಸಿಬ್ಬಂದಿಗಳನ್ನೂ ಮತ್ತು ಠಾಣೆಗಳನ್ನೂ ಕಾಲಕಾಲಕ್ಕೆ ಪರೀಕ್ಷೆ ಮಾಡಬಹುದು ಮತ್ತು ತಪ್ಪಿತವನ್ನು ಅಡಗಿಸುವಿಕೆ, ತಪ್ಪಿತಸ್ಥರಾದ ಜನರ ಗುಂಪುಗಳ ಸ್ಥಿತಿ, ನೆಮ್ಮದಿಯ ಪೋಷಣೆ, ಗಲಿಬಿಲಿಯನ್ನು ತಪ್ಪಿಸುವಿಕೆ, ಜನಸಂಘಗಳನ್ನು ಮತ್ತು ವಿನೋದಗಳನ್ನು ಕ್ರಮಪಡಿಸುವಿಕೆ, ಪೊಲೀಸು ಸೇನೆಯ ಹಂಚಿಕೆ, ಸಹಾಯಕ ಸಾಹಿತ್ಯಗಳನ್ನು ಉಪಯೋಗಿಸುವಿಕೆ, ಪೊಲೀಸಿನವರು ಅವರ ಕೆಲಸಗಳನ್ನು ಮಾಡುವಿಕೆ, ಮತ್ತು ಪೊಲೀಸು ಸೈನ್ಯದ ಮೇಲೆ ಇನ್ಸ್ಪೆಕ್ಟರು ಜನರಲಿನ ಮೇಲ್ವಿಚಾರಣೆಯ ಅನುಕೂಲಾರ್ಥವಾದ ಇತರ ಎಲ್ಲಾ ಸಂಗತಿಗಳು, ಇವುಗಳಿಗೆ ಸಂಬಂಧಿಸಿದ ವಿಷಯಗಳನ್ನು ಕುರಿತು ವಿಶೇಷವಾದ ಅಥವಾ ಸಾಮಾನ್ಯವಾದ ಲೆಕ್ಕಗಳು, ರಿಪೋರ್ಟುಗಳು ಮತ್ತು ಹೇಳಿಕೆಗಳು ತಮಗೆ ಡೆಪ್ಯುಟಿ ಕಮಿಷನರಿಂದಲೂ, ಅವರ ಕೈಕೆಳಗಿನ ಇತರ ಆಫಿಸರುಗಳಿಂದಲೂ ಬರಬೇಕೆಂದು ಪೊಲೀಸು ಇನ್ಸ್ಪೆಕ್ಟರು ಜನರಲು ಆಜ್ಞಾಪಿಸಬಹುದು.

ಬೊಂಬಾಯಿ–1890ರ 4 ಪ್ರ. 29.

ಕೆಲಸದ ಅಸಡ್ಡೆ ಮುಂತಾದುದಕ್ಕಾಗಿ ಇಲಾಖೆಯ ಮುಖಾಂತರವಾಗಿ ಪೊಲೀಸು ಆಫಿಸರುಗಳಿಗೆ ಶಿಕ್ಷೆ.

26. (1) ಆ ಬಗ್ಗಾಗಿ (3)ನೆ ಒಳ ಪ್ರಕರಣದಿಂದ ಆಜ್ಞಾಪಿತನಾದ ಯಾವ ಆಫಿಸರಾದರೂ, ತನ್ನ ಕೆಲಸವನ್ನು ನಡೆಸುವುದರಲ್ಲಿ ಯಾವನು ಕ್ರೂರನಾಗಿ, ಮೂರ್ಖನಾಗಿ, ಉದಾಸೀನನಾಗಿ ಅಥವಾ ಅಶ್ರದ್ಧಾವಂತನಾಗಿರುತ್ತಾನೆಂದು ಅಥವಾ ಅವನ ಕೆಲಸಕ್ಕೆ ಅಯೋಗ್ಯನಾಗಿದಾನೆಂದು ಆತನು ಎಣಿಸುತ್ತಾನೆಯೊ ಅಂಥಾ ಯಾವ ಪೊಲೀಸು ಆಫಿಸರನ್ನಾಗಲಿ ಅವನ ಚಾಕರಿಯಿಂದ ಕೊಂಚಕಾಲ ತಡೆದಿಡಬಹುದು, ಕಮ್ಮಿ ಕೆಲಸಕ್ಕೆ ಹಾಕಬಹುದು ಅಥವಾ ಕೆಲಸದಿಂದ ತೆಗೆದು ಹಾಕಬಹುದು, ಮತ್ತು ಯಾವುದಕ್ಕೋಸ್ಕರ ಅವನನ್ನು ಕೆಲಸದಿಂದ

ತಡೆದಿಡೋಣ ಅಥವಾ ಕೆಲಸದಿಂದ ತೆಗೆದುಹಾಕೋಣ ಅಗತ್ಯವಿಲ್ಲವೋ ಅಂಥಾ ಸುಶಿಕ್ಷೆಯು ಯಾವುದಾದರೂ ಉಲ್ಲಂಘನೆಯು ಅಥವಾ ಕೆಟ್ಟ ನಡತೆಯ ತಪ್ಪು ಹೊತ್ತ, ಅಥವಾ ಯಾವನು ತನ್ನ ಕೆಲಸವನ್ನು ಮಾಡುವುದಕ್ಕೆ ತನ್ನ ಸ್ವಂತ ಕೃತ್ಯದಿಂದ ತನ್ನನ್ನು ಅಯೋಗ್ಯಪಡಿಸಿಕೊಳ್ಳುತ್ತಾನೆಯೋ ಅಂಥಾ ಅಸಿಸ್ಟಂಟು ಸೂಪರ್ಇಂಟೆಂಡೆಂಟಿನ ಸ್ಥಾನಕ್ಕೆ ಕೀಳ್ಪಟ್ಟ ಯಾವ ಪೋಲೀಸು ಆಫಿಸರಿಗ್ಗಾಗಲಿ, ಒಂದು ತಿಂಗಳಿನ ಸಂಬಳಕ್ಕೆ ಹೆಚ್ಚಾದ ಮೊತ್ತವನ್ನು ಅಪರಾಧ ಹಾಕಬಹುದು.

(2) ಈ ಪ್ರಕರಣ ಪ್ರಕಾರ ಒಬ್ಬ ಪೋಲೀಸು ಆಫಿಸರಿಗೆ ಮಾಡುವ ಯಾವ ಶಿಕ್ಷೆಗಾದರೂ ಈ ರೆಗ್ಯುಲೇಷನಿನ 33, 58 ಅಥವಾ 59ನೆ ಪ್ರಕರಣಕ್ಕೆ ಅನುಸಾರವಾಗಿ ಅಥವಾ ಉಪಯೋಗದಲ್ಲಿ ಇರುವ ಬೇರೆ ಯಾವುದಾದರೂ ಕಾನೂನಿನಂತೆ ಅಂಥಾ ಆಫಿಸರು ಗುರಿಯಾಗಿರುವ ದಂಡನೆಗೆ ಸೇರಿಕೆಯಾಗಿ ಇರತಕ್ಕದ್ದು.

ಈ ಪ್ರಕರಣದಂತೆ ಆಗುವ ಶಿಕ್ಷೆಯು, 33, 58 ಅಥವಾ 59ನೆ ಪ್ರಕರಣದ ಮೇರೆಗೆ ಹಾಕುವ ದಂಡನೆಯಲ್ಲದೆ, ಆಗ ತಕ್ಕದ್ದು.

ಬೊಂಬಾಯಿ-1890ರ 4 ಪ್ರ. 29. (3) ಸ್ವಲ್ಪ ಬದಲಾವಣೆಯೊಡನೆ.

(3) (1)ನೆ ಒಳ ಪ್ರಕರಣದಂತೆ ಅಸಿಸ್ಟಂಟು ಸೂಪರ್ಇಂಟೆಂಡೆಂಟಿನ ಸ್ಥಾನಕ್ಕೆ ಕೀಳ್ಪಟ್ಟ ಯಾವ ಪೋಲೀಸು ಆಫಿಸರನ್ನಾದರೂ ಶಿಕ್ಷಿಸಲು ಇನ್ಸ್ಪೆಕ್ಟರು ಜನರಲು ಅಧಿಕಾರವುಳ್ಳವನಾಗಿ ಇರತಕ್ಕದ್ದು. ಡೆಪ್ಯುಟಿ ಕಮಿಷನರಿಗೆ ಮತ್ತು ಡೆಪ್ಯುಟಿ ಕಮಿಷನರು ಮತ್ತು ಡಿಸ್ಟ್ರಿಕ್ಟು ಸೂಪರ್ಇಂಟೆಂಡೆಂಟುಗಳ ಪೈಕಿ ಪ್ರತಿ ಒಬ್ಬರೂ ಇನ್ಸ್ಪೆಕ್ಟರ ಸ್ಥಾನಕ್ಕೆ ಕೀಳ್ಪಟ್ಟ ತನ್ನ ಕೈಕೆಳಗೆ ಇರುವ ಯಾವ ಪೋಲೀಸು ಆಫಿಸರ ವಿಷಯದಲ್ಲಾಗಲಿ ಅಂಥಾ ಅಧಿಕಾರವನ್ನು ಉಂಟಾಗಿ ಇರತಕ್ಕದ್ದು; ಮತ್ತು ತನ್ನ ಕೈಕೆಳಗೆ ಇರುವ ಇನ್ಸ್ಪೆಕ್ಟರನ್ನು, ಅತನ ಮೇಲೆ ಒಂದು ವಿಶೇಷವಾದ ಅಪಾದನೆಯು ವಿಚಾರಣೆ ಆಗುತ್ತಿರುವಾಗ ಮತ್ತು ಇನ್ಸ್ಪೆಕ್ಟರು ಜನರಲಿನ ಅಪ್ಪಣೆಯನ್ನು ಪಡೆಯಲಾಗುವ ತನಕ, ಕೆಲಸದಿಂದ ತಡೆದಿಡಬಹುದು. ಆದರೆ ಈ ಒಳ ಪ್ರಕರಣದಿಂದ ಕೊಟ್ಟಿರುವ ಯಾವ ಅಧಿಕಾರವನ್ನಾದರೂ ನಡೆಸೋಣವು, ಆ ಬಗ್ಗೆ ಸರಕಾರದಿಂದ ಮಾಡಲ್ಪಡಬಹುದಾದಂಥಾ ನಿಬಂಧನೆಗಳಿಗೂ ಅಪ್ಪಣೆಗಳಿಗೂ ಯಾವಾಗಲೂ ಒಳಪಟ್ಟು ಇರತಕ್ಕದ್ದು.

ಟ ಕಮಿಷನರಿಗೆ ... ರುವ ದಂಡನಾ ಅಧಿಕಾರಗಳು.

ಬೊಂಬಾಯಿ -1890ರ 4 ಪ್ರ. 30.

27. (1) ಒಬ್ಬ ಪೋಲೀಸು ಆಫಿಸರಿಗೆ ಅಪರಾಧ ಹಾಕುವುದಕ್ಕಾಗಿ, ಆತನನ್ನು ಕೆಲಸದಿಂದ ತಡೆಯುವುದಕ್ಕಾಗಿ, ಕಮ್ಮಿ ಕೆಲಸಕ್ಕೆ ಹಾಕುವುದಕ್ಕಾಗಿ ಅಥವಾ ಕೆಲಸದಿಂದ ತೆಗೆದುಹಾಕಲು ಯಾವ ಆಫಿಸರಾದರೂ ಅಪ್ಪಣೆಯನ್ನು ಮಾಡುವಾಗ್ಗೆ, ಆ ಅಪ್ಪಣೆಗೋಸ್ಕರವಾದ ಕಾರಣಗಳ ಮತ್ತು ತಾನು ಮಾಡಿದ ವಿಚಾರಣೆಯ ಬರಹಮೂಲಕವಾದ ಟಿಪ್ಪಣಿಯ ಸಮೇತ, ಆತನು ಅಂಥಾ ಅಪ್ಪಣೆಗೆ ಕನ್ನಡದಲ್ಲಿ ಅಥವಾ ಇಂಗ್ಲಿಷಿನಲ್ಲಿ ತನ್ನ ಹೆಸರು ಬರಹವನ್ನು ಮಾಡಿ, ಅದನ್ನು ಬರೆದಿಡಬೇಕು, ಅಥವಾ ಬರೆದಿಡುವಂತೆ ಮಾಡಿಸಬೇಕು.

ಶಿಕ್ಷೆಯನ್ನು ಕೊಡೋಣದರಲ್ಲಿ ಅನುಸರಿಸಬೇಕಾದ ನಡವಳಿಕೆಯು ಕ್ರಮ.

(2) ಮೇಲಂಡ ಅಪ್ಪಣೆಗಳ ಮೇಲೆ ಅಪೀಲುಗಳ ವಿಚಾರದಲ್ಲಿ ಕಡೇ ಅಧಿಕಾರಿಯು ಕಾನ್ಸ್ಟೆಬಿಲುಗಳ ವಿಷಯದಲ್ಲಿ, ಇನ್ಸ್ಪೆಕ್ಟರ್ ಜನರಲಾಗಿರತಕ್ಕದ್ದು ಮತ್ತು ಎಲ್ಲಾ ಇತರ ಆಫಿಸರುಗಳ ವಿಷಯದಲ್ಲಿ, ಅಪೀಲುಗಳನ್ನು ಸರ್ಕಾರಕ್ಕೆ ಮಾಡಬಹುದು.

ಬೊಂಬಾಯಿ-1890ರ 4 ಪ್ರ. 31.

28. (1) ಜಮಾದಾರ ಅಥವಾ ಹೆಡ್ಕಾನ್ಸ್ಟೆಬಿಲಿನ ಸ್ಥಾನಕ್ಕೆ ಕೀಳ್ಪಟ್ಟವನು ಯಾವನು ತನ್ನ ಎದುರಿಗೆ ತನಗೆ ಬಂಡಾಗಿ ಅವಿಧೇಯನಾಗಿ ಇರುತ್ತಾನೆಯೊ ಅಥವಾ ಅಹಂಕಾರಿಯಾಗಿ ನಡೆದುಕೊಳ್ಳುತ್ತಾನೆಯೊ ಅಂಥಾ ಯಾವ ಪೋಲೀಸು ಆಫಿಸರನ್ನಾಗಲಿ ಮೂರು ದಿನಗಳಿಗೆ ಹೆಚ್ಚಾದ ಒಂದು ಗಡುವಿನ ಪರ್ಯಂತ ಸೆರೆಯ ಮೂಲಕವಾಗಿ ಇನ್ಸ್ಪೆಕ್ಟರು ಜನರಲು ಅಥವಾ ಡೆಪ್ಯುಟಿ ಕಮಿಷನರು ಅಥವಾ ಯಾರಾದರೂ ಡಿಸ್ಟ್ರಿಕ್ಟು ಸೂಪರ್ಇಂಟೆಂಡೆಂಟು ಅಥವಾ ಅಸಿಸ್ಟೆಂಟು ಸೂಪರ್ಇಂಟೆಂಡೆಂಟು ಶಿಕ್ಷಿಸಬಹುದು.

ಅವಿಧೇಯತ್ವಕ್ಕಾಗಿ ಇಲಾಖೆಯ ಮೂಲಕವಾದ ಶಿಕ್ಷೆ.

(2) ಮೇಲೆ ಹೇಳಿರುವಂತೆ ಒಬ್ಬ ಪೋಲೀಸು ಆಫಿಸರನ್ನು ಶಿಕ್ಷಿಸುವುದಕ್ಕಾಗಿ ಹುಟ್ಟಿದ ಪ್ರತಿ ಅಪ್ಪಣೆಯನ್ನು 27ನೆ ಪ್ರಕರಣದಲ್ಲಿ ವಿಧಾಯಕವಾಗಿರುವ ರೀತಿಯಲ್ಲಿ ಬರೆದಿಡತಕ್ಕದ್ದು, ಮತ್ತು ಡೆಪ್ಯುಟಿ ಕಮಿಷನರಿಂದ ಡಿಸ್ಟ್ರಿಕ್ಟು ಸೂಪರ್ಇಂಟೆಂಡೆಂಟಿಂದ ಅಥವಾ ಅಸಿಸ್ಟೆಂಟು ಸೂಪರ್ಇಂಟೆಂಡೆಂಟಿಂದ ಮಾಡಲ್ಪಟ್ಟ ಅಂಥಾ ಪ್ರತಿ ಅಪ್ಪಣೆಯ ಒಂದು ಪ್ರತಿಯನ್ನು ಅತನು ತನಗೆ ಸಮೀಪವಾಗಿ ಮೇಲ್ಪಟ್ಟು ಇರುವವನಿಗೆ ಕಾಲವಿಳಂಬವಿಲ್ಲದೆ ಕಳುಹಿಸತಕ್ಕದ್ದು.

ಅಂಥಾ ಶಿಕ್ಷೆಯನ್ನು ಕೊಡೋಣದರಲ್ಲಿ ಅನುಸರಿಸಬೇಕಾದ ನಡವಳಿಕೆ ಕ್ರಮ.

ಬೊಂಬಾಯಿ–1890ರ 4 ಪ್ರ. 32. (1) ಸ್ವಲ್ಪ ಹೆಚ್ಚಾಗಿ ಸೇರಿಸಿದೆ.

ಪೊಲೀಸು ಆಫಿಸರುಗಳು ಯಾವಾಗಲೂ ಕೆಲಸದಮೇಲೆ ಇರುವಂತೆಯೂ, ಮೈಸೂರು ಸೀಮೆಯ ಯಾವ ಭಾಗದಲ್ಲಾದರೂ ಕೆಲಸಕ್ಕೆ ನೇಮಕವಾಗಲು ಗುರಿಯಾಗಿ ಇರುವಂತೆಯೂ, ಭಾವಿಸತಕ್ಕದ್ದು.

29. ಪ್ರತಿ ಪೊಲೀಸು ಆಫಿಸರು, ಈ ರೆಗ್ಯುಲೇಷನಿನ ಕಾರ್ಯಗಳಿಗೋಸ್ಕರ, ಯಾವಾಗಲೂ ಕೆಲಸದಮೇಲೆ ಇರುವುದಾಗಿ ಭಾವಿಸಲ್ಪಡತಕ್ಕದ್ದು, ಮತ್ತು ಮೈಸೂರು ಸೀಮೆಯ ಯಾವ ಭಾಗದಲ್ಲಾಗಲಿ ಪೊಲೀಸು ಕೆಲಸದಮೇಲೆ, ಅವನು ಅಲ್ಲಿ ಚಾಕರಿ ಮಾಡಬೇಕಾಗಿ ಇರಬಹುದಾದ ಕಾಲಪರ್ಯಂತ, ಯಾವ ವೇಳೆಯಲ್ಲಾಗಲಿ, ಅಲ್ಲಿಗೆ ವರ್ಗ ಮಾಡಲ್ಪಡಬಹುದು ಅಥವಾ ಚಾಕರಿಯಲ್ಲಿ ಇಡಲ್ಪಡಬಹುದು.

ಬೊಂಬಾಯಿ–1890ರ 4 ಪ್ರ. 33. (1) ಹೆಚ್ಚಾಗಿ ಸೇರಿಸಿದೆ.

ಪೊಲೀಸು ಆಫಿಸರುಗಳು ವ್ಯಾಪಾರ ಮುಂತಾದುದರಲ್ಲಿ ಉದ್ಯುಕ್ತರಾಗಕೂಡದು.

30. (1) ಡೆಪ್ಯುಟಿ ಕಮಿಷನರ ಅಥವಾ ಇನ್ಸ್‌ಪೆಕ್ಟರು ಜನರಲಿನ ಅಥವಾ ಸರಕಾರದ ಅಪ್ಪಣೆಯಿಲ್ಲದೆ, ಯಾವ ಪೊಲೀಸು ಆಫಿಸರೂ, ಎಲ್ಲಿ ಅವನು ಚಾಕರಿಯ ಮೇಲೆ ಇದಾನೆಯೊ ಆ ಡಿಸ್ಟ್ರಿಕ್ಟಿನಲ್ಲಿ ಮುಖಂಡನಾಗಿ ಆಗಲಿ ಮತ್ತೊಬ್ಬರ ಕಡೆಯವನಾಗಿ ಆಗಲಿ, ವ್ಯಾಪಾರದಲ್ಲಿ ಉದ್ಯುಕ್ತನಾಗಕೂಡದು, ಅಥವಾ ಭೂಮಿಯನ್ನು ಕ್ರಯಕ್ಕೆ ಕೊಳ್ಳೋಣದರಲ್ಲಿ ಅಥವಾ ಮಾರೋಣದರಲ್ಲಿ ಅಥವಾ ವ್ಯಾಪಾರ ಸಂಬಂಧವಾದ ಯಾವ ಆಡಳಿತದಲ್ಲಿಯಾದರೂ ಯಾವ ಬಗೆಯಾಗಿಯೂ ಸಂಬಂಧಪಡಕೂಡದು ಅಥವಾ ಒಂದು ಕ್ರಿಮಿನಲು ಕೋರ್ಟಿನ ಅಪ್ಪಣೆಯ ಮೇರೆಗೆ ಯಾಲಂ ಹಾಕಲ್ಪಡುವ ಸ್ವತ್ತನ್ನು ಬೆಲೆಗೆ ಕೇಳಕೂಡದು ಅಥವಾ ಮತ್ತೊಬ್ಬ ಪೊಲೀಸು ಆಫಿಸರ ಸಂಗಡ ಲೇವಾದೇವಿ ಮಾಡಕೂಡದು.

ಬೊಂಬಾಯಿ–1890ರ 4 ಪ್ರ. 33. (2)

ಪೊಲೀಸು ಆಫಿಸರುಗಳನ್ನು ಪೊಲೀಸು ಕೆಲಸಗಳು ಅಲ್ಲದೆ ಬೇರೆ ಕೆಲಸಗಳ ಮೇಲೆ ನೇಮಿಸಕೂಡದು.

(2) ಇನ್ಸ್‌ಪೆಕ್ಟರು ಜನರಲಿನ ಬರಹಮೂಲಕವಾದ ಅಪ್ಪಣೆಯೊಂದಿಗೆ ಹೊರತು, ಯಾವ ಪೊಲೀಸು ಆಫಿಸರೂ, ಅಂಥಾ ಪೊಲೀಸು ಆಫಿಸರಾಗಿ ತನಗೆ ಇರುವ ಉದ್ಯೋಗ ಅಥವಾ ಕೆಲಸಗಳಲ್ಲದೆ ಬೇರೆ ಯಾವ ಉದ್ಯೋಗದಲ್ಲೂ ಖಂಡಿತವಾಗಿ ಇರಕೂಡದು, ಅಥವಾ ಬೇರೆ ಯಾವ ವೃತ್ತಿಯನ್ನೂ ನಡೆಸಕೂಡದು, ಅಥವಾ ಯಾವ ಚಾಕರಿಯಲ್ಲೂ ಉದ್ಯುಕ್ತನಾಗಕೂಡದು.

ಬೊಂಬಾಯಿ–1890ರ 4 ಪ್ರ. 33. (3)

ಈ ನಿರ್ಬಂಧಗಳು ಪೊಲೀಸು ಆಫಿಸರು ರಜಾಮೇಲೆ ಇರುವಾಗ್ಗೆ ಅಥವಾ ಆತನ ಪೊಲೀಸು ಉದ್ಯೋಗವನ್ನು ಕೊಂಚಕಾಲ ತಡೆದಿರುವಾಗ್ಗೆ ಸಹ ಆತನಿಗೆ ಅನ್ವಯಿಸತಕ್ಕದ್ದು.

(3) (1) ಮತ್ತು (2)ನೆ ಒಳ ಪ್ರಕರಣಗಳಲ್ಲಿ ಹೇಳಿರುವ ನಿರ್ಬಂಧಗಳು ಪೊಲೀಸು ಆಫಿಸರು ರಜಾ ಮೇಲೆ ಇರುವಾಗ ಅಥವಾ ಅವನನ್ನು ಕೆಲಸದಿಂದ ತಡೆದು ಇರುವಾಗ, ಅವನು ಕೆಲಸದ ಮೇಲೆ ಇರುವಾಗ ಸಹ, ಅವನಿಗೆ ಅನ್ವಯಿಸುತ್ತವೆ.

ಬೊಂಬಾಯಿ–1890ರ 4 ಪ್ರ. 34.

ಪೊಲೀಸು ಆಫಿಸರು ಯಾವ ಪ್ರಸಂಬಡಿಕೆಗಳ ಪ್ರಕಾರ ಕೆಲಸವನ್ನು ಬಿಟ್ಟುಬಿಡಬಹುದು.

31. (1) ಡೆಪ್ಯುಟಿ ಕಮಿಷನರ ಬರಹ ಮೂಲಕವಾದ ಅಪ್ಪಣೆಯೊಡನೆ ಹೊರತು, ಅಥವಾ ಅಂಥಾ ಅಪ್ಪಣೆಯನ್ನು ಕೊಡಲು ಇನ್ಸ್‌ಪೆಕ್ಟರು ಜನರಲಿನಿಂದ ಅಧಿಕಾರ ಪಡೆದ ಯಾರಾದರೂ ಇತರ ಪೊಲೀಸು ಆಫಿಸರ ಬರಹ ಮೂಲಕವಾದ ಅಪ್ಪಣೆಯೊಂದಿಗೆ ಹೊರತು, ಇನ್ಸ್‌ಪೆಕ್ಟರಿನ ಸ್ಥಾನದ ಅಥವಾ ಅದಕ್ಕೆ ಕೆಳಗಿನ ಪೊಲೀಸು ಆಫಿಸರು ಯಾವವರೆಗೆ ತನ್ನ ಉದ್ಯೋಗವನ್ನು ಬಿಟ್ಟುಬಿಡಕೂಡದು ಅಥವಾ ಅದರ ಕೆಲಸಗಳಿಂದ ಹಿಂಜರಿಯಕೂಡದು ಎಂದರೆ —

(a) ಕೆಲಸವನ್ನು ಬಿಟ್ಟುಬಿಡಬೇಕೆಂಬ ತನ್ನ ಉದ್ದೇಶದ ಬರಹ ಮೂಲಕವಾದ ನೋಟಿಸನ್ನು ಡೆಪ್ಯುಟಿ ಕಮಿಷನರಿಗೆ ಕೊಟ್ಟ ತರುವಾಯ ಎರಡು ತಿಂಗಳುಗಳು ಕಳೆಯುವವರಿಗೆ; ಮತ್ತು

(b) ಸರಕಾರಕ್ಕೆ ಅಥವಾ ಯಾವುದಾದರೂ ಪೊಲೀಸು ಹಣಕ್ಕೆ ಅಂಥಾ ಪೊಲೀಸು ಆಫಿಸರಾಗಿ ಅವನಿಂದ ಸಲ್ಲಬೇಕಾದ ಯಾವ ಸಾಲವನ್ನಾಗಲಿ ಅವನು ಪೂರಾ ಸಲ್ಲಿಸಿ ಆಗುವ ವರೆಗೆ.

(2) ಆದರೆ ಅಂಥಾ ಯಾವ ಪೋಲೀಸು ಆಫಿಸರಾದರೂ, ಪೋಲೀಸಿನಲ್ಲಿ ಮುಂದಕ್ಕೆ ಚಾಕರಿ ಮಾಡಲು ರೋಗದ ಅಥವಾ ಮನೋಸಂಬಂಧವಾದ ಅಥವಾ ದೇಹಸಂಬಂಧವಾದ ಅಸಮರ್ಥತೆಯ ಕಾರಣದಿಂದ ತಾನು ಅಯೋಗ್ಯನೆಂದು ಡಿಸ್ಟ್ರಿಕ್ಟಿನಲ್ಲಿ ಇರುವ ಮುಖ್ಯವಾದ ವೈದಿಕಲು ಆಫಿಸರು ಸ್ಥಾಪಿಸಿ ಆತನ ಹೆಸರು ಬರಹವಾಗಿರುವ ಸರ್ಟಿಫಿಕೇಟನ್ನು ತೋರಿಸಿದರೆ ಮೇಲೆ ಹೇಳಿರುವಂತೆ ಆವನಿಂದ ಬರಬೇಕಾದ ಯಾವ ಸಾಲವನ್ನಾಗಲಿ ತೀರಿಸಿ ಆದಮೇಲೆ ಅಥವಾ ಅಂಥಾ ಸಾಲವನ್ನು ತೀರಿಸುವುದಕ್ಕೋಸ್ಕರ ತೃಪ್ತಿಕರವಾದ ಹೊಣೆಯನ್ನು ಕೊಟ್ಟ ತರುವಾಯ, ಚಾಕರಿಯನ್ನು ಬಿಟ್ಟುಬಿಡಲು ಬೇಕಾದ ಬರಹ ಮೂಲಕವಾದ ಅಪ್ಪಣೆಯನ್ನು ಅವನಿಗೆ ಕೂಡಲೆ ಕೊಡತಕ್ಕದ್ದು.

ನಿಯಮ.

ಈ ಪ್ರಕರಣಕ್ಕೆ ವಿರೋಧವಾಗಿ ನಡೆಯುವ ಪೋಲೀಸು ಆಫಿಸರ ಸಂಬಳದ ಬಾಕಿಯನ್ನು ದಂಡವಾಗಿ ತೆಗೆದುಕೊಳ್ಳಬಹುದು.

(3) ಮೇಲೆ ಕಂಡಂಥಾ ಯಾವ ಪೋಲೀಸು ಆಫಿಸರಾದರೂ ಈ ಪ್ರಕರಣಕ್ಕೆ ವಿರೋಧವಾಗಿ ಚಾಕರಿಯನ್ನು ಬಿಟ್ಟುಬಿಟ್ಟರೆ, ಅಥವಾ ತನ್ನ ಉದ್ಯೋಗದ ಕೆಲಸಗಳಿಂದ ಹಿಂಜರಿದರೆ, ಆವನಿಗೆ ಆಗ ಸಲ್ಲಬೇಕಾದ ಸಂಬಳದ ಬಾಕಿಗಳನ್ನೆಲ್ಲಾ ಹೋಗಲಾಡಿಸಿಕೊಳ್ಳಲು ಡೆಪ್ಯುಟಿ ಕಮಿಷನರ ಅಪ್ಪಣೆ ಆದಮೇಲೆ, ಅವನು ಗುರಿಯಾಗತಕ್ಕದ್ದು. ಈ ದಂಡವು, ಈ ರೆಗ್ಯುಲೇಷನಿನ 33ನೆ ಪ್ರಕರಣ ಪ್ರಕಾರ ಅಥವಾ ಉಪಯೋಗದಲ್ಲಿ ಇರುವ ಬೇರೆ ನ್ಯಾಯದ (ಕಾನೂನಿನ) ಪ್ರಕಾರ ಸದರಿ ಆಫಿಸರು ಯಾವುದಕ್ಕೆ ಗುರಿಯಾಗಿ ಇರುತ್ತಾನೆಯೊ ಆ ದಂಡವಲ್ಲದೆ ಅಧಿಕವಾಗಿ ಇರತಕ್ಕದ್ದು.

ಬೊಂಬಾಯಿ—1890ರ 4 ಪ್ರ. 33.

ಯಾರ ಪೋಲೀಸು ಆಫಿಸರುತನ ಮುಗಿದು ಹೋಗುತ್ತದೆಯೊ ಆ ಮನುಷ್ಯನು ಸರ್ಟಿಫಿಕೇಟು, ಆಯುಧಗಳು, ಮುಂತಾದುದನ್ನು ಒಪ್ಪಿಸಿಬಿಡಬೇಕು ಮತ್ತು

32. (1) ಯಾವ ಕಾರಣಕ್ಕೋಸ್ಕರವಾಗಿಯಾದರೂ ಪೋಲೀಸು ಆಫಿಸರುತನವನ್ನು ಮುಗಿಸಿಕೊಳ್ಳುವ ಪ್ರತಿ ಮನುಷ್ಯನೂ, ತನ್ನ ಉದ್ಯೋಗದ ನಿರ್ವಾಹಕ್ಕೋಸ್ಕರ ತನಗೆ ಕೊಟ್ಟಿದ್ದ ಚಾಕರಿಯ ಅಥವಾ ಉದ್ಯೋಗದ ಬಗ್ಗೆ ತನ್ನ ಸರ್ಟಿಫಿಕೇಟನ್ನು ಮತ್ತು ಆಯುಧಗಳನ್ನು, ಸೈನ್ಯದ ಉಪಕರಣಗಳನ್ನು, ಉಡುಪನ್ನು ಮತ್ತು ಇತರ ಅಗತ್ಯ ವಸ್ತುಗಳನ್ನು, ಅವುಗಳನ್ನು ಬರಮಾಡಿಕೊಳ್ಳಲು ಡೆಪ್ಯುಟಿ ಕಮಿಷನರಿಂದ ಅಧಿಕಾರ ಹೊಂದಿದ ಯಾವ ಆಫಿಸರಿಗಾಗಲಿ, ಕೂಡಲೆ ಕೊಟ್ಟುಬಿಡಬೇಕು.

ಒಪ್ಪಿಸಿಬಿಡದೆ ಹೋದರೆ, ಶೋಧನೆಯವಾರೆಂಟಿನ ಮೇಲೆ ಅವುಗಳನ್ನು ಸ್ವಾಧೀನ ಮಾಡಿಕೊಳ್ಳಬಹುದು.

(2) ಹಾಗೆ ಕೊಟ್ಟುಬಿಡದೆ ಹೋದ ಯಾವ ಸರ್ಟಿಫಿಕೇಟನ್ನು, ಆಯುಧಗಳನ್ನು, ಸೈನ್ಯದ ಉಪಕರಣಗಳನ್ನು, ಉಡಿಗೆ ತೊಡಿಗೆಯನ್ನು ಅಥವಾ ಇತರ ಅಗತ್ಯ ವಸ್ತುಗಳನ್ನು ಆಗಲಿ, ಅವು ಎಲ್ಲೆಲ್ಲಿ ದೊರೆತರೆ ಅಲ್ಲಲ್ಲಿ ಅವುಗಳನ್ನು ಹುಡುಕಿ ಹಿಡಿದುಕೊಳ್ಳಲು ವಾರಂಟನ್ನು ಯಾವ ಮಾಜಿಸ್ಟ್ರೇಟಾದರೂ, ಮತ್ತು ಸದರಿ ವೇಳೆಯಲ್ಲಿ ಬರೆದಿಡಲ್ಪಡತಕ್ಕ ವಿಶೇಷಕಾರಣಗಳಿಗೋಸ್ಕರ, ಯಾವ ಡಿಸ್ಟ್ರಿಕ್ಟ ಸೂಪರಿಂಟೆಂಡೆಂಟಾದರೂ ಕೊಡಬಹುದು. ಹಾಗೆ ಕೊಡಲ್ಪಟ್ಟ ಪ್ರತಿ ವಾರೆಂಟನ್ನು ಕ್ರಿಮಿನಲು ಪ್ರೊಸೀಡ್ಯುರು ಕೋಡಿನ ವಿಧಿಗಳಿಗೆ ಅನುಸಾರವಾಗಿ ಒಬ್ಬ ಪೋಲೀಸು ಆಫಿಸರಾಗಲಿ, ಅಥವಾ ಆ ವಾರೆಂಟನ್ನು ಕೊಡುವ ಮಾಜಿಸ್ಟ್ರೇಟು ಅಥವಾ ಡಿಸ್ಟ್ರಿಕ್ಟು ಸೂಪರಿಂಟೆಂಡೆಂಟು ಹಾಗೆ ಆಜ್ಞಾಪಿಸಿದರೆ, ಇತರ ಯಾವ ಮನುಷ್ಯನಾಗಲಿ ನೆರವೇರಿಸತಕ್ಕದ್ದು.

ಕೆಲವು ವಸ್ತುಗಳನ್ನು ಉಳಿಸಿಕೊಳ್ಳೋಣ.

(3) ಒಬ್ಬ ಮನುಷ್ಯನಿಗೆ ಕೊಡಲ್ಪಟ್ಟ ಯಾವುದಾದರೂ ವಸ್ತುವು ಇನ್ಸ್ಪೆಕ್ಟರು ಜನರಲಿನ ಅಪ್ಪಣೆಗಳ ಪ್ರಕಾರ ಆ ಮನುಷ್ಯನ ಸ್ವತ್ತಾಗಿ ಬಿಟ್ಟಿದ್ದರೆ, ಅಂಥಾ ಯಾವ ವಸ್ತುವಿಗೂ ಈ ಪ್ರಕರಣದಲ್ಲಿ ಇರುವುದೇನೂ ಅನ್ವಯಿಸಲಾರದೆಂದು ಭಾವಿಸತಕ್ಕದ್ದು.

ಸುಳ್ಳುಹೇಳಿಕೆಗಳನ್ನು ಹೇಳುವುದು ಮುಂತಾದುದಕ್ಕಾಗಿ ದಂಡನೆ, ಮತ್ತು

33. (1) ಪೋಲೀಸು ಆಫಿಸರಾಗಿ, ಚಾಕರಿಯನ್ನು ಸಂಪಾದಿಸುವುದಕ್ಕೋಸ್ಕರ, ಅಥವಾ ಚಾಕರಿಯಿಂದ ಬಿಡುಗಡೆಯಾಗುವುದಕ್ಕೋಸ್ಕರ, ಸುಳ್ಳಾದ ಹೇಳಿಕೆಯನ್ನು ಹೇಳುವ ಅಥವಾ ಸುಳ್ಳು ಸಾಧನವನ್ನು ಉಪಯೋಗಿಸುವ ಯಾವ ಮನುಷ್ಯನಿಗೆ ಆಗಲಿ, ಅಥವಾ

ಬೊಂಬಾಯಿ–1890ರ 4 ಪ್ರ. 36. ಪೊಲೀಸು ಆಫಿಸರುಗಳ ಕೆಟ್ಟ ನಡತೆಗಾಗಿ ದಂಡನೆ.

(2) ಯಾವ ಪೊಲೀಸು ಆಫಿಸರು ಆದರೂ—

(a) 30ನೆ ಪ್ರಕರಣದ ಯಾವ ವಿಧಿಗಾದರೂ ವಿರೋಧವಾಗಿ ನಡೆದರೆ, ಅಥವಾ

(b) ಹೇಡಿತನದ ತಪ್ಪು ಅವನ ಮೇಲೆ ಹೊತ್ತರೆ, ಅಥವಾ

(c) 31ನೆ ಪ್ರಕರಣಕ್ಕೆ ವಿರೋಧವಾಗಿ ತನ್ನ ಉದ್ಯೋಗವನ್ನು ಬಿಟ್ಟುಬಿಟ್ಟರೆ, ಅಥವಾ ಅದರ ಕೆಲಸಗಳಿಗೆ ಹಿಂಜರಿದರೆ, ಅಥವಾ

(d) ಯಾವುದನ್ನು ಅಂಥಾ ಪೊಲೀಸು ಆಫಿಸರಾಗಿ ಆಚರಿಸೋಣ ಅಥವಾ ಯಾವುದಕ್ಕೆ ವಿಧೇಯವಾಗಿ ನಡೆದುಕೊಳ್ಳೋಣ ತನ್ನ ಕೆಲಸವಾಗಿ ಇರುತ್ತದೆಯೊ ಅಂಥಾ ಕಾನೂನಿನ ಅಥವಾ ಯಾವುದಾದರೂ ನಿಬಂಧನೆಯ ಅಥವಾ ಅಪ್ಪಣೆಯ ಯಾವ ವಿಧಿಗಾದರೂ ಮನಃಪೂರ್ವಕವಾದ ಯಾವ ಉಲ್ಲಂಘನೆಯು ಅಥವಾ ಅಸಡ್ಡೆಯ ತಪ್ಪುಗಳ ಅವನ ಮೇಲೆ ಹೊತ್ತರೆ, ಅಥವಾ

(e) ಉಪಯೋಗದಲ್ಲಿ ಇರುವ ಮತ್ತು ಯಾವ ನ್ಯಾಯದಲ್ಲಿಯೂ (ಕಾನೂನಿನಲ್ಲಿಯೂ) ಯಾವುದಕ್ಕಾಗಿ ಶಿಕ್ಷೆಯನ್ನು ಖಂಡಿತವಾಗಿ ವಿಧಿಸಿಲ್ಲವೋ ಅಂಥಾ ಯಾವುದಾದರೂ ಕೆಲಸದ ಭಂಗದ ತಪ್ಪು ಅವನ ಮೇಲೆ ಹೊತ್ತರೆ,

ಅವನಿಗೆ ಆಗಲಿ ಮೂರು ತಿಂಗಳವರೆಗೂ ವಿಸ್ತರಿಸಬಹುದಾದ ಒಂದು ಗಡುವಿನ ಪರ್ಯಂತ ಸೆರೆಯಿಂದ, ಅಥವಾ ಒಂದು ನೂರು ರೂಪಾಯಿತನಕ ಆಗಬಹುದಾದ ಅಪರಾಧದಿಂದ, ಅಥವಾ ಇವೆರಡರಿಂದಲೂ ಶಿಕ್ಷೆಯಾಗತಕ್ಕದ್ದು.

ರಜಾ ಮುಗಿದ ಮೇಲೆ ಚಾಕರಿಗೆ ಪುನಃ ಬಾರದೆ ತಪ್ಪುವುದರ ಫಲ.

(3) ರಜಾ ಮೇಲೆ ಹೋಗಿದ್ದ ಪೊಲೀಸು ಆಫಿಸರು, ನ್ಯಾಯವಾದ ಕಾರಣವಿಲ್ಲದೆ, ಅಂಥಾ ರಜಾ ಮುಗಿದ ಮೇಲೆ ಚಾಕರಿಗೆ ತಾನು ಹಿಂದಕ್ಕೆ ಬಂದುದಾಗಿ ತಿಳಿಸಿಕೊಳ್ಳಲು ತಪ್ಪಿದರೆ, (c) ವಾಕ್ಯದ ಉದ್ದೇಶಗಳಿಗೋಸ್ಕರ, 31ನೆ ಪ್ರಕರಣದ ಅರ್ಥಕ್ಕೆ ಅನುಗುಣವಾಗಿ ಅವನ ಉದ್ಯೋಗದ ಕೆಲಸಗಳಿಂದ ಅವನು ಹಿಂಜರಿದನೆಂದು ಭಾವಿಸತಕ್ಕದ್ದು.

ಬೊಂಬಾಯಿ–1890ರ 4 ಪ್ರ. 37.

ಚಾಕರಿಯ ನೇಮಕದ ಅಥವಾ ಉದ್ಯೋಗದ ಸರ್ಟಿಫಿಕೇಟನ್ನು ಅಥವಾ ಇತರ ಪದಾರ್ಥವನ್ನು ಒಪ್ಪಿಸಿ ಬಿಡಲು ತಪ್ಪಿದುದಕ್ಕಾಗಿ ದಂಡನೆ.

34. ಯಾರು ತನ್ನ ಚಾಕರಿಯ ಅಥವಾ ಉದ್ಯೋಗದ ಸರ್ಟಿಫಿಕೇಟನ್ನು ಅಥವಾ ಇತರ ಯಾವುದಾದರೂ ವಸ್ತುವನ್ನು 32ನೆ ಪ್ರಕರಣದ (1)ನೆ ಒಳಪ್ರಕರಣದ ವಿಧಿಯ ಪ್ರಕಾರ ಕೊಟ್ಟುಬಿಡಲು ಮನಃಪೂರ್ವಕವಾಗಿ ಅಸಡ್ಡೆ ಮಾಡುತ್ತಾನೆಯೊ ಅಥವಾ ನಿರಾಕರಿಸುತ್ತಾನೆಯೊ ಅಂಥಾ ಯಾವ ಪೊಲೀಸು ಆಫಿಸರಿಗೆ ಆದರೂ ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಒಂದು ಗಡುವಿನ ತನಕ ಸೆರೆಯಿಂದ, ಅಥವಾ ಇನ್ನೂರು ರೂಪಾಯಿಗಳವರೆಗೆ ಆಗಬಹುದಾದ ಅಪರಾಧದಿಂದ, ಅಥವಾ ಇವೆರಡರಿಂದಲೂ ಶಿಕ್ಷೆಯಾಗತಕ್ಕದ್ದು.

4ನೆ ಅಧ್ಯಾಯ—ಪೊಲೀಸು ಕಟ್ಟಳೆಗಳು.

ಬೊಂಬಾಯಿ–1890ರ 4 ಪ್ರ. 38. ಸ್ವಲ್ಪವಾಗಿ ಬದಲಾಯಿಸಲ್ಪಟ್ಟಿದೆ.

ಕ್ರಿಮಿನಲು ಪ್ರೊಸೀಡ್ಯುರು ಕೋಡಿನ 144ನೆ ಪ್ರಕರಣದ ಪ್ರಕಾರದ ವಿಷಯಗಳಲ್ಲಿ ಅಪ್ಪಣೆ ಕೊಡಲು ಸರ್ಕಾರದವರ ಅಧಿಕಾರ.

35. ಕ್ರಿಮಿನಲು ಪ್ರೊಸೀಡ್ಯುರು ಕೋಡಿನ 144ನೆ ಪ್ರಕರಣದಂತೆ ಮಾಜಿಸ್ಟ್ರೇಟಿಂದ ಮಾಡಲ್ಪಟ್ಟರೆ ಸದರಿ ಪ್ರಕರಣದ ಪ್ರಕಾರ ಸರಕಾರದವರು ಯಾವುದನ್ನು ಉಪಯೋಗದಲ್ಲಿ ಇಟ್ಟಿರಬಹುದೊ ಅಂಥಾ ಆಜ್ಞೆಯನ್ನು ಪ್ರಕಟನೆಯ ಮೂಲಕವಾಗಿ ಮಾಡುವುದು ಸರಕಾರಕ್ಕೆ ಯೋಗ್ಯವಾಗಿರತಕ್ಕದ್ದು.

ಬೊಂಬಾಯಿ–1890ರ 4 ಪ್ರ. 39.

ಬೀದಿಗಳ ಉಪಯೋಗ ಮುಂತಾದುದರ ವಿಚಾರವಾಗಿ ನಿಬಂಧನೆಗಳನ್ನು ಡಿಸ್ಟ್ರಿಕ್ಟು ಮಾಜಿಸ್ಟ್ರೇಟು ಮಾಡಬಹುದು.

36. (1) ಎಲ್ಲಿ ಡಿಸ್ಟ್ರಿಕ್ಟು ಮಾಜಿಸ್ಟ್ರೇಟು ತಕ್ಕದ್ದೆಂದು ಎಣಿಸುತ್ತಾನೆಯೊ ಅಂಥಾ ಯಾವ ಪಟ್ಟಣದಲ್ಲಿ ಅಥವಾ ಇತರ ಸ್ಥಳದಲ್ಲಿ ಆದರೂ ಆತನು, ಆಗಿಂದಾಗ್ಗೆ ಮತ್ತು ಆ ವಿಷಯದಲ್ಲಿ ಅಧಿಕಾರ ಹೊಂದಿದ ಮ್ಯುನಿಸಿಪಲು ಅಥವಾ ಇತರ ಅಧಿಕಾರಿಯಿಂದ ಮಾಡಲ್ಪಟ್ಟಿರಬಹುದಾದಂಥಾ ಅಪ್ಪಣೆಗಳಿಗೆ ಒಳಪಟ್ಟು, ಯಾವ ಬಗ್ಗಾಗಿ ನಿಬಂಧನೆಗಳನ್ನು ಅಥವಾ ಆಜ್ಞೆಗಳನ್ನು ಮಾಡಬಹುದು ಎಂದರೆ—

(a) ನಾಶಕರವಾದ ಕಟ್ಟಡಗಳಿಂದ ಅಥವಾ ಇತರ ಕಾರಣದಿಂದ, ಅಪಾಯ ಸಂಭವಿಸುವ ಸಂದರ್ಭಗಳಲ್ಲಿ, ನ್ಯಾಯವೆಂದು ಕಾಣತಕ್ಕ ವಿನಾಯಿತಿಗಳೊಡನೆ, ಕೆಲವು ಬೀದಿಗಳನ್ನು ಅಥವಾ ಸ್ಥಳಗಳನ್ನು ಕೊಂಚಕಾಲದ ಮಟ್ಟಿಗೆ ಮುಚ್ಚುವ ವಿಷಯದಲ್ಲಿ;

(b) ಮಾರ್ಗಸ್ಥರಿಗೆ, ನೆರೆಹೊರೆಯವರಿಗೆ ಅಥವಾ ಸರ್ವ ಜನರಿಗೆ ಯಾವುದರಿಂದ ಅಪಾಯ ಉಂಟಾಗಬಹುದೋ ಅಂಥಾ ಕಟ್ಟಡಗಳನ್ನು, ಜಗಲಿಗಳನ್ನು, ಕಟ್ಟೆಗಳನ್ನು ಮತ್ತು ಇತರ ಕಟ್ಟಡಗಳನ್ನು ಕಟ್ಟುವುದರಲ್ಲಿ, ನೆಟ್ಟಗೆ ಮಾಡೋಣದರಲ್ಲಿ, ಮತ್ತು ನೆಲಸಮ ಮಾಡುವುದರಲ್ಲಿ, ಜನರಿಗೆ ಮತ್ತು ಸ್ವತ್ತಿಗೆ ಹಾನಿ ಸಂಭವಿಸದಂತೆ ಎಚ್ಚರಿಕೆಯಾಗಿರುವ ಬಗ್ಗೆ;

(c) ಯಾವುದಾದರೂ ಬೀದಿಯಲ್ಲಿ ಅಥವಾ ಬೀದಿಯ ಮೊದಲಿನಿಂದ ಕಡೇವರೆಗೆ ಯಾವ ಆನೆಯನ್ನು ಅಥವಾ ಕ್ರೂರವಾದ ಅಥವಾ ಅಪಾಯಕರವಾದ ಮೃಗವನ್ನು ನಡೆಸೋಣ, ಹೊಡೆದುಕೊಂಡು ಹೋಗೋಣ, ಹಿಡಿದುಕೊಂಡು ಹೋಗೋಣ ಅಥವಾ ಸಾಗಿಸೋಣ, ಇವುಗಳನ್ನು ಕ್ರಮ ಪಡಿಸುವ ಬಗ್ಗೆ;

(d) ವ್ಯಾಪಾರಕ್ಕೆ, ಅಥವಾ ಬೆಳಕು ಮತ್ತು ಗಾಳಿಯು ಸುಸೂತ್ರವಾಗಿ ಸೇರುವುದಕ್ಕೆ ಅಡ್ಡಿಯಾಗುವಂತೆ ಒಂದು ಬೀದಿಗೆ ಅಥವಾ ಅದರ ಪೈಕಿ ಒಂದು ಭಾಗಕ್ಕೆ ಅಡ್ಡವಾಗಿ ಯಾವುದಾದರೂ ಹಗ್ಗವನ್ನು ಅಥವಾ ಗಣೆಯನ್ನು ತೂಗಹಾಕೋಣವನ್ನು ಅಥವಾ ಇಡೋಣವನ್ನು ಅಥವಾ ಮೇಲೆ ಹೇಳಿದ ರೀತಿಯಲ್ಲಿ ಅಡ್ಡಿಯಾಗುವಂತೆ ಒಂದು ಉಬ್ಬನ್ನು ಅಥವಾ ಕಟ್ಟಡವನ್ನು ಕಟ್ಟೋಣವನ್ನು ನಿಷೇಧಿಸುವ ಬಗ್ಗೆ;

(e) ಡಿಸ್ಟ್ರಿಕ್ಟ ಮಾಜಿಸ್ಟ್ರೇಟು ಆ ಬಗ್ಗಾಗಿ ನಿಯಾಮಕ ಮಾಡಬಹುದಾದಂಥಾ ನ್ಯಾಯವಾದ ಕಟ್ಟಳೆಗಳಿಗೆ ಒಳಪಟ್ಟು ಹೊರತು, ಹಗಲಿನ ಯಾವ ಹೊತ್ತಿನಲ್ಲಿ ಕೆಲವು ಬೀದಿಗಳಲ್ಲಿರುವ ಮನೆಗಳೊಳಕ್ಕೆ ಅಥವಾ ಕಟ್ಟಡಗಳೊಳಕ್ಕೆ ಅಥವಾ ಅವುಗಳಿಂದ ಆಚೆಗೆ ಹೇಲು, ಲದ್ದಿ, ಸಗಣಿ ಇಂಥಾದ್ದನ್ನು ಮತ್ತು ಅಸಹ್ಯಕರವಾದ ಪದಾರ್ಥವನ್ನು ಅಥವಾ ವಸ್ತುಗಳನ್ನು ತೆಗೆದುಕೊಂಡುಹೋಗತಕ್ಕದ್ದಲ್ಲವೋ, ಅಥವಾ ಅಂಥಾ ಬೀದಿಗಳಲ್ಲೆಲ್ಲಾ ಸಾಗಿಸತಕ್ಕದ್ದಲ್ಲವೋ, ಮತ್ತು ಬೀದಿಗಳ ಮೇಲೆ ಅಥವಾ ಕೆಲವು ಗೊತ್ತಾದ ಬೀದಿಗಳ ಮೇಲೆ ದನಕರಗಳನ್ನು ಹೊಡೆದುಕೊಂಡು ಹೋಗಕೂಡದೋ, ಆ ಕೆಲವು ಘಂಟೆಗಳನ್ನು ಗೊತ್ತು ಮಾಡುವ ಬಗ್ಗಾಗಿ;

(f) ಆ ಬಗ್ಗಾಗಿ ಡಿಸ್ಟ್ರಿಕ್ಟ ಮಾಜಿಸ್ಟ್ರೇಟು ನಿಯಾಮಕವಾಡಬಹುದಾದಂಥಾ ನ್ಯಾಯವಾದ ಕಟ್ಟಳೆಗಳಿಗೆ ಒಳಪಟ್ಟು ಹೊರತು, ಒಂದು ಬೀದಿಯಲ್ಲಿ ಅಥವಾ ಅದರ ಮೇಲೆ ಅಥವಾ ಕಟ್ಟಡದಲ್ಲಿ ಅಥವಾ ಅದರಮೇಲೆ ಅಥವಾ ಅವುಗಳಿಗೆ ಐವತ್ತು ಅಡಿಗಳೊಳಗೆ ಯಾವುದಾದರೂ ಒಣಹುಲ್ಲಿಗೆ ಅಥವಾ ಇತರ ಪದಾರ್ಥಕ್ಕೆ ಬೆಂಕಿ ಇಡೋಣ ಅಥವಾ ಅದನ್ನು ಸುಡೋಣ, ಅಥವಾ ಕೊಂಡದ ಬೆಂಕಿಯನ್ನು ಹಚ್ಚೋಣ ಅಥವಾ ದುರ್ವಿನೋದದಿಂದ ಬಂದು ಮದ್ದಿನ ತುಪಾಕಿಯನ್ನು ಅಥವಾ ಗಾಳಿಯ ತುಪಾಕಿಯನ್ನು ಸುಡೋಣ, ಅಥವಾ ಬಾಣಬಿರುಸನ್ನು ಬಿಡೋಣ ಅಥವಾ ಎಸೆಯೋಣ ಅಥವಾ ಬೆಂಕಿಯ ಆಕಾಶಬುಟ್ಟಿಯನ್ನು ಮೇಲಕ್ಕೆ ಬಿಡೋಣ, ಅಥವಾ ಬೆಳಕಿಗೋಸ್ಕರವಾಗಿ ದೀಪಗಳನ್ನು ಸಿಕ್ಕಿಸುವ ಅಥವಾ ಇತರ ಉಪಾಯಗಳನ್ನು ಮಾಡುವ ಉದ್ದೇಶಕ್ಕಾಗಿ ಬೀದಿಯ ಪಕ್ಕದಲ್ಲಿ ಅಥವಾ ಅದಕ್ಕೆ ಅಡ್ಡವಾಗಿ ಯಾವುದಾದರೂ ಕಂಭವನ್ನು ಅಥವಾ ಇತರವಸ್ತುವನ್ನು ನೆಡೋಣ ಇವುಗಳನ್ನು ನಿಷೇಧಿಸುವ ಬಗ್ಗೆ;

(g) ಡಿಸ್ಟ್ರಿಕ್ಟ ಮಾಜಿಸ್ಟ್ರೇಟು ನೇಮಿಸಬಹುದಾದ ನ್ಯಾಯವಾದ ಕಟ್ಟಳೆಗಳ ಮೇರೆಗೆ ವಿನಾ, ಯಾವ ಬೀದಿಯಲ್ಲಿ ಆದರೂ ಯಾವ ಹಳ್ಳವನ್ನಾದರೂ ಇಕ್ಕೋಣ, ಕಟ್ಟಡದ ಸಾಮಗ್ರಿಗಳನ್ನು ಅಥವಾ ಇತರ ವಸ್ತುಗಳನ್ನು ಹಾಕೋಣ, ಅಥವಾ ಯಾವುದಾದರೂ ಕುದುರೆಯನ್ನು ಅಥವಾ ಇತರ ಮೃಗವನ್ನು ಕಟ್ಟಿಹಾಕೋಣ ಅಥವಾ ನಿಲ್ಲಿಸಿಕೊಳ್ಳೋಣ, ಇವುಗಳನ್ನು ನಿಷೇಧಿಸುವ ಬಗ್ಗೆ;

ಬೊಂಬಾಯಿ—1890ರ 4, 40ನೆ ಪ್ರಕರಣದ ಆಧಾರದ ಮೇಲೆ ಮಾಡಿದೆ.

(h) ಯಾವುದಾದರೂ ಬೀದಿಯಲ್ಲಿ ಅಥವಾ ಅದರಹತ್ತಿರ ಮದ್ದಿನಿಂದ ಬಂಡೆ ಹಾರಿಸುವುದನ್ನು ಅಥವಾ ಕಳ್ಳೆ ಇಕ್ಕುವುದನ್ನು ಕ್ರಮಪಡಿಸುವ ಬಗ್ಗೆ ಮತ್ತು ಅಂಥಾ ಕೆಲಸಗಳಿಗಾಗಿ ಲೈಸೆನ್ಸುಗಳನ್ನು ಪಡೆಯುವುದಕ್ಕೆ ಏರ್ಪಾಡು ಮಾಡುವ ಬಗ್ಗೆ;

ಬೊಂಬಾಯಿ—1890ರ 39 ಒಳಪ್ರಕರಣ (1) ವಾಕ್ಯಗಳು (h)ನಿಂದ (m)ವರೆಗೆ.

(i) ಮೇಲೆ ಹೇಳಿರುವ ಕಟ್ಟಳೆಗಳ ಮೇರೆಗೆ ಹೊರತು, ಸಾಂಕ್ರಾಮಿಕ ಅಥವಾ ಸೋಂಕು ರೋಗಗಳನ್ನು ಅನುಭವಿಸುತ್ತಿರುವ ಜನರು ಅಥವಾ ಮೃಗಗಳು, ಮೃಗಗಳ, ಶವಗಳು, ಅಥವಾ ಆ ಶವಗಳ ಪೈಕಿ ಭಾಗಗಳು, ಮತ್ತು ಸತ್ತುಹೋದ ಮನುಷ್ಯರ ಹೆಣಗಳು, ಇವುಗಳನ್ನು ಯಾವುದಾದರೂ ಬೀದಿಯಲ್ಲಿ ಹೊರಪಡಿಸೋಣವನ್ನು ಅಥವಾ ಕದಲಿಸೋಣವನ್ನು ನಿಷೇಧಿಸುವ ಬಗೆ;

(j) ಮೃಗಗಳನ್ನು ಕೊಲ್ಲುವುದು, ಶವಗಳನ್ನು ಅಥವಾ ತೊಗಲುಗಳನ್ನು ಹಸನು ಮಾಡುವುದು ಕೇಡುಮಾಡುವ ಅಥವಾ ಬೇಸರಗೊಳಿಸುವ ಪದಾರ್ಥಗಳನ್ನು ಇಟ್ಟು ಕೊಳ್ಳುವುದು, ಮತ್ತು ಜಲಮಲಾದಿಗಳಿಗೆ ಹೋಗುವುದು, ಈ ಕೆಲಸಗಳಿಗೆ ಸ್ಥಳಗಳನ್ನು ಪ್ರತ್ಯೇಕಿಸಿ ಇಡುವ ಬಗ್ಗೆ :

(k) ರೋಗವನ್ನು ತಪ್ಪಿಸುವುದಕ್ಕೆ ಅಥವಾ ಅದು ವಿಸ್ತರಿಸುವದನ್ನು ಅಡ್ಡಿ ಮಾಡುವುದಕ್ಕೆ ಸರ್ಕಾರದಿಂದ ಅಪ್ಪಣೆಯಾಗಿರಬಹುದಾದಂತೆ ಅಥವಾ ಸರ್ಕಾರ ಮೆಚ್ಚಿರಬಹುದಾದಂತೆ, ಮನುಷ್ಯರಿಗೆ ಅಥವಾ ಮೃಗಗಳಿಗೆ ಸಾಂಕ್ರಾಮಿಕ ಅಥವಾ ಅಂಟುರೋಗ ಈಗ ಇರುವ ಅಥವಾ ಸಂಭವಿಸೀತೆಂಬ ಭಯ ಉಂಟಾಗಿರುವ ಸಂಧರ್ಭಗಳಲ್ಲಿ ವಠಾರದ ಅನುಭವಸ್ಥನಿಂದ ಮತ್ತು ಅವುಗಳಲ್ಲಿ ವಾಸಮಾಡುವವರಿಂದ ಆಚರಿಸಲ್ಪಡಬೇಕಾದ ಶುಚಿ, ಮತ್ತು ರೋಗದ ಸೋಂಕನ್ನು ಹೋಗಲಾಡಿಸುವಣ, ಮತ್ತು ರೋಗ ಹತ್ತಿದ ಅಥವಾ ತಗಲಿರುವುದಾಗಿ ನೆನಸಿರುವ ಜನರನ್ನು ಅಥವಾ ಮೃಗಗಳನ್ನು ಪ್ರತ್ಯೇಕಿಸುವಣ ಮತ್ತು ಅವರ ನಿರ್ವಾಹ, ಇವುಗಳಿಗಾಗಿ ಅಪ್ಪಣೆಗಳನ್ನು ಮಾಡುವ ಬಗ್ಗೆ ;

(l) ನೀರಿನ ಯಾವುದಾದರೂ ಮೂಲ, ನೀರನ್ನು ಒದಗಿಸೋಣ ಅಥವಾ ನೀರಿನ ಸ್ಥಾನ, ಇವುಗಳನ್ನು ಸಂಪೂರ್ಣವಾಗಿ ಅಥವಾ ಕೆಲವು ಕೆಲಸಗಳಿಗೋಸ್ಕರ ಮುಚ್ಚಿ ಬಿಡಬೇಕು ಅಥವಾ ಉಪಯೋಗಿಸಕೂಡದು ಎಂದು, ಅಥವಾ ಕೆಲವು ಕಾರ್ಯಗಳಿಗೆ ಮಾತ್ರ ಉಪಯೋಗಿಸತಕ್ಕದ್ದೆಂದು ಅಜ್ಞಾಪಿಸುವ ಬಗ್ಗೆ ; ಮತ್ತು ಆ ಮೂಲವನ್ನು, ಸ್ಥಾನವನ್ನು ಅಥವಾ ಅದರೊಳಗಿರುವ ನೀರನ್ನು ಕೆಡಿಸದೆ ಇರಲು ಏರ್ಪಾಡು ಮಾಡುವ ಬಗ್ಗೆ ;

(m) ಸತ್ತವರ ವ್ಯವಸ್ಥೆ ಬಗ್ಗೆ ಇರುವ ಯಾವುದಾದರೂ ಸ್ಥಳ, ಯಾವುದಾದರೂ ಸತ್ರ, ಊರುಬಾಗಿಲು, ಅಥವಾ ಜನರು ಸುಳಿದಾಡುವ ಇತರ ಸ್ಥಳ, ಇವುಗಳು ಯಾವುದನ್ನಾದರೂ, ಯಾವ ಘಂಟೆಗಳಲ್ಲಿ ಮತ್ತು ರೀತಿಯಲ್ಲಿ, ಅವುಗಳ ಅನುಕೂಲಗಳ ಮತ್ತು ವಸತಿಯ ಉಪಯೋಗವನ್ನು ಸಮವಾಗಿಯೂ ತಕ್ಕಂತೆಯೂ ಭದ್ರಪಡಿಸುವುದಕ್ಕೆ, ಮತ್ತು ಆ ಸ್ಥಳಗಳಲ್ಲಿ ಸುಳಿದಾಡುವ ಜನರು ಕ್ರಮವಾದ ನಡತೆಯುಳ್ಳವರಾಗಿರುವಂತೆ ನೋಡಿಕೊಳ್ಳುತ್ತಿರುವುದಕ್ಕೆ ಸಹ ಆಗುವಂತೆ, ಉಪಯೋಗಿಸಬಹುದೋ ಆ ಘಂಟೆಗಳು ಮತ್ತು ರೀತಿ, ಇವುಗಳನ್ನು ಕ್ರಮಪಡಿಸುವ ಬಗ್ಗೆ ;

(n) ನಾಟಕಶಾಲೆಗಳಲ್ಲಿ ಮತ್ತು ಜನರ ವಿನೋದದ ಅಥವಾ ಸಭೆಯ ಇತರ ಸ್ಥಳಗಳಲ್ಲಿ ಜನರ ಪ್ರವೇಶ ಮತ್ತು ಹೊರಡುವಿಕೆ ; ಅಲ್ಲಿನ ನಡವಡಿಕೆಗಳು ಯೋಗ್ಯವಾಗಿಯೂ ಕ್ರಮವಾಗಿಯೂ ನಡೆಯುವುದು, ಮತ್ತು ಜನರ ಕ್ಷೇಮ ಮತ್ತು ಅನುಕೂಲಕ್ಕೋಸ್ಕರ ಮಾಜಿಸ್ಟ್ರೇಟನ ಅಭಿಪ್ರಾಯದಲ್ಲಿ ವಿಶೇಷ ಕಟ್ಟಳೆಗಳು ಎಲ್ಲಿ ಬೇಕಾಗಿರಬಹುದೋ ಆ ಕಾಲಗಳಲ್ಲಿ ಮತ್ತು ಸ್ಥಳಗಳಲ್ಲಿ ಮನುಷ್ಯರ, ಮೃಗಗಳ ಮತ್ತು ವಾಹನಗಳ ಚಲನ, ಇವುಗಳನ್ನು ಕ್ರಮಪಡಿಸುವ ಬಗ್ಗೆ ;

ಬೊಂಬಾಯಿ 1890ರ 4 ಪ್ರ 39 (2) ಬದಲಾವಣೆಗಳೊಡನೆ ಮತ್ತು ಹೆಚ್ಚಾಗಿ ಸೇರಿಸಿದ ವಿಷಯಗಳೊಡನೆ.

ಅಂಥಾ ನಿಬಂಧನೆಗಳ ಪ್ರಕಟನೆಯ ರೀತಿ.

(2) (i) ವಾಕ್ಯದ ಪ್ರಕಾರ ಅಥವಾ (m) ವಾಕ್ಯದ ಪ್ರಕಾರ, ಸತ್ತವರ ವ್ಯವಸ್ಥೆಯ ಬಗ್ಗೆ ಒಂದು ಸ್ಥಳವನ್ನು ಉಪಯೋಗಿಸುವ ವಿಚಾರದಲ್ಲಿ ಮಾಡಲ್ಪಡುವ ಪ್ರತಿ ಕಟ್ಟಳೆಯನ್ನು, ಸಾಧಾರಣವಾದ ಮತ್ತು ಏರ್ಪಟ್ಟಿರುವ ವಾಡಿಕೆಗಳಲ್ಲಿ ಮತ್ತು ಕೆಲವು ಸಂದರ್ಭಗಳಲ್ಲಿ ಸತ್ತವರನ್ನು ಶೀಘ್ರವಾಗಿ ವ್ಯವಸ್ಥೆ ಹುಟ್ಟಿಸಬೇಕಾದ ಅಗತ್ಯಗಳಲ್ಲಿ ಕ್ರಮವಾಗಿ ದೃಷ್ಟಿ ಇಟ್ಟು ಮಾಡತಕ್ಕದ್ದು. ಈ ಪ್ರಕರಣದ ಬೇರೆ ಬೇರೆ ವಾಕ್ಯಗಳಂತೆ ಮಾಡಲ್ಪಟ್ಟ ನಿಬಂಧನೆಗಳು ಮತ್ತು ಅಪ್ಪಣೆಗಳು ಪ್ರತಿ ಸಂದರ್ಭದ ವಿದ್ಯಮಾನಗಳನ್ನು ಕುರಿತು ಡಿಸ್ಟ್ರಿಕ್ಟಿನ ಮಾಜಿಸ್ಟ್ರೇಟಿಂದ ನಿಶ್ಚಯಿಸಲ್ಪಡಬಹುದಾದ, ಈ ಕೆಳಗೆ ವಿವರಿಸಲ್ಪಟ್ಟ ಒಂದು ಅಥವಾ ಹೆಚ್ಚು ವಿಧಾನಗಳಲ್ಲಿ ಪ್ರಕಟಿಸಲ್ಪಡತಕ್ಕದ್ದು:—

(a) ನಿಬಂಧನೆಯ ಅಥವಾ ಅಪ್ಪಣೆಯ ಪ್ರತಿಯನ್ನು ಅದಕ್ಕೆ ಸಂಬಂಧಪಟ್ಟ ಮನುಷ್ಯನಿಗೆ ಕೊಡುವುದರ ಮೂಲಕ ;

(b) ಆ ನಿಬಂಧನೆಗಳನ್ನು ಮತ್ತು ಅಪ್ಪಣೆಗಳನ್ನು ಕುರಿತ ನೋಟಿಸನ್ನು ತಕ್ಕದ್ದಾಗಿದೆಯೆಂದು ತಿಳಿಯಬಹುದಾದ ಭಾಷೆಯಲ್ಲಿ, ಮನೆ ಜಗಲಿ, ಕಟ್ಟಡ, ಬೀದಿ, ಸ್ಥಳ, ಜಲವಸತಿಯ ಮೂಲ ಅಥವಾ ನೀರಿನ ಸ್ಥಳ, ಶವದ ವ್ಯವಸ್ಥೆಗೆ ಸ್ಥಳ, ಸತ್ರ, ಊರಬಾಗಿಲು, ನಾಟಕಶಾಲೆ, ಅಥವಾ ಜನರು ಸುಳಿದಾಡುವ ಅಥವಾ ಜನರ ವಿನೋದದ ಇತರ ಸ್ಥಳ, ಇವುಗಳಲ್ಲಿ ಅಥವಾ ಇವುಗಳಿಗೆ ಸಮೀಪದಲ್ಲಿ ಕಾಣಿಸುವಂಥಾ ಸ್ಥಳದಲ್ಲಿ ಅಥವಾ ಸ್ಥಳಗಳಲ್ಲಿ ಅಂಟಿಸುವುದರ ಮೂಲಕ ;

(c) ಚಾವಡಿಯಲ್ಲಿ, ಪೋಲೀಸು ಠಾಣೆಯಲ್ಲಿ ಅಥವಾ ತಾಲ್ಲೂಕು ಕಚೇರಿಯಲ್ಲಿ ಅಥವಾ ಈ ಸ್ಥಳಗಳಲ್ಲಿ ಒಂದಕ್ಕಿಂತ ಹೆಚ್ಚಾದುವುಗಳಲ್ಲಿ ಅಂಥಾ ನೋಟಿಸನ್ನು ಅಂಟಿಸುವುದರ ಮೂಲಕ ;

(d) ಸರ್ಕಾರಿ ಗೆಜೆಟಿನಲ್ಲಿ, ಮತ್ತು ಮಾಜಿಸ್ಟ್ರೇಟು ಹಾಗೆ ಅಪ್ಪಣೆ ಮಾಡಿದರೆ, ಸ್ಥಳೀಯ ವರ್ತಮಾನ ಪತ್ರಿಕೆಗಳಲ್ಲಿ ಆ ನೋಟೀಸನ್ನು ಪ್ರಕಟಿಸುವುದರ ಮೂಲಕ ;

(e) ಮಾಜಿಸ್ಟ್ರೇಟು ನಿಯಾಮಕ ಮಾಡಬಹುದಾದ ಸ್ಥಳಗಳಲ್ಲಿ ಮತ್ತು ಕಾಲಗಳಲ್ಲಿ ಡಂಗೂರದ ಮೂಲಕ.

ಬೊಂಬಾಯಿ-1890ರ 4ಪ್ರ. 39 (3) ಮತ್ತು (4)

(1)ನೆ (k) ವಾಕ್ಯದಂತೆ ಮಾಡುವ ನಿಬಂಧನೆಗಳನ್ನು ಸರಕಾರಕ್ಕೆ ತಿಳಿಸಬೇಕು.

(3) ಈ ಪ್ರಕರಣದ (1)ನೆ ಒಳಪ್ರಕರಣದ (k) ವಾಕ್ಯದ ಆಧಾರದ ಮೇಲೆ ಪ್ರಕಟಿಸಲ್ಪಡುವ ಪ್ರತಿ ನಿಬಂಧನೆಯನ್ನು ತಡವಿಲ್ಲದೆ ಸರಕಾರಕ್ಕೆ ತಿಳಿಸತಕ್ಕದ್ದು, ಮತ್ತು ಸರಕಾರದವರು ಅದರ ಉಪಯೋಗದ ಗಡುವನ್ನು ಹೆಚ್ಚಿಸಿದ ಹೊರತು, ಆ ನಿಬಂಧನೆಯು ಹದಿನೈದು ದಿನಗಳಿಗಿಂತ ಹೆಚ್ಚಾಗಿ ಉಪಯೋಗದಲ್ಲಿ ಇರತಕ್ಕದ್ದಿಲ್ಲ, ಮತ್ತು ಹಾಗೆ ಅದರ ಉಪಯೋಗದ ಕಾಲ ಹೆಚ್ಚುವ ಸಂದರ್ಭದಲ್ಲಿ ಸರಕಾರದವರು ಆಜ್ಞಾಪಿಸುವವರೆಗೆ, ಅದು ಉಪಯೋಗದಲ್ಲಿ ಇರತಕ್ಕದ್ದು.

(4) ಸಂಬಂಧಪಟ್ಟ ಎಲ್ಲಾ ಜನರೂ ಮೇಲೆ ಹೇಳಿರುವಂತೆ ಕ್ರಮವಾಗಿ ಮಾಡಲ್ಪಟ್ಟ ಯಾವ ಅಪ್ಪಣೆಗಾಗಲಿ, ಅದು ಎಲ್ಲಿಯ ತನಕ ಉಪಯೋಗದಲ್ಲಿ ಇರತಕ್ಕದ್ದೋ ಆ ಕಾಲ ಪರ್ಯಂತ, ಅನುಸರಿಸಿ ನಡೆಯೋಣ ಅವರುಗಳ ಕೆಲಸವಾಗಿ ಇರತಕ್ಕದ್ದು.

ಬೊಂಬಾಯಿ-1890ರ 4 ಪ್ರ. 41

ಸೂಳೇ ಮನೆಗಳನ್ನು ನಿಲ್ಲಿಸಿಬಿಡುವಿಕೆ.

37. ಈ ಪ್ರಕರಣವನ್ನು ಪ್ರಕಟನೆಯ ಮೂಲಕವಾಗಿ ಸರಕಾರದವರು ಉಪಯೋಗಕ್ಕೆ ಎಲ್ಲಿ ತಂದಿರುತ್ತಾರೆಯೊ ಆ ಡಿಸ್ಟ್ರಿಕ್ಟಿನ ಅಥವಾ ಸಬ್ ಡಿವಿಜನ್ನಿನ ಒಂದು ಪಟ್ಟಣದಲ್ಲಿ ಅಥವಾ ಗ್ರಾಮದಲ್ಲಿ ಯಾವ ಮನೆಯನ್ನಾದರೂ ಹುದುವಿನ ಸೂಳೇ ಮನೆಯನ್ನಾಗಿ, ಅಥವಾ ಯಾವ ತರದ ಸೂಳೆಗಳಾಗಲಿ ಅಥವಾ ಅಕ್ರಮವಾದ ಜನಗಳು ಆಗಲಿ ತಂಗುವ ಮನೆಯನ್ನಾಗಿ, ಅಥವಾ ಅಂಥವರು ಸುಳಿದಾಡುವ ಸ್ಥಳವನ್ನಾಗಿ ನೆರೆಹೊರೆಯ ಸಂಭಾವಿತ ನಿವಾಸಿಗಳಿಗೆ ಕಿರಿಕಿರಿ ಉಂಟಾಗುವ ಮೇರೆಗೆ, ಉಪಯೋಗಿಸುತ್ತಿದ್ದಾರೆಂದು ಒಂದು ಡಿಸ್ಟ್ರಿಕ್ಟಿನ ಅಥವಾ ಸಬ್ ಡಿವಿಜನಿನ ಮಾಜಿಸ್ಟ್ರೇಟಿಗೆ ಫಿರ್ಯಾದು ಮಾಡಲ್ಪಟ್ಟಾಗ, ಆ ಮಾಜಿಸ್ಟ್ರೇಟು, ಸದರಿ ಫಿರ್ಯಾದಿಗೆ ಉತ್ತರ ಕೊಡಲು ಆ ಮನೆಯ ಒಡೆಯನಿಗೆ ಅಥವಾ ಒಕ್ಕಲಿಗೆ ಸಮನ್ಸ್ ಮಾಡಬಹುದು, ಮತ್ತು ಸದರಿ ಮನೆಯನ್ನು ಆ ಪ್ರಕಾರ ಉಪಯೋಗಿಸುತ್ತಾರೆಂದು ತೃಪ್ತಿ ಪಟ್ಟಮೇಲೆ, ಅಪ್ಪಣೆಯಲ್ಲಿ ಕಾಣಿಸತಕ್ಕ ನ್ಯಾಯವಾದ ಒಂದು ಗಡುವಿನೊಳಗಾಗಿ ಅದರ ಅಂಥಾ ಉಪಯೋಗವನ್ನು ಮುಂದಕ್ಕೆ ಮಾಡದೆ ನಿಲ್ಲಿಸಬೇಕೆಂದು ಸದರಿ ಒಡೆಯನಿಗೆ ಅಥವಾ ಒಕ್ಕಲಿಗೆ ಆಜ್ಞಾಪಿಸಬಹುದು.

1867ರ 3ನೆ ಆಕ್ಟು ಪ್ರ. 5. ಮತ್ತು ಮದರಾಸು-1888ರ 3ನೆ ಆಕ್ಟು ಪ್ರ. 42.

ಸಾಧಾರಣವಾದ ಜೂಜಾಡುವ ಮನೆಯನ್ನು ಪ್ರವೇಶಿಸಲು ಪೊಲೀಸು ಆಫಿಸರಿಗೆ ಡಿಸ್ಟ್ರಿಕ್ಟು ಮಾಜಿಸ್ಟ್ರೇಟು ಮುಂತಾದವರು ಆಜ್ಞಾಪಿಸಬಹುದು.

38. ಯಾವುದಾದರೂ ಪಟ್ಟಣ ಅಥವಾ ಗ್ರಾಮದಲ್ಲಿ ಯಾವುದಾದರೂ ಕಟ್ಟಡವನ್ನು ಆವರಣವನ್ನು ಕೊಟ್ಟಡಿ ಅಥವಾ ಸ್ಥಳವನ್ನು ಒಂದು ಸಾಧಾರಣ ಜೂಜಿನ ಮನೆಯಾಗಿ ಉಪಯೋಗಿಸುತ್ತಾರೆಂದು ನಂಬಲು ಡಿಸ್ಟ್ರಿಕ್ಟು ಮಾಜಿಸ್ಟ್ರೇಟಿಗೆ ಅಥವಾ ಒಂದನೆ ತರಗತಿಯ ಮಾಜಿಸ್ಟ್ರೇಟಿಗೆ ಅಥವಾ ಡಿಸ್ಟ್ರಿಕ್ಟು ಪೊಲೀಸು ಸೂಪರಿಂಟೆಂಡೆಂಟಿಗೆ ಕಾರಣವಿದ್ದರೆ, ಅವನು ಅಂಥಾ ಕಟ್ಟಡವನ್ನು ಆವರಣವನ್ನು ಅಥವಾ ಕೊಟಡಿಯನ್ನು ಅಥವಾ ಸ್ಥಳವನ್ನು ಅಗತ್ಯವೆಂದು ಕಂಡುಬರಬಹುದಾದಂಥಾ ಸಹಾಯ ದೊಂದಿಗೆ ಹಗಲಾಗಲಿ ರಾತ್ರಿಯಾಗಲಿ ಮತ್ತು ಅವಶ್ಯಕವಿದ್ದರೆ ಬಲವಂತದಿಂದಲೂ ತಾನೇ ಪ್ರವೇಶಿಸಬಹುದು ಅಥವಾ ಪ್ರವೇಶಿಸುವುದಕ್ಕೂ, ಅಲ್ಲಿ ದೊರೆತ ಎಲ್ಲಾ ಜನರು, ಜೂಜಿನ ಎಲ್ಲಾ ಸಾಧನಗಳು ಮತ್ತು ಜೂಜಾಡುವ ಕೆಲಸಕ್ಕಾಗಿ ಉಪಯೋಗಿಸಿದುದಾಗಿ ಅಥವಾ ಉಪಯೋಗಿಸಬೇಕೆಂದು ಉದ್ದೇಶಿಸಿರುವುದಾಗಿ ನ್ಯಾಯವಾಗಿ ಸಂದೇಹ ಕಾಣುವ ಎಲ್ಲಾ ಹಣಗಳು, ಹಣಕ್ಕಾಗಿ ಕೊಟ್ಟ ಪತ್ರಗಳು, ಮೌಲ್ಯದ ವಸ್ತುಗಳು, ಇವುಗಳನ್ನು ಹಿಡಿದುಕೊ

ಳುವುದಕ್ಕೋ ಮತ್ತು ಅಂಥಾ ಕಟ್ಟಡದ ಆವರಣದ ಕೊಟ್ಟಡಿಯು ಅಥವಾ ಸ್ಥಳದ ಎಲ್ಲಾ ಭಾಗಗಳನ್ನು ಮತ್ತು ಅಲ್ಲಿ ಸಿಕ್ಕಿದ ಜನರನ್ನು ಶೋಧನೆ ಮಾಡುವುದಕ್ಕೆ ಸಹ, ಕಾನಸ್ಟೆಬಲಿನ ಸ್ಥಾನಕ್ಕೆ ಮೇಲ್ಪಟ್ಟ ಯಾವ ಪೋಲೀಸು ಅಫಸರಿಗಾಗಲಿ, ತನ್ನ ವಾರಂಟಿನಿಂದ ಅಧಿಕಾರವನ್ನು ಕೊಡಬಹುದು.

ಗಲಿಬಿಲಿ ನಡೆಯು ವುದನ್ನು ತಪ್ಪಿಸುವುದಕ್ಕಾಗಿ ಮಾಜಿಸ್ಟ್ರೇಟುಗಳಿಂದ ಅಪ್ಪಣೆಗಳು ಕೊಡಲ್ಪಡೋಣ.

39. (1) ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್ಟು, ಅಥವಾ ಆತನು ಇಲ್ಲದಾಗ ಮತ್ತು ಆತನ ಅಪ್ಪಣೆಗೆ ಒಳಪಟ್ಟು ಯಾವ ಪಟ್ಟಣದಲ್ಲಿ ಅಥವಾ ಗ್ರಾಮದಲ್ಲಿ ಆದರೂ ನ್ಯಾಯಾಧಿಕಾರವನ್ನು ಉಳ್ಳ ಮತ್ತು ಅಲ್ಲಿ ಅಥವಾ ಅದರ ನೆರೆಹೊರೆಯಲ್ಲಿ ಇರುವ ಯಾವನಾದರೂ ಒಂದನೆ ತರಗತಿಯ ಮಾಜಿಸ್ಟ್ರೇಟು, ಅಗತ್ಯವೆಂದು ಕಂಡಾಗಲೆಲ್ಲಾ ಮತ್ತು ಅಗತ್ಯವೆಂದು ಕಾಣತಕ್ಕ ಕಾಲಪರ್ಯಂತ, ಬಹಿರಂಗವಾಗಿ ಪ್ರಕಟಿಸಲ್ಪಡುವ ಅಥವಾ ಜನರ ಹೆಸರುಗಳನ್ನು ಕಾಣಿಸಿರುವ ಪ್ರಕಟನೆಯ ಮೂಲಕವಾಗಿ, ಅಂಥಾ ಪಟ್ಟಣದಲ್ಲಿ ಅಥವಾ ಗ್ರಾಮದಲ್ಲಿ ಅಥವಾ ಅದರ ಸಮೀಪದಲ್ಲಿ ಸದಾಚಾರವನ್ನು ಅಥವಾ ಮರ್ಯಾದೆಯನ್ನು ಭಂಗಪಡಿಸುವ ಸ್ವಭಾವವುಳ್ಳವುಗಳಾಗಿ ಇರಬಹುದಾದಂಥಾ, ಅಥವಾ ಮಾಜಿಸ್ಟ್ರೇಟಿನ ಅಭಿಪ್ರಾಯದಲ್ಲಿ, ನಾನಾ ಗುಂಪುಗಳವರಿಗೆ ಮತಸಂಬಂಧವಾದ ದ್ವೇಷವನ್ನು ಅಥವಾ ಹಗೆಯನ್ನು ಬಹುಶಃ ಎಬ್ಬಿಸಬಹುದಾದಂಥಾ ಅಥವಾ ಒಂದು ತಪ್ಪಿತವನ್ನು ನಡೆಸುವುದು, ಜನರ ನೆಮ್ಮದಿಗೆ ತೊಂದರೆಯನ್ನು ಉಂಟುಮಾಡುವುದು, ಅಥವಾ ನ್ಯಾಯವನ್ನು (ಕಾನೂನನ್ನು) ಅಥವಾ ನ್ಯಾಯವಾದ ಅಧಿಕಾರಿಯನ್ನು ಎದುರಿಸುವುದು, ಅಥವಾ ನಿರಾಕರಣೆ ಮಾಡುವುದು, ಇವುಗಳನ್ನು ಪ್ರೇರೇಪಿಸಬಹುದಾದಂಥಾ ಆಯುಧಗಳನ್ನು, ದೊಣ್ಣೆಗಳನ್ನು ಅಥವಾ ಇತರ ಅಸ್ತ್ರಗಳನ್ನು ಒಯ್ಯೋಣ; ಕಲ್ಲುಗಳನ್ನು ಅಥವಾ ಇತರ ಎಸೆಯುವಂಥಾ ಖರ್ಜಿ ಬಾಣಾದಿಗಳನ್ನು ಅಥವಾ ಅಂಥಾ ಒಗೆಯುವ ವಸ್ತುಗಳನ್ನು ಎರಕ ಹೊಯ್ಯುವುದಕ್ಕೆ ಅಥವಾ ಮುಂದಕ್ಕೆ ನಡೆಸುವುದಕ್ಕೆ ಉಪಯೋಗಿಸುವ ಸಾಧನಗಳನ್ನು ಅಥವಾ ಸಾಹಿತ್ಯಗಳನ್ನು ಒಯ್ಯೋಣ, ಕೂಡಿಹಾಕೋಣ, ಸಿದ್ಧಪಡಿಸೋಣ; ಶರೀರಗಳನ್ನು ಅಥವಾ ಹೇಗಳನ್ನು ಅಥವಾ ಅವುಗಳ ಆಕಾರಗಳನ್ನು ತೋರಿಸುವುದು; ಕೂಗುಗಳ ಬಹಿರಂಗವಾದ ಉಚ್ಚಾರಣೆ; ಹಾಡುಗಳನ್ನು ಹಾಡೋಣ; ವಾದ್ಯವನ್ನು ಬಾರಿಸೋಣ; ಪ್ರಸಂಗಗಳನ್ನು ಮಾಡೋಣ; ಅಭಿನಯಗಳನ್ನು ನಕಲಿಯ ವೇಷಗಳನ್ನು ಉಪಯೋಗಿಸೋಣ); ಮತ್ತು ಚಿತ್ರಗಳನ್ನು, ಚಿಹ್ನೆಗಳನ್ನು, ಪ್ರಸಿದ್ಧಪತ್ರಿಕೆಗಳನ್ನು ಅಥವಾ ಬೇರೆ ಯಾವುದಾದರೂ ವಿಷಯವನ್ನು ಅಥವಾ ವಸ್ತುವನ್ನು ಸಿದ್ಧಪಡಿಸೋಣ, ತೋರಿಸೋಣ ಅಥವಾ ಹರಡೋಣ; ಇವುಗಳನ್ನು ನಿಷೇಧಿಸಬಹುದು.

ಕೀಳ್ಪಟ್ಟ ಮಾಜಿಸ್ಟ್ರೇಟು ಕೊಡುವ ಹುಕುಮುಗಳನ್ನು ಡಿಸ್ಟ್ರಿಕ್ಟು ಮಾಜಿಸ್ಟ್ರೇಟಿಗೆ ತಿಳಿಸತಕ್ಕದ್ದು.

(2) ಕೀಳ್ಪಟ್ಟ ಮಾಜಿಸ್ಟ್ರೇಟು ಈ ಪ್ರಕರಣ ಪ್ರಕಾರ ಮಾಡುವ ಅಪ್ಪಣೆಯನ್ನು ಡಿಸ್ಟ್ರಿಕ್ಟು ಮಾಜಿಸ್ಟ್ರೇಟಿಗೆ ಸಂಗಡಲೇ ತಿಳಿಸಬೇಕು; ಆಮೇಲೆ ಆತನು ಯುಕ್ತ ತೋಚತಕ್ಕಂತೆ ಆ ಅಪ್ಪಣೆಯನ್ನು ಸ್ಥಿರಪಡಿಸತಕ್ಕದ್ದು, ತಳ್ಳಿಪಡಿ ಮಾಡತಕ್ಕದ್ದು ಅಥವಾ ತಿದ್ದುಪಡಿ ಮಾಡತಕ್ಕದ್ದು.

ಬೊರಟಾಯಿ–1890ರ 4-ಪ್ರ. 43 ಸ್ವಲ್ಪ ಹೆಚ್ಚಾಗಿ ಸೇರಿಸಿದೆ.

ದೊಂಬಿಯನ್ನು ಅಥವಾ ನೆಮ್ಮದಿಯ ವಿಶೇಷವಾದ ಭಂಗವನ್ನು ತಪ್ಪಿಸುವುದಕ್ಕೋಸ್ಕರ ಡಿಸ್ಟ್ರಿಕ್ಟು ಮಾಜಿಸ್ಟ್ರೇಟು ಅಪ್ಪಣೆಗಳನ್ನು ಕೊಡೋಣ.

40. ಸಮೀಪ ಕಾಲದಲ್ಲಿ ನಡೆಯುವ ಅಥವಾ ನಡದೀತೆಂದು ಹೆದರಿಕೆಯಾಗಿರುವ ದೊಂಬಿಯನ್ನು ಅಥವಾ ನೆಮ್ಮದಿಯ ವಿಶೇಷವಾದ ಭಂಗವನ್ನು ತಪ್ಪಿಸುವುದಕ್ಕೋಸ್ಕರ ಡಿಸ್ಟ್ರಿಕ್ಟು ಮಾಜಿಸ್ಟ್ರೇಟು, ಅಥವಾ, ಆತನು ಇಲ್ಲದೆ ಇರುವಾಗ ಮತ್ತು ಆತನ ಮೇಲ್ವಿಚಾರಣೆಗೆ ಒಳಪಟ್ಟು ಸ್ಥಳೀಯ ನ್ಯಾಯಾಧಿಕಾರವುಳ್ಳ ಮೊದಲನೆ ತರಗತಿಯ ಯಾವನಾದರೂ ಮಾಜಿಸ್ಟ್ರೇಟು, ಯಾವ ಕಟ್ಟಡವನ್ನಾದರೂ ಅಥವಾ ಸ್ಥಳವನ್ನಾದರೂ ಕೊಂಚ ಕಾಲದ ವರೆಗೆ ಮುಚ್ಚಿ ಬಿಡಬಹುದು ಅಥವಾ ಅದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು, ಮತ್ತು ಎಲ್ಲರನ್ನು ಅಥವಾ ಯಾವ ಜನರನ್ನಾದರೂ ಅದರಿಂದ ಹೊರಗೆ ಹಾಕಬಹುದು, ಅಥವಾ ತಾನು ಯುಕ್ತವೆಂದು ಎಣಿಸತಕ್ಕಂಥಾ ಜನಗಳಿಗೆ ಮಾತ್ರವೂ ಮತ್ತು ಅಂಥಾ ಒಡಂಬಡಿಕೆಗಳ ಮೇರೆಗೂ ಅದರೊಳಕ್ಕೆ ಪ್ರವೇಶಾಸ್ಪದವನ್ನು ಕೊಡಬಹುದು. ಸದರಿ ಮಾಜಿಸ್ಟ್ರೇಟಿನಲ್ಲಿ ಈ ಮೂಲಕವಾಗಿ ವಹಿಸಿ ಇರುವ ಅಧಿಕಾರವನ್ನು ನಡೆಸುವುದರಲ್ಲಿ ಆತನು ಮಾಡಿ ಪ್ರಕಟಿಸಬಹುದಾದಂಥಾ ಅಪ್ಪಣೆಯಪ್ರಕಾರ ನಡೆದುಕೊಳ್ಳಲು ಸಂಬಂಧಪಟ್ಟ ಜನರೆಲ್ಲಾ ಬದ್ಧರಾಗಿ ಇರತಕ್ಕದ್ದು.

ಬೊಂಬಾಯಿ-1890ರ 4 ಪ್ರ. 44.

ಮತ ಸಂಬಂಧವಾದ ಉತ್ಸವಗಳು ಮುಂತಾದುದರಲ್ಲಿ ನೆಮ್ಮದಿಯ ಪೋಷಣೆ ಬಗ್ಗೆ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟಿಂದ ಅಪ್ಪಣೆಗಳು ಹೊರಡೋಣ.

41. (1) ಯಾವುದಾದರೂ ಬೀದಿಯಲ್ಲಿ ನಿಜವಾಗಿ ನಡೆಯುವ ಅಥವಾ ನಡೆಯಬೇಕೆಂದು ಉದ್ದೇಶಿಸಲ್ಪಟ್ಟಿರುವ ಮತ ಸಂಬಂಧವಾದ, ಅಥವಾ ಉತ್ಸವ ಸಂಬಂಧವಾದ, ಅಥವಾ ಏಕೀಕರಣವಾಗಿ ನಡೆಯುವ ನೋಟದ ಪ್ರದರ್ಶನದ ಅಥವಾ ಸ್ಥಾಪಿತವಾದ ಸಭೆಯ ಯಾವ ಸಂದರ್ಭದಲ್ಲಾಗಲಿ, ಅದರ ವಿಷಯದಲ್ಲಿ ಅಥವಾ ಅದನ್ನು ನಡೆಸುವ ವಿಷಯದಲ್ಲಿ ಅಥವಾ ಅದರಲ್ಲಿ ಸೇರುವಿಕೆಯ ವಿಷಯದಲ್ಲಿ ನೆಮ್ಮದಿಗೆ ವಿಶೇಷವಾದ ತೊಂದರೆಯನ್ನು ಬಹುಶಃ ಉಂಟುಮಾಡುವುದಾಗಿ ಇರುವ ವ್ಯವಹಾರ ಅಥವಾ ಕಲಹ ಇರುತ್ತೆಂದು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟಿಗೆ ಕಂಡುಬಂದರೆ, ಅಂಥಾ ಮಾಜಿಸ್ಟ್ರೇಟು, ಸಂಬಂಧಪಟ್ಟ ಜನರು ಒಬ್ಬರಿಗೊಬ್ಬರೂ ಮತ್ತು ಇತರ ಜನರ ವಿಚಾರದಲ್ಲೂ ನಡೆದುಕೊಳ್ಳುವ ವಿಷಯದಲ್ಲಿ, ಸ್ಪಷ್ಟವಾಗಿರುವ ನ್ಯಾಯ ಬಾಧ್ಯತೆಗಳಿಗೆ ಮತ್ತು ಸದರಿ ಕಕ್ಷಿಗಾರರ ಮತ್ತು ಬಾಧ್ಯಪಟ್ಟ ಜನರ ಯಾವುದಾದರೂ ಸ್ಥಾಪಿತವಾದ ಪದ್ಧತಿಗೆ ಲಕ್ಷ್ಯಕೊಟ್ಟು ವಿದ್ಯಮಾನಗಳ ಪ್ರಕಾರ, ಅಗತ್ಯವೆನುತಲೂ ನ್ಯಾಯವೆನುತಲೂ ಆತನು ಎಣಿಸತಕ್ಕಂಥಾ ಅಪ್ಪಣೆಗಳನ್ನು ಕೊಡಬಹುದು. ಅಂಥಾ ಪ್ರತಿ ಅಪ್ಪಣೆಯೂ ಎಲ್ಲಿ ನೆರವೇರಬೇಕೋ ಆ ಪಟ್ಟಣದಲ್ಲಿ ಅಥವಾ ಸ್ಥಳದಲ್ಲಿ ಅದನ್ನು ಪ್ರಸಿದ್ಧಪಡಿಸತಕ್ಕದ್ದು, ಮತ್ತು ಸಂಬಂಧಪಟ್ಟ ಜನರೆಲ್ಲಾ ಅದಕ್ಕೆ ಅನುಸಾರವಾಗಿ ನಡೆದುಕೊಳ್ಳಲು ಬದ್ಧರಾಗಿ ಇರತಕ್ಕದ್ದು.

ಅಪ್ಪಣೆಗಳು ಕೋರ್ಟಿನ ಡಿಕ್ರಿಗಳು ಮುಂತಾದುದಕ್ಕೆ ಒಳಪಟ್ಟಿರತಕ್ಕದ್ದು.

(2) ಹಿಂದಿನ ಒಳಪ್ರಕರಣದಂತೆ ಮಾಡಿದ ಯಾವ ಅಪ್ಪಣೆಯಾಗಲಿ ನ್ಯಾಯಾಧಿಕಾರವನ್ನು ಉಳ್ಳ ಕೋರ್ಟಿನವರು ಕೊಟ್ಟ ಡಿಕ್ರಿ, ಆಜ್ಞೆ ಅಥವಾ ಅಪ್ಪಣೆಗೆ ಒಳಪಟ್ಟು ಇರತಕ್ಕದ್ದು, ಮತ್ತು ಅಂಥಾ ಅಪ್ಪಣೆಯು ಅಂಥಾ ಕೋರ್ಟಿನ ಯಾವುದಾದರೂ ಜಡ್ಜಮೆಂಟಿಗೆ, ಡಿಕ್ರಿಗೆ, ಆಜ್ಞೆಗೆ ಅಥವಾ ಅಪ್ಪಣೆಗೆ ವಿರೋಧವಾಗಿ ಇರುತ್ತದೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟಿಗೆ ಕಂಡುಬರುವಂತೆ ಮಾಡಲ್ಪಟ್ಟರೆ, ಆ ಅಪ್ಪಣೆಯನ್ನು ತಳ್ಳುಪಡಿ ಮಾಡತಕ್ಕದ್ದು ಅಥವಾ ವ್ಯತ್ಯಾಸಪಡಿಸತಕ್ಕದ್ದು.

ಬೊಂಬಾಯಿ-1890ರ 4 ಪ್ರ. 45.

ಸಂತೆಗಳು ಮುಂತಾದುದರಲ್ಲಿ ಸಾಂಕ್ರಾಮಿಕ ರೋಗದ ಉತ್ಪತ್ತಿಯನ್ನು ತಪ್ಪಿಸುವುದಕ್ಕೆ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟು ವಿಶೇಷ ಸನ್ನಾಹಗಳನ್ನು ಮಾಡಬಹುದು.

42. (1) ಡಿಸ್ಟ್ರಿಕ್ಟಿನ ಯಾವ ಸ್ಥಳದಲ್ಲಿ ಸಂತೆಗೋಸ್ಕರ, ಯಾತ್ರೆಗೋಸ್ಕರ ಅಥವಾ ಇತರ ಅಂಥಾ ಸಂಭವಕ್ಕೋಸ್ಕರ ಜನರ ದೊಡ್ಡ ಗುಂಪುಗಳು ನೆರೆದಿರುತ್ತವೆಯೋ ಅಥವಾ ಬಹುಶಃ ನೆರೆಯುವುದಾಗಿವೆಯೊ ಆ ಯಾವ ಸ್ಥಳಕ್ಕಾದರೂ ಯಾವುದಾದರೂ ಸಾಂಕ್ರಾಮಿಕ ಜಾಡ್ಯ ತಗುಲಿರುತ್ತದೆ ಅಥವಾ ಬಹುಶಃ ಆ ರೋಗ ತಗಲುವುದು ಎಂದು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟಿಗೆ ಕಂಡುಬಂದಾಗಲೆಲ್ಲಾ, ಅಂಥಾ ರೋಗದ ಉತ್ಪತ್ತಿಯನ್ನು ಅಥವಾ ಅದು ಹರಡಿಕೊಳ್ಳೋಣವನ್ನು ತಪ್ಪಿಸುವುದಕ್ಕೆ ಅವಶ್ಯಕವೆಂದು ಆತನು ಎಣಿಸತಕ್ಕಂಥಾ ವಿಶೇಷ ಸನ್ನಾಹಗಳನ್ನು ಆತನು ಮಾಡಬಹುದಲ್ಲದೆ, ಸದರಿ ಸ್ಥಳದ ನಿವಾಸಿಗಳು ಮತ್ತು ಅಲ್ಲಿ ಇರುವವರು ಅಥವಾ ಅಲ್ಲಿಗೆ ಹೋಗುವವರು ಅಥವಾ ಅಲ್ಲಿಂದ ಹಿಂದಕ್ಕೆ ಬರುವವರು ಆಚರಿಸಬೇಕಾದಂಥಾ ಕಟ್ಟಳೆಗಳನ್ನು ಬಹಿರಂಗವಾದ ಪ್ರಕಟನೆಯ ಮೂಲಕವಾಗಿ ನಿಯಾಮಕ ಮಾಡಬಹುದು.

ಅಂಥಾ ಸಂದರ್ಭಗಳಲ್ಲಿ ವೇತನಗಳ ವಸೂಲಿ.

(2) ಸರಕಾರದ ಅಪ್ಪಣೆಗಳಿಗೆ ಒಳಪಟ್ಟು, ಕೂಟ ಸೇರುವ ಸ್ಥಳದಲ್ಲಿ ಮತ್ತು ಅದರ ಸುಮಾರಿನಲ್ಲಿ ಆರೋಗ್ಯದ ಮತ್ತು ನೆಮ್ಮದಿಯ ಪೋಷಣೆಯ ಏರ್ಪಾಡುಗಳ ವೆಚ್ಚಗಳಿಗೆ ಒದಗುವಂಥಾ ನ್ಯಾಯವಾದ ವೇತನಗಳನ್ನು (1)ನೆ ಒಳ ಪ್ರಕರಣದ ವಿಧಿಗಳಿಗೆ ಒಳಪಡುವ ಜನರಿಗೆ ಕಟ್ಟಿ ವಸೂಲು ಮಾಡೋಣ, ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟಿಗೆ ನ್ಯಾಯವಾಗಿ ಇರತಕ್ಕದ್ದು.

ಮ್ಯುನಿಸಿಪಾಲಿಟಿಗಳಿಂದ ವೆಚ್ಚಗಳನ್ನು ವಸೂಲ್ಮಾಡೋಣ.

(3) ಕೂಟ ಕೂಡುವ ಸ್ಥಳವು ಮ್ಯುನಿಸಿಪಾಲಿಟಿಯ ಮೇರೆಗಳೊಳಗೆ ಇರುವಾಗ ಮೇಲೆ ಹೇಳಿರುವ ಕೆಲಸಗಳಿಗೋಸ್ಕರ ಅಗತ್ಯವಾಗತಕ್ಕಂಥಾ ಮೊತ್ತಗಳನ್ನು ಆ ಮ್ಯುನಿಸಿಪಾಲಿಟಿಯಿಂದ ಬರಮಾಡಬಹುದು.

ಬೊಂಬಾಯಿ-1890ರ 4 ಪ್ರ. 46.

43. ಡಿಸ್ಟ್ರಿಕ್ಟಿನಲ್ಲಿ ಜನರ ಯಾವುದಾದರೂ ಗುಂಪಿನ ಅಥವಾ ಕೂಟದ ಚಲನವು ಅಥವಾ ಇಳಿದು ಕೊಳ್ಳೋಣವು, ಅಂಥಾ ಗುಂಪಿನವರು ಅಥವಾ ಜನಗಳ ಗುಂಪುಗಳ ಕೂಟದವರು ಅಥವಾ ಅದಕ್ಕೆ ಸೇರಿದವರು ನ್ಯಾಯಕ್ಕೆ (ಕಾನೂನಿಗೆ) ಸಲ್ಲದ ಉದ್ದೇಶಗಳನ್ನು ಮಾಡಿಕೊಂಡಿರುತ್ತಾರೆಂಬ ಅಪಾಯುವ ಳನ್ನು ಮತ್ತು ಕೂಟ ಗಳನ್ನು ಚದರಿಸೋಣವನ್ನು ಅಥವಾ ಗಾಬರಿಯನ್ನು ಅಥವಾ ನ್ಯಾಯವಾದ ಸಂಶಯವನ್ನು ಉಂಟುಮಾಡುತ್ತಿದೆ ಅಥವಾ ಉಂಟುಮಾಡೀತೆಂದು ಎಣಿಸತಕ್ಕದ್ದಾಗಿದೆ ಎಂದು ಡಿಸ್ಟ್ರಿಕ್ಟ ಮಾಜಿಸ್ಟ್ರೇಟಗೆ ಅಥವಾ ಯಾವುದಾದರೂ ಸಬ್ಡಿವಿಜನಲು ಮಾಜಿಸ್ಟ್ರೇಟಗೆ ತೋರಿದಾಗಲೆಲ್ಲಾ, ಅಂಥಾ ಮಾಜಿಸ್ಟ್ರೇಟು, ಅಂಥಾ ಗುಂಪಿನ ಅಥವಾ ಕೂಟದ ನಾಯಕರೆಂದು ಅಥವಾ ಮುಖಂಡ ಮನುಷ್ಯರೆಂದು ತೋರುವ ಜನರ ಹೆಸರಿಗೆ ಬರೆದು ಡಂಗೂರ ಹೊಡೆಯೋಣದರಿಂದ ಅಥವಾ ಸದರಿ ಮಾಜಿಸ್ಟ್ರೇಟು ಸಮನೆಂದು ಎಣಿಸುವ ಇತರ ವಿಧವಾಗಿ ಪ್ರಸಿದ್ಧಪಡಿಸಿದ ಪ್ರಕಟನೆಯ ಮೂಲಕವಾಗಿ, ಬಲಾತ್ಕಾರವನ್ನು ಮತ್ತು ಗಾಬರಿಯನ್ನು ತಪ್ಪಿಸುವುದಕ್ಕೋಸ್ಕರ ಅಗತ್ಯವೆಂದು ಕಾಣತಕ್ಕಂತೆ ನಡೆದುಕೊಳ್ಳಬೇಕೆಂದು, ಅಥವಾ ಅಂಥಾ ಮಾಜಿಸ್ಟ್ರೇಟು ನೇಮಿಸತಕ್ಕ ಸ್ಥಳಕ್ಕೂ ಮತ್ತು ಮಾರ್ಗವಾಗಿಯೂ ಚದರಬೇಕು ಮತ್ತು ಪ್ರತಿಯೊಬ್ಬನೂ ಹೊರಟುಹೋಗಬೇಕೆಂದು, ಅಂಥಾ ಗುಂಪಿಗೆ ಅಥವಾ ಕೂಟಕ್ಕೆ ಸೇರಿದವರಿಗೆ ಆಜ್ಞಾಪಿಸಬಹುದು.

ಬೊಂಬಾಯಿ-1890ರ 4 ಪ್ರ. 47.

ಸಾರ್ವಜನಿಕವಾದ ವಿನೋದದ ಸ್ಥಳಗಳಲ್ಲಿ ಮತ್ತು ಸಾರ್ವಜನಿಕ ಸಭೆಗಳಲ್ಲಿ ಗಲಿಬಿಲಿ ಮುಂತಾದುದು ನಡೆಯದಂತೆ ಪೊಲೀಸಿನವರು ಏರ್ಪಾಡು ಮಾಡೋಣ.

44. (1) ಎಲ್ಲಿಗೆ ಸರ್ವಜನರನ್ನು ಕರೆದು ಇರುತ್ತಾರೆಯೊ ಅಥವಾ ಯಾವುದು ಸರ್ವ ಜನರಿಗೂ ತೆರೆದಿರುತ್ತದೆಯೊ ಆ ಯಾವುದಾದರೂ ಸಾರ್ವಜನಿಕ ವಿನೋದದ ಸ್ಥಳದಲ್ಲಿ ಅಥವಾ ಯಾವುದಾದರೂ ಸಭೆಯಲ್ಲಿ ಅಥವಾ ಕೂಟದಲ್ಲಿ ಸೇರುವ ಜನರಿಗೆ ಭಯಂಕರವಾದ ಗಲಿಬಿಲಿಯನ್ನು ಅಥವಾ ಕಾನೂನಿನ ಉಲ್ಲಂಘನೆಯನ್ನು ಅಥವಾ ವ್ಯಕ್ತವಾದ ಮತ್ತು ಸಂಗಡಲೇ ಸಂಭವಿಸುವ ಅಪಾಯವನ್ನು ತಪ್ಪಿಸುವ ಉದ್ದೇಶಕ್ಕಾಗಿ, ಅಂಥಾ ವಿನೋದದ ಸ್ಥಳವಿರುವ ಅಂಥಾ ಕೂಟ ಅಥವಾ ಸಭೆ ಸೇರುವ ಪಟ್ಟಣದಲ್ಲಿ ಅಥವಾ ಗ್ರಾಮದಲ್ಲಿ ಇರುವ ಕಾನಸ್ಟೇಬಲಿನ ಸ್ಥಾನಕ್ಕೆ ಹೆಚ್ಚಿದ ಅತ್ಯಂತ ಮೇಲ್ಪಟ್ಟ ಸ್ಥಾನದ ಹಿರಿಯ ಪೊಲೀಸು ಆಫಿಸರು, ನ್ಯಾಯದ (ಕಾನೂನಿನ) ಮೇರೆಗೆ ಮಾಡಿರಬಹುದಾದ ನಿಬಂಧನೆಗಳಿಗೂ ಅಪ್ಪಣೆಗಳಿಗೂ ಒಳಪಟ್ಟು, ಅಂಥಾ ವಿನೋದದ ಅಥವಾ, ಕೂಟದ ಅಥವಾ ಸಭೆಯ ಸ್ಥಳಕ್ಕೆ ಜನರನ್ನು ಸೇರಿಸುವ ವಿಧಾನವನ್ನು ಕುರಿತು ಮತ್ತು ಅಲ್ಲಿನ ನಡವಡಿಕೆಗಳು ಸಮಾಧಾನವೊಂದಿಗೂ ಮತ್ತು ನ್ಯಾಯವಾಗಿಯೂ ನಡೆಯೋಣವನ್ನು ಭದ್ರಪಡಿಸಿಕೊಳ್ಳುವುದಕ್ಕೋಸ್ಕರವೂ ಅಗತ್ಯವೆಂದು ತಾವು ಎಣಿಸುವಂಥಾ ನ್ಯಾಯವಾದ ಅನುಜ್ಞೆಗಳನ್ನು ಕೊಡಬಹುದು ; ಮತ್ತು ಅಂಥಾ ನ್ಯಾಯವಾದ ಪ್ರತಿ ಅನುಜ್ಞೆಗೆ ಅನುಸರಿಸಿ ನಡೆಯಲು ಎಲ್ಲಾ ಜನರೂ ಬದ್ಧರಾಗಿ ಇರತಕ್ಕದ್ದು.

ಆ ಸ್ಥಳಗಳಿಗೆ ಪೊಲೀಸಿನವರ ಧಾರಾಳವಾದ ಪ್ರವೇಶ.

(2) (1)ನೆ ಒಳಪ್ರಕರಣದ ನಿಯಮಗಳನ್ನು ಮತ್ತು ಅವುಗಳಂತೆ ಮಾಡಿದ ಯಾವುದಾದರೂ ಅನುಜ್ಞೆಯನ್ನು ನೆರವೇರಿಸುವುದಕ್ಕೋಸ್ಕರ ಅಂಥಾ ಪ್ರತಿ ವಿನೋದದ ಸ್ಥಳಕ್ಕೆ, ಸಭೆಗೆ ಅಥವಾ ಕೂಟಕ್ಕೆ ಪೊಲೀಸಿನವರಿಗೆ ಧಾರಾಳವಾದ ಪ್ರವೇಶವಿರತಕ್ಕದ್ದು.

ಬೊಂಬಾಯಿ-1890ರ 4 ಪ್ರ. 48.

ಬಹಿರಂಗವಾದ ಬೀದಿಗಳಲ್ಲಿ ಸಭೆಗಳು ಮುಂತಾದುದನ್ನು ಪೊಲೀಸಿನವರು ಕ್ರಮಪಡಿಸಬೇಕು.

45. (1) ಯಾವ ಮಾಜಿಸ್ಟ್ರೇಟಿಂದ ಅಥವಾ ಈ ಬಗ್ಗೆ ಕ್ರಮವಾಗಿ ಅಧಿಕಾರ ಪಡೆದ ಇತರ ಯಾವ ಅಧಿಕಾರಿಯಿಂದ ಆದರೂ ನ್ಯಾಯಕ್ಕೆ (ಕಾನೂನಿಗೆ) ಅನುಸಾರವಾಗಿ ಯಾವ ಕಾಲದಲ್ಲಾಗಲಿ ಮಾಡಲ್ಪಟ್ಟ ಯಾವ ನಿಬಂಧನೆಗೆ ಅಥವಾ ಅಪ್ಪಣೆಗೆ ಆದರೂ ಒಳಪಟ್ಟು, ಇನ್ಸ್‌ಪೆಕ್ಟರ ಸ್ಥಾನಕ್ಕೆ ಕೀಳ್ಪಡದ ಯಾವ ಪೊಲೀಸು ಆಫಿಸರಾದರೂ—

(a) ಬೀದಿಗಳ ಮೇಲೆ ಅಥವಾ ಬೀದಿಗಳಲ್ಲಿ ಸಭೆಗಳಿಗೆ ಮೆರವಣಿಗೆಗಳಿಗೆ, ಚಲಿಸುವ ಗುಂಪುಗಳಿಗೆ, ಅಥವಾ ಕೂಟಗಳಿಗೆ ಸೇರಿದ ಜನರ ನಡತೆಯನ್ನು ಅಥವಾ ಕಾರ್ಯವನ್ನು ಕುರಿತು ನಿಬಂಧನೆಗಳನ್ನು ಮಾಡಬಹುದು. ಮತ್ತು ಅವುಗಳನ್ನು ನಡೆಸೋಣವನ್ನು ನೇಮಿಸಬಹುದು ; ಮತ್ತು ಮೆರವಣಿಗೆಗಳ ವಿಷಯದಲ್ಲಿ ಅವು ಯಾವ ದಾರಿಗಳ ಮಾರ್ಗವಾಗಿ, ಯಾವ ಕ್ರಮವಾಗಿ, ಮತ್ತು ಯಾವ ಹೊತ್ತುಗಳಲ್ಲಿ ನಡೆಯಬಹುದೋ ಅವನ್ನು ವಿಧಾಯಕ ಮಾಡಿ ಅದಕ್ಕಾಗಿ ಲೈಸೆನ್ಸುಗಳನ್ನೂ ಕೊಡಬಹುದು ;

(b) ಒಂದು ಬೀದಿಯಲ್ಲಿ ಅಥವಾ ಅದರ ಸಮೀಪದಲ್ಲಿ ವಾದ್ಯವನ್ನು ಬಾರಿಸೋಣ, ತುತ್ತೂರಿಗಳನ್ನು, ಜಾಗಟೆಗಳನ್ನು ಅಥವಾ ಇತರ ವಾದ್ಯಗಳನ್ನು ಹೊಡೆಯೋಣ, ಕೊಂಬುಗಳನ್ನು ಅಥವಾ ಗದ್ದಲವನ್ನು ಉಂಟುಮಾಡುವ ಇತರ ವಾದ್ಯಗಳನ್ನು ಊದೋಣ, ಅಥವಾ ನುಡಿಸುವುದು, ಇವುಗಳನ್ನು, ಲೈಸೆನ್ಸಗಳನ್ನು ಕೊಡೋಣದರಿಂದಾಗಲಿ ಅಥವಾ ಅನ್ಯಥಾವಾಗಲಿ ಕ್ರಮಪಡಿಸಿ ಅಂಕೆಯಲ್ಲಿ ಇಡಬಹುದು ;

(c) ಈ ಲೆಗ್ಯುಲೇಷನಿನ 36 ರಿಂದ 43ರ ವರೆಗಿನ ಪ್ರಕರಣಗಳಂತೆ ಮಾಜಿಸ್ಟ್ರೇಟರಿಂದ ಮಾಡಲ್ಪಟ್ಟ ಯಾವ ಅಪ್ಪಣೆಗಳಿಗಾದರೂ ಅಧೀನವಾಗಿ ಮತ್ತು ಸಹಾಯವಾಗಿ ನ್ಯಾಯವಾದ ಅಪ್ಪಣೆಗಳನ್ನು ಮಾಡಬಹುದು.

(2) ಈ ಪ್ರಕರಣದ ಮೇರೆಗೆ ಮಾಡಿದ್ದ ಪ್ರತಿ ನಿಬಂಧನೆಯನ್ನು ಮತ್ತು ಅಪ್ಪಣೆಯನ್ನು ಅದು ಎಲ್ಲಿ ನೆರವೇರಬೇಕೋ ಆ ಸ್ಥಳದಲ್ಲಿ ಅಥವಾ ಅಂಥಾ ನಿಬಂಧನೆ ಅದರ ಹತ್ತಿರ ಪ್ರಸಿದ್ಧಪಡಿಸತಕ್ಕದ್ದು, ಅಥವಾ ಅದು ಯಾರಿಗೆ ಸಂಬಂಧಿಸುತ್ತದೆಯೋ ಆ ಮನುಷ್ಯನಿಗೆ ಪ್ರಕಟಿಸತಕ್ಕದ್ದು, ಮತ್ತು ಸಂಬಂಧಪಟ್ಟ ಜನರೆಲ್ಲಾ ಅದಕ್ಕೆ ಅನುಸಾರವಾಗಿ ನಡೆಯಲು ಬದ್ಧರಾಗಿ ಇರತಕ್ಕದ್ದು.

1861ರ 5ನೆ ಆಕ್ಟು ಪ್ರ. 30A (1) ಸ್ವಲ್ಪ ವ್ಯತ್ಯಾಸ ಮಾಡಿದೆ.

(3) ಅಂಥಾ ಯಾವ ಲೈಸೆನ್ಸನ್ನು ನಿಬಂಧನೆಯನ್ನು ಅಥವಾ ಅಪ್ಪಣೆಯನ್ನಾದರೂ ಉಲ್ಲಂಘಿಸಿ ನಡೆಯುವ ಯಾವ ಮೆರವಣಿಗೆಯನ್ನಾದರೂ ಅಂಥಾ ನಿಬಂಧನೆ ಯಾವ ಮಾಜಿಸ್ಟ್ರೇಟು, ಒಂದು ಠಾಣೆಯ ಮೇಲ್ವಿಚಾರಣೆಯ ಆಫಿಸರಿಗೆ ಕೀಳ್ಪಟ್ಟದ್ದ ಯಾವ ಪೋಲೀಸು ಆಫಿಸರಾಗಲಿ ನಿಲ್ಲಿಸಬಹುದು. ಮತ್ತು ಅಂಥಾ ಯಾವ ಲೈಸೆನ್ಸನ್ನು ನಿಬಂಧನೆಯನ್ನು ಅಥವಾ ಅಪ್ಪಣೆಯನ್ನಾದರೂ ಅತಿಕ್ರಮಿಸಿ ನಡೆಯುವ ಮೆರವಣಿಗೆಯನ್ನು ಅಥವಾ ಯಾವುದಾದರೂ ಸಭೆಯನ್ನು, ಚಲಿಸುವ ಗುಂಪನ್ನು ಅಥವಾ ಕೂಟವನ್ನು ಚದರಿ ಹೋಗಬೇಕೆಂದು ಆಜ್ಞಾಪಿಸಬಹುದು.

1861ರ 5ನೆ ಆಕ್ಟು ಪ್ರ. 30A (2) ಸ್ವಲ್ಪ ವ್ಯತ್ಯಾಸ ಮಾಡಿದೆ.

(4) ಹಿಂದಿನ ಕಡೇ ಒಳ ಪ್ರಕರಣದ ಮೇರೆಗೆ ಕೊಡಲ್ಪಟ್ಟ ಅಂಥಾ ಯಾವ ಲೈಸೆನ್ಸನ್ನಾದರೂ, ನಿಬಂಧನೆಯನ್ನಾದರೂ ಅಥವಾ ಅಪ್ಪಣೆಯನ್ನು ಉಲ್ಲಂಘಿಸಿ ನಡೆಯುವ ಅಥವಾ ಅದಕ್ಕೆ ವಿಧೇಯವಾಗಿ ನಡೆಯುವ ಸಭೆಯನ್ನು ನಿರಾಕರಿಸುವ ಯಾವ ಮೆರವಣಿಗೆಯನ್ನು, ಸಭೆಯನ್ನು, ಚಲಿಸುವ ಗುಂಪನ್ನು ಅಥವಾ ಕೂಟವನ್ನು ಆಗಲಿ ಅಕ್ರಮ ಕೂಟವೆಂದು ಭಾವಿಸತಕ್ಕದ್ದು.

ಬೊಂಬಾಯಿ 1890ರ 4 ಪ್ರ. 49.

46. (1) ಬಹಿರಂಗವಾದ ಪ್ರಕಟನೆಯ ಮೂಲಕವಾಗಿ, ಆ ಪ್ರಕಟನೆಯಲ್ಲಿ ಹೆಸರು ಕಾಣಿಸಿರತಕ್ಕಂಥಾ ಸ್ಥಳ ಅಥವಾ ಸ್ಥಳಗಳು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟು ಆಜ್ಞಾಪಿಸಬಹುದು ; ಬೀದಿಗಳಲ್ಲಿರುವ ಮತ್ತು ಯಾವ ಮನುಷ್ಯನಿಂದಲೂ ನಡೆಸಲ್ಪಡದೆ ಇರುವ ಪ್ರತಿ ನಾಯಿಯನ್ನು ತಡೆ ಇಲ್ಲದೆ ಅದು ಉಸಿರು ಬಿಡುವುದಕ್ಕೂ ಪಾನ ಮಾಡುವುದಕ್ಕೂ ಆಗುವಂಥಾ ಮತ್ತು ಅದು ಕಚ್ಚೋಣವನ್ನು ಚೆನ್ನಾಗಿ ತಪ್ಪಿಸುವಂಥಾ ರೀತಿಯಲ್ಲಿ ಅದಕ್ಕೆ ಬಾಯಿ ಕಟ್ಟಬೇಕೆಂದು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟು ಆಜ್ಞಾಪಿಸಬಹುದು ; ಮತ್ತು ಇದಕ್ಕಾಗಿ (2)ನೆ ಒಳ ಪ್ರಕರಣದಲ್ಲಿ ವಿಧಿಸಿರುವಂತೆ ವಿನಾ, ಅಂಥಾ ಅಪ್ಪಣೆಯು ಉಪಯೋಗದಲ್ಲಿ ಇರುವಾಗ ಅದರ ಒಡೆಯನ್ನವರಾರಕ್ಕೆ ಅಚ್ಚೆ ಯಾವ ಸ್ಥಳದಲ್ಲಾದರೂ ಅಂಕೆ ಇಲ್ಲದೆ ಸಿಕ್ಕುವ ಯಾವ ನಾಯಿಯನ್ನಾದರೂ ಪೋಲೀಸಿನವರು ನಾಶಪಡಿಸಬಹುದು, ಅಥವಾ ಸದರಿ ಒಡೆಯನು ಅದು ತನ್ನ ನಾಯಿ ಎಂದು ತಿಳಿಸಿ ಅದಕ್ಕೆ ಸಮನಾದ ಬಾಯಿಕಟ್ಟಿನ ಏರ್ಪಾಡನ್ನು ಮಾಡಿ, ಆ ನಾಯಿಯನ್ನು ಇಟ್ಟುಕೊಂಡು ಇದ್ದುದಕ್ಕಾಗಿ ತಗುಲಿದ ಎಲ್ಲಾ ವೆಚ್ಚಗಳನ್ನೂ ಕೊಡುವ ತನಕ ಅಂಥಾ ಯಾವ ನಾಯಿಯನ್ನಾದರೂ ಪೋಲೀಸಿನವರು ಸ್ವಾಧೀನಕ್ಕೆ ತೆಗೆದುಕೊಂಡು ಇಟ್ಟುಕೊಂಡಿರಬಹುದು.

(2) ಗೊತ್ತಾದ ಒಡೆಯನ ಹೆಸರು ಕಂಡಿರುವ ಕೊರಳಪಟ್ಟಿಯನ್ನು ಧರಿಸಿಕೊಂಡಿರುವ ಯಾವ ನಾಯಿಯನ್ನಾದರೂ, ಅದು ತನ್ನದೆಂದು ಒಡೆಯನಾದವನು ಬಂದು ಅದನ್ನು ಕೇಳದೆ ಮತ್ತು ಅದನ್ನು ಪೋಲೀಸಿನವರು ನಾಯಿಗಳನ್ನು ಯಾವಾಗ ಇಟ್ಟುಕೊಂಡಿದ್ದುದರಿಂದ ಬಿದ್ದ ವೆಚ್ಚಗಳನ್ನೆಲ್ಲಾ ಕೊಡದೆ ಮೂರು ಪೂರಾ ದಿನಗಳ ತನಕ ಪೋಲೀಸಿನವರ ಸ್ವಾಧೀನದಲ್ಲಿ ಅದು ಇದ್ದಾಗ್ಯೂ ನಾಶಪಡಿಸಬಹುದು.

ಅಥವಾ ಮಾರಬಹು- ಗುವ ತನಕ ಅಂಥಾ ನಾಯಿ ಹುಚ್ಚಾಗಿದ್ದ ಹೊರತು, ಪೊಲೀಸಿ
ದು. ನವರು ಕೊಲ್ಲತಕ್ಕದ್ದಲ್ಲ: ಆದರೆ ಸದರಿ ಗಡುವಿನ ವರೆಗೆ ಒಡೆಯು
ನಾದವನು ಅದನ್ನು ಕೇಳದೆ ಮತ್ತು ಸದರಿ ವೆಚ್ಚಗಳನ್ನು ಕೊಡದೆ ಅವರ ಸ್ವಾಧೀನದಲ್ಲಿ ಇದ್ದು ಬಿಟ್ಟ ಯಾವ ನಾಯಿಯನ್ನಾದರೂ ಪೊಲೀಸಿನವರು ಮಾರಬಹುದು ಅಥವಾ ನಾಶ ಪಡಿಸಬಹುದು.

(3) ಹಿಂದಿನ ಒಳ ಪ್ರಕರಣಗಳ ಪ್ರಕಾರ ಬಿದ್ದ ವೆಚ್ಚಗಳು ಹೇಗೆ ವೆಚ್ಚಗಳಿಗೆ ನಾಯಿಯ ಒಡೆಯನು ಭೂಮಿಯ ಕಂದಾಯದ ವಸೂಲಾಗ ಬಹುದು. ಬಾಕಿಗೆ ಹೇಗೋ ಹಾಗೆ ಉತ್ತರವಾದಿಯಾಗಿರತಕ್ಕದ್ದು.

ಒಡೆಯನ ವಿಳಾಸ ದ ಒಂದಿಗೆ ಕೊರಳಪಟ್ಟಿಯನ್ನು ಧರಿಸಿರುವ ನಾಯಿಯ ವಿಷಯದ ಲ್ಲಿ ನಿಯಮ.

(4) ಪೊಲೀಸಿನವರು ಸ್ವಾಧೀನಕ್ಕೆ ತೆಗೆದುಕೊಂಡ ಯಾವ ನಾಯಿಯಾದರೂ ಯಾವ ಮನುಷ್ಯನದಾದರೂ ಸ್ಪಷ್ಟವಾಗಿ ನಿಜವಾದ ವಿಳಾಸವನ್ನು ಕೆತ್ತಿರುವ ಕೊರಳಪಟ್ಟಿಯನ್ನು ಧರಿಸಿ ಕೊಂಡಿರುವಾಗ, ಅಂಥಾ ನಾಯಿಯನ್ನು ಸ್ವಾಧೀನಕ್ಕೆ ತೆಗೆದು ಕೊಂಡಿರುವುದಾಗಿ ಕಾಗದವನ್ನು ಸಂಗಡಲೇ ಟಪ್ಪಾಲು ಮೂಲಕ ವಾಗಿ ಸದರಿ ವಿಳಾಸಕ್ಕೆ ಕಳುಹಿಸತಕ್ಕದ್ದು.

5ನೆ ಅಧ್ಯಾಯು.—ಪೊಲೀಸಿನವರು ನಡೆಸತಕ್ಕ ಅಧಿಕಾರಗಳು ಮತ್ತು ಅವರ ಕೆಲಸಗಳು.

ಬೊಂಬಾಯಿ 1890ರ 4 ಪ್ರ. 51.

ಪೊಲೀಸು ಅಫಿಸರಿನ ಕೆಲಸಗಳು.

47. (1) ಪ್ರತಿ ಪೊಲೀಸು ಆಫಿಸರು—

(a) ತಕ್ಕ ಅಧಿಕಾರಿಯಿಂದ ತನಗೆ ನ್ಯಾಯವಾಗಿ ಹುಟ್ಟಿದ ಪ್ರತಿ ವಾರಂಟಿಗೆ ಅಥವಾ ಇತರ ಅಪ್ಪಣೆಗೆ ತಡವಿಲ್ಲದೆ ವಿಧೇಯನಾಗಿ ಅದನ್ನು ನೇರವೇರಿಸಬೇಕು ; ಮತ್ತು ತನ್ನ ಮೇಲ್ಪಟ್ಟವನ ಆಜ್ಞೆಗಳನ್ನು ನಡೆಸಲು ಎಲ್ಲಾ ನ್ಯಾಯವಾದ ಉಪಾಯಗಳಿಂದಲೂ ಪ್ರಯತ್ನಿಸಬೇಕು :

(b) ವಾರಂಟಿಲ್ಲದೆ ಹಿಡಿಯತಕ್ಕ ತಪ್ಪಿತಗಳು ನಡೆದ ವಿಷಯದಲ್ಲಿ ಅಥವಾ ಅಂಥಾ ತಪ್ಪಿತಗಳನ್ನು ನಡೆಸಲು ಮಾಡುವ ಉದ್ದೇಶಗಳ ಸಂಬಂಧವಾದ ವರ್ತಮಾನವನ್ನು ತನ್ನ ಕೈಲಾದ ಮಟ್ಟಿಗೂ ಸಂಪಾದಿಸಿ ಅದರ ಮೇಲೆ ತಪ್ಪಿತಸ್ಥರಿಗೆ ಶಿಕ್ಷೆ ಮಾಡಿಸುವುದಕ್ಕೆ ಅಥವಾ ತಪ್ಪಿತಗಳು ನಡೆಯುವುದನ್ನು ತಪ್ಪಿಸುವುದಕ್ಕೆ ಅತ್ಯನುಕೂಲವಾಗುವಂಥಾ ವರ್ತಮಾನವನ್ನು ನ್ಯಾಯಕ್ಕೆ (ಕಾನೂನಿಗೆ) ಅನುಸಾರವಾಗಿಯೂ ತನ್ನ ಮೇಲ್ಪಟ್ಟವರ ಅಪ್ಪಣೆಗಳಂತೆಯೂ ಕೊಟ್ಟು ಇತರ ಸನ್ನಾಹಗಳನ್ನು ಸಹ ಮಾಡಬೇಕು :

(c) ತನ್ನ ಕೈಲಾದ ಮಟ್ಟಿಗೂ, ಬಹಿರಂಗವಾದ ಹೇಸಿಕೆಗಳು ನಡೆಯುವುದನ್ನು ತಪ್ಪಿಸಬೇಕು :

(d) ಯಾರನ್ನು ಹಿಡಿಯಲು ತನಗೆ ನ್ಯಾಯವಾಗಿ ಅಧಿಕಾರ ಉಂಟೋ ಮತ್ತು ಯಾರನ್ನು ಹಿಡಿಯುವುದಕ್ಕೋಸ್ಕರ ಸಾಕಾದಷ್ಟು ಕಾರಣವಿದೆಯೋ ಅಂಥಾ ಜನರನ್ನೆಲ್ಲಾ ಹಿಡಿಯಬೇಕು :

(e) ಮತ್ತೊಬ್ಬ ಪೊಲೀಸು ಆಫಿಸರು ತನ್ನನ್ನು ಸಹಾಯ ಮಾಡಬೇಕೆಂದಾಗ, ಅಥವಾ ಅವನ ಕೆಲಸವನ್ನು ಅವನು ಮಾಡೋಣದರಲ್ಲಿ ತನ್ನ ಸಹಾಯ ಅವನಿಗೆ ಅಗತ್ಯವಾಗುವ ಪಕ್ಷದಲ್ಲಿ, ಹಾಗೆ ಸಹಾಯ ಹೊಂದುವ ಆಫಿಸರ ಭಾಗದಲ್ಲಿ ನ್ಯಾಯದಂತೆಯೂ (ಕಾನೂನಿನಂತೆಯೂ) ವಿವೇಕವಾಗಿಯೂ ಇರುವಂಥಾ ಮಾರ್ಗಗಳಲ್ಲಿ ಅವನಿಗೆ ಸಹಾಯ ಮಾಡಬೇಕು ; ಮತ್ತು

(f) ತತ್ಕಾಲದಲ್ಲಿ ಉಪಯೋಗದಲ್ಲಿ ಇರುವ ಮುಲ್ಕಿಗೆ ಸಂಬಂಧಪಡುವ ಅಥವಾ ಇತರ ನ್ಯಾಯದ (ಕಾನೂನಿನ) ಪ್ರಕಾರ ತನಗೆ ನಿಯಾಮಕವಾಗಿರುವಂಥಾ ಕೆಲಸಗಳನ್ನು ಮಾಡಬೇಕು.

ಸರ್ವರೂ ಸುಳಿದಾಡುವ ಸ್ಥಳಗಳನ್ನು ವಾರಂಟಿಲ್ಲದೆ ಪ್ರವೇಶಿಸಲು ಅಧಿಕಾರ.

(2) ಸರಕಾರದಿಂದ ಅಥವಾ ನ್ಯಾಯವಾಗಿ ಅಪ್ಪಣೆಯನ್ನು ಪಡೆದ ಮನುಷ್ಯನಿಂದ ಮಾಡಲ್ಪಟ್ಟ ನಿಬಂಧನೆಗಳಿಗೆ ಮತ್ತು ಆಜ್ಞೆಗಳಿಗೆ ಒಳಪಟ್ಟು, (1)ನೆ ಒಳ ಪ್ರಕರಣದ ಕಾರ್ಯಗಳಿಗೋಸ್ಕರ, ವಾರಂಟಿಲ್ಲದೆ, ಜನಗಳು ಸುಳಿದಾಡುವ ಯಾವ ಸ್ಥಳವನ್ನಾಗಲಿ, ಪಾನ ಮಾಡುವ ಅಂಗಡಿಯಾಗಿ ಉಪಯೋಗಿಸಲ್ಪಡುತ್ತದೆಂದು ನಂಬಲು ತನಗೆ ಕಾರಣವಿರುವ ಯಾವ ಸ್ಥಳವನ್ನಾಗಲಿ, ಅಥವಾ ಮತ್ತಿನ

ಪದಾರ್ಥಗಳ ವಿಕ್ರಯಕ್ಕೋಸ್ಕರವಾದ ಅಂಗಡಿಯನ್ನು, ಅಥವಾ ಸೂಳೆಯರೂ ಮತ್ತು ಅಸ್ತವ್ಯಸ್ತರಾದ ಜನರು ಸುಳಿದಾಡುವ ಸ್ಥಳವನ್ನಾಗಲಿ, ಪ್ರತಿ ಪೊಲೀಸು ಆಫಿಸರೂ ಪ್ರವೇಶಿಸಬಹುದು ಮತ್ತು ಪರೀಕ್ಷೆ ಮಾಡಬಹುದು.

ಬೀದಿಗಳಲ್ಲಿ ಸಂಶಯಾಸ್ಪದವಾದ ಜನಗಳನ್ನು ಶೋಧನೆ ಮಾಡಲು ಅಧಿಕಾರ.

(3) ಕದ್ದ ಒಡವೆಯಾಗಿರುವುದಾಗಿ ಪೊಲೀಸು ಆಫಿಸರು ನಿಜವಾಗಿ ಸಂಶಯಪಡತಕ್ಕಂಥಾ ಯಾವ ವಸ್ತುವಿನ ಸ್ವಾಧೀನತೆಯಲ್ಲಿ ಅಥವಾ ವ್ಯಕ್ತವಾದ ಸ್ವಾಧೀನತೆಯಲ್ಲಿ ಆಗಲಿ ಒಬ್ಬ ಮನುಷ್ಯನು ಬೀದಿಯಲ್ಲಿ ಅಥವಾ ಜನರು ಸುಳಿದಾಡುವ ಸ್ಥಳದಲ್ಲಿ ಇರುವುದಾಗಿ ಸಂಶಯಿಸಲ್ಪಟ್ಟಾಗ, ಅಂಥಾ ಪೊಲೀಸು ಆಫಿಸರು ಆ ವಸ್ತುವಿಗಾಗಿ ಶೋಧನೆಯನ್ನು ಮಾಡಿ ಅದನ್ನು ಪರೀಕ್ಷಿಸಿ ಅದರ ವೃತಾಂತವನ್ನು ತಿಳಿಸ ಹೇಳಬಹುದು : ಮತ್ತು ಸದರಿ ಸ್ವಾಧೀನಕರ್ತನು ತಿಳಿಸುವ ವೃತ್ತಾಂತವು ಕಂಡಹಾಗೆ ಸುಳ್ಳಾಗಿ ಅಥವಾ ಸಂಶಯಾಸ್ಪದವಾಗಿದ್ದರೆ, ಅಂಥಾ ಪದಾರ್ಥವನ್ನು ತನ್ನ ವಶದಲ್ಲಿ ನಿಲ್ಲಿಸಿಕೊಂಡು ಮಾಜಿಸ್ಟ್ರೇಟಿಗೆ ಸಂಗತಿಗಳನ್ನು ತಿಳಿಸಬೇಕು : ಆತನು ಅದರ ಮೇಲೆ ಕ್ರಿಮಿನಲು ಪ್ರೊಸೀಡ್ಯುರ್ ಕೋಡಿನ 523 ಮತ್ತು 525ನೇ ಪ್ರಕರಣಗಳಂತೆ ಅಥವಾ ಉಪಯೋಗದಲ್ಲಿ ಇರುವ ಇತರ ನ್ಯಾಯದಂತ (ಕಾನೂನಿನಂತೆ) ನಡೆಯತಕ್ಕದ್ದು.

ಬೊಂಬಾಯಿ-1890ರ 4 ಪ್ರ. 52.

ಜನರ ವಿಷಯದಲ್ಲಿ ಪೊಲೀಸು ಆಫಿಸರುಗಳ ಕೆಲಸಗಳು.

48. ಪ್ರತಿ ಪೊಲೀಸು ಆಫಿಸರ ಕೆಲಸವಾಗಿರತಕ್ಕದ್ದೇನೆಂದರೆ—

(a) ಬೀದಿಗಳಲ್ಲಿ ಬಲಹೀನರಾದ ಅಥವಾ ಸಹಾಯವಿಲ್ಲದ ಜನರಿಗೆ ತನ್ನ ವಶದಲ್ಲಿರುವ ಪ್ರತಿ ಸಹಾಯವನ್ನು ಮಾಡೋಣ, ಮತ್ತು ಅಪಾಯಕರರಾಗಿ ಅಥವಾ ತಮ್ಮಗಳನ್ನು ತಾವುಗಳೇ ನೋಡಿಕೊಳ್ಳಲು ಅಸಮರ್ಥರಾಗಿ ಕಾಣುವರು ಯಾರೋ ಅಂಥಾ ಮನಸ್ಥಿತಿಯಾಗಿರುವ ಮತ್ತೇರಿದ ಜನರನ್ನು ಮತ್ತು ಹುಚ್ಚರನ್ನ ಸ್ವಾಧೀನಕ್ಕೆ ತೆಗೆದುಕೊಳ್ಳೋಣ ;

(b) ಗಾಯಪಟ್ಟಿರುವನಾಗಿ ಅಥವಾ ವ್ಯಾಧಿಯುಳ್ಳನಾಗಿ ಅಥವಾ ವೈಯ್ಯದಲ್ಲಿ ನೆಟ್ಟಗಿಲ್ಲದವನಾಗಿ ಹಿಡಿಯಲ್ಪಟ್ಟಿರುವ ಅಥವಾ ಸೆರೆಯಲ್ಲಿರುವ ಯಾವ ಮನುಷ್ಯನಿಗೋಸ್ಕರವಾದರೂ ಬೇಕಾದ ಒತ್ತಾಸೆಯನ್ನು ಒದಗಿಸಲು ತೀವ್ರವಾದ ಸನ್ನಾಹಗಳನ್ನು ಮಾಡೋಣ, ಮತ್ತು ಯಾರಾದರೂ ಅಂಥಾ ಮನುಷ್ಯನಿಗೆ ತಾನು ಕಾವಲಿರುವಾಗ ಅಥವಾ ಅವನನ್ನು ನಡೆಸಿಕೊಂಡು ಹೋಗುವಾಗ ಅವನ ಸ್ಥಿತಿಗೆ ತಕ್ಕ ಲಕ್ಷ್ಯವನ್ನು ಕೊಡೋಣ ;

(c) ಹಿಡಿಯಲ್ಪಟ್ಟಿರುವ ಅಥವಾ ಸೆರೆಯಲ್ಲಿರುವ ಪ್ರತಿ ಮನುಷ್ಯನ ಸರಿಯಾದ ಜೀವನಕ್ಕೂ ಮರೆಗೂ ಏರ್ಪಾಟು ಮಾಡೋಣ ;

(d) ಶೋಧನೆಗಳನ್ನು ಮಾಡೋಣದರಲ್ಲಿ, ಅನವಶ್ಯಕವಾದ ಒರಟುತನವಿಲ್ಲದೆ ಮತ್ತು ಅಗತ್ಯವಿಲ್ಲದ ಕಿರಿಕಿರಿಯನ್ನು ಉಂಟುಮಾಡದೆ ಇರೋಣ ;

(e) ಹೆಂಗಸರೊಂದಿಗೂ ಮಕ್ಕಳೊಂದಿಗೂ ನಡೆದುಕೊಳ್ಳುವಾಗ್ಗೆ, ಮರ್ಯಾದೆಗೆ ಖಂಡಿತವಾದ ಲಕ್ಷ್ಯದೊಂದಿಗೂ ಮತ್ತು ನ್ಯಾಯವಾದ ಸಭ್ಯತನದೊಂದಿಗೂ ನಡೆಯೋಣ ;

(f) ಬೆಂಕಿಯಿಂದ ಯಾವ ಹಾನಿಯೂ ಅಥವಾ ನಷ್ಟವೂ ಸಂಭವಿಸದಂತ ಮಾಡಲು ತನ್ನ ಉತ್ತಮ ಪ್ರಯತ್ನಗಳನ್ನು ಮಾಡೋಣ ;

(g) ಜನರಿಗೆ ಯಾವ ಆಪತ್ತಿನ ಅಥವಾ ಅಪಾಯದ ನಿವಾರಣೆಯನ್ನು ಆದರೂ ಮಾಡಲು ತನ್ನ ಉತ್ತಮ ಪ್ರಯತ್ನಗಳನ್ನು ಮಾಡೋಣ.

ಬೊಂಬಾಯಿ-1890ರ 4 ಪ್ರ. 53

ಬೀದಿಗಳಲ್ಲಿ ವ್ಯಾಪಾರ ಮುಂತಾದುದನ್ನು ಪೊಲೀಸಿನವರು ಕ್ರಮಪಡಿಸಬೇಕು.

49. (1) ಪೊಲೀಸು ಆಫಿಸರ ಕೆಲಸವಾಗಿರಬೇಕಾದ್ದು ಯಾವುದೆಂದರೆ—

(a) ಬೀದಿಗಳಲ್ಲಿ ವ್ಯಾಪಾರವನ್ನು ಕ್ರಮಪಡಿಸಿ ಅಂಕೆಯಲ್ಲಿಡೋಣ, ಅಲ್ಲಿ ತಡೆಗಳನ್ನು ತಪ್ಪಿಸೋಣ, ಮತ್ತು ಬೀದಿಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿ ಜನಗಳ ಆಚರಣೆ ಬಗ್ಗೆ ಈ ರೆಗ್ಯುಲೇಷನಿನ ಮೇರೆಗೆ ಅಥವಾ ಉಪಯೋಗದಲ್ಲಿರುವ ಇತರ ಯಾವುದಾದರೂ ನ್ಯಾಯದ (ಕಾನೂನಿನ) ಮೇರೆಗೆ ಮಾಡಿದ ಯಾವ ನಿಬಂಧನೆಯ ಅಥವಾ ಆಜ್ಞೆಯ ಉಲ್ಲಂಘನೆಯನ್ನು ಆಗಲಿ ತನ್ನ ಕೈಲಾದಮಟ್ಟಿಗೂ ತಪ್ಪಿಸೋಣ,

ಬೀದಿಗಳಲ್ಲೂ ಇತರ ಬಹಿರಂಗವಾದ ಜಾಗಗಳಲ್ಲೂ ನೆಮ್ಮದಿಯನ್ನು ಕಾಪಾಡಬೇಕು ; ಮತ್ತು

(b) ಬೀದಿಗಳಲ್ಲಿ ಮತ್ತು ಜನರು ಮೈತೊಳೆಯುವ, ಬಟ್ಟೆ ಒಗೆಯುವ ಮತ್ತು ದೋಣಿಗಳಿಂದ ದಡಕ್ಕೆ ಇಳಿಯುವ ಸ್ಥಳಗಳಲ್ಲಿ, ಸಂತೆಗಳಲ್ಲಿ, ದೇವಸ್ಥಾನಗಳಲ್ಲಿ, ಜನರು ಸುಳಿದಾಡುವ ಇತರ ಎಲ್ಲಾ ಸ್ಥಳಗಳಲ್ಲಿ, ಮತ್ತು ಅವುಗಳೊಳಗೆ, ಮತ್ತು ಜನರು ಪೂಜೆ ಮಾಡುವ ಸ್ಥಳಗಳ ನೆರೆಯಲ್ಲಿ ಜನರು ಪೂಜೆ ಮಾಡುವಾಗ, ನೆಮ್ಮದಿಯನ್ನು ಕಾಪಾಡೋಣ ;

ಬಹಿರಂಗವಾದ ಸ್ಥಳಗಳಿಗೆ ಜನಗಳು ಸುಳಿದಾಡುವುದನ್ನು ಕ್ರಮ ಪಡಿಸಬೇಕು.

(c) ಜನರು ಸ್ನಾನಮಾಡುವ, ಬಟ್ಟೆ ಒಗೆಯುವ, ಮತ್ತು ದೋಣಿಗಳಿಂದ ಇಳಿಯುವ ಸ್ಥಳಗಳಿಗೆ ಜನರು ಸುಳಿದಾಡುವುದನ್ನು ಕ್ರಮಪಡಿಸೋಣ, ಆ ಸ್ಥಳಗಳಲ್ಲಿಯೂ ಸಾರ್ವಜನಿಕವಾದ ಹರಿಗೋಲುಗಳಲ್ಲಿಯೂ ಜನರ ಹೆಚ್ಚು ಸಂದಣಿಯನ್ನು ತಪ್ಪಿಸೋಣ, ಮತ್ತು ಅಂಥಾ ಯಾವುದಾದರೂ ಸ್ಥಳದಲ್ಲಿ ಅಥವಾ ಅಂಥಾ ಯಾವುದಾದರೂ ದೋಣಿಯಮೇಲೆ ಜನರ ಆಚರಣೆಸು ಬಗ್ಗೆ ನ್ಯಾಯವಾಗಿ ಮಾಡಿರುವ ಯಾವುದಾದರೂ ನಿಬಂಧನೆಯು ಅಥವಾ ಅಪ್ಪಣೆಯು ಅತಿಕ್ರಮಣವನ್ನು ತನ್ನ ಕೈಲಾಗುವಮಟ್ಟಿಗೂ ತಪ್ಪಿಸೋಣ.

ಪೊಲೀಸಿನವರ ನ್ಯಾಯವಾದ ಅಪ್ಪಣೆಗಳಿಗೆ ಅನುಸರಿಸಿ ನಡೆಯಲು ಜನಗಳು ಬದ್ಧರಾಗಿರಬೇಕು.

(2) ಸದರಿ ಕೆಲಸಗಳ ಪೈಕಿ ಯಾವುದನ್ನಾದರೂ ನೆರವೇರಿಸುವುದಕ್ಕೋಸ್ಕರ ಪೊಲೀಸು ಆಫಿಸರು ಕೊಡುವ ನ್ಯಾಯವಾದ ಅಪ್ಪಣೆಗಳಿಗೆ ಅನುಸಾರವಾಗಿ ನಡೆಯಲು ಎಲ್ಲಾ ಜನರೂ ಬದ್ಧರಾಗಿರತಕ್ಕದ್ದು.

ನ್ಯಾಯಾಧಿಕಾರವನ್ನು ಹಟದಿಂದ ಅಲಕ್ಷ್ಯಮಾಡುವ ಮನುಷ್ಯನನ್ನು ಪೊಲೀಸು ಆಫಿಸರು ಅಡ್ಡೀಮಾಡಬಹುದು ಅಥವಾ ಸ್ಥಳಾಂತರಕ್ಕೆ ಸಾಗಿಸಬಹುದು.

(3) ಮೇಲೆ ಹೇಳಿರುವಂಥಾ ಯಾವುದಾದರೂ ಅಪ್ಪಣೆಗೆ ಅನುಸರಿಸಿ ನಡೆಯಲು ಎದುರಿಸುವ, ನಿರಾಕರಿಸುವ ಅಥವಾ ತಪ್ಪುವ ಯಾವ ಮನುಷ್ಯನನ್ನಾದರೂ ಪೊಲೀಸು ಆಫಿಸರು ಅಡ್ಡಿ ಮಾಡಬಹುದು ಅಥವಾ ಆಚೆಗೆ ಸಾಗಿಸಬಹುದು; ಮತ್ತು ಅಂಥಾ ಮನುಷ್ಯನನ್ನು ಮಾಜಿಸ್ಟ್ರೇಟನ ಎದುರಿಗಾದರೂ ತೆಗೆದುಕೊಂಡು ಹೋಗಬಹುದು, ಅಥವಾ, ಅಲ್ಪ ಸಂಗತಿಗಳಲ್ಲಿ ಆ ಸಮಯ ದಾಟಿಹೋದಮೇಲೆ ಅವನನ್ನು ಬಿಟ್ಟುಬಿಡಬಹುದು.

ಬೊಂಬಾಯಿ 1890ರ 4 ಪ್ರ. 54.

39ನೆ, 40ನೆ ಅಥವಾ 41ನೆ ಪ್ರಕರಣ ಪ್ರಕಾರ ಹುಟ್ಟಿದ ಅಪ್ಪಣೆಗಳನ್ನು ನೆರವೇರಿಸೋಣ.

50. 39ನೆ ಪ್ರಕರಣದ ಮೇರೆಗೆ ಪ್ರಕಟನೆಯು ಕ್ರಮವಾಗಿ ಹುಟ್ಟಿದಾಗಲೆಲ್ಲಾ ಅಥವಾ 40ನೆ ಅಥವಾ 41ನೆ ಪ್ರಕರಣವಂತೆ ಅಪ್ಪಣೆಯನ್ನು ಮಾಡಿದಾಗಲೆಲ್ಲಾ, ಅದಕ್ಕೆ ವಿರೋಧವಾಗಿ ನಡೆಯುತ್ತಿರುವ ಅಥವಾ ನಡೆಯುವವನಾಗಿರುವ ಯಾವ ಮನುಷ್ಯನಿಗಾದರೂ ಹಾಗೆ ಮಾಡೋಣವನ್ನು ನಿಲ್ಲಿಸಬೇಕು ಅಥವಾ ಹಾಗೆ ಮಾಡದಿರಬೇಕು ಎಂದು ಆಜ್ಞಾಪಿಸುವುದು, ಮತ್ತು ನಿರಾಕರಣೆ ಅಥವಾ ಅವಿಧೇಯತ್ವದ ಸಂದರ್ಭದಲ್ಲಿ, ತಪ್ಪಿತವನ್ನು ಮಾಡುವ ಮನುಷ್ಯನನ್ನು ಹಿಡಿಯುವುದು ಸಹ, ಯಾವ ಮಾಜಿಸ್ಟ್ರೇಟಿಗಾಗಲಿ ಅಥವಾ ಪೊಲೀಸು ಆಫಿಸರಿಗಾಗಲಿ ನ್ಯಾಯವಾಗಿರತಕ್ಕದ್ದು. ಮೇಲೆ ಹೇಳಲ್ಪಟ್ಟಂಥಾ ಪ್ರಕಟನೆಗೆ ಅಥವಾ ಅಪ್ಪಣೆಗೆ ವಿರೋಧವಾಗಿ ಉಪಯೋಗಿಸಲ್ಪಟ್ಟ ಅಥವಾ ಉಪಯೋಗಿಸಲ್ಪಡುವ ಯಾವ ಪದಾರ್ಥವನ್ನು ಅಥವಾ ವಸ್ತುವನ್ನಾಗಲಿ ಅಂಥಾ ಮಾಜಿಸ್ಟ್ರೇಟು ಅಥವಾ ಪೊಲೀಸು ಆಫಿಸರು ಹಿಡಿದುಕೊಳ್ಳಲೂ ಬಹುದು, ಮತ್ತು ಹಿಡಿದುಕೊಂಡ ವಸ್ತುವನ್ನು ಆ ಸ್ಥಳದಲ್ಲಿ ನ್ಯಾಯಾಧಿಕಾರವನ್ನು ಉಳ್ಳ ಯಾವ ಮಾಜಿಸ್ಟ್ರೇಟನ ಅಪ್ಪಣೆ ಮೇರೆಗೆ ಆದರೂ ವ್ಯವಸ್ಥೆ ಹುಟ್ಟಿಸಿಬಿಡತಕ್ಕದ್ದು.

ಬೊಂಬಾಯಿ 1890ರ 4 ಪ್ರ. 55.

42ನೇ ಅಥವಾ 43ನೆ ಪ್ರಕರಣದಂತೆ ಆದ ಅಪ್ಪಣೆಗಳು ನೆರವೇರಿದುದನ್ನು ನೋಡಿಕೊಳ್ಳೋಣ ಪೊಲೀಸಿನವರ ಕೆಲಸ.

51. 42ನೆ ಪ್ರಕರಣದಂತೆ ಡಿಸ್ಟ್ರಿಕ್ಟು ಮಾಜಿಸ್ಟ್ರೇಟು ಅಥವಾ 43ನೆ ಪ್ರಕರಣದಂತೆ ಡಿಸ್ಟ್ರಿಕ್ಟು ಮಾಜಿಸ್ಟ್ರೇಟು ಅಥವಾ ಸಬ್ ಡಿವಿಜನಲು ಮಾಜಿಸ್ಟ್ರೇಟು ಮಾಡಿದ ಪ್ರತಿ ಕಟ್ಟಳೆಗೆ ಮತ್ತು ಕೊಟ್ಟ ಪ್ರತಿ ಪ್ರಕಟನೆಗೆ ಜನರು ಕ್ರಮವಾಗಿ ವಿಧೇಯರಾಗಿರುತ್ತಾರೆಂಬುವುದನ್ನು ನೋಡಿಕೊಳ್ಳೋಣ, ಅದಕ್ಕೆ ವಿಧೇಯರಾಗಿರಲು ಮೂಢತನದಿಂದ ತಪ್ಪುವ ಜನರನ್ನು ಎಚ್ಚರಿಸೋಣ, ಮತ್ತು ಯಾರು ಅದಕ್ಕೆ ಮನಃಪೂರ್ವಕವಾಗಿ ಅವಿಧೇಯರಾಗಿರುತ್ತಾರೆಯೋ ಅಂಥಾ ಯಾವ ಮನುಷ್ಯನನ್ನಾದರೂ ಹಿಡಿಯೋಣ, ಇವುಗಳು ಪೊಲೀಸು ಆಫಿಸರ ಕೆಲಸಗಳಾಗಿ ಇರತಕ್ಕದ್ದು.

ಬೊಂಬಾಯಿ 1890ರ 4 ಪ್ರ. 56.

ತೊಂಡು ದನಕರವನ್ನು ಪೊಲೀಸಿನವರು ತಮ್ಮ ವಶಕ್ಕೆ ತೆಗೆದುಕೊಳ್ಳಬಹುದು.

52. ಬೀದಿಯಲ್ಲಿ ತೊಂಡು ತಿರುಗುವುದಾಗಿ ಸಿಕ್ಕಬಹುದಾದ ಯಾವ ದನಕರವನ್ನಾದರೂ ಪೊಲೀಸು ಆಫಿಸರು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು; ಮತ್ತು ಅದನ್ನು ಅತ್ಯಂತ ಸಮೀಪವಾದ ದೊಡ್ಡಿಗೆ ತೆಗೆದುಕೊಂಡು ಹೋಗಬಹುದು ಅಥವಾ ಕಳುಹಿಸಬಹುದು, ಮತ್ತು ಸಂಬಂಧಪಟ್ಟ ಒಡೆಯನು ಇತರರು ಸಹ ಆ ಮೇಲೆ ಕ್ಯಾಟಲ್ ಟ್ರೆಸ್ಪೆಸ್ ಆಕ್ಟಿನ ವಿಧಿಗಳಿಗೆ ಒಳಪಟ್ಟಿರತಕ್ಕದ್ದು.

ಬೊಂಬಾಯಿ-1890ರ 4 ಪ್ರ. 57 ಈಗಿರುವ ಪೋಲೀಸು ನಿಬಂಧನೆಗಳ ಮೇರೆ ಬದಲಾಯಿಸಿದೆ.

ಬಾಧ್ಯರು ಇಲ್ಲದ ಸ್ವತ್ತಿನ ವಿಚಾರವಾಗಿ ಪೋಲೀಸಿನವರ ಕೆಲಸ.

53. ತಮಗೆ ದೊರೆತ ಅಥವಾ ತಮ್ಮ ವಶಮಾಡಲ್ಪಟ್ಟ ಬಾಧ್ಯರಿಲ್ಲದ ಎಲ್ಲಾ ಸ್ವತ್ತನ್ನು ಪೋಲೀಸಿನವರು ಸ್ವಾಧೀನಕ್ಕೆ ತೆಗೆದುಕೊಂಡು, ಕೂಡಲೆ ಸ್ಥಳೀಯ ನ್ಯಾಯಾಧಿಕಾರವುಳ್ಳ ಮಾಜಿಸ್ಟ್ರೇಟಿಗೆ ತಿಳಿಸತಕ್ಕದ್ದು, ಆ ಮಾಜಿಸ್ಟ್ರೇಟು ಆ ಸ್ವತ್ತು ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡಿನ 523ನೆ ಪ್ರಕರಣಕ್ಕೆ ಒಳಪಡುವ ಸ್ವತ್ತಾಗಿದ್ದರೆ ಹೇಗೋ ಹಾಗೆ ಆ ಸ್ವತ್ತಿನ ವಿಷಯದಲ್ಲಿ ನಡೆಸತಕ್ಕದ್ದು.

ಬೊಂಬಾಯಿ-1890ರ 4 ಪ್ರ. 60.

ಮೇಲ್ಪಟ್ಟ ಪೋಲೀಸು ಆಫಿಸರು ತನಗೆ ಕೀಳ್ಪಟ್ಟವನಿಗೆ ನೇಮಕವಾದ ಕೆಲಸಗಳು ಮುಂತಾದುದನ್ನು ತಾನೇ ಮಾಡಬಹುದು.

54. ಕಾನ್ಸ್ಟೆಬಲಿನ ಸ್ಥಾನಕ್ಕೆ ಮೇಲ್ಪಟ್ಟ ಪೋಲೀಸು ಆಫಿಸರು ನ್ಯಾಯದ (ಕಾನೂನಿನ) ಮೇರೆಗೆ ಅಥವಾ ನ್ಯಾಯವಾದ ಅಪ್ಪಣೆಯ ಮೇರೆಗೆ ತನ್ನ ಕೈಕೆಳಗಿನ ಯಾವ ಆಫಿಸರಿಗಾದರೂ ನೇಮಕವಾದ ಯಾವ ಕೆಲಸವನ್ನಾದರೂ ಮಾಡಬಹುದು ; ಮತ್ತು, ಅಂಥಾ ಕೈ ಕೆಳಗಿನವನಿಗೆ ನೇಮಕವಾದ ಯಾವುದಾದರೂ ಕೆಲಸದ ವಿಷಯದಲ್ಲಿ, ಮೇಲ್ಪಟ್ಟವನು ತನಗೆ ಅಗತ್ಯ ತೋರತಕ್ಕ ಸಂದರ್ಭದಲ್ಲಿ, ಅಂಥಾ ಕೈ ಕೆಳಗಿನವನ ಯಾವ ಕಾರ್ಯಕ್ಕಾದರೂ ತನ್ನ ಸ್ವಂತ ಕಾರ್ಯದಿಂದ ಅಥವಾ ತನ್ನ ಅಪ್ಪಣೆಯಂತೆ ಅಥವಾ ಅಧಿಕಾರದಂತೆ ನ್ಯಾಯವಾಗಿ ನಡೆದುಕೊಳ್ಳುವ ಯಾವ ಇತರ ಮನುಷ್ಯನ ಕಾರ್ಯದಿಂದಾದರೂ ಸಹಾಯ ಮಾಡಬಹುದು, ಅವನ ಕಾರ್ಯಕ್ಕೆ ತನ್ನ ಕಾರ್ಯವನ್ನು ಸೇರಿಸಬಹುದು, ಅವನ ಕಾರ್ಯವನ್ನು ತನ್ನ ಕಾರ್ಯದಿಂದ ತೆಗೆದುಹಾಕಬಹುದು, ಅಥವಾ ಅವನ ಕಾರ್ಯವನ್ನು ತಪ್ಪಿಸಬಹುದು.

6ನೆ ಅಧ್ಯಾಯ.—ತಪ್ಪಿತಗಳು ಮತ್ತು ಶಿಕ್ಷೆಗಳು.

ಬೊಂಬಾಯಿ-1890ರ 4 ಪ್ರ. 61.

ಬೀದಿಯಲ್ಲಿ ನಡೆಯುವ ಕೆಲವು ತಪ್ಪಿತಗಳಿಗಾಗಿ ಮತ್ತು ಹೇಸಿಗೆಗಳಿಗಾಗಿ ಶಿಕ್ಷೆ.

55. ಈ ಪ್ರಕರಣವನ್ನು, ಅಥವಾ ಅದರ ಪೈಕಿ ಯಾವುದಾದರೂ ಭಾಗವನ್ನು ಪ್ರಕಟನೆಯ ಮೂಲಕವಾಗಿ ಸರಕಾರದವರು ಎಲ್ಲಿಗೆ ವ್ಯಾಪಿಸುವಂತೆ ಆಗಿಂದಾಗ್ಗೆ ಮಾಡುತ್ತಾರೆಯೊ ಆ ಯಾವುದಾದರೂ ಸ್ಥಳೀಯ ಪ್ರದೇಶದಲ್ಲಿ, ಯಾವನಾದರೂ ಅದಕ್ಕೆ ವಿರೋಧವಾಗಿ—

ಕತ್ತಲು ರಾತ್ರಿಗಳಲ್ಲಿ ಬೆಳಕಿಲ್ಲದೆ ಗಾಡಿಯನ್ನು ಹೊಡೆದುಕೊಂಡು ಹೋಗೋಣ.

(a) ಸೂರ್ಯಾಸ್ತಮಯದನಂತರ ಮುಕ್ಕಾಲು ಘಂಟೆಗೂ ಸೂರ್ಯೋದಯಾತ್ಪೂರ್ವ ಒಂದು ಘಂಟೆಗೂ ಮಧ್ಯೆ ಯಾವವೇಳೆಯಲ್ಲಾಗಲಿ ಯಾವ ತರದ ವಾಹನವನ್ನಾದರೂ, ಸಾಕಾದಷ್ಟು ಬೆಳಕು ಅಥವಾ ಬೆಳಕುಗಳಿಲ್ಲದೆ, ಅಂಥಾ ಬೆಳಕನ್ನು ಅನವಶ್ಯಕ ಪಡಿಸುವುದಕ್ಕೆ ಸಾಕಾದಷ್ಟು ಬೆಳದಿಂಗಳು ಇರುವಾಗ ಹೊರತು ನ್ಯಾಯವಾದ ಕಾರಣವಿಲ್ಲದೆ ಯಾವ ಬೀದಿಯ ಮೇಲೆಯಾದರೂ ಹೊಡದುಕೊಂಡು ಹೋದರೆ, ಅಥವಾ ಯಾವ ಬೀದಿಯಲ್ಲಿ ಆದರೂ ನಿಲ್ಲಿಸಿಕೊಂಡಿದ್ದರೆ ;

ಮಾರ್ಗದ ನಿಬಂಧನೆಯನ್ನು ಅಲಕ್ಷ್ಯ ಮಾಡೋಣ.

(b) ನ್ಯಾಯವಾದ ಕಾರಣವಿಲ್ಲದೆ ರಸ್ತೆಯ ಎಡಪಾರ್ಶ್ವದಲ್ಲಲ್ಲದೆ ಅನ್ಯಥಾ ಮತ್ತು ಸರ್ಕಾರದವರು ಪ್ರಕಟನೆಯ ಮೂಲಕ ವಿಧಾಯಕ ಮಾಡಬಹುದಾದುದಕ್ಕಿಂತ ಎಷ್ಟಾದರೂ ಹೆಚ್ಚು ತ್ವರೆಯಲ್ಲಿ ಯಾವುದಾದರೂ ವಾಹನವನ್ನು ಹೊಡೆದುಕೊಂಡು ಹೋದರೆ, ಎಳೆದುಕೊಂಡು ಹೋದರೆ, ಅಥವಾ ತಳ್ಳಿಕೊಂಡು ಹೋದರೆ ಅಥವಾ ರಸ್ತೆಯ ಬಲಪಾರ್ಶ್ವದಲ್ಲಿ ಹೊರತು ಯಾವುದಾದರೂ ವಾಹನವನ್ನು ದಾಟಿಹೋದರೆ ;

ಸಾಕಾದಷ್ಟು ಕಾವಲಿಲ್ಲದೆ ದನಕರ ಮುಂತಾದುವನ್ನು ಬಿಡೋಣ.

(c) ಯಾವ ಮೃಗವನ್ನಾಗಲಿ ವಾಹನವನ್ನಾಗಲಿ ಸಾಕಾದಷ್ಟು ಕಾವಲಿಲ್ಲದೆ ಅಥವಾ ಭದ್ರಪಡಿಸದೆ ಯಾವ ಬೀದಿಯಲ್ಲಾದರೂ ಬಿಟ್ಟರೆ ;

ಮೃಗಗಳಿಂದ ತಡೆಯನ್ನು ಅಥವಾ ಕೆಡಕನ್ನು ಆಗಲೀಸೋಣ;

(d) ಆ ಬಗ್ಗೆಗೆ ಡಿಸ್ಟ್ರಿಕ್ಟು ಮಾಜಿಸ್ಟ್ರೇಟು ಮಾಡಿ ಪ್ರಕಟಿಸಿರುವ ಯಾವ ಕಟ್ಟಳೆಗಾದರೂ ವಿರೋಧವಾಗಿ, ಯಾವುದಾದರೂ ಮೃಗವನ್ನು ಅಥವಾ ವಾಹನವನ್ನು ಹೊಡೆದುಕೊಂಡು ಹೋಗೋಣದರಲ್ಲಿ, ನಿರ್ವಹಿಸುವುದರಲ್ಲಿ ಅಥವಾ ಜೋಕೆ ಮಾಡುವುದರಲ್ಲಿ ಯಾವ ಕೆಟ್ಟ ನಡತೆಯಿಂದಾಗಲಿ, ಅಸಡ್ಡೆಯಿಂದ ಅಥವಾ ತೊಂದರೆ ಪಡಿಸುವದರಿಂದಾಗಲಿ ಯಾವ ಬೀದಿಯಲ್ಲಾದರೂ ತಡೆಯನ್ನು, ಹಾನಿಯನ್ನು, ಅಪಾಯವನ್ನು ಅಥವಾ ಗಾಬರಿ

ಯನ್ನುಂಟುಮಾಡಿದರೆ, ಅಥವಾ ಕೆಡಕನ್ನು ಉಂಟುಮಾಡಿದರೆ ಅಥವಾ ಬೀದಿಯಲ್ಲಿ ಮರಮುಟ್ಟುಗಳನ್ನು, ಗಳುಗಳನ್ನು ಅಥವಾ ಇತರ ಬಹುಭಾರವಾದ ವಸ್ತುಗಳನ್ನು ಹೇರಿರುವ ಯಾವ ವಾಹನವನ್ನು ಅಥವಾ ಮೃಗವನ್ನಾದರೂ ಹೊಡೆದುಕೊಂಡು ಹೋದರೆ ;

ಬಾಡಿಗೆಗೆ ಅಥವಾ ಮಾರಾಟಕ್ಕೆ ಮೃಗವನ್ನು ತೋರಿಸೋಣ ಮುಂತಾದುದು ;

(*e*) ವ್ಯಾಪಾರಕ್ಕೆ ವಿಶೇಷ ಕುಂದಕವಾಗುವಂತೆ ಅಥವಾ ನಿವಾಸಿಗಳಿಗೆ ಅಥವಾ ಸರ್ವಜನರಿಗೆ ವಿಶೇಷ ಕಿರಿಕಿರಿಯಾಗುವಂತೆ ಯಾವ ಬೀದಿಯಲ್ಲಾದರೂ ಯಾವ ಮೃಗವನ್ನಾಗಲಿ ವಾಹನವನ್ನಾಗಲಿ ಬಾಡಿಗೆಗೆ ಅಥವಾ ಕ್ರಯಕ್ಕೆ ಎಂದು ಹೊರಗೆ ಇಟ್ಟರೆ, ಯಾವುದಾದರೂ ಮನೆಸಾಮಾನನ್ನು ಅಥವಾ ವಾಹನವನ್ನು ನಿರ್ಮಲಪಡಿಸಿದರೆ, ಅಥವಾ ಯಾವ ಕುದುರೆಯನ್ನಾದರೂ ಅಥವಾ ಇತರ ಮೃಗವನ್ನಾದರೂ ಶುಚಿಮಾಡಿದರೆ, ವ್ಯಾಯಾಕ್ಕಿದರೆ, ಕಲಿಸಿದರೆ, ಅಥವಾ ಸಾಧುಮಾಡಿದರೆ, ಅಥವಾ ಒಂದು ಅಪಾಯದ ಸಂದರ್ಭದಲ್ಲಿ (ಅದು ಸಂಭವಿಸಿದ ಸ್ಥಳದಲ್ಲೇ ನೆಟ್ಟಗೆ ಮಾಡೋಣ ಅಗತ್ಯವಾದಾಗ ಹೊರತು;) ಯಾವ ವಾಹನವನ್ನಾದರೂ ಅಥವಾ ಒಂದು ವಾಹನದ ಯಾವ ಭಾಗವನ್ನಾದರೂ ಮಾಡಿದರೆ ಅಥವಾ ಸರಿಮಾಡಿದರೆ, ಅಥವಾ ಅಲ್ಲಿ ಯಾವ ಕೈಗಾರಿಕೆ ಕೆಲಸವನ್ನು ಅಥವಾ ಶಸ್ತ್ರದ ಕಾರ್ಯವನ್ನು ನಡೆಸಿದರೆ ;

ಬೀದಿಯಲ್ಲಿ ಯಾವ ತಡೆಯನ್ನಾದರೂ ಉಂಟು ಮಾಡೋಣ ;

(*f*) (i) ಭರ್ತಿಯನ್ನು ಹೇರಬೇಕಾದ ಅಥವಾ ಇಳಿಸಬೇಕಾದ ಅಥವಾ ಮಾರ್ಗಸ್ಥರನ್ನು ಹತ್ತಿಸಿಕೊಳ್ಳಬೇಕಾದ ಅಥವಾ ಇಳಿಸ ಬೇಕಾದ ಯಾವ ಮೃಗವನ್ನು ಅಥವಾ ವಾಹನವನ್ನಾಗಲಿ ಅಂಥಾ ಕೆಲಸಕ್ಕಾಗಿ ಅಗತ್ಯವಿರಬಹುದಾದ ಕಾಲಕ್ಕಿಂತ ಹೆಚ್ಚಾಗಿ ಬೀದಿಯಲ್ಲಿ ಇರಲು ಅಥವಾ ನಿಲ್ಲಲು ಅವಕಾಶ ಕೊಡೋಣದರಿಂದ, ಅಥವಾ ಅಲ್ಲಿ ಯಾವ ವಾಹನವನ್ನಾದರೂ ನಿಂತಹಾಗೆ ಅಥವಾ ಯಾವ ದನಕರವನ್ನಾದರೂ ಕಟ್ಟಿಹಾಕಿದ ಹಾಗೆ ಬಿಡೋಣದರಿಂದ, ಅಥವಾ ಒಂದು ಬೀದಿಯ ಯಾವ ಭಾಗವನ್ನಾದರೂ ವಾಹನಗಳಿಗೆ ಅಥವಾ ದನಕರಗಳಿಗೆ ನಿಲ್ಲುವ ಸ್ಥಳವನ್ನಾಗಿ ಉಪಯೋಗಿಸೋಣದರಿಂದ, ಅಥವಾ ಅನ್ಯಾಯವಾದ ಕಾಲವಿಳಂಬ ಪರ್ಯಂತ, ಒಂದು ಬೀದಿಯಲ್ಲಿ ಅಥವಾ ಬೀದಿಯ ಮೇಲೆ ಯಾವ ಪೆಟ್ಟಿಗೆಯನ್ನು, ಗಟ್ಟಿಯನ್ನು, ಕಟ್ಟನ್ನು ಆಗಲಿ ಅಥವಾ ಇತರ ಯಾವ ವಸ್ತುವನ್ನಾದರೂ ಬಿಡೋಣದರಿಂದ ತಡೆಯನ್ನು ಉಂಟುಮಾಡಿದರೆ ;

(ii) ಅಥವಾ ಡಿಸ್ಟ್ರಿಕ್ಟು ಮಾಜಿಸ್ಟ್ರೇಟು ಮಾಡಿ ಪ್ರಕಟಿಸಿದ ಯಾವುದಾದರೂ ನಿಬಂಧನೆಗೆ ವಿರೋಧವಾಗಿ ಯಾವ ಬೈಲಂಗಡಿಯಲ್ಲಿ ಅಥವಾ ಮೇಲೆ, ಮರ, ಮುಂತಾದುದರಿಂದ ಕಟ್ಟಿದ ಕೊಂಬೆಕಾಲುದವರೆಗಿನ ಅಂಗಡಿಯಲ್ಲಿ, ಹಲಗೆಯಲ್ಲಿ, ಪೀಪಾಯಿನಲ್ಲಿ, ಗೂಡೆಯಲ್ಲಿ ಅಥವಾ ಮೇಲೆ, ಅಥವಾ ಇನ್ನು ಯಾವ ಬಗೆಯಲ್ಲಿ ಆದರೂ ಸರಿಯೆ, ಮಾರಾಟಕ್ಕೆ ಯಾವ ಪದಾರ್ಥವನ್ನಾದರೂ ಹೊರಗೆ ಇಡುವುದರಿಂದ ಅಥವಾ ತೋರಿಸುವುದರಿಂದ ತಡೆಯನ್ನು ಉಂಟುಮಾಡಿದರೆ ;

ಕಾಲುದಾರಿಗೆ ತಡೆ ಮಾಡೋಣ ;

(*g*) ಯಾವ ಕಾಲುದಾರಿಯ ಮೇಲಾದರೂ ತಡೆಯನ್ನು ಉಂಟುಮಾಡಿದರೆ ಅಥವಾ ಅದರ ಮೇಲೆ ಯಾವ ಮೃಗವನ್ನಾದರೂ ಹೊಡೆದುಕೊಂಡುಹೋದರೆ, ಸವಾರಿ ಮಾಡಿದರೆ ಅಥವಾ ಬಿಟ್ಟರೆ ಅಥವಾ ಆ ಕಾಲುದಾರಿಯ ಮೇಲೆ ಯಾವ ವಾಹನವನ್ನಾದರೂ ಹೊಡೆದುಕೊಂಡು ಹೋದರೆ ಅಥವಾ ಎಳೆದುಕೊಂಡು ಹೋದರೆ ಅಥವಾ ತಳ್ಳಿಕೊಂಡು ಹೋದರೆ ;

ನಕಲಿಯು, ವಾದ್ಯದೊಂದಿಗೆ ಸೇರಿದ ಅಥವಾ ಇತರ ನಾಟಕಗಳನ್ನು ತೋರಿಸೋಣ ಮುಂತಾದುದು ;

(*h*) ಡಿಸ್ಟ್ರಿಕ್ಟಿನ ಮಾಜಿಸ್ಟ್ರೇಟು ಮಾಡಿ ಪ್ರಕಟಿಸಿರುವ ಯಾವ ಕಟ್ಟಳೆಗಾದರೂ ವಿರೋಧವಾಗಿ, ಗುಂಪುಗಳಿಗೆ ಮೋಹ ಉಂಟುಮಾಡುವಂಥಾ ಸ್ವಭಾವದ ಯಾವುದಾದರೂ ನಕಲಿಯು, ವಾದ್ಯ ಸಮೇತವಾದ ಅಥವಾ ಇತರ ನಾಟಕಗಳನ್ನು ತೋರ್ಪಡಿಸಿದರೆ, ಅಥವಾ ಮಾರ್ಗಸ್ಥರಿಗೆ ತಡೆಯನ್ನು ಅಥವಾ ಬೀದಿಯಲ್ಲಿ ವಾಸಿಸುವವರಿಗೆ ಕಿರಿಕಿರಿಯನ್ನು ಉಂಟುಮಾಡಬಹುದಾದ ಗಾತ್ರವಾದ ಪ್ರಸಿದ್ಧ ಪತ್ರಿಕೆಗಳನ್ನು ಚಿತ್ತಾರಗಳನ್ನು, ಪ್ರತಿಮೆಗಳನ್ನು ಅಥವಾ ಚಿಹ್ನೆಗಳನ್ನು ಯಾವ ಬೀದಿಯಲ್ಲಾದರೂ ಒಯ್ದರೆ ಅಥವಾ ಮಡಗಿದರೆ ;

ಬೀದಿಯಲ್ಲಿ ಜೂಜಾಡೋಣ ;

(*i*) ಜೂಜಾಡುವ ಅಥವಾ ಪಂತ ಕಟ್ಟುವ ಕೆಲಸಕ್ಕಾಗಿ ಬೀದಿಯಲ್ಲಿ ಗುಂಪುಕೂಡಿರುವ ಇತರರೊಂದಿಗೆ ಅಥವಾ ಯಾವುದಾದರೂ ಕೂಟದೊಂದಿಗೆ ಸೇರಿದರೆ ;

ಬಹಿರಂಗವಾದ ಬೀದಿಗಳಲ್ಲಿ ಅಥವಾ ಅವುಗಳ ಹತ್ತಿರದಲ್ಲಿ ಬೇಸರಿಕೆಕರವಾದ ಕೃತ್ಯಗಳನ್ನು ಮಾಡೋಣ ;

(*j*) (i) ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟನ ಅಥವಾ ಈ ಬಗ್ಗಾಗಿ ನ್ಯಾಯವಾದ ಅಧಿಕಾರವನ್ನು ಹೊಂದಿರುವ ಇತರ ಯಾವನಾದರೂ ಮನುಷ್ಯನ ಅಪ್ಪಣೆಯಿಂದ ಆ ಕೆಲಸಕ್ಕಾಗಿ ಪ್ರತ್ಯೇಕವಾಗಿ ಇಡಲ್ಪಟ್ಟಿರುವ ಸ್ಥಳದಲ್ಲಿ ಹೊರತು ಯಾವ ಮೃಗವನ್ನಾದರೂ ಕೊಂದರೆ, ಶವವನ್ನು ಅಥವಾ ಮೃಗದ ತೊಗಲನ್ನು ತೊಳೆದರೆ ;

(ii) ನೆರೆಹುಲ್ಲಿ ವಾಸಮಾಡುವವರಿಗೆ ಅಥವಾ ಮಾರ್ಗಸ್ಥರಿಗೆ ಕಿರಿಕಿರಿ ಉಂಟಾಗುವಹಾಗೆ ಜಲಮಲವಿಸರ್ಜನೆಯನ್ನು ಮಾಡಿದರೆ, ಅಥವಾ ಒಂದು ಮಗುವಿನಿಂದ ಆ ವಿಸರ್ಜನೆಯನ್ನು ಮಾಡಿಸಿದರೆ, ಒಂದು ಬೀದಿಯಲ್ಲಿ ಅಥವಾ ಅದಕೆ ಸಮೀಪವಾಗಿ ಮತ್ತು ಅದಕ್ಕೆ ಕಾಣಿಸುವ ಹಾಗೆ ಸ್ನಾನವನ್ನು ಮಾಡಿದರೆ ಅಥವಾ ತನ್ನ ಮೈಯನ್ನು ತೊಳೆದರೆ ;

ಕುದುರೆಗಳನ್ನು ಬಿಟ್ಟುಬಿಡುವುದು ಮುಂತಾದ್ದುದು ಕ್ರೂರವಾದ ನಾಯಿಗಳನ್ನು ತಡೆಯಿಲ್ಲದೆ ಇರಲು ಅಸ್ಪದ ಕೊಡೋಣ ;

(*k*) ಜನಗಳಿಗೆ ಅಪಾಯವನ್ನು, ಹಾನಿಯನ್ನು ಗಾಬರಿಯನ್ನು ಅಥವಾ ಕಿರಿಕಿರಿಯನ್ನು ಉಂಟುಮಾಡುವಂತೆ ಯಾವ ಕುದುರೆಯನ್ನಾಗಲಿ ಅಥವಾ ಇತರ ಮೃಗವನ್ನಾಗಲಿ ಉದಾಸೀನವಾಗಿ ಕಟ್ಟದೆ ಬಿಟ್ಟುಬಿಟ್ಟರೆ, ಅಥವಾ ಬಾಯಿಕಟ್ಟಿಲ್ಲದೆ ಸ್ವೇಚ್ಛೆಯಾಗಿರುವಂತೆ ಕ್ರೂರವಾದ ನಾಯಿಗೆ ಅಸ್ಪದ ಕೊಟ್ಟರೆ, ಅಥವಾ ಯಾವ ಮನುಷ್ಯನ ಅಥವಾ ಮೃಗದ ಮೇಲೆ ಬೀಳುವಂತೆ ಅಥವಾ ಅವರನ್ನು ಪೀಡಿಸುವಂತೆ, ಅಥವಾ ಭಯದಲ್ಲಿರಿಸುವಂತೆ ನಾಯಿಯನ್ನು ಅಥವಾ ಇತರ ಮೃಗವನ್ನು ಹಚ್ಚಿದರೆ ಅಥವಾ ಮುಂದು ನೂಕಿದರೆ ;

ಆ ಕೆಲಸಗಳಿಗೆ ಎಂದು ಪ್ರತ್ಯೇಕವಾಗಿ ವಿಂಗಡವಾಗದೆ ಇರುವ ಸ್ಥಳಗಳಲ್ಲಿ ಸ್ನಾನ ಮಾಡೋಣ ಅಥವಾ ತೊಳೆಯೋಣ ;

(*l*) ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟನ ಅಥವಾ ಆ ಬಗ್ಗಾಗಿ ನ್ಯಾಯವಾದ ಅಧಿಕಾರವನ್ನು ಉಳ್ಳ ಮತ್ತೆ ಯಾರಾದರೂ ಮನುಷ್ಯನ ಅಜ್ಞೆ ಪ್ರಕಾರ ಅಂಥಾ ಕೆಲಸಕ್ಕಾಗಿ ಪ್ರತ್ಯೇಕಿಸಿ ಇಡದೆ ಇರುವ ಸಾರ್ವಜನಿಕವಾದ ಬಾವಿ, ಕೆರೆ, ಅಥವಾ ಕೊಳದಲ್ಲಿ ಅಥವಾ ಅದರ ಮಗ್ಗುಲಲ್ಲಿ, ಅಥವಾ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟನ ಅಥವಾ ಆ ಬಗ್ಗಾಗಿ ನ್ಯಾಯವಾದ ಅಧಿಕಾರವನ್ನು ಉಳ್ಳ ಇತರ ಮನುಷ್ಯನ ಅಪ್ಪಣೆ ಮೇರೆಗೆ ಎಲ್ಲಿ ಹಾಗೆ ಸ್ನಾನಮಾಡೋಣ ಅಥವಾ ತೊಳೆಯೋಣ ನಿರೋಧಿಸಲ್ಪಟ್ಟಿದೆಯೋ ಅಂಥಾ ಯಾವುದಾದರೂ ಕೊಳದಲ್ಲಿ, ಹೊಂಡದಲ್ಲಿ, ಕಾಲುವೆಯಲ್ಲಿ, ನದಿಯ, ಹೊಳೆಯ, ನಾಲೆಯ ಅಥವಾ ನೀರು ಒದಗುವ ಇತರ ಮೂಲಸ್ಥಾನದ ಅಥವಾ ಸಾಹಿತ್ಯದ ಭಾಗದಲ್ಲಿ ಅಥವಾ ಅವುಗಳ ಪಾರ್ಶ್ವದಲ್ಲಿ ಸ್ನಾನಮಾಡಿದರೆ, ಅಥವಾ ತೊಳೆದರೆ ;

ಸಾರ್ವಜನಿಕವಾದ ಬಾವಿಗಳಲ್ಲಿ ನೀರನ್ನು ಕೆಡಿಸೋಣ ಮುಂತಾದುದು;

(*m*) ಯಾವಬಗ್ಗೆ ಮೇಲೆ ಹೇಳಿರುವಂತೆ ಅದನ್ನು ಪ್ರತ್ಯೇಕಿಸಿ ಇಟ್ಟಿರುತ್ತದೆಯೊ ಅಂಥಾ ಯಾವ ಕೆಲಸಕ್ಕಾದರೂ ಅದನ್ನು ಕಮ್ಮಿ ಯೋಗ್ಯವಾಗಿ ಮಾಡುವಂತೆ, ಯಾವುದಾದರೂ ಸಾರ್ವಜನಿಕವಾದ ಬಾವಿ, ಕೆರೆ, ಕೊಳ, ಕುಂಟೆ, ಹೊಂಡ, ಕಾಲುವೆ, ಇವುಗಳಲ್ಲಿರುವ ಅಥವಾ ನದಿಯ, ಹೊಳೆಯ, ನಾಲೆಯ ಅಥವಾ ನೀರು ಒದಗುವ ಇತರ ಮೂಲಸ್ಥಾನದ ಅಥವಾ ಸಾಹಿತ್ಯದ ಭಾಗದಲ್ಲಿ ಇರುವ ನೀರನ್ನು ಕೆಡಿಸಿದರೆ, ಅಥವಾ ಕೆಡುವಂತೆ ಮಾಡಿಸಿದರೆ;

ಸ್ನಾನಮಾಡುವವರನ್ನು ಅಡ್ಡಿ ಮಾಡೋಣ ;

(*n*) ಮನಃಪೂರ್ವಕವಾಗಿ ಅಧಿಕಾರವಿಲ್ಲದೆ ಪ್ರವೇಶಿಸೋಣದರಿಂದ, ಅಥವಾ ಯಾವ ಬಗ್ಗಾಗಿ ಅದನ್ನು ಹಾಗೆ ಪ್ರತ್ಯೇಕಿಸಿ ಇಟ್ಟಿಲ್ಲವೋ ಅಂಥಾ ಯಾವ ಕಾರ್ಯಕ್ಕಾದರೂ ಅಂಥಾ ಸ್ಥಳವನ್ನು ಉಪಯೋಗಿಸೋಣದರಿಂದ, ಮೇಲೆ ಹೇಳಿರುವಂತೆ ಸ್ನಾನದ ಕೆಲಸಕ್ಕಾಗಿ ವಿಂಗಡಿಸಿ ಇಟ್ಟಿರುವ ಸ್ಥಳದಲ್ಲಿ ಸ್ನಾನಮಾಡುವ ಮನುಷ್ಯನನ್ನು ಅಟಂಕ ಪಡಿಸಿದರೆ, ಅಥವಾ ತೊಂದರೆ ಮಾಡಿದರೆ ;

ಬಹಿರಂಗದಲ್ಲಿ ನಾಚಿಕೆಗೆಟ್ಟು ನಡೆಯೋಣ;

(*o*) ಜನರು ಸುಳದಾಡುವ ಬೀದಿಯಲ್ಲಿ ಅಥವಾ ಸ್ಥಳದಲ್ಲಿ, ಅಥವಾ ಯಾವುದಾದರೂ ಸರಕಾರದ ಕಚೇರಿಯಲ್ಲಿ, ತನ್ನ ಶರೀರವನ್ನು ಮನಃಪೂರ್ವಕವಾಗಿ ಮತ್ತು ನಾಚಿಕೆಗೆಟ್ಟು ತೋರಿಸಿಕೊಂಡರೆ, ನಾಚಿಕೆಗೆಟ್ಟ ಭಾಷೆಯನ್ನು ಉಪಯೋಗಿಸಿದರೆ, ಅಥವಾ ನಾಚಿಕೆಗೆಟ್ಟು ಅಥವಾ ತುಂಟತನವಾಗಿ ಅಥವಾ ಅಸ್ತಾವ್ಯಸ್ತವಾದ ರೀತಿಯಲ್ಲಿ ನಡೆದರೆ;

ಮತ್ತೇರಿಸಿಕೊಂಡು ಬುದ್ಧಿಯಿಲ್ಲದೆ ಇರೋಣ ;

(*p*) ಜನರು ಸುಳಿದಾಡುವ ಬೀದಿಯಲ್ಲಿ ಅಥವಾ ಸ್ಥಳದಲ್ಲಿ ಮತ್ತೇರಿಸಿಕೊಂಡು ತನ್ನನ್ನು ತಾನು ಜೋಪಾನವಾಗಿ ನೋಡಿಕೊಳ್ಳಲು ಅಸಮರ್ಥನಾಗಿದ್ದರೆ ;

ಬೀದಿಗಳಲ್ಲಿ ಮಾರ್ಗಸ್ಥರನ್ನು ಅಡ್ಡೀ ಮಾಡೋಣ ಅಥವಾ ಅವರಿಗೆ ತೊಂದರೆಕೊಡೋಣ ;

(*q*) ಬೀದಿಯಲ್ಲಿ ಯಾವ ಮಾರ್ಗಸ್ಥನನ್ನಾದರೂ ಮನಃಪೂರ್ವಕವಾಗಿ ತಳ್ಳಿದರೆ, ಒತ್ತಿದರೆ, ನೂಕಾಡಿದರೆ ಅಥವಾ ಅಡ್ಡಗಟ್ಟಿದರೆ, ಅಥವಾ ಬಲಾತ್ಕಾರವಾದ ಚಲನೆಗಳಿಂದ, ಹೆದರಿಸುವ ಅಭಿನಯಗಳಿಂದ, ಅಂಕೆಇಲ್ಲದ ಶರೀರ ಸಂಬಂಧವಾದ ಕಿರಿಕಿರಿಯಿಂದ, ಅರಚುವುದರಿಂದ, ಕೇಕೆ ಹಾಕುವುದರಿಂದ, ಕುದುರೆಗಳನ್ನು ಅಥವಾ ದನಕರವನ್ನು ಮನಃಪೂರ್ವಕವಾಗಿ ಬೆದರಿಸುವುದರಿಂದ, ಅಥವಾ ಇತರ ವಿಧವಾಗಿ, ಜನಗಳ ನೆಮ್ಮದಿಯನ್ನು ಅಥವಾ ಆಯುಕಟ್ಟನ್ನು ತೊಂದರೆ ಮಾಡಿದರೆ ;

ಆವರಣದಲ್ಲಿರುವ ಮಾತುಗಳಿಗೆ ಮದರಾಸು–1888ರ 3 ಪ್ರ. 71. 19ನೆ ವಾಕ್ಯವನ್ನು ನೋಡುವುದು.

ನೆಮ್ಮದಿಯ ಭಂಗವನ್ನು ಎಬ್ಬಿಸಬೇಕೆಂಬ ಉದ್ದೇಶದಿಂದ ಕೆಟ್ಟನಡತೆ.

(*r*) ನೆಮ್ಮದಿಯ ಭಂಗವನ್ನು ಎಬ್ಬಿಸುವ ಅಭಿಪ್ರಾಯದೊಡನೆ ಅಥವಾ ಯಾವುದರಿಂದ ನೆಮ್ಮದಿಯ ಭಂಗವು ಉಂಟಾಗಬಹುದೋ ಅಂಥಾ ಯಾವುದಾದರೂ ಭಯಪಡಿಸುವ, ಬಯ್ಯುವ ಅಥವಾ ತಿರಸ್ಕಾರದ ಮಾತುಗಳನ್ನು ಅಥವಾ ನಡತೆಯನ್ನು ಯಾವ ಬೀದಿಯಲ್ಲಿ ಆದರೂ ಉಪಯೋಗಿಸಿದರೆ, (ಅಥವಾ ಯಾವುದಾದರೂ ನಾಚಿಕೆಗೆಟ್ಟ, ಭಯಪಡಿಸುವ, ಬಯ್ಯುವ ಅಥವಾ ತಿರಸ್ಕಾರದ ಮಾತುಗಳುಳ್ಳ ಯಾವುದಾದರೂ ಕಾಗದವನ್ನು ಅಥವಾ ನಕ್ಷೆಯನ್ನು ತಗುಲಹಾಕಿದರೆ ಅಥವಾ ಅಂಟಿಸಿದರೆ ಅಥವಾ ತೋರಿಸಿದರೆ) ;

ಬೇಡೋಣ ಮತ್ತು ಬೇಸರಿಕೆ ಗೊಳಿಸುವ ರೋಗಗಳನ್ನು ತೋರ್ಪಡಿಸೋಣ ;

(*s*) ಯಾವುದಾದರೂ ಬೀದಿಯಲ್ಲಿ ಅಥವಾ ಅದರ ಸಮೀಪದಲ್ಲಿ ಮತ್ತು ಬೀದಿಗೆ ಕಾಣುವಂತೆ, ಕಾಡುವ ರೀತಿಯಾಗಿ ತಿರಪಗಳನ್ನು ಬೇಡಿದರೆ, ಅಥವಾ ಔದಾರ್ಯವನ್ನು ಪ್ರೇರೇಪಿಸುವ ಉದ್ದೇಶದಿಂದ, ಯಾವುದಾದರೂ ಕುರೂಪವನ್ನು, ಅಥವಾ ರೋಗವನ್ನು ಅಥವಾ ಯಾವುದಾದರೂ ಅಸಹ್ಯಕರವಾದ ಹುಣ್ಣನ್ನು ಅಥವಾ ಗಾಯವನ್ನು ತೆರೆದು ತೋರಿಸಿದರೆ ಅಥವಾ ತೋರಿಸಿದರೆ ;

1859ರ 24ನೆ ಅಕ್ಟು ಪ್ರ. 48. ವಾಕ್ಯ (5)

ಬೀದಿಯೊಳಕ್ಕೆ ಕಸವನ್ನು ಬಿಸಾಡೋಣ;

(*t*) ಯಾವುದಾದರೂ ಬೀದಿಯಲ್ಲಿ ಯಾವುದಾದರೂ ಕಸವನ್ನು ಕೊಳೆಯನ್ನು ಕಸಕಡ್ಡಿಯನ್ನು ಅಥವಾ ಯಾವುದಾದರೂ ಕಲ್ಲುಗಳನ್ನು ಅಥವಾ ಮನೆಕಟ್ಟುವ ಪದಾರ್ಥಗಳನ್ನು ಬಿಸಾಟರೆ ಅಥವಾ ಇಟ್ಟರೆ, ಅಥವಾ, ಯಾವುದಾದರೂ ಬೀದಿಯೊಳಕ್ಕೆ ಯಾವುದಾದರೂ ಮನೆಯಿಂದ ಕಾರ್ಖಾನೆಯಿಂದ ತಿಪ್ಪೆಯಿಂದ ಅಥವಾ ಇಂಥವುಗಳಿಂದ ಯಾವುದಾದರೂ ಅಸಹ್ಯಕರವಾದ ಬೇಸರಿಕೆಗೊಳಿಸುವ ವಸ್ತುವು ಹರಿಯುವಂತೆ ಮಾಡಿದರೆ ;

1859ರ 24ನೆ ಅಕ್ಟು ಪ್ರ. 48. ವಾಕ್ಯ (8)

ಅಪಾಯಕರವಾದ ಸ್ಥಳಗಳನ್ನು ರಕ್ಷಿಸುವುದಕ್ಕೆ ಅಸಡ್ಡೆ ಮಾಡೋಣ ;

(*u*) ಯಾವುದಾದರೂ ಬಾವಿಗೆ ಕೆರೆಗೆ ಅಥವಾ ಇತರ ಅಪಾಯಕರವಾದ ಸ್ಥಳಕ್ಕೆ ಅಥವಾ ಕಟ್ಟಡಕ್ಕೆ ಬೇಲಿ ಹಾಕಲು ಅಥವಾ ಅವುಗಳನ್ನು ಕ್ರಮವಾಗಿ ರಕ್ಷಿಸಲು ಅಸಡ್ಡೆ ಮಾಡಿದರೆ ;

ಮದರಾಸು–1888ರ 3ನೆ ಅಕ್ಟು ಪ್ರ. 71. ವಾಕ್ಯ 16.

ಬಿಲ್ಲುಗಳನ್ನು ಅಂಟಿಸೋಣ ಅಥವಾ ಗೋಡೆಗಳನ್ನು ವಿರೂಪಮಾಡೋಣ ;

(*v*) ಒಡೆಯನ ಅಥವಾ ಅನುಭವಸ್ಥನ ಅನುಮತಿ ಇಲ್ಲದೆ ಯಾವುದಾದರೂ ಕಟ್ಟಡದಮೇಲೆ, ಗೋಡೆಯಮೇಲೆ, ಅಥವಾ ಬೇಲಿಯಮೇಲೆ ಯಾವುದಾದರೂ ಬಿಲ್ಲನ್ನು, ನೋಟಿಸನ್ನು, ಅಥವಾ ಇತರ ಕಾಗದವನ್ನು ಅಂಟಿಸಿದರೆ ಅಥವಾ ಅಂಟಿಸುವಂತೆ ಮಾಡಿದರೆ ಅಥವಾ ಅಂಥಾ ಯಾವ ಕಟ್ಟಡದ, ಗೋಡೆಯ ಅಥವಾ ಬೇಲಿಯ ಮೇಲಾದರೂ ಬರೆದರೆ ಅಥವಾ ಗುರುತು ಮಾಡಿದರೆ ಅಥವಾ ಅವುಗಳನ್ನು ವಿರೂಪಮಾಡಿದರೆ ;

ಮದರಾಸು–1888ರ 3ನೆ ಅಕ್ಟು ಪ್ರ. 71. ವಾಕ್ಯ (20)

ಸೂಳೆಗಾರಿಕೆಗೆ ಬೇಡೋಣ ;

(*w*) ಸೂಳೆಗಾರಿಕೆಯ ಕೆಲಸಕ್ಕಾಗಿ ಯಾರಾದರೂ ಮಾರ್ಗಸ್ಥರನ್ನು ಬೇಡಿದರೆ ಅಥವಾ ಉಪದ್ರವ ಮಾಡಿದರೆ ;

ಅಂಥಾವನಿಗೆ ಐವತ್ತು ರೂಪಾಯಿಗಳ ವರೆಗೆ ಆಗಬಹುದಾದ ಅಪರಾಧದಿಂದ ಶಿಕ್ಷೆ ಆಗತಕ್ಕದ್ದು ; ಆದರೆ ಇಂಡಿಯನ್ ಪೀನಲ್ ಕೋಡಿನ 67ನೆ ಪ್ರಕರಣದಲ್ಲಿ ಏನು ಅಡಗಿದ್ದಾಗ್ಯೂ ಸರಿಯೆ, ಅಂಥಾ ಅಪರಾಧವನ್ನು ಕೊಡುವುದಕ್ಕೆ ತಪ್ಪಿದಲ್ಲಿ ಸೆರೆಯಲ್ಲಿಡೋಣವು ಎಂಟು ದಿವಸಗಳಿಗೆ ಮೀರಕೂಡದು.

ಬೊಂಬಾಯಿ 1890ರ 4 ಪ್ರ. 62

ಮೃಗಗಳಿಗೆ ಹಿಂಸೆ ಗಾಗಿ ಶಿಕ್ಷೆ.

56. (1) ಯಾವ ಮೃಗವನ್ನಾದರೂ ಯಾವನಾಗಲಿ ಕ್ರೂರವಾಗಿ ಹೊಡೆದರೆ ಮುಳ್ಳಿನಿಂದ ತಿವಿದರೆ, ಅದರ ಬಲ ಮೀರಿ ಕೆಲಸ ಮಾಡಿಸಿದರೆ, ನಿರ್ದಯವಾಗಿ ನಡೆಸಿದರೆ, ಯಾತನೆ ಪಡಿಸಿದರೆ, ಅಥವಾ ಕ್ರೂರವಾಗಿ ಹೊಡೆಯುವಂತೆ, ಮುಳ್ಳಿನಿಂದ ಚುಚ್ಚುವಂತೆ, ಬಲಮೀರಿ ಕೆಲಸ ಮಾಡುವಂತೆ, ನಿರ್ದಯವಾಗಿ ನಡೆಸುವಂತೆ, ಅಥವಾ ಯಾತನೆ ಪಡಿಸುವಂತೆ ಮಾಡಿಸಿದರೆ ಅಥವಾ ಒಪ್ಪಿಗೆಕೊಟ್ಟರೆ, ಅಂಥಾವನಿಗೆ ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಸೆರೆಯಿಂದ, ಅಥವಾ ಒಂದುನೂರು ರೂಪಾಯಿನ ತನಕ ಆಗಬಹುದಾದ ಅಪರಾಧದಿಂದ ಅಥವಾ ಇವೆರಡರಿಂದಲೂ ಶಿಕ್ಷೆಯಾಗತಕ್ಕದ್ದು.

(2) ಸರಕಾರದಿಂದ ಆ ಕೆಲಸಕ್ಕಾಗಿ ಅಂಥಾ ಮಾಜಿಸ್ಟ್ರೇಟಿಗೆ ವಿಶೇಷತಃ ನ್ಯಾಯಾಧಿಕಾರವು ವಹಿಸಲ್ಪಟ್ಟ ಹೊರತು, ಈ ಪ್ರಕರಣ ಪ್ರಕಾರ ಹುಟ್ಟುವ ವ್ಯವಹಾರಗಳಲ್ಲಿ ಎರಡನೆ ತರಗತಿಗಿಂತ ಕೆಳಗಿನ ಸ್ಥಾನದ ಮಾಜಿಸ್ಟ್ರೇಟು ನ್ಯಾಯಾಧಿಕಾರವನ್ನು ನಡೆಸತಕ್ಕದ್ದಲ್ಲ.

1861ರ 5ನೆ ಆಕ್ಟು ಪ್ರ. 19 ಸ್ವಲ್ಪ ಬದಲಾಯಿಸಿದೆ.

ವಿಶೇಷ ಪೊಲೀಸು ಆಫಿಸರಾಗಿ ಚಾಕರಿ ಮಾಡಲು ನಿರಾಕರಿಸುವುದಕ್ಕಾಗಿ ದಂಡನೆ.

57. 17ನೆ ಪ್ರಕರಣದಂತೆ ಒಬ್ಬ ವಿಶೇಷ ಪೊಲೀಸು ಆಫಿಸರಾಗಿ ನೇಮಕವಾದ ಯಾವ ಮನುಷ್ಯನಾದರೂ ಸಾಕಾದಷ್ಟು ಕಾರಣವಿಲ್ಲದೆ, ಅಂಥಾ ಪೊಲೀಸು ಆಫಿಸರಾಗಿ ಚಾಕರಿ ಮಾಡಲು ಅಥವಾ ಅವನ ಕೆಲಸಳನ್ನು ನಡೆಸುವುದಕ್ಕಾಗಿ ಅವನಿಗೆ ಕೊಡಲ್ಪಡಬಹುದಾದಂಥಾ ನ್ಯಾಯವಾದ ಅಪ್ಪಣೆಗೆ ಅಥವಾ ಅನುಜ್ಞೆಗೆ ವಿಧೇಯನಾಗಿ ನಡೆದುಕೊಳ್ಳಲು ಅಸಡ್ಡೆ ಮಾಡಿದರೆ ಅಥವಾ ನಿರಾಕರಿಸಿದರೆ, ಅವನಿಗೆ ಐವತ್ತು ರೂಪಾಯಿಗಳ ವರೆಗೆ ಆಗಬಹುದಾದ ಅಪರಾಧದಿಂದ ಶಿಕ್ಷೆಯಾಗತಕ್ಕದ್ದು.

ಬೊಂಬಾಯಿ 1890ರ 4. ಪ್ರ. 63

ಪೀಡಿಸುವ ರೀತಿಯಲ್ಲಿ ಪೊಲೀಸಿನವರು ಶೋಧನೆ, ಹಿಡಿತ ಮುಂತಾದುದನ್ನು ಮಾಡುವುದಕ್ಕಾಗಿ ದಂಡನೆ.

58. ಯಾವ ಪೊಲೀಸು ಆಫಿಸರಾದರೂ—

(*a*) ನ್ಯಾಯವಾದ ಅಧಿಕಾರವಿಲ್ಲದೆ ಅಥವಾ ಯುಕ್ತವಾದ ಕಾರಣವಿಲ್ಲದೆ ಯಾವ ಕಟ್ಟಡವನ್ನಾಗಲಿ, ದೋಣಿಯನ್ನಾಗಲಿ, ಗುಡಾರವನ್ನಾಗಲಿ ಅಥವಾ ಸ್ಥಳವನ್ನಾಗಲಿ ಪ್ರವೇಶಿಸಿದರೆ ಅಥವಾ ಶೋಧಿಸಿದರೆ ಅಥವಾ ಪ್ರವೇಶಿಸಲ್ಪಡುವಂತೆ ಅಥವಾ ಶೋಧಿಸಲ್ಪಡುವಂತೆ ಮಾಡಿಸಿದರೆ; ಅಥವಾ

(*b*) ಪೀಡಿಸುವುದಕ್ಕಾಗಿ ಮತ್ತು ಅನವಶ್ಯಕವಾಗಿ ಯಾವ ಮನುಷ್ಯನದಾದರೂ ಸ್ವತ್ತನ್ನು ಹಿಡಿದರೆ; ಅಥವಾ

(*c*) ಪೀಡಿಸುವ ಬಗ್ಗೆಗೆ ಮತ್ತು ಅನವಶ್ಯಕವಾಗಿ ಯಾವ ಮನುಷ್ಯನನ್ನಾದರೂ ತಡೆದರೆ, ಶೋಧಿಸಿದರೆ ಅಥವಾ ಹಿಡಿದರೆ; ಅಥವಾ

(*d*) ತನ್ನ ಬಂದರಿಕೆಯಲ್ಲಿರುವ ಯಾವ ಮನುಷ್ಯನಿಗಾದರೂ ಅಸಭ್ಯವಾದ ಶರೀರ ಸಂಬಂಧವಾದ ಯಾವುದಾದರೂ ಬಲಾತ್ಕಾರವನ್ನು ಮಾಡುತ್ತೇನೆಂದರೆ; ಅಥವಾ

(*e*) ಆಪಾದನೆಪಟ್ಟ ಮನುಷ್ಯನಿಗೆ ನ್ಯಾಯವಾಗಿ (ಕಾನೂನಿನ ಮೇರೆಗೆ) ಆಗಬಾರದಾದ ಯಾವ ಹೆದರಿಕೆಯನ್ನಾದರೂ ಉಂಟುಮಾಡಿದರೆ, ಅಥವಾ ವಾಗ್ದಾನವನ್ನಾದರೂ ಕೊಡುತ್ತೇನೆಂದರೆ;

ಅವನಿಗೆ ಅಂಥಾ ಪ್ರತಿತಪ್ಪಿತಕ್ಕೂ ಎರಡು ತಿಂಗಳಿಗೆ ಮಿಂಚದ ಒಂದು ಗಡುವಿನ ತನಕ ಸೆರೆಯಿಂದ, ಅಥವಾ ಐದುನೂರು ರೂಪಾಯಿಗಳ ವರೆಗೆ ಆಗಬಹುದಾದ ಅಪರಾಧದಿಂದ, ಅಥವಾ ಇವೆರಡರಿಂದಲೂ ಶಿಕ್ಷೆಯಾಗತಕ್ಕದ್ದು.

ಬೊಂಬಾಯಿ 1890ರ 4. ಪ್ರ. 64

ಹಿಡಿದ ಮನುಷ್ಯನನ್ನು ಕಳುಹಿಸುವುದರಲ್ಲಿ ಪೀಡಿಸುವಂಥಾ ಕಾಲ ವಿಳಂಬಕ್ಕಾಗಿ ದಂಡನೆ.

59. ಯಾವ ಪೊಲೀಸು ಆಫಿಸರಾದರೂ ತಾನು ಹಿಡಿದ ಯಾವ ಮನುಷ್ಯನನ್ನು ಆಗಲಿ ಮಾಜಿಸ್ಟ್ರೇಟನ ಬಳಿಗೆ ಅಥವಾ ಅಂಥಾ ಮನುಷ್ಯನನ್ನು ಯಾರಲ್ಲಿಗೆ ಕಳುಹಿಸಲು ತಾನು ನ್ಯಾಯವಾಗಿ ಬದ್ಧನಾಗಿರುತ್ತಾನೆಯೋ ಅಂಥಾ ಇತರ ಯಾರಾದರೂ ಅಧಿಕಾರಿಯ ಬಳಿಗೆ ಕಳುಹಿಸುವುದಕ್ಕೆ ಪೀಡಿಸಬೇಕೆಂದು ಮತ್ತು ಅನವಶ್ಯಕವಾಗಿ ತಡವನ್ನು ಮಾಡಿದರೆ, ಅವನಿಗೆ ಎರಡುನೂರು ರೂಪಾಯಿಗಳ ವರೆಗೆ ಆಗಬಹುದಾದ ಅಪರಾಧದಿಂದ ಶಿಕ್ಷೆಯಾಗತಕ್ಕದ್ದು.

ಬೊಂಬಾಯಿ–1890ರ 4 ಪ್ರ. 65

36ನೆ ಪ್ರಕರಣ ಪ್ರಕಾರದ ನಿಬಂಧನೆಗಳ, ಅಥವಾ 49ನೆ ಪ್ರಕರಣದಂತೆ ಆದ ಅನುಜ್ಞೆಗಳ ಉಲ್ಲಂಘನೆಗಾಗಿ ದಂಡನೆ.

60. ಯಾರಾದರೂ–

(a) 36ನೆ ಪ್ರಕರಣ ರೀತ್ಯಾ ಮಾಡಿದ ಯಾವ ನಿಬಂಧನೆಯನ್ನಾಗಲಿ ಅಥವಾ ಅಪ್ಪಣೆಯನ್ನಾಗಲೀ ಉಲ್ಲಂಘಿಸಿದರೆ ; ಅಥವಾ

(b) 49ನೆ ಪ್ರಕರಣದಂತೆ ಪೊಲೀಸಿನವರು ಮಾಡಿದ ಯಾವ ಅನುಜ್ಞೆಗೆ ಆದರೂ ಎದುರಿಸಿದರೆ ಅಥವಾ ಅದರಂತೆ ನಡೆದುಕೊಳ್ಳಲು ತಪ್ಪಿದರೆ ;

(c) (a) ಅಥವಾ (b) ವಾಕ್ಯದಲ್ಲಿ ಕಂಡ ತಪ್ಪಿತವನ್ನಾದರೂ ನಡೆಸುವುದಕ್ಕೆ ಸಹಾಯ ಮಾಡಿದರೆ ;

ಅವನಿಗೆ ಐವತ್ತು ರೂಪಾಯಿಗಳವರೆಗೂ ಆಗಬಹುದಾದ ಅಪರಾಧದಿಂದ ಶಿಕ್ಷೆಯಾಗತಕ್ಕದ್ದು.

ಬೊಂಬಾಯಿ–1890ರ 4 ಪ್ರ. 67

37ನೆ ಪ್ರಕರಣದಂತೆ ಆದ ಅಪ್ಪಣೆಯ ಮೇರೆಗೆ ನಡೆದುಕೊಳ್ಳಲು ತಪ್ಪಿದರೆ ದಂಡನೆ.

61. 37ನೇ ಪ್ರಕರಣದ ಮೇರೆಗೆ ಮಾಡಿದ ಅಪ್ಪಣೆಯಂತೆ ನಡೆಯಲು ಯಾರಾದರೂ ತಪ್ಪಿದರೆ, ಅವನಿಗೆ ಅಂಥಾ ಅಪ್ಪಣೆಗೆ ಅವನು ಅವಿಧೇಯನಾಗಿರುತ್ತಿರುವ ಪ್ರತಿ ದಿನಕ್ಕೆ ಇಪ್ಪತ್ತೈದು ರೂಪಾಯಿನವರೆಗೆ ಆಗಬಹುದಾದ ಅಪರಾಧ ಹಾಕಿ ಶಿಕ್ಷಿಸತಕ್ಕದ್ದು.

1867ರ 3ನೆ ಆಕ್ಟ್ಸ ಪ್ರ. 3 ಮತ್ತು ಮದರಾಸು-1888ರ 3 ಪ್ರ. 45

ಸಾಧಾರಣ ಜೂಜಾಟದ ಮನೆಯನ್ನು ಇಟ್ಟುಕೊಂಡಿರೋಣ ಮುಂತಾದುದಕ್ಕಾಗಿ ದಂಡನೆ.

62. (1) ಯಾವುದಾದರೂ ಸಾಧಾರಣ ಜೂಜಿನ ಮನೆಯನ್ನು ಯಾವನಾದರೂ ಇಡಲು ಆರಂಭಿಸಿದರೆ, ಇಟ್ಟುಕೊಂಡು ಇದ್ದರೆ, ಅಥವಾ ಉಪಯೋಗಿಸಿದರೆ, ಅಥವಾ ಉಪಯೋಗಿಸಲ್ಪಡಲೀಸಿದರೆ, ಅಥವಾ ಯಾವುದಾದರೂ ಸಾಧಾರಣ ಜೂಜಿನ ಮನೆಯ ಆಡಳಿತವನ್ನು ನಡೆಸಿದರೆ; ಅಥವಾ ನಡೆಸುವುದರಲ್ಲಿ ಸಹಾಯ ಮಾಡಿದರೆ, ಅಥವಾ ಆ ಮನೆಯಲ್ಲಿ ಜೂಜಾಡುವುದಕ್ಕಾಗಿ ಹಣವನ್ನು ಮುಂಗಡ ಕೊಟ್ಟರೆ, ಅಥವಾ ಸಿದ್ಧಪಡಿಸಿದರೆ, ಅವನು ಇನ್ನೂರು ರೂಪಾಯಿಗಳಿಗೆ ಹೆಚ್ಚಾದ ಅಪರಾಧಕ್ಕೆ, ಅಥವಾ ಮೂರು ತಿಂಗಳಿಗೆ ಮೀರದ ಸೆರಗೆ, ಅಥವಾ ಇವೆರಡಕ್ಕೂ ಗುರಿಯಾಗತಕ್ಕದ್ದು;

1867ರ 3ನೆ ಆಕ್ಟ್ಸ ಪ್ರ. 4 ಮತ್ತು ಮದರಾಸು-1888ರ 3 ಪ್ರ. 46.

ಸಾಧಾರಣ ಜೂಜು ಆಡುವ ಮನೆಯಲ್ಲಿ ಜೂಜು ಆಡುತ್ತಿದ್ದಂತೆ ಸಿಕ್ಕಿದುದಕ್ಕಾಗಿ ದಂಡನೆ.

(2) ಸಾಧಾರಣ ಜೂಜಿನ ಮನೆಯಲ್ಲಿ ಜೂಜಾಡುತ್ತಾ ಇರುವುದಾಗಿ ಅಥವಾ ಜೂಜಾಡುವ ಕೆಲಸಕ್ಕಾಗಿ ಅಲ್ಲಿ ಇರುವುದಾಗಿ ಯಾವನಾದರೂ ಸಿಕ್ಕಿದರೆ, ಅವನಿಗೆ ಒಂದುನೂರು ರೂಪಾಯಿಗೆ ಮಿಂಚದ ಅಪರಾಧ ಹಾಕಿ ಅಥವಾ ಒಂದು ತಿಂಗಳಿಗೆ ಮಿಂಚದ ಸೆರೆ ವಿಧಿಸಿ ಶಿಕ್ಷಿಸತಕ್ಕದ್ದು.

1867ರ 3ನೆ ಆಕ್ಟ್ಸ ಪ್ರ. 6 ಮತ್ತು ಮದರಾಸು-1888ರ 3 ಪ್ರ. 43.

1ನೆ ವಿವರಣೆ.—ಪೊಲೀಸು ಆಫಿಸರಾಗಲಿ ಅಥವಾ ಇತರರು ಆಗಲಿ, ಆಟವನ್ನು ಆಡುತಿದ್ದುದನ್ನ ನಿಜವಾಗಿ ನೋಡದೆ ಇದ್ದಾಗ್ಯೂ, 3[?]ನೆ ಪ್ರಕರಣದ ವಿಧಿಗಳಂತೆ ಪ್ರವೇಶಿಸಿದ ಅಥವಾ ಶೋಧನೆಮಾಡಿದ ಕಟ್ಟಡದಲ್ಲಿ ಆವರಣವಿರುವ ಯಾವಸ್ಥಳದಲ್ಲಿ ಅಥವಾ ಕೊಟ್ಟಡಿಯಲ್ಲಿ ಅಥವಾ ಸ್ಥಳದಲ್ಲಿ ಆಗಲಿ ಅಥವಾ ಅಲ್ಲಿ ಸಿಕ್ಕಿದ ಯಾವ ಮನುಷ್ಯನ ಮೇಲಾಗಲಿ ದೊರೆತ ಯಾವುದಾದರೂ ಇಸ್ಪೇಟುಗಳು, ನೆತ್ತಗಳು, ಜೂಜಾಡುವ ಮೇಜು ಅಥವಾ ಬಟ್ಟೆ ಹಲಿಗೆ, ಅಥವಾ ಜೂಜಾಟದ ಇತರ ಸಾಧನಗಳು, ಅಥವಾ ಅಂಥಾ ಕಟ್ಟಡವನ್ನು ಆವರಣವನ್ನುಳ್ಳ ಸ್ಥಳವನ್ನು ಅಥವಾ ಕೊಟಡಿಯನ್ನು ಅಥವಾ ಸ್ಥಳವನ್ನು ಒಂದು ಸಾಧಾರಣ ಜೂಜಾಟದ ಮನೆಯನ್ನಾಗಿ ಉಪಯೋಗಿಸುತ್ತಾರೆ ಎಂಬ ಬಗ್ಗೂ ಮತ್ತು ಅಲ್ಲಿ ಸಿಕ್ಕಿದ ಜನರು ಜೂಜಾಡುವ ಕೆಲಸಕ್ಕಾಗಿ ಅಲ್ಲಿ ಇದ್ದರೆಂಬ ಬಗ್ಗೂ ಸಾಕ್ಷ್ಯವಾಗಿರತಕ್ಕದ್ದು.

1867ರ 3ನೆ ಆಕ್ಟ್ಸ ಪ್ರ. 9 ಮತ್ತು ಮದರಾಸು-1888ರ 3 ಪ್ರ. 44.

2ನೆ ವಿವರಣೆ. ಸಾಧಾರಣ ಜೂಜಿನ ಮನೆಯನ್ನು ಇಟ್ಟುಕೊಂಡಿರುವ ಅಥವಾ ಯಾವುದಾದರೂ ಜೂಜಿನ ಮನೆಯ ಆಡಳಿತವಲ್ಲಿ ಸಂಬಂಧಪಟ್ಟಿರುವ ತಪ್ಪಿತವನ್ನು ಯಾವ ಮನುಷ್ಯನಮೇಲಾದರೂ ಸ್ಥಿರಪಡಿಸುವುದಕ್ಕೋಸ್ಕರ, ಯಾವ ಆಟದಲ್ಲಾದರೂ ಆಡುತ್ತಾ ಇದ್ದು ಸಿಕ್ಕಿದ ಯಾವ ಮನುಷ್ಯನಾದರೂ ಯಾವ ಹಣಕ್ಕಾಗಿಯಾಗಲಿ, ಪಂತಕ್ಕಾಗಿ ಆಗಲಿ, ಅಥವಾ ಜೂಜಿಗಾಗಿ ಆಗಲಿ ಆಡುತ್ತಿದ್ದನೆಂದು ಸ್ಥಾಪಿಸಿಕೊಳ್ಳೋಣ ಅಗತ್ಯವಾಗಿರತಕ್ಕದ್ದಲ್ಲ.

1867ರ 3ನೆ ಆಕ್ಟ್ಸ ಪ್ರ. 4 ಮತ್ತು ಮದರಾಸು–1888ರ 3 ಪ್ರ. 46.

...ನೆ ವಿವರಣೆ.—ಯಾವುದಾದರೂ ಸಾಧಾರಣ ಜೂಜಿನ ಮನೆಯಲ್ಲಿ ಜನರ್ಯು ಯಾವುದಾದರೂ ಜೂಜನ್ನು ಅಥವಾ ಆಟವನ್ನು ಆಡುತ್ತಿರುವಾಗ ಅಲ್ಲಿ ದೊರೆತ ಯಾವ ಮನುಷ್ಯನಾಗಲಿ, ವ್ಯತಿರೇಕಾಂಶ ಸ್ಥಿರಪಡುವತನಕ, ಅಲ್ಲಿ ಜೂಜಾಡುವ ಕೆಲಸಕ್ಕಾಗಿ ಇದ್ದುದಾಗಿ ಭಾವಿಸತಕ್ಕದ್ದು.

1867ರ 3ನೆ ಆಕ್ಟ್ಸ ಪ್ರ. 8 ಮತ್ತು ಮದರಾಸು–1888ರ 3 ಪ್ರ. 47.

ಜೂಜಿನ ಸಾಧನಗಳನ್ನು ತಪ್ಪು ಸ್ಥಿರಪಟ್ಟಮೇಲೆ ನಾಶಪಡಿಸತಕ್ಕದ್ದೆಂದು ಆಜ್ಞಾಪಿಸಬಹುದು.

63. ಯಾವ ಮನುಷ್ಯನಮೇಲಾಗಲಿ ಒಂದು ಸಾಧಾರಣ ಜೂಜಿನ ಮನೆಯನ್ನು ಇಟ್ಟುಕೊಂಡಿರುವ ಅಥವಾ ಅದರಲ್ಲಿ ಜೂಜಾಡುವ ಕೆಲಸಕ್ಕಾಗಿ ಇರುವ ತಪ್ಪಿತ ಸ್ಥಿರಪಟ್ಟ ತರುವಾಯ, ಅಲ್ಲಿ ದೊರೆತ ಜೂಜಿನ ಸಾಮುಗ್ರಿಗಳನ್ನೆಲ್ಲಾ ಮಾಜಿಸ್ಟ್ರೇಟನ ಆಜ್ಞೆ ಪ್ರಕಾರ ನಾಶಪಡಿಸಬಹುದು, ಮತ್ತು ಅಲ್ಲಿ ಹಿಡಿದುಕೊಂಡ ಇತರ ವಸ್ತುಗಳನ್ನೆಲ್ಲಾ ಅಥವಾ ಆ ಪೈಕಿ ಯಾವುದನ್ನಾದರೂ ಅಥವಾ ಅವುಗಳ ಹುಟ್ಟುವಳಿಯನ್ನಾದರೂ ಸ್ವತ್ತು ಕರ್ತರು ದಂಡವಾಗಿ ಹೋಗಲಾಡಿಸಿಕೊಳ್ಳಬೇಕೆಂದು ಅಂಥಾ ಮಾಜಿಸ್ಟ್ರೇಟು ಆಜ್ಞಾಪಿಸಬಹುದು.

1867ರ 3ನೆ ಆಕ್ಟ್ಸ ಪ್ರ. 11 ಮತ್ತು ಮದರಾಸು–1888ರ 3 ಪ್ರ. 48.

ಸಾಕ್ಷಿಗಳ ವಿಮೋಚನೆ.

64. ಈ ರೆಗ್ಯುಲೇಷನಿಗೆ ವಿರೋಧವಾಗಿ ಜೂಜಾಟದಲ್ಲಿ ಸಂಬಂಧಪಟ್ಟವನಾಗಿ, ಮತ್ತು ಜೂಜಾಟಕ್ಕೆ ಸಂಬಂಧಿಸುವ ಈ ರೆಗ್ಯುಲೇಷನಿನ ನಿಯಮಗಳ ಪೈಕಿ ಯಾವುದನ್ನಾದರೂ ಉಲ್ಲಂಘಿಸಿದುದಕ್ಕೋಸ್ಕರ ಬೇರೆ ಯಾವ ಮನುಷ್ಯನಿಗಾದರೂ ಮಾಜಿಸ್ಟ್ರೇಟನ ಎದುರಿಗೆ ವಿಚಾರಣೆಯಾಗುವಾಗ ಸಾಕ್ಷಿಯಾಗಿ ವಿಚಾರಣೆಯಾಗತಕ್ಕ, ಅಂಥಾ ವಿಚಾರಣೆಯಲ್ಲಿ ಹಾಗೆ ತನ್ನನ್ನು ಯಾವ ಬಗ್ಗೆ ವಿಚಾರಣೆ ಮಾಡುತ್ತಾರೆಯೋ ಆ ಸಂಗತಿಗಳನ್ನೆಲ್ಲಾ ಕುರಿತು ತನಗೆ ಚೆನ್ನಾಗಿ ತಿಳಿದವುಟ್ಟಿಗೆ ನಿಜವಾದ ಮತ್ತು ಪ್ರಾಮಾಣಿಕವಾದ ವಿಶದೀಕರಣವನ್ನು ಮಾಡತಕ್ಕ, ಮತ್ತು ಆ ಮೇರೆಗೆ ನಡೆದಿರುತ್ತಾನೆಂದು ಬರಹಮೂಲಕವಾದ ಸರ್ಟಿಫಿಕೇಟನ್ನು ವಿಚಾರಣೆ ಆದಮೇಲೆ ಸದರಿ ಮಾಜಿಸ್ಟ್ರೇಟಿಂದ ಪಡೆಯತಕ್ಕ ಯಾವ ಮನುಷ್ಯನಿಗಾದರೂ ಅಂಥಾ ಜೂಜಾಟದ ವಿಷಯದಲ್ಲಿ ಆ ವಿಚಾರಣೆಯು ಕಾಲಕ್ಕೆ ಮುಂಚೆ ಅವನು ಮಾಡಿದ್ದ ಯಾವುದಕ್ಕೋಸ್ಕರವಾಗಿ ಆಗಲಿ ಈ ರೆಗ್ಯುಲೇಷನ್ ಮೇರೆ ಆಗಬೇಕಾದ ಎಲ್ಲಾ ಕ್ರಿಮಿನಲು ಫಿರ್ಯಾದುಗಳಿಂದಲೂ ಬಿಡುಗಡೆಯಾಗತಕ್ಕದ್ದು.

1867ರ 3ನೆ ಆಕ್ಟ್ಸ ಪ್ರ. 12 ಮತ್ತು ಮದರಾಸು–1888ರ 3 ಪ್ರ. 49.

ಪ್ರವೀಣತೆಯ ಆಟಗಳ ವಿನಾಯಿತಿ.

65. ಬರೇ ಪ್ರವೀಣತೆಯ ಆಟಗಳನ್ನು ಎಲ್ಲಿಯೇ ಆಡಿದಾಗ್ಯೂ ಅವುಗಳಿಗೆ ಈ ರೆಗ್ಯುಲೇಷನಿನ 38 ಮತ್ತು 62ನೆ ಪ್ರಕರಣಗಳಲ್ಲಿ ಕಂಡದ್ದು ಯಾವುದೂ ಅನ್ವಯಿಸುತ್ತದೆಂದು ಭಾವಿಸಲ್ಪಡಕೂಡದು.

1867ರ 3ನೆ ಆಕ್ಟ್ಸ ಪ್ರ. 16 ಮತ್ತು ಮದರಾಸು–1888ರ 3 ಪ್ರ. 50.

ಅಪರಾಧದ ಪೈಕಿ ಭಾಗವನ್ನು ವರ್ತಮಾನ ಕೊಟ್ಟವನಿಗೆ ಅಥವಾ ಪೋಲೀಸಿಗೆ ಕೊಡೋಣ.

66. ಈ ರೆಗ್ಯುಲೇಷನಿನ 62ನೆ ಪ್ರಕರಣ ಪ್ರಕಾರ ವಸೂಲಾಗತಕ್ಕ ಯಾವ ಅಪರಾಧದ ಪೈಕಿಯಾದರೂ ಮತ್ತು 63ನೇ ಪ್ರಕರಣ ಪ್ರಕಾರ ಹಿಡಿದ ಮತ್ತು ದಂಡವಾಗಿ ಹೋಗಲಾಡಿಸಿಕೊಳ್ಳತಕ್ಕದ್ದೆಂದು ಅಪ್ಪಣೆಯಾದ ಹಣಗಳ ಪೈಕಿ ಅಥವಾ ಪದಾರ್ಥಗಳ ಹುಟ್ಟುವಳಿಗಳಪೈಕಿಯಾದರೂ, ಅರ್ಧಕ್ಕೆ ಮಿಂಚದ ಯಾವ ಭಾಗವನ್ನಾಗಲಿ ತಪ್ಪಿತಸ್ಥರನ್ನು ಕಂಡುಹಿಡಿಯುವುದರಲ್ಲಿ ಸಹಾಯ ಮಾಡಿರಬಹುದಾದ ವರ್ತಮಾನಕೊಟ್ಟವರಿಗೆ ಅಥವಾ ಪೋಲೀಸು ಆಫಿಸರುಗಳಿಗೆ ಕೊಡತಕ್ಕದ್ದೆಂದು ಮಾಜಿಸ್ಟ್ರೇಟು ಆಜ್ಞಾಪಿಸಬಹುದು.

1867ರ 3ನೆ ಆಕ್ಟ್ಸ 13ನೆ ಪ್ರಕರಣದ ಆಧಾರದಮೇಲೆ ಮಾಡಿದೆ.

ಸಾರ್ವಜನಿಕ ಬೀದಿಯಲ್ಲಿ ಅಥವಾ ಸ್ಥಳದಲ್ಲಿ ಪಕ್ಷಿಗಳನ್ನು ಮತ್ತು ಮೃಗಗಳನ್ನು ಕಾಳಗ ಕಾಯಿಸಿದುದಕ್ಕೆ ದಂಡನೆ.

67. ಯಾವುದಾದರೂ ಸಾರ್ವಜನಿಕ ಬೀದಿಯಲ್ಲಿ ಸ್ಥಳದಲ್ಲಿ ಅಥವಾ ಮಾರ್ಗದಲ್ಲಿ ಯಾವುದಾದರೂ ಪಕ್ಷಿಗಳನ್ನು ಅಥವಾ ಮೃಗಗಳನ್ನು ಕಾಳಗ ಕಾಯಿಸುತ್ತಿದ್ದಂತೆ ಸಿಕ್ಕಿದ ಅಥವಾ ಪಕ್ಷಿಗಳ ಮತ್ತು ಮೃಗಗಳ ಅಂಥಾ ಬಹಿರಂಗವಾದ ಕಾಳಗದಲ್ಲಿ ಒತ್ತಾಸೆ ಅಥವಾ ಸಹಾಯ ಮಾಡುತ್ತಾ ಇರುವ ಯಾವ ಮನುಷ್ಯನನ್ನಾದರೂ ಯಾವ ಪೋಲೀಸು ಆಫಿಸರಾದರೂ ವಾರಂಟಿಲ್ಲದೆ ಹಿಡಿಯಬಹುದು ಮತ್ತು ಅವನಿಗೆ ಐವತ್ತು ರೂಪಾಯಿಗೆ ಮೀರದ ಅಪರಾಧದಿಂದ ಅಥವಾ ಒಂದು ತಿಂಗಳಿಗೆ ಮೀರದ ಒಂದು ಗಡುವಿನತನಕ ಸೆರೆಯಿಂದ ಅಥವಾ ಇವೆರಡರಿಂದ ಶಿಕ್ಷೆಯಾಗತಕ್ಕದ್ದು.

ಮದರಾಸು 1888ರ 3 ಪ್ರ. 64.

ತಪ್ಪಿತ ಮುಂತಾದುದನ್ನು ಮಾಡುವ ಉದ್ದೇಶದಿಂದ ಸೂರ್ಯಾಸ್ತಮಯ ಮತ್ತು ಸೂರ್ಯೋದಯಕ್ಕೆ ಮಧ್ಯೆ ಆಯುಧಪಾಣಿಯಾಗಿದ್ದುದಕ್ಕೆ ದಂಡನೆ.

68. ಸೂರ್ಯಾಸ್ತಮಯ ಮತ್ತು ಸೂರ್ಯೋದಯಕ್ಕೆ ಮಧ್ಯೆ—

(1) ಒಂದು ತಪ್ಪಿತವನ್ನು ಮಾಡುವ ಉದ್ದೇಶದಿಂದ ಯಾವುದಾದರೂ ಅಪಾಯಕರವಾದ ಆಯುಧವನ್ನು ಧರಿಸಿರುವುದಾಗಿ ಅಥವಾ

600

(2). ಒಂದು ತಪ್ಪಿತವನ್ನು ಮಾಡುವ ಉದ್ದೇಶದಿಂದ ಮುಖವನ್ನು ಮುಚ್ಚಿಕೊಂಡಿರುವುದಾಗಿ, ಅಥವಾ ಅನ್ಯಥಾ ರೂಪ ಮರೆಸಿಕೊಂಡಿರುವುದಾಗಿ, ಅಥವಾ

(3) ಯಾವುದಾದರೂ ವಾಸಮಾಡುವ ಮನೆಯಲ್ಲಿ ಅಥವಾ ಯಾವುದಾದರೂ ಇತರ ಕಟ್ಟಡದಲ್ಲಿ ಅಥವಾ ಯಾವುದಾದರೂ ಯಾನ ಪಾತ್ರದಲ್ಲಿ ಅಥವಾ ದೋಣಿಯಲ್ಲಿ ಅಲ್ಲಿ ತಾನಿರುವುದಕ್ಕೆ ತೃಪ್ತಿಕರವಾಗಿ ಕಾರಣವನ್ನು ತೋರಿಸಲಾರದೆ ಇರುವುದಾಗಿ, ಅಥವಾ

(4) ಪ್ರಸಿದ್ಧನಾದ ಕಳ್ಳನಾಗಿದ್ದು ತನ್ನ ವಿಷಯದಲ್ಲಿ ತೃಪ್ತಿಕರವಾದ ವರ್ತಮಾನವನ್ನು ಕೊಡಲಾರದೆ ಯಾವ ಬೀದಿಯಲ್ಲಾದರೂ ಅಥವಾ ಇತರ ಸ್ಥಳದಲ್ಲಾದರೂ ಮಲಗಿಕೊಂಡು ಅಥವಾ ಅಡ್ಡಾಡಿಕೊಂಡು ಇರುವುದಾಗಿ, ಅಥವಾ

(5) ಮನೆಗೆ ಕನ್ನ ಹಾಕುವ ಯಾವ ಆಯುಧವನ್ನಾದರೂ ನ್ಯಾಯವಾದ ಕಾರಣವಿಲ್ಲದೆ ಸ್ವಾಧೀನದಲ್ಲಿ ಇಟ್ಟುಕೊಂಡಿರುವುದಾಗಿ,

ಸಿಕ್ಕಿದ ಯಾವ ಮನುಷ್ಯನನ್ನಾದರೂ ಯಾವ ಪೋಲೀಸು ಅಫಿಸರಾದರೂ ವಾರಂಟಿಲ್ಲದೆ ಹಿಡಿಯಬಹುದು ಮತ್ತು ಅವನಿಗೆ ಮೂರು ತಿಂಗಳುಗಳಿಗೆ ಮೀರದ ಒಂದು ಗಡುವಿನ ತನಕ ಸೆರೆಯಿಂದ ಶಿಕ್ಷೆಯಾಗತಕ್ಕದ್ದು.

ಬಾಯಿ-1890ರ 4 ಪ್ರ. 68.

39, 40, 41, 44 ಮತ್ತು 45ನೆ ಪ್ರಕರಣಗಳಂತೆ ಆದ ನಿಬಂಧನೆಗಳ ಅಥವಾ ಅನುಜ್ಞೆಗಳ ಉಲ್ಲಂಘನೆಗಾಗಿ ದಂಡನೆ.

69. ಯಾರಾದರೂ—

(a) 39, 40 ಅಥವಾ 41ನೆ ಪ್ರಕರಣದಂತೆ ನ್ಯಾಯವಾಗಿ ಮಾಡಿದ ಅಪ್ಪಣೆಗೆ ಅವಿಧೇಯನಾದರೆ, ಅಥವಾ

(b) 44ನೆ ಪ್ರಕರಣದಂತೆ ಪೋಲೀಸಿನವರು ಕೊಟ್ಟ ಯಾವ ಅನುಜ್ಞೆಗಾದರೂ ಎದುರಿಸಿದರೆ ಅಥವಾ ಅದರಂತೆ ನಡೆಯಲು ತಪ್ಪಿದರೆ, ಅಥವಾ

(c) 45ನೆ ಪ್ರಕರಣದಂತೆ ಪೋಲೀಸಿನವರು ಮಾಡಿದ ಯಾವ ನಿಬಂಧನೆಗಾಗಲಿ, ಕೊಟ್ಟ ಯಾವ ಅನುಜ್ಞೆಗಾಗಲಿ ಎದುರಿಸಿದರೆ, ಅಥವಾ ಅವಿಧೇಯನಾದರೆ, ಅಥವಾ

(d) ಸದರಿ ಪ್ರಕರಣದ (d) ಮತ್ತು (b) ವಾಕ್ಯಗಳ ಪ್ರಕಾರ ಕೊಟ್ಟ ಲೈಸೆನ್ಸಿನ ಯಾವ ಒಡಂಬಡಿಕೆಯನ್ನಾದರೂ ಉಲ್ಲಂಘಿಸಿದರೆ, ಅಥವಾ

(e) (a), (b), (c) ಅಥವಾ (d) ವಾಕ್ಯದಲ್ಲಿ ಕಂಡ ಯಾವ ತಪ್ಪಿತವನ್ನು ನಡೆಸುವುದಕ್ಕಾದರೂ ಸಹಕಾರಿಯಾದರೆ,

ಅಂಥಾವನಿಗೆ ಇನ್ನೂರು ರೂಪಾಯಿಗಳ ವರೆಗೂ ಆಗಬಹುದಾದ ಅಪರಾಧದಿಂದ ಶಿಕ್ಷೆಯಾಗತಕ್ಕದ್ದು.

ಬಾಯಿ-1890ರ 4 ಪ್ರ. 69.

42ನೆ ಪ್ರಕರಣದ ಮೇರೆಗೆ ಮಾಡಿದ ಕಟ್ಟಳೆಯ ಉಲ್ಲಂಘನೆಗಾಗಿ ದಂಡನೆ.

70. 42ನೆ ಪ್ರಕರಣದಂತೆ ಮಾಡಿದ ಯಾವ ಕಟ್ಟಳೆಯನ್ನಾಗಲಿ ಯಾರಾದರೂ ಉಲ್ಲಂಘಿಸಿದರೆ, ಅಥವಾ ಅದರ ಉಲ್ಲಂಘನೆಗೆ ಸಹಾಯಮಾಡಿದರೆ, ಅವನಿಗೆ ಮೂರು ತಿಂಗಳ ತನಕ ವಿಸ್ತರಿಸಬಹುದಾದ ಸೆರೆಯಿಂದ, ಅಥವಾ ಇನ್ನೂರು ರೂಪಾಯಿವರೆಗೆ ಆಗಬಹುದಾದ ಅಪರಾಧದಿಂದ, ಅಥವಾ ಇವೆರಡರಿಂದ ಶಿಕ್ಷೆಯಾಗತಕ್ಕದ್ದು.

ಬಾಯಿ-1890ರ 4 ಪ್ರ. 70.

43ನೆ ಪ್ರಕರಣದಂತೆ ಕೊಟ್ಟ ಅನುಜ್ಞೆಯ ಉಲ್ಲಂಘನೆಗಾಗಿ ದಂಡನೆ.

71. 43ನೆ ಪ್ರಕರಣದಂತೆ ಡಿಸ್ಟ್ರಿಕ್ಟು ಮಾಜಿಸ್ಟ್ರೇಟು ಅಥವಾ ಸಬ್ ಡಿವಿಜನಲು ಮಾಜಿಸ್ಟ್ರೇಟು ಕೊಟ್ಟ ಯಾವ ಅನುಜ್ಞೆಗಾದರೂ ಯಾರಾಗಲಿ ಎದುರಿಸಿದರೆ, ಅಥವಾ ಅವಿಧೇಯನಾದರೆ, ಅಥವಾ ಅಂಥಾ ಯಾವುದಾದರೂ ಅನುಜ್ಞೆಯನ್ನು ಎದುರಿಸುವುದಕ್ಕೆ, ಅಥವಾ ಅದಕ್ಕೆ ಅವಿಧೇಯನಾಗುವುದಕ್ಕೆ ಸಹಾಯ ಮಾಡಿದರೆ, ಅವನಿಗೆ ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಸೆರೆಯಿಂದ, ಅಥವಾ ಒಂದು ನೂರು ರೂಪಾಯಿತನಕ ಆಗಬಹುದಾದ ಅಪರಾಧದಿಂದ, ಅಥವಾ ಇವು ಎರಡರಿಂದ ಶಿಕ್ಷೆಯಾಗತಕ್ಕದ್ದು.

ಬಾಯಿ-1890ರ 4 ಪ್ರ. 71.

50ನೆ ಪ್ರಕರಣದಂತೆ ಕೊಟ್ಟ ಅನುಜ್ಞೆಗೆ ಎದುರಿಸುವುದಕ್ಕಾಗಿ ಅಥವಾ ಅದರಂತೆ ನಡೆಯದೆ ಹೋದುದಕ್ಕಾಗಿ ದಂಡನೆ.

72. 50ನೆ ಪ್ರಕರಣದ ಪ್ರಕಾರ ಮಾಜಿಸ್ಟ್ರೇಟಾಗಲಿ ಪೋಲೀಸು ಅಫಿಸರಾಗಲಿ ಕೊಟ್ಟ ಯಾವ ನ್ಯಾಯವಾದ ಅನುಜ್ಞೆಗಾದರೂ ಯಾರಾದರೂ ಎದುರಿಸಿದರೆ, ಅಥವಾ ಅದರಂತೆ ಒಡನೆ ನಡೆದುಕೊಳ್ಳಲು ತಪ್ಪಿದರೆ, ಅಥವಾ ಅದಕ್ಕೆ ಎದುರಿಸುವುದಕ್ಕಾಗಲಿ ಅದರಂತೆ ನಡೆಯಲು ತಪ್ಪುವುದಕ್ಕಾಗಲಿ ಸಹಾಯ ಮಾಡಿದರೆ, ಅವನಿಗೆ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಸೆರೆಯಿಂದ, ಅಥವಾ ಐನೂರು ರೂಪಾಯಿ ತನಕ ಆಗಬಹುದಾದ ಅಪರಾಧದಿಂದ, ಅಥವಾ ಇವು ಎರಡರಿಂದಲೂ ಶಿಕ್ಷೆಯಾಗತಕ್ಕದ್ದು.

ಬೊಂಬಾಯಿ-1890ರ 4 ಪ್ರ. 72. ತಪ್ಪಿತಸ್ಥನು ಕಾನ್ಸ್ಟೆಬಲಿನ ಸ್ಥಾನಕ್ಕೆ ಮೇಲ್ಪಟ್ಟ ಪೊಲೀಸು ಆಫಿಸರಾಗಿ ಇರುವಾಗ ನ್ಯಾಯಾಧಿಕಾರ.

73. ಅಪಾದನೆ ಪಟ್ಟ ಮನುಷ್ಯನು ಅಥವಾ ಅಪಾದನೆ ಪಟ್ಟವರ ಪೈಕಿ ಯಾರಾದರೂ ಒಬ್ಬನು ಕಾನ್ಸ್ಟೆಬಲಿನ ಸ್ಥಾನಕ್ಕಿಂತ ಮೇಲ್ಪಟ್ಟ ಪೊಲೀಸು ಆಫಿಸರಾಗಿ ಇರುವಾಗ, ಈ ರೆಗ್ಯುಲೇಷನಿಗೆ ವಿರೋಧವಾದ ತಪ್ಪಿತಗಳ ವಿಚಾರಣೆಯನ್ನು ಎರಡನೆ ತರಗತಿಗೆ ಕೀಳ್ಪಟ್ಟ ಮಾಜಿಸ್ಟ್ರೇಟು ಮಾಡಕೂಡದು.

ಬೊಂಬಾಯಿ-1890ರ 4 ಪ್ರ. 73. ರೆಗ್ಯುಲೇಷನಿಗೆ ವಿರೋಧವಾದ ಕೆಲವು ತಪ್ಪಿತಗಳಿಗಾಗಿ ಕ್ರಿಮಿನಲು ಪಿರ್ಯಾದು ನಡೆಸೋಣ ಪೊಲೀಸಿನವರ ವಿವೇಕಾನುಸಾರ ಇರತಕ್ಕದ್ದು.

74. ಸರಕಾರದಿಂದ ಅಥವಾ ಡಿಸ್ಟ್ರಿಕ್ಟ ಮಾಜಿಸ್ಟ್ರೇಟಿನಿಂದ ಮಾಡಲ್ಪಟ್ಟ ನಿಬಂಧನೆಗೆ ಅಥವಾ ಅಪ್ಪಣೆಗೆ ವಿಧೇಯನಾಗಿ ಹೊರತು, 55, 56, 60, 61, 69, 70, ಅಥವಾ 71ನೆ ಪ್ರಕರಣದಂತೆ ಶಿಕ್ಷಾರ್ಹವಾದ ತಪ್ಪಿತಕ್ಕಾಗಿ, ಅಂಥಾ ತಪ್ಪಿತ ವಿಶೇಷ ಧಕ್ಕವನ್ನು ಉಂಟುಮಾಡದೆ ಇರುವಾಗ ಮತ್ತು ಎಚ್ಚರಿಕೆಯನ್ನು ಕೊಟ್ಟಮೇಲೆ ತಡವಿಲ್ಲದೆ ಅಂಥಾ ತಪ್ಪಿತವನ್ನು ನಿಲ್ಲಿಸಿಬಿಟ್ಟಿರುವಾಗ, ಕ್ರಿಮಿನಲು ಪಿರ್ಯಾದನ್ನು ನಡೆಸೋಣ ಪೊಲೀಸನವರಿಗೆ ಅಗತ್ಯವಾಗಿರತಕ್ಕದ್ದಿಲ್ಲ.

ಬೊಂಬಾಯಿ-1890ರ 4 ಪ್ರ. 74

ಇತರ ಚಟ್ಟಗಳ ಮೇರೆಗೆ ತಪ್ಪಿತಗಳಿಗಾಗಿ ಕ್ರಿಮಿನಲು ಪಿರ್ಯಾದು ನಡೆಯುವುದಕ್ಕೆ ಈ ರೆಗ್ಯುಲೇಷನಿನಿಂದ ಬಾಧಕವಿಲ್ಲ.

75. ಈ ರೆಗ್ಯುಲೇಷನಿನಿಂದ ಶಿಕ್ಷಾರ್ಹವೆಂದು ಏರ್ಪಟ್ಟಿರುವ ಯಾವ ತಪ್ಪಿತಕ್ಕಾದರೂ ಇತರ ಯಾವುದಾದರೂ ಚಟ್ಟದಂತೆ ಯಾವ ಮನುಷ್ಯನಿಗಾಗಲಿ ಕ್ರಿಮಿನಲಿನಲ್ಲಿ ವಿಚಾರಣೆಯಾಗಿ ಶಿಕ್ಷೆಯಾಗುವುದಕ್ಕೂ ಅಥವಾ ಇತರ ಯಾವುದಾದರೂ ಚಟ್ಟದ ಮೇರೆಗೆ ಶಿಕ್ಷೆಯಾಗಬೇಕಾದ ತಪ್ಪಿತಕ್ಕಾಗಿ ಈ ರೆಗ್ಯುಲೇಷನಿನ ಪ್ರಕಾರ ಕ್ರಿಮಿನಲ್ಲು ಪಿರ್ಯಾದು ನಡೆದು ಶಿಕ್ಷೆಯಾಗುವುದಕ್ಕೂ, ಈ ರೆಗ್ಯುಲೇಷನಿನಲ್ಲಿ ಕಂಡದ್ದು ಯಾವುದೂ ಅಡ್ಡಿ ಮಾಡುವುದಿಲ್ಲವೆಂದು ಅರ್ಥಮಾಡಿಕೊಳ್ಳತಕ್ಕದ್ದು: ಆದರೆ ಅಂಥಾ ಪ್ರಮೇಯಗಳೆಲ್ಲಾ ಕ್ರಿಮಿನಲು ಪ್ರೊಸೀಡ್ಯುರು ಕೋಡಿನ 403ನೆ ಪ್ರಕರಣದ ವಿಧಿಗಳಿಗೆ ಒಳಪಟ್ಟಿರತಕ್ಕದ್ದು.

8ನೆ ಅಧ್ಯಾಯ—ವಿವಿಧ ವಿಷಯ.

ಬೊಂಬಾಯಿ-1890ರ 4 ಪ್ರ. 75. ಪೊಲೀಸು ಆಫಿಸರುಗಳಿಗೆ ಸಲ್ಲಬೇಕಾದ ಬಹುಮಾನಗಳು ಮುಂತಾದುದರ ವ್ಯವಸ್ಥೆ.

76. ಪೊಲೀಸು ಆಫಿಸರುಗಳಿಂದ ಪ್ರೋಸೆಸ್ಸು ನೆರವೇರಿಸಲ್ಪಡುವುದಕ್ಕಾಗಿ ಕೊಡಲ್ಪಟ್ಟ ಎಲ್ಲಾ ಹಣಗಳನ್ನು, ಮತ್ತು ಪೊಲೀಸು ಆಫಿಸರುಗಳಿಗೆ ನ್ಯಾಯದ (ಕಾನೂನಿನ) ಮೇರೆಗೆ ಕೊಡಬೇಕಾದ ಅಥವಾ ಮಾಜಿಸ್ಟ್ರೇಟುಗಳಿಂದ ಕೊಡಲ್ಪಟ್ಟ ಎಲ್ಲಾ ಬಹುಮಾನಗಳನ್ನು, ಮುಟ್ಟುಗೋಲುಗಳನ್ನು, ದಂಡಗಳನ್ನು, ಅಥವಾ ಅವುಗಳ ಭಾಗಗಳನ್ನು, ಇದಕ್ಕಾಗಿ ಈ ಪ್ರಕರಣದಲ್ಲಿ ವಿಧಿಸಿರುವಂತೆ ವಿನಾ, ಸರಕಾರಕ್ಕೆ ಜಮೆ ಕಟ್ಟತಕ್ಕದ್ದು: ಆದರೆ ಸರಕಾರದ ಅಂಗೀಕಾರದೊಡನೆ, ಅಥವಾ ಆ ಬಗ್ಗಾಗಿ ಸರಕಾರದಿಂದ ಆದ ಯಾವುದಾದರೂ ನಿಬಂಧನೆಯಂತೆ, ಅಂಥಾ ಯಾವುದಾದರೂ ಬಹುಮಾನ, ಮುಟ್ಟುಗೋಲು ಅಥವಾ ದಂಡವೆಲ್ಲಾ ಆಗಲಿ ಅವುಗಳ ಪೈಕಿ ಯಾವ ಭಾಗವಾಗಲಿ, ವಿಶೇಷವಾಗಿ ಚಾಕರಿ ಮಾಡಿದುದಕ್ಕಾಗಿ, ಪೊಲೀಸ್ ಆಫಿಸರುಗಳಿಗೆ ಅಥವಾ ಇತರ ಮನುಷ್ಯರಿಗೆ ಕೊಡಲ್ಪಡಬಹುದು.

ಬೊಂಬಾಯಿ-1890ರ 4 ಪ್ರ. 77. ಪೊಲೀಸು ಕಟ್ಟಡಗಳ ಮೇಲೆ ಮ್ಯುನಿಸಿಪಲು ಅಥವಾ ಇತರ ತೆರಿಗೆಗಳು ಸರಕಾರದಿಂದ ಸಲ್ಲತಕ್ಕದ್ದಿಲ್ಲ.

77. (1) ಯಾವ ಮನೆ ಅಥವಾ ಸ್ಥಳವಾದರೂ ಪೊಲೀಸು ಸೇನೆಗೆ ಸೇರಿದವರ ಅನುಭವದಲ್ಲಿ ಅಥವಾ ಉಪಯೋಗದಲ್ಲಿ ಅವರ ಕೆಲಸಗಳು ಅನುಕೂಲವಾಗಿ ನಡೆಯುವುದಕ್ಕೋಸ್ಕರ ಇರುವ ಬಗ್ಗೆ ಮ್ಯುನಿಸಿಪಲು ಅಥವಾ ಇತರ ಸ್ಥಳೀಯ ತೆರಿಗೆಗಳು ಸರಕಾರದಿಂದ ಕೊಡಲ್ಪಡತಕ್ಕದ್ದಲ್ಲ.

ಬೊಂಬಾಯಿ-1820ರ 4 ಪ್ರ. 78. ನಿಬಂಧನೆಗಳನ್ನು ಮಾಡುವುದಕ್ಕೆ ಸರ್ಕಾರದವರ ಅಧಿಕಾರ.

78. (1) ಈ ರೆಗ್ಯುಲೇಷನಿಗೆ ಅನುಗುಣವಾಗಿ ಅದರ ಉದ್ದೇಶಗಳು ಕಾರ್ಯಸಾಧಕತರವಾಗಿ ನೆರವೇರುವುದಕ್ಕಾಗಿ ಸರಕಾರದವರು ನಿಬಂಧನೆಗಳನ್ನು ಮಾಡಬಹುದು ಮತ್ತು ಆಗಾಗ್ಗೆ ಅಂಥಾ ನಿಬಂಧನೆಗಳನ್ನು ತಳ್ಳಿಹಾಕಬಹುದು, ವ್ಯತ್ಯಾಸ ಪಡಿಸಬಹುದು ಅಥವಾ ತಿದ್ದುಪಾಟು ಮಾಡಬಹುದು

1871ರ 27ನೆದಾದ ಕ್ರಿಮಿನಲ್ ಟ್ರೈಬ್ಸ್ ಆಕ್ಟು. ವಾಡಿಕೆಯಾಗಿ ಕೆಲವು ಮುಂತಾದ ತಪ್ಪಿತಗಳನ್ನು ಮಾಡುವ ಗುಂಪುಗಳನ್ನು ಕಾವಲಿನಲ್ಲಿಡೋಣ ಮೊದಲಾದುದು.

(2) ತಪ್ಪನ್ನು ಕ್ರಮವಾಗಿ ಮಾಡುವುದರಲ್ಲಿ ಬದ್ಧರಿರುವುದಾಗಿ ನಂಬಲ್ಪಟ್ಟಿರುವ ಗುಂಪುಗಳ ಅಥವಾ ಜನಗಳ ಸಮೂಹಗಳ ರಿಜಿಸ್ಟ್ರೇಷನ ಬಗ್ಗೂ ಕಾವಲಿನಲ್ಲಿಡುವುದಕ್ಕೂ ಮತ್ತು ಅಂಕೆಯಲ್ಲಿಡುವುದಕ್ಕೂ ಮತ್ತು ಈ ಕೆಳಗೆ *ವಿವರಿಸಿರುವ ಯಾವನಾದರೂ ಮನುಷ್ಯನ ಬೆರಳಿನ ಮುದ್ರೆಗಳನ್ನು ಪೊಲೀಸಿನವರು ಹಾಕಿಸಿ ಇಟ್ಟುಕೊಳ್ಳುವುದಕ್ಕೂ, ಇತರ ವಿಷಯಗಳಲ್ಲದೆ, ಅಂಥಾ ನಿಬಂಧನೆಗಳಲ್ಲಿ ಏರ್ಪಾಡು ಮಾಡಬಹುದು.

*(a) ಜೊತೆ ತಗೆದುಕೊಂಡು ಜಡಕೂಡದಾದ ತಪ್ಪಿತಕ್ಕಾಗಿ ಸೆರೆಯಲ್ಲಿರುವವನು ಅಥವಾ

(b) ಸ್ಥಿರವಾದ ವಾಸಸ್ಥಳವಿಲ್ಲದ ಮತ್ತು ತಪ್ಪಿತ ಮಾಡುವುದರಲ್ಲಿ ಬಿದ್ದಿರುವವನಾಗಿ ಸಂಶಯಿಸಲ್ಪಟ್ಟವನ, ಅಥವಾ

(c) ಸಾಮಾನ್ಯವಾಗಿ ತಪ್ಪು ಮಾಡುವುದರಲ್ಲಿ ಬಿದ್ದಿರುವ ಗುಂಪಿನಲ್ಲಿ ಅಥವಾ ಜನಸಮೂಹದಲ್ಲಿ ಸೇರಿರುವವನ.

ಮದರಾಸು-1888ರ 3 ಪ್ರ. 79.

ನಿಬಂಧನೆಗಳನ್ನು ಪ್ರಕಟಿಸುವುದು.

(3) ಈ ಪ್ರಕರಣ ಪ್ರಕಾರದ ಪ್ರತಿ ನಿಬಂಧನೆಯನ್ನೂ ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸತಕ್ಕದ್ದು ಮತ್ತು ಅದು ಮೊದಲಸಲ ಪ್ರಕಟನೆಯಾದ ದಿನದಿಂದ ಒಂದು ತಿಂಗಳ ತರುವಾಯ ಉಪಯೋಗದಲ್ಲಿ ಬರತಕ್ಕದ್ದು.

ಮದರಾಸು-1888ರ 3 ಪ್ರ. 80.
ಮತ್ತು 1871ರ 27ನೆ ಆಕ್ಟು.

ನಿಬಂಧನೆಗಳ ಉಲ್ಲಂಘನೆಗೆ ದಂಡನೆ.

(4) ಯಾವುದಾದರೂ ನಿಬಂಧನೆಯ ಪ್ರತಿ ಉಲ್ಲಂಘನೆಗೂ, ತಪ್ಪಿತಸ್ಥನಿಗೆ ತಪ್ಪು ಸ್ಥಿರಪಟ್ಟ ಮೇಲೆ ಹತ್ತು ರೂಪಾಯಿಗೆ ಮೀರದ ಅಪರಾಧದಿಂದಲೂ ಅಥವಾ ಒಂದು ತಿಂಗಳಿಗೆ ಮೀರದ ಸೆರೆಯಿಂದಲೂ ಶಿಕ್ಷೆಯಾಗತಕ್ಕದ್ದು.

ಬೊಂಬಾಯಿ-1890ರ 4 ಪ್ರ. 78.

ಈ ರೆಗ್ಯುಲೇಷನಿನಂತೆ ಹುಟ್ಟಿದ ಆಜ್ಞೆಗಳನ್ನು ಮತ್ತು ಪ್ರಕಟನೆಗಳನ್ನು ನಿಜಪಡಿಸುವ ವಿಧಾನ.

79. ಈ ರೆಗ್ಯುಲೇಷನಿನ ಯಾವ ವಿಧಿಯಂತೆಯಾದರೂ ಸರಕಾರದಿಂದ, ಮಾಜಿಸ್ಟ್ರೇಟಿನಿಂದ ಅಥವಾ ಆಫಿಸರಿಂದ ಪ್ರಕಟಿಸಲ್ಪಟ್ಟ ಅಥವಾ ಕೊಡಲ್ಪಟ್ಟ ಯಾವ ಅಪ್ಪಣೆಯನ್ನು ಅಥವಾ ಪ್ರಕಟನೆಯನ್ನು ಆಗಲಿ ಮತ್ತು ಅದು ಕ್ರಮವಾಗಿ ಪ್ರಕಟವಾಗಿ ಅದನ್ನು ಕ್ರಮವಾಗಿ ಕೊಟ್ಟುದನ್ನು ಆಗಲೀ, ಸರಕಾರಿ ಗೆಜೆಟಿನಲ್ಲಿರುವ ಅದರ ಪ್ರತಿಯನ್ನು, ಅಥವಾ ಆ ಪ್ರಮೇಯಕ್ಕೆ ಸಂಬಂಧಿಸತಕ್ಕ ಈ ರೆಗ್ಯುಲೇಷನಿನ ಪ್ರಕರಣದ ವಿಧಿಗಳಂತೆ ಹುಟ್ಟಿ ಪ್ರಕಟವಾದ ಮೂಲ ಆಜ್ಞೆಯ ನಿಜವಾದ ಪ್ರತಿ ಎಂಬುದಾಗಿ ಅಂಥಾ ಮಾಜಿಸ್ಟ್ರೇಟಿನ ಅಥವಾ ಆಫಿಸರ ಹೆಸರು ಬರಹವಾಗಿ ಅವರಿಂದ ಸ್ಥಾಪಿಸಲ್ಪಟ್ಟಿರುವ ಪ್ರತಿಯನ್ನು, ತಂದು ತೋರಿಸೋಣದರಿಂದ ನಿಶ್ಚಯಪಡಿಸಿಕೊಡಬಹುದು.

ಬೊಂಬಾಯಿ-1890ರ 4 ಪ್ರ. 79.

ಮಾದರಿಯ ಕುಂದಿನಿಂದ ಅಥವಾ ನಡವಡಿಕೆಯ ಅಕ್ರಮದಿಂದ ನಿಬಂಧನೆಗಳನ್ನು ಮತ್ತು ಅಪ್ಪಣೆಗಳನ್ನು ಅಸಿದ್ಧವೆಂದು ಭಾವಿಸಕೂಡದು.

80. ಇದರಲ್ಲಿ ಅಡಗಿರುವ ಯಾವ ನಿಯಮದಂತೆಯಾದರೂ ಅಥವಾ ಅಂಥಾ ನಿಯಮಕ್ಕೆ ಖಂಡಿತವಾಗಿ ಅನುಸರಿಸಿಯಾದರೂ ಮಾಡಿದ ಅಥವಾ ಪ್ರಕಟಿಸಿದ ನಿಬಂಧನೆಯನ್ನು, ಅಪ್ಪಣೆಯನ್ನು, ಅನುಜ್ಞೆಯನ್ನು, ತೀರ್ಪನ್ನು, ವಿಚಾರಣೆಯನ್ನು ಅಥವಾ ಪ್ರಕಟನೆಯನ್ನಾಗಲಿ, ಮತ್ತು ಮಾಡಿದ ಕೆಲಸವನ್ನಾಗಲಿ, ಅದರ ಮಾದರಿಯ ಅಥವಾ ಪ್ರಸಿದ್ಧಿಯ ಯಾವುದಾದರೂ ಕೊರತೆಗೋಸ್ಕರವಾಗಿ ಅಥವಾ ನಡವಡಿಕೆಯ ಯಾವುದಾದರೂ ಅಕ್ರಮಕ್ಕೋಸ್ಕರವಾಗಿ ನ್ಯಾಯ ವಿರುದ್ಧವಾದುದು, ಬರಿದಾದುದು, ಸಲುವಳಿ ಇಲ್ಲದ್ದು ಅಥವಾ ಸಾಲದ್ದು ಎಂದು ಭಾವಿಸಲಾಗದು.

ಬೊಂಬಾಯಿ-1890ರ 4 ಪ್ರ. 82.

ಕೆಲಸಕ್ಕೆ ಅನುಸಾರವಾಗಿ ಒಳ್ಳೆ ನಂಬಿಕೆಯಿಂದ ಮಾಡಿದ ಕೃತ್ಯಕ್ಕಾಗಿ ಯಾವ ಮಾಜಿಸ್ಟ್ರೇಟೂ ಅಥವಾ ಪೊಲೀಸು ಆಫಿಸರೂ ದಂಡಕ್ಕೆ ಅಥವಾ ನಷ್ಟಕ್ಕೆ ಗುರಿಯಾಗತಕ್ಕದ್ದಿಲ್ಲ.

81. (1) ಈ ರೆಗ್ಯುಲೇಷನಿನ ಅಥವಾ ಅದರಂತೆ ನ್ಯಾಯವಾಗಿ ಮಾಡಿದ ಅಥವಾ ಕೊಟ್ಟ ಯಾವುದಾದರೂ ನಿಬಂಧನೆಯ, ಅಪ್ಪಣೆಯ, ಅಥವಾ ಅನುಜ್ಞೆಯ ನಿಯಮದಿಂದ ತನಗೆ ಸೇವಕನಾದ ಯಾವುದಾದರೂ ಕೆಲಸಕ್ಕೆ ಅಥವಾ ಬಂದ ಯಾವುದಾದರೂ ಅಧಿಕಾರಕ್ಕೆ ಅನುಸಾರವಾಗಿ ಅಥವಾ ಅನುಸಾರವಾಗೆಂದು ಉದ್ದೇಶಿಸಿ ಒಳ್ಳೆ ನಂಬಿಕೆಯಿಂದ ಮಾಡಿದ ಯಾವ ಕೃತ್ಯಕ್ಕೋಸ್ಕರವಾಗಿಯಾಗಲಿ, ಯಾವ ಮಾಜಿಸ್ಟ್ರೇಟೂ ಅಥವಾ ಪೊಲೀಸು ಆಫಿಸರೂ ಯಾವುದೊಂದು ದಂಡಕ್ಕೂ ಅಥವಾ ನಷ್ಟಗಳನ್ನು ತೆರುವುದಕ್ಕೂ ಗುರಿಯಾಗತಕ್ಕದ್ದಿಲ್ಲ.

ವ್ಯಕ್ತವಾದ ಅಧಿಕಾರದೊಂದಿಗೆ ಮಾಡಿದ ಯಾವುದಾದರೂ ನಿಬಂಧನೆಯನ್ನು, ಅಪ್ಪಣೆಯನ್ನು ಅಥವಾ ಅನುಜ್ಞೆಯನ್ನು ಒಳ್ಳೆ ನಂಬಿಕೆಯಿಂದ ನೆರವೇರಿಸಿದುದಕ್ಕಾಗಿ ಮೇಲೆ ಹೇಳಿದಂತೆ ಸರಕಾರದ ಯಾವ ಚಾಕರನೂ ಗುರಿಯಾಗತಕ್ಕದ್ದಿಲ್ಲ.

(2) ಈ ರೆಗ್ಯುಲೇಷನಿನ ಮೇರೆಗೆ ಅಥವಾ ಅದರ ಯಾವುದಾದರೂ ನಿಯಮದ ಮೇರೆಗೆ ಮಾಡಿದ ಯಾವುದಾದರೂ ನಿಬಂಧನೆಯಂತೆ ಸರಕಾರದಿಂದ ಅಥವಾ ಆ ಬಗ್ಗೆ ಅಧಿಕಾರ ಪಡೆದ ಮನುಷ್ಯನಿಂದ ವ್ಯಕ್ತವಾದ ಅಧಿಕಾರದೊಡನೆ ಕೊಡಲ್ಪಟ್ಟ ಅಂಥಾ ಯಾವುದಾದರೂ ಅಪ್ಪಣೆಯನ್ನು ಅಥವಾ ಅನುಜ್ಞೆಯನ್ನು ಒಳ್ಳೆ ನಂಬಿಕೆಯಿಂದ ನೆರವೇರಿಸಿದುದಕ್ಕೋಸ್ಕರ, ಕ್ರಮವಾಗಿ ನೇಮಕವಾದ ಅಥವಾ ಅಧಿಕಾರ ಹೊಂದಿದ ಯಾವ ಸರಕಾರದ ಚಾಕರನಾಗಲಿ ಅಥವಾ ಮನುಷ್ಯನಾಗಲಿ ಮೇಲೆ ಹೇಳಿರುವಂತೆ ಗುರಿಯಾಗತಕ್ಕದ್ದಿಲ್ಲ.

ಮೇಲೆ ಕಂಡಂತೆ ಕೇಸದ ನೆವದ ಮೇಲೆ ಮಾಡಿದ ಕೃತ್ಯಗಳ ವಿಚಾರದಲ್ಲಿ ದಾವೆಗಳನ್ನು ಅಥವಾ ಕ್ರಿಮಿನಲು ಪಿರ್ಯಾದುಗಳನ್ನು ಒಂದು ವರ್ಷ ಕಳೆದ ಮೇಲೆ, ಮಾಡಿದರೆ ಹಿಡಿಯತಕ್ಕದ್ದಲ್ಲ ಅಥವಾ ತಳ್ಳುಪಡಿ ಮಾಡತಕ್ಕದ್ದು.

(3) ಮೇಲೆ ಕಂಡಂಥ ಯಾವುದಾದರೂ ಕೆಲಸ ಅಥವಾ ಅಧಿಕಾರದ ನೆವದಿಂದ ಅಥವಾ ಅದಕ್ಕೆ ಸ್ಥಾರಿ ನಡೆಸಿದ ಯಾವುದಾದರೂ ಕೃತ್ಯದ ಮೂಲಕವಾಗಿ ಯಾವ ಮಾಜಿಸ್ಟ್ರೇಟು, ಪೋಲೀಸು ಆಫೀಸರು, ಅಥವಾ ಇತರ ಮನುಷ್ಯನಾದರೂ ತಪ್ಪಿತ ನಡೆಸಿದನೆಂದು ಅಥವಾ ಅಂಥಾ ಮಾಜಿಸ್ಟ್ರೇಟಿಂದ, ಪೋಲೀಸು ಆಫೀಸರಿಂದ ಅಥವಾ ಇತರ ಮನುಷ್ಯನಿಂದ ತಪ್ಪಿತ ನಡೆಸಲ್ಪಟ್ಟಿರುತ್ತದೆಂದು ಹೇಳುವ ಯಾವ ಸಂದರ್ಭದಲ್ಲಾಗಲಿ, ಅಥವಾ ಸದರಿ ತಪ್ಪನ್ನು ಅಥವಾ ಅನ್ಯಾಯವನ್ನು ನಡೆಸಿದ್ದರೆ ಅಥವಾ ಮಾಡಿದ್ದರೆ ಮೇಲೆ ಹೇಳಿರುವಂಥಾ ಸ್ವಭಾವದ್ದಾಗಿ ಇರುತ್ತಿತ್ತೆಂದು ಕೋರ್ಟಿಗೆ ತೋರುವ ಯಾವ ಪ್ರಮೇಯದಲ್ಲಾಗಲಿ, ಕ್ರಿಮಿನಲು ಪಿರ್ಯಾದನ್ನು ಅಥವಾ ದಾವೆಯನ್ನು ನಡೆಯಿತೆಂದು ದೂರೆ ಇಡುವ ಕೃತ್ಯ ನಡೆದ ದಿನಕ್ಕೆ ತರುವಾಯ ಒಂದು ವರ್ಷಕ್ಕೆ ಮೇಲೆ ಅದು ಬಂದರೆ, ಅದನ್ನು ಹಿಡಿಯತಕ್ಕದ್ದಲ್ಲ, ಅಥವಾ ತಳ್ಳುಪಡಿ ಮಾಡತಕ್ಕದ್ದು.

1861ರ 5ನೆ ಆಕ್ಟ ಪ್ರ. 42

ಪರಿಹಾರ ದ್ರವ್ಯವನ್ನು ಕೊಡುತ್ತೇನೆಂಬೋಣ.

(4) ಪ್ರತಿವಾದಿಯು ಅಥವಾ ಅವನ ಕಡೆಯುವರು ಅಂಥಾ ದಾವೆಯನ್ನು ತರುವುದಕ್ಕೆ ಮುಂಚೆ ಸಾಕಾದಷ್ಟು ಪರಿಹಾರ ದ್ರವ್ಯವನ್ನು ಕೊಡುವುದಾಗಿ ಹೇಳಿದ್ದರೂ, ಅಥವಾ ದಾವೆ ತಂದ ತರುವಾಯ ಸಾಕಾದಷ್ಟು ಹಣದ ಮೊತ್ತವನ್ನು ಕೋರ್ಟಿಗೆ ಕೊಟ್ಟಿದ್ದರೂ, ಅಂಥಾ ಯಾವ ವ್ಯವಹಾರದ ಮೂಲಕವಾಗಿಯೂ ವಾದಿಯು ಏನನ್ನೂ ಪಡೆದುಕೊಳ್ಳಲಾರನು ; ಮತ್ತು ಅಂಥಾ ಯಾವುದಾದರೂ ವ್ಯವಹಾರದಲ್ಲಿ ವಾದಿಯ ಪಕ್ಷವಾಗಿ ಡಿಕ್ರಿ ಹುಟ್ಟಿದಾಗ್ಯೂ, ಕೋರ್ಟನವರು ಸದರಿ ದಾವೆಯನ್ನು ಮೆಚ್ಚಿ ಇರುವದಾಗಿ ಸ್ಥಾಪಿಸಿದ ಹೊರತು, ಅಂಥಾ ವಾದಿಯು ವೆಚ್ಚಗಳು ಪ್ರತಿವಾದಿಯ ಮೇಲೆ ಬೀಳಕೂಡದು.

ಹೊಸದು.

ಮ್ಯುನಿಸಿಪಾಲಿಟಿಗಳಿಗೆ ಸಂಬಂಧಿಸುವ ಯಾವ ಕಾನೂನನ್ನೂ ಈ ರೆಗ್ಯುಲೇಷನು ಬಾಧಿಸಲಾರದು.

82. ಮ್ಯುನಿಸಿಪಾಲಿಟಿಗಳ ಸಂಬಂಧವಾಗಿ ಉಪಯೋಗದಲ್ಲಿ ಇರುವ ಯಾವ ಕಾನೂನಿನ ನಿಯಮಗಳ ಪೈಕಿ ಯಾವುದಕ್ಕಾದರೂ ಈ ರೆಗ್ಯುಲೇಷನಿನಲ್ಲಿ ಇರುವುದು ಒಂದರಿಂದಲೂ ಬಾಧಕವಾಗತಕ್ಕದ್ದಿಲ್ಲ.

A ಪಟ್ಟಿ.

(2ನೆ ಪ್ರಕರಣವನ್ನು ನೋಡಬೇಕು.)

ತಳ್ಳುಪಡಿಯಾದ ಚಟ್ಟಗಳು.

ಚಟ್ಟದ ನಂ. ಮತ್ತು ವರುಷ	ಹೆಸರು ಅಥವಾ ವಿಷಯು	ತಳ್ಳುಪಡಿಯ ಮಟ್ಟು
1861ನೆ ವರುಷದ 5ನೆ ನಂಬರು.	(1866ನೆ ವರುಷದ ಡಿಸೆಂಬರು 11ನೆ ದಿನದ 385, ಮತ್ತು 1879ನೆ ನವೆಂಬರು 19ನೆ ದಿನದ 322 I. J., ಈ ನಂಬರುಗಳ ಇಂಡಿಯಾ ಗವರ್ನ್ಮೆಂಟಿನ ಪ್ರಕಟನೆಗಳಿಂದ ಬೆಂಗಳೂರು ಪಟ್ಟಣಕ್ಕೆ ವ್ಯಾಪಿಸಲ್ಪಟ್ಟಂತೆ) ಪೋಲೀಸು ಕ್ರಮದ ಆಕ್ಟು.	ಎಲ್ಲಾ ಚಟ್ಟ.
1867ನೆ ವರುಷದ 3ನೆ ನಂಬರು.	(1867ನೆ ಡಿಸೆಂಬರು 11ನೆ ದಿನದ 240ನೆ ನಂಬರು ಇಂಡಿಯಾ ಗವರ್ನ್ಮೆಂಟಿನ ಪ್ರಕಟನೆಯ ಮೂಲಕವಾಗಿ ಬೆಂಗಳೂರು ಪಟ್ಟಣಕ್ಕೆ ವ್ಯಾಪಿಸಲ್ಪಟ್ಟಿರುವಂತೆ) ಬಹಿರಂಗವಾದ ಜೂಜಾಟದ ಮತ್ತು ಸಾಧಾರಣ ಜೂಜಿನ ಮನೆಗಳನ್ನು ಇಟ್ಟುಕೊಂಡಿರುವುದಕ್ಕೆ ಶಿಕ್ಷಾರ್ಥವಾಗಿ.	ಎಲ್ಲಾ ಚಟ್ಟ.
1872	(1872ನೆ ಸಂವತ್ಸರದ ಅಕ್ಟೋಬರು 16ನೆ ದಿನದ 230 J. ನಂಬರಿನ ಇಂಡಿಯಾ ಗವರ್ನ್ಮೆಂಟಿನ ಪ್ರಕಟನೆಯಂತೆ ಪ್ರಸಿದ್ಧಪಡಿಸಿರುವ) ರೆಗ್ಯುಲರು ಪೋಲೀಸಿನ ನಿಬಂಧನೆಗಳು.	ಈ ರೆಗ್ಯುಲೇಷನಿಗೆ ಅಥವಾ ಅದರಂತೆ ಏರ್ಪಟ್ಟಿರುವ ನಿಬಂಧನೆಗಳಿಗೆ ಹೊಂದಿಕೆಯಾಗಿಲ್ಲದಷ್ಟು ಮಟ್ಟಿಗೆ, ದಿನಚರಿಗಳನ್ನೂ, ಪುಸ್ತಕಗಳನ್ನೂ, ರಿಜಿಸ್ಟರುಗಳನ್ನೂ, ಲೆಕ್ಕಗಳನ್ನೂ ಮತ್ತು ರಿಪೋರಟುಗಳನ್ನೂ ವಿಧಿಸುವ ನಿಯಮಗಳು ವಿನಾ ನಿಬಂಧನೆಗಳೆಲ್ಲಾ.

602

B ಪಟ್ಟಿ. 290

(10ನೆ ಪ್ರಕರಣವನ್ನು ನೋಡಿ.)

Iನೆ ಮಾದರಿ.

ಪೊಲೀಸು ಇನ್ಸ್‌ಪೆಕ್ಟರಿಗೆ ಕೊಡಬೇಕಾದ ಸರ್ಟಿಫಿಕೇಟಿನ ಮಾದರಿ.

ಮೈಸೂರು ಪೊಲೀಸು
ಇನ್ಸ್‌ಪೆಕ್ಟರು ಜನರಲಿನ
ಮುದ್ರೆ.

_____________________ ಮೈಸೂರು ಪೊಲೀಸು ಸೈನ್ಯದಲ್ಲಿ *A. B. ಇನ್ಸ್‌ಪೆಕ್ಟರಾಗಿ ನೇಮಿಸಲ್ಪಟ್ಟಿರುತ್ತಾನೆ. ಮತ್ತು ಅವನಿಗೆ ಮೈಸೂರು ಸೀಮೆಯ ಪೊಲೀಸು ರೆಗ್ಯುಲೇಷನಿನ ಪ್ರಕಾರ ಒಬ್ಬ ಪೊಲೀಸು ಇನ್ಸ್‌ಪೆಕ್ಟರ ಅಧಿಕಾರಗಳನ್ನು ಕೆಲಸಗಳನ್ನು ಮತ್ತು ಸ್ವಾತಂತ್ರ್ಯಗಳನ್ನು ಕೊಟ್ಟಿರುತ್ತದೆ.

(ರುಜು)

ಪೊಲೀಸು ಇನ್ಸ್‌ಪೆಕ್ಟರ ಜನರಲು.

*ವಿವರಗಳು.

ತಂದೆಯ ಹೆಸರು.........................

ವಂಶ, ಮತ, ಜಾತಿ.........................

ಹುಟ್ಟಿದ ಸ್ಥಳ.........................

ವಯಸ್ಸು.........................

IIನೆ ಮಾದರಿ.

ಇನ್ಸ್‌ಪೆಕ್ಟರ ಅಂತಸ್ತಿಗೆ ಕೆಳಗಿನ ಪೊಲೀಸು ಆಫಿಸರಿಗೆ ಕೊಡಬೇಕಾದ ಸರ್ಟಿಫಿಕೇಟಿನ ಮಾದರಿ.

ಡಿಸ್ಟ್ರಿಕ್ಟು
ಡೆಪ್ಯುಟಿ ಕಮಿಷನರ
ಮುದ್ರೆ.

_____________________ ಮೈಸೂರು ಪೊಲೀಸು ಸೇನೆಗೆ *A. B. ನೇಮಿಸಲ್ಪಟ್ಟಿರುತ್ತಾನೆ, ಮತ್ತು ಅವನಿಗೆ 19 ನೆ ವರುಷದ ಮೈಸೂರು ಸೀಮೆಯ ಪೊಲೀಸು ರೆಗ್ಯುಲೇಷನಿನ ಪ್ರಕಾರ ಒಬ್ಬ ಪೊಲೀಸು ಆಫಿಸರ ಅಧಿಕಾರಗಳನ್ನು, ಕೆಲಸಗಳನ್ನು ಮತ್ತು ಸ್ವಾತಂತ್ರ್ಯಗಳನ್ನು ಕೊಟ್ಟಿರುತ್ತದೆ.

(ರುಜು)

ಡೆಪ್ಯುಟಿ ಕಮಿಷನರು.

* ವಿವರಗಳು.

ತಂದೆಯ ಹೆಸರು.........................

ವಂಶ, ಮತ, ಜಾತಿ.........................

ಹುಟ್ಟಿದ ಸ್ಥಳ.........................

ವಯಸ್ಸು.........................

ಉದ್ದೇಶಗಳ ಮತ್ತು ಕಾರಣಗಳ ವಿವರಣೆ.

ಪೋಲೀಸು ಆಡಳಿತದ ವಿಷಯದಲ್ಲಿ ಎರಡು ಪ್ರತ್ಯೇಕ ಚಟ್ಟಗಳು ಸಂಸ್ಥಾನದಲ್ಲಿ ಈಗ ಜಾರಿಯಲ್ಲಿರುತ್ತವೆ; ಯಾವುವೆಂದರೆ, ಬೆಂಗಳೂರು ಪಟ್ಟಣದಲ್ಲಿ ಉಪಯೋಗದಲ್ಲಿ ಇರುವ 1861ನೆ ವರುಷದ 5ನೆ ಆಕ್ಟು ಮತ್ತು ಮೈಸೂರು ಸೀಮೆಯ ಇತರ ಕಡೆಗಳಲ್ಲಿ ಉಪಯೋಗದಲ್ಲಿ ಇರುವ 1872ನೆ ವರುಷದ ರೆಗ್ಯುಲರ್ (ಕ್ರಮ) ಮತ್ತು ಗ್ರಾಮ ಪೋಲೀಸು ನಿಬಂಧನೆಗಳು. ಸಂಸ್ಥಾನದೊಳಗೆಲ್ಲಾ ಒಂದೇ ತರದ ಆಡಳಿತದ ಪದ್ಧತಿಯು ಇರಬೇಕೆಂದು 1886ರಲ್ಲಿ ಒಪ್ಪಿಕೊಳ್ಳಲ್ಪಟ್ಟಿತು; ಮತ್ತು ಬೆಂಗಳೂರು ಪಟ್ಟಣದಲ್ಲಿ 1861ನೆ ವರುಷದ 5ನೆ ಆಕ್ಟನ್ನು ತಳ್ಳುಪಡಿ ಮಾಡಿ, ಅಲ್ಲಿಗೆ ಸರಿಯಾದ ತಿದ್ದುಪಾಟುಗಳೊಂದಿಗೆ ಸದರಿ ಪೋಲೀಸು ನಿಬಂಧನೆಗಳು ವ್ಯಾಪಿಸುವಂತೆ, ಒಂದು ಚಟ್ಟದ ಚಿತ್ತು ಪ್ರತಿಯು ಸಿದ್ಧವಾಯಿತು. ಆದರೂ, 1889ರಲ್ಲಿ ಸದರಿ ನಿಬಂಧನೆಗಳನ್ನು ಬಿಟ್ಟು, 1861ನೆ ಇಸವಿಯ 5ನೆ ಆಕ್ಟನ್ನು ಸ್ವೀಕರಿಸಿ ಒಂದು ರೆಗ್ಯುಲೇಷನನ್ನು ರಚಿಸಬೇಕೆನುತಲೂ, ಅದೇ ವೇಳೆಯಲ್ಲಿ ಸದರಿ ನಿಬಂಧನೆಗಳ ಪೈಕಿ ಬೇಕಾದ ಯಾವ ಭಾಗಗಳನ್ನಾದರೂ ಅಂಥಾ ರೆಗ್ಯುಲೇಷನಿನ ಮೇರೆಗೆ ರಚಿಸಿದ ನಿಬಂಧನೆಗಳೋಪಾದಿಯಲ್ಲಿ ಇಟ್ಟುಕೊಳ್ಳಬೇಕೆನುತಲೂ ತೀರ್ಮಾನವಾಯಿತು; ಆದರೆ ಹೊರಗಿನಿಂದ ಬರಮಾಡಿದ ಗುಣದೋಷ ವಿವೇಚನಗಳಿಂದ ಈ ಚಿತ್ತು ಪ್ರತಿಯಲ್ಲಿ ಬಹಳ ನ್ಯೂನತೆಗಳಿರುವುದಾಗಿಯೂ ಅದು ಕಾನೂನಾಗಿ ಅಂಗೀಕಾರವಾಗುವುದಕ್ಕೆ ಮುಂಚೆ ಅದರಲ್ಲಿ ಬಹಳ ಶೋಧನೆಯಾಗಬೇಕಾದೀತೆನುತಲೂ ತೋರಿತು. ಈ ಕಾರಣಗಳಿಗೋಸ್ಕರ ಆ ಚಿತ್ತು ಪ್ರತಿಯು 1897ರಲ್ಲಿ ನಿಂತುಹೋಯಿತು, ಮತ್ತು 1890ನೆ ವರುಷದ 4ನೆ ಬೊಂಬಾಯಿ ಡಿಸ್ಟ್ರಿಕ್ಟು ಪೋಲೀಸು ಚಟ್ಟದ ಆಧಾರದ ಮೇಲೆ ಒಂದು ಹೊಸ ಚಟ್ಟದ ಚಿತ್ತು ಪ್ರತಿಯು ಅಣಿಯಾಯಿತು; ಇದು, ಮೈಸೂರು 'ಸೀಮೆಯ ವಿದ್ಯಮಾನಗಳು' ಅಗತ್ಯಪಡಿಸಿದಂಥಾ ಭೇದಗಳೊಂದಿಗೂ. ಜೋಡಣೆಗಳೊಂದಿಗೂ, 1889ರ ಚಿತ್ತು ಪ್ರತಿಗಿಂತ ಉತ್ತಮವಾಗಿ ಕಂಡಿತು. ಇದರಲ್ಲಿ (ಗ್ರಾಮ ಪೋಲೀಸಿನ ವಿಷಯವಾಗಿ ಬೇರೆ ಚಟ್ಟವು ಆಗತಕ್ಕದ್ದೆಂದು ಅದನ್ನು ಉಳಿಸಿಕೊಂಡು) ಖರೇ ರೆಗ್ಯುಲರು ಪೋಲೀಸಿನ ಪ್ರಶಂಸೆಯೇ ಬಂದಿರುತ್ತದಲ್ಲದೆ, ಯಾವ ಚಟ್ಟವನ್ನು ಮೈಸೂರು ಸೀಮೆಗೆಲ್ಲಾ ವ್ಯಾಪಿಸುವಂತೆ ಮಾಡಬೇಕೆಂದು ನಾನಾ ಸ್ಥಳಗಳಿಂದ ಪದೇಪದೆ ಸೂಚಿಸಲ್ಪಟ್ಟಿತೋ ಆ 1867ನೆ ವರುಷದ ಜೂಜಾಟದ ಚಟ್ಟದ ನಿಯಮಗಳು ಸಹ ಇದರಲ್ಲಿ ಸರಿಯಾದ ಸ್ಥಾನಗಳಲ್ಲಿ ಅಡಗಿರುತ್ತವೆ. ಮೈಸೂರು ಸೀಮೆಯಲ್ಲಿ ಈಗಿರುವ ಪೋಲೀಸು ಆಡಳಿತದ ಕ್ರಮ ಸಂಸ್ಥಾನದಲ್ಲೆಲ್ಲಾ ಪೋಲೀಸಿಗೆ ಸಂಬಂಧಿಸುವ ಸಮಸ್ತ ವಿಚಾರಗಳಲ್ಲೂ ಹೆಚ್ಚಾಗಿ ಸರಿಬೀಳುವ ಹಾಗೆ ಈ ಚಿತ್ತು ಪ್ರತಿಯನ್ನು ಮಾಡುವುದಕ್ಕೋಸ್ಕರ ಈಚೆಗೆ ಇದನ್ನು ಲೆಜಿಸಲೆಟಿವ್ ಯಾ ನ್ಯಾಯ ವಿಧಾಯಕ ಇಲಾಖೆಯಲ್ಲಿ ವಿಶೇಷವಾಗಿ ಶೋಧಿಸಿ ಸರ್ವ ಜನರ ತಿಳಿವಳಿಕೆಯ ಬಗ್ಗೆ 1901ನೆ ಸೆಪ್ಟಂಬರ್ ತಿಂಗಳಲ್ಲಿ ಮೈಸೂರು ಗೆಜೆಟಿನಲ್ಲಿ ಪ್ರಕಟಿಸಲಾಯಿತು.

ಆದಾಗ್ಯೂ ಚಿತ್ತು ರೆಗ್ಯುಲೇಷನನ್ನು ತೀರ್ಮಾನವಾಗಿ ಆಲೋಚನೆಗೆ ತೆಗೆದುಕೊಳ್ಳುವುದಕ್ಕೆ ಮುಂಚೆ, ಈ ವಿಷಯವು ಬಹಳ ಮುಖ್ಯವಾಗಿಯೂ ನಾನಾ ಸಂಗತಿಗಳಿಗೆ ಸಂಬಂಧಿಸುವುದಾಗಿಯೂ ಇರುವುದರಿಂದ ಸಾಮಾನ್ಯವಾಗಿ ಸ್ಥಳೀಯ ವಿದ್ಯಮಾನಗಳಲ್ಲಿಯೂ ವಿಶೇಷವಾಗಿ ಪೋಲೀಸು ಆಡಳಿತದಲ್ಲಿಯೂ ಅನುಭವವುಳ್ಳ ಕೆಲ ಸರ್ಕಾರದ ಉದ್ಯೋಗಸ್ಥರಿಂದ ಚಿತ್ತು ರೆಗ್ಯುಲೇಷನನ್ನು ಪರಿಶೋಧನೆ ಮಾಡಿಸುವುದು ಸರ್ಕಾರದವರಿಗೆ ಅವಶ್ಯವಾಗಿ ತೋರಿತು. ಆದಕಾರಣ ಚಿತ್ತು ಪೋಲೀಸು ರೆಗ್ಯುಲೇಷನನ್ನು ಪರಿಶೋಧಿಸುವುದಕ್ಕೆ ಇದರ ಪಕ್ಕದಲ್ಲಿ ಕಾಣಿಸಿರುವ ಉದ್ಯೋಗಸ್ಥರುಳ್ಳ ಒಂದು ಕಮಿಟಿ ಯಾ ಸಮಾಜವನ್ನು 1904ನೆ ಇಸವಿ ಆಗಸ್ಟ್ 29ನೆ ತಾರೀಖಿನ ಜೆ. 565-77—ಲೆಜಿಸ್. 11-04ನೆ ನಂಬರು ಸರ್ಕಾರಿ ಹುಕುಮಿನಲ್ಲಿ ನೇಮಿಸಲಾಯಿತು. ಸಮಾಜದವರು ಬಹಳ ಪರ್ಯಾಲೋಚನೆಯನ್ನೂ ಚರ್ಚೆಯನ್ನೂ ಮಾಡಿದ ತರುವಾಯ ಚಿತ್ತು ರೆಗ್ಯುಲೇಷನಿನಲ್ಲಿ ಬೇರೆಬೇರೆ ಬದಲಾವಣೆಗಳನ್ನು ಮಾಡಬೇಕೆಂದು ಹೇಳಿ ಅವರ ರಿಪೋರ್ಟನ್ನು ಕಳುಹಿಸಿದರು. ಸಮಾಜದವರು ಪ್ರಶಂಸಿಸಿದ ಹೆಚ್ಚು ವಿಷಯಗಳಲ್ಲಿಯೂ ಬದಲಾವಣೆಗಳಲ್ಲಿಯೂ ಮುಖ್ಯತರವಾದುವುಗಳನ್ನು ಈ ಕೆಳಗೆ ಕಾಣಿಸಿ ಇದೆ.

1. ಮಿ॥ ಎ. ರಂಗಸಾಮೈಯ್ಯಂಗಾರ್, ಚೀಫ್ ಕೋರ್ಟು ಜಡ್ಜಿ, ಪ್ರೆಸಿಡೆಂಟ್ (ಸಮಾಜಾಧ್ಯಕ್ಷರು.)
2. ಮಿ॥ ಎಫ್. ಇ. ಸಿ. ಕಾರ್, ಪೋಲೀಸು ಇನ್ಸ್‌ಪೆಕ್ಟರ್ ಜನರಲ್.
3. ಮಿ॥ ಎಂ. ನಾರಾಯಣರಾವ್, ಆಗ ಕಡೂರು ಡೆಪ್ಯುಟಿ ಕಮಿಷನರು.
4. ಮಿ॥ ಕೆ. ಪಿ. ಪುಟ್ಟಣ್ಣ ಶೆಟ್ಟಿ, ಆಗ ಕೋಲಾರದ ಡೆಪ್ಯುಟಿ ಕಮಿಷನರು.

3ನೆ ಪ್ರಕರಣ, ಗ್ರಾಮ ಪೋಲೀಸಿಗೆ ನಿಬಂಧನೆಗಳನ್ನು ನಿರ್ಮಿಸಲು ಅಧಿಕಾರದ ವಿಚಾರವಾದ ಹೊಸ ವಿಷಯ, ಇದು 1865ರ 3ನೆ ಮದ್ರಾಸು ಚಟ್ಟದ 78 ಮತ್ತು 79ನೆ ಪ್ರಕರಣಗಳ ಆಧಾರದ ಮೇಲೆ ಏರ್ಪಟ್ಟಿರುತ್ತದೆ;

4ನೆ ಪ್ರಕರಣದ (b) ವಾಕ್ಯವು, ಇದರಲ್ಲಿರುವ "ಡಿಸ್ಟ್ರಿಕ್ಟು ಸೂಪರಿಂಟೆಂಡೆಂಟು" ಎಂಬುವುದರ ಅರ್ಥ ವಿವರಣೆಯನ್ನು 1895ರ 8ನೆ ಚಟ್ಟದಿಂದ ತೆಗೆದುಕೊಂಡು ಇರುತ್ತದೆ;

ಈ (c), (e) ಮತ್ತು (g) ವಾಕ್ಯಗಳು, ಇವುಗಳಲ್ಲಿರುವ "ತಾಲ್ಲೂಕು" ಮತ್ತು "ಸಬ್ ತಾಲ್ಲೂಕಿ"ನ ಅರ್ಥವಿವರಣೆಗಳು ಹೊಸದಾಗಿ ಇರುತ್ತವೆ; ಈ ರೆಗ್ಯುಲೇಷನಿನ ಉದ್ದೇಶಗಳಿಗಾಗಿ ಒಬ್ಬ ಡಿಸ್ಟ್ರಿಕ್ಟು ಸೂಪರಿಂಟೆಂಡೆಂಟಿನ ವಶದಲ್ಲಿ ಇಡಲ್ಪಟ್ಟಿರುವ ಡಿಸ್ಟ್ರಿಕ್ಟಿನ ಒಂದು ಭಾಗವನ್ನು ಒಳಕೊಂಡಿರುವಂತೆ "ಡಿಸ್ಟ್ರಿಕ್ಟು" ಎಂಬ ಮಾತನ್ನು ವಿವರಿಸಿ ಇದೆ.

5ನೆ ಪ್ರಕರಣ, ಪೋಲೀಸು ಸೇನೆಯನ್ನು ಸ್ಥಾಪಿಸೋಣವನ್ನು ಕುರಿತದ್ದು. ಇದನ್ನು, ಪ್ರತಿ ಡಿಸ್ಟ್ರಿಕ್ಟಿಗೆ ಒಂದು ಬೇರೆ ಪೋಲೀಸು ಸೇನೆ ಆಗಬೇಕೆಂಬುವ ಬೊಂಬಾಯಿ ಚಟ್ಟದ 4ನೆ ಪ್ರಕರಣಕ್ಕೆ ಬದಲಾಗಿ, 1861ರ 5ನೆ ಆಕ್ಟಿನ 2ನೆ ಪ್ರಕರಣದಿಂದ ಹೊಂದಿಸಿಕೊಂಡಿರುತ್ತದೆ;

10ನೆ ಪ್ರಕರಣ, ಇನ್ಸ್‌ಪೆಕ್ಟರ್ ಜನರಲು ಇನ್ಸ್‌ಪೆಕ್ಟರುಗಳಿಗೆ ಕೊಡಬೇಕಾದ ಚಾಕರಿಯ ನೇಮಕದ ಸರ್ಟಿಫಿಕೇಟಿನ ಮಾದರಿಯನ್ನು ವಿಧಿಸಿ ಇದೆ, ಮತ್ತು ಯಾವುದಾದರೂ ಒಂದು ಡಿಸ್ಟ್ರಿಕ್ಟಿನಲ್ಲಿ ಚಾಕರಿಗೆ ತನಗೆ ಹಕ್ಕಿರುವುದಾಗಿ ತಿಳಿದುಕೊಳ್ಳಲು ಪೋಲೀಸಿನವನಿಗೆ ಅವಕಾಶ ಕೊಡದಂತೆ ಇನ್ಸ್‌ಪೆಕ್ಟರುಗಳ ಸ್ಥಾನಕ್ಕೆ ಕೆಳಗಿನ ಪೋಲೀಸು ಆಫಿಸರುಗಳಿಗೆ ಕೊಡುವ ಸರ್ಟಿಫಿಕೇಟಿನ ಮಾದರಿಯನ್ನು ಬದಲಾಯಿಸಿ ಇದೆ.

12ನೆ ಪ್ರಕರಣ, ಇದು ಹೊಸದು. ಇದರಂತೆ ಇನ್ಸ್‌ಪೆಕ್ಟರ್ ಜನರಲು ಪೋಲೀಸು ಇಲಾಖೆಯ ಮುಖ್ಯಸ್ಥನಾಗಿಯೂ ಪೋಲೀಸಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳಲ್ಲಿಯೂ ಸರ್ಕಾರಕ್ಕೆ ಆಲೋಚನೆ ಹೇಳುವವನಾಗಿಯೂ ಇರತಕ್ಕದ್ದು, ಆತನು ಪೋಲೀಸು ಸೇನೆಯ ಮೇಲೂ ತಪ್ಪಿತದ ಮೇಲೂ— ತತ್ರಾಪಿ ಕ್ರಮವಾಗಿ ತಪ್ಪಿತ ಮಾಡುವುದೇ ಕೆಲಸವಾಗಿರುವವರಿಂದ ಮಾಡಲ್ಪಡುವ

ಕಪ್ಪಿತದ ಮೇಲೂ—ಸಾಮಾನ್ಯವಾದ ಮೇಲ್ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ಸರ್ಕಾರದವರ ಅನುಮತಿಗೆ ಒಳಪಟ್ಟು ಈ ರೆಗ್ಯುಲೇಷನಿಗೂ ಪೊಲೀಸು ಸೇನೆಯ ಮೇಲ್ವಿಚಾರಣೆ ಮತ್ತು ಶಿಕ್ಷಣಕ್ಕೂ ಸಂಬಂಧಪಟ್ಟ ಕೆಲವು ವಿಷಯಗಳಲ್ಲಿ ನಿಬಂಧನೆಗಳನ್ನೂ ಹುಕುಂಗಳನ್ನೂ ಮಾಡತಕ್ಕದ್ದು.

15ನೆ ಪ್ರಕರಣ (1). ಇದು ಹೊಸದು. ಈ ಪ್ರಕರಣವು—14ನೆ ಪ್ರಕರಣದ ಮೇರೆ ತನ್ನ ಡಿಸ್ಟ್ರಿಕ್ಟಿನ ಪೊಲೀಸಿಗೆ ಮುಖ್ಯಸ್ಥನಾಗಿರುವ ಡೆಪ್ಯುಟಿ ಕಮಿಷನರ ಸಾಮಾನ್ಯವಾದ ಮೇಲ್ವಿಚಾರಣೆಗೆ ಒಳಪಟ್ಟು ಮತ್ತು ಡೆಪ್ಯುಟಿ ಕಮಿಷನರ ಅಧಿಕಾರಗಳಿಗೂ ಉತ್ತರವಾದಿತ್ವಕ್ಕೂ ಅಪಾಯವಿಲ್ಲದೆ, ಡಿಸ್ಟ್ರಿಕ್ಟಿನ ಪೊಲೀಸಿಗೆ ಸಂಬಂಧಪಟ್ಟ ಆಯುಧಗಳು, ಸೈನ್ಯದ ಉಪಕರಣಗಳು, ಕವಾತು, ವಿದ್ಯಾಭ್ಯಾಸ ಮತ್ತು ಇತರ ದಿನಚರಿಯ ವಿಷಯಗಳಲ್ಲಿ ಮೇಲ್ವಿಚಾರಣೆಯ ಅಧಿಕಾರವನ್ನು ಡಿಸ್ಟ್ರಿಕ್ಟು ಸೂಪರಿಂಟೆಂಡೆಂಟಿಗೆ ಕೊಡುತ್ತದೆ.

(2)ನೆ ಒಳಪ್ರಕರಣ. ಹಾಗೆಯೇ ಇದು ತಾಲ್ಲೂಕು ಪೊಲೀಸಿನವರ ಮೇಲೆ ಅಮಲ್ದಾರರ ಅಥವಾ ಡೆಪ್ಯುಟಿ ಅಮಲ್ದಾರರ ಮತ್ತು ಇನ್ಸ್‌ಪೆಕ್ಟರ ಬೇರೆ ಬೇರೆ ಅಧಿಕಾರಗಳನ್ನು ವಿವರಿಸುತ್ತದೆ.

16ನೆ ಪ್ರಕರಣ. ಕ್ರಮ ಪೊಲೀಸು ನಿಬಂಧನೆಗಳಲ್ಲಿ 7ನೆ ನಿಬಂಧನೆಯಿಂದ ಹೊಂದಿಸಿರುವ ಈ ಪ್ರಕರಣವು ತನ್ನ ಸರಹದ್ದಿನೊಳಗಿರುವ ಪೊಲೀಸು ಸೈನ್ಯದ ಯಾವುದಾದರೂ ಅವಶ್ಯವಾದ ಹಂಚಿಕೆಯನ್ನು ಮಾಡಲು ಡೆಪ್ಯುಟಿ ಕಮಿಷನರಿಗೆ ಅಧಿಕಾರ ಕೊಡುತ್ತದೆ.

1[illegible] ಮತ್ತು 19ನೆ ಪ್ರಕರಣಗಳು. ಈ ಪ್ರಕರಣಗಳ ಮೇರೆ ಇನ್ಸ್‌ಪೆಕ್ಟರ್ ಜನರಲೂ ಮತ್ತು ಡೆಪ್ಯುಟಿ ಕಮಿಷನರೂ ಕೂಡ ಅವಶ್ಯವಾಗಿ ತೋರಿದಾಗ ಹೆಚ್ಚು ಪೊಲೀಸಿನವರನ್ನು ಚಾಕರಿಗೆ ಇಡುವುದಕ್ಕೆ ತಾವೇ ಪ್ರವರ್ತಿಸಬಹುದು.

2[illegible]ನೆ ಪ್ರಕರಣ. ತತ್ತರಿಸುವ ಸ್ಥಿತಿಯಲ್ಲಿ ಇರುವಂತೆ ಪ್ರಕಟಿಸಲ್ಪಟ್ಟಿರುವ ಪ್ರದೇಶದಲ್ಲಿ ದಂಗೆಯಿಂದಾಗಲಿ, ಅಕ್ರಮಕೂಟದಿಂದಾಗಲಿ ಉಂಟಾಗುವ ಹಾನಿಯ ಪ್ರಮೇಯಗಳಿಗೆ ಮಾತ್ರವಲ್ಲದೆ ಅಕ್ರಮಕೂಟದ ಉದ್ದೇಶವು ನೆರವೇರಿದ ಬಳಿಕ ತೊಂದರೆಯು ಕಡಮೆಯಾಗೋಣದರಿಂದ ಅಂಥಾ ಇಸ್ತಿಹಾರ್ನಾಮೆಯ ಅವಶ್ಯಕತೆಯು ತಪ್ಪಿಹೋಗಿರುವ ಪ್ರಮೇಯಗಳಿಗೂ ಈ ಪ್ರಕರಣದ ನಿಯಮಗಳನ್ನು ಲಗಾವಾಗುವಂತೆ ಮಾಡಿದೆ.

25ನೆ ಪ್ರಕರಣ. ಯಾವುವುಗಳನ್ನು ಕುರಿತು ಇನ್ಸ್‌ಪೆಕ್ಟರ್ ಜನರಲು ರಿಪೋರ್ಟುಗಳನ್ನೂ ಹೇಳಿಕೆಗಳನ್ನೂ ತರಿಸಿಕೊಳ್ಳಬಹುದೋ ಅಂಥಾ ವಿಷಯಗಳನ್ನು ಇನ್ನೂ ಪೂರ್ತಿಯಾಗಿ ವಿವರಿಸಿ ಇದೆ.

27 (2)ನೆ ಪ್ರಕರಣ. ಕಾನ್ಸ್‌ಟೆಬಿಲುಗಳಿಗೆ ಕೊಡುವ ಶಿಕ್ಷೆಯ ಹುಕುಂಗಳ ಮೇಲೆ ಅಪೀಲುಗಳು ಇನ್ಸ್‌ಪೆಕ್ಟರ್ ಜನರಲಿಗೂ, ಇತರ ಆಫಿಸರುಗಳ ವಿಷಯದಲ್ಲಿ ಅಪೀಲುಗಳು ಸರ್ಕಾರಕ್ಕೂ ಮಾಡಲ್ಪಡುವಂತೆ ಮಿತಪಡಿಸುತ್ತದೆ.

38ನೆ ಪ್ರಕರಣ. ಜೂಜಾಟವು ದೂರವಾದ ಗ್ರಾಮಗಳಿಗೂ ಹರಡಿಕೊಂಡಿರುವುದರಿಂದ ಸಾಧಾರಣವಾದ ಜೂಜಿನ ಮನೆಯನ್ನು ಪ್ರವೇಶಿಸಲು ಒಬ್ಬ ಪೊಲೀಸು ಆಫಿಸರಿಗೆ ಅಧಿಕಾರ ಕೊಡುವಂತೆ ಡಿಸ್ಟ್ರಿಕ್ಟು ಮಾಜಿಸ್ಟ್ರೇಟು ಮುಂತಾದವರಿಗೆ ಅಧಿಕಾರ ಕೊಡುವ ಈ ಪ್ರಕರಣವನ್ನು 1867ನೆ ಇಸವಿಯ 3ನೆದಾದ ಪಬ್ಲಿಕ್ ಗ್ಯಾಂಬ್ಲಿಂಗ್ ಆಕ್ಟು ಯಾ ಸಾರ್ವಜನಿಕ ಜೂಜಿನ ಆಕ್ಟಿನಿಂದಲೂ 1[illegible]8[illegible]ನೆ ಇಸವಿಯ ಮದರಾಸು 3ನೆ ಆಕ್ಟಿನಿಂದಲೂ ಸಂಗ್ರಹಿಸಿ ಸಂಸ್ಥಾನಕ್ಕೆಲ್ಲಾ ಲಗಾವಾಗುವಂತೆ ಮಾಡಿದೆ.

4[illegible]ನೆ ಪ್ರಕರಣ. ಇದು ಕ್ರಮವಾದ ಅಧಿಕಾರಿಯಿಂದ ಮಾಡಲ್ಪಟ್ಟ ಯಾವುದಾದರೂ ನಿಬಂಧನೆಗಳಿಗೊಳಪಟ್ಟು ಸಾರ್ವಜನಿಕ ಬೀದಿಗಳಲ್ಲಿ ಕೂಟಗಳು ಮೊದಲಾದುವುಗಳನ್ನು ಕ್ರಮಪಡಿಸುವ ಅಧಿಕಾರವನ್ನು ಇನ್ಸ್‌ಪೆಕ್ಟರ ಸ್ಥಾನಕ್ಕೆ ಕಡಮೆಯಿಲ್ಲದ ಪೊಲೀಸು ಆಫಿಸರುಗಳಿಗೆ ಕೊಡುತ್ತದೆ.

5[illegible]ನೆ ಪ್ರಕರಣ. ಬಾಧ್ಯರಿಲ್ಲದ ಸ್ವತ್ತಿನ ವಿಷಯದಲ್ಲಿ "ಡಿಸ್ಟ್ರಿಕ್ಟು ಮಾಜಿಸ್ಟ್ರೇಟು ಆಗಾಗ್ಗೆ ನೇಮಿಸಬಹುದಾದ ಮಾಜಿಸ್ಟ್ರೇಟಿಗೆ" ಬದಲಾಗಿ ಸ್ಥಳೀಯ ಅಧಿಕಾರವುಳ್ಳ ಮಾಜಿಸ್ಟ್ರೇಟಿಗೆ ರಿಪೋರ್ಟುಗಳನ್ನು ಕಳುಹಿಸುವಂತೆಯೂ ಅಂಥಾ ಮಾಜಿಸ್ಟ್ರೇಟು ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 52[illegible]ನೆ ಪ್ರಕರಣದಲ್ಲಿ ವಿಧಿಸಿರುವ ಕ್ರಮವನ್ನು ಅನುಸರಿಸುವಂತೆಯೂ ಈ ಪ್ರಕರಣವನ್ನು ತಿದ್ದುಪಾಟು ಮಾಡಿದೆ.

55ನೆ ಪ್ರಕರಣ (b) ವಾಕ್ಯ. ಮದರಾಸು ಸಿಟಿ ಪೊಲೀಸು ಆಕ್ಟು 71 (5)ನೆ ಪ್ರಕರಣದಲ್ಲಿ ಕೊಟ್ಟಿರುವ ಮಾದರಿಯನ್ನು ಹೊಂದಿಸಿ ಅದರ ಜತೆಗೆ ದುಡುಕಾಗಿ ಅಥವಾ ಅಸಡ್ಡೆಯಾಗಿ ಗಾಡಿಯನ್ನು ಹೊಡೆಯುವುದನ್ನು ನಿಲ್ಲಿಸುವುದಕ್ಕಾಗಿ ಒಂದು ನಿಯಮವನ್ನು ಸೇರಿಸಿ ಇದನ್ನು ಪ್ರಪಡಿಸಿದೆ.

(i) ವಾಕ್ಯ. ಅಡ್ಡಿ ಮಾಡುವುದರ, ಅಪಾಯದ, ಭಯದ ಅಥವಾ ತೊಂದರೆಯ, ರುಜುವಾತಿಲ್ಲದೆ ಈ ವಾಕ್ಯದಲ್ಲಿ ಹೇಳಿರುವ ಕೃತ್ಯಗಳನ್ನು ಶಿಕ್ಷೆಗೆ ಗುರಿಮಾಡಿದೆ. ಇಂಡಿಯನ್ ಪೀನಲ್ ಕೋಡಿನ 67ನೆ ಪ್ರಕರಣದಲ್ಲಿ ಏನು ಅಡಗಿದ್ದಾಗ್ಯೂ ಸರಿಯೆ, ಅಪರಾಧ ತೆರುವುದಕ್ಕೆ ತಪ್ಪಿದರೆ, ಸೆರೆಯಲ್ಲಿಡೋಣವು 8 ದಿನಗಳಿಗೆ ಮೀರತಕ್ಕದ್ದಲ್ಲವೆಂದು ಒಂದು ನಿಯಮವನ್ನು ಈ ಪ್ರಕರಣದ ಕಡೇ ವಾಕ್ಯಕ್ಕೆ ಸೇರಿಸಿ ಇದೆ. ಯಾತಕ್ಕೆಂದರೆ, ಅಂಥಾ ಪ್ರಮೇಯಗಳಲ್ಲಿ ಸೆರೆಯಲ್ಲಿಡುವುದಕ್ಕೆ ಹೆಚ್ಚು ಕಾಲವನ್ನು ವಿಧಿಸುವುದು ಅನಾವಶ್ಯವಾಗಿ ತೋರಿತು.

76ನೆ ಪ್ರಕರಣ. ಪೊಲೀಸು ಆಫಿಸರುಗಳಿಗೆ ಕಾನೂನಿನ ಮೇರೆ ಸಲ್ಲತಕ್ಕ ಮುಟ್ಟುಗೋಲು ಮುಂತಾದುವುಗಳಿಗೆ ಮಾತ್ರವಲ್ಲದೆ, ಮಾಜಿಸ್ಟ್ರೇಟುಗಳಿಂದ ಅವರಿಗೆ ಬಹುಮಾನವಾಗಿ ಕೊಡಲ್ಪಡುವ ಮೊತ್ತಗಳಿಗೂ ಲಗಾವಾಗುವಂತೆಯೂ ಮತ್ತು ಪೊಲೀಸು ಆಫಿಸರುಗಳಲ್ಲದೆ ಯಾರಾದರೂ ಮನುಷ್ಯರಿಗೆ ಅಂಥಾ ಬಹುಮಾನಗಳ ಮೊತ್ತವನ್ನು ಅಥವಾ ಯಾವುದಾದರೂ ಭಾಗವನ್ನು ಕೊಡುವುದಕ್ಕಾಗುವಂತೆಯೂ ಈ ಪ್ರಕರಣವನ್ನು ಸ್ವಲ್ಪ ಬದಲಾಯಿಸಿದೆ.

77ನೆ ಪ್ರಕರಣದ (2) ಮತ್ತು (3)ನೆ ಒಳ ಪ್ರಕರಣಗಳು. ಮ್ಯುನಿಸಿಪಾಲಿಟಿಗಳಿಗೆ ಪೊಲೀಸು ಖರ್ಚನ್ನು ತಪ್ಪಿಸಿರುವುದರಿಂದಲೂ ಯಾವ ಮ್ಯುನಿಸಿಪಾಲಿಟಿಗೂ ಪ್ರತ್ಯೇಕವಾದ ಪೊಲೀಸು ಸೈನ್ಯವಿಲ್ಲದೆ ಇರುವುದರಿಂದಲೂ ಮ್ಯುನಿಸಿಪಾಲಿಟಿಗಳ ಕೆಲಸದಲ್ಲಿ ಇಟ್ಟಿರುವ ಪೊಲೀಸು ಸೈನ್ಯಕ್ಕೆ ಸ್ಥಳವಸತಿಯನ್ನು ಮ್ಯುನಿಸಿಪಾಲಿಟಿಗಳು ಒದಗಿಸಬೇಕೆಂಬ ಈ ಪ್ರಕರಣಗಳನ್ನು ಬಿಟ್ಟುಬಿಟ್ಟಿದೆ.

ಅಪ್ಪಣೆಯ ಮೇರೆಗೆ,

ಕೆ. ಮೈಲಾರಿರಾವ್,

ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ ಸೆಕ್ರೆಟರಿ.

1900ನೆ ಇಸವಿಯ 3ನೆ ನಂಬರ್ ಮೈಸೂರು ಕೋರ್ಟು ರುಸುಂಗಳ ರೆಗ್ಯುಲೇಷನನ್ನು ತಿದ್ದುಪಾಟು ಮಾಡುವ ಬಿಲ್ಲು.

1900ನೆ ಇಸವಿಯ ಮೈಸೂರು ಕೋರ್ಟು ರುಸುಂಗಳ ರೆಗ್ಯುಲೇಷನನ್ನು ತಿದ್ದುಪಾಟು ಮಾಡುವುದು ಯುಕ್ತವಾಗಿರುವುದರಿಂದ, ಶ್ರೀಮನ್ ಮಹಾರಾಜರವರು ಕೆಳಗಿನಂತೆ ವಿಧಿಸಲು ಅಪ್ಪಣೆ ದಯಪಾಲಿಸಿರುತ್ತಾರೆ :

1. 4ನೆ ಪ್ರಕರಣದ (5) ನೆ ಕಲಮಿನಲ್ಲಿ "(12)ನೆ ಕಲಮಿನಲ್ಲಿ ನಿಯಮ ಮಾಡಿರುವ ಸಂದರ್ಭದಲ್ಲಿ ವಿನಾ" ಎಂಬ ಮಾತುಗಳನ್ನು "ಜಮೀನನ್ನೂ" ಎಂಬ ಮಾತಿಗೆ ಮೊದಲು ಸೇರಿಸತಕ್ಕದ್ದು.

2. 4ನೆ ಪ್ರಕರಣದ ಕೊನೆಯಲ್ಲಿ ಈ ಕೆಳಗಿನದನ್ನು ಸೇರಿಸತಕ್ಕದ್ದು :—

"(12) ಗೇಣಿಗೆ ಅಥವಾ ಬಕ್ಕಲಿಗೆ ಕೊಟ್ಟಿರುವ ಜಮೀನಿನ, ಮನೆಗಳ ಮತ್ತು ತೋಟಗಳ ಸ್ವಾಧೀನತೆಯನ್ನು ಪಡೆಯುವುದಕ್ಕೋಸ್ಕರ ಬಬ್ಬ ಗೇಣಿಗೆ ಕೊಡುವವನು ಅಥವಾ ವರ್ಗದಾರ ಅಥವಾ ಜಮೀನಿನ ಒಡೆಯನು ಗೇಣಿದಾರನ ಅಥವಾ ಬಕ್ಕಲಿನ ಮೇಲೆ ತರುವ ವ್ಯಾಜ್ಯಗಳಲ್ಲಿ ಕೊಡಬೇಕಾಗುವ ರುಸುಂ ಯಾವುದೆಂದರೆ—

ಒಂದು ಗೊತ್ತಾದ ರುಸುಂ ಆದ 10 ರೂಪಾಯಿ, ಅಥವಾ ದಾವಾ ಅರ್ಜಿ ಕೊಡುವ ತಾರೀಖಿನ ಮುಂಚಿನ ವರ್ಷಕ್ಕೆ ಕೊಡತಕ್ಕ ಬಾಡಿಗೆಯು ಅಥವಾ ಗುತ್ತಿಗೆಯ ಮೊತ್ತಕ್ಕೆ ಅನುಗುಣವಾದ ರುಸುಂ, ಇವೆರಡರಲ್ಲಿ ಯಾವುದು ಹೆಚ್ಚಾಗಿದೆಯೋ ಅದು"

ಉದ್ದೇಶಗಳ ಮತ್ತು ಕಾರಣಗಳ ವಿವರಣೆ.

1900ನೆ ಕೋರ್ಟು ಫೀಜು ರೆಗ್ಯುಲೇಷನಿನ 4ನೆ ಪ್ರಕರಣದ (5)ನೆ ವಾಕ್ಯದ ಮೇರೆ ಜಮೀನಿನ, ಮನೆಗಳ ಮತ್ತು ತೋಟಗಳ ಸ್ವಾಧೀನಕ್ಕಾಗಿ ತರಲ್ಪಡುವ ದಾವೆಗಳಲ್ಲಿ ಕೊಡಬೇಕಾದ ಕೋರ್ಟು ರುಸುಮು ವಿವಾದಾಸ್ಪದವಾದ ಸ್ವತ್ತಿನ ಬೆಲೆಯ ಮೊತ್ತಕ್ಕನುಗುಣವಾಗಿ ಕ್ರಮಪಡಿಸಲ್ಪಡುತ್ತದೆ. ಇದು ವಿವಾದಾಸ್ಪದವಾದ ಸ್ವತ್ತಿಗೆ ವಾದಿಯ ಹಕ್ಕು ವಾದಿಸಲ್ಪಡುವ ದಾವೆಗಗೆ ಮಾತ್ರವಲ್ಲದೆ ಗೇಣಿದಾರನು ಅಥವಾ ಬಕ್ಕಲು, ಗೇಣಿಯ ಮೊಬಲಗು ಅಥವಾ ಬಾಡಿಗೆಯನ್ನು ಕೊಡದೆ ಹೋದುದಕ್ಕೋಸ್ಕರ ಅಥವಾ ಅದೇ ತರದ ಇತರ ಕಾರಣಕ್ಕೋಸ್ಕರ ಗೇಣಿಗೆ ಕೊಟ್ಟವನು ಅಥವಾ ಭೂಮಿಯ ಒಡೆಯನು ತನ್ನ ಗೇಣಿದಾರನಿಂದ ಅಥವಾ ಬಕ್ಕಲಿಂದ ತನ್ನ ಸ್ವತ್ತಿನ ಸ್ವಾಧೀನತೆಯನ್ನು ಪಡೆಯಲಪೇಕ್ಷಿಸುವ ಹೊರಡಿಸುವಿಕೆಯ ದಾವೆಗಳಿಗೂ ಕೂಡ ಲಗಾವಾಗುತ್ತದೆ. ಹೊರಡಿಸುವಿಕೆಯ ದಾವೆಗಳಲ್ಲಿಯೂ ಕೂಡ ಭಾರಿಯಾದ ಕೋರ್ಟು ರುಸುಂಗಳನ್ನು ಕೊಡಬೇಕಾಗಿರುವ ಗೇಣಿಗೆ ಕೊಡುವವರಿಗೂ ಜಮೀನಿನ ಒಡೆಯರಿಗೂ ಇದರಿಂದ ಕಷ್ಟವಾಗಿರುವಂತೆ ಸರ್ಕಾರಕ್ಕೆ ಅರಿಕೆಮಾಡಿಕೊಳ್ಳಲ್ಪಟ್ಟಿತು. (1900ನೆ ಇಸವಿಯ ಪ್ರಜಾ ಪ್ರತಿನಿಧಿ ಸಭೆಯ ನಡವಳಿಕೆಗಳ 47ನೆ ನಂಬರು ವಿಷಯವನ್ನು ನೋಡಿ) ಈ ಕಷ್ಟವು ಪರಿಹಾರವಾಗುವಂತೆ ಕೋರ್ಟು ರುಸುಂಗಳ ರೆಗ್ಯುಲೇಷನನ್ನು ತಿದ್ದುಪಾಟು ಮಾಡುವುದೇ ಈ ಬಿಲ್ಲಿನ ಉದ್ದೇಶವಾಗಿದೆ. ಈ ಬಿಲ್ಲು, ಗೇಣಿಗೆ ಕೊಡುವವನು (ಅಥವಾ ವರ್ಗದಾರ) ಅಥವಾ ಜಮೀನಿನ ಒಡೆಯನು ಗೇಣಿದಾರನ ಅಥವಾ ಬಕ್ಕಲಿನ ಮೇಲೆ ಸ್ವಾಧೀನತೆಗಾಗಿ ತರುವ ದಾವೆ ಯಾ ವ್ಯಾಜ್ಯಗಳಲ್ಲಿ ಕೊಡತಕ್ಕ ರುಸುಮು ಒಂದು ಗೊತ್ತಾದ ರುಸುಮಾದ ಹತ್ತು ರೂಪಾಯಿ ಅಥವಾ ದಾವಾ ಅರ್ಜಿ ಕೊಡುವ ತಾರೀಖಿನ ಮುಂಚಿನ ವರ್ಷಕ್ಕೆ ಕೊಡತಕ್ಕ ಬಾಡಿಗೆಯು ಅಥವಾ ಗುತ್ತಿಗೆಯ ಮೊತ್ತಕ್ಕೆ ಅನುಗುಣವಾದ ರುಸುಂ, ಇವೆರಡರಲ್ಲಿ ಯಾವುದು ಹೆಚ್ಚಾಗಿದೆಯೋ ಅದು ಆಗಿರತಕ್ಕದ್ದೆಂದು ವಿಧಿಸುತ್ತದೆ. ತತ್ಪ್ರಯುಕ್ತವಾದ ಒಂದು ಬದಲಾವಣೆಯಾಗಿ, ಗೇಣಿಗೆಕೊಡುವವರು ಅಥವಾ ಜಮೀನಿನ (ವರ್ಗದಾರರು ಯಾ) ಒಡೆಯರು ತರುವ ಹೊರಡಿಸುವಿಕೆಯ ದಾವೆಗಳನ್ನು 4ನೆ ಪ್ರಕರಣದ (5)ನೆ ವಾಕ್ಯದಿಂದ ವಿನಾಯಿಸುವ ಒಂದು ನಿಯಮವನ್ನು ಸೇರಿಸಿ ಇದೆ.

ಅಪ್ಪಣೆಯ ಮೇರೆಗೆ,
ಕೆ. ಮೈಲಾರಿರಾವ್,
ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ ಸೆಕ್ರೆಟರಿ.

ತಾರೀಖು 20ನೆ ಜುಲೈ 1907.

ನಂ. ಜೆ. 219 - ಲೆಜಿಸ್ 14-04-14, ಒಂದು ಎಕ್ಸ್ಟ್ರಾಡಿಷನ್ ತಪ್ಪಿತಕ್ಕಾಗಿ ಮೈಸೂರು ಸಂಸ್ಥಾನದ ಕ್ರಿಮಿನಲ್ ಕೋರ್ಟಿನ ಫೈಸಲ್ ಮೇರೆಗೆ ಮೈಸೂರು ಸೀಮೆಯ ಜೈಲಿನಲ್ಲಿ ಇಡಲ್ಪಟ್ಟು, ಮತ್ತು ಬ್ರಿಟಿಷ್ ಇಂಡಿಯಾವಿನಲ್ಲಿ ಮಾಡಿದ ಎಕ್ಸ್ಟ್ರಾಡಿಷನ್ ತಪ್ಪಿತಕ್ಕಾಗಿ ಆಪಾದನೆ ಮಾಡಲ್ಪಟ್ಟ ಒಬ್ಬ ಮನುಷ್ಯನನ್ನು ಒಂದು ಸ್ಥಳದಲ್ಲಿ ಮತ್ತು ಯಾದಿಯಲ್ಲಿ ತೋರಿಸಲ್ಪಟ್ಟ ಒಬ್ಬ ಮನುಷ್ಯನಿಗೆ ಅಥವಾ ಅಧಿಕಾರಿಗೆ ತಂದು ಒಪ್ಪಿಸುವಂತೆ, ಮೈಸೂರು ಸಂಸ್ಥಾನದಲ್ಲಿ ಅಂಥಾ ಮನುಷ್ಯನು ಕೈದಿನಲ್ಲಿಡಲ್ಪಟ್ಟಿರುವ ಬಂದೀಖಾನೆಯ ಚಾರ್ಜಿನಲ್ಲಿರುವ ಅಧಿಕಾರಿಗೆ ಬ್ರಿಟಿಷ್ ಇಂಡಿಯಾವಿನ ಒಬ್ಬ ಮಾಜಿಸ್ಟ್ರೇಟಿಂದ ಅಥವಾ ಆ ಯುಕ್ತ ಅಧಿಕಾರ ಸರಹದ್ದುಳ್ಳ ಕೋರ್ಟಿನಿಂದ ಯಾದಿಯು ಬಂದರೆ, ಅಂಥಾ ಅಧಿಕಾರಿಯು ಅಂಥಾ ಮನುಷ್ಯನನ್ನು ಸದರೀ ಸ್ಥಳಕ್ಕೆ ಕಳುಹಿಸಿ ಸದರೀ ಯಾದಿಯಲ್ಲಿ ಕಂಡ ಮನುಷ್ಯನಿಗೆ ಅಥವಾ ಅಧಿಕಾರಿಗೆ ಒಪ್ಪಿಸಲ್ಪಡುವಂತೆ ಮಾಡುವುದರ ಮೂಲಕ ಆ ಯಾದಿಯ ಕೋರಿಕೆಯಂತೆ ನಡೆಸಿಕೊಡಬೇಕೆಂದು ಮೈಸೂರು ಶ್ರೀಮನ್ಮಹಾರಾಜರವರು ಹುಕುಂ ದಯಪಾಲಿಸುತ್ತಾರೆ:

'ಪರಂತು, ಈ ಕೆಳಗೆ ಹೇಳುವಂತೆ—

(1) ಅಂಥಾ ಪ್ರತಿಯೊಂದು ಯಾದಿಯೂ ಘನವೆತ್ತಿದ ಮೈಸೂರು ಸೀಮೆಯ ರೆಸಿಡೆಂಟರವರ ಮೂಲಕ ಕಳುಹಿಸಲ್ಪಟ್ಟಿರಬೇಕು.

(2) ಯಾದಿಯು ಯಾವ ಮನುಷ್ಯನಿಗೆ ಸಂಬಂಧಪಟ್ಟಿರುತ್ತದೆಯೋ ಆ ಮನುಷ್ಯನು ಫಾಶಿ ಸಜಾ ವಿಧಿಸಲ್ಪಟ್ಟವನಾಗಿದ್ದರೆ, ಅಂಥಾ ಯಾವ ಯಾದಿಯ ಕೋರಿಕೆಯಂತೆಯೂ ನಡೆಸಿಕೊಡಕೂಡದು.

ವಿವರಣೆ—ಈ ಹುಕುಂನಲ್ಲಿ, "ಎಕ್ಸ್ಟ್ರಾಡಿಷನ್ ತಪ್ಪಿತ" ಎಂದರೆ 1903ನೆ ಇಸವಿಯ ಇಂಡಿಯನ್ ಎಕ್ಸ್ಟ್ರಾಡಿಷನ್ ಆಕ್ಟಿನ (ಸಭಾಸಮೇತರಾದ ಗವರ್ನರ್ ಜನರಲ್‌ರವರ 1903ನೆ ಇಸವಿಯ 15ನೆ ನಂಬರ್ ಆಕ್ಟಿನ) ಒಂದನೆಯ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟಂಥಾ ಯಾವುದಾದರೂ ತಪ್ಪಿತವೆಂದು ಅರ್ಥವಾಗುತ್ತದೆ.

2. ಮೈಸೂರು ಸೀಮೆಯಲ್ಲಿ ತಪ್ಪು ಸಾಬೀತಾಗಿ ಬಂದೀಖಾನೆಯಲ್ಲಿ ಇಡಲ್ಪಟ್ಟು, ಸಜಾ ಅನುಭವಿಸುತ್ತಿರುವ ಮನುಷ್ಯನನ್ನು ಮೇಲೆ ಹೇಳಿದ ಮೇರೆಗೆ ಒಪ್ಪಿಸಿದ ತರುವಾಯ ಬ್ರಿಟಿಷ್ ಇಂಡಿಯಾವಿನಿಂದ ಮೈಸೂರು ಸೀಮೆಗೆ ಅವನನ್ನು ಪುನಃ ವಾಪಸು ಕಳುಹಿಸುವ ತಾರೀಖಿನ ವರೆಗೆ, ಅವನ ಸಜಾವು ಅಮಾನತ್ತಿನಲ್ಲಿಡಲ್ಪಟ್ಟಂತೆ ಭಾವಿಸಲ್ಪಟ್ಟು, ತರುವಾಯ ಸದರಿ ತಾರೀಖಿನಲ್ಲಿ ಪುನಃ ಪ್ರಾರಂಭವಾಗಿ ಅವನನ್ನು ಒಪ್ಪಿಸಿಕೊಟ್ಟ ತಾರೀಖಿನಲ್ಲಿ ಮುಗಿಯದೆ ಉಳಿದಿದ್ದ ಭಾಗದ ಕಾಲದ ಪರ್ಯಂತ ನಡೆಯತಕ್ಕದ್ದೆಂದೂ ಶ್ರೀಮನ್ಮಹಾರಾಜರವರು ಹುಕುಂ ದಯಪಾಲಿಸಿರುತ್ತಾರೆ.

3. ಯಾವುದಾದರೂ ತಪ್ಪಿತಕ್ಕಾಗಿ ಮೈಸೂರು ಸಂಸ್ಥಾನದ ಕ್ರಿಮಿನಲ್ ಕೋರ್ಟಿನವರ ಫೈಸಲ್ ಮೇರೆಗೆ ಮೈಸೂರು ಸಂಸ್ಥಾನದ ಬಂದೀಖಾನೆಯಲ್ಲಿ ಇಡಲ್ಪಟ್ಟಿದ್ದು ಬ್ರಿಟಿಷ್ ಇಂಡಿಯಾವಿನಲ್ಲಿ ಮಾಡಿದ ಎಕ್ಸ್ಟ್ರಾಡಿಷನ್ ತಪ್ಪಿತಕ್ಕಾಗಿ ಅನಂತರ ಆಪಾದಿಸಲ್ಪಡಬಹುದಾದ ಯಾವ ಮನುಷ್ಯನ ವಿಷಯದಲ್ಲಾಗಲಿ ಈ ಇಸ್ತಿಹಾರಿನ ನಿಯಮಗಳು ಸರ್ಕಾರದ ವಿಶೇಷ ಹುಕುಂ ಮೇರೆಗೆ ಉಪಯೋಗವಾಗಬಹುದು.

ವಿವರಣೆ.—"ತಪ್ಪಿತ" ಎಂಬ ಮಾತು, ಈ ಪ್ಯಾರಾವಿನಲ್ಲಿ ಪ್ರಥಮತಃ ಬರುವಾಗ, ಬ್ರಿಟಿಷ್ ಇಂಡಿಯಾವಿನಲ್ಲಿ ಮಾಡಲ್ಪಟ್ಟಿದ್ದರೆ ತಪ್ಪಿತವಾಗದೆ ಇರುತ್ತಿದ್ದಂಥಾ ಕಾರ್ಯವನ್ನು ಒಳಗೊಂಡಿರುವುದಿಲ್ಲ.

ಹುಕುಂ ಬಮೋಜಿಬ್,

ಸಿ. ಎಸ್. ಬಾಲಸುಂದರಂ ಐಯ್ಯರ್,

ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಮೈಸೂರ ಗೆಜೆಟ್.

ನಂ. 42] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 32.

ಬೆಂಗಳೂರು, ಗುರುವಾರ, ಆಗಸ್ಟು ತಾ|| 8, ಸ್ನ 1907.

IIIನೆ ಭಾಗ

ಲೆಜಿಸ್ಲೆಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವು ಇಲಾಖೆ.

ನಂಬರು 293—ಮೆಡಿ. (43-06)—7, ತಾರೀಖು 11ನೆ ಜುಲೈ 1907.

1906ನೆ ಇಸವಿಯ ಮೈಸೂರು ಸಿಡುಬು ಹಾಕುವ ರೆಗ್ಯುಲೇಷನಿನ ಪ್ರಕಾರದ ನಿಬಂಧನೆಗಳು.

1906ನೆ ಇಸವಿಯ ಮೈಸೂರು ಸಿಡುಬು ಹಾಕುವ ರೆಗ್ಯುಲೇಷನಿನ 2 (1)ನೆ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ನಡೆಸುವುದರಲ್ಲಿ, ಎಲ್ಲಿ ಸಿಡುಬು ಹಾಕೋಣವು ಅವಶ್ಯವಾಗಿರತಕ್ಕದೆಂದು ಪ್ರಕಟಿಸಿದೆಯೋ ಅಂಥಾ ಸ್ಥಳೀಯ ಪ್ರದೇಶಗಳಲ್ಲಿ ಅಂಥಾ ಪ್ರಕಟನೆಯು ಉಪಯೋಗದಲ್ಲಿರುವ ಗಡುವಿನವರೆಗೂ ಅಲ್ಲಿನ ಜನಗಳಿಗೆ ಸಿಡುಬು ಹಾಕೋಣವನ್ನು ಕ್ರಮಪಡಿಸುವುದಕ್ಕೆ ಈ ಕೆಳಗಿನ ನಿಬಂಧನೆಗಳನ್ನು ವಿಧಿಸಲು ಶ್ರೀಮನ್ಮ ಮಹಾರಾಜರವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ :—

1. ವಿಷಯದಲ್ಲಿ ಅಥವಾ ಪೂರ್ವಾಪರ ಸಂಬಂಧದಲ್ಲಿ ಏನಾದರೂ ವಿರೋಧವಾಗಿದ್ದ ಹೊರತು ಈ ನಿಬಂಧನೆಗಳಲ್ಲಿ,

"ತಂದೆ ತಾಯಿ" — (1) ತಂದೆತಾಯಿ ಎಂದರೆ ಒಂದು ಔರಸ ಮಗುವಿನ ತಂದೆ ಅಥವಾ ತಾಯಿ ಮತ್ತು ಒಂದು ಅನೌರಸ ಮಗುವಿನ ತಾಯಿ ಎಂದು ಅರ್ಥ.

"ರಕ್ಷಕ" — (2) ರಕ್ಷಕ ಎಂದರೆ ವ್ಯವಹಾರಶಾಸ್ತ್ರ ರೀತ್ಯಾ ಅಥವಾ ಸಹಜವಾದ ಹಕ್ಕಿನಿಂದ, ಅಥವಾ ಅಂಗೀಕರಿಸಲ್ಪಟ್ಟ ವಾಡಿಕೆಯಿಂದ ಯಾವುದಾದರೂ ಮಗುವಿನ ರಕ್ಷಣೆ, ಪೋಷಣೆ, ಮತ್ತು ಬದರಿಕೆಯು ಯಾವನಿಗೆ ಬಂದಿದೆಯೋ, ಅಥವಾ ಯಾವನು ಯಾವುದಾದರೂ ಮಗುವಿನ ರಕ್ಷಣೆ, ಪೋಷಣೆ ಅಥವಾ ಬದರಿಕೆಯನ್ನು ಅಂಗೀಕರಿಸಿರುತ್ತಾನೆಯೋ ಅಥವಾ ವಹಿಸಿರುತ್ತಾನೆಯೋ ಅಥವಾ ಯಾವುದಾದರೂ ಮಗುವಿನ ರಕ್ಷಣೆ ಅಥವಾ ಬದರಿಕೆಯು, ಇದಕ್ಕಾಗಿ ನ್ಯಾಯವಾಗಿ ಅಧಿಕಾರ ಹೊಂದಿರುವ ಯಾವನಾದರೂ ಅಧಿಕಾರಿಯಿಂದ ಯಾವನಿಗೆ ಒಪ್ಪಿಸಲ್ಪಟ್ಟಿದೆಯೋ ಅಂಥಾ ಯಾವನಾದರೂ ಮನುಷ್ಯನೆಂದು ಅರ್ಥ.

"ಸಿಡುಬು ಹಾಕುವವನು" — (3) ಸಿಡುಬು ಹಾಕುವವನು ಎಂದರೆ ಸಿಡುಬಿನ ವ್ಯಾಧಿಯು ಬಾರದಂತೆ ಜನಗಳಿಗೆ ಸಿಡುಬು ಹಾಕಲು ಸರ್ಕಾರಿ ಸ್ಯಾನಿಟರಿ ಕಮಿಷನರಿಂದ ಅಧಿಕಾರ ಕೊಡಲ್ಪಟ್ಟಿರುವ ಯಾವನಾದರೂ ವೈದ್ಯ, ಅಥವಾ ಕ್ರಮವಾಗಿ ಯೋಗ್ಯತೆಯನ್ನು ಹೊಂದಿದ ಇತರ ಮನುಷ್ಯನೆಂದು ಅರ್ಥ.

"ವೈದ್ಯ" — (4) ವೈದ್ಯನು ಎಂದರೆ ಒಂದು (ಯೂನಿವರ್ಸಿಟಿ) ವಿಶ್ವವಿದ್ಯಾಲಯದ ಅಥವಾ ಕಾಲೇಜಿನ (ಡಿಗ್ರಿ) ಪದವಿಯನ್ನು ಅಥವಾ ವೈದ್ಯರಲ್ಲಿ (ಡಿಪ್ಲೊಮಾ) ಸನ್ನದನ್ನು ಅಥವಾ ಒಂದು ಪರಿಗ್ರಹಿಸಲ್ಪಟ್ಟ ವೈದ್ಯ ಪಾಠಶಾಲೆಯಿಂದ ಯೋಗ್ಯತಾ ಪತ್ರಿಕೆಯನ್ನು ಹೊಂದಿರುವ ಹಾಸ್ಪಿಟಲ್ ಅಸಿಸ್ಟೆಂಟಿನ ಅಥವಾ ಮೇಲ್ಪಟ್ಟ ಸ್ಥಾನದ ಮನುಷ್ಯನೆಂದು ಅರ್ಥ.

"ಮಗು" (5) ಮಗು ಎಂದರೆ ಆರು ತಿಂಗಳಿಗೆ ಮೇಲ್ಪಟ್ಟು ಹನ್ನೆರಡು ವರ್ಷಗಳ ವಯಸ್ಸಿಗೆ ಒಳಪಟ್ಟಿರುವ ಹುಡುಗ ಅಥವಾ ಹುಡುಗಿ ಎಂದು ಅರ್ಥ.

"ವಯಸ್ಥ" (6) ವಯಸ್ಥನು ಎಂದರೆ, ಹನ್ನೆರಡು ಅಥವಾ ಅದಕ್ಕೆ ಮೇಲ್ಪಟ್ಟ ಮತ್ತು ಅರವತ್ತಕ್ಕೆ ಒಳಪಟ್ಟ ವಯಸ್ಸಿನ ಯಾವನಾದರೂ ಮನುಷ್ಯನೆಂದು ಅರ್ಥ.

(7) ರಕ್ಷಿಸಲ್ಪಡದ ಮನುಷ್ಯನು—ಸಿಡುಬಿನ ವ್ಯಾಧಿಯನ್ನು ಉಂಟಾಗಿ ಇದ್ದುದರಿಂದ ಅಥವಾ ಸಾರ್ಥಕವಾಗಿ ಸಿಡುಬು ಹಾಕಲ್ಪಟ್ಟಿರುವುದರಿಂದ ಸಿಡುಬಿನ ವ್ಯಾಧಿಯು ಬಾರದಂತೆ ರಕ್ಷಿಸಲ್ಪಡದೆ ಇರುವ ಅಥವಾ ಸಿಡುಬು ಹಾಕುವುದಕ್ಕೆ ಅಗ್ರಾಹಕನಾಗಿರುವುದಾಗಿ ಈ ನಿಬಂಧನೆಗಳಲ್ಲಿ 11ನೆ ನಿಬಂಧನೆಯ ಮೇರೆ ದೃಢೀಕರಿಸಲ್ಪಡದೆ ಇರುವ ಮನುಷ್ಯ, ಮಗು, ಅಥವಾ ವಯಸ್ಥನಾಗಿ ಇರುತ್ತಾನೆ.

"ರಕ್ಷಿಸಲ್ಪಡದ ಮನುಷ್ಯನು"

"ಸಿಡುಬು ಹಾಕುವ ಕೋಠಿ" (8) ಸಿಡುಬು ಹಾಕುವ ಕೋಠಿ ಎಂದರೆ ಎಲ್ಲಿ ಸಿಡುಬು ಹಾಕುವವನಿಂದ ಜನಗಳಿಗೆ ಸಿಡುಬು ಹಾಕಲ್ಪಡುತ್ತದೆಯೋ ಅಥವಾ ಎಲ್ಲಿ ಉಚಿತವಾಗಿ, ಸಿಡುಬು ಹಾಕಲ್ಪಡುತ್ತದೆಯೋ ಅಂಥಾ ಸ್ಥಳ ಅಥವಾ ಕಟ್ಟಡ ಎಂದು ಅರ್ಥ.

(9) ಸಿಡುಬು ಹಾಕುವ ಮಂಡಲ ಎಂದರೆ ಎಲ್ಲಿ ಸಿಡುಬು ಹಾಕೋಣವು ಅವಶ್ಯಕವಾಗಿ ಮಾಡಲ್ಪಟ್ಟಿದೆಯೋ ಮತ್ತು ಯಾವುದು ಹಾಕುವ ಕೆಲಸಗಳಿಗಾಗಿ ಭಾಗಗಳಾಗಿ ವಿಭಾಗಿಸಲ್ಪಟ್ಟಿದೆಯೋ ಮತ್ತು ಯಾವುದರ ಅಂಥಾ ಪ್ರತಿ ಭಾಗದಲ್ಲಿಯೂ ಒಂದು ಅಥವಾ ಹೆಚ್ಚು ಸಿಡುಬು ಹಾಕುವ ಕೋಠಿಗಳು ಇಡಲ್ಪಟ್ಟಿವೆಯೋ ಅಂಥಾ ಸ್ಥಳೀಯ ಪ್ರದೇಶದ ಅಂಥಾ ಭಾಗಗಳಲ್ಲಿ ಒಂದು ಎಂದು ಅರ್ಥ.

"ಸಿಡುಬು ಹಾಕುವ ಮಂಡಲ"

2. ಯಾವುದರಲ್ಲಿ ಸಿಡುಬು ಹಾಕೋಣವು ಅವಶ್ಯಕವೆಂದು ಪ್ರಕಟಿಸಲ್ಪಟ್ಟಿದೆಯೋ ಅಂಥಾ ಪ್ರತಿ ಸ್ಥಳೀಯ ಪ್ರದೇಶವು ಸಿಡುಬುಹಾಕುವ ಮಂಡಲವಾಗಿರತಕ್ಕದ್ದು ಅಥವಾ ಇದರಲ್ಲಿ ಮುಂದೆ ವಿಧಿಸಿರುವ ರೀತಿಯಲ್ಲಿ ಅಂಥಾ ಮಂಡಲಗಳಾಗಿ ವಿಭಾಗಿಸಲ್ಪಡತಕ್ಕದ್ದು.

3. ಎಲ್ಲಿ ಸಿಡುಬು ಹಾಕೋಣವು ಕ್ಲುಪ್ತವಾದ ಕೆಲವು ಘಂಟೆಗಳಲ್ಲಿ ಉಚಿತವಾಗಿ ಮಾಡಲ್ಪಡುತ್ತದೆಯೋ ಅಂಥಾ ಒಂದು ಅಥವಾ ಹೆಚ್ಚು ಸಿಡುಬು ಹಾಕುವ ಕೋಠಿಗಳನ್ನು ಪ್ರತಿ ಮಂಡಲವೂ ಉಂಟಾಗಿರತಕ್ಕದ್ದು. ಪ್ರತಿ ಮಂಡಲಕ್ಕೂ ಇದರಲ್ಲಿ ಮುಂದೆ ವಿಧಿಸಿರುವ ರೀತಿಯಲ್ಲಿ ಒಬ್ಬ ಅಥವಾ ಹೆಚ್ಚು ಸಿಡುಬು ಹಾಕುವವರನ್ನು ನೇಮಿಸತಕ್ಕದ್ದು; ಮತ್ತು ಪ್ರತಿ ಸ್ಥಳೀಯ ಪ್ರದೇಶಕ್ಕು, ಇದರಲ್ಲಿ ಮುಂದೆ ವಿಧಿಸಿರುವ ರೀತಿಯಲ್ಲಿ ಒಬ್ಬ ಅಥವಾ ಹೆಚ್ಚು ಸಿಡುಬು ಹಾಕುವುದರ ಸೂಪರಿಂಟೆಂಡೆಂಟುಗಳನ್ನು ನೇಮಿಸತಕ್ಕದ್ದು. ಅಂಥಾ ಸೂಪರಿಂಟೆಂಡೆಂಟು ವಾಡಿಕೆಯಾಗಿ ಸದರೀ ಸ್ಥಳೀಯ ಪ್ರದೇಶದ ಆರೋಗ್ಯದ ವೈದ್ಯ ಅಧಿಕಾರಿಯಾಗಿ ಅಥವಾ ಅಂಥಾ ಅಧಿಕಾರಿಯು ಇಲ್ಲದೆ ಇರುವಲ್ಲಿ, ಅವಶ್ಯಕವಾದ ವಿಶೇಷ ಶಿಕ್ಷಣವನ್ನು ಹೊಂದಿರುವ ಕ್ರಮವಾದ ಯೋಗ್ಯತೆಯುಳ್ಳ ವೈದ್ಯ ಅಧಿಕಾರಿಯಾಗಿ ಇರತಕ್ಕದ್ದು.

"ಸಿಡುಬು ಹಾಕುವ ಕೋಠಿಗಳು". "ಸಿಡುಬು ಹಾಕುವುದು". "ಸಿಡುಬು ಹಾಕುವುದರ ಸೂಪರಿಂಟೆಂಡೆಂಟುಗಳು"

4. ಸ್ವಂತವಾಗಿ ಸಿಡುಬು ಹಾಕುವವರ ನೇಮಕವು ಮೈಸೂರು ಸರ್ಕಾರದ ಸ್ಯಾನಿಟರಿ ಕಮಿಷನರಿಗೆ ಸೇರಿ ಇರತಕ್ಕದ್ದು; ಸಿಡುಬು ಹಾಕುವವನಾಗಲಪೇಕ್ಷಿಸುವವನು ಯೋಗ್ಯನಾಗಿದ್ದಾನೆಂದು ತಾವು ತೃಪ್ತಿಪಟ್ಟ ತರುವಾಯ, ಒಂದು ಸಿಡುಬು ಹಾಕುವ ಮಂಡಲದಲ್ಲಿ ಸಿಡುಬು ಹಾಕುವುದಕ್ಕೆ ಅವನಿಗೆ ಅಧಿಕಾರ ಕೊಡುವ ಒಂದು ಬರಹಮೂಲಕವಾದ ಲೈಸೆನ್ಸನ್ನು ಅವರು ಅವನಿಗೆ ಕೊಡುವರು. ಮೇಲ್ಕಂಡ ಸ್ಯಾನಿಟರಿ ಕಮಿಷನರ ವಿವೇಕಾನುಸಾರವಾಗಿ ಈ ಲೈಸೆನ್ಸನ್ನು ಸ್ವಲ್ಪ ಕಾಲದ ಮಟ್ಟಿಗೆ ನಿಲ್ಲಿಸಬಹುದು ಅಥವಾ ತೆಗೆದು ಹಾಕಬಹುದು.

"ಸ್ವಂತವಾಗಿ ಸಿಡುಬು ಹಾಕುವವರು"

5. ಎಲ್ಲಿ ಸಿಡುಬು ಹಾಕೋಣವು ಅವಶ್ಯಕವೆಂದು ಸರ್ಕಾರದಿಂದ ಪ್ರಕಟಿಸಲ್ಪಟ್ಟದೆಯೋ ಅಂಥಾ ಸ್ಥಳೀಯ ಪ್ರದೇಶದಲ್ಲಿ ಒಂದು ತಿಂಗಳ ಕಾಲದವರೆಗೆ ಯಾವನಾದರೂ "ರಕ್ಷಿಸಲ್ಪಡದ" ಮನುಷ್ಯನು, ವಯಸ್ಥನು, ಅಥವಾ ಮಗುವು ವಾಸಮಾಡಿದಾಗ ಅವನು ಅಥವಾ ಅವಳು ವಯಸ್ಥನಾಗಿ ಅಥವಾ ವಯಸ್ಥಳಾಗಿ ಇದ್ದರೆ ಸಿಡುಬು ಹಾಕಿಸಿಕೊಳ್ಳುವುದಕ್ಕಾಗಿ ಒಂದು ಸಿಡುಬು ಹಾಕುವ ಕೋಠಿಗೆ ಹೋಗತಕ್ಕದ್ದು, ಅಥವಾ ಒಂದು ಮಗುವಾಗಿದ್ದರೆ ಸಿಡುಬು ಹಾಕಿಸುವುದಕ್ಕಾಗಿ ಅದರ ತಂದೆ, ತಾಯಿ ಅಥವಾ ರಕ್ಷಕನು ಅದನ್ನು ಅಲ್ಲಿಗೆ ಕರೆದುಕೊಂಡು ಹೋಗತಕ್ಕದ್ದು ಅಥವಾ ಸಿಡುಬು ಹಾಕಿಸಿಕೊಳ್ಳಬೇಕೆಂಬುವವನು ಅಥವಾ, ಒಂದು ಮಗುವಾಗಿದ್ದರೆ, ಅದರ ತಂದೆ, ತಾಯಿ ಅಥವಾ ರಕ್ಷಕನು ಅವನ ಅಥವಾ ಅದರ ಸಿಡುಬು ಹಾಕೋಣವನ್ನು ಒಬ್ಬ ಸಿಡುಬು ಹಾಕುವವನಿಂದ ಸ್ವಂತವಾಗಿ ಮಾಡಿಸಬಹುದು. ಆದರೆ ಸಿಡುಬಿನ ವ್ಯಾಧಿಯ ಸೋಂಕಿನ ತತ್‌ಕ್ಷಣದ ಅಪಾಯವು ಇದ್ದ ಹೊರತು ಒಂದು ಮನೆತನಕ್ಕೆ ಸೇರಿದ "ರಕ್ಷಿಸಲ್ಪಡದವರು" ತಾವು ವಾಸವಾಡುವ ಮಂಡಲದ ಸೂಪರಿಂಟೆಂಡೆಂಟನ ಅಪ್ಪಣೆಯನ್ನು ಪಡೆದು, ಸಿಡುಬು ಹಾಕಿಸಿಕೊಳ್ಳುವುದರಿಂದ ಆ ಮನೆತನಕ್ಕೆ ಸೇರಿದವರ ಪ್ರತಿ ದಿನದ ಜೀವಿಕೆಗೆ ಸಾಧ್ಯವಾದಷ್ಟು ಸ್ವಲ್ಪ ಅಡ್ಡಿಯಾಗುವಂತೆ ಮೇಲೆ ಕಂಡ ಸೂಪರಿಂಟೆಂಡೆಂಟು ನಿಶ್ಚಯಿಸಬಹುದಾದ ಹಾಗೆ ಸದರಿ ಮೇರೆ ಒಬ್ಬೊಬ್ಬರಾಗಿ ಅಥವಾ ಗುಂಪು ಗುಂಪುಗಳಾಗಿ ಸಿಡುಬು ಹಾಕಿಸಿಕೊಳ್ಳಬಹುದು. ಆದರೆ ಯಾವ ಸಂದರ್ಭದಲ್ಲಿಯೂ ಮೊದಲನೆಯ ಮನುಷ್ಯನು ಅಥವಾ

"ರಕ್ಷಿಸಲ್ಪಡದ" ಮನುಷ್ಯನಿಗೆ ಸಿಡುಬು ಹಾಕತಕ್ಕದ್ದು.

ಮೊದಲನೆಯ ಗುಂಪಿನವರು ಸಿಡುಬು ಹಾಕಿಸಿಕೊಳ್ಳುವುದಕ್ಕೂ ಮತ್ತು ಕೊನೆಯ ಮನುಷ್ಯನು ಅಥವಾ ಕೊನೆಯ ಗುಂಪಿನವರು ಸಿಡುಬು ಹಾಕಿಸಿಕೊಳ್ಳುವುದಕ್ಕೂ ಮೇಲ್ಕಂಡ ಕಾರಣಕ್ಕಾಗಿ ಆಗುವ ಮಧ್ಯಕಾಲವು ಎರಡು ವಾರಗಳಿಗಿಂತ ಹೆಚ್ಚಾಗಲು ಅವಕಾಶ ಕೊಡಕೂಡದು.

ಸಿಡುಬು ಹಾಕುವವನು ಜನಗಳಿಗೆ ಸಿಡುಬು ಹಾಕತಕ್ಕದ್ದು ಅಥವಾ ಸಿಡುಬು ಹಾಕುವುದನ್ನು ಮುಂದಕ್ಕೆ ಇಟ್ಟದಕ್ಕಾಗಿ ಸರ್ಟಿಫಿಕೇಟುಗಳನ್ನು ಕೊಡತಕ್ಕದ್ದು.

6. ಅಂಥಾ ಸಿಡುಬು ಹಾಕುವವರು ಅಂಥಾ ಮನುಷ್ಯನಿಗೆ ಸಿಡುಬು ಹಾಕತಕ್ಕದ್ದು ಮತ್ತು ಅವನಿಗೆ ಅಥವಾ ಅವಳಿಗೆ ಮತ್ತು ಒಂದು ಮಗುವಾಗಿದ್ದರೆ, ಅದರ ತಂದೆ ತಾಯಿ ಅಥವಾ ರಕ್ಷಕನಿಗೆ, ಸಿಡುಬು ಹಾಕಿದ ತೇದಿಯನ್ನೂ ಸಿಡುಬು ಹಾಕುವುದರ ಫಲವನ್ನೂ ತಿಳಿದುಕೊಳ್ಳುವುದಕ್ಕಾಗಿ ಸಿಡುಬು ಹಾಕಿದ ಮನುಷ್ಯನನ್ನು ಅಥವಾ ಮಗುವನ್ನು ಪರೀಕ್ಷಿಸುವ ತೇದಿಯನ್ನೂ ಘಂಟೆಯನ್ನೂ ವಿವರಿಸಿ ಒಂದು ಜ್ಞಾಪಕ ಪತ್ರಿಕೆಯನ್ನು ಕೊಡತಕ್ಕದ್ದು; ಅಥವಾ ಆತನು ಸಿಡುಬು ಹಾಕಿಸಿಕೊಳ್ಳುವುದಕ್ಕೆ ತಕ್ಕದ್ದಲ್ಲದ ಆರೋಗ್ಯಸ್ಥಿತಿಯಲ್ಲಿ ಅಂಥಾ ಮನುಷ್ಯನನ್ನು ಕಂಡರೆ ಅಂಥಾ ಮನುಷ್ಯನಿಗೆ, ಅಥವಾ ಒಂದು ಮಗುವಾಗಿದ್ದರೆ, ಅದರ ತಂದೆ ತಾಯಿಗೆ ಅಥವಾ ರಕ್ಷಕನಿಗೆ ಅಂಥಾ ಮನುಷ್ಯನು ಸಿಡುಬು ಹಾಕಿಸಿಕೊಳ್ಳುವುದಕ್ಕೆ ತಕ್ಕದ್ದಲ್ಲದ ಸ್ಥಿತಿಯಲ್ಲಿದ್ದಾನೆಂಬುವುದನ್ನೂ ಮತ್ತು ಅಂಥಾ ಮನುಷ್ಯನು ಹಾಗೆ ತಕ್ಕವನಲ್ಲವಾಗಿ ಬಹುಶಃ ಇರುವ ಕಾಲವನ್ನೂ ತೋರಿಸುವ ಒಂದು ಸರ್ಟಿಫಿಕೇಟನ್ನು ತನ್ನ ರುಜು ನಿಶಿ ಕೊಡತಕ್ಕದ್ದು.

ಸಿಡುಬು ಹಾಕಿದ ತರುವಾಯ ಪರೀಕ್ಷೆ.

7. ಮೇಲಿನ ಪ್ರಕರಣದಂತೆ ಸಿಡುಬು ಹಾಕಲ್ಪಟ್ಟ ಪ್ರತಿ ಮನುಷ್ಯನೂ, ಅಥವಾ ಒಂದು ಮಗುವಾಗಿದ್ದರೆ, ಅದರ ತಂದೆತಾಯಿ ಅಥವಾ ರಕ್ಷಕನೂ ಜ್ಞಾಪಕ ಪತ್ರಿಕೆಯಲ್ಲಿ ಕಂಡ ತೇದಿ ಮತ್ತು ಘಂಟೆಯಲ್ಲಿ ಪರೀಕ್ಷೆಗಾಗಿ ಸಿಡುಬು ಹಾಕುವವನ ಬಳಿಗೆ ಹೋಗತಕ್ಕದ್ದು, ಅಥವಾ ಮಗುವನ್ನು ಕರೆದುಕೊಂಡು ಹೋಗತಕ್ಕದ್ದು. ಅಥವಾ ಕರೆದುಕೊಂಡು ಹೋಗುವಂತೆ ಮಾಡತಕ್ಕದ್ದು ಅಥವಾ ತನ್ನ ಸ್ವಂತ ಮನೆಯಲ್ಲಿ ಸಿಡುಬು ಹಾಕುವವನಿಂದ ಅದನ್ನು ಪರೀಕ್ಷೆ ಮಾಡಿಸತಕ್ಕದ್ದು; ಮತ್ತು ಅಂಥಾ ಸಿಡುಬು ಹಾಕುವವನು ಆಮೇಲೆ ಅಂಥಾ ಮನುಷ್ಯನು ಅಥವಾ ಮಗುವು ಪರೀಕ್ಷಿಸಲ್ಪಟ್ಟಿತು ಎಂಬುವುದನ್ನು ಮತ್ತು ಅಂಥಾ ಪರೀಕ್ಷೆಯ ಫಲಿತಾಂಶವನ್ನು ವಿವರಿಸುವ ಒಂದು ಸರ್ಟಿಫಿಕೇಟನ್ನು ಮೇಲ್ಕಂಡ ಜ್ಞಾಪಕ ಪತ್ರಿಕೆಗೆ ಸೇರಿಸತಕ್ಕದ್ದು.

ಟಿಪ್ಪಣಿ.—"ಗೋಷಾ" ಅಥವಾ "ಪರದಾ" ಕ್ರಮವನ್ನು ಆಚರಿಸುವ ವಯಸ್ಥರಾದ ಹೆಂಗಸರ ವಿಷಯದಲ್ಲಿ ಅವರು ಹಾಗೆ ಅಪೇಕ್ಷಿಸಿದರೆ, ಸಿಡುಬು ಹಾಕೋಣ ಮತ್ತು ಪರೀಕ್ಷೆ ಇವೆರಡೂ ಒಬ್ಬಳು ಸಿಡುಬು ಹಾಕುವ ಹೆಂಗಸಿಂದ ಮಾಡಲ್ಪಡತಕ್ಕದ್ದು.

ಸಿಡುಬು ಹಾಕುವುದು ಸಾರ್ಥಕವಾಗಿರುವಾಗ ನಡವಳಿಕೆ.

8. ಮೇಲಿನ 7ನೆ ನಿಬಂಧನೆಯಂತೆ ಒಬ್ಬ ಮನುಷ್ಯನನ್ನು ಅಥವಾ ಮಗುವನ್ನು ಪರೀಕ್ಷಿಸುವ ಕಾಲದಲ್ಲಿ ಸಿಡುಬು ಹಾಕೋಣವು ಸಾರ್ಥಕವಾಗಿ ಆಯಿತು ಎಂದು ಗೊತ್ತಾದಾಗ ಆ ಅಭಿಪ್ರಾಯಕ್ಕೆ ಒಂದು ಸರ್ಟಿಫಿಕೇಟನ್ನು ಸಿಡುಬು ಹಾಕುವವನು ಆ ಮನುಷ್ಯನಿಗೆ ಅಥವಾ ಒಂದು ಮಗುವಾಗಿದ್ದರೆ, ಅದರ ತಂದೆತಾಯಿಗೆ ಅಥವಾ ರಕ್ಷಕನಿಗೆ ಕೊಡತಕ್ಕದ್ದು, ಮತ್ತು ಅಂಥಾ ಮನುಷ್ಯನು ಅಥವಾ ಮಗು "ರಕ್ಷಿಸಲ್ಪಟ್ಟಿದೆ" ಎಂದು ಭಾವಿಸಲ್ಪಡತಕ್ಕದ್ದು.

ಸಿಡುಬು ಹಾಕೋಣವು ನಿಷ್ಫಲವಾದಾಗ ನಡವಳಿಕೆ.

9. ಸಿಡುಬು ಹಾಕೋಣವು ನಿಷ್ಫಲವಾಯಿತೆಂದು ಮೇಲ್ಕಂಡಂತೆ ಗೊತ್ತಾದಾಗ, ಆ ಮನುಷ್ಯನು ಅಥವಾ ಒಂದು ಮಗುವಾಗಿದ್ದರೆ ಅದರ ತಂದೆತಾಯಿ ಅಥವಾ ರಕ್ಷಕನು, ಸಿಡುಬು ಹಾಕುವವನು ಹಾಗೆ ಹೇಳಿದರೆ, ಆ ಮನುಷ್ಯನು ಅಥವಾ ಮಗುವು ತೃಪ್ತಿಕರವಾದ ಆರೋಗ್ಯಸ್ಥಿತಿಯಲ್ಲಿದ್ದರೆ, ಕೂಡಲೆ ತಿರಿಗಿ ಸಿಡುಬು ಹಾಕಿಸಿಕೊಳ್ಳತಕ್ಕದ್ದು ಮತ್ತು ಇದರಲ್ಲಿ ಹಿಂದೆ ವಿಧಿಸಿರುವ ರೀತಿಯಲ್ಲಿ ತರುವಾಯ ಪರೀಕ್ಷಿಸಲ್ಪಡತಕ್ಕದ್ದು. ಆ ಮನುಷ್ಯನು ತಕ್ಕ ಆರೋಗ್ಯಸ್ಥಿತಿಯಲ್ಲಿ ಇಲ್ಲದೆ ಇದ್ದರೆ ಆ ಮನುಷ್ಯನು ಹಾಗೆ ತಕ್ಕವನಲ್ಲವಾಗಿರಬಹುದಾದ ಕಾಲವನ್ನು ವಿವರಿಸಿ 6ನೆ ನಿಬಂಧನೆಯಂತೆ ಒಂದು ಸರ್ಟಿಫಿಕೇಟನ್ನು ಸಿಡುಬು ಹಾಕುವವನು ಕೊಡತಕ್ಕದ್ದು. ಆದರೆ ತಿರಿಗಿ ಅಥವಾ ಎರಡನೆಯಸಲ ಸಿಡುಬು ಹಾಕೋಣವು ನಿಷ್ಫಲವಾದ ಸಂದರ್ಭದಲ್ಲಿ ಆ ಮನುಷ್ಯನು ತಿರಿಗಿ ಸಿಡುಬು ಹಾಕಲ್ಪಡುವುದಕ್ಕಾಗಿ ಬಲಾತ್ಕರಿಸಲ್ಪಡತಕ್ಕದ್ದಲ್ಲ. ಆದರೆ ಕಡೇಪಕ್ಷ ಮತ್ತೊಂದಾವರ್ತಿ ಎಂದರೆ ಹದಿನೈದು ದಿನಗಳೊಳಗಾಗಿ ಸಿಡುಬು ಹಾಕಿಸಿಕೊಳ್ಳಬೇಕೆಂದು ಆ ಮನುಷ್ಯನಿಗೆ ಖಂಡಿತವಾಗಿ ಬುದ್ಧಿ ಹೇಳತಕ್ಕದ್ದು. ಯಾತಕ್ಕೆಂದರೆ ಕೆಲವು ವೇಳೆಗಳಲ್ಲಿ ಮನುಷ್ಯನು ಅಗ್ರಾಹಕನಾಗಿ ಇರುವುದರಿಂದ ಹೇಗೋ ಹಾಗೆಯೇ ಸಿಡುಬನ್ನು ಸರಿಯಾಗಿ ಹಾಕದೆ ಇರುವುದರಿಂದಲೂ ಸಿಡುಬು ಹಾಕೋಣವು ನಿಷ್ಫಲವಾಗುತ್ತದೆ.

ಮನುಷ್ಯನು ಸಿಡುಬು ಹಾಕಿಸಿಕೊಳ್ಳಲು ತಕ್ಕವನಾಗಿ ಇಲ್ಲದೆ ಇರುವಾಗ ನಡವಳಿಕೆ.

10. ಒಬ್ಬ ಮನುಷ್ಯನು ಅಥವಾ ಮಗುವು ಸಿಡುಬು ಹಾಕಿಸಿಕೊಳ್ಳಲು ತಕ್ಕ ಸ್ಥಿತಿಯಲ್ಲಿ ಇಲ್ಲವೆಂದು ತೋರಿಸುವ ಮೇಲೆ ಕಂಡ 6ನೆ ಮತ್ತು 9ನೆ ನಿಬಂಧನೆಗಳ ಮೇರೆ ಕೊಟ್ಟ ಸರ್ಟಿಫಿಕೇಟು ಅದರಲ್ಲಿ ಕಂಡ ಗಡುವಿನ ವರೆಗೆ ಉಪಯೋಗದಲ್ಲಿ ಇರತಕ್ಕದ್ದು ಮತ್ತು ಆ ಗಡುವು ತೀರಿದ ಅನಂತರ ಆ ಮನುಷ್ಯನು ಸಿಡುಬು ಹಾಕಿಸಿಕೊಳ್ಳಲು ಸಿಡುಬು ಹಾಕುವವನ ಬಳಿಗೆ ಹೋಗತಕ್ಕದ್ದು, ಅಥವಾ ಒಬ್ಬ ಸಿಡುಬು ಹಾಕುವವನಿಂದ ತನ್ನ ಮನೆಯಲ್ಲಿ ಸಿಡುಬು ಹಾಕಿಸಿಕೊಳ್ಳತಕ್ಕದ್ದು ಅಥವಾ ಒಂದು ಮಗುವಾಗಿದ್ದರೆ ಅದರ ತಂದೆತಾಯಿ ಅಥವಾ ರಕ್ಷಕನು ಸಿಡುಬು ಹಾಕಿಸುವ ಬಗ್ಗೆ ಸಿಡುಬು ಹಾಕುವವನ ಬಳಿಗೆ ಕರೆದುಕೊಂಡು ಹೋಗತಕ್ಕದ್ದು ಅಥವಾ ಕರೆದುಕೊಂಡು ಹೋಗುವಂತೆ ಮಾಡತಕ್ಕದ್ದು ಅಥವಾ ಒಬ್ಬ ಸಿಡುಬು ಹಾಕುವವನಿಂದ ತನ್ನ ಮನೆಯಲ್ಲಿ ಸಿಡುಬು ಹಾಕಿಸತಕ್ಕದ್ದು.

ಸಿಡುಬು ಹಾಕುವುದನ್ನು ಮುಂದಕ್ಕೆ ಹಾಕಿದುದನ್ನು ಕುರಿತ ಸರ್ಟಿಫಿಕೇಟುಗಳ ನವೀಕರಣ.

ಆದರೆ ಆ ಮನುಷ್ಯನು ಅಥವಾ ಮಗುವು ಇನ್ನೂ ಸಿಡುಬು ಹಾಕಿಸಿಕೊಳ್ಳು ವುದಕ್ಕೆ ತಕ್ಕ ಸ್ಥಿತಿಯಲ್ಲಿ ಇಲ್ಲದೆ ಇರುವುದಾಗಿ ಕಂಡುಬಂದರೆ, ಮೇಲೆ ಕಂಡ 6ನೆ ಮತ್ತು 9ನೆ ನಿಬಂಧನೆಗಳ ಮೇರೆ ಕೊಡಲ್ಪಟ್ಟ ಸರ್ಟಿಫಿಕೇಟನ್ನು ನವೀಕರಿಸತಕ್ಕದ್ದು.

ಸಾರ್ಥಕವಾಗಿ ಸಿಡುಬು ಹಾಕುವುದರ ಅಸಾಧ್ಯತೆಯ ಸರ್ಟಿಫಿಕೇಟುಗಳು.

11. ಒಬ್ಬ ಮನುಷ್ಯನಿಗೆ ಅಥವಾ ಮಗುವಿಗೆ ಸಾರ್ಥಕವಾಗಿ ಸಿಡುಬು ಹಾಕುವುದು ಸಾಧ್ಯವಲ್ಲವೆಂದು ಮೂರು ವೇಳೆಗಳಲ್ಲಿ ಸಿಡುಬು ಹಾಕಿದ್ದರೂ ಅಸಾರ್ಥಕವಾದುದರಿಂದ ವ್ಯಕ್ತಪಟ್ಟರೆ ಸಿಡುಬು ಹಾಕುವುದರ ಸೂಪರಿಂಟೆಂಡೆಂಟು ಆ ಅಭಿಪ್ರಾಯಕ್ಕೆ ಒಂದು ಸರ್ಟಿಫಿಕೇಟನ್ನು ತನ್ನ ರುಜುನಿಕ್ಕಿ ಆ ಮನುಷ್ಯನಿಗೆ ಅಥವಾ ಅದು ಮಗುವಾಗಿದ್ದರೆ ಅಂಥಾ ಮಗುವಿನ ತಂದೆತಾಯಿಗೆ ಅಥವಾ ರಕ್ಷಕನಿಗೆ ಕೊಡತಕ್ಕದ್ದು, ಮತ್ತು ಆ ಮನುಷ್ಯನನ್ನು ಅಥವಾ ಮಗುವನ್ನು ಅಲ್ಲಿಂದ ಮುಂದೆ ಸಿಡುಬು ಹಾಕಿಸಿಕೊಳ್ಳುವಂತೆ ಅಥವಾ ಸಿಡುಬು ಹಾಕಿಸಿಕೊಳ್ಳುವಂತೆ ಮಾಡಲ್ಪಡುವಂತೆ ಕೇಳತಕ್ಕದ್ದಲ್ಲ.

ಸ್ವಂತವಾಗಿ ಸಿಡುಬು ಹಾಕುವವರಿಂದ ಸಿಡುಬು ಹಾಕೋಣದರ ಸರ್ಟಿಫಿಕೇಟುಗಳನ್ನು ಸೂಪರಿಂಟೆಂಡೆಂಟಿಗೆ ಕಳುಹಿಸತಕ್ಕದ್ದು.

12. ಯಾವನಾದರೂ ಮನುಷ್ಯನು ವಾಸಮಾಡುವ ಮಂಡಲದಲ್ಲಿ ಸಾರ್ವಜನಿಕ ಸಿಡುಬು ಹಾಕುವವನಾಗಿ ನೇಮಕ ಮಾಡಲ್ಪಟ್ಟವನಲ್ಲದ ಇತರ ಸಿಡುಬು ಹಾಕುವವನಿಂದ ತಾನೇ ಸಿಡುಬು ಹಾಕಿಸಿಕೊಳ್ಳುವ ಅಥವಾ ತನ್ನ ಮನೆತನದ ಯಾವನಾದರೂ ಇತರನಿಗೆ ಅಥವಾ ತನ್ನ ರಕ್ಷಕತ್ವಕ್ಕೆ ಒಳಪಟ್ಟ ಯಾವುದಾದರೂ ಮಗುವಿಗೆ ಸಿಡುಬು ಹಾಕಿಸುವ ಅಂಥಾ ಯಾವ ಮನುಷ್ಯನಾದರೂ ಸಿಡುಬು ಹಾಕುವವನಿಂದ ರುಜು ಮಾಡಲ್ಪಟ್ಟ ಅಂಥಾ ಸಿಡುಬು ಹಾಕೋಣದರ ಮತ್ತು ಅದರ ಫಲಿತಾಂಶದ ಸರ್ಟಿಫಿಕೇಟನ್ನು ಅಂಥಾ ಸಿಡುಬು ಹಾಕೋಣದರ ತೇದಿಯಿಂದ ಹದಿನೈದು ದಿವಸಗಳೊಳಗಾಗಿ ಮೇಲ್ಕಂಡ ಮಂಡಲದ ಸಿಡುಬುಹಾಕೋಣದರ ಸೂಪರಿಂಟೆಂಡೆಂಟಿಗೆ ಕಳುಹಿಸತಕ್ಕದ್ದು.

ಯೋಗ್ಯತೆಯನ್ನು ಹೊಂದಿದ ವೈದ್ಯನ ಮತ್ತು ಸ್ವಂತವಾಗಿ ಸಿಡುಬು ಹಾಕುವವರ ಸರ್ಟಿಫಿಕೇಟುಗಳನ್ನು ಅಂಗೀಕರಿಸತಕ್ಕದ್ದು.

13. ಸಿಡುಬು ಹಾಕುವುದರ ಸೂಪರಿಂಟೆಂಡೆಂಟು (1) ಸಾರ್ಥಕವಾಗಿ ಸಿಡುಬು ಹಾಕಿದುದನ್ನು ಕುರಿತು (2) ಸಿಡುಬು ಹಾಕುವುದಕ್ಕೆ ಒಬ್ಬ ಮನುಷ್ಯನು ತಕ್ಕವನಾಗಿ ಇಲ್ಲದೆ ಇರುವುದನ್ನು ಕುರಿತು (3) ಸಿಡುಬು ಹಾಕುವುದರ ಅಗ್ರಾಹಕತ್ವ ಅಥವಾ ಅಸಾಧ್ಯತೆಯನ್ನು ಕುರಿತು ಒಬ್ಬ ಯೋಗ್ಯತೆಯನ್ನು ಹೊಂದಿದ ವೈದ್ಯನಿಂದ ಅಥವಾ ಸ್ವಂತವಾಗಿ ಸಿಡುಬು ಹಾಕುವವನಿಂದ ಸರ್ಟಿಫಿಕೇಟುಗಳನ್ನು ಅಂಗೀಕರಿಸತಕ್ಕದ್ದು.

ನಿಯಮ:

ಅಂಥಾ ಸರ್ಟಿಫಿಕೇಟು ರದ್ದಾಗಿರತಕ್ಕದ್ದು.

ಆದರೆ ಈ ನಿಬಂಧನೆಗಳ ಮೇರೆ ಕೊಟ್ಟ ಯಾವ ಸರ್ಟಿಫಿಕೇಟಾದರೂ ಅಕ್ರಮವಾಗಿ ಕೊಡಲ್ಪಟ್ಟಿತೆಂದು ಅಥವಾ ಯಾವನಾದರೂ "ರಕ್ಷಿಸಲ್ಪಡದ" ಮನುಷ್ಯನ ಅಥವಾ ಮಗುವಿನ ಪರವಾಗಿ ಹೊಂದಲ್ಪಟ್ಟಿತೆಂದು ಸೂಪರಿಂಟೆಂಡೆಂಟಿಗೆ ತೃಪ್ತಿಯಾಗುವಂತೆ ಕಂಡುಬಂದರೆ ಅಂಥಾ ಸರ್ಟಿಫಿಕೇಟನ್ನು ಸೂಪರಿಂಟೆಂಡೆಂಟು ತಳ್ಳಿಪಡಿ ಮಾಡಬಹುದು, ಮತ್ತು ಆಮೇಲೆ ಈ ಸರ್ಟಿಫಿಕೇಟುಗಳನ್ನು ಕುರಿತು ಯಾವುದಾದರೂ ಸಂಶಯದ ಸಂದರ್ಭದಲ್ಲಿ ಸೂಪರಿಂಟೆಂಡೆಂಟು ಸಿಡುಬು ಹಾಕಲ್ಪಟ್ಟ ಅಥವಾ ಸಿಡುಬು ಹಾಕಲು ತಕ್ಕವನಲ್ಲವಾಗಿ ಅಥವಾ ಅಗ್ರಾಹಕನಾಗಿರುವಂತೆ ದೃಢೀಕರಿಸಲ್ಪಟ್ಟ ಮನುಷ್ಯನನ್ನು ಸ್ವತಃ ಪರೀಕ್ಷೆ ಮಾಡತಕ್ಕದ್ದು. ಆದರೆ ಆ ವ್ಯಕ್ತಿಯು 'ಗೋಷಾ' ಅಥವಾ 'ಪರದಾ' ಹೆಂಗಸಾಗಿದ್ದರೆ ಪರೀಕ್ಷೆಯು ಯಾವಾಗಲೂ 7ನೆ ನಿಬಂಧನೆಯಲ್ಲಿ ವಿಧಿಸಿರುವ ಮೇರೆ ಒಬ್ಬಳು ಸಿಡುಬು ಹಾಕುವ ಹೆಂಗಸಿಂದ ಮಾಡಲ್ಪಡತಕ್ಕದ್ದು.

ಎಂಥಾ ಸಿಡುಬಿನ ಹಾಲನ್ನು ಉಪಯೋಗಿಸತಕ್ಕದ್ದು.

14. ಜನಗಳಿಗೆ ಸಿಡುಬು ಹಾಕೋಣವನ್ನು ಕರುವಿನ ಸಿಡುಬು ಹಾಲಿನಿಂದ ಎಂದರೆ, ಹೊಸದು ಅಥವಾ ಉಳಿಸಿಟ್ಟುದು, ಇವೆರಡರಲ್ಲಿ ಯಾವುದು ದೊರೆಯುತ್ತದೆಯೋ ಅದರಿಂದ ಮಾಡತಕ್ಕದ್ದು.

ಉಪಯೋಗಿಸಲ್ಪಡತಕ್ಕ ಸಿಡುಬಿನ ಹಾಲಿನ ಶಾಸ್ತ್ರೀಯವಾದ ಪರಾಮರಿಕೆ.

15. ಸಿಡುಬು ಹಾಕುವುದಕ್ಕೆ ಉಪಯೋಗಿಸಲ್ಪಡುವ ಎಲ್ಲಾ ಸಿಡುಬಿನ ಹಾಲನ್ನೂ ಸರ್ಕಾರಿ ಸ್ಯಾನಿಟರಿ ಕಮಿಷನರು ಆಗಾಗ ವಿಧಿಸಬಹುದಾದ ಶಾಸ್ತ್ರೀಯವಾದ ಪರಾಮರಿಕೆಯಿಂದ ತೈಯಾರುಮಾಡಿ, ಸಂಗ್ರಹಿಸಿ, ಉಳಿಸಿಟ್ಟು, ಹಂಚಿಕೆಮಾಡಿ, ಉಪಯೋಗಿಸತಕ್ಕದ್ದು, ಮತ್ತು ಅದು ಸ್ಯಾನಿಟರಿ ಕಮಿಷನರಿಂದ ಆ ಕೆಲಸಕ್ಕಾಗಿ ಯೋಗ್ಯನೆಂದು ಹೇಳಲ್ಪಟ್ಟಿರುವ ಆಫೀಸರಿಂದ ನಿರ್ಮಲವಾದುದೆಂದು ದೃಢೀಕರಿಸಲ್ಪಟ್ಟಿರತಕ್ಕದ್ದು.

ಇತರ ಸಿಡುಬಿನ ಹಾಲಿನ ಉಪಯೋಗ.

16. ಮೇಲೆ 14ನೆ ನಿಬಂಧನೆಯಲ್ಲಿ ವಿವರಿಸಲ್ಪಟ್ಟವುಗಳಲ್ಲದ ಇತರ ಯಾವುದಾದರೂ ಸಿಡುಬಿನ ಹಾಲಿನಿಂದ ತಾನು ಸಿಡುಬು ಹಾಕಿಸಿಕೊಳ್ಳಬೇಕೆಂದು ತನ್ನ ಮನೆತನಕ್ಕೆ ಸೇರಿದವರಲ್ಲಿ ಯಾರಿಗಾದರೂ ಅಥವಾ ತನ್ನ ರಕ್ಷಕತ್ವಕ್ಕೆ ಒಳಪಟ್ಟ ಯಾವುದಾದರೂ ಮಕ್ಕಳಿಗಾದರೂ ಸಿಡುಬು ಹಾಕಿಸಬೇಕೆಂದು ಅಪೇಕ್ಷಿಸುವ ಯಾವ ಮನುಷ್ಯನಾದರೂ ಅದನ್ನು ತನ್ನ ಸ್ವಂತ ಖರ್ಚಿನಿಂದ ತರಿಸಿಕೊಂಡು ಅದರಿಂದ ತನಗೆ ಅಥವಾ ತನ್ನ ಮನೆತನದವರಿಗೆ ಅಥವಾ ತನ್ನ ರಕ್ಷಕತ್ವಕ್ಕೆ ಒಳಪಟ್ಟ ಮಕ್ಕಳಿಗೆ ಸಿಡುಬು ಹಾಕಿಸಬಹುದು, ಆದರೆ ಹಾಗೆ ಹೊಂದಲ್ಪಟ್ಟ ಸಿಡುಬಿನ ಹಾಲು ಸ್ಯಾನಿಟರಿ ಕಮಿಷನರಿಂದ ಯೋಗ್ಯನೆಂದು ಅಂಗೀಕರಿಸಲ್ಪಟ್ಟ ಒಬ್ಬ ಅಧಿಕಾರಿಯಿಂದ ನಿರ್ಮಲವಾಗಿರುವುದಾಗಿ ದೃಢೀಕರಿಸಲ್ಪಡಬೇಕು.

ಸಿಡುಬು ಹಾಕುವುದರಲ್ಲಿ ಅಜಾಗ್ರತೆಯೂ ಮತ್ತು ಅಧಿಕಾರಹೊಂದದ ಜನಗಳಿಂದ ಸಿಡುಬು ಹಾಕೋಣವೂ ತಪ್ಪಿತಗಳಾಗಿ ಭಾವಿಸಲ್ಪಡತಕ್ಕದ್ದು.

17. ಸಿಡುಬು ಹಾಕುವವನು ಸಾಧ್ಯವಾದಷ್ಟು ಮಟ್ಟಿಗೂ ಪರಾಮರಿಕೆಯಿಂದಲೂ ಕೊಳೆಯುವುದಕ್ಕೆ ಗುರಿಯಾಗದಂತೆಯೂ ಸಿಡುಬು ಹಾಕುವ ಕೆಲಸವನ್ನು ಮಾಡಲು ಎಲ್ಲಾ ತಕ್ಕ ಎಚ್ಚರಿಕೆಗಳನ್ನೂ ತೆಗೆದುಕೊಳ್ಳಬೇಕು; ಮತ್ತು ಅಜಾಗ್ರತೆಯಿಂದ ಅಥವಾ ಅಸಡ್ಡೆಯಿಂದ ಅಥವಾ 15 ಮತ್ತು 16ನೆ ನಿಬಂಧನೆಗಳಲ್ಲಿ ಅಪ್ಪಣೆ ಮಾಡಿರುವಂತೆ ದೃಢೀಕರಿಸಲ್ಪಡದೆ ಸಿಡುಬಿನ ಹಾಲಿನ ಉಪಯೋಗದಿಂದ ಸಿಡುಬು ಹಾಕಲ್ಪಟ್ಟ ಮನುಷ್ಯನ ಆರೋಗ್ಯವನ್ನು ಕೆಡಿಸುವ ಯಾವ ಸಿಡುಬು ಹಾಕುವವನಾದರೂ, ಮತ್ತು ಈ ನಿಬಂಧನೆಗಳಿಗೆ ಅನುಸಾರವಾಗಿ ಸಿಡುಬು ಹಾಕಲು ಕ್ರಮವಾಗಿ ಅಧಿಕಾರ ಹೊಂದದವನಾಗಿ ಈ ನಿಬಂಧನೆಗಳು ಲಗಾವಾಗುವಂತೆ ಮಾಡಲ್ಪಟ್ಟಿರುವ ಪ್ರದೇಶದೊಳಗೆ ಯಾವುದಾದರೂ ಸಿಡುಬಿನ ಹಾಲಿನಿಂದ ಜನಗಳಿಗೆ ಸಿಡುಬು ಹಾಕುವ ಯಾವ ಮನುಷ್ಯನಾದರೂ, 1906ನೆ ಮೈಸೂರು ಸಿಡುಬು ಹಾಕುವ ರೆಗ್ಯುಲೇಷನಿನಲ್ಲಿ ವಿವರಿಸಿರುವ ತಪ್ಪನ್ನು ಮಾಡಿರುವಂತೆ ಎಣಿಸಲ್ಪಡತಕ್ಕದ್ದು.

ಸ್ವಂತವಾಗಿ ಸಿಡುಬು ಹಾಕುವವನಿಂದ ಹೊರತು ಯಾವ ರುಸುಮೂ ಹಾಕಲ್ಪಡತಕ್ಕದ್ದಲ್ಲ.

18. ಈ ನಿಬಂಧನೆಗಳ ಮೇರೆ ಯಾವನಾದರೂ ಸಿಡುಬು ಹಾಕುವವನಿಗೆ ನೇಮಕ ಮಾಡಿರುವ ಯಾವುದಾದರೂ ಕೆಲಸಗಳಿಗೋಸ್ಕರ ಒಬ್ಬ ಸ್ವಂತವಾಗಿ ಸಿಡುಬು ಹಾಕುವವನಿಂದ ವಿನಾ ಯಾವ ಸಿಡುಬು ಹಾಕುವವನಿಂದಲೂ ಯಾವ ರುಸುಮೂ ಹಾಕಲ್ಪಡತಕ್ಕದ್ದಲ್ಲ.

ನಿಯಮ.—(1) ಆದರೆ ಒಬ್ಬ ಸಿಡುಬು ಹಾಕುವವನು ಕೆಲಸ ಮಾಡುತ್ತಿರುವ ಕೋಠಿಯಲ್ಲದೆ ಇನ್ನೆಲ್ಲಿಯಾದರೂ ಒಬ್ಬ ಮನುಷ್ಯನಿಗೆ ಅಥವಾ ಅವನ ಮನೆಯವರಿಗೆ ಅವನ ಕೋರಿಕೆಯಂತೆ ಅಥವಾ ಒಂದು ಮಗುವಾಗಿದ್ದರೆ ಅದರ ತಂದೆತಾಯಿಯ ಅಥವಾ ರಕ್ಷಕನ ಕೋರಿಕೆಯಂತೆ ಸಿಡುಬು ಹಾಕಲು ಒಂದು ರುಸುಮನ್ನು ಅಂಗೀಕರಿಸುವುದು ಸಿಡುಬು ಹಾಕುವವನಿಗೆ ನ್ಯಾಯವಾಗಿರತಕ್ಕದ್ದು.

(2) ಮತ್ತು "ಗೋಷಾ" ಅಥವಾ "ಪರದಾ" ಕ್ರಮವನ್ನು ಆಚರಿಸುತ್ತಿರುವ ಹೆಂಗಸರ ವಿಷಯದಲ್ಲಿ, ಅಂಥಾ ಸಿಡುಬು ಹಾಕುವವನು ನೇಮಿಸಲ್ಪಟ್ಟಿರುವ ಮಂಡಲದೊಳಗೆ ಅವರ ಮನೆಗಳಲ್ಲಿ ಅಂಥಾ ಹೆಂಗಸರಿಗೆ ಸಿಡುಬು ಹಾಕಲು ಯಾವ ರುಸುಮನ್ನೂ ಹಾಕತಕ್ಕದ್ದಲ್ಲ.

ಸಿಡುಬು ಹಾಕುವುದರ ಸೂಪರಿಂಟೆಂಡೆಂಟನ ಕೆಲಸಗಳು.

19. ಸಿಡುಬು ಹಾಕುವುದರ ಸೂಪರಿಂಟೆಂಡೆಂಟು, ಈ ನಿಬಂಧನೆಗಳಿಂದ ಅಥವಾ ಅವುಗಳ ಮೇರೆ ತನಗೆ ನೇಮಕವಾಗಿರುವ ಇತರ ಕೆಲಸಗಳ ಜತೆಗೆ, ತನ್ನ ಮೇಲ್ವಿಚಾರಣೆಯೊಳಗಿನ ಪ್ರದೇಶದೊಳಗೆ ಆರು ತಿಂಗಳುಗಳ ವಯಸ್ಸಿಗೆ ಮೇಲ್ಪಟ್ಟ ಎಲ್ಲಾ "ರಕ್ಷಿಸಲ್ಪಡದ" ಮನುಷ್ಯರಿಗೂ ಸಿಡುಬು ಹಾಕಿದೆಯೋ ಎಂದು ತಿಳಿದುಕೊಳ್ಳತಕ್ಕದ್ದು; ಮತ್ತು ಯಾವನಾದರೂ ಮನುಷ್ಯನು ತನಗೆ ಅಥವಾ ತನ್ನ ರಕ್ಷಣೆಯಲ್ಲಿ ಮತ್ತು ರಕ್ಷಕತ್ವದಲ್ಲಿ ಇರುವ ಮಗುವಿಗೆ ಸಿಡುಬು ಹಾಕಿಸಿಕೊಳ್ಳುವುದಕ್ಕೆ ಅಥವಾ ಪರೀಕ್ಷೆಗಾಗಿ ತಾನು ಬರುವುದಕ್ಕೆ ಅಥವಾ ಅದನ್ನು ಕರೆದುಕೊಂಡು ಬರುವುದಕ್ಕೆ ಇದರಲ್ಲಿ ಮೊದಲೆ ಅಡಗಿರುವ ನಿಯಮಗಳಂತೆ ಬದ್ಧನಾಗಿದಾನೆಂದು ಮತ್ತು ಹಾಗೆ ಮಾಡುವುದಕ್ಕೆ ತಪ್ಪಿಹೋದನೆಂದು ನಂಬುವುದಕ್ಕೆ ಸೂಪರಿಂಟೆಂಡೆಂಟಿಗೆ ಕಾರಣವಿದ್ದರೆ, ಪ್ರಾತಃಕಾಲ 6 ಘಂಟೆಗೂ ಸಾಯಂಕಾಲ 6 ಘಂಟೆಗೂ ಮಧ್ಯೆ ಯಾವ ಕಾಲದಲ್ಲಿಯಾದರೂ ಅಂಥಾ ಮನುಷ್ಯನ ಮನೆಗೆ ಸ್ವತಃ ಹೋಗಿ ವಿಚಾರಣೆ ಮಾಡಿ ಆ ವಿದ್ಯಮಾನವು ರುಜುವಾತಾದರೆ ಅಂಥಾ ಮನುಷ್ಯನು ಅಥವಾ ಅವನ ರಕ್ಷಣೆ ಅಥವಾ ರಕ್ಷಕತ್ವದಲ್ಲಿ ಇರುವ ಮಗುವು ಸಿಡುಬು ಹಾಕಿಸಿಕೊಳ್ಳಬೇಕೆಂದು ಅಥವಾ (ಸಂದರ್ಭಾನುಸಾರವಾಗಿ) ಅಂಥಾ ನೋಟೀಸಿನಲ್ಲಿ ವಿವರಿಸತಕ್ಕ ಕಾಲ ಮತ್ತು ಸ್ಥಳದಲ್ಲಿ ಪರೀಕ್ಷೆಯ ಬಗ್ಗೆ ಬರಬೇಕೆಂದು ಅಥವಾ ಕರೆತರಬೇಕೆಂದು ಅಪ್ಪಣೆ ಮಾಡಿ ಒಂದು ನೋಟೀಸನ್ನು ಅಂಥಾ ಮನುಷ್ಯನಿಗೆ ಕೊಡತಕ್ಕದ್ದು ಅಥವಾ ಅವನ ಮನೆಗೆ ಅಂಟಿಸುವಂತೆ ಮಾಡತಕ್ಕದ್ದು.

ಈ ನಿಬಂಧನೆಗಳಿಗೆ ಅನುಸಾರವಾಗಿ ನಡೆಯಲು ಅಸಡ್ಡೆ ಮಾಡುವ ಮನುಷ್ಯನಿಗೆ ಅಥವಾ ತಂದೆ ತಾಯಿಗೆ ಅಥವಾ ರಕ್ಷಕನಿಗೆ ನೋಟೀಸು.

ಮನೆಯ ಮುಖ್ಯಸ್ಥರು ಮನೆಗೆ ಸೇರಿದವರನ್ನು ಪರೀಕ್ಷೆಗೆ ತೋರಿಸತಕ್ಕದ್ದು ಮತ್ತು ಸರಿಯಾದ ವರ್ತಮಾನವನ್ನು ಕೊಡತಕ್ಕದ್ದು.

20. 19ನೆ ನಿಬಂಧನೆಗೆ ಅನುಸಾರವಾಗಿ ಸಿಡುಬು ಹಾಕುವುದರ ಸೂಪರಿಂಟೆಂಡೆಂಟು ಅವಶ್ಯಕವಾದ ವಿಚಾರಣೆಗಳನ್ನು ಮಾಡಲು ತನ್ನ ಮಂಡಲದಲ್ಲಿ ಇರುವ ಒಂದು ಮನೆಗೆ ಹೋದಾಗ ಸಿಡುಬು ಹಾಕುವುದರ ಸೂಪರಿಂಟೆಂಡೆಂಟನ ಪರೀಕ್ಷೆಯ ಬಗ್ಗೆ ಆತನ ಮುಂದೆ ಹಾಗೆ ಅಪೇಕ್ಷಿಸಲ್ಪಟ್ಟರೆ, ತನ್ನ ಮನೆಗೆ ಸೇರಿದವರೆಲ್ಲರನ್ನೂ ಅಥವಾ ಅವರಲ್ಲಿ ಯಾರನ್ನಾದರೂ ತೋರಿಸುವುದು ಮತ್ತು ಅವರ ಹೆಸರು, ವಯಸ್ಸು, ವಾಸದ ಕಾಲ, ಮತ್ತು ಸೂಪರಿಂಟೆಂಡೆಂಟು ಕೇಳಬಹುದಾದ ಇತರ ವಿವರಗಳು ಇವುಗಳನ್ನು ಕರಾರ್ವಾಕಾಗಿ ಹೇಳುವುದು ಪ್ರತಿ ಮನೆಯ ಮುಖ್ಯಸ್ಥನ ಅಥವಾ ಮುಖ್ಯಸ್ಥಳ ಅಥವಾ ಅವನು ಅಥವಾ ಅವಳು ಇಲ್ಲದಾಗ ಮನೆಯಲ್ಲಿರುವ ಮನೆಗೆ ಸೇರಿದ ಎಲ್ಲರಿಗಿಂತ ದೊಡ್ಡ ವಯಸ್ಥನ ಅಥವಾ ವಯಸ್ಥಳ ಕರ್ತವ್ಯವಾಗಿರತಕ್ಕದ್ದು.

ನಿಯಮ.

ಆದರೆ ಹನ್ನೆರಡು ವಯಸ್ಸಿನ ಮತ್ತು ಅದಕ್ಕೆ ಮೇಲ್ಪಟ್ಟ, ತತ್ರಾಪಿ "ಗೋಷಾ" ಅಥವಾ "ಪರದಾ" ಕ್ರಮವನ್ನು ಆಚರಿಸುವ ಹೆಂಗಸರ ವಿಷಯದಲ್ಲಿ, ಸಂಬಂಧಪಟ್ಟ ಜನಗಳಿಂದ ಹಾಗೆ ಅಪೇಕ್ಷಿಸಲ್ಪಟ್ಟರೆ, ಪರೀಕ್ಷೆಯೂ ಮತ್ತು ವಿಚಾರಣೆಗಳೂ, ಸೂಪರಿಂಟೆಂಡೆಂಟನ ಪರವಾಗಿ ಯಾವಳಾದರೂ ಯೋಗ್ಯಳಾದ ಹೆಂಗಸಿಂದ ಮಾಡಲ್ಪಡತಕ್ಕದ್ದು.

ಸಿಡುಬಿನ ಸೊಂಕು ವ್ಯಾಪಿಸುವ ಅಪಾಯವು ಸನ್ನಿಹಿತವಾಗಿರುವ ಸಂದರ್ಭದಲ್ಲಿ ವಿಶೇಷ ನಿಯಮವು.

21. ಸಿಡುಬಿನ ಸೊಂಕು ವ್ಯಾಪಿಸುವ ಅಪಾಯವು ಸನ್ನಿಹಿತವಾಗಿರುವ ಸಂದರ್ಭಗಳಲ್ಲಿ ಸಿಡುಬು ಹಾಕುವುದರ ಸೂಪರಿಂಟೆಂಡೆಂಟು ಒಂದು ಮನೆಯ ಮುಖ್ಯಸ್ಥನಿಗೆ ಕೊಡಲ್ಪಡುವ ಅಥವಾ ಆ ಮನೆಗೆ ಅಂಟಿಸಲ್ಪಡುವ ವಿಶೇಷವಾದ ನೋಟಿಸಿನ ಮೂಲಕ, ಆ ಮನೆಯಲ್ಲಿ ವಾಸವಾಗಿದ್ದು ಜಾಡ್ಯದಿಂದ ರಕ್ಷಿಸಲ್ಪಡದೆ ಮತ್ತು 11ನೆ ನಿಬಂಧನೆಯಲ್ಲಿ ವಿಧಿಸಲ್ಪಟ್ಟಿರುವ ಅಗ್ರಾಹಕತ್ವದ ಸರ್ಟಿಫಿಕೇಟನ್ನು ಸ್ವಾಧೀನದಲ್ಲಿ ಹೊಂದದೆ ಇರುವ ಪ್ರಯುಕ್ತ ಸೊಂಕನ್ನು ತನಗೆ ಅಂಟಿಸಿಕೊಂಡು ಅದನ್ನು ಇತರರಿಗೆ ತಂದು ಬಿಡುವ ಅಪಾಯಕ್ಕೆ ಗುರಿಯಾಗಿರುವ ಯಾವನಾದರೂ ಮನುಷ್ಯನು ಒಬ್ಬ ಸಿಡುಬು ಹಾಕುವವನ ಬಳಿಗೆ ಹೋಗಿ ಅಥವಾ ಒಂದು ಮಗುವಾಗಿದ್ದರೆ ಆತನಲ್ಲಿಗೆ ಕರೆದುಕೊಂಡು ಹೋಗಿ ತನಗೆ ಅಥವಾ ಅದಕ್ಕೆ ಕೂಡಲೇ ಸಿಡುಬು ಹಾಕಿಸಿಕೊಳ್ಳುವಂತೆ ಹೇಳಬಹುದು. ಹಾಗೆ ಹೇಳಲ್ಪಟ್ಟ ಯಾವನಾದರೂ ಮನುಷ್ಯನು ಮೇಲೆ ಕಂಡ ಮೇರೆ ನೋಟೀಸು ಕೊಡಲ್ಪಟ್ಟ ತರುವಾಯ 48 ಘಂಟೆಗಳೊಳಗಾಗಿ ತನಗೆ ಅಥವಾ ತನ್ನ ರಕ್ಷಣೆಯಲ್ಲಿ ಅಥವಾ ರಕ್ಷಕತ್ವದಲ್ಲಿರುವ ಒಂದು ಮಗುವಾಗಿದ್ದರೆ ಅದಕ್ಕೆ ಸಿಡುಬು ಹಾಕಿಸಿಕೊಳ್ಳತಕ್ಕದ್ದು.

ನೋಟಿಸಿನಂತೆ ನಡೆಯದೆ ಹೋದಾಗ ಮ್ಯಾಜಿಸ್ಟ್ರೇಟಿಂದ ಅಪ್ಪಣೆ.

22. 19ನೆ ಮತ್ತು 21ನೆ ನಿಬಂಧನೆಗಳಲ್ಲಿ ಕಂಡ ನೋಟಿಸು ತಲಪಿಸಲ್ಪಟ್ಟು ಅದು ಅನುಸರಿಸಲ್ಪಡದೆ ಹೋದರೆ ಸಿಡುಬು ಹಾಕುವುದರ ಸೂಪರಿಂಟೆಂಡೆಂಟು ಆ ವಿಷಯವನ್ನು ಸ್ಥಳೀಯ ನ್ಯಾಯಾಧಿಕಾರವಿರುವ ಯಾವನಾದರೂ ಮಾಜಿಸ್ಟ್ರೇಟಿಗೆ ರಿಪೋರ್ಟು ಮಾಡತಕ್ಕದ್ದು; ಮತ್ತು ಅಂಥಾ ರಿಪೋರ್ಟನ್ನು ತೆಗೆದುಕೊಳ್ಳುವ ಮಾಜಿಸ್ಟ್ರೇಟು ಆ ಮನುಷ್ಯನನ್ನು ಸಮ್ಮನ್ ಮಾಡಿ ಅವನ ವಿವರವನ್ನು ಕೇಳತಕ್ಕದ್ದು ಮತ್ತು ಅಂಥಾ ವಿವರವು ತೃಪ್ತಿಕರವಾಗಿ ಇಲ್ಲದೆ ಇದ್ದರೆ ಅಪ್ಪಣೆಯಲ್ಲಿ ಕಂಡ ತೇದಿಗೆ ಮುಂಚೆ ನೋಟಿಸಿನಂತೆ ನಡೆಯಬೇಕೆಂದು ಅಂಥಾ ಮನುಷ್ಯನನ್ನು ಆಜ್ಞಾಪಿಸಿ ಬರಹದಲ್ಲಿ ಒಂದು ಅಪ್ಪಣೆಯನ್ನು ಮಾಡತಕ್ಕದ್ದು.

ಅಪ್ಪಣೆಗೆ ವಿಧೇಯವಾಗಿ ನಡೆಯದೆ ಹೋದಾಗ ನಡವಳಿಕೆ.

23. ಅಂಥಾ ತಾರೀಖಿನಲ್ಲಿ ಆ ಮನುಷ್ಯನು ಅಪ್ಪಣೆಗೆ ವಿಧೇಯನಾಗಿ ನಡೆಯದೆ ಹೋಗಿದ್ದರೆ, ಮಾಜಿಸ್ಟ್ರೇಟು ಅವನನ್ನು ತನ್ನ ಮುಂದೆ ಸಮ್ಮನ್ ಮಾಡಿಸತಕ್ಕದ್ದು ಮತ್ತು ನ್ಯಾಯವಾದ ಕಾರಣ ಅಥವಾ ನೆವವು ತೋರಿಸಲ್ಪಟ್ಟಹೊರತು ಅಂಥಾ ಅವಿಧೇಯತೆಯ ವಿಷಯದಲ್ಲಿ 1906ನೆ ಇಸವಿಯ ಮೈಸೂರು ಸಿಡುಬು ಹಾಕುವ ರೆಗ್ಯುಲೇಷನಿನ 2 (3)ನೆ ಪ್ರಕರಣದ ಮೇರೆ ಶಿಕ್ಷೆಯಾಗತಕ್ಕ ಒಂದು ತಪ್ಪಿನಂತೆ ನಡೆಸತಕ್ಕದ್ದು.

ಉಪನಿಬಂಧನೆಗಳನ್ನು ಮಾಡಲು ಅಧಿಕಾರ.

24. ಎಲ್ಲಿ ಸಿಡುಬು ಹಾಕೋಣವು ಸರ್ಕಾರದಿಂದ ಅವಶ್ಯವಾಗಿ ಮಾಡಲ್ಪಟ್ಟಿದೆಯೋ ಅಂಥಾ ಯಾವುದಾದರೂ ಸ್ಥಳೀಯ ಪ್ರದೇಶಕ್ಕೆ ಮೇಲಂಡ ನಿಬಂಧನೆಗಳು ಲಗಾವಾಗುವಂತೆ ಮಾಡಲ್ಪಟ್ಟಾಗ, ಅಂಥಾ ಪ್ರದೇಶದ ಸ್ಥಳೀಯ ಅಧಿಕಾರಿಗಳು ಸಿಡುಬಿನ ರೆಗ್ಯುಲೇಷನು ಲಗಾವಾಗುವ ಸರಹದ್ದಿನೊಳಗೆ ಅದನ್ನು ಸರಿಯಾಗಿ ಉಪಯೋಗದಲ್ಲಿ ತರುವುದಕ್ಕೆ ಈ ನಿಬಂಧನೆಗಳಿಗೆ ಅನುಗುಣವಾಗಿ ಉಪನಿಬಂಧನೆಗಳನ್ನು ಆಗಾಗ್ಗೆ ಮಾಡಬಹುದು. ಅಂಥಾ ಉಪನಿಬಂಧನೆಗಳು ತತ್ಕಾಲದಲ್ಲಿ ಉಪಯೋಗದಲ್ಲಿರುವ ವ್ಯವಹಾರ ಶಾಸ್ತ್ರದ ಮೇರೆ ಯಾವ ರೀತಿಯಲ್ಲಿ ಸ್ಥಳೀಯ ಅಧಿಕಾರಿಗಳು ಉಪನಿಬಂಧನೆಗಳನ್ನು ಮಾಡಬಹುದೋ ಅದೇ ರೀತಿಯಲ್ಲಿ ನಿರ್ಣಯಿಸಲ್ಪಡತಕ್ಕದ್ದು, ಮತ್ತು ಸರ್ಕಾರದವರಿಂದ ಸ್ಥಿರಪಡಿಸಲ್ಪಟ್ಟು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಟ್ಟಾಗ ವ್ಯವಹಾರ ಶಾಸ್ತ್ರದ ಬಲವನ್ನು ಉಳ್ಳುದಾಗಿರತಕ್ಕದ್ದು.

ಆದರೆ ಸರ್ಕಾರದವರು ಅಂಥಾ ಯಾವುದಾದರೂ ಉಪನಿಬಂಧನೆಗಳನ್ನು ಯಾವಾಗಲಾದರೂ ತೆಗೆದುಹಾಕಬಹುದು ಅಥವಾ ಬದಲಾಯಿಸಬಹುದು.

24ನೆ ನಿಬಂಧನೆಯ ಪ್ರಕಾರದ ಉಪನಿಬಂಧನೆಗಳು ಯಾವುವುಗಳಿಗೆ ಏರ್ಪಾಡು ಮಾಡಬಹುದು.

25. ಮೇಲಿನ 24ನೆ ನಿಬಂಧನೆಯಂತೆ ಯಾವುದಾದರೂ ಸ್ಥಳೀಯ ಪ್ರದೇಶಕ್ಕೆ ಮಾಡತಕ್ಕ ಉಪನಿಬಂಧನೆಗಳಲ್ಲಿ ಇತರ ವಿಷಯಗಳಲ್ಲದೆ ಈ ಕೆಳಗಿನವುಗಳಿಗೆ ಏರ್ಪಾಡು ಮಾಡಬಹುದು :—

(a) ಅಂಥಾ ಸ್ಥಳೀಯ ಪ್ರದೇಶವನ್ನು ಸಿಡುಬು ಹಾಕುವ ಕೆಲಸ ನಡೆಯುವುದಕ್ಕಾಗಿ ಅನುಕೂಲವಾದ ಮಂಡಲಗಳಾಗಿ ವಿಭಾಗಿಸುವುದು.

(b) ಪ್ರತಿ ಮಂಡಲದಲ್ಲಿಯೂ ಒಂದು ಅಥವಾ ಹೆಚ್ಚು ಸ್ಥಳಗಳನ್ನು ಸಾರ್ವಜನಿಕ ಸಿಡುಬು ಹಾಕುವ ಕೋಣೆಗಳಾಗಿ ನೇಮಕ ಮಾಡುವುದು ಮತ್ತು ಪ್ರತಿ ಕೋಣೆಯ ಹತ್ತಿರ ಕಣ್ಣಿಗೆ ಕಾಣಿಸುವ ಎತ್ತರವಾದ ಸ್ಥಳದಲ್ಲಿ ಸ್ಪಷ್ಟವಾಗಿ ತಿಳಿಯುವ ಗುರುತುಗಳನ್ನು ತಗುಲು ಹಾಕುವುದು ಮತ್ತು ಅಲ್ಲಿ ಯಾವ ಯಾವ ಘಂಟೆಗಳಲ್ಲಿ ಸಿಡುಬು ಹಾಕಲ್ಪಡುವುದೆಂಬುದನ್ನು ತೋರಿಸುವುದು.

(c) ಬೆಳೆದ ಹುಡುಗಿಯರಿಗೂ ಮತ್ತು ವಯಸ್ಸರಾದ ಹೆಂಗಸರಿಗೂ, ತತ್ರಾಪಿ "ಗೋಷಾ" ಅಥವಾ "ಪರದಾ" ಕ್ರಮವನ್ನು ಆಚರಿಸುವವರಿಗೆ ಸಿಡುಬು ಹಾಕುವುದಕ್ಕಾಗಿ ವಿಶೇಷವಾದ ಏರ್ಪಾಡುಗಳನ್ನು ಮಾಡತಕ್ಕದ್ದು.

(d) ಪ್ರತಿ ಮಂಡಲಕ್ಕೂ ಬೇಕಾದ ಗಂಡಸು ಮತ್ತು ಹೆಂಗಸು ಸಾರ್ವಜನಿಕ ಸಿಡುಬು ಹಾಕುವವರು.

(e) ಸಿಡುಬು ಹಾಕುವ ಕೋಣೆಗಳಲ್ಲಿ ಸಾರ್ವಜನಿಕ ಸಿಡುಬು ಹಾಕುವವರು ಇರಬೇಕಾದ ಕಾಲ.

(f) ಸಿಡುಬು ಹಾಕುವ ಮಂಡಲಗಳ ಎಲ್ಲೆಗಳೊಳಗೆ ಅವರು ವಾಸಮಾಡೋಣ.

(g) ಅವರು ಕೆಲಸದಮೇಲಿರುವಾಗ ಧರಿಸಬೇಕಾದ ಸ್ಪಷ್ಟವಾದ ಗುರುತು ಅಥವಾ ಚಿಹ್ನೆ.

(h) ಸ್ವಂತವಾಗಿ ಸಿಡುಬು ಹಾಕುವವರು ಹಾಕಬಹುದಾದ ರುಸುಮಿನ ಮೊತ್ತ ಮತ್ತು ಸಿಡುಬು ಹಾಕುವ ಕೋಠಿಗಳ ಅಥವಾ ಮಂಡಲಗಳ ಹೊರಗಿನ ಸ್ಥಳಗಳಲ್ಲಿ ಸಿಡುಬು ಹಾಕುವುದಕ್ಕೆ ಸಾರ್ವಜನಿಕ ಸಿಡುಬು ಹಾಕುವವರು, ಕೇಳಬಹುದಾದ ವೇತನದ ಪ್ರಮಾಣ.

(i) ಜನಗಳು ಅವರ ಸ್ವಂತ ಮನೆಗಳಲ್ಲಿ ಅವರ ಮಕ್ಕಳಿಗೂ "ಪರದಾ" ಹೆಂಗಸರಿಗೂ ಸಿಡುಬು ಹಾಕಿಸುವುದಕ್ಕೆ ಮಾಡಬೇಕಾದ ಅನುಕೂಲ್ಯಗಳು.

(j) ಸ್ಥಳೀಯ ಪ್ರದೇಶದಲ್ಲಿರುವ ಜನಗಳ ಹೆಸರುಗಳನ್ನೂ, ಅವರು ರಕ್ಷಿಸಲ್ಪಟ್ಟಿದ್ದಾರೆಯೋ ಅಥವಾ ರಕ್ಷಿಸಲ್ಪಟ್ಟಿಲ್ಲವೋ ಎಂಬುವುದನ್ನೂ; ಸಿಡುಬು ಹಾಕೋಣವನ್ನು ಅವಶ್ಯವಾಗಿ ಮಾಡಿದ ಮೇಲೆ ಅಥವಾ ತರುವಾಯ ಅಂಥಾ ಪ್ರದೇಶದಲ್ಲಿ ಹುಟ್ಟಿದ ಮಕ್ಕಳ ಹೆಸರುಗಳನ್ನೂ; ಸಿಡುಬು ಹಾಕೋಣವು ಅವಶ್ಯವೆಂದು ಪ್ರಕಟಿಸಲ್ಪಟ್ಟ ತರುವಾಯ ಯಾವ ಕಾಲದಲ್ಲಿಯಾದರೂ ಆ ಪ್ರದೇಶದೊಳಕ್ಕೆ ಬಂದು ಅಥವಾ ಕರೆತರಲ್ಪಟ್ಟು ಒಂದು ತಿಂಗಳವರೆಗೆ ಅಲ್ಲಿ ವಾಸ ಮಾಡಿದ ರಕ್ಷಿಸಲ್ಪಡದ ಮನುಷ್ಯರ ಅಥವಾ ಮಕ್ಕಳ ಹೆಸರುಗಳನ್ನೂ; ಪ್ರತಿ ಸಿಡುಬು ಹಾಕೋಣದರ, ಅಥವಾ ಅದನ್ನು ಮುಂದಕ್ಕೆ ಇಡೋಣದರ ಫಲವನ್ನೂ ಮತ್ತು ಸರ್ಟಿಫಿಕೇಟುಗಳು ಏನಾದರೂ ಇದ್ದರೆ ಅವುಗಳ ಕೊಡೋಣವನ್ನೂ ತೋರಿಸುವ ರಿಜಿಸ್ಟರುಗಳನ್ನು ಸಿದ್ಧಪಡಿಸೋಣ ಮತ್ತು ಇಡೋಣ.

(k) ಈ ರಿಜಿಸ್ಟರುಗಳನ್ನು ಸಿದ್ಧಪಡಿಸೋಣದರಲ್ಲಿಯೂ ಇತರ ವಿಷಯಗಳಲ್ಲಿಯೂ ಮ್ಯುನಿಸಿಪಾಲಿಟಿಯಿಂದ ಮಾಡಲ್ಪಡತಕ್ಕ ಸಹಾಯ.

(l) ಸಿಡುಬು ಹಾಕುವುದರ ಲೆಕ್ಕಗಳನ್ನು ಮತ್ತು ರಿಪೋರ್ಟುಗಳನ್ನು ಸಿದ್ಧಪಡಿಸೋಣ.

ತಪ್ಪಿತಗಳಿಗೆ ಶಿಕ್ಷೆ.

26. ಈ ನಿಬಂಧನೆಗಳಿಗೆ ವಿರೋಧವಾಗಿ (a) ನ್ಯಾಯವಾದ ಕಾರಣವಿಲ್ಲದೆ ತನಗೆ ಅಥವಾ ತನ್ನ ರಕ್ಷಣೆ ಅಥವಾ ಪಾಲನೆಯಲ್ಲಿರುವ ಮಗುವಿಗೆ ಸಿಡುಬು ಹಾಕಿಸಲು ಅಥವಾ ಸಿಡುಬು ಹಾಕಿದ ತರುವಾಯ ಸಿಡುಬು ಹಾಕುವವನು ಹೇಳುವ ತಾರೀಖು ಮತ್ತು ಕಾಲದಲ್ಲಿ ಪರೀಕ್ಷಿಸಲ್ಪಡಲು ಅಸಡ್ಡೆ ಮಾಡುವ; (b) 12ನೆ ನಿಬಂಧನೆಯ ಮೇರೆ ಸಿಡುಬು ಹಾಕುವುದರ ಮತ್ತು ಅದರ ಫಲವನ್ನು ತೋರಿಸುವ ಸರ್ಟಿಫಿಕೇಟನ್ನು ಕಳುಹಿಸಲು ಅಸಡ್ಡೆ ಮಾಡುವ; (c) 19ನೆ ನಿಬಂಧನೆಯಂತೆ ಕೇಳಲ್ಪಟ್ಟಾಗ ವರ್ತಮಾನವನ್ನು ಕೊಡಲು ನಿರಾಕರಿಸುವ ಅಥವಾ ಮನಃಪೂರ್ವಕವಾಗಿ ಸುಳ್ಳು ವರ್ತಮಾನವನ್ನು ಕೊಡುವ ಅಥವಾ ಅದೇ ನಿಬಂಧನೆಯ ಮತ್ತು 21ನೆ ನಿಬಂಧನೆಯ ಮೇರೆ ತಲಪಿಸಲ್ಪಟ್ಟ ನೋಟಿಸಿನಂತೆ ನಡೆಯಲು ಅಸಡ್ಡೆ ಮಾಡುವ; (d) 24ನೆ ನಿಬಂಧನೆಯಂತೆ ಮಾಡಲ್ಪಟ್ಟು ಸ್ಥಿರಪಡಿಸಲ್ಪಟ್ಟ ಯಾವ ಉಪನಿಬಂಧನೆಗಳನ್ನಾದರೂ ಉಲ್ಲಂಘಿಸುವ ಯಾವ ಮನುಷ್ಯನಿಗಾದರೂ;

(2) ಸಿಡುಬು ಹಾಕಲು ನಿರಾಕರಿಸುವ ಅಥವಾ ಈ ನಿಬಂಧನೆಗಳಿಗೆ ಅನುಸಾರವಾಗಿ ಕೊಡಲ್ಪಡಬೇಕಾದ ಸರ್ಟಿಫಿಕೇಟುಗಳನ್ನು ಕೊಡಲು ಅಸಡ್ಡೆ ಮಾಡುವ ಅಥವಾ ಸಿಡುಬು ಹಾಕುವುದಕ್ಕಾಗಿ ಅಥವಾ ಸರ್ಟಿಫಿಕೇಟನ್ನು ಕೊಡುವುದಕ್ಕಾಗಿ ನೇಮಕವಾಗದ ಯಾವುದಾದರೂ ರುಸುಮನ್ನು ಅಥವಾ ವೇತನವನ್ನು ವಸೂಲ್ಮಾಡುವ ಯಾವ ಸಿಡುಬು ಹಾಕುವವನಿಗಾದರೂ,

ಒಬ್ಬ ಮಾಜಿಸ್ಟ್ರೇಟಿನ ಮುಂದೆ ತಪ್ಪು ಸ್ಥಿರಪಟ್ಟಾಗ 20 ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಅಪರಾಧದಿಂದ ಶಿಕ್ಷೆಯಾಗತಕ್ಕದ್ದು.

(3) (a) ಈ ನಿಬಂಧನೆಗಳು ಉಪಯೋಗದಲ್ಲಿ ಬಂದಿರುವ ಪ್ರದೇಶದಲ್ಲಿ 4ನೆ ನಿಬಂಧನೆಯ ಮೇರೆ ಅಧಿಕಾರವನ್ನು ಹೊಂದದೆ ಒಬ್ಬ ಮನುಷ್ಯನಿಗೆ ಸಿಡುಬು ಹಾಕುವ ಯಾವ ಮನುಷ್ಯನಾದರೂ;

(b) ಮತ್ತು ಸಿಡುಬು ಹಾಕುವಾಗ ಸರಿಯಾದ ಎಚ್ಚರಿಕೆಗಳನ್ನು ತೆಗೆದುಕೊಳ್ಳಲು ಅಸಡ್ಡೆ ಮಾಡುವ ಅಥವಾ ನಿರಾಕರಿಸುವ ಅಥವಾ 15ನೆ ಮತ್ತು 17ನೆ ನಿಬಂಧನೆಗಳಲ್ಲಿ ವಿಧಿಸಿರುವ ಮೇರೆ ತಕ್ಕ ಅಧಿಕಾರಿಯಿಂದ ನಿರ್ಮಲವಾದುದೆಂದು ದೃಢೀಕರಿಸಲ್ಪಡದ ಸಿಡುಬಿನ ಹಾಲನ್ನು ಉಪಯೋಗಿಸಿ ತನ್ಮೂಲಕ ಸಿಡುಬು ಹಾಕಲ್ಪಟ್ಟ ಯಾವನಾದರೂ ಮನುಷ್ಯನ ಆರೋಗ್ಯವನ್ನು ಕೆಡಿಸುವ ಯಾವ ಅಧಿಕಾರ ಹೊಂದಿದ ಸಿಡುಬು ಹಾಕುವವನಾದರೂ;

(c) 22ನೆ ನಿಬಂಧನೆಯ ಪ್ರಕಾರದ ಮಾಜಿಸ್ಟ್ರೇಟಿನ ಅಪ್ಪಣೆಗೆ ಅವಿಧೇಯನಾಗಿ ನಡೆಯುವ ಯಾವ ಮನುಷ್ಯನಾದರೂ

ಒಬ್ಬ ಮಾಜಿಸ್ಟ್ರೇಟಿನ ಮುಂದೆ ತಪ್ಪು ಸ್ಥಿರಪಟ್ಟಾಗ 50 ರೂಪಾಯಿನ ವರೆಗೆ ವಿಸ್ತರಿಸಬಹುದಾದ ಅಪರಾಧಕ್ಕೆ ಗುರಿಯಾಗತಕ್ಕದ್ದು.

27. 26ನೆ ನಿಬಂಧನೆಯಂತೆ ತಪ್ಪು ಸ್ಥಿರಪಟ್ಟ ತರುವಾಯ ತನಗೆ ಅಥವಾ ತನ್ನ ಪಾಲನೆಯಲ್ಲಿರುವ ಮಗುವಿಗೆ ಸಿಡುಬು ಹಾಕಿಸಲು ತನ್ನ ನಿರಾಕರಣೆಯನ್ನು ಪ್ರಬಲವಾದ ಕಾರಣವಿಲ್ಲದೆ ಒಂದು ವಾರದ ವರೆಗೆ ನಡೆಸುವ ಯಾವ ಮನುಷ್ಯನಾದರೂ 20 ರೂಪಾಯಿಗೆ ಮೀರದ ಅಪರಾಧಕ್ಕೆ ತಿರಿಗಿ ಗುರಿಯಾಗತಕ್ಕದ್ದು.

ಅಪ್ಪಣೆ ಮೇರೆಗೆ,
ಸಿ. ಎಸ್. ಬಾಲಸುಂದರಂ ಐಯ್ಯರ್,
ಅಫಿಷಿಯೇಟಿಂಗ್ ಸೆಕ್ರೆಟರಿ.

ತಾರೀಖು 20ನೆ ಜುಲೈ 1907.

ನಂ. ಜೆ. 219—ಲೆಜಿಸ್. 14-04-14, ಒಂದು ಎಕ್ಸ್‌ಟ್ರಾಡಿಷರ್ನ ತಪ್ಪಿತಕ್ಕಾಗಿ ಮೈಸೂರು ಸಂಸ್ಥಾನದ ಕ್ರಿಮಿನಲ್ ಕೋರ್ಟಿನ ಫೈಸಲ್ ಮೇರೆಗೆ ಮೈಸೂರು ಸೀಮೆಯು ಜೈಲಿನಲ್ಲಿ ಇಡಲ್ಪಟ್ಟ, ಮತ್ತು ಬ್ರಿಟಿಷ್ ಇಂಡಿಯಾವಿನಲ್ಲಿ ಮಾಡಿದ ಎಕ್ಸ್‌ಟ್ರಾಡಿಷರ್ನ ತಪ್ಪಿತಕ್ಕಾಗಿ ಅಪಾದನೆ ಮಾಡಲ್ಪಟ್ಟ ಒಬ್ಬ ಮನುಷ್ಯನನ್ನು ಒಂದು ಸ್ಥಳದಲ್ಲಿ ಮತ್ತು ಯಾದಿಯಲ್ಲಿ ತೋರಿಸಲ್ಪಟ್ಟ ಒಬ್ಬ ಮನುಷ್ಯನಿಗೆ ಅಥವಾ ಅಧಿಕಾರಿಗೆ ತಂದು ಒಪ್ಪಿಸುವಂತೆ, ಮೈಸೂರು ಸಂಸ್ಥಾನದಲ್ಲಿ ಅಂಥಾ ಮನುಷ್ಯನು ಕೈದಿನಲ್ಲಿಡಲ್ಪಟ್ಟಿರುವ ಬಂದೀಖಾನೆಯ ಚಾರ್ಜಿನಲ್ಲಿರುವ ಅಧಿಕಾರಿಗೆ ಬ್ರಿಟಿಷ್ ಇಂಡಿಯಾವಿನ ಒಬ್ಬ ಮಾಜಿಸ್ಟ್ರೇಟಿಂದ ಅಥವಾ ಲಾಯಖ್ ಅಧಿಕಾರ ಸರಹದ್ದುಳ್ಳ ಕೋರ್ಟಿನಿಂದ ಯಾದಿಯು ಬಂದರೆ, ಅಂಥಾ ಅಧಿಕಾರಿಯು ಅಂಥಾ ಮನುಷ್ಯನನ್ನು ಸದರೀ ಸ್ಥಳಕ್ಕೆ ಕಳುಹಿಸಿ ಸದರೀ ಯಾದಿಯಲ್ಲಿ ಕಂಡ ಮನುಷ್ಯನಿಗೆ ಅಥವಾ ಅಧಿಕಾರಿಗೆ ಒಪ್ಪಿಸಲ್ಪಡುವಂತೆ ಮಾಡುವುದರ ಮೂಲಕ ಆ ಯಾದಿಯ ಕೋರಿಕೆಯಂತೆ ನಡೆಸಿಕೊಡಬೇಕೆಂದು ಮೈಸೂರು ಶ್ರೀಮನ್ಮಹಾರಾಜರವರು ಹುಕುಂ ದಯಪಾಲಿಸುತ್ತಾರೆ:

ಪರಂತು, ಈ ಕೆಳಗೆ ಹೇಳುವಂತೆ—

(1) ಅಂಥಾ ಪ್ರತಿಯೊಂದು ಯಾದಿಯೂ ಘನವನ್ನೈದಿದ ಮೈಸೂರು ಸೀಮೆಯ ರೆಸಿಡೆಂಟರವರ ಮೂಲಕ ಕಳುಹಿಸಲ್ಪಟ್ಟಿರಬೇಕು.

(2) ಯಾದಿಯು ಯಾವ ಮನುಷ್ಯನಿಗೆ ಸಂಬಂಧಪಟ್ಟಿರುತ್ತದೆಯೋ ಆ ಮನುಷ್ಯನು ಫಾಶಿ ಸಜಾ ವಿಧಿಸಲ್ಪಟ್ಟವನಾಗಿದ್ದರೆ, ಅಂಥಾ ಯಾವ ಯಾದಿಯು ಕೋರಿಕೆಯಂತೆಯೂ ನಡೆಸಿಕೊಡಕೂಡದು.

ವಿವರಣೆ—ಈ ಹುಕುಂನಲ್ಲಿ, "ಎಕ್ಸ್‌ಟ್ರಾಡಿಷರ್ನ ತಪ್ಪಿತ" ಎಂದರೆ 1903ನೆ ಇಸವಿಯ ಇಂಡಿಯನ್ ಎಕ್ಸ್‌ಟ್ರಾಡಿಷನ್ ಆಕ್ಟಿನ (ಸಭಾಸಮೇತರಾದ ಗವರ್ನರ್ ಜನರಲ್‌ರವರ 1903ನೆ ಇಸವಿಯ 15ನೆ ನಂಬರ್ ಆಕ್ಟಿನ) ಒಂದನೆಯ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟಂಥಾ ಯಾವುದಾದರೂ ತಪ್ಪಿತವೆಂದು ಅರ್ಥವಾಗುತ್ತದೆ.

2. ಮೈಸೂರು ಸೀಮೆಯಲ್ಲಿ ತಪ್ಪು ಸಾಬೀತಾಗಿ ಬಂದೀಖಾನೆಯಲ್ಲಿ ಇಡಲ್ಪಟ್ಟು, ಸಜಾ ಅನುಭವಿಸುತ್ತಿರುವ ಮನುಷ್ಯನನ್ನು ಮೇಲೆ ಹೇಳಿದ ಮೇರೆಗೆ ಒಪ್ಪಿಸಿದ ತರುವಾಯ ಬ್ರಿಟಿಷ್ ಇಂಡಿಯಾವಿನಿಂದ ಮೈಸೂರು ಸೀಮೆಗೆ ಅವನನ್ನು ಪುನಃ ವಾಪಸು ಕಳುಹಿಸುವ ತಾರೀಖಿನ ವರೆಗೆ, ಅವನ ಸಜಾವು ಅಮಾನತ್ತಿನಲ್ಲಿಡಲ್ಪಟ್ಟಂತೆ ಭಾವಿಸಲ್ಪಟ್ಟು, ತರುವಾಯ ಸದರಿ ತಾರೀಖಿನಲ್ಲಿ ಪುನಃ ಪ್ರಾರಂಭವಾಗಿ ಅವನನ್ನು ಒಪ್ಪಿಸಿಕೊಟ್ಟ ತಾರೀಖಿನಲ್ಲಿ ಮುಗಿಯದೆ ಉಳಿದಿದ್ದ ಭಾಗದ ಕಾಲದ ಪರ್ಯಂತ ನಡೆಯತಕ್ಕದ್ದೆಂದೂ ಶ್ರೀಮನ್ಮಹಾರಾಜರವರು ಹುಕುಂ ದಯಪಾಲಿಸಿರುತ್ತಾರೆ.

3. ಯಾವುದಾದರೂ ತಪ್ಪಿತಕ್ಕಾಗಿ ಮೈಸೂರು ಸಂಸ್ಥಾನದ ಕ್ರಿಮಿನಲ್ ಕೋರ್ಟಿನವರ ಫೈಸಲ್ ಮೇರೆಗೆ ಮೈಸೂರು ಸಂಸ್ಥಾನದ ಬಂದೀಖಾನೆಯಲ್ಲಿ ಇಡಲ್ಪಟ್ಟಿದ್ದು, ಬ್ರಿಟಿಷ್ ಇಂಡಿಯಾವಿನಲ್ಲಿ ಮಾಡಿದ ಎಕ್ಸ್‌ಟ್ರಾಡಿಷನ್ ತಪ್ಪಿತಕ್ಕಾಗಿ ಅನಂತರ ಅಪಾದಿಸಲ್ಪಡಬಹುದಾದ ಯಾವ ಮನುಷ್ಯನ ವಿಷಯದಲ್ಲಾಗಲಿ ಈ ಇಸ್ತಿಹಾರಿನ ನಿಯಮಗಳು ಸರ್ಕಾರದ ವಿಶೇಷ ಹುಕುಂ ಮೇರೆಗೆ ಲಗಾವಾಗಬಹುದು.

ವಿವರಣೆ—"ತಪ್ಪಿತ" ಎಂಬ ಮಾತು, ಈ ಪ್ಯಾರಾವಿನಲ್ಲಿ ಪ್ರಥಮತಃ ಬರುವಾಗ, ಬ್ರಿಟಿಷ್ ಇಂಡಿಯಾವಿನಲ್ಲಿ ಮಾಡಲ್ಪಟ್ಟಿದ್ದರೆ ತಪ್ಪಿತವಾಗದೆ ಇರುತ್ತಿದ್ದಂಥಾ ಕಾರ್ಯವನ್ನು ಒಳಗೊಂಡಿರುವುದಿಲ್ಲ.

ತಾರೀಖು 2ನೆ ಆಗಸ್ಟು 1907.

ನಂ. 963—ಸ್ಯಾನಿಟರಿ. 171-06-8, 1897ನೆ ಇಸವಿಯ 2ನೆ ನಂಬರು ಸಾಂಕ್ರಾಮಿಕ ಉಪದ್ರವಗಳ ರೆಗ್ಯುಲೇಷನಿನ 2ನೆ ಪ್ರಕರಣದ 1ನೆ ಉಪಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ, ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, ಪ್ಲೇಗು ತಗುಲಿದ ಯಾವ ಪ್ರದೇಶದಿಂದಲೂ ಮೈಸೂರು ಸಂಸ್ಥಾನದೊಳಕ್ಕೆ ಹಾಸಿದ ನಾರು ಬಟ್ಟೆಯನ್ನೂ, ಉಪಯೋಗಿಸಿದ ಹಾಸಿಗೆಯನ್ನೂ (ಪ್ರಯಾಣಿಕರು ತಮ್ಮ ಸ್ವಂತ ಸಾಮಾನಿನಂತೆ ತೆಗೆದುಕೊಂಡು ಹೋಗುವುದು ಹೊರತು), ಹರಕು ಬಟ್ಟೆಗಳನ್ನೂ ಮತ್ತು ಕಂದು ಕಾಗದಗಳನ್ನೂ ಆಮದು ಮಾಡಕೂಡದೆಂತಲೂ, ಮೈಸೂರು ಸಂಸ್ಥಾನದಲ್ಲಿ ಪ್ಲೇಗು ತಗುಲಿರುವ ಸ್ಥಳಗಳಿಂದ ಅವುಗಳನ್ನು ರಫ್ತು ಮಾಡಕೂಡದೆಂತಲೂ, ಮತ್ತು ಮೈಸೂರು ಸಂಸ್ಥಾನದಲ್ಲಿ ಪ್ಲೇಗು ತಗುಲದೇ ಇರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಸ್ಥಳಗಳಿಂದ ಅಂಥಾ ಸಾಮಾನುಗಳನ್ನು ಸಾಗಿಸಕೂಡದೆಂತಲೂ ನಿಷೇಧಿಸಿ ಹುಕುಂ ದಯಪಾಲಿಸಿರುತ್ತಾರೆ:—

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ರಫ್ತು ಮಾಡಲ್ಪಟ್ಟ, ಆಮದು ಮಾಡಲ್ಪಟ್ಟ ಅಥವಾ ಸಾಗಿಸಲ್ಪಟ್ಟ ಮಾಲುಗಳು ಅವುಗಳಿಗೆ ಜವಾಬ್ದಾರರಾದ ಜನರನ್ನು ನ ಪಟ್ಟಕ್ಕೆ ಗುರಿಮಾಡಿ, ಸ್ಥಳೀಯ ಅಧಿಕಾರಿಗಳಿಂದ ಹಿಡಿಯಲ್ಪಡುವುದಕ್ಕೆ ಅಥವಾ ನಾಶಮಾಡಲ್ಪಡುವುದಕ್ಕೆ ಗುರಿಯಾಗತಕ್ಕದ್ದು.

ಹುಕುಂ ಬಮೋಜಿಬ್,

ಸಿ. ಎಸ್. ಬಾಲಸುಂದರಂ ಐಯ್ಯರ್,

ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಮೈಸೂರ ಗೆಜೆಟ್.

ನಂ. 42] ಸರ್ಕಾರದಿಂದ ಛಾಯಿಷ್ ಆದ್ದು [ನಂ. 34

ಬೆಂಗಳೂರು, ಗುರುವಾರ, ಆಗಸ್ಟ್ ತಾ|| 22, ಸೆ|| 1907.

IIIನೆ ಭಾಗ.

ಲೆಜಿಸ್ಲೇಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೇಟಿವು ಇಲಾಖೆ.

ತಾರೀಖು 2ನೆ ಆಗಸ್ಟು 1907.

ನಂ. 963—ಸ್ಯಾನಿಟರಿ. 171-06-8, 1897ನೆ ಇಸವಿಯ 2ನೆ ನಂಬರ ಸಾಂಕ್ರಾಮಿಕ ಉಪದ್ರವಗಳ ರೆಗ್ಯುಲೇಷನಿನ 2ನೆ ಪ್ರಕರಣದ 1ನೆ ಉಪಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ, ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, ಪ್ಲೇಗು ತಗುಲಿದ ಯಾವ ಪ್ರದೇಶದಿಂದಲೂ ಮೈಸೂರು ಸಂಸ್ಥಾನದೊಳಕ್ಕೆ ಮಾಸಿದ ನಾರು ಬಟ್ಟೆಯನ್ನೂ, ಉಪಯೋಗಿಸಿದ ಹಾಸಿಗೆಯನ್ನೂ (ಪ್ರಯಾಣೀಕರು ತಮ್ಮ ಸ್ವಂತ ಸಾಮಾನಿನಂತೆ ತೆಗೆದುಕೊಂಡು ಹೋಗುವುದು ಹೊರತು), ಹರಕು ಬಟ್ಟೆಗಳನ್ನೂ ಮತ್ತು ಕಂಡು ಕಾಗದಗಳನ್ನೂ ಆಮದು ಮಾಡಕೂಡದೆಂತಲೂ, ಮೈಸೂರು ಸಂಸ್ಥಾನದಲ್ಲಿ ಪ್ಲೇಗು ತಗುಲಿರುವ ಸ್ಥಳಗಳಿಂದ ಅವುಗಳನ್ನು ರಫ್ತು ಮಾಡಕೂಡದೆಂತಲೂ, ಮತ್ತು ಮೈಸೂರು ಸಂಸ್ಥಾನದಲ್ಲಿ ಪ್ಲೇಗು ತಗುಲದೇ ಇರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಸ್ಥಳಗಳಿಂದ ಅಂಥಾ ಸಾಮಾನುಗಳನ್ನು ಸಾಗಿಸಕೂಡದೆಂತಲೂ ನಿಷೇಧಿಸಿ ಹುಕುಂ ದಯಪಾಲಿಸಿರುತ್ತಾರೆ:—

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ರಫ್ತು ಮಾಡಲ್ಪಟ್ಟ, ಆಮದು ಮಾಡಲ್ಪಟ್ಟ ಅಥವಾ ಸಾಗಿಸಲ್ಪಟ್ಟ ಮಾಲುಗಳು, ಅವುಗಳಿಗೆ ಜವಾಬ್ದಾರರಾದ ಜನರನ್ನು ನಷ್ಟಕ್ಕೆ ಗುರಿಮಾಡಿ, ಸ್ಥಳೀಯ ಅಧಿಕಾರಿಗಳಿಂದ ಹಿಡಿಯಲ್ಪಡುವುದಕ್ಕೆ ಅಥವಾ ನಾಶಮಾಡಲ್ಪಡುವುದಕ್ಕೆ ಗುರಿಯಾಗತಕ್ಕದ್ದು.

ಹುಕುಂ ಬಮೋಜಿಬ್,

ಸಿ. ಎಸ್. ಬಾಲಸುಂದರಂ ಐಯ್ಯರ್,

ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

304

ಮೈಸೂರ ಗೆಜೆಟ್.

ಂ. 42] ಸರ್ಕಾರದಿಂದ ಛಾಯಿಷ್ ಆದ್ದು. [ನಂ. 35.

ಬೆಂಗಳೂರು, ಗುರುವಾರ, ಆಗಸ್ಟ್ ತಾ|| 29, ಸನ್ 1907.

IIIನೆ ಭಾಗ

ಲೆಜಿಸ್ಲೆಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನ್‌ಮೆಂಟು.

ಲೆಜಿಸ್ಲೆಟಿವು ಇಲಾಖೆ.

ತಾರೀಖು 2ನೆ ಆಗಸ್ಟು 1907.

ನಂ. 963— ಸ್ಯಾನಿಟರಿ. 171-06-8, 1897ನೆ ಇಸವಿಯ 2ನೆ ನಂಬರ್ ಸಾಂಕ್ರಾಮಿಕ ಉಪದ್ರವಗಳ ರೆಗ್ಯುಲೇಷನಿನ 3 ಪ್ರಕರಣದ 1ನೆ ಉಪಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ, ಮೈಸೂರು ಶ್ರೀಮನ್ಮಹಾರಾಜರ ಸರ್ಕಾರದವರು, ಪ್ಲೇಗು ತಗುಲಿದ ಯಾವ ಪ್ರದೇಶದಿಂದಲೂ ಮೈಸೂರು ಸಂಸ್ಥಾನದೊಳಕ್ಕೆ ಮಾಸಿದ ನಾರು ಬಟ್ಟೆಯನ್ನೂ, ಉಪಯೋಗಿಸಿದ ಹಾಸಿಗೆಯನ್ನೂ (ಪ್ರಯಾಣಿಕರು ತಮ್ಮ ಸ್ವಂತ ಸಾಮಾನಿನಂತೆ ತೆಗೆದುಕೊಂಡು ಹೋಗುವುದು ಹೊರತು), ಹರ ಬಟ್ಟೆಗಳನ್ನೂ ಮತ್ತು ಕಾಡು ಕಾಗದಗಳನ್ನೂ ಆಮದು ಮಾಡಕೂಡದೆಂತಲೂ, ಮೈಸೂರು ಸಂಸ್ಥಾನದಲ್ಲಿ ಪ್ಲೇಗು ತಗುಲಿರ ಸ್ಥಳಗಳಿಂದ ಅವುಗಳನ್ನು ರಫ್ತು ಮಾಡಕೂಡದೆಂತಲೂ, ಮತ್ತು ಮೈಸೂರು ಸಂಸ್ಥಾನದಲ್ಲಿ ಪ್ಲೇಗು ತಗುಲದೇ ಇರುವ ಸ್ಥಳಿಗೆ ಪ್ಲೇಗು ತಗುಲಿರುವ ಸ್ಥಳಗಳಿಂದ ಅಂಥಾ ಸಾಮಾನುಗಳನ್ನು ಸಾಗಿಸಕೂಡದೆಂತಲೂ ನಿಷೇಧಿಸಿ ಹುಕುಂ ದಯಪಾಲಿಸಿರುರೆ :—

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ರಫ್ತು ಮಾಡಲ್ಪಟ್ಟ, ಆಮದು ಮಾಡಲ್ಪಟ್ಟ ಅಥವಾ ಸಾಗಿಸಲ್ಪಟ್ಟ ಮಾಲುಗಳು, ಗಳಿಗೆ ಜವಾಬ್ದಾರರಾದ ಜನರನ್ನು ನಷ್ಟಕ್ಕೆ ಗುರಿಮಾಡಿ, ಸ್ಥಳೀಯ ಅಧಿಕಾರಿಗಳಿಂದ ಹಿಡಿಯಲ್ಪಡುವುದಕ್ಕೆ ಅಥವಾ ನಾಶವಾಡುವುದಕ್ಕೆ ಗುರಿಯಾಗತಕ್ಕದ್ದು.

ಹುಕುಂ ಬಮೋಜಿಬ್,

ಸಿ. ಎಸ್. ಬಾಲಸುಂದರಂ ಐಯ್ಯರ್,

ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಆಫಿಷಿಯೇಟಿಂಗ್ ಸೆಕ್ರೆಟರಿ.

ಮೈಸೂರ ಗೆಜೆಟ್.

ನಂ. 42] ಸರ್ಕಾರದಿಂದ ಛಾಯಿಪ್ ಆದ್ದು. [ನಂ. 45.

ಬೆಂಗಳೂರು, ಗುರುವಾರ, ನವೆಂಬರ್ ತಾ॥ 14, ಸನ್ 1907.

IIIನ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವು ಇಲಾಖೆ.

ಇಸ್ತಿಹಾರನಾಮೆ.

ನಂಬರ್ 124—ಎಲ್. ಸಿ. 1.–07, ತಾರೀಖು 21ನೆ ಸೆಪ್ಟೆಂಬರ್ 1907.

ಮೈಸೂರು ನ್ಯಾಯವಿಧಾಯಕ ಸಭೆಯಲ್ಲಿ ಕೆಲಸ ನಡೆಯುವುದಕ್ಕೆ ಏರ್ಪಟ್ಟ ನಿಬಂಧನೆಗಳ ಪೈಕಿ 31ನೆ ನಿಬಂಧನೆಯ ಮೇರೆ 1900ನೆ ಇಸವಿಯ 2ನೆ ನಂಬರ್ ಮೈಸೂರು ಸ್ಟ್ಯಾಂಪ್ ರೆಗ್ಯುಲೇಷನನ್ನು ತಿದ್ದುಪಾಟು ಮಾಡುವ ಇದರಡಿ ಕಂಡ ಬಿಲ್ಲನ್ನು ಅದರ ಉದ್ದೇಶಗಳ ಮತ್ತು ಕಾರಣಗಳ ವಿವರಣೆಯೊಡನೆ ಸರ್ವಸ್ತರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿ ಇದೆ :—

1900ನೆ ಇಸವಿಯ ಮೈಸೂರು ಸ್ಟ್ಯಾಂಪು ರೆಗ್ಯುಲೇಷನನ್ನು ತಿದ್ದುಪಾಟು ಮಾಡುವ ಬಿಲ್.

1900ನೆ ಇಸವಿಯ ಮೈಸೂರು ಸ್ಟ್ಯಾಂಪ್ ರೆಗ್ಯುಲೇಷನನ್ನು ತಿದ್ದುಪಾಟು ಮಾಡುವುದು ಯುಕ್ತವಾಗಿರುವುದರಿಂದ ಶ್ರೀಮನ್ ಮಹಾರಾಜರವರು ಇದರಡಿ ಕಂಡಂತೆ ವಿಧಿಸಿರುತ್ತಾರೆ :—

1900ರ 2ನೆ ರೆಗ್ಯುಲೇಷನ 2ನೆ ಪ್ರಕರಣದ ತಿದ್ದುಪಾಟು.

1. 1900ರ ಮೈಸೂರು ಸ್ಟ್ಯಾಂಪು ರೆಗ್ಯುಲೇಷನಿನ 2ನೆ ಪ್ರಕರಣದಲ್ಲಿ, (ಇತಃಪರ ಈ ಬಿಲ್ಲಿನಲ್ಲಿ ಸದರಿ ರೆಗ್ಯುಲೇಷನನ್ನು "ಮೇಲ್ಕಂಡ ರೆಗ್ಯುಲೇಷನ್" ಎಂದು ಹೇಳಲಾಗುವುದು.)

ಇಂಡಿಯಾ ಸರ್ಕಾರದ 1904ರ 15ನೆ ಆಕ್ಟು. 2 (*a*) ಪ್ರಕರಣ.

(*a*) 16ನೆ ಕಲಂ ಯಾ ವಾಕ್ಯದಲ್ಲಿ "ಲೀಸ್ ಎಂದರೆ ಗೇಣೀಚೀಟು" ಎಂಬುವುದರ ಅರ್ಥವಿವರಣೆಯ ತರುವಾಯ ಈ ಕೆಳಗಿನ ಅರ್ಥವಿವರಣೆಯನ್ನು ಸೇರಿಸತಕ್ಕದ್ದು, ಅದು ಯಾವುದೆಂದರೆ :—

ವಿಕ್ರಯಕ್ಕೆ ಯೋಗ್ಯವಾದ ಸೆಕ್ಯೂರಿಟಿ ಪತ್ರ.

"(16 A.) "ವಿಕ್ರಯಕ್ಕೆ ಯೋಗ್ಯವಾದ ಸೆಕ್ಯೂರಿಟಿ ಪತ್ರ" ಎಂದರೆ ಬ್ರಿಟಿಷ್ ಇಂಡಿಯಾದಲ್ಲಿ ಅಥವಾ ಯುನೈಟೆಡ್ ಕಿಂಗ್ಡಮ್ ಯಾ ಬ್ರಿಟಿಷ್ ಸಂಯುಕ್ತ ರಾಜ್ಯದಲ್ಲಿ ಅಥವಾ ಮೈಸೂರು ಸೀಮೆಯಲ್ಲಿರುವ ಯಾವುದಾದರೂ ಸ್ಟಾಕ್ ಬಜಾರಿನಲ್ಲಿ ವಿಕ್ರಯಿಸಲ್ಪಡುವುದಕ್ಕೆ ಯೋಗ್ಯವಾದ ಸ್ವಭಾವವುಳ್ಳ ಪತ್ರವೆಂದು ಅರ್ಥ."

1906ರ 5ನೆ ಆಕ್ಟು 2ನೆ ಪ್ರಕರಣ.

(b) (19ನೆ ವಾಕ್ಯದಲ್ಲಿ (c) ಒಳ ವಾಕ್ಯವನ್ನೂ ಅದರ ಹಿಂದೆ ಇರುವ ಮತ್ತು ಎಂಬ ಮಾತನ್ನೂ ಇದರಿಂದ ರದ್ದುಮಾಡಿ ಇದೆ; ಮತ್ತು

1904ರ 15ನೆ ಆಕ್ಟು, 2 (b) ಪ್ರಕರಣ.

(c) (24)ನೆ ವಾಕ್ಯದಲ್ಲಿ "ಸೆಟ್ಲಮೆಂಟ್ ಅಥವಾ ವ್ಯವಸ್ಥಾಪತ್ರ" ಎಂಬುವುದರ ಅರ್ಥವಿವರಣೆಗೆ ಈ ಕೆಳಗಿನ ಮಾತುಗಳನ್ನು ಸೇರಿಸತಕ್ಕದ್ದು. ಅವು ಯಾವುವೆಂದರೆ:—

"ಮತ್ತು ಲಿಖಿತದಲ್ಲಿ ಅಂಥಾ ಯಾವ ವಿಲೇವಾರಿಯನ್ನೂ ಮಾಡದೆ ಇದ್ದಲ್ಲಿ ಟ್ರಸ್ಟಿನ ಡಿಕ್ಲರೇಷನ್ ರೂಪದಲ್ಲಿ ಅಥವಾ ಬೇರೆ ವಿಧದಲ್ಲಿ ಅಂಥಾ ಯಾವುದಾದರೂ ವಿಲೇವಾರಿಯ ಷರತ್ತುಗಳನ್ನು ನಮೂದು ಮಾಡಿರುವ ದಸ್ತಾವೇಜನ್ನೂ ಸಹ ಅಡಗಿಸಿಕೊಂಡಿರುತ್ತದೆ."

1906ರ 5ನೆ ಆಕ್ಟು 2ನೆ ಪ್ರಕರಣ.

1900ರ 2ನೆ ರೆಗ್ಯುಲೇಷನಿನ 11, 32, 3 , 40, 41, 69, ಮತ್ತು 74ನೆ ಪ್ರಕರಣಗಳ ತಿದ್ದುಪಾಟು.

2. ಮೇಲ್ಕಂಡ ರೆಗ್ಯುಲೇಷನಿನ 11ನೆ ಪ್ರಕರಣದ (a) ವಾಕ್ಯದಲ್ಲಿ, 32ನೆ ಪ್ರಕರಣಕ್ಕೆ ಲಗತ್ತಿರುವ ನಿಯಮದ (c) ವಾಕ್ಯದಲ್ಲಿ, 35ನೆ ಪ್ರಕರಣಕ್ಕೆ ಲಗತ್ತಿರುವ ನಿಯಮದ (a) ವಾಕ್ಯದಲ್ಲಿ 40ನೆ ಪ್ರಕರಣದಲ್ಲಿ, 41ನೆ ಪ್ರಕರಣದಲ್ಲಿ, 69ನೆ ಪ್ರಕರಣದಲ್ಲಿ, ಮತ್ತು 74ನೆ ಪ್ರಕರಣದಲ್ಲಿ "ಬಂದಾಣೆ" ಎಂಬ ಮಾತು ಬರುವ ಕಡೆಯಲ್ಲೆಲ್ಲಾ ಅದರ ತರುವಾಯ "ಅಥವಾ ಅರ್ಧಾಣೆ" ಎಂಬ ಮಾತುಗಳನ್ನು ಸೇರಿಸತಕ್ಕದ್ದು.

1900ರ 2ನೆ ರೆಗ್ಯುಲೇಷನಿನ 23ನೆ ಪ್ರಕರಣದ ತರುವಾಯ 23 A. ಹೊಸ ಪ್ರಕರಣವನ್ನು ಸೇರಿಸುವುದು.

3. ಮೇಲ್ಕಂಡ ರೆಗ್ಯುಲೇಷನಿನ 23ನೆ ಪ್ರಕರಣದ ತರುವಾಯ ಇದರಡಿ ಕಂಡ ಪ್ರಕರಣವನ್ನು ಸೇರಿಸತಕ್ಕದ್ದು. ಅದು ಯಾವುದೆಂದರೆ:—

ವಿಕ್ರಯಕ್ಕೆ ಯೋಗ್ಯವಾದ ಸೆಕ್ಯೂರಿಟಿ ಪತ್ರಗಳ ಅಡಮಾನಗಳಿಗೆ ಸಂಬಂಧಪಟ್ಟ ಕೆಲವು ದಸ್ತೈವಜುಗಳು ಒಡಂಬಡಿಕೆ ಪತ್ರಗಳಂತೆ ಹಾಸಲಿಗೆ ಗುರಿಯಾಗಿರತಕ್ಕದ್ದು.

"23 A (1) (ಪ್ರಾಮಿಸರಿ ನೋಟು ಅಥವಾ ಬಿಲ್ ಆಫ್ ಎಕ್ಸ್‌ಚೇಂಜ್ ಅಲ್ಲದ) ಒಂದು ದಸ್ತಾವೇಜು—

(a) ಸಾಲವಾಗಿ ಮುಂಗಡ ಕೊಡಲ್ಪಟ್ಟಿರುವ ಅಥವಾ ಮುಂದೆ ಕೊಡಲ್ಪಡುವ ಹಣಕ್ಕಾಗಿ, ಅಥವಾ ಈಗ ಇರುವ ಅಥವಾ ಮುಂದೆ ತೆಗೆದುಕೊಳ್ಳುವ ಋಣಕ್ಕಾಗಿ ಖಾತ್ರಿಯ ಬಗ್ಗೆ ಯಾವುದಾದರೂ ವಿಕ್ರಯಕ್ಕೆ ಯೋಗ್ಯವಾದ ಸೆಕ್ಯೂರಿಟಿ ಪತ್ರದ ಅಡಮಾನದ ಕಾಲದಲ್ಲಿ ಕೊಡಲ್ಪಟ್ಟಿದ್ದರೆ, ಅಥವಾ

(b) ಖಾತ್ರಿಯ ಬಗ್ಗೆ ಉದ್ದೇಶಿಸಲ್ಪಟ್ಟ ಯಾವುದಾದರೂ ವಿಕ್ರಯಕ್ಕೆ ಯೋಗ್ಯವಾದ ಸೆಕ್ಯೂರಿಟಿ ಪತ್ರದ ಕ್ರಮವಾಗಿ ಸ್ಟ್ಯಾಂಪು ಹಚ್ಚಿ ಮಾಡಿದ ವರ್ಗವನ್ನು ವಿಮೋಚನಾರ್ಹವನ್ನಾಗಿ ಮಾಡಿದರೆ ಅಥವಾ ಬದಲಾಯಿಸಿದರೆ,

ಅದು 1ನೆ ಷೆಡ್ಯೂಲ್ 5 (b) ನೆ ಆರ್ಟಿಕಲ್ ಮೇರೆಗೆ ಹಾಸಲಿಗೆ ಗುರಿಯಾಗುವಂಥಾ ಒಡಂಬಡಿಕೆಯಾಗಿ ಅಥವಾ ಒಡಂಬಡಿಕೆಯು ಯಾದಾಸ್ತಾಗಿ ಇದ್ದರೆ ಹೇಗೋ ಹಾಗೆ ಛಾರ್ಜಿಗೆ ಗುರಿಯಾಗತಕ್ಕದ್ದು.

(2) ಅಂಥಾ ಯಾವುದಾದರೂ ದಸ್ತಾವೇಜಿನ ಖುಲಾಸೆ ಅಥವಾ ಬಿಡುಗಡೆಯು ಅದೇಮೇರೆ ಹಾಸಲಿಗೆ ಗುರಿಯಾಗತಕ್ಕದ್ದು."

1904ರ 15ನೆ ಆಕ್ಟು 4ನೆ ಪ್ರಕರಣ.

1900ರ 2ನೆ ರೆಗ್ಯುಲೇಷನಿನ 26ನೆ ಪ್ರಕರಣದ ತಿದ್ದುಪಾಟು.

4. ಮೇಲ್ಕಂಡ ರೆಗ್ಯುಲೇಷನಿನ 26ನೆ ಪ್ರಕರಣಕ್ಕೆ ಲಗತ್ತಿರುವ ಮೊದಲನೆಯ ನಿಯಮಕ್ಕೆ ಬದಲಾಗಿ ಈ ಕೆಳಗಿನ ನಿಯಮವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"ಆದರೆ, ರಾಜಾಯುವು ಅಥವಾ ಉತ್ಪತ್ತಿಯ ಒಂದು ಹಿಸ್ಸೆಯು ಗೇಣಿಯಾಗಿ ಅಥವಾ ಗೇಣಿಯ ಒಂದು ಅಂಶವಾಗಿ ಅಂಗೀಕರಿಸೋಣಾಗುವ ಒಂದು ಗಣಿಯ ಗುತ್ತೆಯ ಸಂಗತಿಯಲ್ಲಿ ಅಂಥಾ ರಾಜಾಯುದ ಅಥವಾ ಅಂಥಾ ಹಿಸ್ಸೆಯ ಮೌಲ್ಯವನ್ನು—

(a) ಒಂದು ಗುತ್ತೆಯು ಸರ್ಕಾರದವರಿಂದ ಅಥವಾ ಸರ್ಕಾರದವರ ಪರವಾಗಿ ಕೊಡಲ್ಪಟ್ಟಿರುವಾಗ ಗುತ್ತಾವಿನ ಮೇರೆ ಸಂಕಾರಕ್ಕೆ ರಾಜಾಯುವಾಗಿ ಅಥವಾ ಹಿಸ್ಸೆಯಾಗಿ ಕೊಡಬಹುದೆಂದು ಡೆಪ್ಯೂಟಿ ಕಮಿಷನರು ಆ ಪ್ರಮೇಯದ ಎಲ್ಲಾ ಸಂಗತಿಗಳನ್ನೂ ಯೋಚಿಸಿ ಅಂದಾಜು ಮಾಡಿರುವ ಮೊತ್ತವಾಗಿ ಅಥವಾ ಮೌಲ್ಯವಾಗಿ, ಅಥವಾ

(*b*) ಗುತ್ತಿಯು ಇತರ ಯಾವ ಮನುಷ್ಯನಿಂದಲಾದರೂ ಕೊಡಲ್ಪಟ್ಟಿರುವಾಗ ವರ್ಷ ಒಂದಕ್ಕೆ ಇಪ್ಪತ್ತು ಸಾವಿರ ರೂಪಾಯಾಗಿ, ಸ್ಟ್ಯಾಂಪು ಹಾಸಲಿಗೋಸ್ಕರ ಅಂಥಾ ರಾಜಾಯ್ತುವನ್ನು ಅಥವಾ ಅಂಥಾ ಹಿಸ್ಸೆಯ ಮೌಲ್ಯವನ್ನು ಅಂದಾಜು ಮಾಡಿದರೆ ಸಾಕಾಗಿರುತ್ತದೆ; ಮತ್ತು ಅಂಥಾ ರಾಜಾಯವು ಅಥವಾ ಹಿಸ್ಸೆಯು, ಏನಾದರೂ ಆಗಿರಲಿ, ಅದರ ಪೂರಾ ಮೊಬಲಗು ಅಂಥಾ ಗುತ್ತಿಗೆಗೆನುಗುಣವಾಗಿ ಬರಮಾಡಿಕೊಳ್ಳಲ್ಪಡತಕ್ಕದ್ದಾಗಿರುತ್ತದೆ.''

1904ರ 15ನೆ ಆಕ್ಟು 5ನೆ ಪ್ರಕರಣ.

1900ರ 2ನೆ ರೆಗ್ಯುಲೇಷನಿನ 29ನೆ ಪ್ರಕರಣದ (*a*) ವಾಕ್ಯದ ತಿದ್ದುಪಾಟು.

5(*a*) ಮೇಲ್ಕಂಡ ರೆಗ್ಯುಲೇಷನಿನ 29ನೆ ಪ್ರಕರಣದ (*a*) ವಾಕ್ಯದಲ್ಲಿ "ನಂಬರ್ 6. (ಅಡಮಾನದ ವಿಷಯವಾದ, ಕರಾರು)'' ಎಂಬ ಮಾತುಗಳು ಮತ್ತು ಸಂಖ್ಯೆಗೆ ಬದಲಾಗಿ "ನಂಬರ್ 6, (ಮೂಲಪತ್ರ; ಗಿರವಿ ಅಥವಾ ಒತ್ತೆಯು ಠೇವಣಿಗೆ ಸಂಬಂಧಿಸುವ ಒಡಂಬಡಿಕೆ ಯಾ ಕರಾರು)'' ಎಂಬ ಮಾತುಗಳನ್ನೂ ಸಂಖ್ಯೆಯನ್ನೂ ಸೇರಿಸತಕ್ಕದ್ದು.

1906ರ 5ನೆ ಆಕ್ಟು 4ನೆ ಪ್ರಕರಣ.

(*b*) 29ನೆ ಪ್ರಕರಣದ (*b*) ವಾಕ್ಯಕ್ಕೆ ಬದಲಾಗಿ ಈ ಕೆಳಗಿನದನ್ನು ಸೇರಿಸತಕ್ಕದ್ದು ಅದೇನೆಂದರೆ :—

1900ರ 2ನೆ ರೆಗ್ಯುಲೇಷನಿನ 29ನೆ ಪ್ರಕರಣದ (*b*) ವಾಕ್ಯಕ್ಕೆ ಬದಲಾಗಿ ಹೊಸ ಪ್ರಕರಣವನ್ನು ಸೇರಿಸುವುದು.

"(*b*) ಬೆಂಕಿಯು ಇನ್ಷ್ಯೂರೆನ್ಸು ಅಲ್ಲದ ಇತರ ಯಾವುದಾದರೂ ಇನ್ಷ್ಯೂರೆನ್ಸಿನ ಪಾಲಿಸಿಯ ವಿಷಯದಲ್ಲಿ ಇನ್ಷ್ಯೂರೆನ್ಸು ಮಾಡಿಸಿಕೊಳ್ಳುವವನಿಂದ ವಹಿಸಲ್ಪಡತಕ್ಕದ್ದು;

(*bb*) ಬೆಂಕಿಯು ಇನ್ಷ್ಯೂರೆನ್ಸು ಪಾಲಿಸಿಯ ವಿಷಯದಲ್ಲಿ— ಪಾಲಿಸಿಯನ್ನು ಕೊಡುವ ಮನುಷ್ಯನಿಂದ ವಹಿಸಲ್ಪಡತಕ್ಕದ್ದು;''

1906ರ 5ನೆ ಆಕ್ಟು 5ನೆ ಪ್ರಕರಣ.

1900ರ 2ನೆ ರೆಗ್ಯುಲೇಷನಿನ 30ನೆ ಪ್ರಕರಣಕ್ಕೆ ಹೆಚ್ಚಾಗಿ ಸೇರಿಸುವಿಕೆ.

6. ಮೇಲ್ಕಂಡ ರೆಗ್ಯುಲೇಷನಿನ 30ನೆ ಪ್ರಕರಣಕ್ಕೆ ಈ ಕೆಳಗಿನ ಪ್ಯಾರಗ್ರಾಫ್ ಯಾ ಪರಿಚ್ಛೇದವನ್ನು ಸೇರಿಸತಕ್ಕದ್ದು, ಅದೇನೆಂದರೆ :—

"ಬೆಂಕಿಯು ಇನ್ಷ್ಯೂರೆನ್ಸಿನ ಯಾವುದಾದರೂ ಕಂಟ್ರಾಕ್ಟು (ಯಾ ಒಡಂಬಡಿಕೆಯು) ಯಾವುದಾದರೂ ನವೀಕರಣಕ್ಕೆ ಯಾವುದಾದರೂ ಪ್ರಿಮಿಯಂ ಯಾ ಮುಂಗಡ ಅಥವಾ ಪ್ರತಿಫಲಕ್ಕಾಗಿ ಸಾಲವನ್ನು ಬರಮಾಡಿಕೊಳ್ಳುವ ಅಥವಾ ತೆಗೆದುಕೊಳ್ಳುವ ಯಾವನಾದರೂ ಮನುಷ್ಯನು ಅಂಥಾ ಪ್ರಿಮಿಯಂ ಯಾ ಮುಂಗಡ ಅಥವಾ ಪ್ರತಿಫಲಕ್ಕಾಗಿ ಸಾಲವನ್ನು ಬರಮಾಡಿಕೊಂಡ ಅಥವಾ ತೆಗೆದುಕೊಂಡ ತರುವಾಯ ಒಂದು ತಿಂಗಳೊಳಗೆ ಅದಕ್ಕೆ ಸರಿಯಾಗ ಸ್ಟ್ಯಾಂಪು ಹಚ್ಚಿದ ರಸೀತಿಯನ್ನು ಕೊಡತಕ್ಕದ್ದು''

190 ರ 15ನೆ ಆಕ್ಟು 6ನೆ ಪ್ರಕರಣ.

1900ರ 2ನೆ ರೆಗ್ಯುಲೇಷನಿನ 40ನೆ ಪ್ರಕರಣದ (1) (*b*) ವಾಕ್ಯದ ತಿದ್ದುಪಾಟು.

7. ಮೇಲ್ಕಂಡ ರೆಗ್ಯುಲೇಷನಿನ 40ನೆ ಪ್ರಕರಣದ (1)ನೆ ಒಳಪ್ರಕರಣದ (*b*) ವಾಕ್ಯದಲ್ಲಿ "ಸರಿಯಾದ ಹಾಸಲಿಗೆ ಕಮ್ಮಿ ಬಿದ್ದ ಭಾಗದ ಹತ್ತರಷ್ಟು'' ಎಂಬ ಮಾತುಗಳಿಗೆ ಬದಲಾಗಿ "ಸರಿಯಾದ ಹಾಸಲಿಗೆ ಕಮ್ಮಿ ಬಿದ್ದ ಭಾಗದ ಹತ್ತರಷ್ಟಕ್ಕೆ ಮೀರದ ಒಂದು'' ಎಂಬ ಮಾತುಗಳನ್ನು ಸೇರಿಸತಕ್ಕದ್ದು.

1906ರ 5ನೆ ಆಕ್ಟು ನೆ ಪ್ರಕರಣ.

1900ರ 2ನೆ ರೆಗ್ಯುಲೇಷನಿನ 51ನೆ ಪ್ರಕರಣದ ತಿದ್ದುಪಾಟು.

8. ಮೇಲ್ಕಂಡ ರೆಗ್ಯುಲೇಷನಿನ 51ನೆ ಪ್ರಕರಣದಲ್ಲಿ "ಯಾವುದೊಂದು ಇನ್‌ಕಾರ್ಪೊರೇಟೆಡ್ ಕಂಪೆನಿಯವರು'' ಎಂಬ ಮಾತುಗಳಿಗೆ ಮೊದಲು "ಯಾವನೊಬ್ಬ ಬ್ಯಾಂಕರು ಅಥವಾ'' ಎಂಬ ಮಾತುಗಳನ್ನೂ ಮತ್ತು "ಕಂಪೆನಿ'' ಎಂಬ ಮಾತಿಗೆ ಮೊದಲು "ಬ್ಯಾಂಕರ್'' ಎಂಬ ಮಾತನ್ನೂ ಸೇರಿಸತಕ್ಕದ್ದು.

1904ರ 1 ನೆ ಆಕ್ಟು 7ನೆ ಪ್ರಕರಣ.

1900ರ 2ನೆ ರೆಗ್ಯುಲೇಷನಿನ 56 (1)ನೆ ಪ್ರಕರಣದ ತಿದ್ದುಪಾಟು.

9. ಮೇಲ್ಕಂಡ ರೆಗ್ಯುಲೇಷನಿನ 56ನೆ ಪ್ರಕರಣದ (1)ನೆ ಒಳಪ್ರಕರಣದಲ್ಲಿ "4—5ನೆ ಅಧ್ಯಾಯಗಳ ಮೇರೆಗೆ'' ಎಂಬ ಮಾತುಗಳಿಗೆ ತರುವಾಯ ಈ ಕೆಳಗಿನದನ್ನು ಸೇರಿಸತಕ್ಕದ್ದು, ಅದೇನೆಂದರೆ :—

"ಮತ್ತು 26ನೆ ಪ್ರಕರಣಕ್ಕೆ ಲಗತ್ತಿರುವ ಮೊದಲನೆ ನಿಯಮದ (*a*) ವಾಕ್ಯದ ಮೇರೆಗೆ''

1904ರ 15ನೆ ಆಕ್ಟ್ 8 (1) ಪ್ರಕರಣ.

1900ರ 2ನೆ ರೆಗ್ಯುಲೇಷನಿನ 1ನೆ ಷೆಡ್ಯೂಲಿನ ತಿದ್ದುಪಾಟುಗಳು.

10. ಮೇಲ್ಕಂಡ ರೆಗ್ಯುಲೇಷನಿನ 1ನೆ ಷೆಡ್ಯೂಲಿನಲ್ಲಿ ಈ ಕೆಳಗಿನ ತಿದ್ದುಪಾಟುಗಳನ್ನು ಮಾಡತಕ್ಕದ್ದು, ಅವು ಯಾವುವೆಂದರೆ :—

(1) 6ನೆ ಆರ್ಟಿಕಲಿಗೆ ಬದಲಾಗಿ ಈ ಕೆಳಗಿನದನ್ನು ಸೇರಿಸತಕ್ಕದ್ದು, ಅದೇನೆಂದರೆ:—

"6. ಟೈಟಲಡೀಡ್ ಯಾ ಮೂಲ ಪತ್ರದ, ಗಿರಿವಿ ಅಥವಾ ಒತ್ತೆಯ ಠೇವಣಿಗೆ ಸಂಬಂಧಿಸುವ ಒಡಂಬಡಿಕೆ ಎಂದರೆ ಈ ಕೆಳಗಿನದಕ್ಕೆ ಸಂಬಂಧಿಸುವ ಒಂದು ಒಡಂಬಡಿಕೆಗೆ ಸಾಕ್ಷ್ಯವಾಗಿರುವ ಯಾವುದಾದರೂ ದಸ್ತಾವೇಜು—

(1) (ವಿಕ್ರಯಕ್ಕೆ ಯೋಗ್ಯವಾದ ಸೆಕ್ಯೂರಿಟಿ ಪತ್ರವಲ್ಲದ) ಯಾವುದಾದರೂ ಸ್ವತ್ತಿಗೆ ಹಕ್ಕಾಗಿರುವ ಅಥವಾ ಹಕ್ಕಿಗೆ ಸಾಕ್ಷ್ಯವಾಗಿರುವ ಟೈಟಲಡೀಡ್ ಯಾ ಮೂಲಪತ್ರಗಳ ಅಥವಾ ದಸ್ತಾವೇಜುಗಳ ಠೇವಣಿ, ಅಥವಾ

(2) ಸಾಲವಾಗಿ ಅಥವಾ ಈಗಿನ ಅಥವಾ ಮುಂದಿನ ಸಾಲವಾಗಿ ಕೊಡಲ್ಪಟ್ಟ ಅಥವಾ ಕೊಡಲ್ಪಡುವ ಹಣವನ್ನು ಪುನಃ ಪಾವತಿ ಮಾಡುವುದಕ್ಕೋಸ್ಕರ ಆಧಾರವಾಗಿ ಅಂಥಾ ಠೇವಣಿ, ಗಿರಿವಿ ಅಥವಾ ಒತ್ತೆ ಮಾಡಲ್ಪಟ್ಟಿರುವಲ್ಲಿ ಚರಸ್ವತ್ತಿನ ಗಿರಿವಿ ಅಥವಾ ಒತ್ತೆ—

(a) ಅಂಥಾ ಸಾಲ ಅಥವಾ ಋಣವು ಕೇಳಿದಾಗ, ಅಥವಾ ಒಡಂಬಡಿಕೆಗೆ ಸಾಕ್ಷ್ಯವಾಗಿರುವ ದಸ್ತಾವೇಜಿನ ತಾರೀಖಿನಿಂದ ಮೂರು ತಿಂಗಳಿಗಿಂತ ಹೆಚ್ಚು ಕಾಲದ ನಂತರ ವಾಪಸು ಕೊಡಲ್ಪಡತಕ್ಕದ್ದಾಗಿದ್ದರೆ ;

ಪಡೆದುಕೊಂಡ ಹಣದ ಮೇಲೆ ಒಂದು ಬಿಲ ಆಫ್ ಎಕ್ಸ್‌ಚೇಂಜ [ನಂ. 12 (b) ಬಗ್ಗೆ ತೆರಲ್ಪಡತಕ್ಕಷ್ಟು ಹಾಸಲು.

(b) ಅಂಥಾ ದಸ್ತಾವೇಜಿನ ತಾರೀಖಿನಿಂದ ಮೂರು ತಿಂಗಳೊಳಗೆ ಅಂಥಾ ಸಾಲ ಅಥವಾ ಋಣವು ವಾಪಸು ಕೊಡಲ್ಪಡತಕ್ಕದ್ದಾಗಿದ್ದರೆ.

ಪಡೆದುಕೊಂಡ ಹಣದ ಮೇಲೆ ಒಂದು ಬಿಲ ಆಫ್ ಎಕ್ಸ್‌ಚೇಂಜಿಗೆ [ನಂ. 12 (b)] ತೆರಲ್ಪಡತಕ್ಕ ಹಾಸಲಿನ ಅರ್ಧ.

ವಿನಾಯಿತಿ.

ಸಾಮಾನಿನ ಗಿರಿವಿ ಅಥವಾ ಒತ್ತೆಯ ದಸ್ತಾವೇಜು, ಸಾಕ್ಷಿ ಹಾಕಲ್ಪಡದಿದ್ದರೆ".

(2) 27ನೆ ನಂಬರ ಆರ್ಟಿಕಲಿಗೆ ಅವ್ಯವಹಿತವಾಗಿ ಕೆಳಗಿನ ಖತಾಯಿತಿಯಲ್ಲಿ "ಟೈಟಲ ಡೀಡ್ಸ್‌ಗಳ ಠೇವಣಾತಿ—ತೋರಡವಿನ ಮೂಲಕವಾದ ಒಡಂಬಡಿಕೆ (ನಂ: 6) ನೋಡು" ಎಂಬ ಮಾತುಗಳಿಗೆ ಬದಲಾಗಿ "ಟೈಟಲ ಡೀಡ್ಸ್ ಯಾ ಮೂಲಪತ್ರಗಳ, ಗಿರಿವಿ ಅಥವಾ ಒತ್ತೆಯ ಠೇವಣಿಗೆ ಸಂಬಂಧಪಡುವ ಒಡಂಬಡಿಕೆ (ನಂ. 6) ನೋಡು" ಎಂಬ ಮಾತುಗಳನ್ನು ಸೇರಿಸತಕ್ಕದ್ದು.

1904ರ 15ನೆ ಆಕ್ಟ್ 8ನೆ ಪ್ರಕರಣ (3).

(3) 28ನೆ ನಂಬರ ಆರ್ಟಿಕಲಿಗೆ ತರುವಾಯ ಬರುವ "ಎಕ್ವಿಟೆಬಲ ಮಾರ್ಟಗೇಜ—ತೋರಡವಿನ ಮೂಲಕವಾದ ಒಡಂಬಡಿಕೆ (ನಂ. 6) ನೋಡು" ಎಂಬುವುದನ್ನು ಬಿಟ್ಟುಬಿಡತಕ್ಕದ್ದು.

1904ರ 15ನೆ ಆಕ್ಟ್ 8ನೆ ಪ್ರಕರಣ (4).

(4) 38ನೆ ನಂಬರ ಆರ್ಟಿಕಲಿನಲ್ಲಿ.

(a) "ಅಡಮಾನಕ್ಕೆ ಒಡಂಬಡಿಕೆ (ನಂ. 6)" ಎಂಬ ಮಾತುಗಳು ಮತ್ತು ಸಂಖ್ಯೆಗೆ ಬದಲಾಗಿ "ಟೈಟಲ ಡೀಡ್ಸ್ ಯಾ ಮೂಲಪತ್ರಗಳ, ಗಿರಿವಿಯ ಅಥವಾ ಒತ್ತೆಯ ಠೇವಣಿಗೆ ಸಂಬಂಧಪಡುವ ಒಡಂಬಡಿಕೆ (ನಂ. 6)" ಎಂಬ ಮಾತುಗಳನ್ನೂ ಸಂಖ್ಯೆಯನ್ನೂ ಸೇರಿಸತಕ್ಕದ್ದು.

(b) (b) ವಾಕ್ಯದಿಂದ "ಪತ್ರ ಹುಟ್ಟುವಾಗ" ಎಂಬ ಮಾತುಗಳನ್ನು ಬಿಟ್ಟುಬಿಡತಕ್ಕದ್ದು ; ಮತ್ತು

(c) "(3) ಸಾಮಾನಿನ ಒತ್ತೆ ಅಥವಾ ಅಡವು ಪತ್ರವು ; ಇದಕ್ಕೆ ಸಾಕ್ಷಿಗಳಿಲ್ಲದಿದ್ದರೆ" ಎಂಬ ವಿನಾಯಿತಿಯನ್ನು ಬಿಟ್ಟುಬಿಡತಕ್ಕದ್ದು.

1906ರ 5ನೆ ಆಕ್ಟು 7ನೆ ಪ್ರಕರಣ (2).

(5) 39ನೆ ನಂಬರ ಆರ್ಟಿಕಲಿನಲ್ಲಿ—

(a) (b) ವಾಕ್ಯದಲ್ಲಿ "ಒಂದು ವರುಷಕ್ಕೆ" ಎಂಬ ಮಾತುಗಳಿಗೆ ಬದಲಾಗಿ "ಹದಿನೆಂಟು ತಿಂಗಳುಗಳಿಗೆ" ಎಂಬ ಮಾತುಗಳನ್ನು ಸೇರಿಸತಕ್ಕದ್ದು.

1904ರ 15ನೆ ಆಕ್ಟ್ಟ 8ನೆ ಪ್ರಕರಣ (5).

(b) (b) ವಾಕ್ಯದ ಎದುರಿಗೆ 2ನೆಯ ಮಧ್ಯನಲ್ಲಿ "ನಾಲ್ಕು ಆಣೆ" ಎಂಬ ಖತಾಯಿತಿಯು ಬರುವ ಪ್ರತಿಸಲವೂ "ಎರಡು ಆಣೆ" ಎಂಬ ಖತಾಯಿತಿಯನ್ನು ಸೇರಿಸತಕ್ಕದ್ದು.

1904ರ 15ನೆ ಆಕ್ಟ್ಟ 8ನೆ ಪ್ರಕರಣ (6).

(6) 44ನೆ ನಂಬರ ಆರ್ಟಿಕಲಿಗೆ ತರುವಾಯ ಈ ಕೆಳಗಿನ ಖತಾಯಿತಿಯನ್ನು ಸೇರಿಸತಕ್ಕದ್ದು, ಅದೇನೆಂದರೆ :—

"ಗಿರವಿ ಅಥವಾ ಒತ್ತೆ—ಟೈಟಲ ಡೀಡ್ಸ ಮೂಲ ಪತ್ರಗಳ, ಗಿರವಿಯು ಅಥವಾ ಒತ್ತೆಯ ಠೇವಣಿಗೆ ಸಂಬಂಧಿಸುವ ಒಡಂಬಡಿಕೆ (ನಂ. 6) ನ್ನು ನೋಡು"

(7) 45ನೆ ನಂಬರ ಆರ್ಟಿಕಲಿನ A ಮತ್ತು B ಭಾಗಗಳಿಗೆ ಬದಲಾಗಿ ಈ ಕೆಳಗಿನದನ್ನು ಸೇರಿಸತಕ್ಕದ್ದು :—

	ಒಂದೇ ಪ್ರತಿಯಾಗಿ ಬರೆದಿದ್ದರೆ.	ದ್ವಿಪ್ರತಿಯಾಗಿ ಬರೆದಿದ್ದರ ಪ್ರತಿ ಒಂದಕ್ಕೂ.
A. ಸಮುದ್ರದ ಇನ್ಷ್ಯೂರೆನ್ಸ ವಿಷಯದಲ್ಲಿ (7ನೆ ಪ್ರಕರಣವನ್ನು ನೋಡು).		
(1) ಯಾವುದೊಂದು ಸಮುದ್ರ ಪ್ರಯಾಣದ ಬಗ್ಗೆ ಅಥವಾ ಅಂಥಾ ಪ್ರಯಾಣದ ಮೇಲೆ-		
(i) ಪ್ರೀಮಿಯಂ (ಮುಂಗಡವು) ಅಥವಾ ಪ್ರತಿಫಲವು ಪಾಲಿಸಿಯಿಂದ ಇನ್ಷ್ಯೂರಾದ ಮೊಬಲಗಿನ ಮೇಲೆ ಎರಡು ಆಣೆ ಎಂದರೆ ಶೇಕಡಾ ಎಂಟನೇ ಒಂದಂಶಕ್ಕೆ ಮೀರದಿದ್ದರೆ.	ಒಂದಾಣೆ	ಅರ್ಧಾಣೆ
(ii) ಇತರ ಯಾವುದಾದರೂ ಸಂಗತಿಯಲ್ಲಿ ಪಾಲಿಸಿಯಿಂದ ಇನ್ಷ್ಯೂರಾದ ಪ್ರತಿ ಸಾವಿರ ರೂಪಾಯಿಯು ಮತ್ತು ಸಾವಿರ ರೂಪಾಯಿಯು ಭಿನ್ನಾಂಶದ ಬಗ್ಗೆ	ಎರಡು ಆಣೆಗಳು	ಒಂದಾಣೆ
(2) ವಾಯಿದೆಯ ಬಗ್ಗೆ—		
(iii) ಪಾಲಿಸಿಯಿಂದ ಇನ್ಷ್ಯೂರಾದ ಪ್ರತಿ ಸಾವಿರ ರೂಪಾಯಿಯು ಪೂರಾ ಮೊಬಲಗಿನ ಮತ್ತು ಸಾವಿರ ರೂಪಾಯಿಯ ಭಿನ್ನಾಂಶದ ವಿಷಯದಲ್ಲಿ		
ಆರು ತಿಂಗಳುಗಳಿಗೆ ಮೀರದ ಯಾವುದಾದರೂ ಕಾಲದ ಬಗ್ಗೆ ಇನ್ಷ್ಯೂರೆನ್ಸು ಮಾಡಲ್ಪಟ್ಟಲ್ಲಿ	ಡಿಟ್ಟೋ	ಡಿಟ್ಟೋ
ಹನ್ನೆರಡು ತಿಂಗಳುಗಳಿಗೆ ಮೀರಿದ ಯಾವುದಾದರೂ ಕಾಲದ ಬಗ್ಗೆ ಇನ್ಷ್ಯೂರೆನ್ಸು ಮಾಡಲ್ಪಟ್ಟಲ್ಲಿ.	ನಾಲ್ಕು ಆಣೆಗಳು	ಎರಡು ಆಣೆಗಳು
B. ಬೆಂಕಿಯ ಇನ್ಷ್ಯೂರೆನ್ಸು—		
(1) ಮೂಲ ಪಾಲಿಸಿಯ ವಿಷಯದಲ್ಲಿ—		
(i) ಇನ್ಷ್ಯೂರಾದ ಮೊಬಲಗು 5,000 ರೂಪಾಯಿಗಳಿಗೆ ಮೀರದೆ ಇದ್ದರೆ.	...	ಎಂಟು ಆಣೆಗಳು
(ii) ಇತರ ಸಂಗತಿಗಳಲ್ಲಿ.	...	ಒಂದು ರೂಪಾಯಿ.
(2) ಯಾವುದಾದರೂ ಮೂಲಪಾಲಿಸಿಯು ಯಾವುದಾದರೂ ನವೀಕರಣದ (ಹೊಸದು ಪಡಿಸುವಿಕೆಯ) ಮೇಲಿನ ಪ್ರೀಮಿಯಂ ಯಾ ರುಸುಮಿನ ಪಾವತಿಯ ಬಗ್ಗೆ ಪ್ರತಿ ರಸೀತಿಯ ವಿಷಯದಲ್ಲಿ.	...	51ನೆ ಪ್ರಕರಣದ ಮೇರೆ ವಸೂಲಾಗತಕ್ಕ ಯಾವುದಾದರೂ ಮೊಬಲಗಿನ ಜತೆಗೆ ಮೂಲ ಪಾಲಿಸಿಯ ವಿಷಯದಲ್ಲಿ ಕೊಡತಕ್ಕ ರುಸುಮಿನಲ್ಲಿ ಅರ್ಧ.

1906ರ 5ನೆ ಆಕ್ಟು 7 ಪ್ರಕರಣ (4). (8) 51ನೆ ನಂಬರ್ ಆರ್ಟಿಕಲಿಗೆ ಈ ಕೆಳಗಿನ ಟಪ್ಪಣಿಯನ್ನು ಸೇರಿಸ ತಕ್ಕದ್ದು, ಅದೇನೆಂದರೆ:

ನಂಬರ್ 45 B (2) ಇನ್‌ಷ್ಯೂರೆನ್ಸು ಪಾಲಿಸಿಯನ್ನೂ ಕೂಡ ನೋಡು"

1904ರ 15ನೆ ಆಕ್ಟು ನೆ ಪ್ರಕರಣ (7). (9) 55ನೆ ನಂಬರ್ ಆರ್ಟಿಕಲಿನಲ್ಲಿ "ದಸ್ತಾವೇಜು" ಎಂಬ ಮಾತಿಗೆ ಮೊದ ಲು, ಆವರಣಗಳೊಳಗಿರುವ ಈ ಕೆಳಗಿನ ಮಾತುಗಳನ್ನು ಸೇರಿಸತಕ್ಕದ್ದು:—

"(23 A ಪ್ರಕರಣದಲ್ಲಿ ವಿಧಿಸಿರುವಂಥಾ ಖುಲಾಸೆಯ ಪತ್ರವಲ್ಲದ)"

ಉದ್ದೇಶಗಳ ಮತ್ತು ಕಾರಣಗಳ ವಿವರಣೆ.

ಸ್ಟ್ಯಾಂಪು ಹಚ್ಚಲ್ಪಡದ ಅಥವಾ ಕಮ್ಮಿ ಸ್ಟ್ಯಾಂಪು ಹಚ್ಚಲ್ಪಟ್ಟ ದಸ್ತಾವೇಜುಗಳಿಗಾಗಿ ಡೆಪ್ಯುಟಿ ಕಮಿಷನರು ವಿಧಿಸ ತಕ್ಕ ಪೆನಲ್ಟಿ ಯಾ ದಂಡವು 1900ರ 2ನೆ ನಂಬರ್ ಮೈಸೂರು ಸ್ಟ್ಯಾಂಪು ರೆಗ್ಯುಲೇಷನಿನ 40ನೆ ಪ್ರಕರಣದ (b) (1)ನೆ ವಾಕ್ಯದ ಮೇರೆಗೆ, "ಐದು ರೂಪಾಯಿಗಳು, ಅಥವಾ ಅವರಿಗೆ ಯುಕ್ತವೆಂದು ತೋರಿದರೆ, ನ್ಯಾಯವಾದ ಹಾಸಲಿನ ಅಥವಾ ಅದರಲ್ಲಿ ಕಮ್ಮಿಯಾದ ಭಾಗದ ಹತ್ತರಷ್ಟು" ಆಗಿದೆ. ಇದರಿಂದ ಅಂಥಾ ಮೊಬಲಗು 5 ರೂಪಾಯಿಗಿಂತ ಹೆಚ್ಚಾಗಿ ದ್ದ ಸಂದರ್ಭದಲ್ಲಿ, ನ್ಯಾಯವಾದ ಹಾಸಲಿನ ಅಥವಾ ಅದರಲ್ಲಿ ಕಮ್ಮಿಯಾದ ಮೊಬಲಗಿನ ಹತ್ತರಷ್ಟಕ್ಕಿಂತ ಕಮ್ಮಿಯಾದ ದಂಡವ ನ್ನು ಯುಕ್ತಾನುಸಾರವಾಗಿ ವಸೂಲ್ಮಾಡುವುದಕ್ಕೆ ಡೆಪ್ಯುಟಿ ಕಮಿಷನರಿಗೆ ಅವಕಾಶವಿಲ್ಲವಾಗಿದೆ. ಇದಕ್ಕೆ ಉದಾಹರಣೆಯಾಗಿ, ಹತ್ತು ರೂಪಾಯಿನ ಛಾಪಾ ಕಾಗದದಲ್ಲಿ ಬರೆಯಲ್ಪಡಬೇಕಾಗಿದ್ದ ಒಂದು ಖಾಲೀ ಕಾಗದದ ದಸ್ತಾವೇಜಿನ ಸಂಗತಿಯಲ್ಲಿ ಡೆಪ್ಯುಟಿ ಕಮಿಷನರು 5 ರೂಪಾಯಿ ದಂಡವನ್ನು ವಸೂಲ್ಮಾಡಬೇಕು ಇಲ್ಲವಾದರೆ 100 ರೂಪಾಯಿನ ದಂಡವನ್ನು ವಸೂಲ್ಮಾಡಬೇಕು; ಎಂದರೆ, ಸದರಿ ಸಂಗತಿಯ ವಿದ್ಯಮಾನಗಳಲ್ಲಿ 5 ರೂಪಾಯಿನ ದಂಡನೆಯು ಸಾಲದೆಂದು ಡೆಪ್ಯುಟಿ ಕಮಿಷನರಿಗೆ ತೋರಿಬಂದರೆ ಅವರು 100 ರೂಪಾಯಿನ ದಂಡವನ್ನು ವಸೂಲ್ಮಾಡಬೇಕೇ ಹೊರತು ಅವರ ಇಷ್ಟಬಂದಂತೆ ಅದಕ್ಕಿಂತ ಕಮ್ಮಿಯಾದ ಯಾವ ಮೊಬಲಗನ್ನೂ ವಸೂಲ್ಮಾಡಕೂಡದು. ಹೀಗೆ ಇರುವುದರಿಂದ ಉಂಟಾದ ಕಷ್ಟವು ಹೋದ ವರ್ಷದ ಪ್ರಜಾ ಪ್ರತಿನಿಧಿ ಸಭೆಯಲ್ಲಿ (ಸಾಮಾನ್ಯ ವಿಷಯ ಸಂಖ್ಯೆ 24) ತಿಳಿವಳಿಕೆಗೆ ತರಲ್ಪಟ್ಟಿತು. ಇದಕ್ಕೆ ಪರಿಹಾರವಾಗಿ ಸದರಿ ಒಳ ಪ್ರಕರಣದಲ್ಲಿ "ಸರಿಯಾದ ಹಾಸಲಿಗೆ ಕಮ್ಮಿ ಬಿದ್ದ ಭಾಗದ" ಎಂಬ ಮಾತುಗಳಿಗೆ ಬದಲಾಗಿ "ಸರಿಯಾದ ಹಾಸಲಿಗೆ ಕಮ್ಮಿ ಬಿದ್ದ ಭಾಗದ ಹತ್ತರಷ್ಟಕ್ಕೆ ಮೀರದ ಒಂದು" ಎಂಬ ಮಾತುಗಳನ್ನು ಸೇರಿಸಬೇಕೆಂದು ಸಲಹೆ ಕೊಡಲ್ಪಟ್ಟಿದೆ. ಈ ಬಿಲ್ಲಿನ 7ನೆ ವಾಕ್ಯವನ್ನು ನೋಡತಕ್ಕ ದ್ದು. ಮೈಸೂರು ಸ್ಟ್ಯಾಂಪು ರೆಗ್ಯುಲೇಷನಿಗೆ ಆಧಾರವಾಗಿರುವ 1899ನೆ ಇಸವಿಯ ಇಂಡಿಯನ್ ಸ್ಟ್ಯಾಂಪು ಆಕ್ಟಿನಲ್ಲಿ 1904ನೆ ಇಸವಿಯ 15ನೆ ನಂಬರ್ ಆಕ್ಟಿನಿಂದ, ಈ ತಿದ್ದುಪಾಟು ಆಗಲೇ ಮಾಡಲ್ಪಟ್ಟಿದೆ.

2. ಮೈಸೂರು ಸೀಮೆಯ ಸ್ಟ್ಯಾಂಪು ಕಾನೂನನ್ನು ಬ್ರಿಟಿಷ್ ಇಂಡಿಯದ ಸ್ಟ್ಯಾಂಪು ಕಾನೂನಿಗೆ ಸರಿಬೀಳುವಂತೆ ಮಾ ಡುವುದಕ್ಕಾಗಿ, 1904ರ 15ನೆ ಮತ್ತು 1906ರ 5ನೆ ಆಕ್ಟುಗಳಿಂದ ಬ್ರಿಟಿಷ್ ಇಂಡಿಯನ್ ಆಕ್ಟಿನಲ್ಲಿ ಮಾಡಲ್ಪಟ್ಟಿರುವ ಇನ್ನೂ ಇತರ ಕೆಲವು ತಿದ್ದುಪಾಟುಗಳನ್ನೂ ಇದೇ ಸಂದರ್ಭದಲ್ಲಿಯೇ ಜಾರಿಗೆ ತರಲಾಗಿದೆ. ಕೆಲವು ತಿದ್ದುಪಾಟುಗಳು, ಎಂದರೆ, ಬೆಂಕಿ ಯ ಇನ್‌ಷ್ಯೂರೆನ್ಸು ಮತ್ತು ಸಮುದ್ರದ ಇನ್‌ಷ್ಯೂರೆನ್ಸಿಗೆ ಸಂಬಂಧಪಟ್ಟವುಗಳು, ಮೈಸೂರು ಸೀಮೆಗೆ ಸಂಬಂಧಪಡುವಷ್ಟರ ಮಟ್ಟಿಗೆ ಅಷ್ಟೇನೂ ಮುಖ್ಯವಾದವುಗಳಾಗಿರಲಾರವು. ಆದರೆ, ಅಂಥವುಗಳ ವಿಷಯದಲ್ಲಿ 1900ನೆ ಇಸವಿಯ 2ನೆ ನಂಬರ್ ರೆಗ್ಯುಲೇಷನಿನಲ್ಲಿ ಕೆಲವು ನಿಯಮಗಳು ಇದ್ದೇ ಇರುವುದರಿಂದ ಈ ನಿಯಮಗಳಿಗೆ ಸಂಬಂಧಪಟ್ಟ ತಿದ್ದುಪಾಟುಗಳನ್ನು ಕೂಡಾ ಈ ಬಿಲ್ಲಿನಲ್ಲಿ ಸೇರಿಸುವುದು ಯುಕ್ತವೆಂದು ಎಣಿಸಿ ಇವೆ. ಸದರಿ ತಿದ್ದುಪಾಟುಗಳಲ್ಲಿ ಮುಖ್ಯತರವಾದವುಗಳನ್ನು ಈ ಕೆಳಗೆ ವಿವರಿಸಿ ಇದೆ.

3. 1 (a) ಮತ್ತು 3ನೆ ವಾಕ್ಯಗಳು.—1 (a) ವಾಕ್ಯವು "ವಿಕ್ರಯಕ್ಕೆ ಯೋಗ್ಯವಾದ ಸೆಕ್ಯೂರಿಟಿ ಪತ್ರಗಳು" ಎಂ ಬ ಮಾತುಗಳ ಅರ್ಥವನ್ನು ವಿವರಿಸುತ್ತದೆ. 23 A. ಹೊಸ ಪ್ರಕರಣದ ವಿಷಯದಲ್ಲಿ ಈ ಅರ್ಥ ವಿವರಣೆಯು ಅವಶ್ಯವಾದ ದ್ದು.—3ನೆ ವಾಕ್ಯವನ್ನು ನೋಡುವುದು—ತೋರೆದಮಾನದಿಂದ ಠೇವಣಿ ಇಡಲ್ಪಟ್ಟಿರುವ ಸೆಕ್ಯೂರಿಟಿ ಯಾ ಪತ್ರವು ವಿಕ್ರಯಕ್ಕೆ ಯೋಗ್ಯವಾದುದಾಗಿರುವ ಸಂದರ್ಭದಲ್ಲಿ, 1ನೆ ಷೆಡ್ಯೂಲಿನ 6ನೆ ಆರ್ಟಿಕಲಿನಲ್ಲಿ ವಿಧಿಸಲ್ಪಟ್ಟ ಫೀಜುಗಳಿಗೆ ಬದಲಾಗಿ ಒಂದು ನಿಗದಿ ಯಾದ ಎಂಟಾಣೆಯ ಫೀಜನ್ನು ವಸೂಲ್ಮಾಡಬೇಕೆಂದು ಸದರಿ ಹೊಸ ಪ್ರಕರಣದಲ್ಲಿ ಸೂಚಿಸಿ ಇದೆ.

4. ವ್ಯವಸ್ಥೆ ಮಾಡಬೇಕೆಂದಿರುವ ಸ್ವತ್ತನ್ನು ಬಾಯಿ ಮಾತಿನಿಂದ ಮೊದಲು ವಿಲೆಮಾಡಿ ಅನಂತರ ಸ್ವತ್ತನ್ನು ವ್ಯವಸ್ಥೆ ಮಾಡುವಂಥವನೂ ಟ್ರಸ್ಟಿಗಳೂ ಸೇರುವಂಥಾ ಒಂದು ಟ್ರಸ್ಟಿನ ಡಿಕ್ಲರೇಷನ್ ಯಾನೆ ಪ್ರಕಟನೆಯಲ್ಲಿ ಸದರಿ ವಿಲೆಯ ಷರತ್ತುಗಳನ್ನು ಬರೆದಿಡುವುದೆಂಬ ಸುಲಭೋಪಾಯದಿಂದ ಸೆಟ್ಲಮೆಂಟ್ಸ್ ಯಾನೆ ವ್ಯವಸ್ಥಾಪತ್ರಗಳ ಮೇಲೆ ಹಾಕಿರುವ ಹಾಸಲನ್ನು ಈಗ ಸುಲಭ ವಾಗಿ ತಪ್ಪಿಸಿಕೊಳ್ಳಬಹುದಾದ ಕಾರಣ ಇದಕ್ಕೆ ಅಡ್ಡಿ ಮಾಡುವ ಉದ್ದೇಶದಿಂದ ಸೆಟ್ಲಮೆಂಟ್ ಎಂಬುದರ ಅರ್ಥ ವಿವರಣೆಗೆ ಇನ್ನೂ ಹೆಚ್ಚಾಗಿ ಸೇರಿಸುವಂತೆ 1 (c) ವಾಕ್ಯದಲ್ಲಿ ಸೂಚಿಸಿ ಇದೆ. ಅಂಥಾ ದಸ್ತಾವೇಜು, 56ನೆ ಆರ್ಟಿಕಲಿನಿಂದ ವಿಧಿಸಲ್ಪಟ್ಟ ಹೆಚ್ಚು ಹಾಸಲಿಗೆ ಬದಲಾಗಿ 62ನೆ ಆರ್ಟಿಕಲಿನ ಮೇರೆ ಹದಿನೈದು ರೂಪಾಯಿನ ಹಾಸಲಿಗೆ ಗುರಿಯಾಗುತ್ತದೆ. ಈಗ ಸಲಹೆ ಮಾಡಿರುವಂ ತೆ ಸದರಿ ಅರ್ಥ ವಿವರಣೆಗೆ ಹೆಚ್ಚು ಸೇರಿಸುವುದರಿಂದ ಅಂಥಾ ದಸ್ತಾವೇಜುಗಳಿಗೆ ಮುಂದೆ ಸೆಟ್ಲಮೆಂಟುಗಳಂತೆ ಸ್ಟ್ಯಾಂಪು ಹಚ್ಚಬೇಕಾಗುತ್ತದೆ.

5. 4 ಮತ್ತು 9ನೆ ವಾಕ್ಯಗಳು.—ದಸ್ತಾವೇಜಿನ ವಿಷಯವಾದ ವಸ್ತುವಿನ ಬೆಲೆಯು ಗೊತ್ತಾಗದೆ ಇದ್ದರೆ ಅಥವಾ ನಿಷ್ಕರ್ಷೆಯಿಲ್ಲದ್ದಾದರೆ ಸದರಿ ರೆಗ್ಯುಲೇಷನಿನ 26ನೆ ಪ್ರಕರಣದ ಮೇರೆಗೆ, ಕರಾರಿನ ಕಕ್ಷಿಗಾರರು ದಸ್ತಾವೇಜಿಗೆ ಹಚ್ಚಲ್ಪಡತಕ್ಕ ಸ್ಟ್ಯಾಂಪಿನ ಬೆಲೆಯ ವಿಚಾರದಲ್ಲಿ ತಮಗೆ ಯುಕ್ತ ಕಂಡಂತ ಮಾಡಬಹುದು, ಆದರೆ ವಾಸ್ತವವಾಗಿ ಪಾವತಿ ಮಾಡಲ್ಪಟ್ಟ ಹಾಸಲಿನ ಮೊಬಲಗಿಗಿಂತ ಹೆಚ್ಚಾದ ಮೊಬಲಗನ್ನು ಸದರಿ ಪ್ರಕರಣದ ಮೇರೆ ವಸೂಲ್ಮಾಡಕೂಡದು. ಆದರೆ, ರಾಜಾಯವಾಗಲಿ ಉತ್ಪತ್ತಿಯ ಒಂದು ಹಿಸ್ಸೆಯಾಗಲಿ ಗುತ್ತಿಗೆಗಾಗಿ ಉಳಿಸಿಡಲ್ಪಟ್ಟಿರುವ ಗಣಿಗಳ ಗುತ್ತಿಗೆಗಳ ವಿಷಯದಲ್ಲಿ ಒಂದು ವಿನಾಯಿತಿಯು ಮಾಡಲ್ಪಟ್ಟಿದೆ. ಅಂಥಾ ಅನೇಕ ಸಂದರ್ಭಗಳಲ್ಲಿ ಹಿಸ್ಸೆಯ ಅಥವಾ ರಾಜಾಯದ ಮೌಲ್ಯವು ಸಹಜವಾಗಿಯೂ ನಿಷ್ಕರ್ಷೆ ಇಲ್ಲದ್ದಾಗಿರುವುದರಿಂದಲೇ, ವರ್ಷಕ್ಕೆ 20,000 ರೂಪಾಯಿ ಮೇರೆ ಊಹೆ ಕಟ್ಟಿದ ಬೆಲೆಯ ಮೇಲೆ ಗುತ್ತಿಗೆ ಚೀಟಿಗೆ ಸ್ಟ್ಯಾಂಪು ಹಚ್ಚಿದರೆ, ಗುತ್ತಿಗೆ ಪ್ರಕಾರ ನಿಜವಾಗಿಯೂ ಬರಬೇಕಾಗುವ ಮೊಬಲಗನ್ನು—ಅದು ಎಷ್ಟಾದರೂ ಸರಿಯೇ—ವಸೂಲ್ಮಾಡಬಹುದೆಂತ ಏರ್ಪಾಡು ಮಾಡಿ ಇದೆ. ಸರ್ಕಾರದಿಂದ ಕೊಡಲ್ಪಟ್ಟ ಗಣಿಯ ಗುತ್ತಿಗೆಗಳ ವಿಷಯದಲ್ಲಿ ಈ ನಿಯಮವು ತಕ್ಕದ್ದಲ್ಲವೆಂದು ಯೋಚಿಸಿ ಇದೆ; ಯಾಕೆಂದರೆ: ಪ್ರತಿ ಸಂದರ್ಭದಲ್ಲಿಯೂ ರಾಜಾಯವು ಮೇಲೆ ಹೇಳಿದಷ್ಟೇ ಆಗುವುದೆಂದು ಬೆಲೆ ಕಟ್ಟಿ ಸರ್ಕಾರಕ್ಕೆ ನಷ್ಟವಾಗದಂತೆ ನೋಡಿಕೊಳ್ಳುವುದು ರೆವಿನ್ಯೂ ಅಧಿಕಾರಿಗಳಿಗೆ ಸ್ವಾಭಾವಿಕವಾಗಿದೆ. ಹೀಗೆ ಬೆಲೆ ಕಟ್ಟಿದ್ದರ ಮೇಲೆ, ಸಾಧಾರಣವಾಗಿ 200 ರೂಪಾಯಿ ಸ್ಟ್ಯಾಂಪು ಹಾಸಲು ಕೊಡಬೇಕಾಗುತ್ತದೆ. ಇದು ಚಿಕ್ಕ ಚಿಕ್ಕ ಅಲಾಭಕರವಾದ ಗಣಿಗಳಿಗೆ ಬಹಳ ಕಷ್ಟವಾಗುತ್ತದೆ. ಆದಕಾರಣ ಸರ್ಕಾರದಿಂದ ಗಣಿಯ ಗುತ್ತಿಗೆಯು ಕೊಡಲ್ಪಟ್ಟಾಗಲೆಲ್ಲಾ ಡೆಪ್ಯುಟಿ ಕಮಿಷನರು, ಗಣಿಯವರಿಂದ ಪಾವತಿಯಾಗಬೇಕಾಗಬಹುದೆಂದು ತಮಗೆ ತೋರುವ ರಾಜಾಯದ ಮೊಬಲಗನ್ನು, ಅಂದಾಜು ಮಾಡುವಂತೆ ಏರ್ಪಾಡು ಮಾಡುವ ಹಾಗೆ ಸದರಿ ಪ್ರಕರಣವನ್ನು ವಿಸ್ತರಿಸಬೇಕೆಂದು ಬಿಲ್ಲಿನ 4ನೆ ವಾಕ್ಯದಲ್ಲಿ ಸಲಹೆ ಮಾಡಿದೆ, ಮತ್ತು ಡೆಪ್ಯುಟಿ ಕಮಿಷನರ ಅಂದಾಜಿನ ಪ್ರಕಾರ ಗುತ್ತಿಗೆಯ ಚೀಟಿಗೆ ಸ್ಟ್ಯಾಂಪು ಹಚ್ಚಿದರೆ ಸಾಕಾಗಿರುತ್ತದೆ. ಇಂಥಾ ಸಂದರ್ಭಗಳಲ್ಲಿ ಡೆಪ್ಯುಟಿ ಕಮಿಷನರು ಕೊಡುವ ತೀರ್ಪನ್ನು ಚೀಫ್ ಕಂಟ್ರೋಲಿಂಗ್ ರೆವಿನ್ಯೂ ಅಧಿಕಾರಿಯು ಪುನರ್ವಿಮರ್ಶೆ ಮಾಡುವಂತೆ 9ನೆ ವಾಕ್ಯದಲ್ಲಿ ಏರ್ಪಡಿಸಿದೆ.

6. 5 (b), 6 ಮತ್ತು 10 (7)ನೆ ವಾಕ್ಯಗಳು.—ಈ ವಾಕ್ಯಗಳ ಗುಂಪು ಬೆಂಕಿಯ ಮತ್ತು ಸಮುದ್ರದ ಇನ್ಷ್ಯೂರೆನ್ಸ್ ಪಾಲಿಸಿ ಪತ್ರಗಳ ಮೇಲಿನ ಹಾಸಲಿಗೆ ಸಂಬಂಧಿಸುತ್ತದೆ. 1ನೆ ಷಡ್ಯೂಲ್ 45 (B) ಆರ್ಟಿಕಲಿನಿಂದ ಬೆಂಕಿಯ ಇನ್ಷ್ಯೂರೆನ್ಸ್ ಪತ್ರಗಳಿಗೆ ವಿಧಿಸಲ್ಪಟ್ಟ ಈಗಿನ ದರಗಳು ಸಮನಲ್ಲವೆಂದೂ ದುಬಾರಿಯೆಂದೂ ಯೋಚಿಸಿ ಇದೆ. ಪಾಲಿಸಿ ಪತ್ರದ ಮೊಬಲಗಿಗೆ ಅಥವಾ ವಾಯಿದೆಗೆ ಅನುಗುಣವಾಗಿ ಹೆಚ್ಚು ಕಡಮೆಯಾಗುವ ಈಗಿನ ದರಗಳಿಗೆ ಬದಲಾಗಿ ಪ್ರತಿ ಬೆಂಕಿಯ ಇನ್ಷ್ಯೂರೆನ್ಸ್ ಪಾಲಿಸಿ ಪತ್ರದ ವಿಷಯದಲ್ಲಿಯೂ ಇನ್ಷ್ಯೂರ್ ಮಾಡಿದ ಮೊಬಲಗು 5,000 ರೂಪಾಯಿಗಳಿಗೆ ಕಡಮೆಯಾದಾಗ ಏಕರೀತಿಯಾದ ಎಂಟಾಣೆಯ ದರವನ್ನೂ ಇತರ ವಿಷಯಗಳಲ್ಲಿ ಒಂದು ರೂಪಾಯಿಯ ದರವನ್ನೂ ಮತ್ತು ಬೆಂಕಿಯ ಇನ್ಷ್ಯೂರೆನ್ಸ್ ಕಂಟ್ರಾಕ್ಟಿನ ಯಾವುದಾದರೂ ನವೀಕರಣಕ್ಕೆ ಪ್ರೀಮಿಯಂ ಯಾ ರುಸುಮಿನ ಅಥವಾ ಪ್ರತಿಫಲದ ಪ್ರತಿ ಪಾವತಿಗೂ (ಇವುಗಳ ಮೇಲೆ ಕೊಟ್ಟ ರಸೀತಿಗಳಿಗೆ ವಾಡಿಕೆಯಾಗಿ ಕೊಡತಕ್ಕ ಒಂದಾಣೆಯ ಸ್ಟ್ಯಾಂಪು ಹಾಸಲಿನ ಜತೆಗೆ) ಮೇಲ್ಕಂಡ ದರಗಳಲ್ಲಿ ಅರ್ಧವನ್ನೂ ಇಟ್ಟುಕೊಳ್ಳುವಂತೆ ಬಿಲ್ಲಿನ 10 (7)ನೆ ವಾಕ್ಯದಲ್ಲಿ ಸಲಹೆ ಮಾಡಿ ಇದೆ. (ವಾಕ್ಯ 6). ಈ ಏರ್ಪಾಡಿನಿಂದ ಪಾಲಿಸಿ ಪತ್ರಗಳಿಗೂ ರಸೀತಿಗಳಿಗೂ ಸ್ಟ್ಯಾಂಪು ಹಚ್ಚುವ ಜವಾಬ್ದಾರಿಯು ಸದರಿ ಪತ್ರಗಳನ್ನೂ ರಸೀತಿಗಳನ್ನೂ ಕೊಡುವ ಕಂಪೆನಿಗಳ ಮೇಲೆ ಬೀಳುತ್ತದೆ. (5 (b) ವಾಕ್ಯ). ಸಮುದ್ರದ ಇನ್ಷ್ಯೂರೆನ್ಸ್ ಪಾಲಿಸಿ ಪತ್ರಗಳ ಮೇಲಿನ ಸ್ಟ್ಯಾಂಪು ಹಾಸಲನ್ನು ದ್ವಿಪ್ರತಿಯಾಗಿ ಬರೆದ ಸದರಿ ಪತ್ರಗಳ ಒಂದೊಂದು ನಕಲಿಗೂ ಹಂಚುವ ಈಗಿನ ಅನಧಿಕೃತವಾದ ಪದ್ಧತಿಯನ್ನು 10 (7)ನೆ ವಾಕ್ಯವು ನ್ಯಾಯವಿಹಿತವಾಗಿ ಮಾಡುತ್ತದೆ.

7. 8ನೆ ವಾಕ್ಯವು, ಉಪಯೋಗಿಸದೆ ಇರುವ ಛಾಪಾ ಕಾಗದಗಳ ಬೆಲೆಯನ್ನು ವಾಪಸು ಕೊಡುವ ವಿಷಯದಲ್ಲಿ ರೆಗ್ಯುಲೇಷನಿನ 51ನೆ ಪ್ರಕರಣದಿಂದ ಕೊಟ್ಟಿರುವ ರಿಯಾಯಿತಿಯನ್ನು ಖಾಸಗಿ ಬ್ಯಾಂಕಿಂಗ್ ಸಂಘಗಳಿಗೂ ವಿಸ್ತರಿಸುತ್ತದೆ.

8. 10 (1)ನೆ ವಾಕ್ಯ.—1ನೆ ಷಡ್ಯೂಲಿನ 6ನೆ ಆರ್ಟಿಕಲಿನಲ್ಲಿ "ತೋರಣಡಮಾನ" ಎಂಬ ಶಬ್ದವು ಯಾವ ಯಾವ ಲೇವಾದೇವಿಗಳನ್ನು ಸೂಚಿಸಬೇಕೆಂದು ಉದ್ದೇಶಿಸಿದೆಯೊ ಅವುಗಳನ್ನೆಲ್ಲಾ ಸೂಚಿಸುವಷ್ಟು ಸ್ಪಷ್ಟವಾಗಿಲ್ಲ. ಗಿರವಿಗಳು ಮತ್ತು ಒತ್ತೆಗಳು ಈ ಆರ್ಟಿಕಲಿಗೆ ಒಳಪಡುತ್ತವೆಯೊ ಇಲ್ಲವೊ ಎಂಬ ವಿಷಯದಲ್ಲಿ ಸ್ವಲ್ಪ ಸಂದೇಹವಿರುವಂತೆ ತೋರುತ್ತದೆ. ಇದೇ ವಿಷಯದಲ್ಲಿ ತಿಳಿಯಬಂದ ಇತರ ನ್ಯೂನತೆಗಳೂ ಅಕ್ರಮಗಳೂ ಯಾವುವೆಂದರೆ: (a) ಕೊಟ್ಟ ಸಾಲವು ಒಂದು ವರ್ಷಕ್ಕಿಂತ ಹೆಚ್ಚು ಕಾಲದ ಅನಂತರ ಪಾವತಿಯಾಗುವಂತೆ ಬಂದೋಬಸ್ತು ಮಾಡುವ ಬಗ್ಗೆ ತೋರಣಡಮಾನ ಹಾಕಿದ ಸಂದರ್ಭಕ್ಕೆ ಸದರಿ ಆರ್ಟಿಕಲಿನಲ್ಲಿ ನಿಯಮವು ಏರ್ಪಡದೆ ಇರುವುದು; ಅಥವಾ (b) ಪಡೆದ ಅಡ್ವಾನ್ಸ್ ಯಾನೆ ಮುಂಗಡವು ಕೇಳಿದಾಗ ವಾಪಸ್ ಆಗುವಂತೆ ಏರ್ಪಟ್ಟ ಸಂದರ್ಭಕ್ಕೂ ಅದರಲ್ಲಿ ನಿಯಮವು ಏರ್ಪಡದೆ ಇರುವುದು. ಆದುದರಿಂದ 10 (1)ನೆ ವಾಕ್ಯದಲ್ಲಿ ಮೇಲ್ಕಂಡ ಆರ್ಟಿಕಲ್ ಯಾವ ಲೇವಾದೇವಿಗೆ ವ್ಯಾಪಿಸಬೇಕೋ ಆ ಲೇವಾದೇವಿಯ ಸ್ವಭಾವವನ್ನು ಇನ್ನೂ ಸ್ಪಷ್ಟವಾಗಿ ವಿವರಿಸುವಂತೆ ಸದರಿ ಆರ್ಟಿಕಲನ್ನು ವಿಸ್ತರಿಸಬೇಕೆಂದು ಸಲಹೆ ಮಾಡಿ ಇದೆ. ಗಿರವಿ ಮತ್ತು ಒತ್ತೆಗಳನ್ನು ನಮೂದು ಮಾಡಿ ಹೇಳಿ ದೃಶ್ಯಾಧಾರದ ಮಾತನ್ನು ಬಿಟ್ಟುಬಿಟ್ಟಿದೆ; ಆದುದರಿಂದ ದೃಶ್ಯಾಧಾರಕ್ಕೆ ಸಂಬಂಧಿಸುವ ಲೇವಾದೇವಿಗಳೆಲ್ಲ—ಎಂದರೆ, ಒಂದು ಸಾಲದ ಅಥವಾ ಒಪ್ಪಂದದ ಸಲಿಕೆಯ ಬಗ್ಗೆ ಚರಸ್ವತ್ತಿನ ಸ್ವಾಧೀನವನ್ನು ಬಿಟ್ಟುಕೊಡದೆ ಅದನ್ನು ಆಧಾರವಾಗಿ ಮಾತ್ರ ಒಪ್ಪಿಸಿಕೊಡುವ ಸಂದರ್ಭಗಳು—ಈ ಆರ್ಟಿಕಲಿಗೆ ಒಳಪಡುವುದಿಲ್ಲ. ಒಂದು ವರ್ಷಕ್ಕಿಂತ ಹೆಚ್ಚು ಕಾಲವು ಕಳೆದ ಅನಂತರ ವಾಪಸು ಪಾವತಿಯಾಗುವಂತೆ ಏರ್ಪಟ್ಟ ದಸ್ತಾವೇಜಿನ ಮೇಲೂ ಒಂದು ವರ್ಷದೊಳಗೆ ವಾಪಸು ಪಾವತಿಯಾಗುವಂತೆ ಏರ್ಪಟ್ಟ ದಸ್ತಾವೇಜಿನ ಮೇಲೂ ಒಂದೇ ಹಾಸಲನ್ನು ಹಾಕಬೇಕೆಂದೂ; ಮತ್ತು ಕೇಳಿದಾಗ ವಾಪಸು ಪಾವತಿಯಾಗುವಂತೆ ಏರ್ಪಟ್ಟ ದಸ್ತಾವೇಜುಗಳ ಮೇಲೂ ಮೂರು ತಿಂಗಳ

ಗಿಂತ ಹೆಚ್ಚು ಕಾಲದ ಅನಂತರ ವಾಪಸು ಪಾವತಿಯಾಗುವಂತೆ ಏರ್ಪಟ್ಟ ದಸ್ತಾವೇಜುಗಳ ಮೇಲೂ ಒಂದೇ ಹಾಸಲನ್ನು ಹಾಕಬೇ ಕೆಂದೂ, ಸಲಹೆ ಮಾಡಿ ಇದೆ. ಕಡೆಯಲ್ಲಿ ಎಲ್ಲಾ ದಸ್ತಾವೇಜುಗಳಿಗೂ, ಅವುಗಳಿಂದ ಮುಂಗಡಗಳನ್ನು ಪಡೆದುದೂ ಅವಗಳನ್ನು ಬರೆದುದೂ ಒಂದೇ ಕಾಲದಲ್ಲಿ ಆಗಿರಲಿ ಅಥವಾ ಇಲ್ಲದೇ ಇರಲಿ ಏಕರೀತಿಯಾದ ಹಾಸಲನ್ನು ಹಾಕಬೇಕೆಂದು ಸಲಹೆ ಮಾಡಿ ಇದೆ.

9. 10(5) ನೆ ವಾಕ್ಯ.—ಕೆಲವು ಪೈರಿನ ಅಡಮಾನಗಳ ಮೇಲಿನ ಸ್ಟ್ಯಾಂಪು ಹಾಸಲುಗಳನ್ನೂ 12 ತಿಂಗಳ ಮೇಲೆ 18 ತಿಂಗಳ ಒಳಗೆ ಸಾಲವು ವಾಪಸು ಪಾವತಿಯಾಗತಕ್ಕ ಪೈರುಗಳ ಅಡಮಾನಗಳ ಮೇಲಿನ ಸ್ಟ್ಯಾಂಪು ಹಾಸಲುಗಳನ್ನೂ 4 ಆಣೆಯಿಂದ 2 ಆಣೆಗೆ ಇಳಿಸಿ ಇದೆ.

10. ಇತರ ಬದಲಾವಣೆಗಳು ಮೇಲ್ಕಂಡ ಬದಲಾವಣೆಗಳನ್ನು ಮಾಡಿದ ಪ್ರಯುಕ್ತ ಹುಟ್ಟಿದವುಗಳಾದುದರಿಂದ ಅವುಗಳ ವಿಷಯದಲ್ಲಿ ಯಾವ ವಿವರಣೆಯೂ ಆವಶ್ಯವಿಲ್ಲ.

ಅಪ್ಪಣೆಯ ಮೇರೆಗೆ,
ಕೆ. ಮೈಲಾರರಾವ್,
ಮೈಸೂರು ನ್ಯಾಯವಿಧಾಯಕ ಸಭೆಯ ಸೆಕ್ರೆಟರಿ.

ಮೈಸೂರ ಗೆಜೆಟ್.

ನಂ. 42] ಸರ್ಕಾರದಿಂದ ಪ್ರಾಯಿಷ್ ಆದ್ದು [ನಂ. 48.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 5, ಸನ್ 1907.

IIIನೆ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವು ಇಲಾಖೆ.

ಇಸ್ತಿಹಾರನಾಮೆ.

ನಂ. 194—ಎಲ್. ಸಿ. ತಾರೀಖು 6ನೆ ನವೆಂಬರ್ 1907.

ಮೈಸೂರು ನ್ಯಾಯವಿಧಾಯಕ ಸಭೆಯ ಕೆಲಸಗಳನ್ನು ನಡೆಸುವ ಬಗ್ಗೆ ಏರ್ಪಟ್ಟ ನಿಬಂಧನೆಗಳ ಪೈಕಿ 40ನೆ ನಿಬಂಧನೆಯ ಮೇರೆಗೆ, 1900ನೆ ಇಸವಿಯ 3ನೆ ನಂಬರಿನ ಕೋರ್ಟ್ ಫೀಜು ರೆಗ್ಯುಲೇಷನನ್ನು ತಿದ್ದುಪಾಟು ಮಾಡುವುದಕ್ಕಾಗಿ ನೇಮಿಸಲ್ಪಟ್ಟ ಸೆಲೆಕ್ಟ್ ಕಮಿಟಿ ಯಾ ನಿಯುಕ್ತ ಸಮಾಜದವರ ರಿಪೋರ್ಟನ್ನೂ, ಸದರಿ ಕಮಿಟಿಯವರಿಂದ ತಿದ್ದುಪಾಟಾದ ಬಿಲ್ಲನ್ನೂ ಸಮಸ್ತರ ತಿಳಿವಳಿಕೆಯ ಬಗ್ಗೆ ಈ ಕೆಳಗೆ ಪ್ರಕಟಿಸಿ ಇದೆ.

ಅಪ್ಪಣೆಯ ಮೇರೆಗೆ,

ಕೆ. ಮೈಲಾರಿರಾವ್,

ಮೈಸೂರು ನ್ಯಾಯವಿಧಾಯಕ ಸಭೆಯ ಸೆಕ್ರೆಟರಿ.

ನಿಯುಕ್ತ ಸಮಾಜದವರ ರಿಪೋರ್ಟು.

1900ನೆ ಇಸವಿಯ 3ನೆ ನಂಬರಿನ ಕೋರ್ಟ್ ಫೀಜು ರೆಗ್ಯುಲೇಷನನ್ನು ತಿದ್ದುಪಡಿ ಮಾಡುವ ಬಿಲ್ಲನ್ನು ವಿಮರ್ಶೆ ಮಾಡುವುದಕ್ಕೋಸ್ಕರ ನೇಮಿಸಲ್ಪಟ್ಟ ನಿಯುಕ್ತ ಸಮಾಜದ ಮೆಂಬರುಗಳಾದ ನಾವು ರಿಪೋರ್ಟು ಮಾಡುವುದೇನೆಂದರೆ :—

ಗೇಣಿಗೆ ಯಾ ಬಾಡಿಗೆಗೆ ಕೊಟ್ಟವನು ಅಥವಾ ಜಮೀನಿನ ಒಡೆಯನು ಜಮೀನಿನ, ಮನೆಗಳ ಮತ್ತು ತೋಟಗಳ ಸ್ವಾಧೀನ ಪಡೆಯುವುದಕ್ಕಾಗಿ ಗೇಣಿದಾರನ ಮೇಲೆ ಅಥವಾ ಒಕ್ಕಲಿನ ಮೇಲೆ ತರುವ ವ್ಯಾಜ್ಯಗಳಲ್ಲಿ ಕೊಡಬೇಕಾದ ಕೋರ್ಟು ಫೀಜು, ನಿರಖಾಗಿ 10 ರೂಪಾಯಿ ಯಾಗಲಿ ಅಥವಾ ದಾವಾ ಅರ್ಜಿಯನ್ನು ಹಾಜರ್ಮಾಡಿದ ತಾರೀಖಿನ ಹಿಂದಿನ ವರ್ಷಕ್ಕೆ ಕೊಡಬೇಕಾದ ಗುತ್ತಿಗೆ ಮೊಬಲಗಿಗನುಗುಣವಾಗಿಯಾಗಲಿ—ಈ ಎರಡರ ಪೈಕಿ ಯಾವುದು ಹೆಚ್ಚೋ ಆ ಮೊಬಲಗು–ಫೀಜು ಆಗಿರತಕ್ಕದ್ದೆಂದು ವಿಧಿಸಬೇಕೆಂತ ಬಿಲ್ಲಿನಲ್ಲಿ ಸಲಹೆಯಾಗಿದೆ. ಆದರೆ, ಕನಿಷ್ಠಪಕ್ಷ 10 ರೂಪಾಯಿಯೆಂತ ನಿರಖು ಮಾಡುವುದು, ಸಾಲಿಯಾನಾ ಜುಜುವಿ ಗುತ್ತಿಗೆ ಬರುವ ಆಸ್ತಿಗಳ ವಿಷಯದಲ್ಲಿ ಬಹಳ ಕಷ್ಟವಾಗಿ ಪರಿಣಮಿಸುತ್ತದೆಯೆಂದು ನಾವು ಯೋಚಿಸುತ್ತೇವೆ. ಕೋ

ರ್ಟಿಗೆ ಬರುವ ಅನೇಕ ಮೊಕದ್ದಮೆಗಳಲ್ಲಿ ವ್ಯಾಜ್ಯಕ್ಕೆ ಸಂಬಂಧಪಟ್ಟ ಸ್ವತ್ತಿನ ಸಾಲಿಯಾನಾ ಗುತ್ತಿಗೆ ಬೆಲೆಯು ಬಹಳ ಸ್ವಲ್ಪ ವಾಗಿರುವ ಅಂಶವನ್ನು ಯೋಚಿಸಿ ನೋಡಿದರೆ, ಈ ಕನಿಷ್ಠ ಪಕ್ಷದ ಫೀಜನ್ನು ಶುದ್ಧಾಂಗವಾಗಿ ತೆಗೆದೇಹಾಕಬೇಕೆಂದು ನಾವು ಅಭಿಪ್ರಾಯ ಪಡುತ್ತೇವೆ. 1870ನೆ ಇಸವಿಯ ಕೋರ್ಟು ಫೀಜು ಅಕ್ಟನ್ನು ತಿದ್ದುಪಡಿ ಮಾಡುವ 1905ನೆ ಇಸವಿಯ 6ನೆ ನಂಬರ್ ಅಕ್ಟಿನಿಂದ ಬ್ರಿಟಿಷ್ ಇಂಡಿಯಾವಿನಲ್ಲಿ ಈ ಬಿಲ್ಲಿನ ಉದ್ದೇಶವು ನೆರವೇರಿ ಇದೆ. ನಮ್ಮ ಕೋರ್ಟು ಫೀಜು ರೆಗ್ಯುಲೇಷನೂ ಬ್ರಿಟಿಷ್ ಇಂಡಿಯಾವಿನ ಕಾನೂನೂ ಪ್ರಾಯಶಃ ಒಂದೇ ಆಗಿರುವುದರಿಂದ ಅದೇ ತಿದ್ದುಪಾಟನ್ನೇ ಅದೇ ಮಾತುಗಳಲ್ಲಿಯೇ ಇಲ್ಲಿಯೂ ಮಾಡಬಹುದೆಂತ ನಮ್ಮ ಅಭಿಪ್ರಾಯವಿದೆ. ಆದಕಾರಣ ಇದರಡಿ ಕಂಡಂತೆ ಸದರಿ ಬಿಲ್ಲನ್ನು ತಿದ್ದುಪಡಿ ಮಾಡಬೇಕೆಂತ ಸಲಹೆ ಮಾಡುತ್ತೇವೆ :—

"ಕೋರ್ಟು ಫೀಜು ರೆಗ್ಯುಲೇಷನನ್ನು ತಿದ್ದುಪಾಟು ಮಾಡುವುದು ಯುಕ್ತವಾಗಿರುವುದರಿಂದ ಇದರಡಿ ಕಂಡ ಮೇರೆಗೆ ವಿಧಿಸಲು ಶ್ರೀಮನ್ಮಹಾರಾಜರವರು ಹುಕುಂ ದಯಪಾಲಿಸಿರುತ್ತಾರೆ :—

1. ಸದರಿ ರೆಗ್ಯುಲೇಷನಿನ 4ನೆ ಪ್ರಕರಣದ 11ನೆ ಒಳ ಪ್ರಕರಣದಲ್ಲಿ,

(1) (c) ಕಲಮಿನ ತರುವಾಯ, ಇದರಡಿ ಕಂಡ ಕಲಮನ್ನು ಸೇರಿಸತಕ್ಕದ್ದು, ಅದೇನೆಂದರೆ—

'(cc) ಒಬ್ಬ ಬಕ್ಷಲಿಂದ—ಗೇಣಿದಾರನಾಯಿದೆ ಮುಗಿದಮೇಲೂ ಸ್ವತ್ತನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ಬಕ್ಷಲೂ ಸೇರಿ—ಸ್ಥಿರಸ್ವತ್ತನ್ನು ವಾಪಸುಪಡೆಯುವ ಬಗ್ಗೆ; ಮತ್ತು,

(2) 'ಜಮೀನು' ಎಂಬ ಮಾತಿಗೆ ಬದಲಾಗಿ, ಅದು ಬರುವ ಎರಡು ಸ್ಥಳಗಳಲ್ಲಿಯೂ, 'ಸ್ಥಿರಸ್ವತ್ತು' ಎಂಬ ಮಾತನ್ನು ಸೇರಿಸತಕ್ಕದ್ದು."

(ರುಜು) ಎಸ್. ನಾರಾಯಣರಾವ್, (ಚೇರ್ಮನ್).
,, ಟಿ. ಆನಂದರಾವ್.
,, ಎ. ರಂಗಸಾಮ್ಯೆಯಂಗಾರ್.
,, ಎಂ. ಸಿ. ರಂಗೈಯಂಗಾರ್.
,, ಬಿ. ನಾಗಪ್ಪ.

617

ಮೈಸೂರ ಗೆಜೆಟ್.

ನಂ. 42] ಸರಕಾರದಿಂದ ಪ್ರಕಾಶಿತವಾದದ್ದು [ನಂ. 49.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 12, ಸ್ಟೆ. 1907.

IIIನೆ ಭಾಗ.

ಲೆಜಿಸ್ಲೇಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೇಟಿವು ಇಲಾಖೆ.

ತಾರೀಖು 30ನೆ ನವೆಂಬರು 1907.

ನಂಬರು ಜಿ. 1684—ಲೆಜಿಸ್. 1—06—7.

ಹುಕುಂ.—1899ನೆ ಇಸವಿಯ 2ನೆ ನಂಬರ್ ಮೈಸೂರು ಮಿಲಿಟರಿ ರೆಗ್ಯುಲೇಷನನ್ನು ಪುನಃ ತಿದ್ದುಪಾಟು ಮಾಡುವ ಬಗ್ಗೆ ಹುಟ್ಟಿದ, ಇದರಡಿ ಕಂಡ ಮಸೂದೆ ರೆಗ್ಯುಲೇಷನು 1907ನೆ ಇಸವಿಯ ನವೆಂಬರ್ 19ನೆ ತಾರೀಖಿನಲ್ಲಿ ಶ್ರೀಮನ್ ಮಹಾರಾಜರವರ ಅನುಮತಿಯನ್ನು ಹೊಂದಿ ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಪ್ರಸಿದ್ಧಪಡಿಸಲ್ಪಟ್ಟಿದೆ.

ಸಿ. ಎಸ್. ಬಾಲಸುಂದರಂ ಐಯ್ಯರ್,
ಅಫಿಷಿಯೇಟಿಂಗ್ ಸೆಕ್ರೆಟರಿ.

1907ನೆ ಇಸವಿಯ 2ನೆ ನಂಬರ್ ರೆಗ್ಯುಲೇಷನ್.

(1907ನೆ ಇಸವಿಯ ನವೆಂಬರ್ 19ನೆ ತಾರೀಖಿನಲ್ಲಿ ಮಂಜೂರ್ಮಾಡಲ್ಪಟ್ಟಿತು).

1899ನೆ ಇಸವಿಯ 2ನೆ ನಂಬರ್ ಮೈಸೂರು ಮಿಲಿಟರಿ ರೆಗ್ಯುಲೇಷನನ್ನು ಪುನಃ ತಿದ್ದುಪಾಟು ಮಾಡುವ ರೆಗ್ಯುಲೇಷನ್.

ಪೀಠಿಕೆ. 1899ನೆ ಇಸವಿಯ ಮೈಸೂರು ಮಿಲಿಟರಿ ರೆಗ್ಯುಲೇಷನನ್ನು ಪುನಃ ತಿದ್ದುಪಾಟು ಮಾಡುವುದು ಯುಕ್ತವಾಗಿರುವುದರಿಂದ, ಶ್ರೀಮನ್ ಮಹಾರಾಜರವರು ಇದರಡಿ ಕಂಡಂತೆ ವಿಧಿಸಿರುತ್ತಾರೆ :—

1899ನೆ ಇಸವಿಯ 2ನೆ ನಂಬರ್ ರೆಗ್ಯುಲೇಷನಿನ 2ನೆ ಪ್ಯಾರಗ್ರಾಫ್ ಯಾ ಪರಿಚ್ಛೇದದ ತಿದ್ದುಪಾಟು.

1. 1899ನೆ ಇಸವಿಯ ಮೈಸೂರು ಮಿಲಿಟರಿ ರೆಗ್ಯುಲೇಷನಿನ 2ನೆ ಪ್ಯಾರಗ್ರಾಫಿನ ಕೊನೆಯಲ್ಲಿ ಇರುವ "(47)" ಎಂಬ ಅಂಕೆಗೆ ಬದಲಾಗಿ "2. A." ಎಂಬ ಅಂಕೆಯನ್ನೂ ಅಕ್ಷರವನ್ನೂ ಸೇರಿಸತಕ್ಕದ್ದು.

94ನೆ ಮತ್ತು 95ನೆ ಪ್ಯಾರಗ್ರಾಫ್ ಯಾ ಪರಿಚ್ಛೇದಗಳನ್ನು ಸೇರಿಸುವುದು.

2. 1899ನೆ ಇಸವಿಯ ಮೈಸೂರು ಮಿಲಿಟರಿ ರೆಗ್ಯುಲೇಷನಿಗೆ ಇದರಡಿ ಕಂಡ ಪ್ಯಾರಗ್ರಾಫುಗಳನ್ನು ಸೇರಿಸತಕ್ಕದ್ದು :—

ಕೆಲವು ತಕ್ಕೀರುಗಳನ್ನು ಕುರಿತು ವಿಚಾರಣೆ ಮಾಡುವ ಅಧಿಕಾರ.

"94. ಒಂದು ತಕ್ಕೀರನ್ನು ಕುರಿತು ವಿಚಾರಣೆ ಮಾಡುವುದಕ್ಕೆ ಒಂದು ಕ್ರಿಮಿನಲ್ ಕೋರ್ಟಿಗೂ, ಮಿಲಿಟರಿ ಅಧಿಕಾರಿಗೂ ಅಧಿಕಾರವಿದ್ದಲ್ಲಿ ಈ ಪೈಕಿ ಯಾರ ಮುಂದೆ ವ್ಯವಹರಣೆಗಳು ನಡೆಯತಕ್ಕದ್ದೆಂಬುವುದನ್ನು ಸರ್ಕಾರದವರು ತಮ್ಮ ಯುಕ್ತಾನುಸಾರ ನಿಶ್ಚೈಯಿಸತಕ್ಕದ್ದು, ಮತ್ತು ಸದರಿ ವ್ಯವಹರಣೆಗಳು ಮಿಲಿಟರಿ ಅಧಿಕಾರಿಯ ಮುಂದೆ ನಡೆಯಬೇಕೆಂದು ಸರ್ಕಾರದವರು ನಿಶ್ಚೈಯಿಸಿದರೆ, ಆಪಾದಿಸಲ್ಪಟ್ಟ ಮನುಷ್ಯನು ಮಿಲಿಟರಿ ಪಹರೆಯಲ್ಲಿ ಇಡಲ್ಪಡತಕ್ಕದ್ದೆಂದು ಸರ್ಕಾರದವರು ತಮ್ಮ ಯುಕ್ತಾನುಸಾರ ವಿಧಿಸತಕ್ಕದ್ದು."

ಆಪಾದಿಸಲ್ಪಟ್ಟ ಮನುಷ್ಯನು ಒಪ್ಪಿಸಲ್ಪಡಬೇಕೆಂದು ಕೇಳಲು ಕ್ರಿಮಿನಲ್ ಕೋರ್ಟಿಗೆ ಅಧಿಕಾರ.

"95 (1). ನಡೆಯಿತೆಂದು ಹೇಳಲ್ಪಟ್ಟ ಯಾವುದಾದರೂ ತಕ್ಕೀರನ್ನು ಕುರಿತು ವಿಚಾರಣೆ ಮಾಡಲು ಅಧಿಕಾರವುಳ್ಳ ಕ್ರಿಮಿನಲ್ ಕೋರ್ಟಿನವರು, ತಮ್ಮ ಮುಂದೆ ವ್ಯವಹರಣೆಗಳು ನಡೆಯಬೇಕೆಂದು ಅಭಿಪ್ರಾಯಪಟ್ಟರೆ, ಅವರು ಬರವಣಿಗೆಯಲ್ಲಿ ನೋಟಿಸನ್ನು ಕೊಡುವುದರ ಮೂಲಕ, ಯಾರ ತಾಬೆಯಲ್ಲಿ ಆಪಾದಿಸಲ್ಪಟ್ಟ ಮನುಷ್ಯನು ಇರುತ್ತಾನೆಯೋ ಆ ಆಫಿಸರನ್ನು, ಸದರಿ ಆಫಿಸರ ಇಷ್ಟಾನುಸಾರವಾಗಿ ಆಪಾದಿಸಲ್ಪಟ್ಟ ಮನುಷ್ಯನನ್ನು ನ್ಯಾಯಪ್ರಕಾರ ವ್ಯವಹರಿಸಲ್ಪಡುವ ಬಗ್ಗೆ ಅತ್ಯಂತ ಸಮೀಪದಲ್ಲಿರುವ ಮಾಜಿಸ್ಟ್ರೇಟಿಗೆ ಒಪ್ಪಿಸಬೇಕೆಂದಾಗಲಿ, ಅಥವಾ ಸರ್ಕಾರದವರಿಗೆ ಸದರಿ ವಿಷಯವನ್ನು ಕಳುಹಿಸುವ ತನಕ ವ್ಯವಹರಣೆಯನ್ನು ನಿಲ್ಲಿಸಬೇಕೆಂದಾಗಲಿ ಕೇಳಬಹುದು.

(2) ಅಂಥಾ ಪ್ರತಿ ಸಂದರ್ಭದಲ್ಲಿಯೂ ಸದರಿ ಆಫಿಸರು ಆಪಾದಿಸಲ್ಪಟ್ಟ ಮನುಷ್ಯನನ್ನು ಸದರಿ ಕೋರಿಕೆಯ ಮೇರೆ ಒಪ್ಪಿಸಿಬಿಡತಕ್ಕದ್ದು ಅಥವಾ ಸದರಿ ವ್ಯವಹರಣೆಯು ಕೋರ್ಟಿನ ಮುಂದೆ ನಡೆಯಬೇಕೆ, ಅಧಿಕಾರಿಯ ಮುಂದೆ ನಡೆಯಬೇಕೆ ಎಂಬ ಅಂಶವನ್ನು ತೀರ್ಮಾನದ ಬಗ್ಗೆ ಸರ್ಕಾರದವರಿಗೆ ಆ ಕೂಡಲೆ ಕಳುಹಿಸಿ ಅಲ್ಲಿನವರಿಗೆ ಆಪಾದಿಸಲ್ಪಟ್ಟ ಮನುಷ್ಯನ ಮೇಲೆ ವ್ಯವಹರಣೆಗಳನ್ನು ನಿಲ್ಲಿಸಡತಕ್ಕದ್ದು.

ಹೀಗೆ ಕಳುಹಿಸಿದುವರ ಮೇಲೆ ಸರ್ಕಾರದವರ ಹುಕುಮು ಆಖೈರಿನದಾಗಿರತಕ್ಕದ್ದು."

ವಿ. ಪಿ. ಮಾಧವರಾವ್,
ದೀವಾನ್.

ತಾರೀಖು 30ನೆ ನವೆಂಬರ 1907.

ನಂ. ಜ. 1683—ಲಜಿಸ. 10—07-1, 1903ನೆ ಇಸವಿಯ ಸೆಪ್ಟಂಬರ 9ನೆ ತಾರೀಖಿನ 30—ಲಜಿಸ. 4—03ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಪ್ರಾಯಿಷ್ ಮಾಡಿದ ಲೋಕಲ್ ಬೋರ್ಡ್ ರೆಗ್ಯುಲೇಷನಿನ ಮೇರೆಗೆ ಮಾಡಿದ ನಿಬಂಧನೆಗಳ 65ನೆ ನಿಬಂಧನೆಗೆ ಇದರಡಿ ಕಂಡುದನ್ನು ಸೇರಿಸಬೇಕೆಂದು ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಹುಕುಂ ದಯಪಾಲಿಸಿರುತ್ತಾರೆ :—

"(೨) ಪ್ರಯಾಣದ ಭತ್ಯಕ್ಕೆ ಅರ್ಹರಲ್ಲವೆಂದು ಅವರವರ ಮೇಲ್ಪಟ್ಟ ಅಧಿಕಾರಿಗಳಿಂದ ಸರ್ಟಿಫೈ ಮಾಡಲ್ಪಟ್ಟ ಸರ್ಕಾರಿ ಕೆಲಸದಮೇಲೆ ಪ್ರಯಾಣ ಮಾಡುತ್ತಿರುವ ಸರ್ಕಾರಿ ನೌಕರರಿಗೆ ಸೇರಿದ."

ಹುಕುಂ ಬಮೋಜೀಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಮೈಸೂರ ಗೆಜೆಟ್.

ನಂ. 42] ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು [ನಂ. 49.

ಬೆಂಗಳೂರು, ಗುರುವಾರ, ಡಿಸೆಂಬರ ತಾ॥ 12, ಸ್ಟ. 1907.

IIIನೆ ಭಾಗ.

ಲೆಜಿಸ್ಲೇಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೇಟಿವು ಇಲಾಖೆ.

ತಾರೀಖು 30ನೆ ನವೆಂಬರು 1907.

ನಂಬರು ಜೆ. 1684—ಲೆಜಿಸ್. 06-7.

ಹುಕುಂ. —1899ನೆ ಇಸವಿಯ 2ನೆ ನಂಬರ್ ಮೈಸೂರು ಮಿಲಿಟರಿ ರೆಗ್ಯುಲೇಷನನ್ನು ಪುನಃ ತಿದ್ದುಪಾಟು ಮಾಡುವ ಬಗ್ಗೆ ಹುಟ್ಟಿದ ಇದರಡಿ ಕಂಡ ಮುಸೂದೆ ರೆಗ್ಯುಲೇಷನು 1907ನೆ ಇಸವಿಯ ನವೆಂಬರ 19ನೆ ತಾರೀಖಿನಲ್ಲಿ ಶ್ರೀಮನ್ಮಹಾರಾಜರವರ ಅನುಮತಿಯನ್ನು ಹೊಂದಿ ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಪ್ರಸಿದ್ಧಪಡಿಸಲ್ಪಟ್ಟಿದೆ.

ಸಿ. ಎಸ್. ಬಾಲಸುಂದರಂ ಐಯ್ಯರ್,
ಅಫಿಷಿಯೇಟಿಂಗ್ ಸೆಕ್ರಿಟರಿ.

1907ನೆ ಇಸವಿಯ 2ನೆ ನಂಬರ್ ರೆಗ್ಯುಲೇಷನ್.

(1907ನೆ ಇಸವಿಯ ನವೆಂಬರ್ 19ನೆ ತಾರೀಖಿನಲ್ಲಿ ಮಂಜೂರ್ ಮಾಡಲ್ಪಟ್ಟಿತು).

1899ನೆ ಇಸವಿಯ 2ನೆ ನಂಬರ್ ಮೈಸೂರು ಮಿಲಿಟರಿ ರೆಗ್ಯುಲೇಷನನ್ನು ಪುನಃ ತಿದ್ದುಪಾಟು ಮಾಡುವ ರೆಗ್ಯುಲೇಷನ್.

ಪೀಠಿಕೆ. 1899ನೆ ಇಸವಿಯ ಮೈಸೂರು ಮಿಲಿಟರಿ ರೆಗ್ಯುಲೇಷನನ್ನು ಪುನಃ ತಿದ್ದುಪಾಟು ಮಾಡುವುದು ಯುಕ್ತವಾಗಿರುವುದರಿಂದ, ಶ್ರೀಮನ್ಮಹಾರಾಜರವರು ಇದರಡಿ ಕಂಡಂತೆ ವಿಧಿಸಿರುತ್ತಾರೆ :—

1899ನೆ ಇಸವಿಯ 2ನೆ ನಂಬರ್ ರೆಗ್ಯುಲೇಷನಿನ 2ನೆ ಪ್ಯಾರಗ್ರಾಫ್ ಯಾ ಪರಿಚ್ಛೇದದ ತಿದ್ದುಪಾಟು.

1. 1899ನೆ ಇಸವಿಯ ಮೈಸೂರು ಮಿಲಿಟರಿ ರೆಗ್ಯುಲೇಷನಿನ 2ನೆ ಪ್ಯಾರಗ್ರಾಫಿನ ಕೊನೆಯಲ್ಲಿ ಬರುವ "(47)" ಎಂಬ ಅಂಕೆಗೆ ಬದಲಾಗಿ "2. A." ಎಂಬ ಅಂಕೆಯನ್ನೂ ಅಕ್ಷರವನ್ನೂ ಸೇರಿಸತಕ್ಕದ್ದು.

94ನೆ ಮತ್ತು 95ನೆ ಪ್ಯಾರಗ್ರಾಫ್ ಯಾ ಪರಿಚ್ಛೇದಗಳನ್ನು ಸೇರಿಸುವುದು.

2. 1899ನೆ ಇಸವಿಯ ಮೈಸೂರು ಮಿಲಿಟರಿ ರೆಗ್ಯುಲೇಷನಿಗೆ ಇದರಡಿ ಕಂಡ ಪ್ಯಾರಗ್ರಾಫುಗಳನ್ನು ಸೇರಿಸತಕ್ಕದ್ದು :—

ಕೆಲವು ತಕ್ಕೀರುಗಳನ್ನು ಕುರಿತು ವಿಚಾರಣೆ ಮಾಡುವ ಅಧಿಕಾರ.

“94. ಒಂದು ತಕ್ಕೀರನ್ನು ಕುರಿತು ವಿಚಾರಣೆ ಮಾಡುವುದಕ್ಕೆ ಒಂದು ಕ್ರಿಮಿನಲ್ ಕೋರ್ಟಿಗೂ, ಮಿಲಿಟರಿ ಅಧಿಕಾರಿಗೂ ಅಧಿಕಾರವಿದ್ದಲ್ಲಿ ಈ ಪೈಕಿ ಯಾರ ಮುಂದೆ ವ್ಯವಹರಣೆಗಳು ನಡೆಯತಕ್ಕದ್ದೆಂಬುವುದನ್ನು ಸರ್ಕಾರದವರು ತಮ್ಮ ಯುಕ್ತಾನುಸಾರ ನಿಶ್ಚೈಯಿಸತಕ್ಕದ್ದು, ಮತ್ತು ಸದರಿ ವ್ಯವಹರಣೆಗಳು ಮಿಲಿಟರಿ ಅಧಿಕಾರಿಯ ಮುಂದೆ ನಡೆಯಬೇಕೆಂದು ಸರ್ಕಾರದವರು ನಿಶ್ಚೈಯಿಸಿದರೆ, ಆಪಾದಿಸಲ್ಪಟ್ಟ ಮನುಷ್ಯನು ಮಿಲಿಟರಿ ಪಹರೆಯಲ್ಲಿ ಇಡಲ್ಪಡತಕ್ಕದ್ದೆಂದು ಸರ್ಕಾರದವರು ತಮ್ಮ ಯುಕ್ತಾನುಸಾರ ವಿಧಿಸತಕ್ಕದ್ದು.”

ಆಪಾದಿಸಲ್ಪಟ್ಟ ಮನುಷ್ಯನು ಒಪ್ಪಿಸಲ್ಪಡಬೇಕೆಂದು ಕೇಳಲು ಕ್ರಿಮಿನಲ್ ಕೋರ್ಟಿಗೆ ಅಧಿಕಾರ.

“95 (1). ನಡೆಯಿತೆಂದು ಹೇಳಲ್ಪಟ್ಟ ಯಾವುದಾದರೂ ತಕ್ಕೀರನ್ನು ಕುರಿತು ವಿಚಾರಣೆ ಮಾಡಲು ಅಧಿಕಾರವುಳ್ಳ ಕ್ರಿಮಿನಲ್ ಕೋರ್ಟಿನವರು, ತಮ್ಮ ಮುಂದೆ ವ್ಯವಹರಣೆಗಳು ನಡೆಯಬೇಕೆಂದು ಅಭಿಪ್ರಾಯಪಟ್ಟರೆ, ಅವರು ಬರವಣಿಗೆಯಲ್ಲಿ ನೋಟೀಸನ್ನು ಕೊಡುವುದರ ಮೂಲಕ, ಯಾರ ತಾಬೆಯಲ್ಲಿ ಆಪಾದಿಸಲ್ಪಟ್ಟ ಮನುಷ್ಯನು ಇರುತ್ತಾನೆಯೋ ಆ ಆಫಿಸರನ್ನು, ಸದರಿ ಆಫಿಸರ ಇಷ್ಟಾನುಸಾರವಾಗಿ ಆಪಾದಿಸಲ್ಪಟ್ಟ ಮನುಷ್ಯನನ್ನು ನ್ಯಾಯಪ್ರಕಾರ ವ್ಯವಹರಿಸಲ್ಪಡುವ ಬಗ್ಗೆ ಅತ್ಯಂತ ಸಮೀಪದಲ್ಲಿರುವ ಮಾಜಿಸ್ಟ್ರೇಟಿಗೆ ಒಪ್ಪಿಸಬೇಕೆಂದಾಗಲಿ, ಅಥವಾ ಸರ್ಕಾರದವರಿಗೆ ಸದರಿ ವಿಷಯವನ್ನು ಕಳುಹಿಸುವ ತನಕ ವ್ಯವಹರಣೆಯನ್ನು ನಿಲ್ಲಿಸಬೇಕೆಂದಾಗಲಿ ಕೇಳಬಹುದು.

(2) ಅಂಥಾ ಪ್ರತಿ ಸಂದರ್ಭದಲ್ಲಿಯೂ ಸದರಿ ಆಫಿಸರು ಆಪಾದಿಸಲ್ಪಟ್ಟ ಮನುಷ್ಯನನ್ನು ಸದರಿ ಕೋರಿಕೆಯ ಮೇರೆ ಒಪ್ಪಿಸಿಬಿಡತಕ್ಕದ್ದು ಅಥವಾ ಸದರಿ ವ್ಯವಹರಣೆಯು ಕೋರ್ಟಿನ ಮುಂದೆ ನಡೆಯಬೇಕೆ, ಅಧಿಕಾರಿಯ ಮುಂದೆ ನಡೆಯಬೇಕೆ ಎಂಬ ಅಂಶವನ್ನು ತೀರ್ಮಾನದ ಬಗ್ಗೆ ಸರ್ಕಾರದವರಿಗೆ ಆ ಕೂಡಲೆ ಕಳುಹಿಸಿ ಅಲ್ಲಿನವರಿಗೆ ಆಪಾದಿಸಲ್ಪಟ್ಟ ಮನುಷ್ಯನ ಮೇಲೆ ವ್ಯವಹರಣೆಗಳನ್ನು ನಿಲ್ಲಿಸಿಡತಕ್ಕದ್ದು.

ಹೀಗೆ ಕಳುಹಿಸಿದುವರ ಮೇಲೆ ಸರ್ಕಾರದವರ ಹುಕುಮು ಅಖೈರಿನದಾಗಿರತಕ್ಕದ್ದು.”

ವಿ. ಪಿ. ಮಾಧವರಾವ್,
ದೀವಾನ್.

ತಾರೀಖು 30ನೆ ನವಂಬರ 1907.

ನಂ. ಜ. 1683—ಲೆಜಿಸ. 10—07-1, 1903ನೆ ಇಸವಿಯ ಸೆಪ್ಟಂಬರ 9ನೆ ತಾರೀಖಿನ 30—ಲೆಜಿಸ. 4—03ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಪ್ರಾಯಿಷ್ ಮಾಡಿದ ಲೋಕಲ್ ಬೋರ್ಡ್ ರೆಗ್ಯುಲೇಷನಿನ ಮೇರೆಗೆ ಮಾಡಿದ ನಿಬಂಧನೆಗಳ 65ನೆ ನಿಬಂಧನೆಗೆ ಇದರಡಿ ಕಂಡುದನ್ನು ಸೇರಿಸಬೇಕೆಂದು ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಹುಕುಂ ದಯಪಾಲಿಸಿರುತ್ತಾರೆ :—

“(೬) ಪ್ರಯಾಣದ ಭತ್ಯಕ್ಕೆ ಅರ್ಹರಲ್ಲವೆಂದು ಅವರವರ ಮೇಲ್ಪಟ್ಟ ಅಧಿಕಾರಿಗಳಿಂದ ಸರ್ಟಿಫೈ ಮಾಡಲ್ಪಟ್ಟು ಸರ್ಕಾರಿ ಕೆಲಸದಮೇಲೆ ಪ್ರಯಾಣ ಮಾಡುತ್ತಿರುವ ಸರ್ಕಾರಿ ನೌಕರರಿಗೆ ಸೇರಿದ,”

ಹುಕುಂ ಬಮೋಜಿಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರಿಟರಿ.

319

ಮೈಸೂರ ಗೆಜೆಟ್.

ನಂ. 42.] ಸರ್ಕಾರದಿಂದ ಛಾಪಿಸಲ್ಪಟ್ಟದ್ದು. [ನಂ. 1.

ಬೆಂಗಳೂರು, ಗುರುವಾರ, ಜನವರಿ ತಾ|| 3, ಸನ್ 1907.

IVನೆ ಭಾಗ.

ಸರ್ಕಾರಿ ಕಾಗದ ಪತ್ರಗಳು.

1906ನೆಯ ವರ್ಷದ 50ನೆಯ ಶನಿವಾರಕ್ಕೆ ಮುಗಿದ ಒಂದು ವಾರದ ಸೀಸನ್ ರಿಪೋರ್ಟು ಯಾ ಕಾಲಗತಿಯನ್ನು ತೋರಿಸುವ ವರದಿ (1906ನೆಯ ವರ್ಷದ ಡಿಶಂಬರ್ 15ನೆಯ ತಾರೀಖು).

	ಡಿಸ್ಟ್ರಿಕ್ಟು ಮತ್ತು ಸ್ಥಳ.	ಶನಿವಾರ ಬೆಳಿಗ್ಗೆ 8 ಘಂಟೆಯ ವರಗೆ ಬಿದ್ದ ಮಳೆ. ಈ ವಾರ.		ಇದೇವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ.		1906ನೆಯ ವರ್ಷದ ಜನವರಿ 1ನೆಯ ತಾರೀಖಿನಿಂದ ಈ ವಾರದ ಕೊನೆಯ ವರೆಗೆ. ಈ ವರ್ಷ.		ಹಿಂದಿನ ಹತ್ತು ವರ್ಷಗಳ ಸರಾಸರಿ.		4ನೆಯ ಮದ್ದದ ಹೆಚ್ಚು (+) ಕಡಮೆ (—)ಯನ್ನು 5ನೆಯ ಮದ್ದದೊಂದಿಗೆ ಹೋಲಿಸಿದ ಲೆಕ್ಕ.		ರೂಪಾಯಿ ಒಂದಕ್ಕೆ ಎಷ್ಟು ಸೇರಿನಂತೆ ಧಾನ್ಯದ ಧಾರಣೆಯಿತ್ತು ಎಂಬುದು ಮತ್ತು ಬಜಾರಿನಲ್ಲಿ ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗಳು.			
	1	2		3		4		5		6		7			
		I.	c.	I.	c.	I.	c.	I.	c.	I.	c.		ಈ ವಾರ ಸೇರುಗಳು	ಕಳೆದ ವಾರ ಸೇರುಗಳು	ಪಕ್ಷ ಒಂದಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ; ಸೇರುಗಳು
ಬೆಂಗಳೂರು.	ಬೆಂಗಳೂರು ದಂಡು	...	...	....	....	31	14	...	...	....	...				
	ಸಿಟಿ ಮತ್ತು ತಾಲ್ಲೂಕು ...	...	...	...	9	40	21	34	8	+ 6	13				
	ಹೊಸಕೋಟೆ ...	...	...	...	5	39	8	32	75	+ 6	33				
	ದೊಡ್ಡಬಳ್ಳಾಪುರ ...	...	...	...	6	33	55	31	88	+ 1	67				
	ನೆಲಮಂಗಲ ...	....	...	...	4	38	11	31	41	+ 6	70				
	ಕಾನಕಾನಹಳ್ಳಿ ...	...	...	...	7	33	13	29	56	+ 3	57				
	ಮಾಗಡಿ ...	....		....	5	45	23	32	16	+ 13	7	ಅಕ್ಕಿ ದುಯ್ಯಂ	7·00	7·00	8·59
	ಚನ್ನಪಟ್ಣ ...	...	...	...	6	39	98	31	80	+ 8	18	ತರಹ			
	ಆನೆಕಲ್ಲು ...	...	...	...	6	36	....	31	30	+ 4	70	ರಾಗಿ	15·50	15·08	18·44
	ದೇವನಹಳ್ಳಿ ...	...	...	...	14	39	54	34	59	+ 4	95	ಹುರುಳಿ	9·50	11·08	...
	ಕ್ಲೋಸಪೇಟೆ ...	...	1	...	14	45	36	32	50	+ 12	86	ಕಡಲೆ	9·00	9·00	9·04
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	...	...	7	39	2	32	20	+ 6	82				
ಕೋಲಾರ.	ಕೋಲಾರ ...	...	17	...	25	31	46	25	57	+ 5	89	ಅಕ್ಕಿ ದುಯ್ಯಂ	7·00	7·00	8·50
	ಬೌರಿಂಗಪೇಟೆ ...	...	2	...	20	26	45	29	47	— 3	2	ತರಹ			
	ಚಿಂತಾಮಣಿ ...	....	...	...	16	21	53	25	50	— 3	97	ರಾಗಿ	16·00	16·00	18·30
	ಮುಳಬಾಗಲು ...	...	...	...	28	30	5	31	46	— 1	41	ಹುರುಳಿ	11·50	11·50	...
	ಶಿಡ್ಲಘಟ್ಟ ...	...	...	...	15	27	94	29	66	— 1	72	ಕಡಲೆ	9·00	9·00	8·25
	ಚಿಕ್ಕಬಳ್ಳಾಪುರ ...	...	...	...	10	31	4	33	38	— 2	34				
	ಬಾಗೆಪಲ್ಲಿ ...	...	...	...	7	28	38	23	35	+ 5	3				
	ಗೋರಿಬಿದನೂರು ...	...	...	...	5	27	48	27	39	+ 0	9				
	ಮಾಲೂರು ...	...	...	...	12	32	76	29	25	+ 3	51				
	ಶ್ರೀನಿವಾಸಪುರ ...	...	...	...	24	32	76	28	54	+ 4	22				
	ಗುಡಿಬಂಡೆ ...	...	3	...	7	36	21	31	9	+ 5	12				
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ	...	2	...	15	29	64	28	61	+ 1	3				

ಡಿಸ್ಟ್ರಿಕ್ಟು ಮತ್ತು ಸ್ಥಳ.		ಶನಿವಾರ ಬೆಳಿಗ್ಯೆ 8 ಘಂಟೆಯ ವರೆಗೆ ಬಿದ್ದ ಮಳೆ. ಈ ವಾರ		ಇದೇವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ.		1906ನೆಯ ವರ್ಷದ ಜನವರಿ 1ನೆಯ ತಾರೀಖಿನಿಂದ ಈ ವಾರದ ಕೊನೆಯ ವರೆಗೆ. ಈ ವರ್ಷ		ಹಿಂದಿನ ಹತ್ತು ವರ್ಷಗಳ ಸರಾಸರಿ.		4ನೆಯ ಮದ್ದದ ಹೆಚ್ಚು (+) ಕಡಮೆ (—) ಯನ್ನು 5ನೆಯ ಮದ್ದದೊಂದಿಗೆ ಹೋಲಿಸಿದ ಲೆಕ್ಕ.		ರೂಪಾಯಿ ಒಂದಕ್ಕೆ ಎಷ್ಟು ಸೇರಿನಂತೆ ಧಾನ್ಯದ ಧಾರಣೆಯಿತ್ತು ಎಂಬುದು ಮತ್ತು ಬಜಾರಿನಲ್ಲಿ ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗಳು.			
1		2		3		4		5		6		7			
		I.	c.	I.	c.	I.	c.	I.	c.	I.	c.		ಈ ವಾರ ಸೇರುಗಳು	ಕಳೆದ ವಾರ ಸೇರುಗಳು	ಪಕ್ಷ ಒಂದಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ; ಸೇರುಗಳು
ತುಮಕೂರು.	ತುಮಕೂರು ...	...	...	...	2	42	15	38	72	+ 3	43				
	ಮಧುಗಿರಿ ...	...	...	...	5	32	93	27	6	+ 5	87				
	ಚಿಕ್ಕನಾಯಕನಹಳ್ಳಿ ...	...	...	...	9	32	52	27	47	+ 5	5				
	ಸೀರ ...	...	...	...	7	27	93	24	13	+ 3	80				
	ಗುಬ್ಬಿ ...	...	...	...	2	31	10	28	52	+ 2	58				
	ತಿಪಟೂರು ...	...	...	...	8	39	69	25	30	+ 14	39				
	ಪಾವಗಡ ...	...	...	...	7	17	18	21	5	— 3	87	ಅಕ್ಕಿ ದುಯಂ ತರಹ	7·50	7·50	8·25
	ಕುಣಿಗಲು ...	...	...	...	2	44	14	30	30	+ 13	84				
	ಕೊರಟಗೆರೆ ...	...	...	...	2	28	60	25	25	+ 3	45	ರಾಗಿ	20·00	20·00	21·20
	ತುರುವೇಕೆರೆ ...	..	...	...	10	29	31	26	13	+ 3	18	ಹುರುಳಿ	12·00	12·00	...
												ಕಡಲೆ	9·00	9·00	8·13
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	...	...	5	32	55	27	38	+ 5	17				
ಮೈಸೂರು.	ಮೈಸೂರು ...	...	...	...	4	26	77	26	30	+ 0	47	ಅಕ್ಕಿ ದುಯಂ ತರಹ	8·00	8·00	9·62
	ಚಾಮರಾಜನಗರ ...	...	...	...	26	28	51	30	99	— 2	48				
	ಶ್ರೀರಂಗಪಟ್ಟಣ ...	...	12	...	1	23	9	26	71	— 3	62	ರಾಗಿ	15·00	15·00	18·03
	ಹುಣಸೂರು ...	...	...	...	5	28	9	30	41	— 2	32	ಹುರುಳಿ	11·50	13·00	...
	ಯಡತೊರೆ ...	...	...	...	4	21	90	26	14	— 4	14	ಕಡಲೆ	10·00	9·00	8·59
	ಹೆಗ್ಗಡದೇವನಕೋಟೆ ...	...	...	...	12	33	80	41	92	— 8	12				
	ಗುಂಡ್ಲ ಪೇಟೆ ...	...	32	...	5	29	63	24	37	+ 5	26				
	ನಂಜನಗೂಡು ...	...	...	...	4	18	94	26	91	— 7	97				
	ತಿ. ನರಸೀಪುರ ...	...	36	...	3	21	84	26	39	— 4	55				
	ಮಳವಳ್ಳಿ ...	...	...	...	3	31	48	27	71	+ 3	77				
	ಮಂಡ್ಯ ...	...	16	...	8	25	79	26	57	— 0	78				
	ಕೃಷ್ಣರಾಜಪೇಟೆ ...	...	...	...	...	30	35	30	17	+ 0	18				
	ನಾಗಮಂಗಲ ...	...	...	...	6	29	58	26	6	+ 3	52				
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	7	...	6	26	90	28	50	— 1	60				
ಹಾಸನ.	ಹಾಸನ ...	...	6	..	33	35	11	35	98	— 0	87	ಅಕ್ಕಿ ದುಯಂ ತರಹ	9·00	8·50	9·80
	ಮಂಜರಾಬಾದು (ಸಕಲೇಶಪುರ) ...	...	8	...	79	78	93	94	95	—16	2				
	ಅರಕಲಗೂಡು ...	...	22		32	32	66	37	26	— 4	60	ರಾಗಿ	1·600	17·00	21·48
	ಬೇಲೂರು ...	...	10	..	86	34	13	42	50	— 8	37	ಹುರುಳಿ	13·00	13·50	...
	ಚನ್ನರಾಯಪಟ್ಟಣ ...	...	35	...	18	28	73	25	49	+ 3	24	ಕಡಲೆ	9·00	9·00	8·85
	ಅರಸೀಕೆರೆ ...	...		..	16	32	43	26	30	+ 6	13				
	ಹೊಳೆನರಸೀಪುರ ...	..		...	28	28	81	27	68	+ 1	13				
	ಆಲೂರು ...	...	26	...	30	47	99	41	32	+ 6	67				
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	13	...	40	39	85	41	43	— 1	58				

ಶನಿವಾರ ಬೆಳಿಗ್ಗೆ 8 ಘಂಟೆಯ ವರೆಗೆ ಬಿದ್ದ ಮಳೆ.

ಡಿಸ್ಟ್ರಿಕ್ಟು ಮತ್ತು ಸ್ಥಳ.	ಈ ವಾರ.		ಇದೇವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ.		1906ನೆಯ ವರ್ಷದ ಜನವರಿ 1ನೆಯ ತಾರೀಖಿನಿಂದ ಈ ವಾರದ ಕೊನೆಯ ವರೆಗೆ. ಈ ವರ್ಷ.		ಹಿಂದಿನ ಹತ್ತು ವರ್ಷಗಳ ಸರಾಸರಿ.		4ನೆಯ ವೃದ್ಧದ ಹೆಚ್ಚು (+) ಕಡಮೆ (–) ಯನ್ನು 5ನೆಯ ವೃದ್ಧದೊಂದಿಗೆ ಹೋಲಿಸಿದ ಲೆಕ್ಕ.	
1	2		3		4		5		6	
	I.	c.	I.	c.	I.	c.	I.	c.	I.	c.
ಶಿವಮೊಗ್ಗ	...	...	...	45	38	23	37	92	+ 0	31
ಚನ್ನಗಿರಿ ...	...	...	...	19	35	30	28	95	+ 6	35
ಹೊನ್ನಾಳಿ ...	...		...	22	20	82	25	45	— 4	63
ಶಿಕಾರಿಪುರ ...	...	...	...	89	27	45	38	24	—10	79
ಸೊರಬ ...	...	...	...	68	44	99	61	98	—16	99
ಸಾಗರ ...	...	...	...	29	68	5	82	63	—14	58
ನಗರ (ಕಲ್ಲೂರುಕಟ್ಟೆ) ...	...	...	...	17	86	29	100	54	—14	25
ತೀರ್ಥಹಳ್ಳಿ ...	...	...	...	32	93	5	123	44	—30	39
ಕುಂಸಿ ...	...	...	...	23	33	16	42	54	— 4	38
ಡಿಸ್ಟ್ರಿಕ್ಟಿನಲ್ಲಿ ಸರಾಸರಿ	...	...	...	38	50	26	60	19	— 9	93
ಚಿಕ್ಕಮಗಳೂರು	...	...	...	9	36	66	35	86	+ 0	80
ಕಡೂರು ...	...	70	...	17	23	60	22	99	+ 0	61
ತರೀಕೆರೆ ...	...	...	...	...	38	1	38	46	+ 0	45
ಕೊಪ್ಪ ...	...	...	...	14	92	24	130	87	—38	63
ಮೂಡಿಗೆರೆ ...	...	...	...	32	72	99	104	5	—31	6
ಯಡೆಹಳ್ಳಿ ...	...	...	...	31	54	25	67	44	—13	19
ಶೃಂಗೇರಿ	...	18	...	10	115	19	157	37	—42	18
ಡಿಸ್ಟ್ರಿಕ್ಟಿನಲ್ಲಿ ಸರಾಸರಿ	...	12	...	16	61	84	79	57	—17	73
ಚಿತ್ರದುರ್ಗ ...	...	...	...	5	28	32	23	56	+ 4	76
ಚಳ್ಳಕೆರೆ ...	...	...	...	4	21	2	17	3	+ 3	99
ಹಿರಿಯೂರು ...	...	...	...	3	20	96	19	50	+ 1	46
ಹೊಳಲ್ಕೆರೆ ...	...	...	...	14	26	7	22	93	+ 3	14
ದಾವಣಗೆರೆ ...	...	...	...	29	21	25	26	20	— 4	95
ಮೊಳಕಾಲ್ಮುರು ...	...		...	15	26	91	25	37	+ 1	54
ಜಗಳೂರು ...	...	...	...	9	23	6	20	68	+ 2	38
ಹೊಸದುರ್ಗ ...	...	...		19	30	53	20	73	+ 9	80
ಹರಿಹರ ...	...	...	...	2	27	99	21	80	+ 6	19
ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	...	...	14	25	12	21	98	+ 3	14
ಸಂಸ್ಥಾನದಲ್ಲಿ ಸರಾಸರಿ ...	....	4	....	18	38	15	39	98	— 1	83

7 — ರೂಪಾಯಿ ಒಂದಕ್ಕೆ ಎಷ್ಟು ಸೇರಿನಂತೆ ಧಾನ್ಯದ ಧಾರಣೆಯಿತ್ತು ಎಂಬುದು ಮತ್ತು ಬಜಾರಿನಲ್ಲಿ ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗಳು.

	ಈ ವಾರ ಸೇರುಗಳು	ಕಳೆದ ವಾರ ಸೇರುಗಳು	ವರ್ಷ ಒಂದಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ; ಸೇರುಗಳು
ಅಕ್ಕಿ ದುಯಂ ತರಹ	9·00	8·75	10·66
ರಾಗಿ	18·00	18·00	24·58
ಹುರುಳಿ	10·50	11·50	....
ಅಕ್ಕಿ ದುಯಂ ತರಹ	8·90	8·00	9·90
ರಾಗಿ	17·17	17·00	20·10
ಹುರುಳಿ	11·12	11·00	...
ಕಡಲೆ	9·00	9·00	7·70
ಅಕ್ಕಿ ದುಯಂ ತರಹ	8·00	7·50	9·21
ರಾಗಿ	20·00	17·00	22·10
ಹುರುಳಿ	11·00	10·00	...
ಜೋಳ	20·00	17·00	8·70
ಕಡಲೆ	8·00	8·00	19·60

ಡಿಸ್ಟ್ರಿಕ್ಟು ರಿಪೋರ್ಟುಗಳು.

8. ಬಜಾರಿನಲ್ಲಿ ಸರಬರಾಯಿ ಹ್ಯಾಗಿದೆ.
9. ವ್ಯವಸಾಯ ಕಾರ್ಯದ ಅಭಿವೃದ್ಧಿ, ನಿಂತಿರುವ ಪೈರುಗಳ ಸ್ಥಿತಿ, ಬೆಳೆಗಳು ಎಷ್ಟಾಗಬಹುದೆಂಬ ನಿರೀಕ್ಷೆ, ಮತ್ತು ಸುಗ್ಗಿಯ ಕಾಲದಲ್ಲಿ ಉಂಟಾಗಬಹುದಾದ ಹುಟ್ಟುವಳಿ, ಹುಳುಗಳು ಅಥವಾ ಸ್ವಾಭಾವಿಕವಾದ ಇತರ ವಿಪತ್ತುಗಳಿಂದ ಪೈರುಗಳಿಗೆ ಉಂಟಾದ ನಷ್ಟ.
10. ಕಾಲದ ಅಯತಿ, ಮಳೆಯು ಸಾಲದೆ ಇರುವ ಪ್ರದೇಶಗಳು, ದುರ್ಭಿಕ್ಷ ವುಂಟಾಗಿರುವ ಸ್ಥಳಗಳು, ರಿಲೀಫ್ ಸಹಾಯವನ್ನು ಪಡೆಯುತ್ತಿರುವ ಜನರ ಸಂಖ್ಯೆ, ಮತ್ತು ಆಹಾರ ಸಾಮಗ್ರಿಯ ಸ್ಥಿತಿ.
11. ಜನಗಳ ಆರೋಗ್ಯ.
12. ವ್ಯವಸಾಯಕ್ಕೆ ಸಂಬಂಧಿಸುವ ಮಾಲುಗಳು, ದನಗಳಿಗೆ ಮೇಯುವುದಕ್ಕೆ ಹುಲ್ಲುಕಾವಲು ಇಲ್ಲದೇ ಹೋಗುವುದು, ಮೇವು, ಮುಂತಾದುವುಗಳ ವಿಷಯವಾಗಿ ಪಠಾಗಳು.

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (ದಂಡು).

ಆಹಾರ ಧಾನ್ಯಗಳ ಧಾರಣೆಗಳು:—

		ಮಾಮೂಲಾಗಿ.	ಚಾಲ್ತಿ.	
ಅಕ್ಕಿ ರೂಪಾಯಿ 1ಕ್ಕೆ	... ...	10 ರಿಂದ 11.	6½ ಯಿಂದ 7.	ಸೇರುಗಳು.
ರಾಗಿ ,,	... ...	25 ರಿಂದ 30.	15 ರಿಂದ 16.	

ವ್ಯವಸಾಯ ಕೆಲಸಗಳು—ರಾಗಿಯು ಕೊಯ್ಯಲು ಆಗಿ ಇದೆ.
ನಿಂತಿರುವ ಪೈರು ಸುಮಾರಾಗಿದೆ.
ಪೈರುಗಳ ಉತ್ಪತ್ತಿಯ ಅಂದಾಜು—7ರಿಂದ 8 ಆಣೆ.
ದನಗಳು ಒಳ್ಳೆಯ ಸ್ಥಿತಿಯಲ್ಲಿವೆ. ನೀರೂ ಮೇವೂ ಸಾಕು.

ಬೆಂಗಳೂರು ಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.
9. ಡಿಸ್ಟ್ರಿಕ್ಟಿನಲ್ಲೆಲ್ಲಾ ರಾಗಿಯ ಕುಯ್ಯಲು ಆಗುತ್ತಿದೆ.
ನಿಂತಿರುವ ಪೈರುಗಳು—ಕಬ್ಬು, ಭತ್ತ, ಹಾರಕ, ಹುರುಳೀ ಮುಂತಾದ ಕಾಳುಗಳು ಒಳ್ಳೇ ಸ್ಥಿತಿಯಲ್ಲಿವೆ.
ಬಿತ್ತನೆ ಪೈರು—ದೇವನಹಳ್ಳಿ ತಾಲ್ಲೂಕಿನಲ್ಲಿ ಆಲೂಗಡ್ಡೆಯು ಬಿತ್ತನೆಯಾಗುತ್ತಿದೆ.
ಆಯುತಿಯು ಚೆನ್ನಾಗಿದೆ.
ಆನೇಕಾನಹಳ್ಳಿ, ಚನ್ನಪಟ್ಟಣ ಮತ್ತು ಕ್ಲೋಸ್‌ಪೇಟೆಗಳ ಕೆಲವು ಭಾಗಗಳಲ್ಲಿ ಜ್ವರವೂ, ಮತ್ತು ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಹೋಬಳಿಯಲ್ಲಿ ಸಿಡುಬೂ ಹೊರ್ತು ಜನಾರೋಗ್ಯವು ಸಾಮಾನ್ಯವಾಗಿ ಚೆನ್ನಾಗಿದೆ.
12. ದನಗಳು ಆರೋಗ್ಯವಾಗಿವೆ. ನೀರೂ, ಮೇವು ದೊರಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.
9. ನಿಂತಿರುವ ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆ.
ಬಿತ್ತನೆಯಾದ ಪೈರುಗಳು.—ಕೋಲಾರ, ಬವರಿಂಗ್‌ಪೇಟೆ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಬಾಗೆಪಲ್ಲಿ, ಮತ್ತು ಗುಡಿಬಂಡೆಯಲ್ಲಿ ವೈಶಾಖಿ ಭತ್ತ.
ಕೊಯ್ಯಲಾದ ಪೈರುಗಳು.—ಕೋಲಾರ, ಬವರಿಂಗ್‌ಪೇಟೆ, ಚಿಂತಾಮಣಿ, ಮುಳಬಾಗಲ್, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಬಾಗೇಪಲ್ಲಿ ಶ್ರೀನಿವಾಸಪುರ ಮತ್ತು ಗುಡಿಬಂಡೆಯಲ್ಲಿ ಕಾರ್ತೀಕ ಭತ್ತ.
ಡಿಸ್ಟ್ರಿಕ್ಟಿನಲ್ಲೆಲ್ಲಾ ರಾಗಿ.
10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತದೆ.
11. ಕೋಲಾರದ ಚಿನ್ನದ ಗಣಿಯಲ್ಲಿ ಒಂದು ಪ್ಲೇಗ್ ಕೇಸ್ ಹೊರ್ತು ಜನಾರೋಗ್ಯವು ಚೆನ್ನಾಗಿದೆ.
12. ದನಗಳು ಆರೋಗ್ಯವಾಗಿವೆ. ನೀರೂ, ಮೇವೂ ಸಿಕ್ಕುತ್ತವೆ

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.
9. ನಿಂತಿರುವ ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆ.
ಬಿತ್ತನೆಯಾದ ಪೈರುಗಳು.—ತುಮಕೂರು, ಮದ್ದಗಿರಿ, ಸೀರ್ರ್ಯ, ಗುಬ್ಬಿ, ತಿಪಟೂರು ಮತ್ತು ಕೊರಟಗೆರೆಯಲ್ಲಿ ಭತ್ತ; ಮತ್ತು ತಿಪಟೂರಿನಲ್ಲಿ ಕಡಲೆ ಮತ್ತು ಕೊತ್ತುಂಬರಿ.
ಕೊಯ್ಯಲಾದ ಪೈರುಗಳು—ತುಮಕೂರು, ಮದ್ದಗಿರಿ, ಚಿಕ್ಕನಾಯಕನಹಳ್ಳಿ, ಗುಬ್ಬಿ, ತಿಪಟೂರು ಕೊರಟಗೆರೆ ಮತ್ತು ತುರುವೇಕೆರೆಯಲ್ಲಿ ರಾಗಿ; ಮದ್ದಗಿರಿ ಮತ್ತು ಸೀರ್ರ್ಯದಲ್ಲಿ ಹುರುಳಿ; ಚಿಕ್ಕನಾಯಕನಹಳ್ಳಿ ಮತ್ತು ತಿಪಟೂರಿನಲ್ಲಿ ಹಾರಕ; ಚಿಕ್ಕನಾಯಕನಹಳ್ಳಿ, ಗುಬ್ಬಿ, ತಿಪಟೂರು ಮತ್ತು ತುರುವೇಕೆರೆಯಲ್ಲಿ ನವಣೆ ಮತ್ತು ಸಾಮೆ; ತುಮಕೂರು, ಮದ್ದಗಿರಿ, ಸೀರ್ರ್ಯ, ಗುಬ್ಬಿ, ತಿಪಟೂರು ಮತ್ತು ಕೊರಟಗೆರೆಯಲ್ಲಿ ಭತ್ತ; ಮದ್ದಗಿರಿ ಮತ್ತು ಸೀರ್ರ್ಯದಲ್ಲಿ ಹರಳು; ಸೀರ್ರ್ಯ, ಕುಣಿಗಲ್ಲು ಮತ್ತು ತುರುವೇಕೆರೆಯಲ್ಲಿ ಕಬ್ಬು; ಸೀರ್ರ್ಯದಲ್ಲಿ ತೊಗರಿ, ಮೆಣಸಿನಕಾಯಿ, ಮತ್ತು ಉಚ್ಚೆಳ್ಳು; ಗುಬ್ಬಿಯಲ್ಲಿ ಜೋಳ ಮತ್ತು ಕಡ್ಲೇಕಾಯಿ; ಮತ್ತು ತಿಪಟೂರಿನಲ್ಲಿ ಬರಗು ಮತ್ತು ಸಜ್ಜೆ.
ವ್ಯವಸಾಯದ ಕೆಲಸಗಳು—ಕುಯ್ಯಲೂ; ಉತ್ತು ವೈಶಾಖ ಭತ್ತ ಬಿತ್ತುವದು.
10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸಿ ದೊರೆಯುತ್ತೆ.
11. ತಿಪಟೂರಿನಲ್ಲಿ ಜ್ವರ ಹೊರ್ತು, ಜನಾರೋಗ್ಯವು ಸಾಮಾನ್ಯವಾಗಿ ಚೆನ್ನಾಗಿದೆ.
12. ದನಗಳು ಆರೋಗ್ಯವಾಗಿವೆ. ನೀರೂ ಮೇವೂ ಸಾಕಾಗಿವೆ.

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು.—ಕಾರ್ ಬೀಜಗಳು ಚೆಲ್ಲಲು ಗುಂಡ್ಲುಪೇಟೆಯಲ್ಲಿ ಕೆಲವು ಭಾಗಗಳಲ್ಲಿ ಭೂಮಿಯನ್ನು ಉಳುತ್ತಾ ಇದಾರೆ.

ನಿಂತಿರುವ ಪೈರುಗಳು.—ಎಲ್ಲಾ ತಾಲ್ಲೂಕುಗಳಲ್ಲಿಯೂ ಖುಷ್ಕೀ ಮತ್ತು ತರೀ ಪೈರುಗಳು ಚೆನ್ನಾಗಿವೆಯೆಂದು ರಿಪೋರ್ಟಾಗಿದೆ.

ಕೊಯ್ಯಲಾದ ಪೈರುಗಳು.—ಮೈಸೂರು, ನಂಜನಗೂಡು, ಶ್ರೀರಂಗಪಟ್ಣ, ಯಡತೊರೆ ಮತ್ತು ತಿ॥ ನರಸೀಪುರದ ಕೆಲವು ಭಾಗಗಳಲ್ಲಿ ಭತ್ತ; ಶ್ರೀರಂಗಪಟ್ಣ, ತಿ॥ ನರಸೀಪುರ, ಮಂಡ್ಯ ಮತ್ತು ಕೃಷ್ಣರಾಜಪೇಟೆಯ ಕೆಲವು ಭಾಗಗಳಲ್ಲಿ ರಾಗಿ; ಶ್ರೀರಂಗಪಟ್ಣ, ಯಡತೊರೆ ಮತ್ತು ಕೃಷ್ಣರಾಜಪೇಟೆಯ ಕೆಲವು ಭಾಗಗಳಲ್ಲಿ ಹುರುಳಿ; ಶ್ರೀರಂಗಪಟ್ಣದ ಕೆಲವು ಭಾಗಗಳಲ್ಲಿ ಹರಳು; ಎಡತೊರೆಯ ಕೆಲವು ಭಾಗಗಳಲ್ಲಿ ಉದ್ದು, ಮತ್ತು ಕೃಷ್ಣರಾಜಪೇಟೆಯ ಕೆಲವು ಭಾಗಗಳಲ್ಲಿ ಸಾಮೆ ಮತ್ತು ಹಾರಕ.

ಹುಟ್ಟುವಳಿಯ ಅಂದಾಜಾ:—

ಶ್ರೀರಂಗಪಟ್ಣ ...	ಭತ್ತ ಮತ್ತು ರಾಗಿ ...	12 ಆಣೆ.
	ಹುರುಳಿ ...	8 ,,
ತಿ॥ ನರಸೀಪುರದಲ್ಲಿ	ರಾಗಿ ...	8 ,,
ಮಳವಳ್ಳಿಯಲ್ಲಿ ...	ಕೊಯ್ಯಲಾದ ರಾಗಿ ...	4 ರಿಂದ 12 ಆಣೆ ವರಿವಿಗೆ.
ಕೃಷ್ಣರಾಜಪೇಟೆಯಲ್ಲಿ ...	ರಾಗಿ ...	10 ರಿಂದ ಡಿಟೋ
	ಸಾಮೆ ಮತ್ತು ಹಾರಕ ...	6 ರಿಂದ ಡಿಟೋ
	ಹುರುಳಿ ...	8 ರಿಂದ ಡಿಟೋ

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತೆ.

11. ಕೆಲವು ಭಾಗಗಳಲ್ಲಿ ಕಾಲರಾ ಇರುವದು ಹೊರ್ತು ಜನಾರೋಗ್ಯವು ಸಾಮಾನ್ಯವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಮೇವೂ ಸಾಕಾದಷ್ಟು ಸಿಕ್ಕುತ್ತವೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿಯು ಸುಮಾರಾಗಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆ.

ಕೊಯ್ಯಲಾದ ಪೈರುಗಳು.—ಎಲ್ಲಾ ತಾಲ್ಲೂಕುಗಳಲ್ಲಿಯೂ ಭತ್ತ;
ಚೆನ್ನರಾಯಪಟ್ಣದ ತಾಲ್ಲೂಕಿನಲ್ಲಿ ದೊಡ್ಡ ರಾಗಿ, ಮೆಣಸಿನಕಾಯಿ ಮತ್ತು ಜೋಳ;
ಚೆನ್ನರಾಯಪಟ್ಣ, ಅರಕಲಗೂಡು ಮತ್ತು ಹಾಸನ ತಾಲ್ಲೂಕುಗಳಲ್ಲಿ ಹುರಳಿ;
ಚೆನ್ನರಾಯಪಟ್ಣ, ಹೊಳೇನರಸೀಪುರ ಮತ್ತು ಹಾಸನ ತಾಲ್ಲೂಕುಗಳಲ್ಲಿ ಕಬ್ಬು;
ಮತ್ತು ಚೆನ್ನರಾಯಪಟ್ಣ ಮತ್ತು ಹಾಸನ ತಾಲ್ಲೂಕುಗಳಲ್ಲಿ ಹುಚ್ಚೆಳ್ಳು.

ಭತ್ತದ ಉತ್ಪತ್ತಿಯ ಅಂದಾಜಾ ... 8 ರಿಂದ 16 ಆಣೆ ವರಿಗೂ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿಗಳು ದೊರಕುತ್ತವೆ.

11. ಹಾಸನ ಮತ್ತು ಹೊಳೇನರಸೀಪುರ ಊರುಗಳಲ್ಲಿಯೂ ಮತ್ತು ಹಾಸನ, ಬೇಲೂರು ಮತ್ತು ಚೆನ್ನರಾಯಪಟ್ಣ ತಾಲ್ಲೂಕುಗಳ ಕೆಲವು ಗ್ರಾಮಗಳಲ್ಲಿ ಪ್ಲೇಗೂ, ಹಾಸನ ತಾಲ್ಲೂಕಿನಲ್ಲಿ ಜ್ವರವೂ ಮತ್ತು ಅರಕಲಗೂಡು ತಾಲ್ಲೂಕಿನಲ್ಲಿ ಕೆಲವು ಹಳ್ಳಿಗಳಲ್ಲಿ ವಾಂತಿಭೇದಿಯೂ ಹೊರ್ತು ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿಯು ಚೆನ್ನಾಗಿದೆ.

9. ನಿಂತಿರುವ ಪೈರುಗಳು.—ರಾಗಿ, ಭತ್ತ, ಜೋಳ, ಹುರುಳಿ ಮತ್ತು ಕಬ್ಬು ಚೆನ್ನಾಗಿವೆ.

ಕುಯ್ಯಲಾಗುವ ಪೈರುಗಳು.—ಶಿವಮೊಗ್ಗ, ಚೆನ್ನಗಿರಿ, ಷಿಕಾರಿಪುರ, ಸಾಗರ, ನಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಭತ್ತ; ಶಿವಮೊಗ್ಗ, ಚೆನ್ನಗಿರಿ, ಹೊನ್ನಾಳಿ ಮತ್ತು ಸಾಗರ ತಾಲ್ಲೂಕುಗಳಲ್ಲಿ ರಾಗಿ; ಚೆನ್ನಗಿರಿ, ಹೊನ್ನಾಳಿ ಮತ್ತು ಷಿಕಾರಿಪುರ ತಾಲ್ಲೂಕುಗಳಲ್ಲಿ ಜೋಳವು; ಹೊನ್ನಾಳಿ ಮತ್ತು ಸೊರಬ ತಾಲ್ಲೂಕುಗಳಲ್ಲಿ ಹುರುಳಿಯು; ಮತ್ತು ಸೊರಬ ತಾಲ್ಲೂಕಿನಲ್ಲಿ ಮೆಣಸಿನಕಾಯಿಯು.

ಹೊನ್ನಾಳಿ ಮತ್ತು ಸೊರಬ ತಾಲ್ಲೂಕುಗಳಲ್ಲಿ ಮತ್ತು ಕುಂಸಿ ಸಬ್ ತಾಲ್ಲೂಕಿನಲ್ಲಿಯೂ ಭತ್ತದ ಕುಯ್ಯಲೂ ಮತ್ತು ಸೊರಬ ತಾಲ್ಲೂಕಿನಲ್ಲಿ ರಾಗಿ ಕೊಯ್ಯಲೂ ಮುಗಿಯುತ್ತಾ ಬರುತ್ತಿದೆ.

ಸೊರಬ, ಸಾಗರ, ನಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಅಡಿಕೆಯ ಕುಯ್ಯಲು ಆಗುತ್ತಿದೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಾಕಾದಷ್ಟು ಸಿಕ್ಕುತ್ತದೆ.

11. ಸೊರಬ, ಸಾಗರ, ನಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಶಿಡುಬು ಹೊರ್ತು ಜನಾರೋಗ್ಯವು ಸಾದಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿಯು ಸುಮಾರಾಗಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು — ಡಿಸ್ಟ್ರಿಕ್ಟಿನ ಮಲನಾಡು ಪ್ರಾಂತ್ಯಗಳಲ್ಲಿ ತರೀ ಭೂಮಿಗಳ ಉಳುವ ಕೆಲಸಗಳು ಮುಗಿದು ಇವೆ.

ನಿಂತಿರುವ ಪೈರುಗಳು.—

ತರೀಕೆರೇಲಿ—ಕಬ್ಬು, ಭತ್ತ, ರಾಗಿ, ಹುರುಳಿ, ಅವರೇ, ಹರಳೇ;
ಕೊಪ್ಪದಲ್ಲಿ—ಕಬ್ಬು, ಅಡಿಕೆ, ಕಾಫಿ, ಮೆಣಸು ಮತ್ತು ಭತ್ತ;
ಚಿಕ್ಕಮಗಳೂರಲ್ಲಿ—ಕಬ್ಬು, ಕಡಲೆ, ಮತ್ತು ಮೆಂತ್ಯ;
ಕಡೂರಲ್ಲಿ—ರಾಗಿ, ಜೋಳ, ಹುರುಳಿ, ಅವರೆ, ತೊಗರಿ, ಭತ್ತ, ಕಬ್ಬು, ಮೆಣಸಿನಕಾಯಿ, ಕಡಲೆ, ಗೋಧಿ, ಮೆಂತ್ಯ ಮತ್ತು ಕೊತ್ತುಂಬರಿ;
ಮೂಡುಗೆರೆಯಲ್ಲಿ—ಭತ್ತ, ರಾಗಿ, ಕಾಫಿ, ಯಾಲಕ್ಕಿ ಮತ್ತು ಅಡಿಕೆ; ಇವುಗಳೆಲ್ಲಾ ಒಳ್ಳೆ ಸ್ಥಿತಿಯಲ್ಲಿವೆ ಎಂದು ರಿಪೋರ್ಟು ಆಗಿದೆ.

ಕೊಯ್ಯಲಾದ ಪೈರುಗಳು.—

ತರೀಕೆರೆಯ ಕೆಲವು ಭಾಗಗಳಲ್ಲಿ ಭತ್ತ, ಜೋಳ, ರಾಗಿ ಮತ್ತು ನವಣೆ;
ಕೊಪ್ಪದಲ್ಲಿ—ಅಡಿಕೆ, ಭತ್ತ, ಕಾಫಿ ಮತ್ತು ಯಾಲಕ್ಕಿ;
ಚಿಕ್ಕಮಗಳೂರಲ್ಲಿ—ಭತ್ತ ಮತ್ತು ರಾಗಿ;
ಕಡೂರಿನಲ್ಲಿ—ರಾಗಿ, ಜೋಳ, ಬರಗು, ನವಣೆ, ಭತ್ತ, ಮೆಣಸಿನಕಾಯಿ ಮತ್ತು ಹುರುಳಿ;
ಯೆಡೇಹಳ್ಳಿಯಲ್ಲಿ—ಭತ್ತ, ಅಡಿಕೆ ಮತ್ತು ಕಾಫಿ;
ಶೃಂಗೇರಿಯಲ್ಲಿ—ಅಡಿಕೆ ಮತ್ತು ಭತ್ತ;
ಮೂಡುಗೆರೆಯ ಕೆಲವು ಭಾಗಗಳಲ್ಲಿ—ಭತ್ತ, ಕಾಫಿ, ಯಾಲಕ್ಕಿ, ರಾಗಿ ಮತ್ತು ಅಡಿಕೆ; ಇವುಗಳೆಲ್ಲಾ ಕುಯ್ಯಲು ಆಗುತ್ತಿವೆ.

ಪೈರುಗಳ ಉತ್ಪತ್ತಿಯ ಅಂದಾಜು:—

ತರೀಕೆರೆ	ಭತ್ತ, ಜೋಳ, ರಾಗಿ ಮತ್ತು ನವಣೆ	... 12 ಆಣೆ.
ಕೊಪ್ಪ	ಅಡಿಕೆ, ಭತ್ತ ಮತ್ತು ಕಾಫಿ	12 ಆಣೆ ಮತ್ತು ಯಾಲಕ್ಕಿ 6 ಆಣೆ.
ಚಿಕ್ಕಮಗಳೂರು	... ಭತ್ತ 12 ಆಣೆ ಮತ್ತು ರಾಗಿ	... 8 ಆಣೆ.
ಕಡೂರು	... ರಾಗಿ, ಭತ್ತ, ಜೋಳ ಮತ್ತು ಸಜ್ಜೆ	... 16 ಆಣೆ.
	ಕಬ್ಬು	... 12 ಆಣೆ.
	ಉದ್ದು ಮತ್ತು ಹೆಸರು	... 4 ಆಣೆ.
	ಸಾಮೆ ಮತ್ತು ಮೆಣಸಿನಕಾಯಿ	... 8 ಆಣೆ.
	ಕೊತ್ತುಂಬರಿ	... 6 ,,
ಯೆಡೆಹಳ್ಳಿ	ಭತ್ತ	... 12 ,,
ಶೃಂಗೇರಿ	ಅಡಿಕೆ	... 12 ,,
	ಭತ್ತ	... 13 ,,
ಮೂಡಗೆರೆ	ಭತ್ತ	... 12 ,,
	ಕಾಫಿ	... 4 ರಿಂದ 6 ಆಣೆ.
	ಯಾಲಕ್ಕಿ	... 8 ರಿಂದ 10 ಆಣೆ.
	ರಾಗಿ	... 4 ಆಣೆ.
	ಅಡಿಕೆ	... 12 ಆಣೆ.

10. ಕಾಲದ ಆಯುತಿಯು ಚೆನ್ನಾಗಿದೆ.

11. ಕಡೂರು ಮತ್ತು ಮೂಡಗೆರೆಯಲ್ಲಿ ಪ್ಲೇಗೂ, ಚಿಕ್ಕಮಗಳೂರಿನಲ್ಲಿ ಜ್ವರವೂ ಮತ್ತು ಶೃಂಗೇರಿ ಮತ್ತು ಮೂಡಗೆರೆಯ ಕೆಲವು ಭಾಗಗಳಲ್ಲಿ ಸಿಡುಬು ಹೊರತು ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ಪೈರುಗಳ ಸ್ಥಿತಿ—ಚೆನ್ನಾಗಿವೆ.

ಬಿತ್ತನೆಯಾದ ಪೈರುಗಳು.—ಹಿರಿಯೂರು ಮತ್ತು ಹೊಳಲ್ಕೆರೆ ತಾಲ್ಲೂಕುಗಳಲ್ಲಿ ಭತ್ತ.

ಕೊಯ್ಯಲಾದ ಪೈರುಗಳು.—ಚಳ್ಳಕೆರೆ, ಹಿರಿಯೂರು, ಜಗಲೂರು, ಹೊಸದುರ್ಗ ಮತ್ತು ಹರಿಹರ ಸಬ್ ತಾಲ್ಲೂಕಿನಲ್ಲಿ ರಾಗಿ, ಜೋಳ ಮತ್ತು ನವಣೆ ಇವರ ಉತ್ಪತ್ತಿಯ ಅಂದಾಜು—4 ರಿಂದ 14 ಆಣೆ ವರೆಗೆ.

ಹಿರಿಯೂರು ಮತ್ತು ದಾವಣಗೆರೆ ತಾಲ್ಲೂಕುಗಳಲ್ಲಿ ಭತ್ತದ ಉತ್ಪತ್ತಿಯ ಅಂದಾಜು—8 ರಿಂದ 14 ಆಣೆ ವರೆಗೆ.

ದಾವಣಗೆರೆ, ಜಗಲೂರು ಮತ್ತು ಹರಿಹರ ಸಬ್ ತಾಲ್ಲೂಕುಗಳಲ್ಲಿ ಹುರುಳಿಯ ಉತ್ಪತ್ತಿಯ ಅಂದಾಜು—4 ರಿಂದ 14 ಆಣೆ ವರೆಗೆ.

ಚಿತ್ರದುರ್ಗ ತಾಲ್ಲೂಕಿನಲ್ಲಿ ಅರಳೆಯ ಅಂದಾಜು—4 ಆಣೆ.

10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು,
1906ನೆಯ ವರ್ಷದ ಡಿಸೆಂಬರ 21ನೆಯ ತಾರೀಖು.

ಎ. ರಂಗಸ್ವಾಮಿ ಐಯ್ಯಂಗಾರ್,
ರೆವಿನ್ಯೂ ಕಮಿಷನರ.

Government Press, Bangalore—1907.

ಮೈಸೂರ ಗೆಜೆಟ್.

[ಸಂ. 42.] ಸರ್ಕಾರದಿಂದ ಪ್ರಾಂಯಿಷ್ ಆದ್ದು. [ಸಂ. 3.

ಬೆಂಗಳೂರು, ಗುರುವಾರ, ಜನವರಿ ತಾ॥ 17, ಸನ್ 1907.

IVನೇ ಭಾಗ.

ಸರ್ಕಾರಿ ಕಾಗದ ಪತ್ರಗಳು.

1907ನೆಯ ವರ್ಷದ 1ನೆಯ ಶನಿವಾರಕ್ಕೆ ಮುಗಿದ ಒಂದು ವಾರದ ಸೀಸನ್ ರಿಪೋರ್ಟು ಯಾ ಕಾಲಗತಿಯನ್ನು ತೋರಿಸುವ ವರದಿ (1907ನೆಯ ವರ್ಷದ ಜನವರಿ 5ನೆಯ ತಾರೀಖು).

ಡಿಸ್ಟ್ರಿಕ್ಟು ಮತ್ತು ಸ್ಥಳ.	ಶನಿವಾರ ಬೆಳಿಗ್ಗೆ 8 ಘಂಟೆಯ ವರೆಗೆ ಬಿದ್ದ ಮಳೆ. ಈ ವಾರ.		ಇದೇವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ.		1907ನೆಯ ವರ್ಷದ ಜನವರಿ 1ನೆಯ ತಾರೀಖಿನಿಂದ ಈ ವಾರದ ಕೊನೆಯ ವರೆಗೆ. ಈ ವರ್ಷ.		ಹಿಂದಿನ ಹತ್ತು ವರ್ಷಗಳ ಸರಾಸರಿ.		4ನೆಯ ಮದ್ದದ ಹೆಚ್ಚು (+) ಕಡಮೆ (—)ಯನ್ನು 5ನೆಯ ಮದ್ದದೊಂದಿಗೆ ಹೋಲಿಸಿದ ಲೆಕ್ಕ.		ರೂಪಾಯಿ ಒಂದಕ್ಕೆ ಎಷ್ಟು ಸೇರಿನಂತೆ ಧಾನ್ಯದ ಧಾರಣೆಯಿತ್ತು ಎಂಬುದು ಮತ್ತು ಬಜಾರಿನಲ್ಲಿ ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗಳು.	ಈ ವಾರ ಸೇರುಗಳು.	ಕಳೆದ ವಾರ ಸೇರುಗಳು.	ಪಕ್ಷ ಒಂದಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ; ಸೇರುಗಳು.
1	2		3		4		5		6		7			
	I.	c.	I.	c	I.	c.	I.	c.	I.	c.				
ಬೆಂಗಳೂರು ದಂಡು ...	...	...	...	...	...	...	...	...	...	...				
ಸಿಟಿ ಮತ್ತು ತಾಲ್ಲೂಕು ...	...	·04	...	...	...	..	...	...	...	...				
ಹೊಸಕೋಟೆ ...	...	...	...	4	...	.	...	4	— 0	4				
ದೊಡ್ಡಬಳ್ಳಾಪುರ ...	...	14	...	...	...	14	...	...	+ 0	14				
ನೆಲಮಂಗಲ ...	...	19	...	...	...	19	...	...	+ 0	19				
ಕಾನಕಾನಹಳ್ಳಿ ...	...	...	...	6	...	...	...	6	— 0	6				
ಮಾಗಡಿ ...	...	...	...	...	...	...	...	...	...	...	ಅಕ್ಕಿ ದುಯಮ್	7·00	7·00	9·06
ಚನ್ನಪಟ್ಣ ...	...	...	...	10	...	...	...	10	— 0	10	ತರಹ			
ಆನೆಕಲ್ಲು ...	...	2	...	4	...	2	...	4	— 0	2	ರಾಗಿ	15·50	15·50	19·49
ದೇವನಹಳ್ಳಿ ...	2	26	...	2	2	26	...	2	+ 2	24	ಹುರುಳಿ	10·50	10·50	...
ಕ್ಲೋಸ್‌ಪೇಟೆ ...	...	...	...	4	...	...	...	4	— 0	4	ಕಡಲೆ	9·00	9·00	8·18
ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	26	...	3	...	26	...	3	+ 0	23				
ಕೋಲಾರ ...	...	...	...	1	...	...	...	1	— 0	1	ಅಕ್ಕಿ ದುಯಮ್	7·50	7·50	8·85
ಬೌರಿಂಗ್‌ಪೇಟೆ ...	...	...	...	1	...	...	...	1	— 0	1	ತರಹ			
ಚಿಂತಾಮಣಿ ...	...	83	...	2	...	83	...	2	+ 0	81	ರಾಗಿ	15·00	16·00	18·70
ಮುಳಬಾಗಲು ...	...	...	...	3	...	...	...	3	— 0	3	ಹುರುಳಿ	11·00	12·00	...
ಶಿಡ್ಲಘಟ್ಟ ...	2	72	...	9	2	72	...	9	+ 2	63	ಕಡಲೆ	9·00	9·00	8·32
ಚಿಕ್ಕಬಳ್ಳಾಪುರ ...	...	55	...	6	...	55	...	6	+ 0	49				
ಬಾಗೆಪಲ್ಲಿ ...	...	63	...	...	...	63	...	...	+ 0	63				
ಗೌರಿಬಿದನೂರು ...	...	60	..	1	...	60	...	1	+ 0	59				
ಮಾಲೂರು ...	1	23	...	...	1	23	...	...	+ 1	23				
ಶ್ರೀನಿವಾಸಪುರ ...	...	19	...	1	...	19	...	1	+ 0	18				
ಗುಡಿಬಂಡೆ ...	1	61	...	...	1	61	...	...	+ 1	61				
ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	76	...	2	...	76	...	2	+ 0	74				

ಡಿಸ್ಟ್ರಿಕ್ಟು	ಡಿಸ್ಟ್ರಿಕ್ಟು ಮತ್ತು ಸ್ಥಳ.	ಶನಿವಾರ ಬೆಳಿಗ್ಗೆ 8 ಘಂಟೆಯ ವರೆಗೆ ಬಿದ್ದ ಮಳೆ.										ರೂಪಾಯಿ ಒಂದಕ್ಕೆ ಎಷ್ಟು ಸೇರಿನಂತೆ ಧಾನ್ಯದ ಧಾರಣೆಯಿತ್ತು ಎಂಬುದು ಮತ್ತು ಬಜಾರಿನಲ್ಲಿ ಧಾನ್ಯಗಳ, ಧಾರಣೆಗಳ ಹೆಚ್ಚು ಕಡಮೆಗಳು.			
		ಈ ವಾರ.		ಇದೇವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ.		1907ನೆಯ ವರ್ಷದ ಜನವರಿ 1ನೆಯ ತಾರೀಖಿನಿಂದ ಈ ವಾರದ ಕೊನೆಯ ವರೆಗೆ. ಈ ವರ್ಷ.		ಹಿಂದಿನ ಹತ್ತು ವರ್ಷಗಳ ಸರಾಸರಿ.		4ನೆಯ ಮದ್ದದ ಹೆಚ್ಚು (+) ಕಡಮೆ (—)ಯನ್ನು 5ನೆಯ ಮದ್ದದೊಂದಿಗೆ ಹೋಲಿಸಿದ ಲೆಕ್ಕ.					
	1	2		3		4		5		6		7			
		I.	c.	I.	c.	I.	c.	I.	c.	I.	c.		ಈ ವಾರ ಸೇರುಗಳು	ಕಳೆದ ವಾರ ಸೇರುಗಳು	ಪಕ್ಷ ಒಂದಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ; ಸೇರುಗಳು
ತುಮಕೂರು.	ತುಮಕೂರು ...	...	17	...	3	...	17	...	3	+ 0	14				
	ಮಧುಗಿರಿ ...	...	42	...	7	...	42	...	7	+ 0	35				
	ಚಿಕ್ಕನಾಯಕನಹಳ್ಳಿ ...	...	...	...	...	...	...	...	...	...	...				
	ಸೀರ ...	...	38	...	8	...	38	...	8	+ 0	30				
	ಗುಬ್ಬಿ ...	...	6	...	1	...	6	...	1	+ 0	5				
	ತಿಪಟೂರು ...	...	48	...	...	...	48	...	...	+ 0	48				
	ಪಾವಗಡ ...	...	12	...	...	...	12	...	...	+ 0	12	ಅಕ್ಕಿ ದುಯಂ	8·50	7·50	8·52
	ಕುಣಿಗಲು ...	...	45	...	...	...	45	...	...	+ 0	45	ತರಹ			
	ಕೊರಟಗೆರೆ ...	...	...	...	4	...	...	...	4	— 0	4	ರಾಗಿ	20·00	20·00	21·40
	ತುರುವೇಕೆರೆ ...	...	...	...	...	...	...	...	...	...	...	ಹುರುಳಿ	12·00	12·00	...
												ಕಡಲೆ	9·00	9·00	8·44
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	21	...	2	...	21	...	2	+ 0	19				
ಮೈಸೂರು.	ಮೈಸೂರು ...	...	...	...	14	...	...	...	14	— 0	14	ಅಕ್ಕಿ ದುಯಂ	8·50	8·50	10·55
	ಚಾಮರಾಜನಗರ ...	...	...	...	2	...	...	...	2	— 0	2	ತರಹ			
	ಶ್ರೀರಂಗಪಟ್ಟಣ ...	...	11	...	...	...	11	...	...	+ 0	11	ರಾಗಿ	14·00	16·00	18·56
	ಹುಣಸೂರು ...	...	...	...	...	...	...	...	...	...	...	ಹುರುಳಿ	13·00	13·50	...
	ಯಡತೊರೆ ...	...	...	...	...	...	...	...	...	...	...	ಕಡಲೆ	9·00	9·00	9·10
	ಹೆಗ್ಗಡದೇವನಕೋಟೆ ...	...	...	...	...	...	...	...	...	...	...				
	ಗುಂಡ್ಲುಪೇಟೆ ...	...	...	...	2	...	...	...	2	...	2				
	ನಂಜನಗೂಡು ...	...	...	...	...	...	...	...	...	...	...				
	ತಿ. ನರಸೀಪುರ ...	...	...	...	...	...	...	...	...	...	...				
	ಮಳವಳ್ಳಿ ...	...	...	...	...	...	...	...	...	...	...				
	ಮಂಡ್ಯ ...	...	...	...	...	...	...	...	...	...	...				
	ಕೃಷ್ಣರಾಜಪೇಟೆ ...	...	...	...	...	...	...	...	...	...	...				
	ನಾಗಮಂಗಲ ...	...	42	...	...	...	42	...	...	+ 0	42				
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	4	...	1	...	4	...	1	+ 0	3				
ಹಾಸನ.	ಹಾಸನ ...	...	...	...	...	...	...	...	...	...	...	ಅಕ್ಕಿ ದುಯಂ	10·00	9·50	9·95
	ಮಂಜರಾಬಾದು(ಸಕಲೇಶಪುರ)	...	...	...	...	...	...	...	...	...	...	ತರಹ			
	ಅರಕಲಗೂಡು ...	...	42	...	...	...	42	...	...	+ 0	42	ರಾಗಿ	18·00	16·00	20·99
	ಬೇಲೂರು ...	...	...	...	...	...	...	...	...	...	...	ಹುರುಳಿ	16·00	16·00	...
	ಚನ್ನರಾಯಪಟ್ಟಣ ...	...	...	...	...	...	...	...	...	...	...	ಕಡಲೆ	8·00	8·50	8·30
	ಅರಸೀಕೆರೆ ...	...	...	...	...	...	...	...	...	...	...				
	ಹೊಳೆನರಸೀಪುರ ...	1	80	...	...	1	80	...	...	+ 1	80				
	ಆಲೂರು ...	...	...	...	...	...	...	...	...	...	...				
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	28	...	...	...	28	...	...	+ 0	28				

ಡಿಸ್ಟ್ರಿಕ್ಟು ಮತ್ತು ಸ್ಥಳ.	ಶನಿವಾರ ಬೆಳಿಗ್ಯೆ 8 ಘಂಟೆಯ ವರೆಗೆ ಬಿದ್ದ ಮಳೆ. ಈ ವಾರ.		ಇದೇವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ.		1907ನೆಯ ವರ್ಷದ ಜನವರಿ 1ನೆಯ ತಾರೀಖಿನಿಂದ ಈ ವಾರದ ಕೊನೆಯ ವರೆಗೆ. ಈ ವರ್ಷ.		ಹಿಂದಿನ ಹತ್ತು ವರ್ಷಗಳ ಸರಾಸರಿ.		4ನೆಯ ವುದ್ದದ ಹೆಚ್ಚು (+) ಕಡಮೆ (—) ಯನ್ನು 5ನೆಯ ವುದ್ದದೊಂದಿಗೆ ಹೋಲಿಸಿದ ಲೆಕ್ಕ.		ರೂಪಾಯಿ ಒಂದಕ್ಕೆ ಎಷ್ಟು ಸೇರಿನಂತೆ ಧಾನ್ಯದ ಧಾರಣೆಯಿತ್ತು ಎಂಬುದು ಮತ್ತು ಬಜಾರಿನಲ್ಲಿ ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗಳು.	ಈ ವಾರ ಸೇರುಗಳು	ಕಳೆದ ವಾರ ಸೇರುಗಳು	ಪಕ್ಷ ಒಂದಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ ; ಸೇರುಗಳು
1	2		3		4		5		6		7			
	I.	c.	I.	c.	I.	c.	I.	c.	I.	c.				
ಶಿವಮೊಗ್ಗ ...	...	14	...	...	...	...	...	...	...	...				
ಚನ್ನಗಿರಿ ...	...	40	...	...	...	...	...	...	...	...				
ಹೊನ್ನಾಳಿ ...	...		...	...	...	...	...	...	...					
ಶಿಕಾರಿಪುರ ...	...	...	...	...	...	...	...	...	...	...				
ಸೊರಬ ...	...	3	...	...	...	...	...	...	...	...				
ಸಾಗರ ...	...	24	...	...	...	...	...	...	...	...				
ನಗರ (ಕಲ್ಲೂರುಕಟ್ಟೆ) ...	...	...	...	...	...	...	...	...	...	...	ಅಕ್ಕಿ ದುಯಂ ತರಹ	10·50	10·00	11·49
ತೀರ್ಥಹಳ್ಳಿ ...	...	4	...	...	...	1	...	...	+ 0	1				
ಕುಂಸಿ ...	...	7	...	...	...	...	...	...	...	...	ರಾಗಿ	17·00	17·00	25·20
											ಹುರುಳಿ	10·00	10·00	....
ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	10	...	...	...	...	...	...	...					
ಚಿಕ್ಕಮಗಳೂರು ...	...	19	...	3		19		3	+ 0	16	ಅಕ್ಕಿ ದುಯಂ ತರಹ	8·75	8·50	10·70
ಕಡೂರು ...	...	...	...	3	...	...	...	3	— 0	3				
ತರೀಕೆರೆ ...	...	...	...	...	...	...	...	...	...	...	ರಾಗಿ	18·00	19·00	21·70
ಕೊಪ್ಪ ...		41	...	...	...	41	...	...	+ 0	41	ಹುರುಳಿ	11·00	11·00	...
ಮೂಡಿಗೆರೆ ...	...	...	...	...	...	...	...	...	...	.	ಕಡಲೆ	9·00	9·00	8·20
ಯಡೆಹಳ್ಳಿ ...	...	...	...	...	...	...	...	...	...	...				
ಶೃಂಗೇರಿ ...	...	19	...	...	...	19	...	...	+ 0	19				
ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	11	...	1	...	11	...	1	+ 0	10				
ಚಿತ್ರದುರ್ಗ ...	...	...	...	...	...	...	...	...	...	...	ಅಕ್ಕಿ ದುಯಂ ತರಹ	9·00	8·00	9·90
ಚೆಳ್ಳಕೆರೆ ...	...	93	...	...	...	...	...	...	...	...				
ಹಿರಿಯೂರು ...	...	80	...	3	...	...	...	3	— 0	3	ರಾಗಿ	20·00	20·00	22·70
ಹೊಳಲ್ಕೆರೆ ...	2	6	...	...	...	...	...	...	...	...	ಹುರುಳಿ	12·00	10·00	...
ದಾವಣಗೆರೆ ...	...	...	...	...	...	...	...	...	...	...	ಜೋಳ	20·00	20·00	20·77
ಮೊಳಕಾಲ್ಮುರು ...	...	...	...	...	...	...	...	...	...	...	ಕಡಲೆ	8·00	8·00	8·90
ಜಗಳೂರು ...	...	...	...	...	...	...	...	...	...	...				
ಹೊಸದುರ್ಗ ...	...	95	...	...	...	...	...	...	...	...				
ಹರಿಹರ ...	...	11	...	...	...	11	...	...	+ 0	11				
ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...		54	...	...	...	1	...	...	+ 0	1				
ಸಂಸ್ಥಾನದಲ್ಲಿ ಸರಾಸರಿ ...	...	29	...	1		21	...	1	+ 0	20				

ಡಿಸ್ಟ್ರಿಕ್ಟು ರಿಪೋರ್ಟುಗಳು.

8. ಬಜಾರಿನಲ್ಲಿ ಸರಬರಾಯಿ ಹ್ಯಾಗಿದೆ.
9. ವ್ಯವಸಾಯ ಕಾರ್ಯದ ಅಭಿವೃದ್ಧಿ, ನಿಂತಿರುವ ಪೈರುಗಳ ಸ್ಥಿತಿ, ಬೆಳೆಗಳು ಎಷ್ಟಾಗಬಹುದೆಂಬ ನಿರೀಕ್ಷೆ, ಮತ್ತು ಸುಗ್ಗಿಯ ಕಾಲದಲ್ಲಿ ಉಂಟಾಗಬಹುದಾದ ಹುಟ್ಟುವಳಿ, ಹುಳುಗಳು ಅಥವಾ ಸ್ವಾಭಾವಿಕವಾದ ಇತರ ವಿಪತ್ತುಗಳಿಂದ ಪೈರುಗಳಿಗೆ ಉಂಟಾದ ನಷ್ಟ.
10. ಕಾಲದ ಆಯತಿ, ಮಳೆಯು ಸಾಲದೆ ಇರುವ ಪ್ರದೇಶಗಳು, ದುರ್ಭಿಕ್ಷ ವುಂಟಾಗಿರುವ ಸ್ಥಳಗಳು, ರಿಲೀಫ್ ಯಾ ಸಹಾಯವನ್ನು ಪಡೆಯುತ್ತಿರುವ ಜನರ ಸಂಖ್ಯೆ, ಮತ್ತು ಆಹಾರ ಸಾಮಗ್ರಿಯ ಸ್ಥಿತಿ.
11. ಜನಗಳ ಆರೋಗ್ಯ.
12. ವ್ಯವಸಾಯಕ್ಕೆ ಸಂಬಂಧಿಸುವ ಮಾಲುಗಳು, ದನಗಳಿಗೆ ಮೇಯುವುದಕ್ಕೆ ಹುಲ್ಲುಕಾವಲು ಇಲ್ಲದೇ ಹೋಗುವುದು, ಮೇವು ಮುಂತಾದುವುಗಳ ವಿಷಯವಾಗಿ ಷರಾಗಳು.

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (ದಂಡು).

ಆಹಾರ ಧಾನ್ಯಗಳ ಧಾರಣೆಗಳು:—

		ಮಾಮೂಲಾಗಿ.	ಚಾಲ್ತಿ.	
ಅಕ್ಕಿ ರೂಪಾಯಿ 1ಕ್ಕೆ	... ...	10 ರಿಂದ 11.	7 ರಿಂದ 7½.	ಸೇರುಗಳು.
ರಾಗಿ ,,	... ...	25 ರಿಂದ 30.	16½ ಯಿಂದ 17.	

ವ್ಯವಸಾಯ ಕಾರ್ಯ — ರಾಗಿ ಕುಯ್ಯಲಾಗಿದೆ.

ನಿಂತಿರುವ ಪೈರು ಸುಮಾರಾಗಿವೆ.

ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಸಾಕು.

ಬೆಂಗಳೂರು ಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ—ವೈಶಾಖಿ ಭತ್ತವನ್ನು ಬಿತ್ತುವುದಕ್ಕಾಗಿ ಹೊಸಕೋಟೆಯಲ್ಲಿ ತರೀ ಜಮೀನುಗಳನ್ನು ಉಳುತ್ತಾ ಇದ್ದಾರೆಂದು ರಿಪೋರ್ಟಾಗಿದೆ.

ನಿಂತಿರುವ ಪೈರುಗಳು—ಒಳ್ಳೇ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರುಗಳು— ಕುಷ್ಕೀ ಪೈರುಗಳು ವಾರದಲ್ಲಿ ಕುಯ್ಯಲಾಗಿದೆ; ಡಿಸ್ಟ್ರಿಕ್ಟಿನಲ್ಲೆಲ್ಲಾ ರಾಗಿ ಕುಯ್ಯಲಾಗುತ್ತಿದೆ; ಮತ್ತು ದೇವನಹಳ್ಳಿ ತಾಲ್ಲೂಕಿನಲ್ಲಿ ಆಲೂಗೆಡ್ಡೆಯನ್ನು ಅಗೆದು ತಗೆಯುತ್ತಾ ಇದ್ದಾರೆ.

ಪೈರುಗಳ ಉತ್ಪತ್ತಿಯ ಅಂದಾಜು 8 ರಿಂದ 10 ಆಣೆವರಿಗೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಾಕಾದಷ್ಟು ಸಿಕ್ಕುತ್ತವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆ.

ಬಿತ್ತನೆಯಾದ ಪೈರುಗಳು—ಮಾಲೂರು ತಾಲ್ಲೂಕು ಹೊರ್ತು ಮಿಕ್ಕ ತಾಲ್ಲೂಕುಗಳಲ್ಲೆಲ್ಲಾ ವೈಶಾಖಿ ಭತ್ತ; ಮತ್ತು ಬಾಗೇಪಲ್ಲಿಯಲ್ಲಿ ಜೋಳ.

ಕುಯ್ಯಲಾದ ಪೈರುಗಳು—ಶಿಡ್ಲಘಟ್ಟ ಮತ್ತು ಮಾಲೂರು ತಾಲ್ಲೂಕುಗಳು ಹೊರ್ತು ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿ ಕಾರ್ತೀಕ ಭತ್ತ; ಶ್ರೀನಿವಾಸಪುರದಲ್ಲಿ ರಾಗಿ; ಚಿಕ್ಕಬಳ್ಳಾಪುರದಲ್ಲಿ ಹುಚ್ಚೆಳ್ಳು; ಮತ್ತು ಗೋರೀಬಿದನೂರಿನಲ್ಲಿ ಕಬ್ಬು ಮತ್ತು ಕಡಲೇಕಾಯಿ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ಮುಳಬಾಗಲ್ ಊರಿನಲ್ಲಿ 5 ಜನರು ಕಾಲರಾ ಹಿಡಿದು ಇಬ್ಬರು ಮೃತಪಟ್ಟದ್ದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಕುಯ್ಯಲು, ಮತ್ತು ವೈಶಾಖಿ ಭತ್ತ ಬಿತ್ತುವದು ನಡೆಯುತ್ತಾ ಇದೆ.

ನಿಂತಿರುವ ಪೈರುಗಳು—ಒಳ್ಳೇ ಸ್ಥಿತಿಯಲ್ಲಿವೆ.

ಬಿತ್ತನೆಯಾದ ಪೈರುಗಳು—ಚಿಕ್ಕನಾಯಕನಹಳ್ಳಿ, ಕುಣಿಗಲ್ ಮತ್ತು ತುರುವೇಕೆರೆ ಹೊರ್ತು ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿ ಭತ್ತ; ಪಾವಗಡ ಮತ್ತು ಕೊರಟಗೆರೆಯಲ್ಲಿ ಜೋಳ; ಕೊರಟಗೆರೆಯಲ್ಲಿ ಕಡಲೆ.

ಕುಯ್ಯಲಾದ ಪೈರುಗಳು—ಗುಬ್ಬಿ ಮತ್ತು ತಿಪಟೂರಿನಲ್ಲಿ ರಾಗಿ; ತುಮಕೂರು, ತಿಪಟೂರು, ಕುಣಿಗಲ್ ಮತ್ತು ಕೊರಟಗೆರೆ ಹೊರ್ತು ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿ ಹುರ್ಳಿ; ಚಿಕ್ಕನಾಯಕನಹಳ್ಳಿ, ಕುಣಿಗಲ್ ಮತ್ತು ತುರುವೇಕೆರೆ ಹೊರ್ತು ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿ ಭತ್ತ; ಮಧುಗಿರಿ, ಚಿಕ್ಕನಾಯಕನಹಳ್ಳಿ ಮತ್ತು ಶಿರಾದಲ್ಲಿ ಹರಳು; ಚಿಕ್ಕನಾಯಕನಹಳ್ಳಿ, ಶಿರಾ ಮತ್ತು ಪಾವಗಡದಲ್ಲಿ ಅವರೆ; ಶಿರಾದಲ್ಲಿ ತೊಗರಿ, ಮೆಣಸಿನಕಾಯಿ, ಕಬ್ಬು ಮತ್ತು ಹುಚ್ಚೆಳ್ಳು; ಮತ್ತು ಹಾರಕ ಮತ್ತು ನವಣೆ ತಿಪಟೂರಿನಲ್ಲಿ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ತಿಪಟೂರು ತಾಲ್ಲೂಕು ಹೊನ್ನವಳ್ಳಿ ಹೋಬಳಿಯಲ್ಲಿ ಜ್ವರ ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಗುಂಡ್ಲುಪೇಟೆ ಮತ್ತು ನಂಜನಗೂಡು ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಾರು ಪೈರು ಮಾಡಲು ಭೂಮಿಯನ್ನು ಉತ್ತು, ಗೊಬ್ಬರಾ ಹಾಕುತ್ತಾ ಇದ್ದಾರೆ.

ನಿಂತಿರುವ ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟು ಆಗಿದೆ.

ಕುಯ್ಯಲಾದ ಪೈರುಗಳು ಉತ್ಪತ್ತಿಯ ಅಂದಾಜಾ—

ಚಾಮರಾಜನಗರ—ಉದ್ದು, ಹೆಸರು ಮತ್ತು ಹಲಸಂದಿ;

ಶ್ರೀರಂಗಪಟ್ಟಣದಲ್ಲಿ—ಭತ್ತ ಮತ್ತು ರಾಗಿ 12 ಆಣೆ;

ತೊಗರಿ ಮತ್ತು ಅವರೆ 8 ಆಣೆ;

ಕೃಷ್ಣರಾಜಪೇಟೆ—ಭತ್ತ 10 ರಿಂದ 12 ಆಣೆ ವರಿಗೆ;

ಹೆಗ್ಗಡದೇವನಕೋಟೆ, ಎಡತೊರೆ ಮತ್ತು ಮಳವಳ್ಳಿ } ಭತ್ತ;

ನಂಜನಗೂಡು ಮತ್ತು ಗುಂಡ್ಲುಪೇಟೆಯಲ್ಲಿ ಭತ್ತ ಮತ್ತು ಹುರುಳಿ;

ತಿ॥ ನರಸೀಪುರದಲ್ಲಿ—ಭತ್ತ ಮತ್ತು ಕಬ್ಬು; ಮತ್ತು

ನಾಗಮಂಗಲದಲ್ಲಿ ಹುಚ್ಚೆಳ್ಳು ಮತ್ತು ಹುರುಳಿ;

ಹಿಂದಿನ ವಾರಗಳಲ್ಲಿ ಬಿದ್ದ ಮಳೆಯಿಂದ ನಂಜನಗೂಡು ಮತ್ತು ನಾಗಮಂಗಲ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕುಷಿ ಪೈರುಗಳು ಸ್ವಲ್ಪಮಟ್ಟಿಗೆ ನಷ್ಟವನ್ನು ಹೊಂದಿವೆ.

10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸಿ ಸಾಕಾದಷ್ಟು ಇವೆಯೆಂದು ರಿಪೋರ್ಟು ಆಗಿದೆ.

11. ಕೆಲವು ತಾಲ್ಲೂಕುಗಳಲ್ಲಿ ಜ್ವರವು ಮತ್ತು ಮೈಸೂರಿನ ಕೆಲವು ಭಾಗಗಳಲ್ಲಿ ಕಾಲರಾ ಇರುವದು ಹೊರ್ತು, ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಕಣಗಳನ್ನು ತಯಾರು ಮಾಡುತ್ತಾ ಇದ್ದಾರೆ.

ನಿಂತಿರುವ ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರುಗಳು—ಎಲ್ಲಾ ತಾಲ್ಲೂಕುಗಳಲ್ಲಿಯೂ ಭತ್ತ; ಹಾಸನ, ಚನ್ನರಾಯಪಟ್ಟಣ ಮತ್ತು ಹೊಳೇ ನರಸೀಪುರ ತಾಲ್ಲೂಕುಗಳಲ್ಲಿ ತೊಗರಿ; ಅರಕಲಗೂಡು, ಚನ್ನರಾಯಪಟ್ಟಣ ಮತ್ತು ಅರಸೀಕೆರೆ ತಾಲ್ಲೂಕುಗಳಲ್ಲಿ ಹುರುಳಿ; ಬೇಲೂರು ಮತ್ತು ಚೆನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ಕಬ್ಬು; ಅರಸೀಕೆರೆ ಮತ್ತು ಹೊಳೇನರಸೀಪುರ ತಾಲ್ಲೂಕುಗಳಲ್ಲಿ ಹರಳು; ಮತ್ತು ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಉದ್ದು, ಹೆಸರೂ ಮತ್ತು ಹುಚ್ಚೆಳ್ಳು;

ಉತ್ಪತ್ತಿಯ ಅಂದಾಜಾ:—

ಭತ್ತ 12 ಆಣೆ; ಹುರುಳಿ 8 ರಿಂದ 12 ಆಣೆ ವರಿಗೆ.

ಅರಸೀಕೆರೆ ತಾಲ್ಲೂಕಿನಲ್ಲಿ ಹೆಚ್ಚಾಗಿ ಬಿದ್ದ ಮಳೆಯಿಂದ ಮೆಣಸಿನಕಾಯಿ ಮತ್ತು ಹರಳು ಕೆಟ್ಟವೆ.

10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ಹಾಸನ, ಬೇಲೂರು ಮತ್ತು ಅರಸೀಕೆರೆ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪ್ಲೇಗೂ, ಅರಕಲಗೂಡು ತಾಲ್ಲೂಕು ಕೆಲವು ಭಾಗಗಳಲ್ಲಿ ಕಾಲರಾ ಮತ್ತು ಮಂಜರಾಬಾದ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಸಿಡುಬು ಇರುವದೆಂದು ರಿಪೋರ್ಟು ಆಗಿರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಶಿವಮೊಗ್ಗ, ಶಿಕಾರಿಪುರ, ಸೊರಬ ಮತ್ತು ನಗರ ತಾಲ್ಲೂಕುಗಳಲ್ಲಿ ಭೂಮಿಯನ್ನು ಉಳುತ್ತಾ ಇದ್ದಾರೆ.

ನಿಂತಿರುವ ಪೈರುಗಳು—ಹೊನ್ನಾಳಿ ತಾಲ್ಲೂಕಿನಲ್ಲಿ ಅರಳೆ ಒಳ್ಳೇ ಸ್ಥಿತಿಯಲ್ಲಿದೆ. ತೊಗರಿ, ಕಡಲೆ, ಅವರೇ, ಹೆಸರು, ಹುರುಳಿ ಮತ್ತು ಗೋಧಿ ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರುಗಳು—ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಭತ್ತದ ಮತ್ತು ಸಾಗರ ತಾಲ್ಲೂಕಿನಲ್ಲಿ ರಾಗಿಯ ಕುಯ್ಯಲು ಮುಗಿದು ಇದೆ; ಸಾಗರ ಮತ್ತು ನಗರ ತಾಲ್ಲೂಕುಗಳಲ್ಲಿ ಭತ್ತದ ಕುಯ್ಯಲು ಮುಗಿಯುತ್ತಾ ಬರುತ್ತಿದೆ; ಶಿವಮೊಗ್ಗ ತಾಲ್ಲೂಕಿನಲ್ಲಿ ತೊಗರಿ ಮತ್ತು ಸೊರಬ ತಾಲ್ಲೂಕಿನಲ್ಲಿ ಹುರುಳಿ ಇವುಗಳ ಕುಯ್ಯಲು ಆಗುತ್ತಾ ಇದೆ.

10. ಕಾಲದ ಆಯುತಿಯು ಚೆನ್ನಾಗಿದೆ. ಬೇಕಾದಷ್ಟು ಆಹಾರ ಜಿನಸಿ ಸಿಕ್ಕುತ್ತವೆ.

11. ಸೊರಬ, ಸಾಗರ, ನಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಸಿಡುಬು ಇರುವದು ಹೊರ್ತು ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ತರೀಕೆರೆಯಲ್ಲಿ ಭತ್ತ, ಕಬ್ಬು, ಹುರುಳಿ, ಹರಳು, ಅವರೆ, ಜೋಳ; ಕೊಪ್ಪದಲ್ಲಿ ಕಾಫಿ, ಅಡಿಕೆ, ಕಬ್ಬು, ಮೆಣಸು ಮತ್ತು ಭತ್ತ; ಚಿಕ್ಕಮಗಳೂರಿನಲ್ಲಿ ಕಬ್ಬು; ಕಡೂರಿನಲ್ಲಿ ಭತ್ತ, ಗೋಧಿ, ಹುರುಳಿ, ಹರಳು ಮತ್ತು ಕಬ್ಬು; ಎಡೆಹಳ್ಳಿ ಮತ್ತು ಶ್ರಿಂಗೇರಿಯಲ್ಲಿ ಭತ್ತ ಮತ್ತು ಅಡಿಕೆ; ಮತ್ತು ಮೂಡಿಗೆರೆಯಲ್ಲಿ ಭತ್ತ, ಯಾಲಕ್ಕಿ, ಅಡಿಕೆ ಮತ್ತು ಕಾಫಿ ಇವುಗಳು ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟು ಆಗಿದೆ.

ಕುಯ್ಯಲಾದ ಪೈರುಗಳು—ತರೀಕೆರೆಯಲ್ಲಿ ಭತ್ತ, ರಾಗಿ, ಕೊತ್ತುಂಬರಿ, ನವಣೆ, ಸಾವೆ ಮತ್ತು ಜೋಳ; ಕೊಪ್ಪದಲ್ಲಿ ಅಡಿಕೆ, ಭತ್ತ ಮತ್ತು ಕಾಫಿ; ಚಿಕ್ಕಮಗಳೂರಿನಲ್ಲಿ ಭತ್ತ; ಕಡೂರಿನಲ್ಲಿ ಭತ್ತ, ಹುರುಳಿ, ಕೊತ್ತುಂಬರಿ, ಹುಚ್ಚೆಳ್ಳು ಮತ್ತು ಜೋಳ; ಮೂಡುಗೆರೆಯಲ್ಲಿ ಭತ್ತ, ರಾಗಿ, ಕಾಫಿ, ಅಡಿಕೆ ಮತ್ತು ಯಾಲಕ್ಕಿ; ಎಡೇಹಳ್ಳಿ ಮತ್ತು ಶ್ರಿಂಗೇರಿಯಲ್ಲಿ ಭತ್ತ ಮತ್ತು ಅಡಿಕೆ ಇವುಗಳು ಕುಯ್ಯಲು ಆಗುತ್ತಿವೆ.

ಉತ್ಪತ್ತಿಯ ಅಂದಾಜು:—

ತರೀಕೆರೆ	ಭತ್ತ, ರಾಗಿ, ಕೊತ್ತುಂಬರಿ, ನವಣೆ, ಸಾವೆ ಮತ್ತು ಜೋಳ	8 ರಿಂದ 12 ಆಣೆ ವರಿಗೆ.
ಕೊಪ್ಪ	ಅಡಿಕೆ, ಭತ್ತ ಮತ್ತು ಕಾಫಿ	12 ಆಣೆ.
ಚಿಕ್ಕಮಗಳೂರು	ಭತ್ತ	ಡಿಟೋ
ಕಡೂರು	ಭತ್ತ, ಜೋಳ, ರಾಗಿ	12 ಆಣೆ.
	ಕೊತ್ತುಂಬರಿ	6 ರಿಂದ 10 ಆಣೆ ವರಿಗೆ.
	ಹುರುಳಿ	8 ಆಣೆ.
	ಕಬ್ಬು	12 ಆಣೆ.
ಮೂಡಗೆರೆ	ಭತ್ತ, ಅಡಿಕೆ	12 ಆಣೆ.
	ರಾಗಿ	8 ಆಣೆ.
	ಕಾಫಿ ಮತ್ತು ಯಾಲಕ್ಕಿ	4 ರಿಂದ 8 ಆಣೆ ವರಿಗೆ.
ಎಡೆಹಳ್ಳಿ	ಭತ್ತ	12 ಆಣೆ.
ಶ್ರಿಂಗೇರಿ	ಭತ್ತ ಮತ್ತು ಅಡಿಕೆ	12 ಆಣೆ.

10. ಕಾಲದ ಆಯುತಿಯು ಚೆನ್ನಾಗಿದೆ.

11. ಕಡೂರು ತಾಲ್ಲೂಕಿನ ಚಿ...ಂಗಳ ಹಳ್ಳಿಯಲ್ಲಿ ಪ್ಲೇಗೂ, ಚಿಕ್ಕಮಗಳೂರಿನಲ್ಲಿ ಜ್ವರವೂ ಮತ್ತು ಮೂಡಗೆರೆ, ಕೊಪ್ಪ ತಾಲ್ಲೂಕುಗಳ ಕೆಲವು ಹಳ್ಳಿಗಳಲ್ಲಿಯೂ ಮತ್ತು ಶ್ರಿಂಗೇರಿಯ ಕೆಲವು ಭಾಗಗಳಲ್ಲಿಯೂ ಸಿಡುಬೂ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆಯೆಂದು ರಿಪೋರ್ಟಾಗಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆ.

ಬಿತ್ತನೆಯಾದ ಪೈರುಗಳು—ಹಿರಿಯೂರು ಮತ್ತು ಮೊಳಕಾಲ್ಮುರು ತಾಲ್ಲೂಕುಗಳಲ್ಲಿ ಭತ್ತ.

ಕುಯ್ಯಲಾದ ಪೈರುಗಳು—ಚೆಳ್ಳಕೆರೆ, ಹಿರಿಯೂರು ಮತ್ತು ಮೊಳಕಾಲ್ಮುರು ತಾಲ್ಲೂಕುಗಳಲ್ಲಿ ಭತ್ತ; ಉತ್ಪತ್ತಿ 8 ರಿಂದ 12 ಆಣೆ ವರಿಗೆ.

ಚಿತ್ರದುರ್ಗ ಮತ್ತು ದಾವಣಗೆರೆ ತಾಲ್ಲೂಕುಗಳಲ್ಲಿ ಕಬ್ಬು; ಉತ್ಪತ್ತಿ 4 ರಿಂದ 8 ಆಣೆ ವರಿಗೆ.

ಚಿತ್ರದುರ್ಗ ತಾಲ್ಲೂಕಿನಲ್ಲಿ ಜೋಳ, ಹರಳು, ಮತ್ತು ಹರಳೇ ಉತ್ಪತ್ತಿ 8 ಆಣೆ.

ಹೊಸದುರ್ಗ ತಾಲ್ಲೂಕಿನಲ್ಲಿ ಹುರುಳಿ; ಉತ್ಪತ್ತಿ 10 ರಿಂದ 12 ಆಣೆ ವರಿಗೆ.

10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು, 1907ನೆಯ ವರ್ಷದ ಜನವರಿ 11ನೆಯ ತಾರೀಖು. } ಎ. ರಂಗಸ್ವಾಮಿ ಐಯ್ಯಂಗಾರ್, ರೆವಿನ್ಯೂ ಕಮಿಷನರ.

ಮೈಸೂರು ಸಂಸ್ಥಾನದ ಅಗ್ರಿಕಲ್ಚರಲ್ ಇಲಾಖೆ.

ಅಗ್ರಿಕಲ್ಚರಲ್ ಕೆಮಿಸ್ಟರವರ ಐದನೇ (ಅಂದರೆ 1903—1904ನೆ ಇಸವಿಯ) ರಿಪೋರ್ಟು.

ಅಗ್ರಿಕಲ್ಚರಲ್ ಇಲಾಖೆಯ ಕನ್ನಡ ಮತ್ತು ಇಂಗ್ಲೀಷ್ ರಿಪೋರ್ಟುಗಳೂ ಬುಲೆಟಿನ್ನುಗಳೂ
ಅವುಗಳ ಸಂಗ್ರಹವಿರುವ ವರಿವಿಗೂ ಅಪೇಕ್ಷಿಸುವ ಪ್ಲಾಂಟರುಗಳಿಗೂ
ರೈತರಿಗೂ ಮುಫತ್ತಾಗಿ ಕೊಡಲ್ಪಡುವವು.

ಅಗ್ರಿಕಲ್ಚುರಲ್ ಇಲಾಖಾ ಉದ್ಯೋಗಸ್ಥರು.

ಅಗ್ರಿಕಲ್ಚುರಲ್ ಕೆಮಿಸ್ಟ	ಎ. ಲೆರ್ಮ, ಬಿ. ಎಸ್. ಎ., ಪಿ. ಎಚ್. ಡಿ.
ಆಕ್ಟಿಂಗ್ ,, ...	ಇ. ಡಬ್ಲ್ಯೂ. ವೆದರಲ್, ಎ. ಆರ್. ಸಿ. ಎಸ್., ಎಫ್. ಜಿ. ಎಸ್.
ಅಸಿಸ್ಟೆಂಟ್ ಕೆಮಿಸ್ಟ	ಎಚ್. ವಿ. ಕೃಷ್ಣಯ್ಯ, ಬಿ. ಎ.
ಡಿಟೋ	ಬಿ. ವೆಂಕಟರಾವ್, ಬಿ. ಎ.
ಪ್ರೊಬೇಷನರಿ ಅಸಿಸ್ಟೆಂಟ್ ಕೆಮಿಸ್ಟ ...	ಎ. ಕೆ. ಎಗ್ನನಾರಾಯಣಯ್ಯರ್, ಎಂ. ಎ.

ಅಗ್ರಿಕಲ್ಚರಲ್ ಕೆಮಿಸ್ಟರವರ 1903—1904ನೆ ವರ್ಷದುದಾದ ಐದನೇ ವಾರ್ಷಿಕ ರಿಪೋರ್ಟು.

ಎರಡನೇ ಭಾಗ.

16. ಮೊದಲು ಹದಿನೈದು ಪ್ಯಾರಾಗಳುಳ್ಳ ರಿಪೋರ್ಟಿನ ಮೊದಲನೆ ಭಾಗವು ಇಲಾಖೆಯ ಸಾಮಾನ್ಯ ಕಾರ್ಯ ಕೆಲಸಗಳಲ್ಲಿ ಪ್ರವರ್ತಿಸಿರುವುದರಿಂದ, ಅದನ್ನು ಪ್ರಸಿದ್ಧಿಪಡಿಸಲು ಅವಶ್ಯವಿರುವುದಿಲ್ಲ:—

ಎರಡನೇ ಭಾಗವಾದ ಈ ಪುಸ್ತಕದಲ್ಲಿ, ಪಾತಿಯಲ್ಲಿ ನಡೆದ ಪರೀಕ್ಷೆಗಳ ವಿಷಯವಾಗಿ ಹೇಳಿರುವುದಲ್ಲದೆ, ಅನೇಕವಿಧ ಕಾಫಿಯ ಬೀಜಗಳು, ಗೊಬ್ಬರಗಳು, ಕ್ಷಾಮ ಕಾಲಗಳಲ್ಲಿ ಆಹಾರಗಳಾಗಿ ಉಪಯೋಗಿಸಲ್ಪಡುವ ಪದಾರ್ಥಗಳು, ಕಬ್ಬು, ಬೆಲ್ಲ ಇವೇ ಮೊದಲಾದ ಇನ್ನೂ ಅನೇಕ ಪದಾರ್ಥಗಳಲ್ಲಿ ಅಂತರ್ಹಿತ ದ್ರವ್ಯಗಳನ್ನು ತೋರಿಸಿರುತ್ತದೆ.

17. ಹೋದವರ್ಷ ಹೇಳಿದಂತೆ ಈ ಆಫೀಸಿನ ಆವರಣವು ಅಜಮಾಯಿಷಿಗಳಿಗೆ ಅನುಕೂಲವಾದ ಸ್ಥಳವಲ್ಲದೇ ಇದ್ದಾಗ್ಯೂ, ಅದರಲ್ಲಿಯೇ ಈ ವರ್ಷವೂ ಸಹ ಅಜಮಾಯಿಷಿ ಮಾಡಲಾಯಿತು.

ಕಬ್ಬು.

18. ಈ ವರ್ಷ ಮೂರು ವಿಷಯಗಳನ್ನು ಉದ್ದೇಶಿಸಿ ಸೂಚನೀಯ ಅಜಮಾಯಿಷಿ ನಡೆದಿರುತ್ತವೆ.

ಈ ವಿಷಯಗಳು ಯಾವುವೆಂದರೆ:—

(1) ರೈತರು ಸಾಧಾರಣವಾಗಿ ಈಗ ಅನುಸರಿಸಿರುವ ಭೂಮಿಯಮೇಲೆ ನೀರನ್ನು ಹಾಯಿಸಿ ನೀರು ಕಟ್ಟುವ ಪದ್ಧತಿಯ ಬದಲಾಗಿ ಅಲ್ಲಲ್ಲಿ ಕಾಲುವೆಗಳಲ್ಲಿ ನೀರು ನಿಲ್ಲಿಸಿ ಭೂಮಿಯ ಕೆಳಭಾಗದಲ್ಲಿಯೇ ಇಂಗಿ ತೇವ ತಟ್ಟುವಂತೆ ಮಾಡುವುದು:—

(2) ಭೂಮಿಯನ್ನು ಆಳವಾಗಿ ಅಗೆಯುವುದರಿಂದ ಆಗುವ ಪ್ರಯೋಜನವು.

(3) ಕೆಲವು ವಿಧದ ಕಬ್ಬುಗಳಲ್ಲಿನ ತಾರತಮ್ಯವನ್ನು ಕಂಡು ಹಿಡಿಯುವುದು.

ಎಲ್ಲಾ ಪಾತಿಗಳಿಗೂ ಒಂದೇವಿಧವಾಗಿ ಎಂದರೆ—97 ಅಡಿ ಉದ್ದವುಳ್ಳ ಸಾಲಿಗೆ, 25 ಪೌಂಡು ಬೀಜ ಹರಳು ಹಿಂಡಿಯ ಪುಡಿ, 5 ಪೌಂಡು ಎಲುಬಿನಪುಡಿ, 2 ಪೌಂಡು ಮ್ಯೂರಿಯೇಟ್ ಆಫ್ ಪೊಟಾಷ್—ಈ ಪ್ರಕಾರ ಗೊಬ್ಬರವು ಹಾಕಲ್ಪಟ್ಟಿತು. ಆಗಿದ ಪಾ

ತಿಗಳ ಹೊರ್ತಾಗಿ ಮಿಕ್ಕ ಪಾತಿಗಳ ಭೂಮಿಯನ್ನು, ಮಣ್ಣನ್ನು ತಿರುಗಿಸುವ ಸಾಮರ್ಥ್ಯವುಳ್ಳ ಕ್ಯಾನಡಾ ದೇಶದ ನೇಗಲಿನಿಂದ ಆರು ಅಂಗುಲ ಆಳವಾಗಿ ಉತ್ತು, ಭೂಮಿಯು ಮೇಲ್ಭಾಗವು ಹುಡಿಯಾಗುವವರೆಗೂ ಮಸ್ಸರ ಪ್ಲ್ಯಾನೆಟ್‌ಜೂನಿಯರ್ ಕಂಪನಿಯ ಹಾರ್ಸ್ ಹೋ ಎಂಬ ಹಲಿಬೆಯಿಂದ ಎರಡು ಸಾರ್ತಿ ಹಸನು ಹೊಡೆಯಲಾಯಿತು.

ನಂತರ ಫೆಬ್ರುವರಿ 25, 26ನೆ ತಾರೀಖುಗಳಲ್ಲಿ ಮೂರು ಅಡಿಗೆ ಒಂದರಂತೆ ಇರುವ ಸಾಲುಗಳಲ್ಲಿ 5 ಅಂಗುಲ ಆಳದಲ್ಲಿ ಕಬ್ಬನ್ನು ಹೂಳಲಾಯಿತು.... ಡೊಂಕಾಗಿರುವ ಜಳವೆಗಳನ್ನು ಮಾತ್ರ ಕತ್ತರಿಸಿ, ಮಿಕ್ಕ ಜಳವೆಗಳನ್ನು ಪೂರ್ತಿಯಾಗಿ ಸಾಲಿನಲ್ಲಿ ಸರದು, ಅವುಗಳ ಮೇಲೆ 2-3 ಇಂಚು ದಪ್ಪ ಹುಡಿ ಮಣ್ಣು ಬಿಡಲ್ಪಟ್ಟಿತು. ಹೂಳಿದ ಕಾಲವು ಬೇಸಿಗೆಕಾಲವಾಗಿದ್ದು ಭೂಮಿಯು ಒಣಗಿದ್ದುದರಿಂದ, ಕಾಲುವೆಗಳಲ್ಲಿ ಸಾಲುಗಳು ತೇವವಾಗಲಿಕ್ಕೆ ಸಾಕಾಗುವಷ್ಟು ನೀರು ಬಿಡಲ್ಪಟ್ಟಿತು. ಹೂಳಿದ ಕಬ್ಬಿನಿಂದ ಮೊಳಕೆಗಳು ಸಾಧಾರಣವಾಗಿ ಚನ್ನಾಗಿಯೇ ಹೊರಟವು. ಆದರೆ ಅಲ್ಲಲ್ಲಿ 3-4 ಅಡಿಗಳಷ್ಟು ಮತ್ತೆ ಕೆಲವು ಸ್ಥಳಗಳಲ್ಲಿ ಇನ್ನೂ ಹೆಚ್ಚು ಪ್ರದೇಶಗಳಷ್ಟು ಬರೀ ಸ್ಥಳಗಳಿದ್ದವು. ಸಾಧಾರಣವಾಗಿ ಎಲ್ಲಾ ಪ್ರದೇಶಕ್ಕೂ ಹಾಕಿದ ಬೀಜವು ಕುಣಗಲಿನಿಂದ ತರಲ್ಪಟ್ಟ ಪಟ್ಟಾಪಟ್ಟೆ ಜಾತಿಯದು. ಏಕೆಂದರೆ,—ಮೂರುವರ್ಷಗಳ ಮುಂಚೆ, ಎರಡನೇ ವಾರ್ಷಿಕ ರಿಪೋರ್ಟಿನ 10ನೆ ಪುಟದಲ್ಲಿ ಕಂಡ ಅನೇಕ ವಿಧದ ಕಬ್ಬಿನ ರೋಗಗಳು ಮತ್ತು ಬೆಲ್ಲಗಳು ಇವುಗಳನ್ನು ಈ ಇಲಾಖೆಯವರು ಕುಣಗಲಿನಲ್ಲಿ ಪರೀಕ್ಷಿಸಿದ್ದರು.

19. ಭೂಮಿಯ ಕೆಳಭಾಗದಲ್ಲಿ ನೀರು ಹೋಗುವಂತೆ ಮಾಡಿ ಪೈರಿಗೆ ತೇವ ತಟ್ಟುವಂತೆ ಮಾಡುವುದು :—

ಕಬ್ಬಿನಿಂದ ಅತ್ಯುತ್ತಮ ಫಸಲು ಬರಬೇಕಾದರೆ ಅದು ಹಾಕಿದ ಭೂಮಿಯ ಮೇಲ್ಭಾಗವು ಯಾವಾಗಲು ಹುಡಿಹುಡಿಯಾಗಿಯೇ ಇರಬೇಕೆಂದು ಹೇಳಿಕೆಯು ಇದೆ. ಮೇಲೆ ಮೇಲೆ ಭೂಮಿಯ ಮೇಲ್ಭಾಗದಲ್ಲಿ ಹರಿಸಿ ನೀರನ್ನು ಕಟ್ಟಿದರೆ, ಭೂಮಿಯನ್ನು ಹೀಗೆ ಹುಡಿಯಾಗಿ ಇಟ್ಟಿರುವುದು ಅತ್ಯಂತ ಅಸಾಧ್ಯವಾದುದಲ್ಲದೇ ಇದ್ದರೂ ಬಹಳ ಕಷ್ಟವಾದ ಕೆಲಸವಾಗಿರುತ್ತದೆ. ಪಾತಿಗಳ ಎರಡು ಪಕ್ಕಗಳಲ್ಲಿಯೂ ಕಾಲುವೆಗಳನ್ನು ಅಗಿದು, ಅವುಗಳಲ್ಲಿ ನೀರನ್ನು ನಿಲ್ಲಿಸುವುದರಿಂದ ಮಣ್ಣಿನ ರೇಣುಗಳ ಆಕರ್ಷಣಶಕ್ತಿಯಿಂದ ಪಕ್ಕದ ಸಾಲುಗಳಲ್ಲಿರುವ ಪೈರಿಗೆ ಸಾಕಾದಷ್ಟು ನೀರು ಆಕರ್ಷಿಸಲ್ಪಡುವುದೆಂಬ ಕೋರಿಕೆಯಿಂದ, ಹೀಗೆ ನೀರನ್ನು ನಿಲ್ಲಿಸುವ ಯತ್ನವು ಮಾಡಲ್ಪಟ್ಟಿತು. ಈ ಆಕರ್ಷಣ ಶಕ್ತಿಯಿಂದ ಎಷ್ಟು ದೂರದ ವರಿವಿಗೆ ನೀರಿನ ತೇವ ತಟ್ಟುವುದೆಂಬುದನ್ನು ಪರೀಕ್ಷಿಸುವ ಉದ್ದೇಶ್ಯ, ಪಾತಿಗಳನ್ನು 12 ಅಡಿಗಳಿಂದ 18 ಅಡಿಗಳ ಅಗಲವುಳ್ಳದ್ದಾಗಿ ಮಾಡಲಾಯಿತು. ಭೂಮಿಯೊಳಗಿನ ಜಲವು ಬಹಳ ಕೆಳಗಿದ್ದುದರಿಂದ ಅದರ ಅಂಶವು ಕಾಲುವೆಗಳಲ್ಲಿ ನಿಲ್ಲಿಸಿದ ನೀರಿಗೆ ಬೆರಿಯಲು ಅವಕಾಶವಿರಲಿಲ್ಲ. ಆದಿಯಲ್ಲಿ ಇತರ ಪಾತಿಗಳಿಗೆ ನೀರು ಕಟ್ಟುವಾಗ ತಡಗುಗಳುಳ್ಳ ಪಾತಿಗಳಿಗೆ ನೀರು ಕಟ್ಟದೆ ಕಾಲುವೆಗಳಲ್ಲಿ ಮಾತ್ರ ನೀರು ನಿಲ್ಲಿಸಲ್ಪಟ್ಟಿತು. ಈ ಕ್ರಮದಲ್ಲಿಯೇ ನೀರು ಕಟ್ಟದೇ ಇದ್ದ ಪಾತಿಗಳ ಮಧ್ಯದ ಸಾಲುಗಳು ಒಣಗುತ್ತ ಬಂದುದರಿಂದ ಇವುಗಳ ಪ್ರಾಣ ರಕ್ಷಣಾರ್ಥವಾಗಿ, ಕಾಲುವೆಗಳಲ್ಲಿನ ನೀರು ಚನ್ನಾಗಿ ಒಳಕ್ಕೆ ಊರುವುದಕ್ಕೆ ಅವಕಾಶವಾಗುವ ವರಿವಿಗೂ, ಭೂಮೇಲ್ಭಾಗದಲ್ಲಿಯೂ ಸಹ ನೀರನ್ನು ಬಿಡಲಾಯಿತು. ಹೀಗೆ ನಾಲ್ಕು ವಾರಗಳ ವರಿವಿಗೆ ಮಾಡಿದಾಗ್ಯೂ ನೀರಿನ ತೇವವು ಪಕ್ಕದಲ್ಲಿ ತಟ್ಟದೇ ಇದ್ದುದು ನೋಡಿ ಎರಡು ವಾರಗಳ ವರಿವಿಗೆ ಕಾಲುವೆಗಳ ತುಂಬ ಹಗಲೂ ರಾತ್ರಿ ಏಕಪ್ರಕಾರವಾಗಿ ನೀರನ್ನು ನಿಲ್ಲಿಸಲಾಯಿತು. ಇಷ್ಟಾದ ನಂತರ, ಕಾಲುವೆಗಳ ಪಕ್ಕದಲ್ಲಿರುವ ಸಾಲುಗಳು ಮಾತ್ರ ಮೇಲಿನ ನೀರು ಕಟ್ಟದೇ ಬೆಳೆದವೇ ಹೊರ್ತು, ಮಿಕ್ಕ ಸಾಲುಗಳಿಗೆಲ್ಲಾ ನೀರು ಕಟ್ಟಲೇಬೇಕಾದುದರಿಂದ, ಕಾಲುವೆಗಳಲ್ಲಿ ನೀರು ನಿಲ್ಲಿಸುವುದನ್ನು ಬಿಟ್ಟು ಬಿಡಬೇಕಾಯಿತು.... ಇದರಿಂದ ದಿಂಡೆಯ ಮೇಲಿದ್ದ ಚನ್ನಾಗಿ ಒಣಗಿರುವ ಮತ್ತು ಬಹಳ ಕೆಳಗಿನ ವರಿವಿಗೂ ಜಲವಿಲ್ಲದೇ ಇರುವ ಭೂಮಿಗಳಲ್ಲಿ ನಿಂತಿರುವ ನೀರಿನ ಅಂಶವು ಪಕ್ಕಗಳಲ್ಲಿ ಬಹಳ ಕೊಂಚವಾಗಿಯೇ ಊರುವುದೆಂದು ವ್ಯಕ್ತವಾಗುತ್ತದೆ. ಒಂದು ಪ್ರದೇಶದಲ್ಲಿ ತರಗು ಮುಂಚಾದ್ದು ಬಿದ್ದಿದ್ದರೆ ಆ ತರಗಿನ ಕೆಳ ಪ್ರದೇಶವು ಮಾತ್ರ ಚನ್ನಾಗಿ ತೇವವಾಗಿರುವುದು. ಮತ್ತು ಅದರ ಪಕ್ಕದಲ್ಲಿರುವ ಭೂಮಿಯು ಅನೇಕ ಅಡಿಗಳ ವರಿವಿಗೂ ಒಣಗಿರುವುದು ಇವುಗಳಿಂದಲೂ ಇದೇ ಸಂಗತಿಯು ವೇದ್ಯವಾಗುತ್ತದೆ. ರೊಥಾಮ್ ಸ್ಟೆಡ್ ಎಂಬ ಸ್ಥಳದಲ್ಲಿ ಹುಲ್ಲುಗಳ ಮೇಲೆ ಗೊಬ್ಬರಗಳ ಉಪಯೋಗದ ವಿಷಯವಾಗಿ ನಡೆದ ಪರೀಕ್ಷೆಗಳೂ ಸಹ ಇದನ್ನೇ ಸೂಚಿಸುವಂತಿವೆ. ಸಾಧಾರಣವಾಗಿ ಕಬ್ಬು ಬೆಳೆಯುವ ಭೂಮಿಗಳಲ್ಲಿ ನಮ್ಮ ಆಫೀಸಿನ ಭೂಮಿಯಲ್ಲಿನಕಿಂತಲೂ ಬಹಳ ಮೇಲೆಯೇ ಜಲವಿರುತ್ತದೆ. ಆದುದರಿಂದ ಜಲವಿಲ್ಲದೇ ಇರುವ ನಮ್ಮ ಆಫೀಸಿನ ಭೂಮಿಯಲ್ಲಿ ಕಾಲುವೆಗಳಲ್ಲಿ ನೀರು ನಿಲ್ಲಿಸಿ ಕಬ್ಬು ಬೆಳೆಯುವ ಪದ್ಧತಿಯು ಸಂಯೋಗವೇ ಇದ್ದ ಮಾತ್ರದಿಂದ, ಸಾಧಾರಣ ಕಬ್ಬಿನ ಭೂಮಿಗಳಲ್ಲಿ ಅದು ಸಂಯೋಗಲಾರದೆಂದು ಹೇಳಲಾಗುವದಿಲ್ಲ—ಈ ಪದ್ಧತಿಯನ್ನು ಬಿಟ್ಟದುದರಿಂದ, ನಂಬರ್ I. (b), (c), (d), (g), (h), ಮತ್ತೂ ನಂಬರ್ II. (a) (b) (c) ಇವುಗಳನ್ನೆಲ್ಲಾ ಒಂದೇವಿಧವಾದ ನಡವಳಿಕೆಗೆ ಒಳಪಡಿಸಿದಂತಾಯಿತು.

ಇವುಗಳಲ್ಲಿ ಬಂದ ಕಬ್ಬಿನ ಪೈರಿನ ತೂಕವನ್ನು ಒಂದನೇ ಟೇಬಲಿನಲ್ಲಿ ತೋರಿಸಿರುತ್ತದೆ. ಪೈರಿನ ತೂಕಗಳಲ್ಲಿನ ಹೆಚ್ಚು ಕಡಿಮೆಯು ಸ್ವಲ್ಪಮಟ್ಟಿಗೆ ಗೆದ್ದಲು ಹೊಡದ್ದರಿಂದಲೂ ಮತ್ತೂ ಸ್ವಲ್ಪಮಟ್ಟಿಗೆ ಭೂವಿಶೇಷದಿಂದಲೂ ಉಂಟಾಗಿರುವುದು.

ಟೇಬಲ್ ನಂಬರ I.

ಪ್ರತಿ ಎಕರೆಗೆ ಬಂದ ಕಬ್ಬಿನ ಫಸಲೂ ಮತ್ತೂ ನೂರು ಅಂಶ ಕಬ್ಬಿಗೆ ಬಂದ ಕಬ್ಬಿನ ರಸದ ಅಂಶವು.

ಪಾತಿಯು ನಂಬರು.	ವಿಸ್ತೀರ್ಣ.	ಕಬ್ಬಿನ ತೂಕವು.	ಈ ಲೆಖ್ಖದ ಪ್ರಕಾರ ಎಕರೆಗೆ ಆಗುವ ಕಬ್ಬಿನ ತೂಕವು.	ನೂರು ಪೌಂಡು ಕಬ್ಬಿನಲ್ಲಿ ಬಂದ ರಸದ ತೂಕವು.
	ಎಕರೆಗಳು.	ಪೌಂಡುಗಳು.	ಪೌಂಡುಗಳು.	
ಪಾಟಿ I (a) ...	1/75	371	27,825	66·0
ಡಿಟ್ಟೋ (b) ...	1/50	1,178	58,900	69·1
ಡಿಟ್ಟೋ (c) ...	2/75	1,129	42,337	70·9
ಡಿಟ್ಟೋ (d) ...	1/30	1,818	54,540	68·5
ಡಿಟ್ಟೋ (e) ...	1/75	743	55,725	70·0
ಡಿಟ್ಟೋ (f) ...	1/50	963	48,150	66·0
ಡಿಟ್ಟೋ (g) ...	1/100	491	49,100	70·1
ಡಿಟ್ಟೋ (h) ...	ಡಿಟ್ಟೋ	564	56,400	70·1
ಪಾಟಿ II (a) ...	ಡಿಟ್ಟೋ	657	65,700	62·1
ಡಿಟ್ಟೋ (b) ...	ಡಿಟ್ಟೋ	606	60,600	67·1
ಡಿಟ್ಟೋ (c) ...	ಡಿಟ್ಟೋ	691	69,100	71·9
ಡಿಟ್ಟೋ (d) ...	ಡಿಟ್ಟೋ	636	63,600	67·3
ಡಿಟ್ಟೋ (e) ...	ಡಿಟ್ಟೋ	527	52,700	70·0
ಡಿಟ್ಟೋ (f) ...	ಡಿಟ್ಟೋ	603	60,300	69·4
ಡಿಟ್ಟೋ (g) ...	ಡಿಟ್ಟೋ	575	57,500	71·3
ಪಾಟಿ III (a) ...	1/75	470	35,250	70·8
ಡಿಟ್ಟೋ (b) ...	ಡಿಟ್ಟೋ	258	19,350	69·1
ಡಿಟ್ಟೋ (c) ...	1/150	122	18,300	67·1
ಡಿಟ್ಟೋ (d) ...	ಡಿಟ್ಟೋ	58	8,700	70·5
ಡಿಟ್ಟೋ (e) ...	1/300	48	14,400	58·6
ಡಿಟ್ಟೋ (f) ...	1/75	68	5,100	58·3
ಡಿಟ್ಟೋ (g) ...	1/300	37	11,100	64·7
ಡಿಟ್ಟೋ (h) ...	ಡಿಟ್ಟೋ	48	14,400	64·9
ಡಿಟ್ಟೋ (i) ...	ಡಿಟ್ಟೋ	35	10,500	68·8

20. ಬೆಳೆಗೆ ಭೂಮಿಯನ್ನು ಹಸನು ಮಾಡುವುದರಲ್ಲಿ ನಡದಿರತಕ್ಕ ಪರೀಕ್ಷೆಗಳು ಮತ್ತು ಅನೇಕ ವಿಧದ ಕಬ್ಬುಗಳ ಪರೀಕ್ಷೆಗಳು :—

I (e), ಮತ್ತು II (c), (d), (f), (g), ಈ ನಂಬರುಗಳ ಪಾತಿಗಳು ಎರಡು ಅಡಿ ಆಳ ಅಗಿಯಲ್ಪಟ್ಟವು. ಕೆಲವು ಪಾತಿಗಳಲ್ಲಿ ಅಗಿಯುವುದಕ್ಕೆ ಮುಂಚೆಯೇ ಭೂ ಮೇಲ್ಭಾಗದಲ್ಲಿ ಗೊಬ್ಬರವನ್ನು ಹರಡಿ, ಎರಡು ಅಡಿ ಆಳ ಮಣ್ಣಿನ ಸಂಗಡ ಅದು ಮಿಶ್ರವಾಗುವಂತೆ ಮಾಡಲಾಯಿತು. ಮಿಕ್ಕ ಪಾತಿಗಳಲ್ಲಿ, ಗೊಬ್ಬರವನ್ನು ಭೂ ಮೇಲ್ಭಾಗದಲ್ಲಿ ಹಾಕಲಾಯಿತು.

IIIನೆ ನಂಬರು ಪಾತಿಗಳಲ್ಲಿ, ಹತ್ತು ವಿಧ ಕಬ್ಬುಗಳನ್ನು ಹೂಳಲಾಯಿತು. ಒಂದೇ ವಿಧವಾದ ನಡವಳಿಕೆಗೆ ಒಳಪಡಿಸದ ಪಾತಿಗಳಲ್ಲಿಯೂ ಸಹ ಬಂದ ಪ್ರತಿಫಲಗಳು ಬಹಳ ವಿಷಮವಾಗಿದ್ದುದರಿಂದ ವಿವಿಧ ಪಾತಿಗಳಲ್ಲಿ ಬಂದ ಬೆಳೆಯಲ್ಲಿನ ಹೆಚ್ಚು ಕಡಿಮೆಯು ಬೆಳೆಗೆ ಸಾಧಕ ಅಥವಾ ಪ್ರತಿಬಂಧಕವಾಗಿ ಪರಿಣಮಿಸುವ ಭೂಮಿಯನ್ನು ಉಳುವುದು ಮುಂತಾದ್ದರಲ್ಲಿ ಆದ ಹೆಚ್ಚು ಕಡಿಮೆಯಿಂದಾಗಲಿ ಅಥವಾ ಕಬ್ಬಿನ ಪ್ರಭೇದಗಳಿಂದಾಗಲಿ ಆಯಿತೆಂದು ತಿಳಿಯಲಾಗುವುದಿಲ್ಲ. ಇದೇ ವಿಷಯವನ್ನು ಈ ರಿಪೋರ್ಟಿನ 14ನೆ ಪುಟ, 33ನೆ ಪ್ಯಾರಾದಲ್ಲಿ ರಾಗಿಯಮೇಲೆ ನಡೆದಿರುವ ಪರೀಕ್ಷೆಗಳನ್ನು ಕುರಿತು ಹೇಳುವಾಗ ವಿಶೇಷವಾಗಿ ಚರ್ಚಿಸಿದೆ.

21. ಕಬ್ಬು ಗೆಣ್ಣಿನಲ್ಲಿ ಮೊಳೆಯುವುದು :—

ಕೆಳಗೆ ಬಿದ್ದುಹೋದ ಕಬ್ಬಿನಲ್ಲಿ ಅನೇಕಸಾರಿ ಕಣ್ಣುಗಳು ಮೊಳೆಯುವುದುಂಟು. ಚೆನ್ನಾಗಿ ಎದ್ದು ನಿಂತಿರುವ ಕಬ್ಬಿನ ಗೆಣ್ಣುಗಳಿಂದ ಮೊಳಕೆಗಳು ಹೊರಟರೆ, ಅದರಿಂದ ಕಬ್ಬು ಬಲತು ಅಥವಾ ಕೊಯ್ಯುವ ಹದಕ್ಕೆ ಬಂದಿದೆಯೆಂದು ಸಾಧಾರಣವಾಗಿ ತಿಳಿಯುತ್ತಾರೆ ; ನಮ್ಮ ಆಫೀಸಿನ ಭೂಮಿಯಲ್ಲಿ ಬೆಳೆದ ಕಬ್ಬಿನಲ್ಲಿ, ಅದು ಬಹಳ ಎಳೆಯದಾಗಿರುವಾಗಲೇ ಅಲ್ಲಲ್ಲಿ ಗೆಣ್ಣಿನಿಂದ ಮೊಳಕೆಗಳು ಹೊರಟದುದರಿಂದ, ಡಿಸೆಂಬರ್ ತಿಂಗಳಲ್ಲಿ ಮೊಳಕೆ ಬಂದಿದ್ದ ಕಣ್ಣುಗಳ ಸಂಖ್ಯೆಯು ಬಹಳವಾಗಿತ್ತು. ಇದರಲ್ಲಿ ಬೆಳೆಯುವದಕ್ಕೆ ಅವಕಾಶ ಕೊಡಲ್ಪಟ್ಟ ಕೆಲವು ಮೊಳಕೆಗಳು, ತಾವು ತಾವಾಗಿಯೇ ಬೆಳೆದು, ಗೆಣ್ಣುಕಟ್ಟಿ, ಕೊನೆಗೆ ಫೆಬ್ರವರಿ ತಿಂಗಳಲ್ಲಿ ಕಬ್ಬು ಕತ್ತರಿಸಿದಾಗ, ತಾಯಿಕಬ್ಬಿನೋಪಾದಿಯಲ್ಲಿಯೇ ಶೋಧಿಸಿದವು. ಕೆಳಗಿನ ನಮೂನೆಯಲ್ಲಿ ಮೊಳಕೆ ಬರದೇ ಇದ್ದ ಕಬ್ಬು ಬಂದ ಕಬ್ಬು ಮತ್ತು ಚೆನ್ನಾಗಿ ಬಲಿತ ಕಬ್ಬು—ಇವುಗಳಲ್ಲಿರುವ ವಿವಿಧ ದ್ರವ್ಯಗಳನ್ನು ತೋರಿಸಿದೆ.

4·c

ಟೇಬಲ್ ನಂಬರು II.

ಬೆಳೆಯ ಮೊಳಕೆ ಬಂದ ಕಬ್ಬು ಮತ್ತು ಬರದೇ ಇದ್ದ ಕಬ್ಬು ಇವುಗಳಲ್ಲಿ ತಾರತಮ್ಯವು.

ತಾರೀಖು	ಕಬ್ಬು.	ಗ್ಲೂಕೋಜ್.	ಸೂಕ್ರೋಜ್.
ಡಿಸೆಂಬರ್ 24	ಮೊಳಕೆ ಬಂದ ಕಬ್ಬು	1·85	13·9
ಡಿಸೆಂಬರ್ 24	ಸಾಧಾರಣ ಕಬ್ಬು	2·55	11·5
ಜನವರಿ 6	ಮೊಳಕೆ ಬಂದ ಕಬ್ಬು	1·51	15·1
ಜನವರಿ 6	ಸಾಧಾರಣ ಕಬ್ಬು	2·89	11·5
ಮಾರ್ಚಿ 27	ಹೆಚ್ಚೂ ಕಡಿಮೆ ಬಲಿತ ಸಾಧಾರಣ ಕಬ್ಬು	·8	20·1

ಇವೆಲ್ಲಾ ಒಂದೇ ವಿಧವಾಗಿ ಬೆಳೆದ ಒಂದೇ ಮಾದರಿಯ ಕಬ್ಬುಗಳು—ಇವುಗಳಲ್ಲಿ ಯಾವುದೂ ಚನ್ನಾಗಿ ಬಲಿತಿರಲಿಲ್ಲ. ಏಕಂದರೆ ಈ ದೇಶದಲ್ಲಿ ಬಲಿತ ಕಬ್ಬಿನಲ್ಲಿ ಗ್ಲೂಕೋಜ್ ಎಂಬ ಪದಾರ್ಥವು ನೂರಕ್ಕೆ ½ ಅಂಶಕ್ಕಿಂತಲೂ ಕಮ್ಮಿಯಾಗಿಯೇ ಇರಬೇಕು. ಮಾರ್ಚಿ 27ನೆ ತಾರೀಖಿನಲ್ಲಿ ಕತ್ತರಿಸಿದ ಕಬ್ಬಿನಲ್ಲಿಯೂ ಸಹ ಇದಕ್ಕಿಂತ ಹೆಚ್ಚಾಗಿಯೇ ಗ್ಲೂಕೋಜ್ ಇತ್ತು. ಆದರೆ ಗೆಣ್ಣಿನಲ್ಲಿ ಮೊಳಕೆ ಬಂದ ಕಬ್ಬಿನಲ್ಲಿ ಅದೇ ದಿನ ಕತ್ತರಿಸಲ್ಪಟ್ಟ ಮೊಳಕೆ ಬರದೇ ಇದ್ದ ಕಬ್ಬಿನಲ್ಲಿನದಕ್ಕಿಂತಲೂ ಕಮ್ಮಿಯಾಗಿ ಗ್ಲೂಕೋಜ್ ಹೆಚ್ಚಾಗಿ ಸೂಕ್ರೋಜ್ (ಶುದ್ಧ ಸಕ್ಕರೆ) ಇದ್ದವು. ಇದರಿಂದ ಹೆಚ್ಚಾಗಿ ಬಲತ ಕಬ್ಬೇ ಹೆಚ್ಚಾಗಿ ಮೊಳಕೆಗಳನ್ನು ಬಿಡುವುದೆಂದು ವೇದ್ಯವಾಗುತ್ತದೆ.

22. ಕಬ್ಬು ಬಲಿತುದರ ಪರೀಕ್ಷೆ :—

ಆಗಾಗ್ಯೆ ಕಬ್ಬನ್ನು ಕತ್ತರಿಸಿ ಪರೀಕ್ಷಿಸಿ ಅವುಗಳಲ್ಲಿ ಕಂಡುಬಂದ ದ್ರವ್ಯಗಳ ಫಲಿತಾಂಶವನ್ನು ಕೆಳಗೆ ಬರೆದ ಮೂರನೇ ನಮೂನೆಯಲ್ಲಿ ತೋರಿಸಿದೆ.

ಟೇಬಲ್ ನಂಬರು III.

ಬೇರೆ ಬೇರೆ ತಾರೀಖುಗಳಲ್ಲಿ ಕಬ್ಬಿನಲ್ಲಿ ಕಂಡುಬಂದ ದ್ರವ್ಯಗಳು.

ತಾರೀಖು.	ಗ್ಲೂಕೋಜ್.	ಸೂಕ್ರೋಜ್.
ಡಿಸೆಂಬರ್ 24	2·55	11·5
ಜನವರಿ 6	2·89	11·5
ಡಿಟೋ 20	1·66	15·3
ಫೆಬ್ರುವರಿ 4	1·8	16·5
ಡಿಟೋ 15	1·6	16·2
ಮಾರ್ಚಿ 27	·8	20·1

23. ಒಂದು ಭೂಮಿಯಲ್ಲಿ, ಎಲ್ಲಾ ಕಬ್ಬಿನ ಜಳವೆಗಳು ಒಂದೇ ವಯಸ್ಸಿನವುಗಳಲ್ಲದೆ ಇರುವುದರಿಂದ, ಮೇಲಿನ ಪರೀಕ್ಷೆಗಳಿಗೆ ಕತ್ತರಿಸಿದಂತೆ ಕೆಲವು ಜಳವೆಗಳನ್ನು ಮಾತ್ರ ಕತ್ತರಿಸುವಾಗ, ಸರ್ವಥಾ ಸರ್ವ ಪ್ರತಿನಿಧಿಯಾದ ಮಾದರಿಯನ್ನು ಹೊಂದಿಸುವುದು ಅಸಾಧ್ಯವಾಗಿರುವುದು. ಆದರೆ ಮೇಲಿನ ನಮೂನೆಯಲ್ಲಿ ಕಂಡಿರುವ ಮಾದರಿಗಳೆಲ್ಲಾ ಒಂದೇ ಜಾತಿಯವು. ಹೆಚ್ಚೂ ಕಡಮೆ ಇತರ ಎಲ್ಲಾ ಜಾತಿಗಳು ಪಟ್ಟಾಪಟ್ಟಿಗಿಂತಲೂ ಜಾಗ್ರತೆಯಾಗಿ ಬಲಿಯುತ್ತವೆಂದು ತೋರುತ್ತದೆ. ಮಾರ್ಚಿ 29, 30, 31 ಈ ತಾರೀಖುಗಳಲ್ಲಿ ಕತ್ತರಿಸಲ್ಪಟ್ಟ ಎಂಟು ಮಾದರಿಗಳ ಪೈಕಿ, ಐದು ಮಾದರಿಗಳಲ್ಲಿ ನೂರಕ್ಕೆ ಅರ್ಧ ಅಥವಾ ಅದಕ್ಕೂ ಕಮ್ಮಿ ಗ್ಲೂಕೋಜ್ ಮತ್ತು 20ರ ಮೇಲೆ ಸೂಕ್ರೋಜ್ (ಶುದ್ಧ ಸಕ್ಕರೆ) ಇದ್ದವು. ಮಳೆಗಾಲದಲ್ಲಿ ಬೆಲ್ಲವನ್ನು ಜೋನೆಯಾಗುವಹಾಗೆ ಮಾಡುವ ಮತ್ತು ಬೆಲ್ಲದಿಂದ ಸಕ್ಕರೆ ಮಾಡುವಾಗ ಕಾಕಂಬಿಯಲ್ಲಿ ಆಚೆ ಹೋಗುವ ಈ "ಗ್ಲೂಕೋಜ್" ಎಂಬ ಪದಾರ್ಥವು ಪೈರು ಎಳೆಯದಾಗಿರುವಾಗ ಹೆಚ್ಚಾಗಿದ್ದು, ಆ ಮೇಲೆ ಅದರಿಂದ ಸೂಕ್ರೋಜ್ ಎಂಬ ಶುದ್ಧ ಸಕ್ಕರೆಯು ಪೈರು ಬಲಿತ ಹಾಗೆಲ್ಲಾ ಉತ್ಪತ್ತಿಯಾಗುವುದು. ಸೂಕ್ರೋಜಿನಿಂದ ಕಬ್ಬಿನ ಬೆಲೆಯು ಹೆಚ್ಚುವುದು. ಗ್ಲೂಕೋಜಿನಿಂದ ಅದು ಕ್ಷಯವಾಗುವುದು. ಆದುದರಿಂದ ಕಬ್ಬು ಬಲಿತಹಾಗೆಲ್ಲಾ, ಅದರಲ್ಲಿನ ಸೂಕ್ರೋಜ್ ಹೆಚ್ಚುವ ಹಾಗೆಲ್ಲಾ, ಗ್ಲೂಕೋಜ್ ಕಮ್ಮಿಯಾಗುವ ಹಾಗೆಲ್ಲ ಕಬ್ಬಿನ ಬೆಲೆಯು ಜಾಸ್ತಿಯಾಗುವುದು. ಡಿಸೆಂಬರ್ 24ನೆ ತಾರೀಖಿನಿಂದ ಮಾರ್ಚಿ 27ನೆ ತಾರೀಖಿನ ವಳಗಾಗಿ ಗ್ಲೂಕೋಜ್ ಮೊದಲಿನ ಮೂರನೇ ಭಾಗವಾಗಿ, ಸೂಕ್ರೋಜ್ ಇಮ್ಮಡಿಯಾಯಿತು. ಸಕ್ಕರೆ ಮಾಡುವವರಿಗೆ ಈ ಕಬ್ಬು ಮೂರು ತಿಂಗಳಲ್ಲಿ ತೂಕಕ್ಕೆ ತೂಕ ಎರಡರಷ್ಟಕ್ಕಿಂತ ಹೆಚ್ಚಾದ ಬೆಲೆಯುಳ್ಳದ್ದಾಯಿತು. ಇದಲ್ಲದೆ ಈ ಮೂರು ತಿಂಗಳಲ್ಲಿ ಈ ಕಬ್ಬು ಹೆಚ್ಚಾಗಿ ಬೆಳೆದು ದೊಡ್ಡದೂ ಆಗಿ ಈ ಹೆಚ್ಚಾದ ತೂಕದಿಂದ ಇನ್ನೂ ಹೆಚ್ಚಾದ ಬೆಲೆಯುಳ್ಳದ್ದಾಯಿತು. ಮೊದಲೇ ಹೇಳಿದಂತೆ ಮಾರ್ಚಿ 27ನೆ ತಾರೀಖಿನಲ್ಲಿಯೂ ಸಹ ಕಬ್ಬು ಚನ್ನಾಗಿ ಬಲಿಯದೇ ಇದ್ದರೂ, ಇಲಾಖೆಯ ಇತರ ಅನಾನುಕೂಲಗಳಿಂದ, ಅದನ್ನು ಮಾರ್ಚಿ 15ನೆ ತಾರೀಖಿನಲ್ಲಿ ಕತ್ತರಿಸುವುದಕ್ಕೆ ಆರಂಭ ಮಾಡಲಾಯಿತು. ಆದುದರಿಂದ ಈ ಕಬ್ಬು ಅದನ್ನು ಇನ್ನೊಂದು ತಿಂಗಳು ಬಿಟ್ಟಿದ್ದರೆ ಎಷ್ಟು ಉತ್ತಮವಾಗುತ್ತಿತ್ತೋ ಅಷ್ಟು ಉತ್ತಮವಾಗಿರಲಿಲ್ಲ. ನಾಲ್ಕನೇ ನಮೂನೆಯಲ್ಲಿ, ಪ್ರತಿ ಜಾತಿಯ ಕಬ್ಬಿನ ರಸದಲ್ಲಿರುವ ದ್ರವ್ಯಗಳ ಸರಾಸರಿ ಸಂಖ್ಯೆಯನ್ನೂ ಮತ್ತು ಅದರಿಂದ ಮಾಡಿದ ಬೆಲ್ಲದಲ್ಲಿನ ದ್ರವ್ಯಗಳ ಸರಾಸರಿಯನ್ನೂ ತೋರಿಸುತ್ತದೆ.

ಟೇಬಲ್ ನಂಬರು IV.

ವಿವಿಧ ಜಾತಿಗಳ ಕಬ್ಬಿನ ರಸ ಮತ್ತು ಬೆಲ್ಲದಲ್ಲಿನ ದ್ರವ್ಯಗಳು.

ನಂಬರ್.	ಪದಾರ್ಥ.	ಸೂಕ್ರೋಸ್.	ಗ್ಲೂಕೋಸ್.	ಒಟ್ಟು ಘನ ಪದಾರ್ಥಗಳು.
212	ರಸ I (a) ಜಾತಿಯಿಂದ	18·8	1·07	20·50
213	ಬೆಲ್ಲ I (a) ಡಿಟೋ	84·5	4·00	
214, 216, 218	ರಸ I (b) ಡಿಟೋ	18·1	1·59	20·19
215, 217, 219	ಬೆಲ್ಲ I (b) ಡಿಟೋ	82·3	6·00	
220, 222	ರಸ I (c) ಡಿಟೋ	17·0	1·80	19·65
221, 223	ಬೆಲ್ಲ I (c) ಡಿಟೋ	82·0	8·10	
224, 226, 228	ರಸ I (d) ಡಿಟೋ	17·4	1·60	19·20
225, 227, 229	ಬೆಲ್ಲ I (d) ಡಿಟೋ	81·4	7·30	
230	ರಸ I (e) ಡಿಟೋ	18·2	1·30	19·85
231	ಬೆಲ್ಲ I (e) ಡಿಟೋ	82·0	6·20	
232, 234	ರಸ I (f) ಡಿಟೋ	16·5	1·75	19·00
233, 235	ಬೆಲ್ಲ I (f) ಡಿಟೋ	79·7	7·80	
236	ರಸ I (g) ಡಿಟೋ	18·0	1·70	20·00
237	ಬೆಲ್ಲ I (g) ಡಿಟೋ	84·6	6·00	
238	ರಸ I (h) ಡಿಟೋ	17·3	1·90	19·48
239	ಬೆಲ್ಲ I (h) ಡಿಟೋ	81·6	7·90	
240	ರಸ II (a) ಡಿಟೋ	17·6	1·90	19·70
241	ಬೆಲ್ಲ II (a) ಡಿಟೋ ...	77·3	10·60	
242	ರಸ II (b) ಡಿಟೋ	17·0	1·70	19·30
243	ಬೆಲ್ಲ II (b) ಡಿಟೋ	78·7	10·80	
244	ರಸ II (c) ಡಿಟೋ	18·1	1·40	19·90
245	ಬೆಲ್ಲ II (c) ಡಿಟೋ	80·4	8·00	
246	ರಸ II (d) ಡಿಟೋ	17·3	1·70	19·60
247	ಬೆಲ್ಲ II (d) ಡಿಟೋ	79·7	8·30	
248	ರಸ II (e) ಡಿಟೋ	16·6	1·40	20·87
249	ಬೆಲ್ಲ II (e) ಡಿಟೋ	82·0	6·60	
252	ರಸ II (f) ಡಿಟೋ	20·1	·80	21·76
253	ಬೆಲ್ಲ II (f) ಡಿಟೋ	83·5	6·90	
250	ರಸ II (g) ಡಿಟೋ	19·3	1·10	20·64
251	ಬೆಲ್ಲ II (g) ಡಿಟೋ	85·2	5·40	
256	ರಸ III (a) ಡಿಟೋ	19·5	1·08	21·44
257	ರಸ III (c) ಡಿಟೋ	21·2	·40	22·16
	ಸರಾಸರಿ III (a & c) ಜಾತಿಗಳ ...	20·3	·74	21·80
258	ಬೆಲ್ಲ III (a & c) ಜಾತಿಯಿಂದ ...	84·7	5·40	
254	ರಸ III (b) ಜಾತಿಯಿಂದ ...	19·8	·74	21·16
255	ಬೆಲ್ಲ III (b) ಡಿಟೋ ...	86·5	4·70	
259	ರಸ III (d) ಡಿಟೋ ...	20·2	·40	21·16
260	ಡಿಟೋ III (e) ಡಿಟೋ ...	20·6	·30	21·16
261	ಡಿಟೋ III (f) ಡಿಟೋ ...	20·1	·50	20·80
262	ಡಿಟೋ III (g) ಡಿಟೋ ...	20·3	·50	20·90
263	ಡಿಟೋ III (h) ಡಿಟೋ ...	19·5	1·70	21·60
264	ಡಿಟೋ III (i) ಡಿಟೋ ...	20·8	1·00	22·57
	ಸರಾಸರಿ III ನಂಬರು d ಇಂದ I ವರಿವಿಗೆ ...	20·2	·73	21·36
265	ಬೆಲ್ಲ III ನಂಬರು d ಇಂದ I ವರಿಗಿನ ಜಾತಿಗಳಿಂದ	86·3	4·60	

24. ಮೈಸೂರು ರಾಜ್ಯದಲ್ಲಿ ಎಲ್ಲಾ ಕಡೆಯಲ್ಲಿಯೂ ಸಾಮಾನ್ಯವಾಗಿ ಉಪಯೋಗದಲ್ಲಿರುವ ಮೂರು ಗುಂಡು ಕಂಭ
ಗಳುಳ್ಳ ಕಬ್ಬಿಣದ ಗಾಣದಲ್ಲಿ ನಮ್ಮ ಕಬ್ಬಿನ ರಸವನ್ನು ತೆಗೆಯಲಾಯಿತು. ಈ ಗಾಣದ ಮೂರು ಗುಂಡು ಕಂಭಗಳು
7 ಇಂಚು ಅಗಲ 9 ಇಂಚು ಎತ್ತರದಂತೆ ಒಂದೇ ಪ್ರಮಾಣವುಳ್ಳವುಗಳಾಗಿದ್ದವು. ಕಬ್ಬಿನ ರಸವನ್ನು ಮೊದಲು ತಗರದಿಂದ
ಕಲಾಯಿ ಮಾಡಿದ ಕಬ್ಬಿಣದ ತೊಟ್ಟಿಗಳಲ್ಲಿ ಹಿಡಿಯಲಾಯಿತು. ಆದರೆ ಕೊಪ್ಪರಿಗೆಯಲ್ಲಿ ರಸವನ್ನು ಸುರಿಯಲು ಅದು ಸ್ವಲ್ಪ
ಕಾಲ ಸರಿಯಾದ ಸ್ಥಿತಿಯಲ್ಲಿ ಇಲ್ಲದೇ ಇದ್ದುದರಿಂದ ಕಬ್ಬಿನ ರಸವು ಸ್ವಲ್ಪ ಹೊತ್ತು ತಿಳಿಯದೇ ಇದ್ದ ದೋಷದಿಂದ ಮಣ್ಣಿನ
ಗಡಿಗೆಗಳಲ್ಲಿ ಕೂಡಿಡಲ್ಪಟ್ಟಿತು. ರಸವನ್ನು ಕಾಯಿಸುವುದಕ್ಕೆ ಮುಂಚೆ ಲಿಟ್ಮಸ್ ಕಾಗದವನ್ನು ಉಪಯೋಗಿಸಿ ಅದರಿಂದ ಚೆನ್ನಾಗಿ
ಹುಳಿ ಮುರಿಯಿತು ಎಂದು ಗೊತ್ತಾಗುವವರೆಗೂ ರಸಕ್ಕೆ ಸುಣ್ಣವನ್ನು ಸೇರಿಸಲಾಯಿತು. ರಸವು ಮರಳುವುದಕ್ಕೆ ಮುಂಚೆ
ಮೇಲೆ ತೇಲುವ ಮಡ್ಡಿಯನ್ನು ತೆಗದು ಅದನ್ನು ದಪ್ಪ ನೂಲಿನ ಬಟ್ಟೆಯಲ್ಲಿ ಶೋಧಿಸಲಾಯಿತು. ರೈತರು ಸಾಧಾರಣವಾಗಿ ಉಪ
ಯೋಗಿಸುವ ಆಳವಿಲ್ಲದ ಕಬ್ಬಿಣದ ಕೊಪ್ಪರಿಗೆಯೇ ಬೆಲ್ಲ ಮಾಡುವುದಕ್ಕೆ ಉಪಯೋಗಿಸಲ್ಪಟ್ಟಿತು. ಕೊಪ್ಪರಿಗೆಯು ಚೆನ್ನಾಗಿ
ಶುಭ್ರವಾದ ಮೇಲೆ ಇಳಿದ ಬೆಲ್ಲವು ಹೊಳೆಯುವ ಅರಸಿನದ ಬಣ್ಣವುಳ್ಳದ್ದಾಗಿತ್ತು. ಇದರಲ್ಲಿ ಪೂರಾ ಹುಳಿ ಮುರಿಯುವಷ್ಟು ಸುಂ
ಣವನ್ನು ಸೇರಿಸಿದಾಗ್ಯೂ ಬೆಲ್ಲದ ಬಣ್ಣವು ಕೆಡಲಿಲ್ಲ. ಬೆಲ್ಲವಾದರೋ ಬಹಳ ಘಟ್ಟಿಯಾಗಿದ್ದು ಮಳೆಗಾಲದಲ್ಲಿ ಜೋನೆಯಾಗುವ
ಸೂಚನೆಯನ್ನು ಕೊಂಚವಾದರೂ ತೋರ್ಪಡಿಸಲಿಲ್ಲ.

25. 213ರಿಂದ 239ನೆ ನಂಬರುಗಳ ಬೆಲ್ಲಗಳಲ್ಲಿ, ರಸವನ್ನು ಕಾಯಿಸುವಾಗ ಸಕ್ಕರೆಯ ಭಾಗವು "ಇನ್ವರ್ಷನ್"
ಎಂಬುವುದರಿಂದ ಕೆಟ್ಟುಹೋಗಲಿಲ್ಲ—ಆಮೇಲೆ ಇಳಿದ ಎಲ್ಲಾ ಬೆಲ್ಲಗಳಲ್ಲಿ, "ಇನ್ವರ್ಷನಿಂದ", ಬಹಳ ಸಕ್ಕರೆಯು ನಷ್ಟ ಹೊಂ
ದಿತು. ರಸವನ್ನು ಗಡಿಗೆಗಳಲ್ಲಿ ಇಟ್ಟಾಗ ಅದು ಅಲ್ಲಿ ಹುಳಿಯಾಗಿ ಈ ನಷ್ಟಕ್ಕೆ ಕಾರಣವಾಗಿರಬಹುದೇ ಹೊರ್ತು ಇನ್ಯಾವವಿ
ಧವಾಗಿ ಇದು ಉಂಟಾಗಿರಬಹುದೆಂದು ಹೇಳಲು ಕಷ್ಟವಾಗಿದೆ. ಈ ಗಡಿಗೆಗಳನ್ನು ಪ್ರತಿಸರ್ತಿ ಉಪಯೋಗಿಸುವುದಕ್ಕೆ ಮುಂಚೆ
ಚೆನ್ನಾಗಿ ತೊಳೆದಿದ್ದಾಗ್ಯೂ, ಅವುಗಳ ಮಣ್ಣಿನಲ್ಲಿರುವ ರಂಧ್ರಗಳಲ್ಲಿ ರಸವು ಹೀರಲ್ಪಟ್ಟಿತ್ತು. ಈ ರಸವನ್ನು ಬರೀ ತೊಳೆಯೋ
ಣದರಿಂದ ತೆಗದುಹಾಕುವುದಕ್ಕೆ ಆಗುತ್ತಿರಲಿಲ್ಲವಾದ್ದರಿಂದ, ಇದು ಸ್ವಲ್ಪ ಕಾಲದಲ್ಲಿಯೇ ಹುಳಿಯಾಗಿ, ಆಮೇಲೆ ಈ ಗಡಿಗೆಗಳಲ್ಲಿ
ತುಂಬಲ್ಪಟ್ಟ ರಸವು ಕೆಡುವುದಕ್ಕೆ ಬೀಜವಾಗಿ ಪರಿಣಮಿಸಿತು. ಆ ಮೇಲೆ ಇಳಿದ ಅಡಿಗೆಗಳಲ್ಲಿ ಸಕ್ಕರೆಯು ನಷ್ಟಹೊಂದಿದ್ದಕ್ಕೆ
ಇದೇ ಕಾರಣವಾಗಿರಬಹುದೆಂದು ಹೇಳಬಹುದು.

26. ಬೆಲ್ಲ ಮಾಡುವ ಕಾಲದಲ್ಲಿ, ಕೆಳಗಿನ ಸಂಗತಿಗಳ ವಿಷಯವಾಗಿ ಬಹಳ ಎಚ್ಚರಿಕೆಯಾಗಿರಬೇಕು :—

(1) ಲಿಟ್ಮಸ್ ಕಾಗದದಿಂದ ಪರೀಕ್ಷಿಸಿ ಅದರಿಂದ ತಿಳಿದುಬಂದಂತೆ ಪೂರಾ ಹುಳಿ ಮುರಿಯುವ ವರೆವಿಗೂ ರಸಕ್ಕೆ ಸುಂಣವನ್ನು ಸೇರಿಸುವುದು.

(2) ಮಣ್ಣು ಗಡಿಗೆಗಳನ್ನು ಉಪಯೋಗಿಸದೇ ಇರುವುದು.

(3) ಪ್ರತಿದಿನವೂ ಕೆಲಸವನ್ನು ಬಿಡುವುದಕ್ಕೆ ಮುಂಚೆ ಒಂದು ಸಾರ್ತಿಯಾದರೂ ಗಾಣವನ್ನು ಮತ್ತು ಉಪಯೋಗಿಸುವ ಎಲ್ಲಾ ಪಾತ್ರೆಗಳನ್ನು ಚೆನ್ನಾಗಿ ತೊಳೆಯುವುದು.

(4) ಗಾಣದಿಂದ ರಸವನ್ನು ತೆಗದಮೇಲೆ ಕೂಡಿದಷ್ಟು ಜಾಗ್ರತೆಯಾಗಿ ಕಾಯಿಸುವುದಕ್ಕೆ ಆರಂಭಿಸುವುದು.

(5) ಗಾಣದ ಕಂಭಗಳು ಒಂದಕ್ಕೊಂದು ಸಾಧ್ಯವಾದಷ್ಟು ಹತ್ತರ ಇರುವ ಹಾಗೆ ನೋಡಿಕೊಳ್ಳುವುದು.

27. ಗಾಣದಿಂದ ರಸವನ್ನು ತೆಗೆಯುವುದು :—

ಈ ಪುಸ್ತಕದ 3ನೆ ಪುಟದಲ್ಲಿರುವ ಮೊದಲನೆ ನಮೂನೆಯ ಕೊನೆಯ ಪಙ್ತಿಯಲ್ಲಿರುವ 100 ಪಾಂಡು ಕಬ್ಬಿನಲ್ಲಿ ಬಂದ
ರಸದ ತೂಕದ ಸಂಖ್ಯೆಗಳನ್ನು ಹೋಲಿಸಿ ನೋಡಲು ಅವುಗಳಲ್ಲಿ ಬಹಳ ಹೆಚ್ಚು ಕಡಿಮೆ ಇಧೆಯೆಂದು ತಿಳಿಯಬರುತ್ತದೆ.
II (f) ನಂಬರಿನ ಪಾತಿಯಿಂದ ಬಂದ ರಸವನ್ನು, I (h) ನಂಬರಿನ ಪಾತಿಯಿಂದ ಬಂದ ರಸದೊಂದಿಗೆ, ಹೋಲಿಸಲು, ಈ ರಸ
ಗಳ ತೂಕದಲ್ಲಿನ ಹೆಚ್ಚು ಕಡಿಮೆಯು, ಪಾತಿಗಳ ಫಸಲಿನಲ್ಲಿ ಯೇಕರಿಗೆ 28 ಪಾಂಡಿನ 50 ಮಣ ಬೆಲ್ಲ ಅಥವಾ 50 ರೂಪಾಯಿ
ಗಳಂತೆ ಹೆಚ್ಚು ಕಡಿಮೆಯನ್ನುಂಟುಮಾಡುವಷ್ಟಾಗಿತ್ತು. ಕಬ್ಬಿನಿಂದ ಚೆನ್ನಾಗಿ ರಸವನ್ನು ತೆಗಿಯದೇ ಇದ್ದ ದೋಷದಿಂದ
ಇನ್ನೂ ಹೆಚ್ಚಾದ ನಷ್ಟ ಉಂಟಾದರೂ ಆಗಬಹುದು. ಈ ವಿಷಯವನ್ನು ಸರಿಯಾದ ಅನುಕೂಲಗಳು ಒದಗಿದಾಗ ಚೆನ್ನಾಗಿ
ಪರಾಮರ್ಶೆ ಮಾಡಲಾಗುವುದು.

28. ಸಕ್ಕರೆ ಮಾಡುವ ಸೆಂಟ್ರಿಫ್ಯೂಗಲ್ ಎಂಬ ತಿರುಗುವ ಯಂತ್ರಗಳು :—

ಕಬ್ಬು ಬೆಳೆಯುವವರ ಉದ್ದೇಶವು ನಾವು ಮೊದಲನೇ ವರ್ಷದ ರಿಪೋರ್ಟಿನಲ್ಲಿ ಹೇಳಿದಂತೆ ಕಬ್ಬಿನಿಂದ ಬೆಲ್ಲ ಮಾಡುವು
ದರ ಬದಲಾಗಿ ಸಕ್ಕರೆಯನ್ನು ಮಾಡುವುದರ ಕಡೆಗೆ ಇರಬೇಕು. ಬೆಲ್ಲ ಮಾಡುವುದಕ್ಕೆ ಈಗ ಅನುಸರಿಸಿರುವ ಪದ್ಧತಿಯಲ್ಲಿರುವ
ನ್ಯೂನತೆಗಳನ್ನು ಸರಿಪಡಿಸಿ ಅದನ್ನು ಸುಧಾರಿಸಲು ಅವಕಾಶವಿದ್ದಾಗ್ಯೂ ಕಬ್ಬಿನಿಂದ ಕೆಂಪು ಸಕ್ಕರೆಯನ್ನು ಮಾಡುವುದರ ಬದ
ಲಾಗಿ ಮೇಲೆ ಹೇಳಿದಂತೆ ಬೆಲ್ಲವನ್ನೇ ಮಾಡಿದರೆ, ಹಿಂದೂಸ್ಥಾನದಲ್ಲಿ ಶುದ್ಧ ಸಕ್ಕರೆಯ ಉತ್ಪತ್ತಿಯು ದಿನೇದಿನೇ ಕ್ಷೀಣಗತಿಯನ್ನು
ಹೊಂದುವುದು. ಏಕೆಂದರೆ—ಶುದ್ಧ ಸಕ್ಕರೆಯನ್ನು ಬೆಲ್ಲದಿಂದ ಮಾಡುವುದಕ್ಕಿಂತಲೂ ಕೆಂಪು ಸಕ್ಕರೆಯಿಂದ ಮಾಡುವದು ಬಹಳ
ಕಡಿಮೆ ಖರ್ಚಿನಿಂದಾಗುತ್ತದೆ. ನಾವು ಇತರ ದೇಶದಿಂದ ನಮ್ಮ ಹಿಂದೂಸ್ಥಾನಕ್ಕೆ ಹೇರಳವಾಗಿ ವರ್ಷೇ ವರ್ಷೇ ಬರುತ್ತಲಿರುವ
ಸಕ್ಕರೆಯನ್ನು ಬರದಹಾಗೆ ಮಾಡಬೇಕಾದರೂ ಅಥವಾ ನಮ್ಮ ಸಕ್ಕರೆಯನ್ನು ಆ ದೇಶಗಳ ಸಕ್ಕರೆಗಳ ಧಾರಣೆಗೇನೆ ಮಾರಬೇ
ಕಾದರೂ ಸಹ ಯಾವ ಪದಾರ್ಥದಿಂದ ಸುಲಭವಾಗಿ ಶುದ್ಧ ಸಕ್ಕರೆ ಮಾಡುವುದಕ್ಕೆ ಅನುಕೂಲವಾಗುತ್ತದೆಯೋ ಅದನ್ನು ಪೂರ್ವ
ದಲ್ಲಿ ಸಿದ್ಧಪಡಿಸಿಕೊಳ್ಳಬೇಕು. ಇದು ಮಾಡಿದ ಹೊರ್ತು ಮನೇ.ಬಳಿಕೆಗೆ ಬೆಲ್ಲದ ಖರ್ಚು ಕಮ್ಮಿಯಾಗುತ್ತಾ ಬಂದಾಗ್ಯೂ ಅದ
ಕ್ಕೆ ಬದಲಾಗಿ ಸಕ್ಕರೆಯ ಖರ್ಚು ಹೆಚ್ಚಾದಾಗ್ಯೂ ನಮ್ಮ ದೇಶದಲ್ಲಿ ಈ ಸಕ್ಕರೆಯ ಉತ್ಪತ್ತಿಯು ಕಮ್ಮಿಯಾಗುತ್ತಲೇ ಬರು
ವುದು. ಈ ವರ್ಷ ನಮ್ಮ ಲ್ಯಾಬೋರೇಟರಿಯಲ್ಲಿ ತಿರುಗುವ ಯಂತ್ರವನ್ನು ಉಪಯೋಗಿಸಿ ಒಂದುವಿಧವಾದ ಸಕ್ಕರೆಯನ್ನು
ಮಾತ್ರ ಮಾಡಲು ಅವಕಾಶವಾಯಿತು. ಅದರಲ್ಲಿ ನೂರಕ್ಕೆ 94·1 ಶುದ್ಧ ಸಕ್ಕರೆಯ ಅಂಶವು 2·4 ಗ್ಲೂಕೋಜಿನ ಅಂಶವು
ಇತ್ತು. ಬರುವ ವರ್ಷ ಈ ವಿಷಯವಾಗಿ ಹೆಚ್ಚಾದ ಪರೀಕ್ಷೆಗಳನ್ನು ಜರುಗಿಸಲು ಅವಕಾಶ ಶಿಕ್ಕೀತೆಂಬ ಕೋರಿಕೆಯು ಇಧೆ.

33. ಭೂಮಿಯು ಎಲ್ಲಾ ಕಡೆಯಲ್ಲಿ ಒಂದೇವಿಧವಾಗಿಧೆಯೋ ಇಲ್ಲವೊ ಎಂಬುದನ್ನು ನೋಡುವ ಉದ್ದಿಶ್ಯವಾಗಿಯೂ, ನಡಸಿದ ಪರೀಕ್ಷೆಗಳು ಎಷ್ಟರಮಟ್ಟಿಗೆ ನಂಬಿಕೆಗೆ ಅರ್ಹವಾಗಿರುತ್ತವೆ ಎಂಬುದನ್ನು ನೋಡುವ ಉದ್ದಿಶ್ಯವಾಗಿಯು, ಒಂದೇವಿಧವಾದ ನಡವಳಿಕೆಗೆ ಒಳಪಟ್ಟ ಜೋಡಿ ಪಾತಿಗಳನ್ನು ಸರಿಪಡಿಸಲಾಯಿತು. 6ನೆ ನಮೂನೆಯಲ್ಲಿ ಈ ವಿಧವಾದ ಪಾತಿಗಳನ್ನು ಬ್ರಾಕೆಟ್ಟಿನಿಂದ ಶೇರಿಸಿರುತ್ತದೆ. ನಂಬರು 2 ನಂಬರ 9—ಇವೆರಡೂ ಜೋಡಿ ಶೇರಿಸಿದ್ದರಲ್ಲಿ ಪ್ರಥಮ ಪಾತಿಗಳಾಗಿರುತ್ತವೆ. ಜೋಡೀ ಪಾತಿಗಳನ್ನು ಸರ್ವಥಾ ಹೆಚ್ಚೂ-ಕಡಿಮೆ ಇಲ್ಲದಂತೆ ಒಂದೇವಿಧವಾದ ನಡವಳಿಕೆಗೆ ಒಳಪಡಿಸಿದ್ದುದರಿಂದ, ಸಾಧಾರಣವಾಗಿ ಪರೀಕ್ಷೆಗೆ ಅರ್ಹವಾದ ಭೂಮಿಯಲ್ಲಿ ಇರಬೇಕಾಗಿದ್ದ ರೀತಿಯಲ್ಲಿ, ಈ ಭೂಮಿಯಲ್ಲಿಯೂ, ಸಹ ಭೂಗುಣ ಮತ್ತು ಇತರ ಸಹಕಾರಿಗಳೂ ಒಂದೇಸಮವಾಗಿದ್ದರೆ, ಜೋಡಿ ಪಾತಿಗಳಲ್ಲಿನ ಬೆಳೆಯೂ ಸಹ ಸಾಧಾರಣವಾಗಿ ಒಂದೇ ಸಮವಾಗಿರಬೇಕಾಗಿತ್ತು. ಜೋಡೀ ಪಾತೀಗಳಲ್ಲಿ 9ನೆ ನಂಬರು, 2ನೆ ನಂಬರಿನಕಿಂತ ಇಮ್ಮಡಿಯಾಗಿ ಬೆಳೆಯನ್ನು ಕೊಟ್ಟಿರುವ ಸಂಗತಿಯನ್ನು ಯೋಚಿಸಿದರೆ, ನಾವು ಪರೀಕ್ಷೆಗೆ ಉಪಯೋಗಿಸಿದ ಭೂಮಿಯು ಒಂದೇವಿಧವಾಗಿರುವಂತೆ ಕಣ್ಣಿಗೆ ತೋರ್ಪಟ್ಟರೂ, ಪರೀಕ್ಷೆಗೆ ಅನರ್ಹವಾಗಿರುವುದು. ಇವುಗಳನ್ನು ಭಿನ್ನಭಿನ್ನ ಉದ್ದೇಶಗಳನ್ನು ವಿಷಯಿಸಿ ಪರೀಕ್ಷಿಸಿದ್ದರೆ, ಬೆಳೆಗಳಲ್ಲಿನ ವ್ಯತ್ಯಾಸವನ್ನು ನಾವು ಕೊಟ್ಟ ಭಿನ್ನ ನಡವಳಿಕೆಯಿಂದಾಯಿತೆಂದು ನಾವು ಸಹಜವಾಗಿ ತಿಳಿಯುತ್ತಿದ್ದೆವು. ಆದರೆ ನ್ಯಾಯವಾಗಿ ಭೂ ಗುಣದಲ್ಲಿನ ವ್ಯತ್ಯಾಸವು ಬೆಳೆಯಲ್ಲಿನ ವ್ಯತ್ಯಾಸಕ್ಕೆ ಮುಕ್ಕಾಲುಪಾಲು ಕಾರಣವಾಗುತ್ತಿತ್ತು. ಒಂದುವೇಳೆ ನಾವು ಎಕರೆಗೆ 100 ಪೌಂಡು ಹೆಚ್ಚಾಗಿ ಕಾಳು ಬರುವ ಹಾಗೆ ಲೆಖ್ಖಿಸಿ 2ನೆ ನಂಬರು ಪಾತಿಗೆ ಗೊಬ್ಬರವನ್ನು ಹಾಕಿದ್ದರೆ ಇದರಿಂದ ಬರುತ್ತಿದ್ದ ಫಲಿತಾಂಶವೇನಂದರೆ.—ಗೊಬ್ಬರ ಹಾಕಿದ್ದರಿಂದ ಬೆಳೆ ಹೆಚ್ಚಾಗಿ ಬರಬೇಕಾದ್ದರ ಬದಲಾಗಿ ಎಕರೆಗೆ 50 ಪೌಂಡಿನಂತೆ ಬೆಳೆಯು ಕಮ್ಮಿಯಾಗುತ್ತಿತ್ತು! ಆದುದರಿಂದ ಈ ರೀತಿಯಾದ ಭ್ರಮೆಯು ಉಂಟಾಗದೆ ತಪ್ಪಿಸಿಕೊಳ್ಳಬೇಕಾದರೆ, ವಿಸ್ತೀರ್ಣವುಳ್ಳ ಭೂಮಿಗಳಲ್ಲಿನ ಪರೀಕ್ಷೆಗಳನ್ನು ಎಷ್ಟು ಎಚ್ಚರಿಕೆಯಿಂದ ನಡಿಸಬೇಕೆಂಬುದನ್ನು ಮೇಲೆ ಹೇಳಿದ ಉದಾಹರಣೆಯು ತೋರಿಸಿಕೊಡುತ್ತದೆ. ನಮ್ಮ ಆವರಣದ ಭೂಮಿಯ ಪೈಕಿ, ಒಂದು ಜೊತೆ ಪಾತಿಗಳು ಹೀಗೆ ವ್ಯತ್ಯಸ್ತವಾದ ಫಲದಾಯಕಗಳಾಗಿ, ಮತ್ತೆ ಉಳಿದ ಪಾತಿಗಳೆಲ್ಲಾ ಒಂದೇ ಸಮವಾದ ಬೆಳೆಗಳನ್ನು ಕೊಟ್ಟಿದ್ದರೆ, ಭೂಮಿಯು ಏಕದೇಶವನ್ನಾದರೂ ಪರೀಕ್ಷೆಗೆ ಅರ್ಹವೆಂದು ಆರಿಸಬಹುದಾಗಿತ್ತು. ಈಗಾದರೋ, ಆರು ಜೊತೆ ಪಾತಿಗಳಲ್ಲಿ, ಐದು ಜೊತೆ ಪಾತಿಗಳು ಒಂದಕ್ಕೊಂದು ಸಂಬಂಧವಿಲ್ಲದಂತೆ ಫಲದಾಯಕಗಳಾಗಿರುವುದರಿಂದ, ಇನ್ನು ಕೆಲವು ವರ್ಷಗಳ ವರಿವಿಗೆ ಈ ಭೂಮಿಯಲ್ಲಿ ನಡದ ಪರೀಕ್ಷೆಗಳ ಫಲಿತಾಂಶಗಳನ್ನು ಸಂಶಯಾಸ್ಪದವುಳ್ಳವುಗಳೆಂದೇ ತಿಳಿಯಬೇಕು. ಪರೀಕ್ಷೆಯ ಭೂಮಿಯು ಮೊನ್ನಿನ ಪರ್ಯಂತರ ಬಂಜರಾಗಿದ್ದುದರಿಂದ, ಇದರಲ್ಲಿ ಇನ್ನು ವರ್ಷೇ ವರ್ಷೇ ಸಾಗುವಳಿ ಮಾಡೋಣದರಿಂದ, ಅದು ಒಂದೇವಿಧವಾದ ಫಲದಾಯಕವಾದರೂ ಆಗಬಹುದು.

34. ಗೊಬ್ಬರವನ್ನು ಹಾಕದೇ ಇದ್ದ ಪಾತಿಗಳ ಪೈಕಿ 11ನೆ ನಂಬರ ಪಾತಿಯಲ್ಲಿ 2ನೆ ನಂಬರಿನಲ್ಲಿನಕಿಂತಲೂ ನಾಲ್ಕರಷ್ಟು—9ನೆ ನಂಬರಿನಲ್ಲಿನಕಿಂತಲೂ, ಎರಡರಷ್ಟು ಬೆಳೆಯು ಬಂದಿಧೆ. 11ನೆ ನಂಬರಿಗೆ ಕೊಟ್ಟ ಒಳ್ಳೇ ಕೃಷಿಗೋಸ್ಕರವಾಗಿ, 2ನೆ ನಂಬರೂ, ಮತ್ತೂ 11ನೆ ನಂಬರು ಇವುಗಳಲ್ಲಿನ ಹೆಚ್ಚಾದ ವ್ಯತ್ಯಾಸವು ಬಹಳಮಟ್ಟಿಗೆ ಉಂಟಾಗಿದ್ದರೂ, ಮೇಲೆ ಹೇಳಿದ ಸಂಗತಿಗಳನ್ನು ಪರ್ಯಾಲೋಚಿಸಿದಲ್ಲಿ ಇದರಮೇಲೆ ನಂಬಿಕೆ ಇಡಲಾಗುವುದಿಲ್ಲ.

3, 10 ಈ ನಂಬರುಗಳಲ್ಲಿನ ಸರಾಸರಿ ಬೆಳೆಯನ್ನು 5, 12, ಇವುಗಳಲ್ಲಿನ ಸರಾಸರಿ ಬೆಳೆಯೊಂದಿಗೆ ಹೋಲಿಸಿ ನೋಡಿದರೆ, ಕ್ಯಾನಡಾ ದೇಶದ್ದನೇಗಲಿನಿಂದ ಉಳಲ್ಪಟ್ಟ ಪಾತಿಗಳಲ್ಲಿ ಬಹಳ ಸ್ವಲ್ಪವೇ ಹೆಚ್ಚಾದ ಬೆಳೆಯಾಗಿಧೆ. ಆದರೂ ಆಳವಾಗಿ ಉಳಲ್ಪಟ್ಟ ಭೂಮಿಯಲ್ಲಿಯೇ ಹೆಚ್ಚಾದ ಬೆಳೆಯು ಆಗುವುದೆಂದು ತೋರ್ಪಡುತ್ತದೆ.

35. ಮೇಲಿನ ನಮೂನೆಯಲ್ಲಿನ ಫಲಿತಾಂಶಗಳನ್ನು ನೋಡಿದರೆ, ಆಳವಾಗಿ ಅಗಿಯುವದರಿಂದ ಅಪಾಯವಿಲ್ಲವೆಂದು ತೋರುತ್ತದೆ. ಅದೇ ಭೂಮಿಯಲ್ಲಿ ಈ ವರ್ಷ ಹಾಕಿದ ಬೆಳೆಯು ಈಗ ಕಾಣಿಸುವ ರೀತಿಯಲ್ಲಿ, ಆಳವಾಗಿ ಅಗಿದುದರ ಆದಾಯ ಈ ವರ್ಷ ತೋರ್ಪಡುವದೆಂದು ನಂಬಬಹುದಾಗಿಧೆ. ಈ ಪರೀಕ್ಷೆಗಳು ಹೆಚ್ಚು ಹೆಚ್ಚಾಗಿ ನಡಿಸಿದ ಹಾಗೆಲ್ಲಾ, ಅವುಗಳ ಫಲಿತಾಂಶಗಳು ಹೆಚ್ಚಾದ ನಂಬಿಕೆಗೆ ಅರ್ಹವಾಗುವುವು.

36. (c) ಗೊಬ್ಬರಗಳನ್ನು ಹಾಕಿ ನಡಸಿದ ಪರೀಕ್ಷೆಗಳು.

ಹಿಂಡಿ ಮುಂತಾದ ಬಹಳ ಸತ್ವವುಳ್ಳ ಪಾರುವ ಗೊಬ್ಬರಗಳನ್ನು ಹೇರಳವಾಗಿ ಉಪಯೋಗಿಸಿದ್ದ ಪಾತಿಗಳಲ್ಲಿ ಬೆಳೆಯು ಅತ್ಯಧಿಕವಾಯಿತು. ಈ ಆಧಿಕ್ಯದ ಮುಂದೆ ಭೂಗುಣದಲ್ಲಿನ ವ್ಯತ್ಯಾಸದ ಪ್ರಭಾವವು ಗೋಚರಕ್ಕೇ ಬರಲಿಲ್ಲ. 6ನೆ ಮತ್ತು 13ನೆ ನಂಬರುಗಳ ಸರಾಸರಿ ಬೆಳೆಯನ್ನು 7 ಮತ್ತು 14ನೆ ನಂಬರುಗಳ ಸರಾಸರಿ ಬೆಳೆಯೊಂದಿಗೂ, ಮತ್ತು 6ನೆ ನಂಬರಿನ ಬೆಳೆಯನ್ನು 15ನೆ ನಂಬರಿನ ಬೆಳೆಯೊಂದಿಗೆ ಹೋಲಿಸಿ ನೋಡಲು, ಎರಡರಷ್ಟು ಗೊಬ್ಬರ ಹಾಕಿದ್ದ ಪಾತಿಗಳಲ್ಲಿನ ಬೆಳೆಯು ಸ್ವಲ್ಪ ಕಮ್ಮಿಯಾಗಿತ್ತು.

ನಾವು ಹಾಕಿದ ಗೊಬ್ಬರದ ಬೆಲೆಯನ್ನು ಯೋಚಿಸಿದರೆ, ಅತ್ಯುತ್ತಮ ಬೆಳೆ ಬರುವುದಕ್ಕೆ 6ನೆ ಪಾತಿಗೆ ಹಾಕಿದಷ್ಟೇ ಗೊಬ್ಬರವೂ ಸಹ ಬಹಳ ಹೆಚ್ಚಾಗಿರುವುದು. 6ನೆ ಪಾತಿಗೆ ಹಾಕಿದಷ್ಟು ಗೊಬ್ಬರದಲ್ಲಿಯೂ ಸಹ ನಾವು ಇತರ ಪಾತಿಗಳಿಗೆ ಹಾಕಿದ್ದ ಸಗಣಿ ಗೊಬ್ಬರದಲ್ಲಿನಕಿಂತಲೂ ಹೆಚ್ಚಾಗಿಯೇ ಸಸ್ಯಾಹಾರವಿರುವುದು. ಈ ಸಗಣೀ ಗೊಬ್ಬರವು ಹಸಿಯಾಗಿತ್ತು. ಅದರಲ್ಲಿ ಕೆಳಗೆ ಬರೆದಂತೆ ದ್ರವ್ಯಗಳಿದ್ದವು :—

	ನೂರಕ್ಕೆ.
ಜಲಾಂಶ	72·09
ಅಗ್ನಿಸಂಪರ್ಕದಿಂದ ನಾಶವಾಗುವ ಅಂಶ	7·51
ಯಾವ ದ್ರಾವಕದಲ್ಲಿಯೂ ಕರಗದೇ ಇರುವ ಅಂಶ	11·89
ನೈಟ್ರೋಜನ್	0·18

	ನೂರಕ್ಕೆ
ಪೊಟಾಷ್ ...	0·24
ಸುಣ್ಣ ...	0·31
ಫಾಸ್ಫಾರಿಕ್ ಆಸಿಡ್ ...	0·09

37. ಮೇಲಿನ ನಮೂನೆಯನ್ನು ನೋಡಿದರೆ, ಸಗಣೀ ಗೊಬ್ಬರವನ್ನು ಹಾಕಿದ 11ನೆ ಪಾತಿಗಳ ಹೊರ್ತಾಗಿ ಇತರ ಎಲ್ಲಾ ಪಾತಿಗಳಲ್ಲಿಯೂ ಸಹ ರಾಗಿಯ ಕಾಳು ಹೆಚ್ಚಾಗಿ ಬಂದಿಧೆ; ಹುಲ್ಲಂತೂ ಹೆಚ್ಚಾಗಿ ಬಂದೇ ಇಧೆ. ಹಿಂಡಿ ಮುಂತಾದ ಮೂರುವ ಗೊಬ್ಬರಗಳನ್ನು ಹಾಕಿದ ಪಾತಿಗಳ ಸರಾಸರಿ ಬೆಳೆಯು ಯಾವ ಗೊಬ್ಬರವನ್ನು ಹಾಕದೇ ಇದ್ದ ಪಾತಿಗಳ ಸರಾಸರಿ ಬೆಳೆಯು ನಾಲ್ಕರಷ್ಟಾಗಿರುತ್ತದೆ.

ಗೆಣಸು ಮತ್ತು ಕಡಲೇಕಾಯಿ.

38. ಗೆಣಸುಗಳ ವಿಧಗಳ ಪರೀಕ್ಷೆಯ ಫಲಿತಾಂಶವನ್ನು ಕೆಳಗೆ ಬರದಿಧೆ.

ಟೇಬಲ್ VII.

ಗೆಣಸಿನ ವಿಧದ ಹೆಸರು.	ಪ್ರತಿ ಎಕರೆಗೆ ಬಂದ ಫಸಲು.	ಷರಾ.
ವರ್ಜೀನಿಯಾ ...	13,050	ಪಾತಿಗಳು ಎಕರೆಯ 25ನೆ ಅಂಶ ವಿಸ್ತೀರ್ಣವುಳ್ಳವುಗಳಾಗಿದ್ದವು. ಪಾತಿಗಳನ್ನು ಕ್ಯಾನಡಾ ದೇಶದ ನೇಗಲಿನಿಂದ ಉಳಲ್ಪಟ್ಟವು. ಮತ್ತು ಪ್ರತಿ ಪಾತಿಗೆ 150 ಪೌಂಡು ಹರಳು ಹಿಂಡಿ, 30 ಪೌಂಡು ಎಲಬಿನ ಪುಡಿ, 12 ಪೌಂಡು ಮ್ಯೂರಿಯೇಟ್ ಆಫ್ ಪೊಟಾಷ್ ಇವುಗಳನ್ನು ಹಾಕಲಾಯಿತು.
ನ್ಯಾನ್ಸೀಮಾಂಡ್ ...	14,875	
ನ್ಯೂಜೆರ್ಸೀ ...	14,175	

ಬೆಳೆಯಲ್ಪಟ್ಟ ಮೂರುವಿಧ ಗೆಣಸುಗಳಲ್ಲಿ, ವರ್ಜೀನಿಯಾ ಜಾತಿಯಲ್ಲಿ ಬಹಳ ದೊಡ್ಡ ಗಡ್ಡೆಗಳಿದ್ದವು. ಅನೇಕ ಗಡ್ಡೆಗಳು 1 ಪೌಂಡು 4 ಔನ್ಸ ತೂಗಿದವು; ಕೆಲವು ಮಾತ್ರ 1 ಪೌಂಡು 9 ಔನ್ಸ ಸಹ ಇದ್ದವು. ನ್ಯಾನ್ಸಿಮಾಂಡ್ ಜಾತಿಯು ಉಳಿದ ಎರಡು ಜಾತಿಗಳಿಗಿಂತ ಬಹಳ ಚಿಕ್ಕ ಗಡ್ಡೆಗಳನ್ನು ಬಿಟ್ಟಿತು. ಗೆಣಸು ಬೆಳೆಯುವಾಗ ಹೇರಳವಾಗಿ ಬಳ್ಳಿ ಬೇರು ಬಿಟ್ಟು ಅದರಿಂದ ಗಡ್ಡೆಗಳು ಸಣವಾಗಿ ಹೋಗುವುದು ಸರಿಯಷ್ಟೆ. ಈ ಬಳ್ಳು ಬೇರುಗಳು ಬಿಡುವುದಕ್ಕೆ ಆಸ್ಪದವಿಲ್ಲದಂತೆ ಗೆಣಸಿನ ಬಳ್ಳಿಯನ್ನು ಆಗಾಗ್ಯೆ ತಿರುಗಿಸುವ ಪದ್ಧತಿಯುಂಟು. ಈ ತಿರುಗಿಸುವ ಪದ್ಧತಿಗೆ ಬದಲಾಗಿ ಮೊದಲನೇ ಪಾತಿಯ ಕೆಲವು ಸಾಲುಗಳನ್ನು ಚಪ್ಪರದಮೇಲೆ ಹಬ್ಬಿಸಲಾಯಿತು. ಹೀಗೆ ಹಬ್ಬಿಸಿದ ಸಾಲುಗಳಲ್ಲಿ, ಗಡ್ಡೆಗಳ ಬಿಟ್ಟು ಬೆಳೆಯು ಸಾಮಾನ್ಯ ಬೆಳೆಯಂತೇ ಆಯಿತು. ಆದರೆ ಎಲ್ಲಕ್ಕಿಂತ ದೊಡ್ಡ ಗಡ್ಡೆಗಳು ಕೆಲವು ಅಲ್ಲಿಯೇ ಇದ್ದವು.

39. ಒಂದೇ ವಿಧವಾಗಿ ಗೊಬ್ಬರ ಹಾಕಿ ಒಂದೇ ವಿಧವಾಗಿ ಭೂಮಿಯನ್ನು ಹಸನು ಮಾಡಿ ಮೂರು ಜಾತಿಯ ಕಡಲೇಕಾಯಿಗಳನ್ನು ಅವುಗಳಲ್ಲಿ ಯಾವುದು ಉತ್ತಮ ಫಸಲನ್ನು ಕೊಡುವುದೆಂಬುದನ್ನು ಪರೀಕ್ಷಿಸಲು ಬೆಳೆಯಲಾಯಿತು. ಕೆಳಗಿನ ನಮೂನೆಯನ್ನು ನೋಡಲು, ವರ್ಜಿನಿಯಾ ಜಾತಿಯು ಹೆಚ್ಚಾದ ಫಸಲನ್ನು ಪಾಂಡಿಚರಿ ಜಾತಿಯು ಕಮ್ಮಿಯಾದ ಫಸಲನ್ನು ಕೊಟ್ಟವೆಂದು ವ್ಯಕ್ತವಾಗುತ್ತದೆ. ಭೂಮಿಯಲ್ಲಿ ಬಹಳ ಹೆಚ್ಚು ಕಡಿಮೆ ಇರುವುದರಿಂದ ಈ ಫಲಿತಾಂಶಗಳು ಈ ಜಾತಿಗಳ ಗುಣದ್ಯೋತಕವಾಗಿರುವುವೆಂದು ಹೇಳಲಾಗುವುದಿಲ್ಲ. ವರ್ಜಿನಿಯಾ ಮತ್ತು ಜಪಾನ್ ಜಾತಿಗಳ ಕಾಯಿಗಳು ಸಾಧಾರಣವಾಗಿ ಈ ದೇಶದಲ್ಲಿ ಬೆಳೆಯುವ ಜಾತಿಯ ಕಾಯಿಗಳಿಗಿಂತ ಬಹಳ ದೊಡ್ಡವಾಗಿದ್ದವು. ಅದರಲ್ಲಿ ವರ್ಜಿನಿಯಾ ಜಾತಿಯ ಕಾಯಿಗಳ ಆಕಾರವು ಅತಿಶಯವಾಗಿತ್ತು. ಈ ಜಾತಿಯ ಕಡಲೇಕಾಯಿಗಳನ್ನು ಬೆಳೆಯಬೇಕೆಂದಿದ್ದ ಕೆಲವರಿಗೆ ಸ್ವಲ್ಪ ಸ್ವಲ್ಪ, ಸುಮ್ಮನೇ ಕೊಡಲಾಯಿತು; ಮತ್ತೆ ಕೆಲವರಿಗೆ ಖರೀದಿಗೆ ಮಾರಲಾಯಿತು.

ಟೇಬಲ್ VIII.

40. ಕಡಲೇಕಾಯಿಗಳ ಫಸಲು.

ಕಡಲೇಕಾಯಿಯ ಜಾತಿ.	ಪ್ರತಿ ಯಕರೆಗೆ ಬಂದ ಫಸಲು.
ಜಪಾನ್ ...	8,950
ವರ್ಜನಿಯ ...	10,100
ಪಾಂಡಿಚರಿ ...	6,925

41. ಮೇಲೆ ಹೇಳಿದ ಮೂರು ಜಾತಿಯ ಕಡಲೇಕಾಯಿಗಳೂ ಮೂರು ಜಾತಿಯ ಗೆಣಸುಗಳೂ, ಇಂಡಿಯಾ ಗವರ್ನಮೆಂಟಿನ ಇನಸ್ಪೆಕ್ಟರ್ ಜನರಲ್ ಜೆ. ಡಬ್ಲಿಯೂ ಮಾಲಿಸನ್ ಸಾಹೇಬರವರಿಂದ ಕಳುಹಿಸಲ್ಪಟ್ಟವುಗಳಾಗಿದ್ದವು.

ರಾಗಿ.

29. ಈ ಧಾನ್ಯದ ವಿಷಯವಾಗಿ ಮುಂದೆ ನಡಿಯತಕ್ಕ ಯಾವ ಪರೀಕ್ಷೆಗಳು ಫಲವತ್ತಾಗಿ ಪರಿಣಮಿಸಬಹುದು ಎಂಬುದರ ವಿಷಯವಾಗಿ ಸ್ವಲ್ಪಮಟ್ಟಿಗೆ ಸೂಚನೆಗಳನ್ನು ಕಂಡು ಹಿಡಿಯಲು ನಮ್ಮ ಆಫೀಸಿನ ಆವರಣದಲ್ಲಿ ಎಕರೆಯ 200ನೆ ಭಾಗ ವಿಸ್ತೀರ್ಣವುಳ್ಳ ಪಾತಿಗಳಲ್ಲಿ ರಾಗಿಯನ್ನು ಬಿತ್ತಿ ಕೆಲವು ಸೂಚನೀಯ ಪರೀಕ್ಷೆಗಳನ್ನು ನಡಿಸಲಾಯಿತು. * ಈ ಪರೀಕ್ಷೆಗಳು ಮೂರು ಪ್ರಕಾರವಾಗಿದ್ದವು.

(1) ರಾಗಿಯ ಜಾತಿಗಳ ಪರೀಕ್ಷೆ.

(2) ಪೈರಿಗೆ ಭೂಮಿಯನ್ನು ಹಸನು ಮಾಡುವದರ ಪರೀಕ್ಷೆ.

(3) ಗೊಬ್ಬರಗಳನ್ನು ಪ್ರಯೋಗಿಸಿ ನಡಿಸಿದರ ಪರೀಕ್ಷೆ.

30. (a) ರಾಗಿಯ ಜಾತಿಗಳು.

ಈ ಇಲಾಖೆಯ ಇಬ್ಬರು ಅಸಿಸ್ಟೆಂಟರುಗಳು ಹನ್ನೊಂದು ಜಾತಿಯ ರಾಗಿಯನ್ನು ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಹುಡುಕಿ ತಂದರು. ಎಲ್ಲಾ ಪಾತಿಗಳನ್ನು ಒಂದೇ ವಿಧವಾಗಿ ಉತ್ತು ಹಸನುಮಾಡಿ ಒಂದೇವಿಧವಾಗಿ ಎಲುಬಿನ ಪುಡಿ, ಹಿಂಡಿ, ಮತ್ತು ಕೈನಿಟ್ ಇವುಗಳನ್ನು ವಿಶೇಷವಾಗಿ ಹಾಕಿ, ಈ ಹನ್ನೊಂದು ಜಾತಿಗಳನ್ನು ಬಿತ್ತಲಾಯಿತು. ಜಾತಿ ಪ್ರಭೇದಗಳನ್ನು ಅನುಸರಿಸಿ ಅವುಗಳ ಬೆಳವಳಿಕೆಗಳಲ್ಲೇನಾದರೂ ವಿಶೇಷ್ಯವಿರಬಹುದು ಎಂಬುವದನ್ನು ಕಂಡು ಹಿಡಿಯುವದು, ಬಿತ್ತಿದಾರಭ್ಯ ಕುಯಿಲು ಪರ್ಯಂತರ ಆಗುವ ಕಾಲಗಳಲ್ಲೇನಾದರೂ ವಿಶೇಷವಾಗಿ ಹೆಚ್ಚು ಕಡಿಮೆಯು ಇರುವದೇ ಎಂಬುದನ್ನು ತಿಳಿಯುವದು, ಎಲ್ಲಾ ಜಾತಿಗಳೂ ಸ್ವಲ್ಪ ಸ್ವಲ್ಪವಾಗಿಯಾದರೂ ಮಿಶ್ರಿತವಾಗಿದ್ದುದರಿಂದ ಹೆಸರಿಗೆ ಸರಿಯಾದ ಜಾತಿಗಳನ್ನು ವಿಂಗಡಿಸುವುದು; ಈ ಉದ್ದೇಶಗಳನ್ನನುಸರಿಸಿ ಪರೀಕ್ಷೆಗಳನ್ನು ನಡಿಸಿದ್ದುದರಿಂದ ಒಂದೇವಿಧವಾದ ಜಾತಿಗಳನ್ನು ಬಿತ್ತಲು ಎರಡೆರಡು ಪಾತಿಗಳನ್ನು ಪಯೋಗಿಸಲಿಲ್ಲ.

* ಎಲ್ಲಾ ಪಾತಿಗಳಲ್ಲಿ 1903ನೆ ಆಗಸ್ಟು 4ನೆ ತಾರೀಖಿನಲ್ಲಿ ರಾಗಿಯು ಬಿತ್ತಲ್ಪಟ್ಟಿತು. ಮತ್ತು 1903ನೆ ಡಿಸೆಂಬರ 13, 14, 15ನೆ ತಾರೀಖುಗಳಲ್ಲಿ ಕುಯ್ಯಲ್ಪಟ್ಟಿತು.

ಕೆಳಗಿನ ನಮೂನೆಯಲ್ಲಿ, ಪ್ರತಿ ಪಾತಿಯಲ್ಲಿ ಬಂದ ರಾಗಿಯ ಧಾನ್ಯ, ಮತ್ತು ಹೊಟ್ಟು ಸಹಿತವಾದ ಹುಲ್ಲು ಇವುಗಳನ್ನು ತೋರಿಸಿರುತ್ತದೆ.

ಟೇಬಿಲ್ ನಂಬರು V.

ರಾಗಿಯ ಜಾತಿಗಳು.

ರೇಂಜು ಮತ್ತು ಪಾತಿ.	ರಾಗಿಯ ಜಾತಿ.	ಭೂಮಿಯನ್ನು ಹಸನು ಮಾಡಿದ ರೀತಿ.	ಹಾಕಿದ ಗೊಬ್ಬರದ ವಿವರ.	[illegible]	ಕಾಳಿನ ತೂಕ.		ಈ ಲೆಖ್ಖದಪ್ರಕಾರ ಪ್ರತಿ ಎಕರೆಗೆ ಆಗಬಹುದಾದ ಕಾಳಿನ ತೂಕ.
					ಪಾ.	ಟನ್ಸ್.	ಪೌಂಡುಗಳು
ರೇಂಜ್ A ಪಾತಿ 16 ...	ಮಜ್ಜಿಗೆ ರಾಗಿ ...	ಕ್ಯಾವಡಾ ದೇಶನನೇಗಲಿನಿಂದ ಉತ್ತದ್ದು	$18\frac{3}{4}$ ಪೌಂಡುಗಳು ಹರಳು ಹಿಂಡಿ, $3\frac{3}{4}$ ಪೌಂಡು ಎಲುಬಿನ ಪುಡಿ, $1\frac{1}{2}$ ಪೌಂಡು ಮ್ಯೂರಿಯೇಟ್ ಆಫ್ ಪೊಟಾಷ್.	51	4	10	925
ಡಿಟೋ ಡಿಟೋ 17 ..	ಕೋಣನಕೊಂಬಿನ ರಾಗಿ.	ಡಿಟೋ...	ಡಿಟೋ...	$42\frac{1}{2}$	5	$2\frac{1}{2}$	1,031
ಡಿಟೋ ಡಿಟೋ 18	ಜೇನುಮುದ್ದಿನ ರಾಗಿ ...	ಡಿಟೋ...	ಡಿಟೋ ..	52	9	$5\frac{1}{4}$	1,865
ಡಿಟೋ ಡಿಟೋ 19 ...	ಬಾಳೇಪಟ್ಟೆ ರಾಗಿ ...	ಡಿಟೋ...	ಡಿಟೋ	$42\frac{1}{2}$	7	2	1,425
ಡಿಟೋ ಡಿಟೋ 20	ಗಿಡ್ಡರಾಗಿ ...	ಡಿಟೋ...	ಡಿಟೋ ..	45	6	$5\frac{1}{2}$	1,268
ಡಿಟೋ ಡಿಟೋ 21	ಸಣ್ಣಕರೇ ರಾಗಿ ...	ಡಿಟೋ...	ಡಿಟೋ ..	46	7	$8\frac{1}{2}$	1,506
ರೇಂಜ್ B ಪಾತಿ 15 ..	ಹುಲ್ಲುಬಿಳೀ ರಾಗಿ ...	ಡಿಟೋ...	ಡಿಟೋ	20	6	13	1,362
ಡಿಟೋ ಡಿಟೋ 17 ..	ಹಸರುಕಂಬಿ ರಾಗಿ ...	ಡಿಟೋ ..	ಡಿಟೋ	27	6	$14\frac{1}{2}$	1,381
ಡಿಟೋ ಡಿಟೋ 18 ..	ದೊಡ್ಡ ರಾಗಿ ...	ಡಿಟೋ ..	ಡಿಟೋ...	32	6	2	1,225
ಡಿಟೋ ಡಿಟೋ 19 ...	ಗುಂಡುತೆನೆ ಕರೇ ರಾಗಿ ...	ಡಿಟೋ...	ಡಿಟೋ	43	6	$3\frac{1}{2}$	1,243
ಡಿಟೋ ಡಿಟೋ 20 ...	ಮಾದಯ್ಯನಗಿರಿ ರಾಗಿ ...	ಡಿಟೋ...	ಡಿಟೋ ..	29	6	$1\frac{1}{2}$	1,218

31. ಕೆಳಗೆ ಕಂಡ VIನೆ ನಮೂನೆಯಿಂದ ತಿಳಿಯುಬರುವ ಪ್ರಕಾರ ಒಂದೇವಿಧವಾಗಿ ಉತ್ತು ಹಸನು ಮುಂತಾದ್ದು ಮಾಡಿದ್ದ ಎರಡು ಪಾತಿಗಳಲ್ಲಿ ಅದರಲ್ಲಿಯೂ ಮುಖ್ಯವಾಗಿ ಗೊಬ್ಬರ ಹಾಕದೇ ಇದ್ದ ಪಾತಿಗಳಲ್ಲಿ ಮತ್ತು ದನದ ಗೊಬ್ಬರ ಹಾಕಿದ್ದ ಪಾತಿಗಳಲ್ಲಿ ಬೇರೆ ಬೇರೆ ಫಲಿತಾಂಶಗಳು ತೋರಿಬಂದವು. ಇದರಿಂದ ನಾವು ಮುಂದೆ ತೋರಿಸಿಕೊಡುವಂತೆ ಭೂಮಿಯು ಒಂದೇ ಸಮನಾಗಿ ಇರಲಿಲ್ಲವೆಂದು ತಿಳಿಯುಬರುತ್ತದೆ. 16, 18ನೆ ಪಾತಿಗಳಲ್ಲಿ ಕಂಡುಬಂದ ವಿಶೇಷ ಹೆಚ್ಚು ಕಡಮೆಗಳು ಸಹ ಭೂಮಿಯಲ್ಲಿರತಕ್ಕ ಹೆಚ್ಚು ಕಡಿಮೆಯಿಂದಲೇ ಆಗಿರಬಹುದು. ಹೇಗಾದರೂ ಸರಿ ಇಂತಹ ಜಾತಿಯು ನಾವು ಈಗ ಹಾಕಿದ ಹೆಚ್ಚಾದ ಗೊಬ್ಬರದಿಂದ ಅತ್ಯುತ್ತಮ ಫಲದಾಯಕವಾಗುವುದು ಎಂಬುದನ್ನು ಇನ್ನು ಕೆಲವು ವರ್ಷಗಳ ಪರಿಯಂತರ ಪ್ರಾಮಾಣಿಕವಾಗಿ ಹೇಳಲಾಗುವುದಿಲ್ಲ. ಬೆಳವಳಿಕೆಯಲ್ಲಿನ ಹೆಚ್ಚು ಕಡಿಮೆಯು ಕ್ರಿಯಲಿಗೆ ಬರುವುದಕ್ಕೆ ತಗಲತಕ್ಕ ಕಾಲಗಳು ಇವುಗಳ ಪ್ರಸ್ತಾಪವು ಸಹ ಮುಂದೆ ಕ್ರಮೇಣ ಮಾಡಲಾಗುವದು.

32. (b) ಪೈರಿಗೆ ಭೂಮಿಯನ್ನು ಹಸನು ಮಾಡುವುದು.

ಈ ಪರೀಕ್ಷೆಗಳಲ್ಲಿ :—

(1) ಮೈಸೂರು ದೇಶದ ಸಾಧಾರಣ ನೇಗಲಿನಿಂದ ಉತ್ತದುದು. ಈ ನೇಗಲು ಉತ್ತ ಮಣ್ಣನ್ನು ತಿರುಗಿಸದೆ ಸುಮ್ಮನೆ ಭೂಮಿಯನ್ನು ಪೊಳ್ಳಾಗಿ ಮಾತ್ರ ಮಾಡುವುದು. (2) (ವನ್ ಹಾರ್ಸ್‌ಪ್ಲೊ) ಒಂದು ಕುದುರೆಯಿಂದ ಯಳೆಯಬಹುದಾದ ಕ್ಯಾನಡಾ ದೇಶದ ನೇಗಲಿನಿಂದ ಉತ್ತದುದು. ಈ ನೇಗಲು ಯೂರೋಪ್, ಅಮೆರಿಕ ದೇಶಗಳಲ್ಲಿ ಸಾಧಾರಣವಾಗಿ ಉಪಯೋಗದಲ್ಲಿರುವ ನೇಗಲುಗಳ ರೂಪವುಳ್ಳದ್ದಾಗಿದ್ದು ಅವುಗಳಿಕಿಂತ ಚಿಕ್ಕದಾಗಿರುತ್ತದೆ—ಇದು ಉತ್ತ ಮಣ್ಣನ್ನು ಮಗುಚಿಹಾಕುವ ಸಾಮರ್ಥ್ಯವುಳ್ಳದ್ದಾಗಿರುತ್ತದೆ. ಇದರಲ್ಲಿ ಬೇಕಾದಾಗ ಕಳಚಿಹಾಕುವ ಹಾಗೆ (ಮೋಲ್ಡ್ ಬೋರ್ಡ್) ಮಣ್ಣು ತಿರುಗಿಸುವ ತಗಡೂ (ಲಾಂಡ್ ಸೈಡ್) ಉಳಿದೇ ಇದ್ದ ಭೂಮಿಯ ಮಣ್ಣನ್ನು ಉತ್ತ ದೋಣಿಗೆರೆಯಲ್ಲಿ ಬೀಳದಹಾಗೆ ಮಾಡುವ ತಗಡೂ (ಸ್ಟೋಲ್) ಗುಳವನ್ನು ತಗಲುಹಾಕತಕ್ಕ ತಗಡೂ (ಪ್ಲೋಪಾಯಿಂಟ್ಸ್) ಗುಳ ಇವೇ ಮೊದಲಾದ ಸಾಮಗ್ರಿಯಗಳು ಇವೆ. ಇದರಿಂದ ಆರಂಗುಲ ಆಳ ಭೂಮಿಯನ್ನು ಉತ್ತು ಮಣ್ಣನ್ನು ತಿರುಗಿಸಿಹಾಕಲು ಸಾಧ್ಯವಾಯಿತು.

(3) 18 ಅಂಗುಲ ಆಳ ಭೂಮಿಯನ್ನು ಅಗನುದು.

ಟೇಬಲ್ VI.

ಗೊಬ್ಬರಗಳನ್ನು ವಿಧವಿಧವಾಗಿ ಉಪಯೋಗಿಸಿಯೂ ಮತ್ತು ಭೂಮಿಯನ್ನು ವಿಧವಿಧವಾಗಿ ಸಾಗುವಳಿ ಮಾಡಿಯೂ ರಾಗಿಯನ್ನು ಬಿತ್ತಿ ಮಾಡಿದ ಪರೀಕ್ಷೆಗಳು.

ರೇಂಜು ಮತ್ತು ಪ್ಲಾಟು.	ಸಾಗುವಳಿ ಮಾಡಿದ ರೀತಿ.	ಹಾಕಿದ ಗೊಬ್ಬರದ ವಿವರ.	ಬಂದ ಹುಲ್ಲಿನ ತೂಕ.	ಕಾಳಿನ ತೂಕ.		ಈ ಲೆಖ್ಖದ ಪ್ರಕಾರ ಬಂದು ಎಕರೆಗೆ ಆಗಬಹುದಾದ ಕಾಳಿನ ತೂಕ.
				ಪಾ.	ಟೆನ್ಸ್	
ರೇಂಜು B. ಪ್ಲಾಟ್ 2.	ಮೈಸೂರುದೇಶದ ನೇಗಲಿನಿಂದ ಉತ್ತದ್ದು.	ಯಾವ ಗೊಬ್ಬರವನ್ನು ಹಾಕದೇ ಇದ್ದದ್ದು.	I, 2½		13½	168
ಡಿಟೋ 9 ..	ಡಿಟೋ ...		II 4	1	9½	318
ಡಿಟೋ 3 ..	ಡಿಟೋ	2½ ಹಂಡ್ರೆಡ್‌ವೇಟ್ ದನದ ಗೊಬ್ಬರ.	I 6½	2	2½	431
ಡಿಟೋ 10 ..	ಡಿಟೋ ...	ಡಿಟೋ ...	II 9½	3	4½	656
ಡಿಟೋ 11	ಕ್ಯಾನಡಾ ದೇಶದ ನೇಗಲಿನಿಂದ ಉತ್ತದ್ದು.	ಯಾವ ಗೊಬ್ಬರವನ್ನು ಹಾಕದೇ ಇದ್ದದ್ದು.	I 4½	3	8	700
ಡಿಟೋ 5 ..	ಡಿಟೋ ...	2½ ಹಂಡ್ರೆಡ್‌ವೇಟ್ ದನದ ಗೊಬ್ಬರ.	I 5½	1	14½	381
ಡಿಟೋ 12 ..	ಡಿಟೋ ...	ಡಿಟೋ ...	II 7	3	11½	743
ಡಿಟೋ 6 ..	ಡಿಟೋ ...	18¾ ಪೌಂಡು ಬಿಳೀ ಹರಳು ಹಿಂಡೀಪುಡಿ, 3¾ ಪೌಂಡು ಎಲುಬಿನ ಪುಡಿ, 1½ ಪೌಂಡು ಮ್ಯೂರೇಟ್ ಆಫ್ ಪೊಟ್ಯಾಷ್.	I 28½	7	5¾	1,472
ಡಿಟೋ 13 ..	ಡಿಟೋ ..	ಡಿಟೋ	II 26½	10	5	2,062
ಡಿಟೋ 7 ..	ಡಿಟೋ ..	ಮೇಲೆ ಹೇಳಿದುದರ ಎರಡರಷ್ಟು.	I 39	7	...	1,400
ಡಿಟೋ 14 ..	ಡಿಟೋ	ಡಿಟೋ	II 33½	9	8	1,900
ಡಿಟೋ 8 ..	ಭೂಮಿಯನ್ನು 2 ಅಡಿ ಆಳ ಅಗದದ್ದು.	18¾ ಪೌಂಡುಗಳು ಬಿಳೀಹರಳು ಹಿಂಡಿ ಪುಡಿ, 3¾ ಪೌಂಡು ಎಲುಬಿನ ಪುಡಿ, 1½ ಪೌಂಡು ಮ್ಯೂರಿಯೇಟ್ ಆಫ್ ಪೊಟ್ಯಾಷ್.	21½	6	13¾	1,371
ಡಿಟೋ 15	ಡಿಟೋ ...	ಮೇಲೆ ಹೇಳಿದುದರ ಎರಡರಷ್ಟು.	20	6	13	1,362

ಕಾಫಿಯು ಬೀಜಗಳಲ್ಲಿನ ತಾರತಮ್ಯ.

42. ನಾಲ್ಕನೇ ವಾರ್ಷಿಕ ರಿಪೋರ್ಟಿನಲ್ಲಿ ಕಂಡ ಕಾಫಿಯು ಬೀಜಗಳ ತಾರತಮ್ಯವನ್ನು ಕಂಡುಹಿಡಿಯುವ ಕೆಲಸವನ್ನು ಪೂರೈವೃದ್ಧಿಗೆ ತರುವ ಉದ್ದಿಶ್ಯ ದಕ್ಷಿಣ ಹಿಂದೂಸ್ಥಾನದ ಯೂನೈಟೆಡ್ ಪ್ಲ್ಯಾಂಟರ್ಸ್ ಅಸೋಸಿಯೇಷನ್ ಎಂಬ ಸಂಘದವರು 51 ಜಾತಿಯ ಕಾಫಿಯು ಬೀಜಗಳನ್ನು ಅವುಗಳಿಗೆ ಲಂಡನ್ ಪಟ್ಟಣದಲ್ಲಿ ಬಂದ ಬೆಲೆಯ ಪಟ್ಟಿಯೊಂದಿಗೆ ಕಳುಹಿಸಿದರು. ಕಾಫಿಯ ಕಷಾಯದ ರುಚಿಯನ್ನು ನೋಡಿ ಬೀಜದ ಗುಣವನ್ನು ಕಂಡು ಹಿಡಿಯುವ ಪದ್ಧತಿಯ ಪ್ರಕಾರ ಮೇಲೆ ಹೇಳಿದ ಬೀಜಗಳನ್ನು ಎಷ್ಟರ ಮಟ್ಟಿಗೆ ಮಾರಲ್ಪಟ್ಟವು ಎಂಬುದು ತಿಳಿಯುವುದಿಲ್ಲ. ಇದಲ್ಲದೆ ಖರೀದಿಯನ್ನು ಕಂಡುಹಿಡಿದ ಅನುಭವಶಾಲಿಯಿಂದ ಈ ಜಾತಿಗಳ ಬಣ್ಣ ಮತ್ತು ಅವು ಕಾಣಿಸುವರೀತಿ ಇವುಗಳ ವಿಷಯವಾಗಿ ಯಾವ ರಿಪೋರ್ಟು ಬಂದಿರುವುದಿಲ್ಲ. ರಸಾಯನ ಶಾಸ್ತ್ರ ರೀತ್ಯಾ ಈ ಜಾತಿಗಳ ಪರೀಕ್ಷೆಯು ಇನ್ನೂ ಪೂರ್ತಿಯಾಗಿರುವುದಿಲ್ಲ. ಕಾಫಿಯು ಬೀಜಗಳ ಗುಣಗಳನ್ನು ಕಂಡುಹಿಡಿಯುವುದು ಎಲ್ಲರಿಗೂ ಬಹಳ ಬೇಕಾದ ವಿಷಯವಾಗಿರುವುದರಿಂದ ಮೇಲೆ ಹೇಳಿದ 51 ಜಾತಿಗಳ ಘನತ್ವವನ್ನೂ ಅವುಗಳ ಖರೀದಿಗಳನ್ನೂ ಕೆಳಗೆ ತೋರಿಸಿದೆ.

ಪ್ರತಿ ಪ್ರತಿ ದೇಶದ ಬೀಜಗಳನ್ನು ಬೇರೆ ಬೇರೆ ನಮೂನೆಗಳಲ್ಲಿ ತೋರಿಸಿದೆ.

ಏಕೆಂದರೆ, ಈಗ ನಮಗೆ ತಿಳಿದಿರುವ ಮಟ್ಟಿಗೆ ಒಂದು ಜಾತಿಯ ಬೀಜಗಳ ಘನತ್ವವನ್ನು ಇನ್ನೊಂದು ಜಾತಿಯ ಬೀಜಗಳ ಘನತ್ವದೊಂದಿಗೆ ಒಂದೇ ನಮೂನೆಯಲ್ಲಿ ತೋರಿಸುವುದರಲ್ಲಿ ಏನೂ ಪ್ರಯೋಜನವಿರುವುದಿಲ್ಲ. XVನೆ ನಮೂನೆಯಲ್ಲಿ ತೋರಿಸಿರುವ ಕೋಸ್ಟರೀಕಾ ದೇಶದ 5 ತರಹೆಯ ಬೀಜಗಳು ಈ ವಿಷಯವನ್ನು ನಿದರ್ಶಿಸುತ್ತವೆ. ಈ ಐದರಲ್ಲಿ, 97 ಮತ್ತು 116 ಇವುಗಳು ಒಂದು ಜಾತಿಗೆ ಸೇರಿದವುಗಳು. ಉಳಿದವುಗಳು ಮತ್ತೊಂದು ಜಾತಿಗೆ ಸೇರಿದವುಗಳು. ಘನತ್ವವನ್ನು ವೆಸ್ಟಫಾಲ್ ರವರ ತಕ್ಕಡಿಯನ್ನು ಉಪಯೋಗಿಸಿ, 0·821 ನಿಂದ 0·829 ಘನತ್ವವುಳ್ಳ ಅಲ್ಕಹೋಲ್ (ಸಾರಾಯಿ) ನಲ್ಲಿ ಕಂಡುಹಿಡಿಯಲಾಯಿತು. 1902—03ರಲ್ಲಿ ಅನುಸರಿಸಿದ ರೀತಿಗಿಂತ ಇದು ಬಹಳ ಚೆನ್ನಾಗಿತ್ತು. ನೀರಿಗೆ ಬದಲಾಗಿ ಅಲ್ಕಹೋಲನ್ನು ಉಪಯೋಗಿಸಿದರೂ ಸಹ ಇದು ನಿರ್ದೋಷವಾದ ಪದ್ಧತಿಯಾ[illegible]ರುವುದಿಲ್ಲ. ಏಕೆಂದರೆ, ಒಂದೇ ಪರೀಕ್ಷೆಯನ್ನು ಎರಡುಸಾರ್ತಿ ಮಾಡಿ ನೋಡಲಾಗಿ, ಈ ಎರಡು ಪರೀಕ್ಷೆಗಳು ಯಾವಾಗಲೂ [illegible]ದೇವಿಧವಾಗಿರಲಿಲ್ಲ. ಇದರಿಂದ ಒಂದೇ ಪದಾರ್ಥವನ್ನು ನಾಲ್ಕೈದು ಸಾರ್ತಿ ಪರೀಕ್ಷೆ ಮಾಡಬೇಕಾಯಿತು.

[illegible]ಬಲ್ IX.

[illegible]ಸೂರು ಕಾಫಿ.

ನಂಬರು.	ಬೀಜಕ್ಕೆ ಬಂದ ಬೆಲೆ.	ಘನತ್ವ.	ತಾರತಮ್ಯದಲ್ಲಿ ಅದರ ಸ್ಥಾನ.		ಷರಾ.
			ಘನತ್ವದ ಪ್ರಕಾರ.	ಬೆಲೆಯ ಪ್ರಕಾರ.	
127	114	1·281	1	1	
128	112	1·270	2	2	ಬಂದನೇ ನಂಬರಿನ ಬೀಜಕ್ಕಿಂತ ಬಹಳ ಉತ್ತಮ ಬಣ್ಣ ವುಳ್ಳದ್ದು.
105	95	1·259	6	3	ಕಣ್ಣಿಗೆ ಬಹಳ ಅಂದವಾದದ್ದು, ಚಪ್ಪಟೆಯಾದ ಬೀಜ, ನೀಟಾದ ನಾಮವುಳ್ಳದ್ದು.
101	92	1·263	3	4	
102	88	1·262	4	5	
100	74	1·262	5	6	
107	62	1·237	11	7	
83	60	1·241	10	8	
129	57	1·251	9	9	
84	55	1·254	8	10	ಬಹಳ ಕೀಳಾದದ್ದು-ಮಾಸಿದಬಣ್ಣ ವುಳ್ಳದ್ದು.
130	50	1·257	7	11	ಬಹಳ ಕೀಳಾದದ್ದು-ಬಣ್ಣ ತೆಗೆಯಲ್ಪಟ್ಟದ್ದು.
106	49	·233	13	12	
85	47	1·234	12	13	

43. ಈಗ ನೋಡುವುದರಲ್ಲಿ 128ನೆ ನಂಬರು 127ನೆ ನಂಬರಿನಕಿಂತ ಬಹಳ ಚನ್ನಾದ ಬಣ್ಣವುಳ್ಳದ್ದಾಗಿದ್ದಾಗ್ಯೂ ಅದಕ್ಕೆ ಕಮ್ಮಿಯಾದ ಬೆಲೆಯು ಬಂತು. ಮತ್ತು ಅದರ ಘನತ್ವವು ಖಂಡಿತವಾಗಿ ಕಮ್ಮಿಯಾಗಿಯೇ ಇರುತ್ತದೆ. ಈ ಮಾದರಿಯ ಕಾಫಿಗಳು ಬೆಳೆದ ತೋಟಗಳಿಂದ, ಕಷಾಯದ ರುಚಿಯಿಂದ ಗುಣವನ್ನು ಕಂಡು ಹಿಡಿಯುವ ಪದ್ಧತಿಯ ಪ್ರಕಾರ ಬೆಲೆ ಕಟ್ಟಲ್ಪಟ್ಟು ಮಾರಲ್ಪಟ್ಟವೆಯೆಂದು ತೋರುತ್ತದೆ. 105ನೆ ನಂಬರು ಕಣ್ಣಿಗೆ ಬಹಳ ಇಂಪಾಗಿ ಕಾಣಿಸುವ ಮಾದರಿಯಾಗಿರುವದಲ್ಲದೆ, ಅದರಲ್ಲಿ ನೀಟಾಗಿರುವ ನಾವುದಿಂಗೊಡಗೂಡಿದ ಚಪ್ಪಟೆಯಾದ ಬೀಜಗಳಿದ್ದವು. ಈ ಬೀಜದ ಅಂದವು ಅದಕ್ಕೆ ಹೆಚ್ಚಾದ ಬೆಲೆಯನ್ನು ತಂದುಕೊಡಲು ಬಹುಶಃ ಸಹಾಯವಾಗಿರುವುದು. 130 ಮತ್ತು 84 ಈ ನಂಬರುಗಳು ಕಣ್ಣಿಗೆ ಬಹು ನೀಚವೆಂದು ತೋರುವ ಮಾದರಿಗಳು. 107 ಮತ್ತು 83 ಈ ನಂಬರುಗಳು ಇವುಗಳಿಗಿಂತ ಬಹಳ ಇಂಪಾದವುಗಳಾಗಿರುತ್ತವೆ. ಈ ಮಾದರಿಗಳ ಬೆಲೆಗಳನ್ನು ಯಾವ ಪದ್ಧತಿಯ ಪ್ರಕಾರ ಕಟ್ಟಿರುತ್ತಾರೋ ಎಂಬುದು ನಮಗೆ ತಿಳಿಯದೇ ಇರುವುದರಿಂದ ಇವುಗಳಿಗೆ ಬಂದ ಬೆಲೆಗಳು ಸರಿಯಾದವುಗಳೋ ಅಲ್ಲವೋ ಎಂಬುದನ್ನೂ ಮತ್ತು ಅವುಗಳ ಬೆಲೆಗಳು ಅದಲಾಬದಲು ಆಗಿರಬಹುದೋ ಏನೋ ಎಂಬುದನ್ನು ಖಂಡಿತವಾಗಿ ಹೇಳಲಾಗುವುದಿಲ್ಲ. ಹೇಗಾದರೂ ಸರಿಯೇ, ಕಟ್ಟಲ್ಪಟ್ಟ ಬೆಲೆಗಳು ಸಾಧಾರಣವಾಗಿ ಘನತ್ವವನ್ನು ಅನುಸರಿಸಿರುತ್ತವೆ.

ಟೇಬಲ್ X.

ಕೊಡಗು ಕಾಫಿ.

ನಂಬರು.	ಬೀಜಕ್ಕೆ ಬಂದಬೆಲೆ.	ಘನತ್ವ.	ತಾರತಮ್ಯದಲ್ಲಿ ಅದರಸ್ಥಾನ. ಘನತ್ವದ ಪ್ರಕಾರ.	ತಾರತಮ್ಯದಲ್ಲಿ ಅದರಸ್ಥಾನ. ಬೆಲೆಯ ಪ್ರಕಾರ.	ಷರಾ.
133	68	1·258	1	1	
132	62	1·252	2	2	
131	53	1·239	3	3	
86	53	1·202	8	4	ಇದಕ್ಕೆ ಬಂದ ಹೆಚ್ಚಾದ ಬೆಲೆಯ ಕಾರಣವು ಅಗೋಚರವಾಗಿರುವುದು.
108	52	1·231	5	5	
87	50	1·228	6	6	
110	47	1·236	4	7	ಬಂದೇ ಸಮವಾಗಿರಲಿಲ್ಲ. ಕೆಟ್ಟ ಬಣ್ಣವುಳ್ಳದ್ದಾಗಿತ್ತು. ಸ್ವಲ್ಪಮಟ್ಟಿಗೆ ಸರಟೆ ಕೊಂಡಹಾಗಿತ್ತು.
109	47	1·217	7	8	
88	45	1·175	9	9	

44. ಕಣ್ಣಿಗೆ ಕಾಣಿಸುವ ರೀತಿಯನ್ನು ಮತ್ತು ಘನತ್ವವನ್ನು ನೋಡಿದರೆ 86ನೆ ನಂಬರು ಅದಕ್ಕೆ ಬಂದಿರುವ ಉನ್ನತಸ್ಥಿತಿಯನ್ನು ಹೇಗೆ ಹೊಂದಿತು ಎಂಬುದನ್ನು ಹೇಳಲು ಅಸಾಧ್ಯವಾಗಿರುತ್ತದೆ. 110ನೆ ನಂಬರು ಬಹಳ ಮಿಶ್ರಿತವಾಗಿತ್ತು ಮತ್ತು ಎಲ್ಲಾ ನೋಡಿದರೆ ಸಾಧಾರಣವಾಗಿ ನೀಚವಾಗಿ ತೋರುವ ಮಾದರಿಯಾಗಿತ್ತು. ಇದರಿಂದ ನಿಸ್ಸಂದೇಹವಾಗಿ ಅದಕ್ಕೆ ಕೀಳಾದ ಬೆಲೆಯು ಬಂದಿರುವುದು. ಈ ಎರಡು ಅಪವಾದಗಳ ಹೊರತಾಗಿ ಸಕ್ಕವುಗಳು ಘನತ್ವಕ್ಕೆ ಅನುಸಾರವಾಗಿ ಬೆಲೆಯುಳ್ಳವುಗಳಾಗಿರುತ್ತವೆ.

ಟೇಬಲ್ XI.

ನೀಲಗಿರಿ ಕಾಫಿ.

ನಂಬರು.	ಬೀಜಕ್ಕೆ ಬಂದಬೆಲೆ.	ಘನತ್ವ.	ತಾರತಮ್ಯದಲ್ಲಿ ಅದರ ಸ್ಥಾನ. ಘನತ್ವದ ಪ್ರಕಾರ.	ತಾರತಮ್ಯದಲ್ಲಿ ಅದರ ಸ್ಥಾನ. ಬೆಲೆಯ ಪ್ರಕಾರ.	ಷರಾ.
124	68	1·278	1	1	
125	58	1·275	3	2	
123	60	1·273	2	3	
94	53	1·255	5	4	
122	55	1·251	4	5	
95	43	1·207	6	6	

45. ಈ ನಮೂನೆಯಲ್ಲಿ ಘನತ್ವಕ್ಕೆ ಬದಲಾಗಿ ಬೆಲೆಯನ್ನು ಅನುಸರಿಸಿ ಮಾದರಿಗಳನ್ನು ಒಂದರ ಕೆಳಗೆ ಒಂದನ್ನು ಬರೆದರೆ, ನಡುವಿನ ನಾಲ್ಕು ಮಾದರಿಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗುವುದು. ಮೊದಲನೇದು ಕೊನೆಯದು ಮಾತ್ರ ಅದೇ ಸ್ಥಳಗಳಲ್ಲಿರುವುವು.

ಟೇಬಲ್ XII.

ನಡುವಟ್ಟಂ ಕಾಫಿ.

ನಂಬರು.	ಬೀಜಕ್ಕೆ ಬಂದಬೆಲೆ.	ಘನತ್ವ.	ತಾರತಮ್ಯದಲ್ಲಿ ಅದರ ಸ್ಥಾನ.		ಷರಾ.
			ಘನತ್ವದ ಪ್ರಕಾರ.	ಬೆಲೆಯ ಪ್ರಕಾರ.	
104	85	1·277	1	1	
103	63	1·277	2	2	
89	51	1·226	3	3	
90	47	1·218	4	4	

46. ಈ ನಮೂನೆಯಲ್ಲಿ ಘನತ್ವವೂ ಬೆಲೆಯೂ ಒಂದನ್ನೊಂದು ಅನುಸರಿಸಿರುವುವು. 104 ಮತ್ತು 103 ಈ ನಂಬರುಗಳ ಬೆಲೆಗಳಲ್ಲಿನ ಹೆಚ್ಚು ಕಡಿಮೆಯು ಘನತ್ವವನ್ನು ಅನುಸರಿಸಿ ಎಷ್ಟು ಇರಬೇಕೋ ಅಷ್ಟು ಇರುವುದಿಲ್ಲ.

ಟೇಬಲ್ XIII.

ನಿಲಿಯಂಪತಿ ಕಾಫಿ.

ನಂಬರು.	ಬೀಜಕ್ಕೆ ಬಂದ ಬೆಲೆ.	ಘನತ್ವ.	ತಾರತಮ್ಯದಲ್ಲಿ ಅದರ ಸ್ಥಾನ.		ಷರಾ.
			ಘನತ್ವದ ಪ್ರಕಾರ.	ಬೆಲೆಯ ಪ್ರಕಾರ.	
91	61	1·246	1	1	
93	52	1·245	2	2	
92	49	1·212	3	3	

ಟೇಬಲ್ XIV.

ವೈನಾಡ್ ಕಾಫಿ.

ನಂಬರು.	ಬೀಜಕ್ಕೆ ಬಂದ ಬೆಲೆ.	ಘನತ್ವ.	ತಾರತಮ್ಯದಲ್ಲಿ ಅದರ ಸ್ಥಾನ.		ಷರಾ.
			ಘನತ್ವದ ಪ್ರಕಾರ.	ಬೆಲೆಯ ಪ್ರಕಾರ.	
120	46	1·248	1	1	
119	43	1·159	2	2	

ಟೇಬಲ್ XV.

[illegible] ಕೋಸ್ಪರೀಕಾ ಕಾಫಿ.

ನಂಬರು.	ಬೀಜಕ್ಕೆ ಬಂದ ಬೆಲೆ.	ಘನತ್ವ.	ತಾರತಮ್ಯದಲ್ಲಿ ಅದರ ಸ್ಥಾನ. ಘನತ್ವದ ಪ್ರಕಾರ.	ತಾರತಮ್ಯದಲ್ಲಿ ಅದರ ಸ್ಥಾನ. ಬೆಲೆಯ ಪ್ರಕಾರ.	ಷರಾ.
97	75	1·220	4	1	ಮನಸ್ಸಿಗೆ ತಟ್ಟುವಹಾಗೆ ಅಂದವುಳ್ಳದ್ದು, ದೊಡ್ಡ ಬೀಜವು 114, 115, 96 ಈ ನಂಬರುಗಳ ಜಾತಿಯಿಂದ ಭಿನ್ನವಾದ ಜಾತಿಗೆ ಶೇರಿದುದು.
114	70	1·260	1	2	
115	64	1;260	2	3	
96	60	1·260	3	4	
116	54	12·18	5	5	ಮೊದಲನೆ ನಂಬರಿನಂತೆ ಆಕಾರವುಳ್ಳದ್ದು. ನಿಸ್ಸಂದೇಹವಾಗಿ ಅದರ ಜಾತಿಗೆ ಶೇರಿದುದು.

47. ಮೇಲೆ ಹೇಳಿದಂತೆ 97 ಮತ್ತು 116 ಈ ಮಾದರಿಗಳು ಇತರ ಮೂರು ಮಾದರಿಗಳಿಂದ ಭಿನ್ನವಾದ ಜಾತಿಗೆ ಶೇರಿದವುಗಳಾಗಿದ್ದವು. ಅವು ಬಹಳ ದೊಡ್ಡವು. ಬೇರೆ ಆಕಾರವುಳ್ಳವುಗಳು. ಮತ್ತು ಇತರ ಬೀಜಗಳಷ್ಟು ಚಪ್ಪಟೆಯಾದವುಗಳಾಗಿರಲಿಲ್ಲ. ಅವು ಬಹಳ ಕಮ್ಮಿಯಾದ ಘನತ್ವವುಳ್ಳವುಗಳಾಗಿರುತ್ತವೆ. 97ನೆ ನಂಬರು ಕಣ್ಣಿಗೆ ಅತ್ಯಂತ ಸುಂದರವಾದದ್ದಾಗಿರುತ್ತದೆ.

ಟೇಬಲ್ XVI.

ಗ್ವಾಟಮಾಲಾ ಕಾಫಿ.

ನಂಬರು.	ಬೀಜಕ್ಕೆ ಬಂದ ಬೆಲೆ.	ಘನತ್ವ.	ತಾರತಮ್ಯದಲ್ಲಿ ಅದರ ಸ್ಥಾನ. ಘನತ್ವದ ಪ್ರಕಾರ.	ತಾರತಮ್ಯದಲ್ಲಿ ಅದರ ಸ್ಥಾನ. ಬೆಲೆಯ ಪ್ರಕಾರ.	ಷರಾ.
9	67	1·254	2	1	
99	55	1·256	1	2	ಬೀಜಗಳು ಒಂದೇ ಸಮವಾಗಿರಲಿಲ್ಲ. 98ನೆ ನಂಬರಿನಕ್ಕಿಂತ ಚಿಕ್ಕದಾಗಿದ್ದವು.
118	54	1·254	3	3	
117	45	1·235	4	4	

48. 99ನ ನಂಬರು ಬಹಳ ಮಿಶ್ರಿತವಾದದ್ದಾಗಿರುವುದಲ್ಲದೆ, ಅದರ ಬೀಜಗಳು 68ನೆ ನಂಬರಿನ ಬೀಜಗಳಿಕ್ಕಿಂತ ಬಹಳ ಸಣ್ಣವಾಗಿರುತ್ತವೆ. ಅದಕ್ಕೆ ಬಂದ ಕಮ್ಮಿಯಾದ ಬೆಲೆಗೆ ಇದೇ ಬಹುಶಃ ಕಾರಣವಾಗಿರಬಹುದು.

ಟೇಬಲ್ XVII.

ನಿಕರಾಗ್ವಾ ಕಾಫಿ.

ನಂಬರು.	ಬೀಜಕ್ಕೆ ಬಂದ ಬೆಲೆ.	ಘನತ್ವ.	ತಾರತಮ್ಯದಲ್ಲಿ ಅದರ ಸ್ಥಾನ. ಘನತ್ವದ ಪ್ರಕಾರ.	ತಾರತಮ್ಯದಲ್ಲಿ ಅದರ ಸ್ಥಾನ. ಬೆಲೆಯ ಪ್ರಕಾರ.	ಷರಾ.
111	58	1·256	1	1	
112	49	1·230	2	2	
113	42	1·203	3	3	

ಟೇಬಲ್ XVIII.

ನಂಬರು 121 ಸಾನ್‌ಸಾಲ್ವೆಡಾರ ಕಾಫಿ.

ಬೀಜಕ್ಕೆ ಬಂದ ಬೆಲೆ 58, ಘನತ್ವ 1·253.

ನಂಬರು 126, ಷೆವರಾಯ್ ಕಾಫಿ.

ಬೀಜಕ್ಕೆ ಬಂದ ಬೆಲೆ 58, ಘನತ್ವ 1·270.

49. ಮೇಲಿನ ನಮೂನೆಗಳಲ್ಲಿ ಲಂಡನ್ ಪಟ್ಟಣದಲ್ಲಿನ ಬೆಲೆಯೂ ಮತ್ತು ಘನತ್ವ ಇವೆರಡೂ ಒಂದು ಲೆಖ್ಖದ ಪ್ರಕಾರ ಒಂದನ್ನೊಂದು ಅನುಸರಿಸದೇ ಇದ್ದರೂ, ಘನತ್ವ ಕಮ್ಮಿಯಾದಹಾಗೆಲ್ಲಾ ಬೆಲೆಯು ಕಮ್ಮಿಯಾಗಿರುವುದು. ಘನತ್ವ ಮತ್ತು ಬೆಲೆ ಇವುಗಳು ಈಗಿರುವುದಕ್ಕಿಂತ ಹೆಚ್ಚಾಗಿ ಒಂದನ್ನೊಂದು ಅನುಸರಿಸಿರುವುದಿಲ್ಲವೆಂಬುದು ಅತೃಪ್ತಿಕರವಾಗಿರುವುದು. ಕಾಫಿಯ ಬೀಜದ ಬೆಲೆಯು ಅದರ ಗುಣವನ್ನು ಸರಿಯಾಗಿ ತೋರಿಸಿಕೊಡುವ ಸೂತ್ರವಲ್ಲದೇ ಇರುವುದರಿಂದಲೂ, ಮತ್ತು ಬೀಜದ ಘನತ್ವವನ್ನು ಸರಿಯಾಗಿ ಕಂಡು ಹಿಡಿಯುವದು ಇನ್ನೂ ಕಷ್ಟವಾಗಿರುವುದರಿಂದಲೂ, ಇಂತಹ ಬೆಲೆಯೂ ಮತ್ತು ಘನತ್ವವೂ ಒಂದು ಲೆಖ್ಖದ ಪ್ರಕಾರ ಒಂದನ್ನೊಂದು ಅನುಸರಿಸಿರುವುದು ಕಷ್ಟ. ಹೇಗಾದರೂ ಸರಿಯೇ, ಕಾಫಿಯ ಘನತ್ವಕ್ಕೂ ಅದರಲ್ಲಿರುವ ತಾರತಮ್ಯ ಪ್ರದರ್ಶಕ ಗುಣಕ್ಕೂ ಸಂಬಂಧವಿದೆ ಎಂಬುದರಲ್ಲಿ ಸಂದೇಹವಿಲ್ಲ. ಒಂದೇ ತೋಟದಲ್ಲಿ ವರ್ಷೇ ವರ್ಷೇ ಬೆಳೆದ ಕಾಫಿಯ ಬೀಜಗಳನ್ನಾಗಲಿ ಅಥವಾ ಒಂದೇ ವಿಧವಾದ ಭೂಮಿಯಲ್ಲಿ ಪ್ರತ್ಯೇಕ ತಾಲೂಕುಗಳಲ್ಲಿ ಬೆಳೆದ ಬೀಜಗಳನ್ನಾಗಲಿ ಅವುಗಳ ಘನತ್ವದ ಮೇಲೆ ಒಂದಕ್ಕೊಂದು ಹೋಲಿಸಲು ಸಾಧ್ಯವಾದೀತೆಂದು ವಿಶೇಷವಾಗಿ ನಂಬಬಹುದು. ಪರೀಕ್ಷೆಗೆ ತೆಗದುಕೊಳ್ಳಲ್ಪಟ್ಟ ಒಂದು ವಿಸ್ತೀರ್ಣವಾದ ನೆಲದಲ್ಲಿನ ಬೇರೆ ಬೇರೆ ಜಾತಿಗಳಲ್ಲಿ ಬೆಳೆದ ವಿವಿಧ ಕಾಫಿಯ ಗುಣವನ್ನು ಹೋಲಿಸಿ, ನೋಡಿ ಅದನ್ನು ಕಾಗದದ ಮೇಲೆ ಬರದಿಡಲು ಯಾವದಾದರು ಒಂದು ಉಪಾಯವನ್ನು ಕಂಡು ಹಿಡಿಯುವುದು ನಮ್ಮ ಪರೀಕ್ಷೆಯ ಮುಖ್ಯೋದ್ದೇಶವಾಗಿರುವುದರಿಂದ, ನಾವು ಮೇಲೆ ಹೇಳಿರುವ ಸಂಗತಿಗಳು ನಮಗೆ ಅತ್ಯಂತ ಉತ್ಸಾಹೋತ್ಪಾದಕಗಳಾಗಿರುತ್ತವೆ.

50. **ಗೊಬ್ಬರಗಳು:**—ಈ ವರ್ಷ ತರಹೇವಾರಿಯಾಗಿರುವ ಇಪ್ಪತ್ತು ಮಾದರಿ ಗೊಬ್ಬರಗಳನ್ನು ಪರೀಕ್ಷಿಸಲಾಯಿತು. ಇದರಲ್ಲಿ 7 ಮಾದರಿಯ ಬಿಳೀಹರಳು ಹಿಂಡಿಗಳಿದ್ದವು.

XIXನೇ ನಮೂನೆಯಲ್ಲಿ ಕಂಡ ಪ್ರಕಾರ, ಈ ಹಿಂಡಿಗಳಲ್ಲಿ ನೈಟ್ರೋಜನ್ನಿನ ಅಂಶವು ನೂರಕ್ಕೆ 4½ ಇಂದ 7 ರಂತೆ ಇತ್ತು. ಈ ಹೆಚ್ಚು ಕಡಿಮೆಯು ಹಿಂಡಿಗಳಲ್ಲಿ ಸೇರಿದ್ದ ಹೊಟ್ಟಿನ ಅಂಶದಿಂದ ಉಂಟಾಗಿತ್ತು. ಈ ಹೊಟ್ಟು ಕಪ್ಪಾಗಿರುವುದರಿಂದ ಬಿಳೀಹರಳು ಹಿಂಡಿಯಲ್ಲಿ ಕಪ್ಪು ಪರೆಯಂತೆ ಕಾಣುವುದು. ಇದರಿಂದ ಹಿಂಡಿಯ ಗುಣವನ್ನು ಸ್ವಲ್ಪ ಮಟ್ಟಿಗೆ ಕಣ್ಣಿನ ನೋಟದಿಂದಲೇ ಕಂಡು ಹಿಡಿಯಬಹುದು. ಟೇಬಲಿನಲ್ಲಿ ಕಂಡ ಹರಳು ಹಿಂಡಿಗಳ ಪೈಕಿ ಅತಿ ಕೀಳಾದ ಹಿಂಡಿಯು ಟನ್ನಿಗೆ 45 ರೂಪಾಯಿ ಬೆಲೆ ಬಾಳುವುದಾದರೆ, ಅತ್ಯುತ್ತಮ ಹಿಂಡಿಯು 70 ರೂಪಾಯಿಗಳು ಬಾಳುವುದು. ನಮೂನೆಯಲ್ಲಿ ಕಂಡ ಇತರ ಗೊಬ್ಬರಗಳ ಪೈಕಿ ಒಂದು ವದರಿಕಿಂತ ಹೆಚ್ಚಾಗಿ ಬಂದದ್ದು ಕುಸುಬಿ ಹಿಂಡಿಯು. ಬಂದ ಎರಡು ತರಹ ಕುಸುಬಿ ಹಿಂಡಿಯಲ್ಲಿ, 32ನೆ ನಂಬರು 40ನೆ ನಂಬರಿನ ಎರಡರಷ್ಟು ಬೆಲೆಯುಳ್ಳದ್ದಾಗಿರುತ್ತವೆ; ಎಂದರೆ 32ನೆ ನಂಬರು ಟನ್ನಿಗೆ 64 ರೂಪಾಯಿಗಳು ಬಾಳುವುದಾದರೆ, 40ನೆ ನಂಬರು 32 ರೂಪಾಯಿಗಳು ಬಾಳುವುದು. ಬಿಳೀಹರಳು ಹಿಂಡಿಯನ್ನಾಗಲಿ, ಕುಸುಬಿ ಹಿಂಡಿಯನ್ನಾಗಲಿ, ಅಥವಾ ಇನ್ನಾವ ಗೊಬ್ಬರವನ್ನೇ ಆಗಲಿ ಅದರಲ್ಲಿ ಗುಣವು ಇಂತಿಷ್ಟೇ ಇದೆ ಎಂದು ನಂಬಿಕೆಯಾಗಿ ತಿಳಿಯದೇ ಕೊಂಡುಕೊಳ್ಳುವುದರಲ್ಲಿರುವ ತಪ್ಪನ್ನು ಮೇಲೆ ಹೇಳಿದ ಸಂಗತಿಗಳು ತೋರಿಸುತ್ತವೆ. ಬೆಲೆಯಲ್ಲಿ ಟನ್ನಿಗೆ 25, 32 ರೂಪಾಯಿಗಳು ಈ ಪ್ರಕಾರದ ಹೆಚ್ಚು ಕಡಿಮೆಯು ಸುಮ್ಮನೇ ಬಿಡತಕ್ಕದಾಗಿರುವುದಿಲ್ಲ. ಯಾವುದಾದರೂ ಒಂದು ಗೊಬ್ಬರದ ಹೆಸರನ್ನು ತಿಳಿಯೋಣವಮಾತ್ರದಿಂದ ಅದರ ಗುಣವನ್ನು ಚೆನ್ನಾಗಿ ತಿಳಿದಹಾಗಾಗುವುದಿಲ್ಲ.

51. ನಮೂನೆಯಲ್ಲಿ ಕಂಡ ಇತರ ಗೊಬ್ಬರಗಳ ಪೈಕಿ, ಮರದ ಬೂದಿಯು, ಲ್ಯಾಬೋರೇಟರಿಯಲ್ಲಿ ನಾವು ಪರೀಕ್ಷಿಸಿದ ಇತರ ಕೆಲವು ಬೂದಿಗಳಿಕಿಂತ ಉತ್ತಮವಾಗಿದ್ದಾಗ್ಯೂ ಸಾಧಾರಣವಾಗಿ ಬೂದಿಯಲ್ಲಿ ಎಷ್ಟು ಪೊಟ್ಯಾಷ್ ಇರಬೇಕೋ ಅಷ್ಟು ಪೊಟ್ಯಾಷ್ ಉಳ್ಳದ್ದಾಗಿರಲಿಲ್ಲ. ಎಲಬಿನಪುಡಿ, ಹೊಂಗೇ ಹಿಂಡಿ, ಮೀನು ಇವುಗಳು ಸಾಧಾರಣವಾಗಿ ಇರಬೇಕಾದಷ್ಟು ಗುಣವುಳ್ಳದ್ದಾಗಿದ್ದವು. ಬೇವಿನ ಹಿಂಡಿಯಲ್ಲಿ ಮಾತ್ರ, ನಾವು ಲ್ಯಾಬೋರೇಟರಿಯಲ್ಲಿ ಪರೀಕ್ಷಿಸಿದ ಇತರ ಬೇವಿನ ಹಿಂಡಿಗಳಲ್ಲಿನಕಿಂತ ನೂರಕ್ಕೆ 1¼ ಅಂಶದಂತೆ ಉತ್ತಮವಾಗಿತ್ತು.

ಟೇಬಲ XIX.

...ಗೊಬ್ಬರಗಳು...

ನಂಬರು.	ಪದಾರ್ಥ.	ಸ್ಥಳ.	ಜಲಾಂಶ.	ಪಿಷ್ಟ ಸಂಬಂಧವಾದ ಸತ್ವ.	ನೈಟ್ರೋಜನ್.	ಯಾವ ದ್ರಾವಕದಲ್ಲಿಯೂ ಕರಗದೆ ಇದ್ದ ದ್ರವ್ಯಗಳು.	ಸುಣ್ಣ.	ಪೊಟಾಷ್.	ಫಾಸ್ಫರಿಕ್ ಆಸಿಡ್.
32	ಕುಸುಬೆಯ ಹಿಂಡಿ ...	ಹುಬ್ಬಳ್ಳಿ ...	....	....	6·43				
40	ಡಿಟೋ ...	ಡಿಟೋ ...	9·00	87·45	3·22	·63	·48	...	1·08
33	ಬಿಳೀ ಹರಳುಹಿಂಡಿ ...	ಕೊಯಿಂಬತ್ತೂರ.	...	...	5·56	..	....	...	...
42	ಡಿಟೋ ...	ಬೆಂಗಳೂರು ...	9·49	82·01	6·47	2·61	·73	...	2·62
48	ಡಿಟೋ ...	ಮದ್ರಾಸು ...	7·07	84·94	6·82	2·42	·80	1·12	2·55
50	ಡಿಟೋ ...	ಬೆಂಗಳೂರು		....	4·53	...		...	...
57	ಡಿಟೋ ...	ಡಿಟೋ ...			6·40	...	...		
52	ಡಿಟೋ ...	ಡಿಟೋ ...			7·01	...	...	...	
53	ಡಿಟೋ ...	ಶವರಾಯಿ ...		...	5·94	...	...		
43	ಹೊಂಗೆ ಹಿಂಡಿ	ಬೆಂಗಳೂರು ...	11·21	83·24	3·59	1·62	·81		1·19
45	ಬೇವಿನ ಹಿಂಡಿ ...	ಮದ್ರಾಸು	11·88	80·41	5·99	1·20	·92	...	1·60
46	ಹಿಂಡಿ (ಬಹುಶಃ ಇಪ್ಪೆಯದು).	ಡಿಟೋ ...	12·12	83·40	4·14	1·04	·67	.....	1·06
35	ಒಣಗಿದ ರಕ್ತ ...	ಸಿಲೋನ ...	...	...	10·40	...		...	...
47	ಮೀನು ..	ಕೊಯಿಂಬತ್ತೂರ ..	7·15	46·38	6·17	27·38	..	...	7·51
41	ಎಲುಬಿನ ಪುಡಿ ...	ಬೆಂಗಳೂರು ...	7·92	30·59	3·79	4·35	30·28	....	22·20
39	ಮರದ ಬೂದಿ ...	ಹುಬ್ಬಳ್ಳಿ	2·47	...			..	2·47	...
49	ಪೆಟ್ಲುಪ್ಪು ...	ಕೊಯಿಂಬತ್ತೂರ ..	5·43	...	9·12	...	...	36·76	...
78	ದನದ ಗೊಬ್ಬರ ...	ಬೆಂಗಳೂರು ...	72·09	7·57	·18	11·89	·31	·24	·09
31	ಕಾಫಿಯಮೇಲಿನ ಶಿಪ್ಪೆ (ಒಣಗಿದ್ದು).	ಪೊಲ್ಲಿಬೆಟ್ಟ ...	9·23	90·73	2·33	...	1·00	2·17	·39
44	ಕಾಫಿಯ ಗಿಡಗಳಿಗೋಸ್ಕರ ತಯಾರುಮಾಡಿದ ಒಂದು ವಿಧವಾದ ಗೊಬ್ಬರ.	ಮದ್ರಾಸು ...	9·57	58·76	5·39	2·55	5·37	..	5·10

ಕ್ಷಾಮಗಾಲದಲ್ಲಿ ಆಹಾರವಾಗಿ ಉಪಯೋಗಿಸಲ್ಪಡುವ ಪದಾರ್ಥಗಳು.

52. ಬಹು ಸಂಖ್ಯಾತವಾದ ಕಂದಮೂಲಗಳು, ಗುಂಡು ಗಡ್ಡೆಗಳು, ಈರುಳ್ಳಿ ಜಾತಿಗೆ ಸೇರಿದ ಗಡ್ಡೆಗಳು, ಸುವರ್ಣದ ಜಾತಿಗೆ ಸೇರಿದ ಗಡ್ಡೆಗಳು, ಮತ್ತು ಸೊಪ್ಪುಗಳು ಇದೇ ಮೊದಲಾದವುಗಳನ್ನು ಕ್ಷಾಮಗಾಲದಲ್ಲಿ ಆಹಾರವಾಗಿ ಉಪಯೋಗಿಸಲ್ಪಡುವುವು ಎಂದು ರವಿನ್ಯೂ ಕಮಿಷನರವರು ಕನ್ಸರ್ವೇಟರ ಆಫ್ ಫಾರೆಸ್ಟ್ ಎಲ್ಲಾ ಡಿಸ್ಟ್ರಿಕ್ಟ್ಗಳ ಡೆಪ್ಯುಟಿ ಕಮಿಷನರುಗಳು ಇವರುಗಳು ಅಜಮಾಯಿಷಿಗೋಸ್ಕರ ಈ ಆಫೀಸಿಗೆ ಕಳುಹಿಸಿದರು. ಸರ್ಕಾರಿ ತೋಟಗಳ ಸೂಪರಿಂಟೆಂಡೆಂಟರಾದ ಮೆ|| ಕ್ಯಾಮಿರಾನ್ ಸಾಹೇಬರು ಕಳುಹಿಸಿದ ಭಾಗಗಳಿಂದ ಅವುಗಳ ಹೆಸರುಗಳನ್ನು ಎಷ್ಟರ ಮಟ್ಟಿಗೆ ಕಂಡುಹಿಡಿಯಬಹುದೋ ಅಷ್ಟರ ಮಟ್ಟಿಗೆ ಕಂಡುಹಿಡಿಯುವ ಕೆಲಸವನ್ನು ದಯವಿಟ್ಟು ವಹಿಸಿದರು. ಅವರು ಹೇಳಿದ ವನಸ್ಪತಿಶಾಸ್ತ್ರೀಯ ಹೆಸರುಗಳನ್ನು ಈ ರಿಪೋರ್ಟಿನಲ್ಲಿ ಬರೆದಿದೆ. ಪದಾರ್ಥಗಳನ್ನು ಕಳುಹಿಸಿದವರೇ ಅದರ ಕನ್ನಡ ಹೆಸರನ್ನು ಬರೆದಿದ್ದರು. ಕಳುಹಿಸಲ್ಪಟ್ಟ ಪದಾರ್ಥಗಳಲ್ಲಿ, 41 ಪರೀಕ್ಷೆಗೋಸ್ಕರ ಇರಿಸಿಕೊಳ್ಳಬಹುದಾದ ಸ್ಥಿತಿಯಲ್ಲಿದ್ದವು. ಲ್ಯಾಬೋರೇಟರಿಯಲ್ಲಿ ಇವುಗಳ ಪರೀಕ್ಷೆಗಳು ನಡೆಯುತ್ತಿರುವುವು. ಆಗಲೇ 31 ಮಾದರಿಗಳಲ್ಲಿನ ನೈಟ್ರೋಜನ್ನಿನ ಅಂಶವನ್ನು ಕಂಡುಹಿಡಿದು ಕೆಳಗಿನ ನಮೂನೆಯಲ್ಲಿ ಬರೆದಿದೆ. ಮೇಲಿನ ಮಾದರಿಗಳನ್ನು ಕಾಳಿಗೆ ಒಣಗಿದ ಮೇಲೆ ಅವುಗಳಲ್ಲಿನ ಜಲಾಂಶ, ಸ್ಟಾರ್ಚ್ ಎಂಬ ಹಿಟ್ಟಿನ ಅಂಶ, ನಾರಿನ ಅಂಶ ಇವುಗಳನ್ನು ಅವಕಾಶವಾದಹಾಗೆಲ್ಲಾ ಕಂಡು ಹಿಡಿಯಲಾಗುವುದು. ಇವುಗಳಲ್ಲಿನ ರುಚಿ, ಜೀರ್ಣಿಸುವ ಅಂಶ, ಭಕ್ಷಿಸಿದಮೇಲೆ ದೇಹದಲ್ಲಿ ಆರೋಗ್ಯತೆ ಅನಾರೋಗ್ಯತೆ ಏನಾದರೂ ಉಂಟಾಗುವುದೋ ಏನೋ ಎಂಬ ಸಂಗತಿಯನ್ನೂ ಸಹ ಕಂಡುಹಿಡಿಯುವುದು ಅಸಾಧ್ಯವಾಗಿದೆ.

ಟೇಬಲ್ XX.

ಕ್ಷಾಮಗಾಲದಲ್ಲಿ ಆಹಾರವಾಗಿ ಉಪಯೋಗಿಸಲ್ಪಡುವ ಪದಾರ್ಥಗಳು.

ನಂಬರು.	ಕನ್ನಡದ ಹೆಸರು.	ವನಸ್ಪತಿ ಶಾಸ್ತ್ರೀಯ ಹೆಸರು.	ಮಾದರಿಗಳನ್ನು ಕಳುಹಿಸಿಕೊಟ್ಟ ಉದ್ಯೋಗಸ್ಥರ ಷರಾ	ನೈಟ್ರೋಜನ್ ನೂರರಲ್ಲಿ ಭಾಗ
134	ಗುತ್ತಿಗಡ್ಡೆ ...	...	ಈ ಗಿಡದಲ್ಲಿ ತಿನ್ನತಕ್ಕ ಭಾಗವು ಗಡ್ಡೆಯು. ಇದು ಬಂದೇ ವರ್ಷ ಇರತಕ್ಕದು ಮತ್ತೂ ಮೈದಾನ ಪ್ರಾಂತ್ಯಗಳಲ್ಲಿ ಆಳವಿಲ್ಲದ ಕೆರೆಗಳಲ್ಲಿ ಬೆಳೆಯುವುದು. ಬೇರಿಲ್ಲದ ಗಡ್ಡೆಗಳನ್ನು ತಂದು ಚೆನ್ನಾಗಿ ತೊಳದು, ಶಿಪ್ಪೆಯನ್ನು ಸುಲಿದು, ಬೆಲ್ಲಸಾಕಿ ತಿನ್ನುತ್ತಾರೆ. ಇದಲ್ಲದೆ ಗಡ್ಡೆಗಳನ್ನು ಒಣಗಿಸಿ, ಬೀಸಿ, ಹಿಟ್ಟನ್ನು ರಾಗಿಯ ಹಿಟ್ಟಿನೊಂದಿಗೆ ಬೆರಸಿ ಮುದ್ದೆಯನ್ನು ಮಾಡಿ ತಿನ್ನುತ್ತಾರೆ.	2·86
135	[illegible]ಂಡ್ಲೇಸೊಪ್ಪು ...	Erythroxylon monogynum	ಇದರ ಎಲೆಗಳನ್ನು ಒಣಗಿಸಿ, ಉಪ್ಪುಖಾರಾ ಹಾಕಿ ನೀರಿನಲ್ಲಿ ಬೇಯಿಸಿ ತಿನ್ನುತ್ತಾರೆ.	1·95
136	ಗ್ಯಾದರಿ ಅಥವಾ ದೇವದಾರಿಸೊಪ್ಪು.	Aegle Marmelos.	ಎಲೆಗಳನ್ನು ಒಣಗಿಸಿ, ಹಿಟ್ಟುಮಾಡಿ ರಾಗಿಯ ಹಿಟ್ಟಿನೊಂದಿಗೆ ಬೆರಸಿ ಮುದ್ದೆಮಾಡಿ ತಿನ್ನುತ್ತಾರೆ. ಎಲೆಯನ್ನು ಪಲ್ಯಮಾಡಿಯೂ ತಿನ್ನುತ್ತಾರೆ	1·83
137	ನವರೆಗೆಣಸು ..		ಇವುಗಳ ಬೇರುಗಳು ಜೇನು ಕುರುಬರಿಗೆ ಮುಖ್ಯಾಹಾರವಾಗಿರುತ್ತವೆ.	·86
138	ಸಾಲ್‌ಗೆಣಸು ..			1·31
139	ಕರಕೆಗೆಣಸು ..			1·58
140	ಕಲಗೆಣಸು ...			1·08
141	ಆಕ್ಕಿಗೆಣಸು ..			1·09
142	ಅಡವಿ ಗೆಣಸು ...	Dioscorea, ಜಾತಿಗೆ ಸೇರಿದ್ದು.		1·17
143	ನೊಸೇಗಡ್ಡೆ ..		...ರಿನಲ್ಲಿ ಗಡ್ಡೆಗಳನ್ನು ತೊಳದು ಹುಣಸೇಹಣ್ಣಿನ ಜೊತೆಯಲ್ಲಿ ಅರದು, ರೊಟ್ಟಿಗಳನ್ನು ತಟ್ಟುತ್ತಾರೆ.	1·79
144	ಕತಲೇಗಡ್ಡೆ ...		ಹೋ...ಗಿ ಹೆಚ್ಚಿ, ಆ ಹೋಳುಗಳನ್ನು ಹುಣಸೇಗೊಜ್ಜಿನಲ್ಲಿ ಬೇಯಿಸಿ, ಬಿಸಲಿನಲ್ಲಿ ಒಣಗಿಸಿ, ತಿನ್ನುತ್ತಾರೆ	·67
145	ಈಚಲುಹಣ್ಣು ...	Phœnix sylvestrius.		·72
146	ಬೆಟ್ಟದ ಈಚಲುಹಣ್ಣು	Phœnix farinifera		·63
147	ಜಂಬುನೇರಲೇಕಾಯಿ	Eugenia jambalona Var. Obtusifolia.		·82
148	ಕಾರೇಸೊಪ್ಪು ..	Canthium parniflorum.		2·27
149	ಕೆಸವಿನಗಡ್ಡೆ	Alacacia antiquorum.		·91
150	ಮರಗೆಣಸು ...	Manihot utillisiam.		·60
152	ಯಲಿಗೆಣಸು ...			1·48
153	ಹೊನಗೊನೆಸೊಪ್ಪು .	Alternantherasessilis.		3·07
156	ತಂಗಡೀಹುವ್ವು ..	Cassia auriculata.		1·47
157	ಕೆಸವಿನದಂಟು	Alacacia antiquorum.		1·05
158	ಚಂದ್ರಮಲಿಗೆ ಗಡ್ಡೆ .	Mirabilis jalapa.		1.03
159 to 167	(Left out)			

ಗಿಡಗಳಿಗೆ ತಗಲುವ ಹುಳಗಳ ರೋಗವೂ ಮತ್ತೂ ಇತರ ರೋಗಗಳು.

53. ಈ ವರ್ಷ ಈ ಇಲಾಖೆಯ ತಿಳುವಳಿಕೆಗೆ ಬಂದ ಮುಖ್ಯವಾದ ಹುಳಗಳು ಯಾವುವೆಂದರೆ:—ಚಿಟ್ಟೇ ಹುಳಗಳು (ಅಕ್ರಿಡಿಯಾ ಪೆರೆಗ್ರೈನಂ), ಕಂಬಳೀ ಹುಳಗಳು, ಕಾಫಿಯ ನೆರಳು, ಗಿಡಗಳಿಗೆ ತಗಲುವ ಹಿಟ್ಟಿನಿಂದ ರಕ್ಷಿತವಾದ ಹಸುರು ಹುಳವು (ಪಲ್ವಿನೇರಿಯಾಸ್ಟೈಡಿಯೈ), ಕಾಫಿ ಗಿಡಗಳನ್ನು ಕೊರಿಯುವ ಹುಳವು (ಜ್ಸೈಲೋಟ್ರಿಕಸ್‌ಕ್ವಾಡ್ರಿಪ್ಸ್), ಹೇನು, ತೆಂಗಿನ ಮರವನ್ನು ಕೊರೆಯುವ ಹುಳುವು (ಒರಿಕ್ಟೈಸ್‌ರೈನಾಸರಸ್), ಭತ್ತಕ್ಕೆ ತಗಲುವ ಹೆಸರು ತಿಳಿಯದ ಅನೇಕ ಹುಳಗಳು ಮತ್ತು ಹುಣಸೇಮರಕ್ಕೆ ತಗಲುವ ಒಂದು ವಿಧದ ಪದರಿನಿಂದ ರಕ್ಷಿತವಾದ ಹುಳವು (ಆಸ್ಪಿಡಿಯೋಟಸ್).

54. ಮಿಡತೆಗಳು (ಗ್ರಾಸ್ ಹಾಪರ್ಸ್) :—

ತುಮಕೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟ್‌ಗಳಲ್ಲಿ ಇವು ಕಾಣಿಸಿದವು. ಇವು ಬೊಂಬಾಯಿ ಇಲಾಖೆಯ ಕೆಲವು ಪ್ರಾಂತ್ಯಗಳಲ್ಲಿ ವಿಶೇಷ ಹಾವಳಿಯನ್ನು ಮಾಡಿದ ಜಿಟ್ಟೀ ಹುಳುಗಳಿಂದ ಭಿನ್ನವಾಗಿರುವುವು.

55. ಹೇನು :—ಈ ವರ್ಷ ಈ ಹುಳಗಳು ಹಿಂದಿನ ವರ್ಷಗಳಲ್ಲಿನದಕ್ಕಿಂತ ಬಹಳ ಹೆಚ್ಚಾಗಿ ಕಾಣಿಸಿದವು. ಇದನ್ನು ಹೋಗಲಾಡಿಸುವುದಕ್ಕೆ ಕೆರೋಸಿನ್ ಎಂಣೆಯಿಂದ ತಯಾರುಮಾಡಿದ ಎಮಲ್ಷನ್ ಎಂಬ ಔಷಧವನ್ನು ಚುಮುಕಿಸುವುದು ಬಹಳ ಉತ್ತಮವಾದ ಉಪಾಯವು. ಹುಳಗಳ ವಿಷಯವಾಗಿ ಬರೆದಿರುವ ಈ ಇಲಾಖೆಯ ಮೊದಲನೇ ಪ್ರಸಿದ್ಧಪತ್ರಿಕೆಯಲ್ಲಿ ಬರೆದಂತೆ ಈ ಕೆರೋಸಿನ್ ಎಂಣೆಯ ಎಮಲ್ಷನ್ ಎಂಬುದನ್ನು ಮಾಡಬೇಕಾದರೆ, ಒಂದು ಪೌಂಡು ಬಳ್ಳೀ ಸೋಪನ್ನು ತೆಳ್ಳಗೆ ಹೆಚ್ಚಿ 1 ಗ್ಯಾಲನ್ ಮರಳುವ ನೀರಿನಲ್ಲಿ ಹಾಕಿ ನೀರನ್ನು ಕಲಕಿ ಸೋಪನ್ನು ಪೂರ್ತಿಯಾಗಿ ಕರಗಿಸಬೇಕು. ನಂತರ ಇದಕ್ಕೆ ಎರಡು ಗ್ಯಾಲನ್ ಶೀಮೆ ಯಂಣೆಯನ್ನು ಸ್ವಲ್ಪಸ್ವಲ್ಪವಾಗಿ ಶೇರಿಸಬೇಕು. ಹೀಗೆ ಶೀಮೆ ಯಂಣೆಯನ್ನು ಹಾಕುತ್ತಾ ಇರುವಾಗ ಒಂದು ಕಡಗೋಲಿನಿಂದ ಸೋಪಿನ ನೀರನ್ನು ಚನ್ನಾಗಿ ಕಡೆದು ಕೆರೋಸಿನ್ ಎಂಣೆಯನ್ನು ಎಮಲ್ಷನ್ ರೂಪಕ್ಕೆ ತಿರುಗಿಸಬೇಕು. ಉಪಯೋಗಿಸುವಾಗ ಈ ಮಜ್ಜಿಗೆಯಂತಿರುವ ಔಷಧಕ್ಕೆ 9 ಅಥವಾ 10ರಷ್ಟು ನೀರನ್ನು ಶೇರಿಸಬೇಕು. ಔಷಧವನ್ನು ತಯಾರು ಮಾಡುವುದಕ್ಕೆ ಉಪ್ಪು ಸುಂಣ ಇವುಗಳಿಂದ ರಕ್ಷಿತವಾದ ಎಂದರೆ ಸೋಪನ್ನು ಕೆಡಸದೇ ಇರುವ (ಸಾಫ್ಟ್) ನೀರನ್ನು ಉಪಯೋಗಿಸುವುದು, ಮತ್ತು ಎಮಲ್ಷನ್ ನೀರು ಶೇರಿಸಿದಾಗ ಎಂಣೆಯ ಹನಿಗಳು ಮೇಲೆ ತೇಲದೇ ಇರುವ ಹಾಗೆ ಔಷಧವನ್ನು ತಯಾರು ಮಾಡುವುದು, ಇವೆರಡು ಸಂಗತಿಗಳಿಗೆ ಮುಖ್ಯವಾಗಿ ಲಕ್ಷ್ಯ ಕೊಡಬೇಕು. ಕೆರೋಸಿನ್ ಎಂಣೆಯ ಹನಿಗಳು ನೀರಿನಲ್ಲಿ ಉಳಿದರೆ ಆ ನೀರನ್ನು ಗಿಡಗಳಿಗೆ ಹಾಕಿದರೆ, ಅದು ಗಿಡಗಳಿಗೆ ಬಿದ್ದ ಹೇನುಗಳನ್ನು ಕೊಲ್ಲುವಾಗ, ಎಳೇ ಪೈರನ್ನು ಸಹ ಕೊಲ್ಲುವುದು. ಚನ್ನಾಗಿ ಮಾಡಿದ ಔಷಧದಿಂದ ಈ ಅಪಾಯವೇನೂ ಸಂಭವಿಸುವುದಿಲ್ಲ. ಈ ಔಷಧವನ್ನು ಬೆಳಿಗ್ಗೆ ಅಥವಾ ಮೋಡವಾದ ದಿನಗಳಲ್ಲಿ ಉಪಯೋಗಿಸುವುದು ಅತ್ಯಂತ ಉ... [illegible]

56. ಮೈಸೂರು ಶೀಮೆಯ ಕೆಲವು ಪ್ರಾಂತ್ಯಗಳಲ್ಲಿ ಕಾಫಿಗೆ ನೆರಳಿಗಾಗಿ ಹಾಕಿರುವ ಗಿಡಗಳಿಗೆ ಅತ್ಯಂತ ಅಪಾಯವನ್ನುಂಟುಮಾಡುವ ಹಿಟ್ಟಿನಿಂದ ಗುಪ್ತವಾದ ಹಸರು ಹುಳುವಿನ ಪರೀಕ್ಷೆಯನ್ನು ಮಾಡಲು ಇಂಡಿಯಾ ಗೌರ್ನಮೆಂಟಿನ ಕ್ರಿಮಿ ಶಾಸ್ತ್ರಜ್ಞರಾದ ಮೆ|| ಲೆಫ್ರಾಯ್ ಎಂಬವರು ಸಂತವೇರಿ, ಕೊಪ್ಪ, ಮತ್ತು ಇತರ ಕೆಲವು ಸ್ಥಳಗಳಿಗೆ ದಯಮಾಡಿ ಹೋಗಿದ್ದರು. ಈ ಹುಳಗಳ ಮೊಟ್ಟೆಗಳು ಎಲೆಗಳ ಮೇಲೆ ಇಡಲ್ಪಟ್ಟು ಆ ಎಲೆಗಳೊಂದಿಗೆ ಭೂಮಿಗೆ ಬಿದ್ದು, ಅಲ್ಲಿ ಒಡೆದು ಚಿಕ್ಕ ಹುಳಗಳಾಗುತ್ತವೆ ಎಂದು ಕಂಡು ಹಿಡಿದರು. ಆಮೇಲೆ ಚಿಕ್ಕ ಹುಳುಗಳು ಗಿಡಗಳಮೇಲೆ ಹತ್ತಿ ಸುಳಿಗಳಿಗೂ ಎಲೆಗಳಿಗೂ ಹಬ್ಬಿ ಅವುಗಳ ರಸವನ್ನು ಮೊದಲಿನ ಹುಳಗಳಂತೆ ಕುಡಿದು ಜೀವಿಸುತ್ತಿದ್ದವು. ಹೀಗೆ ಇವು ಗಿಡಗಳನ್ನು ಹತ್ತುವುದು ನಿಲ್ಲಬೇಕಾದರೆ ಹುಳ ಹತ್ತಿದ ಮರಗಳ ಸುತ್ತಲೂ ಕೆಳಗಿನ ರೆಂಬೆಗಳ ಬುಡದಲ್ಲಿ ಆದರೆ ಕಾಫೀ ಗಿಡಗಳಿಗಿಂತ ಎತ್ತರವಾಗಿ ನಾಲ್ಕಂಗುಲ ಉಂಗರದ ಹಾಗೆ ಟಾರನ್ನು (ಕೀಲೆಂಣೆಯನ್ನು) ಬಳಿಯಬೇಕೆಂದು ಲೆಫ್ರಾಯವರು ಹೇಳುತ್ತಾರೆ. ಈ ಉಪಾಯವು ಸಹಜವಾಗಿ ತೃಪ್ತಿಕರವಾಯಿತು. ಈ ಹುಳದ ವಿಷಯವಾಗಿಯೂ ಮತ್ತೂ ದಕ್ಷಿಣ ಹಿಂದೂಸ್ಥಾನದಲ್ಲಿರುವ ಪದರಿನಿಂದ ರಕ್ಷಿತವಾದ ಇತರ ಹುಳಗಳ ವಿಷಯವಾಗಿಯೂ ಇನ್ನೂ ಹೆಚ್ಚಾಗಿ ತಿಳಿಯಬೇಕೆಂದು ಕುತೂಹಲವುಳ್ಳವರು ಇಂಪೀರಿಯಲ್ ವ್ಯವಸಾಯ ಇಲಾಖೆಯ 2ನೆ ನಂಬರು ಪ್ರಸಿದ್ಧಪತ್ರಿಕೆಯಲ್ಲಿ ಈ ವಿಷಯವಾಗಿ ಬರೆದಿರುವ ಮೆ|| ಲೆಫ್ರಾಯವರ ಸೂಚನೀಯ ರಿಪೋರ್ಟನ್ನು ನೋಡಬೇಕು. ಕಾಫೀ ಗಿಡಗಳ ಬೇರುಗಳಿಗೆ ತಗಲುವ ಹಿಟ್ಟಿನಿಂದ ರಕ್ಷಿತವಾದ ತಗಣಿಯಮೇಲೆ ಸುಂಣ ಮತ್ತು ಗಂಧಕ ಇವುಗಳನ್ನು ಉಪಯೋಗಿಸಿದರಲ್ಲಿ ಕೊಡಗಿನಲ್ಲಿರುವ ಡುಬಾರಿ ತೋಟದ ಮ್ಯಾನೇಜರ್ ಮೆ|| ಎಚ್. ಜಾಕ್ಸನ್ ಎಂಬವರು ಬಹಳ ಪ್ರಯೋಜನ ವುಂಟೆಂದು ಹೇಳುತ್ತಾರೆ. ಈ ಹುಳದ ವಿಷಯವಾಗಿಯೂ ಸಹ ಮೇಲೆ ಹೇಳಿದ ಲೆಫ್ರಾಯವರ ಪ್ರಸಿದ್ಧಪತ್ರಿಕೆಯಲ್ಲಿ ಹೇಳಿದೆ.

57. ಕಾಫಿಯ ಗಿಡಗಳ ಬೇರಿಗೆ ತಗಲುವ ರೋಗವು :—

ಕಾಫಿಯ ಗಿಡಗಳ ಸತ್ತ ಬುಡಗಳಿಂದ ಬರುವ ಕೊಳೇ ರೋಗವನ್ನು ಪರೀಕ್ಷಿಸುವ ಉದ್ದೇಶ್ಯ ಇಂಡಿಯಾ ಗೌರ್ನಮೆಂಟಿನ ಕ್ರಿಪ್ಟೊಗೆಮಿಕ್ ಬೋಟಾನಿಸ್ಟರವರಾದ ಡಾಕ್ಟರ್ ಬಟ್ಲರವರು ಮೈಸೂರು ಶೀಮೆಯ ಅಗ್ರಿಕಲ್ಚರಲ್ ಕೆಮಿಸ್ಟರವರ ಸಂಗಡ ಸಕಲೇಶಪುರ, ಕೊಪ್ಪ ಈ ಪ್ರಾಂತಗಳಿಗೆ ಹೋಗಿದ್ದರು. ಇವರ ಪರೀಕ್ಷೆಯಲ್ಲಿ ಬುಡಗಳಿಂದ ಬರುವ ಕೊಳೇ ರೋಗವಲ್ಲದ, ಸಧ್ಯಕ್ಕೆ ಬೇರಿಗೆ ತಗಲುವ ಕೊಳೇ ರೋಗವೆಂದು ಕರಿಯಲ್ಪಡಬಹುದಾದ ಇನ್ನೊಂದು ರೋಗವು ಅನೇಕ ಸ್ಥಳಗಳಲ್ಲಿ ಗೋಚರಕ್ಕೆ ಬಂತು. ರೋಜೆಲಿನಿಯಾ ಎಂಬ ಸತ್ತ ಬುಡಗಳಿಂದ ಬರುವ ಕೊಳೇ ರೋಗವು ಕಾಫೀ ಪ್ರಾಂತ್ಯಗಳಲ್ಲಿ ಎಲ್ಲಾ ಕಡೆಯಲ್ಲಿಯೂ ವ್ಯಾಪಿಸಿರುವುದು. ಒಂದೂವರೆ ಅಥವಾ ಎರಡು ಅಡಿ ಆಳವುಳ್ಳ ಒಂದು ಕಾಲಿವೆಯನ್ನು ರೋಗಪೀಡಿತವಾದ ಪ್ರದೇಶದ ಹೊರಗೆ ತೆಗೆದು, ರೋಗಪೀಡಿತಪ್ರದೇಶಕ್ಕೆ ಸುಂಣವನ್ನು ಹಾಕುವುದರಿಂದ ಈ ರೋಗವು ನಿವಾರಿಸಲ್ಪಡುವುದು. ಬೇರಿನ ಕೊಳೇ ರೋಗಕ್ಕೂ ಬುಡಗಳ ಕೊಳೇ ರೋಗಕ್ಕೂ ಕಂಣಿಗೆ ತೋರುವ ಭೇದಗಳು ಯಾವುವೆಂದರೆ :—

(a) ಸತ್ತ ಬುಡಗಳಿಂದ ಬರುವ ರೋಗದಿಂದ ಪೀಡಿತವಾದ ಪ್ರದೇಶಗಳು ಸಾಧಾರಣವಾಗಿ ಒಂದೇ ಕಡೆಯಲ್ಲಿದ್ದು ಗುರ್ತಿಸಲ್ಪಡಬಹುದಾಗಿರುತ್ತವೆ. ಅಂತಹ ಪ್ರದೇಶದಲ್ಲಿ ಎಲ್ಲಿಯಾದರೂ ಯಾವುದಾದರೂ ಒಂದು ನೆರಳುಗಿಡದ ಅಥವಾ ಕಾಡು ಮರದ ಸತ್ತ ಬುಡವಾಗಲಿ ಅಥವಾ ದೊಡ್ಡ ಬೇರಾಗಲಿ ಸಾಧಾರಣವಾಗಿ ಇರುವುದು. ಕಾಫಿಯ ಗಿಡಗಳು ರೋಗ ತಗಲಿದ ಮೇಲೆ ಶೀಘ್ರದಲ್ಲಿ ಸಾಯುವುದಲ್ಲದೆ, ಸತ್ತ ಮರಗಳ ಸುತ್ತಮುತ್ತ ಬದುಕಿದ ಮರಗಳು ಇರುವುದು ಅಪರೂಪ. ಬೇರಿನ ಕೊಳೆಯುವ ರೋಗದ ಪ್ರದೇಶವು ಗುರ್ತಿಸಿ ಹಿಡಿಯುವ ಹಾಗೆ ಒಂದೇ ಕಡೆಯಲ್ಲಿರುವುದಿಲ್ಲ. ರೋಗ ತಗಲಿದ ಗಿಡಗಳು ಬರಲಿನಂತಾಗಿ, ಕ್ರಮೇಣ ಅಲ್ಲಲ್ಲಿ ಸಾಯುತ್ತವೆ. ರೋಗದ ಮಧ್ಯಪ್ರದೇಶದ ಹತ್ತಿರದಲ್ಲಿಯೇ ಇರುವ ಗಿಡಗಳು ಬದುಕಿರುವಾಗಲೇ ದೂರದಲ್ಲಿರುವ ಗಿಡಗಳು ಸತ್ತು ಹೋಗಿರುತ್ತವೆ. ರೋಗಕ್ಕೆ ಮೂಲಸ್ಥಾನವಾಗಿರುವ ಕೊಳೆಯುತ್ತಿರುವ ಬುಡವಾಗಲಿ ಬೇರಾಗಲಿ ಕಂಡು ಬರುವುದಿಲ್ಲ. ಗಿಡಗಳು ಶೀಘ್ರವಾಗಿ ಸಾಯುವುದಿಲ್ಲ. ಮತ್ತೂ ಅವುಗಳಿಗೆ ಆಚೇ ಇರುವ ಗಿಡಗಳಲ್ಲಿ ರೋಗದ ಚಿನ್ಹೆಗಳು ಚನ್ನಾಗಿ ತೋರಿದ ಮೇಲೆಯೂ ಸಹ ಮೊದಲು ರೋಗ ತಗಲಿದ ಗಿಡಗಳು ಬದುಕಿರುತ್ತವೆ.

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಕಾರು ಬೀಜಗಳನ್ನು ಬಿತ್ತಲು, ಗುಂಡ್ಲುಪೇಟೆಯಲ್ಲಿ ಕೆಲವು ಭಾಗಗಳಲ್ಲಿ ಭೂಮಿಗಳನ್ನು ಉಳುತ್ತ ಇದಾರೆ.

ನಿಂತಿರುವ ಪೈರುಗಳು—ಎಲ್ಲಾ ತಾಲ್ಲೂಕುಗಳಲ್ಲಿಯೂ ಚೆನ್ನಾಗಿದೆಯೆಂದು ರಿಪೋರ್ಟು ಆಗಿದೆ.

ಕುಯ್ಯಲಾದ ಪೈರುಗಳು ಮತ್ತು ಅವುಗಳ ಉತ್ಪತ್ತಿಯ ಅಂದಾಜು:—

ಚಾಮರಾಜನಗರ—ಭತ್ತ, ಕೊತ್ತುಂಬರಿ ಮತ್ತು ಹುರುಳಿ.

ಹೆಗ್ಗಡದೇವನಕೋಟೆ, ಗುಂಡ್ಲುಪೇಟೆ ಮತ್ತು ನಂಜನಗೂಡು—ಭತ್ತ ಮತ್ತು ಹುರುಳಿ.

ಮಳವಳ್ಳಿ ಹಾರಕ ಮತ್ತು ಭತ್ತ.

ಕುಯ್ಯಲಾದ ರಾಗಿ—4 ರಿಂದ 12 ಆಣೆ ವರೆಗೆ.

ಕೃಷ್ಣರಾಜಪೇಟೆ—ಭತ್ತ 10 ರಿಂದ 12 ಆಣೆ ವರೆಗೆ.

ತೊಗರಿ 6 ರಿಂದ 8 ,,

ನಂಜನಗೂಡು ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಬ್ಬನ್ನು ಆಲೆ ಆಡುತ್ತಾ ಇದ್ದಾರೆ.

ಡಿಟೋ ತಾಲ್ಲೂಕಿನಲ್ಲಿ ಕೆಲವು ಭಾಗಗಳಲ್ಲಿ ಹುಳು ಹಿಡಿದು ಅವರೆ, ತೊಗರಿ, ಕಡಲೆ ಮತ್ತು ಹೆಸರು ಚೆನ್ನಾಗಿ ಬೆಳೆದುಯಿಲ್ಲ. ನಂಜನಗೂಡಿನ ಕೆಲವು ಭಾಗಗಳಲ್ಲಿ, ಮೊದ ಹಾಕಿದ ರಾಗೀಗೆ ಒಂದುವಿಧವಾದ ಹುಳು ಹಿಡಿದು ಇದೆ. ಪರೀಕ್ಷಿಸಿ ನೋಡಲು ಇವುಗಳಲ್ಲಿ ಸ್ವಲ್ಪವನ್ನು ಮೈಸೂರು ಸರ್ಕಾರದ ಅಗ್ರಿಕಲ್ಚುರಲ್ ಕೆಮಿಸ್ಟರವರಲ್ಲಿಗೆ ಕಳುಹಿಸಿ ಇದೆ

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಾಕು.

11. ಕೆಲವು ತಾಲ್ಲೂಕುಗಳಲ್ಲಿ ಜ್ವರವೂ ಮತ್ತು ಮೈಸೂರು ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಾಲರಾವೂ ಇರುವುದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ—ಅರಕಲಗೂಡು ತಾಲ್ಲೂಕಿನಲ್ಲಿ ಉಳುತ್ತಿದ್ದಾರೆ. ರೈತರುಗಳು ಕಣಗಳನ್ನು ತಯಾರ್ ಮಾಡುವ ಕೆಲಸದಲ್ಲಿದ್ದಾರೆ.

ನಿಂತಿರುವ ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರುಗಳು—ಮಂಜರಾಬಾದು, ಬೇಲೂರು ಮತ್ತು ಚೆನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ಭತ್ತ; ಬೇಲೂರು ಮತ್ತು ಚೆನ್ನರಾಯಪಟ್ಟಣದ ತಾಲ್ಲೂಕುಗಳಲ್ಲಿಯೂ ಮತ್ತು ಆಲೂರು ಸಬ್ ತಾಲ್ಲೂಕಿನಲ್ಲಿಯೂ ಕಬ್ಬು; ಚೆನ್ನರಾಯಪಟ್ಟಣ ಮತ್ತು ಅರಸೀಕೆರೆ ತಾಲ್ಲೂಕುಗಳಲ್ಲಿ ಹುರುಳಿ; ಮತ್ತು ಅರಸೀಕೆರೆ ತಾಲ್ಲೂಕಿನಲ್ಲಿ ಹುಚ್ಚೆಳ್ಳು ಮತ್ತು ಹಾರಕ.

ಮೋಡದಿಂದಲೂ ಮತ್ತು ಹೆಚ್ಚು ಮಳೆಯಿಂದಲೂ ಅವರೆ, ತೊಗರಿ, ಹರಳು ಮತ್ತು ಮೆಣಸಿನಕಾಯಿ ಇವುಗಳು ಸ್ವಲ್ಪ ನಷ್ಟವನ್ನು ಹೊಂದಿವೆಯೆಂದು ರಿಪೋರ್ಟು ಆಗಿದೆ.

ಉತ್ಪತ್ತಿ—ಬೇಲೂರು ತಾಲ್ಲೂಕು ಮತ್ತು ಆಲೂರು ಸಬ್ ತಾಲ್ಲೂಕಿನಲ್ಲಿ ಭತ್ತವು 4 ರಿಂದ 12 ಆಣೆ ವರೆಗೆ.

ಹುರುಳಿ ಮತ್ತು ಇತರ ಚಿಲ್ಲರೆ ಕುಷ್ಕೀ ಪೈರುಗಳು 8 ಆಣೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತಿವೆ.

11. ಹಾಸನ, ಬೇಲೂರು, ಅರಸೀಕೆರೆ ಮತ್ತು ಹೊಳೇನರಸೀಪುರ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪ್ಲೇಗೂ, ಅರಕಲಗೂಡು ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ಕಾಲರಾ, ಮಂಜರಾಬಾದ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಸಿಡುಬೂ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ—ಸೊರಬ, ಸಾಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಭೂಮಿಯನ್ನು ಉಳುತ್ತಾ ಇದ್ದಾರೆ.

ನಿಂತಿರುವ ಪೈರುಗಳು—ಹೊನ್ನಾಳಿ ತಾಲ್ಲೂಕಿನಲ್ಲಿ ಹರಳು ಮತ್ತು ಎಲ್ಲಾ ತಾಲ್ಲೂಕುಗಳಲ್ಲಿಯೂ ಕಬ್ಬೂ ಒಳ್ಳೆಯ ಸ್ಥಿತಿಯಲ್ಲಿವೆ. ತೊಗರಿ, ಕಡಲೆ, ಅವರೆ, ಹೆಸರು, ಉದ್ದೂ ಮತ್ತು ಗೋಧಿ ಪೈರುಗಳು ಸುಮಾರಾದ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರುಗಳು—ಶಿವಮೊಗ್ಗ ಮತ್ತು ಹೊನ್ನಾಳಿ ತಾಲ್ಲೂಕುಗಳಲ್ಲಿ ತೊಗರಿ, ನಗರ ತಾಲ್ಲೂಕಿನಲ್ಲಿ ಭತ್ತದ ಕುಯ್ಯಲು ಮುಗಿದು ಬರುತ್ತಿದೆ. ಸೊರಬ ತಾಲ್ಲೂಕಿನಲ್ಲಿ ಹರಳು ಕುಯ್ಯಲಾಗುತ್ತಿದೆ. ಶಿವಮೊಗ್ಗ, ಸಾಗರ, ಸೊರಬ, ನಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಕಬ್ಬನ್ನು ಆಲೆ ಆಡುತ್ತಿದ್ದಾರೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ಹೊನ್ನಾಳಿ, ಸೊರಬ, ಸಾಗರ, ನಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಶಿಡುಬು ಇರುವದು ಹೊರ್ತು ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—

ತರೀಕೆರೆ ತಾಲ್ಲೂಕಿನಲ್ಲಿ—ಕಬ್ಬು, ಹುರುಳಿ, ಹರಳು, ಜೋಳ ಮತ್ತು ಕಡಲೆ.

ಕೊಪ್ಪ ತಾಲ್ಲೂಕಿನಲ್ಲಿ—ಕಾಫಿ, ಕಬ್ಬು, ಅಡಿಕೆ, ಭತ್ತ ಮತ್ತು ಮೆಣಸು.

ಚಿಕ್ಕಮಗಳೂರು ತಾಲ್ಲೂಕಿನಲ್ಲಿ—ಕಬ್ಬು.

ಎಡೇಹಳ್ಳಿ ಮತ್ತು ಶೃಂಗೇರಿ ಸಬ್ ತಾಲ್ಲೂಕುಗಳಲ್ಲಿ—ಭತ್ತ ಮತ್ತು ಅಡಿಕೆ;

ಮತ್ತು ಮೂಡಗೆರೆ ತಾಲ್ಲೂಕಿನಲ್ಲಿ—ಕಾಫಿ, ಅಡಿಕೆ, ಯಾಲಕ್ಕಿ ಮತ್ತು ಕಾರಿಭತ್ತವು ಇವುಗಳೆಲ್ಲಾ ಸುಮಾರಾಗಿ ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಕುಯ್ಯಲಾದ ಪೈರುಗಳು—

ತರೀಕೆರೆ ತಾಲ್ಲೂಕು—ಭತ್ತ, ಜೋಳ, ಹುಚ್ಚೆಳ್ಳು, ಕೊತ್ತುಂಬರಿ, ಅವರೆ ಮತ್ತು ತೊಗರಿ.

ಕೊಪ್ಪ ತಾಲ್ಲೂಕು—ಭತ್ತ, ಅಡಿಕೆ ಮತ್ತು ಕಾಫಿ.

ಕಡೂರು ತಾಲ್ಲೂಕು—ಭತ್ತ, ರಾಗಿ, ಕೊತ್ತುಂಬರಿ, ಹುರುಳಿ, ಹುಚ್ಚೆಳ್ಳು, ಕಬ್ಬು, ಅವರೆ ಮತ್ತು ತೊಗರಿ.

ಎಡೇಹಳ್ಳಿ ಮತ್ತು ಶೃಂಗೇರಿ ಸಬ್ ತಾಲ್ಲೂಕು—ಭತ್ತ ಮತ್ತು ಅಡಿಕೆ.

ಮೂಡಗೆರೆ ತಾಲ್ಲೂಕು—ಕಾಫಿ, ಅಡಿಕೆ ಮತ್ತು ಯಾಲಕ್ಕಿ—ಇವುಗಳೆಲ್ಲಾ ಕುಯ್ಯಲಾಗುತ್ತಿವೆ.

ಆಗಬಹುದಾದ ಉತ್ಪತ್ತಿಯ ಅಂದಾಜಾ—

ತರೀಕೆರೆ ತಾಲ್ಲೂಕು	ಭತ್ತ, ಹುಚ್ಚೆಳ್ಳು, ಕೊತ್ತುಂಬರಿ, ಮತ್ತು ಜೋಳ	8 ರಿಂದ 12 ಆಣೆ ವರೆಗೆ.
	ಅವರೆ ಮತ್ತು ತೊಗರಿ	4 ರಿಂದ 6 „
ಕೊಪ್ಪ ಡಿಟೋ	ಅಡಿಕೆ, ಭತ್ತ ಮತ್ತು ಕಾಫಿ	12 ಆಣೆ.
ಕಡೂರು ಡಿಟೋ	ಭತ್ತ, ಜೋಳ ಮತ್ತು ರಾಗಿ	16 ಆಣೆ.
	ಕಬ್ಬು	12 ಆಣೆ.
	ಕೊತ್ತುಂಬರಿ	6 ಆಣೆ.
	ತೊಗರಿ ಅವರೆ ಮತ್ತು ಕಡಲೆ	4 ರಿಂದ 8 ಆಣೆ ವರೆಗೆ.
ಎಡೆಹಳ್ಳಿ ಸಬ್ ತಾಲ್ಲೂಕು	ಭತ್ತ	12 ಆಣೆ.
ಶೃಂಗೇರಿ ತಾಲ್ಲೂಕು	ಭತ್ತ ಮತ್ತು ಅಡಿಕೆ	12 ಆಣೆ.
ಮೂಡಗೆರೆ ಡಿಟೋ	ಅಡಿಕೆ	12 ಆಣೆ.
	ಕಾಫಿ, ಮತ್ತು ಕೊತ್ತುಂಬರಿ	4 ರಿಂದ 8 ಆಣೆ ವರೆಗೆ.

10. ಕಾಲದ ಆಯುತಿಯು ಸಾಧಾರಣವಾಗಿ ಚೆನ್ನಾಗಿದೆ. ಆಹಾರ ಜಿನಸಿ ಸಾಕು.

11. ಚಿಕ್ಕಮಗಳೂರು ಪಟ್ಟಣದಲ್ಲಿ ಜ್ವರವು, ಮೂಡಗೆರೆ ಮತ್ತು ಕೊಪ್ಪ ತಾಲ್ಲೂಕುಗಳ ಮತ್ತು ಶೃಂಗೇರಿಯ ಕೆಲವು ಭಾಗಗಳಲ್ಲಿಯೂ ಶಿಡುಬೂ ಮತ್ತು ತರೀಕೆರೆ ತಾಲ್ಲೂಕಿನ ಅತ್ತಿಗನಹಾಳು ಗ್ರಾಮದಲ್ಲಿಯೂ ಮತ್ತು ಕಡೂರು ತಾಲ್ಲೂಕಿನ ಸಕ್ರೆಪಟ್ಣ ಮತ್ತು ಚಿಕ್ಕಂಗಳ ಇವುಗಳಲ್ಲಿ ಪ್ಲೇಗೂ ಇವುಗಳು ಇರುವದು ಹೊರ್ತು ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ದೇವನಗೆರೆ ಮತ್ತು ಜಗಲೂರು ತಾಲ್ಲೂಕುಗಳಲ್ಲಿ ಭೂಮಿಯನ್ನು ಸಾಲು ಹೊಡಿಯುತ್ತಾ ಇದ್ದಾರೆ.

ನಿಂತಿರುವ ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರುಗಳು ಮತ್ತು ಅವುಗಳ ಉತ್ಪತ್ತಿ:—

ಚಿತ್ರದುರ್ಗ, ಹೊಳಲ್‌ಕೆರೆ, ದೇವನಗೆರೆ, ಜಗಲೂರು ಮತ್ತು ಹರಿಹರ ಇವುಗಳಲ್ಲಿ ತೊಗರಿ ಮತ್ತು ಹುರುಳಿ, ಉತ್ಪತ್ತಿ 8 ರಿಂದ 12 ಆಣೆ ವರೆಗೆ; ಹೊಳಲಕೆರೆ ಮತ್ತು ಜಗಲೂರು ತಾಲ್ಲೂಕುಗಳಲ್ಲಿ ಅವರೆ, ಉತ್ಪತ್ತಿ 8 ರಿಂದ 12 ಆಣೆ ವರೆಗೆ; ಚಿತ್ರದುರ್ಗ ತಾಲ್ಲೂಕಿನಲ್ಲಿ ಹರಳ್, ಕಬ್ಬು ಮತ್ತು ಹರಳು ಬೀಜಗಳು, ಉತ್ಪತ್ತಿ 8 ರಿಂದ 12 ಆಣೆ ವರೆಗೆ; ಚಳ್ಳಕೆರೆ ಮತ್ತು ಮೊಳಕಾಲ್ಮುರು ತಾಲ್ಲೂಕುಗಳಲ್ಲಿ ಭತ್ತ, ಉತ್ಪತ್ತಿ 12 ಆಣೆ; ಜಗಲೂರು ತಾಲ್ಲೂಕಿನಲ್ಲಿ ರಾಗಿ, ಉತ್ಪತ್ತಿ 8 ರಿಂದ 12 ಆಣೆ ವರೆಗೆ.

10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು,
1907ನೇ ವರ್ಷದ ಜನವರಿ 28ನೇಯ ತಾರೀಖು.

ಎ. ರಂಗಸ್ವಾಮಿ ಐಯ್ಯಂಗಾರ್,
ರೆವಿನ್ಯೂ ಕಮಿಷನರ್.

ಮೈಸೂರು ಸಂಸ್ಥಾನದ ಅಗ್ರಿಕಲ್‌ಚರಲ್ ಇಲಾಖೆ.

ಅಗ್ರಿಕಲ್‌ಚರಲ್ ಕೆಮಿಸ್ಟರವರ ಆರನೆ

(ಅಂದರೆ 1904—1905ನೆ ಇಸವಿಯ) ರಿಪೋರ್ಟು.

ಉರಿಗೆಹಳ್ಳಿ ಇನಾಂದಾರ್ ಮಿ॥ ಎಸ್. ಕೃಷ್ಣ ಐಯ್ಯಂಗಾರ್ರವರಿಂದ
ತರ್ಜುಮೆ ಮಾಡಲ್ಪಟ್ಟಿದೆ.

ಅಗ್ರಿಕಲ್‌ಚರಲ್ ಇಲಾಖೆಯ ಕನ್ನಡ ಮತ್ತು ಇಂಗ್ಲೀಷ್ ರಿಪೋರ್ಟುಗಳೂ ಬುಲಿಟನ್ನುಗಳೂ
ಅವುಗಳ ಸಂಗ್ರಹವಿರುವ ವರಿಗಿಗೂ ಅಪೇಕ್ಷಿಸುವ ಪ್ಲಾಂಟರುಗಳಿಗೂ
ರೈತರಿಗೂ ಮುಫತ್ತಾಗಿ ಕೊಡಲ್ಪಡುವವು.

ಅಗ್ರಿಕಲ್‌ಚರಲ್ ಇಲಾಖಾ ಉದ್ಯೋಗಸ್ತರು.

ಅಗ್ರಿಕಲ್‌ಚರಲ್ ಕೆಮಿಸ್ಟ್ ...	ಎ. ಲೆಮನ್, ಬಿ. ಎಸ್. ಎ., ಪಿ. ಎಚ್. ಡಿ.
*ಮೈಕಾಲೊಜಿಸ್ಟ್ ಮತ್ತು ಎಂಟಮಾಲೊಜಿಸ್ಟ್ ...	ಲೆಸ್ಲಿ. ಸಿ. ಕೋಲ್ಮನ್,
ಅಸಿಸ್ಟಂಟ್ ಕೆಮಿಸ್ಟ್ ...	ಎಚ್. ವಿ. ಕೃಷ್ಣಯ್ಯ, ಬಿ. ಎ.
ಡಿಟೋ ..	ಬಿ. ವೆಂಕಟರಾವ್, ಬಿ. ಎ.
ಪ್ರೊಬೇಷನರಿ ಅಗ್ರಿಕಲ್‌ಚರಲ್ ಕೆಮಿಸ್ಟ್ ...	ಎ. ಕೆ. ಎಗ್ನನಾರಾಯಣಯ್ಯ, ಎಂ. ಎ.
ಡಿಟೋ ...	ಬಿ. ನರಸಿಮ್ಹಯ್ಯಂಗಾರ್, ಬಿ. ಎ.
ಡಿಟೋ ..	ಎನ್. ಸಂಪತ್ತಯ್ಯಂಗಾರ್,

* ಇವರು ರಜಾದ ಮೇಲೆ ಐರೋಪ್ಯದ ಖಂಡದಲ್ಲಿ ಇರುತ್ತಾರೆ.

ಕಾರ್ಷಿಕ ರಸಜ್ಞರು (ಅಗ್ರಿಕಲ್ಚರಲ್ ಕೆಮಿಸ್ಟರವರು) ಸರ್ 1904—05 ಇಸವಿಯಲ್ಲಿ ತಮ್ಮ ಇಲಾಖೆಯಲ್ಲಿ ನಡೆದ ಕೆಲಸದ ವಿಷಯವಾಗಿ ಸರ್ಕಾರಕ್ಕೆ ತಿಳಿಸಿದ ಆರನೆ ಬಿನ್ನವತ್ತಲೆ—(ರಿಪೋರ್ಟು)

IIನೆ ಭಾಗ.

15. ಮೈಸೂರು ಸೀಮೆಯ ಕೃಷಿಕರು (ರೈತರು) ಸಾಧಾರಣವಾಗಿ ತಿಳಿದುಕೊಳ್ಳಲು ಆಶೆಪಡುವ ಸಂಗತಿಗಳು ಈ ಬಿನ್ನವತ್ತಲೆಯ Iನೆ ಭಾಗದಲ್ಲಿ ಇಲ್ಲದ್ದರಿಂದ ಈ IIನೆ ಭಾಗ ಒಂದನ್ನು ಮಾತ್ರ ಜನರ ತಿಳುವಳಿಗೆ ಬಗ್ಯೆ ಬೇರೆ ಅಚ್ಚು ಹಾಕಿದೆ.

ಪರೀಕ್ಷಾ ವಾಟಿಕೆ ಎಂದರೆ ಸಾಗುಮಾಡುವ ಹೊಸ ರೀತಿಗಳನ್ನು ಅಜಮಾಯಿಷಿ ಮಾಡುವುದಕ್ಕಾಗಿ ಏರ್ಪಡಿಸಿದ ಜಮೀನು. ಸಾಗುವಳಿಯ ರೀತಿಗಳನ್ನು ಅಜಮಾಯಿಷಿ ಮಾಡುವುದಕ್ಕಾಗಿ ಕೆಲವು ವರ್ಷಗಳ ಹಿಂದೆ ಜಮೀನುಗಳನ್ನು ಕಾರ್ಷಿಕ ರಸಜ್ಞರು ಚುನಾಯಿಸಿದರು. ಅವುಗಳನ್ನು ಸರ್. ಪಿ. ಎನ್. ಕೃಷ್ಣಮೂರ್ತಿಗಳವರು ಮತ್ತು ಮಿ॥ ಮೋಲಿಸನ್ ಸಾಹೇಬರವರು ನೋಡಿ ಒಪ್ಪಿದರು. ಆದರೂ ಪರೀಕ್ಷೆಗಾಗಿ ಒಂದು ವಾಟಿಕೆಯನ್ನು ಮಾಡಬೇಕೆಂದಿದ್ದ ಏರ್ಪಾಟು ಅಗಲೇ ಸಾಗದೇ ಹೋಯಿತು. ಅದಕ್ಕಾಗಿ ಚುನಾಯಿಸಿದ ಜಮೀನುಗಳನ್ನು ರೈತರ ಹಿಡುವಳಿಯಿಂದ ಸರ್ಕಾರಕ್ಕೆ ತೆಗೆದುಕೊಂಡು 1905ನೆ ಇಸವಿಯಲ್ಲಿ ಈ ಇಲಾಖೆಯ ಸುಪರ್ದು ಮಾಡಿದರು. ಅವು ಬೆಂಗಳೂರಿಗೆ ಐದು ಮೈಲಿ ದೂರದಲ್ಲಿರುವ ಹೆಬ್ಬಾಳದ ಕೆರೆಯ ಕೆಳಗೆ ಇವೆ. ಆ ಪೈಕಿ ಒಂಭತ್ತು ಎಕರೆ ಇಪ್ಪತ್ತೇಳು ಗುಂಟೆ ತರೀ ಜಮೀನು, ಇಪ್ಪತ್ತೊಂದು ಎಕರೆ ಹತ್ತೊಂಭತ್ತು ಗುಂಟೆ ಖುಷ್ಕಿ ಬಾಗಾಯಿತು ಜಮೀನುಗಳು ಇವೆ. ತರೀ ಜಮೀನಿಗೆ ಹತ್ತಿರದಲ್ಲಿಯೇ ಇರುವ ಖುಷ್ಕಿ ಜಮೀನು ಯಲಹಂಕದ ರಸ್ತೆಗೂ, ಹೆಬ್ಬಾಳದ ಕೆರೆಯ ದಕ್ಷಿಣಕ್ಕೆ (ಮಿಲಿಟರಿ, ಫೌಜು ಇಲಾಖೆಯವರು ತಮ್ಮ ಕೆಲಸಕ್ಕಾಗಿ ಬೇರೆ ವಿಂಗಡಿಸಿ ಇಟ್ಟುಕೊಂಡಿರುವ ಜಮೀನಿಗೂ ನಡುವೆ ಇದೆ. ಆ ಜಮೀನು ಜೇಡಿ ಕಬ್ಬಿಣ ಮಿಶ್ರವಾದ ಮರಳು ಭೂಮಿ, ಸಾಧಾರಣವಾಗಿ ನೋಡುವುದರಲ್ಲಿ, ಈ ಸಂಸ್ಥಾನದಲ್ಲೆಲ್ಲಾ ಸಾಮಾನ್ಯವಾಗಿ ಸಿಕ್ಕುವ ಮಣ್ಣಿನಂತೆಯೇ ಇಲ್ಲಿಯ ಮಣ್ಣು ಇರುವುದೆಂದು ಹೇಳಬಹುದು. ಬೆಂಗಳೂರಿನ ಸಮೀಪದ ಜಮೀನುಗಳ ಪೈಕಿ ಈ ಜಮೀನಿನ ಮಣ್ಣು ಕೂಡಿದ ಮಟ್ಟಿಗೂ ಒಂದೇ ತೆರನಾಗಿರುವುದು. ಆದರೆ, ಯಲಹಂಕದ ರಸ್ತೆಯಿಂದ ಫೌಜಿನ ಇಲಾಖೆಯವರು ವಿಂಗಡಿಸಿ ಇಟ್ಟುಕೊಂಡಿರುವ ಜಮೀನಿನ ಕಡೆಗೂ, ಮತ್ತು ದಕ್ಷಿಣ ಕಡೆ ಸರಹದ್ದಿನಿಂದ ಕೆರೆಯವರಿಗೂ, ಇದರ ಸ್ವಭಾವವು ಕ್ರಮೇಣ ವ್ಯತ್ಯಾಸವಾಗುತ್ತಾ ಬರುತ್ತದೆ. ಇದು ಕೆರೆಯ ಕಡೆಗೆ ಸ್ವಲ್ಪ ಸ್ವಲ್ಪವಾಗಿ ಒಂದೇತೆರನಾಗಿ ಇಳಿಭೂಮಿಯಾಗಿದೆ. ಪೂರ್ವದಲ್ಲಿದ್ದ ಹೊಲಗಳನ್ನೂ, ಈಚೆಗೆ ವಿಂಗಡಿಸಿರುವ ತಾಕುಗಳನ್ನೂ ತೋರಿಸುವ ನಕ್ಷೆಯೊಂದನ್ನು ಇದರಲ್ಲಿಟ್ಟಿದೆ. ಈ ಒಂದೊಂದು ತಾಕು 50 ಲಿಂಕುಗಳ ಅಗಲವೂ 200 ಲಿಂಕುಗಳ ಉದ್ದವೂ ಇದೆ. ಎಕರೆಯೊಂದಕ್ಕೆ ಇಂತಹ ಹತ್ತು ತಾಕುಗಳಾಗುತ್ತವೆ. ಹಿಂದೆ ಈ ಜಮೀನುಗಳು ಅನೇಕ ರೈತರ ವಶವಾಗಿದ್ದುದರಿಂದ ಅವರು ಅವುಗಳಿಗೆ ಬೇರೆ ಬೇರೆ ಗೊಬ್ಬರ ಕೊಟ್ಟು ಬಗೆಬಗೆಯಾಗಿ ವ್ಯವಸಾಯ ಮಾಡಿದ್ದರು. ತೋಟಗಳಾಗಿ ಉಪಯೋಗಿಸುತ್ತಿದ್ದ ತಾಕುಗಳು ಸಾಮಾನ್ಯವಾದ ಖುಷ್ಕಿ ಬೆಳೆ ಇಡುತ್ತಿದ್ದ ಜಮೀನುಗಳಿಗಿಂತ ಒಳ್ಳೇ ಸ್ಥಿತಿಯಲ್ಲಿಯೇ ಇವೆ. ಹೀಗಿರುವದರಿಂದ ಕೊಂಚ ತಾಕುಗೆ

ಳಲ್ಲಿ ಶಾಶ್ವತವಾಗಿ ಕಂಡುಬರುವ ಕೆಲವು ಜಾಜವಿ ವ್ಯತ್ಯಾಸಗಳೇ ಅಲ್ಲದೆ ಸ್ವಲ್ಪ ಕಾಲದ ವರೆಗೆ ಮಾತ್ರವಿರುವ ಅನೇಕ ಭೇದಗಳೂ ಕಂಡುಬರುತ್ತವೆ. ಈ ಹಂಗಾಮಿ ವ್ಯತ್ಯಾಸಗಳು ಪ್ರಾಯಶಃ ಒಂದೆರಡು ಸಂವತ್ಸರಗಳಲ್ಲಿಯೇ ಕಾಣದೇ ಹೋಗಬಹುದು. ಒಂದುವೇಳೆ ಯಾವದಾದರೂ ಶಾಶ್ವತವಾದ ವ್ಯತ್ಯಾಸಗಳು ಕಂಡುಬಂದಲ್ಲಿ ಈ ಬೇರೆಬೇರೆ ತರಹ ಜಮೀನುಗಳನ್ನು ಅವುಗಳ ಗುಣ ಅರಿತು ಉಪಯೋಗಿಸಿ ಒಂದೇ ವಿಧವಾದ ಫಲ ಉಂಟಾಗುವಂತೆ ಮಾಡಬೇಕು. ಪರೀಕ್ಷೆಯಲ್ಲಿ ಉಪಯೋಗಿಸುವ ತಾಕುಗಳ ವ್ಯತ್ಯಾಸವನ್ನು ಚನ್ನಾಗಿ ತಿಳಿದುಕೊಳ್ಳಲು ಈ ವರುಷ ಎಲ್ಲಾ ತಾಕುಗಳನ್ನು ಒಂದೇ ತೆರನಾಗಿ ಸಾಗುವಳಿ ಮಾಡಲಾಯಿತು. ಅವುಗಳಿಗೆಲ್ಲಾ ರಾಗಿ ಬಿತ್ತಿದೆ. ಪ್ರತಿ ತಾಕಿನಲ್ಲಿಯೂ ಬೆಳದ ಹುಲ್ಲನ್ನೂ ದವಸವನ್ನೂ ಬೇರಬೇರೆ ತೂಕ ಮಾಡಲಾಗುತ್ತದೆ. ಯಾವ ಭಾಗದಲ್ಲಿ ಬೆಳೆಯು ಒಂದೇ ತೆರನಾಗಿರುತ್ತದೆಯೋ ಆ ಭಾಗವನ್ನು ಬರುವ ವರುಷ ಪರೀಕ್ಷೆಯ ಕೆಲಸಕ್ಕಾಗಿ ಉಪಯೋಗಿಸಲಾಗುತ್ತದೆ. ಉಳಿದ ಜಮೀನನ್ನು ಪುನಃ ಒಂದೇ ತೆರನಾಗಿ ಸಾಗುವಳಿ ಮಾಡುತ್ತೇವೆ. ಪರೀಕ್ಷೆಗಾಗಿ ಈಗ ಇಟ್ಟಿರುವ ಬೆಳೆಯು ಕುಯಿಲಿಗೆ ಬಂದು ತೂಕ ಮಾಡಿದ ವಿನಾ ಮುಂದೆ ಮಾಡತಕ್ಕ ಪರೀಕ್ಷೆಯ ಸ್ವಭಾವವು ಇಂತಹದೆಂದು ಈಗಲೇ ಹೇಳಲಾಗುವುದಿಲ್ಲ.

17. ಕೆರೆಯ ಸಮೀಪದಲ್ಲಿರುವ ಖುಷ್ಕಿ ಜಮೀನುಗಳ ಪೈಕಿ ಒಂದೇ ತೆರನಾಗಿಲ್ಲದ ಒಂದು ತಾಕನ್ನು ಮಾತ್ರ *ಪರೀಕ್ಷಾ ವಾಟಿಕೆಯಿಂದ ಈಗಲೆ ವಿಂಗಡಿಸಿ ಇಟ್ಟಿವೆ. ಇದರ ಪೈಕಿ ಸ್ವಲ್ಪ ಭಾಗದಲ್ಲಿ ನಾನಾ ವಿಧವಾದ ಬಾಗಾಯಿತಿ ಮತ್ತು ಖುಷ್ಕಿ ಬೆಳೆಗಳನ್ನು ಈ ಸಂವತ್ಸರ ಬೆಳದಿರುತ್ತೆ. ಇದಕ್ಕಾಗಿ ಉಪಯೋಗಿಸಿದ ಬೀಜಗಳನ್ನು ಬೊಂಬಾಯಿ ಸರ್ಕಾರದ ವ್ಯವಸಾಯದ ಇಲಾಖೆಯವರು ತಮ್ಮ ಮಾಂಜ್ರಿ (Maugri) † ಪರೀಕ್ಷಾ ವಾಟಿಕೆಯಿಂದ ದಯವಿಟ್ಟು ಕಳುಹಿಸಿದರು. ಈ ಬೆಳೆಗಳು ಸಾಮಾನ್ಯವಾಗಿ ಚನ್ನಾಗಿಯೇ ಇವೆ. ಆದರೆ ಅವುಗಳಲ್ಲಿ ಕೆಲವು ಮಾತ್ರ ರೋಗದಿಂದ ಬಹಳವಾಗಿ ನೊಂದಿರುತ್ತವೆ. ಚನ್ನಾಗಿ ಬೆಳದಿದ್ದ ಒಂದು ವಿಧದ ಬದನೆಕಾಯಿಯು ಈ ಕಾರಣದಿಂದಲೇ ಕೆಟ್ಟಿತು.

ರಾಗಿಯನ್ನು ಬಿತ್ತುವುದರಲ್ಲಿ ಕಾಲಭೇದದಿಂದ ಉಂಟಾಗುವ ಫಲ ವ್ಯತ್ಯಾಸವನ್ನು ತಿಳಿದುಕೊಳ್ಳುವುದಕ್ಕೋಸ್ಕರ ಬೇರೆ ಬೇರೆ ಕಾಲಗಳಲ್ಲಿ ಮೇಲ್ಕಂಡಂತೆ ಪರೀಕ್ಷಾ ವಾಟಿಕೆಯಿಂದ ಪ್ರತ್ಯೇಕಿಸಿದ ತಾಕಿನ ಪೈಕಿ ಒಂದು ಭಾಗಕ್ಕೆ ಮಾತ್ರ ರಾಗಿಯನ್ನು ಬಿತ್ತಿದ್ದಾಯಿತು. ಈ ಪರೀಕ್ಷೆಯ ಫಲವು ಮುಖ್ಯವಾಗಿ ಮಳೆ ಆದಹಾಗೆಲ್ಲಾ ಆಗುತ್ತೆ. ಕೆಲವು ಕಾಲಗಳಲ್ಲಿ ಉಳುವುದಕ್ಕೆ ಸಾಕಾದಷ್ಟು ಮಳೆ ಆಗಿರುತ್ತೆ. ಆದರೆ ಉಕ್ಕೆ ಪೂರೈಸುವದರೊಳಗಾಗಿ ಭೂಮಿಯು ಒಣಗಿಹೋಗಿ ಬೀಜ ಮೊಳೆಯುವದಕ್ಕೆ ತ್ಯಾವವಿರುವದಿಲ್ಲ. ತಿರುಗಿ ಮಳೆ ಬಿದ್ದಾಗ ಬಿತ್ತನೆ ಮುಗಿಯುವದಕ್ಕೆ ಕೊಂಚ ಕಾಲವಾದರೂ ಹಿಡಿಯುತ್ತದೆ. ಅಷ್ಟರಲ್ಲಿಯೇ ತ್ಯಾವವು ಆರಿಹೋಗಿ ಮಳೆಯಿಂದ ಪೈರಿಗೆ ಸ್ವಲ್ಪವೂ ಪ್ರಯೋಜನವಿಲ್ಲದೆ ಹೋಗುತ್ತದೆ. ಉಕ್ಕೆ ಮುಗಿದಾಗ ನೆಲವು ಬಿತ್ತನೆಗೆ ಬಹಳ ಒಣಗಿದ್ದರೂ, ಮುಂದೆ ಬೀಳುವ ಮಳೆಯಿಂದ ಬೆಳೆಗೆ ಪೂರಾ ಪ್ರಯೋಜನವಾಗಲೆಂದು, ಆಗಲೇ ಬಿತ್ತಿ, ಅದರಿಂದ ಒಳ್ಳೆಯದಾದೀತೆ, ಕೆಟ್ಟದ್ದಾದೀತೆ ಎಂಬುವುದನ್ನು ತಿಳಿಯುವುದಕ್ಕಾಗಿ ಈ ಪರೀಕ್ಷೆಯನ್ನು ಮಾಡಿದ್ದಾಯಿತು. ಇದರಿಂದ, ಬೀಜವು ಮೊಳತಮೇಲೆ ತ್ಯಾವವಿಲ್ಲದೆ ಒಣಗಿಹೋಗುವದಲ್ಲದೆ, ಮೊಳೆಯದ ಬೀಜಗಳನ್ನು ಇರುವೆ ಮುಂತಾದವುಗಳು ತಿಂದುಬಿಡುತ್ತವೆಂಬ ಭಯವೂ ಉಂಟು. ಇದನ್ನು ತಪ್ಪಿಸುವದಕ್ಕೋಸ್ಕರ ಬೀಜದ ರಾಶಿಯಮೇಲೆ ಸ್ವಲ್ಪ ಸೀಮೆ ಎಣ್ಣೆಯನ್ನು ಹುಯಿದು ಬೀಜದಮೇಲೆ ಎಣ್ಣೆಯು ಅಂಟಿಲ್ಲದೆ ವಾಸನೆಮಾತ್ರ ಇರುವಂತೆ ಚನ್ನಾಗಿ ಕಲಸಿ ಹಾಕಿದ್ದಾಯಿತು. ಹೀಗೆ ತೆಳುವಾಗಿ ಎಣ್ಣೆ ಸವರಿದ್ದರಿಂದ ಮೊಳೆಯುವದರಲ್ಲಾಗಲೀ ಬೆಳೆಯುವದರಲ್ಲಾಗಲಿ ಏನಾದರೂ ಕೇಡುಂಟಾಗುತ್ತದೆಯೆ ಎಂಬುವದನ್ನು ಅರಿಯುವದಕ್ಕೋಸ್ಕರ ಮತ್ತೊಂದು ತಾಕಿನಲ್ಲಿ ಎಣ್ಣೆ ಸವರದ ಬೀಜವನ್ನು ಬಿತ್ತಿದ್ದಾಯಿತು. ಹೀಗೆ ಈ ಎರಡು ತಾಕುಗಳನ್ನು ಬಿತ್ತಿದ ಒಂದು ವಾರದೊಳಗಾಗಿ ಚನ್ನಾಗಿ ಮಳೆಯಾಯಿತು. ಎಣ್ಣೆ ಹಚ್ಚಿದ ಬೀಜವೂ ಹಚ್ಚದ ಬೀಜವು ಎರಡೂ ಒಂದೇ ತೆರನಾಗಿ ಚನ್ನಾಗಿ ಬೆಳದವು. ಈಗಿನ ಸ್ಥಿತಿಯಲ್ಲಿ ಎರಡನೆಯ ಬಿತ್ತನೆಯು ಮೊದಲನೆಯ ಬಿತ್ತನೆಯಷ್ಟು ಹುಲುಸಾಗಿ ಆಗುವಹಾಗೆ ತೋರುವದಿಲ್ಲ. ಮುಂದಿನ ವರ್ಷ ಈ ಪರೀಕ್ಷೆಗಳನ್ನು ಈ ಲೆಕ್ಕದಂತೆ ಮರಳಿಯೇ ಪ್ರಾರಂಭಿಸುತ್ತದೆ.

18. ಮುಂದೆ ಬೇರೆ ಬೇರೆ ರೀತಿಯಾದ ವ್ಯವಸಾಯಗಳ ತಾರತಮ್ಯವನ್ನು ಪರೀಕ್ಷೆ ಮಾಡುವದಕ್ಕೋಸ್ಕರ ಉಪಯೋಗಿಸುವುದಕ್ಕೆಂದು ವಿಂಗಡಿಸಿರುವ ಜಮೀನನ್ನು ಒಂಟಿ ಕುದುರೆ ಕಟ್ಟುತಕ್ಕ ಕೆನಡಾ ದೇಶದ ನೇಗಲಿನಿಂದ ಎರಡು ಸಲ ಉತ್ತದ್ದಾಯಿತು. ಆದರೆ ಕೆಲವು ಭಾಗಗಳಲ್ಲಿ ಸ್ವಲ್ಪ ಕಳೆ ನಿಂತಿದ್ದರಿಂದ ಬಿತ್ತನೆಗೆ ಮುಂಚೆ ಹಲುಬೆ ಹೊಡೆಯುವುದಕ್ಕೆ ಬದಲಾಗಿ ಕುದುರೆ ಕಟ್ಟುವ ಪ್ಲಾನೆಟ್ ಜೂನಿಯರ್ ಹಲುಬೆಯನ್ನು ಉಪಯೋಗಿಸಿತು. ಯಾವ ಬಗೆಗೊಬ್ಬರವೂ ಇಡಲಿಲ್ಲ. ಆದರೂ ಈ ದೇಶದ ಮಾಮೂಲಿನಂತೆ ದನದ ಗೊಬ್ಬರ ಕೊಟ್ಟು ಸಾಗುವಳಿ ಮಾಡಿದ ಮಗ್ಗಲು ಹೊಲದಲ್ಲಿರುವ ಬೆಳೆಗಿಂತಲೂ ಇದರಲ್ಲಿರುವ ಬೆಳೆಯು ಮೇಲಾಗಿ ಕಂಡುಬರುತ್ತದೆ. ಈ ವಿಶೇಷ ವ್ಯತ್ಯಾಸವು ಯಾವ ಕಾರಣದಿಂದ ಉಂಟಾಗಿದೆಯೋ ಈಗ ಹೇಳಲು ಆಗುವದಿಲ್ಲ.

19. ತರಿ ಜಮೀನನ್ನು ಕಾಲು ಎಕರೆಯೊಂದಕ್ಕೆ ಹತ್ತು ತಾಕುಗಳಾಗಿ ವಿಂಗಡಿಸಿದ್ದಾಯಿತು. ಈ ಪೈಕಿ ಸ್ವಲ್ಪ ಭಾಗವು ಎತ್ತರದಲ್ಲಿದೆ. ಅದರ ಮಣ್ಣು ಖುಷ್ಕಿ ಜಮೀನಿನ ಮಣ್ಣಿನಂತೆಯೇ ಜಿಗಟಲ್ಲದ ಮರಳು ಕಬ್ಬಿಣ ಮಿಶ್ರವಾದದ್ದು. ಈ ಪ್ರದೇಶದಲ್ಲಿ ಕಬ್ಬಿನ ಬೆಳೆ ಇಟ್ಟು ಪರೀಕ್ಷಿಸಬೇಕೆಂದಿದೆ. ಮಿಕ್ಕ ಭಾಗಗಳೆಲ್ಲಾ ಜೇಡಿ ಹೆಚ್ಚಾಗಿ ಕಲತು ಈಶಾನ್ಯ ದಿಕ್ಕಿನಲ್ಲಿ ಹೆಚ್ಚು ಜಿಗುಟಾಗಿರುವವು. ಹೆಬ್ಬಾಳದ ಕೆರೆಯ ಕೆಳಗಿನ ಜಮೀನುಗಳ ಪೈಕಿ ಈ ತಾಕು ಅತ್ಯಂತ ಆಗ್ನೇಯದಲ್ಲಿ ಇರುತ್ತದೆ. ಮತ್ತು ಈಶಾನ್ಯಕ್ಕೆ ಕ್ರಮೇಣ ಇಳಿಜಾರಾಗಿದೆ. ಈ ತಾಕುಗಳ ಪೈಕಿ ಪ್ರತಿ ತಾಕಿಗೂ ಬೇರೆ ಬೇರೆ ನೀರು ಹಾಯಿಸಬಹುದಲ್ಲದೆ ಅದನ್ನು ಒಣಗಿಸಲೂ ಬಹುದು. ಈ ತಾಕುಗಳ ನಡುವೆ ತಿರುಗಾಡಲು ಅನುಕೂಲವಾದ ಮೂರಡಿ ಅಗಲದ ಬದುಗಳಿವೆ. ಖುಷ್ಕಿ ಜಮೀನುಗಳ ಗುಣವನ್ನು ತಿಳಿದುಕೊಳ್ಳಲು ರಾಗಿಯನ್ನು ಹ್ಯಾಗೆ ಬಿತ್ತನೆ ಮಾಡಿದ್ದಾಯಿತೋ ಹಾಗೆಯೇ ತರಿ ಜಮೀನೂ ಒಂದೇ ವಿಧವಾಗಿದೆಯೋ ಇಲ್ಲವೋ ಎಂಬುವದನ್ನು ತಿಳಿದುಕೊಳ್ಳುವದಕ್ಕಾಗಿ ಆ ಜಮೀನಿನ ಪೈಕಿ ಪರೀಕ್ಷೆಗಾಗಿ ವಿಂಗಡಿಸಿದ ತಾಕಿಗೆಲ್ಲ ಒಂದೆ ಜಾತಿಯ ಭತ್ತವನ್ನು ಚೆಲ್ಲಿದೆ.

* ಪರೀಕ್ಷೆ ಮಾಡುವ ಕೆಲಸಕ್ಕಾಗಿ ಬೇರೆಯಾಗಿಟ್ಟಿರುವ ತೋಟ.

† ಪರೀಕ್ಷೆಯ ಕೆಲಸಕ್ಕಾಗಿ ವಿಂಗಡಿಸಿಟ್ಟಿರುವ ಜಮೀನು.

ಇದಕ್ಕೆ ಲಗತ್ತಿರುವ ನಕ್ಷೆಯಲ್ಲಿ ಪೂರ್ವದಲ್ಲಿದ್ದ ತಾಕುಗಳನ್ನೂ ಈಗ ಪರೀಕ್ಷೆಗಾಗಿ ವಿಂಗಡಿಸಿರುವ ಪಟಗಳನ್ನೂ ತೋರಿಸಿವೆ. ಪೂರ್ವದಲ್ಲಿದ್ದ ಭೂಮಿಯ ಮಟ್ಟದಲ್ಲಿ ವ್ಯತ್ಯಾಸವಿದ್ದುದನ್ನೂ ತೋರಿಸಿದೆ. ಈಗ ವಿಂಗಡಿಸಿರುವ ಪಟಗಳ ಸರಹದ್ದುಗಳೂ ಪೂರ್ವದಲ್ಲಿದ್ದ ಹೊಲಗಳ ಸರಹದ್ದುಗಳೂ ಕೂಡಿದಮಟ್ಟಿಗೂ ಒಂದಾಗಿರುವಹಾಗೆ ಮಾಡಿದೆ. ಹಿಂದೆ ಇದ್ದ ಹೊಲಗಳ ಪೈಕಿ ಒಂದಕ್ಕೊಂದಕ್ಕೆ ಮಟ್ಟದಲ್ಲಿ ವಿಶೇಷ ವ್ಯತ್ಯಾಸ ಕಂಡುಬಂದ ಸಂದರ್ಭದಲ್ಲೆಲ್ಲಾ ತಪ್ಪದೆ ಹೀಗೆ ಮಾಡಿದೆ. ಹೀಗಾದರೂ ಕೆಲವು ಸ್ಥಳಗಳಲ್ಲಿ ಹೊಸದಾಗಿ ಮಟ್ಟ ಕಟ್ಟಬೇಕಾಗಿ ಬಂತು. ಇದರಿಂದುಂಟಾದ ಫಲವು ಈಗ ಬೆಳದಿರುವ ಬೆಳೆಯಲ್ಲಿ ವ್ಯಕ್ತಪಟ್ಟಿದೆ. ಮುಂದೆ ಕಬ್ಬು ಹಾಕಬೇಕೆಂದಿರುವ ಪಟಗಳಲ್ಲಿ ತಗ್ಗಾದ ಸ್ಥಳಕ್ಕೆ ಭರ್ತಿ ಹಾಕಿದ್ದು ವಿನಾ ಮತ್ಯಾವ ತಾಕುಗಳಿಗೂ ಹೊಸದಾಗಿ ಭರ್ತಿ ಹಾಕಲೂ ಇಲ್ಲ. ಅವುಗಳಲ್ಲಿದ್ದ ಮಣ್ಣು ತೆಗೆಯಲೂ ಇಲ್ಲ. ಆಯಾಯ ತಾಕಿನೊಳಗೆಯೇ ಮಟ್ಟ ಹಿಡಿದಿದೆ. ಮಟ್ಟಮಾಡುವ ಕೆಲಸವನ್ನು ಕೂಡಿದಮಟ್ಟಿಗೂ ಕಮ್ಮಿ ಮಾಡುವದಕ್ಕಾಗಿ ಪ್ರತಿಯೊಂದು ತಾಕನ್ನೂ ಎರಡು ಅಥವಾ ಮೂರು ಭಾಗಗಳಾಗಿ ವಿಂಗಡಿಸಿ ಅರ್ಧಪಾಲು ಅಥವಾ ಮೂರರಲ್ಲಿ ಒಂದುಪಾಲು ಮಣ್ಣು ಎತ್ತಿ ತಗ್ಗಿಗೆ ಹಾಕಿ ಮಟ್ಟಮಾಡಿದೆ. ಮೇಲಿನಮಣ್ಣು ಎತ್ತಿದ್ದರಿಂದ ಕಮ್ಮಿಯಾಗಿ ಬೆಳದ ಬೆಳೆಗೂ ಭರ್ತಿಬಿದ್ದ ಜಾಗದಲ್ಲಿ ಹೆಚ್ಚಾಗಿ ಬೆಳದ ಬೆಳೆಗೂ ಬಹುತರವಾಗಿ ಸರಿಹೋಯಿತು. ಬೇರೆ ಬೇರೆಯಾಗಿ ಪಾತಿಗಳಲ್ಲಿ ಅಗೈಕಟ್ಟಿದ ಭತ್ತದ ಪೈರನ್ನು ಪರೀಕ್ಷಾ ಭೂಮಿಯಲ್ಲಿ ನಾಟಿದ್ದಾಯಿತು. ಈಗಿನವರೆಗೂ ಹುಳ ಹುಪ್ಪಟೆಗಳ ತೊಂದರೆಯಾಗಲಿ ರೋಗದ ಕಾಟವಾಗಲಿ ಇಲ್ಲದೆ ಬೆಳೆಯು ಚೆನ್ನಾಗಿದೆ. ಗೊಬ್ಬರವೆನ್ನುವದನ್ನು ಪೋಷಿಸಲೇ ಇಲ್ಲ

20. ಈ ಪರೀಕ್ಷಾ ವಾಟಿಕೆಯಲ್ಲಿ ಕಾರ್ಖಾನೆಗಳನ್ನು ಕಟ್ಟಲು ಸರ್ಕಾರದಿಂದ ಅಪ್ಪಣೆಯಾಗಿರುತ್ತದೆ. ಈ ಬಗ್ಗೆ ಶಾಶ್ವತವಾದ ಕಟ್ಟಡಗಳು ತಯಾರಾಗುವವರೆಗೂ ಹಂಗಾಮಿಯಾಗಿ ಕೆಲವು ಚಿಕ್ಕ ಕಟ್ಟಡಗಳನ್ನು ಕಟ್ಟಿದೆ. ನಭೋವಿದ್ಯಾ (Meteorological) ಇಲಾಖೆಯವರು ಕೊಟ್ಟ ವೃಷ್ಟಿಮಾನ (Rain gauges) ವನ್ನು ಶಾಸ್ತ್ರಾನುಸಾರ ಸ್ಥಾಪಿಸಿದ್ದಾಯಿತು. ಕ್ರಮೇಣ ಸೂರ್ಯತಾಪ (Sun-shine recorder) ಮಾನವೇ ಮೊದಲಾದ ನಭೋವಿದ್ಯಾ ಸಾಧಕಗಳಾದ ಉಪಸ್ಕರಗಳನ್ನು ಒದಗಿಸಿಕೊಳ್ಳಲಾಗುತ್ತದೆ.

ಪರೀಕ್ಷಾಲಯದ ಸುತ್ತಲಿರುವ ತೋಟ.

ರಾಗಿ.

21. ಉಳಮೆ:—ಹೋದವರ್ಷಕ್ಕಿಂತಲೂ ಈ ವರ್ಷ ರಾಗಿ ಬೆಳೆಯ ಪರೀಕ್ಷೆಯು ತೃಪ್ತಿಕರವಾಗಿತ್ತು. ಆದರೂ ಹೋದವರ್ಷ ನಡೆದ ಪರೀಕ್ಷೆಯು ಫಲಿತಾರ್ಥದ ವಿಷಯದಲ್ಲಿ ಹ್ಯಾಗೆ ಅನುಮಾನದಿಂದ ಇರಬೇಕಾಗಿತ್ತೋ ಹಾಗೆಯೇ ಈ ಸಲವೂ ಅದರ ಫಲಗಳನ್ನು ಸಂಕೋಚದಿಂದಲೇ ಅಂಗೀಕರಿಸಬೇಕಾಗಿದೆ. ಗೊಬ್ಬರವಿಟ್ಟ ತಾಕುಗಳಲ್ಲಿಯೂ ಇಡದ ತಾಕುಗಳಲ್ಲಿಯೂ ಬೆಳೆಯು ಒಂದೇ ರೀತಿಯಾಗಿ ಚೆನ್ನಾಗಿದೆ. ಗೊಬ್ಬರವಿಡದ ಜಮೀನಿನ ಪೈಕಿ ಸ್ವದೇಶೀಯ ನೇಗಲಿನಿಂದ ಉತ್ತ ತಾಕಿಗಿಂತಲೂ ಕೆನಡಾ ದೇಶದ ನೇಗಿಲಿನಿಂದ ಉತ್ತ ತಾಕು ಮೇಲಾದುದೆಂದು ಹೋದವರ್ಷ ತಿಳಿಯಬಂದಿದ್ದ ವ್ಯತ್ಯಾಸವು ಬಹಳ [illegible] ಕಾಣಿಸದೆಹೋಗಿದೆ. ಆದರೆ ದನದ ಗೊಬ್ಬರವಿತ್ತ ಜಮೀನಿನ ಪೈಕಿ ಹೋದವರುಷ ಈ ಎರಡು ವಿಧವಾಗಿ ಉತ್ತ [illegible] ಏನೂ ವ್ಯತ್ಯಾಸಕಾಣದೆ ಹೋಗಿದ್ದರೂ, ಈ ವರುಷ ಕೆನಡಾದೇಶದ ನೇಗಿಲಿನಿಂದ ಉತ್ತ ತಾಕು, ಬಹಳಮಟ್ಟಿಗೂ ಮೇಲಾಗಿದೆ. ಮೈಸೂರು ಸೀಮೆಯಲ್ಲಿ ವಾಡಿಕೆಯಾಗಿರುವ ನೇಗಲಿನಿಂದ ಉತ್ತ [illegible] ಗೊಬ್ಬರವಿಟ್ಟ ತಾಕುಗಳಲ್ಲಿ ಎಕರೆಯೊಂದಕ್ಕೆ 975 ಪೌಂಡುಗಳಂತೆ ದವಸವಾಯಿತು. ಕೆನಡಾದೇಶದ ನೇಗಲಿನಿಂದ [illegible] ಜಮೀನಿನಲ್ಲಿ ಎಕರೆಯೊಂದಕ್ಕೆ 1,437 ಪೌಂಡುಗಳಂತೆ ಧಾನ್ಯವಾಯಿತು.

22. ಪೋಷಣ ಪ್ರಯೋಗ (ಗೊಬ್ಬರ ಕೊಡುವುದು.)

ಹೋದವರ್ಷ * ಬಜಾರಿಗೊಬ್ಬರವನ್ನು ಉಪಯೋಗಿಸಿ ಕೃಷಿಮಾಡಿದ ತಾಕುಗಳಲ್ಲಿ ನೂರು ಪೌಂಡು ದವಸ ಉತ್ಪತ್ತಿಯಾದ ಕಡೆ ದನದ ಗೊಬ್ಬರವಿಟ್ಟ ತಾಕುಗಳಲ್ಲಿ $31\frac{1}{8}$ ಪೌಂಡುಗಳು ಮಾತ್ರ ಆದವು. ಈ ವರುಷ ಅವುಗಳಿಂದ ಮೇಲಾದ ಫಲವು ದೊರೆಯಿತು. ಬಜಾರಿಗೊಬ್ಬರವಿತ್ತ ತಾಕುಗಳಲ್ಲಿ ನೂರು ಪೌಂಡು ಬೆಳೆದುದಕ್ಕೆ ದನದ ಗೊಬ್ಬರವಿತ್ತ ತಾಕಿನಲ್ಲಿ $86\frac{1}{2}$ ಪೌಂಡುಗಳು ಆದವು. ಆದರೆ ದನದ ಗೊಬ್ಬರಕ್ಕಿಂತ ಬಜಾರಿಗೊಬ್ಬರದಲ್ಲಿ ಹೆಚ್ಚಾಗಿ ಸಸ್ಯಪೋಷಕ ಪದಾರ್ಥ (ಗಿಡಗಳು ಚೆನ್ನಾಗಿ ಬೆಳೆಯುವದಕ್ಕೆ ಬೇಕಾದ ಪದಾರ್ಥ) ವಿತ್ತು. ಹೋದವರ್ಷ ಕೊಟ್ಟ ಗೊಬ್ಬರದ ಫಲವು ಈ ವರ್ಷ ಕಂಡು ಬರುವುದು ಎಂದು ಊಹಿಸಿದ್ದಕ್ಕೆ ವಿರೋಧವಾಗಿ ಫಲವೇನೂ ಕಾಣಬರಲಿಲ್ಲ. ದನದಗೊಬ್ಬರವಿಟ್ಟ ತಾಕಿನಲ್ಲಿಯೂ ಹಾಗೆಯೇ ಆಯಿತು. ಆದರೆ ಭೂಮಿಯ ಸ್ವಭಾವವು ಒಂದೇ ತರನಾಗಿ ಇಲ್ಲದ್ದರಿಂದ ಹಿಂದೆ ಗೊಬ್ಬರವಿಟ್ಟಿದ್ದರ ಗುಣವು ಬೆಳೆಯಲ್ಲಿ ಸ್ವಲ್ಪವಾಗಿ ಕಾಣಿಸಿಕೊಂಡಾಗ ಅದನ್ನು ಕಂಡು ಹಿಡಿಯುವದು ಅಸಾಧ್ಯ. ಹೋದವರ್ಷ ಗೊಬ್ಬರಕೊಟ್ಟ ಚಿಕ್ಕ ತಾಕುಗಳ ಪೈಕಿ ಅರ್ಧಕ್ಕೆ ಹೋದವರ್ಷದಂತೆ ಈ ಸಲವೂ ಗೊಬ್ಬರ ಕೊಟ್ಟಿತು. ಮಿಕ್ಕ ಅರ್ಧವನ್ನು ಹಾಗೆಯೇ ಬಿಟ್ಟಿತು. ಭೂಗುಣವು ಒಂದೇ ತೆರನಾಗಿದ್ದ ಪಕ್ಷದಲ್ಲಿ, ಹೋದವರ್ಷ ಗೊಬ್ಬರತಿಂದು ಈ ವರ್ಷ ಗೊಬ್ಬರವಿಡದೆ ನಿಂತ ತಾಕುಗಳಿಗೂ, ಮೊದಲಿನಿಂದಲೂ ಗೊಬ್ಬರವಿಡದೆ ಇದ್ದ ತಾಕುಗಳಿಗೂ ತಾರತಮ್ಯ ನೋಡಿದಾಗ, ಹೋದವರ್ಷ ಗೊಬ್ಬರ ತಿಂದಿದ್ದರ ಫಲವೇನಾದರೂ ಇದ್ದಲ್ಲಿ ಕಂಡುಬರುತ್ತಿತ್ತು. ಹಾಗೆ ಇಲ್ಲದ್ದರಿಂದ ಗೊಬ್ಬರತಿನ್ನದ ಎರಡು ತಾಕುಗಳಲ್ಲಿಯೂ ಎಕರೆಯೊಂದಕ್ಕೆ 1,225 ಪೌಂಡುಗಳಂತೆ ಧಾನ್ಯ ಉತ್ಪತ್ತಿಯಾಗಲು, ಗೊಬ್ಬರವಿಟ್ಟ ತಾಕುಗಳಲ್ಲಿ ಅತಿ ಸ್ವಲ್ಪವೇ ಉತ್ಪತ್ತಿಯಾಯಿತು. (ಒಂದರಲ್ಲಿ 357 ಪೌಂಡುಗಳು ಮತ್ತೊಂದರಲ್ಲಿ 712 ಪೌಂಡುಗಳು) ಹೀಗೆ ಜೊತೆ ಕಟ್ಟಿ ಒಂದೇ ವಿಧವಾಗಿ ಕೃಷಿಮಾಡಿದ ತಾಕುಗಳ ಫಲದಲ್ಲಿ ಇಷ್ಟು ಹೆಚ್ಚಾದ ವ್ಯತ್ಯಾಸ ಕಂಡುಬರಲು ಈ ಫಲಿತಾರ್ಥಗಳಿಗೆ ವಿಶೇಷ ಗೌರವವನ್ನು ಕೊಡಲಾಗುವದಿಲ್ಲ. ಗೊಬ್ಬರ ತಿನ್ನದ ನಾಲ್ಕು ತಾಕುಗಳಲ್ಲಿ ಎಕರೆಯೊಂದಕ್ಕೆ ಸರಾಸರಿ 879 ಪೌಂಡುಗಳಂತೆಯೂ ಹೋದವರುಷ ಮಾತ್ರ ಗೊಬ್ಬರ ತಿಂದ ಆರು ತಾಕುಗಳಲ್ಲಿ 800 ಪೌಂಡುಗಳಂತೆಯೂ, ಧಾನ್ಯ ಉತ್ಪತ್ತಿಯಾಯಿತು. ಆದ್ದರಿಂದ ಹೋದವರ್ಷ ಗೊಬ್ಬರವಿಟ್ಟಿದ್ದರ ಫಲವು ಈ ವರುಷ ಕಂಡುಬಂದಂತಾಗಲಿಲ್ಲ. ಈ ವರ್ಷ, ಗೊಬ್ಬರವಿಟ್ಟ ತಾಕುಗಳಲ್ಲಿ ಮಾತ್ರ ಎಕರೆಯೊಂದಕ್ಕೆ 1,393 ಪೌಂಡುಗಳ ಪ್ರಕಾರ ಉತ್ಪತ್ತಿಯಾಯಿತು.

* ಪೈರು ಚೆನ್ನಾಗಿ ಬೆಳೆಯುವುದಕ್ಕಾಗಿ ಹಿಂಡಿ, ಎಲುಬಿನಪುಡಿ, ವಿಧವಿಧವಾದ ಉಪ್ಪುಗಳು, ಮೀನು ಪಕ್ಷಿಗಳ ಪುರೀಷ ಮುಂತಾದವುಗಳನ್ನು ಬೆರಸಿ ತಯಾರು ಮಾಡಿ ವಿಶೇಷವಾಗಿ ಮಾಡುತ್ತಾರೆ. ಇವುಗಳನ್ನು ಕಾಫಿ ತೋಟಗಳಿಗೆ ಬಹಳವಾಗಿ ಉಪಯೋಗಿಸುತ್ತಿರುವುದು ಎಲ್ಲರ ಅನುಭವದಲ್ಲಿಯೂ ಇದೆ. ಇದಕ್ಕೆ ಬಜಾರಿಗೊಬ್ಬರವೆಂದು ಹೆಸರು ಕೊಟ್ಟಿದೆ.

23. ಸ್ವಾಮಾನ್ಯವಾಗಿ ಕೊಡುವ ಗೊಬ್ಬರಕ್ಕೆ ಎರಡರಷ್ಟು ಬಜಾರಿ ಗೊಬ್ಬರವನ್ನು ಹೋದವರ್ಷವೂ ಈ ವರ್ಷವೂ ಕಿಂದ ಒಂದು ತಾಕಿನಲ್ಲಿ ಎಕರೆಯೊಂದಕ್ಕೆ 5½ ಟನ್ ಪ್ರಕಾರ ಅತಿ ಹೆಚ್ಚಾಗಿ ಹುಲ್ಲು ಬೆಳೆದುಹೋಗಿ ಹೆಸರಿಗೆ ಮಾತ್ರ ದವಸವಾಯಿತು. ಎಂದರೆ ಎಕರೆಯೊಂದಕ್ಕೆ 595 ಪೌಂಡುಗಳಾಯಿತು. ಎರಡು ಅಡಿ ಆಳವಾಗಿ ಅಗೆದ ತಾಕುಗಳ ಪೈಕಿ, ಗೊಬ್ಬರ ಕೊಡದ ಭಾಗದಲ್ಲಿ ಎಕರೆಯೊಂದಕ್ಕೆ 1,212 ಪೌಂಡುಗಳಂತೆಯೂ ಬಜಾರಿಗೊಬ್ಬರ ಕೊಟ್ಟ ಭಾಗದಲ್ಲಿ 1,475 ಪೌಂಡುಗಳಂತೆಯೂ ದವಸ ಉತ್ಪತ್ತಿಯಾಯಿತು. ಆಳವಾಗಿ ಉಳುವುದು ಪ್ರಾಯಶಃ ರಾಗಿಗೆ ಒಳ್ಳೆಯದೆಂದು ತೋರುತ್ತದೆ. ಇವುಗಳ ಈ ಪರೀಕ್ಷೆಗಳನ್ನು ಸಮನಲ್ಲದ ಚಿಕ್ಕ ತಾಕುಗಳಲ್ಲಿ ಮೊದಲು ಮಾಡಿದ್ದರಿಂದ ಮುಂದೆ ನಡೆಸುವ ಪರೀಕ್ಷೆಗಳನ್ನು ಹ್ಯಾಗೆ ಮಾಡಬೇಕೆಂಬುವದನ್ನು ಇವುಗಳು ತೋರಿಸುವವೆಂಬ ಒಂದು ಕಾರಣದಿಂದ ವಿನಾ ಮತ್ತಾವ ಕಾರಣದಿಂದಲೂ ಇವುಗಳ ಫಲಿತಾರ್ಥಗಳಿಗೆ ಗೌರವ ಕೊಡಲಾಗುವದಿಲ್ಲ.

24. ಈ ಪರೀಕ್ಷೆಗಳಿಗಾಗಿ ಉಪಯೋಗಿಸಿದ "ಹಾಲುಬಿಳಿ" ಜಾತಿ ರಾಗಿಯಿಂದ ಈ ವರ್ಷ ಈ ಜಮೀನಿನಲ್ಲಿ ಉತ್ಕೃಷ್ಟ ಬೆಳೆಯಾದದ್ದು ಎಕರೆಯೊಂದಕ್ಕೆ 2,225 ಪೌಂಡ್ ಧಾನ್ಯವೂ, 11,375 ಪೌಂಡ್ ಅಥವಾ 5 ಟನ್‌ಗಳಿಗೆ ಸ್ವಲ್ಪ ಹೆಚ್ಚಾಗಿ ಹುಲ್ಲೂ ಉತ್ಪತ್ತಿಯಾಯಿತು.

25. ಈ ವರ್ಷ ಬಹುಮೇಲಾದ ಫಸಲನ್ನು ಕೊಟ್ಟದ್ದು ಬಾಳೆಪಟ್ಟೆ ಎಂಬ ಜಾತಿ—ಇದು ಎಕರೆಯೊಂದಕ್ಕೆ 1⅔ ಟನ್ ಎಂದರೆ 3,750 ಪೌಂಡ್ ಧಾನ್ಯವನ್ನು, 6¼ ಟನ್ ಅಂದರೆ 13,800 ಪೌಂಡುಗಳ ಹುಲ್ಲನ್ನು ಕೊಟ್ಟಿತು. ಹೋದವರುಷ ಈ ಜಾತಿಯು ಎರಡನೆಯದಾಯಿತು—ಹೋದವರುಷ ಮೊದಲನೇದಾದ ಜೇನು ಮುದ್ದಿನ ರಾಗಿಯು ಈ ವರುಷ ಮೂರನೆಯದಾಯಿತು. ತಾಕುಗಳು ಅತಿ ಚಿಕ್ಕದಾಗಿಯೂ ಬಹುತರ ಒಂದೇ ವಿಧವಾಗಿಲ್ಲದಿದ್ದದರಿಂದ ಈ ಫಲಿತಾರ್ಥಗಳಿಂದ ದೃಢವಾಗಿ ಏನೂ ನಿರ್ಣಯಿಸಲಾಗುವದಿಲ್ಲ. ಅಂತು ಇಂತು ಎಲ್ಲಾ ಜಾತಿಗಳೂ ಚೆನ್ನಾಗಿಯೇ ಬೆಳದವು. ಈ ಜಾತಿಗಳಿಗೆ ಗೊಬ್ಬರವಿಟ್ಟು ಕೃಷಿ ಮಾಡಿದ್ದಕ್ಕಿಂತ "ಮಾದೈಯ್ಯನಗಿರಿ ರಾಗಿ" "ದೊಡ್ಡರಾಗಿ" ಎಂಬ ಜಾತಿಗಳಿಗೆ ಕಡಿಮೆಯಾಗಿ ಕೃಷಿಮಾಡಿದರೆ ಅವುಗಳ ಬೆಳೆ ಚೆನ್ನಾಗಿಯೂ ಹುಲುಸಾಗಿಯೂ ಆಗಬಹುದೆಂದು ತೋರುತ್ತದೆ.

26. ಗೆಣಸು.—ಈ ವರ್ಷ ಗೆಣಸಿನ ಬೆಳೆಯು ಹೋದವರ್ಷದಷ್ಟು ಚೆನ್ನಾಗಿ ಆಗಲಿಲ್ಲ. ಹೊಸದಾಗಿ ತಂದ "ಜರ್ಸಿ" ಎಂಬ ಜಾತಿಯಿಂದ ಹೋದವರ್ಷದಂತೆಯೇ ಎಕರೆಯೊಂದಕ್ಕೆ 14,175 ಪೌಂಡುಗಳ ಮೇರೆ ಈ ಸಲವೂ ಉತ್ಪತ್ತಿ ಆಯಿತು. ಹೋದವರ್ಷ ಇದು ಎರಡನೇದಾಗಿದ್ದು ಈ ವರ್ಷ ಮೊದಲನೇದಾಯಿತು. ವರ್ಜಿನಿಯಾ, ನ್ಯಾನ್ಸಿಮಾಂಡ್ ಜಾತಿಗಳಿಂದ ಎಕರೆಯೊಂದಕ್ಕೆ 8,600 ಮತ್ತು 8,760 ಪೌಂಡುಗಳಂತೆ ಉತ್ಪತ್ತಿಯಾಯಿತು.

27. ನೆಲಗಡ್ಲೆಕಾಯಿ.—ಈ ವರ್ಷ ನೆಲಗಡ್ಲೆಕಾಯಿಯ ಬೆಳೆಗೆ ರೋಗ ತಗಲಿ ಕೆಟ್ಟುಹೋಯಿತು. ಹೋದವರ್ಷ ಎಕರೆ ಒಂದಕ್ಕೆ 10,100 ಪೌಂಡುಗಳಂತೆ ಬೆಳೆದುದರಿಂದ ಮೊದಲೆನಿಸಿಕೊಂಡ ವರ್ಜಿನಿಯಾ ಜಾತಿಯು ಈ ಸಲ ಕೊನೇದಾಗಿ [illegible]ಪೌಂಡುಗಳನ್ನು ಮಾತ್ರ ಕೊಟ್ಟಿತು. ಹೋದವರ್ಷ 8,750 ಪೌಂಡುಗಳು ಬೆಳೆದ ಜಪಾನ್ ಜಾತಿಯಿಂದ ಈ ಸಲ [illegible]ಪೌಂಡುಗಳು [illegible]ಂತೆ ಆದವು. "ಪುದುಚೇರಿ" ಜಾತಿಯಿಂದ 6,925 ಪೌಂಡುಗಳಾಗಿದ್ದದ್ದು ಈಸಲ 4,550 ಪೌಂಡುಗಳು ಮಾತ್ರ ಆದವು. ಹೋದವರ್ಷ [illegible] ವರ್ಷ ಕಡಿಮೆಯಾದುದರಿಂದ ಹಿಂದಲ ಸ್ಥಿತಿಯನ್ನು ಈಸಲ ಮುಟ್ಟುಟ್ಟಿದಂತಾಯಿತು. ಭೂ ಗುಣವು ಒಂದೇರೀತಿಯಾಗಿದ್ದ[illegible]ರ್ಷದಂತೆ ರೋಗಪೀಡಿತವಾದಾಗಲೆಲ್ಲಾ ಫಲವು ಹೀನವಾಗಿಯೇ ಆಗುವುದು. ಮುಂದಲವರ್ಷದಲ್ಲಿ ಅದೇ ಬೀಜವನ್ನೆ ಹಾಕುವ[illegible]ದರೆ ಅವುಗಳನ್ನು ನೂರಕ್ಕೆ ಒಂದರಂತೆ ಮೈಲುತುತ್ತಿಯನ್ನು ಕಲಸಿದ ನೀರಿನಲ್ಲಿ (Solution of copper s[illegible]) ನಿಮಿಷಮಾತ್ರ ನೆನಹಾಕಿ ಅದರಿಂದೇನಾದರೂ ರೋಗವು ಕಡಿಮೆಯಾದೀತೆ ಎಂದು ಪರೀಕ್ಷೆಮಾಡಬೇಕೆಂದಿದೆ.

28. ಕಟ್ಟಡಗಳು.—(ಕಾರ್ಖಾನೆಗಳು) ಉಗ್ರಾಣಗಳು—ವ್ಯವಸಾಯದ ಕೊರಮುಟ್ಟುಗಳನ್ನು ಇಡುವುದಕ್ಕೂ ಇಬ್ಬರು ಆಳುಗಳಿರುವದಕ್ಕೂ ಕೊಠಡಿಗಳನ್ನು ಕಟ್ಟಿದ್ದಾಯಿತು. ಬಹು ಜೋಕೆಯಿಂದ ಪರೀಕ್ಷೆ ನಡೆಸುವುದಕ್ಕಾಗಿ ಪಕ್ಷಿಗಳೂ ಮೃಗಗಳೂ ಮುಟ್ಟದಹಾಗೂ ಗಾಳಿ ಬಿಸಿಲು ಮಾತ್ರ ಆಡುವುದಕ್ಕೆ ಅಡ್ಡಿ ಇಲ್ಲದಂತೆಯೂ ಎಲ್ಲಾ ಕಡೆಯಲ್ಲೂ ತಂತಿ ಬಲೆಯಿಂದ ಭದ್ರಪಡಿಸಿದ ಮನೆಯಲ್ಲಿ ಮಣ್ಣಿನ ಬಾನಿಗಳಲ್ಲಿ ಪರೀಕ್ಷೆಮಾಡತಕ್ಕ ಗಿಡಗಳನ್ನು ಬೆಳಸಲು ಒಂದು ವ್ಯವಸಾಯದ ಮನೆಯನ್ನು ಕಟ್ಟುತ್ತಲಿದೆ. ಅದಕ್ಕೆ ಸೇರಿದಂತೆ ಬಾನಿಗಳಿಗೆ ಮಣ್ಣುಗೊಬ್ಬರ ತುಂಬಿ ವ್ಯವಸಾಯಕ್ಕೆ ಸಿದ್ಧಪಡಿಸುವ ಕೊಠಡಿಯು ಮಾತ್ರ ತಯಾರಾಯಿತು. ಈ ವ್ಯವಸಾಯದ ಮನೆಯಲ್ಲಿ ಚಿಕ್ಕಬಂಡಿಗಳನ್ನು ಹಿಂದಕ್ಕೆ ಮುಂದಕ್ಕೆ ತಳ್ಳುವಂತೆ ಸಣ್ಣದಾದ ರೈಲುಕಂಬಿ ಹಾಕುತ್ತೆ.—ಈ ಬಂಡಿಗಳ ಮೇಲಿಟ್ಟಿರುವ ಪರೀಕ್ಷೆಮಾಡತಕ್ಕ ಬಾನಿಗಳನ್ನು ಮಳೆಗಾಳಿ ಜೋರಾಗಿ ಬಂದಾಗ ಮನೆಯೊಳಕ್ಕೆ ತಳ್ಳಿ ಪಕ್ಷಿಮೃಗಗಳ ಹಾವಳಿ ಇಲ್ಲದಾಗ ಗಿಡಗಳಿಗೆ ನೋವಾಗದಂತೆ ಸುಲಭವಾಗಿ ಬೈಲಿಗೆಳಕ್ಕೆ ಸಾಗಿಸಲು ಇದರಿಂದ ಅನುಕೂಲವಿರುತ್ತೆ.—ಈ ರೀತಿ ಪರೀಕ್ಷೆಗಾಗಿ ಬಾನಿಗಳಲ್ಲಿ ಗಿಡಗಳನ್ನು ಬೆಳಸುವುದು ನನ್ನ ತಿಳವಳಿಕೆಗೆ ಬಂದಮಟ್ಟಿಗೆ ಇಂಡಿಯಾದೇಶದಲ್ಲೂ ಇತರ ಉಷ್ಣದೇಶಗಳಲ್ಲೂ ನೂತನವಾದದ್ದು.—ರೈಲ್ ಬಂಡಿಗಳ ಸಹಾಯವಿಲ್ಲದೇನೆ ಈ ವಿಷಯದಲ್ಲಿ ಡಾಕ್ಟರ್ ಲೆಥರ್ ಸಾಹೇಬರವರು ಡೇರಾಡೂನ್‌ನಲ್ಲಿ ಸ್ವಲ್ಪವಾಗಿ ಪ್ರಯತ್ನಪಟ್ಟರು. ಸಲೀಸಾಗಿಯೂ ಚೆನ್ನಾಗಿಯೂ ಕೆಲಸ ನಡೆಸಬೇಕಾದರೆ ಈ ಅನುಕೂಲವು ಅವಶ್ಯವೆಂದು ಅವರಿಗಾಗ ತೋರಿಬಂತು. ಇಲ್ಲಿ ವ್ಯವಸಾಯದ ಮನೆಗೆ ಯಾವ ಹೊದ್ದಿಕೆ ಒಳ್ಳೆಯದೆಂಬುವದನ್ನು ಈಗಲೇ ತೀರ್ಮಾನಿಸಲಾಗುವದಿಲ್ಲ. ಯೂರೋಪ್ ಮತ್ತು ಅಮೆರಿಕಾಖಂಡಗಳಲ್ಲಿ ಗಾಜಿನಿಂದ ಹೊದ್ದಿಸುತ್ತಾರೆ. ಅದು ಈ ಚುರುಕಾದ ಬಿಸಿಲುಳ್ಳದೇಶಕ್ಕೆ ಅನುಕೂಲಿಸುವಂತೆ ತೋರುವದಿಲ್ಲ. ಬಾನಿಗಳನ್ನು ಸಿದ್ಧಪಡಿಸುವದಕ್ಕೆಂದು ಉದ್ದೇಶಿಸಿರುವ ಕೊಠಡಿಯನ್ನೇ ಗಿಡಗಳನ್ನು ಮಳೆಗಾಳಿಗಳಿಂದ ಮರೆಮಾಡಲು ಸದ್ಯಕ್ಕೆ ಉಪಯೋಗಿಸುತ್ತದೆ. ಈ ಕೊಠಡಿಯ ಛಾವಣಿಯ ಕೆಲವು ಹೆಂಚುಗಳನ್ನು ತೆಗೆದುಹಾಕಿ ಅವುಗಳಿಗೆ ಬದಲಾಗಿ ಗಾಜಿನ ಹೆಂಚುಗಳನ್ನು ಹಾಕಿದರೆ ಸಕೆಯು ಜಾಸ್ತಿಯಾದೆ ಸಾಕಾದಷ್ಟು ಬೆಳಕು ಉಂಟಾಗಬಹುದು. ಈ ದೇಶದಲ್ಲಿ ಈ ಕೆಲಸಕ್ಕಾಗಿ ಯಾವದು ಅನುಕೂಲಿಸುವದೆಂಬುವದನ್ನು ತಿಳಿದುಕೊಂಡ ಮೇಲೆ ಅವಶ್ಯವಾದ ಬದಲಾವಣೆಗಳನ್ನು ಮಾಡಿಕೊಳ್ಳಬಹುದು. ಅಥವಾ ಈಗಿರುವ ಕಟ್ಟಡಗಳಿಗೆ ಹೆಚ್ಚು ಕಟ್ಟಡಗಳನ್ನು ಸೇರಿಸಿಕೊಳ್ಳಬಹುದು.

29. ಬಾನಿಗಳ ವ್ಯವಸಾಯದಲ್ಲಿ ಮಣ್ಣುಗೊಬ್ಬರ ಮುಂತಾದವುಗಳನ್ನು ಮುಂದಾಗಿಯೇ ಕಲಸಿ ಬಾನಿಗಳಿಗೆ ತುಂಬುವು ದರಿಂದ ಭೂಮಿಯಲ್ಲಿ ಪೈರು ಮಾಡಿದಾಗ ಮಣ್ಣು ಒಂದೇತೆರನಾಗಿಲ್ಲದ ಕಾರಣ ಉಂಟಾಗುವ ವ್ಯತ್ಯಾಸಗಳು ಬಹುಮಟ್ಟಿಗೆ ಕಮ್ಮಿಯಾಗುತ್ತವೆ. ಮೇಲೆ ಹೇಳಿದ ವ್ಯವಸಾಯದ ಮನೆಯು ಕಟ್ಟಿ ಅಲ್ಲಿ ಪರೀಕ್ಷಾ ಕೆಲಸವು ಸ್ವಲ್ಪಮಟ್ಟಿಗೆ ನಡೆದಮೇಲೆ ಇತರ ಗುಣಾವಗುಣಗಳನ್ನು ವಿವರಿಸಲಾಗುತ್ತದೆ.

30. ಪಾಳಿಗೋಡೆ.—ಪರೀಕ್ಷಾಲಯದ ಸುತ್ತಲು ಇರುವ ಚಿಕ್ಕ ಅಜಮಾಯಿಷಿ ತಾಕುಗಳ, ಬೆಳೆಯನ್ನು ಕಾಪಾಡುವದ ಕ್ಕೋಸ್ಕರ ಪಾಳಿಗೋಡೆಯನ್ನು ಮುಕ್ಕಾಲು ಮೂರುವೀಸಪಾಲು ಪೂರೈಸಿದ್ದಾಯಿತು.

ಕಬ್ಬು ಮತ್ತು ಸಕ್ಕರೆ.

ಈ ವರ್ಷದಲ್ಲಿ ಕಬ್ಬಿನಿಂದ ಸಕ್ಕರೆಯನ್ನು ತಯಾರುಮಾಡುವ ರೀತಿಯೊಂದರ ವಿಷಯದಲ್ಲಿ ಪರೀಕ್ಷೆಗಳನ್ನು ನಡೆಯಿಸಿದ್ದಾಯಿತೇ ವಿನಾ ಮತ್ತು ಯಾವ ಕೆಲಸವನ್ನು ಮಾಡಲೂ ಪ್ರಯತ್ನಪಡಲಿಲ್ಲ. ಈ ಪ್ರಕ್ರಿಯೆ ಮುಖ್ಯವಾದದ್ದು ಕಚ್ಚಾ ಚಕ್ಕಿ ಸಕ್ಕರೆಯನ್ನು ತಯಾರು ಮಾಡುವುದು. ಈ ದೇಶದಲ್ಲೇ ತಯಾರಾದ ಎತ್ತು ಕಟ್ಟುವ ಮೂರು ಕಣೆಗಳುಳ್ಳ ಕಬ್ಬಿನ ಗಾಣದಿಂದ ಕೂಡಿದ ಮಟ್ಟಿಗೂ ಜೋಕೆಯಾಗಿ ಗಾಣಮಾಡಿದ ಸಿಪ್ಪೆಯಲ್ಲಿ ಉಳಿದ ಹಾಲಿನ ಪ್ರಮಾಣ ಗಾಣಮಾಡಿದ ಕೂಡಲೆ ಹಾಲನ್ನು ಉಪಯೋಗಪಡಿಸದೆ ಇಡುವದರಿಂದುಂಟಾಗುವ ನಷ್ಟ, ಅಥವಾ ಕಬ್ಬನ್ನು ಮುಂದಮೇಲೆ ಆಲೆಮಾಡುವದಕ್ಕೆ ಸಾವಕಾಶ ಮಾಡುವುದರಿಂದುಂಟಾದ ನಷ್ಟ ಇವೇ ಮೊದಲಾದ ಮುಖ್ಯವಿಷಯಗಳನ್ನು ಪರೀಕ್ಷಿಸಲಾಯಿತು.

32. ಕೂಳೆತಡದ ಕಬ್ಬು.—ಕಬ್ಬಿನ ಕೂಳೆಯನ್ನು ತಡೆದು ವ್ಯವಸಾಯ ಮಾಡಿದರೆ ಪೈರು ಹ್ಯಾಗಾಗುತ್ತೆಂಬುವದನ್ನು ಅಜಮಾಯಿಷಿ ಮಾಡುವದಕ್ಕಾಗಿ ಪರೀಕ್ಷಾಲಯದ ತೋಟದಲ್ಲಿ ಹೋದವರುಷ ಬೆಳೆದ ಕಬ್ಬಿನ ಕೂಳೆಯನ್ನು ತಡೆದು ಬೆಳೆಸಿತು. ಈ ಪರೀಕ್ಷೆಯನ್ನು ಅನೇಕ ಕಾರಣಗಳಿಗೋಸ್ಕರ ಮಾಡಿದ್ದಾಯಿತು. ವಿಶೇಷವಾಗಿ ಕಬ್ಬು ಬೆಳೆಯುವ "ಕ್ಯೂಬಾ" ಮುಂತಾದ ಸ್ಥಳಗಳಲ್ಲಿ ವಾಡಿಕೆಯಾಗಿರುವ ಈ ಪದ್ಧತಿಯನ್ನು ಇಂಡ್ಯಾದೇಶದಲ್ಲೂ ಅನುಸರಿಸದಿರುವದಕ್ಕೆ ಏನಾದರೂ ಪ್ರಬಲ ಕಾರಣಗಳುಂಟೆ ಎಂಬುವದನ್ನು ಅರಿತುಕೊಳ್ಳಲು ಈ ಪರೀಕ್ಷೆಯನ್ನು ಮಾಡಿತು. ಕಾರ್ಷಿಕ ರಸಜ್ಞರು ರಜಾ ಪಡೆದುಹೋಗಿದ್ದುದರಿಂದ ಅವರ ನಿಗೇವಾನಿ ಇಲ್ಲದಾಗ ಬೀಜ ನಾಟುವದನ್ನು ತಪ್ಪಿಸುವದಕ್ಕೂ ಮತ್ತು ನಾಟುವದರ ಖರ್ಚನ್ನು ಉಳಿಸಿಕೊಳ್ಳಲೂ ಕೂಳೆಯನ್ನು ತಡೆದದ್ದಾಯಿತು. ಮೊದಲ ಫಸಲನ್ನು ಒಂದು ವರುಷವಾದ ಕೂಡಲೆ ತೆಗೆದುಕೊಳ್ಳುವ ಇರಾದೆಯಿಂದ ಹೋದವರುಷ ಬೆಳೆದ ಹದಿನೆಂಟು ತಿಂಗಳ ಜಾತಿಯನ್ನೇ ಈಸಲವೂ ಬೆಳೆಯಿತು. ಹಿಂದಲ ವರ್ಷದ ಕಬ್ಬನ್ನು 1904ನೆ ಇಸವಿ ಮಾರ್ಚಿ ತಿಂಗಳ ಕೊನೆಯಲ್ಲಿ ಮುರಿದು ಹಿಂದಲಸಲದಂತೆಯೇ ಜಮೀನಿಗೆ ಚೆನ್ನಾಗಿ ಆಗತೆಯೂ ಗೊಬ್ಬರವೂ ಕೊಟ್ಟದ್ದಾಯಿತು. ಅವಶ್ಯ ಕಂಡುಬಂದಹಾಗೆಲ್ಲ ಮೇಲುನೀರು ಕಟ್ಟಿತು. ಕೂಳೆ ಪೈರು ಚೆನ್ನಾಗಿ ಬಂತು. ನೋಟಕ್ಕೆ ತೆಂಡೆಯಲ್ಲಿ ಜಲ್ಲೆಗಳು ಹೆಚ್ಚಾಗಿ ಕಂಡುಬಂದಾಗ್ಯೂ ಅವು ನೋಟಾಗಿ ಸಣ್ಣಾಗಿ ಕುರಿ ಗಿಣ್ಣುಳ್ಳವಾಗಿ ಆದವು. ಹೋದವರ್ಷದಂತೆಯೇ ಗಿದ್ದಲಿನಿಂದ ಈ ವರ್ಷವೂ ಬೆಳೆಗೆ ನಷ್ಟ ಉಂಟಾಯಿತು. ಹೋದಸಲದಂತೆಯೇ ಈಸಲವೂ ಕಬ್ಬನ್ನು ಸುತ್ತಿರಲು ಅದು ಗಿಡ್ಡಾಗಿದ್ದರೂ ಮುರಿಯುವ ಕಾಲಕ್ಕೆ ಆಗಿನಂತೆಯೇ ನಿಲ್ಲದೆಹೋಯಿತು. ಒಂದು ಸಲ ಬೆಳೆದ ಪೈರನ್ನು ಮುಂದಲಸಲ ಬೆಳೆದ ಪೈರಿನೊಂದಿಗಾಗಲಿ ಹಿಂದೆ ಬೆಳೆದ ಪೈರಿನೊಂದಿಗಾಗಲಿ ಎಲ್ಲಾ ವಿಷಯದಲ್ಲೂ ಹೋಲಿಸುವದಕ್ಕೆ ಅಸಾಧ್ಯವಾದುದರಿಂದ ಮೇಲೆ ಕಂಡ ವ್ಯತ್ಯಾಸಗಳನ್ನೂ ಉತ್ಪತ್ತಿಯಲ್ಲಿ ಕಂಡುಬರುವ ವ್ಯತ್ಯಾಸಗಳನ್ನೂ ಪೈರಿನ ಇರಸ್ಥಿತಿಯ ಕಾರಣಗಳ ಸೂಚನೆಗಳನ್ನಾಗಿ ಮಾತ್ರ ಭಾವಿಸತಕ್ಕದ್ದಾಗಿದೆ. ಅವುಗಳನ್ನೇ ಪರೀಕ್ಷಾ ಕಾರ್ಯಗಳನ್ನಾಗಿ ಎಣಿಸಕೂಡದು. ಮುಂದೆ ಮಾಡುವ ಪರೀಕ್ಷೆಗಳನ್ನು ಯಾವ ರೀತಿ ಮಾಡತಕ್ಕದ್ದು ಯಾವ ಉದ್ದೇಶದಿಂದ ನಡಸತಕ್ಕದ್ದು ಎಂಬುವ ವಿಷಯದಲ್ಲಿ ಇವುಗಳು ಸೂಚಕಗಳಾಗಿರುತ್ತವೆ. ಯಾತಕ್ಕೆಂದರೆ ಫಸಲಿನ ಪರೀಕ್ಷೆಗಳನ್ನು ಎಷ್ಟು ಜೋಕೆಯಿಂದ ನಡೆಸಿದರೂ ಅವುಗಳನ್ನು ಅನೇಕಾವೃತ್ತಿ ನಡೆಸಿದ ವಿನಾ ಅವುಗಳ ಫಲಿತಾಂಶಗಳಲ್ಲಿ ನಂಬುಗೆ ಇಡುವುದಕ್ಕಾಗುವದಿಲ್ಲ. ಆದುದರಿಂದ ಈ ವರ್ಷದ ಕೂಳೆ ಬೆಳೆಯು ಹೋದವರ್ಷದ ಬೆಳೆಯಲ್ಲಿ ಮುಕ್ಕಾಲಾಯಿತೆಂದಲ್ಲಿ, ಇದೇ ತಾಕಿನಲ್ಲಿ ಈ ಜಾತಿ ಕಬ್ಬನ್ನೇ ಅದೇ ಬಗೆಯಲ್ಲಿ ಮುಂದೆ ಯಾವಾಗಲಾದರೂ ಹಾಕಿ ಕೂಳೆ ತಡದಲ್ಲಿ ಆ ಬೆಳೆಯು ಹಾಕು ಬೆಳೆಯಲ್ಲಿ ಮುಕ್ಕಾಲಾಗುವುದೆಂದು ತಿಳಿಯಕೂಡದು. ಆದರೆ ಕೂಳೆ ಫಸಲನ್ನು ತೆಗೆಯಲು ಪರೀಕ್ಷೆಗಳನ್ನು ನಡೆಸುವುದು ಉಪಯೋಗಕರವಾಗುವುದೆಂದು ಇದರಿಂದ ತಿಳಿಯಬಹುದು. ಹೇಗೆಂದರೆ ಕೂಳೆ ಫಸಲು ಹಾಕು ಫಸಲಿಗಿಂತಲೂ ತೂಕದಲ್ಲಿ ಕಡಿಮೆಯಾದರೂ ಅದು ಬೆಳೆಯುವ ಕಾಲ ಸ್ವಲ್ಪವಾದುದರಿಂದ ತೂಕದಲ್ಲಿ ಉಂಟಾದ ಲುಕ್ಸಾನು ಬಹುಮಟ್ಟಿಗೆ ಕೂಡಿಬಂದರೆತಾಗುತ್ತದೆ. 1903–04ನೆ ಇಸವಿಯಲ್ಲಿ ಬೆಳೆದ 100 ಪೌಂಡು ಹಾಕು ಕಬ್ಬಿನಿಂದ ತೆಗೆದ ಹಾಲು ಈಸಲ ಅದೇ ತೂಕದ ಕೂಳೆ ಕಬ್ಬಿನಿಂದ ತೆಗೆದ ಹಾಲಿಗಿಂತ ಸ್ವಲ್ಪಮಟ್ಟಿಗೇ ಹೆಚ್ಚಾಗಿತ್ತು. 1903—04ರಲ್ಲಿ 67 ಪೌಂಡುಗಳಾದುದಕ್ಕೆ ಈಸಲ ಕೂಳೆ ಕಬ್ಬಿನಿಂದ 65 ಪೌಂಡುಗಳಾದವು. ಕಬ್ಬನ್ನು ಹೆಚ್ಚಾಗಿ ಬಲಿಸಿದ್ದರಿಂದ ಕಬ್ಬಿನ ಗುಣವೇನಾಗುವುದು, ಬೆಲ್ಲವೆಷ್ಟಾಗುವುದು ಎಂಬುದನ್ನು ಪರೀಕ್ಷಿಸುವದಕ್ಕೋಸ್ಕರ ಕಾಲುಭಾಗ ತೋಟವನ್ನೇ ಬಲಿಯುವದಕ್ಕೆ ಬಿಟ್ಟದ್ದರಿಂದ ಈ ಎರಡು ವರ್ಷಗಳ ಫಸಲುಗಳಲ್ಲಿಯೂ ವ್ಯತ್ಯಾಸ ಕಂಡುಬಂದುದಕ್ಕೆ ಮತ್ತೊಂದು ಕಾರಣವಾಗಿರಬಹುದು. ಹೀಗೆ ಹೆಚ್ಚಾಗಿ ಬಲಿಯುವದಕ್ಕೆ ಬಿಟ್ಟ ಮೂರು ತಿಂಗಳಲ್ಲಿ ಕಬ್ಬೇನೂ ಬೆಳೆಯಲಿಲ್ಲ, ಆದರೆ ಗೆದ್ದಲ ಹಾವಳಿತದಿಂದಲೂ ಇಲಿಯ ಕಾಟದಿಂದಲೂ ಬಹಳ ಕೆಟ್ಟುಹೋಯಿತು.

33. ಕಬ್ಬು ಬಲಿಯೋಣ.—ಕಬ್ಬು ಮುರಿಯಲು ಯಾವಾಗ ಸಿದ್ಧವಾಗಿದೆ ಎಂಬುವದನ್ನು ಅರಿತುಕೊಳ್ಳಲು ಮತ್ತು ಕಬ್ಬು ಬಲಿಕೆಗೆ ಬರುತ್ತಿರುವಾಗ ಅದರ ಗುಣವ್ಯತ್ಯಾಸವನ್ನು ತಿಳಿದುಕೊಳ್ಳಲು ಸ್ವಾಮಾನ್ಯವಾದ ಬೆಳವಳಿಗೆಯುಳ್ಳ ಆರು ಕಬ್ಬುಗಳನ್ನು ಬೇರೆ ಬೇರೆ ಕಾಲಗಳಲ್ಲಿ ಮುರಿದು ಪರೀಕ್ಷಿಸಿ ಅವುಗಳ ರಸದಲ್ಲಿರುವ ಪದಾರ್ಥಗಳನ್ನು ಗ್ರಹಿಸಿದ್ದಾಯಿತು. ಇದಕ್ಕಾಗಿ ಮೊದಲನೇ ಸಲ ಜನವರಿ 22ನೆ ತಾರೀಖಿನ ದಿವಸ ಕಬ್ಬನ್ನು ಮುರಿಯಿತು.

ಒಂದೇ ತಾಕಿನಲ್ಲಿ ಬೆಳದಿರುವ ಎಳೆಕಬ್ಬಿಗೂ ಬಲಿತಕಬ್ಬಿಗೂ ವ್ಯತ್ಯಾಸವನ್ನು ತಿಳಿದುಕೊಳ್ಳಲು ಬಿಡು ಕ್ಷಿಪ್ರವಾದ ದಿವಸದಲ್ಲಿ ಒಂದೊಂದು ಮಾದರಿಗೆ ಆರು ಕಬ್ಬಿನಂತೆ ಮೂರು ಮಾದರಿ ಕಬ್ಬನ್ನು ಮುರಿದು ಪರೀಕ್ಷಿಸಿದ್ದಾಯಿತು. ಮೊದಲನೆ ತರಹೆಯ ಕಬ್ಬು ಆ ತಾಕಿನ ಸರಾಸರಿ ಬೆಳವಳಿಗೆ ಕಬ್ಬು — ಎರಡನೆ ತರಹದ್ದು ಮೊದಲಿನ ರಕಮಿಗಿಂತ ಸ್ವಲ್ಪ ಎಳಸಾದ್ದು. ಮೂರನೇದು ಮೊದ

ಲನೆ ರಖಂಗಿಂತ ಬಲಿತದ್ದು. ಈ ಕೆಳಗಿನ ಪಟ್ಟಿಯಲ್ಲಿ ಈ ಮೂರು ತರಹೆಯ ಕಬ್ಬಿನ ಹಾಲನ್ನು ಪರೀಕ್ಷಿಸಿ ಅದರಲ್ಲಿ ಸೇರಿರತಕ್ಕ ಪದಾರ್ಥಗಳನ್ನು, ಮತ್ತು ಈಚೆಗೆ ಪರೀಕ್ಷಿಸಿದ ರಖಂಗಳಲ್ಲಿರುವ ಪದಾರ್ಥಗಳನ್ನು, ಆಯಾಯ ಮಾದ್ರಿಗಳನ್ನು ಪರೀಕ್ಷಿಸಿದ ತಾರೀಖಿನೊಂದಿಗೆ ನಮೂದಿಸಿದೆ.

1ನೆ ಪಟ್ಟಿ.

1904ನೆ ಇಸವಿ ಏಪ್ರಿಲ್ ತಿಂಗಳಲ್ಲಿ ಕಡದ ಕಬ್ಬಿನ ಕೂಳೆಯನ್ನು ತಡೆದು ಪೈರು ಮಾಡಿದ್ದರ ಪೈಕಿ ಬೇರೆ ಬೇರೆ ಬೆಳವಳಿಗೆಯುಳ್ಳ ಕಬ್ಬಿನ ರಸದಲ್ಲಿ ಕಂಡುಬಂದ ಪದಾರ್ಥಗಳು:—

ನಂಬರು.	ಕಬ್ಬು ಮುರಿದ ತಾರೀಖು.	ಗ್ಲೂಕೋಸ್ ಅಥವಾ ಶರ್ಕರವಿದ್ರಾವ್ಯದ ಶೇಕಡ.	ಶರ್ಕರೆಯ ಶೇಕಡ.	ಗಟ್ಟಿಪದಾರ್ಥದ ಒಟ್ಟು ಶೇಕಡ.	ಷರಾ.
270	22 11 04	3·04	9·5	12·8	ಸರಾಸರಿಗೆ ಸ್ವಲ್ಪ ಕಡಿಮೆಯಾದ 6 ಕಬ್ಬಿನಿಂದ.
269	22 11 04	2·47	10·1	13·4	
271	22 11 04	2·17	11·75	14·6	ಸರಾಸರಿ 6 ಕಬ್ಬಿನಿಂದ.
272	6 12 04	1·33	14·1	16·0	ಸರಾಸರಿಗೆ ಸ್ವಲ್ಪ ಮೇಲಾದ 6 ಕಬ್ಬಿನಿಂದ.
273	22 12 04	1·33	14·95	17·0	ಸರಾಸರಿ 6 ಕಬ್ಬಿನಿಂದ.
274	4 1 05	1·16	16·5	18·3	ಡಿಟ್ಟೋ
275	18 1 05	·85	18·4	19·5	ಡಿಟ್ಟೋ
276	31 1 05	·93	18·2	19·6	ಡಿಟ್ಟೋ
277	14 2 05	·69	19·6	20·9	ಡಿಟ್ಟೋ
278	21 2 05	·62	19·5	20·9	ಡಿಟ್ಟೋ
279	28 2 05	·53	20·0	21·0	ಡಿಟ್ಟೋ
280	21 3 05	·40	21·4	22·4	ಡಿಟ್ಟೋ
281	1 4 05	·54	19·6	20·9	ಡಿಟ್ಟೋ
302	8 4 05	·70	19·8	21·1	ಪೂರಾ ತಾಕಿನಿಂದ.
318	17 4 05	·67	18·4	19·8	ಡಿಟ್ಟೋ
360	26 4 05	·54	....	....	ಡಿಟ್ಟೋ
362	9 5 05	·37	...	...	ಡಿಟ್ಟೋ
363	19 5 05	·32	17·5	18·0	
364	26 5 05	·47	17·5	18·8	
365	3 6 05	·31	15·0	17·0	
366	10 6 05	1·00	14·9	16·2	
367	17 6 05	·65	15·6	16·8	
368	24 6 05	·55	16·0	17·3	
369	1 7 05	·56	16·0	17·6	

ಮೇಲ್ಕಂಡ ಪಟ್ಟಿಯಲ್ಲಿ 280ನೆ ನಂಬರನ್ನೂ ಅದಕ್ಕೆ ಮೇಲಿರುವ ನಂಬರುಗಳನ್ನೂ ಮೇಲೆ ವಿವರಿಸಿದ ರೀತಿಯಾಗಿ ಪರೀಕ್ಷಿಸಿತು. ಬಲಿಯುವದರಲ್ಲಿ ಶರ್ಕರವಿದ್ರಾವ್ಯದ ಸೇಕಡ ಕಮ್ಮಿಯಾಗಿ ಗಟ್ಟಿ ಪದಾರ್ಥಗಳು ಮತ್ತು ಶರ್ಕರೆಯೂ ಹೆಚ್ಚಾಗುವುದನ್ನು ಇದರಿಂದ ಚೆನ್ನಾಗಿ ತಿಳಿಯಬಹುದು. ಮಳೆಗಾಲದಲ್ಲಿ ಬೆಲ್ಲವು ನೀರಾಡಿ ಜೋನಿಯಾಗುವಂತೆ ಮಾಡುವ ವಸ್ತುವಿಶೇಷಗಳಿಗೆ ಗ್ಲೂಕೋಸ್ ಅಥವಾ ಶರ್ಕರವಿದ್ರಾವ್ಯ—ಅಂದರೆ ಶರ್ಕರೆಯನ್ನು ಕರಗಿಸುವ ಪದಾರ್ಥವೆಂದು ಹೆಸರು—ಸಕ್ಕರೆ ಬೆಲ್ಲ ಮಾಡುವವರ ಅಭಿಪ್ರಾಯಾನುಸಾರ ಇದು—ಬಹು ಕೆಟ್ಟದ್ದು—ನೀರುವಿನಾ ಕಬ್ಬಿನ ಹಾಲಿನಲ್ಲಿರುವ ಪದಾರ್ಥಗಳ ಪೈಕಿ ಶರ್ಕರ ಅಥವಾ ಇಕ್ಷು ಶರ್ಕರವೇ ಮುಖ್ಯವಾದ ಪದಾರ್ಥ—ಶೋಧಿಸಿದ ಬಿಳೆ ಬೂರಾಸಕ್ಕರೆಯಲ್ಲಿ ಈ ಪದಾರ್ಥ ವಿನಾ ಮತ್ತೇನೂ ಇಲ್ಲ. ಕಬ್ಬಿನಲ್ಲಿರುವ ಪದಾರ್ಥಗಳ ಪೈಕಿ ಈ ಪದಾರ್ಥವೇ ಮುಖ್ಯವಾಗಿ ಬೇಕಾದುದು. ಕಬ್ಬಿನಲ್ಲಿ ಇತರ ಪದಾರ್ಥಗಳು ಸ್ವಲ್ಪವಾಗಿ ಈ ಪದಾರ್ಥವು ಹೆಚ್ಚಾದಷ್ಟೂ ಸಕ್ಕರೆ ಮಾಡಲು ಉತ್ತಮ. ಮೇಲೆ ನಮೂದಿಸಿದ ಗಟ್ಟಿ ಪದಾರ್ಥದ ಒಟ್ಟಿನಲ್ಲಿ ಕಬ್ಬಿನ ರಸದಲ್ಲಿರುವ ನೀರು ವಿನಾ ಮತ್ತೆಲ್ಲಾ ಪದಾರ್ಥಗಳ ಪ್ರಮಾಣಗಳೂ ಸೇರಿವೆ. ಗಟ್ಟಿ ಪದಾರ್ಥಗಳ ಒಟ್ಟನ್ನು ಕೊಟ್ಟಿರುವ ಕಲಂಮಿನಲ್ಲಿ ನಮೂದಿಸುವ ಸಂಖ್ಯೆಯು ಶರ್ಕರೆಯ ಸೇಕಡ ಎಂಬ ಕಲಂಮಿನಲ್ಲಿ ತೋರಿಸುವ ಸಂಖ್ಯೆಗೆ ಸಮೀಪಿಸಿದಹಾಗೆಲ್ಲ ಒಳ್ಳೆಯದು. ಮಾದ್ರಿಗಳನ್ನು ಚುನಾಯಿಸುವದರಲ್ಲಿ ತೋರಿಬರುವ ಕಷ್ಟಗಳನ್ನು ಯೋಚಿಸಿದರೆ ಮೇಲೆ ನಮೂದಿಸಿರುವ ಪಟ್ಟಿಯಲ್ಲಿ ಕಂಡುಬರುವಂತೆ ಶರ್ಕರ ಪದಾರ್ಥಗಳ ಪ್ರಮಾಣವೂ ಗಟ್ಟಿ ಪದಾರ್ಥಗಳ ಪ್ರಮಾಣವೂ ಒಂದೇ ಸಮವಾಗಿ ಹೆಚ್ಚುತ್ತಿರುವುದೂ ಶರ್ಕರ ವಿದ್ರಾವ್ಯವು ಕಮ್ಮಿಯಾಗುತ್ತಿರುವುದೂ ಆಶ್ಚರ್ಯಕರವಾಗಿದೆ. ಆದರೆ ಕಬ್ಬಿನ ಬೆಳೆಯಲ್ಲವನ್ನೂ ಅರೆಯಾಗಿದಾಗ ತೆಗೆದು ಅಜಮಾಯಿಷಿ ಮಾಡಿದ 281, 302, 318ನೆ ನಂಬರು ಮಾದ್ರಿಗಳ ವಿಷಯದಲ್ಲಿ ಕಂಡ ಪದಾರ್ಥ ಪ್ರಮಾಣಗಳಿಗೆ ಇವುಗಳನ್ನು ಹೋಲಿಸಿ ನೋಡಿದರೆ 280ನೆ ಮಾದ್ರಿಯನ್ನು ಅದರ ಹಿಂದಿನ ಮಾದ್ರಿಗಳನ್ನು ಬಹು ಜೋಕೆಯಿಂದ ಚುನಾಯಿಸಿದ್ದರೂ ಅವು ಸರಾಸರಿಗಿಂತ ಸ್ವಲ್ಪತರವಾದುವೆಂದು ಕಂಡುಬರುತ್ತವೆ. ಈ ಪಟ್ಟಿಯಲ್ಲಿ ಅತ್ಯುತ್ತಮವಾದುದೆನಿ

ಸಿಕ್ಕುವಂತೆ 280ನೆ ನಂಬರ ಮಾದ್ರಿಯನ್ನು ತೆಗೆದುಕೊಂಡ ಎರಡು ತಿಂಗಳ ತರುವಾಯ 363ನೆ ನಂಬರನ್ನೂ ಅದರಿಂದೀಚೆಗೆ ಬರುವ ನಂಬರು ಮಾದರಿಗಳನ್ನೂ ತೆಗೆದುಕೊಂಡದ್ದಾಯಿತು. ಈ ರಖಂಗಳಲ್ಲಿ ಶರ್ಕರವಿದ್ರಾವ್ಯ ಹೆಚ್ಚಾದುದಕ್ಕಿಂತ ಶರ್ಕರವು ಗಟ್ಟಿ ಪದಾರ್ಥವು ಕಡಿಮೆಯಾದದ್ದು ವಿಶೇಷವಾಗಿ ಕಂಡುಬರುತ್ತದೆ. ಕಬ್ಬಿನ ಬೆಳೆಯೆಲ್ಲವೂ ಆಲೆಯಾಡುತ್ತಿರುವಾಗ ಹಾಲನ್ನು ಅಜಮಾಯಿಷಿ ಮಾಡಿ ಅದರಲ್ಲಿ ಸೇರಿರುವ ಪದಾರ್ಥಗಳ ಪ್ರಮಾಣವನ್ನು ಕಂಡು ಹಿಡಿಯುವ ಕಾಲದಲ್ಲಿ ಈ ಅಂಶವನ್ನು ವಿಶೇಷವಾಗಿ ಯೋಚಿಸತಕ್ಕುದು. ಮುಂದೆ ಇದೇ ವಿಷಯದಲ್ಲಿ ಹೇಳತಕ್ಕದ್ದಿದೆ. 366ನೇ ನಂಬರ ಮಾದ್ರಿಯೊಂದರಲ್ಲಿ ಮಾತ್ರ ಶರ್ಕರವಿದ್ರಾವ್ಯವು ಅತಿಯಾಗಿ ಕಂಡುಬಂದಿದೆ. ಈ ರಖಂನಲ್ಲಿ ಈ ಪದಾರ್ಥವು ಸೇಕಡೆ ಒಂದರಂತೆ ಕಂಡುಬಂದು ಇರುತ್ತೆ. ಇತರ ಮಾದರಿಗಳಿಗಿಂತ ಇದು ಸುಮಾರು 2ರಷ್ಟು ಇರುವದರಿಂದ ಇದರ ಅಜಮಾಯಿಷಿಯಲ್ಲಿ ಏನೋ ತಪ್ಪಾಗಿರುವಂತೆ ತೋರುತ್ತೆ. ಇತರ ರಖಮಿನ ಕಬ್ಬುಗಳನ್ನು ಮುರಿದಕೂಡಲೆ ಆಲೆ ಆಡಿದಂತೆ ಇದನ್ನು ಆಡದಿದ್ದರೂ ಇರಬಹುದು. ಬೇರೆ ವಿಷಯದಲ್ಲಿ ಪರೀಕ್ಷೆ ಮಾಡುತ್ತಿರುವಾಗ ಕಂಡುಬಂದ ಫಲದಮೇಲೆ ಈ ಅನುಮಾನವು ಹುಟ್ಟಿರುತ್ತೆ. ಈ ಊಹೆಯು ಸರಿಯಾದುದೆಂದು ನಿಶ್ಚಯಿಸಲು ಯಾವ ಪ್ರತ್ಯಕ್ಷಕಾರಣವೂ ಇಲ್ಲ.

34. ಬೆಲ್ಲ ಬೇಯಿಸುವುದು.—ಮುಂಚೆಯೇ ತಿಳಿಸಿರುವಂತೆ ಕಚ್ಚಾ ಚರಖಿ ಸಕ್ಕರೆಯನ್ನು ಮಾಡುವ ಉದ್ದೇಶದಿಂದ ಈ ವರುಷ ಪರೀಕ್ಷೆಗಳನ್ನು ನಡೆಸಿದ್ದಾಯಿತು. ಪರೀಕ್ಷೆಗಳ ಮುಖ್ಯೋದ್ದೇಶವು—ಇದಕ್ಕಾಗಿ ಉಪಯೋಗಿಸಿದ ಕೈ ಚರಖಿಯು ಪರೀಕ್ಷಾ ಕೆಲಸಕ್ಕೆಂದು ಮಾತ್ರ ಮಾಡಿದ್ದಾದುದರಿಂದ ಅದರಲ್ಲಿ ವಿಶೇಷವಾಗಿ ಸಕ್ಕರೆ ಮಾಡಲು ಅನುಕೂಲವಿಲ್ಲದಕಾರಣ ತೆಗೆದ ಹಾಲಿನ ಪೈಕಿ ಬಹಳಮಟ್ಟಿಗೆ ಬೆಲ್ಲವೇ ಮಾಡಬೇಕಾಯಿತು. ಈ ಕೆಳಗೆ ಕೊಟ್ಟಿರುವ ಪಟ್ಟಿಯ ಮೇಲಿನ ಪಙ್ಕ್ತಿಯಲ್ಲಿ ಹಾಲಿನಲ್ಲಿದ್ದ ಪದಾರ್ಥಗಳ ಪರಿಮಾಣಗಳನ್ನು ನಮೂದಿಸಿದೆ.—ಅದರ ಕೆಳಗಿನ ಪಙ್ಕ್ತಿಯಲ್ಲಿ ಆ ಹಾಲಿನಿಂದ ಮಾಡಿದ ಬೆಲ್ಲದಲ್ಲಿದ್ದ ಪದಾರ್ಥಗಳ ಪರಿಮಾಣಗಳನ್ನು ಕೊಟ್ಟಿದೆ.

ಸುಣ್ಣ ಕೊಡುವುದು.—ಸುಣ್ಣ ಕೊಟ್ಟಾಗಲೆಲ್ಲ ಕೆಂಪು * ಲಿಟ್ಮಸ್ ಕಾಗದದಿಂದ ಹಾಲನ್ನು ಪರೀಕ್ಷಿಸಿತು—"ಪೂರಾ ಸುಣ್ಣ ಕೊಟ್ಟಿತೆಂದು" ಯಾವ ಯಾವ ರಖಂಗಳ ವಿಷಯದಲ್ಲಿ ಷರಾ ಮಾಡಿದೆಯೋ ಆ ಸಂದರ್ಭದಲ್ಲೆಲ್ಲಾ ತಿಳಿನಿಗಂಜಿ ಅಥವಾ ಚನ್ನಾಗಿ ಕಾಯಿಸಿದ ಹಾಲಿನ ಮಾದಕ್ಕೆ ಸುಣ್ಣ ಕದಡಿದ ನೀರನ್ನು ಬೆಲ್ಲ ಮಾಡಲು ಉಪಯೋಗಿಸುವ ಹಾಲಿಗೆ ಹೊಯಿದದ್ದಾಯಿತು. ಸ್ವಲ್ಪ ಸುಣ್ಣವನ್ನು ಕೊಟ್ಟ ಕೂಡಲೆ ಹಾಲನ್ನು ಚನ್ನಾಗಿ ಕಲಸಿ ಆ ಹಾಲಿನಲ್ಲಿ ಕೆಂಪು ಲಿಟ್ಮಸ್ ಕಾಗದವನ್ನು ಅರ್ಧ ನಿಮಿಷ ಅದ್ದಿ, ಸುಣ್ಣಬಿಡದ ಹಾಲಿನಲ್ಲಿ ಅದೇ ಬಣ್ಣದ ಕಾಗದವನ್ನು ಅದ್ದಿದರೆ ಬಣ್ಣದಲ್ಲಿ ಏನು ವ್ಯತ್ಯಾಸವಾಗುತ್ತದೆಯೋ ಅಷ್ಟೇ ವ್ಯತ್ಯಾಸ ಕಂಡುಬಂದಲ್ಲಿ, ಮತ್ತಷ್ಟು ಸುಣ್ಣ ಸೇರಿಸಿ, ಪುನಃ ಕಲಸಿ, ಕಾಗದವಿಟ್ಟು ಪರೀಕ್ಷಿಸಿ—ಹೀಗೆಯೇ ಕಾಗದದ ಕೆಂಪು ಬಣ್ಣವು ಸ್ವಲ್ಪ ನೀಲಿ ಛಾಯೆಗೆ ತಿರುಗುವವರೆಗೂ ಮಾಡಿದ್ದಾಯಿತು—ಕಬ್ಬಿನ ಹಾಲಿನ ಬಣ್ಣದಿಂದುಂಟಾಗುವ ಸ್ವಲ್ಪ ವರ್ಣವ್ಯತ್ಯಾಸವನ್ನು ಪೂರಾ ಸುಣ್ಣ ಕೊಡುವುದರಿಂದ ಉಂಟಾಗುವ ವ್ಯತ್ಯಾಸವೆಂದು ತಿಳಿದುಕೊಳ್ಳಕೂಡದು. ಹೀಗೆ ತಪ್ಪು ಮಾಡದಿರುವದಕ್ಕೋಸ್ಕರ ಸುಣ್ಣ ಬೆರಸದ ಹಾಲಿನಲ್ಲಿ ಕೆಂಪು ಲಿಟ್ಮಸ್ ಕಾಗದದ ಒಂದು ಚೂರನ್ನು ಅದ್ದಿ ಆಗ ಕಂಡು ಬರುವ ಬಣ್ಣಕ್ಕೂ, ಸಾಕಾದಷ್ಟು ಸುಣ್ಣವನ್ನು ಬೆರಸಿದ ಹಾಲಿನಲ್ಲಿ ಮತ್ತೊಂದು ಚೂರನ್ನು ಅದ್ದಿ ಆಗ ಕಂಡುಬರುವ ಬಣ್ಣಕ್ಕೂ ಇರುವ ವ್ಯತ್ಯಾಸವನ್ನು ಅನುಭವದಿಂದ ತಿಳಿದುಕೊಳ್ಳಬೇಕು. ಲಿಟ್ಮಸ್ ಕಾಗದವು ಹೊಸದಾಗಿರಬೇಕು. ಮುಂದೆಯೇ ಸರ್ಜಕ ಪದಾರ್ಥಗಳಿಗೆ ತಗಲಿ ಬಣ್ಣ ಕೆಟ್ಟಿರಬಾರದು. ಶುದ್ಧ ಕೆಂಪುಬಣ್ಣವಾಗಿರಬೇಕು. ಸ್ವಲ್ಪವಾದರೂ ನೀಲಿಯಾಗಿರಬಾರದು. ಕೆಲವು ರಖಂಗಳ ವಿಷಯದಲ್ಲಿ "ಅರ್ಧಸುಣ್ಣ ಕೊಟ್ಟದ್ದೆಂದು." ಷರಾ ಮಾಡಿರುತ್ತದೆ. ಇದರ ಬಗೆ ಏನೆಂದರೆ—ಬೇಯಿಸಬೇಕೆಂದಿರುವ ಹಾಲನ್ನೆಲ್ಲ ಮೊದಲು ಚನ್ನಾಗಿ ಬೆರಸಿ, ಆ ಪೈಕಿ ಅರ್ಧ ರಸವನ್ನು ಕೊಪ್ಪರಿಗೆಗೆ ಸುರಿದು, ಮಿಕ್ಕ ಅರ್ಧಕ್ಕೆ ಪೂರಾ ಸುಣ್ಣ ಕೊಟ್ಟು ಮುಂದೆ ಸುರಿದಿದ್ದ ಹಾಲಿನೊಂದಿಗೆ ಚನ್ನಾಗಿ ಬೆರಸಿ ಬೇಯಿಸಿದ್ದು—"ಮುಕ್ಕಾಲು ಸುಣ್ಣ ಕೊಟ್ಟದ್ದೆಂದರೆ"—ಹಾಲಿನಲ್ಲಿ ಹಾಗಪಾಲನ್ನು ಮಾತ್ರ ಕೊಪ್ಪರಿಗೆಗೆ ಸುರಿದು, ಮಿಕ್ಕ ಮೂರು ಪಂಗಿಗೆ ಪೂರಾ ಸುಣ್ಣ ಕೊಟ್ಟು ಬೆರಸಿದ್ದು—"ಹಾಗ ಸುಣ್ಣ ಕೊಟ್ಟದ್ದೆಂದರೆ" ಬೇಯಿಸಬೇಕಾದ ರಸದಲ್ಲಿ ಹಾಗಪಾಲಿಗೆ ಮಾತ್ರ ಪೂರಾ ಸುಣ್ಣ ಕೊಟ್ಟು ಬೆರಸಿದ್ದು.

35. ಉಪಯೋಗಿಸಿದ ಕೊಪ್ಪರಿಗೆ.—ಕಬ್ಬಿಣದ ಕೊಪ್ಪರಿಗೆಯಲ್ಲಿ ಹಾಲನ್ನು ಬೇಯಿಸಿದರೆ ಮೊದಲು ಬೇಯಿಸಿದ ಬೆಲ್ಲದ ಬಣ್ಣವು ತುಕ್ಕಿನಿಂದ ಕೆಡುವುದು. ಅದನ್ನು ತಪ್ಪಿಸುವದಕ್ಕಾಗಿ ಈ ಸಲ ತಾಂಬರದ ಕೊಪ್ಪರಿಗೆಯಲ್ಲಿ ಬೇಯಿಸಿದ್ದಾಯಿತು. ಅದು ಈ ಮೈಸೂರು ಸೀಮೆಯ ರೈತರು ಬಳಸುವ ಕೊಪ್ಪರಿಗೆಯಂತೆಯೇ ಇತ್ತು. ಅದರಮೇಲಿನ ಅಡ್ಡಳತೆ 6 ಅಡಿ, ಅಡಿಯ ಅಡ್ಡಳತೆ 3½ ಅಡಿ. ಆಳ 13 ಅಂಗುಲ.

36. ಒಲೆ—ಪರೀಕ್ಷಾಲಯಕ್ಕೆ ಸೇರಿದಂತೆ ಹೊಸದಾಗಿ ಕಟ್ಟಿದ ಹೊರಗಿನ ಕೊಠಡಿಗಳ ಪೈಕಿ ಒಂದರ ಮೂಲೆಯಲ್ಲಿ ಒಲೆಯನ್ನು ಹಾಕಿತ್ತು. ಕೆಂಡಗಳು ಮಾತ್ರ ಮೇಲೆ ನಿಂತು ಬೂದಿಯು ಕೆಳಗೆ ಬಿದ್ದುಹೋಗುವಂತೆ ಕಬ್ಬಿಣದ ಸಲಾಕಿಗಳನ್ನು ಹಾಕಿದ್ದಲ್ಲದೆ ಬಾಗಿಲಿಟ್ಟು ಬೂದಿಯ ಗುಣಿ ಹೊಗೆ ಗೂಡು ಮುಂತಾದ್ದನ್ನು ಮಾಡಿತ್ತು.

37. ಶೋಧನೆ.—(ಮಡ್ಡಿ ತೆಗೆಯೋಣ) ಹಾಲಿನಲ್ಲಿ ತೇಲುತ್ತಿರುವ ಕಬ್ಬಿನ ಸಪ್ಪೆ ಮುಂತಾದ ಕೊಳೆಯನ್ನು ತೆಗೆದುಹಾಕಲು ಕಬ್ಬಿಣದ ತಂತಿಯಿಂದ ಮಾಡಿದ ಕುಕ್ಕೆಯಲ್ಲಿ ತೆಳುವಾದ ಬಿಳೆ ಬಟ್ಟೆಯನ್ನು ಹಾಸಿ ಅದರಲ್ಲಿ ಹಾಲನ್ನು ಸುಣ್ಣ ಕೊಡುವುದಕ್ಕೆ ಮುಂಚೆ ಶೋಧಿಸಿತು. ಹಾಲು ಕುದಿಯುವುದಕ್ಕೆ ಮುಂಚೆ ಮೇಲಕ್ಕೆ ತೇಲಿಬಂದ ಮಡ್ಡಿಯನ್ನು ದೊಡ್ಡ ಕಾವುಳ್ಳ ತಾಂಬರದ ಸಾಟನಿಂದ ತೆಗೆದುಹಾಕಿದ್ದಾಯಿತು. ಈ ಮಡ್ಡಿಯನ್ನು ಮೇಲೆ ಹೇಳಿದಂತೆ ಮತ್ತೊಂದು ತಂತಿಯ ಪುಟ್ಟಿಯಲ್ಲಿ ಹಾಕಿಟ್ಟಿರಲು ಅದರಿಂದ ರಸವೆಲ್ಲವೂ ಕೊಪ್ಪರಿಗೆಯೊಳಕ್ಕೆ ಸೋರಿಹೋಗಲು ಮಡ್ಡಿಯು ಮಾತ್ರ ಹಿಂಗಡಿಸಿಕೋಯಿತು. ಈ ರೀತಿ ರಸವು ಅರ್ಧಕ್ಕೆ ಇಂಗುವವರೆಗೂ ಆಗಾಗ್ಯೆ ಶೋಧಿಸಿದ್ದಾಯಿತು. ಈ ಪ್ರಕಾರ ಮಾಡಿದ್ದರಲ್ಲಿ 100 ಪೌಂಡು ಹಾಲು ಬೇಯಿಸಿದ್ದರಲ್ಲಿ ಸರಾಸರಿ 1·82 ಔನ್ಸುಗಳ ಮಡ್ಡಿಯೂ ಅದೇ ತೂಕದ ಹಾಲನ್ನು ಸುಣ್ಣ ಕೊಡುವದಕ್ಕೆ ಮುಂಚೆ ಶೋಧಿಸಿದ್ದರಲ್ಲಿ 3·12 ಔನ್ಸುಗಳ ಸಿಪ್ಪೆ ಮುಂತಾದ ಇತರ ಕಲ್ಮಷಗಳೂ ಹೊರಟವು—ಒಟ್ಟು ಅಂದಾಜಾದಲ್ಲಿ 100 ಪೌಂಡು ಬೆಲ್ಲಕ್ಕೆ 1½ ಪೌಂಡು ಕೊಳೆ ಹೊರಟಿತು. ಒಂದು ಪೌಂಡು ಬೆಲ್ಲವಾಗಬೇಕಾದರೆ 4 ಅಥವಾ 5 ಪೌಂಡು ಹಾಲು ಬೇಕಾಯಿತು. ಮಡ್ಡಿಯನ್ನು ತೆಗೆಯುತ್ತಲೆ ಮೇಲೆ ಹೇಳಿದಂತೆ ಬಟ್ಟೆಯಲ್ಲಿ ಸೋರುಹಾಕಿ ಅದರಿಂದ ಜಮಾಯಿಸಿದ ಹಾಲನ್ನು ಉಳಿಸಿಕೊಳ್ಳದ ಪಕ್ಷಕ್ಕೆ ಮತ್ತಷ್ಟು ನಷ್ಟವಾಗುತ್ತದೆ. ಮೇಲೆ ಕಂಡಂತೆ ಕ್ರಮವಾಗಿ ಶೋಧಿಸುವದಕ್ಕೆ ಏರ್ಪಾಡಿಡದೆ ಸಾಧಾರಣವಾಗಿ ಜಾರಿಯಲ್ಲಿರುವಂತೆ ರಂಧ್ರವಿರುವ ತಟ್ಟೆಯಿಂದ ಶೋಧಿಸಿದರೂ ಅಥವಾ ಮಡ್ಡಿಯನ್ನು ಒಂದು ಪುಟ್ಟಿಯಲ್ಲಿಹಾಕಿ ಸೋರು ರಸವನ್ನು ಕೊಪ್ಪರಿಗೆಯೊಳಕ್ಕೆ ಸುರಿಸಿ ನೆಪಮಾತ್ರಕ್ಕೆ ಶೋಧಿಸಿದರೂ, ಮಡ್ಡಿಯನ್ನು ಚದರಿಸಿ ತಿರಿಗಿ ಹಾಲಿಗೆ ಸೇರಿಸಿದಂತಾಗುತ್ತದೆಯೇ ಹೊರ್ತು ಅದರಿಂದ ಯಾವ ಉಪಯೋಗವೂ ಉಂಟಾಗುವದಿಲ್ಲ. ಬಟ್ಟೆಯಿಂದ ಶೋಧಿಸಿದ ತರುವಾಯ ಒಂದೊಂದು ಸಲವೂ ಬಟ್ಟೆಯನ್ನು ಚನ್ನಾಗಿ ಒಗೆದು ಒಣಗಿಸಬೇಕು. ಚೊಕ್ಕಟವಾಗಿರುವದಕ್ಕಾಗಿ ಮರದ ಪುಟ್ಟಿಗಳನ್ನು ಬಳಸಕೂಡದು.

---

* ಪದಾರ್ಥಗಳ ಹುಳಿಯಲ್ಲಿ ವ್ಯತ್ಯಾಸವನ್ನು ಕಂಡುಹಿಡಿಯುವದಕ್ಕೋಸ್ಕರ ಲಿಟ್ಮಸ್ ಎಂಬ ಒಂದು ಬಗೆ ಶಿಲಾವಲ್ಕಲದಿಂದ ಕೆಂಪುನೀಲಿ ಬಣ್ಣದ ಕಾಗದಗಳನ್ನು ತಯಾರು ಮಾಡಿಟ್ಟಿರುತ್ತಾರೆ—ಹುಳಿಯಾದ ಪದಾರ್ಥದಲ್ಲಿ ನೀಲಿಕಾಗದದ ಚೂರನ್ನು ಅದ್ದಿದರೆ ಅದರ ಬಣ್ಣವು ಹುಳಿ ಹೆಚ್ಚಾಗಿರುವಂತೆಲ್ಲಾ ಕೆಂಪು ತಿರುಗುವುದು—ಮುಟ್ಟಿದರೆ ಕೈಗೆ ಬೊಂಬಲಾಗಿ ಕಂಡುಬರುವ ಸುಣ್ಣ ಸಬ್ಬು ಮುಂತಾದ ಪದಾರ್ಥಗಳಿಗೆ ಸರ್ಜಕಗಳೆಂದು ಸಂಸ್ಕೃತದಲ್ಲಿ ಹೆಸರು ಕೊಟ್ಟಿರುವರು—ಈ ಗುಣಕ್ಕೆ ಸರ್ಜಕತೆಯೆಂದು ಹೇಳಬಹುದು. ಸರ್ಜಕತೆಯುಳ್ಳ ಪದಾರ್ಥಗಳಲ್ಲಿ ಕೆಂಪು ಲಿಟ್ಮಸ್ ಕಾಗದವನ್ನು ಅದ್ದಿದರೆ ಅದು ನೀಲಿಬಣ್ಣ ತಿರುಗುವುದು.

2ನೆ ತಖ್ತೆ.

ಪೂರ ಸುಣ್ಣ ಕೊಟ್ಟ ರಸವನ್ನ ಬೇಯಿಸಿದ ಬೆಲ್ಲ.

ನಂಬರು.	ಪದಾರ್ಥ.	ಸುಣ್ಣ ಕೊಟ್ಟ ಪ್ರಮಾಣ.	ಸಕ್ಕರೆ	ಸಕ್ಕರೆದ್ರಾಕ್ಷೆ	ಗಟ್ಟಿ ಪದಾರ್ಥಗಳೆಲ್ಲ ಕೂಡಿ	100 ಭಾಗ ಬೆಲ್ಲವಾಗುವದಕ್ಕೆ ಬೇಕಾದ ಹಾಲಿನ ಭಾಗ	ಬೇಯಿಸುವಾಗ ಉಂಟಾದ ಸಕ್ಕರೆ ದ್ರಾಕ್ಷೆ	ಬಣ್ಣ. ಲೋವಿಬಾಂಡರವರ ವರ್ಣ ಮಾನ ಪ್ರಕಾರ. ಹಳದಿ.	ಕೆಂಪು.	ಸ್ಥೂಲವಾಗಿ.	ಷರಾ.
1	2	3	4	5	6	7	8	9	10	11	12
281	1ನೆ A ತಾಕಿನ ಹಾಲು ...	ಪೂರಾ ...	19·60	0·54	20·9	...	...	..	...	..	
282	281 ರಿಂದ ಬೆಯಿಸಿದ ಬೆಲ್ಲ ..	ಡಿಟ್ಟೋ ...	91·40	2·30	..	514	0·00	..	...	..	
289	1ನೆ C ತಾಕಿನ ಹಾಲು ...	ಡಿಟ್ಟೋ ...	19·05	0·59	20·2	...	...	..	...	..	
290	289 ರಿಂದ ಬೇಯಿಸಿದ ಬೆಲ್ಲ ..	ಡಿಟ್ಟೋ ...	87·90	2·99	..	521	0·73	..	...	56	
296	1ನೆ E ತಾಕಿನ ಹಾಲು ...	ಡಿಟ್ಟೋ ...	18·90	0·48	19·9	...	...	..	...	..	
297	296 ರಿಂದ ಬೆಲ್ಲ ...	ಡಿಟ್ಟೋ ...	82·90	3·78	...	524	1·67	..	...	91	
298	1ನೆ E ತಾಕಿನ ಹಾಲು ...	ಡಿಟ್ಟೋ ...	19·40	0·57	20·6	...	...	..	...	...	
299	298 ರಿಂದ ಬೆಲ್ಲ ...	ಡಿಟ್ಟೋ ...	85·15	2·80	...	640	0·30	..	...	55	ಬಹಳ ಸೀದುಹೋಗಿತ್ತು
302	1ನೆ F ತಾಕಿನ ಹಾಲು ..	ಡಿಟ್ಟೋ ...	19·80	0·70	21·1	...	...	..	...	...	
303	302 ರಿಂದ ಬೆಲ್ಲ ...	ಡಿಟ್ಟೋ ...	81·60	4·30	...	528	1·42	15	3·1	102	
309	1ನೆ H ತಾಕಿನ ಹಾಲು ...	ಡಿಟ್ಟೋ ...	19·35	0·65	20·7	...	...	..	...	...	
310	309 ರಿಂದ ಬೆಲ್ಲ ...	ಡಿಟ್ಟೋ ...	84·70	3·50	...	512	0·66	..	...	81	
311	1ನೆ H ತಾಕಿನ ಹಾಲು ...	ಡಿಟ್ಟೋ ...	19·05	1·00	20·8	...	...	..	...	..	
312	311 ರಿಂದ ಬೆಲ್ಲ ...	ಡಿಟ್ಟೋ ...	81·80	5·26	...	...	0·97	..	...	104	
313	ಜೇಣಿ ಕಬ್ಬಿನ ಹಾಲು ...	ಡಿಟ್ಟೋ ...	15·70	0·[illegible]6	17·9	...	...	..	...	...	
314	313 ರಿಂದ ಬೆಲ್ಲ ...	ಡಿಟ್ಟೋ ...	71·00	11·90	...	...	6·56	13·2	2·4	101	
316	ಮಿಶ್ರವಾದ ಹಾಲು ...	ಡಿಟ್ಟೋ ...	17·60	1·[illegible]0	20·6	...	.	..	...	...	ಕೆಂಪು ಕಬ್ಬು ಅಲೆಯಾಡುವದಕ್ಕೆ ಮೂರುದಿನ

317	316 ರಿಂದ ಬೆಲ್ಲ ..	ಪೂರಾ ...	75·80	8·47	...	...	3·36	27	7·5	38	ಸೀದಿತ್ತು.
318	2ನೆ B ತಾಕಿನ ಹಾಲು ..	ಡಿಟ್ಟೋ ...	18·40	0·67	19·8	...	...	..	.	..	
321	318 ರಿಂದ ಬೆಲ್ಲ ...	ಡಿಟ್ಟೋ ...	83·40	3·70	...	...	0·66	22	5·1	69	
322	2ನೆ B ತಾಕಿನ ಹಾಲು ..	ಡಿಟ್ಟೋ ...	19·05	0·80	20·4	...	...	...	...	...	
323	322 ರಿಂದ ಬೆಲ್ಲ ..	ಡಿಟ್ಟೋ ..	81·75	6·30	..	...	2·87	...	..	92	
399	2ನೆ G ತಾಕಿನ ಹಾಲು ..	ಡಿಟ್ಟೋ ...	15·50	1·02	17·4	...	...	...	...	...	
400	399 ರಿಂದ ಬೆಲ್ಲ ...	ಡಿಟ್ಟೋ ...	79·00	6·85	...		1·65	...		...	399ರ ಲಾಗಾಯಿತು ಮುಂದಿನ ರಖಂಗಳು ಹಿಂದೆ ಹೇಳಿರುವ ರಖಂಗಳಿಗಿಂತ ಮೂರು ತಿಂಗಳು ಹೆಚ್ಚಾಗಿ ಬಲಿತವು.
401	3ನೆ A ಮತ್ತು B ತಾಕುಗಳ ಹಾಲು ..	ಡಿಟ್ಟೋ	15·47	0·99	17·5	...	...	..	..	..	
402	401 ರಿಂದ ಬೆಲ್ಲ ...	ಡಿಟ್ಟೋ ...	77·45	8·47	..		3·52	17	3·7	95	
403	3ನೆ C ಮತ್ತು D ತಾಕಿನ ಹಾಲು ..	ಡಿಟ್ಟೋ ...	15·80	0·82	17·9	...	...		...	...	
404	403 ರಿಂದ ಬೆಲ್ಲ ..	ಡಿಟ್ಟೋ	81·90	4·80	...	...	0·55	22	5·4	58	
405	3ನೆ E ಮತ್ತು F ತಾಕಿನ ಹಾಲು ...	ಡಿಟ್ಟೋ ...	15·50	0·88	17·1	...	...	...	...	...	
406	405 ರಿಂದ ಬೆಲ್ಲ ...	ಡಿಟ್ಟೋ ...	76·40	9·30	...	...	4·96	13	3·1	100	
332	2ನೆ D ತಾಕಿನ ಹಾಲು ...	ಹೆಚ್ಚು ಸುಣ್ಣ ...	18·10	0·73	19·0	...	...	...	...	...	
335	332 ರಿಂದ ಬೆಲ್ಲ	ಡಿಟ್ಟೋ ..	85·30	3·70	..	...	0·26	...	...	60	
336	2ನೆ D ತಾಕಿನ ಹಾಲು ...	ಡಿಟ್ಟೋ ...	17·35	0·86	...	...	...	...	...	...	
337	336 ರಿಂದ ಬೆಲ್ಲ ...	ಡಿಟ್ಟೋ ..	81·80	3·80	...	...	0·00	..	...	46	

3ನೆ ತಖ್ತೆ.

ಪೂರಾ ಸುಂಣವನ್ನ ಕೊಡದೆ ಬೇಯಿಸಿ ಉಂಟಾದ ಬೆಲ್ಲ.

ನಂಬರು.	ಪದಾರ್ಥ.	ಸುಂಣ ಕೊಟ್ಟ ಪ್ರಮಾಣ.	ಸಕ್ಕರೆ.	ಸಕ್ಕರೆ ದ್ರಾಕ್ಷಿ.	ಗಟ್ಟಿ ಪದಾರ್ಥಗಳ ಒಟ್ಟು.	100 ಪಾಂಡು ದ್ರಾಕ್ಷಿರಸದಿಂದ ತಯಾರಾದ ಬೆಲ್ಲ.	ಬೇಯಿಸುವಾಗ ಉಂಟಾದ ಸಕ್ಕರೆ ದ್ರಾಕ್ಷಿ.	ಬಣ್ಣ. ಲೋವಿಬಾಂಡ್‌ರವರ ವರ್ಣಮಾನ ಪ್ರಕಾರ. ಹಳದಿ.	ಕೆಂಪು.	ಸ್ಕೇಲು.	ಷರಾ.
1	2	3	4	5	6	7	8	9	10	11	12
287	ಮಿಶ್ರವಾದ ಹಾಲು ...	ಮುಕ್ಕಾಲ್ ಸುಂಣ	19·40	0·79	20·7	...	...	..	..	...	
288	287 ರಿಂದ ಬೆಲ್ಲ ..	ಡಿಟೋ ..	82·80	4·27	..	494	1·10	..	...	70	
294	ಮಿಶ್ರವಾದ ಹಾಲು ..	ಡಿಟೋ	18·20	0·77	20·6	..	...	...	....	..	
295	294 ರಿಂದ ಬೆಲ್ಲ ..	ಡಿಟೋ ..	81·30	5·80	...	534	2·36	..	..	91	
300	1ನೆ E ತಾಕಿನ ಹಾಲು ..	ಡಿಟೋ ..	19·50	0·88	21·0	...	...	...		...	
301	300 ರಿಂದ ಬೆಲ್ಲ ..	ಡಿಟೋ ..	83·10	3·90	..	491	0·15	..	..	70	
304	ಮಿಶ್ರವಾದ ಹಾಲು ..	ಡಿಟೋ	19·50	0·69	20·9	...	..	..	..	..	
305	304 ರಿಂದ ಬೆಲ್ಲ ..	ಡಿಟೋ ...	82·65	4·80	...	547	1·88	...	...	65	
407	3ನೆ G ಮತ್ತು H ತಾಕಿನ ಹಾಲು ..	ಡಿಟೋ	16·15	0·90	18·5	...	...	..	...	..	
408	407 ರಿಂದ ಬೆಲ್ಲ ..	ಡಿಟೋ ...	80·50	5·40	...	...	0·92	...	..	..	
409	T ಮತ್ತು J ತಾಕುಗಳ ಹಾಲು ..	ಡಿಟೋ ..	16·05	0·95	18·1	...	...	...	...	..	
410	409 ರಿಂದ ಬೆಲ್ಲ ..	ಡಿಟೋ ...	77·45	8·70	...	...	4·12	19	3·9	70	
283	1ನೆ B ತಾಕಿನ ಹಾಲು ..	ಅರ್ಧ ಸುಂಣ.	19·80	0·60	21·0	....	...	...	...	...	
284	283 ರಿಂದ ಬೆಲ್ಲ ..	ಡಿಟೋ ...	85·50	4·03	..	484	1·44	...	...	72	
307	1ನೆ G ತಾಕಿನ ಹಾಲು ..	ಡಿಟೋ ..	18·30	0·90	21·1	...	...	...	..		
308	307 ರಿಂದ ಬೆಲ್ಲ ..	ಡಿಟೋ ...	78·90	6·49	...	551	2·61	...	...	70	
292	1ನೆ D ತಾಕಿನ ಹಾಲು ..	ಕಾಲು ಸುಂಣ.	18·50	0·62	19·6	...	...	..	...	..	
293	292 ರಿಂದ ಬೆಲ್ಲ ..	ಡಿಟೋ ...	80·90	6·80	...	400	4·09	..	..	103	

38. ಹಾಲಿನಲ್ಲಿರುವ ಶರ್ಕರವಿದ್ರಾವ್ಯ.—ಕಬ್ಬನ್ನು ಅರೆಯಿಸುವುದಕ್ಕೆ ಮೊದಲು ಮಾಡಿದಾಗ ಊಹಿಸಿದುದಕ್ಕಿಂತ ಹಾಲಿನಲ್ಲಿ ಹೆಚ್ಚಾಗಿ ಶರ್ಕರವಿದ್ರಾವ್ಯವು ಕೂಡಿಬಂತು. ಹೇಗೆಂದರೆ—ಅರೆಯಿಸಲು ಶುರು ಮಾಡುವುದಕ್ಕೆ ಮುಂಚೆ 280ನೇ ನಂಬರ ರಖಂನಲ್ಲಿ ಶೇಕಡೆ 1ರಂತೆ ಶರ್ಕರವಿದ್ರಾವ್ಯವಿತ್ತು. ಹೀಗಿದ್ದುದರಿಂದ ಕಬ್ಬು ಬಲಿಯುತ್ತ ಬಲಿಯುತ್ತ ಆ ಸಂಖ್ಯೆಗಿಂತ ಕಮ್ಮಿಯಾದೀತೆಂದು ಅಂದಾಜು ಕಟ್ಟಲ್ಪಟ್ಟಿತು. ಕೆಲವು ರಖಂಗಳ ವಿಷಯದಲ್ಲಿ ಹಾಗೆಯೇ ಆಯಿತು. ಆದರೂ ಸರಾಸರಿ ಕಟ್ಟಿದರೆ ಶೇಕಡ ಅರ್ಧಕ್ಕಿಂತ ಹೆಚ್ಚಾಗಿದೆ. ಹೀಗೆ ಆಗುತ್ತದೆಂಬುವದನ್ನು ಮುಂದೆ ವಿಚಾರಮಾಡಬೇಕು. ಜಲ್ಲೆಗಳನ್ನು ಕಡಿದಕೂಡಲೆ ಅರೆಯಿಸದ್ದರಿಂದ ಹೀಗಾಗಿದ್ದರೂ ಇರಬಹುದು. ಗದ್ದೆಯಲ್ಲಿ ಹೊಡೆತಕ್ಕೆ ಸಿಕ್ಕಿದ್ದರೂ ಬಣ್ಣ ಕೆಡದ ಕಬ್ಬುಗಳನ್ನು ಆರಿಸಿ ತೆಗೆದುಹಾಕದೆ ಇದ್ದುದರಿಂದಲೂ ಇರಬಹುದು. ಹಾಗಿಲ್ಲದಪಕ್ಷದಲ್ಲಿ ಮತ್ತಾವುದಾದರೂ ತಿಳಿಯದ ಕಾರಣದಿಂದಲಾಗಲಿ ಆಗಿರಬಹುದು.

39. ಬೇಯಿಸುವಾಗ ಉಂಟಾದ ಶರ್ಕರವಿದ್ರಾವ್ಯ.—ಬೇಯಿಸುವಾಗ ಉಂಟಾಗುವ ಶರ್ಕರವಿದ್ರಾವ್ಯ ಪ್ರಮಾಣವು ಅಸಾಧಾರಣವಾಗಿದೆ. ಅದರ ಕಾರಣವನ್ನು ಈಗಿನವರೆಗೂ ಕಂಡು ಹಿಡಿಯುವುದಕ್ಕೆ ಸಾಧ್ಯವಿಲ್ಲ. 314ನೆ ನಂಬರಿನಿಂದೀಚೆಗೆ ನಮೂದಿಸಿರುವ ನಂಬರುಗಳು ಅತಿಯಾಗಿ ಬಲಿತು ಇದ್ದವು. ಅವುಗಳನ್ನು ಬೇಯಿಸಿದಾಗ ಬಹಳವಾಗಿ ಶರ್ಕರವಿದ್ರಾವ್ಯವು ಉಂಟಾಯಿತು. ಮತ್ತು ಅವುಗಳಿಗೆ ಪೂರಾ ಸುಣ್ಣ ಕೊಟ್ಟಿತ್ತು. 314ನೇ ನಂಬರ ರಖಂವೂ ಅಸಾಧಾರಣವಾದುದೆಂದು ಸ್ಪಷ್ಟವಾಗಿ ಕಾಣುತ್ತೆ. ಈ ಕಾರಣಗಳಿಂದ ಇವುಗಳನ್ನು ಬಿಟ್ಟುಬಿಟ್ಟರೆ ಪೂರಾ ಸುಣ್ಣ ಕೊಟ್ಟ ರಖಂಗಳನ್ನು ಬೇಯಿಸುವಾಗ ಸರಾಸರಿ ಶೇಕಡ 1·17%ರಂತೆ ಶರ್ಕರವಿದ್ರಾವ್ಯವು ಉಂಟಾಯಿತು. ಮುಕ್ಕಾಲು ಸುಣ್ಣ ಕೊಟ್ಟ ರಖಂಗಳಲ್ಲಿ 1·37% ಪ್ರಕಾರ ಆಯಿತು. ಅಷ್ಟಮಾಲು ಹಾಗಮಾಲು ಸುಣ್ಣ ಕೊಟ್ಟ ರಖಂಗಳಲ್ಲಿ 2·02%, 4·09%ರ ಪ್ರಕಾರ ಉಂಟಾಯಿತು. ಬೇಯಿಸುವದರಲ್ಲಿ ಶರ್ಕರವಿದ್ರಾವ್ಯವು ಉಂಟಾಗುತ್ತದಷ್ಟೆ. ಪೂರ್ತಿಯಾಗಿ ಸುಣ್ಣ ಕೊಟ್ಟ ರಖಂಗಳಲ್ಲಿ ಅದರ ಪ್ರಮಾಣವು ಸೊನ್ನೆಯಿಂದ 3·36 ವರಿಗೂ ವ್ಯತ್ಯಾಸವಾಗಿರುವದರಿಂದ ಈ ವ್ಯತ್ಯಾಸಕ್ಕೆ ಸುಣ್ಣದ ಪ್ರಮಾಣವೇ ಅಲ್ಲದೆ ಬೇರೆ ಕಾರಣಗಳಿರಬೇಕೆಂದು ಗೊತ್ತಾಗುತ್ತದೆ. ಆದುದರಿಂದ ಮೇಲೆ ಕಂಡ ಸಂಖ್ಯೆಗಳು ಸುಣ್ಣ ಕೊಡುವದರಿಂದ ಮಾತ್ರವೇ ಉಂಟಾದ ವ್ಯತ್ಯಾಸಗಳನ್ನು ತೋರಿಸುವದಿಲ್ಲ. ಶೇಕಡ 3·36ರಷ್ಟು ಶರ್ಕರವಿದ್ರಾವ್ಯವು ಉಂಟಾಯಿತೆಂದು ನಮೂದಿಸಿರುವ ರಖಂವು ಬೇಯಿಸುವುದರಲ್ಲಿ ಬಹಳ ಸೀದುಹೋಗಿತ್ತು. ಹೀಗೆಯೇ ಬಹಳ ಸೀದುಹೋಗಿದ್ದ ಮತ್ತೊಂದು ರಖಂನಲ್ಲಿ ಶೇಕಡ 1ರಷ್ಟು ಶರ್ಕರವಿದ್ರಾವ್ಯವು ಆದುದರಿಂದ ಸೀಯುವದು ಶರ್ಕರವಿದ್ರಾವ್ಯ ಉಂಟಾಗುವದಕ್ಕೆ ಕಾರಣವೆಂದು ಹೇಳಲು ಆಗುವದಿಲ್ಲ. ಈ ಬೆಲ್ಲಕ್ಕೆ ಉಪಯೋಗಿಸಿದ 317ನೆ ನಂಬರು ಕೊಟ್ಟಿರುವ ಕಬ್ಬಿನ ರಖಂಮಿನ ಸ್ವಲ್ಪ ಭಾಗವನ್ನು ಅರೆಯಿಸುವದಕ್ಕೆ ಮೂರುದಿವಸ ಮುಂದೆ ಮಾಡಿದ್ದರಿಂದ ಹೀಗೆ ಅತಿಯಾಗಿ ಶರ್ಕರವಿದ್ರಾವ್ಯವು ಉಂಟಾಯಿತೋ ಏನೋ ಹೇಳಲಾಗುವದಿಲ್ಲ. ಅನುಕೂಲಿಸಿದ ಮಟ್ಟಿಗೂ ಬೇಗನೆ ಈ ವಿಷಯದಲ್ಲಿ ಪರೀಕ್ಷೆಗಳನ್ನು ಮಾಡುತ್ತೇನೆ.

40. ವರ್ಣ.—ಬೆಲ್ಲದ ರಖಮುಗಳ ಬಣ್ಣದಲ್ಲಿ ಹೆಚ್ಚು ಕಮ್ಮಿಯನ್ನು ಸಂಖ್ಯಾರೂಪವಾಗಿ ತೋರಿಸಲು ಈ ಕೆಳಗೆ ಹೇಳುವ ಉಪಾಯವನ್ನು ಮಾಡಿದ್ದಾಯಿತು. ಪ್ರತಿಯೊಂದು ರಖಂ ಬೆಲ್ಲದಲ್ಲಿಯೂ 50 ಗ್ರಾಂ ಅಂದರೆ ಸುಮಾರು 4½ ತೊಲದಷ್ಟು ಬೆಲ್ಲವನ್ನು 1 ಲೀಟರ (ಸುಮಾರು 2 ಸೇರಷ್ಟಾಗುವ) ನೀರಿನಲ್ಲಿ ಬೇರೆ ಬೇರೆ ಬೆರಸಿ ಆ ಪಾನಕಗಳಲ್ಲಿ ತೇಲಾಡುತ್ತಿರುವ ಕಡ್ಡಿ ಕಸ ಮುಂತಾದ ಕೊಳೆಯನ್ನು ಶೋಧಿಸಿ ತೆಗೆದುಹಾಕಿ ಗಾಜಿನ ಕೊಳವೆಗಳಲ್ಲಿ ತುಂಬಿದ್ದಾಯಿತು. ಎಲ್ಲಾ ಕೊಳವೆಗಳ ರಸದ ಬಣ್ಣವೂ ಒಂದೆ ಛಾಯೆಗೆ ಬರುವವರಿಗೂ ಹೆಚ್ಚು ಕಮ್ಮಿಯಾಗಿ ತುಂಬಿಯಿತು. ವೃದ್ಧಿ ರಖಂಗಳ ಪಾನಕದ ರಂಗಿಗೆ ಸರಿಯಾಗಿ ಇಳಿಯುವದಕ್ಕೆ ಬೆಲ್ಲ ಬಿಳುಪಾದಷ್ಟು ಅದರ ಪಾನಕವನ್ನು ಕೊಳವೆಯಲ್ಲಿ ಹೆಚ್ಚಾಗಿ ತುಂಬಬೇಕಾಗುತ್ತಷ್ಟೆ.—ಈ ರೀತಿಯಲ್ಲಿ ಪ್ರತಿಯೊಂದು ರಖಮಿನ ಪಾನಕವನ್ನು ಕೊಳವೆಗಳಲ್ಲಿ ಎಷ್ಟೆತ್ತರದವರೆಗೂ ತುಂಬಬೇಕಾಯಿತೋ ಅದನ್ನು ಅಳತೆಮಾಡಿ 2 ಮತ್ತು 3ನೆ ನಂಬರ ತಖ್ತೆಗಳ 11ನೆ ಕಲಂಮಿನಲ್ಲಿ ನಮೂದಿಸಿದೆ. ಆದುದರಿಂದ ಅಲ್ಲಿ ನಮೂದಿಸಿರುವ ಸಂಖ್ಯೆಯು ಹೆಚ್ಚು ಸಂಖ್ಯೆಯಾದಷ್ಟೂ ಬೆಲ್ಲವು ಬಿಳುಪಾದುದೆಂದು ತಿಳಿದುಕೊಳ್ಳಬೇಕು. ಹಾಗೆ ಸುಣ್ಣ ಹೆಚ್ಚಾಗಿ ಕೊಟ್ಟಷ್ಟೂ ಬೆಲ್ಲ ಕಪ್ಪಾಗುತ್ತದೆಂದು ಸಾಧಾರಣವಾಗಿ ಜನರು ನಂಬಿದ್ದಾರೆ. ಈ ವಿಷಯವನ್ನು ಪರಾಲೋಚಿಸುವುದರಲ್ಲಿ 299-317ನೆ ನಂಬರು ಬೆಲ್ಲಗಳನ್ನು ಗಣನೆಗೆ ತರಕೂಡದು. ಏಕೆಂದರೆ ಬೇಯಿಸುವುದರಲ್ಲಿ ಅವು ಬಹಳವಾಗಿ ಸೀದುಹೋದವು. ಆದುದರಿಂದ ಅವುಗಳಿಗೆ ಕೊಟ್ಟ ಸುಣ್ಣದಿಂದಲೇ ಉಂಟಾಗುವ ಬಣ್ಣಕ್ಕಿಂತ ಹೆಚ್ಚಾಗಿ ಕಪ್ಪಾದವು. ಇತರ ರಖಮು ಬೆಲ್ಲಗಳ ಪೈಕಿ ಇನ್ನೂ ಕೆಲವು ಸೀದುಹೋಗಿರಬಹುದು.

ಒಂದೇ ವಿಧವಾಗಿ ತಯಾರು ಮಾಡಿದ ಬೆಲ್ಲಗಳಿಗಿರುವ ವಿಶೇಷ ವ್ಯತ್ಯಾಸವು ಸುಮಾರು ಈ ಕಾರಣದಿಂದಲೇ ಇರಬಹುದು. ಇತರ ರಖಮುಗಳು ಸೀದುಹೋಗಿದ್ದ ಪಕ್ಷದಲ್ಲಿ ಸುಲಭವಾಗಿ ಕಂಡುಬರುವಷ್ಟು ಸೀದುಹೋಗಿರಲಾರವು. ಪೂರಾ ಸುಣ್ಣ ಕೊಟ್ಟ

ರಖಮುಗಳ ಸರಾಸರಿ ಏಣ ಸಂಖ್ಯೆಯು 81 ಬಹು ಬಿಳುಪು ಛಾಯೆಯಾಗಿದ್ದು ಶರ್ಕರವಿದ್ರಾವ್ಯದ ವಿಷಯದಲ್ಲಿ ವಿಜಾತೀಯವಾಗಿದ್ದ 314ನೆ ನಂಬರನ್ನು ಗಣನೆಗೆ ತಾರದೆ ಬಿಟ್ಟುಬಿಟ್ಟರೆ ಸರಾಸರಿ ಸಂಖ್ಯೆಯು 80ರಂತೆ ಆಗುತ್ತದೆ. ಮುಕ್ಕಾಲು ಸುಣ್ಣಕೊಟ್ಟ ರಖಮಿನ ಸರಾಸರಿಯು 61—ಅರ್ಧ ಸುಣ್ಣ ಕೊಟ್ಟ ರಖಮುಗಳಿಗೆ 71—ಆದುದರಿಂದ ಪೂರಾ ಸುಣ್ಣಕೊಟ್ಟ ಮತ್ತು ಹೆಚ್ಚಾಗಿ ಸುಣ್ಣಕೊಟ್ಟ ರಖಂಗಳೇ ಬಹು ಬಿಳುಪು ಛಾಯೆಯುಳ್ಳವುಗಳಾದವು. ಆಮ್ಲ ಸರ್ಜಕಗಳ ವಿಷಯದಲ್ಲಿ ಔದಾಸೀನ್ಯ ಹುಟ್ಟುವವರಿಗೂ ಸುಣ್ಣ ಬೆರಸದ, ಅಂದರೆ ಮುಕ್ಕಾಲು ಸುಣ್ಣಕೊಟ್ಟ ರಖಂಗಳೇ ಬಹು ಕಪ್ಪಾದವು. ಅರ್ಧ ಸುಣ್ಣ ಕೊಟ್ಟವೇ ಮೇಲೆ ಕಂಡ 2 ರಖಂಗಳಿಗೂ ಮಧ್ಯಸ್ಥವಾದವು. ಹಾಗೆಯಲಾ ಸುಣ್ಣ ಕೊಟ್ಟ ರಖಮು ಒಂದೇ ಇದ್ದುದರಿಂದ ಅದನ್ನು ಗಣನೆಗೆ ತಂದ ಕೊಳ್ಳಲೇ ಇಲ್ಲ. ಈ ಇಲಾಖೆಯ 5ನೆ ಬಿನ್ನವತ್ತಳೆಯ 8ನೆ ಪುಟದ 24ನೆ ಕಲಂನಲ್ಲಿ ಸಮೂದಿಸಿರುವ ಅಭಿಪ್ರಾಯವನ್ನು ಈ ಸಂಖೆಗಳು ಸ್ಥಿರಪಡಿಸುತ್ತವೆ. ಸುಣ್ಣ ಬೆರಸುವದರಿಂದ ಹಾಲಿನ ಬಣ್ಣವು ಹೇಗೆ ವ್ಯತ್ಯಾಸವಾಗುತ್ತದೋ ಹಾಗೆಯೇ ಬೆಲ್ಲದ ಬಣ್ಣವೂ ವ್ಯತ್ಯಾಸವಾಗುವಂತೆ ತೋರುತ್ತದೆ. ಹಾಲಿಗೆ ಸುಣ್ಣ ಹೆಚ್ಚಾಗಿ ಬೆರಸಿದಷ್ಟೂ ಅದರ ಬಣ್ಣವು ಕಪ್ಪಾಗುತ್ತದೆ. ಆಮ್ಲ ಸರ್ಜಕಗಳ ವಿಷಯದಲ್ಲಿ ಔದಾಸೀನ್ಯತೆಯನ್ನು ಹೊಂದಿ ಆಮೇಲೆ ಸರ್ಜಕತೆಯನ್ನು ಹೊಂದುವವರಿಗೂ ಹೀಗಾಗಿ ಮುಂದೆ ಅದೂ ಬಿಳಪು ಛಾಯೆಯಾಗುತ್ತದೆ. ಸಾಕಾದಷ್ಟು ಸುಣ್ಣವನ್ನು ಕೊಡದೆ ರೈತರು ಹಾಲಿಗೆ ಸುಣ್ಣ ಹೆಚ್ಚಾಗಿ ಕೊಟ್ಟಷ್ಟೂ ಬೆಲ್ಲ ಕಪ್ಪಾಗುತ್ತದೆಂದು ಹೇಳುವದು ಸರಿಯೇ ಹಾಗು. ಕೆಂಪು ಮಣ್ಣಾಳ ಪರೀಕ್ಷಾಲಯದ ಬಳಿಯ ಮರಳು ಮಿಶ್ರವಾದ ಕೆಮ್ಮಣ್ಣಿನ ತೋಟದಲ್ಲಿ ಬೇಸಾಯಮಾಡಿ ನಡೆಸಿದ ಈ ಪರೀಕ್ಷೆಗಳ ಫಲೋತ್ಪತ್ತಿಯೇ ಪ್ರಾಯೇಣ ಸಂಸ್ಥಾನಾದ್ಯಂತ ಉಂಟಾಗಬಹುದು. ಹಾಗಿದ್ದರೆ ಅವಶ್ಯವಾದಷ್ಟು ಸುಣ್ಣವನ್ನು ಹಾಲಿಗೆ ಕೊಟ್ಟಲ್ಲಿ ಈಗ ಸಾಮಾನ್ಯವಾಗಿ ರೈತರು ತಯಾರ್ಮಾಡುತ್ತಿರುವ ಬೆಲ್ಲಕ್ಕಿಂತ ಬಿಳುಪಾಗಿಯೂ ಉತ್ತಮವಾಗಿಯೂ ಮಾಡಬಹುದು.

41. ಮೇಲೆ ವಿವರಿಸಿದಂತೆ ಸುಮಾರು 2 ಸೇರು ನೀರಿಗೆ $4\frac{1}{2}$ ತೊಲಾ ಬೆಲ್ಲ ಸೇರಿಸಿ ಮಾಡಿದ ಪಾನಕಗಳನ್ನು ಲೋವಿಬಂಡರವರ “ ವರ್ಣಮಾನದಲ್ಲಿ ” ಅಜಮಾಯಿಷಿ ಮಾಡಿದ ಫಲಿತಾಂಶಗಳನ್ನು 18ನೆ ಪುಟದಲ್ಲಿರುವ ತಖ್ತೆಯ 9-10ನೆ ಕಲಂಗಳಲ್ಲಿ ಕೊಟ್ಟಿರುತ್ತೆ. ಈ ಪರೀಕ್ಷೆ ಮಾಡಲು ಎರಡು ಅಂಗುಲದ ಕೊಳವೆಗಳನ್ನು ಉಪಯೋಗಿಸಿತು. ಈ ಪರೀಕ್ಷೆಗಳಲ್ಲಿ ತೋರಿಬರುವ ವರ್ಣಭೇದಗಳನ್ನು ತೋರಿಸುವ ಸಂಖೆಗಳು ಯಾವ ಕಾಲಕ್ಕೂ ಉಪಯೋಗವಾಗಿದ್ದರೂ ಈ ಉಪಸ್ಕರವನ್ನು ಉಪಯೋಗಿಸುವವರಿಗೆ ವಿನಾ ಮತ್ತಾರಿಗೂ ಇದರಲ್ಲಿ ಅಭಿರುಚಿ ಉಂಟಾಗಲಾರದು, ಮತ್ತು ಆ ಉಪಸ್ಕರವನ್ನು ಉಪಯೋಗಿಸತಕ್ಕವರಿಗೆ ಇನ್ನೇನೂ ಹೆಚ್ಚಾಗಿ ತಿಳಿಸತಕ್ಕದ್ದಿಲ್ಲ. ಅವರಿಗೆಲ್ಲವೂ ಮುಂದಟ್ಟಿರುವದು.

42. ಸಕ್ಕರೆ.—ಪ್ರತಿವರುಷವೂ ದೇಶಾಂತರಗಳಿಂದ ಹಿಂದೂ ದೇಶಕ್ಕೆ ಬಹಳವಾಗಿ ಸಕ್ಕರೆ ಬರುತ್ತಿದೆ. ಹೀಗೆ ಆಮದಾಗುವುದು ವರ್ಷವರ್ಷಕ್ಕೂ ಹೆಚ್ಚುತ್ತಲೇ ಇದೆ. 1893—94ನೆ ವರುಷದಲ್ಲಿ 1,06,000 ಟನ್‌ಗಳಿಗಿಂತ ಸ್ವಲ್ಪ ಹೆಚ್ಚಾಗಿತ್ತು. ಅಲ್ಲಿಂದೀಚೆ 5 ವರುಷಗಳಲ್ಲಿ ಅದರ ಎರಡರಷ್ಟು ಹೆಚ್ಚಿ 2,04,000 ಟನ್‌ಗಳಾಯಿತು. ಹೋದವರುಷ 2,90,000 ಟನ್‌ಗಳಿಗಿಂತ ಸ್ವಲ್ಪ ಹೆಚ್ಚಾಯಿತು. ಐದು ವರುಷಗಳಿಂದೀಚೆಗೆ ಶೇಕಡ 42ಕ್ಕಿಂತ ಸ್ವಲ್ಪ ಜಾಸ್ತಿಯಾಗಿ ಹೆಚ್ಚಿದಂತಾಯಿತು. ಈ ಹೊರಾಗ್ರದ ಸಕ್ಕರೆಯು ಮೋರಸ್ ಯವದ್ವೀಪಗಳಿಂದ ಬರುತ್ತದೆ. ಮತ್ತು ಹೋದವರ್ಷ “ ಬೀಟ್ ” ಗೆಡ್ಡೆಯಿಂದ ಸಕ್ಕರೆ ತಯಾರ್ ಮಾಡುವ ದೇಶಗಳಿಂದ 27,000 ಟನ್‌ಗಳು ಬಂದವು. ಹೀಗೆ ವರ್ಷ ವರ್ಷಕ್ಕೂ ಈ ಆಮದು ಹೆಚ್ಚುತ್ತಲಿರುವದರಿಂದ ಹಿಂದೂ ದೇಶದವರ ಸಕ್ಕರೆ ಮಾಡುವ ಕ್ರಮದಲ್ಲಿ ಏನೋ ವಿಶೇಷ ತಪ್ಪಿರಬೇಕೆಂದು ತೋರುತ್ತೆ. ಮೈಸೂರು ದೇಶದಲ್ಲಿ ಈ ನ್ಯೂನತೆಗೆ ಕಾರಣವು ಕಬ್ಬಿನ ಗುಣದಲ್ಲಿದ್ದಂತೇನೂ ಕಾಣಬರುವದಿಲ್ಲ. ಏತಕ್ಕೆಂದರೆ ಕೆಲವು ಸಂದರ್ಭಗಳಲ್ಲಿ ಮೈಸೂರು ಸೀಮೆಯ ಕಬ್ಬಿನಲ್ಲಿ ಶೇಕಡಾ 20—21ರಂತೆ ಶರ್ಕರವು ಕಂಡುಬರುವ ಹಾಗೆ ಮತ್ತಾವದೇಶದ ಕಬ್ಬಿನಲ್ಲೂ ನಮ್ಮನುಭವದಲ್ಲಿ ಕಂಡು ಬರುವದಿಲ್ಲ. ಎಕರೆಯೊಂದಕ್ಕೆ ಬೆಳೆಯುವ ಕಬ್ಬನ್ನೇನೋ ಹೆಚ್ಚಿಸಬೇಕು. ಈ ವ್ಯವಸಾಯದಲ್ಲಿ ಸಕ್ಕರೆ ತಯಾರುಮಾಡುವ ರೀತಿಯನ್ನು ವಿಶೇಷ ಬದಲಾಯಿಸಬೇಕಾಗಿರುವಂತೆ ಪ್ರಾಯಶಃ ಮತ್ತಾವ ಬಾಬಿನಲ್ಲೂ ಅವಶ್ಯಕತೆ ಕಾಣುವದಿಲ್ಲ. ಕಬ್ಬನ್ನು ಅರೆಯುವದು ಮತ್ತು ಹಾಲಿಗೆ ಸುಣ್ಣ ಕೊಡುವುದು. ಬೇಯಿಸುವಾಗ ಮಡ್ಡಿ ತೆಗೆಯುವದು, ಹಾಲು ಹುಳಿಯಾಗಿ ಕೆಟ್ಟುಹೋಗುವದರಿಂದ ನಷ್ಟ ಉಂಟಾಗದಂತೆ ನೋಡಿಕೊಳ್ಳುವುದು ಮುಂತಾದ ಈ ಮುಖ್ಯವಿಷಯಗಳು ಪರ್ಯಾಲೋಚಿಸತಕ್ಕವು—ಆಮದಾಗುವ ಸಕ್ಕರೆಯ ಪೈಕಿ ಕೆಲವು ಶೋಧಿತವಾಗಿಯೇ ಬರುತ್ತವೆ. ಕೆಲವು ಈ ದೇಶದ ಸಕ್ಕರೆ ಕಾರ್ಖಾನೆಗಳಲ್ಲಿ ಶೋಧಿಸಲ್ಪಟ್ಟು ಚಿಲ್ಲರೆಯಾಗಿ ವಿಕ್ರಯವಾಗುತ್ತವೆ. ಹೀಗಿರುವುದರಿಂದ ಆಮದಾಗುವ ಸಕ್ಕರೆಗಿಂತ ನಮ್ಮ ದೇಶದಲ್ಲಾಗುವ ಸಕ್ಕರೆಯನ್ನೇ ಜನರು ಮೋಹಿಸಿ ತೆಗೆದುಕೊಳ್ಳುವಂತೆ ಮಾಡಬೇಕಾದರೆ ಹಸನು ರಖಮುಗಳ ಸಕ್ಕರೆಯನ್ನು ಹಾಲಿನಿಂದ ಸ್ವಲ್ಪ ಲಾಗವಡಿಸಲ್ಲಿಯೇ ತಯಾರು ಮಾಡಲು ಉಪಾಯವನ್ನು ಹುಡುಕಬೇಕು. ಹಾಲಿನಿಂದ ಮೊದಲು ಬೆಲ್ಲವನ್ನು ಮಾಡಿ ಆಮೇಲೆ ಅದನ್ನು ಕಾರ್ಖಾನೆ

ಗಳಲ್ಲಿ ಶೋಧಿಸಿ ಸಕ್ಕರೆ ಮಾಡುವ ಈಗಿನ ಪದ್ಧತಿಯನ್ನು ಬಿಟ್ಟುಬಿಡುವವರಿಗೂ ಈ ಉದ್ದೇಶವು ನೆರವೇರಲಾರದು. ಬೆಲ್ಲ ಮಾಡ
ಲು ಹಾಲನ್ನು ಕಾಯಿಸುವದಕ್ಕೆ ಉಪಯೋಗಿಸುವ ಸಾದೆಯು ಸುಮ್ಮನೆ ನಷ್ಟವಾಗಿ ಹೋಗುತ್ತದೆ. ಸಕ್ಕರೆ ಮಾಡಲು ಯ
ತ್ನಿಸುವದಕ್ಕೆ ಮುಂಚೆಯೇ ಬೆಲ್ಲದಿಂದ ಜೋನಿಯುಲ್ಲವನ್ನು ತೆಗೆದುಹಾಕದೆ ಇದ್ದರೆ ಕಾರ್ಖಾನೆಗಳಲ್ಲಿ ಇದ್ದಲು ಮುಂತಾದವುಗ
ಳ ಮುಖಾಂತರ ಶೋಧಿಸುವ ಕೆಲಸವು ಹೆಚ್ಚುತ್ತದೆ. ಆದುದರಿಂದ ಪಾನಕವನ್ನು ಚಕ್ಕಿಯಲ್ಲಿ ಹಾಕಿ ತಿರಿವಿ ಒಂದೇ ಸಲಕ್ಕೆ
ಸಕ್ಕರೆಯನ್ನು ನಮ್ಮ ಗ್ರಾಮಾಂತರಗಳಲ್ಲಿ ಮಾಡಿದರೆ ಹಾಗೆ ತಯಾರಾಗುವ ಸಕ್ಕರೆಗಳ ಪೈಕಿ ಹಸನು ರಖಮುಗಳ ಸಕ್ಕರೆಗ
ಳು ಬಹಳವಾಗಿ ಬಳಕೆಬಂದ ಸಕ್ಕರೆಯು ಆಮದಾಗುವುದು. ಬಹುಮಟ್ಟಿಗೆ ಕಡಿಮೆಯಾಗಬಹುದು. ಬೆಲ್ಲವನ್ನೇ ಮಾಡಿದಪ
ಕ್ಷದಲ್ಲಿ ಅನ್ಯದೇಶದಿಂದ ಸಕ್ಕರೆ ಬರುವುದನ್ನು ನಿಲ್ಲಿಸುವದಕ್ಕಾಗುವದಿಲ್ಲ. ಹಸನು ರಖಮುಗಳ ಸಕ್ಕರೆ ತಯಾರಾಗುವದಕ್ಕೆ
ಷುರುವಾಗಲು ಕೀಳ ದರ್ಜೆಗಳ ಸಕ್ಕರೆಯ ಖರ್ಚು ಕ್ರಮೇಣ ಕಮ್ಮಿಯಾಗಿ, ಹಸನು ಸಕ್ಕರೆಯೇ ವಿಶೇಷವಾಗಿ ವ್ಯಾಪಾ
ರವಾಗತಕ್ಕ ವಿಷಯವು ಪ್ರಪಂಚದಲ್ಲಿ ಎಲ್ಲೆಲ್ಲಿಯೂ ಅನುಭವಕ್ಕೆ ಬಂದಿದೆ. ಸದ್ಯಕ್ಕೆ ಕಬ್ಬಿನಿಂದುಂಟಾಗುವ ಪದಾರ್ಥಗಳ
ಪೈಕಿ ಬೆಲ್ಲವೇ ಮುಖ್ಯವಾದುದಷ್ಟೆ—ಹೀಗಿರಲು ಸಕ್ಕರೆ ಮಾಡುವುದಕ್ಕೆ ಅನುಕೂಲವಾದ ಶೋಧಿಸಿದ ಬೆಲ್ಲವನ್ನು ನಾವು
ಕಷ್ಟಪಟ್ಟು ತಯಾರು ಮಾಡದೆ ಹೋದರೆ ಈ ದೇಶದಲ್ಲಿ ಸಕ್ಕರೆ ಮಾಡುವ ಕಸಬು ಕ್ಷೀಣವಾಗುವುದು ಖಂಡಿತ. ಆದರೆ,
ಮೇಲೆ ಹೇಳಿದ ಕಾರಣಗಳಿಗಾಗಿ ಹೀಗಾಗಲಾರದುದರಿಂದ ಹಾಲನ್ನು ಬೇಯಿಸಿ ಬೆಲ್ಲಮಾಡುವುದನ್ನು ಬಿಟ್ಟು ನೂತನವಾದ ವಿಧಾ
ನಗಳಿಂದ ಕೂಡಿದಮಟ್ಟಿಗೂ ಹಸನಾದ ಕಚ್ಚಾ ಸಕ್ಕರೆಯನ್ನು ಮಾಡುವುದು ಅಗತ್ಯವಾಗಿರುವುದು—ಹೀಗೆ ಮಾಡಿದ್ದಾದರೆ
ಕ್ರಮೇಣ ಸ್ವದೇಶದ ಸಕ್ಕರೆಯ ವ್ಯಾಪಾರವು ಹೆಚ್ಚಿ ಹೊರಗಿನಿಂದ ಸಕ್ಕರೆ ಬರುವುದು ನಿಂತುಹೋಗುವುದು. ಸಕ್ಕರೆ ಮಾ
ಡುವ ಉದ್ಯೋಗವು ಈ ದೇಶದಲ್ಲೇ ಹುಟ್ಟಿದ್ದು—ಯೂರೋಪ ಖಂಡಕ್ಕೆ ಸಕ್ಕರೆಯನ್ನು ಮೊದಲು ತಂದಾಗ ಅದಕ್ಕೆ "ಹಿಂದೂ
ದೇಶದ ಉಪ್ಪಂದು" ಹೆಸರು ಕೊಟ್ಟಿದ್ದರು. ನೂತನಯಂತ್ರಗಳ ಸಹಾಯದಿಂದ ಸಕ್ಕರೆ ಮಾಡುವ ಉದ್ಯೋಗವು ಈಚೆಗೆ
ಬಹಳ ಅಭಿವೃದ್ಧಿಯನ್ನು ಹೊಂದಿರುವುದು. ಆದುದರಿಂದ ಈಗ್ಯೆ 700 ವರುಷಗಳ ಹಿಂದೆ, ಅಷ್ಟಲ್ಲದ ಪಕ್ಷಕ್ಕೆ 150 ವರು
ಷಗಳ ಹಿಂದೆ, ನಮ್ಮ ದೇಶದಲ್ಲಿ ರೂಢಿಯಲ್ಲಿದ್ದು ಕೆಲಸ ಚನ್ನಾಗಿ ಸಾಗುತ್ತಿದ್ದ ರೀತಿಯಲ್ಲೇ ಈಗಲೂ ಕೆಲಸ ನಡಿಸಿ ಊರ್ಜಿತ
ವಾಗಬೇಕೆಂದರೆ ಸಾಧ್ಯವಲ್ಲ. ಸಕ್ಕರೆಯ ಬೆಲೆಯು ಈಚೆಗೆ ಬಹಳ ತಗ್ಗಿಹೋಗಿದೆ. ಯೂರೋಪ ಖಂಡಕ್ಕೆ ಮೊದಲು ಸಲ
ಅದು ಹೇರಳವಾಗಿ ರಫ್ತಾದಾಗ ಪೌಂಡ 1ಕ್ಕೆ ಒಂದು ರೂಪಾಯಿಗಿಂತ ಜಾಸ್ತಿ ಬೆಲೆಗೆ ಮಾರುತ್ತಿತ್ತು—ಈಗ್ಗೆ ಸೂರು ವ
ರುಷಗಳ ಹಿಂದೆ ಸ್ವಲ್ಪಕಾಲದ ಮಟ್ಟಿಗೆ ಪೌಂಡು ಒಂದಕ್ಕೆ 2 ರೂಪಾಯಿನಂತೆ ಮಾರಿತು. ಆದರೆ ಯೂರೋಪ ಖಂಡದಲ್ಲಿ
ಸಕ್ಕರೆಯ ವ್ಯಾಪಾರಕ್ಕೆ ಅನೇಕ ಬಾಧಕಗಳನ್ನು ತಂದಿಟ್ಟಿದ್ದರಿಂದ ಅಷ್ಟು ಹೆಚ್ಚು ಬೆಲೆಯಾಗುವುದಕ್ಕೆ ಕಾರಣವಾಯಿತು. ಈಚೆಗೆ
ಕಮ್ಮಿ ಲಾಗವಡಿನಲ್ಲಿ ಒಳ್ಳೆ ಸಕ್ಕರೆಯನ್ನು ಮಾಡುವ ಉಪಾಯುಗಳನ್ನು ಕಂಡುಹಿಡಿದುದರಿಂದ ಈಗ ಸುಲಭಕ್ರಯಕ್ಕೆ ಮಾ
ರಲು ಸಾಧ್ಯವಾಯಿತು. ಅನ್ಯದೇಶದ ಮಾತು ಹಾಗಿರಲಿ. ಹೊಸರೀತಿಯ ಪ್ರಕಾರ ಸುಲಭಲಾಗುವಡಿನಲ್ಲಿ ಒಳ್ಳೇ ಸಕ್ಕರೆಯ
ನ್ನು ತಯಾರುಮಾಡುವ ದೇಶಗಳ ಜೊತೆಗೆ ನಾವೂ ಸಕ್ಕರೆಯನ್ನು ತಯಾರುಮಾಡಿ ವ್ಯಾಪಾರದಲ್ಲಿ ಮುಂದಾಗಬೇಕಾದರೆ ಈಗ
ವಾಡಿಕೆಯಲ್ಲಿರುವ ಹಳೇರೀತಿಯನ್ನು ಬದಲಾಯಿಸಿ ಹೊಸರೀತಿಯಂತೆ ಮಾಡಲು ಉಪಕ್ರಮಿಸಬೇಕು. ಆ ರೀತಿಗಳು ಈ
ದೇಶಕ್ಕೆ ಸರಿಬೀಳದೆ ಹೋದರೆ ಅನುಕೂಲವಾದ ರೀತಿಯನ್ನು ಕಂಡು ಹಿಡಿದು, ಆ ವಿಧವಾಗಿ ಮಾಡಲು ಪ್ರಯತ್ನಪಡಬೇಕು.
ಸಕ್ಕರೆಮಾಡುವ ಕಸಬನ್ನು ನಮ್ಮದೇಶದಲ್ಲಿ ಉಳಿಸಿಕೊಳ್ಳಬೇಕಾದ ಪಕ್ಷಕ್ಕೆ ನೂತನ ವಿಧಾನಗಳನ್ನು ಹುಡುಕಿ ಅವುಗಳನ್ನು
ಅನುಸರಿಸಿ ಅಭಿವೃದ್ಧಿಯನ್ನು ಹೊಂದಬೇಕಾದುದು ಅತ್ಯಗತ್ಯವಾದುದು. ನಮ್ಮಲ್ಲಿ ರೂಢಿಯಲ್ಲಿರುವ ರೀತಿಗಳನ್ನು ಪೂ
ರ್ತಿಯಾಗಿ ಬಿಡದೆ ಇತರ ದೇಶಗಳಲ್ಲಿ ಉಪಯೋಗದಲ್ಲಿರುವ ಹೊಸರೀತಿಗಳನ್ನು ಅನುಸರಿಸಿ ಅವುಗಳನ್ನು ಎಷ್ಟರವರೆಗೆ ನಾವು
ಜಾರಿಗೆ ತರಬಹುದೆಂಬುವುದನ್ನು ಕಂಡುಹಿಡಿಯುವದಕ್ಕೋಸ್ಕರ ಮುಂದೆ ವಿವರಿಸಿರುವ ಪರೀಕ್ಷೆಗಳನ್ನು ಮಾಡಿದ್ದಾಯಿತು.

43. ಬೆಲ್ಲ ಬೇಯಿಸುವ ವಿಧಾನವನ್ನು ವಿವರಿಸುವಾಗ ಹೇಳಿದರೀತಿಯಲ್ಲೇ ಹಾಲಿಗೆ ಸುಣ್ಣ ಕೊಡೋಣ ಮುಂತಾದ ಕೆಲ
ಸಗಳನ್ನು ಮಾಡಿದ್ದಾಯಿತು. ಆದರೆ ಹಾಲನ್ನು ಬೆಲ್ಲದ ಪಾಕದವರೆಗೂ ಕಾಯಿಸದೆ ಬರಿ ಮಣ್ಣಿನಂತಾಗುವ ಎಳಪಾಕಕ್ಕೆ ಇಳಿ
ಸಿದ್ದಾಯಿತು. ಹೀಗೆ ಬೇಯಿಸುವುದನ್ನು ಅನುಭವದಿಂದಲೇ ತಿಳಿದುಕೊಳ್ಳಬೇಕು. ಚೆನ್ನಾಗಿ ಬೆಲ್ಲ ಬೇಯಿಸಲು ಬಲ್ಲವನು ಇದನ್ನು
ಬೇಗ ನೋಡಿಕೊಳ್ಳಬಹುದು. ಈ ವಿಷಯದಲ್ಲಿ ನಮಗೇನೂ ತೊಂದರೆಯುಂಟಾಗಲಿಲ್ಲ—ಈ ಬವಿಯಾಗಿರುವ ಕಾಕಂಬಿ ಪಾಕ
ವನ್ನು 4–5 ದಿವಸದವರೆಗೂ ತುಂಬಿಟ್ಟು ಆಮೇಲೆ ಗಂಟುಗಳನ್ನೆಲ್ಲಾ ಒಡೆದು ಚೆನ್ನಾಗಿ ಪುಡಿಮಾಡಿ ಒಂದು ಚಿಕ್ಕ ಚಕ್ಕಿಯಲ್ಲಿ
ಹಾಕಿ ತಿರಿವಿ ಜೋನಿಯನ್ನು ಬೆಲ್ಲದಿಂದ ವಿಂಗಡಿಸಿದ್ದಾಯಿತು. ಈ ಕೆಳಗಿನ ತಖ್ತೆಯಲ್ಲಿ ಹಾಲಿನಲ್ಲಿದ್ದ ಪದಾರ್ಥಗಳ ಕಾಕಂಬಿಯ
ಲ್ಲಿದ್ದ ಪದಾರ್ಥಗಳ ಪ್ರಮಾಣವನ್ನು ಅವುಗಳಿಂದ ವಿಂಗಡಿಸಿದ ಸಕ್ಕರೆ ಜೋನಿಗಳ ಪ್ರಮಾಣವನ್ನು ಕೊಟ್ಟಿದೆ. ಹೀಗೆ ವಿಂಗಡಿ
ಸಿದ ಜೋನಿಯನ್ನು ಮತ್ತೊಂದು ಸಲ ಕಾಯಿಸುವುದರಿಂದ ಉಂಟಾದ ದ್ವಿತೀಯಂ ರಖಂ ಸಕ್ಕರೆ ಎಂಬುದರ ಪ್ರಮಾಣವನ್ನು
ಆ ಪಟ್ಟಿಯಲ್ಲಿ ಕೊಟ್ಟಿದೆ.

ಸಕ್ಕರೆ.

ನಂಬರು.	ಪದಾರ್ಥ.	100 ಭಾಗ ಸಕ್ಕರೆ ... ಶೇಕಡ	ಸಕ್ಕರೆಯ ಶೇಕಡಾ.	ಸಕ್ಕರೆ ಇಲ್ಲದ್ದರ ಶೇಕಡಾ.	ಗಟ್ಟಿ ಪದಾರ್ಥಗಳ ತೂಕ	ತೇವ.	ಕಾರ್ಬನಿನಿಂದ ಶೋಧಿಸದ 1ನೆ ಸಕ್ಕರೆಯ ಶೇಕಡಾ.	ಕಾರ್ಬನಿನಿಂದ ಶೋಧಿಸದ 1ನೆ ಸಕ್ಕರೆ ... ಶೇಕಡಾ.	ಕಾರ್ಬನಿನಿಂದ ... 2ನೆ ಸಕ್ಕರೆಯ ಶೇಕಡಾ	ಕಾರ್ಬನಿನಿಂದ ... ಸಕ್ಕರೆಯ ಶೇಕಡಾ	100 ಭಾಗದಲ್ಲಿ ... ಸಕ್ಕರೆ	ಬಣ್ಣ. ಲೋವಿಬಾಂಡರವರ ವರ್ಣಮಾನ ಪ್ರಕಾರ. ಹಳದಿ.	ಕೆಂಪು.	...	ಷರಾ.	ನಂಬರು.
1	2	3	4	5	6	7	8	9	10	11	12	13	14	15	16	17
306	1ನೆ G ತಾಕಿನ ಹಾಲು	...	19·55	0·91	21·3	...	...	...	...	...	...	...	...	...		306
378	306 ರಿಂದ ಬೇಯಿಸಿದ ಕಾಕಂಬಿ	...	74·85	6·30	...	...	...	...	...	...	...	...	...	...		378
379	378 ರಿಂದ ಹೊರಟ ಸಕ್ಕರೆ (a)	ತೊಳೆಯದ್ದು ...	95·60	1·20	...	1·99	60·1	...	17·1	77·2	82·5	18	3·3	80		379
380	379 ಡಿಟೋ ಜೋನಿ (a)		49·70	12·80	...	...	...	...	...	...	...	...	...	...		380
381	378 ಡಿಟೋ ಸಕ್ಕರೆ (b)	ಡಿಟೋ ...	94·00	1·50	...	3·06	62·0	...	16·3	78·3	83·7	18	4·3	75	ಚರಿಬಿಯು ಪಟ್ಟೆಯು ಕಿತ್ತು ಹೋಯಿತು.	381
382	381 ಡಿಟೋ ಜೋನಿ (c)		49·60	12·80	...	...	...	...	...	...	...	...	...	...		382
383	378 ಡಿಟೋ ಸಕ್ಕರೆ (d)	ಡಿಟೋ ...	94·70	1·30	...	2·08	61·8	...	16·4	78·2	83·6	18	3·7	72		383
384	378 ಡಿಟೋ ಸಕ್ಕರೆ (e)	5·12 ...	97·50	0·68	...	1·80	58·6	64·02	17·8	76·4	81·7	7	1·8	152		384
324	2ನೆ C ತಾಕಿನ ಹಾಲು	...	18·10	0·80	19·6	...	...	...	...	...	...	...	...	...		324
385	324 ರಿಂದ ಬೇಯಿಸಿದ ಕಾಕಂಬಿ		78·20	4·46	...	...	...	...	...	...	...	...	...	...		385
387	385 ರಿಂದ ಹೊರಟ ಸಕ್ಕರೆ (a)	4·45 ...	95·00	1·00	...	2·88	62·53	67·3	16·1	78·63	83·8	25	5·1	55		387
388	385 ಡಿಟೋ (b)	ತೊಳೆಯದ್ದು ...	94·40	1·52	...	2·66	66·37	...	14·4	80·77	86·4	60	7·7	35		388
391	385 ಡಿಟೋ (c)	4·61 ...	95·90	1·12	...	2·30	63·68	69·7	15·6	79·28	...	24	4·4	45		391
329	2ನೆ C ತಾಕಿನ ಹಾಲು		18·00	1·16	19·9	...	...	...	...	...	...	...	...	...		329
389	329 ರಿಂದ ಬೇಯಿಸಿದ ಜೋನಿ		76·90	6·25	...	...	...	...	...	...	...	...	...	...		389

390	389 ರಿಂದ ಹೊರಟ ಸಕ್ಕರೆ (a)	ತೊಳೆಯದ್ದು ..	95·20	1·57	..	1·90	61·97	..	16·3	78·27	84·7	18	4·5	65		390
392	389 ರಿಂದ ಹೊರಟ ಸಕ್ಕರೆ (d)	ಡಿಟೋ	94·90	1·74	..	1·50	64·60	...	15·2	79·8	85·6	67	6·0	42		392
331	2ನೆ ತಾಕಿನ ಹಾಲು ...		17·40	0·86	18·9	..	..	...	...	...	..	...	...	..		331
370	3[illegible]1 ರಿಂದ ಬೇಯಿಸಿದ ಜೋನಿ (a)		80·25	4·63	..	..		....	...	...		...	...	...		370
371	370 ರಿಂದ ಹೊರಟ ಸಕ್ಕರೆ ..	7·48 ..	98·10	0·45	..	0·26	56·80	58·00	18·5	75·30	80·5	18	3·7	80	ಕಿರದು.	371
372	ಡಿಟೋ	ಡಿಟೋ ..	98·50	0·40	..	..	56·80	...	18·5	75·30	80·5	14	3·2	67	ಹಸನು.	372
373	331ರಿಂದ ಬೇಯಿಸಿದ ಕಾಕಂಬಿ (b)		81·20	4·46	..	..	..	...	...	...	..	...	...	...		373
374	373 ರಿಂದ ಹೊರಟ ಸಕ್ಕರೆ ...	ತೊಳೆಯದ್ದು ...	97·40	0·80	..	0·43	..	..	...	..	..	25	5·7	50	ಕಿರದು.	374
375	ಡಿಟೋ ...	ಡಿಟೋ ...	97·10	1·00	.	0·49	86·00	...	13·7	81·7	87·3	25	5·9	50	ಹಸನು.	375
376	375 ರಿಂದ ಹೊರ ಜೋನಿ		53·50	10·20	..	..	..	...	...	...	..	...	...	..		376
377	373 ರಿಂದ ಹೊರಟ ಸಕ್ಕರೆ	2·31 ...	95·00	0·80	..	0·35	63·5	68·87	15·7	79·2	84·6	20	4·6	63		377
393	ಎಲ್ಲಾ ರಖಂ ಜೋನಿಗಳನ್ನ ಕೂಡಿಸಿ ಅದರಿಂದ ಹೊರಟ ಸಕ್ಕರೆ.		86·00	4·06	..	..	(1) 4·02	...	...	...	..	...	...	...		393
397	2ನೆ F ತಾಕಿನ ಹಾಲು ...		15·50	1·08	17·7	..	..	...	....	...	..	...	...	.		397
398	397 ರಿಂದ ಬೇಯಿಸಿದ ಕಾಕಂಬಿ.		73·35	9·40	..	..	..	...	....	...	..	...	...	...		398
459	398 ರಿಂದ ಹೊರಟ ಸಕ್ಕರೆ ..	ತೊಳೆಯದ್ದು	96·50	3·70	..	..	62·3	....	16·2	78·5	83·9	73	11	34		459
461	459 ರಿಂದ ಹೊರಟ ಜೋನಿ ...		46·50	18·50	..	..	...	...	...	....	..	...	...	...		461
460	398 ರಿಂದ ಹೊರಟ ಸಕ್ಕರೆ	ಡಿಟೋ ..	89·95	3·70	..	..	63·3	...	15·7	79·0	84·4	74	11	32		460
462	460 ರಿಂದ ಹೊರಟ ಜೋನಿ		45·10	20·30	..		...	...	...	...	..	...	...	..		462
394	393 ಡಿಟೋ		53·75	12·50	..		..	...	...	...	..	...	...	.		394
452	394 ರಿಂದ ಬೇಯಿಸಿದ ಕಾಕಂಬಿ (2)		59·50	13·50	..	..	..	...	...	...	..	...	...	..		452
453	452 ರಿಂದ ಹೊರಟ ಸಕ್ಕರೆ ..	ಡಿಟೋ ...	86·50	5·1	..	..	..	...	46·9	...	..	168	24	8		453
456	453 ರಿಂದ ಹೊರಟ ಜೋನಿ ...		32·30	27·7	..	..	...	...	...	...	..	...	...	..		456
454	452 ರಿಂದ ಹೊರಟ ಸಕ್ಕರೆ.	ಡಿಟೋ ...	87·00	5·2	..	..	...	...	47·4	...	..	112	24	$8\frac{1}{2}$		454
457	455 ರಿಂದ ಹೊರಟ ಜೋನಿ ...		31·70	27·7	..	..	..	...	...	...	..	...	...	..		457
455	452 ರಿಂದ ಹೊರಟ ಸಕ್ಕರೆ ...	ಡಿಟೋ ..	85·90	5·3	..	..	..	...	50·5	....	..	124	26	8		455
	ಎಲ್ಲಾ ಬೆಲ್ಲಗಳ ಸರಾಸರಿ ಬೆಲ್ಲ ...		81·63	5·48	..	.	.	..	...	...		...	...	...		
	ಈ ತಖ್ತೆಯಲ್ಲಿನ ಸಕ್ಕರೆಗಳ ಸರಾಸರಿ ಸಕ್ಕರೆ.		95·80	1·39	..	..	62·16	...	...	..	83·78	...	...	...		

(1) ಶರ್ಕರ ವಿಭಾಗ್ಯದ ಪರಿಮಾಣದಮೇಲೆ ಲೆಕ್ಕಾಚಾರ ಮಾಡಿದೆ.
(2) 100 ಪೌಂಡುಗಳು ಬೇಯಿಸಿದ್ದಕ್ಕೆ 87·7 ಪೌಂಡುಗಳು ಕಾಕಂಬಿಯಾಯಿತು.

44. ಚರಕಿ ಕಾಕಂಬಿಯಿಂದ ಜೋನಿಯನ್ನು ವಿಂಗಡಿಸಿ ಸಕ್ಕರೆ ಮಾಡಲು ಹೋದವರ್ಷ 18 ಅಂಗುಲ ಪುಟ್ಟಿಯುಳ್ಳ ಕ್ರಮವಾದ ಸಕ್ಕರೆ ಮಾಡುವ ಚರಕಿಯನ್ನೇ ಉಪಯೋಗಿಸಿತು. ಅದನ್ನು ಬೇಕಾದಷ್ಟು ಬೇಗನೆ ಕೈಯಿಂದ ತಿರುಗಿಸುವುದಕ್ಕೋಸ್ಕರ ಅದಕ್ಕೆ ಹಲ್ಲುಚಕ್ರಗಳನ್ನು ಜೋಡಿಸಿ ಏರ್ಪಾಟು ಮಾಡಿತ್ತು. ಆದರೆ ಸಕ್ಕರೆ ಮಾಡುವದಕ್ಕೆ ಬೇಕಾದಷ್ಟು ಜಲ್ಡಿಯಾಗಿ ಅದನ್ನು ತಿರುಗಿಸುವುದು ಕಷ್ಟವಾಗಿ ಕಂಡು ಬಂದುದರಿಂದ ಅದನ್ನು ಉಪಯೋಗಿಸಲು ಮಾಡಿದ ಯತ್ನವೆಲ್ಲ ಸಾಗದೆ ಹೋಯಿತು. ಈ ವರ್ಷ ಪರೀಕ್ಷಾಕೆಲಸಕ್ಕೆಂದು ಅಮೆರಿಕಾದೇಶದಲ್ಲಿ ತಯಾರಾದ 10 ಅಂಗುಲದ ಪುಟ್ಟಿಯುಳ್ಳ ಒಂದು ಕೈಚರಕಿಯನ್ನು ಉಪಯೋಗಿಸಿತು. ಅದು ಒಂದು ನಿಮಿಷಕ್ಕೆ 1,500 ಸುತ್ತುಗಳು ತಿರುಗುವಂತಾದ್ದು ಅದನ್ನು ಪೂರಾ ತುಂಬಿದಾಗ ಒಂದು ಸಲಕ್ಕೆ 11 ಪೌಂಡ್ ಕಾಕಂಬಿಯನ್ನು ಅದರಲ್ಲಿ ಹಾಕಿ ತಿರುಗಿಸಿ ಹೆಚ್ಚುಕಮ್ಮಿ 7 ಪೌಂಡ್ ಸಕ್ಕರೆ ಇಳಿಸಬಹುದು. ಇಷ್ಟು ಸ್ವಲ್ಪ ಸಕ್ಕರೆಯನ್ನು ವಿಂಗಡಿಸಬೇಕಾದರೆ ಬಹಳ ಕಷ್ಟಪಡಬೇಕಾಗಿದ್ದುದರಿಂದ ಸ್ವಲ್ಪ ಹಾಲನ್ನು ಮಾತ್ರ ಕಾಕಂಬಿಯಾಗಿ ಬೇಯಿಸಿ ಮಿಕ್ಕದ್ದನ್ನು ಬೆಲ್ಲ ಮಾಡಿದ್ದಾಯಿತು. ಈ ಚರಕಿಯು ಸಕ್ಕರೆ ತಯಾರಿಗಾಗಿ ಮಾಡಿದ್ದಲ್ಲವಾದುದರಿಂದ ಹೀಗಾಯಿತು. ಈಗಿನವರಿಗೂ ಪರೀಕ್ಷಿಸಿದ್ದರಲ್ಲಿ ವ್ಯಾಪಾರಕ್ಕೆಂದು ಹೆಚ್ಚಾಗಿ ಸಕ್ಕರೆಮಾಡಲು ಈ ಕೈಚರಕಿಗಳನ್ನು ಉಪಯೋಗಿಸುವುದಕ್ಕೆ ಆಗಲಾರವೆಂದು ತೋರುತ್ತದೆ—ಈ ಸಕ್ಕರೆಯು ಬೆಲ್ಲಕ್ಕಿಂತ ಹಸನಾಗಿರುವುದಲ್ಲದೆ ಮೇಲಿನ ತಃಖ್ತೆಯ 12ನೆ ಕಲಮಿನಲ್ಲಿ ತೋರಿಸಿರುವಂತೆ ಅದನ್ನು ಮಾಡಿದ ಹಾಲಿನಿಂದಲೇ ತಯಾರುಮಾಡಬಹುದಾದ ಬೆಲ್ಲದ ಪ್ರಮಾಣದೊಂದಿಗೆ ಅದರ ಪ್ರಮಾಣವನ್ನು ಹೋಲಿಸಿ ನೋಡಿದ್ದರಲ್ಲಿ ಸಕ್ಕರೆ ತಯಾರುಮಾಡುವುದು ಬಹಳ ಅನುಕೂಲವಾಗಿ ಕಂಡುಬಂದಿದೆ. ಆದಕಾರಣ ಯಂತ್ರದಿಂದ ನಡೆಸುವ ದೊಡ್ಡಚರಕಿಯನ್ನು ಇಟ್ಟುಕೊಂಡು ಈ ಪರೀಕ್ಷೆಗಳನ್ನು ಕೂಡಿದಮಟ್ಟಿಗೂ ಶೀಘ್ರದಲ್ಲಿಯೇ ತಿರಿಗಿ ಮಾಡುವುದು ಒಳ್ಳೇದೆಂದು ತೋರುತ್ತದೆ—ಚರಕಿಯನ್ನು ತಿರಿಗಿಸುವುದಕ್ಕೆ ಹೊಗೆಯಂತ್ರವನ್ನು ಉಪಯೋಗಿಸಲು ಸಾದೆಗೆ ಅನುಕೂಲವಿಲ್ಲದ ಪಕ್ಷದಲ್ಲಿ ಸೀಮೆಯೆಣ್ಣೆಯನ್ನು ಉರಿಸಿ ನಡೆಸುವ ಯಂತ್ರವನ್ನು ಉಪಯೋಗಿಸಬೇಕಾಗುತ್ತದೆ.

45. ಮೇಲೆ ಕೊಟ್ಟಿರುವ ತಃಖ್ತೆಯಲ್ಲಿ 372ನೆ ನಂಬರು ಸಕ್ಕರೆಯೇ ಉತ್ತಮವಾದ ರಖಮು. ಚರಕಿಯಲ್ಲಿ ತಯಾರಾದ ಕಚ್ಚಾ ಸಕ್ಕರೆಯ ಮಾದ್ರಿಗಳ ಪೈಕಿ ಅದು ಬಹು ಮೇಲಾದುದು. ಚರಕಿಯಲ್ಲಿ ಅದನ್ನು ತಿರಿಗಿಸುವಾಗ ಅದರ ತೂಕದಲ್ಲಿ ಸೇಕಡಾ $7\frac{1}{2}$ಯಂತೆ ನೀರನ್ನು ಬಿಟ್ಟು ಅದನ್ನು ತೊಳೆದದ್ದೇ ವಿನಾ ಅದಕ್ಕೆ ಮತ್ತೇನೂ ಹೆಚ್ಚು ಕೆಲಸವನ್ನು ಮಾಡಲಿಲ್ಲ. ತೊಳೆದಬಗೆ ಹೇಗೆಂದರೆ—ಕಾಕಂಬಿಯನ್ನು ಚರಕಿಯಲ್ಲಿ ಹಾಕಿ ತಿರುವಿ ಅದರಲ್ಲಿದ್ದ ಜೋನಿಯನ್ನೆಲ್ಲಾ ತೆಗೆದಮೇಲೆ ಚರಕಿಯು ತಿರುಗುತ್ತಿರುವ ಹಾಗೆಯೇ ಅದರೊಳಕ್ಕೆ ಸ್ವಲ್ಪ ನೀರನ್ನು ಹಾಕಲು ಅದು ಸಕ್ಕರೆಯಲ್ಲಿ ಬೆರತು ಉಳಿದಿದ್ದ ಜೋನಿಯನ್ನೆಲ್ಲಾ ತೊಳೆಕೊಂಡು ಹೊರಕ್ಕೆ ಬರುವುದು. ಹೀಗೆ ತೊಳೆದ ಸಕ್ಕರೆಯನ್ನು 6–7 ಗಂಟೆಯವರೆಗೂ ಒಣಗಿಸಿ ಅದರಲ್ಲಿರುವ ದೊಡ್ಡ ಹಳುಕುಗಳನ್ನು ಸಣ್ಣ ಹಳುಕುಗಳನ್ನು ವಿಂಗಡಿಸಲು ಜಂದರಿಯಾಡಿದ್ದಾಯಿತು. ಬಳ್ಳಾರಿಯಲ್ಲಿ ನಡೆದ ವಸ್ತುಪ್ರದರ್ಶನಕ್ಕೆ ಕಳುಹಿಸಿಕೊಟ್ಟ ಸಕ್ಕರೆಗಳ ಪೈಕಿ ಇದು ಒಂದು ಮಾದ್ರಿ. ಇದರಲ್ಲಿ ಶೇಕಡ ಅರ್ಧಕ್ಕಿಂತ ಕಮ್ಮಿಯಾಗಿ ಶರ್ಕರವಿದ್ರಾವ್ಯವು ಇತ್ತು. 372ನೆ ನಂಬರುಳ್ಳ ಮಾದ್ರಿಯನ್ನು ಜಂದರಿಯಾಡಿ ವಿಂಗಡಿಸುವಾಗ ಉಳಿದ ಸಕ್ಕರೆಯೇ 371ನೆ ನಂಬರು ರಖಮು. ಈ ಎರಡು ರಖಮುಗಳೂ ಗುಣದಲ್ಲಿ ಒಂದೇಯಾದರೂ 371ನೆ ನಂಬರು ಮಾತ್ರ ಸ್ವಲ್ಪ ಕಪ್ಪು ಛಾಯೆಯುಳ್ಳದ್ದು. ಆದರೆ ಈ ಸಂವತ್ಸರ ನಡೆಸಿದ ಕೆಲಸದ ಫಲಿತಾಂಶವನ್ನು ನೋಡಿದರೆ ಚರಕಿಯಲ್ಲಿ ಕಚ್ಚಾ ಸಕ್ಕರೆಯನ್ನು ತೊಳೆಯುವದು ಲಾಭಕರವಾದುದೆಂದು ಹೇಳಲಾಗುವುದಿಲ್ಲ.

46. ಸಕ್ಕರೆಯ ರಖಮುಗಳಿಂದ ವಿಂಗಡಿಸಿದ ಜೋನಿ ಎಲ್ಲವನ್ನು ಒಂದಾಗಿ ಬೆರಸಿ ಇಟ್ಟಿರಲು ಒಂದು ತಿಂಗಳ ಮೇಲೆ ಅದರಿಂದ ಸಣ್ಣ ಹಳಕುಗಳುಳ್ಳ ನಯತರವಾದ ಸಕ್ಕರೆಯು ಉಂಟಾಯಿತು. ಇದನ್ನು ವಿಂಗಡಿಸಬೇಕಾದರೆ ಜೋನಿಯೆಲ್ಲವನ್ನು ಚರಕಿಯಲ್ಲಿ ಹಾಕಿ ತಿರುಗಿಸಿ ತೆಗೆಯಬೇಕಾಯಿತು. ಈ ರೀತಿಯಲ್ಲಿ ಸಿಕ್ಕಿದ ಸಕ್ಕರೆಯೇ 393ನೆ ನಂಬರಿನ ಮಾದರಿ. ಇದರಲ್ಲಿ ಬಹಳವಾಗಿ ಶರ್ಕರವಿದ್ರಾವ್ಯವಿತ್ತು. ಇದು 452–454ನೆ ನಂಬರ್ ರಖಮುಗಳಂತೆಯೇ ಇತ್ತು. ಈ 452–454ನೆ ನಂಬರುಳ್ಳ ರಖಮುಗಳಿಗೆ ದುಯ್ಯಂ ಸಕ್ಕರೆಯೆಂದು ಹೆಸರು ಕೊಟ್ಟಿರುತ್ತಾರೆ. ಇದು ಮೇಲೆ ವಿವರಿಸಿದಂತೆ ಕಚ್ಚಾ ಸಕ್ಕರೆಯನ್ನು ವಿಂಗಡಿಸುವುದರಲ್ಲಿ ಹೊರಟ ಜೋನಿಯನ್ನು ಮತ್ತಷ್ಟು ಕಾಸಿ ನಾಲ್ಕಾರು ವಾರಗಳ ವರಿಗೂ ಅಲುಗಿಸದೆ ಒಂದು ಕಡೆಯಲ್ಲಿಟ್ಟಿರಲು ಅದರಿಂದ ಕಲ್ಲಾದ ಸಕ್ಕರೆ ಮೇಲೆ ಕಂಡ 393ನೆ ನಂಬರ್ ರಖಮನ್ನು ಶೋಧಿಸುವುದರಿಂದ ಹೊರಟ ಜೋನಿಯು ಸ್ವಲ್ಪವಾಗಿದ್ದುದರಿಂದ ಸುಲಭವಾಗಿ ಬೇಯಿಸಲು ಆಗಲಿಲ್ಲ. ಏನೋ ಕಾರಣದಿಂದ ಅವೆಲ್ಲವೂ ಸೀದುಹೋಯಿತು. ಆದುದರಿಂದಲೇ ಅದರಿಂದ ಮಾಡಿದ ಎರಡನೆ ಬೇಗೆಯ ಸಕ್ಕರೆಯು ಬಹಳ ಕಪ್ಪಾಯಿತು. $64\frac{3}{4}$ ಪೌಂಡು ಜೋನಿಯನ್ನು ಬೇಯಿಸಿದುದರಿಂದ $52\frac{1}{4}$ ಪೌಂಡ್ ಗಳ ಎರಡನೆ ಬೇಗೆಯ ಕಾಕಂಬಿ ಆಯಿತು. ಇದರಿಂದ ಶೇಕಡ 19ರಷ್ಟು ನೀರು ಇಂಗಿಹೋದಂತಾಯಿತು. ಸರಾಸರಿಯಲ್ಲಿ 10 ಪೌಂಡುಗಳ ಎರಡನೆ ಬೇಗೆಯ ಕಾಕಂಬಿಯಿಂದ 4·83 ಪೌಂಡುಗಳ ಎರಡನೆ ಬೇಗೆಯ ಸಕ್ಕರೆಯಾದಂತಾಯಿತು. ಅಥವಾ

ಮೊದಲುಸಲ ಹಿಂಗಡಿಸಿದ ಜೋನಿಯ ಪೈಕಿ ಶೇಕಡ 31ರಷ್ಟು ಎರಡನೆ ಬೇಗೆಯ ಸಕ್ಕರೆಯಾಯಿತು. ಆದ್ದರಿಂದಲ್ಲ ಜೋನಿಯನ್ನು ಹೆಪ್ಪುಗಟ್ಟಲು ಇಟ್ಟಿದ್ದರಿಂದ ಹೊರಟ ಶೇಕಡ 41ರಷ್ಟು ಸಕ್ಕರೆಯನ್ನು ಇದಕ್ಕೆ ಸೇರಿಸಿದರೆ ಮೊದಲು ಹಿಂಗಡಿಸಿದ ನೂರು ಪೌಂಡು ಜೋನಿಯಿಂದ 43 ಪೌಂಡುಗಳ ಸಕ್ಕರೆ ಆದಂತಾಯಿತು. ಈ ಅಂಕಿಯ ಆಧಾರದಮೇಲೆ 10ನೆ ಕಲಮಿನಲ್ಲಿ ನಮೂದಿಸಿರುವ ಎರಡನೆ ಬೇಗೆಯ ಸಕ್ಕರೆಯ ಪ್ರಮಾಣವನ್ನು ಲೆಖ್ಖಾಮಾಡಿದೆ. ಈ ಸಂವತ್ಸರ ತಯಾರಾದ ಬೆಲ್ಲದ ಪೈಕಿ ಬಹಳ ಮೇಲೂ ಅಲ್ಲದೆ ಕೀಳೂ ಅಲ್ಲದೆ ಮಧ್ಯಸ್ಥವಾಗಿರುವ ನೂರು ಪೌಂಡು ಬೆಲ್ಲ ಆಗಬಹುದಾದ ಹಾಲಿನಿಂದ ತಯಾರಾದ ಮೊದಲು ಎರಡನೆ ಬೇಗೆಯ ಚರಕಿ ಸಕ್ಕರೆಯ ಪ್ರಮಾಣವು 12ನೆ ಕಲಮಿನಲ್ಲಿ ಕೊಟ್ಟಿರುವ ಅಂಕಿಗಳಿಂದ ತಿಳಿದುಕೊಳ್ಳಬಹುದು. ನಾನಾ ರಖಮು ಬೆಲ್ಲಗಳ ವಿಗ್ರಹದ ತಪ್ಸೀಲು 2ನೆ, 3ನೆ ನಂಬರ ತಃಖ್ತೆಗಳಲ್ಲಿ ಕೊಟ್ಟಿದೆ. ಬಾಕಿ ನಿಂತದ್ದೆಲ್ಲಾ ಜೋನಿಯಾಯಿತು. ಮೇಲೆ ಕಂಡ ತಃಖ್ತೆಯ 456—457ನೆ ನಂಬರುಗಳನ್ನು ನೋಡಿದರೆ ಈ ಜೋನಿಯಲ್ಲಿ ಶೇಕಡಾ 27·7ರಷ್ಟು ಶರ್ಕರವಿದ್ರಾವ್ಯವೂ 32ರಷ್ಟು ಸಕ್ಕರೆಯೂ ಇದೆಯೆಂದು ಗೊತ್ತಾಗುತ್ತದೆ. ಜೋನಿಯಲ್ಲಿ ಶರ್ಕರ ವಿದ್ರಾವ್ಯಕಿಂತ ಶರ್ಕರವು ಸ್ವಲ್ಪ ಹೆಚ್ಚಾಗಿ ಸೇರಿದೆಯೆಂದು ಇದರಿಂದ ತಿಳಿಯಬರುತ್ತದೆ. ಮೊದಲು ಸರ್ತಿ ಅಜಮಾಯಿಷಿ ಮಾಡಿದ್ದರಲ್ಲಿಯೇ ಇಂತಹ ಮೇಲಾದ ಫಲ ಕಂಡುಬಂದುದರಿಂದ ಬಹು ಸಮರ್ಪಕವಾಗಿರುವುದು. ಮುಂದೆ ನಡೆಸುವ ಪರೀಕ್ಷೆಗಳಲ್ಲಿ ಹಾಲನ್ನು ಕಾಯಿಸುವಾಗ ಉಂಟಾಗುವ ಶರ್ಕರವಿದ್ರಾವ್ಯವು ಬಹಳಮಟ್ಟಿಗೆ ಕಮ್ಮಿಯಾಗುವದೆಂದು ಹಿಂದೆ ನಡೆಸಿದ ಪರೀಕ್ಷೆಗಳ ಅನುಭವದಿಂದ ಹೇಳಬಹುದಾಗಿದೆ. ಇದನ್ನೆಲ್ಲಾ ಆಲೋಚಿಸಿ ಕೊನೆಗೆ ಹೇಳತಕ್ಕದ್ದೇನಂದರೆ ಸುಮಾರಾಗಿ ಬಂಡವಾಳವಿಟ್ಟು ಸಕ್ಕರೆ ತಯಾರಿಗೆ ಉಪಯೋಗವಾದ ಯಂತ್ರಗಳನ್ನು ಕೊಂಡುಕೊಂಡರೆ ಈ ಸೀಮೆಯಲ್ಲಿ ಸಕ್ಕರೆಮಾಡುವ ಕಸಬನ್ನು ಬಹಳವಾಗಿ ಅಭಿವೃದ್ಧಿಗೆ ತರಬಹುದು. ಈಗ ಸಾಮಾನ್ಯವಾಗಿ ಉಪಯೋಗದಲ್ಲಿರುವ (ಒಲೆಯಮೇಲಿಟ್ಟು ಕಾಸುವ) ಕೊಪ್ಪರಿಗೆಗಳಿಗೆ ಬದಲಾಗಿ ಆವಿಯಿಂದ ಕಾಯಿಸುವ ಕೊಪ್ಪರಿಗೆಗಳನ್ನು ಉಪಯೋಗಿಸುವುದು ಒಳ್ಳೇದೆ, ಅವಶ್ಯವೆ ಎಂಬುದನ್ನು ಮುಂದೆ ನಡೆಸುವ ಪರೀಕ್ಷೆಗಳಿಂದ ತಿಳಿಯಬೇಕಾಗಿದೆ.

47. ಕಬ್ಬನ್ನು ಆಲೆಯಾಡುವುದು.—* ಇಕ್ಷು ಶರ್ಕರಕ್ಕಾಗಿ ಕಬ್ಬನ್ನು ಬೆಳೆಯುತ್ತೇವೆ. ಈ ಪದಾರ್ಥವು ಕಬ್ಬಿನಲ್ಲಿ ವಿನಾ ಮತ್ತಾವುದರಲ್ಲಿಯೂ ದೊರೆಯುವದಿಲ್ಲ. ಕಬ್ಬಿನಲ್ಲಿ ಸಣ್ಣ ಸಣ್ಣ ಕೊಳವೆಗಳು ಅಥವಾ ರಂಧ್ರಗಳಿವೆ. ಇವುಗಳತುಂಬಾ ಹಾಲಿದೆ. ಹಾಲನ್ನು ತೆಗೆದ ತರುವಾಯ ಕೊಳವೆಗಳಾಗಿರುವ ಗಟ್ಟಿ ಪದಾರ್ಥವು ಯಾವ ಕೆಲಸಕ್ಕೂ ಬರುವುದಿಲ್ಲ. ಇದನ್ನು ಬೆಲ್ಲ ಬೇಯಿಸುವುದಕ್ಕೆ ಸಾಮಾನ್ಯವಾಗಿ ಉಪಯೋಗಿಸುತ್ತಾರೆ. ಈ ಸಪ್ಪೆ ಅಥವಾ ಬೆಂಡು ಎಂಬುವ ಗಟ್ಟಿ ಪದಾರ್ಥದಲ್ಲಿ ಸ್ವಲ್ಪವೂ ಹಾಲು ನಿಲ್ಲದಂತೆ ತೆಗೆದುಹಾಕಲು ಆಗುವುದಿಲ್ಲ. ಎಷ್ಟು ಬಲವಾದ ಆಲೆಯನ್ನು ಉಪಯೋಗಿಸಿದರೂ ಸಪ್ಪೆಯಲ್ಲಿ ಸ್ವಲ್ಪವಾದರೂ ಹಾಲು ನಿಲ್ಲುತ್ತದೆ. ಹೀಗೆ ತುಸ ಹಾಲು ನಿಂತ ಸಪ್ಪೆಗೆ ಈ ದೇಶದಲ್ಲಿ ಹೀದೆ (begasse) ಯನ್ನುವರು. ಇತರ ಸ್ಥಳಗಳಲ್ಲಿ ಹಿಪ್ಪಿಯನ್ನುವರು. ಒಂಭತ್ತು ಕಣೆಗಳಿರುವ ಬಹು ಬಲವಾದ ಆಲೆಯಿಂದ ಹೊರಡುವ ಹೀದೆಯಲ್ಲೂ ಶೇಕಡಾ 5ಕ್ಕಿಂತ ಹೆಚ್ಚಾಗಿಯೇ ರಸವು ನಿಂತುಹೋಗುತ್ತದೆ. ಆಲೆಯು ದೊಡ್ಡದಾಗಿದ್ದು ಕಣೆಗಳನ್ನು ಬಿಗಿಮಾಡಿದಷ್ಟೂ ಹೀದೆಯಲ್ಲಿ ಹಾಲು ನಿಲ್ಲುವುದು ಕಮ್ಮಿಯಾಗುತ್ತದೆ. ಈ ಒಂಭತ್ತು ಕಣೆಗಳಿರುವ ಆಲೆಗಳಿಂದ ಕಬ್ಬನ್ನು ಬಹಳ ಬಲವಾಗಿ ಹಿಂಡಬಹುದಾದ ಒಂದೇ ಅನುಕೂಲವಲ್ಲ. ಮೊದಲು ಮೂರು ಕಣೆಗಳನ್ನು ದಾಟದಾಗಲ್ಲ ಕಬ್ಬಿನಮೇಲೆ ನೀರು ಚಿಮುಕಿಸುವದಕ್ಕೆ ಏರ್ಪಾಡು ಮಾಡಿರುವದರಿಂದ ಕಬ್ಬಿನೊಳಗಿನ ಹಾಲು ನೀರಿನೊಂದಿಗೆ ಬೆರತು ತೆಳುವಾಗಿ ಹೀದೆಯಲ್ಲಿ ನಿಲ್ಲುವ ಹಾಲೂ ತೆಳುವಾಗುವುದು. ಆದುದರಿಂದ ಹೀದೆಯಲ್ಲಿ ನಿಂತುಹೋಗುವ ಸಕ್ಕರೆಯು ಕಮ್ಮಿಯಾಗುವುದು. ಹೀದೆಯು ಕಬ್ಬಿನ ಹಾಲಿನಲ್ಲಿ ಅದ್ದಿ ಹಿಂಡಿದ ಅರಳೆಯಂತೆ, ಅದನ್ನು ಬಲವಾಗಿ ಹಿಂಡಿದಷ್ಟೂ ಅದರಿಂದ ಹಾಲು ಹೆಚ್ಚಾಗಿ ಹೊರಡುವುದು. ಹೀಗೆ ಹಿಂಡಿದ್ದನ್ನು ತಿರಿಗಿ ನೀರಿನಲ್ಲಿ ಅದ್ದಿ ಮುಂದಿನಂತೆಯೇ ಹಿಂಡಿದರೆ ಮೊದಲಿಗಿಂತ ತೆಳುವಾದ ರಸವು ಹೊರಡುವುದು. ಹೀಗೆಯೇ ಬಹಳಸಲ ಮಾಡಿದರೆ ಕೊನೆಗೆ ಅರಳೆಯಲ್ಲಿ ಕಬ್ಬಿನ ರಸವು ಸಾಮಾನ್ಯವಾಗಿ ಇಲ್ಲದೇನೆ ಹೋಗುತ್ತದೆ. ಹೀಗೆ ಮೂರು ಕಣೆಗಳ ಒಂದು ಒಳಿಯಿಂದ ಮತ್ತೊಂದು ಒಳಿಗೆ ಕಬ್ಬುಹಾದು ಹೋಗುವಾಗ ಅದರಮೇಲೆ ನೀರನ್ನು ಚಿಮುಕಿಸುವುದರಿಂದ ಹೆಚ್ಚಾಗಿ ರಸವನ್ನು ತೆಗೆಯಬಹುದು. ಹಾಗೆ ಮಾಡದಿದ್ದರೆ ಆಗಲಾರದು. ಆಲೆಯು ದೊಡ್ಡದಾಗಿಯೂ ಬಲವಾಗಿಯೂ ಇದ್ದಷ್ಟೂ ಹೀದೆಯಲ್ಲಿ ನಿಂತುಹೋಗಿ ನಷ್ಟವಾಗುವ ಹಾಲು ಕಡಿಮೆಯಾಗುವುದು. ಸ್ವಲ್ಪ ಅರಳೆ ಸ್ವಲ್ಪ ಹಾಲನ್ನು ಮಾತ್ರ ಹೀರಿಕೊಳ್ಳುತ್ತದೆ. ಅರಳೆ ಹೆಚ್ಚಾಗಿದ್ದಲ್ಲಿ ಹೆಚ್ಚಾಗಿ ಹಾಲನ್ನು ಹೀರುತ್ತದೆ. ಹೀಗೆಯೇ ಕಬ್ಬಿನಲ್ಲಿ ಬೆಂಡು ಸ್ವಲ್ಪವಾಗಿದ್ದಹಾಗೆಲ್ಲಾ ಹೀದೆಯಿಂದ ಹಾಲು ನಷ್ಟವಾಗುವುದು ಕಮ್ಮಿ. ಆದುದರಿಂದ ಇತರ ಸಂಗತಿಗಳು ಒಂದೇ ವಿಧವಾಗಿರಲು ಹೆಚ್ಚಾಗಿ ಬೆಂಡಿರುವ ಕಬ್ಬಿಗಿಂತಲೂ ಸ್ವಲ್ಪವಾಗಿ ಬೆಂಡಿರುವ ಕಬ್ಬು ಒಳ್ಳೇದು. ಆದುದರಿಂದ ಆಲೆಯ ಯೋಗ್ಯತೆಯನ್ನು ಪರೀಕ್ಷಿಸುವಾಗ ಈ ವಿಷಯವನ್ನು ಯೋಚಿಸಬೇಕು.

* ಸಕ್ಕರೆಯನ್ನು ಅನೇಕ ಪದಾರ್ಥಗಳಿಂದ ತಯಾರುಮಾಡುತ್ತಾರೆ. ಅವುಗಳಲ್ಲಿ ಕಬ್ಬು ಮುಖ್ಯವಾದದ್ದು. ಇದರಲ್ಲಿ ತಯಾರುಮಾಡುವ ಸಕ್ಕರೆಗೆ ಕಬ್ಬಿನ ಸಕ್ಕರೆಯೆಂದು ಹೆಸರು. ಕಬ್ಬಿನಲ್ಲಿರುವ ಸಕ್ಕರೆಯಾಗುವ ಪದಾರ್ಥಕ್ಕೆ ಇಕ್ಷುಶರ್ಕರವೆಂದು ಹೆಸರು.

5ನೇ ನಂಬರ ತಃಖ್ತೆ.

ಸಾಧಾರಣವಾದ ಮೂರು ಕಬ್ಬಿಣದ ಕಣೆಗಳ ಆಲೆಯಲ್ಲಿ ಕಬ್ಬಾಡಿಸಿದಾಗ ಹಿಪ್ಪೆಯಲ್ಲಿ ಉಳಿದ ಹಾಲಿನ ಶೇಕಡ—

1	2	3	4	5	6	7	8	9	10
281	343¾	200½	58·0	137½	60·2	20·9	59·06	10.08	31·9
283	414¼	252	60·8	148	64·3	21·0	56·51	10·17	28·4
285	431	259½	60·0	162½	62·3	21·0	56·89	10·35	30·3
289	451	276½	61·3	166	63·2	20·2	56·70	10·66	29·3
291	472	289½	61·5	170	64·0	20·0	59·59	9·18	29·5
292 (5)	4[illegible]0½	224	47·7	215	52·3	19·6	55·65	14·69	38·7
294	413¼	283¼	68·6	120	71·0	20·6	55·80	8·62	22·3
296	406	262½	64·5	137½	66·2	19·9	59·55	8·69	28·5
298	178	128	71·9	46¼	74·1	20·6	57·41	7·17	20·2
300	467¾	284½	60·8	179¾	61·6	21·1	51·61	13·28	29·0
302	428½	280	65·3	141	67·1	21·1	56·73	9·24	26·1
304	45[illegible]	284¾	62·3	162¼	64·5	20·9	51·26	12·50	26·3
306	473	314½	86·4	149½	68·4	21·3	53·75	10·02	24·0
307	472	311½	66·0	151¼	67·8	20·1	55·50	9·28	24·8
309	370½	251	67·7	111½	70·0	20·7	57·63	8·20	23·7
311	433¾	285	65·7	139	68·0	20·8	53·86	10·24	24·2
313 (6)	494	282½	57·2	200½	59·4	17·9	47·64	17·04	28·4
316	379½	253½	66·3	117½	69·0	20·6	51·40	10·93	22·5
318	377¼	253¾	67·1	118	78·8	19·8	56·94	9·06	24·4
322	353	225	63·7	120	66·0	20·4	52·59	11·54	25·4
324	386	269½	69·2	118	69·4	19·6	53·75	10·15	22·8
329	431¾	283½	65·6	136	68·5	19·9	52·04	11·04	23·0
331	454	298½	65·7	148	67·4	18·9	52·30	11·56	23·7
332	416½	266	63·9	137½	67·0	19·0	53·95	11·02	24·7
336	469½	314	66·8	138	70·6	18·6	53·71	10·00	21·6
395 (7)	479	314	65·5	153½	67·9	17·0	60·90	8·55	25·8
397 (7)	446	286	64·1	147½	66·9	17·7	59·80	9·04	26·4
399 (7)	484	318	65·7	152	68·6	17·4	58·50	8·75	24·8
401 (7)	510	328	64·3	172½	66·2	17·5	60·30	8·75	27·4
403 (7)	5[illegible]9	342	64·6	173	67·3	17·9	60·50	8·60	26·4
405 (7)	418	274	65·5	128	69·4	17·1	58·20	9·12	23·6
407 (7)	408	269	65·9	131	67·9	18·5	62·00	7·68	26·8
409 (7)	537	340	63·3	189	64·8	15·1	50·30	9·71	[illegible]8·2

(1) ತೆಗೆದಹಾಲಿನ ಶೇಕಡಾ ಕಂಡುಹಿಡಿಯುವರೀತಿ:—ಹಾಲಿನ ತೂಕವನ್ನು 100ರಿಂದ ಗುಣಿಸಿ ಕಬ್ಬಿನತೂಕದಿಂದ ಭಾಗಿಸುವುದು.

(2) ಹಿಪ್ಪೆಯೆಂದರೆ ಹಾಲುಹಿಂಡಿದ ತರುವಾಯ ಆಲೆಯಿಂದ ಹೊರಡುವ ಕೆಲಸಕ್ಕೆ ಬಾರದಕಬ್ಬು.

(3) ಹಿಪ್ಪೆಯತೂಕದ ಆಧಾರದಮೇಲೆ ತೆಗೆದಹಾಲಿನ ಶೇಕಡಾವನ್ನು ಕಂಡುಹಿಡಿಯುವರೀತಿ:—ಹಿಪ್ಪೆಯ ತೂಕವನ್ನು 100ರಿಂದ ಗುಣಿಸಿ ಕಬ್ಬಿನತೂಕದಿಂದ ಭಾಗಿಸಿ ಲಬ್ಧವನ್ನು 100ರಿಂದ ಕಳೆಯುವದು.

ಹಿಪ್ಪೆಯಿಂದ ಹಾಲು ಬಹುಜೇಗನೆ ಆರಿ ಹೋಗುತ್ತಿರುವುದರಿಂದ 4ನೆ ಕಲಂಮಿನಲ್ಲಿ ನಮೂದಿಸಿರುವ ಸಂಖ್ಯೆಯಷ್ಟು 6ನೆ ಕಲಂಮಿನಲ್ಲಿ ಕೊಟ್ಟಿರುವ ಅಂಕಿಯೂ ಖಂಡಿತವಾದುದಲ್ಲ.

6ನೆ ನಂಬರ್-ತಖ್ತೆ.

ಆಲೆಯಾಡುವದಕ್ಕಿಂತ ಮುಂಚೆ ಕಬ್ಬನ್ನು ಮುರಿಯುವದರಿಂದುಂಟಾಗುವ ಫಲವನ್ನು ತೋರಿಸುವ ತಖ್ತೆ. 1905ನೇ ಇಸವಿ ಏಪ್ರಿಲ್ 22ನೆ ತಾರೀಖಿನಲ್ಲಿ ಕಡಿದು ಬೇರೆಬೇರೆ ಕಾಲಗಳವರಿಗೂ ಇಟ್ಟಿದ್ದು ಆಲೆಯಾಡಿದ ರಸವನ್ನು ವಿಗ್ರಹ ಮಾಡಿದ ಫಲಿತಾರ್ಥ.

ನಂಬರು.	ತಾರೀಖು.	ತೂಕ.		ಶರ್ಕರದ ಶೇಕಡ.	ಶರ್ಕರ ವಿದ್ರಾವ್ಯದ ಶೇಕಡ.	ಗಟ್ಟಿ ಪದಾರ್ಥಗಳ ಶೇಕಡ.	ಕಬ್ಬಿನಲ್ಲಿ ಶೇಕಡಾ 10ರಷ್ಟು ಬೆಂಡು ಇದೆಯೆಂದು ವಜಾ ಮಾಡಿ ಉಳಿದ ತೂಕದಮೇಲೆ ಲೆಕ್ಕಾ ಚಾರ ಮಾಡಿದ್ದರಲ್ಲಿ ಬಂದದ್ದು.			ಷರಾ.
		ಮೊದಲಿದ್ದ ತೂಕ ಪೌಂಡುಗಳು.	ವಿಗ್ರಹಿಸಿದ ನಂತರ ಪೌಂಡುಗಳು.				ಶರ್ಕರದ ಶೇಕಡ.	ಶರ್ಕರ ವಿದ್ರಾವ್ಯದ ಶೇಕಡ.	ಒಟ್ಟು ಗಟ್ಟಿ ಪದಾರ್ಥಗಳ ಶೇಕಡ.	
338	22 4 05	26	26	16·40	·87	17·70	16·40	·87	17·7	
339	22 4 05	25¼	25¼	17·30	·87	18·60	17·30	·87	18·6	
340	24 4 05	26¼	25½	13·75	3·67	18·60	13·16	3·51	17·8	
341	26 4 05	26½	24½	14·35	5·20	19·20	12·94	4·69	17·7	
343	28 4 05	24¾	21¾	13·40	6·25	20·80	11·56	5·39	17·9	
344	28 4 05	...	...	15·10	5·81	22·50	...	...	..	ತೆಂಡೆ ಹೊಡೆಯದ್ದೆ ಬಿಟ್ಟಿತ್ತು.
345	1 5 05	21	20	13·35	7·30	22·00	10·87	5·94	17·9	
346	1 5 05	24¾	20½	13·35	7·10	21·70	10·83	5·76	17·6	
347	3 5 05	23	18¼	13·70	7·60	22·20	10·58	5·87	17·1	
348	5 5 05	26	22	13·45	8·50	22·70	11·15	7·05	18·8	
350	7 5 05	21	15½	13·90	8·60	23·80	9·90	6·10	16·9	
351	7 5 05	24	18¼	13·35	8·80	23·70	10·07	6·64	17·9	
352	9 5 05	26½	20	14·70	8·80	24·10	10·70	6·41	17·5	
353	12 5 05	22½	17	12·70	9·40	24·20	9·26	6·85	17·6	
354	1[illegible] 5 05	26½	19¼	14·15	9·20	24·80	9·82	6·38	17·2	
355	15 5 05	24½	16¾	12·95	10·87	25·50	8·38	7·03	16·5	
356	17 5 05	24½	16¾	12·25	10·90	25·40	7·93	7·05	16·4	
357	17 5 05	24¾	17	12·70	10·10	23·90	8·30	6·61	15·6	
358	19 5 05	24½	16¾	15·05	10·50	25·40	6·80	6·79	16·4	
359	25 5 05	37½	23½	7·30	12·80	23·70	4·57	7·50	13·8	ತೆಂಡೆ ಹೊಡೆಯದೆ ಬಿಟ್ಟಿತ್ತು.
360	25 5 05	25½	15½	12·30	11·60	26·60	6·95	6·55	15·0	ಡಿಟೋ.

(4) ಬೆಂಡೆಂದರೆ :—ಕಬ್ಬಿನಿಂದ ರಸವನ್ನೆಲ್ಲಾ ಚೆನ್ನಾಗಿ ತೆಗೆದುಹಾಕಿದ ಮೇಲೆ ಉಳಿಯುವಂತಾದ್ದು.

(5) 292ನೆ ನಂಬರ ರಸವನ್ನು ತೆಗೆದ ಕಬ್ಬು ಕುರಿಗಿಣ್ಣಾಗಿತ್ತು. ಈ ರಕಂಮಿನಲ್ಲಿ ಬೆಂಡು ಹೆಚ್ಚಾಗಿ ಕಂಡುಬಂದು ಕಮ್ಮಿಯಾಗಿ ಹಾಲು ಹೊರಟದ್ದಕ್ಕೆ ಇದೇಕಾರಣ.

(6) 313ನೆ ನಂಬರಿನ ಹಾಲನ್ನು ತೆಗೆದ ಕಬ್ಬು ಸಣ್ಣದಾಗಿ ಗಟ್ಟಿಯಾಗಿರುವ ಚೀಣಕಬ್ಬು ಎಂಬುವ ಜಾತಿ.

(7) 395ನೆ ನಂಬರಿನಿಂದೀಚೆನ ರಕಮುಗಳ ಹೀದೆಗಳನ್ನು ಇತರ ರಕಮುಗಳ ಹೀದೆಗಳಿಗಿಂತ ಬೇಗನೆ ತೂಕಮಾಡಿ ಮೂದರಿ ತೆಗೆದು ಒಣಗಿಸಿದ್ದಾಯಿತು—ಆದುದರಿಂದ ಈ ರಕಮುಗಳ ವಿಷಯವಾಗಿ 9—10ನೆ ಕಲಮುಗಳಲ್ಲಿ ಕೊಟ್ಟಿರುವ ಸಂಖ್ಯೆಗಳು ಅದೇ ಕಲಮುಗಳಲ್ಲಿ ಕೊಟ್ಟಿರುವ ಇತರ ಸಂಖ್ಯೆಗಳಿಗಿಂತ ಸರಿಯಾದವು.

48. ಈ ವರುಷ ನಡೆಸಿದ ಪರೀಕ್ಷೆಗಳಲ್ಲಿ ಉಪಯೋಗಿಸಿದ ಆಲೆಯು ಈ ದೇಶದಲ್ಲೇ ಕಬ್ಬಿಣದಲ್ಲಿ ಮಾಡಿದ್ದು—ಅದಕ್ಕೆ ಮೂರುಕಣೆಗಳಿದ್ದವು—ಅವು 9 ಅಂಗುಲ ಉದ್ದವೂ 6½ ಅಂಗುಲ ಅಡ್ಡಳತೆಯೂ ಉಳ್ಳವು—ಅವುಗಳು ನೆಟ್ಟಗೆ ಜೋಡಿಸಿದ್ದವು—ನಾವು ಮಾಡಿದ ತೂಕ ಮುಂತಾದ ಪರೀಕ್ಷೆಗಳು ಬಹು ಜಾಗರೂಕತೆಯಿಂದ ತಪ್ಪು ಬಾರದಂತೆ ಮಾಡಿದ್ದಪಕ್ಷದಲ್ಲಿ, ಮೇಲ್ಕಂಡ ಪಟ್ಟಿಯ 4 ಮತ್ತು 6ನೆ ಕಲಂಗಳಲ್ಲಿ ಕೊಟ್ಟಿರುವ ಅಂಕಿಗಳು ಒಂದೇಯಾಗಿರಬೇಕು. ಆದರೆ ಒದ್ದೆಬಟ್ಟೆಯನ್ನು ಒಂದೇ ಪದರಲ್ಲಿ ಉದ್ದಕ್ಕೆ ಹರಡಿ ಗಾಳಿಗೆ ಒಡ್ಡಿದರೆ ಬಹುಬೇಗನೆ ತೇವವು ಆರಿಹೋಗುವ ಹಾಗೆ ಕಬ್ಬು ಗಾಣದಲ್ಲಿ ಹಾದು ಸಿಪ್ಪೆಯಾಗಿ ಬಂದಾಗ ಅದರಲ್ಲಿ ಉಳಿದ ರಸವುಬೇಗನೆ ಆರಿಹೋಗುವುದು. ಸಿಪ್ಪೆಯನ್ನು ತೂಕಮಾಡುವದಕ್ಕೆ ಸ್ವಲ್ಪಕಾಲವಾಗುವದ್ದರಿಂದ ಅದರ ತೂಕವು ಆಲೆಯಿಂದ ಹೊರಟಕೂಡಲೇ ಇರುವಷ್ಟು ಹೆಚ್ಚಾಗಿರುವದಿಲ್ಲಾ. ಈ ಕಡಮೆ ತೂಕ ಆಧಾರದ ಮೇಲೆ ಲೆಖ್ಖಾಚಾರವಮಾಡಿ 6ನೆ ಕಲಂಮಿನಲ್ಲಿ ಕೊಟ್ಟಿರುವ ಫಲಿತಾಂಶವು ಅಧಿಕವಾಗಿರುವುದು. ತೂಕಮಾಡೇವುದಕ್ಕೆ ಮುಂಚೆ ತೊಟ್ಟಿಗಳಲ್ಲಿಟ್ಟಿರುವ ಹಾಲು ಸಿಪ್ಪೆಯಲ್ಲಿರುವ ಹಾಲಿನಂತೆ ಬೇಗ ಹೆಚ್ಚಾಗಿಆರಿಹೋಗದೆ ಇದ್ದರೂ ಸ್ವಲ್ಪಮಟ್ಟಿಗಾದರೂ ಕಡಮೆಯಾಗುವುದು. ಆದುದರಿಂದ ಕಬ್ಬಿನ ತೂಕದ ಪೈಕಿ ಗಾಣದಿಂದ ಹಿಂಡಿದ ರಸದ ಅಂಶವನ್ನು ತೋರಿಸುವ ..ನೇ ಕಲಂಮಿನಲ್ಲಿ ಕೊಟ್ಟಿರುವ ಫಲಿತಾಂಶದ ಅಂಕಿಗಳೂ ಸರಿಯಾದವಲ್ಲ—ಅವುಗಳು ಸ್ವಲ್ಪ ಕಮ್ಮಿಯಾಗಿವೆ ನಿಜಸ್ಥಿತಿ ಏನೆಂದರೆ—ನಾಲ್ಕನೇ ಕಲಂಮಿನಲ್ಲಿ ತೋರಿಸಿರುವ ಫಲಿತಾಂಶವೂ ಸರಿಯಲ್ಲ 6ನೆ ಕಲಂಮಿನಲ್ಲಿ ತೋರಿಸಿರ ಫಲಿತಾಂಶವು ಸರಿಯಲ್ಲ. ಇವೆರಡಕ್ಕೂ ಮಧ್ಯೆ 4ನೇ ಕಲಂಮಿನಲ್ಲಿ ತೋರಿಸಿರುವ ಫಲಿತಾಂಶಕ್ಕಿಂತ ಸ್ವಲ್ಪ ಹೆಚ್ಚಾಗಿಯೂ 6ನೆ ಕಲಂಮಿನಲ್ಲಿ ತೋರಿಸಿರುವ ಫಲಿತಾಂಶಕ್ಕಿಂತ ಬಹಳ ಕಡಿಮೆಯಾಗಿಯೂ ಇರುತ್ತೆ. ಹೀಗಿದ್ದರೂ 10ನೆ ಕಲಂಮಿನಲ್ಲಿ ನಮೂದಿಸಿರುವ ಫಲಿತಾಂಶವನ್ನು ಪಡೆಯಲು 6ನೆ ಕಲಂಮಿನಲ್ಲಿ ಕೊಟ್ಟಿರುವ ಫಲಿತಾಂಶವನ್ನೇ ಆಧಾರವಾಗಿಟ್ಟುಕೊಂಡು ಲೆಖ್ಖಾಚಾರಮಾಡಿದೆ—ಆದುದರಿಂದ 6ನೆ ಕಲಂಮಿನಲ್ಲಿ ನಮೂದಿಸಿರುವ ಫಲಿತಾಂಶಗಳು ಎಷ್ಟರಮಟ್ಟಿಗೆ ಹೆಚ್ಚಾಗಿರುವವೋ ಅದೇ ದರ್ಜಾದಲ್ಲ 10ನೆ ಕಲಂಮಿನಲ್ಲಿ ತೋರಿಸಿರುವ ಫಲಿತಾಂಶಗಳು ಕಡಿಮೆಯಾಗಿರುವುವು. ಆದುದರಿಂದ ಸಿಪ್ಪೆಯಲ್ಲಿ ನಿಜವಾಗಿಯೂ ನಿಲ್ಲುವಹಾಲು ಈ ಸಂಖ್ಯೆಗಳಿಂದ ಕಂಡುಬರುವದಕ್ಕಿಂತ ಸ್ವಲ್ಪ ಹೆಚ್ಚಾಗಿರುತ್ತೆ. ಸಾಧಾರಣವಾಗಿ ರೈತರು ಆಲೆಯನ್ನು ಬಿಗಿಮಾಡುವುದಕ್ಕಿಂತ ಹೆಚ್ಚಾಗಿ ಆಲೆಯು ಬಿಗಿಪಡಿಸಿತ್ತು—ಸಿಪ್ಪೆಯು ಆಲೆಯಿಂದ ಹೊರಟಾಗ ಪುಡಿಪುಡಿಯಾಗಿ ಬಂತು—ಆಲೆಯ ಬಳಿಯಿಂದ ತೂಕ ಮಾಡುವ ಸ್ಥಳಕ್ಕೆ ಮುಂಕರಿಗಳಲ್ಲಿ ಹೊತ್ತುಕೊಂಡು ಹೋಗಬೇಕಾಯಿತು—ಸಾಧಾರಣವಾಗಿ ಆಲೆಯಾಡುವಾಗ ಈ ಪರೀಕ್ಷೆಯಲ್ಲಿ ಕಂಡುಬಂದುದಕ್ಕಿಂತ ಹೆಚ್ಚಾಗಿಯೇ ಸಿಪ್ಪೆಯಲ್ಲಿ ಹಾಲು ಉಳಿದಿರುತ್ತದೆ. ಪೂರ್ವದ ಮರದ ಆಲೆಗಳಿಗಿಂತಲೂ ಈ ಕಬ್ಬಿಣದ ಆಲೆಗಳು ಎಷ್ಟೋ ಮೇಲಾಗಿದ್ದರೂ ಕಬ್ಬಿನಲ್ಲಿದ್ದ ರಸದಪೈಕಿ ನಾಲ್ಕರಲ್ಲಿ ಒಂದು ಪಾಲು ಅಥವಾ ಮೂರರಲ್ಲಿ ಒಂದು ಪಾಲು ಹಾಲು ನಷ್ಟವಾಗುತ್ತದೆ. ಇಷ್ಟು ಹೆಚ್ಚಾಗಿ ನಷ್ಟವಾಗುತ್ತದೆಂದು ನಾವು ಊಹಿಸಿರಲಿಲ್ಲ; ಕಬ್ಬಿನಲ್ಲಿರುವ ಹಾಲಿನ ಪೈಕಿ ಶೇಕಡ 5ರಿಂದ 10ರವರಿಗೂ ಬಿಟ್ಟು ಮಿಕ್ಕ ಹಾಲನ್ನೆಲ್ಲವನ್ನೂ ತೆಗೆಯುವ ಮೇಲುತರದ ಆಲೆಗಳು ಮೈಸೂರು ಸೀಮೆಯಲ್ಲಿ ಉಪಯೋಗಕ್ಕೆ ಮುಂದೆ ಸ್ವಲ್ಪ ಕಾಲದವರಿವಿಗೂ ಅನುಕೂಲಿಸಲಾರವು—ಅವುಗಳು ಬಹಳ ದೊಡ್ಡವಾಗಿ ಬಹಳ ಬೆಲೆ ಬಾಳತಕ್ಕವುಗಳಾಗಿರುವದರಿಂದ ಹೆಚ್ಚಾಗಿ ಕಬ್ಬು ಬೆಳೆಯುವವರು ವಿನಾ ಸಾಧಾರಣ ಜನರು ಅವುಗಳನ್ನು ಇಟ್ಟುಕೊಳ್ಳಲಾರರು ಅವುಗಳಿಂದ ದಿವಸ ಒಂದಕ್ಕೆ 500 ರಿಂದ 1000 ಟನ್‌ಗಳ ಕಬ್ಬನ್ನು ಆಡಬಹುದು. ಒಂದು ಸುಗ್ಗಿಯಲ್ಲಿ ಪೂರಾಬೆಳದ ಕಬ್ಬು 1000 ಎಕರೆಯಾದರೂ ಸುಲಭವಾಗಿ ಆಡಲಾಗುವದು. ಈಗ್ಗ ಮೈಸೂರು ಸೀಮೆಯಲ್ಲಿ ಬಹುನೂತನವಾದುದೆಂತಲೂ ಬಹು ಮೇಲಾದುದೆಂತಲೂ ಅನ್ನಿಸಿಕೊಂಡಿರುವ ಕಬ್ಬಿಣದ ಗಾಣಗಳಿಗೂ ಮೇಲೆ ವಿವರಿಸಿದ ಅದ್ಭುತವಾದ ಆಲೆಗಳಿಗೂ ಮಧ್ಯಸ್ಥವಾದ ಅನೇಕ ದರ್ಜೆಗಳ ವಿವಿಧ ರಕಮುಗಳ ಆಲೆಗಳಿರುವವು. ಇತರ ದೇಶಗಳಲ್ಲಿ ಉಪಯೋಗದಲ್ಲಿರುವ ದೊಡ್ಡ ಆಲೆಗಳಿಗಿಂತ ಚಿಕ್ಕವಾಗಿ ಸುಲಭಕ್ಕೆ ಲಭಿಸುವ ಆಲೆಗಳಿಂದ ಈಗ ಮೈಸೂರು ದೇಶದಲ್ಲಿ ಹೊಸನಮೂನೆ ಎಂದೆನಿಸಿಕೊಂಡಿರುವ ಆಲೆಯಿಂದ ತೆಗೆಯಬಹುದಾದ ಹಾಲಿಗಿಂತ ಹೆಚ್ಚಾಗಿ ಹಾಲನ್ನು ತೆಗೆಯಬಹುದು. ಮುಂದಿನ ವರುಷ ಎಣ್ಣೆಯಿಂದ ನಡೆಯುವ ಯಂತ್ರದಿಂದ ತಿರುಗುವ ಒಂದುವರೆ ಅಡಿ ಉದ್ದವೂ ಒಂದಡಿ ಅಡ್ಡಳತೆಯೂ ಇರುವ ಮೂರು ಕಣೆಗಳುಳ್ಳ ಆಲೆಯನ್ನುಉಪಯೋಗಿಸಿ ಪರೀಕ್ಷೆ ಮಾಡಲು ಪ್ರಾರಂಭ ಸಾಧ್ಯವಾದೀತು—ಆ ಆಲೆಯಲ್ಲಿ ಗಂಟೆಯೊಂದಕ್ಕೆ ಒಂದು ಟನ್ ಕಬ್ಬನ್ನಾಡಲಾಗುತ್ತದೆ. ಅದರಲ್ಲಿ ಕಣೆಗಳು ಅಡ್ಡಲಾಗಿ ಜೋಡಿಸಿವೆ. ಉರಗಹಳ್ಳಿ ಇನಾಂದಾರ್ ಮ॥ ರಾ॥ ಕೃಷ್ಣಯ್ಯಂಗಾರ್ಯ್ಯರಿಗಾಗಿ ಇಂತಹ ಒಂದು ಆಲೆಯನ್ನು ತರಿಸಲು ಏರ್ಪಾಡು ಮಾಡಿದೆ, ಅನಂತರ ತರುವಾಯ ಅದರಿಂದ ಪರೀಕ್ಷೆಗಳನ್ನು ಮಾಡಲಾಗುತ್ತೆ.

49. ಕಡದ ತರುವಾಯ ಕಬ್ಬು ಕೆಡೋಣ.—ಕಬ್ಬನ್ನು ಕಡದಮೇಲೆ ಒಂದೆರಡು ದಿವಸದವರೆಗೆ ಆಲೆಯಾಡದೆ ಇದ್ದರೆ ಅದು ಕೆಡುವದಿಲ್ಲವೆಂದು ಕಬ್ಬು ಬೆಳೆಯುವ ದೇಶಗಳಲ್ಲಿ ಜನರು ಸಾಧಾರಣವಾಗಿ ತಿಳಿದುಕೊಂಡಿದ್ದಾರೆ. ಲೂಸಿಯಾನಾದಲ್ಲಿ ಕಬ್ಬನ್ನು ಕಡದಮೇಲೆ ಒಂದೆರಡು ತಿಂಗಳವರಿಗೂ ಬೀಜಕ್ಕೆ ಕಬ್ಬನ್ನು ಗುಣಿಗಳಲ್ಲಿ ಇಡುವ ಪದ್ಧತಿಯುಂಟು 50—60 ಮೈಲಿದೂರದಲ್ಲಿರುವ ದೊಡ್ಡ ಕಾರ್ಖಾನೆಗಳಿಗೆ ಆಲೆಯಾಡಲು ಕಬ್ಬನ್ನು ಕಳುಹಿಸುವದುಂಟು ಈ ಸಂದರ್ಭಗಳಲ್ಲಿ ಆಲೆಯಾಡುವದಕ್ಕೆ ಬಹಳಕಾಲ ಮುಂಚೆಯೇ ಕಬ್ಬನ್ನು ಕಡಿಯಬೇಕಾಗುತ್ತದೆ. ಹಿಂದೂದೇಶದಲ್ಲಿಯೂ ಅಲ್ಲಲ್ಲಿ ಮಧ್ಯರಾಷ್ಟ್ರಗಳಲ್ಲಿ ದೊಡ್ಡಸಕ್ಕರೆ ಕಾರ್ಖಾನೆಗಳನ್ನು ಏರ್ಪಡಿಸುವ ವಿಷಯವನ್ನು ಆಲೋಚಿಸುವಾಗ ಕಬ್ಬನ್ನು ಕಡದತರುವಾಯ ಅದನ್ನು ಕೆಡದಂತೆ ಎಷ್ಟುಕಾಲವಿಡಬಹುದು ಎಷ್ಟುದೂರ ಕಳುಹಿಸಬಹುದು ಎಂಬುವ ಮುಖ್ಯವಿಷಯವನ್ನು ಕಂಡುಹಿಡಿಯಬೇಕಾಗುತ್ತದೆ. ಈ ವಿಷಯವನ್ನು ಪರೀಕ್ಷಿಸುವ ಉದ್ದೇಶ್ಯ ಒಂದೇತಾಕಿನಲ್ಲಿ ಬೆಳೆದಕಬ್ಬನ್ನು ; ಅಡಿದವರೆಗೂ ಒಂದೇವಿಧವಾಗಿ 20 ಪಂಗಡವಾಗಿ ವಿಂಗಡಿಸಿತು. ಇವುಗಳನ್ನು ರಕಂವಾರ್ ವಿಂಗಡಿಸುವದಕ್ಕೆ ಸುಮಾರು 4—5 ಗಂಟೆಯು ಹೊತ್ತು ಹಿಡಿಯಿತು. ಆದುದರಿಂದ ಇವುಗಳ ಪೈಕಿ ಎರಡು ರಕಮುಗಳನ್ನು ಕಡದ ತರುವಾಯ ಕೂಡಿದವರೆಗೂ ಜಾಗ್ರತೆಯಾಗಿಯೇ ವಿಗ್ರಹಮಾಡಿದ್ದಾಯಿತು. ಎಂದರೆ ಕಡಿದಮೇಲೆ ಬಹುಶಃ 4—5 ಗಂಟೆಗಳ ತರುವಾಯ ಮಾಡಿದ್ದಾಯಿತು. ಇತರ ರಕಮುಗಳನ್ನು ಎರಡುದಿವಸದ ಆಗಾಯಿತು ಒಂದು ತಿಂಗಳವಳಗಾಗಿ ವಿಗ್ರಹಿಸಿದ್ದಾಯಿತು. ತೊಂಡೆಗಳಿದ್ದರೆ ಕಬ್ಬು ಕೆಡದಿರುವದಕ್ಕೆ ಅನುಕೂಲವೇನಾದರೂ ಉಂಟೇ ಎಂದು ಪರೀಕ್ಷಿಸುವುದಕ್ಕಾಗಿ ಕೆಲವು ರಕಮುಗಳ ತೊಂಡೆಯನ್ನು ಹೊಡೆದುಹಾಕದೆ ಇಟ್ಟದ್ದಾಯಿತು. ಈ ಕೆಳಗೆ ವಿಗ್ರಹಿಸಿದ್ದರ ಫಲಿತಾರ್ಥಗಳನ್ನು ತಾರೀಖುವಾರು ಕೊಟ್ಟಿದೆ.

338—339ನೆ ನಂಬರುಗಳುಳ್ಳ ರಖಮುಗಳು ಸಮಾನವಾದವುಗಳು ಆದರೂ ಅವುಗಳಲ್ಲಿ ಸೇರಿರುವ ವಸ್ತುಗಳ ಪ್ರಮಾಣವು ಒಂದಾಗಿಲ್ಲ. ಅವುಗಳ ಕೆಳಗಿನ ರಖಮುಗಳ ವಿಷಯದಲ್ಲಿ ನಮೂದಿಸಿರುವ ವಿಗ್ರಹದ ಫಲಿತಾರ್ಥಗಳನ್ನು ಪರ್ಯಾಲೋಚಿಸಿದರೆ 338ನೆ ನಂಬರಿನಲ್ಲಿ ಕಂಡುಬರುವ ವಸ್ತುಸಮ್ಮಿಶ್ರಣವನ್ನೇ ಅದೇ ತಾರೀಖಿನಲ್ಲಿ ಪರೀಕ್ಷಿಸಿದ ಇತರ ರಖಮುಗಳ ವಸ್ತುಸಮ್ಮಿಶ್ರಣವನ್ನಾಗಿ ಸ್ಥಾಮಾನ್ಯತ್ವೇನ ತೆಗೆದುಕೊಳ್ಳಬಹುದು. 339ನೆ ನಂಬರಿನಲ್ಲಿ ಶರ್ಕರ ಮತ್ತು ಗಟ್ಟಿಪದಾರ್ಥಗಳು ಇತರ ನಂಬರುಗಳಲ್ಲಿ ಸಾಮಾನ್ಯವಾಗಿರುವದಕ್ಕಿಂತ ಹೆಚ್ಚಾಗಿದೆ. ಆದರೆ ಈ ಪರೀಕ್ಷೆಗಳಲ್ಲಿ ಶರ್ಕರ ವಿದ್ರಾವ್ಯದ ವಿಷಯವನ್ನೇ ನಾವು ಮುಖ್ಯವಾಗಿ ಆಲೋಚಿಸಬೇಕಾದುದು. ಮೇಲೆಕಂಡ ಎರಡು ರಖಮುಗಳಲ್ಲಿಯೂ ಶೇಕಡಾ .87ರಷ್ಟು ಈ ವಸ್ತುವಿದೆ. ಈ ರಖಮು ಕಬ್ಬುಗಳನ್ನು ಕಡಿದಕೂಡಲೆ ಆಲೆಯಾಡಲಿಲ್ಲವಾದುದರಿಂದ ಅವುಗಳ ರಸವನ್ನು ಪರೀಕ್ಷಿಸುವುದಕ್ಕೆ ಮೊದಲು ಮಾಡುವುದರೊಳಗಾಗಿ ಅದರ ಸ್ವಭಾವವು ಬಹುಶಃ ಬದಲಾಯಿಸಿದ್ದೀತು—ಏಕೆಂದರೆ ಶೇಕಡ .87ರಷ್ಟು ಶರ್ಕರವಿದ್ರಾವ್ಯವು ಕಂಡುಬಂದದ್ದು ನಮ್ಮ ಅಂದಾಜನ್ನು ಮೀರಿದೆ. ಹಾಲು ಕೆಡದೆ ಎಷ್ಟು ಹೊತ್ತು ಇದ್ದೀತು ಎಂದು ಪರೀಕ್ಷಿಸಿದ್ದರಲ್ಲಿ ಕೆಲವು ಮಾದರಿಗಳಲ್ಲಿ 9 ಗಂಟೆಗಳವರಿಗೂ ಏನೂ ವ್ಯತ್ಯಾಸ ಕಂಡುಬರಲಿಲ್ಲ. ಪರೀಕ್ಷಿಸುವುದಕ್ಕೆ ಮುಂಚೆ ಈ ರಖಮು ಕಬ್ಬುಗಳಲ್ಲಿ ಬಹಳ ವ್ಯತ್ಯಾಸ ಉಂಟಾಗಿದ್ದಂತೆ ತೋರುವುದಿಲ್ಲ. ಏತಕ್ಕೆಂದರೆ ಹಾಲು ತೆಗೆದಮೇಲೆ ಅದು ಕೆಡದೆ ಎಷ್ಟುಕಾಲ ಚೆನ್ನಾಗಿರುತ್ತದೋ ಅದಕ್ಕಿಂತ ಕಬ್ಬು ಕೆಡದೆ ಇರುವದೆಂಬುವದಕ್ಕೆ ಅಡ್ಡಿ ಇಲ್ಲವಷ್ಟೆ. ಆದರೆ ಕಡಿದ ಎರಡುದಿವಸದೊಳಗಾಗಿ ಕಬ್ಬಿನಲ್ಲಿ ಬಹಳ ವ್ಯತ್ಯಾಸ ಉಂಟಾಗುತ್ತದೆ. 3—4ನೆ ಕಲಮುಗಳಲ್ಲಿ ನಮೂದಿಸಿರುವ ಸಂಖ್ಯೆಗಳ ವ್ಯತ್ಯಾಸಗಳನ್ನು ನೋಡಿದರೆ ಕಬ್ಬಿನ ತೂಕವು ಸ್ವಲ್ಪಮಟ್ಟಿಗೆ ಕಮ್ಮಿಯಾಗಿದೆ ಎಂದು ತಿಳಿಯಬರುತ್ತದೆ. ಶರ್ಕರವಿದ್ರಾವ್ಯದ ಶೇಕಡಾವೂ, ಶರ್ಕರದ ಶೇಕಡಾವೂ ವಿಶೇಷ ಹೆಚ್ಚಾದ ಹಾಗೆ ಕಾಣುತ್ತದೆ. ಕಬ್ಬು ಬಾಡಿ ಅದರಲ್ಲಿನ ನೀರು ಸ್ವಲ್ಪಮಟ್ಟಿಗೆ ಇಂಗಿಹೋಗದಿದ್ದರೆ, ಹೀಗೆ ಆಗುತ್ತಿರಲಿಲ್ಲ. ಕಬ್ಬು ಒಣಗಿದ್ದುದರಿಂದ ಉಂಟಾದ ವ್ಯತ್ಯಾಸಗಳನ್ನು ವಜಾಮಾಡಿ ನಿಜವಾಗಿಯೂ ಉಂಟಾದ ವ್ಯತ್ಯಾಸವನ್ನು ಮಾತ್ರ 8—9—10ನೆ ಕಲಮುಗಳ ಫಲಿತಾಂಶಗಳಲ್ಲಿ ಕಾಣಿಸಿರುತ್ತೆ. ಮೊದಲು ಎರಡುದಿವಸಗಳಲ್ಲಿ ಮಾತ್ರ ವ್ಯತ್ಯಾಸವು ಬಹಳವಾಗಿ ಕಂಡುಬಂದುದು ಆ ಮೇಲೆ ಯಾವ ಎರಡುದಿವಸಗಳಲ್ಲೂ ಇಷ್ಟು ಬದಲಾವಣೆಯು ತೋರಲಿಲ್ಲ. ಏಕೆ ಹೀಗೆ ಆಗಬೇಕೋ ಈಗ ತಿಳಿಯಲು ಸಾಧ್ಯವಾಗಿಲ್ಲ. ಶರ್ಕರವಿದ್ರಾವ್ಯವು ಶೇಕಡಾ 3ರಷ್ಟು ಹೆಚ್ಚಾಗಿದೆ. ಶರ್ಕರವೂ ಅದೇ ರೀತಿಯಲ್ಲಿ ಕಮ್ಮಿಯಾಗಿದೆ. ಬೆಲ್ಲದ ಬದಲು ನಾವು ಸಕ್ಕರೆಯನ್ನೇ ಮಾಡುವಹಾದರೆ ತಯಾರಾಗಬಹುದಾದ ಸಕ್ಕರೆಯ ಮೂರರಲ್ಲಿ ಒಂದು ಭಾಗವೇ ಈ ರೀತಿಯಲ್ಲಿ ನಷ್ಟವಾದ ಹಾಗೆ ಆಗುವದರಿಂದ ಇದು ವಿಶೇಷವಾದುದೇ ಸರಿ. ಆದರೆ ಈ ಫಲಿತಾರ್ಥಗಳಿಂದ ವಾಸ್ತವಸ್ಥಿತಿಯನ್ನು ನಾವು ತಿಳಿದುಕೊಳ್ಳಬೇಕಾದರೆ ಅನೇಕಾವೃತ್ತಿ ಈ ಪರೀಕ್ಷೆಗಳನ್ನು ನಡಿಸಿ ಈಗಿನ ಫಲಿತಾರ್ಥಗಳು ಸರಿಯಾದವೆಂದು ದೃಢಪಡಿಸಿಕೊಳ್ಳಬೇಕಾಗುತ್ತದೆ. ಕಬ್ಬನ್ನು ಕಡಿದಮೇಲೆ ಇಪ್ಪತ್ತುದಿವಸಗಳವರಿಗೂ ಶರ್ಕರವು ಕಡಿಮೆಯಾದಹಾಗೆಲ್ಲಾ ಶರ್ಕರ ವಿದ್ರಾವ್ಯವು ಹೆಚ್ಚಿ ಗಟ್ಟಿಪದಾರ್ಥದ ಮೊತ್ತವೇನೋ ಒಂದೇ ರೀತಿಯಲ್ಲಿತ್ತು. ಆ ಮೇಲೆ ಗಟ್ಟಿಪದಾರ್ಥದ ಮೊತ್ತವು ಕಡಿಮೆಯಾಗುವದಕ್ಕೆ ಪ್ರಾರಂಭವಾಯಿತು. ಇದರಿಂದ ಶರ್ಕರವು ಶರ್ಕರವಿದ್ರಾವ್ಯವಾಗುವ ಒಂದೇ ವ್ಯತ್ಯಾಸವಲ್ಲದೆ, ಕಬ್ಬಿನಲ್ಲಿ ಇತರ ವಿಧವಾದ ಬದಲಾವಣೆಗಳು ನಡೆಯುತ್ತಿದೆಯೆಂದು ಅರ್ಥವಾಯಿತು. ಕಬ್ಬುಗಳ ತೊಂಡೆಯನ್ನು ಹಾಗೆಯೇ ಇಟ್ಟಿದ್ದರಿಂದ, ಏನೂ ವ್ಯತ್ಯಾಸ ಕಂಡುಬರಲಿಲ್ಲ. ಆದರೆ ಈ ವಿಷಯದಲ್ಲಿ ಈ ವರುಷ ಚೆನ್ನಾಗಿ ಪರೀಕ್ಷೆಮಾಡಲಿಲ್ಲ. ಈ ಪರೀಕ್ಷೆಗಳನ್ನು ನಡಸಿದ್ದರಿಂದ ಮುಖ್ಯವಾಗಿ ತಿಳಿಯಬಂದುದೇನಂದರೆ:—ಆಲೆಯಾಡುವದಕ್ಕೆ ಒಂದೆರಡು ದಿವಸಗಳ ಮುಂದೆ ಕಬ್ಬನ್ನು ಕಡಿಯುವದರಿಂದ ಸಾಮಾನ್ಯವಾಗಿ ಜನಗಳು ತಿಳಿದಿರುವುದಕ್ಕಿಂತ ಹೆಚ್ಚಾಗಿ ನಷ್ಟವುಂಟಾಗುತ್ತದೆ—ಈ ಪರೀಕ್ಷೆಗಳನ್ನು ಕೂಡಿದಮಟ್ಟಿಗೂ ಬಾರಿಬಾರಿಗೂ ಮಾಡುತ್ತಿರಬೇಕು. ಮೊದಲು ನಾಲ್ಕೈದು ಸಲ ನಡೆಸುವ ವಿಗ್ರಹಕ್ರಿಯೆಗಳಿಗೆ ನಡುವೆ ಕಾಲವಿಳಂಬವು ಈ ಸಲಕ್ಕಿಂತಲೂ ಕಡಮೆಯಾಗಬೇಕು.

50. ಹಾಲನ್ನು ಕಾಯಿಸಲು ನಿದಾನಮಾಡುವದರಿಂದುಂಟಾಗುವ ಕೇಡು:—ಹೋದ ಜನವರಿ ತಿಂಗಳಲ್ಲಿ ಸಾಮರ್ ಕೋಟಿನಲ್ಲಿರುವ ಸಕ್ಕರೆ ಕಾರ್ಖಾನೆಯನ್ನು ನೋಡಲು ಹೋಗಿದ್ದಾಗ ಒಂದು ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಅಲ್ಲಿನವರು ಅಪೇಕ್ಷಿಸಿದರು. ಕಾರ್ಖಾನೆಗೆ ಬಹುದೂರದಿಂದ ಚೆನ್ನಾಗಿ ಶುದ್ಧಿ * ಮಾಡಿದ ಕಬ್ಬಿಣದ ಪೀಪಾಯಿಗಳಲ್ಲಿ ಸರಿಯಾಗಿ ಸುಣ್ಣ ಬೆರಸಿದ ರಸವನ್ನು ಸಾಗಿಸಲು ಪ್ರಯತ್ನಮಾಡಿದರೆ ರಸವು ಕೆಟ್ಟು ಏನೂ ನಷ್ಟವಾಗಲಾರದೋ ಎಂದು ಪ್ರಶ್ನೆಮಾಡಿದರು—ಇದು ಸಕಲರಿಗೂ ಉಪಯೋಗವಾದ ವಿಷಯವಾದುದರಿಂದ ಇದನ್ನುದ್ದೇಶಿಸಿ ಕೆಲವು ಪರೀಕ್ಷೆಗಳನ್ನು ನಡೆಸಿದ್ದಾಯಿತು. ಹುಳಿಯಾಗದೆ ಕೂಡಿದಮಟ್ಟಿಗೂ ಜೋಕೆಯಿಂದ ತೆಗೆದ ಹಾಲನ್ನು ವಿಗ್ರಹಮಾಡಿದ ತರುವಾಯ ನಿರ್ಮಲವಾದ ಗಾಜಿನಪಾತ್ರೆಗಳಲ್ಲಿ ಸಮಭಾಗವಾಗಿ ಇಟ್ಟು ಒಂದಕ್ಕೆ ಮಾತ್ರ 34ನೆ ಪ್ರಕರಣದಲ್ಲಿ ವಿವರಿಸಿದಂತೆ ಸುಣ್ಣ ಕೊಟ್ಟು ಮತ್ತೊಂದನ್ನು ಹಾಗೆಯೇ ಇಟ್ಟಿದ್ದು ಇವೆರಡನ್ನೂ ಒಂದು ಕ್ಲಿಪ್ತಕಾಲವಾದ ಕೂಡಲೆ ಪುನಃ ವಿಗ್ರಹಿಸಿತು. ಅದರ ಫಲಿತಾರ್ಥಗಳನ್ನು ಈ ಕೆಳಗಿನ ತಃಖ್ತೆಯಲ್ಲಿ ಕೊಟ್ಟಿದೆ.

7ನೆ ನಂಬರ್ ತಃಖ್ತೆ.

ಕಬ್ಬಿನ ಹಾಲನ್ನು ಕಾಯಿಸದೆ ಇಟ್ಟಿರಲು ಅದರಲ್ಲಿ ಶರ್ಕರವಿದ್ರಾವ್ಯದ ಶೇಕಡಾ ಹೆಚ್ಚುವದರಿಂದ ಹುಳಿ ಹಿಡಿದ ಪ್ರಮಾಣವನ್ನು ತೋರಿಸುವ ತಃಖ್ತೆ.

* ಹುಳಿ ಮುಂತಾದ್ದು ಬೀಳದಹಾಗೆ ರಸವರ್ಗಗಳನ್ನು ಉಪಯೋಗಿಸಿಯಾಗಲಿ, ಕಾಸಿಯಾಗಲಿ ಶುದ್ಧಿಮಾಡುವುದು.

ಹಾಲಿನ ನಂಬರು	ಸುಂಣ ಬೆರಸಿದ್ದೆ ; ಬೆರಸದೆ ಇದ್ದುದೆ.	ಎಷ್ಟು ಘಂಟೆಗಳಿಟ್ಟು ತರುವಾಯ ವಿಗ್ರಹಿಸಿದ್ದು.	ಕರ್ಕರ ವಿದ್ಯಾಮ್ಲದ ಶೇಕಡಾ.	ವಿಗ್ರಹಿಸಿದ ತಾರೀಖು.
318	ಸುಂಣ ಹಾಕದ್ದು ...	ಹೊಸದು	·67	18—4—05
	ಡಿಟೋ ...	7	·82	ಡಿಟೋ
	ಸುಂಣ ಹಾಕಿದ್ದು ...	7	·75	ಡಿಟೋ
324	ಸುಂಣ ಹಾಕದ್ದು ...	ಹೊಸದು	·80	ಡಿಟೋ
	ಡಿಟೋ ...	6	·91	ಡಿಟೋ
	ಡಿಟೋ ...	20	2·9	19—4—05
	ಸುಂಣ ಹಾಕಿದ್ದು ...	6	·83	18—4—0
	ಡಿಟೋ ...	20	6·2	19—4—05
332	ಸುಂಣ ಹಾಕದ್ದು ...	ಹೊಸದು	·73	20—4—0
	ಡಿಟೋ ...	6	1·10	ಡಿಟೋ
	ಸುಂಣ ಹಾಕಿದ್ದು ...	6	·74	ಡಿಟೋ
458	ಸುಂಣ ಹಾಕದ್ದು ...	ಹೊಸದು	·61	26—4—05
	ಡಿಟೋ ...	14	2·04	27—4—05
	ಡಿಟೋ ...	19	3·03	ಡಿಟೋ
	ಆಮ್ಲ ಸರ್ಜಿಕಗಳಿಗೆ ಔದಾಸೀನ್ಯವನ್ನ ಹೊಂದು ವವರಿವಿಗೂ ಸುಂಣ ಹಾಕಿದ್ದು.	14	1·93	ಡಿಟೋ
	ಡಿಟೋ ...	19	3·50	ಡಿಟೋ
	ಹೆಚ್ಚು ಸುಂಣ ಹಾಕಿದ್ದು ...	14	·99	ಡಿಟೋ
	ಡಿಟೋ ...	19	3·00	ಡಿಟೋ

51. ಈ ಫಲಿತಾರ್ಥಗಳೆಲ್ಲವನ್ನೂ ಯೋಚಿಸಿದ್ದರಲ್ಲಿ ಸುಣ್ಣ ಬೆರಸದ ಮಾದರಿಗಳಿಗಿಂತ ಸುಣ್ಣ ಬೆರಸಿದ ಮಾದರಿಗಳು ಸ್ವಲ್ಪ ಹೆಚ್ಚು ಕಾಲ ಕೆಡದೆ ಇರುವಂತೆ ತೋರುತ್ತದೆ. ಆದರೆ ಇದರಲ್ಲಿ ನಮಗೆ ಭರವಸೆ ಸಾಲದ್ದರಿಂದ, ಇದನ್ನು ನಂಬಿಕೊಂಡು ಹಾಲು ಹುಳಿಯಾಗದಿರಲೆಂದು ಯಾರೂ ಈರೀತಿಮಾಡಲು ಯುಕ್ತಿಸಕೂಡದು. ಇದೇ ವಿಷಯದಲ್ಲಿ ಇನ್ನೂ ನಡೆಸಿದ ಪರೀಕ್ಷೆಗಳ ಫಲಿತಾರ್ಥವನ್ನು ಈ ಕೆಳಗಿನ ತಃಖ್ತೆಯಲ್ಲಿ ಕೊಟ್ಟಿದೆ.

8ನೆ ನಂಬರ್ ತಃಖ್ತೆ.

ಹಾಲಿನ ನಂಬರು	ಸುಂಣ ಬೆರಸಿದ್ದೆ ಬೆರಸದೆ ಇದ್ದುದ.	ಹೊಸ ಹಾಲಿನಲ್ಲಿ ಆಮ್ಲದ ಶೇಕಡಾ	ಎಷ್ಟು ಗಂಟೆ ತರುವಾಯ ವಿಗ್ರಹಿಸಿದ್ದು.						ತಾರೀಖು.
			3 ಗಂಟೆ ತರುವಾಯ ಆಮ್ಲದ ಶೇಕಡಾ	6 ಗಂಟೆ ತರುವಾಯ ಆಮ್ಲದ ಶೇಕಡಾ	9 ಗಂಟೆ ತರುವಾಯ ಆಮ್ಲದ ಶೇಕಡಾ	$13\frac{1}{4}$ ಗಂಟೆ ತರುವಾಯ ಆಮ್ಲದ ಶೇಕಡಾ	$17\frac{1}{4}$ ಗಂಟೆ ತರುವಾಯ ಆಮ್ಲದ ಶೇಕಡಾ	$19\frac{3}{4}$ ಗಂಟೆ ತರುವಾಯ ಆಮ್ಲದ ಶೇಕಡಾ	
452	ಸುಂಣ ಹಾಕದ್ದು	·54	·56	·61	·61	..	...	..	26—4—05
453	ಆಮ್ಲ ಸರ್ಜಿಕಗಳಿಗೆ ಔದಾಸೀನ್ಯವನ್ನ ಹೊಂದುವವರಿವಿಗೂ ಸುಂಣ ಹಾಕಿದ್ದು.	·54	·54	·58	·61	...	...	..	ಡಿಟೋ
454	ಹೆಚ್ಚು ಸುಂಣ ಹಾಕಿದ್ದು	·54	·54	·56	·61	..	...	..	ಡಿಟೋ
455	ಸುಂಣ ಹಾಕದ್ದು ...	·37	...	...	..	·42	·62	1·00	8—5—05 / 9—5—05
456	ಆಮ್ಲ ಸರ್ಜಿಕಗಳಿಗೆ ಔದಾಸೀನ್ಯವನ್ನ ಹೊಂದುವವರಿವಿಗೂ ಸುಂಣ ಹಾಕಿದ್ದು.	·37	..	..	...	·40	·57	·80	ಡಿಟೋ
457	ಹೆಚ್ಚು ಸುಂಣ ಹಾಕಿದ್ದು ...	·37	...	..	..	·37	·44	·61	ಡಿಟೋ

ಪೂರಾ ಒಂದು ದಿವಸದೊಳಗಾಗಿ ರಸದಲ್ಲಿ ಏನೇನು ವ್ಯತ್ಯಾಸ ಕಂಡುಬರುತ್ತದೊ ಅದನ್ನು ಜೋಕೆಯಿಂದ ನೋಡಿ ತಿಳಿದುಕೊಳ್ಳುವ ಉದ್ದೇಶದಿಂದಲೇ ಈ ಪರೀಕ್ಷೆಗಳನ್ನು ಮಾಡಿದ್ದಾಯಿತು. ಸುಣ್ಣಕೊಟ್ಟ ಮತ್ತು ಸುಣ್ಣಕೊಡದ ಮಾದ್ರಿಗಳ ಜೊತೆಗೆ ಮತ್ತೊಂದನ್ನು ಸೇರಿಸಿದ್ದಾಯಿತು. ಇದಕ್ಕೆ ಸಾಧಾರಣವಾಗಿ ಸುಣ್ಣ ಕೊಟ್ಟ ರಸಕ್ಕಿಂತ ಎರಡರಷ್ಟು ಹೆಚ್ಚಾಗಿ ಸುಣ್ಣ ಕೊಟ್ಟಿತು. ಇದನ್ನೇ "ಅತಿಯಾಗಿ ಸುಣ್ಣ ಕೊಟ್ಟದ್ದೆಂದು" ನಮೂದಿಸಿದೆ. ಈ ಮೂರು ಮಾದ್ರಿಗಳ ಮೊದಲೋಳಿಯನ್ನು ಬೆಳಿಗ್ಗೆ ಆಲೆಯಾಡಿ ಮೂರು ಮೂರು ಗಂಟೆಗೊಂದಾವರ್ತಿ ವಿಗ್ರಹಿಸಿತು. 455, 456, 457ನೆ ನಂಬರುಗಳುಳ್ಳ ಮೊದಲೋಳಿಯನ್ನು ಸಾಯಂಕಾಲ ಆಲೆಯಾಡಿ ಆಗಲೆ ವಿಗ್ರಹಿಸಿ ರಾತ್ರೆಯೆಲ್ಲಾ ಇಟ್ಟದ್ದು ಮಾರನೇದಿನ $13\frac{1}{4}$ ಗಂಟೆಯಾದಮೇಲೊಂದಾವರ್ತಿ $17\frac{1}{4}$ ಗಂಟೆಯಾದಮೇಲೊಂದಾವರ್ತಿ $19\frac{3}{4}$ ಗಂಟೆಯಾದಮೇಲೊಂದಾವರ್ತಿ ಹೀಗೆ ಮೂರುಸಲ ವಿಗ್ರಹಿಸಿದ್ದಾಯಿತು.

ಈ ಪರೀಕ್ಷೆಯ ಇತ್ಯರ್ಥವೇನೆಂದರೆ ಅತಿಯಾಗಿ ಸುಣ್ಣ ಬೆರಸಿದ ಮಾದರಿಗಳು ಇತರ ಮಾದರಿಗಳಿಗಿಂತ ಕೆಡದೆ ಇರುತ್ತವೆ. ಆದರೆ ಯಾವ ರಸವಾದರೂ 20 ಗಂಟೆಯವರಿಗಾಗಲಿ ಹುಳಿ ಹಿಡಿಯದೆ ಇರಲಿಲ್ಲ. ಸಾಮಾನ್ಯವಾಗಿ ಆಚರಣೆಯಲ್ಲಿ ಇಷ್ಟು ತೃಪ್ತಿಕರವಾಗಿರುವುದು ಸಂದೇಹ. ಆದರೆ ಇದೇವಿಷಯದಲ್ಲಿ ಮುಂದೆಯೂ ಪರೀಕ್ಷೆಗಳನ್ನು ನಡೆಸಿದರೆ ಉದ್ದೇಶವು ಕೈಗೂಡುವುದೆಂದು ಇದರಿಂದ ಧೈರ್ಯ ಹುಟ್ಟುತ್ತದೆ.

52. ಸಾರಾಂಶ.—ಈ ವರ್ಷ ಮಾಡಿದ ಕಬ್ಬಿನ ಪರೀಕ್ಷೆಯಿಂದಲೂ ಅದರಿಂದ ಪದಾರ್ಥಗಳನ್ನು ತಯಾರುಮಾಡುವ ವಿಷಯದಲ್ಲಿ ನಡೆಸಿದ ಪರೀಕ್ಷೆಯಿಂದಲೂ ತಿಳಿಯಬರುವದೇನೆಂದರೆ:—ಕಬ್ಬನ್ನಾಗಲೀ ಅದರ ರಸವನ್ನಾಗಲಿ ಬಹಳಕಾಲ ಪ್ರಯಾಣ ಹಿಡಿಯುವ ದೂರ ದೇಶಗಳಿಗೆ ಕಳುಹಿಸುವದು ನಷ್ಟಕರವಾದದ್ದು. ಕಬ್ಬಿನ ಚರಕಿ ಸಕ್ಕರೆಯನ್ನು ಮಾಡಲು ಪರೀಕ್ಷಿಸಿದ್ದರಲ್ಲಿ ಕಂಡುಬರುವದೇನೆಂದರೆ:—ಇದನ್ನು ತಯಾರುಮಾಡಲು ಏರ್ಪಡಿಸುವ ಕಾರ್ಖಾನೆಗಳು ಚಿಕ್ಕವಾದಾಗ್ಯೂ ಈ ದೇಶದ ಸಕ್ಕರೆಯ ವ್ಯಾಪಾರಕ್ಕೆ ಅವುಗಳಿಂದ ಮೇಲುಂಟಾಗುವುದೆಂದು ತೋರುತ್ತೆ.

53. ಹಾಲಿಗೆ ಹೆಚ್ಚಾಗಿ ಸುಣ್ಣ ಹಾಕಿದರೆ ಬೆಲ್ಲ ಕಪ್ಪಾಗುತ್ತದೆಂಬ ಜನರ ಅಭಿಪ್ರಾಯದ ವಿಷಯದಲ್ಲಿ ಈ ಪರೀಕ್ಷೆಗಳಿಂದ ತಿಳಿಯಬರುವದೇನೆಂದರೆ:—ಹಾಲಿಗೆ ಸುಣ್ಣ ಸೇರಿಸುವಾಗೆಲ್ಲಾ ಪೂರಾ ಸುಣ್ಣ ಸೇರುವವರಿಗೂ ಬೆಲ್ಲ ಕಪ್ಪಾಗುವದು ಅರ್ಧ ಸುಣ್ಣ ಕೊಟ್ಟದ್ದು ಹಾಲನಿಂದ ತಯಾರಾದ ಬೆಲ್ಲಕ್ಕಿಂತ ಪೂರಾ ಸುಣ್ಣ ಕೊಟ್ಟ ಹಾಲಿನಿಂದ ಮಾಡಿದ ಬೆಲ್ಲವು ಬೆಳ್ಳಗಾಗುತ್ತದೆ. ಹೋದವರ್ಷ ಈ ವಿಷಯದಲ್ಲಿ ತಿಳಿಸಿದ ವಿಷಯಗಳನ್ನು ಈಗಲೂ ತಿಳಿಸಿದ್ದಲ್ಲಿ ಒಳ್ಳೇದೆಂದು ಈ ಕೆಳಗೆ ಅವುಗಳನ್ನು ನಮೂದಿಸಿದೆ.

ಬೆಲ್ಲ ಬೇಯಿಸುವಾಗ ಬಹು ಜಾಗರೂಕವಾಗಿರಬೇಕಾದ ವಿಷಯಗಳು.

(1) ಲಿಟ್ಮಸ್ ಬಣ್ಣ ಹಚ್ಚಿದ ಕಾಗದವನ್ನು ಉಪಯೋಗಿಸಿ ಅದರಿಂದ ಆಮ್ಲ ರ್ಜಿಕೆಗಳ ವಿಷಯದಲ್ಲಿ ರಸವು ಔದಾಸೀನ್ಯವನ್ನು ಹೊಂದಿದೆ ಎಂದು ತಿಳಿಯಬರುವವರಿಗೂ ಸುಣ್ಣ ಸೇರಿಸಬೇಕು.

(2) ಯಾವ ಕೆಲಸಕ್ಕೂ ಮಣ್ಣಿನ ಪಾತ್ರೆಗಳನ್ನು ಬಳಸಕೂಡದು.

(3) ಆಲೆಯನ್ನೂ ಎಲ್ಲಾ ಲೋಹದ ಪಾತ್ರೆಗಳನ್ನೂ ಕೆಲಸ ಮುಗಿದಮೇಲೆ ಪ್ರತಿದಿನವೂ ಒಂದಾವೃತ್ತಿಯಾದರೂ ತೊಳೆಯಬೇಕು.

(4) ಆಲೆಯಾಡಿದಮೇಲೆ ಕೂಡಿದಮಟ್ಟಿಗೂ ಜಾಗ್ರತೆಯಾಗಿ ಹಾಲನ್ನು ಬೇಯಿಸಬೇಕು.

(5) ಆಲೆಯ ಕಣೆಗಳು ಕೂಡಿದಮಟ್ಟಿಗೂ ಒಂದಕ್ಕೊಂದು ಸೇರಿರುವಂತೆ ಕಟ್ಟಿಸಿವೆಯೋ ಎಂದು ನೋಡತಕ್ಕದ್ದು.

(6) ಕಬ್ಬನ್ನು ಕಡಿದಮೇಲೆ ಕೂಡಿದಮಟ್ಟಿಗೂ ಬೇಗ ಆಲೆಯಾಡಬೇಕು.

ಕಾಫಿ.

54. ವಿಗ್ರಹ.—ನಾಲ್ಕನೆ ವರ್ಷದ ಬಿನ್ನವತ್ತಳೆಯ 10ನೆ ಪುಟದಲ್ಲಿ 6 ವಿಧ ಕಾಫಿಯನ್ನು ವಿಗ್ರಹಿಸಿದ ಫಲಿತಾರ್ಥಗಳನ್ನು ಕೊಟ್ಟಿರುತ್ತೆ. ಕಾಫಿಯ ವಿಶಿಷ್ಟ ಗುರುತ್ವವೂ ಅದರಲ್ಲಿರುವ ಸಾರಜನಕ, ರಂಜಕದ ಉಪ್ಪು, ಮರದ ಉಪ್ಪು ಈ ಪದಾರ್ಥಗಳು ಕಡಮೆಯಾದಹಾಗೆಲ್ಲಾ ಕಾಫಿಯ ಬೆಲೆಯೂ ತಗ್ಗಿತೆಂದು ಅದರಿಂದ ತಿಳಿಯಬರುತ್ತದೆ. ಹನ್ನೊಂದನೆ ಪುಟದಲ್ಲಿ ಪರೀಕ್ಷಾ ಫಲಿತಾರ್ಥಗಳನ್ನು ನೋಡಿದರೆ ತೃಪ್ತಿಕರವಾಗಿದೆಯಾದರೂ ವಸ್ತುವಿಗ್ರಹ ಪರೀಕ್ಷೆಯನ್ನು ಅನೇಕಾವರ್ತಿ ಮಾಡಲಿಲ್ಲವಾದುದರಿಂದ ಅವುಗಳಿಂದ ಏನೂ ಗೊತ್ತಾಗಿ ತೀರ್ಮಾನಿಸುವುದಕ್ಕೆ ಆಗುವದಿಲ್ಲವೆಂದು ಹೇಳಿದೆ. ಐದನೇ ವರುಷದ ಬಿನ್ನವತ್ತಳೆಯ 1ನೆ ಪುಟದಿಂದ 24ನೆ ಪುಟದವರೆಗೆ ಅದೇ ವಿಷಯದಲ್ಲಿ ಪರೀಕ್ಷಾ ಕೆಲಸವನ್ನು ನಡಸಿದ ಸಂಗತಿಯನ್ನು ವಿವರಿಸಿದೆ. ದಕ್ಷಿಣ ಹಿಂದೂ ದೇಶದ ಸಂಯುಕ್ತ ತೋಟಕೇಶ್ವರರ ಸಂಘದವರು (United Planters' Assosiation of Southern India) ಬಹಳ ವ್ಯತ್ಯಾಸವುಳ್ಳ 51 ರಕಮುಗಳನ್ನು ಕೂಡಿಟ್ಟಿದ್ದರು. ಅವುಗಳ ವಿಶಿಷ್ಟ ಗುರುತ್ವವನ್ನು ಪರೀಕ್ಷಿಸಿದ್ದಾಯಿತು. ಈ ಪರೀಕ್ಷೆಯ ಫಲಿತಾಂಶಗಳೂ ಹೋದವರ್ಷದ ಪರೀಕ್ಷೆಗಳೂ ಒಂದಾಗಿದೆ. ಮಿಕ್ಕ ಸಂಗತಿಗಳನ್ನು ಪರೀಕ್ಷಿಸಿದ್ದರಲ್ಲಿ ಕಾಫಿಯಲ್ಲಿರುವ ಸಾರಜನಕವೇ ಮೊದಲಾದ ಪದಾರ್ಥಗಳಿಗೂ ಲಂಡನ್ ಪಟ್ಟಣದಲ್ಲಿ ಮಾರಿದಾಗ ಅವುಗಳಿಂದ ದೊರೆಯುವ ಖರೀದಿಗೂ ಏನೂ ಸಂಬಂಧವಿರುವಂತೆ ತೋರಲಿಲ್ಲ. ಆದುದರಿಂದ ನಾಲ್ಕನೆ ವರ್ಷದ ಬಿನ್ನವತ್ತಳೆಯಲ್ಲಿ ಬರೆದಿರುವದಾಗಿ ಮೇಲೆ ಹೇಳಿದ ಸಂಗತಿಯು ಸರಿಯಾದುದೇ ಹೌದು. ಕಾಫಿಯನ್ನು ವಿಗ್ರಹಿಸುವದು ಇನ್ನೂ ಪೂರ್ತಿಯಾಗಿಲ್ಲ. ಕಾಲಾನುಕೂಲವಿದ್ದರೆ ಕಾಫಿಯಲ್ಲಿರುವ ಕೆಲವು ಸಾವಯವ ಪದಾರ್ಥಗಳನ್ನು ನಿರ್ಣಯಿಸತಕ್ಕದ್ದಿದೆ. ಈ ವಿಷಯದಲ್ಲಿ ಇದುವರೆಗೂ ನಡೆಸಿರುವ ವಿಗ್ರಹ ಫಲಿತಾರ್ಥಗಳು ಕಾಫಿಯ ಗುಣವನ್ನು ಗೊತ್ತುಮಾಡಲು ಈಗಲೇ ಕೆಲಸಕ್ಕೆ ಬಾರದಾಗಿರುವದರಿಂದ ಈ ವಿಷಯದಲ್ಲಿ ಇನ್ನೂ ಪರೀಕ್ಷೆಗಳು ನಡದು ಹೇರಳವಾಗಿ ಸಂಗತಿಯು ಗೊತ್ತಾಗುವವರಿಗೂ ಫಲಿತಾರ್ಥಗಳೆಲ್ಲವನ್ನೂ ವಿಶದಪಡಿಸಲಾಗುವದಿಲ್ಲ—ಕಾಫಿಯು ಹಸನು ಕಿರಿದು ಎಂಬುವದು ಕಾಫಿಯಲ್ಲಿರುವ ಸಾರಜನಕ, ರಂಜಕದ ಉಪ್ಪು, ಮರದುಪ್ಪು, ಇವುಗಳ ಪ್ರಮಾಣದಿಂದೇನೂ ಗೊತ್ತಾಗುವದಿಲ್ಲ.

55. ಗೊಬ್ಬರದ ಪರೀಕ್ಷೆ.—ನಾಲ್ಕನೆ ವರ್ಷದ ಬಿನ್ನವತ್ತಳೆಯ 6ರಿಂದ 9ನೆ ಪುಟದ ವರೆಗೆ ಕಾಫಿ ಗಿಡಗಳ, ತಾಕುಗಳಿಗೆ ವಿಧವಿಧ ಗೊಬ್ಬರಗಳನ್ನು ಕೊಟ್ಟು ಪರೀಕ್ಷೆ ಮಾಡಿದ್ದರ ಫಲಿತಾರ್ಥಗಳನ್ನು ಕೊಟ್ಟಿದೆ. 1—2ನೆ ನಂಬರು ತಾಕುಗಳಲ್ಲಿ ಅದೇ ಪರೀಕ್ಷೆಗಳನ್ನೇ ಇನ್ನೂ 2 ವರ್ಷಕಾಲ ಮಾಡಿದ್ದಾಯಿತು. ಈ ಪರೀಕ್ಷೆಗಳನ್ನು ಎಷ್ಟು ವರ್ಷಗಳಕಾಲ ಮಾಡಿದ್ದಾಯಿತೊ ಆ ವರ್ಷಗಳ ಫಲಿತಾರ್ಥಗಳ ಸರಾಸರಿಯನ್ನು ನೋಡುವಲ್ಲಿ ಎರಡು ತಾಕುಗಳಲ್ಲಿಯೂ ಗೊಬ್ಬರವಿಡದ ಪಾತಿಗಳೇ ಮುಂದಾಗಿ ಕಂಡುಬಂದವು. ಮೇಲೆ ಕಂಡ ಪರೀಕ್ಷೆಗಳನ್ನು ಬಹು ಜೋಕೆಯಿಂದ ಮಾಡಿದ ಮೆ॥ ಡೆ, ಮೆ॥ ಹಾರಿಸ್ ಸಾಹೇಬರುಗಳು ಅವುಗಳನ್ನೂ ಮುಂದೆಯೂ ನಡೆಸುವುದಾಗಿ ಒಪ್ಪಿಕೊಂಡಿರುತ್ತಾರೆ. 1903ನೆ ವರ್ಷದವರಿಗೆ ನಡೆದ ಕೆಲಸಗಳನ್ನು ಎಂದರೆ ಪಾತಿಗಳನ್ನು ವಿಂಗಡಿಸಿದ್ದು ಅವುಗಳಿಗೆ ವಿಧವಿಧವಾದ ಗೊಬ್ಬರಗಳನ್ನು ಉಪಯೋಗಿಸಿದ್ದು ಇವೆ ಮೊದಲಾದವುಗಳ ಫಲಿತಾರ್ಥಗಳನ್ನು ಮೇಲೆ ನಮೂದಿಸಿದ ಬಿನ್ನವತ್ತಳೆಯಲ್ಲಿ ಕೊಟ್ಟಿರುತ್ತೆ. 1903ನೆ ವರ್ಷದಿಂದ ಈಚೆಗೆ ನಡೆದ ಪರೀಕ್ಷೆಗಳ ಫಲಿತಾರ್ಥಗಳು ಹಿಂದೆ ಕಂಡುಬಂದವುಗಳಂತೆಯೇ ಇರುವುದರಿಂದ ಅವುಗಳನ್ನು ಪುನಃ ಇಲ್ಲಿ ಕೊಡತಕ್ಕ ಅವಶ್ಯಕವಿಲ್ಲ. ಮುಂದೆ

ಯಾವಾಗಲಾದರೂ ಅವುಗಳನ್ನು ತಿಳಿಸಲಾಗುತ್ತದೆ. ... ಮುಖ್ಯವಾಗಿ ತಿಳಿದುಬರುವದೇನಂದರೆ—ಈ ಪಾತಿಗಳಿಗೆ ಕೊಟ್ಟ ಗೊಬ್ಬರಗಳು ಶುದ್ಧಾಂಗವಾಗಿ ವ್ಯಾಪಿಸಲಿಲ್ಲ. ಈ ಎರಡು ಸಂದರ್ಭದಲ್ಲಿಯೂ ಗೊಬ್ಬರ ಕೊಡದ ಅಡಕಿನಲ್ಲಿಯೂ ಬಹಳ ಮೇಲಾದ ಫಲವುಂಟಾದುದು ಆಕಸ್ಮಿಕವಾದುದು. ಮೆ॥ ಹ್ಯಾರಿಸನರವರ ತಾಕುಗಳ ಪೈಕಿ ಎರಡಕ್ಕೆ ಗೊಬ್ಬರ ಕೊಟ್ಟಿರಲಿಲ್ಲ. ಅವುಗಳಲ್ಲಿ ...ನೆ ತಾಕಿನ ಫಲವು ಶುದ್ಧಾಂಗ ಕೊಟ್ಟದ್ದಾಯಿತು. ಆದರೆ ಈ ಪರೀಕ್ಷೆಗಳಲ್ಲೆಲ್ಲಾ ಗೊಬ್ಬರ ಕೊಡದ ತಾಕುಗಳೇ ಮೊದಲಾದುದು ಬಳ್ಳೀದೇ ಆಯಿತು.

56. ಎರಡೇ ಪರೀಕ್ಷಾ ಪಾಟಕಗಳಿದ್ದ ಅವುಗಳನ್ನು 5 ವರ್ಷಕಾಲ ಪರೀಕ್ಷೆಗಳನ್ನು ನಡೆಸಿದರೂ ಅವುಗಳ ಫಲಿತಾರ್ಥವು ಇಂಥಾದ್ದೇ ಎಂದು ಖಂಡಿತವಾಗಿ ಗೊತ್ತು ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಈ ಕಾಫಿ ಗಿಡಗಳಿಗೆ ಹಿಂದೆ ಅತಿ ಹೆಚ್ಚಾಗಿ ಗೊಬ್ಬರ ಕೊಟ್ಟಿತೆಂದು ಈ ಪರೀಕ್ಷೆಯಿಂದಲೇ ತೀರ್ಮಾನಿಸುವುದಕ್ಕೆ ಆಗುವುದಿಲ್ಲ. ಮತ್ತು ಈ ತಾಕುಗಳಿಗೆ 5 ವರ್ಷಕಾಲ ಗೊಬ್ಬರವೇ ಕೊಡದಿದ್ದ ಪಕ್ಷಕ್ಕೆ ಅತಿ ಹೆಚ್ಚಾಗಿ ಕೊಟ್ಟಲ್ಲಿ ಎಷ್ಟು ಬೆಳೆಯುತ್ತಿತ್ತೋ ಅಷ್ಟೇ ಬೆಳೆಯುತ್ತೆಂದು ಹೇಳಲು ಆಗುವುದಿಲ್ಲ. ಆದರೆ ಇದರಿಂದ ತಿಳಿದದ್ದು ಏನೆಂದರೆ ಕಾಫಿಗೆ ಗೊಬ್ಬರ ಕೊಡುವ ವಿಷಯದಲ್ಲಿ ಪರೀಕ್ಷಿಸಿ ತಿಳಿದುಕೊಳ್ಳುವ ಸಂಗತಿಗಳು ಬಹಳವಾಗಿರುವುದೆಂದು ಅರಿತುಕೊಂಡಂತಾಯಿತು. ಮತ್ತು ಈಗಿನ ರೀತಿಯಲ್ಲಿ ನಾವು ಗೊಬ್ಬರ ಕೊಡುತ್ತಿರುವುದು ತುಂಬ ಆದಾಯವಾದದಲ್ಲವೆಂದು ಗೊತ್ತಾದಂತಾಯಿತು. ಅನವಶ್ಯವಾದ ಖರ್ಚನ್ನು ಉಳಿಸಿಕೊಳ್ಳಬೇಕೆಂದು ಆಶಿಪಡುವವರೂ ಈ ರೀತಿಯಲ್ಲಿ ಪರೀಕ್ಷೆಗಳನ್ನು ಮಾಡಿ ಗೊಬ್ಬರದ ಖರ್ಚನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನಪಟ್ಟರೆ ಒಳ್ಳೆಯದಾಗಬಹುದೆಂದು ಇದರಿಂದ ಸ್ಪಷ್ಟವಾಗಿ ಹೇಳಿದಂತಾಯಿತು. ನಾವು ಜಮೀನಿನಲ್ಲಿ ಪ್ರತಿ ಸಾರಿಗು ಬೆಳೆಗೆ ಬೇಕಾದ ಸಸ್ಯ ಪೋಷಕ ಪದಾರ್ಥಗಳನ್ನು ಭೂಮಿಯಿಂದ ಅವನ್ನು ಪಡೆದುಕೊಳ್ಳುತ್ತದೆ. ಹೀಗೆ ಭೂಮಿಗೆ ನಷ್ಟವಾದ ಪದಾರ್ಥವನ್ನು ಸ್ವಲ್ಪವಾದ್ದಾಗಾದರೂ ಗೊಬ್ಬರ ಗೋಡು ಮುಂತಾದವುಗಳನ್ನು ಕೊಟ್ಟು ಅದಕ್ಕೆ ಹಿಂತಿರಿಗಿಸಬೇಕಲ್ಲವೆ? ಹೀಗೆ ಮಾಡದಿದ್ದರೆ ಆ ಜಮೀನಿನಿಂದ ನಾವು ಎಂದೆಂದಿಗೂ ಪೈರು ಬೆಳೆ ತೆಗೆದುಕೊಳ್ಳುತ್ತಿರಲು ಆಗಲಾರದಷ್ಟೆ—5 ಹಂಡ್ರೆಡ್ ವೈಟ್‌ಗಳಷ್ಟು ಚೊಕ್ಕಟವಾದ ಕಾಫಿ ಬೆಳೆಯಿಂದ ಅತಿ ಸ್ವಲ್ಪ ಸಸ್ಯಪೋಷಕ ಪದಾರ್ಥವು ಭೂಮಿಗೆ ನಷ್ಟವಾಗುತ್ತದೆ. ಕಾಫಿಗೇನೂ ಇತರ ಪೈರುಗಳಿಗಿಂತ ಮೇಲಾದ ಜಮೀನು ಬೇಕಾಗುತ್ತದೆ. ರಾತಾಂ ಸ್ಟೆಡ್ ಎಂಬ ಸ್ಥಳದಲ್ಲಿ ಈಗ್ಗೆ 50 ವರ್ಷಕ್ಕೆ ಮುಂದಿನಿಂದ ಒಂದೇ ಹೊಲದಲ್ಲಿ ಒಂದೇ ರೀತಿಯಲ್ಲಿ ಒಳ್ಳೇ ಗೋಧಿ ಬೆಳೆಯು ಆಗುತ್ತಲಿದೆ. ಒಂದೇ ತರನಾದ ಎರಡು ತಾಕುಗಳ ಪೈಕಿ ಒಂದಕ್ಕೆ ಗೊಬ್ಬರ ಕೊಟ್ಟು ಮತ್ತೊಂದಕ್ಕೆ ಕೊಡದೆ ಅವುಗಳಲ್ಲಿ ಬೆಳೆದ ಕಾಫಿಯ ಫಸಲನ್ನು ತೂಕಮಾಡದೆ ಹೀಗೆ ಪ್ರತಿಯೊಂದು ತಾಕಿಗೂ ಮಾಡಿದ್ದಲ್ಲಿ ಗೊಬ್ಬರ ಕೊಟ್ಟದ್ದರಿಂದ ಏನೂ ಮೇಲು ದಂತೆ ಕಂಡುಬಂದಿಲ್ಲ. ಹೀಗಿರುವಲ್ಲಿ ಕಾಫಿ ಗಿಡಗಳಿಗೆ ಗೊಬ್ಬರ ಕೊಡುವ ವಿಷಯದಲ್ಲಿ ನಾವು ... ಬೇಕು. ಯಾವದಾದರೂ ಒಂದೆರಡು ಮಾದರಿ ಗೊಬ್ಬರವನ್ನು ಕೊಟ್ಟದ್ದರಿಂದ ಕಂಡುಬಂದ ಅನುಕೂಲತೆಯು ಆದರಿಂದಲೇ ವಿನಾ ಮತ್ತಾವ ಹಟಕತ್ತದ ಕಾರಣದಿಂದಲೂ ಉಂಟಾಗಲಿಲ್ಲವೆಂದು ನಾವು ಗೊತ್ತು ಮಾಡಿಕೊಳ್ಳುವುದು ಅವಶ್ಯಕ. ಏಕೆಂದರೆ ಫಸಲೇನೂ ನಷ್ಟವಾಗದೆ ಖರ್ಚನ್ನು ಕಡಿಮೆ ಮಾಡುವುದಕ್ಕೆ ಆಗುವ ಪಕ್ಷದಲ್ಲಿ ಆ ಉಪಾಯವನ್ನು ನಾವು ಬೇಗ ತಿಳಿದುಕೊಂಡಷ್ಟು ಒಳ್ಳೇದು. ಆದುದರಿಂದ ಕಾಫಿಗೆ ಗೊಬ್ಬರ ಕೊಡುವ ವಿಷಯದಲ್ಲಿ ಬಹಳಕಾಲದವರೆಗೂ ಅನೇಕ ಪರೀಕ್ಷೆಗಳನ್ನು ಮಾಡುವುದು ಅವಶ್ಯಕವೆಂದು ನನ್ನ ಅಭಿಪ್ರಾಯವು. ಅವಶ್ಯವಾದುದಕ್ಕಿಂತ ಹೆಚ್ಚಾಗಿ ಗೊಬ್ಬರವನ್ನು ಕೊಡುವುದು ವ್ಯರ್ಥ. ಅದರಲ್ಲಿಯೂ ಬಹಳಕಾಲ ನೆಲದಲ್ಲಿ ನಿಲ್ಲದಂತ ಹಿಂಡಿ ಮೊದಲಾದ ಗೊಬ್ಬರಗಳನ್ನು ಹೆಚ್ಚಾಗಿ ಕೊಡುವುದು ಸರಿಯಲ್ಲ. ಇದೊಂದು ಪಕ್ಷ, ಮತ್ತೊಂದು ಪಕ್ಷದಲ್ಲಿ—ಅವಶ್ಯವಿದ್ದುದಕ್ಕಿಂತ ಕಡಿಮೆಯಾಗಿ ಗೊಬ್ಬರ ಕೊಟ್ಟಲ್ಲಿ ನಮಗೇ ವ್ಯಾಪಾರ ನಷ್ಟಪಡಿಸಿಕೊಂಡಂತಾಗುತ್ತದೆ. ಎಷ್ಟುಕಾಲದಿಂದ ಆಚರಣೆಯಲ್ಲಿದ್ದರೇನು ಪರೀಕ್ಷೆ ಮಾಡಿದ ಹೊರತು ಯಾವದನ್ನೂ ತೀರ್ಮಾನಿಸುವುದಕ್ಕೆ ಆಗುವುದಿಲ್ಲವಾದುದರಿಂದ ಕೈಲಾದಮಟ್ಟಿಗೂ ಸಂಗತಕ ಪರೀಕ್ಷೆಗಳನ್ನೆಲ್ಲಾ ಮಾಡಿ ಸಾಧ್ಯವಾದಲ್ಲಿ ನಮ್ಮ ಆಚರಣೆಯನ್ನು ತಿದ್ದಿಕೊಳ್ಳಬೇಕು. ಹೀಗೆ ಪರೀಕ್ಷೆ ಮಾಡುತ್ತಿರುವಲ್ಲಿ ಗೊಬ್ಬರ ಕಾಣದ ತಾಕುಗಳು ಯಾವಾಗಲೋ ಒಂದು ಸಲ ಹಿಂದಾಗುವುವು. ಹೀಗೆ ಹಿಂದಾಗುವ ಕಾಲವು ಈಗ ಪ್ರಾಪ್ತವಾಗಿಲ್ಲ. ಆದುದರಿಂದ ಅಕಸ್ಮಾತ್ತಾಗಿ ಹೀಗಾಯಿತೋ ಅಥವಾ ಸ್ಥಳದ ಗುಣದಿಂದಾಯಿತೋ, ಇಲ್ಲದಿದ್ದರೆ ಸಾಧಾರಣವಾಗಿರುವ ಕಾರಣಗಳಿಂದ ಆಯಿತೋ ಎಂಬುದನ್ನು ಕಾಫಿಯ ವ್ಯವಸಾಯದಲ್ಲಿ ಆಸಕ್ತರಾದವರೆಲ್ಲರೂ ಕಂಡುಹಿಡಿಯುವುದರಲ್ಲಿ ಉದ್ಯುಕ್ತರಾಗಬೇಕು.

ಸಾರಜನಕದ ವ್ಯಾಪಾರಕ್ಕಾಗಿ ತಯಾರು ಮಾಡಿದ ಗೊಬ್ಬರಗಳು.

57. ಮೇಲೆ ವಿವರಿಸಿದ ವಿಗ್ರಹ ಕಾರ್ಯಗಳೇ ಅಲ್ಲದೆ ಈ ದೇಶದಲ್ಲಿ ದೊರೆಯುವ ಮುಖ್ಯವಾದ ಕೆಲವು ತಯಾರಿ ಗೊಬ್ಬರಗಳಲ್ಲಿ ಸೇರಿರುವ ಪರಿಮಾಣಗಳನ್ನು, ಈ ವಿಷಯದಲ್ಲಿ ಆಸಕ್ತರಾದವರ ತಿಳುವಳಿಕೆಗಾಗಿ ಹೋದವರ್ಷ ನಮ್ಮ ಉದ್ಯೋಗಶಾಲೆಯಲ್ಲಿ ನಡೆಸಿದ ಪರೀಕ್ಷೆಯಲ್ಲಿ ಕಂಡುಬಂದ ಪ್ರಕಾರ, ಮಧ್ಯಮ, ಅಧಿಕ, ನೀಚವೆಂದು ಮೂರು ತರಗತಿಯಾಗಿ ವಿಂಗಡಿಸಿ ಕೊಟ್ಟಿದೆ. ಈ ವರ್ಷ ವಿಗ್ರಹಿಸಿದ ತಯಾರಿ ಗೊಬ್ಬರಗಳ ಪೈಕಿ ಬೂದಿ ವಿನಾ ಮತ್ತೆಲ್ಲವೂ ಅವುಗಳನ್ನು ಮಾರುವ ವರ್ತಕರು ಅವುಗಳಲ್ಲಿ ಸೇರಿರುವ ವಸ್ತುಗಳ ಪರಿಮಾಣವಿಷ್ಟೇ ಎಂದು ಖರವಸೆ ಕೊಡಲು ಅನುಕೂಲವಾಗಲೆಂಬ ಉದ್ದೇಶದಿಂದ ಮಾಡಿದ್ದಾಯಿತು.

೯ನೆ ತಖ್ತೆ:
ಹಿಂಡಿಗಳು.

ನಂಬರು	ಪದಾರ್ಥ.	ಹಿಂದಲ ವರ್ಷಗಳ ಪರೀಕ್ಷೆಯಲ್ಲಿ ಕಂಡುಬಂದ ಸಾರಜನಕದ ಪರಿಮಾಣ.			1904–05 ಸಾಲಿನಲ್ಲಿ ಕಂಡುಬಂದ ಪರಿಮಾಣ.		ಸ್ಥಳ.
		ಸರಾಸರಿ ಶೇಕಡ.	ಕೀಳು ಶೇಕಡ.	ಹೆಚ್ಚು ಶೇಕಡ.	ಸಾರಜನಕದ ಶೇಕಡ.	ರಂಜಕಲವಣದ ಶೇಕಡ.	
	ಹರಳಿನ ಬಿಳಿ ಹಿಂಡಿ ...	6·53	5·56	8·69			
55	ಡಿಟ್ಟೋ ...				...	...	
69	ಡಿಟ್ಟೋ ...	...	...	...	4·76	...	
	ಕೊರಡಿ ಹಿಂಡಿ ...	4·83	3·92	6·43	6·35	2·62	ಬೆಂಗಳೂರು.
06	ಡಿಟ್ಟೋ ...				...	...	
07	ಡಿಟ್ಟೋ ...	...		...	8·30	...	
	ಬೇವಿನ ಹಿಂಡಿ ...	5·01	4·43	5·99	4·86	...	ಹುಬ್ಬಳ್ಳಿ
58	ಡಿಟ್ಟೋ ...				...	...	ಡಿಟ್ಟೋ
	ಹೊಂಗೆ ಹಿಂಡಿ ...	3·81	3·59	4·01	4·12		
70	ಡಿಟ್ಟೋ ...	...			...		
	ಹಿಪ್ಪೆ ಹಿಂಡಿ ...	2·97	1·80	4·14	3·88	·99	ಬೆಂಗಳೂರು

58. ಬಿಳಿಪದಳು ಹಿಂಡಿ —26[illegible] ಕೊಬರು ಬಿಳಿ ಹರಳಿನ ಹಿಂಡಿಯು ದೊಡ್ಡ ರಾಶಿಯಿಂದ ತೆಗೆದುದು ಇದು ಸಾಮಾನ್ಯವಾಗಿ ಸಿಕ್ಕುವ ಬಳ್ಳಿ ಬಿಳಿ ಹರಳಿನ ರಭಮು—ಇದರಿಂದ ಮಿಶ್ರವಾದುದಾಗಿ ಕಂಡುಬಂದ ಎಲ್ಲಾ ರಭಮುಗಳನ್ನು ವಜಾ ಮಾಡಿದ್ದಾಯಿತು 5ನೆ ನಂಬರ್ ರಭಮೂ ಕೂಡ ರಾಶಿಯಿಂದ ತೆಗದಂತೆ ಕಾಣುತ್ತೆ. ಇದಕ್ಕೆ ಮುಂಚೆ ಈ ಉದ್ಯೋಗಶಾಲೆಯಲ್ಲಿ ವಿಗ್ರಹಿಸಿದ ಇತರ ರಭಮುಗಳಿಗಿಂತ ಇದರಲ್ಲಿ ಸಾರಜನಕವು ಕಮ್ಮಿಯಾಗಿದೆ. ಇದು ಮೈಸೂರು ಸೀಮೆಯ ಹೊರಗೆ ತಯಾರಾಗಿ ಈ ಸೀಮೆಗೆ ಬಂದುದು. ಹೀಗಿರುವುದರಿಂದ ಈ ಗೊಬ್ಬರಗಳಲ್ಲಿರುವ ಪದಾರ್ಥಗಳ ಪರಿಮಾಣದ ವಿಷಯದಲ್ಲಿ ಅವುಗಳನ್ನು ತಯಾರುಮಾಡುವವರು ಕೊಂಡುಕೊಳ್ಳುವವರಿಗೆ ಭರವಸೆಯನ್ನು ಕೊಡಬೇಕೆಂದು ನಿರ್ಬಂಧಪಡಿಸುವುದು ಅವಶ್ಯವೆಂದು ಇದರಿಂದ ಗೊತ್ತಾಗುತ್ತದೆ.

59. ಕುರಡಿ—ಹೊಸದಾಗಿ ಏರ್ಪಡಿಸಿದ ಒಂದು ಉದ್ಯೋಗಶಾಲೆಯಲ್ಲಿ ತಯಾರಾದ ಗೊಬ್ಬರಗಳಲ್ಲಿರುವ ಪದಾರ್ಥಗಳಿಗೆ ಪರಿಮಾಣ ವಿಷದಲ್ಲಿ ಕೊಂಡುಕೊಳ್ಳುವವರಿಗೆ ಭರವಸೆ ಕೊಡುವುದಕ್ಕಾಗಿ ಅವುಗಳನ್ನು ಪರೀಕ್ಷಿಸಿ ನಿರ್ಧರಿಸಿದ್ದುದು ಸರಿಯಾಗಿದೆಯೋ ಇಲ್ಲವೋ ಎಂದು ಎಂದು ಮೊಖಾಬಿಲೆ ಮಾಡುವುದಕ್ಕಾಗಿ 206—207ನೆ ನಂಬರುಗಳನ್ನು ವಿಗ್ರಹಿಸಿದ್ದಾಯಿತು. 206ನೆ ನಂಬರಿನಲ್ಲಿ ಸಾರಜನಕವು ಅಪರಿಮಿತವಾಗಿದ್ದುದಾಗಿ ನಮೂದಿಸಿದ್ದರಿಂದ ಅದರಲ್ಲೇನೋ ತಪ್ಪಿರಬಹುದೆಂದು ಯೋಚಿಸಿದೆ. ಆದರೆ ಅದು ತಪ್ಪಾಗಿರಲಿಲ್ಲ. ಈ ಕುರಡಿ ಹಿಂಡಿಯು ಯಾವುದೋ ಒಂದು ರಭಮಿನಲ್ಲಿ ಶೇಕಡಾ 5ರಷ್ಟು ಸಾರಜನಕವು ಇತ್ತು. ಇದರಲ್ಲಿ ಅಥವಾಪಕ್ಷ ಶೇಕಡಾ 3·22ರಷ್ಟು ಸಾರಜನಕವಿರುತ್ತೆ. ಈ ಕುರಡಿ ಅಂದರೆ ಕುಸುಂಬೆ ಹಿಂಡಿಯಲ್ಲಿ ಕಂಡುಬರುವಷ್ಟು ಗುಣವ್ಯತ್ಯಾಸವು ಮತ್ತಾವ ತಯಾರಿ ಗೊಬ್ಬರದಲ್ಲಿಯೂ ಕಂಡುಬರುವುದಿಲ್ಲ.

60. ಮೇಲೆ ಕಂಡ ಇತರ ವಿಧವಾದ ಹಿಂಡಿಗಳ ವಿಷಯದಲ್ಲಿ ಕೊಟ್ಟಿರುವ ಪರಿಮಾಣ ಸಂಖ್ಯೆಗಳನ್ನು ಕುರಿತು ಏನೂ ವಿಶೇಷವಾಗಿ ಹೇಳತಕ್ಕದ್ದಿಲ್ಲ.

61. ಒಂದೇ ಜಾತಿಯ ಬೇರೆ ಬೇರೆ ರಭಮುಗಳನ್ನು ವ್ಯತ್ಯಾಸವನ್ನು ಅರಿತುಕೊಳ್ಳಬೇಕಾದರೆ ಈ ಇಲಾಖೆಯ 3ನೆ ಸಂವತ್ಸರದ ಬಿನ್ನವತ್ತಲೆಯ 12ನೆ ಪುಟದಲ್ಲಿ, ಈ ನಾಲ್ಕನೆ ಬಿನ್ನವತ್ತಲೆಯ 15ನೆ ಪುಟದಲ್ಲಿ, 5ನೆ ಬಿನ್ನವತ್ತಲೆಯ 24ನೆ ಪುಟದಲ್ಲಿಯೂ ನೋಡಿ ತಿಳಿದುಕೊಳ್ಳಬಹುದು.

62 ಮೂಳೆ ಮತ್ತು ಮೀನು—ಈ ಕೆಳಗಿನ ತಃಖ್ತೆಯು ಜಮೀನಿನಲ್ಲಿಯೂ ಮತ್ತು ಎಲುಬಿನ ಪುಡಿಯಲ್ಲಿಯೂ ಇರುವ ಪದಾರ್ಥಗಳ ಪರಿಮಾಣವನ್ನು ತೋರಿಸಿರುತ್ತೆ. ಇದರ ವಿಷಯವಾಗಿ ಹೇಳತಕ್ಕದ್ದು ಏನೂ ಇಲ್ಲ. ಬಂಗಾರದಜಾತಿ ಮೀನಿನಲ್ಲಿ ಅಪರಿಮಿತವಾಗಿ ಸಾರಜನಕವಿದೆ. ತೂರು ಅಥವ ಬೈಗಿಮೀನೆಂಬ ಒಂದು ತರಹೆ ಕಿರು ಮೀನಿನಲ್ಲಿ ಬಹಳ ಸ್ವಲ್ಪವಿತ್ತು. ಎಲುವು ಪುಡಿಗಳ ಪೈಕಿ ಸಾರಜನಕವು ಕಡಿಮೆಯಾಗಿದ್ದ ರಭಮು ಮಿಶ್ರವಾದುದೆಂದು ನಿಸ್ಸಂದೇಹವಾಗಿ ಹೇಳಬಹುದು.

10ನೆ ತಃಖ್ತೆ.

ಮೂಳೆ ಮತ್ತು ಮೀನು.

ನಂಬರು	ಪದಾರ್ಥ	ಹಿಂದಿನ ವರ್ಷಗಳ ಫಲಿತಾರ್ಥಗಳು.						1904–05ನೆ ಸಾಲಿನ ವಿಗ್ರಹದ ಫಲಿತಾರ್ಥ.		ಸ್ಥಳ
		ಸಾರಜನಕ			ರಂಜಕದ ಉಪ್ಪು					
		[illegible]	[illegible]	[illegible]	[illegible]	[illegible]	[illegible]	ಸಾರಜನಕ	ರಂಜಕದ ಉಪ್ಪು	
	ಬಣ್ಣಮೀನು ...	6·01	3·96	8·72	5·03	1·73	7·51	...	...	
56	ಡಿಟೋ ...	...	...	...	...	...	...	4·4	4·53	ಪಶ್ಚಿಮತೀರ
57	ಡಿಟೋ ...	...	...	...	...	...	...	6·3[illegible]	3·61	
	ಮೂಳೆಪುಡಿ ...	3·58	2·52	4·04	22·3[illegible]	18·62	23·36	...	...	
71	ಡಿಟೋ ...	...	...	...	...	...		3·77	22·83	ಬೆಂಗಳೂರು

ಇತರ ತಯಾರಿ ಗೊಬ್ಬರಗಳು.

63. ನೀಲಗಿರಿಯಲ್ಲಿರುವ ತುಪಾಕಿ ಮದ್ದಿನ ಕಾರ್ಖಾನೆಯಲ್ಲಿ ಉಂಟಾಗುವ ಸರ್ಜಿಕ ಸಂಯುಕ್ತ ಗಂಧಕ ಲವಣವನ್ನು (Acid sulphate of Potash) ಗೊಬ್ಬರದಂತೆ ಉಪಯೋಗಿಸಬಹುದೆಂದು ಬಹುಮಂದಿ ಕೇಳಿರುತ್ತಾರೆ. ಇದರಿಂದ ಗೊಬ್ಬರಕ್ಕೆ ಉಪಯೋಗವಾಗುವ ಯಾವ ಪದಾರ್ಥವನ್ನಾಗಲಿ ಉಪಯೋಗಿಸುವುದಕ್ಕೆ ಜನರಿಗೆ ಆಶೆ ಇರುವಂತೆ ಗೊತ್ತಾಗಹಾಗಾಯಿತು. ಈ ದಕ್ಷಿಣದೇಶದ ಮಣ್ಣಿನಲ್ಲಿ ಅತ್ಯಲ್ಪವಾಗಿ ಸುಣ್ಣ ಮಿಶ್ರವಾಗಿರುವುದರಿಂದ ಈ ಸರ್ಜಿಕ ಗಂಧಕ ಮಿಶ್ರಿತವಾದ ಉಪ್ಪು ಗೊಬ್ಬರಕ್ಕೆ ಅನುಕೂಲವಾಗುವದಿಲ್ಲ. ಸಸ್ಯಗಳಿಗೆ ಇದು ಬಹು ಕಷ್ಟ ವಿಷದಂತೆ ಪರಿಣಮಿಸಬಹುದು. ಆದರೆ ಈ ಸಂಗತಿಗಳನ್ನು ಪರೀಕ್ಷಿಸುವುದಕ್ಕೆ ಇದುವರೆಗೆ ಯಾವ ಪ್ರಯತ್ನವೂ ಮಾಡಿಲ್ಲ. ಹೊಸದಾಗಿ ಸುಟ್ಟ ಸುಣ್ಣವನ್ನು ಅದರೊಂದಿಗೆ ಹೆಚ್ಚು ಕಮ್ಮಿ ಸರಿಸಮವಾಗಿ ಬೆರಸಿದರೆ ಪ್ರಾಯಶಃ ಗೊಬ್ಬರಕ್ಕೆ ಅನುಕೂಲಿಸಬಹುದು. ಆದರೆ ಸುಣ್ಣದ ಬೆಲೆಯು ಹೆಚ್ಚಾಗಿರುವುದು ಮತ್ತು ಈ ರೀತಿಯಲ್ಲಿ ಉಪಯೋಗಿಸಿದರೆ ಪರೋಕ್ಷದಲ್ಲಿ ಗೊಬ್ಬರದಂತೆ ಪರಿಣಮಿಸುವ ಅದರ ಗುಣಕ್ಕೆ ಬಹುಮಟ್ಟಿಗೆ ನ್ಯೂನತೆ ಉಂಟಾಗು

ವುದು. ಈ ಕಾರಣದಿಂದ ಇದನ್ನು ಒಬ್ಬರೂ ಪ... ದುಕೊಳ್ಳದೆ ಇದು ... ದೋ ಅಲ್ಲದ್ದೋ ಎಂಬುದನ್ನು ಪರೀಕ್ಷಿಸಿಲ್ಲ. ಕೊಯಿಮುತ್ತೂರಿನಲ್ಲಿರುವ ಸ್ಟೇನ್ಸ್ ಸಂಘದವರು ಈ ಸರ್ಜಿಕ ಸಂಯುಕ್ತ ಗಂಧಕ ಲವಣವನ್ನು ಎಲುವಿನ ಪುಡಿಯೊಂದಿಗೆ ಸೇರಿಸಿರುತ್ತಾರೆ. ಹೀಗೆ ಮಾಡುವುದರಲ್ಲಿ ಅವರ ಅಭಿಪ್ರಾಯವೇನೆಂದರೆ, ಎಲುವಿನ ಪುಡಿಗೆ ಗಂಧಕ ದ್ರಾವಕವನ್ನು ಸೇರಿಸಿದರೆ ಏನಾಗುತ್ತದೋ ಅದೇರೀತಿಯಲ್ಲಿ ಸರ್ಜಿಕ ಸಂಯುಕ್ತ ಗಂಧಕ ಲವಣವು ಪ್ರವರ್ತಿಸುವುದೆಂದು ಊಹಿಸಿರುತ್ತಾರೆ. ಆದರೆ ಎಲುವಿನ ಪುಡಿಯೂ ಗಂಧಕದಲವಣವು ಎರಡೂ ಪುಡಿಯಾಗಿದ್ದುದರಿಂದ ಅವುಗಳಲ್ಲಿ ಪರಸ್ಪರ ಪರಿವೃತ್ತಿಗೆ ಅನುಕೂಲವಾಗಲಿಲ್ಲ. ಆದಾಗ್ಯೂ ಈ ಮಿಶ್ರದ್ರವ್ಯವನ್ನು ವಿಗ್ರಹಿಸಲು ಸ್ವಲ್ಪಮಟ್ಟಿಗೆ (ಆ ಪದಾರ್ಥಗಳ ಗುಣ ವ್ಯತ್ಯಾಸವಾಯಿತೆಂದು ತಿಳಿಯಬರುತ್ತೆ.) ಆ ಪದಾರ್ಥಗಳಲ್ಲಿ ಪರಿವೃತ್ತಿ ಉಂಟಾಯಿತೆಂದು ಗೊತ್ತಾಯಿತು. ಹೇಗೆಂದರೆ, ಈ ಮಿಶ್ರದ್ರವ್ಯದಲ್ಲಿ ಲಿಟ್ಮಸ್ ಕಾಗದಗಳಿಗೆ ಉದಾಸೀನವಾಗಿರುವ * ಅಮೋನಿಯಂ ಸಿಟ್ರೇಟ್ ಎಂಬ ಉಪ್ಪಿನ ನೀರಿನಲ್ಲಿ ಕರಗುವ ರಂಜಕದ ಉಪ್ಪು ಶೇಕಡ 8·05ರಂತೆ ಸಿಕ್ಕಿತು. ಸರ್ಜಿಕ ಗಂಧಕ ಸಂಯುಕ್ತ ಲವಣವನ್ನು ಸೇರಿಸಿದ್ದರಿಂದ ಪ್ರಮಾಣವು ಹೆಚ್ಚಾಗಲು ಅದರಲ್ಲಿ ರಂಜಕಲವಣವು ಸುಮಾರು ಶೇಕಡಾ 25ರಂತೆ ಇದ್ದುದು 13·55ರಷ್ಟಕ್ಕೆ ಇಳಿಯಿತು. ಈ ಮಿಶ್ರದಲ್ಲಿದ್ದ ರಂಜಕಲವಣದ ಪೈಕಿ ಶೇಕಡಾ 59·57 ರಷ್ಟು ಸಸ್ಯ ಪೋಷಣೆಗೆ ಉಪಯೋಗವಾಗುವ ಸ್ಥಿತಿಯಲ್ಲಿತ್ತು. ಈ ಮಿಶ್ರದ್ರವ್ಯವನ್ನು ಮಾಡಲು ಉಪಯೋಗಿಸಿದ ಶುದ್ಧ ಎಲುವಿನ ಪುಡಿಯ ಮಾದರಿಯನ್ನು ಕಳುಹಿಸಲಿಲ್ಲವಾದುದರಿಂದ ಇಲ್ಲಿಯೇ ಇದ್ದ ಒಂದು ರಖಂ ಎಲುವಿನ ಪುಡಿಯನ್ನು ವಿಗ್ರಹಿಸಲು ಅದರಲ್ಲಿರುವ ರಂಜಕ ಲವಣದ ಪೈಕಿ ಶೇಕಡಾ 27·16ರಷ್ಟು ಸಸ್ಯೋಪಯೋಗಕ್ಕೆ ಅನುಕೂಲಿಸುವ ಸ್ಥಿತಿಯಲ್ಲಿತ್ತು. ಅಲ್ಲಿನ ಎಲುವಿನ ಪುಡಿಯೂ ಇಲ್ಲಿನ ಎಲುವಿನ ಪುಡಿಯೂ ಒಂದೇ ವಿಧವಾಗಿದ್ದ ಪಕ್ಷದಲ್ಲಿ (ಹಾಗೆ ಇಲ್ಲದೆ ಇರುವುದಕ್ಕೆ ಯಾವ ಕಾರಣವೂ ತೋರುವುದಿಲ್ಲ) ಸರ್ಜಿಕ ಗಂಧಕ ಸಂಯುಕ್ತ ಲವಣವು ಪುಡಿಯಾಗಿದ್ದರೂ ಎಲುವಿನ ಪುಡಿಯಲ್ಲಿ ವ್ಯಾಪಿಸಿ ಗುಣವ್ಯತ್ಯಾಸ ಮಾಡಿತೆಂದು ನಿಸ್ಸಂದೇಹವಾಗಿ ತೋರುತ್ತದೆ. ಹೀಗೆ ಸರ್ಜಿಕ ಗಂಧಕ ಸಂಯುಕ್ತ ಲವಣದಿಂದ ಎಲುವಿನ ಪುಡಿಯಲ್ಲಿ ಗುಣವ್ಯತ್ಯಾಸ ಉಂಟಾದಹಾಗೆಲ್ಲಾ ಆ ಲವಣದ ದುರ್ಗುಣಗಳು ಕಡಿಮೆಯಾಗುವುದರಿಂದ ಚನ್ನಾಗಿ ದೂಳಾದ ಎಲುವಿನ ಪುಡಿಗೆ ಮುಂದವಾದ ಆ ಲವಣದ ನೀರನ್ನು ಬೆರಸಿದರೆ ಎಲುವಿನ ಪುಡಿಯು ವಿಶೇಷವಾಗಿ ಸಸ್ಯ ಪೋಷಣೆಗೆ ಉಪಯೋಗವಾಗುವಂತೆ ಮಾಡುವುದರಿಂದ ಸಸ್ಯವೃದ್ಧಿಗೆ ವಿರೋಧವಾದ ಅದರ ದುರ್ಗುಣಗಳನ್ನೇ ಅನುಕೂಲವಾಗುವಂತೆ ಮಾಡಬಹುದು. ಕೊಯಿಮುತ್ತೂರಿನಲ್ಲಿರುವ ಸ್ಟೇನ್ಸ್ ಸಂಘದವರು ಈ ವಿಷಯದಲ್ಲಿ ಪ್ರಯತ್ನಪಡುವುದಾಗಿ ಹೇಳಿದ್ದಾರೆ ಹಾಗೆ ಅವರು ಮಾಡಿದ ಗೊಬ್ಬರದ ಮಾದರಿಯನ್ನು ಈ ಇಲಾಖೆಯಲ್ಲಿ ವಿಗ್ರಹಿಸಿ ಅದನ್ನು ತೋಟಗಳಲ್ಲಿ ಬೆಳೆ ಮಾಡುವುದಕ್ಕೆ ಉಪಯೋಗಿಸಿ ಪರೀಕ್ಷಿಸುತ್ತದೆ.

64. ತಿರುಚನಾಪಲ್ಲಿಯ ರಂಜಕಲವಣ.—ಈ ಲವಣದ ಉಪಯೋಗದ ವಿಷಯದಲ್ಲಿ ಅನೇಕರು ವಿಚಾರಿಸಿದುದರಿಂದ ಅದರ ಒಂದು ರಖಮನ್ನು ವಿಗ್ರಹಿಸಿದ್ದಾಯಿತು. ಅದು ಕಲ್ಲಾಗಿರುವುದರಿಂದ ಅದನ್ನು ರಂಜಕಲವಣವನ್ನು (ಸೂಪರ್‌ಫಾಸ್ಫೇಟನ್ನಾಗಿ) ಮಾಡಿದ ಹೊರ್ತು ಗೊಬ್ಬರಕ್ಕೆ ಉಪಯೋಗವಾಗಲಾರದು. ಹೀಗಿದ್ದರೂ ಅದನ್ನು ನಾರಾಗಿ ಪುಡಿಮಾಡಿ ಒಂದು ಅಂಗುಲಕ್ಕೆ 100 ಕಣ್ಣುಗಳುಳ್ಳ ಜಂದರಿಯಲ್ಲಿ ಶೋಧಿಸಿದ್ದಾಯಿತು. ಆದರೆ ಅದರಲ್ಲಿದ್ದ ರಂಜಕಲವಣದ ಪೈಕಿ ಅತಿ ಸ್ವಲ್ಪಮಟ್ಟಿಗೆ ಲಿಟ್ಮಸ್ ಕಾಗದಗಳಿಗೆ ಉದಾಸೀನವಾಗಿರುವ ಅಮೋನಿಯಾ ಸಿಟ್ರೇಟ್ ಲವಣದ ನೀರಿನಲ್ಲಿ ಕರಗಿತು. (ಈ ವಿಷಯವು 49ನೆ ಪುಟದಲ್ಲಿ ಕೊಟ್ಟಿರುವ ತಃಖ್ತೆಯನ್ನು ನೋಡಿದರೆ ವಿಶದವಾಗುತ್ತದೆ.) ಆದುದರಿಂದ ಯೂರೋಪ್ ಖಂಡದಲ್ಲಿಯೂ ಅಮೆರಿಕಾ ಖಂಡದಲ್ಲಿಯೂ ಮಾಡುವ ಅಂದಾಜಿನ ಪ್ರಕಾರ ಇದರಲ್ಲಿ ಉಪಯೋಗವಾದ ಪದಾರ್ಥವು ಶುದ್ಧಾಂಗವಾಗಿ ಇಲ್ಲವೆನ್ನಬೇಕು.

65. ಎಲುವಿನ ಇದ್ದಲು.—ಸಕ್ಕರೆ ಕಾರ್ಖಾನೆಯಲ್ಲಿ ಉಪಯೋಗಿಸಿ ಬಿಸಾಟ ಎಲುವಿದ್ದಲಿನಲ್ಲಿ ಬಹಳವಾಗಿ ಸಾರಜನಕವಿತ್ತು. ಆದರೆ ಇದರೊಡನೆ ಗಂಧಕ ದ್ರಾವಕವನ್ನು ಬೆರಸಿ ರಂಜಕಲವಣ ಕ್ರಮವನ್ನಾಗಿ ಮಾಡಿದ ಹೊರತು ನಿರುಪಯೋಗವಾದುದೆಂದು ಅಭಿಪ್ರಾಯಪಡುತ್ತಾರಾದುದರಿಂದ ಅದರಲ್ಲಿ ಬಹಳವಾಗಿ ಸಾರಜನಕವಿರುವದರಿಂದ ಮಾತ್ರಕ್ಕೆ ಅದನ್ನು ಒಳ್ಳೆ ಗೊಬ್ಬರವನ್ನಾಗಿ ಹೇಳಲಾಗುವುದಿಲ್ಲ. ಮತ್ತು ಅದರಲ್ಲಿರುವ ಸಾರಜನಕವು ಪ್ರಾಯಶಃ ಜಡ ನಿಶ್ಚೇಷ್ಟ ನಿರ್ವ್ಯಾಪಕವಾಗಿರುತ್ತದೆ.

66. ಕತ್ತಾಳೆ ನಾರಿನ ಕಸ.—ಶರ್ವರಾಯನಬೆಟ್ಟದಿಂದ ಕಳುಹಿಸಿದ ಸಣ್ಣ ಕತ್ತಾಳೆ ನಾರಿನ ಕಸದಲ್ಲಿ ಶೇಕಡಾ 1·64 ರಷ್ಟು ಸಾರಜನಕವಿತ್ತು. ಆದುದರಿಂದ ಗೊಬ್ಬರವಾಗಿ ಉಪಯೋಗಿಸಲು ಇದನ್ನ ಬಹುದೂರ ಸಾಗಿಸಿಕೊಂಡು ಹೋಗುವುದರಿಂದ ಆದಾಯಕರವಾಗಿ ತೋರಿಬರುವುದಿಲ್ಲ. ಅದರಲ್ಲಿರುವ ಸಾರಜನಕವು ಇಲ್ಲಿ ವಿಗ್ರಹಿಸಿದ ಕಡೇ ದರ್ಜೆ ಹಿಪ್ಪೆ ಹಾಕಿ ಇಲ್ಲಿರುವುದಕ್ಕಿಂತ ಸ್ವಲ್ಪ ಕಮ್ಮಿಯಾಗಿದೆ. ಆದರೆ ಹಿಂಡಿಗಳಲ್ಲಿರುವ ಸಾರಜನಕದಂತೆ ಅದರಲ್ಲಿರುವುದು ಸಸ್ಯ ಪೋಷಣೆಗೆ ಅನುಕೂಲವಾಗಿಲ್ಲದುದರಿಂದಲೂ ಅದು ಅಡಕವಾಗಿಲ್ಲದುದರಿಂದಲೂ ಅದನ್ನು ವ್ಯಾಪಾರಕ್ಕನುಕೂಲವಾದ ಗೊಬ್ಬರವೆಂದು ಹೇಳಲಾಗುವುದಿಲ್ಲ. ಹೀಗಿದ್ದರೂ ಪೈರು ಭೂಮಿಯಲಿಡುವುದಕ್ಕೆ ಅನುಕೂಲವಾಗುವಂತೆ ಭೂಮಿಯನ್ನು ಪೊಳ್ಳು ಮಾಡಬೇಕಾದಲ್ಲಿ ಇದು ಹಗುರವಾಗಿಯೂ ಗುಂಜಿನಂತೆಯೂ ಇರುವುದರಿಂದ ಉಪಯೋಗವಾಗಬಹುದು. ನೆಲವನ್ನು ಪೊಳ್ಳುಗೆಡುವುವ ಗೊಬ್ಬರವು ಬಹಳ ಉಪಯೋಗವಾದುದರಿಂದ ಕತ್ತಾಳೆ ನಾರಿನ ಕಾರ್ಖಾನೆಗಳ ಕಸವನ್ನು ಅವುಗಳಿಗೆ ಹತ್ತಿರದಲ್ಲಿರುವ ಭೂಮಿಗಳಿಗೆ ಉಪಯೋಗಿಸಿದ್ದಲ್ಲಿ ಅದೂ ಆ ಕಾರ್ಖಾನೆಗಳಲ್ಲಿ ಉತ್ಪತ್ತಿಯಾಗುವ ಉಪಯೋಗ ಪದಾರ್ಥವೆಂದೆಣಿಸಿಕೊಳ್ಳುತ್ತದೆ.

67. ಬೂದಿ. ಪ್ರತಿ ವರ್ಷದಲ್ಲೂ ಗೊಬ್ಬರಕ್ಕಾಗಿ ಸಾದೆಯ ಬೂದಿಯನ್ನು ಬಹಳವಾಗಿ ಬಳಸುತ್ತಾರೆ. ಇದಕ್ಕೆಂದೇ ಪುಳ್ಳೆಯನ್ನುರಿಸಿ ಬೂದಿಯನ್ನು ಮಾಡುತ್ತಾರೆ. ಇದರಿಂದುಂಟಾದ ಉರಿಯನ್ನು ಯಾವುದಕ್ಕೂ ಉಪಯೋಗಿಸುವುದಿಲ್ಲ. ಹೀಗೆ ಮಾಡಿದ ಬೂದಿಯಲ್ಲಿ ಒಂದೊಂದು ಸಲ ಸರ್ಜಿಕವು ಬಹಳ ಕಮ್ಮಿಯಾಗಿರುತ್ತದೆ. ಆದುದರಿಂದ ಪುಳ್ಳೆಗೇನೂ ಬೆಲೆ ಇಲ್ಲದಿದ್ದರೂ ಕೂಲಿಗಾರರಿಗೆ ಮತ್ತೇನೂ ಕೆಲಸ ದೊರೆಯದೆ ಸುಲಭಕೂಲಿಗವರು ಬಂದರೂ ಈ ಬೂದಿಯನ್ನು ಮಾಡುವುದರ ಖರ್ಚು ಕೂಡ ಹೊರಡುವುದಿಲ್ಲ. ಈ ಕೆಳಗೆ ಕೊಟ್ಟಿರುವ ತಃಖ್ತೆಯ 60·62ನೆ ನಂಬರುಗಳು ಈ ತರಹೆ

* ಇದು ಗೊಬ್ಬರಗಳಲ್ಲಿ ಕೆಲಸಕ್ಕೆ ಬರುವ ರಂಜಕದ ಉಪ್ಪನ್ನು ಕಂಡುಹಿಡಿಯುವುದಕ್ಕೆ ಉಪಯೋಗಿಸುವ ಪದಾರ್ಥ.

ಯವು-ಇವುಗಳೆರಡರಲ್ಲಿಯೂ (H[illegible]hl[illegible]n[illegible]and) ಸ[illegible] ಉಪ್ಪಿನದ್ರಾವಕದಲ್ಲಿ ಕರಗುವ ಸರ್ಜಿಕವು ಶೇಕಡ 1ರಷ್ಟು ಇದೆ. ಇವರ ಪೈಕಿ ಅ[illegible]ಕ್ಕಿಂತ ಹೆಚ್ಚಾಗಿ ಕುಡಿಯುವ ನೀರಿನಲ್ಲಿ ಕರಗುವುದಿಲ್ಲವಾದುದರಿಂದ ಅಷ್ಟೇ ಉಪಯೋಗಕ್ಕೆ ಸಿದ್ಧವಾಗಿದೆ. ಆದುದರಿಂದ ಈ ಬೂದಿಯು ಒಂದು ಟನ್ ಮೂರು ರೂಪಾಯಿಗಿಂತ ಕಡಿಮೆ ಬೆಲೆ ಬಾಳುತ್ತದೆ. ಇವಕ್ಕಿಂತ ಬೇರೆ ಜಾತಿ ಪುಳ್ಳೆ ಉರಿಸಿ ಮಾಡಿದ 30—32ನೇ ನಂಬರ್ ಮಾದರಿಗಳು ಬಹಳ ಮೇಲಾಗಿವೆ. ಇವುಗಳು ಮುಂದೆ ಹೇಳಿದ ಮಾದರಿಗಳಿಗಿಂತ ಎರಡರಷ್ಟು ಬಾಳುತ್ತವೆ. ಇವುಗಳಲ್ಲಿಯೂ ಕೂಡ ಸರ್ಜಿಕವು ಕಡಮೆ. 63ನೆ 64ನೆ ನಂಬರುಗಳಲ್ಲಿ ಮೇಲಾದ ರಖಮುಗಳು ಆದರೆ ಇದುವರಿಗೂ ವಿಗ್ರಹಸಿದ್ದರಲ್ಲಿ 33ನೆ ನಂಬರೆ ಮೊದಲು ತರಹೆ. ಇದು ಬಿದರು ಬೂದಿ ಕೊಡಗಿನಿಂದ ಬಂದುದು. ಈ ರಖಮನ್ನು ಬಹಳ ಕೀಳುತರಹೇದೆಂದು ಜನರು ತಿಳಿದುಕೊಂಡಿರುವುದು ಆಶ್ಚರ್ಯವಾಗಿದೆ. ಪ್ರಾಯಶಃ ಇದು ಹಗುರವಾಗಿರುವುದರಿಂದ ಹೀಗೆ ತಿಳಿದಿರಬಹುದು. ಮುಂದೆ ಲಂಟಾನಾ ಮುಂತಾದ ಗಿಡಗಳ ಬೂದಿಗಳನ್ನು ವಿಗ್ರಹಿಸಲಾಗುತ್ತದೆ. ಅವುಗಳಲ್ಲಿರುವ ಸರ್ಜಿಕದ ಶೇಕಡ ಹೆಚ್ಚಾಗಿದ್ದರೆ ಪ್ರಾಯಶಃ ಲಂಟಾನಾ ಗಿಡಗಳು ಶಿಕ್ಕಿದಹಾಗೆ ಬೆಳೆಯುವುದನ್ನೂ ತಪ್ಪಿಸುವುದಕ್ಕೆ ಇದೊಂದುಪಾಯವಾಗಿರುತ್ತೆ. ಲಂಟಾನಾ ಜಾತಿ ವಿನಾ ಇತರ ಜಾತಿ ಗಿಡಗಳನ್ನು ಬೂದಿಗೋಸ್ಕರವಾಗಿಯೂ ಸುಡುವುದನ್ನು ನೋಡಿದರೆ ವ್ಯಸನವಾಗುತ್ತದೆ.

11ನೆ ನಂಬರು ತಃಖ್ತೆ.

ಬೂದಿ ಮತ್ತು ಇತರ ಚಿಲ್ಲರೆ ಗೊಬ್ಬರಗಳು.

ನಂಬರು.	ಪದಾರ್ಥ.	ಸಾರಜನಕ.	ರಂಜಕ ಲವಣ.	ಅಮೋನಿಯಮ್ ಸಿಟ್ರೇಟಿನಲ್ಲಿ ಕರಗುವ ರಂಜಕಲವಣ.	ಸರ್ಜಿಕ.	ನೀರಿನಲ್ಲಿ ಕರಗುವ ಸರ್ಜಿಕ.	ಸುಣ್ಣ.	ಸುಡುವದರಲ್ಲಿ ಉಂಟಾದ ನಷ್ಟ.	ಕರಗದೆ ನಿಂತದ್ದು.
	ಮೂಳೆಪುಡಿ ..	4·04	23·34	6·34	...	...	...	...	...
188	ಸಮತೂಕವಾಗಿ ಶೇರಿಸಿದ ಬಣ ಸರ್ಜಿಕ ಸಂಯುಕ್ತ ಗಂಧಕ ಲವಣ ಮತ್ತು ಮೂಳೆಪುಡಿ.	..	13·55	8·09	..	..	...	..	...
204	ತಿರುಚನಾಪಲ್ಲಿಯ ರಂಜಕ ಲವಣ.	..	25·51	0·38	...	....	43·86	..	..
37	ಮೂಳೆ ಇದ್ದಿಲು ..	1·21	27·80	...	...	...	...	...	..
31	ಮದ್ದಿಟ್ಟುಪ್ಪು ..	3·63	....	....	..	16·71	..	...	..
54	ಶೋಧಿಸಿದ ಟ್ಟುಪ್ಪು ...	12·95	..	....	...	39·58	...	...	..
187	ಕತ್ತಾಳೆ ನಾರಿನ ಕಸ	1·64	..	...	...	..	...	...	..
29	ಬೂದಿ	..	1·15	...	...	...	11·51	26·90	45·54
60	ಮಿಶ್ರಜಾತಿ ಮರದ ಬೂದಿ.	...	...	...	·93	0·61	..	15·54	....
62	ಡಿಟೋ ..	...	...	...	·78	0·40	...	...	...
63	ಬೆರಣಿ ಬೂದಿ ..	....	...	...	4·82	2·53	...	...	...
64	ಆವಿಗೆ ಬೂದಿ ..	...	...	...	3·47	1·90	...	...	...
30	ಮಿಶ್ರಜಾತಿ ಮರದ ಬೂದಿ.	...	0·57	...	2·32	..	17·[illegible]3	20·24	44·50
32	ಡಿಟೋ ..	..	1·45	...	1·97	..	29·04	28·94	24·40
33	ಬಿದರು ಬೂದಿ ..	...	2·54	...	5·40	..	...	...	...

ಚಿಲ್ಲರೆ ವಿಷಯ.

68. ಸ್ಫಟಿಕದಿಂದ ನೀರನ್ನು ಕೊಳೆಯಿಲ್ಲದಂತೆ ಮಾಡಿ ನಿರ್ಮಲಮಾಡುವುದು—ಚೀಫ್ ಇಂಜನಿಯರವರು ಅಪೇಕ್ಷಿಸಿದ್ದರಮೇಲೆ ಹೆಸರುಗೆಟ್ಟದಕೆರೆ ನೀರನ್ನು ಕೊಳೆಯಿಲ್ಲದಂತೆ ಮಾಡುವುದಕ್ಕಾಗಿ ಎಷ್ಟು ಸ್ಫಟಿಕ ಬೇಕಾಗುವುದೆಂದು ಅಂದಾಜು ಮಾಡುವುದಕ್ಕಾಗಿ ಕೆಲವು ಪರೀಕ್ಷೆಗಳನ್ನು ಮಾಡಿದ್ದಾಯಿತು. ನೀರಿನಲ್ಲಿ ತೇಲಾಡುತ್ತಿರುವ ಕೊಳೆಯು ತಳಕಿಳಿಯುವುದಕ್ಕೆ ಯಾವಾಗ ಮೊದಲಾಯಿತೆಂದು ಗೊತ್ತಾಗಿ ಹೇಳುವುದು ಕಷ್ಟ. ಮತ್ತು ಯಾವ ಉಪಕರಣಗಳೂ ಇಲ್ಲದೆ ಮಾಡಿದ್ದ ಇಂತಹ ಪರೀಕ್ಷೆಗಳಲ್ಲಿ ಯಾವಾಗ ನೀರಿನಲ್ಲಿ ಶುದ್ಧಾಂಗವಾಗಿ ಕೊಳೆಯಿಲ್ಲವೆಂದು ಕಂಡುಹಿಡಿಯುವುದೂ ಕಷ್ಟ. ಏತಕ್ಕೆಂದರೆ ನೀರನ್ನಿಟ್ಟಿರುವ ಗಾಜಿನ ಬಟ್ಟಲಿನ ಪಕ್ಕಗಳಿಗೆ ಅದರಲ್ಲಿ ತೇಲಾಡುತ್ತಿರುವ ಸೂಕ್ಷ್ಮವಾದ ಕೊಳೆಯು ಬಹಳವಾಗಿ ಅಂಟಿಕೊಳ್ಳುತ್ತೆ. ಆದರೆ ಸಾಮಾನ್ಯವಾಗಿ ಕೆಲಸಗಳಿಗೂ ಈ ಕೆಳಗೆ ಕೊಟ್ಟಿರುವ ಸಂಖ್ಯೆಗಳು ಸರಿಯಾದ್ದಾಗಿಯೇ ಇವೆ. ಪ್ರಾಯಶಃ ಮನೆಗಳಲ್ಲಿ ನೀರನ್ನು ಶೋಧಿಸಿಕೊಳ್ಳುವವರಿಗೆ ಉಪಯೋಗವಾಗಬಹುದು. ಪರೀಕ್ಷೆಗೆ ಉಪಯೋಗಿಸಿದ ನೀರು ಬಹಳ ಮಂಡಾಗಿ ರಾಡಿಯಾಗಿತ್ತು. ಒಂದು ಗ್ಯಾಲನ್‌ಗೆ 2 ಗ್ರೇನ್ (2ಸೇರು ನೀರಿಗೆ ಚಿಕ್ಕಾಸು ತೂಕ) ಅಥವಾ 200 ಗ್ಯಾಲನ್‌ಗಳಿಗೆ 1 ಔನ್ಸು ತೂಕ ಹಾಕಿದ್ದಲ್ಲಿ 7 ಘಂಟೆ ಹೊತ್ತಿನಲ್ಲಿ ನೀರನ್ನು ತಿಳಿ ಮಾಡುವುದಕ್ಕೆ ಸಾಕಾಗಿರುತ್ತದೆ. ಅದರ ನಾಲ್ಕರಷ್ಟು ಹಾಕಿದರೂ ಅದೇ ಫಲವಾಗುತ್ತದೆ. ಅದಕ್ಕಿಂತ ಕಡಿಮೆಯಾದರೆ ನೀರು ಚೆನ್ನಾಗಿ ತಿಳಿಯಾಗುವುದಿಲ್ಲ.

ಉಪಯೋಗಿಸಿದಾಗ ಒಂದು ದಿವಸಕ್ಕಿಂತ ಹೆಚ್ಚಾಗಿ ಅಲುಗಿಸದೆ ಇಟ್ಟಿದ್ದಲ್ಲಿ ವಿನಾ $1\frac{1}{2}$ ಗ್ರೇನ್ ಸಾಕಾಗದೆ ಹೋಯಿತು.

1... ನಂಬರ್ ತಃಖ್ತೆ

ಗ್ಯಾಲನ್ ಒಂದಕ್ಕೆ ಎಷ್ಟು ಗ್ರೇನ್ ಸ್ಫಟಿಕ.	ಯಾವಾಗ ತಿಳಿಯಾಗುವದಕ್ಕೆ ಆರಂಭವಾಯಿತು.	ಎಷ್ಟು ಘಂಟೆಗಳಿಗೆ ತಿಳಿಯಾಯಿತು.
8	2	5
5	3	5
4	3	5
3	3	5
2	3	7
$1\frac{1}{2}$	5	27
1	96	...
0	...	...

69. ಉಪ್ಪು—ಎರಡು ರಖಮು ಸಮುದ್ರದ ಉಪ್ಪನ್ನು ವಿಗ್ರಹಿಸಿದ್ದಾಯಿತು. ಒಂದರಲ್ಲಿ 92ರಷ್ಟು ಶೇಕಡ 84ರಷ್ಟು ಮತ್ತೊಂದರಲ್ಲಿ ಉಪ್ಪಿತ್ತು. ಮುಖ್ಯ ರಖಮಿನಲ್ಲಿ ಶೇಕಡಾ 1·66ರಷ್ಟು ಮ್ಯಾಗ್ನೀಷಿಯಾ ಸಲ್ಫ ಸುಣ್ಣ ಸರ್ಜಿಕ, ಗಂಧಕದ್ರಾವಕ ಇವೆಲ್ಲವೂ ಸೇರಿ ಇದ್ದವು. ಆವೆಲ್ ರಖಮಿನಲ್ಲಿ ಶೇಕಡ 77ರಷ್ಟು ಮ್ಯಾಗ್ನೀಷಿಯವೂ ಇತರ ವಸ್ತುಗಳು ಮೇಲೆ ಕಂಡ ಕೀಳು ರಖಮಿನಲ್ಲಿದ್ದುದರಲ್ಲಿ ಅರ್ಧಪಾಲು ಇದ್ದವು. ಮಿಕ್ಕ ಕಲ್ಮಷಗಳು ಯಾವವಂದರೆ ಮರಳು ವಗೈರೆ ಕರಗದ ವಸ್ತುಗಳು ಮತ್ತು ನೀರು.

70. ಕ್ಷಾಮ ಕಾಲದಲ್ಲಿ ಉಪಯೋಗವಾಗುವ ಆಹಾರ ಪದಾರ್ಥಗಳು—ಕ್ಷಾಮ ಕಾಲದಲ್ಲಿ ತಿಂಡಿಗಾಗಿ ಉಪಯೋಗವಾಗುವ 22 ಹೊಸ ಪದಾರ್ಥಗಳು ಈ ವರ್ಷ ಪರೀಕ್ಷೆಗಾಗಿ ಬಂದವು. ಅವುಗಳೊಳಗೆಲ್ಲಾ ಸಾರಜನಕ ಪ್ರಮಾಣವನ್ನ ಗೊತ್ತು ಮಾಡಿಯತ್ತೆ. ಹೋದವರ್ಷ ಪರೀಕ್ಷಿಸಿದ ರಖಮುಗಳಿಗಿಂತ ಈ ವರ್ಷದ ರಖಮುಗಳಲ್ಲಿ ಸಾರಜನಕ ಹೆಚ್ಚಾದ ಶೇಕಡ ತಗ್ಗಾದ ಶೇಕಡವೂ ಬಹಳ ಕಮ್ಮಿಯಾಗಿದ್ದರೂ ಸಾಮಾನ್ಯವಾಗಿ ಅವುಗಳಲ್ಲಿ ಸಾರ ಜನಕವು ಸಲ್ಪ ಹೆಚ್ಚಾಗಿಯೇ ಇತ್ತು. ಬಹಳವಾಗಿದ್ದದು ಶೇಕಡಾ 27ರಷ್ಟು ಇದು ಮಾಲೂರು ತಾಲ್ಲೂಕು ಅಮಲ್ದಾರರವರು ಕಳುಹಿಸಿದ ಒಂದು ರಖಮು ಕನ್ನೆ ಎಲೆಯುಳ್ಳಿತ್ತು. ಅಷ್ಟು ಹೆಚ್ಚಾಗಿ ಸಾರಜನಕವುಳ್ಳ ಇತರ ರಖಮುಗಳು ಇದ್ದವು. ಬಹಳ ಕೀಳಾದುದರಲ್ಲಿ ಶೇಕಡ ·0[illegible]ರಷ್ಟು ಮಾತ್ರವಿತ್ತು. ಅದು ಶಿವಮೊಗ್ಗ ಡೆಪ್ಯುಟಿ ಕಮಿಷನರವರು ಕಳುಹಿಸಿದ ಒಂದು ರಖಮು ಗೋಡಿರಸದಗಡ್ಡೆ—ಇತರ ರಖಮುಗಳ ಪೈಕಿ ಯಾತರಲ್ಲೂ ಇಷ್ಟು ಸ್ವಲ್ಪ ಸಾರಜನಕವಿರಲಿಲ್ಲ.

71. ಕ್ಷಾಮಕಾಲದಲ್ಲಿ ಉಪಯೋಗವಾಗುವ ಪದಾರ್ಥಗಳ ರಖಮುಗಳು ಇನ್ನೂ ಬರುತ್ತಲೇ ಇವೆ. ಇವುಗಳ ಪೋಷಣವನ್ನು ಕಂಡುಹಿಡಿಯಲು ಮೇಲೆ ಹೇಳಿದ ಸಾರಜನಕವೇ ಅಲ್ಲದೆ ಅವರಲ್ಲಿರುವ ಇತರ ಪದಾರ್ಥಗಳಂದರೆ ನಾರು, ತೈಲಪದಾರ್ಥ ಮುಂತಾದವುಗಳ ಪರಿಮಾಣವನ್ನು ಕಂಡುಹಿಡಿಯಬೇಕಾಗಿರುವದರಿಂದ ಈ ವರ್ಷ ನಿರ್ಧರಿಸಿದ ಫಲಿತಾರ್ಥಗಳನ್ನು 5ನೆ ವರ್ಷದ ಬಿನ್ನವತ್ತಲೆಯ 26-29ನೆ ಪುಟಗಳಲ್ಲಿ ಕೊಟ್ಟಿರುವ ಹೋದವರ್ಷ ಕಂಡುಹಿಡಿದ ಫಲಿತಾರ್ಥಗಳನ್ನು ಈ ಕೆಲಸಕ್ಕೆಲ್ಲಾ ಪೂರೈಸಿದ ಮೇಲೆ ಒಟ್ಟಿಗೆ ಅಚ್ಚು ಹಾಕಲಾಗುತ್ತದೆ. ಈ ವಿಗ್ರಹದ ಕೆಲಸವೆಲ್ಲ ತೀರಿದನಂತರ ಮೈಸೂರು ಸರ್ಕಾರದ ನೌಕರರ ಪೈಕಿ ಕ್ಷಾಮಕಾಲದಲ್ಲಿ ಉಪಯೋಗವಾಗಿದ್ದ ಪದಾರ್ಥಗಳ ವಿಷಯದಲ್ಲಿ ಚೆನ್ನಾಗಿ ಬಲ್ಲವರಾಗಿ ಕ್ಷಾಮಕಾಲದಲ್ಲಿ ಇವುಗಳನ್ನು ಉಪಯೋಗಿಸುವ ಜನಗಳ ನಡೆನುಡಿಗಳನ್ನು ಅರಿತವರಾಗಿರುವ ಯಾರಾದರೂ ದೊಡ್ಡ ಹುದ್ದೇದಾರರನ್ನು ಈ ವಿಷಯದಲ್ಲೊಂದು ಉಪನ್ಯಾಸವನ್ನು ವಾರ್ಷಿಕ ರಿಜಿಸ್ಟರ ಸಹಾಯ ಪಡೆದುಕೊಂಡು ಬರೆಯುವಂತೆ ನೇಮಿಸಿದಪಕ್ಷದಲ್ಲಿ ಅಂತಹ ಉಪನ್ಯಾಸವು ಬರೀ ವಿಗ್ರಹದ ಫಲಿತಾರ್ಥವನ್ನು ಸೂಚಿಸುವ ಸಂಖೆಗಳಿಗಿಂತ ಬಹಳ ಉಪಯೋಗವಾಗಿರುವುದು.

ಎ. ಲೆಹ್ಮನ್,
ಕಾರ್ಷಿಕ ರಸಜ್ಞರು.

ಮೈಸೂರು ಗೆಜೆಟ್.

ಸಂ. 42.] ಸರ್ಕಾರದಿಂದ ಪ್ರಸಿದ್ಧವಾದ್ದು. [ನಂ. 5.

ಬೆಂಗಳೂರು, ಗುರುವಾರ, ಜನವರಿ ತಾ|| 31, ಸನ್ 1907.

IVನೆ ಭಾಗ.

ಸರ್ಕಾರಿ ಕಾಗದ ಪತ್ರಗಳು.

1907ನೆಯ ವರ್ಷದ 3ನೆಯ ಶನಿವಾರಕ್ಕೆ ಮುಗಿದ ಒಂದು ವಾರದ ಸೀಸನ್ ರಿಪೋರ್ಟು ಯಾ ಕಾಲಗತಿಯನ್ನು ತೋರಿಸುವ ವರದಿ (1907ನೆಯ ವರ್ಷದ ಜನವರಿ 19ನೆಯ ತಾರೀಖು).

ಡಿಸ್ಟ್ರಿಕ್ಟು ಮತ್ತು ಸ್ಥಳ.	ಶನಿವಾರ ಬೆಳಿಗ್ಗೆ 8 ಘಂಟೆಯ ವರೆಗೆ ಬಿದ್ದ ಮಳೆ. ಈ ವಾರ.		ಇದೇವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ.		1907ನೆಯ ವರ್ಷದ ಜನವರಿ 1ನೆಯ ತಾರೀಖಿನಿಂದ ಈ ವಾರದ ಕೊನೆಯ ವರೆಗೆ. ಈ ವರ್ಷ.		ಹಿಂದಿನ ಹತ್ತು ವರ್ಷಗಳ ಸರಾಸರಿ.		4ನೆಯ ಮದ್ದದ ಹೆಚ್ಚು (+) ಕಡಮೆ (—)ಯನ್ನು 5ನೆಯ ಮದ್ದದೊಂದಿಗೆ ಹೋಲಿಸಿದ ಲೆಕ್ಕ.		ರೂಪಾಯಿ ಒಂದಕ್ಕೆ ಎಷ್ಟು ಸೇರಿನಂತೆ ಧಾನ್ಯದ ಧಾರಣೆಯಿತ್ತು ಎಂಬುದು ಮತ್ತು ಬಜಾರಿನಲ್ಲಿ ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗಳು.			
1	2		3		4		5		6		7			
	I.	c.	I.	c.	I.	c.	I.	c.	I.	c.		ಈ ವಾರ ಸೇರುಗಳು.	ಕಳೆದ ವಾರ ಸೇರುಗಳು.	ಪಕ್ಷ ಒಂದಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ; ಸೇರುಗಳು.
ಬೆಂಗಳೂರು ದಂಡು	...	...	...	...	...	...	...	...	...	...				
ಸಿಟಿ ಮತ್ತು ತಾಲ್ಲೂಕು	...	...	...	1	...	72	...	1	+ 0	72				
ಹೊಸಕೋಟೆ	...	...	...	...	...	...	...	4	— 0	4				
ದೊಡ್ಡಬಳ್ಳಾಪುರ	...	...	...	...	...	14	...	...	+ 0	14				
ನೆಲಮಂಗಲ	...	...	...	...	...	19	...	...	+ 0	19				
ಕಾನಕಾನಹಳ್ಳಿ	...	...	...	4	...	30	...	10	+ 0	20				
ಮಾಗಡಿ	...	...	...	...	1	...	...	0	+ 1	0	ಅಕ್ಕಿ ದುಯಂ ತರಹ	7·00	7·00	9··
ಚನ್ನಪಟ್ಟಣ	...	...	...	...	...	24	...	10	+ 0	14				
ಆನೇಕಲ್ಲು	...	...	...	1	...	49	...	5	+ 0	44	ರಾಗಿ	15·00	15·50	19·70
ದೇವನಹಳ್ಳಿ	...	...	...	...	2	89	...	2	+ 2	87	ಹುರುಳಿ	9·00	10·50	...
ಕ್ಲೋಸ್‌ಪೇಟೆ	...	...	...	1	1	66	...	5	+ 1	61	ಕಡಲೆ	9·00	9·00	9·69
ಡಿಸ್ಟ್ರಿಕ್ಟಿನಲ್ಲಿ ಸರಾಸರಿ	...	...	...	1	...	76	...	4	+ 0	72				
ಕೋಲಾರ	...	...	...	5	...	...	...	10	— 0	10	ಅಕ್ಕಿ ದುಯಂ ತರಹ	8·00	8·00	8·75
ಬಂಗಾರಪೇಟೆ	...	...	...	5	...	...	...	8	— 0	8				
ಚಿಂತಾಮಣಿ	...	...	...	2	...	83	...	19	+ 0	64	ರಾಗಿ	16·00	15·00	19·30
ಮುಳಬಾಗಲು	...	...	...	11	...	...	...	24	— 0	24	ಹುರುಳಿ	12·00	11·00	...
ಶಿಡ್ಲಘಟ್ಟ	...	...	...	...	2	87	...	22	+ 2	65	ಕಡಲೆ	8·50	9·00	8·45
ಚಿಕ್ಕಬಳ್ಳಾಪುರ	...	...	...	...	...	76	...	21	+ 0	55				
ಬಾಗೇಪಲ್ಲಿ	...	...	...	6	...	67	...	8	+ 0	59				
ಗೌರಿಬಿದನೂರು	...	...	...	...	...	86	...	5	+ 0	81				
ಮಾಲೂರು	...	...	...	1	1	34	...	4	+ 1	30				
ಶ್ರೀನಿವಾಸಪುರ	...	...	...	4	...	19	...	12	+ 0	7				
ಗುಡಿಬಂಡೆ	...	...	...	5	1	63	...	13	+ 1	50				
ಡಿಸ್ಟ್ರಿಕ್ಟಿನಲ್ಲಿ ಸರಾಸರಿ	...	...	...	4	...	83	...	13	+ 0	70				

ಡಿಸ್ಟ್ರಿಕ್ಟ್ಸು ಮತ್ತು ಸ್ಥಳ.		ಶನಿವಾರ ಬೆಳಿಗ್ಗೆ 8 ಘಂಟೆಯ ವರೆಗೆ ಬಿದ್ದ ಮಳೆ.										ರೂಪಾಯಿ ಒಂದಕ್ಕೆ ಎಷ್ಟು ಸೇರಿನಂತೆ ಧಾನ್ಯ[illegible] ಧಾರಣೆಯಿತ್ತು ಎಂಬುದು ಮತ್ತು ಬಜಾರಿನ[illegible] ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗಳು.			
		ಈ ವಾರ.		ಇದೇವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ.		1907ನೆಯ ವರ್ಷದ ಜನವರಿ 1ನೆಯ ತಾರೀಖಿನಿಂದ ಈ ವಾರದ ಕೊನೆಯ ವರೆಗೆ. ಈ ವರ್ಷ.		ಹಿಂದಿನ ಹತ್ತು ವರ್ಷಗಳ ಸರಾಸರಿ.		4ನೆಯ ವೃದ್ಧದ ಹೆಚ್ಚು (+) ಕಡಮೆ (—)ಯನ್ನು 5ನೆಯ ವೃದ್ಧದೊಂದಿಗೆ ಹೋಲಿಸಿದ ಲೆಕ್ಕ.			ಈ ವಾರ ಸೇರುಗಳು	ಕಳೆದ ವಾರ ಸೇರುಗಳು	ಪಕ್ಷ ಒಂ[illegible]ಕ್ಕೆ ಹಿಂದಿ[illegible] ಹತ್ತು ವರ್ಷಗಳ ಸ[illegible]ರಾಸರಿ; ಸೇರುಗಳ[illegible]
1		2		3		4		5		6		7			
		I.	c.	I.	c.	I.	c.	I.	c.	I.	c.				
ತುಮಕೂರು.	ತುಮಕೂರು	...	...	...	...	...	30	...	3	+ 0	27				
	ಮದ್ದಗಿರಿ	...	...	...	2	...	42	...	10	+ 0	32				
	ಚಿಕ್ಕನಾಯಕನಹಳ್ಳಿ	...	...	...	...	...	...	...	...	...	...				
	ಸೀರ	...	...	...	2	...	60	...	10	+ 0	[illegible]				
	ಗುಬ್ಬಿ	...	...	...	1	...	27	...	2	+ 0	25				
	ತಿಪಟೂರು	...	...	...	...	...	48	...	...	+ 0	48				
	ಪಾವಗಡ	...	...	...	...	...	12	...	7	+ 0	5	ಅಕ್ಕಿ ದುಯಂ ತರಹ	8·50	8·50	8·90
	ಕುಣಿಗಲು	...	...	...	...	...	81	...	...	+ 0	81				
	ಕೊರಟಗೆರೆ	...	...	...	...	...	3	...	5	— 0	2	ರಾಗಿ	20·00	20·00	22·30
	ತುರುವೆಕೆರೆ	...	...	...	...	...	50	...	...	+ 0	50	ಹುರುಳಿ	12·00	12·00	...
												ಕಡಲೆ	9·00	9·00	8·50
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ	...	...	...	...	...	35	...	4	+ 0	31				
ಮೈಸೂರು.	ಮೈಸೂರು	...	...	...	12	...	6	...	26	— 0	20	ಅಕ್ಕಿ ದುಯಂ ತರಹ	8·50	8·50	10·47
	ಚಾಮರಾಜನಗರ	...	...	...	...	...	17	...	12	+ 0	5				
	ಶ್ರೀರಂಗಪಟ್ಟಣ	...	...	...	3	...	18	...	20	— 0	2	ರಾಗಿ	15·00	15·00	18·80
	ಹುಣಸೂರು	...	...	...	1	...	98	...	10	+ 0	88	ಹುರುಳಿ	13·00	13·00	...
	ಯಡತೊರೆ	...	...	...	4	...	40	...	36	+ 0	4	ಕಡಲೆ	9·00	9·00	9·37
	ಹೆಗ್ಗಡದೇವನಕೋಟೆ	...	...	...	...	...	...	...	...	...	...				
	ಗುಂಡ್ಲಪೇಟೆ	...	...	...	9	1	46	...	14	+ 1	32				
	ನಂಜನಗೂಡು	...	...	...	3	...	7	...	6	+ 0	1				
	ತಿ. ನರಸೀಪುರ	...	...	...	3	...	10	...	4	+ 0	6				
	ಮಳವಳ್ಳಿ	...	...	...	4	...	...	...	4	— 0	4				
	ಮಂಡ್ಯ	...	...	...	10	...	...	...	14	— 0	14				
	ಕೃಷ್ಣರಾಜಪೇಟೆ	...	...	...	...	1	5	...	...	+ 1	5				
	ನಾಗಮಂಗಲ	...	...	...	...	1	35	...	...	+ 1	35				
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ	...	...	...	4	...	45	...	11	+ 0	34				
ಹಾಸನ.	ಹಾಸನ	...	...	...	...	...	...	...	3	— 0	3	ಅಕ್ಕಿ ದುಯಂ ತರಹ	9·50	10·00	10·15
	ಮಂಜರಾಬಾದು (ಸಕಲೇಶಪುರ)	...	...	...	...	...	...	...	6	— 0	6				
	ಅರಕಲಗೂಡು	...	...	...	...	...	53	...	15	+ 0	38	ರಾಗಿ	18·00	20·00	22·16
	ಬೇಲೂರು	...	...	...	...	...	10	...	1	+ 0	9	ಹುರುಳಿ	18·00	16·00	...
	ಚನ್ನರಾಯಪಟ್ಟಣ	...	...	...	...	...	40	...	...	+ 0	40	ಕಡಲೆ	9·00	8·00	9·27
	ಅರಸೀಕೆರೆ	...	...	...	...	...	...	...	8	— 0	[illegible]				
	ಹೊಳೆನರಸೀಪುರ	...	...	...	4	1	88	...	8	+ 1	80				
	ಆಲೂರು	...	...	...	...	...	...	...	12	— 0	12				
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ	...	...	...	...	...	36	...	7	+ 0	29				

ಡಿಸ್ಟ್ರಿಕ್ಟು ಮತ್ತು ಸ್ಥಳ.	ಶನಿವಾರ [illegible] 8 ಘಂಟೆಯ ವರೆಗೆ [illegible] ಮಳೆ. ಈ ವಾರ.		ಇದೇವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ.		1907ನೆಯ ವರ್ಷದ ಜನವರಿ 1ನೆಯ ತಾರೀಖಿನಿಂದ ಈ ವಾರದ ಕೊನೆಯ ವರೆಗೆ. ಈ ವರ್ಷ		ಹಿಂದಿನ ಹತ್ತು ವರ್ಷಗಳ ಸರಾಸರಿ.		4ನೆಯ ಮದ್ದದ ಹೆಚ್ಚು (+) ಕಡಮೆ (—) ಯನ್ನು 5ನೆಯ ಮದ್ದದೊಂದಿಗೆ ಹೋಲಿಸಿದ ಲೆಕ್ಕ.	
1	2		3		4		5		6	
	I.	c.	I.	c.	I.	c.	I.	c.	I.	c.
ಶಿವಮೊಗ್ಗ	...	...	...	4	...	...	...	4	— 0	4
ಚನ್ನಗಿರಿ	...	...	...	2	...	...	...	3	— 0	3
ಹೊನ್ನಾಳಿ	...		...	12	...	...	...	12	— 0	12
ಶಿಕಾರಿಪುರ	...	...	...	...	...	...	...	...	...	...
ಸೊರಬ	...	...	...	4	...	2	...	4	— 0	2
ಸಾಗರ	...	...	...	15	...	10	...	15	— 0	5
ನಗರ (ಕಲ್ಲೂರುಕಟ್ಟೆ)	...	...	...	7	...	30	...	7	+ 0	23
ತೀರ್ಥಹಳ್ಳಿ	...	...	...	12	...	1	...	13	— 0	12
ಕುಂಸಿ	...	...	...	2	...	...	...	2	— 0	2
ಡಿಸ್ಟ್ರಿಕ್ಟಿನಲ್ಲಿ ಸರಾಸರಿ	...	...	...	6	...	5	...	7	— 0	2
ಚಿಕ್ಕಮಗಳೂರು	...		...	14	...	19	...	20	— 0	1
ಕಡೂರು	...	...	...	...	...	...	...	8	— 0	8
ತರೀಕೆರೆ	...	...	...	8	...	...	...	11	— 0	11
ಕೊಪ್ಪ	...	...	...	23	...	41	...	23	+ 0	18
ಮೂಡಿಗೆರೆ	...	...	...	3	...	...	...	7	— 0	7
ಮುಡಹಳ್ಳಿ	...	...	...	2	...	...	...	4	— 0	4
ಶೃಂಗೇರಿ	...	...	...	10	...	19	...	15	+ 0	4
ಡಿಸ್ಟ್ರಿಕ್ಟಿನಲ್ಲಿ ಸರಾಸರಿ	...	...	...	8	...	11	...	12	— 0	1
ಚಿತ್ರದುರ್ಗ	...	...	...	12	...	...	...	15	— 0	15
ಚೆಳ್ಳಕೆರೆ	...	...	...	1	...	...	...	2	— 0	2
ಹಿರಿಯೂರು.	...	...	...	1	...	10	...	6	+ 0	4
ಹೊಳಲ್ಕೆರೆ	...	...	...	2	...	...	...	4	— 0	4
ದಾವಣಗೆರೆ	...	...	...	4	...	...	...	4	— 0	4
ಮೊಳಕಾಲ್ಮುರು	...	...	...	...	...	...	...	2	— 0	2
ಜಗಳೂರು	...	...	...	2	...	...	...	2	— 0	2
ಹೊಸದುರ್ಗ	...	...	...	1	...	...	...	2	— 0	2
ಹರಿಹರ	...	...	...	29	...	11	...	29	— 0	18
ಡಿಸ್ಟ್ರಿಕ್ಟಿನಲ್ಲಿ ಸರಾಸರಿ	...	...	...	6	...	2	...	7	— 0	5
ಸಂಸ್ಥಾನದಲ್ಲಿ ಸರಾಸರಿ	...	...	...	4	...	37	...	8	+ 0	29

7. ರೂಪಾಯಿ ಒಂದಕ್ಕೆ ಎಷ್ಟು ಸೇರಿನಂತೆ ಧಾನ್ಯದ ಧಾರಣೆಯಿತ್ತು ಎಂಬುದು ಮತ್ತು ಬಜಾರಿನಲ್ಲಿ ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗಳು.

	ಈ ವಾರ ಸೇರುಗಳು	ಕಳೆದ ವಾರ ಸೇರುಗಳು	ಪಕ್ಷ ಒಂದಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ ; ಸೇರುಗಳು
ಅಕ್ಕಿ ದುಯಂ ತರಹ	10·50	10·50	11·89
ರಾಗಿ	17·00	17·00	24·71
ಹುರುಳಿ	10·00	10·00	....
ಅಕ್ಕಿ ದುಯಂ ತರಹ	8·75	8·75	11·10
ರಾಗಿ	18·00	18·00	21·80
ಹುರುಳಿ	11·00	11·00	...
ಕಡಲೆ	8·25	8·25	9·20
ಅಕ್ಕಿ ದುಯಂ ತರಹ	8·00	8·00	9·85
ರಾಗಿ	17·00	18·00	22·90
ಹುರುಳಿ	8·00	8·00	...
ಜೋಳ	11·00	11·00	9·40
ಕಡಲೆ	18·00	18·00	21·07

ಡಿಸ್ಟ್ರಿಕ್ಟು ರಿಪೋರ್ಟುಗಳು.

8. ಬಜಾರಿನಲ್ಲಿ ಸರಬರಾಯಿ ಹ್ಯಾಗಿದೆ.
9. ವ್ಯವಸಾಯ ಕಾರ್ಯದ ಅಭಿವೃದ್ಧಿ, ನಿಂತಿರುವ ಪೈರುಗಳ ಸ್ಥಿತಿ, ಬೆಳೆಗಳು ಎಷ್ಟಾಗಬಹುದೆಂಬ ನಿರೀಕ್ಷೆ, ಮತ್ತು ಸುಗ್ಗಿಯ ಕಾಲದಲ್ಲಿ ಉಂಟಾಗಬಹುದಾದ ಹುಟ್ಟುವಳಿ, ಹುಳುಗಳು ಅಥವಾ ಸ್ವಾಭಾವಿಕವಾದ ಇತರ ವಿಪತ್ತುಗಳಿಂದ ಪೈರುಗಳಿಗೆ ಉಂಟಾದ ನಷ್ಟ.
10. ಕಾಲದ ಆಯತಿ, ಮಳೆಯು ಸಾಲದೆ ಇರುವ ಪ್ರದೇಶಗಳು, ದುರ್ಭಿಕ್ಷ ವುಂಟಾಗಿರುವ ಸ್ಥಳಗಳು, ರಿಲೀಫ್ ಯಾ ಸಹಾಯವನ್ನು ಪಡೆಯುತ್ತಿರುವ ಜನರ ಸಂಖ್ಯೆ, ಮತ್ತು ಆಹಾರ ಸಾಮಗ್ರಿಯ ಸ್ಥಿತಿ.
11. ಜನಗಳ ಆರೋಗ್ಯ.
12. ವ್ಯವಸಾಯಕ್ಕೆ ಸಂಬಂಧಿಸುವ ಮೂಲುಗಳು, ದನಗಳಿಗೆ ಮೇಯುವುದಕ್ಕೆ ಹುಲ್ಲುಕಾವಲು ಇಲ್ಲದೇ ಹೋಗುವುದು, ಮೇವು ಮುಂತಾದುವುಗಳ ವಿಷಯವಾಗಿ ಷರಾಗಳು.

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (ದಂಡು).

ಆಹಾರ ಧಾನ್ಯಗಳ ಧಾರಣೆಗಳು :—

	ಕಳೆದ 4 ವರ್ಷಗಳ ಅಂದಾಜು.	ಚಾಲ್ತಿ	
ಅಕ್ಕಿ ರೂಪಾಯಿ 1ಕ್ಕೆ	7½	7 ರಿಂದ 7½ ವರಿಗೆ.	ಸೇರುಗಳು.
ರಾಗಿ	21	16½ ಯಿಂದ 17 ವರಿಗೆ.	ಸೇರುಗಳು.

ವ್ಯವಸಾಯ ಕಾರ್ಯ—ರಾಗಿ ಕುಯ್ಯಲಾಗಿದೆ.

ನಿಂತಿರುವ ಪೈರುಗಳ ಸ್ಥಿತಿ ಸುಮಾರಾಗಿದೆ.

ಕುಯ್ಯಲಾದ ಪೈರುಗಳ ಉತ್ಪತ್ತಿಯ ಅಂದಾಜು—ಸುಮಾರು 7 ರಿಂದ 8 ಆಣೆ ವರಿಗೆ.

ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಸಾಕು.

ಬೆಂಗಳೂರು ಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ವೈಶಾಖಿ ಭತ್ತಕ್ಕಾಗಿ ಆನೆಕಲ್ಲು ಮತ್ತು ದೇವನಹಳ್ಳಿ ತಾಲ್ಲೂಕುಗಳಲ್ಲಿ ಉಳುತ್ತಾ ಇದ್ದಾರೆ.

ನಿಂತಿರುವ ಪೈರುಗಳು—ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟು ಆಗಿದೆ.

ಕುಯ್ಯಲಾದ ಪೈರುಗಳು—ಬೆಂಗಳೂರು ಮತ್ತು ಹೊಸಕೋಟೆ ತಾಲ್ಲೂಕುಗಳಲ್ಲಿ ಭತ್ತ, ಹುರುಳಿ, ಆಲುಗಡ್ಡೆ, ಅವರೆ ಮತ್ತು ತೊಗರಿ.

10. ಕಾಲದ ಆಯತಿಯು ಚೆನ್ನಾಗಿದೆ.

11. ಮಾಗಡಿ ತಾಲ್ಲೂಕಿನ ತಾವರೇಕೆರೆ ಮತ್ತು ಸೋಲಪಾರದ ಗ್ರಾಮಗಳಲ್ಲಿಯೂ, ನೆಲಮಂಗಲದಲ್ಲಿಯೂ ಮತ್ತು ಇನ್ನೂ ಕೆಲವು ಭಾಗಗಳಲ್ಲಿಯೂ ಪ್ಲೇಗೂ, ಮತ್ತು ಹೊಸಕೋಟೆ ಮತ್ತು ಚನ್ನಪಟ್ಟಗಳ ಕೆಲವು ಭಾಗಗಳಲ್ಲಿ ಜ್ವರವೂ ಇರುವದು ಹೊರ್ತು, ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆ.

ಬಿತ್ತನೆಯಾದ ಪೈರುಗಳು—ಮಾಲೂರು ಮತ್ತು ಸಿಡ್ಲಘಟ್ಟ ಹೊರ್ತು ಡಿಸ್ಟ್ರಿಕ್ಟಿನ ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ವೈಶಾಖಿ ಭತ್ತ; ಮತ್ತು ಬಾಗೇಪಲ್ಲಿಯಲ್ಲಿ ಜೋಳ.

ಕುಯ್ಯಲಾದ ಪೈರುಗಳು—ಮಾಲೂರು ಮತ್ತು ಗುಡಿಬಂಡೆ ಹೊರ್ತು ಡಿಸ್ಟ್ರಿಕ್ಟಿನ ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಕಾರ್ತೀಕ ಭತ್ತ; ಬಾಗೇಪಲ್ಲಿ ಮತ್ತು ಗೋರೀಬಿದನೂರಿನಲ್ಲಿ ತೊಗರಿ ಮತ್ತು ಅವರೆ; ಗೋರೀಬಿದನೂರಿನಲ್ಲಿ ಕಬ್ಬು, ಮತ್ತು ನೆಲಗಡಲೇಕಾಯಿ; ಮತ್ತು ಬಾಗೇಪಲ್ಲಿಯಲ್ಲಿ ಹರಳು.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ಬವರಿಂಗ್‌ಪೇಟೆ ತಾಲ್ಲೂಕಿನ ಕಂಣೂರು ಗ್ರಾಮದಲ್ಲಿ ಕಾಲರಾ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಕುಯ್ಯಲು, ಮತ್ತು ವೈಶಾಖಿ ಭತ್ತ ಬಿತ್ತುವದು ನಡೆಯುತ್ತಾ ಇದೆ.

ನಿಂತಿರುವ ಪೈರುಗಳು—ಒಳ್ಳೇ ಸ್ಥಿತಿಯಲ್ಲಿವೆ.

ಬಿತ್ತನೆಯಾದ ಪೈರುಗಳು—ಚಿಕ್ಕನಾಯಕನಹಳ್ಳಿ, ಗುಬ್ಬಿ ಮತ್ತು ಕುಣಿಗಲ್ ಹೊರ್ತು ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಭತ್ತ; ಮದ್ದಗಿರಿಯಲ್ಲಿ ಗೋಧಿ; ಪಾವಗಡದಲ್ಲಿ ಜೋಳ; ಕೊರಟಗೆರೆಯಲ್ಲಿ ಕಡಲೆ.

ಕುಯ್ಯಲಾದ ಪೈರುಗಳು—ಚಿಕ್ಕನಾಯಕನಹಳ್ಳಿ ಹೊರ್ತು ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಭತ್ತ; ಮದ್ದಗಿರಿ, ಚಿಕ್ಕನಾಯಕನಹಳ್ಳಿ, ಶಿರಾ, ಗುಬ್ಬಿ ಮತ್ತು ಕುಣಿಗಲಿನಲ್ಲಿ ಹುರುಳಿ, ಅವರೆ ಮತ್ತು ತೊಗರಿ; ಚಿಕ್ಕನಾಯಕನಹಳ್ಳಿ, ಶಿರಾ ಮತ್ತು ಗುಬ್ಬಿಯಲ್ಲಿ ಹರಳು; ಚಿಕ್ಕನಾಯಕನಹಳ್ಳಿ, ಕುಣಿಗಲ್ ಮತ್ತು ತುರುವೇಕೆರೆಯಲ್ಲಿ ಹುಚ್ಚೆಳ್ಳು; ಶಿರಾ, ಕುಣಿಗಲ್ ಮತ್ತು ತುರುವೇಕೆರೆಯಲ್ಲಿ ಕಬ್ಬು; ಚಿಕ್ಕನಾಯಕನಹಳ್ಳಿ ಮತ್ತು ತಿಪಟೂರಿನಲ್ಲಿ ಹಾರಕ; ಚಿಕ್ಕನಾಯಕನಹಳ್ಳಿಯಲ್ಲಿ ಸಾವೆ; ಶಿರಾದಲ್ಲಿ ಮೆಣಸಿನಕಾಯಿ; ತಿಪಟೂರಿನಲ್ಲಿ ನವಣೆ, ಜೋಳ ಮತ್ತು ಬರಗು; ಮತ್ತು ಕುಣಿಗಲಿನಲ್ಲಿ ಕೊತ್ತುಂಬರಿ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಾಕು.